ಕುಂ ವೀರಭದ್ರಪ್ಪ

ಕಾದಂಬರಿ

# ಹೀಗುರಿ ಕುಲುಕು ಪಿಸುಮಾತು

ಸಪ್ನ

SHOUT
SHARE
IT

ಸಪ್ಪು

# ಪರಿಚಯ

ಬಳ್ಳಾರಿ ಜಿಲ್ಲೆಯ ಕೊಟ್ಟೂರಿನ ಕುಂಬಾರ ವೀರಭದ್ರಪ್ಪ (ಜನನ 1953) ಎಂ.ಎ ಪದವೀಧರರು. ಆಂಧ್ರಪ್ರದೇಶದ ವಂದವಾಗಿಲಿ, ಗೂಳ್ಯಂ, ಹಿರೇಹಾಳಗಳಂಥ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಮೂರೂವರೆ ದಶಕಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿರುವರು. ಸದ್ಯಕ್ಕೆ ಕೊಟ್ಟೂರಲ್ಲಿ ನೆಲೆಸಿರುವ ಇವರ ಪ್ರಕಟಿತ **ಕಥಾ ಸಂಕಲನಗಳು:** ಇನ್ನಾದರೂ ಸಾಯಬೇಕು(1982), ಡೋಮ ಮತ್ತಿತರ ಕಥೆಗಳು(1985), ಕುಂವೀ ಕಥೆಗಳು(1985), ಭಗವತಿ ಕಾಡು(1990), ನಿಜಲಿಂಗ(1994), ಸುಶೀಲೆ ಎಂಬ ನಾಯಿಯೂ, ವಾಗಿಲಿ ಎಂಬ ಗ್ರಾಮವೂ(1995), ಅಪೂರ್ವ ಚಿಂತಾಮಣಿಯ ಕಥೆ(1996), ಭಳಾರೆ ವಿಚಿತ್ರಂ(2002), ಕೂಳೆ(2007), ಬರೀ ಕಥೆಯಲ್ಲೋ ಅಣ್ಣಾ(ಸಮಗ್ರ ಕಥೆಗಳ ಸಂಕಲನ 2010), ಮಣ್ಣೇ ಮೊದಲು(2004), ನಿಗಿನಿಗಿ ಹಗಲು(2007), ರಾಯಲಸೀಮೆ(2008), ಸೂರ್ಯನ ಕೊಡೆ(2011) **ಕಾದಂಬರಿಗಳು:** ಕಪ್ಪು(1980), ಬೇಲಿ ಮತ್ತು ಹೊಲ(1982), ಆಸ್ತಿ(1983), ಹನುಮ(1984), ಪಕ್ಷಿಗಳು(1985), ಪ್ರತಿದ್ವಂದ್ವಿ (1985), ಪ್ರೇಮವೆಂಬ ಹೊನ್ನುಡಿ(1985), ಕೆಂಡದ ಮಳೆ(1986), ಕೊಟ್ರ ಹೈಸ್ಕೂಲಿಗೆ ಸೇರಿದ್ದು(1992), ಶಾಮಣ್ಣ(1998), ಯಾಪಿಲ್ಲು(2001), ಅರಮನೆ(2004), ಆರೋಹಣ(2009), ಹೇಮರೆಡ್ಡಿ ಮಲ್ಲಮ್ಮನ ಕಥೆಯು(2012) **ಅನುವಾದ:** ತೆಲುಗು ಕಥೆ– 30 ತೆಲುಗು ಕಥೆಗಳ ಕನ್ನಡ ಅನುವಾದ(1998), ಒಂದು ಪೀಳಿಗೆಯ ತೆಲುಗು ಕಥೆಗಳು– ಒಕ ತರಂ ತೆಲುಗು ಕಥಾಸಂಕಲನದ 36 ಕಥೆಗಳ ಕನ್ನಡ ಅನುವಾದ(2001), ಚಿನ್ನದ ತೆನೆ–ತೆಲುಗಿನ 75 ಕಥೆಗಳ ಕನ್ನಡ ಅನುವಾದ. ತನ್ನ ಮಾರ್ಗ– ತೆಲುಗಿನ ಡಾ. ಅಬ್ಬೂರಿ ಛಾಯದೇವಿಯವರ ಕಥೆಗಳು. **ಕವನ ಸಂಕಲನ:** ದಿವಿ ಸೀಮೆಯ ಹಾಡು(1979), **ಜೀವನ ಚರಿತ್ರೆ:** ಚಾಪ್ಲಿನ್, ಸುಭದ್ರಮ್ಮ ಮನ್ಸೂರು, ನೇತಾಜಿ ಸುಭಾಸ್ ಚಂದ್ರ ಭೋಸ್, ರಾಹುಲ್ ಸಾಂಕೃತ್ಯಾಯನ. ಇವರ ಹಲವಾರು ಕಥೆಗಳು ಇಂಗ್ಲೀಷ್ ಹಾಗೂ ಹಲವು ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯತ್ವ, ಚಲನಚಿತ್ರ ಸಹಾಯ ಧನ ಸಮಿತಿಯ ಸದಸ್ಯತ್ವ, ಅನುವಾದ ಅಕಾಡೆಮಿ ಸದಸ್ಯತ್ವ ಮತ್ತು ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಲೇಖಕ ಹೊಣೆಗಳನ್ನೂ ಕುಂವೀ ನಿರ್ವಹಿಸಿರುವರು. ಮನ ಮೆಚ್ಚಿದ ಹುಡುಗಿ, ಕೆಂಡದ ಮಳೆ, ದೊರೆ, ಕೊಟ್ರೇಶಿ ಕನಸು(ಅತ್ಯುತ್ತಮ ಪ್ರಾದೇಶಿಕ ಚಲನಚಿತ್ರ ಪ್ರಶಸ್ತಿ), ಬೇಲಿ ಮತ್ತು ಹೊಲ, ಭಗವತಿ ಕಾಡು (ದ್ವಿತೀಯ ಅತ್ಯುತ್ತಮ ಪ್ರಾದೇಶಿಕ ಚಲನಚಿತ್ರ ಪ್ರಶಸ್ತಿ) ಮತ್ತು ಕೂರ್ಮಾವತಾರ(ರಜತ ಕಮಲ ರಾಷ್ಟ್ರಪ್ರಶಸ್ತಿ) –ಇವು ಇವರ ಕಾದಂಬರಿಗಳಾಧರಿತ ಚಲನಚಿತ್ರಗಳು. ಇವರ ಕೃತಿಗಳ ಬಗ್ಗೆ ಎಂಟು ಎಂ.ಫಿಲ್ ಪ್ರಬಂಧಗಳು, ನಾಲ್ಕು ಪಿಎಚ್.ಡಿ ಮಹಾಪ್ರಬಂಧಗಳು ಪ್ರಕಟಗೊಂಡಿವೆ. ತಮ್ಮ ಕೃತಿಗಳಿಗೆ ಎರಡು ಸಲ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದಿರುವ ಕುಂವೀ ಅವರ **ಅರಮನೆ** ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(2008) ಪ್ರಶಸ್ತಿ ಲಭಿಸಿದೆ. ವರ್ಧಮಾನ ಉದಯೋನ್ಮುಖ ಪ್ರಶಸ್ತಿ, ಉಗ್ರಾಣ ಪ್ರಶಸ್ತಿ, ಅಥಣಿಯ ಸಿರಸಂಗಿ ಲಿಂಗರಾಜ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ಗೌರವ ಪ್ರಶಸ್ತಿ' (2000), ಹಾಗೂ ಕರ್ನಾಟಕ ರಾಜ್ಯ ಸರ್ಕಾರದ 'ರಾಜ್ಯೋತ್ಸವ ಪ್ರಶಸ್ತಿ'(2004) ಸೇರಿದಂತೆ ಹತ್ತು ಹಲವು ಬಹುಮಾನಗಳನ್ನು ಪಡೆದಿರುವ ಕುಂವೀ ಅವರಿಗೆ ಕರ್ನಾಟಕ ವಿವಿಯು ಗೌರವ ಡಾಕ್ಟರೇಟ್ ನೀಡಿದೆ.

**'HEMAREDDY MALLAMMANA KATHEYU' :** A Kannada Novel written by **Kum. Veerabhadrappa,** 'Annapurna Nilaya', Near police station. Kottur-583134. Bellari (Dist.). Ph: + 91 9449131236, +91 9902853616, and published by **Sapna Book House (P) Ltd.**, R.O. #11, 3rd Main Road, Gandhinagar, Bangalore- 560 009 Ph: 080-40114455

ISBN : 978-81-280-1901-2 [KB - 1852]

© Smt Annapurna 'Kum Vee'

ಪ್ರಥಮ ಮುದ್ರಣ : ಮೇ, 2012

ಎರಡನೇ ಮುದ್ರಣ : ಜುಲೈ, 2012

| | |
|---|---|
| ಪುಟಗಳು : 372 | ಪ್ರತಿಗಳ ಸಂಖ್ಯೆ : 1000 |
| ಬೆಲೆ ರೂ. : 225/- | Paper Used : 18.6 Kg (70 gsm) N.S.L.W. Maplitho |
| | Book Size : 1/8th Demi |

ಹಂಚಿಕೆದಾರರು :

**ಕರ್ನಾಟಕ ಬುಕ್ ಏಜೆನ್ಸಿ**

ನಂ. 11, 2ನೇ ಮಹಡಿ,
3ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು - 560009

ಮುಖಪುಟ ವಿನ್ಯಾಸ : ಅಪಾರ

ಲೇಖಕರ ಭಾವಚಿತ್ರ : ಎಮ್ ಶ್ರೀಧರಮೂರ್ತಿ

ಅಕ್ಷರ ಜೋಡಣೆ : ಭಳಾರೆ ಪುಸ್ತಕಂ, ಕೊಟ್ಟೂರು

ಫೋನ್ : 08391 - 226504, 9449604288

ಮುದ್ರಣ : ಪ್ರಿಂಟ್ ಫಾಸ್ಟ್, ಬೆಂಗಳೂರು.

ಬಹುಶ್ರುತ ವಿದ್ವಾಂಸರೂ, ಆತ್ಮೀಯರೂ ಆದ
ಡಾ. ಸಿ ಎನ್ ರಾಮಚಂದ್ರನ್ ಅವರಿಗೆ
ಗೌರವಾದರಗಳೊಡನೆ

## ಕೃತಿಕಾರನ ಮಾತು..

ಮಗ ಪುರೂರವನ ಮದುವೆ ಹತ್ತಿರದಲ್ಲಿರದಿದ್ದಲ್ಲಿ ಈ ಕಾದಂಬರಿಯನ್ನು ಇನ್ನೊಂದೆರಡು ಸಲ ರೀರೈಟ್ ಮಾಡಬಹುದಿತ್ತೇನೊ! ಆದರೂ ತುಂಬಾ ಎಚ್ಚರಿಕೆ, ಜವಾಬುದಾರಿಯಿಂದ ಇದನ್ನು ಆರೇಳು ತಿಂಗಳುಗಳ ಕಾಲ ರಚಿಸಿರುವೆ. ತಮ್ಮ ಕನ್ನಡಪ್ರಭಕ್ಕೆ ಕಥೆ ಬರೆಯಿರಿ ಎಂದು ಡಾ. ವೆಂಕಟೇಶ್ ಕೇಳದಿದ್ದಲ್ಲಿ ಇದು ಜನ್ಮ ತಳೆಯುತ್ತಿರಲಿಲ್ಲ.

ಅರ್ಪಿಸುವುದಾಗಿ ಕೇಳಿದೊಡನೆ ಸಂಕೋಚದಿಂದ ತಮ್ಮ ಅಮೂಲ್ಯ ಒಪ್ಪಿಗೆ ನೀಡಿದ ಕನ್ನಡದ ಪ್ರಸಿದ್ಧ ವಿಮರ್ಶಕರೂ, ಬಹುಶ್ರುತ ವಿದ್ವಾಂಸರೂ ಆದ ಡಾ. ಸಿ ಎನ್ ರಾಮಚಂದ್ರನ್ ಅವರಿಗೆ,

ಮೌಲಿಕ ಬೆನ್ನುಡಿಕಾರ ಸನ್ಮಿತ್ರ ಪ್ರೊ. ಓ ಎಲ್ ನಾಗಭೂಷಣಸ್ವಾಮಿ ಅವರಿಗೆ,

ಎಂದಿನಂತೆ ಈ ಕಾದಂಬರಿಯ ಪ್ರತಿ ಪುಟವನ್ನು ವಿನ್ಯಾಸ ಗೊಳಿಸುವುದರೊಂದಿಗೆ ಅರ್ಥಪೂರ್ಣ ಮುಖಪುಟವನ್ನೂ ಕಥಿಸಿರುವ ನಮ್ಮೆಲ್ಲರ ಪ್ರೀತಿಯ ಅಪಾರಗೆ,

ಡಾ. ವೆಂಕಿ ಅವರಿಗೆ,

ತಮ್ಮ ಪ್ರತಿಷ್ಠಿತ ಪ್ರಕಾಶನ ಸಂಸ್ಥೆ ಮೂಲಕ ಪ್ರಕಟಿಸುತ್ತಿರುವ ಸಪ್ನ ಬುಕ್ ಹೌಸ್ ಮಾಲಕರಾದ ನಿತಿನ್ ಷಾ, ದೊಡ್ಡೇಗೌಡ ಅವರಿಗೆ,

ವಿಜಾಪುರದ ಗೆಳೆಯರಾದ ಬಸವರಾಜಸ್ವಾಮಿ ಮೇಲುಪ್ಪರಿಗೆಮಠ, ಸಂಗಮೇಶ್ವರ ಟ್ರೇಡರ್ಸ್ ಮಾಲಕ ಸೋಮಶೇಖರ್ ಮತ್ತು ಹೂ ಮ ಪಂಡಿತಾರಾಧ್ಯ, ಕೇಶವರೆಡ್ಡಿ ಹಂದ್ರಾಳ ಅವರೆಲ್ಲರಿಗೆ ಕೃತಜ್ಞತೆಗಳನ್ನು ಹೇಳುತ್ತ...

ಕುಂವೀ

# ಪೀಠಿಕೆ

ಕಥೆಗಾರ ತನಿಕೆಳ್ಳ ಪಾರ್ಥಸಾರಥಿ ಕಾದಂಬರಿ ಬರೆಯಬಹುದೆಂದು ತೆಲುಗಿನ ಸಾರಸ್ವತ ಪ್ರಪಂಚ ಕನಸುಮನಸಿನಲ್ಲೂ ಊಹಿಸಿರಲಿಲ್ಲ. ಆತ ತನ್ನ ಹೊಸ ಸೃಜನಶೀಲ ಸಾಹಸವನ್ನು ಯಾರೊಬ್ಬರ ಬಳಿ ಹೇಳಿಕೊಂಡಿರದಿದ್ದರೂ ಸುದ್ದಿಯಾಯಿತು. ಅವರಿವರು ಒತ್ತಟ್ಟಿಗಿರಲಿ ಅವರ ಆರಂಭಿಕ ಕಥೆಗಳನ್ನು ಮೆಚ್ಚಿ ವಿಮರ್ಶಿಸಿದ, ಅವುಗಳ ಪೈಕಿ ಕೆಲವನ್ನು ಇನ್ನಿತರ ಪ್ರಾದೇಶಿಕ ಭಾಷೆಗಳ ವಾಚಕರಿಗೆ ಪರಿಚಯಿಸಿದ ಪ್ರೊ. ಕಾಶಿಭೊಟ್ಲ ವೇಣುಗೋಪಾಲ್ ಅವರಂಥ ಬಹುಶ್ರುತ ವಿದ್ವಾಂಸರಿಗೂ ಅದನ್ನು ತೋರಿಸಿರಲಿಲ್ಲ, ಅದಕ್ಕೆ ತನ್ನ ಮೃದ್ವಂಗಿ ಜಾಯಮಾನ ಕಾರಣವಿದ್ದಿರಬಹುದು. ಆದರೆ ಅದನ್ನು ಎಷ್ಟು ದಿವಸ ಗುಟ್ಟಾಗಿರಿಸಲಾದೀತು! ಆ ದಿವಸ ಆತನಿಂದ ನನಗೆ ದೂರವಾಣಿ ಕರೆ ಬಂತು, ಉಭಯಕುಶಲೋಪರಿಯಾದ ಬಳಿಕ ಒಮ್ಮೆ ಕರ್ನೂಲಿಗೆ ಬಂದು ಹೋಗುವಿಯೇನು ಎಂದು ಕೇಳಿದ, ಯಾಕೆಂದು ಕೇಳಿದ್ದಕ್ಕೆ ಕಾದಂಬರಿ ಬರೆದಿರುವುದಾಗಿಯೂ, ಇನ್ನೂ ಅಪೂರ್ಣ ಸ್ಥಿತಿಯಲ್ಲಿರುವ ಅದರ ಮೇಲೆ ಕಣ್ಣಾಡಿಸಿ ಪರಿಶೀಲಿಸಬೇಕೆಂದೂ ಕೇಳಿಕೊಂಡ. ವಿಷಯ ತಿಳಿದಿದ್ದರೂ ನಾನು ಹೌದೇನು ಎಂದು ಆಶ್ಚರ್ಯ ವ್ಯಕ್ತಪಡಿಸಿದೆ, ನನಗಿಂತ ಮೊದಲು ಕಾಶಿಭೊಟ್ಲ ಅವರಿಗೆ ತೋರಿಸಿದರೆ ಒಳ್ಳೆಯದೆಂದು ಹೇಳಿದೆ. ಅಂಥವರು ನೋಡುವ ಮೊದಲು ನಿನ್ನಂಥವರು ನೋಡುವುದು ಮುಖ್ಯವೆಂದು ಹೇಳಿದ. ಅದೇ ಮಾತನ್ನು ಬೇರೆಯವರು ಕೇಳಿದ್ದಲ್ಲಿ ನಾನು ಒಪ್ಪಿಕೊಳ್ಳುತ್ತಿರಲಿಲ್ಲವೇನೋ!

ಆತನ ಕೀಳರಿಮೆ, ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿಯಂಥ ಸ್ವಭಾವ ನನಗಿಷ್ಟ, ಅದೂ ಅಲ್ಲದೆ ನನ್ನಂಥ ಕೆಲವೇ ಆತ್ಮೀಯರಿಗೆ ಮಾತ್ರ ತಿಳಿದಿರುವಂತೆ ಅವನು ಖಿನ್ನತೆಯಿಂದ ನರಳುತ್ತಿದ್ದ, ಚಿಕ್ಕಪುಟ್ಟ ಅಹಿತಕರ ಸಂಘಟನೆಗಳನ್ನು ಕೇಳಿದೊಡನೆ ನಖಶಿಖಾಂತ ಕಂಪನಕ್ಕೊಳಗಾಗುತ್ತಿದ್ದ, ಪಾರ್ಕಿನ್‌ಸನ್ ಖಾಯಿಲೆಯ ಪ್ರಾಥಮಿಕ ಲಕ್ಷಣವೆಂದು ವೈದ್ಯಕೀಯ ತಪಾಸಣೆಯಿಂದ ಗ್ರಹಿಸಿದ ಮತ್ತು ಆತನ ಸೂಕ್ಷ್ಮಪ್ರಕೃತಿ ಕಡೆ ನಿಗಾ ಇರಿಸಿದ್ದ ಡಾ. ಸುಧನ್ವ ಸ್ಥಿತಪ್ರಜ್ಞತೆ ಕಡೆ ಗಮನ ಹರಿಸುವಂತೆ ಹೇಳಿದ್ದರು, ಅದಕ್ಕೆ ಪೂರಕವಾಗಿ ಐದು ನಿಮಿಷಗಳ

ಕಾಲ ಸರ್ವಾಂಗಾಸನವನ್ನೂ, ಹತ್ತು ನಿಮಿಷಗಳ ಕಾಲ ಪ್ರಾಣಾಯಾಮವನ್ನೂ, ಇಪ್ಪತ್ತರಿಂದ ಮುವ್ವತ್ತು ನಿಮಿಷಗಳ ಕಾಲ ಧ್ಯಾನವನ್ನೂ ಮಾಡುವಂತೆ ಸಲಹೆ ನೀಡಿದ್ದರು, ಎರಡು ಗಂಟೆಗಳ ಬಳಿಕ ಮಲಗಿ ಒಂಭತ್ತರ ಬಳಿಕ ಎಚ್ಚರಗೊಳ್ಳುವುದನ್ನು ಹುಟ್ಟಿದಾರಭ್ಯ ಅಭ್ಯಾಸ ಮಾಡಿಕೊಂಡಿದ್ದ ಆತನಿಗೆ ವೈದ್ಯರ ಸಲಹೆ ರುಚಿಸಲಿಲ್ಲ. ಸಾಹಿತ್ಯಲೋಕದ ಆಸ್ತಿಯಾದ ನೀನು ಆರೋಗ್ಯದಿಂದ ಇರುವುದು ಮುಖ್ಯವೆಂದು ಹೇಳಿದ್ದಕ್ಕೆ ವಿಷಣ್ಣ ನಗೆ ನಕ್ಕ, ಅದೆಲ್ಲ ನಾನ್ಸೆನ್ಸ್ ಎಂದ, ಹಲವು ವರ್ಷಗಳ ಮೊದಲೇ ಸಾವನ್ನು ಆಸ್ವಾದಿಸುವುದಕ್ಕೆ ತಾನು ಸಿದ್ಧನಿರುವುದಾಗಿ ಹೇಳಿದ, ಆತನ ಈ ರೀತಿಯ ವೈರಾಗ್ಯಕ್ಕೆ ಕಾರಣಗಳು ಇಲ್ಲದಿರಲಿಲ್ಲ,

ಆತನ ಶ್ರೀಮಂತ ತಂದೆ ತಾಯಿಗಳಿಬ್ಬರೂ ಗುಣವಾಗದ ಖಾಯಿಲೆಗಳಿಂದ ನರಳಿ ಇಹಲೋಕ ತ್ಯಜಿಸಿದ್ದರು, ಅದರ ಮೇಲೆ ಬರೆ ಎಳೆದಂತೆ ಇಬ್ಬರು ಮಕ್ಕಳು ವಿಚಿತ್ರ ಖಾಯಿಲೆಗಳಿಂದ ನರಳಿ ಸತ್ತಿದ್ದರು, ಹೆತ್ತ ಮಕ್ಕಳಿಗೆ ಸೂಕ್ತ ಚಿಕಿತ್ಸೆ ಕೊಡಿಸದವನೊಂದಿಗೆ, ಮನಸ್ಸು ಬಿಚ್ಚಿ ಮಾತನಾಡದವನ ಸಂಗಡ ತಾನು ಬಾಳುವೆ ಮಾಡಲಾರೆನೆಂದು ಮುಖಕ್ಕೆ ಹೊಡೆದಂತೆ ಹೇಳಿ ಪತ್ನಿ ಅಶ್ವಿನಿ ಎರಡು ವರ್ಷಗಳ ಹಿಂದೆಯಷ್ಟೆ ತವರೂರಾದ ಕಡಪಾ ಜಿಲ್ಲೆಯ ಜಮ್ಮಲಮಡುಗಿಗೆ ಹೋಗಿದ್ದಳು, ಪಶ್ಚಾತ್ತಾಪದಂಥ ಮೂಲಭೂತ ಸಂವೇದನೆಯೇ ಇರದಿದ್ದ ಅವನು ಆಕೆಯನ್ನು ಕರೆತರುವ ಪ್ರಯತ್ನ ನಡೆಸಿರಲಿಲ್ಲ, ಜನ್ಮತಃ ಬ್ರಾಹ್ಮಣ ಸಂಜಾತರಾಗಿದ್ದರೂ, ಕಾರಣಾಂತರಗಳಿಂದಾಗಿ ಆ ಭಾಗದಲ್ಲಿ ಕುಖ್ಯಾತ ಫ್ಯಾಕ್ಷನಿಷ್ಟ್ ಮುಖಂಡರಾದ ಆಕೆಯ ತಂದೆ ಕರಣಂ ಶಿವಶಂಕರಸ್ವಾಮಿ ಅವರಿಬ್ಬರ ನಡುವಿನ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಎಲ್ಲಾ ರೀತಿಯಿಂದ ಪ್ರಯತ್ನಿಸಿ ವಿಫಲರಾದರು. ಸುಪುತ್ರಿ ಅವರ ಹಾಗೆಯೇ ಮಹಾ ಸ್ವಾಭಿಮಾನಿ! ಆದರೆ ಅಳಿಯ ವಿರಾಗಿ. ಚತುರೋಪಾಯಗಳನ್ನು ಪ್ರಯೋಗಿಸಿದರೂ ಅವರಿಬ್ಬರನ್ನು ಬೆಸೆಯುವುದು ಅವರಿಂದಾಗಲೇ ಇಲ್ಲ. ಆದರೆ ಶ್ರೀಮತಿ ಅಶ್ವಿನಿ ತಮ್ಮ ತಂದೆಯ ಇಚ್ಛೆಗೆ ವಿರುದ್ಧವಾಗಿ ಕಡಪಾದ ಪ್ರಥಮ ದರ್ಜೆ ನ್ಯಾಯಾಲಯದಲ್ಲಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿರುವಳು, ಆದರೆ ಅಂತರ್ಮುಖಿ ಪಾರ್ಥ ನ್ಯಾಯಾಲಯಕ್ಕೆ ಹಾಜರಾಗುವುದು ಒತ್ತಟ್ಟಿಗಿರಲಿ, ತಾಡಿಪತ್ರಿ ದಾಟಿ ಕಡಪಾದ ಗಡಿಯನ್ನು ಪ್ರವೇಶ ಮಾಡಲಿಲ್ಲ, ತನ್ನನ್ನು ಆರೆಸ್ಟ್ ಮಾಡುವ ಸಲುವಾಗಿ ಬರಲಿರುವ ಪೋಲಿಸರ ನಿರೀಕ್ಷೆಯಲ್ಲಿರುವನು. ಆ ನಿರೀಕ್ಷೆಯಲ್ಲಿಯೇ ಕಾದಂಬರಿಯನ್ನು ಬರೆದು ಮುಗಿಸಿರಬಹುದು, ಇಂಥ ಕಾರಣಗಳಿಂದಾಗಿ ಆತನ ಮನವಿಯನ್ನು ತಿರಸ್ಕರಿಸುವ ಧೈರ್ಯ ನನಗೆ ಬರಲಿಲ್ಲ.

ವೈಶಾಖದ ಬಿಸಿಲನ್ನು ಲೆಕ್ಕಿಸದೆ ಪತ್ತಿಕೊಂಡ ದೇವನಕೊಂಡಗಳನ್ನು ದಾಟಿ ಕರ್ನೂಲನ್ನು ಆ ದಿವಸ ಸೇರಿಕೊಂಡೆ, ದಾರಿಯುದ್ದಕ್ಕೂ ಆತನ ಕಥೆಗಳ ಬಗ್ಗೆ ಪುನರಾವಲೋಕನ ನಡೆಸಿದೆ, ಅವೆಲ್ಲ ವೈದಿಕ ಕೌಟುಂಬಿಕ ಪರಿಸರದಲ್ಲಿ ನಡೆಯುವ ಕಥೆಗಳು, ವಾಚಕರ ಮನಸ್ಸನ್ನು ಗಲಿಬಿಲಿಗೊಳಿಸದ, ಅವರ ಮನಸ್ಸಿಗೆ ನೋವನ್ನುಂಟು ಮಾಡದ, ಸರಳ ಓದಿಗೆ ನಿಲುಕುವ ಸಿಹಿದಿನಿಸಿನಂಥ ಕಥೆಗಳು. ಪ್ರೊ. ಕಾಶಿಬೊಟ್ಲ ಅವರು ಭಾರತಿ ಪತ್ರಿಕೆಯಲ್ಲಿ ವಿಮರ್ಶಿಸುತ್ತ ಅವುಗಳನ್ನು ವಿಶ್ವನಾಥ ಸತ್ಯನಾರಾಯಣ ಅವರ ಕಥೆಗಳಿಗೆ ಹೋಲಿಸಿರುವುದುಂಟು, ಆತನ ತುಳಸಿಕಟ್ಟೆ ಕೇಂದ್ರಿತ ಕಥೆಗಳೆಂದರೆ ನನಗೆ ಇಷ್ಟವೂ ಅಲ್ಲ, ಅನಿಷ್ಟವೂ ಅಲ್ಲ. ಆದರೆ ಅವುಗಳು ಮೂಡಿಸುವ ಪ್ರಸನ್ನತಾಭಾವ ನನಗೆ ಇಷ್ಟ.

ಜಿಲ್ಲಾಧಿಕಾರಿ ನಿವಾಸದ ಹಿಂಬದಿಯ ರಸ್ತೆಯಲ್ಲಿ ಅಂದರೆ ಪನ್ನಗಶಯನ ದೇವಾಲಯದ ಎದುರು ರಸ್ತೆಯ ಕೊನೆಯಲ್ಲಿನ, ಅಂದರೆ ಒಂದೂವರೆ ಶತಮಾನದ ಹಿಂದೆ ಉಯ್ಯಾಲವಾಡ

ನರಸಿಂಹರೆಡ್ಡಿಯವರಿಗೆ ಸಾರ್ವಜನಿಕವಾಗಿ ಮರಣದಂಡನೆ ನೀಡಿದ, ಅಂದರೆ ಶತಮಾನದಷ್ಟು ಹಳೆಯದಾದ ಅಶ್ವತ್ಥಾಲದ ನೆರಳಿನ ತುದಿಯಲ್ಲಿದ್ದ ಎರಡು ಅಂತಸ್ತಿನ ಮನೆಗೆ ಮುಚ್ಚಿದ್ದ ಬಾಗಿಲನ್ನು ಎರಡನೆ ಸಲ ಬಡಿದೆ, ಎವರದಿ ಎಂಬ ಕೂಗು ಒಳಗಿನಿಂದ ಕೇಳಿಸಿತು, ಅದರ ಹಿಂದೆಯೇ ವ್ಯಕ್ತಿಯೋರ್ವ ಬಾಗಿಲು ತೆರೆದ, ಆತ ತನ್ನೆದೆಗೆ ಇಳಿಬಿಟ್ಟುಕೊಂಡಿದ್ದ ದಪ್ಪಗಾಜಿನ ಕನ್ನಡವನ್ನು ಕಣ್ಣುಗಳಿಗೇರಿಸಿಕೊಂಡ, ಪರಸ್ಪರ ಅಪಾದಮಸ್ತಕ ದಿಟ್ಟಿಸಿದೆವು, ಅಲ್ಲದೆ ಗುರುತೂ ಹಿಡಿದೆವು, ಓಹ್ ಅಯ್ಯವಾರು ಎಂದು ತಾನೂ, ಪಾರ್ಥಸಾರಥಿಗಾರು ಎಂದು ನಾನೂ ಏಕಕಾಲಕ್ಕೆ ಉದ್ಗರಿಸಿದೆವು, ನನ್ನಷ್ಟೇ ವಯೋಮಾನದವನಾಗಿದ್ದರೂ ತುಂಬ ವಯಸ್ಸಾದವನಂತೆ, ಬಳಲಿಕೆಯಿಂದ ಹಣ್ಣಾಗಿರುವವನಂತೆ ಗೋಚರಿಸಿದ, ತನ್ನ ದೈಹಿಕ ಸೌಂದರ್ಯವನ್ನು ಗಡ್ಡದಾಡಿಗಳಿಂದ ಮರೆಮಾಚಿಕೊಂಡ ಲಿಯೋನಾರ್ಡೊ ವಿಂಚಿಯೇ ನನ್ನೆದುರಲ್ಲಿರುವಂತೆ ಭಾಸವಾದನು. ಪತ್ನಿ ಅಶ್ವಿನಿ ತನ್ನ ಬಳಿ ಇದ್ದಿದ್ದಲ್ಲಿ ಈ ರೀತಿ ಇರುತ್ತಿರಲಿಲ್ಲವೇನೊ! ಪುನಃ ಇನ್ನೊಂದು ಮಗುವಿಗೆ ತಂದೆಯಾಗಲು ಪ್ರಯತ್ನಿಸಿದ್ದಲ್ಲಿ ಈ ರೀತಿ ಇರುತ್ತಿರಲಿಲ್ಲವೇನೊ! ನಿಧಾನವಾಗಿ ಆತನ ದುರ್ಬಲ ಕೈಗಳನ್ನು ಲಾಘವದ ನೆಪದಲ್ಲಿ ಸ್ಪರ್ಶಿಸಿದೆನು, ತಣ್ಣಗೆ ಕೊರೆದಂತೆನಿಸಿತು.

ನೆಮ್ಮದಿಗಾ ರಂಡಿ ಎಂದು ಸಂಬೋಧಿಸುತ್ತ ಒಳಗಡೆ ಕರೆದೊಯ್ದ, ಮನೆ ವಿಶಾಲವೇನೋ ನಿಜ, ಅಂದರೆ ಹಳೆಕಾಲದ ಕಟ್ಟಡ, ಅಲಂಪುರಂನ ಜಹಗೀರದಾರರ ಮನೆ, ಆದರೆ ಅಚ್ಚುಕಟ್ಟುತನವಿರಲಿಲ್ಲ, ಹೆಜ್ಜೆ ಇರಿಸಿದೊಡನೆ ಪ್ರಾಚೀನ ಗುಹೆಯನ್ನು ಪ್ರವೇಶಿಸುತ್ತಿರುವ ಅನುಭವವಾಯಿತು, ಅರೆ ಮುಚ್ಚಿದ್ದ ಕಿಟಿಕಿಯಿಂದ ನುಸುಳುತ್ತಿದ್ದ ಬೆಳಕನ್ನು ಹೊರತುಪಡಿಸಿದರೆ ಇನ್ನೊಂದು ಬೆಳಕಿರಲಿಲ್ಲ, ವಿಚಿತ್ರ ವಾಸನೆ ಬೇರೆ, ಕೆಲವು ತಾಸುಗಳ ಹಿಂದೆ ಊಟ ಮಾಡಿದ್ದ ಎಂಜಲು ತಟ್ಟೆ ತುಂಬೆಲ್ಲ ನೊಣಗಳು ಗಿರಕಿ ಹೊಡೆಯುತ್ತಿದ್ದವು, ಅಳಿದುಳಿದ ಆಹಾರವಿದ್ದ ಟಿಫಿನ್ ಕ್ಯಾರಿಯರಿನ ಮೂರೂ ಬಾಕ್ಸುಗಳು ತೆರೆದುಕೊಂಡಿದ್ದವು, ನಮ್ಮಿಬ್ಬರ ಹೆಜ್ಜೆ ಸದ್ದಿಗೆ ವಿಸ್ಕಿ ಶೀಸೆ ಕಂಪಿಸಿತು, ಮುಗುಚಿರಿಸಿದ್ದ ಕಾರಣಕ್ಕೆ ಗ್ಲಾಸು ಕಂಪಿಸಲಿಲ್ಲ, ಅಲ್ಲಲ್ಲಿ ಸಿಗರೇಟಿನ ತುಂಡುಗಳು, ಒಂದೆರಡು ಕಡ್ಡಿಗಳಿದ್ದ ಪೊಟ್ಟಣ, ಅಗೋ ಅಲ್ಲಿ ಟಾಲ್‌ಸ್ಟಾಯ್ ಮತ್ತು ಭಗವದ್ಗೀತೆ! ಇಗೋ ಇಲ್ಲಿ ದಾಸ್ತೊವಸ್ಕಿ ಮತ್ತು ಇಂಡಿಯನ್ ಪಿನಲ್ ಕೋಡು! ನೆಲದ ಮೇಲೆ ಚೆಲ್ಲಾಪಿಲ್ಲಿಯಾಗಿದ್ದ ವೃತ್ತಪತ್ರಿಕೆಗಳು, ಥರಾವರಿ ಪುಸ್ತಕಗಳಿಂದ ಕಿಕ್ಕಿರಿದಿದ್ದ ಕಪಾಟು. ಅದನ್ನೆಲ್ಲ ಚೊಕ್ಕಟಗೊಳಿಸಲು ಪ್ರಯತ್ನಿಸಿದ, ಆದರೆ ಸುಸ್ತಾಗಿ ಕೈಚೆಲ್ಲಿದ, ಹೋಟಲ್ಲಿನಿಂದ ಚಹಾ ತರಿಸುವ ಸಲುವಾಗಿ ಕೈಯಲ್ಲಿ ಫ್ಲಾಸ್ಕನ್ನು ಹಿಡಿದುಕೊಂಡು ಬಾಗಿಲು ದಾಟಿ ತುಳಸಿ ಗಿಡದ ಅವಶೇಷವಿದ್ದ ಅಂಗಳದಲ್ಲಿ ನಿಂತು ಪುನಃ ವಾಪಸ್ಸಾದನು.

ನನ್ನ ಪ್ರಯಾಣದ ಬಗೆಗಾಗಲೀ, ನಾನು ಊಟ ಮಾಡಿರುವೆನೋ ಉಪವಾಸವಿರುವೆನೋ ಎಂಬುದರ ಬಗೆಗಾಗಲೀ ಸೌಜನ್ಯಕ್ಕಾದರೂ ಪರಾಂಬರಿಸುವ ಗೋಜಿಗೆ ಹೋಗಲಿಲ್ಲ. ಏನೆಲ್ಲ ಹೇಳಿಕೊಳ್ಳುವ ಸಲುವಾಗಿ ಹಲವು ಸಲ ಪ್ರಯತ್ನಿಸಿ ಪುನಃ ಮೌನವಹಿಸಿದ, ಪರಸ್ಪರ ಸಮಕ್ಷಮ ಕುಳಿತುಕೊಂಡೆವು, ಕಳೆದ ಎರಡು ಮೂರು ವರ್ಷಗಳಲ್ಲಿ ಎಷ್ಟೊಂದು ಬದಲಾಗಿರುವನು ನನ್ನ ಪ್ರೀತಿಯ ಕಥೆಗಾರ, ಮೆಚ್ಚಿನ ಗೆಳೆಯ ತನಿಕೆಳ್ಳ ಪಾರ್ಥಸಾರಥಿ! ಜೀವನೋತ್ಸಾಹ ಬತ್ತಿರುವ ಬದುಕಿನ ವಾರಸುದಾರ ನನ್ನ ಕಣ್ಣೆದುರಲ್ಲಿ! ಮನುಷ್ಯ ಸಂಬಂಧಗಳು ಕುರಿತಂತೆ ಭ್ರಮನಿರಸನ ತಳೆದಿರುವ ವ್ಯಕ್ತಿ ಕಾದಂಬರಿ ಬರೆದಿರುವುದೆಂದರೆ! ನನಗೆ ಆಶ್ಚರ್ಯವಾಯಿತು. ಆತನ ಹಲವು ಕಥೆಗಳನ್ನು ನೆನಪಿಸಿಕೊಂಡೆ, ಅವೆಲ್ಲ ವಾಚಕನಲ್ಲಿ ಜೈವಿಕ ಚೈತನ್ಯ ಮೂಡಿಸುವ ಚೇತೋಹಾರಿ

ಕಥೆಗಳು, ಅವುಗಳನ್ನು ತಾನು ತನ್ನ ವಿವಾಹಪೂರ್ವದಲ್ಲಿ ಅಥವಾ ವಿವಾಹಾನಂತರದ ಅತ್ಯುತ್ಸಾಹದ ದಿನಗಳಲ್ಲಿ ಬರೆದಿರಬಹುದೆಂದು ಊಹಿಸಿದೆ. ಇಷ್ಟು ಒಳ್ಳೆಯ ಕಥೆಗಳನ್ನು ಬರೆದಿರುವ ಲೇಖಕ ಕಾದಂಬರಿ ಬರೆಯುವುದು ಅಸಾಧ್ಯವೆಂದು ಪ್ರೊ. ಕಾಶಿಬೊಟ್ಲ ಅವರ ಲೇಖನದ ಕೊನೆಯ ವಾಕ್ಯವನ್ನೂ ಏಕಕಾಲಕ್ಕೆ ನೆನಪಿಸಿಕೊಂಡೆ.

ಆದರೆ ಬರೆದಿರುವನೆಂಬ ವದಂತಿಗಳು, ಬರೆದಿರುವನೋ! ಬರೆದಿರುವುದಾಗಿ ಹೇಳಿಕೊಂಡಿರುವನೋ! ಅಥವಾ ಬರೆಯುವ ಪ್ರಯತ್ನದಲ್ಲಿರುವನೋ! ನನ್ನನ್ನಿಲ್ಲಿಗೆ ಬರಮಾಡಿಕೊಳ್ಳಲು ತಾನು ಸುಳ್ಳು ಹೇಳಿರಲೂಬಹುದೆಂದು ಭಾವಿಸಿ ಆತನ ಕಡೆ ದೃಷ್ಟಿ ಹಾಯಿಸಿದೆ, ನನ್ನ ಮನಸ್ಸಿನ ತೊಳಲಾಟವನ್ನು ತಾನು ಗ್ರಹಿಸಿದನೇನೋ! ಮೆಲ್ಲಗೆ ಎದ್ದು ಕಿಟಿಕಿ ಎದುರು ಇದ್ದ ಟೇಬಲ್ ತಲುಪಿದ, ಅದರ ಮೇಲಿದ್ದ ಕಡತವನ್ನು ಕೈಗೆತ್ತಿಕೊಂಡು ಬಡಿದು ಸದ್ದು ಮಾಡಿದ, ಧೂಳಿನ ಘಾಟು ಆವರಿಸಿತು, ಅದನ್ನು ನನ್ನ ಕಡೆ ಚಾಚಿ ಇದೇ ನೋಡು ಎಂದು ಹೇಳಿದ, ತೆಗೆದುಕೊಂಡೆ, ಆರಂಭದ ಪುಟದಲ್ಲಿ ಹೇಮರೆಡ್ಡಿ ಮಲ್ಲಮ್ಮನ ಕಥೆ ಎಂದು ಇರುವುದನ್ನು ನೋಡಿ 'ಓಹೋ ಪೌರಾಣಿಕ' ಎಂದು ಉದ್ಗರಿಸಿದೆ, ಅದಕ್ಕೆ ಪ್ರತಿಯಾಗಿ ತಾನು ನಕ್ಕು "ಇದು ಆ ಹೇಮರೆಡ್ಡಿಯ ಧರ್ಮಪತ್ನಿ ಶಿವಶರಣೆ ಮಲ್ಲಮ್ಮನವರ ಕಥೆ ಅಲ್ಲ, ಓದು ನಿನಗೇ ತಿಳಿಯುವುದು, ಹ್ಹಾ ಅಂದ ಹಾಗೆ ನಾನು ಆರೋಗ್ಯದಿಂದ ಇರುವುದಕ್ಕೆ ಇದೇ ಕಾರಣ" ಎಂದು ಹೇಳುತ್ತ ಕುರ್ಚಿಯಲ್ಲಿ ಕುಳಿತು ನಿಟ್ಟುಸಿರುಬಿಟ್ಟನು. ನಾನು ನಿಧಾನವಾಗಿ ಓದಲಾರಂಭಿಸಿದೆನು.

# ದೃಶ್ಯ: ಒಂದು

ಕೆಲವು ದಿವಸಗಳ ಹಿಂದೆಯಷ್ಟೆ ಎಲೆಕ್ಷನ್ ಡ್ಯೂಟಿ ಮುಗಿಸಿಕೊಂಡು ಪತ್ತಿಕೊಂಡ ವಳಿತದ ಚೆಲ್ಲಲಚೆಲಿಮಲ ಎಂಬ ಕುಖ್ಯಾತ ಕುಗ್ರಾಮದಿಂದ ಶಾಲೆಗೆ ಮರಳಿದ್ದೆ. ತಲೆಯಲ್ಲಿ ರ್‍ಯಾಡಿಕಲ್ ಪನ್ನಂಗಧರ, ಶ್ರೀಕೃಷ್ಣ ಭವನದ ಹೆಬ್ಬಾರ್, ಅಲಿಯೇ ಮೊದಲಾದವರು ತುಂಬಿಕೊಂಡಿದ್ದರು. ಅಂದು ಯಾವುದೋ ಒಂದು ಹಬ್ಬ. ಮಕ್ಕಳ ಹಾಜರಿ ಅಷ್ಟಕ್ಕಷ್ಟೆ. ಕೆಲವು ಬಂದು ಹೋಗುವುದು ಮಾಡುತ್ತಿದ್ದವು. ದಣಿವು ಆಯಾಸದಿಂದಾಗಿ ಆಕಳಿಸುವುದು ತೂಕಡಿಸುವುದು ಮಾಮೂಲಾಗಿತ್ತು. ತಿಮ್ಮನಗೌಡ, ರಾಮಿರೆಡ್ಡಿ, ಲಚ್ಚುಮಿರೆಡ್ಡಿಯರು ಒಬ್ಬೊಬ್ಬರಾಗಿ ಬಂದು ಸಾಲಿಗುಡಿಯ ಕಂಭಗಳಿಗಾತು ಮೈ ಚೆಲ್ಲಿದರು. ಚುನಾವಣೆ ಕುರಿತಂತೆ ಇಂದಿರಾಗಾಂಧಿಯ ಸೋಲು ಗೆಲುವು ಕುರಿತಂತೆ ಚರ್ಚೆ ಆರಂಭಿಸಿದರು. ತುರ್ತುಪರಿಸ್ಥಿತಿಯ ಕರಾಳ ಮುಖಗಳ ಪರಿಚಯವಿರದಿದ್ದ ಅವರೊಂದಿಗೆ ಚರ್ಚಿಸುವುದು ಒಂದೆ, ಗಾರ್ದಭಗಳ ಮುಂದೆ ಕಿನ್ನರಿ ನುಡಿಸುವುದು ಒಂದೆ. ಕೇಳಿದ್ದಕ್ಕೆಲ್ಲ ತಲೆ ಅಲ್ಲಾಡಿಸಿದೆ, ಅವರೊಂದಿಗೆ ಮಾತಿಗಿಳಿಯುವ ಸಾಹಸ ಮಾಡಲಿಲ್ಲ. ತುಸು ಹೊತ್ತು ಆಡುವುದನ್ನೆಲ್ಲ ಆಡಿ ಅವರೆಲ್ಲ ಒಬ್ಬೊಬ್ಬರಾಗಿ ಅಲ್ಲಿಂದ ತೊಲಗಿದರು, ಬಳಿಕ ಈಶಣ್ಣ ಬಾಗಿಲ ಬಳಿ ಕಾಣಿಸಿಕೊಂಡು ಅಡುಗೆ ಮಾಡಿರುವುದಾಗಿ ಹೇಳಿದ.

ಈಶಣ್ಣ ಎಂಬುದು ಆತನ ನಿಜನಾಮಾಂಕಿತವಲ್ಲ, ವಾರದಿನ್ಯೆದು ದಿವಸಗಳ ಹಿಂದೆಯಷ್ಟೆ ಆ ಅಪರಿಚಿತನಿಗೆ ನಾನಿಟ್ಟ ಹೆಸರು. ಎಲೆಕ್ಷನ್ ಡ್ಯೂಟಿ ಮುಗಿಸಿಕೊಂಡು ನಾನು ಮರಳುವುದಕ್ಕೂ ಪರಶುರಾಮ ಅಪರಿಚಿತನೊಂದಿಗೆ ಕಾಣಿಸಿಕೊಳ್ಳುವುದಕ್ಕೂ ಸರಿ ಹೋಯಿತು. ದಣಿದಿದ್ದರೂ ನಖಶಿಖಾಂತ ನೋಡಿದೆ. ಅಷ್ಟೇನೂ ಎತ್ತರವೂ ಅಲ್ಲದ ಗಿಡ್ಡವೂ ಅಲ್ಲದ ಸಮಪ್ರಮಾಣದ ನಿಲುವು. ಗೌರವರ್ಣ, ತೇಜಸ್ವಿ ಮುಖ, ಹಣೆಯಲ್ಲಿ ವಿಭೂತಿ ಕಟ್ಟುಗಳು, ಭ್ರೂ ಮಧ್ಯೆ ಕುಂಕುಮ ತಿಲಕ, ಫಳ ಪಳ ಹೊಳೆಯುವ ಕಣ್ಣುಗಳು! ರಂಗ ಕಲಾವಿದನೋ, ಯಾವುದಾದರೊಂದು ಮಠದ ಸಂಭವನೀಯ ಉತ್ತರಾಧಿಕಾರಿಯೋ, ಛದ್ಮವೇಷದಲ್ಲಿರುವ ಸಂತನೋ, ಸಂಗೀತಗಾರನೋ! ಇತ್ಯಾದಿ ಊಹಿಸಿಕೊಂಡೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಸಂತೋಷ ನೀಡುವ, ದಣಿವು ನಿವಾರಿಸುವ ಅಪರೂಪದ ವ್ಯಕ್ತಿತ್ವ ಒಳಗೆ ಸ್ವಾಗತಿಸಿದೆ. ತನ್ನ ಮಗ್ಗುಲು ಸ್ಥಿತಪ್ರಜ್ಞತೆಯಿಂದ ಕೂತ ಅಪರಿಚಿತನ ಕುರಿತು ಪರಶುರಾಮ ಆಡಿದ ಪಿಸುಮಾತುಗಳನ್ನು ಆಲಿಸಿ ಒಂದು ಕ್ಷಣ ನಖಶಿಖಾಂತ ಕಂಪಿಸಿದೆ.

ಆತನ ಸ್ವಾಸ್ಥಿ ವಾಗಿಲಿಗೆ ಹತ್ತು ಹದಿನೈದು ಹರದಾರಿ ದೂರದಲ್ಲಿ ಕರ್ನಾಟಕದ ಗಡಿಗಂಟಿಕೊಂಡಿರುವ ಊಳೂರು. ಅದನ್ನು ನೋಡಿರುವ ನೆನಪು. ಸುತ್ತ ಮುಳ್ಳು ಕಳ್ಳಿಗಳ ಕುರುಚಲು ಕಾಡು. ಕಾಲು ಹಾದಿ. ಬಂಡಿ ಜಾಡು ಹೊರತುಪಡಿಸಿದರೆ ಕಚ್ಚಾ ರಸ್ತೆ ಇಲ್ಲ. ಅಲ್ಲಿ ನೂರಾರೆಕರೆ ಭೂಒಡೆತನ ಹೊಂದಿರುವ ಪುಯ್ಯಾವುಲ ರೆಡ್ಡಿಯ ಮಾತೇ ವೇದವಾಕ್ಯ. ನಿರಂಕುಶ ಆಡಳಿತ. ಪ್ರಧಾನಿ ಇಂದಿರಾಗಾಂಧಿ ದೇಶದಾದ್ಯಂತ ವಿಧಿಸಿದ ತುರ್ತುಪರಿಸ್ಥಿತಿ ಮತ್ತದರ ಇಪ್ಪತ್ತಂಶ ಕಾರ್ಯಕ್ರಮಗಳ ಕುರಿತಂತೆ ಜಿಜ್ಞಾಸೆ, ಏನೇ ಇರಲಿ ಜಮೀನ್ದಾರರ ನಿದ್ದೆ ಕೆಡಿಸಿದ್ದಂತೂ ನಿಜ, ಶೂದ್ರ ದಲಿತರಲ್ಲಿ ಸ್ವಾಭಿಮಾನ ತುಂಬಿದ್ದು ಸಹ ಅಷ್ಟೇ ನಿಜ. ಸಾರ್ವತ್ರಿಕವಾಗಿ ನಡೆದ ಐತಿಹಾಸಿಕ ಚುನಾವಣೆಯ ಸಂದರ್ಭದಲ್ಲಿ ಏನಾಯಿತೆಂಬುದು ತಿಳಿಯದು! ಆದರೆ ರೆಡ್ಡಿಯನ್ನು ಕುರುಬ ಜನಾಂಗಕ್ಕೆ ಸೇರಿದ ಓರ್ವ ವ್ಯಕ್ತಿ ಹಾಡುಹಗಲೇ ಬರ್ಬರ ರೀತಿಯಲ್ಲಿ ಕೊಲೆ ಮಾಡಿ ತಲೆಮರೆಸಿಕೊಂಡ. ಆ ಬಾಡಿಗೆ ಕೊಲೆಗಾರನೇ ಈ ಶರಭನೆಂದು ಪರಶುರಾಮ ಹೇಳಿದೊಡನೆ ನನಗೆ ನಂಬಲಾಗಲಿಲ್ಲ, ನಂಬದೆ ಇರಲಾಗಲಿಲ್ಲ.

"ಮೇಸ್ಟ್ರೇ ಏಳೆಂಟು ದಿವಸ ಈತನನ್ನು ನಿಮ್ಮ ಮನೆಯಲ್ಲಿಟ್ಟುಕೊಂಡಿರ್ರಿ, ಯಾರಾದರು ಕೇಳಿದರೆ ಸ್ವಂತ ಚಿಕ್ಕಪ್ಪನ ಮಗನೆಂದು ಹೇಳಿರಿ, ನಿಮಗ ಒಂದು ಜೀವ ಕಾಪಾಡಿದ ಪುಣ್ಯ ಬರುವುದು" ಎಂದು ಆತ ಕೇಳಿಕೊಂಡ. ಬೆವರೊರೆಸಿಕೊಳ್ಳುತ್ತ ಆಗಂತುಕನ ಕಡೆ ದಿಟ್ಟಿಸಿದೆ. ಆದರೆ ಅವನು ನಿರ್ಭಾವುಕ ರೀತಿಯಲ್ಲಿ ನೀರ ಮೇಲೆ ತೇಲುವ ಘೃತ ಬಿಂದುವಿನೋಪಾದಿಯಲ್ಲಿ ಕೂತಿದ್ದ.

ಮನೆಯನ್ನು ಬಾಡಿಗೆ ಕೊಟ್ಟಿರುವವನ 'ಹಗಲು ಕಗ್ಗೊಲೆ ಮಾನ್ಯ' ಎಂಬ ಬಿರುದಾಂಕಿತನ ಮಾತನ್ನು ಮೀರಲಾಗುವುದೆ! ಒಪ್ಪಿಕೊಂಡೆ. ನೆರೆಹೊರೆಯವರಿಗೆ ನನ್ನ ಸೋದರ ಸಂಬಂಧಿ ಈಶಣ್ಣ ಎಂದೂ ಪರಿಚಯಿಸಿದೆ. ನಮ್ಮೀರ್ವರ ಸಹಚರ್ಯ ಬಾದರಾಯಣವೋ ಎಂಬಂತೆ ತಾನೂ ಅತ್ಯದ್ಭುತವಾಗಿ ಹೊಂದಿಕೊಂಡ. ಅಲ್ಲದೆ ಅವನು ಬ್ರಹ್ಮಚಾರಿ ಎಂಬುದಕ್ಕಿಂತ ಅವಿವಾಹಿತ. ನನ್ನ ಮನೆಯ ಸಮಸ್ತ ಗೃಹಕೃತ್ಯಗಳನ್ನೆಲ್ಲ ತಾನೇ ವಹಿಸಿಕೊಂಡ. ಎಲ್ಲದಕ್ಕಿಂತ ಮಿಗಿಲಾಗಿ ತನ್ನ ಲಗೇಜಿನೊಳಗಿನ ಭಯಭೀತ ವಸ್ತುಗಳನ್ನು ಅದರಲ್ಲೂ ಮುಖ್ಯವಾಗಿ ಥಳಥಳ ಹೊಳೆಯುತ್ತಿದ್ದ ಚೂರಿಯನ್ನು ತೋರಿಸಿ ಪರಿಚಯಿಸಿದ, ತನ್ನ ಪೂರ್ವಾಪರಗಳನ್ನು ನಿರ್ಭಿಡೆಯಿಂದ ಹೇಳಿಕೊಂಡ, ಕ್ರಮೇಣ ನನ್ನ ಪಂಚೇಂದ್ರಿಯಗಳ ಕೈಯಳತೆಗೆ ಹತ್ತಿರವಾದ. ಹಾಗೆ ಓಣಿಯ ಅವರಿಗೆಲ್ಲ ಚಿಕ್ಕಪುಟ್ಟ ಸಹಾಯ ಮಾಡಲಾರಂಭಿಸಿ ಎಲ್ಲರೊಂದಿಗೆ ಹೊಂದಿಕೊಂಡ. 'ದೇವರೆ ಪೋಲಿಸರಿಗಾಗಲೀ, ತನ್ನ ವೈರಿಗಳಿಗಾಗಲೀ ಸಿಗದಂತೆ ನೋಡಿಕೋ, ಈ ನನ್ನ ಅತಿಥಿಗೆ ಸುದೀರ್ಘಾಯುಷ್ಯವನ್ನು ದಯಪಾಲಿಸು' ಎಂಬುದು ನನ್ನ ದೈನಂದಿನ ಪ್ರಾರ್ಥನೆಯಾಗಿತ್ತು.

ತನ್ನ ವಿಸ್ತಾರವಾದ ಎದೆಯ ಭಾಗದಲ್ಲಿ ವಿನಯಪೂರ್ವಕವಾಗಿ ಮಡಚಿದ್ದ ಕೈಗಳನ್ನು ಮಿಸುಕಾಡಿಸದೆ "ಸಾರ್ ಮಾಡಿರುವ ಅಡುಗೆ ತಣ್ಣಗಾಗುವುದರೊಳಗೆ ಊಟ ಮಾಡಿ, ನನಗೂ ಹೊಟ್ಟೆ ಹಸಿದಿದೆ" ಎಂದು ಹೇಳಿದ. ಅದೇ ಸಮಯಕ್ಕೆ ಸರಿಯಾಗಿ ಓಣಿಯ ಶುನಕಗಳು ತಾರಕಸ್ವರದಲ್ಲಿ ರಣಭೇರಿ ಮೊಳಗಿಸಿದವು, ಅದೂ ವಿಶೇಷ ರೀತಿಯಲ್ಲಿ. ವಾಗಿಲಿಯಲ್ಲಿ ಜನಸಂಖ್ಯೆಗಿಂತ ನಾಯಿಗಳ ಸಂಖ್ಯೆಯೇ ಅಧಿಕ, ಅಲ್ಲಿನ ಜನರು ಜನರನ್ನು ಪ್ರೀತಿಸುವುದಕ್ಕಿಂತ ಆ ಚತುಷ್ಪಾದಿಗಳನ್ನು ಪ್ರೀತಿಸುತ್ತಿದ್ದುದೇ ಅದಕ್ಕೆ ಕಾರಣ. ದ್ವಾಪರದ ಕುರುಕ್ಷೇತ್ರದಲ್ಲಿ ಹತರಾದವರೂ, ನಲ್ಲಮಲ ಅರಣ್ಯದಲ್ಲಿ ಪೋಲಿಸ್ ಎನ್‌ಕೌಂಟರಿನಲ್ಲಿ

ಹತರಾದ ಸಮಾಜಮುಖಿ ನಕ್ಸಲೈಟರೂ ವಾಗಿಲಿಯಲ್ಲಿ ಶುನಕ ಜನ್ಮ ತಳೆದಿರುವರೆಂಬುದು ನನ್ನ ಅಚಲ ನಂಬಿಕೆ. ವಾಗಿಲಿಗೆ ಬಂದ ಆರಂಭದ ದಿವಸಗಳಲ್ಲಿ ದೂರಸಂವೇದಿ ಉಪಗ್ರಹಗಳಂಥ ಶುನಕಗಳು ನನ್ನನ್ನೂ ಪರಿಪರಿಯಿಂದ ಕಾಡಿದ್ದುಂಟು, ಕ್ರಮೇಣ ಮಧ್ಯಾಹ್ನ ಬಿಸಿ ಭೋಜನದ ಆಮಿಷದಿಂದಾಗಿ ಹೊಂದಿಕೊಂಡಿದ್ದುಂಟು. ಅವುಗಳು ಮೊಳಗಿಸಿದ ಪಾಂಚಜನ್ಯದಿಂದಾಗಿ ನನ್ನ ಶ್ರವಣೇಂದ್ರಿಯವೂ ಚುರುಕಾಯಿತು, ಹಾಗೆಯೇ ನಯನೇಂದ್ರಿಯ ಸಹ.

ನೋಡು ನೋಡುವಷ್ಟರಲ್ಲಿ ಹತ್ತಾರು ಲಾರಿಗಳಿಗಾಗುವಷ್ಟು ಸಾಮಾನು ಸರಂಜಾಮು ಡುಬ್ಬದ ಮೇಲಿರಿಸಿಕೊಂಡಿದ್ದ ಎರಡು ಮೂರು ಗಾರ್ದಭಗಳೂ, ಅವುಗಳೊಂದಿಗೆ ಐದಾರು ಚಿಳ್ಳೆಮಿಳ್ಳೆಗಳೂ, ಬಾಲಗಳಿಂದ ತಮ್ಮ ತಮ್ಮ ಗುಪ್ತಾಂಗಗಳನ್ನು ಮರೆ ಮಾಚಿಕೊಂಡಿದ್ದ ಹೆಚ್ಚುವರಿ ಶುನಕಗಳೂ ತಿಪ್ಪಾರೆಡ್ಡಿಯವರ ಮೂಲಿಮನಿಯ ಸಂಧಿಯಿಂದ ರಾಜಗಾಂಭೀರ್ಯದಿಂದ ಆಗಮಿಸಿ ರಾಮದೇವರಗುಡಿ ಎದುರಿಗಿದ್ದ ಬೇವಿನಮರದ ತಣ್ಣೆಳಲಿನಲ್ಲಿ ನಿಂತವು. ಅವೆಲ್ಲ ದಯಮಾಡಿಸಿದ್ದು ಯಾವ ಲೋಕದಿಂದ! ಪುನಃ ಶುನಕಗಳ ಚಕ್ರವ್ಯೂಹ ರಕ್ಷಣೆಯಲ್ಲಿ ಮತ್ತೆರಡು ಗಾರ್ದಭಗಳು ಕಾಣಿಸಿಕೊಂಡವು. ಅವುಗಳ ಒಂದರ ಮೇಲೆ ನವಸಂಜಾತ ಶಿಶುವನ್ನೆದೆಗೆ ಕಟ್ಟಿಕೊಂಡಿರುವ ಮತ್ತು ಹೆರಿಗೆ ಆಸ್ಪತ್ರೆಯೇ ಸ್ತ್ರೀ ರೂಪಧರಿಸಿದಂತಿರುವ ತೇಜಸ್ವಿ ಮಾತೋಶ್ರೀಯೂ, ಇನ್ನೊಂದರ ಮೇಲೆ ಸಕಲ ರೋಗಗಳಿಗೆ ಆಶ್ರಯದಾತನಾಗಿರುವ ಮತ್ತು ಸರ್ಕಾರಿ ಆಸ್ಪತ್ರೆಯೇ ಪುರುಷ ರೂಪಧಾರಣ ಮಾಡಿದಂತಿರುವ ವಯೋವೃದ್ಧನೂ!

ಆಸುಪಾಸಿನ ಜನ ಖಾದ್ಯಗಳ ಪರಿಕರಗಳಿದ್ದ ತಳಿಗೆಗಳೊಡನೆ ಎಂಜಲಗ್ಯೆಗಳೊಡನೆ ಹೊರಬಂದರೆ ಮೊಲೆಯುಣ್ಣುತ್ತಿರುವ ಕೂಸುಗಳೊಡನೆ ತಾಯಂದಿರು ಮನೆಯ ಬಾಗಿಲುಗಳಲ್ಲಿ ಕಾಣಿಸಿಕೊಂಡರು. ನುಂಗುವ ಮಾತ್ರೆಗಳೊಡನೆ ರೋಗಿಗಳೂ ಹೊರ ಬಂದು ಸಂಭವಿಸಲಿರುವ ಕೌತುಕವನ್ನು ಕಣ್ಣಾರೆ ಸವಿಯಲಾರಂಭಿಸಿದರು. ನನ್ನಂಥ ಬಡಪಾಯಿ ಲೇಖಕನಿಗೆ ಇದಕ್ಕಿಂತ ಮೃಷ್ಟಾನ್ನಭೋಜನವಿನ್ನೇನು ಬೇಕು! ಅದಲ್ಲದೆ ಸರ್ಕಾರಿ ಶಾಲೆಗೆ ಪುನರ್ವಸತಿ ಕಲ್ಪಿಸಿರುವ ವೀರಭದ್ರದೇವರ ಆಲಯಕ್ಕೂ ಎದುರಿಗಿರುವ ರಾಮದೇವರ ಆಲಯಕ್ಕೂ ನಡುವೆ ಇರುವ ಬಯಲು ಯಾವುದೇ ಪಾರ್ಲಿಮೆಂಟು, ಸುಪ್ರೀಂಕೋರ್ಟಿಗಿಂತ ಕಡಿಮೆ ಇರಲಿಲ್ಲ. ಸಾರ್ವಜನಿಕ ಜಗಳಗಳೂ, ಕೌಟುಂಬಿಕ ಕಲಹಗಳೂ, ಥರಾವರಿ ಜಾನಪದ ಆಟಪಾಟಗಳೂ, ವಯೋವೃದ್ಧರ ಕಾಲಕ್ಷೇಪವೂ ಇತ್ಯಾದಿ ಚಟುವಟಿಕೆಗಳಿಗೆ ಆ ಬಯಲೇ ಆಶ್ರಯದಾಣ. ಅದೂ ಅಲ್ಲದೆ ಬುರ್ರಕಥಾ, ಕಿನ್ನರಿ ಜೋಗಿಗಳಂಥ ಜಾನಪದ ಕಲಾವಿದರೊಂದೇ ಅಲ್ಲದೆ ವೃತ್ತಿಪರ ಬೇಟೆಗಾರರೆನಿಪ ಶಿಕಾರಿಗಳೂ, ವೇಶ್ಯಾವಾಟಿಕಾ ಮಹಿಳಾ ಕಲಾವಿದರೂ, ಭೂಮಂತ್ರಗಾಳಿ ಯಕ್ಷಿಣಿ ಕಲಾವಿದರೂ, ಇವರೊಂದೇ ಅಲ್ಲದೆ ವೃತ್ತಿನಿರತ ಭಿಕ್ಷುಕರೂ ವಾಗಿಲಿಗೆ ಬಂದು ವಾರಗಳ ಕಾಲ ಠಿಕಾಣಿ ಹೂಡುವುದು ಅಲ್ಲಿಯೆ. ಕಾರಣ ವಾಗಿಲಿಗೆ ಬಂದವರು ಬರಿಗೈಲಿ ವಾಪಸ್ಸು ಹೋಗುತ್ತಿರಲಿಲ್ಲ. ಅದೂ ಅಲ್ಲದೆ ಶಿಕ್ಷಕನಾಗಿದ್ದ ನಾನು ಬಯಲ ಪ್ರತಿಯೊಂದು ಕ್ರಿಯಾಕಲಾಪಗಳನ್ನು ಬೋಧನೆಯ ಪ್ರಮುಖ ಭಾಗವೆಂದೇ ಪರಿಗಣಿಸುತ್ತಿದ್ದೆ, ವಿಶೇಷ ಪ್ರದರ್ಶನ ಏರ್ಪಡಿಸಿ ಮಕ್ಕಳಿಗೆ ಮನೋರಂಜನೆಯನ್ನೊದಗಿಸುತ್ತಿದ್ದೆ. ನಾನು ನನ್ನ ಸೃಜನಶೀಲ ಕಸುಬನ್ನು ಭಾಷಿಕವಾಗಿಯೂ, ವಾಸ್ತವಿಕವಾಗಿಯೂ ಶ್ರೀಮಂತಗೊಳಿಸಿಕೊಂಡು ಕಥೆಗಳನ್ನು ಬರೆಯುವುದರಲ್ಲಿ ಪಳಗಿದ್ದೆನು. ಹೀಗಾಗಿ ಆ ಬಯಲು ಯಾವುದೇ ವಿಶ್ವವಿದ್ಯಾಲಯಗಳಿಗಿಂತ ಕಡಿಮೆ ಇರಲಿಲ್ಲ. ಆದ್ದರಿಂದ ಸಹಜವಾಗಿಯೇ ಬಯಲಲ್ಲಿ ಸಂಭವಿಸಲಿರುವ ಕೌತುಕಗಳ ಕಡೆಗೆ ಕುತೂಹಲ ತಳೆದೆ.

ಅಷ್ಟೇನೂ ಆಸಕ್ತಿ ಇರದಿದ್ದ ಹಸಿದಿದ್ದ ಶರಭನನ್ನು ಹೊಟ್ಟೆ ತುಂಬಿಸಿಕೊಳ್ಳುವ ಸಲುವಾಗಿ ಮನೆಗೆ ಕಳಿಸಿದೆ. ಅಂದಮಾತ್ರಕ್ಕೆ ನನ್ನನ್ನು ಹಸಿವು ಬಾಧಿಸಿರಲಿಲ್ಲವೆಂದರ್ಥವಲ್ಲ, ಊಟ ಮುಗಿಸಿ ಬರಲು ಕನಿಷ್ಟ ಅರ್ಧ ತಾಸಾದರೂ ಬೇಕು, ಅಷ್ಟರೊಳಗೆ ವಾಂಛನೀಯ ಅವಾಂಛನೀಯ ಘಟನೆಗಳೇನಾದರೂ ಸಂಭವಿಸಿದರೆ!

ಹಬ್ಬದ ಸಡಗರದಲ್ಲಿದ್ದ ಅನೇಕರು ಆಗಂತುಕರ ಕಡೆ ನೋಡಿಯೂ ನೋಡದವರಂತೆ ಹೋಗುವುದು, ಬರುವುದು ಮಾಡುತ್ತಿದ್ದರು. ಮನುಕುಲದ ತ್ಯಾಜ್ಯವಸ್ತುಗಳನ್ನೇ ಹೋಲುತ್ತಿದ್ದ ಆ ಮಕ್ಕಳು ಆಡುತ್ತಿದ್ದ ಭಾಷೆಯೋ, ಅವುಗಳ ಪಾದರಸದಂಥ ಕ್ರಿಯಾಕಲಾಪವೋ! ಸಾರ್ಥಗಳ ಡುಬ್ಬದ ಮೇಲಿದ್ದ ವಸ್ತುಗಳನ್ನೊಂದೊಂದಾಗಿ ಅವು ಕೆಳಕ್ಕಿಳಿಸಿ ಕಟ್ಟೆ ಮೇಲೆ ಜೋಡಿಸಲಾರಂಭಿಸಿದವು. ಪುನಃ ಆ ದಕ್ಕಿನಿಂದ ನಾಯಿಗಳ ಇನ್ನೊಂದು ಗುಂಪು ಆಕಾಶ ಕಳಚಿ ಬೀಳುವಂತೆ ಬೊಗಳತೊಡಗಿತು. ಶಾಲಾ ಕಟ್ಟಡದ ಬಲಪಾರ್ಶ್ವದ ಗೋಡೆಗಾತು ಬಾಗಿ ಇಣುಕಿದೆ. ಖುರಪುಟದ ಗದ್ದಲ ಮಾಡದೆ ರಾಜಗಾಂಭೀರ್ಯದಿಂದ ನಡೆಯುತ್ತಿದ್ದ ಕುದುರೆಗಳೂ, ಅವುಗಳ ಮೇಲೆ!

++++

ಹಬ್ಬದ ಕಾರಣದಿಂದಾಗಿ ಆ ದಿವಸ ಮಧ್ಯಾಹ್ನ ಶಾಲೆಗೆ ಹೋಗಲಿಲ್ಲ. ಅಲ್ಲದೆ ಕಳೆದ ವಾರದಿಂದ ಬರೆಯಲಾರಂಭಿಸಿದ್ದ ಕಥೆಯೊಂದು ಕಾದಂಬರಿಯ ಸ್ವರೂಪ ಪಡೆಯಲಾರಂಭಿಸಿತ್ತು. ಶರಭ ಈಶನಾಗಿ ಪರಿವರ್ತಿತಗೊಳ್ಳದಿದ್ದಲ್ಲಿ ಕಥೆ ಕಾದಂಬರಿಯಾಗುತ್ತಿರಲಿಲ್ಲವೇನೋ! ಅವನು ತನ್ನ ಕಥೆ ಹೇಳುವುದರ ಮೂಲಕ ಮನುಷ್ಯನ ಬಗೆಗಿನ ನನ್ನ ನಂಬಿಕೆಗಳನ್ನು ಬುಡಮೇಲು ಮಾಡಿದ್ದೇ ಅದಕ್ಕೆ ಕಾರಣ. ತನ್ನೂರಿನ ಜನರ ನೆಮ್ಮದಿಯ ಸಲುವಾಗಿಯೇ ತಾನು ತನ್ನೂರಿನ ಜಮೀನ್ದಾರನನ್ನು ಕೊಲೆ ಮಾಡಿದ್ದಾಗಿ ಹೇಳದಿದ್ದಲ್ಲಿ ನಾನು ದಾಸ್ತೋವಸ್ಕಿಯ ಕ್ರೈಂ ಅಂಡ್ ಪನಿಷ್‌ಮೆಂಟ್ ಕಾದಂಬರಿಯ ನಾಯಕನನ್ನು ನೆನಪಿಸಿಕೊಳ್ಳುತ್ತಿರಲಿಲ್ಲವೇನೋ! ಕೊಲೆಗಾರನಿಗೂ, ಕೊಲೆಗೀಡಾಗುವವನಿಗೂ ಅವರವೇ ಆದ ಇತಿಹಾಸಗಳಿರುತ್ತವೆ, ಆದರೆ ತಮ್ಮವೇ ಆದಂಥ ಸತ್ಯಗಳಿಲ್ಲದಿರುವುದಿಲ್ಲ. ಅವುಗಳನ್ನು ಅರ್ಥ ಮಾಡಿಕೊಳ್ಳುವುದು ಲೇಖಕನಾದ ನನ್ನಂಥವರ ಕರ್ತವ್ಯ.

ಮುಕ್ತಾಯದ ಹಂತದಲ್ಲಿದ್ದ ಕಾದಂಬರಿಯನ್ನು ಹರಿದೆಸೆದು ಪುನಃ ಬರೆದರೆ ಹೇಗೆ! ಒಂದು ತಿಂಗಳ ಖಾಸಗಿ ಬದುಕನ್ನು ಆಪೋಶನ ತೆಗೆದುಕೊಂಡಿರುವ ಕಾದಂಬರಿಯನ್ನು ಹರಿಯುವುದಾಗಲೀ ಹರಿಯದೆ ಇರುವುದಾಗಲೀ ಸುಲಭ ಸಂಗತಿಯಲ್ಲ. ಹರಿಯುವ ಮೊದಲು ಅದರ ತುಂಬೆಲ್ಲಾ ಕಣ್ಣಾಡಿಸಬೇಕೆಂಬ ಅಭಿಲಾಷೆಯುಂಟಾಯಿತು. ಮಾರ್ಜಾಲ ತಿನ್ನುವ ಮೊದಲು ತನ್ನ ಬೇಟೆಯನ್ನು ಆಟ ಆಡಿಸಿ ಆನಂದಿಸುವ ರೀತಿಯಲ್ಲಿ. ರಾತ್ರಿ ಸಮಯ, ಹೊಗೆ ಮಿಶ್ರಿತ ಬೆಳಕು. ಕರ್ಮಕ್ಕೆ ಇಂಧನದ ಕೊರತೆಯಿಂದಾಗಿ ಚಿಮಣಿ ಕ್ಷೀಣಿಸುತ್ತಿರುವುದು! ಕೊಲೆಯಂಥ ಕ್ರೌರ್ಯ ನಡೆಯುವ ಸಂದರ್ಭದಲ್ಲಿ ಕೊಲೆಗಾರನ, ಕೊಲೆಗೀಡಾಗುವವನ ಮನಃಸ್ಥಿತಿ ತಿಳಿಯುವ ಹಂಬಲ ಉಂಟಾಯಿತು. ಕೇಳೋಣವೆಂದರೆ ಶರಭ ನಿದ್ದೆ ಹೋಗಿರುವನು, ಅದೂ ನನಗಿಲ್ಲದ ಸೊಳ್ಳೆ ಪರದೆಯೊಳಗೆ. ಸೊಳ್ಳೆಗಳಿರುವ ಕಡೆ ತಾನು ಮಲಗುವುದು ಕಷ್ಟ ಮಾವ ಎಂದು ಕೇಳಿದ್ದಕ್ಕೆ ಮನೆಯ ಮಾಲಕ "ಒಂದೆರೆಡು ದಿನಗಳಮಟ್ಟಿಗೆ ನಿಮ್ಮ ಸೊಳ್ಳೆ ಪರದೆಯನ್ನು ನಮ್ಮ ಹುಡುಗನಿಗೆ ಕೊಡಿ, ನಮ್ಮ ಶರಭನಿಗೆ

ಸೊಳ್ಳೆಗಳೆಂದರೆ ಆಗದು" ಎಂದು ನೀಡಿದ ಅಭೂತಪೂರ್ವ ಸಲಹೆಯನ್ನು ಮೀರಲಾಗುವುದೆ! ಹೇಗೋ ಕೆಲವು ದಿವಸಗಳ ಮಟ್ಟಿಗೆ ತಾನೆ! ಹಿಂದುಮುಂದು ಯೋಚಿಸದೆ ಕೊಟ್ಟಿದ್ದೆ. ಅವನು ಅದರೊಳಗೆ ಕನಸು ಕನವರಿಕೆಗಳಿಲ್ಲದ ನಿದ್ದೆ ಸವಿಯತೊಡಗಿದ್ದ.

ಕ್ರಮೇಣ ಚಿಮಣಿ ನಿಸ್ತೇಜಗೊಂಡಿತು. ಹಸ್ತಪ್ರತಿಯನ್ನು ಮುಗುಚಿರಿಸಿ ಮಲಗಿದೆ. ಅರೆ ನಿದ್ರೆಯಲ್ಲಿದ್ದ ಕಣ್ಣವಪೆಯೊಳಗೆ ತರಾವರಿ ಕನಸುಗಳು. ಪೋಲಿಸರು ದುತ್ತನೆ ಆಗಮಿಸಿದಂತೆ, ಅವನೊಂದಿಗೆ ನನ್ನನ್ನೂ ಬಂಧಿಸಿದಂತೆ, ಕತ್ತೆ ಮೇಲೆ ಕೂಡ್ರಿಸಿ ವಾಗಿಲಿಯ ಬೀದಿ ಬೀದಿಗಳಲ್ಲಿ ಮೆರವಣಿಗೆ ತೆಗೆದಂತೆ, ಲಾಕಪ್ಪಿನಲ್ಲಿ ಹಾಕಿ ಶಿಕ್ಷಿಸಿದಂತೆ, ಕೊಲೆಗಾರನಿಗೆ ಆಶ್ರಯ ನೀಡುವುದು ಹತ್ತು ಕೊಲೆ ಮಾಡಿಸಿದಂತೆಯೇ ಸರಿ ಎಂಬ ತೀರ್ಮಾನಕ್ಕೆ ಬಂದಂತೆ, ಎಷ್ಟು ಕೊಲೆಗಳಿಗೆ ಸುಪಾರಿ ಕೊಟ್ಟಿರುವಿ, ಇಂಥ ಕೊಲೆಗಡುಕರೆಷ್ಟು ಮಂದಿ ಪರಿಚಯವಿರುವರು ಎಂದು ಪ್ರಶ್ನಿಸಿದಂತೆ, ಊಳೂರು ರೆಡ್ಡಿಯೇ ಕಟಕಟೆಯಲ್ಲಿ ನಿಂತು ನನ್ನ ಕೊಲೆ ಮಾಡಿದ್ದು ಇದೇ ವ್ಯಕ್ತಿ ಎಂದು ಬೆರಳಿನಿಂದ ತೋರಿಸಿ ಸಾಕ್ಷ್ಯ ನುಡಿದಂತೆ! ಕಾಣಿಸಿಕೊಂಡಿದ್ದು ಯಾವುದೋ ಒಂದು ಕಳೇಬರ. ಅದನ್ನು ಯಾರೋ ಹೆಗಲಿಗೇರಿಸುತ್ತಿರುವಂತೆ! ಅದು ನನ್ನದೋ ಶರಭನದೋ! ಅವನ ಕಳೇಬರ ನನ್ನ ಹೆಗಲ ಮೇಲಿರುವುದೋ! ನನ್ನ ಕಳೇಬರ ಶರಭನ ಹೆಗಲ ಮೇಲಿರುವುದೋ! ಬೂಟಿನ ಕರ್ಕಶ ಸದ್ದು ಸಿಳ್ಳೆ, ನಮ್ಮಿಬ್ಬರ ಜೀವಚ್ಛವಗಳ ಮೇಲೆರಗುತ್ತಿರುವ ರಣಹದ್ದುಗಳು! ಇನ್ನೇನು ಚೀರಿಕೊಳ್ಳಬೇಕೆನ್ನುವಷ್ಟರಲ್ಲಿ ಪುನಃ ಕಾಣಿಸಿಕೊಳ್ಳುತ್ತಿರುವ ಆಲೂರಿನ ಪನ್ನಂಗಧರ, ಹಫ್ತಾ ವಸೂಲಿ ಮಾಡುವ ಸಲುವಾಗಿ ನನ್ನ ಕಡೆ ಚಾಚಿರುವ ಕೈ, ಅದರಲ್ಲಿ ಐವತ್ತರ ನೋಟನ್ನು ಇರಿಸುತ್ತಿರುವ ನಾನು! ಅಗೋ ಅಲ್ಲಿ ಅಲಿ, ಇಗೋ ಇಲ್ಲಿ ಹೆಬ್ಬಾರ್! ಕನಸಿನ ಮುಳ್ಳು ಚಾದರನ್ನು ತೆಗೆದೆಸೆದು...

++++

ಎಚ್ಚರಗೊಳ್ಳುವಷ್ಟರೊಳಗೆ ಶರಭ ಕಸಮುಸುರೆಯಂಥ ಗುರುತರ ಕೆಲಸಗಳನ್ನು ಮುಗಿಸಿ ನೀರು ತಂದು ಬಾಂಡಲೆ ತುಂಬಿಸಿದ್ದ. ಅಲ್ಲದೆ ತಾನು ಕಾಲುವೆಯಲ್ಲಿಯೇ ಸ್ನಾನ ಸಂಧ್ಯಾವಂದನೆ ಮುಗಿಸಿ ನೊಸಲ ವಿಸ್ತೀರ್ಣದ ತುಂಬ ವಿಭೂತಿ ಲೇಪಿಸಿಕೊಂಡಿದ್ದ. ಭ್ರೂ ಮಧ್ಯೆ ಕುಂಕುಮದ ತಿಲಕವನ್ನಿರಿಸಿಕೊಂಡಿದ್ದ. ಆಪ್ಯಾಯತೆಯಿಂದ ನೀಡಿದ ಚಹಾ ಸೇವಿಸುತ್ತ ಪ್ರತಿ ಗುಟುಕಿಗೂ ಅವನ ಕಡೆ ನೋಡುತ್ತ ಕುಡಿಯುವುದನ್ನು ಮುಗಿಸಿದೆ. ಮಕ್ಕಳಿಗೆ ಹಾಕಿಕೊಡುತ್ತಿದ್ದ 'ಮಾಡಿದ ಪಾಪಕೆ ಮನವೇ ಸಾಕ್ಷಿ ತೋಡಿದ ಬಾವಿಗೆ ಜಲವೇ ಸಾಕ್ಷಿ, ಕಳ್ಳನ ಮನಸ್ಸು ಹುಳ್ಳ ಹುಳ್ಳಗೆ' ಎಂಬಿವೇ ಮೊದಲಾದ ಗಾದೆ ಮಾತುಗಳನ್ನು ಒಂದೊಂದಾಗಿ ನೆನಪಿಸಿಕೊಂಡೆ. ರೆಡ್ಡಿಯದ್ದು ತನ್ನ ಐದನೇ ಸುಪಾರಿ ಎಂದು ಅವನೇ ಹೇಳಿದ ಮಾತನ್ನು ನೆನಪು ಮಾಡಿಕೊಂಡೆ.

"ಬಂಗಾರದಂಥ ಮನುಷ್ಯ ನಿಮ್ಮ ತಮ್ಮ ಮೇಸ್ಟ್ರೆ, ಇವನೇ ಹೀಗಿರುವಾಗ ಈತನನ್ನು ಹೆತ್ತಿರುವ ನಿಮ್ಮ ಚಿಕ್ಕಪ್ಪ ಹೇಗಿರಬಹುದು! ಒಂದು ಸಲ ಅವರಿರುವ ರಾಮದುರ್ಗಕ್ಕೆ ಹೋಗಿ ಆ ಪುಣ್ಯಾತ್ಮನಿಗೆ ನಮಸ್ಕಾರ ಮಾಡಿ ಬರಬೇಕೆಂದುಕೊಂಡಿರುವೆ ಮೇಸ್ಟ್ರೆ" ಎಂಬ ನಾರಾಯಣರೆಡ್ಡಿ ಮಾತುಗಳನ್ನೂ, "ನಮಗೂ ಮಕ್ಕಳಿವೆ, ಆದರೆ ಏನು ಪ್ರಯೋಜನ! ಏಳೂರು ಕಾಗೆಗಳನ್ನು ಎಬ್ಬಿಸುವಂಥ ಮಕ್ಕಳು. ನಿಮ್ಮ ತಮ್ಮ ಈಶಣ್ಣನಂಥ ಮಗನನ್ನು ಪಡೆಯುವುದಕ್ಕೆ ಪುಣ್ಯ ಮಾಡಿರಬೇಕು" ಎಂಬ ಬಸವನಗೌಡರ ಮಾತುಗಳನ್ನೂ ನೆನಪಿಸಿಕೊಂಡೆ, ನಗು ಬಂತು. ಇನ್ನೊಂದು ಮಾತು ವಾಗಿಲಿಯ ಕೆಲ ಉಪ್ಪರಿಗೆ ಮನೆಗಳ ಸ್ತ್ರೀಯರು ಶರಭನ ಕಡೆ

ಅಭಿಮಾನಪೂರ್ವಕವಾಗಿಯೂ, ಅತೃಪ್ತ ಕಾಮುಕ ಭಾವನೆಗಳಿಂದಲೂ ನೋಡುತ್ತಿದ್ದುದನ್ನು ವಾರೆಗಣ್ಣಿನಿಂದ ನಾನು ಗಮನಿಸುತ್ತಿದ್ದೆ. ಆದರೆ ಆ ವಿಷಯದಲ್ಲಿ ಮಾತ್ರ ನನ್ನ ಆಪತ್ಕಾಲೀನ ಸಹೋದರ ಪರನಾರಿಸಹೋದರನೇ ಸರಿ. ತಾನು ಅವನತಮುಖನಾಗಿ ನಡೆಯುತ್ತಿದ್ದ, ಅವರಿವರನ್ನು ಭ್ರಾತೃವಾತ್ಸಲ್ಯದಿಂದ ಮಾತನಾಡಿಸುತ್ತಿದ್ದ, ಚೂರುಪಾರು ಅಕ್ಷರ ಕಲಿತವನಾಗಿದ್ದ ತಾನು ಕಪಾಟಿನಿಂದ ದ್ವೈತ, ಅದ್ವೈತ ಸಂಬಂಧಿಸಿದ ಕೃತಿಗಳನ್ನು ತೆಗೆದುಕೊಂಡು ಬಿಡುವಿನ ವೇಳೆಯಲ್ಲಿ ಪಾರಾಯಣ ಮಾಡುತ್ತಿದ್ದ, ಮನೆಪಾಠಕ್ಕೆಂದು ಬರುತ್ತಿದ್ದ ಮಕ್ಕಳ ಕೈಯಿಂದ ಅಕ್ಷರಗಳನ್ನು ತಿದ್ದಿಸುತ್ತಿದ್ದ, ಪೊಡೆಯೋಳದ ಪಂಕ ತುಂಬಿರೆ ಮೇಲ್ ತೊಳೆಯಲ್ ತಾನ್ ಶುದ್ಧನಪ್ಪನೆ ಎಂದು ಗಮಕಶೈಲಿಯಲ್ಲಿ ಹೇಳಿಕೊಡುತ್ತಿದ್ದ, ನೆರೆಹೊರೆಯ ಮಹಿಳೆಯರಿಗೆ ಅಸಹಾಯಕರಿಗೆ ಸಹಾಯ ಮಾಡುತ್ತಿದ್ದ, ಕುರುಡರಿಗೆ ಕಣ್ಣಾಗುತ್ತಿದ್ದ, ಕುಂಟರಿಗೆ ಊರುಗೋಲಾಗುತ್ತಿದ್ದ, ಬರೆಯುತ್ತಿದ್ದ ಕಾದಂಬರಿಯ ಹಸ್ತಪ್ರತಿಯ ಹಾಳೆಗಳನ್ನು ಕಣ್ಣುಗಳಿಗೆ ಹತ್ತಿರ ಹಿಡಿದು ಓದಲು ಪ್ರಯತ್ನಿಸುತ್ತಿದ್ದ.

ಇಷ್ಟೆಲ್ಲಾ ಸಾತ್ವಿಕ ಗುಣಗಳಿಗೆ ಒಡೆಯನಾಗಿರುವ ಶರಭ ಕೊಲೆಗಾರನೆ ಎಂದು ಸಂದೇಹಿಸುತ್ತಿದ್ದೆ, ಅವನ ಕೊರಳಪಟ್ಟಿ ಹಿಡಿದು "ಇರುವ ಎಂಭತ್ನಾಲ್ಕು ಕೋಟಿ ಜೀವರಾಶಿಯನ್ನು ಅಪಾರವಾಗಿ ಪ್ರೀತಿಸುವ ನಿನ್ನಂಥವರು ಕೊಲೆ ಮಾಡುವುದೆಂದರೇನು ಮಾರಾಯ! ಇಲ್ಲದ ಅಪಾದನೆಗಳನ್ನು ಮೈಮೇಲೆಳೆದುಕೊಂಡು ನಮ್ಮನ್ನೆಲ್ಲ ಸತಾಯಿಸಬೇಡಪ್ಪಾ. ಖಂಡಿತ ನೀನು ಕೊಲೆಗಾರನಲ್ಲವೇ ಅಲ್ಲ. ನೀನು ಕೀರ್ತಿಶೇಷ ವೆಂಕಾವಧೂತರ ಅಪರಾವತಾರ" ಎಂದು ಕೇಳಬೇಕೆಂದುಕೊಂಡೆ. ಆದರೆ ಸಾಧ್ಯವಾಗಲಿಲ್ಲ. ಇಷ್ಟೆಲ್ಲ ಉಭಯ ಸಂಕಟಗಳನ್ನು ಅನುಭವಿಸುವುದಕ್ಕಿಂತ ಏಳೆಂಟು ದಿನ ರಜೆ ಹಾಕಿ ಊರಿಗೆ ಹೋಗಬೇಕೆಂದುಕೊಂಡೆ. ಆದರೆ ಅದೂ ಸಾಧ್ಯವಾಗಲಿಲ್ಲ.

ಶರಭ ಕೊಲೆ ಮಾಡಿರಬಹುದು, ಮಾಡಿರದೇ ಇರಬಹುದು! ಆದರೆ ತಾನು ಊಳೂರಿನ ಕುಖ್ಯಾತ ಬಾಡಿಗೆ ಕೊಲೆಗಾರನೆಂದು ಫಲರಸಾಯನ ಸೇವಿಸಿದಷ್ಟು ಸಲೀಸಾಗಿ ಹೇಳಿಕೊಂಡ, ನನ್ನ ಎರಡಂಕಣದ ಮನೆಯನ್ನು ಅಡಗುದಾಣವನ್ನಾಗಿಸಿಕೊಂಡ, ಇದು ನನ್ನಂಥ ಬಡಪಾಯಿ ಲೇಖಕನ ಜಂಘಾಬಲವನ್ನುಡುಗಿಸುವಂಥ ಸಂಗತಿ! ಹಗರಿ ಸಾಲಲ್ಲಿರುವ ಊಳೂರ ಆಸುಪಾಸಲ್ಲಿ ಸಂಭವಿಸುತ್ತಿದ್ದ ಕೊಲೆ ಸುಲಿಗೆಗಳಿಗೆ ಸಂಬಂಧಿಸಿದ ಘಟನಾವಳಿಗಳನ್ನು ಮೌಖಿಕವಾಗಿಯೂ ವೃತ್ತಪತ್ರಿಕೆಗಳ ಮೂಲಕವೂ ಕೇಳಿಸಿಕೊಂಡಿದ್ದೆ. ಆದರೆ ಆ ಪ್ರಾರಬ್ಧಕ್ಕೆ ನಾನೇ ಆಶ್ರಯದಾತನಾಗಬಹುದೆಂದು ಕನಸುಮನಸಲ್ಲೂ ಊಹಿಸಿರಲಿಲ್ಲ. ಭಾರತೀಯ ಶಿಕ್ಷಾಸ್ಮೃತಿಗೆ ಅತ್ಯಗತ್ಯವಾಗಿ ಬೇಕಾಗಿರುವ ಸದರಿ ಕುಖ್ಯಾತ ವ್ಯಕ್ತಿಯ ಬದುಕನ್ನು ನಾನು ನನ್ನ ಸಂಭವನೀಯ ಕಾದಂಬರಿಯೊಳಗಳವಡಿಸಿಕೊಂಡು ನಗದಾಗಿ ಪರಿವರ್ತಿಸಿಕೊಳ್ಳುವುದು ಮುಖ್ಯವೆಂದುಕೊಳ್ಳುತ್ತ ಬಲಗೈಯನ್ನು ಬಾಯಿಗಡ್ಡವಿರಿಸಿಕೊಂಡು ಆಕಳಿಸಿದೆ.

ತ್ರಿಕಾಲಜ್ಞಾನಿಯೋಪಾದಿಯಂತೆಯೂ, ಪರಿಣತ ಪ್ಯಾರಾಸೈಕಾಲಾಜಿಸ್ಟ್‌ನಂತೆಯೂ ಅದುವರೆಗೆ ಗಮನಿಸುತ್ತ ಕೂತಿದ್ದ ಶರಭ "ಕಾಯಿಸಿರುವ ನೀರು ತಣ್ಣಗಾಗುತ್ತಿದೆ, ಬೇಗನೆ ಜಳಕ ಮಾಡಿರಿ, ಅಷ್ಟರೊಳಗೆ ಉಪ್ಪಿಟ್ಟು ಮಾಡಬೇಕಿದೆ" ಎನ್ನುತ್ತ ಅಡುಗೆ ಮನೆಯನ್ನು ಪ್ರವೇಶಿಸಿದ. ನಾನು ಮೆಲ್ಲಗೆ ಎದ್ದು ಆಕಳಿಸಿ ಕಣ್ಣುಗಳನ್ನುಜ್ಜಿಕೊಂಡೆ, ಜೊತೆಗೆ ಅಂಗೈಯನ್ನೆರಡೂ ಕಣ್ಣುಗಳಿಂದ ದಿಟ್ಟಿಸುತ್ತ ಕರಾಗ್ರೇ ವಸತೇ ಲಕ್ಷ್ಮೀ ಕರ ಮಧ್ಯೇ ಸರಸ್ವತಿ ಎಂದೂ ಗೊಣಗಿದೆ.

++++

ಸೆಕೆಂಡ್ ಬೆಲ್ ಹೊಡೆದ ಬಳಿಕವೂ ನಿರೀಕ್ಷಿಸಿದಷ್ಟು ಮಕ್ಕಳು ಶಾಲೆಗೆ ಬರಲಿಲ್ಲ. ಹಬ್ಬಹರಿದಿನಗಳಲ್ಲಿ ಅವು ಗೈರುಹಾಜರಾಗುವುದು ಸಹಜ. ಅವುಗಳ ಪೈಕಿ ಕೆಲವು ಕತ್ತೆ ಕುದುರೆಗಳನ್ನೋ, ಅಸಹಜ ರೀತಿಯಲ್ಲಿ ಕಂಗೊಳಿಸುತ್ತಿದ್ದ ವಲಸೆಗಾರರನ್ನೋ, ಅವರು ತಂದು ಪೇರಿಸಿರುವ ವಿಚಿತ್ರ ಸಾಮಾನು ಸರಂಜಾಮುಗಳನ್ನೋ ಕುತೂಹಲದಿಂದ ನೋಡುವ ಸಲುವಾಗಿ ಬೇವಿನಮರದ ಆಸುಪಾಸು ನೆರೆದಿದ್ದವು. ಲಿಂಗಾರೆಡ್ಡಿ ಬಸವನಗೌಡ ಪ್ರತಾಪರೆಡ್ಡಿ ಕರಿಬಸನಗೌಡರಂಥ ಭೂಸ್ವಾಮಿಗಳು ಚಾವಡಿ ಕಟ್ಟೆ ಮೇಲೆ ಘನಗಾಂಭೀರ್ಯತೆಯಿಂದಲೂ, ಮೇಲ್ಗಿರಿ ತಿಮ್ಮ ನರಸ ಕೊಕ್ಕ ಬುಕ್ಕರಂಥ ಊಳಿಗಮಾನ್ಯರು ರಾಮದೇವರ ಗೋಡೆಗಂಟಿ ವಿವಿಧ ಭಂಗಿಗಳಲ್ಲಿ ನಿಂತು ಆಸ್ವಾದಿಸುತ್ತಿದ್ದರು. ಅವರೆಲ್ಲರಿಂದ ನೋಡಿಸಿಕೊಳ್ಳುವುದು ತಮಗೆ ಸಲ್ಲುತ್ತಿರುವ ರಾಜಮರ್ಯಾದೆ ಎಂದು ಪರಿಗಣಿಸಿದ್ದ ವಲಸೆಗಾರರು ತಮ್ಮ ಬೆಳಗಿನ ಕಾರ್ಯಕಲಾಪಗಳಲ್ಲಿ ತೊಡಗಿದ್ದರು. ನೋಡುವುದು ಸಹ ಕಲಿಕೆಯ ಭಾಗ ತಾನೆ! ಅವುಗಳನ್ನು ಗದರಿಸುವ ಜಗ್ಗಿಸಿ ಕರೆ ತರುವ ಸಾಹಸಕ್ಕೆ ಹೋಗಲಿಲ್ಲ. ಅವರ ಹಾಗೆ ನನಗೂ ಆಸೆ ಇಲ್ಲದಿರಲಿಲ್ಲ. ನೋಡಿಯೂ ನೋಡದವನಂತೆ ಕೇಳಿಯೂ ಕೇಳಿಸಿಕೊಳ್ಳದವನಂತೆ ನನ್ನ ಪಾಡಿಗೆ ನಾನು ಸಾಮೂಹಿಕ ಪ್ರಾರ್ಥನೆ ಮಾಡಿ ಮುಗಿಸಿದೆನು.

ತಮ್ಮ ತಮ್ಮ ತರಗತಿಗಳ ಮಕ್ಕಳಿಗೆ ಕಾಪಿರೈಟಿಂಗ್ ಹಾಕಿಕೊಟ್ಟ ಬಳಿಕ ಸಹೋದ್ಯೋಗಿಗಳಾದ ತಿಮ್ಮಯ್ಯಶೆಟ್ಟಿ, ಬಂಡಿಗೌಡ ತಮ್ಮ ಪಂಚೇಂದ್ರಿಯಗಳ ಮೂಲಕ ಅಲ್ಲಿನ ವಿದ್ಯಮಾನಗಳನ್ನು ಆಸ್ವಾದಿಸಲಾರಂಭಿಸಿದ್ದರು. ಚಂಚಲತೆಗೆ ಹೆಸರಾಗಿದ್ದ ನನ್ನ ಪಂಚೇಂದ್ರಿಯಗಳೂ ಭಿನ್ನವಾಗಿರಲಿಲ್ಲ.

ಹ್ಹಾಂ! ಅಂದ ಹಾಗೆ ಅಲ್ಲಿನ ಬೇವಿನಮರದ ಪ್ರಾಚೀನತೆ ಕುರಿತಂತೆ ಕೆಲವು ಐತಿಹ್ಯಗಳುಂಟು. ಯಾರು ಏನು ಹೇಳುವರೆಂಬುದು ಮುಖ್ಯ ಸಂಗತಿಯಲ್ಲ. ಊರು ಹುಟ್ಟಿದಂದಿನಿಂದಲೂ ಅದು ಅಲ್ಲಿಯೇ ಇದೆ ಎಂಬುದು ಅಲ್ಲಿನ ಶತಾಯುಷಿಗಳ ಅಭಿಪ್ರಾಯ. ಊರಿಗೆ ಬಂದ ಆರಂಭದ ದಿನಗಳಲ್ಲಿ ಅದರ ಅಗಾಧತೆಗೆ ನಾನೂ ಬೆರಗಾಗಿದ್ದುಂಟು. ಮಹಾವ್ಯಕ್ತತಜ್ಞನಂತೆ ಅದು ಹಲವು ಶತಮಾನಗಳಷ್ಟು ಹಳೆಯದೆಂದು ವೈಯಕ್ತಿಕ ಅಭಿಪ್ರಾಯ ತಳೆದದ್ದುಂಟು. ತನ್ನ ವಿಶಾಲ ಬುಡದಲ್ಲಿ ಸೂರ್ಯನ ಕಿರಣಗಳು ಬೀಳದ ಹಾಗೆ ನೋಡಿಕೊಳ್ಳುವ ಅದರ ಕಾಳಜಿಯೋ! ಯಾರೋ ಪುಣ್ಯಾತ್ಮರು ಅದರ ಬುಡದಲ್ಲಿ ಕಟ್ಟಿಸಿರುವ ವಿಶಾಲವಾದ ಕಲ್ಲು ಕಟ್ಟೆಯೋ! ಊರಿಗೆ ಬರುವ ಅತಿಥಿಗಳು ಸ್ವಲ್ಪ ಹೊತ್ತು ಅದರ ತಣ್ಣೆಳಲಲ್ಲಿ ಕೂತು ವಿಶ್ರಮಿಸಿಕೊಳ್ಳುವ ಪರಿಯೋ! ಉಜ್ಜೈನಿಯನ್ನಾಳಿದ ಭೋಜರಾಜನೇ ಆ ಬೇವಿನಮರದ ರೂಪದಲ್ಲಿ ಜನ್ಮ ತಳೆದಿರುವನೆಂದು ಹೇಳಿದರೆ ಸರಿಯಾದೀತು. ಇತಿಹಾಸದ ಅಂತರಾಳದಲ್ಲಿರುವ ರಾಜಮಹಾರಾಜರುಗಳು ಕೇವಲ ಕವಿಗಳಿಗೆ, ಸಜ್ಜನರಿಗೆ ಆಶ್ರಯ ಕಲ್ಪಿಸಿದರೆ ಆ ಮರವಾದರೋ ಮೌಖಿಕ ಕವಿಗಳು ಕಲಾವಿದರು ಸಾಧುಸಂತರು ಮಾಂತ್ರಿಕರು ದೊಂಬರೇ ಮೊದಲಾದವರಿಗೂ, ಕಳ್ಳ ಕೊರಮ ಸೋಮಾರಿಗಳಿಗೆಲ್ಲ ಉಚಿತಾಶ್ರಯ ನೀಡುವ ಅದರ ಸದ್ಬುದ್ಧಿ ನನಗಿಷ್ಟ.

ಗಮನಿಸುತ್ತಿದ್ದಂತೆಯೇ ಅದರ ತಣ್ಣೆಳಲಲ್ಲಿ ಕತ್ತೆ ಕುದುರೆ ಶುನಕಗಳಂಥ ಚತುಷ್ಪಾದಿಗಳೂ, ಕೋಳಿಗಳಂಥ ದೊಡ್ಡ ರೆಕ್ಕೆಯ ಹಾರಲಾರದ ಖಾದ್ಯೀಯ ಪಕ್ಷಿಗಳೂ ತಮ್ಮ ತಮ್ಮ ಅಂತಸ್ತಿಗನುಗುಣವಾಗಿ ವಿಶ್ರಾಂತಿ ಪಡೆಯಲಾರಂಭಿಸಿದವು. ಅಲ್ಲದೆ ನರಪೇತಲ ಮಕ್ಕಳುಮರಿಗಳೂ ಮರದ ಬೊಡ್ಡೆ ಮೇಲೇರುವ ಪ್ರಯತ್ನವನ್ನು ಆರಂಭಿಸಿದವು. ಬಾಣಂತಿ

ಮರದ ಎರಡು ಕೊಂಬೆಗಳಿಗೆ ತನ್ನದೊಂದು ಹಳೆಯ ಸೀರೆಯನ್ನು ತೊಟ್ಟಿಲೋಪಾದಿಯಲ್ಲಿ ಕಟ್ಟಿ ಅದರೊಳಗೆ ವಾರದ ಹಿಂದೆಯಷ್ಟೆ ಭೌತಿಕ ಪ್ರಪಂಚಕ್ಕೆ ಪ್ರವೇಶಿಸಿದ್ದ ತನ್ನ ಎಳೆಯ ಕೂಸನ್ನು ಇಳಿಬಿಟ್ಟು ಳೊಳೊಳ್ಳಾಯಿ ಎಂದು ಪದ ಹಾಡುತ್ತ ತೂಗಲಾರಂಭಿಸಿದಳು. ತನ್ನೆದೆಯೊಳಗಿನ ರೋಗಗಳನ್ನು ಲೆಕ್ಕಿಸದೆ ವೃದ್ಧನು ಕಟ್ಟೆಯ ಇನ್ನೊಂದು ಮಗ್ಗುಲು ವಿಶಿಷ್ಟಭಂಗಿಯಲ್ಲಿ ಕೂತು ಚಿಲುಮೆ ಸೇದಲಾರಂಭಿಸಿದ. ಅದರ ಹೊಗೆಯ ಪರಿಮಳ ಅಲೆ ಅಲೆಯಾಗಿ ಶಾಲೆಯನ್ನು ಪ್ರವೇಶಿಸಿತು. ಒಂದಿಬ್ಬರು ಹೆಂಗಸರ ಪೈಕಿ ಒಬ್ಬಳು ಎಲ್ಲೆಲ್ಲಿಂದಲೋ ದಂಟು ರವದೆ ರೂಪದ ಸೌದೆಯ ಹೊರೆ ತಂದು ಅಲ್ಲಿ ಸುರಿದಳು. ಇನ್ನೊಬ್ಬ ಮಹಿಳೆಯು ಮೂರು ಗುಂಡುಗಳನ್ನೂಡಿ ಒಲೆಯನ್ನು ರೂಪಿಸಿದಳು. ಅದೂ ಸಾಲದೆಂಬಂತೆ ಹರಕು ದುಪ್ಪಟಿಗಳ ಸಹಾಯದಿಂದ ಬಾತ್ರೂಮೂ, ಮರದ ಬೊಡ್ಡಿಗೆರಡು ಮೊಳೆ ಜಡಿದು ರಚಿಸಿದ ವಾಡ್ರೋಬೂ ಹ್ಹಾ ಹ್ಹಾ! ನೋಡು ನೋಡುವಷ್ಟರಲ್ಲಿ ಅಲ್ಲೊಂದು ಕೌಟುಂಬಿಕ ಪರಿಸರ ಚಟುವಟಿಕೆಗಳು ಅವ್ಯಾಹತವಾಗಿ ನಡೆಯಲಾರಂಭಿಸಿದವು.

ಅಲ್ಲಿನ ಚಟುವಟಿಕೆಗಳನ್ನು ಗಮನಿಸುತ್ತಿದ್ದ ಶಾಲೆಯ ಸಹೋದ್ಯೋಗಿಗಳ ಪೈಕಿ ಒಬ್ಬರು ಅವರು ದೊಂಬರೆಂದೂ, ಇನ್ನೊಬ್ಬರು ಅವರು ಹಗಲುವೇಷಗಾರರೆಂದೂ, ಮತ್ತೊಬ್ಬರು ಇನ್ನೇನೋ! ಸುಮ್ಮನೆ ಕೇಳಿಸಿಕೊಂಡೆ. ಆದರೆ ಕೂತಲ್ಲಿಯೇ ಅವರ ಚಲವಲನಗಳನ್ನು ತೀವ್ರತೆಯಿಂದ ಗ್ರಹಿಸುತ್ತಿದ್ದೆನು. ವೆರಿಯರ್ ಎಲ್ವಿನ್ ಬುಡಕಟ್ಟು ಜನಾಂಗಗಳನ್ನು ಕುರಿತು ನಡೆಸಿರುವ ಅಧ್ಯಯನಗಳನ್ನು ಒಂದೊಂದಾಗಿ ಜ್ಞಾಪಿಸಿಕೊಳ್ಳುತ್ತ ಹೋದೆ. ವೆರಿಯರ್‌ನ ಕಣ್ಣುಗಳ ಮೂಲಕ ಅವರ ಚಲನವಲನಗಳನ್ನು ಕುತೂಹಲದಿಂದ ಗ್ರಹಿಸುತ್ತಿದ್ದೆ, ಆದರೆ ಸಹೋದ್ಯೋಗಿಗಳ ಮಾತುಕತೆ ನಡುವೆ ಬಾಯಿ ಹಾಕುವ ಸಾಹಸಕ್ಕೆ ಮಾತ್ರ ಹೋಗಲಿಲ್ಲ.

ಬಚ್ಚಲ ಕಟ್ಟೆ ಮೇಲೆ ವಿರಾಜಮಾನರಾಗಿದ್ದ ನಡುಮನೆ ಲಿಂಗಾರೆಡ್ಡಿ, ಮೂಲಿಮನಿ ಶಿವಾರೆಡ್ಡಿಯರಂಥ ವಯೋವೃದ್ಧರು ಆಗಾಗ್ಗೆ ಹುಬ್ಬುಗಳ ಮೇಲೆ ತಮ್ಮ ತಮ್ಮ ಎಡಗೈಗಳನ್ನಿರಿಸಿಕೊಳ್ಳುತ್ತಲೂ, ವಾಡಟ್ಲ ವೀಡಟ್ಲ ಎಂದು ಊಹಿಸಿ ಮಾತಾಡಿಕೊಳ್ಳುತ್ತಲೂ, ನೀಚಸ್ಥಾನದಲ್ಲಿ ಕುಕ್ಕುರುಗಾಲಲ್ಲಿ ಕುಳಿತಿದ್ದ ತಮ್ಮಷ್ಟೇ ವಯೋಮಾನದ ಮೇಲ್ಗಿರಿ ತಿಮ್ಮ ನರಸ ಪರಸರೊಂದಿಗೆ ಅನುಮಾನಗಳನ್ನು ಬಗೆಹರಿಸಿಕೊಳ್ಳುತ್ತಲೂ, ಆಗಾಗ್ಗೆ ಹ್ಹ ಹ್ಹ ಎಂದು ಬಾಯಿ ತುಂಬ ನಗಾಡುತಲಿದ್ದುದಂತೂ! ದೈಹಿಕವಾಗಿ ಶಾಲೆಯೊಳಗಿದ್ದು ಮಾನಸಿಕವಾಗಿ ಊರ ತುಂಬೆಲ್ಲ ತುಡುಗುದನಗಳೋಪಾದಿಯಲ್ಲಿ ಅಲೆಯುತ್ತಿದ್ದಂಥ ಕರುಳಿನ ಕುಡಿಗಳು ತಮ್ಮ ತಮ್ಮ ವಾರೆನೋಟಗಳಿಂದ ಆ ತಮ್ಮ ಪಿತಾಮಹರನ್ನು ತಲುಪುವ ಯತ್ನವ ಮಾಡುತಲಿದ್ದವು. ಇದರಿಂದಾಗಿ ಅವುಗಳಿಗೆ ಕೇಳುವ ವ್ಯವಧಾನ ಎಲ್ಲಿಂದ ಬಂದೀತು! ಇಂಥ ಚಟುವಟಿಕೆಗಳಿಗೆ ಆಶ್ರಯ ನೀಡುತ್ತಲೇ ಬಂದಿರುವ ಬೇವಿನಮರವೋ ಶತಮಾನಗಳಷ್ಟು ಹಳೆಯದು ಬೇರೆ! ಅತಿಥಿ ಅಭ್ಯಾಗತರಿಗೆ ಅದು ಪುನರ್ವಸತಿ ಕಲ್ಪಿಸುತ್ತಿರುವುದರಿಂದಾಗಿಯೇ ಶಾಲೆಯ ಪಾಠಪ್ರವಚನಗಳು ತಿಂಗಳಲ್ಲಿ ವಾರದಿನ್ಯೆದು ದಿವಸ ನಡೆದರೆ ಹೆಚ್ಚು. ನಿಗಧಿತ ಸಮಯಕ್ಕೆ ಸರಿಯಾಗಿ ಏನೇನು ನಡೆಸಬೇಕೋ ಅದನ್ನು ನಡೆಸಲಾಗುತ್ತಿಲ್ಲ. ಶಾಲೆ ಎಂದರೆ ಕುರಿದೊಡ್ಡಿ ಎಂದೇ ಪರಿಗಣಿಸಿರುವ ಪೋಷಕರೇನೋ ಸರಿ, ಆದರೆ ಪಾಠ ಮಾಡಿದರೇನು ಬಿಟ್ಟರೇನು ತಿಂಗಳ ಮೊದಲ ವಾರ ತಮ್ಮ ಪಗಾರ ತಮಗೆ ಬಂದರಾಯಿತೆಂಬ ಕಾರಣಕ್ಕೆ ಕಾಲಕ್ಷೇಪ ಮಾಡುವ ಸಲುವಾಗಿ ಶಿಕ್ಷಕರೆಂಬ ಪಾತ್ರಧಾರಿಗಳೇನೋ ಸರಿ, ಆದರೆ ಅಂಕಿ ಅಂಶಗಳು ಸಂದರ್ಭಾನುಸಾರ ತಮ್ಮ ಕಛೇರಿಗಳಿಗೆ ತಲುಪಿದರಾಯಿತೆಂದು ಪರಿಭಾವಿಸುವ

ಮೇಲಾಧಿಕಾರಿಗಳೇನೋ ಸರಿ, ಆದರೆ ಮುಖ್ಯೋಪಾಧ್ಯಾಯನೆಂಬ ಬಡಪಾಯಿಯ ಆತ್ಮಸಾಕ್ಷಿ ಒಪ್ಪಬೇಕಲ್ಲವೆ! ಅಷ್ಟರಲ್ಲಿ ಅದೇ ಬೇವಿನಮರದ ಬುಡದ ಮೂಲೆಯ ಎಲ್ಲಿಂದಲೋ ಹಾರ್ಮೋನಿಯಂ ವಾದನದ ಸದ್ದು ಕೇಳಿಸುವುದಕ್ಕೂ, ಚಾವಡಿ ಕಟ್ಟೆ ಕಡೆಯಿಂದ ಪೋಸ್ಟ್ ಮಾಸ್ಟರ್ ರಾಘಪ್ಪಸ್ವಾಮಿ ಕೆಲವು ಕಾಗದ ಪತ್ರಗಳೊಂದಿಗೆ ಬರುವುದಕ್ಕೂ ಸರಿ ಹೋಯಿತು! ಯಾವ ಪ್ರಯಾಣವನ್ನು ಮಾಡದಿರಲು ನಿರ್ಧರಿಸಿದ್ದೆನೋ...

++++

ಹೌದು! ವಾಗಿಲಿಗೆ 'ಪನಿಷ್ಮೆಂಟ್ ವಿಲೇಜ್' ಎಂಬ ಬಿರುದು ಲಭಿಸಿರುವ ಶ್ರೇಯಸ್ಸು ನಿಸ್ಸಂದೇಹವಾಗಿ ಅದನ್ನು ಸಂಪರ್ಕಿಸುವ ಹಾದಿಗೇ ಸಲ್ಲಬೇಕು. ಅದು ಹಾದಿ ಎಂದರೆ ಹಾದಿಯಲ್ಲ. ಅದರ ಮೂಲಕ ಕ್ರಮಿಸುವುದೊಂದು ಮಾರಣಾಂತಿಕ ಅನುಭವ. ಮುಳ್ಳುಗಿಡಗಳ ನಡುವೆ ಅದು ಇರುವುದೆಂದರೆ ಇರುವುದು ಇಲ್ಲವೆಂದರೆ ಇಲ್ಲ. ಹಾದಿ ಬಡುಕರ ಹಾವಳಿಯನ್ನು ಹೇಗಾದರೂ ಖಂಡಬಲದಿಂದ ನಿಭಾಯಿಸಬಹುದು. ಆದರೆ ಒಂದೊಂದು ಹೆಜ್ಜೆ ಇರಿಸಿ ಕ್ರಮಿಸುವುದು ಬಡಪಾಯಿಗಳಿಗೆ ಆಗದ ಮಾತು. ವಾಗಿಲಿಯ ಆಸುಪಾಸಲ್ಲಿದ್ದ ಗೆಜ್ಜೆಹಳ್ಳಿ, ಸಂತೆಕೂಡ್ಲೂರು, ಲಿಂಗದಳ್ಳಿ, ಹೆಬ್ಬಟಂಗಳ ಪ್ರಾಥಮಿಕಶಾಲೆಗಳ ಶಿಕ್ಷಕರು ಒಕ್ಕೊರಲಿನಿಂದ ತಮ್ಮ ಮುಖಂಡನನ್ನಾಗಿ ನನ್ನನ್ನು ಆಯ್ಕೆ ಮಾಡಿದ್ದಕ್ಕೆ ಕಾರಣಗಳು ಎರಡು, ಅವೆಂದರೆ ಹುಂಬತನ ಮತ್ತು ಅವಿವಾಹಿತ. ಹೀಗಾಗಿ ನಾನು ತಿಂಗಳಿಗೆರಡು ಸಲ ಏಳೆಂಟು ಹರದಾರಿ ದೂರದ ತಾಲ್ಲೂಕು ಕೇಂದ್ರವಾದ ಆಲೂರಿಗೆ ಹೋಗಿ ಬರುವುದು ಅನಿವಾರ್ಯವಾಗಿತ್ತು. ಅದಲ್ಲದೆ ಮಧ್ಯಾಹ್ನದ ಬಿಸಿಯೂಟಕ್ಕೆ ಸಂಬಂಧಿಸಿದ ಮೀಟಿಂಗ್ ಬೇರೆ. ಒಂದು ಹೊತ್ತಿನ ಕೂಳಿಗೆ ಪರದಾಡುವ, ಒಂದು ತುತ್ತಿನ ಸಲುವಾಗಿ ಉಪ್ಪರಿಗೆ, ಅಂಕಣಗಳುಳ್ಳ ಮನೆಗಳಲ್ಲಿ ಬಿಟ್ಟಿ ಚಾಕರಿ ಮಾಡುವವರ, ಹಾಗೂ ಅವರ ಅಕ್ಷರ ವಂಚಿತ ಮಕ್ಕಳ ಅನ್ನ ಸಂಬಂಧೀ ಕನಸುಗಳನ್ನು ನನಸಾಗಿಸುವಂಥ ಸಮಾವೇಶ ಅದಾಗಿತ್ತು..

ಉತ್ಸಾಹದಿಂದ ಹೊರಡಲನುವಾದೆ. ಅಂಗಳದಲ್ಲಿ ಅದೇ ತಾನೆ ಕಕ್ಕಸು ವಗ್ಯೆರೆ ಮುಗಿಸಿಕೊಂಡು ನಿಂತಿದ್ದ ರಾಘವರೆಡ್ಡಿ "ಒಬ್ಬರೆ ಹೋಗುವುದು ಸರಿಯಲ್ಲ, ಹೇಗೋ ನಿಮ್ಮ ತಮ್ಮ ಈಶಣ್ಣ ಇರುವನಲ್ಲ! ಜೊತೆಯಲ್ಲಿ ಕರೆದುಕೊಂಡು ಹೋಗಿ, ನಿನ್ನೆ ನಾರಾಯಣಶೆಟ್ಟಿಯ ಮೇಲೆ ದಾಳಿ ನಡೆಸಿ ದೋಚಿದರಲ್ಲ! ಮರೆತಿರೇನು?" ಎಂದು ಪಿತೃಸಮಾನ ರೀತಿಯಲ್ಲಿ ಸಲಹೆ ನೀಡಿದ. ಅದಕ್ಕೆ ಪ್ರಭಾವಳಿ ಮುಡಿಸಿದಂತೆ ಆಶ್ರಯದಾತ ಪರಶುರಾಮ ಅವನ ಕಡೆ ಕಣ್ಣುಗಳಿಂದ ಏನೋ ಹೇಳಿದ, ಅದರಿಂದ ಉತ್ತೇಜಿತನಾದ ಅವನು ಸ್ವಲ್ಪ ದೂರದವರೆಗೆ ಬೆಂಗಾವಲಾಗಿ ಬರುವುದಾಗಿ ಹಠ ಹಿಡಿದ. ಅವರೆಲ್ಲ ಹೇಳಿದ ಮೇಲೆ ಒಪ್ಪದೆ ಇರುವುದು ಸಾಧ್ಯವಾಗಲಿಲ್ಲ. ತಾನೂ ನನ್ನೊಂದಿಗೆ ಹೊರಟ.

ಕಾರಣ ಹಳ್ಳಿಯ ಹಾದಿಗಳನ್ನು ನಿರ್ಮಾನುಷಗೊಳಿಸುವಂಥ ಮಾಗಿ ಕಾಲ ಅದು. ಮಾಸನೂರಿನ ಕುಖ್ಯಾತ ಹಾದಿಬಡುಕರು ಅಲ್ಲೆಲ್ಲ ವಂಚಿರುವರೆಂಬ ವದಂತಿ ಕೆಲವು ದಿವಸಗಳಿಂದ ವಾಗಿಲಿಯಲ್ಲಿ ಜನಜನಿತವಾಗಿತ್ತು. ದೋಚುವುದು ದೋಚಿಕೊಳ್ಳುವುದು ಬರಗಾಲಗಳಲ್ಲಿ ಮಾಮೂಲು ಸಂಗತಿ, ಅದು ಅವರ ತಪ್ಪಲ್ಲ, ತಪ್ಪೆಲ್ಲ ಅನಾವೃಷ್ಟಿಯದ್ದು. ಬದುಕುವುದಕ್ಕೆ ಕೈಯಲ್ಲಿ ಕೆಲಸವಿಲ್ಲದ ಮಾಸನೂರು ಕಡೆಯ ಮೃಗೀಯಸದೃಶ ವ್ಯಕ್ತಿಗಳು ವಲಸೆ ಹೊರಟು ವಾಗಿಲಿಯಂಥ ಸಂಪನ್ಮೂಲ ವಂಚಿತ ಹಳ್ಳಿಗಳನ್ನು ಆಯ್ಕೆ

ಮಾಡಿಕೊಳ್ಳುತ್ತಿದ್ದರು. ಬಡಪಾಯಿ ಒಂಟಿ ವ್ಯಕ್ತಿಗಳ ಮೇಲೆ ಅಮಾನುಷ ರೀತಿಯಲ್ಲಿ ಹಲ್ಲೆ ನಡೆಸಿ ದೋಚುತ್ತಿದ್ದರು. ಅಂಥ ಅವರು ಕೆಲವು ಅಸಹಾಯಕರಿಗೆ ಬಡವರಿಗೆ ಬಸ್ ಚಾರ್ಜು ಪಾಡಾಖರ್ಚುಗಳಿಗೆ ಹಣ ನೀಡುತ್ತಿದ್ದೂ ಉಂಟು. ಇಂಥ ಉಪಟಳಗಳು ಸರ್ವೇಸಾಮಾನ್ಯ. ಅವರಿಗೂ ನನ್ನಂಥ ಸರ್ಕಾರಿ ನೌಕರರಿಗೂ ಎಣ್ಣೆ ಸೀಗೇಕಾಯಿ ಸಂಬಂಧ. ಸಂಬಳ ಪಡೆಯುವ ನನ್ನಂಥ ನೌಕರರೇನಾದರೂ ಅಂಥವರ ಕೈಗೆ ದೊರಕಿದಲ್ಲಿ ಹಬ್ಬದೂಟವೇ ಸರಿ! ಇದನ್ನೆಲ್ಲ ಅನುಲಕ್ಷಿಸಿಯೇ ನನ್ನನ್ನು ನಾನು ರಕ್ಷಿಸಿಕೊಳ್ಳುವ ಸಲುವಾಗಿ ವ್ಯಾಯಾಮದ ಮೂಲಕ ದೇಹವನ್ನು ಸದೃಢ ರೀತಿಯಲ್ಲಿ ಇರಿಸಿಕೊಂಡಿದ್ದೆ. ಪಂಚೇಂದ್ರಿಯಗಳ ಪೈಕಿ ಕಣ್ಣುಗಳನ್ನು ಕ್ಷಿಪಣಿಗಳ ರೀತಿಯಲ್ಲಿ ಪ್ರಯೋಗಿಸುವುದನ್ನು ರೂಢಿ ಮಾಡಿಕೊಂಡಿದ್ದೆ, ಅಲ್ಲದೆ ಸೈಕಲ್ ಚೈನ್‌ಗಳಂಥ ಬೆಲ್ಟ್‌ಗಳನ್ನು ಸದಾ ಸೊಂಟಕ್ಕೆ ಕಟ್ಟಿಕೊಂಡಿರುತ್ತಿದ್ದೆ, ಆದರೆ ಅದನ್ನು ಆ ಕ್ಷಣದವರೆಗೆ ಯಾರ ಮೇಲೂ ಪ್ರಯೋಗಿಸಿರಲಿಲ್ಲ. ಇಂಥ ಒಂದೆರಡು ಮಾರಾಣಾಂತಿಕ ಅನುಭವಗಳನ್ನು ಸಲೀಸಾಗಿ ನಿಭಾಯಿಸಿರುವ ನನಗೆ ಶರಭರಂಥವರ ಸಹಾಯದ ಅಗತ್ಯವಿರಲಿಲ್ಲ. ಆದರೂ ಅವನು ನನ್ನೊಂದಿಗೆ ಹೊರಡಲು ಸನ್ನದ್ಧನಾದ, ಹೊರಟ. ದಾರಿಯುದ್ದಕ್ಕೂ ಅವನೊಂದಿಗೆ ಹರಟುವ ಆಸೆ ನನಗೂ ಇತ್ತಲ್ಲವೆ! ಆದ್ದರಿಂದಲೇ ಸಮ್ಮತಿಸಿದ್ದು. ನಾವಿಬ್ಬರೂ ಲವಕುಶರೋಪಾದಿಯಲ್ಲಿ ಹೊರಟದ್ದು ನೋಡಿದ ಕೆಲವರು ಅಣ್ಣತಮ್ಮ ಅಂದರೆ ಹೀಗಿರಬೇಕೆಂಬುವಂತೆ ನೋಡಿದರು, ತಮ್ಮ ತಮ್ಮ ನೋಟಗಳ ಮೂಲಕ ನಮಗೆ ಶುಭ ಹಾರೈಸಿದರು.

ಊರ ಮೇರೆ ದಾಟುವವರೆಗೆ ನಮ್ಮಿಬ್ಬರ ನಡುವೆ ಮಾತುಕತೆ ಇರಲಿಲ್ಲ. ಊರ ಅಗಸೆ ಬಾಗಿಲು ದಾಟಿದ ಬಳಿಕ ಹಾದಿ ನಿರ್ಮಾನುಷಗೊಳ್ಳಲಾರಂಭಿಸಿತು, ಅಗಣಿತ ಬಯಲು ಭಯೋತ್ಪಾದಕನಂತೆ ಕೆಕ್ಕರಿಸತೊಡಗಿತು. ಬಿಸಿಲಗುದುರೆಗಳು ಮೃಗಜಲಪಾತಗಳು ಅದಕ್ಕೆ ಸಹಕರಿಸಲಾರಂಭಿಸಿದವು. ಸ್ವಲ್ಪ ದೂರ ನಡೆದ ಬಳಿಕ ಶರಭ "ರೆಡ್ಡಿಲೋ ರೆಡ್ಡಿ ರಾ ಬೊಬ್ಬಿಲಿ ನಾಗಿರೆಡ್ಡಿ ರಾ" ಎಂದು ಸಣ್ಣ ದನಿಯಲ್ಲಿ ಶುಶ್ರಾವ್ಯವಾಗಿ ಹಾಡಲಾರಂಭಿಸಿದ. ಆ ಹಾಡನ್ನು ಆಲಿಸಿದೊಡನೆ ಬೊಬ್ಬಿಲಿ ನಾಗಿರೆಡ್ಡಿಯ ಕಥೆಯನ್ನು ನೆನಪು ಮಾಡಿಕೊಂಡೆ. ಮೌಖಿಕ ಕಥಾನಕಗಳ ಪ್ರಕಾರ, ಬಳ್ಳಾರಿ ಕೇಂದ್ರ ಕಾರಾಗೃಹಗಳಲ್ಲಿರುವ ದಾಖಲೆಗಳ ಪ್ರಕಾರ ನಾಗಿರೆಡ್ಡಿ ಎಂಬ ಅಭಿನವ ರಾಬಿನ್‌ಹುಡ್ ಒಂದೂವರೆ ಶತಮಾನದ ಹಿಂದೆ ವಿಡುಪನಕಲ್ಲು ಪ್ರಾಂತದಲ್ಲಿದ್ದ, ಆತ ತನ್ನ ಪ್ರಾಂತದಲ್ಲಿನ ಶ್ರೀಮಂತರ, ಆಳುವ ಆಂಗ್ಲರಿಗೆ ಸಿಂಹಸ್ವಪ್ನವಾಗಿದ್ದ, ತಾನು ದೋಚಿದ ಸಂಪತ್ತನ್ನು ಹಂಚುವುದರ ಮೂಲಕ ಬಡಬಗ್ಗರ, ನಿರ್ಗತಿಕರ ಪಾಲಿಗೆ ಕೊಡುಗೈ ದೊರೆಯಾಗಿದ್ದ. ಅಂಥ ಬೊಬ್ಬಿಲಿ ನಾಗಿರೆಡ್ಡಿಯೇ ಇವನ ರೂಪದಲ್ಲಿ ಮರುಜನ್ಮ ತಳೆದಿರಬಹುದೆಂದು ಸಂದೇಹ ತಳೆದೆ, ಶರಭನ ಕಡೆ ನೋಡಿದೆ.

ಕಟ್ಟುಮಸ್ತಾದ ಆಕರ್ಷಕ ವ್ಯಕ್ತಿತ್ವ! ದೇಹದಾದ್ಯಂತ ರಾರಾಜಿಸುತ್ತಿರುವ ಮುಗ್ಧತೆ ಬೇರೆ! ಅಲ್ಲದೆ ಸೊಗಸಾದ ಶಾರೀರ! ಗದಗಿನ ವೀರೇಶ್ವರ ಪುಣ್ಯಾಶ್ರಮಕ್ಕೆ ಸೇರಿಸಿದಲ್ಲಿ ತಾನು ಒಳ್ಳೆಯ ಸಂಗೀತಗಾರನೆನಿಸುವುದರಲ್ಲಿ ಸಂಶಯವಿಲ್ಲವೆಂದುಕೊಂಡೆ. ಬುರ್ರಕಥಾದ ಆರಂಭಿಕ ಚರಣ ಅದಾಗಿತ್ತು. ನನ್ನ ಪಾಡಿಗೆ ನಾನು ಹೆಜ್ಜೆ ಹಾಕುತಲಿದ್ದುದನ್ನು ತಾನು ಅನ್ಯಥಾ ಭಾವಿಸಿದ, "ಅಣ್ಣಾ ಬೊಬ್ಬಿಲಿ ನಾಗಿರೆಡ್ಡಿಯವರ ಕಥೆಯನ್ನು ಕೇಳಿರುವಿರೇನು?" ಎಂದೂ ಕೇಳಿದ. ಆ ಪುಣ್ಯಾತ್ಮನ ಕಥೆ ರಾಯಲಸೀಮೆಯ ಪ್ರಾಂತದಲ್ಲಿ ವಾಸಿಸುವ ಯಾರಿಗೆ ತಾನೆ ಗೊತ್ತಿಲ್ಲ! ಆ ಅವನ ಕಥೆಯೊಂದೇ ಅಲ್ಲ, ಉಯ್ಯಾಲವಾಡ ನರಸಿಂಹರೆಡ್ಡಿಯಂಥ ದಾನಶೂರ

ಕರ್ಣನ, ಅಪ್ರತಿಮ ಹೋರಾಟಗಾರನ ಕಥೆಯೂ ನನ್ನಂಥವರಿಗೆ ಚಿರಪರಿಚಿತವೆ! ಅಂದ ಮಾತ್ರಕ್ಕೆ ಮಾತಿಗೆ ಮಾತು ಬೆಳೆಸುವದರಲ್ಲಿ ಏನು ಪ್ರಯೋಜನ! ಆದರೂ ಹೌದೆಂಬಂತೆ ತಲೆ ಅಲ್ಲಾಡಿಸಿದೆ, ಒದ್ದೆಯಾಗಿದ್ದ ಕಣ್ಣುಗಳನ್ನು ಮರೆಮಾಚಿದೆ. ಅದಕ್ಕೆ ಕಾರಣ ಅವನ ಬಾಯಿಯಿಂದ ಹೊರ ಉದುರಿದ 'ಅಣ್ಣಾ' ಎಂಬ ಆಣಿಮುತ್ತು ಸದೃಶ ಸಂಬಂಧವಾಚಕವು! ಅದು ಸ್ನಾತಕೋತ್ತರ ಪದವಿಗೆ ಸರಿಸಮನಾಗಿತ್ತು. ದೇವರೇ ನನ್ನ ಈ ಸಹೋದರನು ಪೋಲಿಸರ ಕೈಗಾಗಲೀ, ಕೊಲ್ಲಲು ಹೊಂಚಿರಬಹುದಾದ ಸೇಡುಗಾರರ ಕೈಗಾಗಲೀ ದೊರಕದಂತೆ ನೋಡಿಕೊಂಡೆಯಾದರೆ! ಒಂದು ಕ್ಷಣ ಕಣ್ಮುಚ್ಚಿ ತೆರೆದೆ, ಅವನನ್ನು ನಖಶಿಖಾಂತ ದಿಟ್ಟಿಸಿದೆ, ಅದೇ ನಿಲುವು, ಅದೇ ಗಡಸು ಧ್ವನಿ! ನೆರೆಹೊರೆಯವರ ತೊಂದರೆ ತಾಪತ್ರಯಗಳನ್ನು ತನ್ನ ಮೈಮೇಲೆ ಎಳೆದುಕೊಂಡು ನಾಲ್ಕು ವರ್ಷಗಳಿಂದ ತಲೆ ಮರೆಸಿಕೊಂಡಿರುವ ನನ್ನ ತಮ್ಮ ರುದ್ರ ಈ ಮಾರುವೇಷದಲ್ಲಿ ತನ್ನೆದುರಿಗಿರುವಂತೆ ಭಾಸವಾಯಿತು. ನನಗರಿವಿಲ್ಲದಂತೆ ಅಪ್ಪಿಕೊಂಡೆ. ಅವನೊಳಗಿನ ಯಾವುದೋ ಒಂದು ಪ್ರವೃತ್ತಿ ಒಮ್ಮೆಗೆ ನನ್ನೊಳಗೂ, ನನ್ನೊಳಗಿನ ಯಾವುದೋ ಒಂದು ಪ್ರವೃತ್ತಿ ಅವನೊಳಗೂ ವಿನಿಮಯಗೊಂಡಂತೆ ಭಾಸವಾಯಿತು. ಬೆಚ್ಚಿ ಮೆಲ್ಲಗೆ ಅಪ್ಪುಗೆ ಸಡಲಿಸಿದೆ. ಮೆಲ್ಲಗೆ ತುಸು ದೂರ ಸರಿದ, ತಲೆಗೆ ಸುತ್ತಿದ್ದ ವಲ್ಲಿಯ ಸಹಾಯದಿಂದ ಹಣೆ ಮೇಲಿನ ಬೆವರನ್ನೂ, ಕಣ್ಣೊಳಗೆ ಕಾಣಿಸಿಕೊಂಡ ಅಮೃತ ಸದೃಶ ಜಲಬಿಂದುಗಳನ್ನೂ ಒರೆಸಿಕೊಂಡ, ಒಂದು ಕ್ಷಣ ಗದ್ಗದಿತನಾಗಿ ಪುನಃ ಚೇತರಿಸಿಕೊಂಡ. ದೇಹದಾದ್ಯಂತ ಹ್ರಸ್ವಗೊಂಡು ನನ್ನ ಕಡೆ ಅಭಿಮಾನದಿಂದ ನೋಡಿದ.

"ಅಣ್ಣಾ, ಅಗೋ ಅಲ್ಲಿ ಕಾಣುತ್ತಿರುವ ಮರದ ನೆರಳಲ್ಲಿ ಸ್ವಲ್ಪ ಹೊತ್ತು ಕೂಡ್ರೋಣ" ಎಂದು ಕೇಳಿದ, ಆ ವೃಕ್ಷವನ್ನು ನೋಟದಿಂದ ತೋರಿಸಿದ. ಒಂದು ಕ್ಷಣ ನಿಂತು ನೋಡಿದೆ. ಕೆಲವು ಐತಿಹ್ಯಗಳ ಪ್ರಕಾರ ಆ ಅನಾಮಧೇಯ ಮರದ ಕೆಳಗೆ ಪ್ರಸಿದ್ಧ ಅವಧೂತ ಸಿದ್ಧಾರೂಢರು ತಪಸ್ಸು ಮಾಡಿರುವರಂತೆ! ಕುರುಬ ಜನಾಂಗದ ಶರಣ ಗಾದಿಲಿಂಗಪ್ಪ ತಾತನವರು ತಮ್ಮ ಅಸಂಖ್ಯಾತ ಕುರಿ ಮೇಕೆಗಳೊಂದಿಗೆ ಆ ಮರದ ಕೆಳಗೆ ವಿಶ್ರಮಿಸಿಕೊಳ್ಳುತ್ತಿದ್ದರಂತೆ!

"ಬೇಡಪ್ಪಾ ಬೇಡ, ಅದಕ್ಕೆ ಪುರುಸೊತ್ತಿಲ್ಲ, ನನಗೆ ಆಫೀಸು ಕೆಲಸವಿದೆ. ಇಲಾಹಿ ತಪ್ಪಿದರೆ ಶ್ರೀರಾಮ ಬರುವುದು ಹನ್ನೆರಡು ಗಂಟೆಗೆ, ಅದೂ ಅಲ್ಲದೆ ಡಣಾಪುರ ಕ್ರಾಸಿನಲ್ಲಿ ಚಂದ್ರಾ ತಪ್ಪಿದರೆ ಆಲೂರನ್ನು ಸಮಯಕ್ಕೆ ಸರಿಯಾಗಿ ತಲುಪುವುದು ಕಷ್ಟ" ಎಂದು ನಿರಾಕರಿಸಿದೆನು. ಅದರಿಂದ ಅವನಿಗೆ ನಿರಾಸೆಯಾಯಿತು. ಆದರೆ ಅಲ್ಲಿ ವಿಶ್ರಮಿಸಿ ಅವನೊಂದಿಗೆ ಹರಟುವುದು, ಅವನ ಪೂರ್ವಾಪರ ಆಲಿಸುವುದು ನನಗೂ ಇಷ್ಟವೆ, ಆದರೆ ಅದಕ್ಕೆ ಸಮಯಾವಕಾಶವಿರಲಿಲ್ಲ, ಅಲ್ಲದೆ ಬೇಗನೆ ತಲುಪುವ ಅನಿವಾರ್ಯತೆ ಇತ್ತು. ಇಲಾಹಿ ತಪ್ಪಿದರೆ ವೆಂಕಟೇಶ್ವರ ಬರುವುದು ಮಧ್ಯಾಹ್ನದ ನಂತರವೆ! ಅದು ಬಂದರೆ ಬಂತು ಇಲ್ಲದಿದ್ದರೆ ಇಲ್ಲ. ಪುನಃ ಹೊರಟೆವು.

ಫರ್ಲಾಂಗ್ ದೂರದವರೆಗೆ ನಮ್ಮಿಬ್ಬರ ನಡುವೆ ಮೌನ. ಹಳ್ಳದ ಕೊರಕುಗಳಲ್ಲಿ ಎಲ್ಲೋ ಊಳಿಡುತ್ತಿರುವ ನರಿಗಳು, ಸುಳಿಯದೆ ಬಿಸಿಲ ಉಕ್ಕು ಪರದೆಯ ಹಿಂದೆ ಅವಿತುಕೊಂಡಿರುವ ಗಾಳಿ, ಹಾರಿದರೆಲ್ಲಿ ತಮ್ಮ ರೆಕ್ಕೆಗಳು ಸುಟ್ಟು ಹೋಗುವವೋ ಎಂಬ ಆತಂಕದಿಂದ ಎಲ್ಲೆಲ್ಲೋ ಅವಿತಿರುವ ಪಕ್ಷಿಗಳು, ದೂರದಲ್ಲೆಲ್ಲೋ ಚಿನ್ನದಾಭರಣದಂತೆ ಗೋಚರಿಸುತ್ತಿರುವ ಥಾರು ರಸ್ತೆ. ಮೇಲೆ ನಿರ್ಮಲ ನಿರ್ಭೀತ ಆಗಸ, ಬೆಂಕಿ ಸದೃಶ ಬಿಸಿಲು ಸುರಿಸಲಾರಂಭಿಸಿರುವ ಸೂರ್ಯ. ಹಾದಿ ಇಕ್ಕೆಲದುದ್ದಕ್ಕೂ ಬೆಳೆದಿರುವ ಆಳೆತ್ತರದ ಮುಳ್ಳಪೊದೆಗಳು, ಸ್ವಚ್ಛಂದವಾಗಿ ಪ್ರವಹಿಸುತ್ತಿರುವ ಮೃಗಜಲನಿಧಿ, ಖುರಪುಟದ ಹಂಗಿಲ್ಲದೆ ಓಡುತ್ತಿರುವ ಬಿಸಲಗುದುರೆಗಳು,

ಇಷ್ಟು ಸಾಕಲ್ಲವೆ ಬಯಲು ಭಯ ಹುಟ್ಟಿಸಲು! ಬೆವರಿನಿಂದಾಗಿ ಮೈಗಂಟಿಗೊಂಡಿರುವ ಒಳ ಉಡುಪುಗಳು. ಹುಬ್ಬು ತಡೆದಿದ್ದ ಬೆವರು ಅಂಟಿಕೊಳ್ಳುವಂತೆ ಕೈಹಚ್ಚಿ ನೋಡಿದೆ. ದೂರದಲ್ಲೆಲ್ಲೋ ಹೊಯ್ದಾಡುತ್ತ ಅಭಿಮುಖವಾಗಿ ಬರುತ್ತಿರುವ ಚಕ್ಕಡಿ ಬಂಡಿ. ಪ್ರಾಯಶಃ ಒಂಟೆಮಲ್ಲಯ್ಯ ತನ್ನ ಬಾಣಂತಿ ಸೊಸೆ ಪಾರ್ವತಿ, ನವಜಾತ ಕೂಸಿನೊಂದಿಗೆ ಅದರಲ್ಲಿರಬಹುದೆಂದೂಹಿಸಿದೆ, ನಡಿಗೆಯ ವೇಗವನ್ನು ಹೆಚ್ಚಿಸಿದೆ, ಕೆಲವೊಮ್ಮೆ ಅಂಟಿಕೊಂಡಂತೆಯೂ, ಹಲವೊಮ್ಮೆ ಅಂತರ ಕಾಪಾಡಿಕೊಳ್ಳುತ್ತಲೂ ಹೆಜ್ಜೆ ಹಾಕುತ್ತಿರುವ ಶರಭ! ತಾನು ಸುಮ್ಮನಿದ್ದರೂ ತನ್ನ ಬಾಯಿಗೆ ಮಾತ್ರ ಸುಮ್ಮನಿರಲಾಗಲಿಲ್ಲವೇನೊ, ಮಾತು ಆರಂಭಿಸಿದ.

"ಅಣ್ಣಾ.. ನಿಮ್ಮನ್ನೊಂದು ಮಾತು ಕೇಳಲೇನು!" ಎಂದ.

"ಕೇಳಪ್ಪಾ ಯಾಕೆ ಸಂಕೋಚ!" ಎಂದೆ.

"ನೀವು ಕಥೆ ಕಾದಂಬರಿಗಳನ್ನು ಬರೆಯುತ್ತಿರುವಿರಂತೆ ಹೌದಾ!"

"ಹೌದು ಕಣಪ್ಪಾ, ನಿನಗೆ ಯಾರು ಹೇಳಿದ್ದು?"

"ಪರಶುರಾಮಪ್ಪ ಮಾವ"

"ಹೌದೇನು!" ಕುತೂಹಲದಿಂದ ನನ್ನ ಬರವಣಿಗೆಯನ್ನು ಗಮನಿಸುತ್ತಿದ್ದ ಪರಶುರಾಮನನ್ನು ನೆನಪು ಮಾಡಿಕೊಂಡೆ.

"ಅಣ್ಣಾ ಬರೆಯುವುದಾದರೆ ನನ್ನ ಕಥೆಯನ್ನೇ ಬರೆಯಿರಿ. ಇಡೀ ದಿವಸ ಹೇಳಿದರೂ ಮುಗಿಯುವಂಥಾದ್ದಲ್ಲ ನನ್ನ ಕಥೆ" ಹಿಂದಲೆ ತುರಿಸಿಕೊಳ್ಳುತ್ತ ಹೇಳಿದ.

"ಅದೇ ಕೊಲೆಗಿಲೆಗೆ ಸಂಬಂಧಿಸಿದ್ದು ತಾನೆ!"

"ಅದಲ್ಲಣ್ಣಾ ನನ್ನ ಪ್ರೀತಿಗೆ ಸಂಬಂಧಿಸಿದ್ದು!" ಎಂದು ಅತೀ ಸಹಜವಾಗಿ ಹೇಳಿದ, ಅದರಿಂದ ನನಗೆ ಆಶ್ಚರ್ಯವಾಯಿತು. ಜೊತೆಗೆ ಸುಳ್ಳು ಹೇಳುತ್ತಿರಬಹುದೆಂಬ ಅನುಮಾನವೂ ಮೂಡಿತು.

"ನಂಬಲಿಕ್ಕಾಗುತ್ತಿಲ್ಲ ಶರಭ! ನಿನ್ನಂಥವರಲ್ಲೂ ಪ್ರೀತಿ ಪ್ರೇಮ!" ಹಾಗೆ ಕೇಳಬಾರದಿತ್ತು, ಆದರೂ ಕೇಳಿದೆ. ಅಪಮಾನವಾಯಿತೋ ಎಂಬಂತೆ ಕಣ್ಣಾಲಿಗಳನ್ನು ಹರ್ಷಗೊಳಿಸಿದ.

"ಯಾಕಣ್ಣಾ ಹಾಗೆ ಕೇಳಿದಿರಿ! ನಾನೂ ಮನುಷ್ಯ ತಾನೆ!"

ಅರೆ! ಹೌದಲ್ಲವೆ! ಇವನೂ ಮನುಷ್ಯನೆ ನಿಸ್ಸಂದೇಹವಾಗಿ. ಆಕರ್ಷಕವಾಗಿರುವ ತರುಣ ನಿಸ್ಸಂದೇಹವಾಗಿ. ನನ್ನ ಮಾತಿನಿಂದ ನನ್ನ ಮನಸ್ಸಿಗೆ ನೋವಾಯಿತು. ಕಣ್ಣುಗಳಿಂದ ಕ್ಷಮೆ ಯಾಚಿಸಿದೆ.

"ನನ್ನ ಮಾತಿನ ಉದ್ದೇಶ ಅದಲ್ಲ ತಮ್ಮಾ, ನೀನೇನೊ ಪ್ರೀತಿಸಬಹುದು, ಆದರೆ ನಿನ್ನನ್ನು ಯಾರು ತಾನೆ ಪ್ರೀತಿಸಿರಲು ಸಾಧ್ಯ! ಆ ಹುಡುಗಿ ಯಾರಪ್ಪಾ!" ಎಂದು ತಪ್ಪನ್ನು ಸರಿಪಡಿಸಿಕೊಳ್ಳುತ್ತ ಕೇಳಿದ್ದಕ್ಕೆ ಅವನು..

"ರೆಡ್ಡಿ ಮಗಳು!" ಹೇಳು ಹೇಳುತ್ತಿದ್ದಂತೆ ತಾನು ನಾಚಿ ನೀರಾಗಿ ಸ್ರವಿಸಿದ.

"ಯಾವ ರೆಡ್ಡಿ!" ಕುತೂಹಲ ಮೇರೆ ಮೀರಿ ಕೇಳಿದೆ.

"ಅದೇ ಅಣ್ಣಾ, ಯಾರ ಕೊಲೆ ಮಾಡಿ ತಲೆತಪ್ಪಿಸಿಕೊಂಡಿರುವೆನೋ ಅದೇ ರೆಡ್ಡಿಯ ಮಗಳು ವನಜಾಕ್ಷಿ!" ಸವತೆಕಾಯಿ ಹೆಚ್ಚಿದಷ್ಟು ಸಹಜತೆ ಇತ್ತು ಅವನ ಮಾತಿನಲ್ಲಿ. ಕೇಳಿದ ನನಗೆ ಮೈ ಪರಚಿಕೊಳ್ಳುವಷ್ಟು ಮುಖಕ್ಕೆ ಎರಡು ಭಾರಿಸುವಷ್ಟು ಕೋಪ ಬಂತು, ಪಾಪಪ್ರಜ್ಞೆ ಹೆಡೆಯಾಡಲಾರಂಭಿಸಿತು, ಹಾಗೆ ಸಹಿಸಿಕೊಂಡೆ.

"ಅದು ಹೇಗೆ ಸಾಧ್ಯ?" ಸೃಜನಶೀಲ ಕುತೂಹಲದಿಂದ ಕೇಳಿದೆ.

"ಅದೊಂದು ದೊಡ್ಡ ಕಥೆ ಕಣಣ್ಣಾ! ಹೀಗೇ ಎಂದು ಹೇಗೆ ಹೇಳಲಿ! ಅದನ್ನ ಹೇಳಲಿಕ್ಕೂ ಆಗುವುದಿಲ್ಲ, ಹೇಳದೆ ಇರುವುದಕ್ಕೂ ಆಗುವುದಿಲ್ಲ, ಅದೊಂದು ವಿಚಿತ್ರ ಕಥೆ! ಒಂದೇ ಮಾತಿನಲ್ಲಿ ಹೇಳುವುದಾದರೆ ಆ ಹುಡುಗಿ ನನ್ನಲ್ಲಿ ಏನು ಕಂಡುಕೊಂಡಳೋ! ಯಾವಾಗ ಪ್ರೀತಿಸಲಾರಂಭಿಸಿದಳೊ! ಆಕೆಯೂ ಪ್ರೀತಿಸಿದಳು, ನಾನೂ ಪ್ರೀತಿಸಿದೆ. ನಮ್ಮಿಬ್ಬರದು ವೇದಾಂತ ಜ್ಞಾನಸಿಂಧು ಪಾರಾಯಣ ಮಾಡಿದಷ್ಟು ನಿಷ್ಕಲ್ಮಶ ಪ್ರೇಮ. ಇನ್ನೇನು ನಾವಿಬ್ಬರೂ ಓಡಿ ಹೋಗಿ ಧರ್ಮಸ್ಥಳದಲ್ಲಿ ಮದುವೆಯಾಗಬೇಕೆಂದುಕೊಂಡಿದ್ದೆವು, ಆದರೆ ಕೋಗಿಲೆತೋಟದ ರಘುನಾಥರೆಡ್ಡಿ ಕೇಳಿಕೊಂಡ ಸುಪಾರಿಯನ್ನು ಒಪ್ಪಿಕೊಂಡೆ, ಒಪ್ಪಿಕೊಳ್ಳುವಾಗ ಬೇಟೆ ಯಾವುದೆಂದು ತಿಳಿದಿರಲಿಲ್ಲ, ಆಮೇಲೆ ತಿಳಿಯಿತು, ವನಜಳ ತಂದೆ ಎಂದು. ಸುಪಾರಿ ಒಪ್ಪಿಕೊಂಡ ಮೇಲೆ ತಪ್ಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ನಾನು ಮಾಡದಿದ್ದರೆ ಆ ಕೆಲಸವನ್ನು ಇನ್ನೊಬ್ಬರು ಮಾಡಿಮುಗಿಸುವರು, ಜೊತೆಗೆ ನನ್ನನ್ನೂ ಮುಗಿಸುವರು ಎನ್ನುವ ಭಯ ಕಾಡಿತು. ಅದೂ ಅಲ್ಲದೆ ಪುರುಷೋತ್ತಮರೆಡ್ಡಿಯ ದೌರ್ಜನ್ಯಕ್ಕೆ ಇಡೀ ಊಳೂರು ರೋಸಿತ್ತು. ಯಾರಾದರು ತಮ್ಮ ರೆಡ್ಡಿಯನ್ನು ಕೊಲೆ ಮಾಡಿ ಪುಣ್ಯ ಕಟ್ಟಿಕೊಳ್ಳಬಾರದೆ ಎಂದು ಊರಿನ ಪ್ರತಿಯೊಬ್ಬರೂ ಯೋಚಿಸುತ್ತಿದ್ದರು, ಹಾಗೆ ನನ್ನ ತಂದೆಯೂ ನನ್ನೆದುರು ಗೊಣಗಾಡುತ್ತಿದ್ದುದುಂಟು ಅಣ್ಣಾ! ಆದರೂ ಪ್ರೀತಿಸಿರುವ ತಪ್ಪಿಗೆ ಹದಿನೈದು ದಿವಸ ಮುಂದೂಡಿದೆ. ರಘುನಾಥರೆಡ್ಡಿಯಿಂದ ಒತ್ತಡ ಹೆಚ್ಚುತ್ತಲೇ ಹೋಯಿತು, ಕೊನೆಗೆ ಕೊಲೆ ಮಾಡುವುದು ಅನಿವಾರ್ಯವಾಯಿತು. ನಿಜ ಸಂಗತಿಯನ್ನು ಹೇಳುವ ಸಲುವಾಗಿ ಬಿಳಿಜೋಳದ ಹೊಲದಲ್ಲಿ ಆಕೆಯನ್ನು ಭೆಟ್ಟಿಯಾದೆ, ನೀನು ಕ್ಷಮಿಸದೇ ಇರುವಂಥ ತಪ್ಪು ಮಾಡಲಿರುವುದಾಗಿ ಕೈಹಿಡಿದು ಕೇಳಿಕೊಂಡೆ, ಆಕೆಯ ಚಿನ್ನದ ಬಳೆಗಳಿದ್ದ ಮುಂಗೈ ಮೇಲೆ ಬೀಳುವಂತೆ ಕಣ್ಣೀರು ಸುರಿಸಿದೆ. ಆಕೆ ಎಷ್ಟು ಕೇಳಿಕೊಂಡರೂ ಹೇಳುವ ಧೈರ್ಯ ನನಗೆ ಬರಲೇ ಇಲ್ಲ, ಎರಡು ಮೂರು ದಿವಸಗಳ ಕಾಲ ನಿದ್ದೆ ಮಾಡದೆ ಒದ್ದಾಡಿದೆ, ಅನ್ನ ನೀರು ಸಹ ಮುಟ್ಟಲಿಲ್ಲ. ರೆಡ್ಡಿಯ ಗುತ್ತಿಗೆ ಮುಗಿದು ಎರಡು ತಿಂಗಳಾಗಿತ್ತು, ಆತನ ಚಲನವಲನಗಳ ಮೇಲೆ ನಿಗಾವಹಿಸಿದೆ. ಆ ದಿವಸ ಚೂರಿಯನ್ನು ಸೊಂಟದಲ್ಲಿ ಅಡಗಿಸಿಟ್ಟುಕೊಂಡೆ.. ಆದರೂ ತೋಟದ ಮನೆಗೆ ಹೋದೆ. ಅದೇ ತಾನೆ ರೆಡ್ಡಿ ಮಲಗಲಿದ್ದ, ಮೆಲ್ಲಗೆ ಮುಟ್ಟಿ ಎಚ್ಚರಗೊಳಿಸಿದೆ, ಆತಗೆ ನನ್ನನ್ನು ನೋಡಿ ಆಶ್ಚರ್ಯವಾಯಿತು. ಅಡಿಯಿಂದ ಮುಡಿವರೆಗೆ ನೋಡಿದ. ಯಾಕೆ ಸಪ್ಪಗಿರುವಿ! ಹಸಿದಿರುವಿ ಏನು! ಮನೆಗೆ ಹೋಗು, ವನಜ ಬಡಿಸುತ್ತಾಳೆ ಊಟ ಮಾಡು ಎಂದು ಹೇಳಿದ. ಆ ಹಸಿವೆಗೆ ಸಂಬಂಧಿಸಿದ ಮಾತು ಕೇಳಿದೊಡನೆ ಜಂಘಾಬಲವುಡುಗಿತು, ನೆಲ ಕಂಪಿಸಿದ ಅನುಭವವಾಯಿತು, ಅದಕ್ಕಲ್ಲ ಧಣಿ ಒಂದು ಮುಖ್ಯವಾದ ಕೆಲಸ ಮುಗಿಸುವ ಸಲುವಾಗಿ ಬಂದಿರುವೆ, ಅದಕ್ಕೆ ನಿಮ್ಮ ಸಹಕಾರ ಬೇಕು ಎಂದು ಕೇಳಿಕೊಂಡೆ, ಅದಕ್ಕೆ ಆತ ಹಣ ಬೇಕಿತ್ತೇನು ಎಂದು ಕೇಳಿದ, ಅದಕ್ಕಿದ್ದು ನಾನು ಕೋಗಿಲೆತೋಟದ ರೆಡ್ಡಿ ಐವತ್ತು ಸಾವಿರ ಕೊಟ್ಟಿರುವನೆಂದು ಹೇಳಿದೆ, ಆ ಹೆಸರನ್ನು ಕೇಳಿದೊಡನೆ ಆತ ನಖಶಿಖಾಂತ ಕಂಪಿಸಿದ, ದುರುಗುಟ್ಟಿ ನೋಡಿದ, ಮೆಲ್ಲಗೆ ಹಿಂದೆ ಸರಿದ ಭಯಭೀತನಾಗಿ! ಪುನಃ ಚೇತರಿಸಿಕೊಂಡು ಹಣದ ಅಗತ್ಯವಿದ್ದಲ್ಲಿ ನನ್ನ ಕೇಳಬಹುದಿತ್ತಲ್ಲವೆ! ಆ ನನ್ನ ವೈರಿ ಎದುರು ಕೈಚಾಚಲು ನಿನ್ನ ಮನಸ್ಸು ಹೇಗೆ ಒಪ್ಪಿತು ಎಂದು ಹೇಳಿದ, ಅದಕ್ಕೆ ನಾನು ನಿಮ್ಮ ಬಳಿ ನಾನು ಕೆಲಸಕ್ಕಿಲ್ಲವಲ್ಲ ಎಂದು ಹೇಳಿದೆ, ಅದಕ್ಕೆ ಆತ ಎಂಥ ಹುಚ್ಚನಿರುವೆಯೋ! ಅದೆಲ್ಲ ದೈಹಿಕವಾದ ಗುತ್ತಿಗೆ,

ಆದರೆ ನೀನಿನ್ನೂ ನಮ್ಮ ಮನೆಯ ಮಗನೆಂಬುದನ್ನು ಮರೆಯಬೇಡ. ನನ್ನ ಕಣ್ಣೆದುರು ಬೆಳೆದು ದೊಡ್ಡವನಾಗಿರುವ ನೀನು ಎಂದಿಗೂ ಮನೆಯ ಮಗನೆ! ಎಂದ. ಮುನಃ ತಾನೆ ಸಾಲದ ರೂಪದಲ್ಲಿ ಪಡೆದಿದ್ದರೆ ಹೇಳು, ಕೊಡುವೆ, ಹೋಗಿ ವಾಪಸ್ಸು ಕೊಟ್ಟರಾಯಿತು ಎಂದ. ಅದಕ್ಕೆ ನಾನು ಸಾಲ ಅಲ್ಲ ಧಣಿ ಸುಪಾರಿ ಎಂದೆ, ಕೇಳಿದೊಡನೆ ಹೌಹಾರಿದ, ಯಾರ ಮೇಲೆ ಸುಪಾರಿ! ಎಂದ, ಅದಕ್ಕಿದ್ದು ನಾನು ಸುಪಾರಿಗೆ ಒಪ್ಪಿದ ನಂತರವೇ ಬೇಟೆ ಯಾವುದೆಂದು ತಿಳಿದದ್ದು ಧಣಿ, ಅದು ನೀವೇ ಎಂದು ಅವನು ಹೇಳಿದ್ದಲ್ಲಿ ನಾನು ಒಪ್ಪಿಕೊಳ್ಳುತ್ತಿರಲಿಲ್ಲ, ಆದರೆ ಆ ನೀಚ ಎರಡು ದಿವಸಗಳ ಬಳಿಕ ಹೇಳಿ ನನ್ನ ಮನಸ್ಸನ್ನು ಕೊಂದುಬಿಟ್ಟ ಎಂದು ಹೇಳುತ್ತ ಕಣ್ಣಲ್ಲಿ ನೀರು ತಂದುಕೊಂಡೆ. ನನ್ನ ಕಡೆ ಭಯದಿಂದ ನೋಡುತ್ತ ಅಲ್ಲವೋ ನಿನ್ನನ್ನು ಮನೆಯ ಮಗನೆಂದು ಈ ಕ್ಷಣದವರೆಗೆ ಭಾವಿಸಿದ್ದೆ ಎಂದು ಬಿಕ್ಕಳಿಸಿದ, ಆ ಮಾತು ಕೇಳಿದೊಡನೆ ಮನಸ್ಸಿಗೆ ನೋವಾಯಿತು, ಅಲ್ಲದೆ ನಗು ಸಹ ಬಂತು, ನನ್ನ ನಗು ನನ್ನನ್ನು ಹಿಂಸಿಸಿತು, ಧೈರ್ಯ ತಂದುಕೊಂಡು ಹೇಳಿದೆ, ಚಿಕ್ಕಂದಿನಲ್ಲಿ ರಕ್ತದ ರುಚಿ ತೋರಿಸಿದ ನೀವೇ ಹೀಗೆ ಹೇಳಿದರೆ ಹೇಗೆ ಧಣಿ! ಗೋಲಿ ಚಿಣಿದಾಂಡು ಆಡುವ ವಯಸ್ಸಿನಲ್ಲಿದ್ದ ನನ್ನ ಕೈಗೆ ಆಯುಧಗಳನ್ನು ಕೊಟ್ಟವರು ನೀವೆ! ಅವುಗಳನ್ನು ಹೇಗೆ ಬಳಸಬೇಕೆಂದು ಹೇಳಿದವರು ನೀವೆ! ಮೋಕಾದ ಅಯ್ಯಾಳಿಯನ್ನು ಕೊಲೆ ಮಾಡಿಬಂದ ನನ್ನನ್ನು ಬಿಗಿದಪ್ಪಿಕೊಂಡು ಬೆನ್ನು ಚಪ್ಪರಿಸಿದವರು ನೀವೆ! ಯಾವುದೋ ಒಂದು ಕ್ಷುಲ್ಲಕ ಕಾರಣಕ್ಕೆ ನೀಡಬಾರದ ಹಿಂಸೆ ನೀಡಿ ನನ್ನನ್ನು ಮನೆಯಿಂದ ಹೊರದಬ್ಬಿದವರು ನೀವೆ! ಇಂಥ ನೀವು ನನ್ನ ತಂದೆಯಾಗುವುದೆಂದರೇನು! ಇಂಥ ನಾನು ನಿಮ್ಮ ಮಗನಾಗುವುದೆಂದರೇನು ಧಣಿ! ಮನುಷ್ಯನ ಜೀವ ತೆಗೆಯುವುದುಬಿಟ್ಟರೆ ಇನ್ಯಾವ ವಿದ್ಯೆಯನ್ನು ನನಗೆ ಕಲಿಸಿದರಿ ನೀವು! ನಾಳೆ ಕುರಿತು ಚಿಂತಿಸುತ್ತಿದ್ದ ನನ್ನನ್ನು ರಘುನಾಥರೆಡ್ಡಿ ಕೋಗಿಲೆತೋಟಕ್ಕೆ ಕರೆದೊಯ್ದು ಒಂದು ತುತ್ತು ಅನ್ನ ನೀಡಿದ, ನನಗೆ ಹಣದ ಅಗತ್ಯವಿತ್ತು, ಆತ ನೀಡಿದ ಸುಪಾರಿಯನ್ನು ಹಿಂದೆಮುಂದೆ ಆಲೋಚಿಸದೆ ಒಪ್ಪಿಕೊಂಡುಬಿಟ್ಟೆ ಧಣಿ ಎಂದು ಹೇಳಿದೆ ತಣ್ಣಗೆ, ಬಿಕ್ಕಳಿಸಿದೆ ಚಿಕ್ಕಮಗುವಿನಂತೆ, ಅಂಗಿಯ ತುದಿಯಿಂದ ಕಣ್ಣೀರನ್ನು ಒರೆಸಿಕೊಂಡೆ, ಮನಸ್ಸಿನಲ್ಲಿ ದೇವರನ್ನು ಕಲ್ಪಿಸಿಕೊಂಡು ಕ್ಷಮಿಸುವಂತೆ, ಕೊಲೆಗೀಡಾಗಲಿರುವ ವ್ಯಕ್ತಿಗೆ ಸದ್ಗತಿ ಕರುಣಿಸುವಂತೆ ಬೇಡಿಕೊಂಡೆ. ಮನಸ್ಸಿನಲ್ಲಿ ಆ ಕೂಡಲೆ ಮೂಡಿದ ವನಜಾಕ್ಷಿ ನನ್ನ ತಂದೆಯನ್ನು ಕೊಂದು ನನ್ನನ್ನು ಅನಾಥಳನ್ನಾಗಿಸಬೇಡವೋ ಎಂದು ಕೂಗಿಕೊಂಡಂತಾಯಿತು. ನಿನ್ನ ತಂದೆಯ ಸಾವು ನನ್ನ ಕೈಯಲ್ಲಿ ಸಂಭವಿಸಬೇಕೆಂದು ಆ ವಿಧಿಯೇ ಬರೆದಿರುವಾಗ ಕ್ಷಮಿಸುವುದೆಲ್ಲಿ ಸಾಧ್ಯ ವನಜಾ ಎಂದು ಹೇಳಿಕೊಳ್ಳದೆ ಇರಲಿಲ್ಲ. ಇಂಥ ಯೋಚನೆಗಳಿಂದ ಮನಸ್ಸನ್ನು ಕಠೋರ ಮಾಡಿಕೊಂಡೆ. ಕೊಲೆಗಾರನಾಗಿ ಸಂಭವಿಸುತ್ತಲೇ ಹೋಗಿ ಕೊನೆಗೆ ಪೂರ್ಣಪ್ರಮಾಣದ ಕೊಲೆಗಾರನಾದೆ. ರೆಡ್ಡಿಯ ಕಣ್ಣುಗಳಲ್ಲಿ ನನ್ನ ಪ್ರತಿಬಿಂಬ ಕೋರೈಸಿತು, ನನ್ನ ಕಣ್ಣುಗಳಲ್ಲಿ ರೆಡ್ಡಿಯ ಪ್ರತಿಬಿಂಬ ಸಹ ಒಡಮೂಡಿತು. ಪರಸ್ಪರ ನೋಡಿಕೊಳ್ಳಲು ಹಿಡಿದ ಸಮಯ ಒಂದು ಗಳಿಗೆ ಮಾತ್ರ. ಮಗನಾಗಿದ್ದವನು ಕರುಳ ಕುಡಿಯಾಗಿದ್ದವನು ಶತ್ರುಗಳಿಂದ ದಶಕ ಕಾಲ ರಕ್ಷಿಸಿದವನು ತನ್ನ ಕಣ್ಣುಗಳೆದುರು ಮೃತ್ಯುವಾಗಿ ರಾಕ್ಷಸನಾಗಿ ನಿಲ್ಲುವುದೆಂದರೆ!

ಮೃತ್ಯುಭಯದಿಂದಾಗಿ ರೆಡ್ಡಿಯ ದವಳಕಾಂತಿಯ ಮುಖ ಕಳೆಗುಂದಿ ಕಪ್ಪಿಟ್ಟಿತು! ನನಗೆ ಮಗನಾಗಲು, ಶಾಶ್ವತ ತಂದೆಯಾಗಲು ಪ್ರಯತ್ನಿಸಿದ, ಜೋಡಿಸಲು ತನ್ನೆರಡೂ ಕೈಗಳನ್ನು ಪರಸ್ಪರ ಜೋಡಿಸಿ ನನ್ನನ್ನು ಅನುಕಂಪದ ಬಲೆಯಲ್ಲಿ ಬಂಧಿಯಾಗಿಸಲು ಪ್ರಯತ್ನಿಸಿದ,

ಸಾಧ್ಯವಾಗಲಿಲ್ಲ, ವಿವಿಧ ಆಮಿಷಗಳನ್ನು ಒಡ್ಡಲು ಪ್ರಯತ್ನಿಸಿದ, ತನ್ನನ್ನು ತಾನು ರಕ್ಷಿಸಿಕೊಳ್ಳಲು ಆಯುಧಗಳನ್ನು ಹುಡುಕಲು ಪ್ರಯತ್ನಿಸಿದ, ತನ್ನ ಅಸಹಾಯಕತೆಯಿಂದ ನನ್ನ ಕಣ್ಣುಗಳಲ್ಲಿ ಕ್ಷಮೆಯನ್ನು ಹುಡುಕಲು ಪ್ರಯತ್ನಿಸಿದ, ತಾನು ಧರಿಸಿದ್ದ ಖಾದಿ ಉಡುಪನ್ನೇ ಜೀವ ರಕ್ಷಕಸ್ತ್ರಾಣವನ್ನಾಗಿ ಪರಿವರ್ತಿಸಲು ಪ್ರಯತ್ನಿಸಿದ! ಈ ಎಲ್ಲಾ ಯತ್ನ ಪ್ರಯತ್ನಗಳು ಸಂಭವಿಸಿದ್ದು ಕೇವಲ ಎರಡು ನಿಮಿಷಗಳ ಅವಧಿಯಲ್ಲಿ! ಗಮನಿಸುತ್ತಲೇ ಆತನ ಕ್ರೌರ್ಯದ ವಿವಿಧ ಎಳೆಗಳನ್ನು, ಸಾರ್ವಜನಿಕ ಜೀವನದ ಮೇಲೆ ತಾನು ನಡೆಸುತ್ತಿದ್ದ ಹಲವಾರು ಹಲ್ಲೆಗಳನ್ನು ನೆನಪಿಸಿಕೊಳ್ಳುತ್ತಲೇ ವ್ಯಗ್ರಗೊಳ್ಳಲಾರಂಭಿಸಿದೆ. ಅಕಸ್ಮಾತ್ತಾಗಿ ಕ್ಷಮಿಸಿದಲ್ಲಿ ಸಂಭವಿಸಬಹುದಾದ ನನ್ನ ಕೊಲೆಯನ್ನೂ ಕಲ್ಪಿಸಿಕೊಳ್ಳಲಾರಂಭಿಸಿದೆ, ಈ ಒಂದು ಕೊಲೆ ಮೂಲಕ ನಾನು ಬದುಕುವುದು ಎಷ್ಟು ಮುಖ್ಯವೋ ನನ್ನ ಸಮಕಾಲೀನ ಸಮಾಜದ ನೆಮ್ಮದಿ ಬದುಕುವುದು ಸಹ ಅಷ್ಟೇ ಮುಖ್ಯವೆಂದು ಭಾವಿಸಿದೆ. ಅಕಾಲ ಮರಣಕ್ಕೆ ತುತ್ತಾಗಿರುವ ನಿರುಪದ್ರವಿಗಳನ್ನು ನೆನಪು ಮಾಡಿಕೊಂಡೆ, ಜೀವಚ್ಛವಗಳಂತೆ ಬದುಕುತ್ತಿರುವ ಅವರ ವಿಧವಾಪತ್ನಿಯರನ್ನೂ ನೆನಪಿಸಿಕೊಂಡೆ, ಬಲಿಯಾಗಲಿರುವವರನ್ನೂ ನೆನಪು ಮಾಡಿಕೊಳ್ಳದೆ ಇರಲಿಲ್ಲ ನಾನು. ವೈತರಣಿಯ ಸೂತಕ ಜಲಧಿಯನ್ನು ಜೀವನೋಪಾಯವನ್ನಾಗಿಸಿಕೊಂಡಿರುವ ಪುರುಷೋತ್ತಮರೆಡ್ಡಿ ಈ ದಿವಸ ಸತ್ತರೆ ನಾಳೆ ದಿವಸ ಕೋಗಿಲೆತೋಟದ ರಘುನಾಥರೆಡ್ಡಿ ಅಕಾಲಮರಣಕ್ಕೆ ತುತ್ತಾಗುವುದು ಅನಿವಾರ್ಯವೆಂದು ಭಾವಿಸಿದೆ. ಯಾವುದೇ ವ್ಯಕ್ತಿಯನ್ನು ಕೊಲ್ಲುವಾಗ ಆತನ ದೇಹಕ್ಕೆ ನೋವಾಗಬೇಕೇ ಹೊರತು ಆತನ ಮನಸ್ಸಿಗೆ ನೋವಾಗಬಾರದೆಂದು ಹೇಳುತ್ತಿದ್ದ ವ್ಯಕ್ತಿಯನ್ನು ಭೌತಿಕವಾಗಿ ನಾಶಪಡಿಸಬೇಕಿರುವುದು ನನ್ನ ದುರಾದೃಷ್ಟವೋ, ಸಾಯಲಿರುವುದು ರೆಡ್ಡಿಯ ಅದೃಷ್ಟವೋ! ಸಾಯಲಿರುವ ರೆಡ್ಡಿಯ ಮುಖವನ್ನು ಪ್ರಸನ್ನಗೊಳಿಸಲು ಎಲ್ಲಾ ರೀತಿಯಲ್ಲಿ ಪ್ರಯತ್ನಿಸಿದೆ, ಆದರೆ ಸಾಧ್ಯವಾಗಲಿಲ್ಲ. ಆದರೆ ಆತ ಕಳೆಗುಂದುತ್ತಲೇ ಕ್ಷೀಣಿಸಿದ, ಸಾವಿರಾರು ಜನರ ಸುಖ ನೆಮ್ಮದಿ, ಒಂದು ಕಾಲಘಟ್ಟದ ಸುಖಶಾಂತಿ ಸಲುವಾಗಿ ನೀವೊಬ್ಬರು ಸತ್ತರೆ ನಷ್ಟವೇನಿಲ್ಲ ಧಣಿ, ದಯವಿಟ್ಟು ಸುಂದರ ಕನಸುಗಳನ್ನು ನೆನಪು ಮಾಡಿಕೊಳ್ಳುತ್ತ ಪ್ರಸನ್ನಚಿತ್ತರಾದಿರೆಂದರೆ ಪ್ರಾಣಬಿಡುವುದು ಕಷ್ಟವೆನಿಸಲಾರದು ಎಂದು ತಿಳಿ ಹೇಳಲು ಪ್ರಯತ್ನಿಸಿದೆ, ಆದರೂ ತಾನು ವಿವರ್ಣಗೊಳ್ಳುತ್ತಲೇ ಸಾಗಿದ. ಇಷ್ಟವಿರದಿದ್ದರೂ ಆತನನ್ನು ಆಲಿಂಗಿಸಿಕೊಂಡೆ, ಪಾದಗಳೆಂದು ಭಾವಿಸಿ ಆತನ ಮುಂಗೈಗಳನ್ನು ಉತ್ಕಟವಾಗಿ ಚುಂಬಿಸಿದೆ. ಗದ್ಗದಿತನಾದ, ಪಶ್ಚಾತ್ತಾಪ ತೊದಲಲು ಯತ್ನಿಸಿದ, ಹತ್ತು ವರ್ಷಗಳ ಹಿಂದೆಯೇ ಪಶ್ಚಾತ್ತಾಪಪಟ್ಟಿದ್ದಲ್ಲಿ ಅಕಾಲಮರಣಕ್ಕೆ ತುತ್ತಾಗುವ ಪ್ರಮೇಯವಿರುತ್ತಿರಲಿಲ್ಲ ಧಣಿ ಎಂದು ಹೇಳಿದಾದ ಬಳಿಕ ನಿಧನಿಧಾನವಾಗಿ ಸೊಂಟದಿಂದ ಚೂರಿಯನ್ನು ಹೊರತೆಗೆದೆ, ಅಳುತ್ತಲೇ ಆತನನ್ನು ಗೋಡೆಗಾನಿಸಿದೆ, ಎಡಗೈಯಿಂದ ಆತನ ಭುಜವನ್ನು ಒತ್ತಿ ಹಿಡಿದು ಬಲಗೈಯಲ್ಲಿದ್ದ ಚೂರಿಯಿಂದ ಎರಡೇ ಎರಡು ಸಲ ಇರಿದೆ. ಬಳಿಕ ನಿಧಾನವಾಗಿ ದೇಹವನ್ನು ನೆಲದ ಮೇಲೊರಗಿಸಿದೆ, ಪ್ರಾಣ ಹೋಗಿರುವುದನ್ನು ಖಚಿತಪಡಿಸಿಕೊಂಡೆ, ತೆರೆದಿದ್ದ ರೆಪ್ಪೆಗಳನ್ನು ನೋವಾಗದ ರೀತಿಯಲ್ಲಿ ಮುಚ್ಚಿ ಅಲ್ಲಿಂದ ಹೊರಟೆ, ವೇದಾವತಿಯಲ್ಲಿ..”

ಇನ್ನೇನು ಹೇಳಬೇಕೆಂದು ಹೊಂಚಿದ್ದನೋ! ಅವನ ಬಾಯಿಯ ಮೇಲೆ ನನ್ನೆಡಗೈಯನ್ನು ಇರಿಸದಿದ್ದಲ್ಲಿ ಇನ್ನೇನು ಹೇಳಿ ನನ್ನ ಶ್ರವಣೇಂದ್ರಿಯವನ್ನು ಮೈಲಿಗೆಗೊಳಿಸುತ್ತಿದ್ದನೋ! ನನಗೆ ಭಯವಾಯಿತು, ಅಡಿಯಿಂದ ಮುಡಿವರೆಗೆ ಬೆವರು ಕಾಣಿಸಿತು. ಒರೆಸಿಕೊಂಡೆ. ಯೋಚಿಸಿದೆ,

ಹೇಳು ಎನ್ನಲಾಗಲೀ ಹೇಳಬೇಡ ಎನ್ನಲಾಗಲೀ ನಾನು ಯಾರು! ತಾನು ಮಾಡಿರುವ ಕೊಲೆ ಒಂದು ತೂಕವಾದರೆ ತಾನು ವರ್ಣಿಸುತ್ತಿರುವುದು ಇನ್ನೊಂದು ತೂಕ! ಬಹು ಪಾಲು ಉತ್ಪ್ರೇಕ್ಷೆ ಇಲ್ಲದಿರದು. ಆದರೂ ನನ್ನಂಥ ಸೃಜನಶೀಲಬರಹಗಾರನ ಪಾಲಿಗಂತೂ ತಾನು ತವನಿಧಿಯೇ ಸರಿ! ಅವನ ಕಡೆ ನೋಡಿ ನಿಡುಸುಯ್ದೆ, ಮಾತುಗಳಿಗಾಗಿ ತಡಕಾಡಿದೆ.

"ಎಂಥ ಕೆಲಸ ಮಾಡಿರುವಿ! ಪ್ರೀತಿ ಸಲುವಾಗಿಯಾದರೂ ರೆಡ್ಡಿಯನ್ನು ಕೊಲ್ಲುವಾಗ ನಿನಗೆ ದುಃಖವಾಗಲಿಲ್ಲವೇನು!" ನಾನೂ ಕಂಪಿಸುತ್ತಲೇ ಕೇಳಿದೆ.

"ಕೊಲೆ ಮಾಡುವಾಗ ನನಗೂ ದುಃಖವಾಯಿತಣ್ಣಾ. ಕೊಲೆಗೀಡಾಗುವ ವ್ಯಕ್ತಿಯ ದುಃಖಿಕ್ಕಿಂತ ಕೊಲೆ ಮಾಡುವ ವ್ಯಕ್ತಿ ಅನುಭವಿಸುವ ದುಃಖವೇ ಅಧಿಕ. ನಾನೂ ಆಗ ಸಂಕಟ ಅನುಭವಿಸಿದೆ, ಚೂರಿಯನ್ನು ಆತನೆದೆಗೆ ಇರಿಯುವಾಗ ನನ್ನ ಕೈಗಳೂ ನಡುಗಿದವು, ವನಜಾಳ ಮುಖ ಮತ್ತೆ ಮತ್ತೆ ನೆನಪಾಗಿ ಅಡಚಣೆಯಾಯಿತು. ಪಾಪ, ರೆಡ್ಡಿಯ ಜೀವ ನನ್ನ ಕೈಯಲ್ಲಿ ಹೋಗಬೇಕೆಂಬುದು ವಿಧಿಲಿಖಿತವಿತ್ತೋ ಏನೋ! ಸಾಯಲಿಕ್ಕೆ ಅರ್ಹರಿರುವವರು ಯಾಕೆ ಬದುಕಿರಬೇಕು! ಬದುಕಲಿಕ್ಕೆ ಅರ್ಹರಿರುವವರು ಯಾಕೆ ಸಾಯಬೇಕು! ಇದು ನನ್ನಂಥ ಸುಪಾರಿಗಳ ಸಿದ್ಧಾಂತ ಕಣಣ್ಣಾ, ಈ ತತ್ವದ ಆಧಾರದ ಮೇಲೆಯೇ ಅವನನ್ನು ಕೊಲೆ ಮಾಡುವುದರ ಮೂಲಕ ಎಷ್ಟೋ ಅಕ್ಕತಂಗಿಯರ ಮುತ್ತೈದೆತನವನ್ನು ರಕ್ಷಿಸಿರುವೆನು ಎಂಬುದೇ ಸಮಾಧಾನದ ವಿಷಯ! ಆದರೆ ನನಗೆ ವನಜಳದ್ದೇ ಚಿಂತೆ, ಅವಳು ತನ್ನ ತಂದೆಯ ಕೊಲೆಗಾರನಾದ ನನ್ನನ್ನು ಕ್ಷಮಿಸಿದರಷ್ಟೇ ಸಾಕು, ಆದರೆ ಅವಳು!" ಎಂದು ಅಳಲಾರಂಭಿಸಿದ ಚಿಕ್ಕಮಗುವಿನಂತೆ! ಬಲಗೈಯಿಂದ ಅವನ ಒದ್ದೆ ಕಣ್ಣುಗಳನ್ನೊರೆಸುತ್ತ..

"ಆಕೆಯನ್ನು ಅಷ್ಟೊಂದು ಪ್ರೀತಿಸುವವನು ಆಕೆಯ ನತದೃಷ್ಟ ತಂದೆಯನ್ನು ಕ್ಷಮಿಸಬಹುದಿತ್ತಲ್ಲವೆ!"

"ಕ್ಷಮಿಸಿದ್ದರೆ ನನ್ನಂಥ ಮೂರ್ಖ ಇನ್ನೊಬ್ಬರಿರುತ್ತಿರಲಿಲ್ಲ. ಪಾಪದ ಕೊಡ ತುಂಬಿದವರನ್ನು ನಾನು ಕ್ಷಮಿಸಿದ್ದರೆ ಬೇರೆಯವರು ಬಿಡುತ್ತಿರಲಿಲ್ಲ, ಖಂಡಿತ ಇಲ್ಲ. ನಾನಿಲ್ಲದಿದ್ದರೆ ಬೋಸ ಚಾಗ ಅನ್ವರ್ ಪೋತರಾಜುರಂಥವರು ಮುಗಿಸುತ್ತಿದ್ದರು. ಅವರಿಗೆ ಕೊಲೆ ಮಾಡುವುದೆಂದರೆ ಪೈಶಾಚಿಕ ಕ್ರೀಡೆ, ಸಾಯುವ ವ್ಯಕ್ತಿ ಬೇಗನೆ ಪ್ರಾಣ ತೆಗೆಯಿರೋ ಎಂದು ಕೈಮುಗಿದು ಕೇಳಿಕೊಂಡರೂ ಪ್ರಯೋಜನವಿರುವುದಿಲ್ಲ, ಆದರೆ ನನ್ನಂಥ ತಿಳವಳಿಕಸ್ಥರು ಹಾಗಲ್ಲ, ನಮಗೆ ಕೊಲ್ಲುವುದೆಂದರೆ ಅದೊಂದು ಧಾರ್ಮಿಕ ಕ್ರಿಯೆ, ಮುಕ್ತಿ ದಯಪಾಲಿಸುವ ಪವಿತ್ರ ಕಾರ್ಯ. ಸ್ನಾನ ಮಾಡಿ ಶುಚಿರ್ಭೂತರಾಗಿ ತಲುಪುವುದು, ಸಾಯಲಿರುವ ವ್ಯಕ್ತಿಯನ್ನು ಎದುರಿಗೆ ಕೂಡ್ರಿಸಿಕೊಂಡು ಲೌಕಿಕ ಜೀವನ ಕುರಿತಂತೆ ವೇದಾಂತವಾಗಿ ಮಾತಾಡುವುದು, ಮುಂದೆಂದೋ ಸಾಯಲಿರುವ ನಾನು ಇಂದೇ ಸತ್ತರೆ ತಪ್ಪೇನಿಲ್ಲ ಎಂಬ ನಿರ್ಣಯಕ್ಕೆ ಅವರೇ ಬರುವಂತೆ ಸಮ್ಮೋಹಗೊಳಿಸುವುದು, ಅವರು ನಗುನಗುತ್ತಿರುವಾಗಲೇ ಸ್ವಲ್ಪವೂ ನೋವಾಗದ ರೀತಿಯಲ್ಲಿ ಮುಕ್ತಿ ದಯಪಾಲಿಸುವುದು ಸುಪಾರಿ ಪಡೆಯುವ ನಮ್ಮ ಕರ್ತವ್ಯ. ಈ ನಮ್ಮ ಕಾರ್ಯಕ್ಕೆ ಅನುಕೂಲವಾಗುವಂತೆ ನಾವೂ ವೇದಾಂತ, ಗರುಡಪುರಾಣ, ಮೃತ್ಯುಂಜಯಶತಕ ಓದಿಕೊಂಡಿರುವ ವ್ಯಕ್ತಿಗಳೆ, ಅಪರಕರ್ಮದ ಪುರೋಹಿತ ಮಾಡುವ ಕೆಲಸವನ್ನು ನಾವೂ ಮಾಡುವುದುಂಟು. ಇನ್ನೊಂದು ವಿಚಿತ್ರವೆಂದರೆ ನಮ್ಮಂಥವರನ್ನು ತಮ್ಮೆದುರಿಗೆ ಕೂಡ್ರಿಸಿಕೊಂಡು ಪರುಷೋತ್ತಮರೆಡ್ಡಿಯವರು ರಾಮಾಯಣ, ಮಹಾಭಾರತ ಪಾರಾಯಣ ಮಾಡುತ್ತಿದ್ದರು. ಗಾಂಧಿಯವರಂತೆ ಅವರನ್ನು ಕೊಂದ ಗೋಡ್ಸೆ ಸಹ ಮುಖ್ಯವೆಂದು ಹೇಳುತ್ತಿದ್ದರು, ನಮ್ಮ

ಗುರು ಉರುಕುಂದೆಪ್ಪನವರೂ ವೇದಾಂತಜ್ಞಾನಸಿಂಧು ಹೇಳಿಕೊಡುತ್ತಿದ್ದರಲ್ಲದೆ ಯೋಗ ಪ್ರಾಣಾಯಾಮಗಳನ್ನೂ ನಮ್ಮಿಂದ ಅಭ್ಯಾಸ ಮಾಡಿಸುತ್ತಿದ್ದರು. ಇಂಥವರ ಗರಡಿಯಲ್ಲಿ ಪಳಗಿರುವುದರಿಂದಾಗಿಯೇ ನಮ್ಮಂಥವರನ್ನು ನೋಡಿದವರು ಯಾರೂ ಸುಪಾರಿ ಕೊಲೆಗಾರರೆಂದು ಭಾವಿಸುವುದು ಸಾಧ್ಯವಿಲ್ಲ ಅಣ್ಣಾ! ರೆಡ್ಡಿ ತನ್ನ ಪೂರ್ವಜನ್ಮದಲ್ಲಿ ಪುಣ್ಯ ಮಾಡಿರಬಹುದಾದ ಕಾರಣದಿಂದಾಗಿಯೇ ಆತನಿಗೆ ನಾನು ಮರಣ ದಯಪಾಲಿಸಿದ್ದು. ಇನ್ನು ವನಜಾಕ್ಷಿಯ ಸುಂದರ ಮುಖ ನೋಡಿ ಕ್ಷಮಿಸಿದ್ದಲ್ಲಿ ನನ್ನನ್ನು ಇನ್ನೊಬ್ಬರು ಕ್ಷಮಿಸುವುದು ಸಾಧ್ಯವಿರಲಿಲ್ಲ, ನನಗೂ ಬದುಕುವ ಆಸೆ ಇತ್ತಲ್ಲವೆ ಅದಕ್ಕೆ!" ಎನ್ನುತ್ತ ಕಣ್ಣೊಳಗಿನ ನೀರನ್ನು ಹಾಗೆ ಆವಿಯಾಗಿಸಿದ.

ಅದಕ್ಕೆ ಪ್ರತಿಯಾಗಿ ಏನು ಹೇಳುವುದೆಂದು ತೋಚಲಿಲ್ಲ ಒಂದು ಕ್ಷಣ. ಕೊಲೆಗಾರನಾದವನೂ ತಾತ್ವಿಕವಾಗಿ ಯೋಚಿಸಬಲ್ಲನು, ಅವನ ಕೃತ್ಯಗಳಿಗೂ ಕೆಲವು ಸಿದ್ಧಾಂತಗಳಿರುತ್ತವೆ ಎನ್ನುವುದು ನನಗೆ ಅರ್ಥವಾದದ್ದು ಆಗಲೆ! ಇಂಥ ಕ್ರೂರಿಗಳೂ ತಮ್ಮ ಕುಕೃತ್ಯಗಳನ್ನು ಸಮರ್ಥಿಸಲು ಯೋಗವಾಸಿಷ್ಠಗಳನ್ನು ಬಳಸುವುದೆಂದರೆ! ಅಸಹ್ಯವೆನ್ನಿಸಿತು. ಆ ಅಸಹ್ಯವನ್ನು ಅವನ ಕಣ್ಣೊಳಗಿನ ನೀರು ತೊಡೆದು ಹಾಕಿ ಅಚ್ಚರಿ ಹುಟ್ಟಿಸಿತು, ಅಚ್ಚರಿ ಅನುಕಂಪವಾಗಿ ಪರಿವರ್ತಿತಗೊಂಡ ಪರಿಣಾಮವಾಗಿ..

"ಪ್ರೀತಿಗಿಂತ ಕೊಲೆಯೇ ಮುಖ್ಯವಾಯಿತಲ್ಲವೋ! ನಿನ್ನಂಥ ಕ್ರೂರಿಗಳು ಪ್ರೀತಿಗೊಡವೆಗೆ ಹೋಗಬಾರದಿತ್ತು"

"ನಿಮ್ಮಂಥವರೆ ಈ ನಿಮ್ಮ ತಮ್ಮನಿಗೆ ಕ್ರೂರಿಯ ಪಟ್ಟಕಟ್ಟಿದರೆ ನಾನು ಬದುಕಿದ್ದೇನು ಸಾರ್ಥಕ! ಎಲ್ಲರಂತೆ ನಾನೂ ಸಭ್ಯ ತಂದೆ ತಾಯಂದಿರ ಮಗ. ಎಲ್ಲರಂತೆ ನಾನೂ ಸಭ್ಯನಾಗರಿಕನಾಗಲು ಪ್ರಯತ್ನಿಸಿದವನೆ. ಆರನೆ ತರಗತಿವರೆಗೆ ಓದಿರುವ ನಾನೂ ರಾಮಾಯಣ, ಮಹಾಭಾರತ ಕಥೆಗಳನ್ನು ತಿಳಿದುಕೊಂಡಿರುವೆ. ತಮ್ಮ ಬಳಿ ಜೀತಕ್ಕೆ ಸೇರಿದ ನನ್ನನ್ನು ಕೊಲೆಗಾರನನ್ನಾಗಿ ಪರಿವರ್ತಿಸಿದ ರೆಡ್ಡಿ ನಿಜವಾದ ಕೊಲೆಗಾರನೇ ಹೊರತು ನಾನಲ್ಲ ಅಣ್ಣಾ! ಒಳ್ಳೆಯತನವನ್ನು ಗುರುತಿಸಿಯೇ ತಾನೆ ವನಜಾಕ್ಷಿ ನನ್ನನ್ನು ಪ್ರೀತಿಸಿದ್ದು, ಅದೂ ನಾನು ಸುಪಾರಿ ಕೊಲೆಗಾರ ಎಂದು ಗೊತ್ತಿದ್ದೂ. ಮೊದಮೊದಲು ನಾನು ಆಕೆಯ ಪ್ರೀತಿಯನ್ನು ನಿರಾಕರಿಸಿ ದೂರ ಉಳಿಯಲು ಪ್ರಯತ್ನಿಸಿದೆನಾದರೂ ಸಾಧ್ಯವಾಗಲಿಲ್ಲ" ಹೇಳಿದಾದ ಬಳಿಕ ನಿಟ್ಟುಸಿರುಬಿಟ್ಟು ಕಣ್ಣು ಮುಚ್ಚಿಕೊಂಡು ತೆರೆದ. ಪಾಪೆಯೊಳಗೆ ಆಕೆ ಇದ್ದಳೇನೋ!

"ಅದಿರಲಿ ವನಜಾಕ್ಷಿ ನಿನ್ನನ್ನು ಈಗಲೂ!"

"ತುಂಬ ಪ್ರೀತಿಸುತ್ತಿದ್ದಳು, ಆದರೆ ಈಗ!" ಎನ್ನುತ್ತ ತಲೆ ತಗ್ಗಿಸಿದ.

"ಏನು ಮಾಡಲಿಕ್ಕಾಗುವುದು ಆಕೆಯನ್ನು ಮರೆತುಬಿಡು" ಎಂದಾದ ಬಳಿಕ ಅವನ ಭುಜವನ್ನು ಆಪ್ಯಾಯತೆಯಿಂದ ಅದುಮಿದೆ.

"ಅದು ಹೇಗೆ ಸಾಧ್ಯ! ಆರು ತಿಂಗಳುಗಳ ಕಾಲ ಪ್ರೀತಿಸಿ ಈಗ ಮರೆಯುವುದೆಂದರೆ ಹೇಗೆ! ಕುಂಬಳಕಾಯಿ, ಕುಡುಗೋಲು ಆಕೆಯ ಕೈಯಲ್ಲಿರುವಾಗ!"

"ಅಂದರೆ!"

"ನಾನು ಈ ಕಡೆಯಿಂದ ಕೊಲೆ ಮಾಡಿ ಹೊರಗಡೆ ಬರುವುದಕ್ಕೂ, ಆ ಕಡೆಯಿಂದ ಯಾರೋ ಹೆಂಗಸು ಬರುವುದಕ್ಕೂ ಸರಿ ಹೋಯಿತು. ಆ ಕತ್ತಲಲ್ಲಿ ನಾನೆ ಎಂಬುದು ಆಕೆಗಾಗಲೀ, ಆಕೆಯೇ ವನಜಳೆಂಬುದು ನನಗಾಗಲೀ ತಿಳಿಯದು! ಅದೆಲ್ಲ ನಡೆದದ್ದು

ಒಂದೆರಡು ನಿಮಿಷದಲ್ಲಿ. ಅವಳೇ ಆ ಹೆಂಗಸಿರಬಹುದೆಂಬುದು ನನ್ನ ಅನುಮಾನ. ಏನೇ ಅಗಲಿ ಆಕೆ ಕೋರ್ಟಲ್ಲಿ ನನ್ನ ವಿರುದ್ಧ ಸಾಕ್ಷ್ಯ ಹೇಳದಿದ್ದರೆ ಸಾಕು. ಕೇಸು ಬಿದ್ದು ಹೋಗುವುದಂತೂ ಗ್ಯಾರೆಂಟಿ, ಮುಂದೆ ಯಾವತ್ತೂ ಹಣದ ಆಸೆಗೆ ಸುಪಾರಿ ಪಡೆಯುವುದಿಲ್ಲ. ಹೇಗೋ ಪಿತ್ರಾರ್ಜಿತವಾಗಿ ಬಂದಿರುವ ಆಸ್ತಿ ಇದೆ, ಮರ್ಯಾದೆಯಿಂದ ಬದುಕುವುದು ಕಷ್ಟವಾಗಲಾರದು. ಆಕೆಯನ್ನು ಮಹಾರಾಣಿಯಂತೆ ನೋಡಿಕೊಳ್ಳುವೆ, ಅದಕ್ಕೆ ನೀವು!" ಎಂದು ಆಡಲಿದ್ದ ಮಾತನ್ನು ತಡೆ ಹಿಡಿದ.

"ಅದೆಲ್ಲ ನಿನ್ನ ಕರ್ಮ, ನನ್ನನ್ನು ಯಾಕೆ ಅದರೊಳಗೆ ಎಳೆಯುವಿ!"

"ಈಗ ಅಣ್ಣ ಎಂದರೂ ನೀವೆ, ತಂದೆ ಎಂದರೂ ನೀವೆ. ಅಪರಿಚಿತನಾದ ನನಗೆ ಆಶ್ರಯ ನೀಡಿರುವಿರಿ, ಒಡಹುಟ್ಟಿದವನ ಸ್ಥಾನಮಾನ ನೀಡಿರುವಿರಿ, ಈ ಕಷ್ಟದ ಸಮಯದಲ್ಲಿ ನೀವು ಸಹಾಯ ಮಾಡದೆ ಬೇರೆಯವರು ಮಾಡಲು ಸಾಧ್ಯವಿಲ್ಲ. ಇದೊಂದು ಸಹಾಯ ಮಾಡಿದಿರೆಂದರೆ ನಿಮ್ಮನ್ನು ಯಾವತ್ತೂ ಮರೆಯುವುದಿಲ್ಲ, ದಯವಿಟ್ಟು ಇಲ್ಲ ಎಂದು ಮಾತ್ರ ಹೇಳಬೇಡಿ ಅಣ್ಣಾ!" ಎಂದು ಕೈಮುಗಿದು ಕೇಳಿಕೊಂಡ. ಪೇಚಿಗೆ ಸಿಲುಕಿಸಿದ.

ಊರಿಗೆ ಅತ್ತು ಕಳೆದುಕೊಳ್ಳುವ ಕಣ್ಣುಗಳು ಪುನಃ ದೊರಕಲಾರವು ಎಂದು ಹೇಳುತ್ತಿದ್ದ ಅಜ್ಜಿಯೂ, ನಿನ್ನನ್ನು ನೀನು ಸರ್ವನಾಶ ಮಾಡಿಕೊಳ್ಳಲೆಂದೇ ಕಥೆಗಳನ್ನು ಬರೆಯುತ್ತಿರುವ ಮಗನೇ, ಹೆತ್ತವರಿಂದ ಮಗನನ್ನು ಕಸಿದುಕೊಳ್ಳುತ್ತಿರುವ ನಿನ್ನ ಕಥೆಗಳಿಗೆ ಧಿಕ್ಕಾರ ಎಂದು ಕೂಗುತ್ತಿರುವ ಅಪ್ಪನೂ, ಕಾಣೆಯಾಗಿರುವ ನನ್ನನ್ನು ಹುಡುಕದೆ ಸರ್ಕಾರಿ ನೌಕರಿಗೆ ಜೋತುಬಿದ್ದಿರುವ ನೀನೆಂಥ ಅಣ್ಣನೋ ಎಂದು ಶಪಿಸುತ್ತಿರುವ ತಮ್ಮ ರುದ್ರನೂ ಒಟ್ಟಿಗೆ ನೆನಪಾದರು. ಹೌದು! ಈ ಮೂವ್ವರೂ ನನ್ನೆದೆಯೊಳಗಿರುವ ಜಾಗಟೆಗಳೆ! ಏನೇ ಅಗಲಿ ನಾನವುಗಳ ಎಚ್ಚರಿಕೆಯ ನಿನಾದಕ್ಕನುಗುಣವಾಗಿ ವರ್ತಮಾನವನ್ನು ಅನುಭವಿಸುವುದು ಭವಿಷ್ಯವನ್ನು ರೂಪಿಸಿಕೊಳ್ಳುವುದು ಮುಖ್ಯ. ಆದರೆ ಈ ಶರಭ ನನ್ನನ್ನು ವಿಲಕ್ಷಣ ಪೇಚಿಗೆ ಸಿಲುಕಿಸುವ ಪ್ರಯತ್ನ ಮಾಡುತ್ತಿರುವನು. ಏನೇ ಅಗಲಿ ನಾನು..

"ನನ್ನನ್ನು ತಪ್ಪಾಗಿ ಭಾವಿಸಿರುವಿ ಶರಭ, ನನ್ನನ್ನು ನೀನು ಇಂಡಿಯನ್ ಪಿನಲ್ ಕೋಡ್ ಎಂದು ಅಪಾರ್ಥ ಮಾಡಿಕೊಂಡಿರುವಂತಿದೆ, ನನ್ನಂಥ ಪರದೇಶಿ ನನ್ನಂಥ ಶಿಕ್ಷಕ ನನ್ನಂಥ ನಿರುಪದ್ರವಿ ನಿನ್ನಂಥವನಿಗೆ ಯಾವ ಸಹಾಯ ಮಾಡಲು ಸಾಧ್ಯ!" ಎಂದು ಅಸಹಾಯಕತೆಯನ್ನು ತೋಡಿಕೊಂಡೆ.

"ನೀವು ಒಂದೇ ಒಂದು ಸಲ ಊಳೂರಿಗೆ ಹೋಗಿ, ವನಜಾಕ್ಷಿಯನ್ನು ಕಂಡು ನನ್ನ ಪರವಾಗಿ ಒಳ್ಳೆಯ ಮಾತಾಡಿ, ಆಕೆಯ ಮನಸ್ಸಿನಲ್ಲಿ ಏನಿದೆ ಎಂಬುದನ್ನು ತಿಳಿದುಕೊಂಡು ಬನ್ನಿ, ಇಷ್ಟು ಮಾಡಿದರೆ ನಿಮ್ಮ ಉಪಕಾರವನ್ನು ಮರೆಯುವುದಿಲ್ಲಣ್ಣಾ" ಎಂದು ಕೈಮುಗಿದು ಕೇಳಿಕೊಂಡ.

ನನಗೇನು ವಾಗಿಲಿಯ ಸೋದರ ಸಂಬಂಧಿಯಂತಿರುವ ಊಳೂರು ಅಪರಿಚಿತ ಸ್ಥಳವೇನಲ್ಲ, ಕೀರ್ತಿಶೇಷ ವೇದಂ ವೆಂಕಟಶಾಸ್ತ್ರಿಗಳು ತಮ್ಮ ಆಮುಕ್ತಮಾಲ್ಯದ ಸಂಶೋಧನಾ ಕೃತಿಯಲ್ಲಿ ಶ್ರೀಕೃಷ್ಣದೇವರಾಯನ ಪಟ್ಟಾಭಿಷೇಕದ ವಿವರಗಳಿರುವ ಶಿಲಾಶಾಸನ ಊಳೂರಲ್ಲಿ ಆಂಜನೇಯ ದೇವಸ್ಥಾನದ ಪ್ರಹರಿ ಗೋಡೆಯಲ್ಲಿರುವುದಾಗಿ ಪ್ರಸ್ತಾಪಿಸಿರುವರಷ್ಟೆ, ಅದನ್ನು ಖುದ್ದ ನೋಡುವ ಸಲುವಾಗಿ ಹಿಂದೊಮ್ಮೆ ಅಲ್ಲಿಗೆ ಉತ್ಸಾಹದಿಂದ ಹೋಗಿದ್ದೆ, ಇಲ್ಲಿಗೆ ಯಾಕಾದರೂ ಬಂದೆನೋ ಎಂದು ಪೇಚಾಡಿಕೊಳ್ಳುತ್ತ ಬೇಸರದಿಂದಲ್ಲಿಂದ ಮರಳಿದ್ದೆ. ಅಂಥ

ಊರಿಗೆ ಅದೂ ಪ್ರೇಮಕ್ಕೆ ಸಂಬಂಧಿಸಿದ ದಳ್ಳಾಳಿ ಪಾತ್ರದಲ್ಲಿ ಹೋಗುವುದೆಂದರೆ, ಅದೂ ಕೊಲೆಗಡುಕನ ಪರವಾಗಿ!

"ಛೇಛೇ ಏನು ಕೇಳುತ್ತಿರುವಿ ಶರಭ! ನಿನಗೆ ಬುದ್ಧಿ ಇಲ್ಲವೆಂದರೆ ನನಗೂ ಇಲ್ಲವೇನು! ನನ್ನನ್ನೇನು ಅಂದುಕೊಂಡಿರುವಿ ನೀನು!" ಎಂದು ಬೇಸರ ಕೋಪಮಿಶ್ರಿತ ಧ್ವನಿಯಲ್ಲಿ ಪ್ರತಿಭಟಿಸಿದೆ. ನನ್ನ ಮಾತಿನಿಂದ ಅವನು ವಿಚಲಿತನಾಗದೆ..

"ನನಗೆ ರಾಜಾಶ್ರಯ ನೀಡುವಂಥವರು ಎರಡು ಮೂರು ತಾಲ್ಲೂಕಗಳಲ್ಲಿದ್ದಾರಣ್ಣಾ, ಅವರನ್ನೆಲ್ಲ ಬಿಟ್ಟು ನಿಮ್ಮ ಮನೆಯಲ್ಲಿ ಯಾಕಿರುವೆನು ಹೇಳಿ! ಖಂಡಿತ ನೀವು ಶಾಲಾ ಮಾಸ್ತರರೆಂದಲ್ಲ, ನೀವು ಕಥೆಗಳನ್ನು ಬರೆಯುವವರಂತ, ನನ್ನಂಥ ಕೆಟ್ಟವರನ್ನು ಒಳ್ಳೆಯವರನ್ನಾಗಿ ಮಾಡುವ ಶಕ್ತಿ ಕಥೆ ಬರೆಯುವ ನಿಮ್ಮಂಥವರಿಗೆ ಇರಬಹುದಂತ, ಹಾಗಂತ ಪರಶುರಾಮಪ್ಪ ಮಾವ ಹೇಳಿದ್ದು. ಇಂಥ ನೀವೇ ಹೋಗುವುದಿಲ್ಲವೆಂದು ಹೇಳಿದರೆ ಹೇಗಣ್ಣಾ! ದಯವಿಟ್ಟು ಒಪ್ಪಿಕೊಳ್ಳಿ" ಎಂದು ಪುನಃ ಕೈಜೋಡಿಸಿ ಕೇಳಿಕೊಂಡ.

ಹೋಗುವುದೋ, ಹೋಗುವಂತೆ ಅಭಿನಯಿಸುವುದೋ! ಉಭಯ ಸಂಕಟಕ್ಕೆ ಸಿಲುಕಿದೆ. ಇಂಥ ಅಪರಾಧಿಗಳ ಮಾತನ್ನು ಒಮ್ಮಿಂದೊಮ್ಮೆಗೆ ತಿರಸ್ಕರಿಸುವುದು ಅಪಾಯವೆ! ಅದಕ್ಕೆಂದೆ ಇಸೋಫ ಮಹಾಶಯ ಅರಬನೂ ಒಂಟೆಯೂ ಕಥೆಯನ್ನು ಬರೆದಿರಬಹುದು. ಮುಖವನ್ನು ದಿಟ್ಟಿಸಿದೆ, ಬೆಳಗಿನ ಸೂರ್ಯನ ಬಿಸಿಲಿನಿಂದಾಗಿ ಕಂದುವರ್ಣಕ್ಕೆ ತಿರುಗಿತ್ತು. ಅಲ್ಲದೆ ದೈನ್ಯತೆಯ ಪರಿಮಳ ಸೂಸುತ್ತಿತ್ತು. ಅಲ್ಲದೆ ಕೆಲವು ದಿನಗಳಿಂದ ಮುಂದಿನ ಕೆಲವು ದಿವಸಗಳವರೆಗೆ ನನ್ನದು ಅಣ್ಣನ ಪಾತ್ರ, ಅವನದು ತಮ್ಮನ ಪಾತ್ರ! ಹೇಗೋ ನಿಭಾಯಿಸಿದರಾಯಿತು.

"ಈ ತಿಂಗಳು ಸಾಧ್ಯವಾಗಲಿಕ್ಕಿಲ್ಲ, ಮುಂದಿನ ತಿಂಗಳು ಹಡ್ಲಿಗಿಗೆ ಹೋಗಬೇಕಿದೆ, ಆಗ ಊಳೂರಿಗೆ ಹೋಗಿ ಬರುವೆ, ಈಗ ಸಮಾಧಾನವಾಯಿತಾ!" ಎಂದು ಸಮಾಧಾನದ ಮಾತುಗಳನ್ನು ಹೇಳಿದೆ. ಆ ಅವಧಿಯಲ್ಲಿ ಅವನನ್ನು ಮನೆಯಿಂದಲೂ, ವಾಗಿಲಿಯಿಂದಲೂ ಸಾಗ ಹಾಕಬಹುದೆಂಬ ಅಚಲ ವಿಶ್ವಾಸದಿಂದ, ಅದೂ ಪರಶುರಾಮನ ಸಹಾಯದಿಂದ.

"ಹೋಗ್ಲಿ ಬಿಡಿ, ಆದರೆ ಸಮಾಧಾನದ ಮಾತು ಹೇಳಿದಿರಲ್ಲ ಅಷ್ಟು ಸಾಕು. ಅಲ್ಲದೆ ಈಗ ನಿಮಗೆ ಪುರುಸೊತ್ತಿಲ್ಲ ಬೇರೆ" ಎಂದು ನೆಮ್ಮದಿಯ ಉಸಿರುಬಿಟ್ಟು ನಿರಮ್ಮಳಗೊಂಡನು. ಬಳಿಕ ತಾನೆ "ಹೀಗೆ ಕೇಳುತ್ತಿರುವೆನೆಂದು ಬೇಸರ ಮಾಡಿಕೊಳ್ಳಬೇಡಿ. ನಿಮ್ಮಿಂದ ಇನ್ನೊಂದು ಸಹಾಯವಾಗಬೇಕು" ಎಂದು ತಣ್ಣಗೆ ಕೇಳಿಕೊಂಡ. ಅದರಿಂದ ಮುಂದಕ್ಕೆ ಹೆಜ್ಜೆ ಇರಿಸುತ್ತಿದ್ದವನು ಗಕ್ಕನೆ ನಿಂತು ದಿಟ್ಟಿಸಿದೆ ಬೇಸರದಿಂದ.

"ಈಗ ಮಾಡಿರುವುದು ಮುಂದೆ ಮಾಡಬೇಕೆಂದಿರುವುದು ಸಾಲದೇನು!"

"ಇದೆಲ್ಲದಕ್ಕಿಂತ ಅದು ತುಂಬಾನೆ ಮುಖ್ಯ ಅಣ್ಣಾ!"

"ಏನದು?"

"ಹೇಗೋ ನೀವು ಆಲೂರಿಗೆ ಹೊರಟಿರುವಿರಿ, ಅಲ್ಲಿ ನಮ್ಮ ಕಡೆಯ ವಕೀಲರಿದ್ದಾರೆ, ಹೆಸರು ಜೀವೋತ್ತಮರಾವ್, ನೀವು ಅವರನ್ನು ಕಂಡು ಕೇಸಿನ ಬಗ್ಗೆ ಮಾತಾಡಬೇಕು, ನಾನು ಕೋರ್ಟನಲ್ಲಿ ಸರೆಂಡರಾಗುವುದೋ ಬಿಡುವುದೋ ವಿಚಾರಿಸಿ, ಅಗತ್ಯಬಿದ್ದರೆ ನೀವೇ ಜಾಮೀನು ಕೊಟ್ಟರೆ ತಪ್ಪೇನಿಲ್ಲ, ಜಾಮೀನು ಸಿಕ್ಕು ಹೊರ ಬಂದ ಕೂಡಲೆ ನಿಮ್ಮ ರಿಣ ತೀರಿಸುವೆನು" ಎನ್ನುತ್ತ ತನ್ನ ಹೆಗಲ ಮೇಲಿನ ಬೇತಾಳವನ್ನು ನನ್ನ ಹೆಗಲಿಗೆ ವರ್ಗಾಯಿಸಿದ. ಅವನ ತಣ್ಣನೆಯ ಮಾತುಗಳಿಂದ ನಾನು ತತ್ತರಿಸಿದೆ. ಅವಾಚ್ಯ ಶಬ್ದಗಳಿಂದ ನಿಂದಿಸಬೇಕು

ಕೆನ್ನೆಗೆರಡು ಭಾರಿಸಿ ಬುದ್ಧಿ ಕಲಿಸಬೇಕು, ಸುಳಿವು ನೀಡಿ ಪೋಲಿಸರಿಗೆ ಒಪ್ಪಿಸಬೇಕು ತಲೆಗೆ ಕೈಹೊತ್ತು ನೆಲಕ್ಕೆ ಕುಸಿದು ಕೂತು ಅರಣ್ಯರೋದನಗೈಯಬೇಕು, ಶನಿಯೋಪಾದಿಯಲ್ಲಿ ಕಾಡುತ್ತಿರುವ ನೀನು ಎಂದು ತೊಲಗುವಿ ಮಹರಾಯ ಎಂದು ಕೇಳಬೇಕು ಎಂದು ಏನೆಲ್ಲಾ ಪ್ರಯತ್ನಿಸಿದೆನಾದರೂ ಸಾಧ್ಯವಾಗಲಿಲ್ಲ. ಛದ್ಮವೇಷಧಾರಿ ವಿಶ್ವಾಮಿತ್ರನೋ ದುರ್ವಾಸನೋ ನಕ್ಷತ್ರಕನೋ ಎಂಬಂತೆ ಭ್ರಮೆಗೀಡು ಮಾಡುತ್ತಿರುವ ಇವನ ಮಾತನ್ನು ಪುರಸ್ಕರಿಸುವುದೋ ತಿರಸ್ಕರಿಸುವುದೋ ಎಂಬ ದ್ವಂದ್ವಕ್ಕೆ ಸಿಲುಕಿದೆ.

"ಏನು ಹೇಳುತ್ತಿರುವಿ ಮಹರಾಯ! ಹೇಳಿಕೇಳಿ ನಾನು ಸರ್ಕಾರಿ ನೌಕರ. ನೀನು ಹೇಳುವ ಕೆಲಸಗಳನ್ನು ಮಾಡುತ್ತ ಹೋದರೆ ಸರ್ಕಾರ ನನ್ನ ಕೈಗೆ ಖಾಲಿ ಚಿಪ್ಪುಕೊಟ್ಟು ಮನೆಗೆ ಕಳಿಸುವುದು" ಕೋಪದೊಂದಿಗೆ ಅಸಹಾಯಕತೆಯನ್ನು ಬೆರೆಸಿ ಹೇಳಿದೆ. ನೋಟದ ಮೂಲಕ ಅಂಜಲೀಬದ್ಧನಾದೆ.

"ನಾನಿಲ್ಲವೆ ನಿಮ್ಮನ್ನ ಸಾಕಿ ಸಲಹುದಕ್ಕೆ! ಮಸೀದಿಪುರದಲ್ಲಿ ಪಿತ್ರಾರ್ಜಿತವಾಗಿ ಬಂದಿರುವ ಎಂಟೆಕರೆ ಚಿನ್ನದಂಥ ಗದ್ದೆ ಇದೆ, ಅದರಲ್ಲಿ ನಾಲ್ಕೆಕರೆ ನಿಮ್ಮ ಹೆಸರಿಗೆ ಬರೆದುಕೊಡುವೆ. ನನ್ನಂತೆ ನೀವೂ ಒಂಟಿ, ಅದೂ ಅಲ್ಲದೆ ನಮ್ಮ ರಾಘವರೆಡ್ಡಿ ಶಿಫಾರಸ್ ಮಾಡಿದರೆ ನಿಮ್ಮ ಮನೆ ಬಾಗಿಲಿಗೆ ಸಂಬಳ ಬರುವುದು, ಚಿಂತೆ ಮಾಡಬೇಡಿ, ದಯವಿಟ್ಟು ವಕೀಲರನ್ನು ಭೆಟ್ಟಿಯಾಗಿ" ಎಂದ.

ಅವನ ಮಾತಿಗೆ ಏನೆಂದು ಹೇಳುವುದು? ಅಡಿಯಿಂದ ಮುಡಿವರೆಗೆ ದಿಟ್ಟಿಸಿದೆ. ದೈಹಿಕವಾಗಿ ನಾನು ಅವನಿಗಿಂತ ಸದೃಢನಿದ್ದರೂ ಕೃಶಗೊಳ್ಳಲಾರಂಭಿಸಿದೆ, ಅವನಿಗಿಂತ ಎತ್ತರವಿದ್ದರು ಕುಬ್ಜಗೊಳ್ಳಲಾರಂಭಿಸಿದೆ, ಕೊನೆಗೆ ಅಣುವಿನಷ್ಟಾಗಿ ನನ್ನ ಪಾಡಿಗೆ ನನ್ನನ್ನುಬಿಟ್ಟು ಹೋಗಯ್ಯಾ ಎಂದು ಅಂಗಲಾಚಿದಂತೆ ಭಾಸವಾಯಿತು.

"ಆಯ್ತು ಭೆಟ್ಟಿಯಾಗುವೆ, ನೀನಿನ್ನು ವಾಪಸು ಹೊರಡು, ಅಗೋ ಅಲ್ಲಿ ಸವಾರಿಗಾಡಿ ಬರ್ತಿದೆ, ಅದರಲ್ಲಿ ಯಾರಿರುವರೋ ಏನೋ" ನನಗೋ ಅದರಲ್ಲಿ ಪೋಲಿಸರಿದ್ದರೆಂಬ ಭಯ! ಎಷ್ಟಿದ್ದರೂ ಅವನು ನನ್ನ ಅತಿಥಿ, ನನ್ನಲ್ಲಿರುವತನಕ ಅವನು ಕ್ಷೇಮವಾಗಿರುವುದು ಮುಖ್ಯ.

"ನಿಜವಾಗಿಯೂ ನೀವು ದೊಡ್ಡಮನುಷ್ಯರು, ಅಷ್ಟು ಮಾಡಿ ಸಾಕು" ಎಂದು ಕೃತಜ್ಞತೆಗಳನ್ನು ಅರ್ಪಿಸಿದ. ಇನ್ನೇನು ನಾನು ಹೊರಡಬೇಕೆನ್ನುವಷ್ಟರಲ್ಲಿ ಪುನಃ ನನ್ನನ್ನು ಕೂಗಿ ನಿಲ್ಲಿಸಿದ. ಕಾರಣಕ್ಕೆ ಕೇಳಿದ್ದಕ್ಕೆ ತನ್ನ ಸೊಂಟದಿಂದ ಒಂದು ವಸ್ತುವನ್ನು ತೆಗೆದು ತೋರಿಸಿದ. ಅದು ಚೂರಿ ಅಡಗಿರುವ ಆಕರ್ಷಕ ಹಿಡಿಯಾಗಿತ್ತು, ಅದನ್ನು ನನ್ನತ್ತ ಚಾಚಿ "ದಾರಿ ಚೆನ್ನಾಗಿಲ್ಲಣ್ಣಾ, ಯಾವುದಕ್ಕೂ ಈ ಚೂರಿ ನಿಮ್ಮ ಬಳಿ ಇರಲಿ" ಎಂದು ಕೇಳಿಕೊಂಡ, ಅದರ ಅಗತ್ಯ ನನಗಿರಲಿಲ್ಲ, ತೆಗೆದುಕೊಳ್ಳಲು ನಿರಾಕರಿಸಿದೆ, ಅದಕ್ಕೆ "ಇನ್ನು ಮೇಲೆ ಇದನ್ನಿಟ್ಟುಕೊಂಡು ಏನು ಮಾಡಲಣ್ಣಾ! ಇದನ್ನು ಸೊಂಟದಲ್ಲಿಟ್ಟುಕೊಳ್ಳಲು ಮನಸ್ಸು ಒಪ್ಪುತ್ತಿಲ್ಲ, ಇದಕ್ಕೊಂದು ಗತಿ ಕಾಣಿಸಲಿಕ್ಕೂ ಸಾಧ್ಯವಾಗುತ್ತಿಲ್ಲ, ಪೂರ್ವಕಾಲದ್ದಂತೆ! ಸುಮ್ಮನೆ ಜೊತೆಯಲ್ಲಿಟ್ಟುಕೊಂಡಿರಿ ಸಾಕು. ನಿಮ್ಮಲ್ಲಿ ಎಷ್ಟೋ ಧೈರ್ಯ ತುಂಬುವುದು" ಎಂದು ಒತ್ತಾಯ ಮಾಡಿದ,

ನಾನೂ ಒಲ್ಲದ ಮನಸ್ಸಿನಿಂದ ಉತ್ಸಾಹ, ನಿರ್ಲಕ್ಷ, ಸಂಕೋಚ ಮಿಶ್ರಿತ ಭಾವದಿಂದ ತೆಗೆದುಕೊಂಡೆ. ಕುತೂಹಲದಿಂದ ನೋಡಿದೆ. ಇಕ್ಕೆಲದಲ್ಲಿ ಸಾಣೆ ಹಿಡಿದಂತಿರುವುದು, ತುದಿ ಅಗತ್ಯಕ್ಕಿಂತ ಹೆಚ್ಚು ಮೊನಚಾಗಿರುವುದು, ಅದರ ಉದ್ದ ಆರಿಂಚಿನಿಂದ ಹತ್ತರೊಳಗೆ, ಕುಸುರಿಗೆಲಸದ ಪಂಚಲೋಹದ ಹಿಡಿಕೆ, ಮುಷ್ಟಿಯೊಳಗಿರಿಸಿಕೊಂಡು ಸೂರ್ಯನ ಕಡೆ

ಚಾಚಿದೆ, ಬೆಳಕು ಪ್ರತಿಫಲಿಸಿತಲ್ಲದೆ ಕಣ್ಣುಗಳು ಒಂದು ಕ್ಷಣ ಮಂಜುಗವಿದಂತೆನಿಸಿತು. ದೇಹದ ಸಮಸ್ತ ನರನಾಡಿಗಳು ಇದ್ದಕ್ಕಿದ್ದಂತೆ ಉದ್ರೇಕಗೊಂಡಂತೆನ್ನಿಸಿ ಕಣ್ಣುಗಳು ಹ್ರಸ್ವಗೊಂಡು ಪುನಃ ವಿಶಾಲವಾದವು. ನನ್ನದು ಕಾಲು ಶತಮಾನದ ವಯೋಮಾನ. ಹಿಂದೆ ಅನ್ಯಾಯವೆಸಗಿರುವ, ಮುಂದೆ ಅನ್ಯಾಯವೆಸಗಬಹುದಾದ ಶತ್ರುಗಳ ಪಡೆ ಕಣ್ಣ ಶುಕ್ಲಪಟಲದ ಮೇಲೆ ಸರತಿಸಾಲುಗಟ್ಟಿ ನಿಂತಿತು. ಅವರೆಲ್ಲ ಮೋಕ್ಷದ ಸಲುವಾಗಿ ಹಾತೊರೆಯುತ್ತಿರುವಂತೆ, ದಯವಿಟ್ಟು ತಮ್ಮನ್ನು ತಮ್ಮ ತಮ್ಮ ಬಂಧಮುಕ್ತಗೊಳಿಸು ಎಂದು ಅಂಗಲಾಚುತ್ತಿರುವಂತೆ, ಅವರೊಂದೇ ಅಲ್ಲದೆ ನನ್ನ ದೇಹವೂ ಮೋಕ್ಷಕ್ಕಾಗಿ ಹಾತೊರೆಯುತ್ತಿರುವಂತೆ ಭಾಸವಾಯಿತು. ಅದನ್ನು ಪುನಃ ಅವನಿಗೆ ಮರಳಿಸಲು ಪ್ರಯತ್ನಿಸಿದೆ. ಆತ್ಮಲಿಂಗದೋಪಾದಿಯಲ್ಲಿ ಅಂಗೈಯನ್ನು ಕಚ್ಚಿರುವ ಅದು ಚರ್ಮದಿಂದ ಕದಲೊಲ್ಲದು, ಇನ್ನೂ ಮುಷ್ಟಿಯೊಳಗೆ ಬಿಗಿಗೊಳ್ಳುತ್ತಿರುವ ಮಾಯಾವಿ ಚೂರಿ. ಹರಸಾಹಸಪಟ್ಟರೂ ನನ್ನಿಂದ ಕಳಚಿಕೊಳ್ಳಲು ನಿರಾಕರಿಸುತ್ತಿರುವ, ಬಲಿಗೊಳ್ಳುವ ಸಲುವಾಗಿ ತಹತಹಿಸುತ್ತಿರುವ ಕ್ರೌರ್ಯವೇ ಸಾಕಾರಗೊಂಡಂತಿರುವ ಚೂರಿ! ಅದರ ಪಾರದರ್ಶಕ ಹೈಯೊಳಗೆ ಒಡಮೂಡುತ್ತಿರುವ ಆಕೃತಿ ಅಪರಿಚಿತ ವ್ಯಕ್ತಿಯದ್ದು! ಪ್ರಾಯಶಃ ಆತ ಈತನ ಗುರು ಉರುಕುಂದೆಪ್ಪನಿದ್ದಿರಬಹುದು, ಹೌದು! ಖಂಡಿತ ಅವನೆ! ಸಂದೇಹವೇ ಇಲ್ಲ. "ಲೆಕ್ಕಣಿಕೆಯ ಸ್ಥಾನವನ್ನು ನನ್ನೀ ಪ್ರೀತಿಯ ಆಯುಧ ಆಕ್ರಮಿಸಿರುವುದರಿಂದ, ಅಕ್ಷರಾವಲಂಭಿಯಾಗಿದ್ದ ನಿನಗೆ ಕೊಲೆಗಾರನ ಪಟ್ಟ ದಯಪಾಲಿಸಲು ನನ್ನೀ ಆರಂಗುಲದ ಚಿರಂಜೀವ ಹಾತೊರೆಯುತ್ತಿರುವುದರಿಂದಾಗಿ ಸಂತೋಷವಾಗಿದೆ. ಓಹ್! ಯಾರನ್ನು ಬಲಿಗೊಳ್ಳುವುದೆಂದು ಚಿಂತಿಸುತ್ತಿರುವಿ ತಾನೆ! ಯಾರನ್ಯಾಕೆ! ನಿನ್ನೆದುರಿಗಿರುವನಲ್ಲ! ಏಳನೆ ಸುಮಂಗಲಿಯ ಹಣೆಯ ಮೇಲಿಂದ ಕುಂಕುಮ ತಿಲಕವನ್ನು ಉತಾರ ಮಾಡಲಿರುವ ನನ್ನ ಔರಸಪುತ್ರ ಕ್ಷಮೆಗೆ ಅರ್ಹನಲ್ಲ ನಿಸ್ಸಂದೇಹವಾಗಿ. ಕೊಲೆಗೆ ಪೂರಕವಾಗಿ ನಿರ್ಜನಪ್ರದೇಶ ಪ್ರಶಸ್ತವಾಗಿದೆ. ಹಾತೊರೆಯುತ್ತಿರುವ ಅದರಿಂದ ಇರಿದು ದಾಹ ತಣಿಸು, ಪುಣ್ಯ ಬರುತ್ತೆ" ಎಂದು ಸದ್ಬೋಧ ಚಂದ್ರಿಕೆಯ ಆರನೆ ಚರಣವನ್ನು ಪಾರಾಯಣ ಮಾಡುತ್ತಿರುವ ಉರುಕುಂದಿ! ಆ ವಯೋವೃದ್ಧನ ಸಲಹೆ ಒಂದು ಕಡೆ ಇರಲಿ, ಅಂಥ ಆಲೋಚನೆ ಹೀಗೆ ಬಂದು ಹಾಗೆ ಮರೆಯಾಗಿದ್ದಂತೂ ನಿಜ. ಇನ್ನೇನು ಅದನ್ನು ಅವನಿಗೆ ಮರಳಿಸಬೇಕೆನ್ನಿಸುವಷ್ಟರಲ್ಲಿ! ಅವನು ವಿವಿಧ ಅಂತರಗಳಲ್ಲಿ ನಿಂತು ನನ್ನನ್ನೇ ತದೇಕಚಿತ್ತ ಮತ್ತು ವಿಸ್ಮಯದಿಂದ ನೋಡುತ್ತ..

"ಕೈಯಲ್ಲಿರುವುದರಿಂದ ನಿಮ್ಮ ವರ್ಚಸ್ಸು ಹೆಚ್ಚಿದೆ ನೋಡಿ, ನಿಮಗೂ ಕಳೆ ಬಂತು, ಅದಕ್ಕೂ ವಿಶೇಷ ಘನತೆ ಪ್ರಾಪ್ತವಾಯಿತಣ್ಣಾ, ಕೊಟ್ಟಿದ್ದಕ್ಕೂ ಸಾರ್ಥಕವಾಯಿತು, ಜೋಪಾನಾಗಿಟ್ಟುಕೊಳ್ಳಿ" ಎಂದು ಹೇಳಿದ. ಸ್ವಲ್ಪ ಹೊತ್ತು ಮೌನವಹಿಸಿದ ಬಳಿಕ ತಾನೇ "ಎಷ್ಟು ದಿವಸ ಸಾಧ್ಯವೋ ಅಷ್ಟೂ ದಿವಸ ನಿಮ್ಮ ಬಳಿ ಇಟ್ಟುಕೊಂಡಿರ್ರಿ, ಹೇಗೋ ಊಳೂರಿಗೆ ಹೋಗುವಿರಲ್ಲವೆ! ವನಜಾಕ್ಷಿಗೆ ಕೊಡುವಿರಂತೆ, ಅದೂ ಆಕೆ ಇಷ್ಟಪಟ್ಟಲ್ಲಿ" ಎನ್ನುತ್ತ ನೆಮ್ಮದಿಯ ಉಸಿರು ಚೆಲ್ಲಿದ. ಪುನಃ ಹೇಳಿದ "ಆಕೆ ನೋಡಲು ಅಷ್ಟೇನೂ ಸುಂದರಿಯಲ್ಲ. ಆದರೆ ಆಕೆಯ ಮನಸ್ಸು ಅಪ್ಪಟ ಚಿನ್ನ, ಮುಂದೆ ಹೇಗೋ ಭೆಟ್ಟಿಯಾಗುವಿರಲ್ಲ, ನಿಮಗೇ ತಿಳಿಯುವುದು"

ಹೊರಟು ನಿಂತ ಅವನನ್ನು ಆಪಾದಮಸ್ತಕ ದಿಟ್ಟಿಸಿದೆ. ಮಗುವಿನ ರೂಪ ತಳೆಯುತ್ತಿರುವಂತೆ ಗೋಚರಿಸಿದ. ಎತ್ತಿ ಎದೆಯ ತೊಟ್ಟಿಲಲ್ಲಿ ಮಲಗಿಸಿ ತೂಗಬೇಕೆಂಬ, ತೂಗುತ್ತಲೇ ಎದೆಯೊಳಗೇ ಸಮಾಧಿ ಮಾಡಬೇಕೆಂಬ ಭಾವನೆಯುಂಟಾಯಿತು. ಕ್ರೌರ್ಯದ ಯಾವ ಲಕ್ಷಣವೂ ಇಲ್ಲದ ಇವನು ಕೊಲೆ ಮಾಡಿರಬಹುದೆ! ಅಥವಾ ಸಂಭವಿಸಿರಬಹುದಾದ

ಕೊಲೆಯ ಆಪಾದನೆಯನ್ನು ತನ್ನ ಮೇಲೆ ಎಳೆದುಕೊಂಡಿರಬಹುದೆ! ಅಥವಾ ತನ್ನನ್ನು ತಾನು ವಿಜೃಂಭಿಸಿಕೊಳ್ಳುವ ಸಲುವಾಗಿ ಕ್ರೌರ್ಯ ಸಂಬಂಧೀ ಕಥೆಗಳ ಕಪೋಲಕಲ್ಪಿತ ರೀತಿಯಲ್ಲಿ ಕಟ್ಟುತ್ತಿರಬಹುದೆ! ಎಂದು ಯೋಚಿಸುತ್ತ ಅವನ ನಿರ್ದೇಶನದಲ್ಲಿ ಚೂರಿಯನ್ನು ಸೊಂಟದ ಬೆಲ್ಟಿನ ಸಂಧಿಯಲ್ಲಿ ಭದ್ರಪಡಿಸಿದೆ.

ಇನ್ನೇನು ಹೊರಡಲು ಸಿದ್ಧನಾದ ಅವನ ಕಡೆ ನೋಡಿದೆ. ಅಷ್ಟು ಹೊತ್ತಿಗಾಗಲೆ ಬೆವರು ಅವನ ಹಣೆಯ ವಿಭೂತಿ ಕಟ್ಟುಗಳನ್ನಳಿಸಿ ಕೇವಲ ಕುಂಕುಮ ತಿಲಕವನ್ನು ಮಾತ್ರ ಉಳಿಸಿತ್ತು. ಅದೂ ಅಲ್ಲದೆ ಚಕ್ಕಡಿ ಸಮೀಪಿಸಿ ಸುಮಾರು ನೂರು ಗಜದೂರದಲ್ಲಿ ಗಕ್ಕನೆ ನಿಂತಿತ್ತು, ಅದು ಮಾಮೂಲಿ ಚಕ್ಕಡಿಯಾಗಿರದೆ ಸವಾರಿ ಬಂಡಿಯಾಗಿತ್ತು. ಮುಂಭಾಗದ ಪರದೆಯನ್ನು ಸರಿಸಿ ಯಾರೋ ಇಣುಕುತ್ತಿದ್ದುದು ಸ್ಪಷ್ಟವಾಗಿ ಗೋಚರಿಸಿತು. ಅದಕ್ಕೆ ಕಾವಲಿದ್ದ ಪದಾತಿಗಳೀರ್ವರ ಪೈಕಿ ಒಬ್ಬ ಹುಬ್ಬಿಗೆ ಕೈ ಹಚ್ಚಿ ಯಾರು ಅಲ್ಲಿರೋದು ಎಂದು ಕೂಗಿದ್ದು ಸ್ಪಷ್ಟವಾಗಿ ಕೇಳಿಸಿತು, ಅದೂ ಹಾದಿಬಡುಕರ ಭಯದಿಂದಾಗಿ. ಅವರಿಗೆ ಕೇಳಿಸುವಂತೆ ಕೂಗುವ ತ್ರಾಣ ನನ್ನಲ್ಲಿರಲಿಲ್ಲ. ಆತ್ಮರಕ್ಷಣೆ ಸಲುವಾಗಿ ಆಳೆತ್ತರದ ಬಡಿಗೆಗಳನ್ನು ಹಿಡಿದುಕೊಂಡಿದ್ದ ಅವರು ನಮ್ಮ ಕಡೆಗೂ, ನಾವು ಅವರ ಕಡೆಗೂ ದೃಷ್ಟಿ ಹಾಯಿಸಿದೆವು. ನಿಧಾನವಾಗಿ ಸವಾರಿ ಬಂಡಿ ನಮ್ಮನ್ನು ಸಮೀಪಿಸಿತಲ್ಲದೆ ಅದರಲ್ಲಿದ್ದ ಒಬ್ಬ ನಮ್ಮ ಕಡೆ ಇಣುಕಿ "ನಾವ್ಯಾರೋ ಅಂದುಕೊಂಡಿದ್ದೆ, ಆದರೆ ನೀವು! ಬೇಗನೆ ಹೊರಡಿ ಇಲಾಹಿ ತಪ್ಪಿದರೆ ಇನ್ನೊಂದು ಬಸ್ಸಿಲ್ಲ, ಆದೋನಿಯಲ್ಲಿ ಗಲಾಟೆ ಬೇರೆ!" ಎಂದು ಅನಾಹುತದ ಮುನ್ಸೂಚನೆ ನೀಡಿದ.

ಅವರ ಪೈಕಿ ಒಬ್ಬ ಸಮೀಪಿಸಿದೊಡನೆ ಓಹ್ ಈಶನ್ನ, ಏಮಿ ನುವ್ವಿಕ್ಕಡ! ಎಂದೂ, ಅದಕ್ಕೆ ಶರಭನೂ ಓಹ್ ಮಾರೆನ್ನ ನುವ್ವಿಕ್ಕಡ ಎಂದೂ ಪರಸ್ಪರ ಉದ್ಗಾರ ತೆಗೆದರು. ಸವಾರಿ ಚಕ್ಕಡಿಯೂ ಅದರ ಸಾರಥಿಯೂ ಆದರೊಳಗಿರಬಹುದಾದವರೂ ವಾಗಿಲಿಯ ಅತಿಥಿಗಳೆಂಬುದರಲ್ಲಿ ಅನುಮಾನವಿರಲಿಲ್ಲ. ಏನೋ ಎಂದು ಕೇಳಬೇಕೆನ್ನುವಷ್ಟರಲ್ಲಿ ದೂರದಲ್ಲೆಲ್ಲೋ ಬಸ್ಸಿನ ಹಾರನ್ ಕೇಳಿಸಿತು.

++++

ಒಂದೇ ಉಸಿರಿಗೆ ಓಡಿ ರಸ್ತೆಯನ್ನು ತಲುಪಿದೆ. ಇನ್ನೇನು ಹೊರಡಲಿದ್ದ ಬಸ್ಸನ್ನು ಏರಿದ್ದೊಂದು ಸಾಹಸ! ದೇಹದೊಳಗೆ ರಕ್ತದ ಏರಿಳಿತ, ಸಹಪ್ರಯಾಣಿಕರನ್ನೂ, ಬಸ್ಸಿನ ನಿರ್ವಾಹಕ ಚಾಲಕರನ್ನೂ ಅಶ್ಲೀಲ ಮಾತುಗಳಿಂದ ಥಳಿಸುವ ವಿಚಿತ್ರ ಆಸೆ ಕೆರಳಲಾರಂಭಿಸಿತು, ಹಾಗೆಯೇ ಸೈರಿಸಿಕೊಂಡು ಕುಳಿತೆ. ಅಂತರಂಗದಲ್ಲಿ ರೌದ್ರಾವತಾರ! ಸಹ ಪ್ರಯಾಣಿಕರು ನನ್ನ ಕಡೆ ವಿಲಕ್ಷಣವಾಗಿ ನೋಡುತ್ತಿರುವರು ಎಂದುಕೊಂಡೆ. ಕಂಡಕ್ಟರ್ ಸೀನ, ಡ್ರೈವರ್ ರಫೀಕ್ ಸಹ ನನಗೆ ಚಿರಪರಿಚಿತರು, ಅವರೂ ನನ್ನ ಕಡೆ ರಕ್ತದೊತ್ತಡ ಉಲ್ಬಣಿಸಿರುವರಬಹುದೆನ್ನುವಂತೆ ನೋಡುತ್ತಿರಬಹುದು! ಅದೂ ಅಲ್ಲದೆ ಪಕ್ಕದಲ್ಲಿದ್ದ ಓರ್ವ ವ್ಯಕ್ತಿ ನನ್ನ ಮೈ ಬಿಸಿಗೆ ಹೆದರಿಯೋ, ಇನ್ಯಾತಕ್ಕೋ ಎದ್ದು ನಿಂತನು, ಅದಕ್ಕೆ ನಾನು 'ನೀವು ಕುಳಿತುಕೊಳ್ಳಿ' ಎಂದು ಹೇಳುವ ಸೌಜನ್ಯವನ್ನೂ ಪ್ರಕಟಿಸಲಿಲ್ಲ, ಅದಲ್ಲದೆ ಅಂತರಂಗದ ಮೂಲೆಯಿಂದ ಪುಂಖಾನುಪುಂಖವಾಗಿ ಗಂಟಲಲ್ಲಿ ವಟ್ಟರಿಸುತ್ತಿರುವ ಅಶ್ಲೀಲ ಬಯ್ಗುಳ ಉಪಟಳ ಬೇರೆ, ಸಹಪ್ರಯಾಣಿಕರ ಪೈಕಿ ಯಾರ ಮೇಲೆ ಹಲ್ಲೆ ನಡೆಸುವುದೆಂಬ ವಿಲಕ್ಷಣ ಲೆಕ್ಕಾಚಾರವೂ! ನನ್ನನ್ನು ನಾನು ಹೇಗೆ ನಿಯಂತ್ರಿಸುವುದಪ್ಪಾ ಶಿವನೇ ಎಂದುಕೊಳ್ಳುವಷ್ಟರಲ್ಲಿ

ಡಣಾಪುರ ಕ್ರಾಸು ಬಂದದ್ದೂ ಆಯಿತು, ಇಳಿದದ್ದೂ ಆಯಿತು, ನನ್ನನ್ನಿಳಿಸಿದ ಇಲಾಹಿ ಓಡಿ ಕಣ್ಮರೆಯಾದದ್ದೂ ಆಯಿತು.

ಡಣಾಪುರ ಕ್ರಾಸ್ ವಾಗಿಲಿಯ ಕ್ರಾಸಿನಷ್ಟು ನಿರ್ಜನವಾಗಿರಲಿಲ್ಲ, ಅಲ್ಲಲ್ಲಿ ಕೆಲವರಿಗೆ ಬರವಿರಲಿಲ್ಲ. ಅಷ್ಟು ದೂರದಲ್ಲಿ ನನ್ನ ಕಡೆ ಧಾವಿಸಿ ಬರುತ್ತಿರುವ ವ್ಯಕ್ತಿ ನಿಸ್ಸಂದೇಹವಾಗಿ ಟೀಚರ್. ಸಮೀಪಿಸಿದನೇನೋ ಸರಿ, ಆದರೆ ಲಾಘವ ಮಾಡುವ ಸಲುವಾಗಿ ಚಾಚಿದ ತನ್ನ ಕೈಯನ್ನು ಉಪಸಂಹರಿಸಿಕೊಂಡು ನಖಶಿಖಾಂತ ನೋಡಲಾರಂಭಿಸಿದ, ನನ್ನ ಕಣ್ಣುಗಳಲ್ಲಿ ಕೆಂಪನ್ನೂ, ಬಿಗಿದಿರುವ ಮುಖವನ್ನು ಗಮನಿಸಿಯೋ "ಅಯ್ಯವಾರು, ನೇನು ವೆಂಕಟರಮಣ, ಚಾಗಿಲೋ ಪನಿ ಚೇಸ್ತುನ್ನ ಟೀಚರಂಡೀ" ಎಂದವನು ಹೇಳುತ್ತ ಹತ್ತಿರ ಬಂದ. ಬಯ್ಯುವ ಆಸೆ ಉಕ್ಕಿ ಬಂತಾದರೂ ಸಹಿಸಿಕೊಂಡೆ, ಔನಾ ಎಂದಷ್ಟೆ ನುಡಿದೆ, ಅದೂ ಮಹಾ ಸೊಕ್ಕಿನಿಂದ. ಅವನೂ ಲಾಘವದ ಸಲುವಾಗಿ ಚಾಚಿದ ತನ್ನ ಕೈಯನ್ನು ಉಪಸಂಹರಿಸಿಕೊಂಡ, ತಲೆಕೆಟ್ಟಿರುವುದೆಂಬಂತೆ ಓರೆಗಣ್ಣಿಂದ ನೋಡಿದ, ಇನ್ನೊಬ್ಬ ಅಪರಿಚಿತನೊಂದಿಗೆ ಆದೋನಿಯಲ್ಲಿ ಸಂಭವಿಸಿರುವ ಕೋಮುಗಲಭೆ ಕುರಿತಂತೆ ಅವರಿಬ್ಬರೂ ಮಾತು ಆರಂಭಿಸಿದರು, ಅಷ್ಟರಲ್ಲಿ ಶ್ರೀರಾಮ ಏದುಸಿರುಬಿಡುತ್ತ ಬಂದು ನಿಂತಿತು. ಬಸ್ಸಿನಲ್ಲಿ ಅಗತ್ಯಕ್ಕಿಂತ ಹೆಚ್ಚು ಪ್ರಯಾಣಿಕರಿದ್ದರು, ಅದರ ಟಾಪ್ ಮೇಲೂ ಸಹ. ಆ ದಿವಸ ಆಲೂರಿನಲ್ಲಿ ಸಂತೆ ಬೇರೆ!

ಬಸ್ಸಿನೊಳಗೆ ಜನವೋ ಜನ! ಅವರ ಮೇಲಿವರು, ಇವರ ಮೇಲವರು. ಆದೋನಿಯ ಮುಬಾರಕ್ ಗ್ಯಾರೇಜಿನಲ್ಲಿ ದಿನಂಪ್ರತಿ ಇಲಾಜಿಗೊಳ್ಳುವ ಅದೋ! ನಾಗನಾಥಳ್ಳಿಯಲ್ಲಿ ಜೀವಚ್ಛವದೋಪಾದಿಯಲ್ಲಿ ಇನ್ನೂ ಬದುಕಿರುವ ಅದರ ಮಾಲಕ ತಿಮ್ಮಯ್ಯಶೆಟ್ಟಿಯೋ! ಟಿಕೆಟ್ ಟಿಕೆಟ್ ಎಂದು ಅಂಗಲಾಚುತ್ತ ಬಂದ ಸಣಕಲ ಯುವಕ ನಿಸ್ಸಂದೇಹವಾಗಿ ಶೆಟ್ಟಿಯ ಪಂಚಮ ಸುಪುತ್ರನೇ. ಪೆಟ್ರೋಲು ಸುರಿದು ನಿನ್ನನ್ನೂ ನಿನ್ನ ಲಡಾಸು ಬಸ್ಸನ್ನೂ! ಎಂದು ಇನ್ನೇನು ಹೇಳಿಯೇಬಿಡಬೇಕೆನ್ನುವಷ್ಟರಲ್ಲಿ ಸಹಪ್ರಯಾಣಿಕರ ಪೈಕಿ ಕುಡಿದಿದ್ದ ಇಬ್ಬರು "ನೀಯಮ್ಮ ನೀಯಕ್ಕ ಚಂಪೇಸ್ತಾ ಲೇಪೇಸ್ತಾ ನಾ ಕೊಡುಕಾ ಡಬ್ಬಡಗಿತೆ ಮಮ್ಮಲ್ನಿ ಎವರನುಕುನ್ನಾವ್ರಾ, ಕೋಸಿಗಿ ದೊರ ಪೇರು ವಿನ್ನಾವ ಲೇದಾ!" ಎನ್ನುತ್ತ ಕಂಡಕ್ಟರ್ ಪಾತ್ರಧಾರಿಗೆ ಧಮಕಿ ಹಾಕಲಾರಂಭಿಸಿದರು. ವಾಳ್ಳಿದ್ದರನಿ ಚಂಪೇಯ್ ಎಂದು ಚೂರಿಯೊಳಗಿಂದ ಅಪ್ಪಣೆ ಕೊಡಿಸುತ್ತಿರುವ ಉರುಕುಂದಿ. ಪರಾವರ್ತಿತ ಪ್ರಕ್ರಿಯೆಗೊಳಪಟ್ಟು ಚೂರಿ ಕಡೆ ಧಾವಿಸಲಾರಂಭಿಸಿದ್ದ ನನ್ನ ಕೈಯೋ! ಅದನ್ನು ಅದೇ ಕೈಯಿಂದ ಎಳೆದು ನಿಯಂತ್ರಣದಲ್ಲಿಟ್ಟುಕೊಳ್ಳ ಲಾರಂಭಿಸಿದ್ದ ನನ್ನ ಪರಿಯೋ! ಅದೂ ಅಲ್ಲದೆ ಕುಡಿದು ಗಲಾಟೆ ಮಾಡುತ್ತಿದ್ದವರು ತಮ್ಮನ್ನು ತಾವು ಕೋಸಿಗಿ ದೊರೆಗೆ ಹೋಲಿಸಿಕೊಳ್ಳುತ್ತಿದ್ದುದು, ಅದೂ ಯಕಶ್ಚಿತ್ ಟಿಕೆಟ್ ಮೊತ್ತವಾದ ಐದು ರೂಪಾಯಿ ವಿಷಯದಲ್ಲಿ! ಅವರ ಬಳಿ ಹಣಕ್ಕೇನು ಕೊರತೆ ಇರಲಾರದು, ಆದರೆ ಕೇಳಿದರೆ ಅದೊಂದು ತಮಗಾದ ಸಾಮಾಜಿಕ ಅವಮಾನವೆಂದು ಭಾವಿಸುವುದು ಅಂಥವರ ಜಾಯಮಾನ. ಅರೆ ಇಷ್ಟೊಂದು ಕರಾರುವಕ್ಕಾಗಿ ಆಲೋಚಿಸುವ ನಾನು! ಥೂ! ನನ್ನ ಹಾಳಾದ ಜಾಯಮಾನವೆ! ಲೋಹಿಯಾ ಗಾಂಧಿ ಮಾರ್ಕ್ಸ್ ವಗೈರೆ ವಗೈರೆ ಓದಿಕೊಂಡಿರುವ ನನಗೂ ಅವರಿಗೂ ವ್ಯತ್ಯಾಸವಿಲ್ಲ. ನನ್ನೊಳಗೆ ಇಂಥ ಮನುಷ್ಯ ವಿರೋಧಿ ಭಾವನೆಗಳನ್ನು ಹುಟ್ಟು ಹಾಕುತ್ತಿರುವ ಚೂರಿ ಸೊಂಟದಲ್ಲಿರುವುದೇ ಕಾರಣವೆಂದೆನ್ನೆನಿಸಿತು. ಮುಖದ ಬಿಗುವನ್ನು ತಿಳಿಗೊಳಿಸಲಾರದಷ್ಟು ಅಸಹಾಯಕತೆಯನ್ನು ಸೃಷ್ಟಿಸಿರುವ ಅದನ್ನು

ಬಹುದೂರ ನಿರ್ಜನ ಪ್ರದೇಶದಲ್ಲಿ! ಬೇಡ ಬೇಡ! ಅದು ಯಾರ ಕೈಗಾದರೂ ದೊರಕಿ ಅವರ ಅಮಾಯಕತ್ವದ ಮೇಲೆ ಬರೆ ಎಳೆದಲ್ಲಿ! ಚೂರಿಯೊಳಗೆ ಅವಿತು ನಗುತ್ತಿರುವ ಉರುಕುಂದಿ ನನಗೆ ಅಪರಿಚಿತ, ಅವನ ವ್ಯಕ್ತಿತ್ವವನ್ನು ಸೃಜನಶೀಲ ರೀತಿಯಲ್ಲಿ ಊಹಿಸಿಕೊಂಡೆ, ಹೇಗಿದ್ದಾನು ಅವನು? ಇದರಿಂದ ಎಷ್ಟು ಜನರ ಕೊಲೆ ಮಾಡಿರಬಹುದು ಅವನು? ಅವನಿದನ್ನು ಎಲ್ಲಿಂದ ಯಾರಿಂದ ಇದನ್ನು ತೋಫಾ ರೂಪದಲ್ಲಿ ಪಡೆದಿರಬಹುದು? ಕಾಣಿಕೆ ಕೊಟ್ಟಿರಬಹುದಾದ ಇನ್ನೋರ್ವನೋ! ಯೋಚಿಸಲಾರಂಭಿಸಿದಂತೆ ಹಣೆ ಮೇಲೆಲ್ಲಾ ಬೆವರು ಕಾಣಿಸಿಕೊಂಡಿತು, ಅದನ್ನು ನಿವಾರಿಸಿಕೊಳ್ಳುವ ವ್ಯವಧಾನ ನನ್ನಲ್ಲಿರಲಿಲ್ಲ.

"ಅಯ್ಯವಾರು ಮೀರಿಕ್ಕಡ ಇಳಿತೀರೋ ಅಥವಾ ಜೊಹರಾಮಪುರಕ್ಕೆ ಟಿಕೆಟ್ ತೀಸ್ಕುಂಟಾರೋ!" ಎಂದು ಕಂಡಕ್ಟರ್ ಕಂ ಬಸ್ಸಿನ ಮಾಲಕ ಕೇಳಿದ. ವಾಸ್ತವಕ್ಕೆ ಮರಳಿದೆ ಕಣ್ಣಗಲಿಸಿ ನೋಡಿದೆ. ಇಳಿಯುವವರು ಇಳಿದಾಗಿರುವುದು, ಹತ್ತುವವರು ಹತ್ತಿಯಾಗಿರುವುದು. ಲಗುಬಗೆಯಿಂದ ಕೆಳಗಿಳಿದೆ, "ನಾನೂ ನಿನ್ನ ಹಾಗೆ ನಾಗರೀಕನಯ್ಯಾ, ಈ ಹಾಳಾದ ಚೂರಿ ಸೊಂಟಕ್ಕಂಟಿರುವ ಕಾರಣದಿಂದಾಗಿ ಅನಾಗರಿಕ ರೀತಿಯಲ್ಲಿ ವರ್ತಿಸಿದೆ, ದಯವಿಟ್ಟು ಕ್ಷಮಿಸುವಿಯಾ" ಎಂದು ಅಂಗಲಾಚುವ ಸಲುವಾಗಿ ಕಣ್ಣುಗಳಿಂದ ಹುಡುಕಾಡುತ್ತೇನೆ, ಚಾಗಿ ಟೀಚರ್ ವೆಂಕಟರಮಣ ಅಗೋ ಅಲ್ಲಿ! ಕಣ್ಣಿಗೆ ಧ್ವನಿಗೆ ನಿಲುಕದಷ್ಟು ದೂರದಲ್ಲಿ! ಓಡೋಡಿ ಅವನನ್ನು ತಲುಪಬೇಕೆಂಬ ಪ್ರಯತ್ನಕ್ಕೆ ಅಡ್ಡಗಾಲು ಹಾಕುತ್ತಿರುವ ಚೂರಿಯೂ, ಅದರೊಳಗಿಂದ ಕೆಕ್ಕರಿಸಿ ನಗುತ್ತಿರುವ ಉರುಕುಂದಿಯೂ, ನನ್ನ ಅಣ್ಣ, ಅಲ್ಲಲ್ಲ ನನ್ನ ಆಪದ್ಬಾಂಧವ, ಅಲ್ಲಲ್ಲ ನನ್ನ ಮತ್ತು ವನಜಾಕ್ಷಿ ನಡುವಿನ ಅಪರೂಪದ ಮಾನವೀಯ ಸೇತುವೆ ಶರಭನ ದಿನಚರಿಯನ್ನು ಊಹಿಸಿಕೊಂಡೆ.

ಈಗಾಗಲೆ ತಾನು ವಾಗಿಲಿಯನ್ನು ಪ್ರವೇಶಿಸಬಹುದು, ಗುರುಬಸಪ್ಪನೊಂದಿಗೆ ಮಾತು ಕತೆಯನ್ನಾರಂಭಿಸಿರಬಹುದು, ತಾನು ಆತನ ಬಳಿ ತನ್ನ ಪ್ರೇಮ ಸಂಬಂಧೀ ಪೂರ್ವಾಪರ ಹೇಳಿರಬಹುದು, ಹೇಳದೆ ಇರಲೂಬಹುದು! ಯೋಚಿಸುತ್ತ ಸಮಿತಿ ಕಡೆ ಚಾಚಿದ್ದ ರಸ್ತೆಯನ್ನು ತಲುಪಿದೆ. ಸೊಂಟದಲ್ಲಿರುವ ಆಯುಧದೊಂದಿಗೆ ಮೀಟಿಂಗಿಗೆ ಹೋದರೆ! ಅಲ್ಲಿನ ಶಿಕ್ಷಣಾಧಿಕಾರಿಯನ್ನು ಚೂರಿ ತೋರಿಸಿ ಹೆದರಿಸಿದರೆ! "ಅರೆ ಲಂಚಗೊಂಡಿ ಮಕ್ಕಳ ಹೊಟ್ಟೆ ಮೇಲೆ ಬಡಿದು ನಿನಗೆ ಮಧ್ಯಾಹ್ನದ ಬಿಸಿಯೂಟದ ಪೈಕಿ ಪಾವಲಿ ಭಾಗ ಕೋಡಬೇಕೇನೋ ಬೇಕೂಫ! ಶಿಕ್ಷಕರನ್ನು ಕರಪ್ಟ್ ಮಾಡುವ ನಿನ್ನಂಥವರು ಬದುಕಿರಬಾರದು" ಎಂದು ಹೇಳಿ ಭ್ರಷ್ಟ ವೇಣುಗೋಪಾಲನನ್ನು ಎಲ್ಲರ ಸಮಕ್ಷಮ ಕೊಲೆ ಮಾಡಿದರೆ! ಛೇಛೆ! ಅಲ್ಲಿಗೆ ಹೋಗುವುದಕ್ಕೂ ಮೊದಲು ನಾನಿದನ್ನು! ಬಹಿರ್ದೆಸೆ ನೆಪದಲ್ಲಿ ನೀರೊಳಗೆ ಎಸೆಯುವ ಸಲುವಾಗಿ ಹತ್ತಿರದಲ್ಲಿದ್ದ ಕೆರೆ ಕಡೆ ಹೋದೆ. ಅಲ್ಲಿನ ನೀಲಿವರ್ಣದ ಜಲನಿಧಿ "ಅಯ್ಯೋ ಹಾದಿಹೋಕರಿಗೆ ಅವರ ಮುಖ, ತಿಕಗಳನ್ನು ಅಹರ್ನಿಶಿ ಪ್ರಕ್ಷಾಳನದಂಥ ಪವಿತ್ರ ಕಾರ್ಯಗಳಿಗೆ ಸಹಕರಿಸುತ್ತಿರುವ, ಅನಾಥ ರಾಸು ಪಕ್ಷಿಗಳ ದಾಹ ತಣಿಸುತ್ತಿರುವ, ಆಗಸದ ಮುಖಕ್ಕೆ ಕನ್ನಡಿ ಹಿಡಿಯುತ್ತಿರುವ, ನಿರುಪದ್ರವಿ ಜಲಜರಗಳಿಗೆ ಆಶ್ರಯ ಕಲ್ಪಿಸಿರುವ ನನ್ನೊಳಗೆ ಅದನ್ನೆಸೆದು ಅಪವಿತ್ರಗೊಳಿಸಬೇಡವೋ!" ಎಂದು ಕೈಮುಗಿದು ಕೇಳಿಕೊಂಡಂತೆ ಭಾಸವಾಯಿತು. ಆಳದಲ್ಲಿ ಹೂತಿಡುವ ಸಲುವಾಗಿ ಹತ್ತಿರದಲ್ಲಿ ಸ್ಮಶಾನಕ್ಕೆ ಹೋದೆ. ಅಲ್ಲಿನ ನೆಲವೂ! ಎಸೆಯುವ ಸಲುವಾಗಿ ಶೂನ್ಯದ ಕಡೆ ದಿಟ್ಟಿಸಿದೆ, ಅಲ್ಲಿನ ಬಯಲೂ! ಪೋಲಿಸ್ ಠಾಣೆಯಲ್ಲಿ ದುರಂತ ಮರಣಕ್ಕೀಡಾಗಿ ಕೆರೆಯ ದಡದಲ್ಲಿ ಅನಾಥ ಹೆಣವಾಗಿ ಕಾಣಿಸಿಕೊಂಡ ಕಾಮ್ರೇಡ್ ಪನ್ನಂಗಧರ ನೆನಪಾದ.

ಆ ಸಖಿನ ಕಳೇಬರ ಸಾರ್ವಜನಿಕವಾಗಿ ಗೋಚರಿಸಿದ್ದು ಇಲ್ಲೋ ಅಲ್ಲೋ! ಎಲ್ಲೋ ಒಂದು ಕಡೆ! ಅಯ್ಯೋ ಎಂಥ ದುರಾದೃಷ್ಟ ನಿನ್ನದು! ಮುಪ್ಪಾಳ್ ಲಕ್ಷ್ಮಣರಾವ್ ಅವರನ್ನು ನೋಡುವ, ಪರಿಚಯ ಮಾಡಿಕೊಳ್ಳುವ ಸೌಭಾಗ್ಯ ನಿನ್ನ ಹಣೆಯಲ್ಲಿ ಬರೆದಿರಲಿಲ್ಲವಲ್ಲಾ! ನಿನಗೂ ಲಾಕಪ್ ಡೆತ್ ಅಂದರೇನೆಂಬುದನ್ನು ಪರಿಚಯಿಸುವ ನನ್ನಾಸೆ ಈಡೇರಲಿಲ್ಲವಲ್ಲಾ! ಸರ್ಕಾರಿ ನೌಕರಿ ಎನ್ನುವ ಸಂರಕ್ಷಕ ಪರಿಧಿಯೊಳಗಿಂದ ನಿನ್ನನ್ನು ಬಿಡಿಸಿ ಹೋರಾಟ ಎಂಬ ನೇಣುಗಂಭಕ್ಕೆ ಬಂಧಿಸುವ ನನ್ನ ಆಸೆ ಪೋಲಿಸರಿಂದಾಗಿ ಮಣ್ಣುಗೂಡಿತಲ್ಲಾ! ಎಂದು ಮುಂತಾಗಿ ಪನ್ನಂಗಧರ ಸಾರಿ ಹೇಳುತ್ತಿರುವಂತೆ ಭಾಸವಾಯಿತು. ದುರ್ಮರಣಕ್ಕೀಡಾದ ಆ ಸಖಿನ ನೆನಪಿನ ಶೃಂಖಲೆಯಿಂದ ಬಿಡಿಸಿಕೊಳ್ಳುತ್ತಲೇ ಚೂರಿಯನ್ನು ಸೊಂಟದಿಂದ ತೆಗೆದು ಮೆಲ್ಲಗೆ ಬ್ಯಾಗಿನೊಳಗೆ ಅಡಗಿಸಿ ನೆಮ್ಮದಿಯ ಉಸಿರುಬಿಟ್ಟು ನಿರಮ್ಮಳಗೊಂಡೆ. ಅದರೊಂದಿಗೆ..

ಬಸ್ ಸ್ಟ್ಯಾಂಡ್‌ಗೆ ಅಂಟಿಕೊಂಡಂತಿರುವ ಉಡುಪಿ ಶ್ರೀಕೃಷ್ಣ ಭವನಕ್ಕೆ ಹೋದೆ. ನೋಡಿದೊಡನೆ ಅದರ ಮಾಲಕ ಹೆಬ್ಬಾರ್ "ಹೇಗಿದ್ದೋರು ಹೇಗಾಗಿಬಿಟ್ಟಿರುವಿರಲ್ಲಾ! ಮೈಯಲ್ಲಿ ಹುಷಾರಿಲ್ವೆ? ಬನ್ನಿ ಬನ್ನಿ, ಲೇ ಈರಣ್ಣಾ ಸಾಹಿತಿಗಳಿಗೆ ಜಾಕ್‌ಪಾಟ್ ಮಾಡಿಕೊಡೋ" ಎಂದು ನುರಿತ ನಾಡಿತಜ್ಞನಂತೆ ಸ್ವಾಗತಿಸಿದ. ಲೋ ಹೆಬ್ಬಾರ ನನ್ನಗೇನಾಗಿದೆಯೋ ಧಾಡಿ! ಅದೇನು ರೋಗ ಇದ್ದರೆ ನಿನಗೆ ನಿಮ್ಮಪ್ಪನಿಗೆ ಎಂದು ಗರ್ಜಿಸುವಂತೆ ಪುಸಲಾಯಿಸುತ್ತಿರುವ ಬ್ಯಾಗಿನೊಳಗಿನ ಚೂರಿ! "ನಾನೇನಾದರೂ ಅಸ್ವಸ್ಥನಿದ್ದಲ್ಲಿ ಅದರ ಶ್ರೇಯಸ್ಸು ನಿಸ್ಸಂದೇಹವಾಗಿ ಬಿರುಬಿಸಿಲಿಗೆ ಸಲ್ಲಬೇಕು ರಾಯರೆ" ಎಂದು ಬಲವಂತದಿಂದಲೂ, ತೋರಿಕೆಯಿಂದಲೂ ಹೇಳಿದಾದ ಬಳಿಕ ಜಾಕ್‌ಪಾಟ್ ಹೆಸರಿನ ಚಹಾ ಸೇವಿಸಿ "ರಾಯರೆ ಮೀಟಿಂಗ್ ಇದೆ, ಅದನ್ನು ಮುಗಿಸಿಕೊಂಡು ಬಂದು ಇದನ್ನೊಯ್ಯುವೆನು, ಅಲ್ಲಿವರೆಗೆ ಇದನ್ನು ಗಲ್ಲಾಪೆಟ್ಟಿಗೆ ಬಳಿ ಜೋಪಾನವಾಗಿ ಇಟ್ಟುಕೊಂಡಿರಿ" ಎನ್ನುತ್ತ ಉಗುಳು ನುಂಗಿದೆ, ಅದೂ ಪವಿತ್ರ ಗಲ್ಲಾಪೆಟ್ಟಿಗೆ ಬಳಿ! ತನ್ನ ಮೈದಾನಗಾತ್ರದ ಮುಖವನ್ನು ಹ್ರಸ್ವಗೊಳಿಸುತ್ತ ಹೆಬ್ಬಾರ್ "ಸಾಹಿತಿಗಳೆ, ನೀವು ಹೇಳೋದು ನೋಡಿದರೆ ನನಗ್ಯಾಕೋ ಅನುಮಾನ, ಇದರಲ್ಲಿ ಬಾಂಬುಗಳಿವೆಯೋ ಹೇಗೆ! ಮೊದಲೇ ನೀವು ವಾಗಿಲಿಯಲ್ಲಿ ಕೆಲಸ ಮಾಡುವ ಜನ!" ಎಂದು ಹೇಳಿದಾದ ಬಳಿಕ "ಸುಮ್ಮನೆ ತಮಾಷೆ ಮಾಡಿದೆ, ಈ ನಿಮ್ಮ ಬ್ಯಾಗಿನಲ್ಲಿ ಕಾದಂಬರಿಗಳೇನಾದರೂ ಇದ್ದರೆ ತೆಗೆದುಕೊಳ್ಳಲೇನು!" ಎಂದ ಸಹಜವಾಗಿ. ಪರಾವರ್ತಿತ ಪ್ರತಿಕ್ರಿಯೆಗೆ ಒಳಪಟ್ಟು ನಾನು "ಹಾಗೇನಾದರೂ ಓಪನ್ ಮಾಡೀರಾ ಮತ್ತೆ! ಅದರೊಳಗೆ ಕಥೆನೂ ಇಲ್ಲ ಕಾದಂಬರೀನೂ ಇಲ್ಲ" ಎಂದು ಹೇಳುವುದೇನೋ ಹೇಳಿದಾದ ಬಳಿಕ "ಅದರಲ್ಲಿ ಇಂಪಾರ್ಟೆಂಟ್ ಲೆಟರ್ಸ್ ಇವೆ, ಅದಕ್ಕೆ ಹೇಳಿದ್ದು" ಎಂದು ಸರಿಪಡಿಸಿಕೊಂಡೆ. ಓಹ್ ಹಾಗೋ ಎಂದು ಸಮ್ಮತಿಸಿ ಅದರ ಕಡೆಗೊಮ್ಮೆ ನನ್ನ ಕಡೆಗೊಮ್ಮೆ ನೋಡುತ್ತ ಬಲಗೈಯಿಂದ ಬಲಗೆನ್ನೆ ತುರಿಸಿಕೊಂಡ.

ಅರ್ಧ ತಾಸು ಲೇಟಾಗಿ ಆಫೀಸ್ ತಲುಪಿದೆ, ಏಮಂಡಿ ಮೀಲಾಂಟಿ ಕವುಲು ನಿಲಸ್ಯಂಗಾ ವಸ್ತೆ ಎಟ್ಲಾ! ಎಂದು ವೇಣುಗೋಪಾಲ್ ವ್ಯಂಗ್ಯ ಮಾತುಗಳಿಂದ ಸ್ವಾಗತಿಸಿದ. ಕರ್ನೂಲಿನಲ್ಲಿ ತರಬೇತಿ ಪಡೆದು ಬಂದಿದ್ದ ನೇಮಕಲ್ ವಿಠ್ಠಲ ಪೌಷ್ಟಿಕಾಂಶಗಳಿಂದ ನರಳುತ್ತಿರುವ ಗ್ರಾಮೀಣ ಮಕ್ಕಳ ಕುರಿತಂತೆಯೂ, ರಾಘವೇಂದ್ರ ಆಹಾರಕ್ಕೂ ಮಕ್ಕಳ ಶಾಲಾ ಹಾಜರಾತಿಗೂ ಇರುವ ಸಂಬಂಧ ಕುರಿತಂತೆಯೂ ಭಾಷಣ ಬಿಗಿಯಲಾರಂಭಿಸಿದರು. ಆದರೆ ನನ್ನ ಗಮನ ಅವರ ಕಡೆಗಿರದೆ ಹೋಟಲ್ಲಿನಲ್ಲಿಟ್ಟು ಬಂದಿರುವ ಬ್ಯಾಗಿನ ಕಡೆಗಿತ್ತು. ಅಕಸ್ಮಾತ್ ಹೆಬ್ಬಾರ್ ಏನಾದರೂ ಕುತೂಹಲದಿಂದ ಅದನ್ನು ಬಿಚ್ಚಿ ನೋಡಿದಲ್ಲಿ! ಅಥವಾ ಚೂರಿ ಹಿಡಿದು

ತೋರಿಸುತ್ತ ನಿರುಪದ್ರವಿಗೆ ಗಿರಾಕಿಗಳ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದರೆ ಹೇಗೆ ಎಂದು ಯೋಚಿಸಿದಲ್ಲಿ! ಅಥವಾ ಚಹಾ ಪಾನಕ್ಕಾಗಿ ಬಂದಿರಬಹುದಾದ ಪೋಲಿಸರ ವಶಕ್ಕೆ ಅದನ್ನು ಒಪ್ಪಿಸಿದಲ್ಲಿ! ನನ್ನ ಅನುಮಾನಗಳು ಒಂದೇ ಎರಡೆ! ಕೂಡಲೆ ಲೂಜ್ ಮೋಷನ್ ನೆಪ ಹೇಳಿ ಅಲ್ಲಿಂದ ಹೊರಟು ಹೋಟಲ್ ತಲುಪಿ ನೋಡುತ್ತೇನೆ, ಹೆಡ್ ಕಾನ್‌ಸ್ಟೇಬಲ್ ಅಲಿಯೊಂದಿಗೆ ಹೆಬ್ಬಾರ್ ಹರಟುತ್ತಿರುವ ದೃಶ್ಯ ಕಂಡು ಹೌಹಾರಿದೆ.

ಷೌಕತ್ ಅಲಿ ಪ್ರತ್ಯಕ್ಷವಾಗಿ ಅಪ್ರತ್ಯಕ್ಷವಾಗಿ ನನಗೂ ಪರಿಚಿತನೆ! ಆ ನೀಳಕಾಯದ ವ್ಯಕ್ತಿ ಹಿಂದೆ ನಕ್ಸಲ್ ನಿಗ್ರಹ ಪಡೆಯಲ್ಲಿದ್ದಂಥವನೆ, ಪನ್ನಂಗಧರನ ಸಂಪರ್ಕದಲ್ಲಿದ್ದ ನನ್ನನ್ನೂ ಅನುಮಾನಿಸುತ್ತಿದ್ದವನೆ, ಮುಗುಳ್ನಗೆ ಎಂಬ ಬಲೆ ಬೀಸಿ ಅದರಲ್ಲಿ ಅಮಾಯಕರನ್ನು ಕೆಡವಿ ಬಗೆಬಗೆಯಾದ ಹಿಂಸೆ ನೀಡುವುದರ ಮೂಲಕ ಪೋಲಿಸ್ ಇಲಾಖೆಗೆ ಆದರ್ಶಪ್ರಾಯವಾಗಿದ್ದವನೆ, ಲೇಖಕನಾದವನಿಗೆ ಕನಿಷ್ಟಪಕ್ಷ ನಕ್ಸಲ್‌ಬಾರಿ ಸಿದ್ಧಾಂತಗಳ ಬಗ್ಗೆ ಅನುಕಂಪವಿರಬೇಕೆಂದು ಅನುಮಾನಿಸುತ್ತಲೇ ಪರಿಚಿತನಾಗಿದ್ದವನೆ, ಒಮ್ಮೆ ಕೇಳಿದ್ದಕ್ಕೆ ನಾನವನಿಗೆ "ಹೌದು ಅನುಕಂಪವಿದೆ, ನಾನು ಬರೆಯುತ್ತಿರುವ ಕಥೆಗಳೆಲ್ಲವೂ ಒಂದಲ್ಲಾ ಒಂದು ಆ ಚಳವಳಿಗೆ ಪರೋಕ್ಷವಾಗಿ ಸಂಬಂಧಿಸಿದಂಥವುಗಳೆ, ಅಂದ ಮಾತ್ರಕ್ಕೆ ನನ್ನನ್ನು ಬಂಧಿಸಿ ವಿಚಾರಣೆಗೊಳಪಡಿಸಬಹುದಲ್ಲವೆ!" ಎಂದು ಕೇಳಿದ್ದೆ ಅವನ ಮಾತಿಗೆ ರೋಸಿ. ಅದಕ್ಕವನು "ನಿಮ್ಮಂಥವರನ್ನು ಆರೆಸ್ಟ್ ಮಾಡುತ್ತ ಹೋದರೆ ಈಗಿರುವ ಜೈಲುಗಳು ಸಾಲುವುದಿಲ್ಲ ಟೀಚರ್ ಸಾಬ್" ಎಂದು ನಗಾಡಿದ್ದ.

ಆಲೂರು ಆಸುಪಾಸೊಳಗೆ ತಿಂಗಳಿಗೊಂದಾದರೂ ಸಂಭವಿಸುತ್ತಿದ್ದ ಕೊಲೆಗಳೋ! ಅವನಿಗೆ ತಿಳಿದಿರಬಹುದಾದ ಜಮೀನ್ದಾರಿ ಕ್ರೌರ್ಯಕ್ಕೆ ಸಂಬಂಧಿಸಿದ ಕಥೆಗಳೋ! ಕಥನಕುತೂಹಲದಿಂದಾಗಿಯೋ! ಆತನನ್ನು ತೀರಾ ಹಚ್ಚಿಕೊಂಡಿದ್ದೆ. ಹೀಗೆ ಆರಂಭಗೊಂಡ ನಮ್ಮಿಬ್ಬರ ಪರಿಚಯ ಬೈಟು ಕಾಫಿವರೆಗೆ ಬೆಳೆದಿತ್ತು. ಅವನೊಂದಿಗೆ ಮಾತಿಗಿಳಿದಿರುವ ಹೆಬ್ಬಾರ್ ಸಹ ತನ್ನ ಪೂರ್ವಜನ್ಮದಲ್ಲಿ ನಕ್ಸಲೈಟಾಗಿದ್ದಂಥವನೋ! ಎನ್‌ಕೌಂಟರ್‌ಗೆ ಬಲಿಯಾಗಿ ಹುತಾತ್ಮನಾಗಿದ್ದಂಥವನೋ! ಪ್ರಳಯಾಂತಕ ಲೇಖಕನಾಗಿದ್ದಂಥವನೋ! ಪೋಲಿಸ್ ಮಾಹಿತಿದಾರನಾಗಿದ್ದಂಥವನೋ! ಅಥವಾ ದಕ್ಷಿಣಕನ್ನಡದ ಯಾವುದೋ ಒಂದು ಮಠದ ಸ್ವಾಮಿಯಾಗಿದ್ದಂಥವನೋ! ಏನೋ! ವ್ಯವಕಲನ ಸಂಕಲನಗಳನ್ನು ಒಟ್ಟಿಗೆ ನಿಭಾಯಿಸುವುದರ ಮೂಲಕ, ನಿರರ್ಗಳ ರೀತಿಯಲ್ಲಿ ಬಹುವಚನ ಸಂಬೋಧವಾಚಕಗಳನ್ನು ಉಪಯೋಗಿಸುವ ಮೂಲಕ, ತನ್ನ ಮಾತಿನ ಚಾಣಾಕ್ಷತೆಯಿಂದ ಕುಬ್ಜರನ್ನು ಎತ್ತರದವರನ್ನಾಗಿಯೂ, ಎತ್ತರದವರನ್ನು ಕುಬ್ಜರನ್ನಾಗಿಯೂ ಪರಿವರ್ತಿಸುವುದರ ಮೂಲಕ ಆಲೂರಿನಲ್ಲಿ ಸಾರ್ವಜನಿಕವಾಗಿಯೂ ಜನಪ್ರಿಯಗೊಂಡಿದ್ದ. ಅಲ್ಲದೆ ತಾನು ಒಂದು ರೀತಿಯಲ್ಲಿ ಪೋಲಿಸ್ ಸಂಬಂಧೀ ಮಾಹಿತಿಯನ್ನು ಅಪರಾಧಿಗಳಿಗೂ, ಅಪರಾಧಿ ಸಂಬಂಧಿ ಮಾಹಿತಿಯನ್ನು ಪೋಲಿಸರಿಗೂ ಸಮಾನಾಂತರದಲ್ಲಿ ವಿತರಿಸುವುದರ ಮೂಲಕ ಅಂದರಿಕಿ ಮಂಚಿವಾಡು ಎಂಬ ಬಿರುದನ್ನು ಗಳಿಸಿಕೊಂಡಿದ್ದ. ಈ ಪ್ರಕಾರವಾಗಿ ತನ್ನ ಹೋಟಲ್‌ಗೆ ಅಪರಾಧಿಗಳನ್ನೂ, ಪೋಲಿಸರನ್ನೂ, ಅಪರಾಧ ಮತ್ತು ಪೋಲಿಸ್ ಉಭಯ ತಂಡಗಳಿಗೆ ಹತ್ತಿರವಾಗಿದ್ದವರನ್ನೂ ಆಯಸ್ಕಾಂತದೋಪಾದಿಯಲ್ಲಿ ಆಕರ್ಷಿಸುತ್ತ ವ್ಯಾಪಾರ ವಹಿವಾಟನ್ನು ದ್ವಿಗುಣಗೊಳಿಸಿಕೊಳ್ಳುತ್ತಲೇ ಇದ್ದನು.

ಇನ್ನೇನು ಒಳಗಡೆ ಹೆಜ್ಜೆ ಇಡಲಿದ್ದ ನಾನು ತುಸು ಹಿಂದೆ ಸರಿದು ನಿಂತು ಇಣುಕಿ ಗಮನಿಸಲಾರಂಭಿಸಿದೆ. ಅವರಿಬ್ಬರೂ ನಿಂತಿರುವುದು ಸಲಿಂಗ ರತಿಕ್ರೀಡಾಪಟುಗಳ ರೀತಿಯಲ್ಲಿ.

ಪರಸ್ಪರ ಇಂಗಾಲಾಮ್ಲ ವಿತರಿಸಿಕೊಳ್ಳುತ್ತಲೇ ಗುಸುಗುಸು ಮಾತಾಡುತ್ತಿರುವರು, ಅದಲ್ಲದೆ ಅವರ ಚಂಚಲ ನೇತ್ರಗಳು ಸುತ್ತಲೂ ಹರಿದಾಡುತ್ತಿರುವವು. ಹೆಬ್ಬಾರ ನನ್ನ ಬ್ಯಾಗಿನೊಳಗಿನ ಚೂರಿಯನ್ನು ತೆಗೆದು ಅವನಿಗೆ ತೋರಿಸಿದ್ದರೆ! ಹ್ಞು ಹ್ಞೂಂ! ಇರಲಿಕ್ಕಿಲ್ಲ, ತೋರಿಸಿದ್ದರೆ ಅದೀಗಾಗಲೆ ಅವರ ಪೈಕಿ ಒಬ್ಬರ ಕೈಯಲಿರಬೇಕಿತ್ತು. ವಾಪಸ್ಸು ಹೊರಡುವುದೋ! ಅವರ ಚರ್ಚೆಯ ನಡುವೆ ಭಾಗವಹಿಸುವುದೋ! ನೋಡು ನೋಡುತ್ತಿದ್ದಂತೆ ನನ್ನ ದೇಹದ ಉಷ್ಣತಾಮಾನ ಹೆಚ್ಚಿತು. ಬಾಯಿ ಶುಷ್ಕಗೊಳ್ಳುತ್ತಿರುವ ಅನುಭವ ಬೇರೆ. ಶಂಬಯ್ಯಶಾಸ್ತ್ರಿಗಳ ವಿರಚಿತ ನನ್ನ ಜಾತಕದ ಎಂಬತ್ತೆರಡನೆ ಪುಟದಲ್ಲಿ 'ಇಪ್ಪತ್ತೈದನೆ ವಯಸ್ಸಿನಲ್ಲಿ ಸೆರೆವಾಸ' ಎಂದಿರುವುದು ಬೇರೆ, ಕೊಟ್ಟೂರಿನಲ್ಲಿರುವ ಅಪ್ಪನಿಗೆ ಶಾಸ್ತ್ರಿಗಳು "ಹಾಲಪ್ಪ ನಿನ್ನ ಜೇಷ್ಠಪುತ್ರನ ಗ್ರಹಗತಿ ಮಹಾಲಯ ಅಮವಾಸ್ಸೆ ಗತಿಸಿದ ಬಳಿಕ ಚೆನ್ನಾಗಿಲ್ಲ, ಎಳ್ಳಮವಾಸ್ಸೆಯೊಳಗೆ ಬೆಳ್ಳಿಯ ಗೋವನ್ನು ಜಂಗಮರಿಗೆ ದಾನ ಮಾಡು ಎಂದು ಹೇಳಿದರೂ ನೀನು ಕೇಳಿಸಿಕೊಳ್ಳಲಿಲ್ಲ, ಇನ್ನೂ ನೀನು ಅಲಕ್ಷ್ಯ ಮಾಡಿದಿ ಎಂದರೆ ಅವನಿಗೆ ಈ ಸಂವತ್ಸರದ ಮಧ್ಯೆ ಸೆರೆವಾಸ ಯೋಗವಿರುವುದು" ಎಂದು ಹೇಳುತ್ತ ತಮ್ಮ ಹಣ್ಣಾದ ಮೀಸೆಯನ್ನು ನೀವಿಕೊಳ್ಳುತ್ತಿರಬಹುದು, ಅದಕ್ಕೆ ಆ ಪ್ರಳಯಾಂತಕ ತಂದೆಯು "ಏನೆಲ್ಲಾ ಮಾಡಿರುವ ನಾನೇ ಹೋಗಿಲ್ಲ ಸ್ವಾಮಿ, ಅದು ಹೇಗೆ ನನ್ನ ಮಗ ಹೋದಾನು! ನಮ್ಮ ವಂಶದವರಿಗೆ ಎದುರಾಳಿಗಳನ್ನು ಜೈಲಿಗೆ ಕಳಿಸುವುದು ಗೊತ್ತೇ ಹೊರತು ಹೋಗುವುದು ಮಾತ್ರ ಅಸಂಭವ, ಹುಲಿಯ ಹೊಟ್ಟೆಯಲ್ಲಿ ಹುಲಿ ಹುಟ್ಟದೆ ಇಲಿ ಹುಟ್ಟುವುದೇನು ಸ್ವಾಮಿ!" ಎಂದು ಹೇಳಿ ನಗುತ್ತಿರಬಹುದು. ಒಂದಂತೂ ನಿಜ, ಅದೆಂದರೆ ಸ್ವಾಭಿಮಾನಧನನೆಂದೇ ಕೊಟ್ಟೂರು ಪ್ರಾಂತದಲ್ಲಿ ಹೆಸರಾಗಿರುವ ಅಪ್ಪ ಜೈಲಿಗೆ ಹೋಗಲು ಅಥವಾ ತನ್ನ ವಿರೋಧಿಗಳನ್ನು ಜೈಲಿಗೆ ಕಳಿಸಲು ಏನೆಲ್ಲ ಯತ್ನ ಪ್ರಯತ್ನ ಮುಂದುವರೆಸಿರುವುದು. ತನ್ನಂತಾಗಲು ನನ್ನನ್ನೂ ಹುರಿದುಂಬಿಸುತ್ತಿರುವುದಂತೂ ನಿಜ, ನನ್ನ ಪಂಚೇಂದ್ರಿಯಗಳನ್ನು ಗುತ್ತಿಗೆ ಪಡೆದು ತಾನು ಕ್ರಿಯಾಶೀಲನಾಗಿರುವುದೂ ನಿಜ, ಆತನನ್ನು ನನ್ನ ಅಂತರಂಗದಿಂದ ಬೇರ್ಪಡಿಸಲು ನಾನು ಅಹರ್ನಿಶಿ ಶ್ರಮಿಸುತ್ತಿರುವುದೂ ನಿಜ. ಯೋಚಿಸುತ್ತ ಹಿಂದಕ್ಕೆ ಹೋಗುವುದೋ, ಅವರ ಕಣ್ಣಳತೆಯಲ್ಲಿ ಬಂಧಿಯಾಗುವುದೋ! ಒಂದು ಕ್ಷಣ ನನ್ನ ಮನಸ್ಸು ಹೊಯ್ದಾಡಿತು. ಇನ್ನೇನು ಮರೆಯಾಗಬೇಕೆನ್ನುವಷ್ಟರಲ್ಲಿ! ಇನ್ನೇನು ಕಾಣಿಸಿಕೊಳ್ಳಬೇಕೆನ್ನುವಷ್ಟರಲ್ಲಿ! ಅವರ ಮಂತ್ರಾಲೋಚನೆಯನ್ನು ಕೇಳಿಸಿಕೊಳ್ಳುವ ಸಲುವಾಗಿ ನನ್ನೆರಡೂ ಕಿವಿಗಳನ್ನು ಮಾರುದ್ದ ಬೆಳೆಸಬೇಕೆನ್ನುವಷ್ಟರಲ್ಲಿ! ಗತಕಾಲದ ಮಧುರ ಕ್ಷಣಗಳನ್ನು ನೆನಪಿಸಿಕೊಳ್ಳುವುದರ ಮೂಲಕ ಬಾಯಿಯ ಶುಷ್ಕತೆಯನ್ನು ನಿವಾರಿಸಿಕೊಳ್ಳಬೇಕೆನ್ನುವಷ್ಟರಲ್ಲಿ!

ಮಸಾಲೆ ದೋಸೆಯ ವಿವಿಧ ಅಪರಾವತಾರಗಳನ್ನು ಹೋಲುತ್ತಿದ್ದ ಈರಣ್ಣ ನೋಡಿದನೆ ಅಲ್ಯಾಕೆ ನಿಂತೀರಿ ಬರ್ರಿ ಸಾರ್ ಎಂದು ನನ್ನ ಇರುವಿಕೆಯನ್ನು ಜಾಹಿರುಪಡಿಸಿದ. ಅವಿಬ್ಬರು ಒಟ್ಟಿಗೆ ನೋಡಿದ ನಂತರ ಇನ್ನೇನಿದೆ! ಮೆಲ್ಲಗೆ ಒಳಪ್ರವೇಶಿಸುವುದು ಅನಿವಾರ್ಯವಾಯಿತು. "ಬನ್ನಿ ಬನ್ನಿ, ಇಷ್ಟೊತ್ತಿನವರೆಗೆ ನಾವು ನಿಮ್ಮ ಬಗ್ಗೆ ಮಾತಾಡುತ್ತಿದ್ದೆವು" ಎಂದು ಹೆಬ್ಬಾರೂ, "ನೀವು ಖಂಡಿತ ನೂರು ವರ್ಷ ಬದುಕಿರ್ತೀರಿ" ಎಂದು ಅಲಿಯೂ! ಇಷ್ಟು ಸಾಕು ತಾನೆ ಅಂತರಂಗದಲ್ಲಿ ಕಿಚ್ಚು ಹೊತ್ತಿಸಲು! ಈ ಉತ್ತರ ಧ್ರುವವೂ ಆ ದಕ್ಷಿಣ ಧ್ರುವವೂ ಗೈರು ಹಾಜರಿಯಲ್ಲಿ ನನ್ನ ಕುರಿತು ಏನೇನು ಆಡಿಕೊಂಡಿರುವರೋ ಏನೊ! ದೇವರೇ ಈ ಮುಠ್ಠಾಳ ಹೆಬ್ಬಾರ ನನ್ನ ಬ್ಯಾಗನ್ನು ತೆರೆಯದಿದ್ದಲ್ಲಿ, ತೆರೆದು ಅದರೊಳಗಿನ ಚೂರಿಯನ್ನು ಅಲಿಗೆ ಕೊಟ್ಟಿರದಿದ್ದಲ್ಲಿ! ಅಂತರಂಗದಲ್ಲಿ ಬೇಡಿಕೊಳ್ಳುತ್ತ ಮುಖದಲ್ಲಿ ಅಮಾಯಕತ್ವವನ್ನು

ಆರೋಪಿಸಿಕೊಳ್ಳುತ್ತ, ಅವರ ಯಾವ್ಯಾವ ಪ್ರಶ್ನೆಗಳಿಗೆ ಯಾವ್ಯಾವ ಉತ್ತರಗಳನ್ನು ಕೊಡಬಹುದೆಂದು ತಾಲೀಮು ನಡೆಸುತ್ತ, ಮುಖದ ಬೆವರನ್ನು ತಲುಪುವ ಮೊದಲೇ ಒರೆಸಿಕೊಳ್ಳುವುದೋ ಅವರ ಸಮಕ್ಷಮ ಒರೆಸಿಕೊಳ್ಳುವುದೋ ಎಂದು ಯೋಚಿಸಿ ಕರವಸ್ತ್ರದ ಸಲುವಾಗಿ ಪ್ಯಾಂಟಿನ ಜೇಬೊಳಗೆ ಕೈತೂರಿಸುತ್ತ ಮೆಲ್ಲಗೆ ನಡೆದು ಹಾಜರಾದೆ.

ಔಪಚಾರಿಕವಾಗಿ ಉಭಯಕುಶಲೋಪರಿ ಮುಗಿಯಿತು. ಬಳಿಕ ಹೆಬ್ಬಾರ್ ಕಣ್ಣು ಮಿಟುಕಿಸಿದನೋ! ನಾನೆ ಹಾಗೆ ಅಪಾರ್ಥ ಮಾಡಿಕೊಂಡೆನೋ! ಅಲಿ "ನಿಮ್ಮ ನೌಕರಿ ತುಂಬಾ ವಾಸಿ ಮೇಸ್ಟ್ರೆ, ನಮ್ಮದಿದೆ ನೋಡಿ ಹೆಣ ಕಾಯುವ ದರಿದ್ರ ನೌಕರಿ, ಕೆಲಸಕ್ಕೆ ರಾಜಿನಾಮೆ ನೀಡಿ ಬಸ್‌ಸ್ಟ್ಯಾಂಡ್ ಪಕ್ಕ ಬೀಡಿ ಅಂಗಡಿ ಇಟ್ಟುಕೊಂಡು ಆರಾಮಾಗಿರಬೇಕೆನಿಸುತ್ತೆ, ಆದರೆ ಏನು ಮಾಡುವುದು ಹೆಂಡರು ಮಕ್ಕಳು ಬೇರೆ! ನಾನು ಈ ಪೋಲಿಸ್ ನೌಕರಿ ಸೇರಿ ಹದಿನೈದು ವರ್ಷ ಆಯಿತು, ಆದರೆ ಒಂದೇ ಒಂದು ಪ್ರಮೋಷನ್ನಿಲ್ಲ, ಅಲ್ಲಿ ಅವನ ಕೊಲೆ ಇಲ್ಲಿ ಇವನ ಕೊಲೆ. ಹೇಸಿಗೆ ಹುಟ್ಟಿಸುತ್ತೆ ಹಾಳಾದ ನೌಕರಿ!" ಎಂದು ನಿಟ್ಟುಸಿರುಬಿಡುತ್ತ ಹೇಳಿದ.

"ಅಯ್ಯೋ ಬಿಡಿ, ಈ ಪ್ರಪಂಚದಲ್ಲಿ ಯಾರು ಸುಖವಾಗಿದ್ದಾರೆ ಹೇಳಿ! ಅವರವರ ತೊಂದರೆ ತಾಪತ್ರಯಗಳು ಅವರವರಿಗೆ" ಎಂದು ಸರ್ವನಾಮವಾಚಕದಲ್ಲಿ ಹೇಳಿದಾದ ಬಳಿಕ ಹೆಬ್ಬಾರ್ ನನ್ನನ್ನುದ್ದೇಶಿಸಿ "ಮೇಸ್ಟ್ರೇ ನೀವು ಬರೆಯುವುದಾದರೆ ಅಲಿಯ ತಲೆಯಲ್ಲಿ ಒಳ್ಳೆಯ ಸಬ್ಜಕ್ಟಿದೆ ನೋಡಿ" ಎಂದು ಪುಸಲಾಯಿಸಿದ.

ಹಚ್ಚಿಕೊಳ್ಳಲೆಂದು ಜೇಬಿನಿಂದ ಸಿಗರೇಟ್ ಪ್ಯಾಕ್ ತೆಗೆದು ಅದನ್ನು ಪುನಃ ತನ್ನ ಜೇಬಿಗೆ ಮರಳಿಸುತ್ತ ಅಲಿ "ಮೇಸ್ಟ್ರು ನಮ್ಮ ಜೊತೆ ಒಂದು ತಿಂಗಳಿರಲಿ, ಒಂದು ಯಾಕೆ! ನೂರು ಕಥೆಗಳಿಗಾಗುವಷ್ಟು ಸಬ್ಜಕ್ಟುಗಳನ್ನು ಫ್ರೀಯಾಗಿ ಕೊಡುವೆನು. ಒಂದಕ್ಕಿಂತ ಒಂದು ಅದ್ಭುತ, ಓದಿದವರ ಟೆಂಪರೇಚರ್ ನೂರು ದಾಟಬೇಕು ಅಂಥ ಕಥೆಗಳಿವೆ ನಮ್ಮ ಫೈಲೊಳಗೆ" ಎಂದು ಹೇಳಿದ್ದಾದ ಬಳಿಕ ಮುಂದುವರಿದು "ಆಲೂರಿಗೆ ಬಂದಾಗಲೆಲ್ಲ ನಮ್ಮ ಸ್ಟೇಷನ್ನಿಗೆ ಬಂದು ಹೋಗಿ ಅಂತ ಸಾವಿರಸಲ ಕೇಳಿಕೊಂಡಿರುವೆ, ಒಂದು ಸಲವಾದರು ಬಂದಿರುವಿರೇನು ನೀವು! ಇನ್ನೊಮ್ಮೆ ಬರಲಿಲ್ಲವೆಂದರೆ ನಾನೇ ಪ್ರೀತಿಯಿಂದ ಆರೆಸ್ಟು ಮಾಡಿ ಸ್ಟೇಷನ್ನೊಳಗೆ ಕೂಡ್ರಿಸುವೆ. ಸುಮ್ಮನೆ ತಮಾಷೆಗೆ ಹೇಳಿದೆ, ತಪ್ಪು ತಿಳಿಯಬೇಡಿ, ನಾವು ಪೋಲಿಸರು, ನಮಗೆ ಸ್ಟೇಷನ್ ಬಿಟ್ಟರೆ ಇನ್ನೊಂದು ಪ್ರಪಂಚ ತಿಳಿಯದು. ನಿಮ್ಮಂಥ ಕಥೆಗಾರರೊಂದಿಗೆ ಹರಟಿ ರಿಲ್ಯಾಕ್ಸ್ ಮಾಡಿಕೊಳ್ಳಬೇಕೆಂಬ ಆಸೆ ನಮಗೂ ಇರುವುದು. ಇನ್ನೊಂದು ಇಂಟರೆಸ್ಟಿಂಗಾದ ಸಂಗತಿ ಎಂದರೆ ಪುಲಿವೆಂದುಲದಿಂದ ಮೊನ್ನೆಯಷ್ಟೆ ಟ್ರಾನ್ಸಫರ್‌ಗಾಗಿ ಬಂದಿರುವ ನಮ್ಮ ಎಸ್ಸೈ ಅಶೋಕ್ ಸಾಹೇಬರಿಗೆ ಸಾಹಿತ್ಯವೆಂದರೆ ಹುಚ್ಚು, ಸಿಕ್ಕ ಸಿಕ್ಕ ಪುಸ್ತಕಗಳ್ನೆಲ್ಲ ಓದುವುದು ಅವರ ಹಾಬಿ. ಅವರನ್ನು ನಿಮಗೆ ಪರಿಚಯ ಮಾಡಸಿಕೊಡಬೇಕೆಂದಿರುವೆ. ಎಷ್ಟೊತ್ತಿಗೆ ಫ್ರೀಯಾಗುವಿರಿ?" ಎಂದು ಸೌಜನ್ಯಯುತವಾಗಿಯೇ ಕೇಳಿದ.

ಹೊಸ ಎಸ್ಸೈ ಆಲೂರಿಗೆ ಬಂದಿರುವುದು ಎಷ್ಟು ನಿಜವೋ ಜನರು ಆತನ ಕುರಿತು ಮಾತಾಡಿಕೊಳ್ಳುತ್ತಿರುವುದು ಸಹ ಅಷ್ಟೇ ನಿಜ. ಫ್ಯೂಡಲ್ ಲಾರ್ಡ್ಸ್‌ಗಳ ಸ್ವರ್ಗವೆಂದೇ ಹೆಸರಾಗಿರುವ ಪುಲಿವೆಂದುಲದಲ್ಲಿ ಅಲ್ಲಿನ ಫ್ಯಾಕ್ಷನಿಷ್ಟ್ ರಾಜಾರೆಡ್ಡಿ ಈತನ ಸಹಾಯದಿಂದಲ್ಲವೆ ತನ್ನ ಹತ್ತಾರು ವಿರೋಧಿಗಳ ಹುಟ್ಟಡಗಿಸಿದ್ದು! ಅಲ್ಲೆಲ್ಲ ಎನ್‌ಕೌಂಟರ್ ಸ್ಪೆಷಲಿಸ್ಟ್ ಎಂದು ಹೆಸರಾಗಿರುವುದು. ಕೋನೇಟಿ ಹರಿಶ್ಚಂದ್ರರೆಡ್ಡಿ ರಾಜಾರೆಡ್ಡಿಯನ್ನು ಕಡಪಾದ ಸೆವೆನ್ ರೋಡ್ಸ್ ಸರ್ಕಲ್‌ನಲ್ಲಿ ಕೊಲೆ ಮಾಡಿಸಿದ ಮಾರನೆ ದಿವಸವೇ ಹೋಂ ಮಿನಿಸ್ಟರ್ ಮಾಧವರೆಡ್ಡಿಯ

ಶಿಫಾರಸ್‌ನಿಂದ ದೂರದ ಈ ಕಡೆ ಬಂದಿರುವುದು. ಅಂಥ ಕ್ರೂರಿಯ ಪೂರ್ವಾಪರ ನನಗೆ ತಿಳಿದಿಲ್ಲವೆಂದುಕೊಂಡಿರುವಂತಿದೆ ಈ ಮೂರ್ಖ! ಆದರೂ..

"ಹೌದೇನು! ತುಂಬಾ ಸಂತೋಷ, ಮುಂದಿನ ಸಲ ಬಂದಾಗ ಭೆಟ್ಟಿ ಮಾಡಿದರಾಯಿತು" ಎಂದೆ. ಅದುವರೆಗೆ ಸುಮ್ಮನಿದ್ದ ಹೆಬ್ಬಾರ್..

"ಅಯ್ಯೋ ಎಸ್ಯೆ ಕಥೆ ಹಾಗಿರಲಿ, ಮುಖ್ಯವಾದ ವಿಷಯಕ್ಕೆ ಬರುತ್ತಿಲ್ಲವಲ್ಲ ಅಲಿ ಸಾಬ್! ನಿಮ್ಮ ಹೆಗಲ ಮೇಲಿರುವ ಕಥೆಯನ್ನು ಕಥೆಗಾರರ ಹೆಗಲಿಗೆ ವರ್ಗಾಯಿಸಿ ಮೊದಲು" ಎಂದು ಹೇಳಿದ ನಂತರ ನನ್ನನ್ನುದ್ದೇಶಿಸಿ "ಕಥೆ ಬರೆಯಲಿಕ್ಕೆ ಒಳ್ಳೆ ಸಬ್ಜಕ್ಟು ಕಣ್ರೀ, ಇದನ್ನು ಬರೆಯಿರಿ ಮೊದಲು, ಬರೆದಿರೆಂದರೆ ಅದು ಸಿನಿಮಾನೂ ಆಗುತ್ತೆ, ಹಣ ಹೆಸರೂ ಬರುತ್ತೆ ನೋಡಿ, ಜನ ನೀವಿರುವಲ್ಲಿಗೆ ಓಡಿ ಬರುವರು ನೋಡಿ, ಅದಕ್ಕೆಂದೇ ಅಲ್ಲವೆ ನೀವು ವಾಗಲಿಯಲ್ಲಿರುವುದು!" ಎಂದು ನಕ್ಕನು. ಆ ಮಾತಿನಿಂದ ಬೇಸರವಾದರೂ ತೋರಿಸಿಕೊಳ್ಳಲಿಲ್ಲ ನಾನು.

ಅಲಿ ನುರಿತ ಪ್ಯಾರಾಸೈಕಾಲಾಜಿಸ್ಟ್ ಥರ ನನ್ನ ಮುಖದ ಕಳವಳಿಕೆಗಳನ್ನು ಪರಿಶೀಲಿಸುತ್ತ ತನ್ನೆಡಗೈಯನ್ನು ಮೆಲ್ಲಗೆ ಸಮವಸ್ತ್ರದ ಜೇಬಿನ ಬಳಿಗೆ ಒಯ್ದನು, ಅದರೊಳಗೆ ನಿಗೂಢ ಅಡಗಿರುವುದೆಂಬಂತೆ.

"ಒಂದು ಫೋಟೋ ತೋರಿಸುವೆನು, ಅದನ್ನು ನೋಡಿ ಆ ವ್ಯಕ್ತಿ ಇಂಥವನೇ ಎಂದು ಊಹಿಸಿ ಹೇಳಿದಿರೆಂದರೆ ನೀವು ಒಳ್ಳೆ ಕಥೆಗಾರರೆಂದು ಒಪ್ಪಿಕೊಳ್ಳುವೆನು, ಸರೀನ!" ಎಂದು ತಣ್ಣಗೆ ಕೇಳಿದ.

"ಅಯ್ಯೋ ಅದಕ್ಕೇನು! ಕಥೆಗಾರರೆಂದರೆ ಹಸ್ತಸಾಮುದ್ರಿಕದವರಿದ್ದಂತೆ, ನೋಡಿದ ಕೂಡಲೆ ಖಂಡಿತ ಹೇಳೇ ಹೇಳುವರು, ಅಲ್ಲವೆ ಸಾರ್!" ಎಂದ ಹೆಬ್ಬಾರ್, ತನ್ನ ಸಹವಾಸ ಮಾಡಿದವರಿಗೆ ಇದೇ ತಕ್ಕ ಶಾಸ್ತಿ ಎಂಬಂತೆ.

"ಓಹ್! ಹಾಗೋ! ತೋರಿಸುವೆ" ಎನ್ನುತ್ತ ತನ್ನ ಖಾಕಿ ವರ್ಣದ ಜೇಬಿನಿಂದ ಮೆಲ್ಲಗೆ ತೆಗೆದು ಕೊಟ್ಟ. ನೋಡಿದೆ. ನಗು ಸೂಸುವ ದುಂಡು ಮುಖ ನೀಳನಾಸಿಕ ಹೊಳೆಯುವ ಕಣ್ಣುಗಳು ಚಿಗರುಮೀಸೆ! ಹಿಂದೆ ಎಲ್ಲೋ ನೋಡಿರುವಂಥ ಚಿರಪರಿಚಿತ ಮುಖ! ಫೋಟದಲ್ಲಿರುವುದು ಶರಭನಿರಬಹುದು ಅಥವಾ ಅವನಲ್ಲದಿರಬಹುದು! ಆಥವಾ ಅವನೇ ಇವನಾಗಿದ್ದರೇನು ಹೇಳುವುದು! ಆ ಕ್ಷಣ ನನ್ನ ಮುಖ ವಿವರ್ಣಗೊಳ್ಳಲು ಏನೆಲ್ಲ ಪ್ರಯತ್ನ ಮಾಡಿತು. ಬೆವರು ಪ್ರಕಟಿಸಲು ಪ್ರಯತ್ನಿಸಿದ ದೇಹದ ಶ್ವೇಧರಂದ್ರಗಳನ್ನು ಪಾಗೆ ಸಂಕುಚನಗೊಳಿಸುವ ಪ್ರಯತ್ನ ಮಾಡಿದೆ. ಕರವಸ್ತ್ರಕ್ಕಾಗಿ ಹಾತೊರೆಯಲಾರಂಭಿಸಿದ ಎಡಗೈಯನ್ನು ಜುಲುಮಿಯಿಂದ ನಿಯಂತ್ರಿಸಿದೆ. ಮಂಜುಗವಿಯಲಾರಂಭಿಸಿದ ಕಣ್ಣುಗಳನ್ನು ಪಾಗೆ ಶುಷ್ಕಗೊಳಿಸಿದೆ. ನಾಗಾಲೋಟದಲ್ಲಿ ಮುನ್ನುಗ್ಗಲಿದ್ದ ಭಯವನ್ನು ಕುತೂಹಲದ ಹಿಂದೆ ನಿಲ್ಲಿಸುತ್ತ, ಅತುಲ ಪರಾಕ್ರಮದಿಂದ ಕಣ್ಣುಗಳನ್ನು ಸ್ವಲ್ಪ ಸ್ವಲ್ಪಾಗಿ ತೆರೆದು ನೋಡಿದೆ ಪುನಃ! ಶರಭನನ್ನೂ, ಅವನು ನನಗೆ ಸ್ಮರಣಿಕೆ ರೂಪದಲ್ಲಿ ನೀಡಿರುವ ಚೂರಿಯನ್ನೂ ನೆನಪು ಮಾಡಿಕೊಂಡೆ, ಕಣ್ಣುಗಳನ್ನು ಅರಳಿಸಿದೆ. ಸಂತೋಷದಿಂದ...

ಅಮಾಯಕನಂತೆ ವಿವಿಧ ಅಂತರಗಳಲ್ಲಿ ನೋಡುತ್ತ ಮುಗಳ್ನಕ್ಕೆ, ಯಾರವನೆಂದು ಹೇಳಿ ಎಂದು ಅಲಿ ಕೇಳಿದ್ದಕ್ಕೆ ನಾನು "ಅರೆ ಶೋಭನಬಾಬು! ನಾನೀತನ ಫ್ಯಾನು, ಆತ ತನ್ನ ಹರೆಯ ಕಾಲದಲ್ಲಿ ತೆಗೆಸಿಕೊಂಡಿರಬಹುದಾದ ಫೋಟೊ!" ಎಂದು ಅಭಿಪ್ರಾಯ ತಿಳಿಸಿದೆ. ಕೇಳಿದ ಅವರಿಬ್ಬರು ನಕ್ಕರು. "ಹ್ಞೂಹ್ಞು ಅಲ್ಲ.. ಮತ್ಯಾರಿರಬಹುದೆಂದೂಹಿಸಿ" ಎಂದ ಅಲಿ,

ಅದಕ್ಕೆ ನಾನು ಉದಯೋನ್ಮುಖ ಸಂಗೀತಗಾರ, ಇಲ್ಲವೆ ಯಾವುದಾದರೊಂದು ಮಠದ ಸಂಭವನೀಯ ಗುರು, ಅದಾಗಿರದಿದ್ದಲ್ಲಿ ರಂಗಕಲಾವಿದ.. ಅಥವಾ ರಾಜಕಾರಣಿಯ ಪುತ್ರ.. ಹೀಗೆ ಹೇಳುತ್ತ ಹೋದಂತೆ ತನ್ನ ತಲೆಯನ್ನು ಅಡ್ಡಡ್ಡವಾಗಿ..

"ಖಂಡಿತ ಈ ವ್ಯಕ್ತಿಯನ್ನು ನೀವು ನೋಡಿರಲೂಬಹುದು, ನೋಡಿಲ್ಲದಿರಲೂಬಹುದು, ಇಮ್ಯಾಜಿನೇಷನ್ ಈಜ್ ಸ್ಟ್ರಾಂಗರ್ ದ್ಯಾನ್ ನಾಲೆಡ್ಜ್! ಸುಮ್ಮನೆ ನೆನಪಿಸಿಕೊಳ್ಳುತ್ತ ಕಲ್ಪಿಸಿಕೊಳ್ಳುತ್ತ ಹೋಗಿ ಮೇಸ್ಟ್ರೆ" ಎಂದು ಇಂಟರಾಗೇಷನ್ ಮಾಡುವ ರೀತಿಯಲ್ಲಿ ಕೇಳಿದ.

ಈತ ನನ್ನನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿರುವನೆಂದು ಅರ್ಥ ಮಾಡಿಕೊಂಡೋ, ಅಲ್ಲಿಂದ ಬಚಾವಾದರೆ ಸಾಕೆಂದೋ ನಾನು "ಒಳ್ಳೆಯ ಕಥೆಯಾಯಿತಲ್ಲ ನಿಮ್ಮದು! ನನಗೇನು ಗೊತ್ತು ಈತ ಯಾರೆಂಬುದು!" ಎಂದು ಸಿಡುಕಿದೆ.

"ನಿಮಗಿಂತ ನಾನೆ ಎಷ್ಟೋ ವಾಸಿ ನೋಡಿ ಮೇಸ್ಟ್ರೇ! ತೋರಿಸಿದ ಕೂಡಲೆ ತಡಮಾಡದೆ ಅಲಿ ತಮ್ಮ ಮಗಳಿಗೆ ನೋಡಿರುವ ವರ ಎಂದೂಹಿಸಿದೆ, ಆದರೆ ನೀವು!" ಎಂದು ಹೆಬ್ಬಾರ್ ಕೊಂಕು ನಗೆ ನಕ್ಕ.

"ಅರೆ ಹೌದೇನು! ಎಂಗೇಜ್‌ಮೆಂಟಾಯಿತೇನು ಅಲಿಸಾಬ್! ಹುಡುಗ ಏನು ಓದಿದ್ದಾನೆ! ಯಾವ ಕೆಲಸದಲ್ಲಿದ್ದಾನೆ! ಮದುವೆ ಈ ವರ್ಷಾನೋ ಮುಂದಿನ ವರ್ಷಾನೋ! ಮದುವೆ ಕರೆಯುವುದನ್ನು ಮರೆಯಬಾರದು ನೋಡಿ, ಏನೇ ಆಗಲಿ ಷುಕ್ರಿಯಾ" ಎಂದು ಆತನ ಕೈಕುಲುಕಿದೆ. ನನ್ನ ಮಾತಿನಿಂದ ಅಲಿ ಕಸಿವಿಸಿಗೊಂಡ, ಬೇಸರಗೊಂಡ. ಪುನಃ ಚೇತರಿಸಿಕೊಂಡು..

"ರ್‍ರೀ ಭಟ್ಟರೆ ನಿಮ್ಮ ತಮಾಷೆ ಅತಿಯಾಯಿತು" ಎಂದು ಹೆಬ್ಬಾರ್ ಕಡೆ ಹೇಳಿದಾದ ಬಳಿಕ ನನ್ನ ಕಡೆ ತಿರುಗಿ "ನೀವು ಹೆಬ್ಬಾರರಿಗಿಂತ ಬುದ್ದಿವಂತರಿರಬಹುದೆಂದು ಭಾವಿಸಿದ್ದೆ, ಆದರೆ ಅದು ಈಗ ಸುಳ್ಳಾಯಿತು ನೋಡಿ. ಇವರೆಲ್ಲ ನಿಮ್ಮನ್ನು ಕಥೆಗಾರ ಅಂತ ಅಪಾರ್ಥ ಮಾಡಿಕೊಂಡಿದ್ದಾರೆಯೇ ಹೊರತು ನಿಮ್ಮ ಕಥೆಗಳನ್ನು ಓದಿಲ್ಲ, ನಾನಂತೂ ಸರಿ, ನೀವಾದರೂ ಓದಿರುವುದು ಬೇಡವೇನು ಹೆಬ್ಬಾರ್! ಕಥೆಗಾರರೆಂದ ಮೇಲೆ ಇಮ್ಯಾಜಿನೇಷನ್ ವಾಸ್ತವಕ್ಕೆ ಹತ್ತಿರವಿರಬೇಕು, ಅದುಬಿಟ್ಟು" ಎಂದು ನನ್ನ ಸೃಜನಶೀಲತೆಯನ್ನು ಅವಮಾನಿಸಿದ, ಅನುಮಾನಿಸಿದ. ಅದರಿಂದ ಕೆರಳಿದಂತೆ ನಟಿಸುತ್ತ ಹೆಬ್ಬಾರ್..

"ನಿಮ್ಮಲ್ಲಿರುವ ಫೋಟೋ ಹಾಗಿದೆ ಅಲಿ! ಫೋಟೋದಲ್ಲಿರುವ ವ್ಯಕ್ತಿ ಒಳ್ಳೆಯ ಸಿನೆಮಾ ಯಾಕ್ಟರ್ ಥರಾ ಇರುವುದರಿಂದ ನಾನೂ ತಮಾಷೆ ಮಾಡಿದ್ದು, ಮೇಸ್ಟ್ರು ಪರಪಾಟಿಗೆ ಬಿದ್ದದ್ದು" ಎಂದು ಸಮಜಾಯಿಷಿ ನೀಡಿದಾದ ಬಳಿಕ ಮುಂದುವರಿದು "ಕಥೆ ಬರೆಯುವವರು ಎಂದ ಮಾತ್ರಕ್ಕೆ ಅವರೇನು ತ್ರಿಕಾಲಜ್ಞಾನಿಗಳಲ್ಲ, ಇವರು ಬರೆದಿರುವ ಕಥೆಗಳನ್ನು ನಾನೂ ಓದಿರುವೆ, ಇವರು ಬರೆದಿರುವ ಕಥೆಗಳಲ್ಲಿ ಪೋಲಿಸರು ಮಾಡುವ ಕೆಲಸಗಳನ್ನು ಕ್ರಿಮಿನಲ್ಸು ಮಾಡುತ್ತಾರೆ, ಕ್ರಿಮಿನಲ್ಸು ಮಾಡುವ ಕೆಲಸಗಳನ್ನು ಪೋಲಿಸರು ಮಾಡುತ್ತಾರೆ. ಆದ್ದರಿಂದಲೇ ಅವು ಕರ್ನಾಟಕದಲ್ಲಿ ತುಂಬಾ ಜನಪ್ರಿಯ. ಅಲ್ಲಿಂದ ಇವರನ್ನು ಇಲ್ಲಿಗೆ ಓಡಿಸಿರುವುದು ಇವರು ಬರೆದಿರುವ ಕಥೆಗಳೆ! ಕಥೆಗಳ ಕಾರಣದಿಂದಾಗಿಯೇ ನಮ್ಮ ಈ ಮೇಸ್ಟ್ರು ವಾಗಿಲಿಯಲ್ಲಿರುವುದು, ಅಲ್ಲವೇನ್ರಿ! ಅಲಿ ನೀವೊಮ್ಮೆ ವಾಗಿಲಿಗೆ ಹೋಗಿ ಅಲ್ಲಿ ನಾಲ್ಕು ದಿವಸ ಇದ್ದು ಬನ್ನಿ, ಆಗ ತಿಳಿಯುತ್ತೆ ನಮ್ಮ ಈ ನಮ್ಮ ಕನ್ನಡ ಮಾಸ್ತರರ ಪವರ್ರು ಏನೂಂತ!" ಎಂದು ಇನ್ನೊಂದು ಬಣವೆಗೆ ಕಡ್ಡಿಗೀರಿದ.

ಆತನ ಮಾತಿನಲ್ಲಿನ ಗೂಢಾರ್ಥ ಗ್ರಹಿಸಿದ ಅಲಿ ನನ್ನ ಕಡೆ ಅಪಾದಮಸ್ತಕ ದಿಟ್ಟಿಸಿದ. ಊಹಾ ಶಕ್ತಿಯಿಂದ ಪ್ರಕಟಿತ ಅಪ್ರಕಟಿತ ಕಥೆಗಳನ್ನು ಕ್ಷಣಾರ್ಧದಲ್ಲಿ ಓದಿ ಮುಗಿಸಿದವನಂತೆ ಗೋಚರಿಸಿದ. ಕಣ್ಣುಗಳನ್ನು ಹಸ್ವಗೊಳಿಸಿ ಪುನಃ ಅರಳಿಸಿದ. ಮುಖವನ್ನು ತುಸು ಮೇಲೆತ್ತಿ ಏನನ್ನೋ ಲೆಕ್ಕಹಾಕುತ್ತಿರುವವನಂತೆ ಭಯ ಹುಟ್ಟಿಸಿದ. ಪೋಲಿಸ್ ಇಲಾಖೆ ವಿರುದ್ಧ ಬರೆಯುವುದೆಂದರೆ ವ್ಯವಸ್ಥೆ ವಿರುದ್ಧ ಸರ್ಕಾರಗಳ ವಿರುದ್ಧ ಬರೆಯುವುದು, ಇಂಥ ಸೃಜನಶೀಲ ಪ್ರಳಯಾಂತಕರನ್ನು ಶಿಕ್ಷಿಸಲು ತರಾವರಿ ಕಿರುಕುಳ ನೀಡಲು ಇಂಡಿಯನ್ ಪಿನಲ್ ಕೋಡ್‌ನ ಯಾವ ಯಾವ ಛಾಪ್ಟರ್‌ಗಳಲ್ಲಿ ಏನೇನು ಹೇಳಿರಬಹುದೆಂದು ತನ್ನ ಮನಸ್ಸಿನಲ್ಲಿ ಪರಿಶೀಲಿಸುತ್ತಿರಲೂಬಹುದು ಈ ಅಲಿ ಎಂದುಕೊಂಡೆ. ಕ್ರಮೇಣ ಸಹಜ ಸ್ಥಿತಿಗೆ ಬಂದ ಅಲಿ ನಾಟಕೀಯವಾಗಿಯೂ ಅಭಿಮಾನಪೂರ್ವಕವಾಗಿಯೂ ನನ್ನ ಕಡೆ ನೋಡಿದ.

"ನಿಮ್ಮ ಕರ್ನಾಟಕ ಪೋಲಿಸರಿಗಿಂತ ಆಂಧ್ರದ ಪೋಲಿಸರಾದ ನಾವು ತುಂಬಾ ಒಳ್ಳೆಯವರು ಮೇಸ್ಟ್ರೇ. ಎಲ್ಲಿ ಹಿಂಸೆ ಶೋಷಣೆ ಇರುವುದೋ ಅಲ್ಲೆಲ್ಲ ಪೋಲಿಸರು ಒಳ್ಳೆಯವರಿರುತ್ತಾರೆ. ನಿಮಗಾಗಲೀ ಹೆಬ್ಬಾರಗಾಗಲೀ ಗೊತ್ತಿರುವುದೋ ಇಲ್ಲವೋ! ನಾನೂ ಒಳ್ಳೆಯ ತಬಲಾವಾದಕ. ಆಗಾಗ್ಗೆ ಪದಗಳನ್ನೂ ಹಾಡುವುದುಂಟು. ನಮ್ಮ ಹೊಸ ಎಸ್ಯೆ ಮನಸ್ಸು ಮಾಡಿದ್ದಲ್ಲಿ ಒಳ್ಳೆಯ ಕಥೆಗಳನ್ನು ಬರೆಯಬಹುದಾಗಿತ್ತು. ಆದರೆ ಎಫ್ಯೆಆರ್ ಬರೆಯುವುದು ಹೊರತುಪಡಿಸಿದರೆ ಇನ್ನೊಂದು ಸಾಲು ಬರೆಯಲಿಕ್ಕಾಗುತ್ತಿಲ್ಲ, ನಿಮ್ಮ ಕಥೆಗಳನ್ನು ಓದುವ ಸಲುವಾಗಿಯೇ ಕನ್ನಡ ಕಲಿಯುವೆ" ಎಂದು ಹೇಳುತ್ತಿದ್ದಂತೆಯೇ ಹೆಬ್ಬಾರ್..

"ನಮ್ಮ ಭಾಷೆ ಕಲಿಯುವುದು ಹಾಲು ಕುಡಿದಷ್ಟು ಸುಲಭ ಅಲಿ, ಪ್ರತಿದಿವಸ ಅರ್ಧ ಗಂಟೆ ಬನ್ನಿ ನಾನೇ ಹೇಳಿಕೊಡುವೆ, ಕನ್ನಡ ಕಲಿತಿರೆಂದರೆ ಮೇಸ್ಟ್ರು ಬರೆದಿರುವ ಕಥೆಗಳನ್ನು ಓದಬಹುದು, ಇವರಿಂದ ಕಥೆಗಳನ್ನು ಬರೆಯಿಸಿ ಪ್ರಚಾರವನ್ನೂ ಪಡೆಯಬಹುದು, ಟೈಂ ಬಂದರೆ ಇವರನ್ನೂ ಆರೆಸ್ಟ್ ಮಾಡಲೂಬಹುದು. ಸುಮ್ಮನೆ ತಮಾಷೆಗೆ ಹೇಳಿದೆ. ಅದಿರಲಿ ನೀವು ಒಂದೇ ಒಂದು ಸಲ ವಾಗಿಲಿಗೆ ಹೋಗಿ ಬನ್ನಿ" ಎಂದು ಮಾರ್ಮಿಕ ರೀತಿಯಲ್ಲಿ ಹೇಳಿದ. ಅದುವರೆಗೆ ನಮ್ಮ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಮಸಾಲೆ ಈರಣ್ಣನ ಬಾಯಿ ಸುಮ್ಮನಿದ್ದರೆ ತಾನೆ!

"ಅಲ್ಲಿಗೆ ಹೋಗುವುದೂ ಒಂದೆ ಸುಡುಗಾಡಿಗೆ ಹೊಗುವುದೂ ಒಂದೆ ಸಾರ್, ನಿಮ್ಮಂಥೋರ್ಯಾಕೆ ಅಲ್ಲಿಗೆ ಹೋಗ್ತೀರಿ ಸಾರ್, ಇಲ್ಲೇ ಅರಾಮಾಗಿರೋದುಬಿಟ್ಟು" ಎಂದು ಏರುಧ್ವನಿಯಲ್ಲಿ ಕೂಗಿ ಹೇಳಿದ. ಅದನ್ನು ಕೇಳಿಸಿಕೊಂಡ ನನಗೂ ಸಮಪ್ರಮಾಣದಲ್ಲಿ ಆಶ್ಚರ್ಯವಾಯಿತು. ಅಲಿ ಅವನ ಕಡೆ ಕುತೂಹಲದಿಂದ ನೋಡಿದ್ದನ್ನು ಗಮನಿಸಿದ ಹೆಬ್ಬಾರ್..

"ಅರೆ ಹೌದಲ್ಲ! ಮರೆತಿದ್ದೆ ನೋಡಿ, ನಮ್ಮ ಮಸಾಲೆ ಈರಣ್ಣ ಮದುವೆಯಾಗಿರುವುದು ವಾಗಿಲಿಯಲ್ಲಿ" ಎಂದು ನೆನಪು ಮಾಡಿಕೊಂಡು ಹೇಳಿದ.

"ಏನು ಈರಣ್ಣ ನಿನ್ನ ಹೆಂಡತಿ ವಾಗಿಲಿಯವಳಾ, ಹಾಗಿದ್ದರೆ ನಿನಗೆ ಹೆಣ್ಣು ಕೊಟ್ಟ ಮಾವ ಅಲ್ಲಿರಬೇಕಲ್ಲ! ಯಾರ ಮನೆ!" ತುಸು ಆತಂಕವೆನಿಸಿದರೂ ಕುತೂಹಲಕ್ಕೆ ಭಯ ಮಿಶ್ರಣ ಮಾಡಿ ಕೇಳಿದೆ. ಅದಕ್ಕೆ ಅವನು ತಲೆ ಅಲ್ಲಾಡಿಸಿದ,

"ಹೌದು ಸ್ವಾಮಿ, ನನ್ನ ಸ್ವಾಸ್ಥಿ ಎಳ್ಳಾರ್ತಿ, ಆದರೂ ನಾನು ಬೆಳೆದದ್ದು ವಾಗಿಲೀಲಿ, ಈರಯ್ಯೆ ಸೋಮಿ ಹೋಟ್ಲು ಐತಲ್ಲ ಅದರ ಮಗ್ಗುಲೇ ನಮ್ಮಾವನ ಮನೆ ಇತ್ತು" ಎಂದು ಹೇಳುತ್ತ ಮ್ಲಾನವದನಗೊಂಡ.

"ಈಗಲ್ಲಿ ಯಾರೂ ಇಲ್ಲವೇನು?" ಎಂದು ಕೇಳಿದ್ದಕ್ಕೆ ಅವನು "ಪೀರ್ಲ ಹಬ್ಬದ ಗಲಾಟೇಲಿ ಕೊಕ್ಕ ಬುಕ್ಕ ಇಬ್ರೂ ಸೇರಿಕೊಂಡು ನಮ್ಮಾವ ಕುರುಕುಂದಿ ನಾಗನನ್ನ ಸಾಯಿಸಿಬಿಟ್ಟರು ಸ್ವಾಮಿ, ಅವರುಪಟಳಕ್ಕೆ ರೋಸಿ ನಮ್ಮತ್ತೆ ತನ್ನ ತವರೂರು ಮುದ್ದನಗಿರೀನ ಸೇರ್ಕೊಂಡ್ಳು ಸ್ವಾಮಿ, ನಾನಲ್ಲಿಗೆ ಹೋಗದೆ ಹತ್ತು ವರ್ಸ ಮೇಲಾತು ಸ್ವಾಮಿ" ಎನ್ನುತ್ತ ಗಿರಾಕಿಗೆ ಮಸಾಲೆ ಹಾಕುವ ಸಲುವಾಗಿ ಕಾವಲಿ ಕಡೆ ಹೋದನು.

"ಪೋಲಿಸರಿಗೆ ಹೇಳುವುದೇನಿದೆ! ತಿಳಿಯಿತಲ್ಲ ವಾಗಿಲಿ ಎಂಥ ಲಿಟಿಗೇಷನ್ ವಿಲೇಜೂಂತ! ನಮ್ಮ ಮೇಸ್ಟ್ರು ಅಲ್ಲಿರುವುದೇ ದೊಡ್ಡ ವಿಷಯ, ನೀವೇ ಯೋಚಿಸಿ ಅಲಿ! ಯಾವ ಹುತ್ತದೊಳಗೆ ಯಾವ ಹಾವಿರುತ್ತದೆಂಬುದು ನಿಮ್ಮಂಥ ಪೋಲಿಸರಿಗೆ ಅರ್ಥಾಗೋದಿಲ್ಲ" ಎಂಬಂಥ ಮಾತುಗಳು ಹೆಬ್ಬಾರ್ ಬಾಯಲ್ಲಿ ಬರಬಹುದೆಂದು ಊಹಿಸಿರದಿದ್ದ ನಾನು..

"ಏನು ಮಾಡಲಿಕ್ಕಾಗುವುದು ರಾಯರೆ, ಪಾಲಿಗೆ ಬಂದದ್ದು ಪಂಚಾಮೃತ, ಅನಿವಾರ್ಯ" ಎಂದು ಅಮಾಯಕನಂತೆ ಹೇಳಿದೆ, ಕೈಯಲ್ಲಿದ್ದ ಫೋಟೊ ಅಲಿಗೆ ಮರಳಿಸಿದೆ, ಅದನ್ನು ಹಿಡಿದುಕೊಂಡಿದ್ದ ನನ್ನ ಬಲಗೈಯ ಮೂರು ಬೆರಳುಗಳ ತ್ವಚೆಯ ಮೇಲಿದ್ದ ಬೆವರ ಸಣ್ಣ ಸಣ್ಣ ಹನಿಗಳನ್ನು ತನ್ನ ಹದ್ದಿನ ಕಣ್ಣುಗಳಿಂದಲೂ, ಪೋಲಿಸ್ ಮನಸ್ಸಿನಿಂದಲೂ ಗುರುತಿಸಿದ ಅಲಿಯು, "ಅಂಥ ಊರಲ್ಲಿರುವ ನಿಮಗೆ ತರಾವರಿ ಅಪರಾಧಿಗಳ ಪರಿಚಯವಿರಲು ಸಾಧ್ಯ. ಆದ್ದರಿಂದ ಊಹಿಸಬಹುದೆಂದು ಭಾವಿಸಿದ್ದೆ, ಆದರೆ ನೀವು ಇವನಿಗೆ ಶೋಭನಬಾಬು ಪಟ್ಟಕಟ್ಟಿದರೆ ಹೆಬ್ಬಾರ್ ನನ್ನ ಅಳಿಯನ ಸ್ಥಾನಮಾನ ನೀಡಿ ಗೌರವಿಸಿದರು, ಏನು ಮಾಡಲಿಕ್ಕಾಗುವುದು ಪೋಲಿಸರೆಂದರೆ ಎಲ್ಲರಿಗೂ ತಮಾಷೆ" ಎಂದು ಬೇಸರದಿಂದ ಹೇಳಿದ, ಬಳಿಕ ಅದರ ಮೇಲೆ ಉಫ್ ಉಫ್ ಎಂದು ಊದಿ ತನ್ನ ಎದೆಭಾಗದ ಜೇಬಿನಲ್ಲಿರಿಸಿಕೊಂಡ.

"ಊಹಿಸಲಿಲ್ಲೆಂದ ಮಾತ್ರಕ್ಕೆ ಮೇಸ್ಟ್ರರನ್ನಾಗಲೀ, ನನ್ನನ್ನಾಗಲೀ ಅಂಡರೆಸ್ಟಿಮೇಟ್ ಮಾಡಬೇಡಿ ಅಲಿ, ನೀವೇ ಹೇಳಿಬಿಡಿ ಯಾರದೂಂತ, ಹಾಗೆ ಆತನ ಬ್ಯಾಕ್‌ಗ್ರೌಂಡನ್ನೂ!" ಎಂದು ಹೆಬ್ಬಾರ್ ಹೇಳಿದ್ದಕ್ಕೆ..

"ಇವನೊಬ್ಬ ನಟೋರಿಯಸ್ ಸುಪಾರಿ ಕಿಲ್ಲರ್ ಹೆಬ್ಬಾರ್! ನಮಗೆ ದೊರಕಿರುವ ಮಾಹಿತಿಯಂತೆ ಕರ್ನಾಟಕದ ಊಳೂರು ಪುರುಷೋತ್ತಮರೆಡ್ಡಿಯವರನ್ನು ಕೊಲೆ ಮಾಡಿ ಆಂಧ್ರದ ರಾಯಲಸೀಮೆಯಲ್ಲೆಲ್ಲೋ ತಲೆ ಮರೆಸಿಕೊಂಡಿದ್ದಾನೆ" ಎಂದು ಆರಂಭಿಸಿದ ಅಲಿಯು.. ಎಲ್ಲಾ ಹೇಳಿದಾದ ಬಳಿಕ ಇನ್ನೊಂದು ಮುಖ್ಯ ಸಂಗತಿ ಎಂದರೆ.. ರೆಡ್ಡಿಯ ಮಗಳು ವನಜಾ ಈ ಫೋಟೋವನ್ನು ತನ್ನ ವ್ಯಾನಿಟಿ ಬ್ಯಾಗಿನಿಂದ ತೆಗೆದುಕೊಟ್ಟಿರುವಳೆಂದರೆ!

ವೃತ್ತಾಂತ ಆಲಿಸಿದಾದ ಬಳಿಕ ದಿಗ್ಭ್ರಮೆಗೊಂಡಂತೆ ನಟಿಸುವುದು ಅನಿವಾರ್ಯವಾಯಿತು. ಹ್ಹಾಂ! ಅರೆ! ಹೌದೇನು! ಓ ಮೈಗಾಡ್! ಇತ್ಯಾದಿ ಉದ್ಗಾರಗಳು ಒಂದೊಂದಾಗಿ ನನ್ನ ಬಾಯಿಯಿಂದ ಉದುರಿದವು.

ತುಸು ಹೊತ್ತಿನ ಬಳಿಕ ಅಲಿ "ಮಾಸ್ಟರ್ ಸಾಬ್ ನಮ್ಮ ಎಸ್ಪಿ ಬೋಸ್ಲೆ ಈ ಕೇಸ್ ಜವಾಬ್ದಾರೀನ ನನಗೆ ವಹಿಸಿದ್ದಾರೆ, ಈ ಸುಪಾರಿ ಕೊಲೆಗಾರನನ್ನು ಹಿಡಿದರೆ ಪ್ರಮೋಷನ್ನೂ, ಸಿಎಮ್ ಗೋಲ್ಡ್ ಮೆಡಲ್ಲೂ ಬರುವುದಂತೂ ಗ್ಯಾರೆಂಟಿ, ಸಿಫಾರಸ್ ಮಾಡುವುದಾಗಿ ಡಿವೈಎಸ್ಪಿ ರಾಮುಲು ಸಾಹೇಬರು ಭರವಸೆ ನೀಡಿದ್ದಾರೆ, ನಾನೂ ಪ್ರಯತ್ನ ನಡೆಸಿರುವೆ, ಒಂದು ಸಣ್ಣದೊಂದು ಕ್ಲು ಸಾಕು ಅವನನ್ನು ಹಿಡಿಯೋಕೆ! ಕ್ರೈಂ ತಡೆಗಟ್ಟಲಿಕ್ಕೆ ನಿಮ್ಮಂಥವರ ಸಹಕಾರ ಬೇಕು, ಅವನ ಸುಳಿವು ಸಿಕ್ಕರೆ ಈ ನಂಬರಿಗೆ ಫೋನ್ ಮಾಡಿ ಸಾಕು" ಎಂದು

ಹೇಳಿದಾದ ಬಳಿಕ ನಂಬರ್ ಕೊಟ್ಟು ಅಲ್ಲಿಂದ ಪೀಸಿ ಸಾಹೇಬ ತುರ್ತುಕೆಲಸದ ಮೇಲೆ ಜಾಗ ಖಾಲಿ ಮಾಡಿದ, ಹೆಬ್ಬಾರ್ ನಿರಾಳಗೊಂಡಿರುವಂತೆ ಗೋಚರಿಸಿದ, ಸುತ್ತಮುತ್ತ ಯಾರಿಲ್ಲವೆಂಬುದನ್ನು ಖಚಿತಪಡಿಸಿಕೊಂಡ, ಬಳಿಕ ತನ್ನ ಬಾಯಿಯನ್ನು ನನ್ನ ಕಿವಿಗೆ ಹತ್ತಿರ ತಂದು "ಈ ಅಲಿ ಮೊದಲೆ ಹೆಡ್ಡೇಕ್ ಮನುಷ್ಯ ಮೇಸ್ಟ್ರ, ಪ್ರಮೋಷನ್ನಂತೆ! ಗೋಲ್ಡ್ ಮೆಡಲಂತೆ! ಅದಕ್ಕೆ ನಮ್ಮಂಥವರು ಸಹಕರಿಸಬೇಕಂತೆ! ಇದೇ ಬಸ್‌ಸ್ಟ್ಯಾಂಡಿನಲ್ಲಿಯೇ ಬೆಳೆದಿರುವೆ, ಏನಿಲ್ಲಾಂದರು ನಲವತ್ತೈವತ್ತು ಕೊಲೆ ನೋಡಿರಬಹುದು, ಆದರೆ ಒಂದಕ್ಕಾದರೂ ಸಾಕ್ಷಿ ಹೇಳಿರುವೆನೇನು! ಹ್ಹು ಹ್ಹು.. ಇಲ್ಲವೇ ಇಲ್ಲ. ನಮ್ಮ ಹೋಟಲ್ಲಿಗೆ ಕೊಲೆ ಮಾಡುವವರೂ ಬರ್ತಾರೆ, ಮಾಡಿಸಿಕೊಳ್ಳುವವರೂ ಬರ್ತಾರೆ, ಅವರನ್ನು ಹಿಡಿಯುವವರೂ ಬರ್ತಾರೆ. ಅವರೆಲ್ಲರನ್ನು ಸಮಾನವಾಗಿ ನೋಡದೇ ಇದ್ದಿದ್ದರೆ ನಾವಿಂಥ ಕಡೆ ಐವತ್ತು ವರ್ಷದಿಂದ ಈ ದಂಧೆ ನಡೆಸಲಿಕ್ಕಾಗುತ್ತಿತ್ತೇನು! ನೀವೇ ಹೇಳಿ. ಖೂನಿಕೋರರ ಜಗಳಗಂಟರ ಊರಲ್ಲಿ ಕೆಲಸ ಮಾಡುವ ನಿಮ್ಮಂಥವರು ಎಲ್ಲರಿಗೂ ಅಡ್ಜೆಸ್ಟಾಗಿ ಹೋಗುವುದು ಮುಖ್ಯ, ಪರದೇಶದವರಾದ ನಮಗೆ ಒಳ್ಳೆಯವರು ಎಷ್ಟು ಮುಖ್ಯವೋ ಕೆಟ್ಟವರೂ ಅಷ್ಟೇ ಮುಖ್ಯ. ಅದರಲ್ಲೂ ಯಾರನ್ನು ನಂಬಿದರೂ ಈ ಪೋಲಿಸರನ್ನು ಮಾತ್ರ ನಂಬಬಾರದು, ನಂಬದೆ ಇರಲೂ ಬಾರದು. ಈ ಫಿಲಾಸಫೀನ ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಕ್ಷೇಮದಿಂದ ಇರ್ತೀವಿ ಅಲ್ಲವೆ? ನೋಡಿ, ನಮ್ಮ ಕುಂದಾಪುರ ಕಡೆ ತುಳೂನಲ್ಲಿ ಗಾದೆ ಮಾತೊಂದಿದೆ, ನೆನಪಾಗುತ್ತಿಲ್ಲ. ಇರಲಿ ಬಿಡಿ.. ಅಂದ ಹಾಗೆ ನಿಮ್ಮ ಬ್ಯಾಗನ್ನು ನೀವು ತೆಗೆದುಕೊಳ್ಳಿ ಸ್ವಾಮಿ, ಅದನ್ನು ತೆರೆದು ನೋಡುವ ಆಸೆ ಆಯಿತು, ಆದರೆ ತೆರೆದುನೋಡಲಿಲ್ಲ, ಇಂಪಾರ್ಟೆಂಟ್ ರೆಕಾರ್ಡ್ಸು ಬೇರೆ.." ಎಂದು ಹೇಳಿದಾದ ಬಳಿಕ ಅದನ್ನು ನನಗೆ ವರ್ಗಾಯಿಸಿದ.

ಪಡೆದುಕೊಂಡೆ, ಅದರ ಮೈಲ್ಡ್ಸ್ ಸವರಿ ಅದಿರುವುದು ಖಚಿತಪಡಿಸಿಕೊಂಡೆ, ಮುಖದ ಮೇಲೆ ಅನಿರ್ವಚನೀಯ ಆನಂದ ಸುಳಿದು ಮರೆಯಾಯಿತು. ಅವನು ಗುರುತಿಸದ ರೀತಿಯಲ್ಲಿ ನೆಮ್ಮದಿಯ ಉಸಿರುಬಿಟ್ಟೆ. ಆತನಾಡಿದ ನಿರರ್ಗಳ ಮಾತಿಗೆ ಪ್ರತಿಕ್ರಿಯಿಸುವ ಸಾಹಸ ಮಾಡಲಿಲ್ಲ. ದಿಟ್ಟಿಸಿದೆ, ಹೆಸರು ನರಹರಿ ಹೆಬ್ಬಾರ್! ತನ್ನ ತೊಡೆ ಮೇಲೆ ಲಕ್ಷ್ಮಿಯಿಂದ ಸೇವಿಸಿಕೊಳ್ಳುವ ಕಾರಣಕ್ಕೆ ಪ್ರಸನ್ನತೆ ಸೂಸುವ ಹಂಪಿಯ ಉಗ್ರನರಸಿಂಹ ನೆನಪಾದ. ನನ್ನೊಳಗೂ ಅಂಥದೊಂದು ಆಕೃತಿ ಇರಲೂಬಹುದು. ದಾಸ್ತೊವಸ್ಕೀಯ ಕ್ರೈಂ ಅಂಡ್ ಪನಿಷ್ಮೆಂಟ್ ಕಾದಂಬರಿಯ ಓದನ್ನು ಜ್ಞಾಪಿಸಿಕೊಂಡೆ, ತನ್ನೂರಿನಲ್ಲಿ ಲೇವಾದೇವಿ ಮಾಡುವುದರ ಮೂಲಕ ಸಾಮಾನ್ಯರನ್ನು ಶೋಷಿಸುವ ವೃದ್ಧೆಯನ್ನು ಕೊಲೆ ಮಾಡುವುದರ ಮೂಲಕ ಕ್ರೈಮನ್ನೂ, ತನ್ನ ಕುಕೃತ್ಯವನ್ನು ನೋಡಿದ ಶೋಷಿತ ಮಹಿಳೆಯನ್ನು ಕೊಲೆ ಮಾಡುವುದರ ಮೂಲಕ ಪನಿಷ್ಮೆಂಟನ್ನೂ ಒಟ್ಟಿಗೆ ಅನುಭವಿಸುವ ರಾಷ್ಕೊಲ್ನಿಕೋವ್ ಮತ್ತು ಆ ಕೊಲೆ ಖಟ್ಲೆಯನ್ನು ತನ್ನ ಹೆಗಲಿಗೇರಿಸಿಕೊಂಡಿರುವ ಪೋಲಿಸ್ ಆಫೀಸರ್ ಪೆಟ್ರೋವಿಚ್ಚೂ! ಒಟ್ಟೊಟ್ಟಿಗೆ ನೆನಪಾದರು. ಅದೂ ಅಲ್ಲದೆ ತನ್ನ ಚೂರಿಯನ್ನು ಸೊಂಟದ ಜಾಗದಲ್ಲಿರಿಸಿಕೊಳ್ಳುವುದರ ಮೂಲಕ ನೀನು ನಿನ್ನ ದೇಹದ ಮೇಲ್ಪ್ರಲಕ್ಷಣವನ್ನು ಅಮೂಲಾಗ್ರವಾಗಿ ಬದಲಿಸಿಕೋ ಎಂದು ಒತ್ತಾಯಿಸುತ್ತಿರುವ ಬ್ಯಾಗಿನೊಳಗೆ ಚೂರಿ ರೂಪದಲ್ಲಿರುವ ಉರುಕುಂದಿಯು. ಅರ್ಥವಾಗದ ವಿಕ್ಷಿಪ್ತ ಆಲೋಚನೆಗಳು! ಇಲ್ಲಿಯೆ ಇದ್ದರೆಲ್ಲಿ ಉಪದ್ರವಿ ಹೆಬ್ಬಾರನೊಂದಿಗೆ ಜಗಳ ಆರಂಭಿಸುವೆನೋ ಎಂಬ ಆತಂಕ ಬೇರೆ. ಇನ್ನು ತಡಮಾಡದೆ ಇಲ್ಲಿಂದ ಹೊರಡದಿದ್ದರೆಲ್ಲಿ!

"ಹೊರಡುವೆನು ರಾಯರೆ ತುಂಬಾ ಥ್ಯಾಂಕ್ಸ್" ಎಂದೆ ಹಿಮ್ಮುಖವಾಗಿ ಒಂದೇ ಒಂದು ಹೆಜ್ಜೆ ಇರಿಸಿ, ಅದಕ್ಕೆ ಹೆಬ್ಬಾರ್ "ನಿಮ್ಮ ಬಳಿ ತುಂಬಾನೆ ಮಾತಾಡುವುದಿತ್ತು, ಏನು ಕೆಲಸವಿರುವುದೋ ಏನೊ! ಅವಸರದಲ್ಲಿರುವಿರಿ, ಹ್ಹಾಂ! ಅಂದ ಹಾಗೆ ಮುಂದಿನ ತಿಂಗಳು ಮನೆಯಲ್ಲಿ ಸತ್ಯನಾರಾಯಣ ಪೂಜೆ ಇದೆ, ಯಜುರ್ವೇದ ಪಾರಂಗತರೂ ಜ್ಯೋತಿಷಿಗಳೂ ಆದ ನೃಸಿಂಹಭಟ್ಟರು ಉಡುಪಿಯಿಂದ ಆಗಮಿಸುತ್ತಿದ್ದಾರೆ, ಮರೆಯದೆ ಬನ್ನಿ, ನಿಮ್ಮ ತೊಂದರೆ ತಾಪತ್ರಯಗಳನ್ನು ಅವರೆದುರು ಹೇಳಿಕೊಳ್ಳಬಹುದು, ನೀವೀಗ ಎಲ್ಲಿಗೆ ಹೊರಟಿರುವಿರೆಂಬುದು ತಿಳಿಯದು, ಎಲ್ಲಿಗೇ ಹೋಗಿ, ಆದರೆ ಪೋಲಿಸ್ ಸ್ಟೇಷನ್ ಮುಂದೆಯಿಂದ ಮಾತ್ರ ಹೋಗಬೇಡಿ, ಈಗ ಬಂದಿರುವ ಎಸ್ಯೆ ಬೆರಳು ತೋರಿಸಿದರೆ ಹಸ್ತ ನುಂಗುವ ಜಾಯಮಾನದವನು, ನಾನಿರದಿದ್ದಲ್ಲಿ ಪನ್ನಂಗಧರನ ಕೇಸಿಗೆ ಸಂಬಂಧಿಸಿದಂತೆ ನಿಮ್ಮನ್ನೂ ವಿಚಾರಿಸುತ್ತಿದ್ದರೇನೊ! ಏನೇ ಅಗಲಿ ಕನ್ನಡಿಗರು ಕನ್ನಡಿಗರಿಗೆ ಸಹಾಯ ಮಾಡುವುದು ಮುಖ್ಯ" ಎಂದು ಹೇಳಿದ, ಏನನ್ನೋ ನೆನಪು ಮಾಡಿಕೊಳ್ಳುವ ಸಲುವಾಗಿ ತನ್ನ ಬಲಗೈಯ ತೋರುಬೆರಳನ್ನು ತನ್ನ ಚೂಪನೆಯ ಗದ್ದದ ಮೇಲಿರಿಸಿಕೊಂಡು ಯೋಚಿಸಿದ, ಬಳಿಕ "ಬ್ಯಾಗನ್ನು ಇಲ್ಲಿ ಇಟ್ಟಿರಿ ಸರಿಹೋಯಿತು, ಹೀಗೆ ಬೇರೆ ಕಡೆ ಇಡಬೇಡಿ, ವಿಜಯವಾಡದಿಂದ ಹಗಲುಗಳ್ಳರ ತಂಡವೊಂದು ಈ ನಮ್ಮ ಆಲೂರಿಗೆ ಬಂದಿರುವುದಂತೆ, ಅವರು ಮನಸ್ಸಿನಲ್ಲಿರುವ ಆಲೋಚನೆಗಳನ್ನೂ ಲಪಟಾಯಿಸುವುದರಲ್ಲೂ ನಿಸ್ಸೀಮರಂತೆ, ಹಾಗಂತ ಗಿರಾಕಿಗಳು ಮಾತಾಡಿಕೊಳ್ಳುತ್ತಿದ್ದರು. ಪ್ರಪಂಚ ಎಷ್ಟು ಬದಲಾಗಿರುವುದೆಂದರೆ ಎಡಗೈಯನ್ನು ಬಲಗೈ ನಂಬುವಂತಿಲ್ಲ, ಬಲಗೈಯನ್ನು ಎಡಗೈ ನಂಬುವಂತಿಲ್ಲ, ಯಾವುದಕ್ಕೂ ಹುಷಾರಾಗಿರ್ರಿ" ಎಂದಾದ ಬಳಿಕ ಪುನಃ ತೋರುಬೆರಳನ್ನು ತನ್ನ ಗದ್ದದ ಮೇಲಿರಿಸಿಕೊಂಡನು. ನನಗೆ ಭಯವಾಯಿತು. ಲಗುಬಗೆಯಿಂದ ಬಾಗಿಲವರೆಗೆ ಧಾವಿಸಿದ ನನ್ನನ್ನು ತಡೆಯಲು ಯತ್ನಿಸಿದರಾದರೂ ಸಾಧ್ಯವಾಗಲಿಲ್ಲ. "ಆದೋನಿಯ ಗಲಾಟೆ ಬಗ್ಗೆ ಹೇಳುವುದಿತ್ತು, ಹೊರಟಿದ್ದೀರಲ್ಲ ಹೊರಡಿ, ಮುಂದಿನ ತಿಂಗಳ ಏಕಾದಶಿ ನೆನಪಿಟ್ಟುಕೊಳ್ಳಿ ಮೇಸ್ಟ್ರೆ" ಎಂದು ಹೇಳಿ ಗಿರಾಕಿಯ ಕಡೆ ಗಮನ ಹರಿಸಿದನೆಂಬುದು ಸಮಾಧಾನದ ಸಂಗತಿ.

++++

ಅಲ್ಲಿಂದ ಹೊರಟು ಐಬಿ ತಲುಪಿದ್ದೊಂದು ಸಾಹಸ. ಸುತ್ತಮುತ್ತ ಯಾರೂ ಇರಲಿಲ್ಲ, ಬಹುತೇಕ ನಿರ್ಜನ ಪ್ರದೇಶ. ಕಲ್ಲು ಬೆಂಚ್ ಮೇಲೆ ಕುಳಿತು ದೀರ್ಘವಾಗಿ ಉಸಿರನ್ನು ಎಳೆದುಬಿಟ್ಟೆ, ಅಲಿ ಹೆಬ್ಬಾರ್ ಈರ್ವರ ಮಾತುಗಳನ್ನು ಮೆಲುಕು ಹಾಕಿದೆ ಒಂದೇ ನಿಮಿಷದಲ್ಲಿ. ಬಳಿಕ ಮೆಲ್ಲಗೆ ಬ್ಯಾಗಿನ ಜಿಪ್ ತೆರೆದು ಪರಿಶೀಲಿಸಿದೆ, ನನ್ನ ಪುಣ್ಯ, ಚೂರಿಯ ಅಸ್ತಿತ್ವಕ್ಕೆ ಚ್ಯುತಿಯೊದಗಿಲ್ಲ. ಪುನಃ ಅದರೊಳಗಿರಿಸಿ ಜಿಪ್ಪೆಳೆದು ಭದ್ರಪಡಿಸಿದೆ. ಯಾವ ಕಡೆ ಹೋಗುವುದು! ಅಗೋ ಅಲ್ಲಿ ಹೊರಡಲು ಸನ್ನದ್ಧಗೊಂಡಿರುವ ಶ್ರೀರಾಮದ ಕಡೆಗೋ! ವಕೀಲ ಜೀವೋತ್ತಮರಾವ್ ಕಡೆಗೋ! ಅಥವಾ ಇವೆರಡನ್ನೂ ಬದಿಗಿರಿಸಿ ಸೆವೆನ್ನೆವೆನ್ನಿಗೆ ಹೋಗಿ ಬೀರು ಪ್ರಾಶನದಿಂದ ಸಾಂತ್ವನ ಪಡೆಯುವುದೋ! ಅಥವಾ ವಾಗಿಲಿಯಲ್ಲಿರುವ ಶರಭನ ಚಲನವಲನಗಳ ಕುರಿತು ಯೋಚಿಸುವುದೋ! ಅವನೋ ಅವನ ವೃತ್ತಾಂತವೋ! ತಾನು ಉಡುಗೊರೆಯಾಗಿ ನೀಡಿರುವ ಚೂರಿಯೋ! ಚೂರಿ ಮಾನವ ರೂಪಧರಿಸಿದಂತೆಯೂ, ಅದು ಚಲಿಸುತ್ತ ಸಾಗಿ ಅವನೆದೆಗೆ! ವಿನಾಕಾರಣವಾಗಿ ಭಯದಿಂದ ತತ್ತರಿಸಿದೆ. ಛೇ ಛೆ! ಹಾಗೆಲ್ಲ

ಯೋಚಿಸಿ ಮನಸ್ಸನ್ನು ಯಾಕೆ ಬಗ್ಗಡಗೊಳಿಸಿಕೊಳ್ಳುವುದು! ನನ್ನನ್ನು ಬಾಯಿ ತುಂಬಾ 'ಅಣ್ಣಾ' ಎಂದು ಸಂಬೋಧಿಸಿದ ಅತಿಥಿಗೆ ಮಾನಸಿಕವಾಗಿ ಕೇಡು ಹಾರೈಸುವುದೆಂದರೇನು! ಅದೂ ಸೃಜನಶೀಲ ಲೇಖಕನಾಗಿರುವ ನಾನು! ದಿನಂಪ್ರತಿ ಹತ್ತು ಹಲವು ಬದುಕುಗಳನ್ನು ಸಾವುಗಳನ್ನು ಹಾರೈಸುತ್ತಿರುವ, ಕಲ್ಪಿಸಿಕೊಳ್ಳುತ್ತಿರುವ ನಾನು! ನನ್ನಂಥ ಮಾನಸಿಕ ಕೊಲೆಗಾರರು ದೈಹಿಕ ಕೊಲೆಗಾರರಿಗಿಂತ ಹೆಚ್ಚು ಅಪಾಯಕಾರಿ! ಒಣ ಹಾಕಿರುವ ರೇಶ್ಮೆ ಪಂಚೆಯನ್ನು ಮುಳ್ಳುಗಳ ಬೇಲಿ ಮೇಲಿಂದ ಹುಷಾರಾಗಿ ಬಿಡಿಸಿಕೊಳ್ಳುವ ರೀತಿಯಲ್ಲಿ ನಕಾರಾತ್ಮಕ ಯೋಚನೆಗಳಿಂದ ಅಂತೂ ಬಿಡುಗಡೆಗೊಂಡೆ. ಚಲಿಸುವ ಸ್ಥಿತಿಯಲ್ಲಿಯೇ ಉಪದ್ರವಿ ನಿರುಪದ್ರವಿ ಪ್ರಯಾಣಿಕರ ಗಮನ ಸೆಳೆಯುತ್ತಿರುವ ಶ್ರೀರಾಮಕ್ಕಿಂತ ಮುಖ್ಯವಾಗಿ..

ಹೌದು! ಕ್ರಾಸ್ ಚೆಕ್ ಮಾಡುವುದು ಕ್ರಿಮಿನಲ್ಲುಗಳ ಮೂಲಭೂತ ಗುಣ. ವಿಶ್ವಾಸಕ್ಕೆ ದಕ್ಕೆಯೊದಗಿದಲ್ಲಿ ಸಂಬಂಧವಾಚಕದ ಪದವಿಯಿಂದ ನಾನು ಪದಚ್ಯುತಗೊಳ್ಳುವುದಂತೂ ಖಚಿತ. ಹೆಬ್ಬಾರ ಮತ್ತು ಅಲಿಯವರ ಷಡ್ಯಂತ್ರಗಳನ್ನು ಬದಿಗಿರಿಸಿ ವಕೀಲನನ್ನು ಖಿದ್ದ ಭೆಟ್ಟಿಯಾಗುವುದು ಒಳ್ಳೆಯದು. ಜೀವೋತ್ತಮರಾವ್ ನನಗೆ ಅಪರಿಚಿತನಾಗಲೀ ಚಿರಪರಿಚಿತನಾಗಲೀ ಅಲ್ಲವೇ ಅಲ್ಲ. ಅಲಿ ಹೆಬ್ಬಾರರಂತೆ ಆತನ ಪರಿಚಯ ನನಗೂ, ನನ್ನ ಪರಿಚಯ ಆತನಿಗೂ ಇರುವುದು. ಅದೂ ಸಾಹಿತ್ಯ ಪರಿಮಳದಿಂದಾಗಿ, ಅದೂ ನನಗೆ ಅನುವಂಶಿಕವಾಗಿ ಬಂದಿರುವ ದೈಹಿಕ ಭಾಷಾಪ್ರಭೇದದಿಂದಾಗಿ, ಅದೂ ಕಾಮ್ರೇಡ್ ಪನ್ನಂಗಧರನ ಸಹವಾಸದಿಂದಾಗಿ, ಅದೂ ತನ್ನ ಕ್ರಿಮಿನಲ್ ವ್ಯಕ್ತಿತ್ವದಿಂದಾಗಿ, ಅದೂ ತನ್ನ ವಿಲಕ್ಷಣ ಮಾತುಕತೆಯಿಂದಾಗಿ. ಓಹ್! ಜೀವೋತ್ತಮರಾವ್! ಯಾರನ್ನು ಈ ಜನ್ಮದಲ್ಲಿ ಭೆಟ್ಟಿಯಾಗಬಾರದೆಂದು ಎರಡು ತಿಂಗಳುಗಳ ಹಿಂದೆಯಷ್ಟೆ ನಿರ್ಧರಿಸಿದ್ದೆನೋ ಅದೇ ಜೀವೋತ್ತಮರಾವ್! ರಾಜಕಾರಣ ಮತ್ತು ಸಾಹಿತ್ಯಾಭಿರುಚಿಗಳೆಂಬ ಎರಡೂ ದೋಣಿಗಳಲ್ಲಿ ಏಕಕಾಲಕ್ಕೆ ವಿಹರಿಸುತ್ತಿರುವ ಕುಳ್ಳದೇಹಿ ಜೀವೋತ್ತಮರಾವ್! ಕ್ರೌರ್ಯವೆಂಬ ಅಗ್ನಿಷ್ಟಿಕೆಯನ್ನು ಸಜ್ಜನಿಕೆಯ ಮುಖವಾಡದೊಳಗೆ ಮರೆ ಮಾಚಿ ತನ್ನ ಕಕ್ಷಿದಾರರನ್ನು ಯಾಮಾರಿಸುತ್ತಲೇ ಸದರಿ ಆಲೂರ ಮಾರುತಿ ಬಡಾವಣೆಯಲ್ಲಿ ಎರಡಂತಸ್ತಿನ ತನ್ನ ಸ್ವಂತ ಮನೆಯಲ್ಲಿ ವಾಸಿಸುತ್ತಿರುವ ಜೀವೋತ್ತಮರಾವ್! ಕಣ್ಣೋಟ ಮಾತ್ರದಿಂದ ಕೂದಲು ಸೀಳುವ, ಮಾತಿನ ಮಂತ್ರದಿಂದ ಮಾವಿನಕಾಯಿ ಉದುರಿಸುವ, ಟೋಪಿಗಳನ್ನು ತಲೆಯಿಂದ ತಲೆಗೆ ವರ್ಗಾಯಿಸುವ, ದಿನಕ್ಕೆ ಏನಿಲ್ಲವೆಂದರೂ ನೂರಾರು ಅವತಾರಗಳನ್ನೆತ್ತುವ ಜೀವೋತ್ತಮರಾವ್! ಕರಾವಳಿ ಮೂಲದ ತಾಯಿ ಕಡೆಯಿಂದ ಹೆಬ್ಬಾರನಿಗೂ, ತೆಲಂಗಾಣ ಮೂಲದ ತಂದೆ ಕಡೆಯಿಂದ ಕರಣಂ ಗೋಪಾಲರಾವ್‌ಗೂ ಹತ್ತಿರದ ಸಂಬಂಧಿಯಾಗಿರುವ ಜೀವೋತ್ತಮರಾವ್!

ಆ ವಿಲಕ್ಷಣ ವ್ಯಕ್ತಿ ನನಗೆ ಹೇಗೆ ಪರಿಚಯವಾದನೆಂಬುದು ಸರ್ವಾಂತರ್ಯಾಮಿಯಾದ ಭಗವಂತನಿಗಿಂತ ನನಗೇ ಚೆನ್ನಾಗಿ ಗೊತ್ತು, ಅದು ಇದೇ ಆಲೂರಿನಲ್ಲಿದ್ದು ಕಳೆದ ತಿಂಗಳ ಹಿಂದೆಯಷ್ಟೆ ತಮ್ಮ ಎಂಭತ್ತಾರನೆ ವಯಸ್ಸಿನಲ್ಲಿ, ಅದೂ ಹೃದಯಸ್ತಂಭನದಿಂದಾಗಿ ವೈಕುಂಠವಾಸಿಯಾದ ಶ್ರೀವೆಂಕಟಾವಧಾನಿಗಳ ಸಹಸ್ರ ಚಂದ್ರದರ್ಶನ ಮಹೋತ್ಸವದ ಕಾರ್ಯಕ್ರಮದಲ್ಲಿ! ಮುಖ್ಯ ಅತಿಥಿಗಳ ಪೈಕಿ ಓರ್ವನಿದ್ದ ನಾನು ಸ್ವಾತಂತ್ರ್ಯಕ್ಕೂ ಅಕಾಲಿಕ ವೃದ್ಧಾಪ್ಯಕ್ಕೂ ಸಂಬಂಧವಿರುವುದೆಂದು ಅರ್ಧಗಂಟೆಗೂ ಹೆಚ್ಚುಕಾಲ ಮಾತಾಡಿದಾಗ. ನನ್ನ ಆ ಮಾತುಗಳಲ್ಲಿ ಅಸಂವಿಧಾನಿಕ ವಾಸನೆಯನ್ನು ಗ್ರಹಿಸಿದವನಂತೆ ಕೈ ಕುಲುಕುತ್ತ ನಿಮ್ಮಂಥ ಪ್ರತಿಭಾವಂತರು ವಾಗಿಲಿಯಲ್ಲಿರುವುದು ಒಂದೆ, ನಲ್ಲಮಲ ದಟ್ಟಡವಿಯಲ್ಲಿನ

ನಕ್ಸಲೈಟರೊಂದಿಗಿರುವುದು ಒಂದೇ ಎಂದು ಹೇಳಿದ್ದ. ಪುನಃ ಮುಂದೆ ಎಂದಾದರೂ ನೀವು ಕ್ರಿಮಿನಲ್ ಖಟ್ಲೆಯಲ್ಲಿ ಸಿಲುಕಿದಿರೆಂದರೆ ನಾನೇ ಮುಫತ್ತಾಗಿ ವಕಾಲತ್ತು ನಡೆಸುವುದಾಗಿ ಹೇಳುತ್ತ ತನ್ನ ವಿಜಿಟಿಂಗ್ ಕಾರ್ಡ್ ನೀಡಿದ್ದ. ಅದೇ ಅತನೊಂದಿಗೆ ಪ್ರಥಮ ಮುಲಾಕಾತ್! ಆಲೂರಿಗೆ ಬಂದಾಗಲೆಲ್ಲ ಅಷ್ಟು ದೂರದಲ್ಲಿ ಆತನೂ ಇಷ್ಟು ದೂರದಲ್ಲಿ ನಾನೂ! ಆ ಅರಗಳಿಗೆ ಅವಧಿಯಲ್ಲಿ ಪರಸ್ಪರ ಕಣ್ಣುಗಳಿಂದ ಸಂಭಾಷಿಸಿದ್ದು ಹೊರತುಪಡಿಸಿದರೆ ಇನ್ನೊಂದು ಮಾತುಕತೆ ನಮ್ಮಿಬ್ಬರ ನಡುವೆ ಸಂಭವಿಸಿರಲಿಲ್ಲ. ಕಳೆದೈದು ವರ್ಷಗಳವಧಿಯಲ್ಲಿ ಆತನೊಂದಿಗಿನ ಅಂತರವನ್ನು ಜೋಪಾನ ಜತನದಿಂದ ಕಾಯ್ದುಕೊಂಡು ಬಂದಿರುವ ನಾನು, ಅದೂ ಊಳೂರಿನ ಕುಖ್ಯಾತ ಕ್ರಿಮಿನಲ್ ಶರಭನ ಪರ ಹೋಗಿ ನೋಡುವುದೆಂದರೇನು! ಅವನು ಮಾಡಿರಬಹುದಾದ ಮಾಡದೆ ಇರಬಹುದಾದ ಕೊಲೆಗೆ ಸಂಬಂಧಿಸಿದಂತೆ ಚರ್ಚಿಸುವುದೆಂದರೇನು! ಹಾಗೇನಾದರೂ ನೋಡಿದಲ್ಲಿ ಮಾತಾಡಿದಲ್ಲಿ ತಾನು ನನ್ನನ್ನೂ ಊಳೂರು ಕೊಲೆಗೆ ಸಂಬಂಧಿಸಿದಂತೆ ಎರಡನೆ ಮುದ್ದಾಯಿಯನ್ನಾಗಿ ಮಾಡದಿರೇನು ಮಾಡುವುದು! ಛೇಛೆ ತಾನು ಅಂಥವನಲ್ಲ.

ಹೀಗೆ ಯೋಚಿಸುತ್ತ ಸ್ಟೇಟ್ ಬ್ಯಾಂಕ್ ದಾಟಿ ಮಾರುತಿ ಬಡಾವಣೆಯ ನಾಲ್ಕನೆ ಕ್ರಾಸನ್ನು ತಲುಪಿದೆ. ಅಗೋ ಅಲ್ಲಿ ಅಶ್ವತ್ಥಾಲದ ಬೇರುಗಳು ಬುನಾದಿ ಪರ್ಯಂತ ವ್ಯಾಪಿಸಿರಬಹುದಾದ ಉಪ್ಪರಿಗೆ ಮನೆಯೇ ವಕೀಲರದು. ಮರದ ತಣ್ಣೆಳಲಲ್ಲಿ ನಿಂತಿರುವ ಅಂಬ್ಯಾಸಡರ್ ಅವರದ್ದಾಗಿರಬಹುದು, ಅಲ್ಲೊಂದು ಇಲ್ಲೊಂದರಂತೆ ನಿಂತಿರುವ ಎಜ್ಡಿ ಬುಲೆಟ್‌ಗಳು ತನ್ನ ಕಕ್ಷಿದಾರರಿದ್ದಿರಬಹುದು. ಹೋಗುವುದೋ ಹೋಗದೆ ಇರುವುದೋ! ಒಂದು ರೀತಿಯ ಉಭಯಸಂಕಟ, ನೀನು ಧೈರ್ಯದಿಂದ ಹೋಗಿ ಮಾತಾಡದಿದ್ದಲ್ಲಿ ಅಣ್ಣಾ ಎಂಬ ಸಂಬಂಧವಾಚಕದ ಮೇಲಾಣೆ ಎಂದು ಧಮಕಿ ಹಾಕುತ್ತಿರುವ ಎದೆಯೊಳಗಿನ ಶರಭ. ಆ ನನ್ನ ಔರಸ ಸಹೋದರ ಕೊಲೆ ಮಾಡಿರಬಹುದೋ ಅಥವಾ ತನ್ನ ಸಾಮಾಜಿಕ ವರ್ಚಸ್ಸು ಹೆಚ್ಚಿಸಿಕೊಳ್ಳುವ ಸಲುವಾಗಿ ಯಾರೋ ಮಾಡಿರಬಹುದಾದ ಕೊಲೆಯನ್ನು ತನ್ನ ಹೆಗಲಿಗೆ ವರ್ಗಾಯಿಸಿಕೊಂಡಿರಬಹುದೋ! ನಂಬಿಕೆ ದ್ರೋಹಕ್ಕೆ ಮರಣ ದಂಡನೆಯೇ ಸರಿಯಾದ ಶಿಕ್ಷೆ ಎಂದು ತೀರ್ಮಾನಿಸುವುದು, ಅದನ್ನು ನಿಷ್ಕರುಣೆಯಿಂದ ಜಾರಿಗೊಳಿಸುವುದು ಯಾವುದೇ ಕ್ರಿಮಿನಲ್ಲುಗಳ ಮನಸ್ಸಾಲಜಿ!

ಒಂದೆರಡು ಹೆಜ್ಜೆ ಮುಂದಿಡುವುದಕ್ಕೂ, ಮಹಡಿ ಮೇಲಿಂದ ಒಂದಿಬ್ಬರು ಸಮವಸ್ತ್ರಧಾರಿಗಳು ಮಹಡಿಯಿಂದ ಕೆಳಗಿಳಿದು ಬರುವುದಕ್ಕೂ ಸರಿ ಹೋಯಿತು. ನೋಡು ನೋಡುತ್ತಿದ್ದಂತೆ ಅವರು ಪೋಲಿಸರೆಂದು ಖಚಿತವಾಗುತ್ತಿದ್ದಂತೆ ನಾನು ಮರೆಮಾಚಿಕೊಳ್ಳುವ ಸಲುವಾಗಿ ತುಸು ಪಕ್ಕಕ್ಕೆ ಸರಿದು ನಿಂತೆ. ಪುಣ್ಯಕ್ಕೆ ಅವರಲ್ಲಿ ಅಲಿ ಇರಲಿಲ್ಲ. ನಡೆದು ಸಮೀಪಿಸಿದೆ, ಮನೆ ಹೆಸರು ತುಳಸಿ ಎಂದಿತ್ತು, ಕಂಪಿಸಲಾರಂಭಿಸಿದ ಕಾಲುಗಳೊಡನೆ ಮಹಡಿ ಏರಿ ತಲುಪಿ ನನ್ನನ್ನು ನಾನು ನಿಗ್ರಹಿಸಿಕೊಳ್ಳುವ ಸಲುವಾಗಿ ದೀರ್ಘ ಉಸಿರಾಟಕ್ಕೆ ತೊಡಗಿದೆ. ಸಹಜ ಸ್ಥಿತಿಗೆ ಮರಳಲು ಅರ್ಧ ನಿಮಿಷ ಹಿಡಿಯಿತು. ಮೆಲ್ಲಗೆ ಒಳಗೆ ಪ್ರವೇಶಿಸಿ ನೋಡುತ್ತೇನೆ, ಯಾವುದೋ ಒಂದು ಖಟ್ಲೆಗೆ ಸಂಬಂಧಿಸಿದ ಫೈಲೊಳಗೆ ಮುಖ ಮರೆಸಿಕೊಂಡಿರುವ ವಕೀಲ, ಆತನೆದುರಿಗೆ ಕುಳಿತಿರುವ ಒಂದಿಬ್ಬರು, ಕುರ್ಚಿಗಳು ಖಾಲಿ ಇದ್ದರೂ ಗೋಡೆ ಪಕ್ಕ ಕೈಕಟ್ಟಿಕೊಂಡು ನಿಂತಿರುವ ಇನ್ನೊಂದಿಬ್ಬರು, ತಮ್ಮ ತಲೆಗಳ ಮೇಲೆ ಮೇರುಪರ್ವತ ಏರಿರುವುದೆಂಬಂತೆ. ಗಮನ ಸೆಳೆಯಲು ಹುಸಿಕೆಮ್ಮಲು ಪ್ರಯತ್ನಿಸಿದೆನಾದರೂ ಧೈರ್ಯ

ಸಾಲಲಿಲ್ಲ. ಯಾರು ತಾನೆ ಎಷ್ಟು ಹೊತ್ತೂಂತ ತಲೆ ತಗ್ಗಿಸಿರಲಾದೀತು! ಕೆಳಗಿನ ಮನೆಯಲ್ಲಿ ವಗ್ಗರಣೆ ಕೊಟ್ಟ ಪರಿಣಾಮವಾಗಿ, ಇಂಗಿನ ವಾಸನೆ ಮೆಲ್ಲಗೆ ಹರಡಿದ ಪರಿಣಾಮವಾಗಿ..

ಫೈಲೊಳಗಿಂದ ತನ್ನ ಮುಖವನ್ನು ನಿಧನಿಧಾನವಾಗಿ ಮೇಲೆತ್ತಲಾರಂಭಿಸಿದ ವ್ಯಕ್ತಿ ಜೀವೋತ್ತಮರಾವ್ ಹೌಧೋ ಅಲ್ಲವೋ ಎಂದು ಅನುಮಾನಿಸುವಷ್ಟರಲ್ಲಿ ಆತ ಮೆಲ್ಲಗೆ ತನ್ನ ಮೂಗಿನ ತುದಿತನಕ ಇಳಿಬಿದ್ದಿದ್ದ ಚಾಳೇಸವನ್ನು ತನ್ನೆಡಗೈಯ ನಡುಬೆರಳಿನಿಂದ ಭ್ರೂವರೆಗೆ ಸರಿಸುತ್ತ ನೋಡಿ ಗುರುತಿಸಿ "ಅರೆ ಮೀರಾ! ರಂಡಿ ರಂಡಿ" ಎನ್ನುತ್ತ ಯಾಸೆಯಾಗಿ ಎದ್ದು ನಿಂತು ಕೂಡ್ರಲು ಕುರ್ಚಿ ತೋರಿಸಿ ತನ್ನ ತುಟಿಗಳ ನಡುವೆ ಆಶ್ಚರ್ಯಮಿಶ್ರಿತ ನಗೆ ತುಳುಕಿಸಿದನು. ತಮ್ಮ ಮೈಯ ಬೆವರ ವಾಸನೆಯೊಂದಿಗೆ ಕಕ್ಷಿದಾರರಿಬ್ಬರು ಎದ್ದು ಗೋಡೆ ಕಡೆ ಸರಿದರು. ಅಗತ್ಯಕ್ಕಿಂತ ಹೆಚ್ಚು ಕೃಶಗೊಂಡಿದ್ದ ವಕೀಲ ಆರ್ಡರ್ ಮಾಡಿದ ಚಹಾಗಳ ಪೈಕಿ ಒಂದಕ್ಕೆ ಸಕ್ಕರೆ ಇರಲಿಲ್ಲ.

ಸ್ವಲ್ಪ ವಾಚಾಳಿ ಸ್ವಭಾವದ ರಾವ್ ಕ್ಷೇಮಲಾಭಕ್ಕೆ ಸಂಬಂಧಿಸಿದಂತೆ ಮಾತಾಡಿದ್ದು ಹತ್ತು ಪುಟಗಳಿಗಾಗುವಷ್ಟಿತ್ತು. ಚಹಾ ಸೇವನೆ ಮುಗಿದ ಬಳಿಕ ವೆಂಕಟಾವಧಾನಿಗಳ ಸಾವನ್ನು ನೆನಪಿಸಿದ, ಗೊತ್ತಿದ್ದರೂ ಗೊತ್ತಿಲ್ಲವೆಂಬಂತೆ ಆಶ್ಚರ್ಯ ವ್ಯಕ್ತಪಡಿಸಿದೆ, ಕಕ್ಷಿದಾರರನ್ನೆಲ್ಲ ಹೊರಗೆ ಕಳಿಸಿ ತನ್ನೆರಡೂ ಕೈಗಳನ್ನು ಟೇಬಲ್ ಮೇಲೂರಿ ಮುಖವನ್ನು ಹತ್ತಿರಕ್ಕೆ ತಂದು ನೇರವಾಗಿ ದಿಟ್ಟಿಸುತ್ತ "ಬಹಳ ದಿನಕ್ಕೆ ಬಂದಿರುವ ನಿಮ್ಮನ್ನ ಸುಮ್ಮನೆ ಬಿಡುವೆನೇನು!" ಎಂದು ಹೇಳಿ ಕಕ್ಷಿದಾರರಿಗೆ ಏನೋ ಹೇಳಿ ಕಳಿಸಿದ, "ನಮ್ಮ ಜಡ್ಜು ಸ್ಮಾರ್ತರು ಬೇರೆ, ತಮ್ಮ ಮೊಮ್ಮಗನಿಗೆ ಜಗದ್ಗುರುಗಳ ಕೈಲಿಂದ ಅಕ್ಷರಪ್ರಾಶನ ಮಾಡಿಸುವ ಸಲುವಾಗಿ ನಾಲ್ಕು ದಿವಸ ರಜೆ ಹಾಕಿ ಶೃಂಗೇರಿಗೆ ಹೋಗಿರುವರು" ಎಂದು ನಿರಮ್ಮಳನಾಗಿ ಮುಂದುವರಿಸಿದ,

"ನಾವೆಲ್ಲರೂ ಒಕ್ಕೊರಲಿನಿಂದ ಅವಧಾನಿಗಳು ತಮ್ಮ ಬದುಕಿನ ಶತಮಾನೋತ್ಸವವನ್ನು ಆಚರಿಸಿಕೊಳ್ಳಲೆಂದು ಹಾರೈಸಿದ್ದು ನೆನಪಿದೆ ತಾನೆ! ಗಟ್ಟಿಮುಟ್ಟಾಗಿದ್ದ ಆ ಹಿರಿಯರು ಸಾಯುವುದಕ್ಕೂ ಮೊದಲು ಮಾತಾಡಿಸಿಕೊಂಡು ಬಂದಿದ್ದೆ ಮೇಸ್ಟ್ರೆ! ಮಾರನೆ ದಿವಸ ವೈಕುಂಠವಾಸಿಗಳಾದರು ಎಂದರೆ ನಂಬಲಿಕ್ಕಾಗಲಿಲ್ಲ ಕಣ್ರೀ, ಹೃದಯಾಘಾತ ಎಂದು ಒಬ್ಬರು ಆತ್ಮಹತ್ಯೆ ಎಂದು ಇನ್ನೊಬ್ಬರು, ವ್ಯವಸ್ಥಿತ ಕೊಲೆ ಅಂತ ಮತ್ತೊಬ್ಬರು ವದಂತಿ ಹಬ್ಬಿಸಿದರು. ಆ ಮೂರು ಕಾರಣಗಳಿರಲಿಕ್ಕಿಲ್ಲವೆಂದೇ ನಾನು ಭಾವಿಸಿದ್ದೆ. ಅವರ ಜೇಷ್ಠಪುತ್ರ ಅಂದರೆ ತನ್ನ ಅಣ್ಣನೇ ವಿಷ ಪ್ರಾಶನ ಮಾಡಿಸಿ ಕೊಲೆ ಮಾಡಿರುವನೆಂದು ಅವಧಾನಿಗಳ ಮಗಳು ರಾಜೇಶ್ವರಿ ಕೇಸ್ ಹಾಕಿದ್ದಾಳೆ, ಆ ಕೇಸಿಗೆ ಸಂಬಂಧಪಟ್ಟ ಫೈಲು ಇಗೋ ಇಲ್ಲಿದೆ ನೋಡಿ" ಎಂದು ಹೇಳಿದ ಬಳಿಕ ತನ್ನ ಒದ್ದೆಕಣ್ಣುಗಳನ್ನೂ ಮಂಜುಗವಿದಿದ್ದ ಚಾಳೇಸಿನ ಗಾಜುಗಳನ್ನೂ ಕರವಸದ ಸಹಾಯದಿಂದ ವರೆಸಿಕೊಂಡರು.

ಅವರ ಮಾತುಗಳು ಬಾಣಗಳೋಪಾದಿಯಲ್ಲಿ ನನ್ನೆದೆಯನ್ನು ಫಾಸಿಗೊಳಿಸಿದವು. ಕಾರಣ ಅವಧಾನಿಗಳು ದೈಹಿಕವಾಗಿ ಹಾಗಿದ್ದರು. ತಮ್ಮ ಪಕ್ಕದಲ್ಲಿ ಕುಳಿತಿದ್ದ ನನ್ನೊಂದಿಗೆ ಆ ಹಿರಿಯರು ಶ್ರೀನಾಥನ ಶೃಂಗಾರ ನೈಷಧಂ ನನ್ನಯ್ಯನ ಮಹಾಭಾರತ ಅಲ್ಲಸಾನಿ ಪೆದ್ದನಾಮಾತ್ಯನ ಮನುಚರಿತ್ರಗಳಂಥ ತೆಲುಗು ಮಹಾಕಾವ್ಯಗಳನ್ನು ಕುರಿತಂತೆ ಚರ್ಚಿಸಿದ್ದರು. ಅಲ್ಲದೆ ಹಿಂಸಾವೃತ ರಾಯಲಸೀಮೆಯಲ್ಲಿ ಮೃತ್ಯುಂಜಯ ಜಪವನ್ನು ಜನಪ್ರಿಯಗೊಳಿಸುವ ಕೆಲಸವನ್ನು ಸರ್ಕಾರ ಕೈಗೆತ್ತಿಕೊಳ್ಳುವ ಅಗತ್ಯವಿರುವುದಾಗಿಯೂ ಹೇಳಿದ್ದರು. ಅನಾಯಾಸ ಮೃತ್ಯು ಕುರಿತಂತೆ ಹೇಳುತ್ತಿರುವಾಗಲೇ ಮಂತ್ರಿ ತುಮ್ಮಲ ರಾಮಕೃಷ್ಣ ಅವರ ಕೃಶಕೊರಳಿಗೆ

ಹೂಮಾಲೆ ಹಾಕಿ ಪಾದಾಭಿವಂದನೆ ಸಲ್ಲಿಸಿದ್ದು. ತೆಲುಗು ಇಂಗ್ಲೀಷ್ ಸಂಸ್ಕೃತಗಳಂಥ ಮೂರೂ ಭಾಷೆಗಳನ್ನು ಸಮಪ್ರಮಾಣದಲ್ಲಿ ಜೀರ್ಣಿಸಿಕೊಂಡಿದ್ದ ಆ ಶ್ರೀಯುತರು ಆ ಸಮಾರಂಭವನ್ನು ಉದ್ದೇಶಿಸಿ ಮಾತಾಡಿದ್ದು ಒಂದು ತಾಸುಕಾಲ. ಆ ಬಳಿಕ ಆ ಹಿರಿಯರನ್ನು ಅವರ ಮನೆಯೊಳಗೆ ಕಾಣಲು ಹಲವು ಸಲ ಪ್ರಯತ್ನಿಸಿದೆನಾದರೂ ಸಾಧ್ಯವಾಗಲಿಲ್ಲ. ಅಂಥವರನ್ನು ಅವರ ಸ್ವಂತ ಮಗನೇ! ಅದುವರೆಗೆ ಗಮನಿಸುತ್ತಿದ್ದ ವಕೀಲರು..

"ಮೇಸ್ಟ್ರೇ ನೀವು ಯೋಚಿಸುತ್ತಿರುವುದು ಅಕ್ಷರಶಃ ನಿಜ, ಅವರ ಮುಂದೆ ನಾಗಶೇಷಶಯನ, ಪಣೀಂದ್ರಶರ್ಮರಂಥ ಶತಾವಧಾನಿಗಳನ್ನು ನೀವಾಳಿಸಬೇಕು ನೋಡಿ, ಹಾಗಿತ್ತು, ಅವರ ವಾಗ್ವಿಲಾಸ! ಶತಾಯುಷಿಯಾಗುವ ಎಲ್ಲಾ ಅರ್ಹತೆ ಇದ್ದ ಅಂಥವರನ್ನು ಸ್ವಂತ ಮಗ ಬಲಿ ತೆಗೆದುಕೊಳ್ಳಬಾರದಿತ್ತು, ಏನು ಮಾಡುವುದು ಹೇಳಿ! ಆ ವಿಧಿ ಯಾರ್ಯಾರ ಹಣೆಯಲ್ಲಿ ಏನು ಬರೆದಿರುವುದೋ ಏನೊ, ಬಲ್ಲವರ್ಯಾರು? ಅದಿರಲಿ, ಏನು ಬಂದದ್ದು ಇಷ್ಟು ದೂರ!" ಎಂದು ಕೇಳಿದರು. ಅದಕ್ಕೆ ಏನು ಹೇಳುವುದೆಂದು ತಡಕಾಡಿದೆ. ಪುನಃ ತಾವೆ.. "ಒಂದು ವಿಚಿತ್ರವೆಂದರೆ ಕಥೆ ಬರೆಯಬೇಕಾದವರು ವಕೀಲರಾಗುವುದು, ವಕೀಲರಾಗಬೇಕಾದವರು ಕಥೆಗಾರರಾಗುವುದು ಎಷ್ಟು ವಿಚಿತ್ರ ಅಲ್ಲವೆ! ನಿಮ್ಮ ಹತ್ತಿರ ಇವಿಷ್ಟು ಫೈಲುಗಳಿದ್ದಿದ್ದಲ್ಲಿ ಎಷ್ಟು ಕಥೆಗಳನ್ನು ಬರೆಯುತ್ತಿದ್ದಿರೋ ಏನೊ! ನಾನೂ ನಿಮ್ಮಂತೆ ಶಾಲಾ ಮಾಸ್ತರಿಕೆ ಮಾಡಿಕೊಂಡಿರ ಬೇಕಿತ್ತೂಂತ ಈಗ ಅನ್ನಿಸ್ತಿದೆ" ಎಂದರು ಬೇಸರದಿಂದ. ಅದಕ್ಕೆ ನಾನು "ಒಂದು ರೀತಿಯಲ್ಲಿ ನೀವೀಗ ಕೋರ್ಟಿನಲ್ಲಿ ಮಾಡುತ್ತಿರುವುದು ಅದನ್ನೇ ಸಾರ್. ಫೇಮೋಸ್ ಕ್ರಿಮಿನಲ್ ಲಾಯರಾಗಿರುವ ನೀವೇ ಹೀಗೆ ಹೇಳಿದರೆ ಹೇಗೆ!" ಎಂದೆ.

ಅದಕ್ಕೆ ಅವರು, "ಫೇಮೋಸ್ಸಾಗಿರುವುದರಿಂದಾಗಿಯೇ ಡಯಾಬಿಟೀಸ್, ಬೀಪಿ ಈ ನನ್ನ ನಲವತ್ತಕ್ಕೇ ಬಂದಿರುವುದು! ಈ ರಾಯಲಸೀಮೆ ಬಿಟ್ಟು ಬೇರೆ ಎಲ್ಲಾದರು ಪ್ರಾಕ್ಟೀಸು ಮಾಡಿದ್ದರೆ ಸುಖವಾಗಿರುತ್ತಿದ್ದೆನೇನೊ! ಪುರುಸೊತ್ತೆ ಇಲ್ಲ ಕಣ್ರೀ, ನೋಡಿ ಕಳೆದ ತಿಂಗಳು ಇದೇ ದಿವಸ ಊಳೂರು ಪುರುಷೋತ್ತಮರೆಡ್ಡಿಯವರ ಮಗಳು ವನಜಾಕ್ಷಿ ಬಂದು ತನ್ನ ಗೋಳು ಹೇಳಿಕೊಂಡು ಹೋದಳು, ಮೊನ್ನೆ ಅಳ್ಳಗಡ್ಡದಿಂದ ಅವಧಾನಿಗಳ ಮಗಳು ರಾಜೇಶ್ವರಿ. ಈ ದಿವಸ ಬೆಳಿಗ್ಗೆ ಆಸ್ಪರಿ ಲಿಂಗಾರೆಡ್ಡಿ ಕೊಲೆ ಕೇಸು ಬಂದಿತ್ತು. ಅವಧಾನಿಗಳು ಎಷ್ಟು ಮುಖ್ಯಾನೋ, ಊಳೂರು ರೆಡ್ಡಿ ಸಹ ಅಷ್ಟೇ ಮುಖ್ಯ, ಇನ್ನು ಲಿಂಗಾರೆಡ್ಡಿ ಕೊಲೆ ಕೇಸಿನಲ್ಲಿ ತಲೆಮರೆಸಿಕೊಂಡಿರುವ ಹಲಗೇರಿ ವೀರಾರೆಡ್ಡಿಯಿಂದಾಗಿಯೇ ನಾನು ತಕ್ಕಮಟ್ಟಿಗೆ ಆಸ್ತಿ ಮಾಡಿಕೊಂಡಿರುವುದು, ಪುರುಷೋತ್ತಮರೆಡ್ಡಿ ನನ್ನ ಕ್ಲೈಂಟಷ್ಟೆ ಆಗಿರಲಿಲ್ಲ ಮೇಸ್ಟ್ರೇ, ನಾನವರ ಫ್ಯಾಮಿಲಿ ಮೆಂಬರ್ರು. ಟಿಡಿಪಿ ಛೀಫ್ ನಾಯ್ಡುಗೆ ರೆಡ್ಡಿ ತುಂಬಾ ಕ್ಲೋಜಿದ್ದರು, ಆತನನ್ನು ಸುಪಾರಿ ಕೊಟ್ಟು ಕೊಲ್ಲಿಸಿರುವ ಕೋಗಿಲೆತೋಟದ ರಾಘವರೆಡ್ಡಿ ಸಹ ನನ್ನ ಪರಮಾಪ್ತ. ಯಾರನ್ನು ವಾಪಸ್ಸು ಕಳಿಸಬೇಕಿತ್ತು ಹೇಳಿ, ರೆಡ್ಡಿಗಳೆಲ್ಲ ಫ್ಯಾಕ್ಷನಿಷ್ಟುಗಳು ಸರೆ, ಆದರೆ ಈ ಅವಧಾನಿಗಳು ಸಾಯುವುದಕ್ಕೆ ಯಾವ ಪಾಪ ಮಾಡಿದ್ದರು ನೀವೆ ಹೇಳಿ! ರೆಡ್ಡಿಗಳೇನೋ ಅನ್‌ಎಜುಕೇಟೆಡ್ಸ್ ಸರೆ! ಆದರೆ ಅವಧಾನಿಗಳಾಗಲೀ, ಅವರ ಸಾವಿಗೆ ಕಾರಣನಾಗಿರುವ ಪುರಾಣಂ ಸುಬ್ರಮಹ್ಮಣ್ಯಶರ್ಮ ಎಜುಕೇಟೆಡ್ಸ್ ಅಲ್ಲವೆ! ಶರ್ಮನಂಥ ಸುಶಿಕ್ಷಿತರು ರೆಡ್ಡಿಗಳಂಥ ಅಶಿಕ್ಷಿತರಿಗಿಂತ ಅಪಾಯಕಾರಿ ಅಲ್ಲವೆ! ಯಾವುದು ನ್ಯಾಯ ಯಾವುದು ಅನ್ಯಾಯ! ನೀವೂ ಕಥೆಗಾರರೆಂದು ಕೇಳಿರುವೆ, ಇದೇ ಸಬ್ಜೆಕ್ಟನ್ನು ಇಟ್ಟುಕೊಂಡು ಯಾವ ರೀತಿ ಬರೆಯಬಲ್ಲಿರಿ! ಇಲ್ಲಿ ತಪ್ಪಿರುವುದು ಎಲ್ಲಿ. ತಪ್ಪು ಕೊಲೆಗೀಡಾಗಿರುವವರಲ್ಲಿದೆಯೋ, ಕೊಲೆ

ಮಾಡಿಸಿದವರಲ್ಲಿದೆಯೊ, ಕೊಲೆ ಮಾಡಿದವರಲ್ಲಿದೆಯೋ! ನೀವು ಯೋಚಿಸಿ. ನನಗಂತೂ ಸಾಕುಸಾಕಾಗಿ ಹೋಗಿದೆ ಮೇಸ್ಟ್ರೇ!" ಎಂದು ಸಿಗರೇಟ್ ಹಚ್ಚಿಕೊಂಡರು.

ಅವರಾಡಿದ ಮಾತುಗಳನ್ನು ಕೇಳಿ ನಾನೂ ಗೊಂದಲಕ್ಕೀಡಾದೆ, ದಿಗ್ಭ್ರಮೆಗೊಂಡೆ. ಕಟೆಕಟೆಯಲ್ಲಿ ನಿಂತಿರುವ ಅನುಭವ. ಅದಕ್ಕೆ ಏನು ಹೇಳಲಿ, ಹೇಳದೆ ಇರಲಿ!

"ಸಾರ್, ಒಂದಕ್ಕೊಂದು ಲಿಂಕಿದೆ, ಅದೆಲ್ಲಿರುವುದೆಂದು ತಿಳಿಯುತ್ತಿಲ್ಲ, ಎಲ್ಲಾ ಗೋಜಲು" ಎಂದೆ ಅಂತಿಮವಾಗಿ.

"ಆ ಲಿಂಕೆಲ್ಲಿರುವುದೆನ್ನುವುದು ತಿಳಿಯುತ್ತಿಲ್ಲ, ಆ ಸಮಸ್ಯೆ ಲಾಯರ್ರಾಗಿರುವ ನನ್ನದೂ ಲೇಖಕರಾಗಿರುವ ನಿಮ್ಮಂಥವರದ್ದೂ ಅಲ್ಲವೆ!" ಎಂದು ಹೇಳುತ್ತ ತಮ್ಮ ಬಾಯಿ ತುಂಬಿದ ಹೊಗೆಯನ್ನು ಫೈಲು ಮರೆಮಾಚಿ ಹೊರಚೆಲ್ಲಿದರು.

ಜೀವೋತ್ತಮರಾವ್ ಕುರಿತು ನಾನು ತಿಳಿದುಕೊಂಡಿದ್ದೇ ಬೇರೆ, ಈಗ ಅವರು ತಮ್ಮ ಮಾತುಗಳ ಮೂಲಕ ಅಭಿವ್ಯಕ್ತಗೊಳ್ಳುತ್ತಿರುವುದೇ ಬೇರೆ. ನಿಜವಾಗಿಯೂ ಎದುರಿಗಿರುವ ಈ ವ್ಯಕ್ತಿ ಸೆನ್ಸಿಬಲ್. ಅಪರಾಧೀ ಜಗತ್ತನ್ನು ಕುರಿತು ಆಳವಾಗಿ ಯೋಚಿಸುತ್ತಿರುವರು. ಅರೆ ನಾನಿಲ್ಲಿಗೆ ಬಂದಿರುವುದು, ಸರಿಯುತ್ತಿರುವ ಹೊತ್ತನ್ನು ಲೆಕ್ಕಿಸಿದೆ ಚರ್ಚಿಸುತ್ತಿರುವುದು! ಟೇಬಲ್ ಮರೆಯಲ್ಲಿ ಮುಂಗೈಗಿದ್ದ ಗಡಿಯಾರ ನೋಡಿಕೊಂಡೆ, ಆಗಲೇ ಅರು ದಾಟಿರುವುದು. ಅದನ್ನು ತಾವು ಗಮನಿಸಿದರೇನೋ, ತಾವೇ ಹೇಳಿದರು.

"ನಮ್ಮ ಸಮಸ್ಯೆ ಹೇಳಿಕೊಳ್ಳಲು ನಿಮ್ಮಂಥ ಸೆನ್ಸಿಬಲ್ ಗೆಳೆಯರ್ಯಾರೂ ಇಲ್ಲ ನನಗಿಲ್ಲಿ, ಅದೇ ಕೋರ್ಟ್ ಅವೇ ಕ್ಲೈಂಟ್ಸು ಅವೇ ಫೈಲುಗಳು ಯಾಂತ್ರಿಕವಾಗಿ ಅಡುಗೆ ಬೇಯಿಸಿ ಉಣಬಡಿಸುವ ಅದೇ ಹೆಂಡತಿ!" ಎಂದು ಸ್ವಗತ ರೀತಿಯಲ್ಲಿ ಹೇಳಿಕೊಂಡ ಬಳಿಕ

"ನಾನು ಕ್ರಿಮಿನಲ್ ಲಾಯರ್ರಾಗಿರುವುದರಿಂದಾಗಿಯೇ ಈ ಸಮಸ್ಯೆ, ಈ ಆಫೀಸನ್ನು ನನ್ನ ತಲೆಗೆ ಕಟ್ಟಿರುವುದು ಯಾರೆಂದು ನಿಮಗೆ ತಿಳಿದಿರುವುದೋ ಇಲ್ಲವೋ! ಅವರೂ ಫೇಮೋಸ್ ಕ್ರಿಮಿನಲ್ ಲಾಯರ್ರೆ! ಅದೇ ಕಣ್ರೀ ಮೂರು ವರ್ಷಗಳ ಹಿಂದೆ ಹಾಡು ಹಗಲೆ, ಅದೂ ತಮ್ಮ ಕ್ಲೈಂಟ್ಸುಗಳಿಂದ ಕೊಲೆಯಾದರಲ್ಲ, ಅದೇ ವೈಕುಂಠಂ ಶ್ರೀರಾಮುಲು! ನಾನೀ ಸ್ಥಿತಿ ತಲುಪಿರುವುದಕ್ಕೆ ಆ ಪುಣ್ಯಾತ್ಮ ಕಾರಣ. ಅತ್ತ ಧರಿ ಇತ್ತ ಪುಲಿ, ಯಾವ ಕಡೆ ವಾಲಿದರೂ ಮರಣ ಕಟ್ಟಿಟ್ಟ ಬುತ್ತಿ, ಯಾವಾಗ ನನ್ನಂಥ ವಕೀಲನೂ.." ಎನ್ನುತ್ತ ಒಂದು ಕ್ಷಣ ಮ್ಲಾನವದನರಾದರು.

ಅವರು ಹೇಳಿದ್ದು ಕೇಳಿ ಪುನಃ ಗಾಬರಿಗೊಂಡೆ, ವೈಕುಂಠಂ ಶ್ರೀರಾಮುಲು ಆಲೂರು ಪ್ರಾಂತದಲ್ಲಿ ಸುಪ್ರಸಿದ್ಧ ವಕೀಲರು. ಗರಿಗರಿ ಬಿಳಿಉಡುಪುಗಳಲ್ಲಿರುತ್ತಿದ್ದ, ಸದಾ ಹತ್ತಾರು ಮಂದಿಯಿಂದ ಸುತ್ತುವರಿದಿರುತ್ತಿದ್ದ, ಒಂದರ ಹಿಂದೊಂದರಂತೆ ಬರಕ್ಲೀ ಸಿಗರೇಟುಗಳನ್ನು ಸೇದುತ್ತಿದ್ದ, ಎರಡು ಚುನಾವಣೆಗಳಲ್ಲಿ ಶಾಸಕಸ್ಥಾನಕ್ಕೆ ನಿಂತು ಪರಾಭವಗೊಂಡಿದ್ದ, ಸಿಡುಕು ಸ್ವಭಾವದ ಆ ಸಣಕಲ ವ್ಯಕ್ತಿಯನ್ನು ನಾನೂ ದೂರದಿಂದ ನೋಡಿದ್ದ ನೆನಪು. ಅವರ ಕೊಲೆ ವಾರ್ತೆಯನ್ನು ಪತ್ರಿಕೆಗಳಲ್ಲಿ ಓದಿದ್ದ ನೆನಪು. ಅವರ ಹಾಗೆಯೇ ಇವರೂ! ಭಯವಾಯಿತು ನನಗೆ!

"ಸಾರ್ ಹಾಗೆಲ್ಲ ಕೆಟ್ಟದಾಗಿ ಊಹಿಸಿಕೊಳ್ಳಬೇಡಿ ದಯವಿಟ್ಟು" ಎಂದೆ.

"ಊಹಿಸಿಕೊಳ್ಳುವುದಲ್ಲ ಇದು ಫ್ಯಾಕ್ಟ್! ಈ ಪ್ರೊಫೆಷನ್ ಕತ್ತಿ ಮೇಲೆ ಸಾಮು ಮಾಡಿದಂತೆ, ಯಾವ ಕಡೆ ವಾಲಿದರೂ ಅಪಾಯ!" ಸಿಗರೇಟಿನ ತುಂಡನ್ನು ಕಿಟಿಕಿ ಕಡೆ ಎಸೆಯುತ್ತ ಹೇಳಿದರು.

"ನೀವು ಸಿವಿಲ್ ಲಾಯರ್‍ರಾಗಿದ್ದಲ್ಲಿ ಈ ಸಮಸ್ಯೆ ಇರುತ್ತಿರಲಿಲ್ಲವೇನೋ!"

"ಸಿವಿಲ್ ವ್ಯಾಜ್ಯಗಳೇ ಕ್ರಿಮಿನಲ್ ವ್ಯಾಜ್ಯಗಳಾಗುವುದು ಮೇಸ್ಟ್ರ, ಇದೇ ಅವಧಾನಿಗಳ ಕೇಸ್ ನೋಡಿ, ಗಾಂಧಿವಾದಿಗಳಾದ ಅವರು ತಮ್ಮ ಸ್ವಯಾರ್ಜಿತ ಆಸ್ತಿಯನ್ನು ಸರ್ವೋದಯ ಸಂಸ್ಥೆಗೆ ವಿಲ್ ಬರೆದದ್ದೇ ಶರ್ಮ ಕೊಲೆ ಮಾಡಿಸಲು ಕಾರಣ. ತಂದೆಯ ಕೊಲೆಗೆ ಕಾರಣನಾಗಿರುವ ಅವರ ಮಗ ಪುರಾಣಂ ಸುಬ್ರಹ್ಮಣ್ಯಂಶರ್ಮನಿಗೇನು ದೇವರು ಕಡಿಮೆ ಮಾಡಿಲ್ಲ, ಆ ವ್ಯಕ್ತಿ ನಂದ್ಯಾಲದಲ್ಲಿ ಅಸಿಸ್ಟೆಂಟ್ ಕಮಿಷನರ್ರು, ಕೈ ತುಂಬಾ ಸಂಬಳ, ಅದೂ ಅಲ್ಲದೆ ತನ್ನ ಹೆಂಡತಿ ಕಡೆಯಿಂದಲೂ ಕೋಟ್ಯಾಂತರ ಆಸ್ತಿ ಬಂದಿದೆ, ಇಷ್ಟೆಲ್ಲಾ ಇದ್ದೂ ಆ ವ್ಯಕ್ತಿ ಹೆತ್ತ ತಂದೆಯನ್ನೇ ಕೊಲೆ ಮಾಡಿಸುವನೆಂದರೆ!"

"ದುರಾಸೆ ಸಾರ್"

"ಸರಿಯಾಗಿ ಹೇಳಿದಿರಿ ನೋಡಿ. ಬುದ್ಧ ಹೇಳಿರುವುದು ಅದನ್ನೇ ಆಸೆಯೇ ದುಃಖಕ್ಕೆ ಕಾರಣಾಂತ. ಏನು ಮಾಡಲಿಕ್ಕಾಗುವುದು! ಈ ರಾಯಲಸೀಮೆ ವಾಸ್ತು ಹಾಗಿದೆ" ಎಂದು ತಮ್ಮ ಮುಖದ ಮೇಲೆ ತುಸು ಗೆಲುವು ತಂದುಕೊಂಡರು, ಬಳಿಕ ತಾವೆ "ಕಾರಣವಿಲ್ಲದೆ ಬರುವವರಲ್ಲ ನೀವು, ಏನಾದರು ಸಮಸ್ಯೆ ಇದ್ದರೆ ಹೇಳಿ" ಎಂದು ಆಪ್ಯಾಯತೆಯಿಂದ ಪರಾಂಬರಿಸಿದರು. ನಾನು ಬಂದಿರುವ ಕಾರಣವೇ ಬೇರೆ, ಶರಭನ ಕುರಿತಾಗಲೀ, ಕ್ರಿಮಿನಲ್ ಖಟ್ಲೆಗಳ ಕುರಿತಾಗಲೀ ಪ್ರಶ್ನಿಸುವುದು ಸೂಕ್ತವಲ್ಲ, ಏನಾದರೊಂದು!

"ಅಂಥಾದ್ದು ಏನೂ ಇಲ್ಲ ಸಾರ್, ವಾಗಿಲಿಗೆ ಬಂದು ಐದು ವರ್ಷ ಆಯ್ತು" ಇಷ್ಟವಿರದಿದ್ದರೂ ಹೇಳಿದೆ ಔಪಚಾರಿಕವಾಗಿ.

"ಅಂಥ ಕಡೆ ಐದು ವರ್ಷ ಪೂರೈಸಿರುವಿರೆಂದರೆ ನೀವೇ ಗ್ರೇಟ್! ನೋಡಿಯೂ ನೋಡದವರಂತೆ ಕೇಳಿಯೂ ಕೇಳದವರಂತೆ ಇದ್ದರೆ ಯಾವ ಸಮಸ್ಯೆ ಇರುವುದಿಲ್ಲ. ನೀವು ಅಲ್ಲಿ ಹಾಗೆ ಇರುವಿರೆಂದಾಯಿತು, ಗುಡ್"

"ಹೊಳಗುಂದಿಗೆ ಟ್ರಾನ್ಸ್‌ಫರ್!" ಎಂದೆ ಕಾಟಾಚಾರಕ್ಕೆ.

"ಅಯ್ಯೋ ಅದಕ್ಕೇನು! ಎಜುಕೇಷನ್ ಮಿನಿಷ್ಟರ್ ಪ್ರಭಾಕರ್ ನನ್ನ ಕ್ಲೈಂಟ್, ತುಂಬಾನೆ ಕ್ಲೋಜ್, ಬನ್ನಿ ಮಾಡಿಸಿಕೊಡುವೆ"

"ಅಷ್ಟು ಮಾಡಿಸಿ ಪುಣ್ಯ ಬರುತ್ತೆ, ಎಪ್ರಿಲ್ ಮೇನಲ್ಲಿ ಬಂದು ತಮ್ಮನ್ನು ಕಾಣುವೆ" ಎಂದು ಅಲ್ಲಿಂದ ಕೈಕುಲುಕಿ ಬೀಳ್ಕೊಂಡೆ.

ವಕೀಲ ಜೀವೋತ್ತಮರಾವ್ ಅವರನ್ನು ಭೆಟ್ಟಿ ಮಾಡದಿದ್ದಲ್ಲಿ ನನ್ನಿಂದ ತಪ್ಪು ಸಂಭವಿಸುತ್ತಿತ್ತು ನಿಸ್ಸಂದೇಹವಾಗಿ. ಅಪರಾಧೀ ಜಗತ್ತಿನ ಪೂರ್ವಾಪರ ತಿಳಿದುಕೊಳ್ಳದೆ ಹೋಗುತ್ತಿದ್ದೆನೇನೊ! ವನಜಾಕ್ಷಿ ದೂರು ನೀಡಿರುವುದು ಶರಭನ ಮೇಲೋ ಇನ್ನಾರ ಮೇಲೊ! ಅದರಿಂದ ನನಗಾಗಿರಬೇಕಿರುವುದಾದರೂ ಏನು! ಶರಭ ಉಪ್ಪು ತಿಂದಿದ್ದ ಪಕ್ಷದಲ್ಲಿ ನ್ಯಾಯಾಲಯವೇ ನೀರು ಕುಡಿಸುವುದು. ಅದನ್ನು ತಪ್ಪಿಸಲು ಶಾಲಾ ಮಾಸ್ತರನಾಗಿರುವ ನಾನೆಷ್ಟರವನು! ಪರಶುರಾಮನ ಪ್ರೀತ್ಯರ್ಥವಾಗಿ ಅವನಿಗೆ ಆಶ್ರಯ ನೀಡಿರುವೆ, ತಮ್ಮನ ಪದವಿ ಕಲ್ಪಿಸಿರುವೆ, ಅಲ್ಲದೆ ಅವನಿಂದ ಅಣ್ಣಾ ಎಂದು ಕರೆಸಿಕೊಂಡಿರುವೆ. ಇಷ್ಟವಿರದಿದ್ದರೂ ವಕೀಲರನ್ನು ಭೆಟ್ಟಿ ಮಾಡಿರುವೆ. ಇಷ್ಟು ಸಾಕು ನಾನು ಮಾಡಿರುವುದು. ಉಳಿದದ್ದು ಅವನ ಹಣೆಬರಹ ಎಂದು ಮುಂತಾಗಿ ಯೋಚಿಸುತ್ತ ಬಸ್ ನಿಲ್ದಾಣ ತಲುಪಿ ನೋಡುತ್ತೇನೆ.....!

++++

ಇಷ್ಟೊತ್ತಿಗಾಗಲೇ ಶ್ರೀರಾಮ ಪ್ರಯಾಣಿಕರನ್ನು ಆದೋನಿಯಲ್ಲಿ ಇಳಿಸಿ ತಾನು ಮುಬಾರಕ್ ಗ್ಯಾರೇಜಿನಲ್ಲಿ ಪ್ರಥಮ ಚಿಕಿತ್ಸೆ ಮಾಡಿಸಿಕೊಳ್ಳುತ್ತಿರಬಹುದು. ಇನ್ಯಾವುದಾದರೊಂದು ಬಸ್ಸೋ ಜೀಪೋ ಮೆಟಡರ್ರೋ ಯಾವುದಾದರೊಂದು ಆದೋನಿ ತಲುಪಲು! ಆಗಲೆ ರಾತ್ರಿ ಏಳು ದಾಟಿರುವುದು ಬೇರೆ, ವಕೀಲರ ಬಳಿ ಸಮಯ ಹೋಗಿರುವುದೇ ತಿಳಿಯಲಿಲ್ಲ. ಇಡೀ ರಾತ್ರಿ ಎಲ್ಲಿ ಕಳೆಯುವುದು! ಮೊದಲೇ ಆಲೂರು ದೊಡ್ಡ ಗಾತ್ರದ ಹಳ್ಳಿ, ಬಳ್ಳಾರಿ ಮತ್ತು ಆದೋನಿ ನಡುವಿನ ರಾಜ್ಯಹೆದ್ದಾರಿ ಹೋಗಿರುವ ಕಾರಣದಿಂದಾಗಿ, ಜಿಲ್ಲೆಯ ಪ್ರಮುಖ ರಾಜಕಾರಣಿ ವಿಜಯಭಾಸ್ಕರರೆಡ್ಡಿ ವಿಶೇಷ ಮುತುವರ್ಜಿಸಿದ್ದರಿಂದಾಗಿ ಆಲೂರು ನಾಲ್ಕರಿಂದ ಆರರವರೆಗೆ ಬೆಳೆದಿರುವುದು. ಚಿಕ್ಕಪುಟ್ಟ ಹೋಟಲ್‌ಗಳನ್ನು ಹೊರತುಪಡಿಸಿದರೆ ಯಾವುದೇ ವಸತಿಗೃಹದ ಸೌಲಭ್ಯವಿಲ್ಲ. ಅಲ್ಲದೆ ಸೊಳ್ಳೆ ನೊರಜುಗಳ ಹಾವಳಿ ಬೇರೆ. ಸಂಜೆಯಾದ ಬಳಿಕ ನಾನು ಯಾವತ್ತೂ ಅಲ್ಲಿರಲು ಪ್ರಯತ್ನಿಸಿರಲಿಲ್ಲ ಬೇರೆ. ಏನು ಮಾಡುವುದು! ಕಣ್ಣಾಡಿಸಿದೆ. ಉಡುಪಿ ಹೋಟಲ್ ಬೇರೆ ಮುಚ್ಚಿರುವುದು. ಅದೇ ಸಮಯಕ್ಕೆ ಸರಿಯಾಗಿ ದೂರದಲ್ಲಿ ವ್ಯಕ್ತಿಯೋರ್ವ ಗೋಚರಿಸಿದ, ಹತ್ತಿರವಾದಂತೆ ತಾನು ಕುಡಿದಿರುವುದಾಗಿ ಸಾಬೀತುಪಡಿಸಿದ, ಇನ್ನೂ ಹತ್ತಿರವಾಗುವಷ್ಟರಲ್ಲಿ ತಾನೇ ಮಸಾಲೆ ಈರಣ್ಣನೆಂದು ಮನವರಿಕೆಯಾದ. ನನಗೋ ನಿಧಿ ದೊರಕಿದಷ್ಟು ಸಂತೋಷವಾಯಿತು.

"ಎಲ್ಲಯ್ಯಾ ನಿಮ್ಮ ಸಾಹುಕಾರ" ಎಂದು ಕೇಳಿದೆ ಸಹಜ ರೀತಿಯಲ್ಲಿ.

"ಆ ಬೋಳಿಮಗ ಎಲ್ಲಂತ ನನಗೇನು ಗೊತ್ತೂರಿ! ಅದೊತ್ತಟ್ಟಿಗಿರಲಿ ನೀವೀಗ ನನಗೆ ಅರ್ಜೆಂಟಾಗಿ ಐವತ್ರುಪಾಯಿ ಕೊಡಲೇಬೇಕು" ಎಂದು ಗದರಿಕೆ ಧ್ವನಿಯಲ್ಲಿ ಕೇಳಿಬಿಡುವುದೆ!

ಮೈಪರಚಿಕೊಳ್ಳುವಷ್ಟು ಕೋಪ ಬಂತು. ಅಷ್ಟರಲ್ಲಿ ವ್ಯಕ್ತಿಯೋರ್ವ ಹತ್ತಿರವಾಗುತ್ತಲೇ ತಾನು ಹೆಬ್ಬಾರ್ ಎಂದು ಸಾಬೀತುಪಡಿಸಿದ್ದು ನನ್ನ ಅದೃಷ್ಟವೇ ಸರಿ. ತಾನು ಬಹಿರ್ದೆಸೆ ತಿಕಪ್ರಕ್ಷಾಳನ ಸಲುವಾಗಿ ಕೆರೆ ಕಡೆ ಹೋಗಿದ್ದನೇನೊ! ತನ್ನೊಂದು ಕೈಯಲ್ಲಿ ತಂಬಿಗೆಯನ್ನೂ ಇನ್ನೊಂದು ಕೈಯ ಸಹಾಯದಿಂದ ಲುಂಗಿಯನ್ನು ಸೊಂಟಕ್ಕೆ ಕಟ್ಟಿಕೊಳ್ಳುತ್ತಲೂ, ತನ್ನೆರಡೂ ಕಣ್ಣುಗಳಿಂದ ಇನ್ನೂ ಇಲ್ಲೇ ಇರುವಿರಾ ಎಂದು ಕೇಳುತ್ತಲೂ ತೀರಾ ಹತ್ತಿರವಾದ. ತನ್ನ ಹೋಟಲ್ಲಿನಲ್ಲಿ ಮಸಾಲೆಯ ಹಾಕುವ ಯಕಶ್ಚಿತ್ ಶೂದ್ರನು ತನ್ನ ಕುರಿತು ಪ್ರಯೋಗಿಸಿದ ಬಯ್ಗಳನ್ನು ತಾನು ಕೇಳಿಸಿಕೊಂಡಿದ್ದನೇನೊ! ಬಯ್ಯುವುದು ಬಯ್ಸಿಕೊಳ್ಳುವುದು ತಮ್ಮಂಥ ಪರದೇಶಿಗಳಿಗೆ ಅನಿವಾರ್ಯವೆಂದು ಭಾವಿಸಿದ್ದನೇನೊ! ಇದೆಲ್ಲ ಮಾಮೂಲು ಎಂಬಂತೆ ನನ್ನ ಕಡೆ ನೋಡಿದ, ಆತನ ನೋಟದಲ್ಲಿ ಕೀಳರಿಮೆ ಇತ್ತು. ಅಯ್ಯೋ ತನಗೆ ಅನ್ನ ಆಶ್ರಯ ನೀಡಿದ ಧಣಿಯನ್ನೇ ಬೋಳಿಮಗನೆಂದು ಬಯ್ದೆನಲ್ಲಾ ಎಂಬ ಪಾಪಪ್ರಜ್ಞೆಯಿಂದ ಈರಣ್ಣನೂ ಕಂಗಾಲಾಗಿರುವಂತೆ ಗೋಚರಿಸಿದ. ತನ್ನ ಧಣಿ ತನ್ನನ್ನು ಬಯ್ಯುವ ಮೊದಲೇ ತಾನು ತೂರಾಡುತ್ತಲೇ ಅಲ್ಲಿಂದ ಹೊರಟು ಕಾಣೆಯಾದ.

"ತಪ್ಪು ತಿಳಿಬೇಡಿ ಮೇಸ್ಟ್ರೆ, ನಮಗೆ ಕುಡುಕರ ಸಹವಾಸ ಮಾಮೂಲು, ನಮ್ಮ ಈರಣ್ಣನೂ ಒಳ್ಳೆಯವನೆ, ಆದರೆ ಕುಡಿದನೆಂದರೆ ಮನುಷ್ಯನೇ ಅಲ್ಲ. ಇತ್ತೀಚೆಗೆ ಕುಡಿತದಿಂದ ದೂರ ಇದ್ದ, ಆದರೆ ನೀವು ವಾಗಿಲಿಯನ್ನು ನೆನಪು ಮಾಡಿಕೊಟ್ಟಿದ್ದೇ ನೆಪವಾಯಿತು ನೋಡಿ. ಇಂಥವರಿಗೆ ಬುದ್ಧಿ ಕಲಿಸಲೇನು ನಮ್ಮದು ಮಿಲಿಟರಿ ಹೋಟಲ್ಲೇ! ಹೇಳಿಕೇಳಿ ನಾವು ಉಡುಪಿ

ಕಡೆಯ ಸಭ್ಯಸ್ಥ ಜನ, ಇಂಥ ಸ್ಥಳೀಯರ ಸಹವಾಸಕ್ಕೆ ರೋಸಿಯೇ ನಾನು ಬ್ರಹ್ಮಾವರದಿಂದ ಸುರೇಶ ಎಂಬ ಹುಡುಗನನ್ನು ಕರೆತಂದಿಟ್ಟುಕೊಂಡಿದ್ದೆ, ಆದರೆ ಅವನು ಬೀಡಿ ಅಂಗಡಿ ಓಬಲೇಸನ ಮಗಳನ್ನು ಓಡಿಸಿಕೊಂಡು ಹೋದ, ಈರಣ್ಣ ಹಾಕುವ ಮಸಾಲೆ ಜಡ್ಜ್ ತನಕ ಪಾರ್ಸೆಲ್ ಹೋಗುತ್ತೆ ಎಂದರೆ ನೀವೇ ಲೆಕ್ಕಹಾಕಿ, ಆದರೂ ಇಂಥವರನ್ನು ನುಂಗುವ ಹಾಗೂ ಇಲ್ಲ ಉಗುಳುವ ಹಾಗೂ ಇಲ್ಲ, ನಮ್ಮ ಕರ್ಮ. ಅದಿರಲಿ ನೀವಿನ್ನೂ ಇಲ್ಲೇ ಇರುವಿರಲ್ಲ! ಜೀವೋತ್ತಮನ ಮನೆಗೆ ಹೋಗಿದ್ದಿರಂತೆ, ಹೌದಾ! ಅವನೇ ಹೇಳಿದ. ಇಷ್ಟು ಹೊತ್ತಿನಲ್ಲಿ ಯಾವ ಬಸ್ಸುಂಟು ಸ್ವಾಮಿ ಹೊರಡಲಿಕ್ಕೆ! ರಾತ್ರಿ ಒಂಭತ್ತಕ್ಕೆ ನೀಲಕಂಠೇಶ್ವರ ಇತ್ತೂಂತ ಇಟ್ಟುಕೊಳ್ಳಿ, ಆದರೆ ಆದೋನಿಯಲ್ಲಿ ಗಲಾಟೆಯಾಗಿರುವುದಂತೆ! ರಸ್ತೆಯಲ್ಲಿ ನಿಂತು ಕಾಯಿರಿ, ಅವು ಬರುವುದು ಬಿಡುವುದು ನಿಮ್ಮ ಅದೃಷ್ಟ, ಈ ಹೊತ್ತಲ್ಲಿ ಕಾಯುವುದ್ಯಾಕೆ! ಬಂದು ಬಿಡಿ ನಮ್ಮ ಮನೆಗೆ, ಹೇಗೋ ಒಂದು ಕೋಣೆ ತಿಂಗಳಿಂದ ಖಾಲಿ ಇದೆ. ಕನ್ನಡಿಗರು ಕನ್ನಡಿಗರ ಮನೆಗೆ ಹೋಗದೆ ತೆಲುಗರ ಮನೆಗೆ ಹೋಗಲಿಕ್ಕೆ ಸಾಧ್ಯಾನ! ಬನ್ನಿಬನ್ನಿ" ಎಂದು ನಿರರ್ಗಳ ರೀತಿಯಲ್ಲಿ ಅವಸರಿಸಿದ.

ಆತನ ಆಮಂತ್ರಣವನ್ನು ಪುರಸ್ಕರಿಸಿ ಸಂಗಡ ಹೊರಡುವ ಮನಸ್ಸಾಯಿತಾದರೂ ಅವೇ ಮಾತುಗಳು, ಆಡುವ ಪ್ರತಿ ಮಾತಿನಲ್ಲೂ ಅದೇ ರಾಯಲಸೀಮೆ, ಅವೇ ಕೊಲೆ ವಿಷಯಗಳು, ಅದೇ ಅಲಿ ವಗೈರೆಗಳು, ಈಗಾಗಲೇ ಕೆಟ್ಟಿರುವ ತಲೆ ಬೆಳಗಾಗುವುದರೊಳಗಾಗಿ ಇನ್ನಷ್ಟು ಕೆಡದೆ ಇರಲಾರದು.

"ರಾಯರೆ ನೀವು ಹೊರಡಿ, ಬಸ್ಸು ಸಿಗದೇ ಇದ್ದ ಪಕ್ಷದಲ್ಲಿ ನಾನೇ ಬರುವೆ" ಎಂದೆ.

"ಔಪಚಾರಿಕವಾಗಿ ಕರೆದೆ ಎಂದು ಮಾತ್ರ ಭಾವಿಸಬೇಡಿ ಸ್ವಾಮಿ. ಮನಸ್ಪೂರ್ವಕವಾಗಿ ಕರೆದಿರುವೆ, ಇನ್ನು ಬರುವುದು ಬಿಡುವುದು ನಿಮ್ಮಿಷ್ಟ, ಹೇಗೋ ಮನೆ ನೋಡಿರುವಿರಲ್ಲ, ಎಷ್ಟು ಹೊತ್ತಾದರೂ ಚಿಂತೆ ಇಲ್ಲ, ಆದರೆ ಬರುವುದು ಮಾತ್ರ ಮರೆಯಬೇಡಿ" ಎಂದು ಹೇಳಿ ಹೊರಟು ಕಾಣೆಯಾದ.

++++

ಒಮ್ಮೆಗೆ ಗಾಳಿ ಜೋರಾಗಿ ಬೀಸಿದ ಕಾರಣಕ್ಕೋ ಎಲ್ಲೋ ಟ್ರಾನ್ಸ್‌ಫಾರ್ಮರ್‌ನ ಫೀಜ್ ಎಗರಿ ಹೋದ ಕಾರಣಕ್ಕೋ ಕಲ್ಲಿದ್ದಲ ಕೊರತೆಯಿಂದಾಗಿ ಶ್ರೀಶೈಲಂನ ವಿದ್ಯುತ್‌ಉತ್ಪಾದನೆ ಸ್ಥಗಿತಗೊಂಡಿರುವ ಕಾರಣಕ್ಕೋ ಇಲಾಖೆಯ ನೌಕರರ ಅಲಕ್ಷ್ಯ ಕಾರಣಕ್ಕೋ ಅದುವರೆಗೆ ಬೆಳಗುತ್ತಿದ್ದ ದಾರಿ ದೀಪಗಳು ಕ್ಷೀಣಿಸಲಾರಂಭಿಸಿದವು, ಕತ್ತಲಾವರಿಸುವುದರೊಳಗಾಗಿ ಸಮಯ ಖಾತ್ರಿ ಮಾಡಿಕೊಳ್ಳಬೇಕೆಂದು ನಿರ್ಧರಿಸಿ ಮುಂಗೈಯನ್ನು ಕಣ್ಣಿಗೆ ಅಡ್ಡ ಹಿಡಿದುಕೊಂಡೆ. ಅದೋ ಬಾದರಾಯಣ ಕಾಲದ ಫೆವರ್‌ಲ್ಯೂಬಾ ಕಂಪನಿಯ ಗಡಿಯಾರ, ನಿಗಧಿತ ವೇಳೆಗೆ ಕೀಲಿ ಬೇರೆ ಕೊಟ್ಟಿರಲಿಲ್ಲ. ಆ ಮಸುಕು ಕತ್ತಲಲ್ಲಿ ಅದು ಚಲಿಸುತ್ತಿರುವುದೋ ಸ್ಥಗಿತಗೊಂಡಿರುವುದೋ ಸ್ಪಷ್ಟವಾಗಲಿಲ್ಲ. ಚಿಕ್ಕಮುಳ್ಳು ಗೋಚರಿಸಿದರೆ ದೊಡ್ಡಮುಳ್ಳು ಗೋಚರಿಸುತ್ತಿಲ್ಲ, ದೊಡ್ಡಮುಳ್ಳು ಗೋಚರಿಸಿದರೆ ಚಿಕ್ಕಮುಳ್ಳು ಗೋಚರಿಸುತ್ತಿಲ್ಲ, ಪ್ರಾಯಶಃ ಅದು ನಿಷ್ಕ್ರಿಯೆಗೊಂಡಿರಬಹುದೆಂದು ಊಹಿಸಿದೆ. ವೇಳೆ ಏಳರ ಮೇಲೆ ಅಥವಾ ಎಂಟರ ಒಳಗೆ ಇರಬಹುದು. ಮುಖವನ್ನು ಮೆಲ್ಲಗೆ ಎತ್ತಿ ದಿಟ್ಟಿಸಿದೆ, ಶುಭ್ರ ಆಗಸ, ಧಾರಾಕಾರವಾಗಿ ಪ್ರವಹಿಸುತ್ತಿರುವ ನಿಷ್ಪ್ರಯೋಜಕ ಬೆಳಕು, ಅಷ್ಟರೊಳಗೆ ನಿರ್ಮಾನುಷಗೊಂಡಿದ್ದ ವಾತಾವರಣ

ನಿಶ್ಶಬ್ಧಗೊಳ್ಳಲಾರಂಭಿಸಿ ಭೀಕರ ಮೌನ ಆವರಿಸಿತು. ಅದಕ್ಕೆ ಪ್ರಭಾವಳಿ ತೊಡಿಸಿದ ರೀತಿಯಲ್ಲಿ ಬೀದಿ ದೀಪಗಳ ಮಂಕು ಬೆಳಕು ಸಹ ನಂದಿ ಹೋಯಿತು. ನಿರ್ಮಾನುಷ್ಯಕ್ಕೆ ನಿಶ್ಶಬ್ಧತೆಗೆ ವ್ಯಾಖ್ಯಾನ ಬರೆಯುವಂಥ ಇರುಳು ದಟ್ಟಗೊಳ್ಳಲಾರಂಭಿಸಿತು. ಎಲ್ಲೋ ನಾಯಿಗಳು ಬೊಗಳುತ್ತಿರುವ ಸದ್ದು, ಇನ್ನೆಲ್ಲೋ ಗೂಬೆ ಕೂಗುತ್ತಿರುವ ಕರ್ಕಶ ಸದ್ದು. ದುರಾದೃಷ್ಟವೋ ಎಂಬಂತೆ ಸದ್ದಡಗುತ್ತಿರುವ ನೀರವತೆ. ಸ್ವಯಂ ನಿವೃತ್ತಿ ಪಡೆದಂತಿರುವ ಕಪ್ಪನೆಯ ರಸ್ತೆ, ತೀರಾ ಹತ್ತಿರದಲ್ಲಿಯೇ ಐದಾರು ಕೊಲೆಗಳಿಗೆ ಅನಾಥ ಕಳೇಬರಗಳಿಗೆ ಆಶ್ರಯ ನೀಡಿರುವ ನೀಡುತ್ತಲೇ ಇರುವ, ಅಂಥ ದುರ್ಘಟನೆಗಳ ಕಡೆ ಕೈಬೀಸಿ ಆಹ್ವಾನಿಸುತ್ತಲೇ ಇರುವ ತ್ಯಾಜ್ಯವಸ್ತುಗಳ ಸಂಗ್ರಹಾಲಯದಂತಿರುವ ಕೆರೆ. ನಾಪತ್ತೆಯಾಗಿರುವ ಸಾರ್ವಜನಿಕ ಸದ್ದು. ನಿಂತಲ್ಲಿಯೇ ನಿಲ್ಲುವುದು ಕುಳಿತಲ್ಲೆ ಕೂಡ್ರುವುದು ಶತಪಥ ಹೆಜ್ಜೆ ಹಾಕುವುದು ಗೋಚರಿಸದಿರುವ ವಾಹನಗಳ ಸಲುವಾಗಿ ಕನವರಿಸುವುದು ಎಲ್ಲಿಯವರೆಗೆ! ರಸ್ತೆಯುದ್ದಕ್ಕೂ ದೃಷ್ಟಿ ಹಾಯಿಸಿ ಹಾಯಿಸಿ ಕಣ್ಣುಗಳು ಬಳಲಿದಂಥ ಅನುಭವ. ನಿಲ್ಲಿಸದಿದ್ದರೂ ಪರವಾಯಿಲ್ಲ, ಯಾವುದಾದರೊಂದು ವಾಹನ ಹೀಗೆ ಬಂದು ಹಾಗೆ ಹೋದರೆ ಎಷ್ಟೋ ಸಮಾಧಾನ. ಆದರೆ ಅವುಗಳ ಸುಳಿವಿಲ್ಲ. ಹೊಟ್ಟೆ ಬೇರೆ ಹಸಿದಿರುವುದು. ಏನು ಮಾಡುವುದು? ಕಾಯುವುದೋ ಯಾವುದೋ ಒಂದು ದಿಕ್ಕನ್ನು ಆಶ್ರಯಿಸಿ ನಡೆಯುವುದೋ! ನಡೆಯುತ್ತ ಹೋದರೆ ಬೆಳಗಾಗುವುದಂತು ಖಚಿತ. ಯಾವುದಾದರೊಂದು ಊರು ಕಾಲುಗಳಿಗೆ ದಕ್ಕುವುದೂ ಖಚಿತ. ಇವೆಕ್ಕೆಲ್ಲ ಮುಳ್ಳಿನ ಕಿರೀಟ ಮುಡಿಸಿದಂತೆ ಹೆಬ್ಬಾರ್ ಅಲಿ ವಕೀಲರಾಡಿದ ಮಾತುಗಳು ಸುರುಳಿಯೋಪಾದಿಯಲ್ಲಿ ಬಿಚ್ಚಿಕೊಳ್ಳುತ್ತ ಅಂತರಂಗದ ಸ್ವಾಸ್ಥ್ಯ ಹಾಳುಗೆಡವುತ್ತಿರುವವು ಬೇರೆ. ಎಲ್ಲೋ ಹಾರನ್ ಸದ್ದು ಕೇಳಿಸಿದಂತಾಗಿ ದಕ್ಷಿಣದ ಕಡೆ ಆರ್ತತೆಯಿಂದ ದೃಷ್ಟಿ ಹಾಯಿಸಿದೆ. ಕಿಲೋಮೀಟರ್ ದೂರದಲ್ಲಿದ್ದ ತಿರುವಿನಾಚೆ ಬೆಳಕಿನ ಚೂರು ಕೋರೈಸಿ ಪುನಃ ಸ್ಥಗಿತಗೊಂಡಿತು. ನಾನು ಪುನಃ ತಪ್ಪು ಮಾಡಿದೆ, ಕರೆದ ಹೆಬ್ಬಾರನ ಹಿಂದೆ ಹೋಗಿಬಿಡಬೇಕಿತ್ತು. ಬರುವುದಾಗಿ ಹೇಳಿದ್ದೆನಲ್ಲ, ಹೋಗಲಾಗುತ್ತಿಲ್ಲ, ಅಷ್ಟು ಅಭಿಮಾನವಿಟ್ಟಿರುವ ಹೆಬ್ಬಾರ್ ಹುಡುಕುವ ಸಲುವಾಗಿಯಾದರೂ ನಾನಿರುವಲ್ಲಿಗೆ ಬರಬಹುದಿತ್ತಲ್ಲವೆ! ಆಸೆ ಚಿಗುರಿ ನೋಡಿದೆನಾದರೂ ಪ್ರಯೋಜನವಾಗಲಿಲ್ಲ. ಹುಡುಕಿಕೊಂಡು ಬರಲು ತಾನೇನು ನನ್ನ ನೆಂಟನೆ ಆಪ್ತಸಖನೆ! ಆದರೆ ಐವತ್ತು ರೂಪಾಯಿ ಬಯಸಿ ಮಸಾಲೆ ಈರಣ್ಣನಾದರೂ ಬಂದಿದ್ದಲ್ಲಿ ಕಾಲಭೈರವ ಭಯ ಪುಟ್ಟಿಸುತ್ತಿರಲಿಲ್ಲವೇನೊ!

ಸಮಯ ಎಷ್ಟಾಗಿರುವುದೋ ಏನೊ! ಮಾನವ ಜಗತ್ತಿನ ಸಕಲ ಆಯಾಸ ಸುಸ್ತು ನನ್ನೊಳಗೆ ಆಶ್ರಯ ಪಡೆದಿರುವುದೋ ಏನೊ! ಸಲ್ಲೇಖನ ಮುನಿಯೋರ್ವ ನನ್ನ ದೇಹದೊಳಗೆ ವ್ರತಾರೂಢನಾಗಿರುವನೇನೊ! ಸರ್ವಹನ್ನೊಂದು ವ್ಯಾಧಿಗಳು ನನ್ನ ದೇಹದ ಹೊಸ್ತಿಲಲ್ಲಿ ಹೊಂಚಿರುವವೋ ಏನೊ! ಗೌರವ ಕಳೆದುಕೊಂಡಿರುವ ಕಾಯುವಿಕೆಯನ್ನು ನಾನಿನ್ನು ಸ್ಥಗಿತಗೊಳಿಸುವುದೇ ಸೂಕ್ತ, ನಿರ್ವಾಣದಲ್ಲಿರುವ ಕಲ್ಲುಬೆಂಚ್ ಮೇಲೆ ಅಂಗಾತ ಮಲಗಿ ಸೊಳ್ಳೆ ನೊರಜುಗಳ ದಾಸೋಹಾರ್ಥವಾಗಿ ಶರೀರವನ್ನು ವಿನಿಯೋಗಿಸುವುದೇ ಸೂಕ್ತ, ಬೆಳಗಾಗುವವರೆಗೆ ಬದುಕಿದ್ದರೆ ಬದುಕಿರಬಹುದಾದ ನನ್ನನ್ನು ಯಾರಾದರು ಎಚ್ಚರಿಸಿದರೆ ಮುಂದಿನ ಪ್ರಯಾಣ ಮುಂದುವರೆಸುವುದೇ ಸೂಕ್ತ. ಇನ್ನು ನಾನು ಬಾರದಿರುವ ವಾಹನಗಳ ಸಲುವಾಗಿ ಕಾಯಬಾರದು, ಅವು ಬಂದು ಅಂಗಲಾಚಿದರೂ ಅವುಗಳೊಳಗೆ ನಾನಿನ್ನು ಪ್ರಯಾಣ ಬೆಳೆಸಬಾರದೆಂದು ನಿರ್ಧರಿಸಿದೆ.

ಇನ್ನೇನು ಹೊರಡಲಿದ್ದ ಸಮಯದಲ್ಲಿ ಉತ್ತರಾಭಿಮುಖವಾಗಿ ಜೋಡು ದೀಪಗಳ ಬೆಳಕು ಕಾಣಿಸಿಕೊಂಡಿತು. ಹತ್ತು ಹೆಜ್ಜೆ ಕ್ರಮಿಸುವಷ್ಟರಲ್ಲಿ ಅದು ಕಾರಾಗಿ ಮಾರ್ಪಟ್ಟಿತು. ನಾನು ಕೈಚಾಚದಿದ್ದರೂ, ನಿಲ್ಲಿಸಿರೆಂದು ಕ್ಷೀಣ ಧ್ವನಿಯಿಂದ ಅಂಗಲಾಚದಿದ್ದರೂ ಅದು ರಸ್ತೆ ಬದಿ ಇದ್ದ ವಿಶಾಲ ಆಲದಮರದ ಕಾರಿರುಳ ನೆರಳಲ್ಲಿ ನಿಂತಂತೆ ಗೋಚರಿಸಿತು. ನಡೆಯುತ್ತಿದ್ದವನು ಅಂತರಂಗದ ಗದರಿಕೆಗೆ ಬೆಚ್ಚಿ ನಿಂತು ಅದರತ್ತ ದಿಟ್ಟಿಸಿದೆ. ಅದೇ ತಾನೆ ಬೆಳಗಲಾರಂಭಿಸಿದ ಬೆಳಕಿನ ಚೂರೊಳಗೆ ಚಾಲಕ ಸ್ಥಾನದಲ್ಲಿದ್ದ ವ್ಯಕ್ತಿಯೋರ್ವ ಸೇದಲಾರಂಭಿಸಿದ್ದು ಬೀಡಿಯೊ ಸಿಗರೇಟೊ! ಅದರ ಹಿಂಬದಿಯ ಆಸನಗಳಲ್ಲಿ ಅಸ್ಪಷ್ಟವಾಗಿ ಗೋಚರಿಸುತ್ತಿರುವ ಮಾನವಾಕೃತಿಗಳು! ಅವುಗಳಲ್ಲಿ ಗಂಡಸರು ಯಾರೋ ಹೆಂಗಸರು ಯಾರೋ! ಪರಾವರ್ತಿತ ಪ್ರತಿಕ್ರಿಯೆಗೆ ಒಳಪಟ್ಟವನಂತೆ ಗಕ್ಕನೆ ನಿಂತೆ. ಅದರಿಂದ ಒಬ್ಬ ಇಳಿದು ಮರದ ಮರೆಯಲ್ಲಿ ಮೂತ್ರವಿಸರ್ಜಿಸಲಿರುವವನಂತೆ ಕೂತು ಏಳುವಾಗ ನನ್ನ ಕಡೆ ನೋಡಿದ. ಯಾರದು ಎಂದು ತಾನು ಕೂಗಿದನೋ ಇಲ್ಲವೋ! ನಾನು ನಾನೇ ಎಂದು ಜವಾಬು ನೀಡಿದೆ. ಧ್ವನಿ ಚಿರಪರಿಚಿತವೆಂಬಂತೆ ಮೆಲ್ಲಗೆ ಹತ್ತಿರ ಬಂದು ಅಡಿಯಿಂದ ಮುಡಿವರೆಗೆ ನೋಡುವಾಗ ಕಣ್ಣಿನ ಮೇಲೆ ಅಂಗೈಯನ್ನಿರಿಸಿಕೊಂಡ. ಅಯಸ್ಕಾಂತದೋಪಾದಿಯಲ್ಲಿ ನನ್ನ ಕರುಳುಗಳನ್ನು ಸೆಳೆಯಲಾರಂಭಿಸಿದ. ಆದವಾನಿಗೆ ಹೋಗಬೇಕಿತ್ತು ಎನ್ನುವಷ್ಟರಲ್ಲಿ ನನ್ನ ಮುಂಗೈಗಳನ್ನು ಹಿಡಿದು ತನ್ನ ಕಡೆ ಎಳೆದ, ಎಳೆತ ಎಷ್ಟು ಶಕ್ತಿಶಾಲಿಯಾಗಿತ್ತೆಂದರೆ ಚೀಲದೊಂದಿಗೆ ಕಾರನ್ನು ಸಮೀಪಿಸಿದೆ. ತಾನು ಎತ್ತಿರುವುದು ಕೂರ್ಮಾವತಾರವೋ ಎಂಬಂತೆ ಕಿಟಿಕಿಯಿಂದ ತಲೆಯನ್ನಷ್ಟೆ ಚಾಚಿ ಹಿಂದಿಯಲ್ಲಿ ಎಲ್ಲಿಗೆ ಎಂದು ಕೇಳಿದ್ದಕ್ಕೆ ಆದೋನಿಗೆ ಹೋಗಬೇಕಿತ್ತು ಎಂದು ಮಾತ್ರ ಹೇಳಲು ಸಾಧ್ಯವಾಯಿತು ನನಗೆ.

ಆತನನ್ನೇನು ಕೇಳುವಿ ನಾನಿರುವಾಗ ಎಂಬಂತೆ ತನ್ನತ್ತ ಎಳೆದ ಮುದುಕನ ಕಪಿಮುಷ್ಟಿಯಿಂದ ನಿಧಾನವಾಗಿ ಕೈಯನ್ನು ಬಿಡಿಸಿಕೊಂಡೆ. ಅವರು ಪರಸ್ಪರ ಯಾವ ಭಾಷೆಯಲ್ಲಿ ಏನು ಮಾತನಾಡಿಕೊಂಡರೆಂಬುದು ನನಗೆ ತಿಳಿಯಲಿಲ್ಲ. ಒಂದು ಒಪ್ಪಂದಕ್ಕೆ ತಾವು ಬಂದವರಂತೆ ಅವರ ಪರವಾಗಿ ಚಾಲಕನೇ ಹೇಳಿದ, ಆದವಾನಿಯಲ್ಲಿ ಬೆಳಿಗ್ಗೆಯಿಂದಲೇ ಸಂಭವಿಸಿರುವ ಕೋಮುಗಲಭೆ ಕುರಿತಂತೆ, ಆ ನಗರದಾದ್ಯಂತ ಜಾರಿಗೊಳಿಸಿರುವ ಪೋಲಿಸ್ ಕಾನೂನು ಕುರಿತಂತೆ, ಉರುಳಿರುವ ಹೆಣಗಳ ಕುರಿತಂತೆ.. ಈ ಎಲ್ಲಾ ಅಹಿತಕರ ಘಟನೆಗಳನ್ನು ನಿವೇದಿಸಲು ತಾನು ತೆಗೆದುಕೊಂಡ ಸಮಯ ಕೇವಲ ಎರಡೇ ಎರಡು ಮಾತುಗಳು. ಬಳಿಕ ಆದೋನಿ ನಗರಕ್ಕೆ ಅಂಟಿಕೊಂಡಂತಿರುವ ಪಿಂಜಾರಪೋಲ್ ಬಳಿ ತಾನು ಕಾರನ್ನು ನಿಲ್ಲಿಸುವುದಾಗಿಯೂ, ಅಲ್ಲಿಗೆ ಶ್ಮಶಾನ ತೀರಾ ಹತ್ತಿರದಲ್ಲಿರುವುದಾಗಿಯೂ ವಿಲಕ್ಷಣ ರೀತಿಯಲ್ಲಿ, ಕ್ರೌರ್ಯರಹಿತ ರೀತಿಯಲ್ಲಿ ಹೇಳಿದ್ದು ನನಗೆ ಆಶ್ಚರ್ಯ ತಂದಿತು. ಶ್ಮಶಾನಗಳಿಗೆಲ್ಲಾ ನಾನು ತೀರಾ ಪರಿಚಿತನೆಂಬಂತೆ ಸಮ್ಮತಿಸಿದೆ. ಮೇಲ್ಭಾಗವನ್ನು ಎರಡೂ ಕೈಗಳಿಂದ ಹಿಡಿದು, ತುಸು ಒಳಗಡೆ ಬಾಗಿದೆ.

ಅಗತ್ಯಕ್ಕಿಂತ ಹೆಚ್ಚು ಸುಸ್ತಾಗಿದ್ದ, ಸುಸ್ತು ಕಾರಣಕ್ಕಿಂತ ಹೆಚ್ಚು ವಯಸ್ಸಾದವನಂತೆ ಕಂಡ ಚಾಲಕನ ಮಗ್ಗುಲು ಈಗಾಗಲೇ ಇದ್ದು, ಆಯಾಸದಿಂದಾಗಿಯೋ, ಕಳೆದೆರಡು ದಿವಸಗಳಿಂದ ನಿದ್ರಾಹೀನತೆಯಿಂದ ಬಳಲಿದ ಕಾರಣದಿಂದಾಗಿಯೋ, ಹೊತ್ತು ಹೆಚ್ಚಾಗಿದ್ದ ಕಾರಣದಿಂದಾಗಿಯೋ ವಿಲಕ್ಷಣವಾದ ಭಂಗಿಯಲ್ಲಿ ಕೂತು ನಿದ್ದೆ ಹೋಗಿದ್ದ ವ್ಯಕ್ತಿಯೋರ್ವನ ಗೊರಕೆ ನನಗೆ ಅಸಹನೀಯವೆನಿಸಿತು. ತಾನು ಸರಿಯುವುದು ಒತ್ತಟ್ಟಿಗಿರಲಿ,

ವರ್ತಮಾನದ ಬಗ್ಗೆ ಲಕ್ಷ್ಯವೇ ಇರಲಿಲ್ಲ, ನನ್ನಂಥ ಇನ್ನೋರ್ವ ಅಪರಿಚಿತ ಕೂತರೆಲ್ಲಿ ಚಾಲನೆಗೆ ಅಡ್ಡಿಯಾಗುವುದೋ ಎಂಬ ಆತಂಕ ಕಾಡಿತೇನೊ! ಹಿಂದೆ ಕೂಡ್ರುವಂತೆ ಸನ್ನೆ ಮಾಡಿದಂತೆ ಗೋಚರಿಸಿತು. ಸಮಸ್ತ ಕಾರಿಗೆ ಬೆಳಕನ್ನು ವಿತರಿಸುವ ಬ್ಯಾಟರಿ ತನ್ನ ಸಾಮರ್ಥ್ಯ ಕ್ಷೀಣಿಸಿರುವುದೇನೊ, ಒಳಗಿದ್ದ ಒಂದೇ ಒಂದು ದೀಪ ಕಳಾಹೀನವಾಗಿತ್ತು. ಅಲ್ಲದೆ ಅದರ ಹೆಡ್ ಲೈಟುಗಳು ಇದ್ದಕ್ಕಿದ್ದಂತೆ ಮಂಕಾಗುವುದು ಪುನಃ ಚೇತರಿಸಿಕೊಳ್ಳುವುದು ನಡೆದೇ ಇತ್ತು. ಯಾರೂ ಯಾವುದೂ ಸ್ಪಷ್ಟವಾಗಿ ಗೋಚರಿಸುತ್ತಿರಲಿಲ್ಲ. ಒಟ್ಟಿನಲ್ಲಿ ನೀನು ಒಳಗೆ ಬಾರದಿದ್ದರೊಳಿತು ಎಂಬ ಸಂದೇಶ.

ಆ ಶಕ್ತಿಗುಂದಿರುವ ವಾಹನದಲ್ಲಿ ಪ್ರಯಾಣಿಸುವುದೋ, ಅವರಿಗೆ ಕ್ಷಮೆ ಕೇಳಿ ಬಸ್‌ನಿಲ್ದಾಣದಲ್ಲಿರಬಹುದಾದ ಕಲ್ಲುಬೆಂಚನ್ನು ಆಶ್ರಯಿಸುವುದೋ! ಒಂದು ಕ್ಷಣ ಗೊಂದಲಕ್ಕೆ ಬಿದ್ದೆ. ಕಾರಿನ ಹಿಂದಣ ಬಾಗಿಲನ್ನು ಯಾರಾದರು ತೆರೆದರೋ ಅದೇ ತಂತಾನೆ ಸ್ವಯಂಚಾಲಿತ ರೀತಿಯಲ್ಲಿ ತೆರೆದುಕೊಂಡಿತೊ ಎಂಬುದು ತಿಳಿಯದು. ಆರಡಿ ದೇಹವನ್ನು ಆರಿಂಚಿಗೆ ಹ್ರಸ್ವಗೊಳಿಸಿ ಒಳ ಪ್ರವೇಶಿಸಿ ತೀರಾ ಬಾಗಿಲ ಪಕ್ಕದಲ್ಲಿ ಮುವ್ವರು ಕೂಡ್ರುವ ಜಾಗದಲ್ಲಿ, ಒಬ್ಬರು ಮಲಗಿ ಇನ್ನಿಬ್ಬರು ಮಲಗಿರುವ ವ್ಯಕ್ತಿಯ ತಲೆಯನ್ನು ತನ್ನ ತೊಡೆ ಮೇಲೆ ಕಾಲುಗಳನ್ನು ತನ್ನ ತೊಡೆ ಮೇಲೆಳೆದುಕೊಂಡು ಎಚ್ಚರಿರುವ ಇನ್ನಿಬ್ಬರ ಪಕ್ಕದಲ್ಲಿರುವ ಜಾಗದಲ್ಲಿ ಅಂಡಿನ ಬಲಪಾರ್ಶ್ವವನ್ನಷ್ಟೆ ಅಂಟಿಸಿ, ಅದೂ ಆದೋನಿ ಕೇವಲ ಮುಕ್ಕಾಲು ತಾಸಿನ ಹಾದಿ ಎಂಬ ಭರವಸೆಯಿಂದ ಕುಳಿತೆನು. ಬಾಗಿಲು ಕಿಟಿಕಿ ಇದ್ದಕ್ಕಿದ್ದಂತೆ ಮುಚ್ಚಿಕೊಂಡೊಡನೆ, ಕಾರು ಅಗತ್ಯಕ್ಕಿಂತ ಹೆಚ್ಚು ಅಸಹಜ ರೀತಿಯಲ್ಲಿ ವೇಗವಾಗಿ ಚಲಿಸಲಾರಂಭಿಸಿದೊಡನೆ ಕುಲುಕಾಟ ಹೆಚ್ಚಿತು. ಕಾರಿನೊಳಗೆ ಸ್ಥಗಿತಗೊಂಡಿದ್ದ ಗಾಳಿ ತನ್ನ ನಿರಂತರ ಬಳಕೆಯಿಂದಾಗಿ ಉಸಿರುಗಟ್ಟಿಸುವಂತಿತ್ತು. ಘ್ರಾಣೇಂದ್ರಿಯವನ್ನು ಘಾಸಿಮಾಡಲಾರಂಭಿಸಿದ ವಿಲಕ್ಷಣವೂ ವಿಚ್ಛಿದ್ರಕಾರಿಯೂ ಆದ ವಾಸನೆಯ ಮೂಲ ಯಾವುದೆಂದು ಆ ಕ್ಷಣ ಅರ್ಥವಾಗಲಿಲ್ಲ. ಕಳೆದ ಎಷ್ಟೋ ದಿವಸಗಳಿಂದ ಸ್ನಾನ ಮಾಡಿಲ್ಲದೇ ಇರುವ ಸಹಪ್ರಯಾಣಿಕರ ದೇಹಗಳು ಸೂಸುತ್ತಿರಬಹುದೆ! ಅವರ ಸಂಗಡ ಇರಬಹುದಾದ ಆಹಾರ ಹಳಸಿ ಕೊಳೆತಿರಬಹುದೆ! ದುರ್ವಾಸನೆಯ ನಿವಾರಿಸುವ ಸಲುವಾಗಿ ಯಾವುದೋ ಕಡಿಮೆ ದರ್ಜೆಯ ಪರಿಮಳವನ್ನು ಸಿಂಪರಣೆ ಮಾಡಿರಬಹುದೆ! ಪ್ರಯಾಣದುದ್ದಕ್ಕೂ ಅವರೆಲ್ಲ ಬಿಟ್ಟಿರಬಹುದಾದ ಅಪಾನವಾಯು ಮುಪ್ಪರಿಗೊಂಡಿರಬಹುದೆ! ಅದನ್ನೆಲ್ಲ ಆಘ್ರಾಣಿಸಲು ನಿರಾಕರಿಸುತ್ತಿರುವ ನಾನು ನನ್ನ ಮೂಗನ್ನು ಮುಚ್ಚಿಕೊಳ್ಳುವುದೋ ಹಾಗೆ ಮುಚ್ಚಿಕೊಂಡರೆಲ್ಲಿ ಸಹಪ್ರಯಾಣಿಕರು ಸಹಕರಿಸಿದ ತಮಗಾದ ಅಪಮಾನವೆಂದು ಅನ್ಯಥಾ ಭಾವಿಸುವರೋ ಎಂಬ ಸಂದೇಹ ನನ್ನನ್ನು ಕಾಡಲಾರಂಭಿಸಿತು. ಪರಿಣಿತ ಯೋಗಿಯೋಪಾದಿಯಲ್ಲಿ ಉಸಿರಾಟವನ್ನು ನಿಯಂತ್ರಿಸುತ್ತ ಆ ಪ್ರಯತ್ನದಲ್ಲಿ ಏದುಸಿರುಬಿಡುತ್ತ ಹಾಗೆಯೇ ಸಹಿಸಿಕೊಳ್ಳದೆ ನನಗೆ ಬೇರೆ ಮಾರ್ಗವಿರಲಿಲ್ಲ.

ಸಹಪ್ರಯಾಣಿಕರಿಬ್ಬರು ತಮ್ಮ ಅಸಹಜ ಸ್ಥಿತಿಯನ್ನು ದ್ವಿಗುಣಗೊಳಿಸಿದರು ಅದೂ ತಮಗರಿವಿಲ್ಲದ ರೀತಿಯಲ್ಲಿ. ಅವರಿಬ್ಬರ ಉಪಾಂಗಗಳ ಮೇಲೆ ತನ್ನ ರುಂಡ ಮುಂಡಗಳನ್ನು ಅಳವಡಿಸಿ ಮಲಗಿರುವ ವ್ಯಕ್ತಿಯ ಅಸಭ್ಯತನ ಅವಿವೇಕತನ ಅನಾಗರಿಕತನವೂ ದ್ವಿಗುಣಗೊಳ್ಳದೆ ಇರಲಿಲ್ಲ. ಅದಕ್ಕೆ ಸಹಕರಿಸುವ ಪರಿಜ್ಞಾನವಾಗಲೀ ವ್ಯವಧಾನವಾಗಲೀ ಇಲ್ಲವೆಂದು ಭಾವಿಸಿದೆ. ಅಂಗಾತ ಮಲಗಿರುವ ತನ್ನ ಬಲಗೈಯನ್ನು ಉದ್ದಕ್ಕೆ ಹೊರಚಾಚಿರುವ ತನ್ನೆರಡೂ ಕಾಲುಗಳನ್ನು

ನನ್ನ ತೊಡೆಗಳ ಕಡೆ ನಿಗುರಿಸುತ್ತಲೇ ಇರುವ ಆ ವ್ಯಕ್ತಿ ಪುರುಷನೊ ಮಹಿಳೆಯೋ ಎಂಬ ಅನುಮಾನ ಕಾಣಿಸಿಕೊಂಡಿತು. ಕ್ರಮೇಣ ಪರೀಕ್ಷಾರ್ಥವಾಗಿಯೋ ಕುತೂಹಲದಿಂದಾಗಿಯೋ ಅರಿಷಡ್ವರ್ಗಗಳ ಪ್ರಧಾನ ಭೂಮಿಕೆ ಕೆರಳಲಾರಂಭಿಸಿದ ಪರಿಣಾಮವಾಗಿಯೋ ಅದುವರೆಗೆ ಮೇಲಕ್ಕೆತ್ತಿದ್ದ ಬಲಗೈಯನ್ನು ನಿಧಾನವಾಗಿ ಕೆಳಕ್ಕಿಳಿಸಿ ಸ್ಪರ್ಶಿಸಿದೆ. ಅಷ್ಟರಲ್ಲಾಗಲೇ ಅದರ ಪಾದಗಳು ನನ್ನ ತೊಡೆಯನ್ನು ಸಂಪೂರ್ಣ ಆಕ್ರಮಿಸಿದ್ದವಷ್ಟೆ. ಆ ವ್ಯಕ್ತಿಯ ಪಾದಗಳು ತಣ್ಣಗೆ ಕೊರೆಯುವಂಥ ಅನುಭವ, ಇನ್ನೂ ಸ್ಪರ್ಶ ದ್ವಿಗುಣಗೊಳಿಸಿದ ಪರಿಣಾಮವಾಗಿ ಪಾದಗಳ ಮುಂಗಟ್ಟಲ್ಲಿರುವ ಚೈನು, ಅದರ ಬೆರಳುಗಳನ್ನು ಅಲಂಕರಿಸಿರುವ ಕಾಲುಂಗುರಗಳು! ಅವೆಲ್ಲ ನಿಸ್ಸಂದೇಹವಾಗಿ ಬೆಳ್ಳಿಲೋಹದವು! ನಿಸ್ಸಂದೇಹ ಮಲಗಿರುವ ವ್ಯಕ್ತಿ ಮಹಿಳೆ! ನಿಸ್ಸಂದೇಹವಾಗಿ ನಾನು ನನ್ನ ಕಾಲುಶತಮಾನದ ವಯೋಮಾನದಲ್ಲಿ ಪ್ರಪ್ರಥಮ ಬಾರಿಗೆ ಸ್ಪರ್ಶಿಸಿದ ಸ್ಪರ್ಶಿಸುತ್ತಿರುವ ಮಹಿಳೆ! ಈಕೆ ಪ್ರೌಢೆಯೊ ಮಧ್ಯಮ ವಯಸ್ಕಳೊ ಯುವತಿಯೊ! ಯಾವುದೋ ಒಂದು ವಿಲಕ್ಷಣವೂ ಅಲೌಕಿಕವೂ ಪೂರ್ವಜನ್ಮ ಸಂಬಂಧಿಯೂ(!) ಆದಂಥ ಭಾವನೆಗಳು ಪರಸ್ಪರ ದೇಹಗಳಿಂದ ವಿನಿಮಯಗೊಳ್ಳುತ್ತಿರುವಂಥ ಅನುಭವ! ಮತ್ತ ಮತ್ತೆ ಸ್ಪರ್ಶವನ್ನು ದ್ವಿಗುಣಗೊಳಿಸು, ಈಗಿಂದೀಗಲೆ ತನ್ನನ್ನು ಒಳಗೊಳ್ಳೊ ಅಪಹರಿಸೊ ಎಲ್ಲಾದರು ಕರೆದೊಯ್ಯೊ ಎಂದು ಭಾಷಾಸಾನ್ನಿಧ್ಯದ ಹಂಗಿಲ್ಲದೆ ನಿವೇದಿಸಿಕೊಳ್ಳುತ್ತಿರುವಂತೆ ಭಾಸವಾಯಿತು! ಅರೆ ಮುಟ್ಟಿರುವುದು ಮುಟ್ಟುತ್ತಲೇ ಇರುವುದು ನಿವೇದನೆಗೆ ಮಾರು ಹೋಗುತ್ತಿರುವುದು ವಸ್ತುಸ್ಥಿತಿಯನ್ನು ಅಲಕ್ಷಿಸುತ್ತಿರುವುದು! ಇನ್ನೇನು ಆಕೆಯ ಪಾದಗಳಿಂದ ನಾನು ನನ್ನ ನತದೃಷ್ಟ ಕೈಗಳನ್ನು ಉಪಸಂಹರಿಸಿಕೊಳ್ಳಬೇಕೆನ್ನಿಸುವಷ್ಟರಲ್ಲಿ, ಮುಟ್ಟುವುದರ ಮೂಲಕ ಮಲಿನಗೊಂಡಿರುವ ಹಸ್ತಗಳಿಗೆ ಶ್ರಾದ್ಧ ಮಾಡುವ ಸಲುವಾಗಿ ಮಾನಸಿಕವಾಗಿ ಪವಿತ್ರಗಂಗೆಯನ್ನು ಆವಹಿಸಿಕೊಳ್ಳಬೇಕೆನ್ನುವಷ್ಟರಲ್ಲಿ, ಚಲಿಸುವ ಕಾರಿನ ಬಾಗಿಲನ್ನು ತೆರೆದು ಹೊರ ದುಮಿಕಿ ಆತ್ಮಹತ್ಯೆ ಮಾಡಿಕೊಳ್ಳಬೇಕೆನ್ನಿಸುವಷ್ಟರಲ್ಲಿ ಹಿಂದಿನ ಸೀಟಿನಲ್ಲಿದ್ದ ಮಹಿಳೆಯೋರ್ವಳು ಇದ್ದಕ್ಕಿದ್ದಂತೆ ಬೆಚ್ಚಿ ಬಿದ್ದಂತೆ ಉದ್ಗರಿಸಿದಳು ನಮ್ಮನ್ನೂ ಬೆಚ್ಚಿಬೀಳಿಸಿದಳು. ಆಕೆ ದುಃಸ್ವಪ್ನ ಕಂಡಿರಬಹುದೆ! ರಸ್ತೆಯ ಗದುಕಿಗೆ ಎಚ್ಚರಗೊಂಡು ಹ್ಹಾ ಎಂದು ಕಿರುಚಿರಬಹುದೆ! ಚಾಲಕ ಇದೆಲ್ಲ ಸಹಜವೆಂದು ಭಾವಿಸಿ ನಿರ್ಭಾವುಕ ಸ್ಥಿತಿಯಲ್ಲಿ ಕಾರು ಓಡಿಸುತ್ತಿದ್ದ ತನ್ನ ಪಾಡಿಗೆ ತಾನು. ಅಷ್ಟೊತ್ತಿಗಾಗಲೆ ಕಾರು ಹುಳೇಬೀಡು ಮಣೆಕುರ್ತಿಗಳನ್ನು ಕ್ರಮಿಸಿ ನಾಗಲದಿನ್ನಿಗೆ ಸಮೀಪದಲ್ಲಿತ್ತು. ದೂರದಲ್ಲೆಲ್ಲೋ ಗೋಚರಿಸುತ್ತಿದ್ದ ದೀಪಗಳು ಡಣಾಪುರದ ಸುಳಿವನ್ನು ಸೂಚಿಸುತ್ತಿದ್ದವು. ಇನ್ನೂ ದೂರದಲ್ಲಿ ಬೆಳಕಿನ ಪುಂಜದಂತೆ ಗೋಚರಿಸುತ್ತಿರುವುದೇ ನಮ್ಮೆಲ್ಲರನ್ನೂ ತೆಕ್ಕೆಗೆಳೆದುಕೊಳ್ಳಲಿರುವ ಆದೋನಿ! ಅದರಾಚೆ ಇರುವ ರಣಮಂಡಲ ಆಂಜನೇಯಸ್ವಾಮಿ ನೆಲೆಗೊಂಡಿರುವ ಕಡಿದಾದ ಏಕಶಿಲಾ ಬೆಟ್ಟದ ತುಟ್ಟತುದಿಯಲ್ಲಿರುವ ದೀಪದ ಬೆಳಕು ಎಷ್ಟು ಸ್ಪಷ್ಟವಾಗಿರುವುದೆಂದರೆ ಆ ಬೆಳಕಿನಲ್ಲಿ ಮುಂಗೈ ಗಡಿಯಾರದ ಸಮಯವನ್ನೂ ತಿಳಿದುಕೊಳ್ಳಬಹುದಾಗಿತ್ತು. ಇನ್ನು ಕಾಲು ಗಂಟೆ ಅವಧಿಯಲ್ಲಿ, ಪಿಂಜರಾಪೋಲ್ ತಲುಪುವುದಕ್ಕೂ ಮೊದಲೇ ನಾನು ಈ ಕಾರಿನಿಂದ ಇಳಿದು ಕತ್ತಲಲ್ಲಿ ಕರಗಿಬಿಡುವುದು ವಾಸಿ ಎಂದುಕೊಂಡೆ.

ಅಷ್ಟೊತ್ತಿಗಾಗಲೇ ಎಚ್ಚರಗೊಂಡಿದ್ದ ಮಹಿಳೆ ಆ ಬೆಳಕಿನಿಂದ ಉನ್ಮತ್ತಳಾಗಿ ಹಿಂಬದಿ ಸೀಟಿನಿಂದ ಮುಂದಕ್ಕೆ ಬಾಗಿ ತನ್ನೆರಡೂ ಕೈಗಳನ್ನು ಮಲಗಿದ್ದ ತರುಣಿ ಕಡೆ ಚಾಚಿ "ಏನು ಕರ್ಮ ಮಾಡಿದ್ದೆ ಮಗಳೆ ನೀನು, ನಮ್ಮಂಥ ದುರಾದೃಷ್ಟವಂತರ ಹೊಟ್ಟೆಯಲ್ಲಿ ಹುಟ್ಟಲು,

ಎಷ್ಟು ಪ್ರಯತ್ನ ಮಾಡಿದೆವಲ್ಲೇ ನಿನ್ನನ್ನು ಬದುಕಿಸಿಕೊಳ್ಳಲು ನಮ್ಮ ಮೊಮ್ಮಗನನ್ನುಳಿಸಿಕೊಳ್ಳಲು, ಕೈಯಲ್ಲಿದ್ದ ನಾಲ್ಕು ಕಾಸನ್ನೂ ನೀರಿನಂತೆ ಖರ್ಚು ಮಾಡಿದೆವಲ್ಲೇ ತಾಯಿ" ಎಂದು ಚೀರಿ ಅಳುವಾಗಲೂ ಆಕೆಯ ಕೋಮಲ ಪಾದಗಳು ಇನ್ನೂ ನನ್ನ ತೊಡೆ ಮೇಲೆಯೆ ಇದ್ದವು. ಆಕೆ ನನ್ನ ನಿರೀಕ್ಷೆಗೂ ಮೀರಿ ಶವವಾದೊಡನೆ ಬೆಚ್ಚಿಬಿದ್ದೆ, ವಿದ್ಯುತ್ ಸ್ಪರ್ಶಿಸಿದಂತೆ ಕೈಗಳನ್ನು ತಕ್ಷಣ ಮೇಲೆತ್ತಿದೆ ಅತಂತ್ರವಾಗಿ, ಕಣ್ಣುಗಳನ್ನು ತುಂಬಿದ ಬಾಷ್ಪ ಕೂಡಲೆ ಘನೀಕರಿಸಿ ಹರಳಾಗಿ ಉರುಳಿತು ಶವದ ಮೇಲೆ. ಗಂಟಲವರೆಗೆ ನುಗ್ಗಿದ ಉದ್ಗಾರ ಅಲ್ಲಿಯೆ ಶಕ್ತಿಗುಂದಿ ನಿಸ್ತೇಜಗೊಂಡಿತು. ತನ್ನ ತೊಡೆ ಮೇಲೆ ಶವದ ತಲೆಯನ್ನಿರಿಸಿಕೊಂಡು ಸಾಂತ್ವನದ ರೀತಿಯಲ್ಲಿ ಮುಂಗುರುಳು ನೇವರಿಸುತ್ತಿದ್ದ ಹಿರಿಯ "ಎಷ್ಟು ಅತ್ತರೇನು ಲಾಭ! ಮಗಳು ಪುನಃ ಬದುಕುವುದು ಸಾಧ್ಯವಿದ್ದಿದ್ದರೆ ನಾನೂ ಅಳುತ್ತಿದ್ದೆ, ಸಮಾಧಾನ ತಂದುಕೋ, ನೀನು ಮೊದಲೇ ಹಾರ್ಟ್ ಪೇಷೆಂಟು, ನೀನೂ ಏನಾದರು ಎದೆಯೊಡೆದು ಸತ್ತರೆ ನನ್ನ ಗತಿ ಏನು! ಈ ಮಗಳ ಮಣ್ಣು ಮಾಡುವ ಸಲುವಾಗಿಯಾದರೂ ನಾವೆಲ್ಲ ಜೀವವನ್ನು ಭದ್ರವಾಗಿ ಹಿಡಿದುಕೊಂಡಿರುವುದು ಬೇಡವೇನು" ಎಂದು ಆ ವೃದ್ಧೆಯನ್ನು ಸಮಾಧಾನಪಡಿಸಿದ. ಬಳಿಕ ನನ್ನ ಕಡೆ ತಿರುಗಿ ತೀಕ್ಷ್ಣವಾಗಿ ನೋಡುತ್ತ "ಕೈಹಿಡಿದ ಗಂಡನಿಗಿಂತ ಹೆಚ್ಚಾಗಿ ನಮ್ಮ ಮಗಳ ಕಾಲುಗಳನ್ನ ನಿನ್ನ ತೊಡೆ ಮೇಲಿಟ್ಟುಕೊಂಡಿರುವಿಯಲ್ಲಪ್ಪಾ! ತುಂಬಿದ ಕೊಡದಂತೆ ಸಹಿಸಿಕೊಂಡಿರುವಿಯಲ್ಲಪ್ಪಾ! ಈ ನಮ್ಮ ಲಕ್ಷ್ಮೀಗೂ ನಿನಗೂ ಯಾವ ಜನ್ಮದ ಋಣಾನುಬಂಧವಿತ್ತೋ! ಶಿವನೇ ನಿನ್ನ ಆಟವನ್ನು ಬಲ್ಲವರಾರು" ಎಂಬಿವೇ ಮಾತುಗಳ ಶೃಂಖಲೆಯಿಂದ ನನ್ನನ್ನು ಬಂಧಿಸಲಾರಂಭಿಸಿದ. ತನ್ನ ಪಾದಗಳಲ್ಲಿನ್ನೂ ಜೀವವಿರುವುದಾಗಿ ಲಕ್ಷ್ಮಿ ತನ್ನ ತಪ್ತಭಾವನೆಗಳಿಗೆ ಸ್ಪಂದಿಸುತ್ತಿರುವಂಥ ಅನುಭವ ವೇದ್ಯವಾಗಲಾರಂಭಿಸಿತು. ಸಂದಿಗ್ಧತೆಯನ್ನು, ಉಭಯ ಸಂಕಟವನ್ನು ಅನುಭವಿಸುತ್ತಲೇ!

ಇದ್ದಕ್ಕಿದ್ದಂತೆ ಬ್ರೇಕ್ ಹಾಕುವುದರ ಮೂಲಕ ಅದುವರೆಗೆ ಚಲಿಸುತ್ತಿದ್ದ ಕಾರನ್ನು ನಿಲ್ಲಿಸಿದ ಚಾಲಕ, ಅಳುವುದನ್ನು ನಿಲ್ಲಿಸದಿದ್ದ ಪಕ್ಷದಲ್ಲಿ ಹೆಣವನ್ನು ಇಲ್ಲಿಯೇ ಹಾಕಿ ವಾಪಸ್ಸು ಹೊರಡುವುದಾಗಿ ಬೆದರಿಕೆ ಹಾಕಿದ. ಅದಕ್ಕೆ ಅದುವರೆಗೆ ಮೌನವಾಗಿದ್ದ ನಾನು ಮಾನವೀಯತೆ –ಕೋಮುಗಲಭೆ– ಕಾರಿರುಳು –ಪಾಪ–ಪುಣ್ಯ –ಧರ್ಮ–ಕರ್ಮ– ಸಾವು–ಬದುಕು– ಒಳ್ಳೆಯದ್ದು–ಕೆಟ್ಟದ್ದು ಇತ್ಯಾದಿ ಅಲೌಕಿಕ ವಿಶೇಷಣಗಳನ್ನು ಬಳಸಿ ತಿಳಿ ನುಡಿಯಲು ಪ್ರಯತ್ನಿಸಿದೆ. ನನ್ನ ಮಾತುಗಳಿಂದ ತುಸು ಕೆರಳಿದವನಂತೆ ಕಾರಿನಿಂದ ಕೆಳಕ್ಕಿಳಿದು.. "ಬಾಯಿ ಮುಚ್ಚಿಕೊಂಡಿರ್ರಿ ಸ್ವಾಮಿ. ನಿಮಗೇನು ತಿಳಿತದೆ? ಪಾಪಪುಣ್ಯ ನನಗೂ ಗೊತ್ತು, ಹಗಲು ರಾತ್ರಿ ಓಪಿಡಿ ಹತ್ತಿರಾನೆ ಇದ್ದು ಹೆಣಗಳನ್ನು ಸಾಗಿಸುವುದೇ ನಮ್ಮ ಕೆಲಸ, ಎಷ್ಟೋ ಹೆಣಗಳಿಗೆ ಬಾಡಿಗೆಗೆ ಹೋಗಿದ್ದೀನಿ, ಆದರೆ ಅವರ್ಯಾರೂ ಇವರಂತೆ ಸುಳ್ಳು ಹೇಳಿರಲಿಲ್ಲ ಸ್ವಾಮಿ, ಕೆಲವು ತಾಸುಗಳ ಹಿಂದೆ ಸತ್ತಿರುವ ಹೆಣ ಅಂತ ಹೇಳಿದ್ದಕ್ಕೆ ನಾನು ಬಾಡಿಗೆ ಒಪ್ಪಿಕೊಂಡೆ, ಆದರೆ ಇದು ಎರಡು ಮೂರು ದಿವಸ ಆಗಿದೆ, ದುರ್ವಾಸನೆ ನೋಡಿದರೆ ತಿಳಿಯುವುದಿಲ್ಲವೆ! ನಾನೇನು ಶ್ರೀಮಂತನ ಮಗನಲ್ಲ! ವಿಷಯ ತಿಳಿದರೆ ಸಾಹುಕಾರ ನನ್ನನ್ನು ಸುಮ್ಮನೆ ಬಿಡುತ್ತಾನೇನು! ಕೊಳೆತಿರುವ ಹೆಣ ಸಾಗಿಸುವುದಕ್ಕೆ ನಿನ್ನ ಮನಸ್ಸು ಹೇಗೆ ಒಪ್ಪಿತು ಎಂದು ಕೇಳುವುದಿಲ್ಲವೇನು! ಎಷ್ಟಾದರು ಕಾರಿನ ಮಾಲಕ, ನನ್ನಂಥ ಡ್ರೈವರುಗಳಿಗೆ ಒಂದು ತುತ್ತು ಅನ್ನ ನೀಡುವ ಧಣಿ! ಆತನ ಕಾಲಿಗೆ ಬಿದ್ದು ಹೇಳಿಕೊಳ್ತೀನಿ, ಆದರೆ ಇವರು ಅಲ್ಲಿಂದ ಇಲ್ಲಿಯವರೆಗೆ ಅಳುವುದನ್ನು ಕೇಳೀ ಕೇಳಿ ತಲೆ ಕೆಟ್ಟು ಹೋಗಿದೆ, ಬೆಳಗಿನಿಂದ ಊಟವಿಲ್ಲ

ಬೇರೆ, ಕಾರಿನಲ್ಲಿ ಹೆಣ ಇಟ್ಟುಕೊಂಡು ಹೇಗೆ ಊಟ ಮಾಡುವುದು ನೀವೇ ಹೇಳಿ ಸ್ವಾಮಿ! ಇವರು ಬಾಡಿಗೆ ಕೊಡುವುದೂ ಬೇಡ, ನಾನೀ ಹೆಣವನ್ನು ಸಾಗಿಸುವುದೂ ಬೇಡ" ಎಂದು ನಿರರ್ಗಳ ರೀತಿಯಲ್ಲಿ ಹೇಳಿ ನಮ್ಮೆಲ್ಲರನ್ನೂ ದಿಗ್ಭ್ರಮೆಗೊಳಿಸಿದ.

ಹಿಂಬದಿಯ ಬಾಗಿಲು ಸ್ವಯಂಚಾಲಿತವಾಗಿ ತೆರೆದುಕೊಂಡಿದ್ದ ಪರಿಣಾಮವಾಗಿ, ಕಳೇಬರದ ಪಾದಗಳು ಹೊರಚಾಚಿದ್ದ ಪರಿಣಾಮವಾಗಿ ಅದರ ಕಾಲುಂಗುರಗಳು ದ್ವಾದಶಿ ಚಂದ್ರನ ಬೆಳಕನ್ನು ಪ್ರತಿಫಲಿಸಲಾರಂಭಿಸಿದ್ದವು. ಅದುವರೆಗೆ ಸಾದ್ಯಂತ ಕೇಳಿಸಿಕೊಂಡ ವೃದ್ಧನು ಹೌಹಾರಿ ನನ್ನ ಕಡೆ ತನ್ನ ಒದ್ದೆಗಣ್ಣುಗಳಿಂದ ಅಂಗಲಾಚಿದ, ಬಳಿಕ ಚಾಲಕನೆದುರು ಅಂಜಲೀಬದ್ದನಾಗಿ "ಈ ಕಾವಳದಲ್ಲಿ ನಮ್ಮನ್ನು ಅನಾಥರನ್ನಾಗಿ ಮಾಡಬೇಡ ತಂದೆ, ಮಗಳ ಸಾವಿನ ದುಃಖ ತಡೆದುಕೊಳ್ಳುವ ಶಕ್ತಿ ನಮ್ಮ ಮುದುಕಿಗೆ ಇಲ್ಲ" ಎಂದು ಕೇಳಿಕೊಂಡ, ಬಳಿಕ ಆಕೆಯನ್ನುದ್ದೇಶಿಸಿ "ಏನಳುವುದಿದ್ದರೂ ಊರು ಸೇರಿದ ಬಳಿಕ ಅಳು, ಈ ಕಾವಳದಲ್ಲಿ ಮಾತ್ರ ಅತ್ತು ರಂಪಾಟ ಮಾಡಬೇಡ, ರೇಲ್ವೇ ಸ್ಟೇಷನ್ ತಲುಪುವವರೆಗೆ ಬಾಯಿ ಮುಚ್ಚಿಕೊಂಡಿರು" ಎಂದು ಗದರಿಕೆಯ ಧ್ವನಿಯಲ್ಲಿ ಹೇಳಿದ. ಅದಕ್ಕೆ ಆಕೆ ಕಾರನ್ನು ಪ್ರವೇಶಿಸುವ ಮೊದಲು "ಮನೆಯಲ್ಲಿಯೇ ಹೆರಿಗೆ ಆಗಲಿ ಎಂದರೂ ನೀನು ಕೇಳಿಸಿಕೊಳ್ಳಲಿಲ್ಲ, ಸೂಲಗಿತ್ತಿ ಅಚ್ಚಮ್ಮನ ಮಾತು ಕೇಳಿ ದೂರದ ಆಸ್ಪತ್ರೆ ಸೇರಿಸಿದಿ, ಆ ಹಾಳಾದ ಡಾಕ್ಟರುಗಳು ತಾಯೀನೂ ಸಾಯಿಸಿದರು ಮಗೂನೂ ಸಾಯಿಸಿದರು. ನಮ್ಮ ಹೆಣ ನಮಗೆ ಕೊಡಲು ಸತಾಯಿಸಿದರು, ಅದೂ ಅಲ್ಲದೆ ಇವಳ ಗಂಡ ಎಂಥ ಕಟುಕನಿದ್ದಾನು! ತಿಂಗಳಿಂದ ಪತ್ತೆ ಇಲ್ಲವಲ್ಲ!" ಎಂದು ಸ್ವಗತ ರೀತಿಯಲ್ಲಿ ಹೇಳಿಕೊಂಡಳು. ಅದಕ್ಕೆ ವೃದ್ಧನು "ಸಮಾಧಾನ ಮಾಡಿಕೋ ಮಹರಾಯ್ತಿ, ಅಳಿಯನಿಗಿಂತ ಹೆಚ್ಚಾಗಿ ಈ ಪುಣ್ಯಾತ್ಮ ಇದ್ದಾನೆ, ದೇವರು ಕಳಿಸಿದಂತೆ ಬಂದಿರುವಿಯಪ್ಪ" ಎಂದು ಹೇಳುತ್ತ ನನ್ನ ಕಡೆ ಕೈ ಜೋಡಿಸುತ್ತ ನನ್ನ ಕೈಗಳಿಗೆ ಆಕ್ರಂದನದ ಕೈದೋಳ ತೊಡಿಸುತ್ತ. ಚಾಲಕನೂ ತಾನೇನು ಕಡಿಮೆ ಎನ್ನುವಂತೆ "ನಿಮಗೆ ನಿಮ್ಮ ಹೆಣ ಎಷ್ಟು ಮುಖ್ಯಾನೋ ನನಗೂ ನನ್ನ ಕಾರು ಅಷ್ಟೇ ಮುಖ್ಯ, ಇನ್ನು ಮುಂದೆ ಎಷ್ಟು ಕೊಟ್ಟರೂ ಹೆಣ ಸಾಗಾಣಿಕೆಗೆ ಹೋಗುವುದು ಮಾತ್ರ ಸಾಧ್ಯವಿಲ್ಲ, ಇದೇ ಕೊನೆ" ಎಂದು ಗೊಣಗುತ್ತ ತನ್ನ ಸ್ಥಾನವನ್ನು ಅಲಂಕರಿಸಿದ. ಪುನಃ ಚಲಿಸತೊಡಗಿದ ವಾಹನದೊಳಗೆ..

ತಮ್ಮ ಸ್ವಾಸ್ಥಿ ನಗರೂರು ಗ್ರಾಮ ಕುರಿತಂತೆ! ಅಲ್ಲಿ ಯಾವುದೋ ಒಂದು ದೊಂಬಿ ಕೇಸಿನಲ್ಲಿ ಸಿಲುಕಿ ಕಳೆದ ಹದಿನೈದು ದಿವಸಗಳಿಂದ ನಾಪತ್ತೆಯಾಗಿರುವ ಲಕ್ಷ್ಮಿಯ ಗಂಡ ನರಸಿಂಹನ ಕುರಿತಂತೆ! ರೇಲ್ವೇಸ್ಟೇಷನ್ನಿನ ಅಂತರ ಕುರಿತಂತೆ! ದಾದರ್ ಎಕ್ಸ್‌ಪ್ರೆಸ್‌ನ ಪೂರ್ವಾಪರ ಕುರಿತಂತೆ! ಹೆಣವನ್ನೂ ಹೆಣದ ವಾರಸುದಾರರನ್ನೂ ಕಾಡಬಹುದಾದ ಪೋಲಿಸರ ಕುರಿತಂತೆ! ಆದೋನಿಯಲ್ಲಿ ಸಂಭವಿಸಿರುವ ಕೋಮುಗಲಭೆಯ ಸಾಧಕ ಬಾಧಕ ಕುರಿತಂತೆ ಪರಸ್ಪರ ಕ್ಷೀಣ ಸ್ವರದಲ್ಲಿ ಮಾತಾಡುತ್ತಿದ್ದ ಅವರ ಪೈಕಿ ಒಬ್ಬ ಇನ್ನೇನು ಸಹಪ್ರಯಾಣಿಕನಾದ ನನ್ನ ಪೂರ್ವಾಪರ ಕುರಿತಂತೆ ಒಂದೇ ಒಂದು ಪ್ರಶ್ನೆಯನ್ನು ಕೇಳಬೇಕೆನ್ನುವಷ್ಟರಲ್ಲಿ..

ಓಹ್! ದೇವರು ದೊಡ್ಡವನು, ನಾವು ಪ್ರಯಾಣಿಸುತ್ತಿರುವ ವಾಹನ ಆದೋನಿಯ ಗಡಿಯನ್ನು ಅದೇ ತಾನೆ ಪ್ರವೇಶಿಸಿತು. ಸಂಪನ್ಮೂಲ ಕೊರತೆ ನಡುವೆಯೂ ಶಕ್ತಿಮೀರಿ ಬೆಳಕನ್ನು ವಿತರಿಸಲು ಹೆಣಗಾಡುತ್ತಿರುವ ನಗರದ ಅಸಂಖ್ಯಾತ ಬೀದಿ ದೀಪಗಳು. ಕ್ಷಣಿಕ ಬೆಳಕಿನ ಬೆನ್ನಿಗೆ ಬರೆ ಎಳೆಯುತ್ತಿರುವ ನೀರವ. ಇನ್ನೇನು! ಅಂತೂ ತಾವೆಲ್ಲ ಪ್ರಯಾಣಿಸುತ್ತಿರುವ ವಾಹನ ಪಿಂಜರಾಪೋಲು ಸಮೀಪಿಸಿದರಾಯಿತು, ಅಲ್ಲಿಂದ ನಡೆಯುತ್ತ ಯಾವುದೋ

ಒಂದು ತಾಣ ತಲುಪಿ ಈ ಒಂದೇ ಒಂದು ರಾತ್ರಿ ಕಳೆದೊಡನೆ ಬೆಳಗಾಗುವುದು ಎಷ್ಟು ನಿಶ್ಚಿತವೋ ಅಸನವಸನ ಕಲ್ಪಿಸಿರುವ ವಾಗಿಲಿಯನ್ನು ಸೇರಿಕೊಳ್ಳುವುದು ಸಹ ಅಷ್ಟೇ ನಿಶ್ಚಿತ! ಆದರೆ..

ಕರ್ಕಶವಾಗಿ ಸೈರನ್ ಮೊಳಗಿಸುತ್ತ ವಾಹನವೊಂದು ಬಂದು ತೀರ ಸನಿಹದಲ್ಲಿ ನಿಂತಿತು. ನಾವಿದ್ದ ಅದರಿಂದ ಸರಸರ ಇಳಿದವರು ಮೂರು ಮಂದಿಗಿಂತ ಹೆಚ್ಚು ಜನರಿದ್ದರು, ತಮ್ಮ ಬೆನ್ನಿಗಿದ್ದ ರೈಫಲ್ಲುಗಳನ್ನೆತ್ತಿಕೊಂಡು ಸಾಮೂಹಿಕ ಹತ್ಯೆ ಮಾಡಲಿರುವವರೆಂಬಂತೆ ನಮ್ಮ ಕಡೆ ಗುರಿ ಇರಿಸಿದಾಗಲೇ ಅವರೆಲ್ಲ ಪೋಲಿಸರೆಂದು ಅರಿವಾದದ್ದು. ಅವರೆಲ್ಲರ ಹದ್ದಿನಂಥ ಕಣ್ಣುಗಳು ತಪಾಸಣೆ ಮಾಡಲಾರಂಭಿಸಿದ್ದಾಗಲೀ, ನಿಮಗೆ ಬದುಕುವ ಆಸೆ ಇದ್ದರೆ ವಾಪಸ್ಸು ಹೋಗಿ ಎಂದು ಆಜ್ಞಾಪಿಸಿದ್ದಾಗಲೀ ತಡವಾಗಲಿಲ್ಲ. ಅದಕ್ಕೆ ಪ್ರತಿಯಾಗಿ ಸಹವಂದಿಗರು ಆರ್ತರಾಗಿ ತಮ್ಮೆದೆಯ ಸಂಕಟ ದುಃಖ ದುಮ್ಮಾನಗಳಿಗೆ ಮಾತಿನ ರೂಪ ನೀಡಲು ಪ್ರಯತ್ನಿಸಿ ವಿಫಲರಾದರು. ಅರಂಭದಿಂದಲೇ ರೋಸಿದ್ದ ಚಾಲಕ ವಾಹನದಿಂದಿಳಿದವನೆ "ಬೇಗನೆ ನಿಮ್ಮ ಹೆಣ ಇಳಿಸಿಕೊಳ್ಳಿ, ನೀವುಂಟು ಪೋಲಿಸರುಂಟು, ಮೊದಲು ಬಾಡಿಗೆ ಹಣ ಎಣಿಸಿಬಿಡಿ, ಹೊರಡ್ತೀನಿ" ಎಂದು ಅವಸರ ಮಾಡಲಾರಂಭಿಸಿದೊಡನೆ ಮುಖ್ಯವಾಗಿ ಕಳೇಬರ ವಿಲವಿಲನೆ ಒದ್ದಾಡಲಾರಂಭಿಸಿದ್ದು ಯಾರೊಬ್ಬರ ಗಮನಕ್ಕೆ ಬಾರಲೇ ಇಲ್ಲ.

ಊರ ತೊಂದರೆ ತಾಪತ್ರಯಗಳನ್ನು ಹೆಗಲ ಮೇಲೆಳೆದುಕೊಂಡು ಹಿಂಸೆಯನ್ನು ಪ್ರಸಾದದೋಪಾದಿಯಲ್ಲಿ ಅನುಭವಿಸುವುದು ನಿನ್ನ ವಂಶದ ರಕ್ತವಾಹಿನಿಯಲ್ಲಿದೆ, ಅದರಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಹಾಳಾಗಲು ಇದಕ್ಕಿಂತ ಸುಸಂದರ್ಭ ಇನ್ನು ಮುಂದೆ ಸಿಕ್ಕುವುದಿಲ್ಲ, ಸದುಪಯೋಗಪಡಿಸಿಕೊ! ಎಂದು ದೇಹದೊಳಗಿನ ರಕ್ತದ ನಮೂನಿ ಒತ್ತಡ ಹೇರಲಾರಂಭಿಸಿತು.

ಅನುಕಂಪದ ಶೃಂಖಲೆಯನ್ನು ಜಾಗ್ರತೆಯಿಂದ ಕಳಚುವಷ್ಟು ಸುಲಭವಲ್ಲ ಆದೋನಿಯನ್ನಾವರಿಸಿರುವ ಕಗ್ಗತ್ತಲನ್ನು ಪ್ರವೇಶಿಸುವುದು! ನಾಗರಿಕ ಪರಿಸ್ಥಿತಿ ವಿಷಮಿಸಿರುವುದು ಎಂಬುದಕ್ಕೆ ಸಶಸ್ತ್ರಧಾರಿಗಳಾಗಿ ಬಂದಿರುವ ಪೋಲಿಸರೇ ಸಾಕ್ಷಿ. ಅವರಿಂದಾಗಲೀ ಇವರಿಂದಾಗಲೀ ತಪ್ಪಿಸಿಕೊಂಡು ಕಣ್ಮರೆಯಾಗುವುದು ಸುಲಭ ಸಾಧ್ಯವಲ್ಲ. ಧರಿಯಿಂದ ತಪ್ಪಿಸಿಕೊಂಡರೆ ಬಲಿಗೊಳ್ಳಲು ಹೊಂಚಿರುವ ಪುಲಿ ಬಿಡಲಾರದು. ಯಾರೋ ಏನೋ ಕೇಳಿದರೆನ್ನುವಷ್ಟರಲ್ಲಿ! ಯಾರಿಗೆ ಯಾರೋ ಏನೋ ಹೇಳಿದರೆನ್ನುವಷ್ಟರಲ್ಲಿ! ಹೇಳಿದವರಿಗಂತೂ ಬುದ್ಧಿ ಇಲ್ಲವೆಂದರೆ ಕೇಳಿಸಿಕೊಳ್ಳುವವರಿಗಾದರೂ ಬುದ್ಧಿ ಇರುವುದು ಬೇಡವೆ ಎಂದು ಪ್ರಶ್ನಿಸಬೇಕೆನ್ನುವಷ್ಟರಲ್ಲಿ! ಈ ಕಳೇಬರಕ್ಕೂ ನನಗೂ ಯಾವುದೇ ವಿಧದ ಸಂಬಂಧವಿಲ್ಲವೆಂದು ಖಡಾಖಂಡಿತವಾಗಿ ಹೇಳಬೇಕೆನ್ನುವಷ್ಟರಲ್ಲಿ! ಸಮೀಪಿಸಿ ಉಸಿರಳತೆಯಲ್ಲಿ ಸಾಕ್ಷಾತ್ಕರಿಸಿದ ಪೋಲಿಸನೊಬ್ಬ.. "ಹೆಂಡತಿಯ ಹೆಣದ ಸಮಕ್ಷಮ ಎಷ್ಟೊಂದು ಬೇಜವಾಬ್ದಾರಿಯಿಂದ ನಿಂತಿರುವಿಯಲ್ಲ! ಕಾರಿನಲ್ಲಿ ಹಾಕ್ಕೊಂಡು ಮೊದಲು ಇಲ್ಲಿಂದ ಜಾಗ ಖಾಲಿ ಮಾಡು, ಕರ್ಫ್ಯೂ ಜಾರಿಯಾಗಿದೆ, ಹೊಸಬರಂತ ಬಿಡ್ತಿದ್ದೀವಿ" ಎಂದು ನನ್ನ ಕಡೆಗೂ, "ಲೋ ಮರ್ಯಾದೆಯಿಂದ ಹೆಣವನ್ನು ರೇಲ್ವೇಸ್ಟೇಷನ್‌ಗೆ ಸೇರಿಸದಿದ್ದರೆ... ಮುಖ್ಯ ರಸ್ತೆಯಲ್ಲಿ ಹೋಗಬೇಡ, ಅಲ್ಲೆಲ್ಲಾ ಪ್ಯಾರಾಮಿಲಿಟರಿ ಇದೆ, ಅವರಿಗೆ ಬುಲೆಟ್ಟಿನಿಂದ ಉತ್ತರಿಸುವುದು ಬಿಟ್ಟರೆ ಇನ್ನೊಂದು ಗೊತ್ತಿಲ್ಲ, ಬಲಕ್ಕೆ ಮುಳ್ಳುಕಂಟೆಗಳ ನಡುವೆ ಇರುವ ಹಾದಿ ನೇರವಾಗಿ ಸ್ಟೇಷನ್‌ಗೆ ಹೋಗುವುದು, ಯಾವುದಕ್ಕೂ ಹೆಡ್‌ಲೈಟುಗಳನ್ನು ಆಫ್

ಮಾಡುವುದನ್ನು ಮರೆಯಬೇಡ. ವಾಪಸ್ಸು ಹೋಗುವಾಗ ನಮ್ಮನ್ನ ಕಂಡು ರಿಪೋರ್ಟ್ ಮಾಡು, ಇಲ್ಲೇ ನಿನಗಾಗಿ ಕಾಯ್ತಿರ್ತೀವಿ, ಕಾರಿನ ನಂಬರ್ ಬರೆದುಕೊಂಡಿದ್ದೇವೆ, ತಿಳಿಯಿತೇನು!" ಎಂದು ಕಾರಿನ ಚಾಲಕನಿಗೂ ಅಧಿಕಾರಯುತವಾಗಿ ಹೇಳಿದ ಮೇಲೆ ಪಾಲಿಸದಿರಲು ಸಾಧ್ಯವೆ?

++++

ಹಿಂದುಮುಂದು ಹೊಯ್ದಾಡುತ್ತ ಅಂಬ್ಯಾಸಡರ್ ರೇಲ್ವೇಸ್ಟೇಷನ್ ಮುಂದಿದ್ದ ವಿಶಾಲ ಬಯಲನ್ನು ಪ್ರವೇಶಿಸಿ ಕ್ರಮೇಣ ನಿಂತಿತು. ಅದರಲ್ಲಿ ಕಳೇಬರವಿದ್ದ ಸಂಗತಿಯನ್ನು ಬಿತ್ತರಿಸಿದವರು ಯಾರೆಂಬುದು ತಿಳಿಯದು. ಕಾರಿನಿಂದ ಅದನ್ನು ಜೋಪಾನವಾಗಿ ಇಳಿಸುವ ಸಲುವಾಗಿ ನಲ್ಮೂಲೆಯಿಂದ ಹತ್ತಾರು ಮಂದಿ ಧಾವಿಸಿ ಬಂದವರೆಲ್ಲ ಭಿಕ್ಷುಕರೇ ಆಗಿದ್ದರು. ಅವರೆಲ್ಲ ಅದರಿಂದ ಅದನ್ನು ಎಷ್ಟು ಜೋಪಾನ ಜತನದಿಂದ ಇಳಿಸಿದರೆಂದರೆ ಅಷ್ಟು ಜೋಪಾನವಾಗಿ ಇಳಿಸಿದರು. ಆ ಬಳಿಕ ಹೊರಡಲು ಉದ್ಯುಕ್ತನಾದ ಚಾಲಕನಿಗೆ ಲಕ್ಷ್ಮಿಯ ತಂದೆ ನಿಗಧಿ ಪಡಿಸಿದ್ದಕ್ಕಿಂತ ಹೆಚ್ಚು ಮೊತ್ತವನ್ನು ಕೈಯಲ್ಲಿ ಕಾಣಿಸುವಂತೆ ಹಿಡಿದು "ನಮ್ಮಿಂದೇನಾದರು ತಪ್ಪಾಗಿದ್ದರೆ ಕ್ಷಮಿಸು ತಂದೆ. ನಿನ್ನಂಥ ಪುಣ್ಯಾತ್ಮನನ್ನು ಹಡೆದಿರುವ ಹೊಟ್ಟೆ ತಣ್ಣಗಿರಲಪ್ಪ" ಎಂದು ಆತನ ಕೈಗಳನ್ನು ತನ್ನ ಕಣ್ಣಿಗೆ ಒತ್ತಿಕೊಂಡನು. ಅದೇ ಕೈಗಳಿಂದ ತನ್ನ ಒದ್ದೆಗಣ್ಣುಗಳನ್ನೊರೆಸಿಕೊಳ್ಳುತ್ತ ಚಾಲಕನು ಒಂದರಗಳಿಗೆ ಗದ್ಗದಿತಗೊಂಡ, ಬಳಿಕ ಚೇತರಿಸಿಕೊಂಡ. ಬಳಿಕ ನೂರರ ಎರಡು ನೋಟುಗಳನ್ನು ಮರಳಿಸುತ್ತ "ಬಾಟಾನ ತಗೊಂಡು ನಾನ್ಯಾವ ನರಕಕ್ಕೆ ಹೋಗಲಿ ಯಜಮಾನ! ಹಸಿವು ಆಯಾಸದಿಂದಾಗಿ ತೋಚಿದಂತೆ ಮಾತಾಡಿದೆ, ನೀನೇ ನನ್ನನ್ನು ಕ್ಷಮಿಸಬೇಕು, ನಿನ್ನೆಯಷ್ಟೆ ನನ್ನ ಬಸುರಿ ಹೆಂಡತಿಯನ್ನು ಹೆರಿಗೆ ಆಸ್ಪತ್ರೆ ಸೇರಿಸಿದ್ದೀನಿ, ಹೆಣ್ಣು ಹುಟ್ಟಿದರೆ ಲಕ್ಷ್ಮೀ ಅಂತ ಹೆಸರಿಟ್ಟು ಮಾಡಿರುವ ತಪ್ಪನ್ನು ಸರಿಪಡಿಸಿಕೊಳ್ಳುವೆ" ಎಂದು ಹೇಳುತ್ತ ತಾನೂ ಗದ್ಗದಿತನಾದ. ಕರವಸ್ತ್ರದಿಂದ ಕಣ್ಣುಗಳನ್ನು ಒರೆಸಿಕೊಳ್ಳುತ್ತ ನನ್ನನ್ನುದ್ದೇಶಿಸಿ "ನೀವು ಓದಿಕೊಂಡಿರುವವರಂತೆ ಒಳ್ಳೆಯವರಂತೆ ಕಾಣಿಸುತ್ತಿರುವಿರಿ, ಹೆಣ ದೇವರ ಸಮಾನವಂತೆ, ಅದನ್ನು ಕಾಯುವುದು ಅದಕ್ಕೆ ಮಣ್ಣು ಕೊಡುವುದು ಪುಣ್ಯದ ಕೆಲಸ, ನೀವು ಇವರನ್ನು ಬಿಟ್ಟು ಎಲ್ಲಿಗೂ ಹೋಗಬೇಡಿ ಸಾರ್! ತುಂಬಾ ಒಳ್ಳೆಯ ಜನ, ಇಂಥವರ ಮಗಳು ಸುಖವಾಗಿರಬೇಕಿತ್ತು ಪಾಪ" ಎನ್ನುತ್ತ ನನ್ನೆರಡೂ ಕೈಗಳನ್ನು ಹಿಡಿದುಕೊಂಡು ಬಿಕ್ಕಳಿಸಿದ, ಬಳಿಕ ಕಾರು ಪ್ರವೇಶಿಸಿದ. ಅದು ಬಂದ ದಾರಿಯಲ್ಲೆ ಹೊರಟು ಮರೆಯಾದೊಡನೆ ಆರಂಭಗೊಂಡ ಕಲರವ ಮಾನವೀಯತೆಯ ಪುನರ್‌ವ್ಯಾಖ್ಯಾನವೇ ಸರಿ. ಅವರೆಲ್ಲರೂ ಎಷ್ಟೊಂದು ಸೂಕ್ಷ್ಮಜ್ಞರಿದ್ದರೆಂದರೆ! ಅವರೆಲ್ಲರ ಪಂಚೇಂದ್ರಿಯಗಳು ಎಷ್ಟೊಂದು ಸಂವೇದನಾಶೀಲವೂ ಕ್ರಿಯಾಶೀಲವೂ ಆಗಿದ್ದವೆಂದರೆ! ಅವರೆಲ್ಲರ ಮಾನವೀಯ ಮಿಡಿತ ಎಷ್ಟೊಂದು ಪರಿಣಾಮಕಾರಿಯಾಗಿತ್ತೆಂದರೆ! ಅವರೆಲ್ಲರ ಕುತೂಹಲ ಎಷ್ಟೊಂದು ಮೇರೆಮೀರಿತೆಂದರೆ...

ಕಾರಿನಿಂದ ಇಳಿದವರು ಯಾರಿರಬಹುದು, ಅದರಿಂದ ಏನನ್ನಿಳಿಸಿರಬಹುದೆಂದು ತಾವೆಲ್ಲ ಕೂತಲ್ಲಿಯೇ ಊಹಿಸಿದರು. ಅದೊಂದು ರಾಷ್ಟ್ರೀಯ ಸಮಸ್ಯೆ ಎಂದೇ ಪರಿಗಣಿಸಿದರು. ಕೆಲವರು ದಾವಂತದಿಂದಲೂ ಕೆಲವರು ವಾಯುವೇಗದಲ್ಲಿ ಆಗಮಿಸಿ ನೋಡುತ್ತಾರೆ ಅದೂ ಎಲ್ಲೋ ಇದ್ದ ದೀಪದ ಮಂಕುಬೆಳಕಿನಲ್ಲಿ! ನೀರ ಅಭಾವದಿಂದ ಒಣಗಿದ್ದರೂ ಹಲವು ಕಡೆ ಚಿಗುರು ಚಾಚಿದ್ದ ಕಣಗಿಲೆ ಪೊದೆಯ ಮಗ್ಗುಲು ಉದ್ದವಾಗಿ ನಿಶ್ಚಲವಾಗಿ

ಸ್ಥಿತಪ್ರಜ್ಞತೆಯಿಂದ ಮಲಗಿರುವುದು ಕಳೇಬರವೆಂದೂ, ಅದರ ಸುತ್ತ ಅಸಹಾಯಕತೆಯೇ ಮೈವೆತ್ತಂತಿರುವುದು ಅದರ ವಾರಸುದಾರರೆಂದೂ ಖಚಿತಪಡಿಸಿಕೊಂಡವರು ಸುಮ್ಮನಿರಲಾದೀತೆ! ಅವರು ಸುಮ್ಮನಿದ್ದರೂ ಅವರೆಲ್ಲರೊಳಗಿನ ಅಂತಃಕರಣ ಸುಮ್ಮನಿದ್ದೀತೆ! ಅನುಕಂಪ ಕಟ್ಟೆಯೊಡೆದ ಪರಿಣಾಮವಾಗಿ ವಾತಾವರಣ ಸೂತಕದ ಪ್ರಭಾವಳಿ ಮುಡಿಯಿತು. ಪ್ರಶ್ನೆಗಳನ್ನು ಕೇಳಲಾರಂಭಿಸಿದವರೇ ಉತ್ತರ ಕೊಡಲಾರಂಭಿಸಿದರು. ನನ್ನನ್ನೇ ವಿಧುರನೆಂದು ಭಾವಿಸಿದವರೆಷ್ಟೋ! ನನ್ನ ಹೆಗಲ ಮೇಲೆ ತಮ್ಮ ತಮ್ಮ ಕೈಗಳನ್ನು ಹಾಕಿ "ಅಯ್ಯೋ ಪಾಪ, ಇನ್ನೂ ಚಿಕ್ಕ ವಯಸ್ಸು!" ಎನ್ನುತ್ತ ನನ್ನ ಕರುಳೊಳಗೆ ವಿಹರಿಸತೊಡಗಿದವರೆಷ್ಟೋ! ಒಬ್ಬರೊಳಗಿಂದ ಇನ್ನೊಬ್ಬರು ಮೂಡಲಾರಂಭಿಸಿದವರೆಷ್ಟೋ! ಕೇಳು ಕೇಳುವಷ್ಟರಲ್ಲಿ ನೋಡು ನೋಡುವಷ್ಟರಲ್ಲಿ ಕಳೇಬರದ ಯಾತ್ರೆ ತನ್ನ ಅಂತಿಮಘಟ್ಟದಲ್ಲಿ ರೇಲ್ವೇನಿಲ್ದಾಣದ ಪ್ಲಾಟ್‌ಫಾರಂ ಸೇರಿಕೊಂಡಿತು.

ನನಗೆ ಆದೋನಿಯ ರೇಲ್ವೇ ನಿಲ್ದಾಣವೇನೂ ಅಪರಿಚಿತವಿರಲಿಲ್ಲ. ನಗರದಿಂದ ಕಿಲೋಮೀಟರ್ ದೂರದಲ್ಲಿರುವ ಕಾರಣಕ್ಕೋ ಓಡಾಡುವ ಬಹುಪಾಲು ರೈಲುಗಳಿಗೆ ನಿಲುಗಡೆ ಇಲ್ಲದಿರುವ ಕಾರಣಕ್ಕೋ ಅಲ್ಲಿಗೆ ಬಂದು ಹೋಗುವವರು ತೀರಾ ವಿರಳ. ಹಗಲು ಹೊರತುಪಡಿಸಿದರೆ ರಾತ್ರಿ ಸಮಯದಲ್ಲಿ ಭಿಕ್ಷುಕರ ಕುಷ್ಠರೋಗಿಗಳ ವೃದ್ಧರಂಥ ಕೌಟುಂಬಿಕ ಜೀವಂತ ತ್ಯಾಜ್ಯವಸ್ತುಗಳ ಜುಗುಪ್ಸಿಗಳ ನಿರಾಶ್ರಿತರ ತಂಗುದಾಣಕ್ಕೆ ಹೇಳಿಮಾಡಿಸಿದಂಥ ಸ್ಥಳ ಅದು. ಇಂಥವರೊಂದಿಗೆ ಆ ಕ್ಷಣದ ಬದುಕನ್ನು ಜೀವಿಸುವ ಸಲುವಾಗಿ ಸಣ್ಣಪುಟ್ಟ ಕಳ್ಳತನಗಳನ್ನು ಮಾಡುವ ಕಳ್ಳಕಾಕರು ತಲೆಹಿಡುಕರು ಹಿಜಡಾಗಳಿಗೂ ಪ್ಲಾಟ್‌ಫಾರಂ ಹೆತ್ತವಳೋಪಾದಿಯಲ್ಲಿ ತನ್ನ ತೊಡೆ ಮೇಲೆ ಆಶ್ರಯ ನೀಡುವುದರ ಮೂಲಕ ಸಂತೈಸುವುದರಲ್ಲಿ ಹೆಸರಾಗಿತ್ತು. ಆದರೆ ಆ ರಾತ್ರಿ ಅದರ ಉದ್ದಗಲಕ್ಕೂ ಜನವೋ ಜನ!

ನನಗೆ ತಿಳಿದಿರುವಂತೆ ಆದೋನಿ ಚಿಕ್ಕಪುಟ್ಟ ಕಲಹಗಳಿಗೊಂದೇ ಅಲ್ಲದೆ ವರ್ಷದಲ್ಲಿ ಹಲವು ಸಲ ಸಂಭವಿಸುತ್ತಿದ್ದ ಕೋಮುಗಲಭೆಗಳಿಗೂ ಹೆಸರಾಗಿರುವುದಷ್ಟೆ! ಆ ನಗರದಲ್ಲಿರುವ ಮಹಾಕಾಳಿಯ ದೇವಾಲಯದಲ್ಲಿ ಕೋಮುಸೌಹಾರ್ದತೆಯ ಪ್ರತೀಕವೆಂಬಂತೆ ಹಿಂದೂಗಳು ಪೂಜಿಸುವ ಶಮೀವೃಕ್ಷವೂ ಮುಸ್ಲಿಮರು ಆರಾಧಿಸುವ ಗೋವಿನಮರದ ಆಶ್ರಯದಲ್ಲಿರುವ ಸೂಫಿ ಸಂತನ ಸಮಾಧಿಗಳೆರಡೂ ಒಂದೇ ತಾಯಿಯ ಮಕ್ಕಳೆಂಬಂತೆ ಒಟ್ಟೊಟ್ಟಿಗೆ ಬೆಳೆದು ಪೂಜ್ಯಆರಾಧನಾ ಸ್ಥಳವೆನಿಸಿರುವುದಷ್ಟೆ! ಹಲವು ಶತಮಾನಗಳ ಹಿಂದೆ ಆದೋನಿನ್ನಾಳಿದ ಸಿದ್ದಿಮಸೂದ್‌ಖಾನ್ ಎಂಬ ನವಾಬನಿಂದಲೂ ಮಂತ್ರಾಲಯದಲ್ಲಿ ನೆಲೆಗೊಂಡಿರುವ ರಾಘವೇಂದ್ರ ಯತಿಗಳಿಂದಲೂ ಆ ಎರಡೂ ವೃಕ್ಷಗಳು ಪೂಜಿಸಿಕೊಳ್ಳುತ್ತಿದ್ದವೆಂಬ ಪ್ರತೀತಿ ಇರುವುದಷ್ಟೆ! ಇದೆಲ್ಲ ಸ್ವಾತಂತ್ರ್ಯೋತ್ತರವಾಗಿ ಅಂದರೆ ಕೆಲವು ವರ್ಷಗಳ ಹಿಂದಿನವರೆಗೆ ಅಬಾಧಿತವಾಗಿ ನಡೆದುಕೊಂಡು ಬಂದಿತ್ತು, ಆದರೆ ಮಜ್ಲಿಸ್ ಪಾರ್ಟಿವತಿಯಿಂದ ಸ್ಪರ್ಧಿಸಿದ ಮೆಹಬೂಬ್‌ಖಾನನೂ, ತೆಲುಗು ದೇಶಂ ಪಾರ್ಟಿಯಿಂದ ಸ್ಪರ್ಧಿಸಿದ ಮೀನಾಕ್ಷಿನಾಯ್ಡೂ ತಮ್ಮ ಸ್ವಾರ್ಥ ರಾಜಕಾರಣದ ಸಲುವಾಗಿ ಯಾವಾಗ ಕೋಮು ಗಲಭೆಯಂಥ ವಿಷ ಬೀಜ ಬಿತ್ತಿದರೋ ಆ ಕ್ಷಣದಿಂದ ಆದೋನಿಯ ಸೌಹಾರ್ದ ಭಾವನೆ ಕದಡಿ ಹಾಳಾಗಿರುವುದು. ಆ ದಿವಸ ಸಂಭವಿಸಿರುವುದು ಅದೇ! ಬೀದಿ ಬೀದಿಗಳಲ್ಲಿ ಹೆಣಗಳುರುಳಿವೆಯಂತೆ! ನೂರಾರು ಗಾಯಾಳುಗಳು ಆಸ್ಪತ್ರೆ ಪಾಲಾಗಿರುವವರಂತೆ! ಹಲವಾರು ಅಂಗಡಿ, ಮುಂಗಟ್ಟುಗಳನ್ನು ಲೂಟಿ ಮಾಡಲಾಗಿದೆಯಂತೆ! ಗಲಭೆ ನಿಯಂತ್ರಿಸುವ ಸಲುವಾಗಿ ನಗರದಾದ್ಯಂತ

ಕರ್ಫ್ಯೂ ಜಾರಿಗೊಳಿಸಿದ್ದಾರಂತೆ! ಸ್ಥಳೀಯ ಪ್ರಭುತ್ವವು ದೂರದ ಹೈದರಾಬಾದಿನಿಂದ ಆದರಪೂರ್ವಕವಾಗಿ ಬರಮಾಡಿಕೊಂಡಿರುವ ಪ್ಯಾರಾಮಿಲಿಟರಿ ನಗರದ ಎಲ್ಲೆಡೆ ಕವಾಯತು ಮಾಡುತ್ತಿರುವುದಂತೆ! ಆದೋನಿ ಪಾಸಲೆಯಲ್ಲಿರುವ ರೌಡೂರು ಮರೆಗೌಡ ಕೋಸಿಗಿ ದೊರೆ ಮಂಚಾಲದ ಶೇಷಶಯನರೆಡ್ಡಿಯರಂಥ ಫ್ಯಾಕ್ಷನಿಷ್ಟ್ ಮುಖಂಡರು ಕೊಲೆಗಳನ್ನು ಮಾಡುವವರೂ ಕೊಲೆಗಳನ್ನು ಮಾಡಿಸುವವರೂ ಸ್ವಯಂ ತಾವೇ ಅನಾಥ ಕಳೇಬರಗಳಿಗೆ ಸಂಸ್ಕಾರ ಮಾಡುತ್ತಿರುವರಂತೆ! ಹಲವು ಕಡೆ ಗಂಜಿಕೇಂದ್ರಗಳನ್ನೂ ತೆರೆದಿರುವರಂತೆ! ಪರಿಸ್ಥಿತಿ ಹೀಗಿರುವಾಗ ಅತಂತ್ರರು ಎಲ್ಲಿಗೆ ತಾನೆ ಹೋಗಲು ಸಾಧ್ಯ!

ಹೀಗಾಗಿ ರೇಲ್ವೆನಿಲ್ದಾಣದ ತುಂಬೆಲ್ಲ ನಿರಾಶ್ರಿತರೇ ನಿರಾಶ್ರಿತರು! ಲಕ್ಷ್ಮಿಯ ಕಳೇಬರದ ಸಾನ್ನಿಧ್ಯದಲ್ಲಿರದಿದ್ದ ಪಕ್ಷದಲ್ಲಿ ನಾನೂ ಎಲ್ಲರಂತೆ ನಿರಾಶ್ರಿತನೆ! ದುಃಖದ, ಸೂತಕದ, ಅನುಕಂಪದ ಕೇಂದ್ರವಾಗಿದ್ದ ಅದರ ಕಡೆ ಕೃತಜ್ಞತಾಭಾವದಿಂದ ನೋಡುತ್ತ, ದೂರ ಹೋದರೆಲ್ಲಿ ಇರುವ ಅಸ್ತಿತ್ವವನ್ನು ಕಳೆದುಕೊಳ್ಳುವೆನೋ ಎಂಬ ಆತಂಕದಿಂದ ಅದರ ಪರಿಧಿಯೊಳಗೇ ಕೂತು ಕ್ಷಣಗಳನ್ನು ಎಣಿಸಲಾರಂಭಿಸಿದೆ. ಹೆಣದ ಕಡೆ ನೋಡುತ್ತಿದ್ದವರು ನನ್ನ ಕಡೆಗೂ, ನನ್ನ ಕಡೆ ನೋಡುತ್ತಿದ್ದವರು ಹೆಣದ ಕಡೆಗೂ! ತಾತ್ಕಾಲಿಕವಾಗಿ ಆ ಅಭಾಗ್ಯ ಮಹಿಳೆಯ ವಿಧುರ ಪತಿಯ ಪಾತ್ರವಹಿಸಿರುವ ಅನಿವಾರ್ಯತೆ ಸಂಕಟ ಬೇರೆ! ಒಟ್ಟಾರೆ ತೇಲಲೀಯದ ಮುಳಗಲೀಯದ ಪರಿಸ್ಥಿತಿ! ಅಂಥ ಬಂಗಾರದಂಥ ಹೆಂಡತಿಯನ್ನು ಕಳಕೊಂಡಿರುವ ನೀನು ಹೆಂಗೆ ಬದುಕುವಿಯೋ ಎಂಬ ಮಾತುಗಳು ಬೇರೆ, ನಿನ್ನ ಬಾಯಿಯಿಂದ ಒಂದಾದರೂ ದುಃಖದ ಮಾತಿಲ್ಲವಲ್ಲ! ನಿನ್ನ ಕಣ್ಣಲ್ಲಿ ಒಂದೇ ಒಂದು ಹನಿ ಕಣ್ಣೀರಿಲ್ಲವಲ್ಲ! ನೀನೆಂಥ ಕಟುಕಗಂಡನೋ ಎಂಬ ನೋಟಗಳು ಬೇರೆ! ದುಃಖಕ್ಕೆ ಸಂಬಂಧಿಸಿದ ಮಾತುಗಳ ಕಣ್ಣೀರ ಬರದಿಂದ ಎಲ್ಲಿಯತನಕ ತತ್ತರಿಸುತ್ತ ಕಾಲಕ್ಷೇಪ ಮಾಡುವುದು! ಹಾಗೆ ಅಭಿನಯಿಸುವುದೂ ನನ್ನಿಂದ ಸಾಧ್ಯವಾಗುತ್ತಿಲ್ಲವಲ್ಲಾ! ನನ್ನ ಪರಿಸ್ಥಿತಿಗಿಂತ ಕಳೇಬರದ ವಾರಸುದಾರರ ಪರಿಸ್ಥಿತಿಯೂ ಭಿನ್ನವಿರಲಿಲ್ಲ. ನಿಜ ಹೇಳಿದರೆಲ್ಲಿ ತಮ್ಮ ಲಕ್ಷ್ಮಿಯ ಕಳೇಬರ ನಿರಾಶ್ರಿತಗೊಳ್ಳುವುದೋ! ತಾವು ಅದರೊಂದಿಗೆ ತಮ್ಮೂರಾದ! ಒಟ್ಟಾರೆ ಅಸಹಾಯಕತೆಯೇ ನಮ್ಮೆಲ್ಲರ ಮೂಲ ಬಂಡವಾಳವಾಗಿತ್ತು.

ಎಲ್ಲಿಂದಲೋ ಆಗಮಿಸಿದ ವೃದ್ಧ ದಂಪತಿಗಳಿಬ್ಬರು "ಏನ್ರಪ್ಪಾ, ಏನ್ರವ್ವಾ ಎಷ್ಟೊತ್ತಾಗಿರುವುದೋ ನಿಮ್ಮ ಒಡಲುಗಳು ಕೂಳು ಕಾಣದೆ, ಅದನ್ನು ಮಣ್ಣು ಮಾಡುವ ಸಲುವಾಗಿಯಾದರೂ ನೀವು ನಾಲಕು ತುತ್ತುಣ್ಣುವುದು ಮುಖ್ಯ, ಉಣ್ಣಲಿಲ್ಲಾಂದ್ರೆ ಎಂಜಲೆಲೆ ಯಲ್ಲಮ್ಮಾಯಿ ಮೇಲಾಣೆ ನೋಡಿರಿ" ಎನ್ನುತ್ತ ತಮ್ಮ ತಮ್ಮ ಜೋಳಿಗೆಗಳನ್ನು ತೆರೆದು ಎಲ್ಲರ ಸಮಕ್ಷಮ ಹರಡಿದರು. ಸರ್ವಾನ್ನೊಂದು ಆಹಾರ ದಿನಿಸುಗಳ ಮಿಶ್ರಣ ಅದಾಗಿತ್ತು. ಅದು ಭಿಕ್ಷಾಟನೆಯಂಥ ಪವಿತ್ರ ಕಾರ್ಯದಿಂದ ಸಂಗ್ರಹಿಸಿರುವುದು ಎಂಬುದು ಸ್ಪಷ್ಟವಾಯಿತು, ಅದಲ್ಲದೆ ತಿಪ್ಪೆಯ ಮೇಲಿದ್ದುಕೊಂಡೇ ತನ್ನ ಪವಾಡಗಳಿಂದ ತಿಪ್ಪೆಗಳಿಗೂ ರಾಜಾಶ್ರಯ ಕಲ್ಪಿಸಿದ ಎಲ್ಲಮ್ಮಾಯಿ ಆದವಾನಿಯ ಅಧಿದೇವತೆ, ಆಕೆಯ ಮೇಲೆ ಆಣೆ ಮಾಡಿದೊಡನೆ ಕಳೇಬರದ ನಿಜವಾರಸುದಾರರು ತಮ್ಮ ಕಿವಿಗಳ ಮೇಲೆ ಕೈಗಳನ್ನಿಟ್ಟುಕೊಂಡು ಶಿವ ಶಿವಾ ಎಂದು ಉದ್ಗರಿಸಿದರು. ಕಾರಣ ಆ ಕಾಲದಲ್ಲಿ ಆ ವೃದ್ಧೆಯು ಕೊಡಮಾಡಿದ ಭಿಕ್ಷಾನ್ನವನ್ನು ರಾಘವೇಂದ್ರಯತಿಗಳೂ ನವಾಬ ಸಿದ್ದಿಮಸೂದ್ ಖಾನನೂ ಮಹಾಪ್ರಸಾದವೆಂದು ಭುಂಜಿಸಿದವರೆ! ಅದನ್ನು ತಿನ್ನಲು ನಿರಾಕರಿಸುವುದರ ಮೂಲಕ ಅಕಾಲ ಮರಣಕ್ಕೆ ತುತ್ತಾದ ಥಾಮಸ್ ಮನ್ರೋ ಸಾಹೇಬ ನಮ್ಮೆಲ್ಲರಿಗೆ ನೆನಪಾದನು. ಆಕೆಯೇ ಅವರ

ರೂಪದಲ್ಲಿ ಒತ್ತಾಯಿಸುತ್ತಿರುವರೆಂಬ ಕಾರಣಕ್ಕೋ ನಮ್ಮೆಲ್ಲರ ಒಡಲುಗಳು ಹಸಿದಿದ್ದ ಕಾರಣಕ್ಕೋ ಅಗೋಚರ ಪರಾವರ್ತಿತಪ್ರತಿಕ್ರಿಯೆಗೊಳಪಟ್ಟೋ ಜೋಳಿಗೆಗೆ ಕೈಹಚ್ಚುವುದು ಅನಿವಾರ್ಯವಾಯಿತು. ನಮ್ಮ ನಮ್ಮ ಅಂಗೈಗಳನ್ನು ಒಂದರ ಮೇಲೊಂದರಂತಿರಿಸಿ ವಿನೀತ ಭಾವದಿಂದ ಚಾಚಿ ಪ್ರಸಾದವೋ ಎಂಬಂತೆ ನೀಡಿಸಿಕೊಳ್ಳುವುದು ಅನಿವಾರ್ಯವಾಯಿತು. ಒಂದು ತುತ್ತು ಸ್ವೀಕರಿಸಿದ ಬಳಿಕ ಅದು ಮೃಷ್ಟಾನ್ನದ ಪರಿವೇಶ ಮುಡಿಯಿತು. ರುಚಿಯೋ ಅಮೋಘ! ತುತ್ತಿನ ಒಂದೊಂದು ಅಗುಳುಗಳೊಳಗೆ ಆಕ್ರಂದನಗಳು ಸಂಕಟಗಳು ವಿಕ್ಷಿಪ್ತ ಕನಸುಗಳು! ನಾಲ್ಕನೆ ತುತ್ತನ್ನು ಉಮ್ಮಳಿಸಿದರೆಲ್ಲಿ ಭೂಪ್ರಳಯ ಸಂಭವಿಸುವುದೋ ಎಂದು ಪರಿಭಾವಿಸಿದ ವೃದ್ದೆ ತನ್ನ ಹಣ್ಣುಗೈಯಲ್ಲಿದ್ದ ಸಿಲವಾರ ಲೋಟ ಚಾಚುತ್ತ ಮುಗುಳ್ನಕ್ಕಳು. ಕುಡಿದರೇನಾಗುವುದೋ! ಕುಡಿಯದಿದ್ದರೇನಾಗುವುದೋ!

ಬಾಯೊಳಗೆ ತುಂಬಿದ ನೀರನ್ನು ಅನ್ನನಾಳಕ್ಕಿಳಿಸುವ ಧೈರ್ಯ ಸಾಲಲಿಲ್ಲ, ಹಳಿಗಳ ಕಡೆ ಓಡಿ ಅಸಹಾಯಕತೆ ಮೈವೆತ್ತಂತೆ ಕುಳಿತೆ. ಸಂಕಟಗಳ ಗೋದಾಮಾಗಿರುವ ಗಂಟಲು, ನೀರ ಪುಷ್ಕರಣಿಯಾಗಿರುವ ಕಣ್ಣುಗಳು, ವೈಶಂಪಾಯನವಾಗಿರುವ ಹೃದಯ! ವಸ್ತುಸ್ಥಿತಿಗೆ ಮುಳ್ಳಿನ ಕಿರೀಟ ಮುಡಿಸಿದಂತೆ ಕಿಲಕಿಲ ನಗುತ್ತಿರುವ ಚೀಲದೊಳಗಿರುವ ಚೂರಿ! ನೀನು ಅಕಾಲವೃತ್ಯುವಿಗೆ ಬಲಿಯಾಗುವ ಕಾಲ ದೂರವಿಲ್ಲವೆಂದು ಅಪ್ಪನ ಮೂಲಕ ಹೇಳುತ್ತಿರುವ ಜಾತಕ ಕತೃ ಶಂಭಯ್ಯಶಾಸ್ತ್ರಿ! ಬೆಳ್ಳಿಯಿಂದ ಹಸುವನ್ನು ಮಾಡಿಸುವ ಸಲುವಾಗಿಯಾದರೂ ಹಣ ಕಳಿಸಿ ಆಯುಷ್ಯ ವೃದ್ದಿಸಿಕೋ ಎಂದು ಹೇಳುತ್ತಿರುವ ಅಪ್ಪ! ಅಣ್ಣಾ ನೀನು ಇನ್ನೂ ಬರಲಿಲ್ಲವಲ್ಲೋ ಎಂದು ಕೂಗುತ್ತಿರುವ ಶರಭ! ಹೃತ್ಕರ್ಣದಲ್ಲಿ ಹೆಬ್ಬಾರ್ ಅಲಿ! ಹೃತ್ಕವಾಟದಲ್ಲಿ ವಕೀಲ ಜೀವೋತ್ತಮರಾವ್! ಅಪಧಮನಿ ಅಭಿದಮನಿಗಳಲ್ಲಂತೂ! ಅವರೆಲ್ಲರೊಂದಿಗೆ ಯರನ್ನೋ ಹೋಲುವ ಏನನ್ನೋ ನೆನಪಿಸುವ ನೆನಪುಗಳೊಡನೆ ಸಂಕಟಗಳ ಹುತ್ತ ನಿರ್ಮಿಸುವ ಕಳೇಬರದೊಂದಿಗೆ ಕಳೇಬರದ ನಿಜವಾರಸುದಾರರೊಂದಿಗೆ ತಮ್ಮ ನಿಖರ ಮಾತುಗಳಿಂದ ಶೃಂಖಲೆ ತೊಡಿಸುತ್ತಿರುವ ಮಾನವಲೋಕದ ತ್ಯಾಜ್ಯವಸ್ತುಗಳೊಂದಿಗೆ ಸುದೀರ್ಘ ರಾತ್ರಿಯ ಒಂದೊಂದು ಕ್ಷಣ ಕಳೆಯುವುದೆಂದರೆ!

ಸೂರ್ಯ ಉದಿಸಿದರೆ ತಾನೆ ರಾತ್ರಿಯ ಅಂತ್ಯ! ಯಾರೊಬ್ಬರಿಗೂ ಹೇಳದೆ ಕೇಳದೆ ಹಳಿಗಳಿರುವ ದಾರಿ ಮೂಲಕ ಓಡಬೇಕೆನ್ನಿಸಿತು. ಆದರೆ ಅಂತಃಕರಣದ ಯಕ್ಷಪ್ರಶ್ನೆಗಳಿಗೆ ಉತ್ತರಿಸಲಾಗದೆ ನಿಶ್ಶಕ್ತವಾಗಿದ್ದ ಕಾಲುಗಳು ಅದಕ್ಕೆ ಸಮ್ಮತಿಸಲಿಲ್ಲ. ಸೃಜನಶೀಲ ಲೇಖಕನಾಗಿರುವವನು ಅನುಭವಗಳನ್ನು (ಅವು ಕಹಿಯೋ ಸಿಹಿಯೋ) ಅಲಕ್ಷಿಸಿ ಪಲಾಯನ ಮಾಡುವುದು ಸರಿಯೆ! ಮೊಣಕಾಲುಗಳಲ್ಲಿ ನೋವು ಕಾಣಿಸಿಕೊಂಡಂತಾಯಿತು. ನನ್ನ ಪಾದಗಳನ್ನು ಪ್ರೀತಿಪೂರ್ವಕವಾಗಿ ಮರ್ಧಿಸಿದ ನೀನೆಲ್ಲೋ! ಮೂಗಿನಲ್ಲಿ ಇನ್ನೂ ಮೂಗುತಿ ಇರುವ ಕೊರಳಲ್ಲಿನ್ನೂ ಮಾಂಗಲ್ಯವಿರುವ ನೊಸಲಲ್ಲಿನ್ನೂ ಕುಂಕುಮ ತಿಲಕವಿರುವ ತುಟಿಗಳ ನಡುವೆ ಇನ್ನೂ ಮುಗುಳ್ನಗೆ ಇರುವ ಎದೆಯ ತುಂಬೆಲ್ಲ ಇನ್ನೂ ಹಸಿಹಸಿ ಆಸೆ ಕಾಮನೆಗಳಿರುವ ನನ್ನ ಮುಖವನ್ನು ನೋಡು ಆಸೆ ಇಲ್ಲವೆ ನಿನಗೆ! ಕೊಳೆತು ವಾಸನೆ ಬೀರುತ್ತಿರುವುದು ನನ್ನ ನಶ್ವರ ಶರೀರವೇ ಹೊರತು ನನ್ನ ಮನಸ್ಸಲ್ಲವೋ! ಭೌತಿಕವಾಗಿ ನಾಶವಾದ ಬಳಿವೂ ನಿನ್ನನ್ನು ಅಹರ್ನಿಶಿ ಕಾಡುವ ಶಕ್ತಿ ಉಳ್ಳವಳಾದ ನನ್ನನ್ನೇ ಅಲಕ್ಷಿಸಿ ನೀನಲ್ಲಿ ಕೂತಿರುವುದೆಂದರೇನು! ಎದ್ದು ಓಡಿಬರುವಿಯೋ ಅಥವಾ! ಗುರುತ್ವಾಕರ್ಷಣೆಗೆ ಸಿಲುಕಿದವನಂತೆ ಓಡಿ ತಲುಪಿದೆ ಸೂತಕ ಸ್ಥಳವನ್ನು, ಅದೂ ನನಗರಿವಿಲ್ಲದಂತೆ!

ನನ್ನ ಹಣೆ ಮೇಲಿನ ಬೆವರನ್ನು ತನ್ನ ಸೆರಗಿನಿಂದ ಒರೆಸುತ್ತ ಭಿಕ್ಷುಕಿ ಅದೇ ವೃದ್ದೆ ಅದೇ ಎಂಜಲೆಲೆ ಎಲಮ್ಮಾಯಿ "ಎಲ್ಲಿಗೆ ಹೋಗಬೇಕೆಂದಿದ್ದೆಯೋ ಮಗನೇ! ಇನ್ನೇನು ಬರಲಿರುವ ರೈಲಿಗೆ ಮೈಯೊಡ್ಡಿ ಸಾಯಬೇಕೆಂದುಕೊಂಡಿದ್ದೆ ಏನೊ! ಆತ್ಮಹತ್ಯೆ ಮಹಾಪಾಪ ಕಣಪ್ಪಾ, ಸಾಯಬೇಕಾದವರು ಬದುಕಿರುವುದು ಬದುಕಬೇಕಾದವರು ಸಾಯುವುದು, ಇದೆಲ್ಲ ವಿಧಿಯ ಆಟ ಮಗನೆ! ಮೈಮೇಲಿನ ಅರಿಷಿಣದ ನೀರು ಒಣಗುವುದಕ್ಕೂ ಮೊದಲೆ ನಿನಗಿಂಥ ಗತಿ ಬರಬಾರದಾಗಿತ್ತಪ್ಪಾ, ಏನು ಮಾಡಲು ಸಾಧ್ಯ! ಅವರವರ ಕರ್ಮವನ್ನು ಅನುಭವಿಸಲೇಬೇಕು. ಹೆಣ ಹೆಣವಲ್ಲವೋ ಅದು ಶಿವನ ಇನ್ನೊಂದು ಮುಖ. ಅದರ ನಿರಮ್ಮಳ ಮುಖ ನೋಡಿ ಬದುಕುವುದನ್ನು ಕಲಿ" ಎಂದು ಅಲೌಕಿಕ ಆಶ್ಚರ್ಯಕರ ಅವಧೂತಿಕಾ ರೀತಿಯಲ್ಲಿ ನುಡಿಯಿತು. ನನ್ನನ್ನು ಉಭಯ ಸಂಕಟದಲ್ಲಿ ಸಿಲುಕಿಸಿತು. ಅದರ ಮಾತಿಗೆ ಪ್ರಭಾವಳಿ ಮುಡಿಸುವ ರೀತಿಯಲ್ಲಿ ಮೃತಳ ತಂದೆ ತಾಯಿ ನನ್ನೆಡಬಲ ನಿಂತರು. ನನ್ನೆರಡೂ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡರು. ಕಣ್ಣೀರ ಕಡಲ ಸಹಾಯದಿಂದ ಮುಖದಲ್ಲಿ ಮುಖವಿರಿಸಿ ದಿಟ್ಟಿಸಿದರು. ಭಾಷೆಯ ಹಂಗಿಲ್ಲದೆ ಸಂಬಂಧವಾಚಕಗಳನ್ನು ಸಂಬೋಧಿಸಿದರು ಯಥೇಚ್ಚವಾಗಿ. ತಮ್ಮ ನೀರ್ಗೊಳದಂತಿದ್ದ ಕಣ್ಣುಗಳಿಂದ ನೋಡಿದರು ಸಮ್ಮೋಹನಗೊಳಿಸುವ ರೀತಿಯಲ್ಲಿ!

"ನೀನು ಯಾರೋ, ನಾವು ಯಾರೋ! ಮದುವೆ ಆದಂದಿನಿಂದ ಲಕ್ಷ್ಮಿ ತನ್ನ ಗಂಡನ ಮುಖ ಸರಿಯಾಗಿ ನೋಡಿಲ್ಲ, ಸುಂಟರಗಾಳಿಯಂಥ ಅವನಿಗೆ ಮಗಳನ್ನು ಕೊಟ್ಟು ತಪ್ಪು ಮಾಡಿದ್ದೀವಂತ ಈಗ ಅನ್ನಿಸುತ್ತಿದೆ, ಅವನೂ ಥೇಟ್ ನಿನ್ನ ಥರಾನೆ ಇದ್ದ, ಬರುವುದಾಗಿ ಹೇಳಿದವನು ಬರಲೇ ಇಲ್ಲ, ಕೈಹಿಡಿದ ಗಂಡನ್ನಿಲ್ಲದೆ ಮಗಳ ಮಣ್ಣು ಮಾಡುವುದಾದರು ಹೇಗೆ! ಹೇಗೋ ನೀನಿರುವೆಯಲ್ಲ, ಅವನ ಸ್ಥಾನದಲ್ಲಿ ನಿಂತು ಮಗಳ ಸಂಸ್ಕಾರವನ್ನು ನೆರವೇರಿಸಿಕೊಡು ತಂದೆ, ಪುಣ್ಯ ಬರ್ತದೆ" ಎಂದು ವೃದ್ದೆ ಹೇಳಿದ ಬಳಿಕ..

"ನಮ್ಮ ಅಳಿಯ ಸತ್ತಿರಬಹುದೆಂದು ಯೋಚಿಸುತ್ತಿರುವೆ ಏನಪ್ಪಾ! ಸಾಯುವಂಥ ಹೇಡಿಯಾಗಿದ್ದರೆಲ್ಲಿ ಮಗಳನ್ನು ಕೊಡುತ್ತಿದ್ದೆವು! ಅವನ ಗ್ರಹಚಾರವೋ ನಮ್ಮ ಮಗಳ ಗ್ರಹಚಾರವೋ! ಆಕೆ ಅಂಥ ಹೆರಿಗೆ ನೋವಿನಲ್ಲೂ ತನ್ನ ಗಂಡನನ್ನು ಕನವರಿಸಿದಳಪ್ಪಾ, ಆಲೂರಿನಲ್ಲಿ ಮಸುಕು ಮಸುಕು ಬೆಳಕಲ್ಲಿ ಕಂಡ ನೀನೇ ಅವನಿರಬಹುದೆಂದು ಅಪಾರ್ಥ ಮಾಡಿಕೊಂಡೆ, ಆಮೇಲೆ ತಿಳಿಯಿತು ನೀನು ಅವನಲ್ಲಾಂತ, ಆದರೇನು ಮಾಡುವುದು ಮಣ್ಣು ಕೊಡಲು ಕೈ ಹಿಡಿದ ಗಂಡನೇ ಆಗಬೇಕೆಂದೇನಿಲ್ಲ, ಯಾರೋ ಒಬ್ಬರು ಅಳಿಯನ ಸ್ಥಾನದಲ್ಲಿ ನಿಂತು ಕ್ರಿಯಾಕಟ್ಟಳೆ ನೆರವೇರಿಸಿದರಾಯಿತು ಅಲ್ಲವೆ!" ಎಂದು ವೃದ್ಧನೂ..

"ಮಗನಾಗುವುದೆಂದರೆ ಹೊಟ್ಟೆಯಲ್ಲಿ ಹುಟ್ಟಬೇಕೆಂದೇನೂ ಇಲ್ಲ, ಅಳಿಯನಾಗುವುದೆಂದರೆ ಮಗಳ ಕೈ ಹಿಡಿಯಬೇಕೆಂದೇನೂ ಇಲ್ಲ, ಒಂದು ಹಿಡಿ ಮಣ್ಣು ಹಾಕುವುದೆಂದರೆ ವಿಧುರನಾಗಬೇಕೆಂದೇನೂ ಇಲ್ಲ ಮಗನೆ! ಮಗನಾಗುವುದಕ್ಕೂ ಅಳಿಯನಾಗುವುದಕ್ಕೂ ಪುಣ್ಯ ಮಾಡಿರಬೇಕು, ಆ ಎರಡು ಲಕ್ಷಣಗಳು ನಿಸ್ಸಂದೇಹವಾಗಿ ನಿನ್ನಲ್ಲಿವೆ, ಹಿಂದೆಮುಂದೆ ಯೋಚಿಸದೆ ನೀನು ಇವರ ಸಂಗಡ ಊರಿಗೆ ಹೋಗು, ಕಷ್ಟ ಸುಖಗಳಲ್ಲಿ ಭಾಗಿಯಾಗು, ಒಂದೆರಡು ದಿವಸದ ಮಟ್ಟಿಗೆ ಮಗನಾದರೆ ತಪ್ಪೇನು! ಮೃತಳ ಗಂಡನಾದರೆ ತಪ್ಪೇನು! ನಿನಗೆ ಒಳ್ಳೆಯದಾಗುವುದು ಯೋಚಿಸಬೇಡ" ಎಂದು ನಿರಮ್ಮಳವಾಗಿ ಹೇಳುತ್ತಿರುವ ಭಿಕ್ಷುಕಿಯು.

"ಈ ತಾಯಿ ಬಂಗಾರದಂಥ ಮಾತಾಡಿದಳು ತಂದೆಯೆ! ಅಷ್ಟು ಮಾಡಪ್ಪಾ, ಪುಣ್ಯಬರ್ತದೆ, ಇದರಿಂದ ನೀನೂ ಸುಖವಾಗಿರುತ್ತಿ, ನಾವೂ ಸುಖವಾಗಿರುತ್ತೇವೆ, ನಿನಗೆ ತಂದೆ ತಾಯಿ

ಇರದಿದ್ದರೆ ಹೇಳು" ಎಂದು ನೆಮ್ಮದಿಯ ಉಸಿರು ಬಿಡುತ್ತ ವೃದ್ಧನೂ..

"ನೀನು ಒಪ್ಪುವುದಾದರೆ ನಾವಿಬ್ಬರೂ ನಿನ್ನನ್ನು ಹೆತ್ತ ಮಗನಿಗಿಂತಲೂ ಹೆಚ್ಚಾಗಿ ನೋಡಿಕೊಳ್ಳಲು ಸಿದ್ದರಿದ್ದೇವೆ, ನಮಗೇನು ದೇವರು ಕಡಿಮೆ ಮಾಡಿಲ್ಲ, ಸ್ಥಿರಚರಾಸ್ತಿ ಸಾಕಷ್ಟಿದೆ, ನಮಗೆ ಇನ್ನೊಬ್ಬ ಮಗಳಿದ್ದಾಳೆ, ನೀಲಾ ಆಕೆಯ ಹೆಸರು, ಅವಳು ಇವಳಿಗಿಂತ ಸುಂದರಿ, ಒಪ್ಪುವುದಾದರೆ ಅವಳನ್ನು ಕೊಟ್ಟು ಮದುವೆ ಮಾಡಿ ನಿನ್ನನ್ನು ಮನೆಯಲ್ಲಿಟ್ಟುಕೊಳ್ಳವೆವು" ಎಂದು ಮುಖವನ್ನು ಮುಖದಲ್ಲಿಟ್ಟು ಕೇಳುತ್ತಿರುವ ವೃದ್ದೆಯು..

"ನಿನ್ನಂಥ ಬಲಾಢ್ಯ, ಓದಿಕೊಂಡಿರುವ ಅಳಿಯ ಮನೆ ಮಗನಾದರೆ ಕೇಳುವುದೇನಿದೆ! ನಾವೂ ಮಲ್ಲಾರೆಡ್ಡಿಯನ್ನು ಹೆದರಿಸಬಹುದು, ಊರಲ್ಲಿ ಎದೆ ಸೆಟೆಸಿ ಬದುಕಬಹುದು! ಒಪ್ಪಿಕೊ, ಮಹಾರಾಜನಂತಿರಬಹುದು" ಎಂದು ಗೆಲುವಿಗೆ ಮೂರೇ ಮೆಟ್ಟಿಲು ಎಂದು ಭಾವಿಸಿ ಮಾತಾಡುತ್ತಿರುವ ವೃದ್ಧನು..

"ಹ್ಹಾ ಹ್ಹಾ! ನಾನು ಅಂದುಕೊಂಡಿದ್ದು ಒಂದು, ಇವರು ಇರುವುದೇ ಇನ್ನೊಂದು! ಇಂಥವರ ಮಗನಾಗುವುದೆಂದರೆ ಅಳಿಯನಾಗುವುದೆಂದರೆ! ಅಳಿಯ ಮಗನೆರಡೂ ಪಾತ್ರಗಳನ್ನು ನಿಭಾಯಿಸುವುದೆಂದರೆ! ಸುಡುಗಾಡುಗಳನ್ನು ಅಳಿಸಬಹದಲ್ಲವೆ! ಕೊಡಲಿಗಳನ್ನು ನಗಿಸಲೂಬಹುದಲ್ಲವೆ! ಅಳಿಸುವ ನಗಿಸುವ ಸೌಭಾಗ್ಯ ಏನು ಕೊಟ್ಟರೆ ಸಿಕ್ಕೀತಪ್ಪಾ!" ಎಂದು ಮಾರ್ಮಿಕವಾಗಿ ಕಾರಣಿಕ ನುಡಿಯುತ್ತಿರುವ ನಗುತ್ತಿರುವ ಭಿಕ್ಷುಕಿಯು..

ಅವರೆಲ್ಲರ ಆ ಎಲ್ಲಾ ಮಾತುಗಳನ್ನು ಎಷ್ಟರಮಟ್ಟಿಗೆ ಕೇಳಿಸಿಕೊಂಡೆನೆಂಬುದು ತಿಳಿಯದು! ಅವರ ಒಂದೊಂದು ಮಾತಿಗೆ ಯಾವ ರೀತಿ ಸ್ಪಂದಿಸಿದೆನೆಂಬುದೂ ತಿಳಿಯದು! ನನ್ನ ಮೌನವನ್ನು ಅಪಾರ್ಥ ಮಾಡಿಕೊಂಡರೆಂಬುದಾಗಲೀ ಅದನ್ನೇ ಸಮ್ಮತಿ ಎಂದು ಭಾವಿಸಿದರೆಂಬುದಾಗಲೀ ತಿಳಿಯದು! ಕುರಿಯ ಬೇಕುಬೇಡಗಳನ್ನು ನಿರ್ಲಕ್ಷಿಸಿ ಮಸಾಲೆಯನ್ನು ಅರೆದರೆಂಬುದೂ ತಿಳಿಯದು! ಕುಲಗೋತ್ರಗಳೇ ಇರಲಿ, ಪರಿಚಯಸ್ಥರಂತೂ ಮೊದಲೇ ಅಲ್ಲ. ಅಂದ ಮೇಲೆ ಇದ್ದಕ್ಕಿದ್ದಂತೆ ಅವರ ಮಗನಾಗುವುದೆಂದರೆ! ಒಂದು ದಿನದಮಟ್ಟಿಗೆ ಅಳಿಯನಾಗುವುದೆಂದರೆ! ಇದ್ದಕ್ಕಿದ್ದಂತೆ ಕೇಳುವ ಇವರ ತಲೆಗಳು ಕೆಟ್ಟಿರುವವೋ! ಕೇಳಿಸಿಕೊಂಡ ನನ್ನ ತಲೆ ಕೆಟ್ಟಿರುವುದೋ! ಅವರೆಲ್ಲರಿಂದ ಕೊಸರಿಕೊಂಡು ಓಡುವ ಮನಸ್ಸಾಯಿತಾದರೂ ಸಾಧ್ಯವಾಗಲಿಲ್ಲ, ಒಣಗಿ ಬರಿದಾಗುತ್ತಿರುವ ಬಾಯಿ ಎಂಬ ನದಿ! ಒಂದು ಹನಿ ನೀರಿಗಾಗಿ ಅಂಗಲಾಚುತ್ತಿರುವ ಮಾತೆಂಬ ಪುಟ್ಟ ಮೀನು! ಇನ್ನೇನು ಇವನು ತಮ್ಮ ಮಗನಾದ, ಇನ್ನೇನಿವನು ತಮ್ಮ ಮಗಳ ಗಂಡನಾದ ಎಂದು ನನ್ನ ಅಸಹಾಯಕತೆಯನ್ನು ಅಪಾರ್ಥ ಮಾಡಿಕೊಂಡ ಅವರು ಸುಮ್ಮನಿದ್ದಾರೆಯೆ! ಆ ಮುವ್ವರೂ ನನ್ನ ತೋಳುಗಳನ್ನು ಹಿಡಿದುಕೊಂಡು ನಿಧನಿಧಾನವಾಗಿ ಕರೆದೊಯ್ದರು ಕಳೇಬರದ ಬಳಿಗೆ.

ಅದೇ ತಾನೆ ಬೆಳಗಲಾರಂಭಿಸಿದ ದೀಪದ ಬೆಳಕನ್ನು ಆಪೋಶನಗೊಳ್ಳುತ್ತಿರುವ ಕಳೇಬರದ ಪಕ್ಕ ಜುಲುಮೆಯಿಂದ ಕುಳ್ಳಿರಿಸಿದರು. ಎಲ್ಲರ ಕುತೂಹಲದ ಕೇಂದ್ರ ನಾನಾದೆ. ಕೆಲವೇ ತಾಸುಗಳಲ್ಲಿ ಮಣ್ಣೊಳಗೆ ಅಂತರ್ಧಾನಗೊಳ್ಳಲಿರುವ, ಮಣ್ಣಲ್ಲಿ ಮಣ್ಣಾಗಿ ಹೋಗಲಿರುವ ನನ್ನ ಮುಖವನ್ನು ನೋಡೋ ಎಂದು ಅಂಗಲಾಚುತ್ತಿರುವ ಕಳೇಬರದ ಸುಂದರ ನಿರ್ಲಿಪ್ತ ಮುಖ! ನೋಡಬಾರದೆಂದರೂ ಕದ್ದುಮುಚ್ಚಿ ನೋಡುಲಾರಂಭಿಸಿದವು ನನ್ನ ಕಣ್ಣುಗಳು! ಹೌದು! ಎಲ್ಲೋ ನೋಡಿರುವಂಥ ಎಷ್ಟೋ ದಿವಸಗಳಿಂದ ಒಡನಾಡಿರುವಂಥ ಮುಖ! ಆಕೆಯದ್ದೋ ಈಕೆಯದ್ದೋ! ನೆನಪಾಗುತ್ತಿಲ್ಲ ಯಾರದೆಂಬುದು! ಅವರದ್ದಾಗಿದ್ದರೆ ತಾನೆ! ಇದ್ದಕ್ಕಿದ್ದಂತೆ

ಆಲೂರಿನ ಪೋಲಿಸ್ ಠಾಣೆಯ ಲಾಕಪ್ಪಿನಲ್ಲಿ ದುರ್ಮರಣವನ್ನಪ್ಪಿರುವ ನನ್ನ ಕಾಮ್ರೇಡ್ ಸಖ ಪನ್ನಂಗಧರ ನೆನಪಾದ. ತನಗೂ ಹೆಂಡತಿ ಇರುವುದಾಗಿ ಅವನು ಹೇಳಿದಂತೆ ನೆನಪು! ಅಕಸ್ಮಾತ್ ಅವನೇನಾದರೂ ಈಕೆಯ ಗಂಡನಾಗಿದ್ದಲ್ಲಿ! ಒಂದು ಕ್ಷಣ ಭಯ ಆವರಿಸಿತು. ಪಾಪ ಲೇಪಿತ ಭ್ರೂಣ ಸಹವಾಸ ಕಳಚಿ ತಾನಲ್ಲಿಂದ ಓಡಿ ತಲೆ ಮರೆಸಿಕೊಳ್ಳಬೇಕೆಂದುಕೊಂಡೆನಾದರೂ ಸಾಧ್ಯವಾಗಲಿಲ್ಲ. ಸಂಬಂಧವಾಚಕ ಶೃಂಖಲೆಗಳನ್ನು ಕಳಚುವುದು ಸುಲಭವಲ್ಲ ಎಂಥವರಿಗೂ! ಇನ್ನೇನು ಖಚಿತ ನಿರ್ಧಾರ ತೆಗೆದುಕೊಳ್ಳಬೇಕೆನ್ನುವಷ್ಟರಲ್ಲಿ!

"ಕಥೆ ಬರೆಯಲು ವಸ್ತುಗಳಿಗೆ ತಡಕಾಡುತ್ತಿದ್ದಿ ಬರೆಯಲಾರದೆ ಒದ್ದಾಡುತ್ತಿದ್ದಿ ಅನಭವಗಳಿಗಾಗಿ ಹಾತೊರೆಯುತ್ತಿದ್ದಿ, ಅವೇ ನಿನ್ನ ಕಾಲಿಗೆ ತೊಡರುತ್ತಿರುವಾಗ ಸ್ವೀಕರಿಸಲು ಅನುಭವಿಸಲು ನಿರಾಕರಿಸುತ್ತಿರುವ ನೀನೆಂಥ ಲೇಖಕ! ಲೇಖಕನಾದವ ಸುರಕ್ಷಿತ ಸ್ಥಳದಲ್ಲಿದ್ದು ಬರೆಯುವುದಲ್ಲ, ಅಪಾಯಕಾರಿ ಸ್ಥಳಗಳನ್ನು ಪ್ರವೇಶಿಸಿ ಮಾರಣಾಂತಿಕ ಘಟನೆಗಳಿಗೆ ಮುಖಾಮುಖಿಯಾಗಿ ಬದುಕಿ ಬರೆಯುವುದು ಮುಖ್ಯ. ನೀನು ಬದುಕುವುದು ಎಷ್ಟು ಮುಖ್ಯವೋ ಇನ್ನೊಬ್ಬರಲ್ಲಿ ಜೀವಚ್ಛವಗಳಲ್ಲಿ ಜೀವಜಲ ಪ್ರೋಕ್ಷಿಸಿ ಜೀವನೋತ್ಸಾಹ ತುಂಬುವುದು ಅದಕ್ಕಿಂತಲೂ ಮುಖ್ಯ. ಆದರೆ ನೀನು ಅನುಭವಗಳಿಗೆ ಬೆನ್ನು ತೋರಿಸುತ್ತಿರುವ ಪಲಾಯನಗೈಯಲು ಯೋಚಿಸುತ್ತಿರುವ ನೀನು ನಿನ್ನ ಆತ್ಮಸಾಕ್ಷಿ ಕುರಿತಂತೆ ಯೋಚಿಸು. ಒಂದೆರಡು ದಿವಸದಮಟ್ಟಿಗೆ ಮಗನಾದರೆ ಹತಭಾಗಿನಿಯ ಗಂಡನಾದರೆ ನೀನು ಕಳಕೊಳ್ಳುವುದು ಏನಿದೆ! ವಾಸ್ತವವಾಗಿ ನಿನಗೆ ನಿನ್ನವರು ತನ್ನವರು ಯಾರಿದ್ದಾರೆ! ಈ ಕಾಲು ಶತಮಾನದ ವಯಸ್ಸಿಯಲ್ಲಿ ಹೆತ್ತವರನ್ನು ಬಂಧುಬಳಗವನ್ನು ಗೆಳೆಯರನ್ನು ದೂರ ಮಾಡಿಕೊಂಡು ಬದುಕುತ್ತಿರುವ ನಿನ್ನ ಬದುಕಿಗೆ ಒಂದು ಅರ್ಥ ಬರಬೇಕೆಂದರೆ ನೀನು ಅವರ ಬೇಡಿಕೆಯನ್ನು ಈಡೇರಿಸು, ನೊಂದವರ ಭಾವನೆಗಳನ್ನು ಗೌರವಿಸು, ಕಷ್ಟಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸು. ಇದು ನಿಜವಾದ ಲೇಖಕನ ನೈತಿಕ ಹೊಣೆ. ವಾಗಿಲಿಯಂಥ ಮಸಣದಲ್ಲಿ ಶರಭ ಪರಶುರಾಮರಂಥ ಮರಣ ಮೃದಂಗಗಳ ರಣಗರ್ಜನೆಯ ಸಹವಾಸದಿಂದಾಗಿ ನಾಳೆ ದೈಹಿಕವಾಗಿ ಸಾಯಲಿರುವ ನೀನು ಇಂದು ಮಾನಸಿಕವಾಗಿ ಸತ್ತು ಪರಿಶುದ್ಧನಾದರೆ ತಪ್ಪೇನು!" ಎಂದು ಅಧಿಕಾರಯುತವಾಗಿ ಪ್ರಶ್ನಿಸುತ್ತಿರುವ ಅಂತರಂಗ.

"ಜೀವಂತವಿರುವ ವ್ಯಕ್ತಿಗಿಂತ ಸತ್ತಿರುವ ವ್ಯಕ್ತಿ ಹೆಚ್ಚು ಅಪಾಯಕಾರಿ, ಈಗಾಗಲೆ ನೀನು ಅನುಭವಿಸುತ್ತಿರುವುದು ಸಾಕು, ದಾದರ್ ಎಕ್ಸ್‌ಪ್ರೆಸ್ ಇನ್ನೇನು ಬರುವ ಸಮಯವಾಯಿತು. ಅನುಕಂಪದ ಉರುಳಿಗೆ ಒಮ್ಮೆ ಸಿಲುಕಿದರೆ ನಿನ್ನ ಕಥೆ ಮುಗಿದಂತೆಯೇ ಸರಿ, ಅವರಾರಿಗೂ ಹೇಳದೆ ಕೇಳದೆ ಓಡಿ ತಲೆಮರೆಸಿಕೋ!" ಎಂದು ಸಲಹೆ ನೀಡುತ್ತಿರುವ ಅದೇ ಅಂತರಂಗದ ಇನ್ನೊಂದು ಮುಖ. ಹೌದು! ಅದರ ಸಲಹೆಯನ್ನು ಕೂಡಲೆ ಚಾಚೂ ತಪ್ಪದೆ ಪಾಲಿಸಬೇಕು ಎಂದುಕೊಳ್ಳುವಷ್ಟರಲ್ಲಿ ನಿಲ್ದಾಣದ ಮೂಲೆಯಲ್ಲಿ ಗಂಟೆ ಭಾರಿಸಿ ರೈಲು ಇನ್ನೇನು ಕೆಲವೇ ಕ್ಷಣಗಳಲ್ಲಿ ಆಗಮಿಸುತ್ತಿರುವ ಸೂಚನೆ ನೀಡಿತು. ಅದು ಬಂತೆಂದರೆ! ಅದರೊಳಗೆ ಹೆಣದೊಂದಿಗೆ ತೂರಿಕೊಂಡೆನೆಂದರೆ! ವಾರಸುದಾರರ ರೌರವ ರೋಧನ ಆಲಿಸಿದೆನೆಂದರೆ! ಆಲಿಸುತ್ತ ಪರಾವರ್ತಿತಪ್ರತಿಕ್ರಿಯೆಗೆ ಒಳಪಟ್ಟು ಪಯಣಿಸಿದೆನೆಂದರೆ...

ಇನ್ನು ತಡಮಾಡಬಾರದು! ಇರುಳೊಳಗೆ ಓಡಿ ತಪ್ಪಿಸಿಕೊಳ್ಳಬೇಕು ಆದಷ್ಟು ಬೇಗನೆ. ಅವರೆಲ್ಲರ ನೋಟದ ಹಗ್ಗದ ಬಂಧನ ಕಳಚಿಕೊಂಡು ಕಾಲಿಗೆ ಬುದ್ಧಿ ಹೇಳಬೇಕೆಂದು ನಿರ್ಧರಿಸಿದೆನೇನೋ ಸರಿ, ಆದರೆ ಜನರಲ್ ಕಂಪಾರ್ಟ್‌ಮೆಂಟ್ ಇಂಜಿನ್ನಿನ ಮಗ್ಗುಲು

ಅಂಟಿಕೊಂಡಂತಿರುವುದೋ, ಅದರ ಕೊನೆ ಭಾಗದಲ್ಲಿರುವುದೋ, ಕಳೇಬರದ ಪ್ರಯಾಣಕ್ಕೆ ಗಾರ್ಡುಗಳು ಸಮ್ಮತಿಸದಿದ್ದರೇನು ಮಾಡುವುದು! ಸಹಪ್ರಯಾಣಿಕರು, ಅದರಲ್ಲಿ ಮುಖ್ಯವಾಗಿ ಬಾಂಬೆಯಿಂದ ಮದ್ರಾಸಿಗೆ ಪ್ರಯಾಣ ಬೆಳೆಸಿರುವ ಸ್ಥಿತಿವಂತರು ಸುಶಿಕ್ಷಿತರು ಅಸಹ್ಯಪಟ್ಟು ಗಲಾಟೆ ಮಾಡಿ ಕಳೇಬರವನ್ನು ಕೆಳಕ್ಕೆ ಇಳಿಸಿದರೇನು ಮಾಡುವುದು! ಅವರೆಲ್ಲರೊಂದಿಗೆ ವಾದಿಸಬಲ್ಲ ಅಕ್ಷರಸ್ಥ ಇಲ್ಲೆಲ್ಲೋ ಇದ್ದನಲ್ಲ! ಅರೆ ಅಗೋ ಅಲ್ಲಿ! ಚಿಂತೆಯ ಸಂತೆಯೊಳಗೆ ದಾರಿತಪ್ಪಿರುವವನಂತೆ ಏಕಾಂಗಿಯಾಗಿ ನಿಂತಿರುವನಲ್ಲವೆ! ಒಂದಿಬ್ಬರು ನನ್ನತ್ತ ಧಾವಿಸಿ ಬಂದದ್ದಾಗಲೀ, ನನ್ನ ತೋಳುಗಳನ್ನು ಹಿಡಿದಿದ್ದಾಗಲೀ, ಹಿಡಿದ ಅವರ ಪೈಕಿ ಒಬ್ಬನು..

"ಗಂಟೆ ಹೊಡೆದ ಸದ್ದು ನಿನ್ನ ಕಿವಿಗೆ ಬೀಳಲಿಲ್ಲವೇನಪ್ಪಾ! ದಾದರ್ ತಪ್ಪಿಸಿಕೊಂಡರೆ ಮೇಲಿಗೆ ಕಾಯಬೇಕು, ಅದು ಬರುವುದು ಬೆಳಿಗ್ಗೇನೆ, ಅದು ಬಂದರೆ ಬಂತು ಇಲ್ಲದಿದ್ದರೆ ಇಲ್ಲ. ಕಳೇಬರ ಆಗಲೆ ಕೊಳಿತಾ ಇದೆ, ಬಾಣಂತಿಯ ಹೆಣವಾಗಿರುವುದರಿಂದ ಕೊಳೆಯದೆ ಬೇರೆ ದಾರಿ ಇಲ್ಲ. ಏನೇ ಆದರೂ ಅದನ್ನ ದಾದರ್‌ನಲ್ಲಿ ಸಾಗಿಸಲೇಬೇಕು. ಬಾ ಬಾ ಹೆಣಕ್ಕೆ ಕೈ ಹಚ್ಚೋಣ" ಎಂದರೆ, ಅದಕ್ಕೆ ಇನ್ನೊಬ್ಬನು..

"ದುಃಖದ ಸೆಳೆವಿಗೆ ಸಿಕ್ಕು ಎಲ್ಲಾದರು ದಾದರ್‌ಗೆ ಬಿದ್ದು ಪ್ರಾಣ ಕಳೆದುಕೊಂಡೀಯಾ! ಎಲ್ಲಿಯವರೆಗೆ ಅಳುವುದು ಸಾಧ್ಯ! ಹೆಣ ಮಣ್ಣಾದ ಬಳಿಕ ವರ್ತಮಾನ ಸಹಜ ಸ್ಥಿತಿಗೆ ಬರುವುದು, ಅಲ್ಲಿಯವರೆಗೆ ಮನಸ್ಸನ್ನು ಕಲ್ಲು ಮಾಡಿಕೊ! ದಾದರ್ ಪ್ಲಾಟ್‌ಫಾರಂ ಬಿಡುವವರೆಗೆ ಹೇಗೋ ನಿಮ್ಮೆಲ್ಲರ ಸಂಗಡ ನಾವಿರುವೆವಲ್ಲ! ಹೆದರಬೇಡ ಬಾ ನಮ್ಮ ಜೊತೆ" ಎಂದು ಜುಲುಮೆಯಿಂದ ತೋಳುಗಳನ್ನು ಹಿಡಿದು ಎಳೆಯಲಾರಂಭಿಸಿದರು.

ಏನೆಂದು ಅವರಿಗೆ ಹೇಳಲಿ! ನನಗೂ ಆ ಕಳೇಬರಕ್ಕೂ ಯಾವುದೇ ಸಂಬಂಧವಿಲ್ಲವೆಂದು ಹೇಳುವ ತ್ರಾಣ ನನಲ್ಲಿಲ್ಲ ಮೊದಲೆ! ನನ್ನ ಪಾಡಿಗೆ ನನ್ನನ್ನು ಬಿಡಿರಯ್ಯಾ ಎಂದು ಹೇಳಿದೆ, ಅದು ಅವರಿಗೆ ಸ್ಪಷ್ಟವಾಗಿ ಕೇಳಿಸಲಿಲ್ಲ. ಯಾಂತ್ರಿಕವಾಗಿ ಅವರೊಂದಿಗೆ ಹೊರಟು ಹೆಣವನ್ನು ತಲುಪಿದೆ. ಅಷ್ಟೊತ್ತಿಗಾಗಲೇ ಅಲ್ಲಿ ಜನರೊಂದಿಗೆ ಒಂದಿಬ್ಬರು ಪೋಲಿಸರೂ ಇದ್ದರು. ಕಳೇಬರದ ತಂದೆ ಯಾರು! ತಾಯಿ ಯಾರು! ಗಂಡನೆಲ್ಲಿ! ಓಹೋ ಇವನೇ ಏನು! ಬಾರಯ್ಯಾ ಬಾ! ಅಯ್ಯೋ ಪಾಪ, ಹೀಗಾಗಬಾರದಿತ್ತು! ಸಂಬಂಧವಿಲ್ಲದವನ ಥರಾ ದೂರ ದೂರ ಹೋಗುತ್ತಿರುವೆಯಲ್ಲ! ಓದಿಕೊಂಡವನಂತೆ ಕಾಣುತ್ತಿರುವೆ, ಆದರೆ ಒಂಚೂರಾದರೂ ನಿನ್ನಲ್ಲಿ ಕನಿಕರವಿಲ್ಲವಲ್ಲ! ಹೇಳದಿದ್ದಲ್ಲಿ ಹೆಣ ಪ್ಲಾಟ್‌ಫಾರಂ ಬಿಟ್ಟು ಕದಲುವುದಿಲ್ಲ! ನಮ್ಮ ಕಾನೂನಿನಿಂದ ಬದುಕಿರುವವರು ತಪ್ಪಿಸಿಕೊಂಡಷ್ಟು ಸುಲಭವಲ್ಲ ಸತ್ತವರು ತಪ್ಪಿಸಿಕೊಳ್ಳುವುದು! ಈ ಸಾವಿಗೆ ಪರೋಕ್ಷವಾಗಿ ಸಹಕರಿಸಿರುವನಂತೆ ವರ್ತಿಸುತ್ತಿರುವಿಯಲ್ಲ, ಏನೋ ಅನುಮಾನ! ಏನು ನಿನ್ನ ಹೆಸರು? ಎಂಬಿವೇ ಮೊದಲಾದ ಪುಂಖಾನುಪುಂಖ ಪ್ರಶ್ನೆಗಳು! ನನ್ನ ಆಪತ್ಕಾಲೀನ ಪ್ರಶ್ನೆಗಳು! ನಿಜ ಸಂಗತಿ ಹೇಳಿಕೊಳ್ಳಬಹುದು, ಆದರೆ ಅದನ್ನು ಅದನ್ನು ಹೆತ್ತವರು ಒಪ್ಪಿಕೊಂಡರೆ ತಾನೆ ನಾನು ಬಚಾವಾಗುವುದು! ಅವರ ಪೈಕಿ ಒಬ್ಬ ಮುಸಿಮುಸಿ ನಗುತ್ತ..

"ಒಳ್ಳೆ ಕಥೆಯಾಯಿತಲ್ಲ ನಿನ್ನದು! ಸುಶಿಕ್ಷಿತನಾದ ನೀನು ಸುಳ್ಳು ಹೇಳಬಹುದು, ಆದರೆ ಹೆತ್ತ ಕರುಳುಗಳು ಸುಳ್ಳು ಹೇಳುವವೆ! ಮರ್ಯಾದೆಯಿಂದ ಒಪ್ಪಿಕೋ, ಇಲ್ಲದಿದ್ದಲ್ಲಿ ಐಪಿಸಿ ಸೆಕ್ಷನ್ ಪ್ರಕಾರ!" ಎಂದು ಮಾಡಿದ ಜುಲುಮೆಗೆ ಹೇಗೆ ಮಣಿಯುವುದು! ಇತರೇ ನಿರಾಶ್ರಿತರು ನನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿರುವರು ಬೇರೆ! ಕಳೇಬರಕ್ಕೆ ಸಿಕ್ಕಿರುವ ಸ್ಥಾನಮಾನದ ಪೈಕಿ ಒಂಚೂರಾದರೂ ಬದುಕಿರುವ ನನಗೆ ದೊರಕುತ್ತಿಲ್ಲವಲ್ಲಾ! ಅಸಹಾಯಕತೆ

ಮಡುಗಟ್ಟುವುದಕ್ಕೂ ಇನ್ನೊಂದು ಬೆಲ್ಲು ರಣಕಹಳೆಯೋಪಾದಿಯಲ್ಲಿ ಕೇಳಿಸುವುದಕ್ಕೂ ಸರಿ ಹೋಯಿತು. ಇದ್ದಕ್ಕಿದ್ದಂತೆ ನೂರಾರು ಜನ ಸಾವಿರಾರು ರೂಪ ತಾಳಿದ ಪರಿಣಾಮದಿಂದಾಗಿ, ಅಗೋ ಅಲ್ಲಿ ಅವನು ಅದನ್ನು ಕಳೆದುಕೊಂಡ, ಇಗೋ ಇಲ್ಲಿ ಇವನು ಇದನ್ನು ಕಳೆದುಕೊಂಡ ಎಂಬ ಅಸಹಾಯಕ ಕೂಗುಗಳು ನಾಲ್ದೆಸೆಯಿಂದ ಕೇಳಿಬಂದ ಪರಿಣಾಮವಾಗಿ, ಥೂ ನಮ್ಮ ನೌಕರಿಗಿಷ್ಟು ಬೆಂಕಿ ಹಾಕ ಎಂದು ಗೊಣಗುತ್ತ ಪ್ಯಾದೆಗಳು ತಮ್ಮ ಮಾತು ಪರಿಕರಗಳೊಡನೆ ಅಲ್ಲಿಂದ ಹೋದ ಪರಿಣಾಮದಿಂದಾಗಿ! ಪಡುವಣದ ತುಟ್ಟತುದಿಯಲ್ಲಿ ಸಾವಿರ ಸೂರ್ಯರ ಬೆಳಕು ಒಟ್ಟಿಗೆ ಕೋರೈಸಿದ ಪರಿಣಾಮದಿಂದಾಗಿ! ದಾದರಾಗಮನದ ಸದ್ದು ಬರಸಿಡಿಲಿನಂತೆರಗಿದ ಪರಿಣಾಮದಿಂದಾಗಿ! ಅವರವರೆಲ್ಲೋ ನಾನು ನಾನೆಲ್ಲೋ ಆಗಿ ಬೇರ್ಪಟ್ಟ ಪರಿಣಾಮದಿಂದಾಗಿ! ಪ್ರಯಾಣಿಕನಾಗಿರದಿದ್ದ ನಾನು ಹಿಂದೆ ಸರಿಯುತ್ತ ಸರಿಯುತ್ತ ನಿಲ್ದಾಣದ ಗಡಿರೇಖೆಯನ್ನು ಉಲ್ಲಂಘಿಸುತ್ತ ತೆವಳುತ್ತ ತಲುಪಿದ ಪರಿಣಾಮದಿಂದಾಗಿ!

ನೋಡು ನೋಡುವಷ್ಟರಲ್ಲಿ ದಾದರ್ ಬಂದು ನಿಂತೇಬಿಟ್ಟಿತು. ನಿಂತ ಒಂದೆರಡು ಕ್ಷಣದಲ್ಲಿಯೇ ಸಾವಿರಾರು ಜನರನ್ನು ಆಪೋಶನ ತೆಗೆದುಕೊಂಡು ಅಲ್ಲಿಂದ ನಿರ್ಗಮಿಸಿತು. ರೈಲಿನ ಆಗಮನ ನಿರ್ಗಮನ ಮಿಂಚು ಕೋರೈಸಿದಂತೆ ಸಂಭವಿಸಿತು. ಆಕ್ರಂದನ ಕಂಟಕಗಳ ಕುರುಹುಗಳೆಲ್ಲವೂ ಪ್ರಯಾಣ ಬೆಳೆಸಿದವು. ಪುನಃ ರೇಲ್ವೇನಿಲ್ದಾಣದ ತುಂಬೆಲ್ಲಾ ನೀರವ ಮೌನ! ಅದೇ ಹೆಪ್ಪುಗಟ್ಟಿರುವ ಕಾರಿರುಳು, ಬೆಳಕಲ್ಲದ ಬೆಳಕು, ಪೋಲಿಸರ ಎಚ್ಚರಿಕೆ ಸಿಳ್ಳೆಗಳು, ಬೂಟುಗಳ ನೆರಳು ನರಳುಗಳ ಕ್ಷೀಣ ಸದ್ದು! ಅಲ್ಲೆಲ್ಲೂ ಕಳೇಬರದ ಸುಳಿವಿಲ್ಲ ಪುಣ್ಯಕ್ಕೆ ಕರ್ಮಕ್ಕೆ ನನ್ನ ಪ್ರಾರಬ್ಧಕ್ಕೆ! ಆದರೆ ಮನಸ್ಸಿನೊಳಗೆ ಜೀವಂತವಿರುವ ಕಳೇಬರವನ್ನು ಪರಿತ್ಯಜಿಸುವ ಬಗೆ ಕುರಿತಂತೆ, ಈ ವಿಲಕ್ಷಣ ಅನುಭವ ಚೂರಿಯೊಳಗವಿತಿರುವ ಉರುಕುಂದಿಯ ಕರಾಮತ್ತು ಏನಾದರು ಇರಬಹುದೆ ಎಂದು ಯೋಚಿಸುತ್ತ ಅಲ್ಲಿಂದ ಹೊರಟವನು..

++++

ವಾಗಿಲಿಯ ಕ್ವಾಸನ್ನು ತಲುಪಲು ಸಹಕರಿಸಿದ್ದು ಯಾವ ವಾಹನದ ನೆರವಿನಿಂದ! ಸರಿಯಾಗಿ ನೆನಪಾಗುತ್ತಿಲ್ಲ. ಯಾವುದೋ ಒಂದು ವಾಹನ. ಇಳಿದೊಡನೆ ಸುತ್ತ ಕಣ್ಣಾಯಿಸಿದೆ. ನೀರವ ಭಯಾನಕ ಮೌನ. ಧಗಧಗಿಸುತ್ತಲೇ ಹದಿಹರೆಯದ ಹೊಸ್ತಿಲು ದಾಟುತ್ತಿರುವ ಚಿರಪರಿಚಿತ ಸೂರ್ಯ, ನನಗೂ ಯಥೇಚ್ಚ ಬಿಸಿಲುಣ್ಣಿಸಿ ಶತಶತಮಾನದ ಹಸಿವನ್ನು ತೀರಿಸಯ್ಯಾ ಎಂದು ಅಂಗಲಾಚುತ್ತಿರುವ ಚೀಲದೊಳಗಿನ ಚೂರಿ, ಈಗಾಗಲೆ ನಗರೂರನ್ನು ತಲುಪಿರಬಹುದಾದ ಲಕ್ಷ್ಮಿಯ ಕಳೇಬರ, ನನ್ನನ್ನು ಕನವರಿಸುತ್ತಿರುವ ಆಕೆಯನ್ನು ಹೆತ್ತವರು, ಭೂಮಿಯೊಳಗಿನ ಅಲೌಕಿಕ ಪ್ರಪಂಚದಿಂದ ಲೌಕಿಕ ಪ್ರಪಂಚಕ್ಕೆ ಮರಳಿರಬಹುದಾದ ಆಕೆಯ ವಿಧುರ ಗಂಡ, ಪನ್ನಂಗಧರನ ಪ್ರೇತ ತಾನೆ ಲಕ್ಷ್ಮಿಯ ಗಂಡನೆಂದು ಹೇಳುತ್ತ ಅಲ್ಲಿನ ಶ್ಮಶಾನದಲ್ಲಿ ಕಾಣಿಸಿಕೊಂಡರೆ! ಶ್ಮಶಾನದಲ್ಲಿ ತೋಡಿರಬಹುದಾದ ಗುಂಡಿ! ಏನೆಲ್ಲಾ ನೆನಪುಗಳಿಂದ ಭಾರವಾದ ಹೃದಯದೊಂದಿಗೆ ನಡೆಯುವುದು ಕಷ್ಟವೆನ್ನಿಸಿತು. ಒಂದೆರಡು ದಿವಸಗಳಮಟ್ಟಿಗೆ ನಗರೂರಿಗೆ ಹೋಗಿದ್ದರೆ ಕಳೆದುಕೊಳ್ಳುವುದು ಏನೂ ಇರುತ್ತಿರಲಿಲ್ಲ, ಆದರೆ ಅಪರಿಚಿತ ಸ್ತ್ರೀಯೋರ್ವಳ ಕಳೇಬರದ ಅಪತ್ಕಾಲೀನ ಪತಿಯಾಗುವುದೆಂದರೆ ಹೇಗೆ ಸಾಧ್ಯ? ಅವರೆಲ್ಲರ ಅನುಕಂಪದ ಉರುಳಿನಿಂದ ತಪ್ಪಿಸಿಕೊಂಡು ಬಂದದ್ದೇ ಒಳಿತಾಯಿತೆಂದು ನೆಮ್ಮದಿಯ ಉಸಿರುಬಿಡುವುದಕ್ಕೂ ತಲೆ ಸುತ್ತುವುದಕ್ಕೂ ಸರಿ ಹೋಯಿತು.

ಹಾಗೆ ಸಾವರಿಸಿಕೊಂಡು ಕಣ್ಣುಗಳನ್ನು ತಿಬ್ಬಳಿಸಿ ಮುಗಿಲ ಕಡೆ ದೃಷ್ಟಿ ಹಾಯಿಸಿದೆ. ಶುಭ್ರ ಆಗಸದ ಬಯಲಲ್ಲಿ ಹತ್ತಾರು ಪಕ್ಷಿಗಳು. ಅವುಗಳಲ್ಲಿ ಹದ್ದುಗಳಿರಬಹುದು, ಉರಿಯುತ್ತಿರುವ ಸೂರ್ಯನನ್ನು ನೇರವಾಗಿ ನೋಡುವ ಧೈರ್ಯ ಸಾಲದೆ ಪುನಃ ತಲೆ ತಗ್ಗಿಸಿದೆ. ಹಾಗೆಯೇ ತುಸು ಮೇಲೆತ್ತಿ ತೆಂಕಣದ ಕಡೆ ನೋಡಿದೆ, ಹಾವಿನ ಕಳೇಬರದಂತೆ ಇದ್ದ ಹಾದಿಯ ಕಡೆ ನೋಡಿದೆ. ಆ ಹಾದಿಯ ತುದಿಯಲ್ಲಿ ವಾಗಿಲಿ, ಅದು ತನ್ನ ಶಿಲಾಯುಗೀಯ ಗರ್ಭದಲ್ಲಿ ನಿದ್ರೆ ಹೋಗಿರುವ ವಾತ್ಸಲ್ಯವನ್ನು ಕೈಬೀಸಿ ಕರೆಯುತ್ತಿರವಂತೆ ಭಾಸವಾಯಿತು. ಅದನ್ನು ಪುನಃ ಪುನಃ ನೆನಪಿಸಿಕೊಂಡೆ. ಶರಭನೆಂಬ ಪೀನಮಸೂರದ ಮೂಲಕ ಅದನ್ನು ನೋಡಲಾರಂಭಿಸಿದೆ, ಭಯಾನಕವಾಗಿ ಗೋಚರಿಸಿತು. ಅವನಲ್ಲಿದ್ದರೆ, ನಾನು ತಲುಪುವ ಮೊದಲೇ ಅವನು ತನ್ನ ಭೀಭತ್ಸವೂ, ಕಳವಳಕಾರಿಯೂ ಆದ ಸಾವನ್ನು ಕಲ್ಪಿಸಿಕೊಂಡು ಅಲ್ಲಿಂದ ಪಲಾಯನ ಮಾಡಿದ್ದರೆ! ಮಾಡದೆ ಅಲ್ಲಿಯೇ ಉಳಿದಿದ್ದರೆ! ಅದೂ ಅವಧೂತನಂತೆ! ಅದೂ ಶಾಸ್ತ್ರೀಯ ಚರ್ಮವಾದ್ಯ ನಿಪುಣನಂತೆ! ಅದೂ ನನ್ನ ಔರಸ ಸಹೋದರನಂತೆ! ನಡೆಯಲಾರಂಭಿಸಿ ಐದನೆಯ ಹೆಜ್ಜೆ ಇಡುವಷ್ಟರಲ್ಲಿ ಬಸವಳಿದು ಮರಳಿ ಹಾದಿ ಪಕ್ಕದಲ್ಲಿದ್ದ ಕಲ್ಲಿನ ಮೇಲೆ ಕುಳಿತು ನಿಡಿದಾದ ಉಸಿರು ಚೆಲ್ಲಿದೆ.

ಬಂದ ಕೆಲವೇ ಕೆಲವು ದಿವಸಗಳಲ್ಲಿ ವಾಗಿಲಿಗಿಂತ ಮುಖ್ಯವಾಗಿ ನನ್ನೊಳಗೆ ವಸಾಹತು ಸ್ಥಾಪಿಸಿರುವ ಅವನಿರುವಲ್ಲಿಗೆ ಹೋಗುವುದೋ! ಹೋಗದೇ ಇರುವುದೋ ಎಂಬ ಸಂದಿಗ್ಧತೆ ಕಾಡಲಾರಂಭಿಸಿತು. ಸಹಾಯ ಮಾಡಿದವರಿಗಿಂತ ಸಹಾಯ ಮಾಡಿಸಿಕೊಂಡವರು ಮರೆಲಾರರು. ಅದರಲ್ಲೂ ಶರಭನಂಥವನು.. "ಯಾಕೆ ಅಣ್ಣಾ ನಡೆಯದೆ ಇಲ್ಲೇ ಕುಳಿತಿರುವೆಯಲ್ಲ! ನಿನ್ನೆಯ ದಿವಸ ನಡೆ ಘಟನೆಗಳೇನಾದರು ದುಃಸ್ವಪ್ನಗಳಂತೆ ಕಾಡುತ್ತಿರುವವೇನು! ಅದೆಲ್ಲ ನಾನು ನೀಡಿರುವ ಚೂರಿಯ ಮಹಿಮೆ. ಅದು ತನ್ನ ಕೈಯಲ್ಲಿದ್ದ ಕಾರಣದಿಂದಾಗಿಯೇ ಪುರುಷೋತ್ತಮ ಶೂರ್ಪನಖಿಯ ಮೊಲೆ ಮೂಗುಗಳನ್ನು ನಿರ್ದಯ ರೀತಿಯಲ್ಲಿ ಕೊಯ್ದು ಮರ್ಯಾದಾ ಎಂಬ ಉಪಾಧಿಯಿಂದ ಬಿಡುಗಡೆ ಪಡೆದದ್ದು! ವಿಕ್ರಮಾದಿತ್ಯನ ಸೂಂಟದಲ್ಲಿ ಅದು ಇದ್ದ ಕಾರಣದಿಂದಾಗಿಯೇ ಶನಿ ಮಹಾತ್ಮ ಆತನನ್ನು ಮಾರಣಾಂತಿಕವಾಗಿ ಕಾಡಿದ್ದು! ಅದು ನೀಡಿದ ಸ್ಫೂರ್ತಿಯಿಂದಾಗಿಯೇ ನಾನು ಕೋಗಿಲೆತೋಟದ ರೆಡ್ಡಿ ನೀಡಿದ ಸುಪಾರಿಯನ್ನು ಒಪ್ಪಿಕೊಂಡಿದ್ದು! ಅದರ ಕಾಟ ಸಂಕಟಗಳ ಅಗ್ನಿಷ್ಟಿಕೆಯಲ್ಲಿ ನೀನು ಬೆಂದು ಬಂಗಾರವಾಗಬೇಕೆಂದೇ ನಾನದನ್ನು ನಿನಗೆ ಕಾಣಿಕೆ ರೂಪದಲ್ಲಿ ನೀಡಿರುವುದು. ಬಿಸಿಲು ಬೇರೆ, ಧಣಿವಾರಿಸಿಕೊಂಡಿದ್ದು ಆಯಿತಲ್ಲವೆ! ಇನ್ನು ಎದ್ದು ಹೊರಡು, ತಡಮಾಡಬೇಡ, ವಾಗಿಲಿಯಲ್ಲಿ ನೀನು ಮಾಡಬೇಕಿರುವ ಕೆಲಸ ಬೆಟ್ಟದಷ್ಟಿರುವುದು. ನಾನು ತಡೆದಿರುವುದಾಗಿ ಭಾವಿಸಿರುವೆ ಏನು! ನಾನೇನು ಸುಂಕದ ಅಧಿಕಾರಿಯೇ ತಡೆಯಲು! ವಾಗಿಲಿ ನೀನಿರುವ ಊರು, ನೀನಲ್ಲಿ ಕೈತುಂಬ ಸಂಬಳ ಪಡೆಯುವ ಸರ್ಕಾರಿ ನೌಕರ, ಬರಬೇಡ ಎನ್ನಲು ನಾನು ಯಾರಣ್ಣಾ! ನೀನು ಆಶ್ರಯ ಕೊಟ್ಟು ಪುಣ್ಯ ಕಟ್ಟಿಕೊಂಡಿರುವುದರಿಂದಲ್ಲವೆ ನಾನಿಲ್ಲಿರುವುದು! ನೀನಿಲ್ಲದ ಕಾರಣಕ್ಕೆ ನಾನು ನೀರಿನಿಂದ ವಂಚಿತಗೊಂಡಿರುವ ಮೀನಾಗಿ ವಿಲವಿಲನೆ ಒದ್ದಾಡುತ್ತಿರುವೆ, ಬೇಗನೆ ಬಂದು ಅಣ್ಣ ತಮ್ಮ ಎಂಬ ಸಂಬಂಧವಾಚಕಗಳ ಗೌರವ ಕಾಪಾಡು" ಎಂದು ಎದೆಯಾಂತರಾಳದಲ್ಲಿ ಅವನು ಹೇಳಿದಂತೆ ಭಾಸವಾಯಿತು.

ಕಳೆದ ರಾತ್ರಿ ಸಂಭವಿಸಿದ ಅವಾಂಛನೀಯ ಘಟನೆಗಳಿಗೂ ನನ್ನೊಂದಿಗಿರುವ ಚೂರಿಗೂ ಸಂಬಂಧವಿರುವುದಾಗಿ ಅವನು ಹೇಳುತ್ತಿರುವನೆಂದರೆ! ನಂಬುವುದೋ

ನಂಬದೇ ಇರುವುದೋ! ಆಲೂರು ಹೊತ್ತಿಗಿಂತ ಮೊದಲೆ ನಿರ್ಮಾನುಷಗೊಂಡ ಘಟನೆಯಿಂದ ಆರಂಭಿಸಿ ದಾದರ್ ಹೋಗುವವರೆಗಿನ ಘಟನೆವರೆಗೆ ಯೋಚಿಸಿದೆ. ಅವೆಲ್ಲ ಅನೂಹ್ಯವೂ ವಿಲಕ್ಷಣಯುತವೂ ಆಗಿರುವಂಥ ಘಟನೆಗಳು! ನನ್ನಂಥ ಯಾವ ಲೌಕಿಕನೂ ಊಹಿಸಿರಲಾರದಂಥವುಗಳು. ಅವುಗಳು ನೈಜವೋ ಸಂಚೋ ಅಥವಾ ಪ್ರೇತಗಳಿಂದ ಸಂಭವಿಸಿದವುಗಳೋ! ಸಂದೇಹವಾಯಿತು. ಅವುಗಳ ಮೂಲವಾದ ನಗರೂರು ತೀರಾ ದೂರದ ಊರೇನೂ ಅಲ್ಲ, ಅಲ್ಲಿಗೆ ಹೋಗಿ ಪರಿಶೀಲಿಸಿದರೆ ಹೇಗೆ! ಹಾಗೇನಾದರೂ ಹೋದರೆ ನನ್ನಂಥ ಹುಚ್ಚ ಹುಂಬ ಇನ್ನೊಬ್ಬನಿರಲು ಸಾಧ್ಯವಿಲ್ಲ, ಆ ಯೋಚನೆಯನ್ನು ಕೂಡಲೆ ಉಪಸಂಹರಿಸಿಕೊಂಡೆ, ಅವುಗಳಿಗೆ ಎಳ್ಳುನೀರು ಬಿಡುವ ರೀತಿಯಲ್ಲಿ ದೀರ್ಘ ಉಸಿರುಬಿಟ್ಟು ನಿರಮ್ಮಳಗೊಂಡೆ. ಪುನಃ ಶರಭ ಗಹಗಹಿಸಿ ನಗುತ್ತಿರುವಂತೆ ಭಾಸವಾಯಿತು.

"ಅಣ್ಣಾ ನಾನು ಸುಳ್ಳು ಹೇಳುವುದುಂಟೆ! ಅದೂ ಆಶ್ರಯ ನೀಡಿರುವ ನಿನ್ನಂಥ ಅಣ್ಣನಿಗೆ! ನಿನ್ನ ವ್ಯಕ್ತಿತ್ವವನ್ನು ಪುಟಕ್ಕಿಟ್ಟು ಗಟ್ಟಿಗೊಳಿಸಲು ಚೂರಿ ಸೃಷ್ಟಿಸಿರುವ ಸನ್ನಿವೇಶ ಅದು, ನನ್ನ ಮಾತನ್ನು ನಂಬು" ಅದಕ್ಕೆ ಪ್ರತಿಯಾಗಿ "ಅಯ್ಯೋ ನಿನ್ನ ಮಾತನ್ನು ನಂಬುವಂಥ ಮೂರ್ಖ ನಾನಲ್ಲ. ನೀನು ನಿರ್ದಯಿ ಕೊಲೆಗಾರ, ನಿನಗೆ ಆಶ್ರಯ ನೀಡಿದ ಕ್ಷಣದಿಂದ ನನ್ನ ಮನಸ್ಸಿನ ಸ್ವಾಸ್ಥ್ಯ ಹಾಳಾಗಿದೆ, ವಾಸ್ತವ ಅವಾಸ್ತಗಳ ನಡುವಿನ ಗೆರೆ ಅಳಿಸಿ ಹೋಗಿದೆ ಮಹರಾಯ, ನೀನಲ್ಲಿಂದ ತೊಲಗದ ಹೊರತು ನಾನು ವಾಗಿಲಿಯಲ್ಲಿ ಕಾಲಿರಿಸುವುದು ಸಾಧ್ಯವಿಲ್ಲ" ಎಂದು ನಿರ್ದಾಕ್ಷಿಣ್ಯತೆಯಿಂದ ಹೇಳುತ್ತಿರುವ ನನ್ನ ಮನಸ್ಸು. ಆಶ್ರಯ ಪಡೆದವರಿಂದಲೇ ತೊಂದರೆಗಳನ್ನು ಅನುಭವಿಸುವುದು ನಮ್ಮ ವಂಶವಾಹಿನಿಯಲ್ಲಿನ ನ್ಯೂನ್ಯತೆ ಎಂದು ತಿಳಿದಿದ್ದರೂ! ಅಪ್ಪನಿಂದ ಆಶ್ರಯ ಹಣಕಾಸಿನ ನೆರವು ಪಡೆದು ಆತನಿಗೇ ತೊಂದರೆ ನೀಡಿದ ರಂಗಪ್ಪ ಪಂಪಯ್ಯಸ್ವಾಮಿ ಸೋಮಣ್ಣ ಕಣ್ಣ ಮುಂದೆ ಸುಳಿದು ಹೋದರು.

ಶರಭನ ಮನಸ್ಸಿಗೆ ನೋವಾಗಲೆಂದು ನಾನಾ ಮಾತನ್ನು ಹೇಳಲಿಲ್ಲ, ಆಶ್ರಯಪಡೆಯಲು ತಾನೇನಾದರು ನನ್ನ ಕರುಳುಬಳ್ಳಿಗೆ ಸಂಬಂಧಿಸಿದ ನೆಂಟನೆ ಒಡಹುಟ್ಟಿದವನೆ! ಆಶ್ರಯ ಪಡೆದವರು ಸ್ಥಿರವಸ್ತುಗಳ ಥರ ಕದಲದ ರೀತಿಯಲ್ಲಿ ಇದ್ದರೇನೆ ಚಂದ ಸಾರ್ಥಕ. ಅದನ್ನು ತಾನು ಅರ್ಥ ಮಾಡಿಕೊಂಡರೆ ತಾನೆ!

"ಪ್ರತಿ ಮಾತಿಗೂ ಕೊಲೆಗಾರ ಕೊಲೆಗಾರ ಎಂದು ಹಂಗಿಸಬೇಡಣ್ಣಾ, ಇದರಿಂದ ನನ್ನ ಮನಸ್ಸಿಗೆ ನೋವಾಗುವುದು, ನಿನ್ನಂಥವರು ಪೆನ್ನಿನಿಂದ ಮನಸ್ಸಿನಿಂದ ಅಕ್ಷರಗಳ ನೆರವಿನಿಂದ ಅಮಾಯಕರ ಕೊಲೆ ಮಾಡುತ್ತಿಲ್ಲವೆ! ಮುಗ್ಧ ವಾಚಕರ ಮನಸ್ಸುಗಳನ್ನು ರಕ್ತರಂಜಿತಗೊಳಿಸಿ ನೋಯಿಸುತ್ತಿಲ್ಲವೆ! ನಿಮ್ಮಂಥ ಲೇಖಕರ ಕ್ರೌರ್ಯ ನಮ್ಮಂಥ ಬಾಡಿಗೆ ಕೊಲೆಗಾರರ ಹಿಂಸೆಗಿಂತ ಯಾವುದರಲ್ಲಿ ಕಡಿಮೆ ಹೇಳು! ಏಳನೆ ಕೊಲೆ ಮಾಡದಿರಲು ನಿರ್ಧರಿಸಿಯೆ ನಾನು ನಿನ್ನಲ್ಲಿ ಆಶ್ರಯ ಪಡೆದಿರುವುದು! ಅದೂ ನಿಮ್ಮಂಥವರ ಸಹಚರ್ಯೆಯಿಂದ ಸಭ್ಯನಾಗರಿಕನಾಗುವ ಸಲುವಾಗಿ. ಅದಲ್ಲದೆ ಈ ಪ್ರಪಂಚದ ಯಾವ ಸ್ಥಳ ರಕ್ತದಿಂದ ಮಲಿನಗೊಂಡಿಲ್ಲ ಹೇಳು! ನೀನೀಗ ಕೂತಿರುವ ಜಾಗ ಕುರಿತಂತೆ ಯೋಚಿಸು, ಅಲ್ಲಿ ಸಂಭವಿಸಿರುವ ಮೂರು ಕೊಲೆಗಳ ಪೈಕಿ ಎರಡನ್ನು ನೆನಪಿಸಿಕೊ! ಹ್ಹಾ ಅದೇ ಅಗ್ಗಿ ರಾಮುಡು! ಹ್ಹಾ ಅದೇ ಪೋತರಾಜು! ಅವರಲ್ಲಿ ಇಬ್ಬರನ್ನು! ನಿನ್ನನ್ನು ಅಲ್ಲಿಂದ ಏಳಿಸುವ ಸಲುವಾಗಿ ನಾನವರನ್ನು ನೆನಪಿಸುತ್ತಿಲ್ಲ" ಎಂದೊಡನೆ ದಿಗ್ಗನೆ ಎದ್ದು ನಿಂತೆ, ದೇಹದ ಮೇಲೆಲ್ಲ ಜಲಜಲ ಬೆವರು ಕಾಣಿಸಿಕೊಂಡಿತು.

ಹಾದಿ ನಡುವೆ ನಿಂತು ಕೂತಿದ್ದ ಸ್ಥಳವನ್ನು ಪರಿಶೀಲಿಸಿದೆ, ಅದುವರೆಗೆ ಕೂತದ್ದು ಕಲ್ಲಚಪ್ಪಡಿ ಮೇಲೊ! ಅವರಿಬ್ಬರ ಕಳೇಬರಗಳ ಮೇಲೋ!

ವಾಗಿಲಿಗೆ ಬಂದ ಆರಂಭದ ಮಾಹೆಯಲ್ಲಿ ಅಗ್ಗಿರಾಮುಡು ಯಾನೆ ತನಗೆ ಹಫ್ತಾ ನೀಡದವರ ಮೇವಿನ ಬಣವೆಗಳಿಗೆ ಬೆಂಕಿ ಹಚ್ಚಿ ದಹಿಸುವುದರ ಮೂಲಕ ಊರಿಗೆ ತಲೆನೋವಾಗಿದ್ದ ಬೇವಿನಗಿಡದ ಗಂಗಣ್ಣನ ಕೊಲೆಯಾದರೆ, ಕಳೆದ ವೈಶಾಖ ಮಾಸದಲ್ಲಿ ಪೋತರಾಜು ಯಾನೆ ಒಂಟಿ ಹೆಣ್ಣುಗಳನ್ನು ಅಪಹರಿಸಿ ಅತ್ಯಾಚಾರ ನಡೆಸುವುದರ ಮೂಲಕ ಊರ ಹೆಣ್ಣು ಹೆತ್ತವರಿಗೆ ತಲೆನೋವಾಗಿದ್ದ ಟಗರುಮಲ್ಲಿ ಕಗ್ಗೊಲೆಗೀಡಾಗಿದ್ದ. ಇದೇ ಸ್ಥಳದಲ್ಲಿ! ಇದೇ ಸಮಯದಲ್ಲಿ! ಅವರಿಬ್ಬರ ಮಕ್ಕಳು ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿದ್ದುದರಿಂದಾಗಿ ಅವರಿಬ್ಬರ ಮುಖ ಪರಿಚಯವಿತ್ತು, ಆದರೆ ಒಡನಾಡಿರಲಿಲ್ಲ, ಯಾವ ಘಟನೆಗಳನ್ನು ಸ್ಮರಣೆಗೆ ತಂದುಕೊಳ್ಳಬಾರದೆಂದು ನಿರ್ಧರಿಸಿದ್ದೆನೋ ಅಂಥ ಘಟನೆಗಳನ್ನು ನೆನಪಿಸಿದ ಶರಭನ ಕ್ರೌರ್ಯ! ನೆನಪುಗಳೊಡನೆ ಕಂಪನಕ್ಕೀಡಾದೆ.

ಎದೆಯೊಳಗಿನ ಪುನಃ ತಾನೆ "ಅಣ್ಣಾ ನೀನು ಭಯಪಡುವ ಅಗತ್ಯವಿಲ್ಲ, ದೈಹಿಕವಾಗಿರದಿದ್ದರೂ ಮಾನಸಿಕವಾಗಿ ನಿನ್ನ ಸಂಗಡ ಇರುವೆ, ಅದಕ್ಕೆ ಸಾಕ್ಷಿಯಾಗಿ ನಿನ್ನ ಬಳಿ ಇರುವ ಚೂರಿ! ಅದರ ಅಭಯವನ್ನು ಯಾವ ಕಾರಣಕ್ಕೂ ನಿರಾಕರಿಸಬೇಡ. ಕ್ಲಿಷ್ಟ ಸಮಯದಲ್ಲಿ ಬಯಸದಿದ್ದರೂ ಅದೇ ನಿನ್ನ ಕೈಗೆ ಬಂದು ಕಾರ್ಯಪ್ರವೃತ್ತಗೊಳ್ಳುವುದು, ದ್ರೌಪದಿಯ ಮಾನ ರಕ್ಷಿಸಿದ ಶ್ರೀಕೃಷ್ಣಪರಮಾತ್ಮನಂತೆ! ಹ್ಹಾ ಒಂದು ಮಾತು, ಯಾವ ಕಾರಣಕ್ಕೂ ನಿನ್ನ ಎಡ ಪಕ್ಕದಲ್ಲಿರುವ ಮೋರೆಯಲ್ಲಿ ಇಣುಕುವ ಸಾಹಸ ಮಾಡದಿರು, ಹೊಟ್ಟೆ ಹಸಿದಿಲ್ಲವೆ! ನಾನು ನನ್ನ ಕೈಯಾರೆ ಮಾಡಿರುವ ಅಡುಗೆಯನ್ನು ಸವಿಯುವ ಆಸೆ ಇಲ್ಲವೆ! ಹೊರಡು ಮತ್ತೆ, ಯಾಕೆ ತಡ!" ಎಂದು ಎಚ್ಚರಿಸಿದ. ನನ್ನ ಕಾಲುಗಳಲ್ಲಿ ನನ್ನ ದೇಹದಲ್ಲಿ ವಿಲಕ್ಷಣ ಶಕ್ತಿ ಸಂಚಯಗೊಳಿಸಿದ.

ನಡೆಯಲಾರಂಭಿಸಿದೆ. ಹಾದಿಯ ಎರಡೂ ಬದಿ ಸ್ವಚ್ಛಂದವಾಗಿ ಬೆಳೆದಿರುವ ಬಳ್ಳಾರಿ ಜಾಲಿಗಿಡಗಳು, ಮಳೆ ಅಭಾವದಲ್ಲೂ ಅವು ಹಚ್ಚಹಸಿರಾಗಿ ಕಾಣುವ ಅವುಗಳ ಜೀವನೋತ್ಸಾದಿಂದ ಮನುಷ್ಯ ಕಲಿಯಬೇಕಾದ್ದು ಸಾಕಷ್ಟಿರುವುದು, ಹಲವು ದಶಕಗಳ ಹಿಂದೆ ಅವುಗಳ ಬೀಜಗಳನ್ನು ಅಮೇರಿಕಾದಿಂದ ತನ್ನೊಂದಿಗೆ ತಂದು ತಾನಿರುವ ಪರಿಸರದಲ್ಲಿ ಪ್ರಾಯೋಗಿಕವಾಗಿ ಬಿತ್ತಿದ ಮಹಾನುಭಾವ ನಾಗನಗೌಡ ನಮ್ಮ ಬಳ್ಳಾರಿ ಜಿಲ್ಲೆಯ ಹೊಸಪೇಟೆಯವನೆ! ಅವೇ ಉತ್ತರೋತ್ತರವಾಗಿ ಮಾನವನ ಬದುಕನ್ನು ಕಠಿಣವಾಗಿ ಶಿಕ್ಷಿಸಬಹುದೆಂದು ತಾನು ಎಣೆಸಿರಲಿಲ್ಲವೇನೊ! ಏನೇ ಇರಲಿ, ಗ್ರಾಮೀಣ ಮಹಿಳೆಯರ ಬಹಿರ್ದೆಸೆಗೆ ಆಸರೆ ನೀಡುವ ಉರುವಲಿಗೆ ಸಹಾಯ ಮಾಡುವ, ಎಚ್ಚರದಪ್ಪಿ ನಡೆಯುವವರ ಪಾದಗಳಿಗೆ ಚುಚ್ಚಿ ಚಿಲ್ಲನೆ ಕೆಂಪು ಚೆಲ್ಲುವ ಅವುಗಳ ವಿವಿಧ ಮುಖಗಳನ್ನು ಧೇನಿಸುತ್ತ ನಡೆದೂ ನಡೆದೂ!

..... ☙ .....

# ದೃಶ್ಯ: ಎರಡು

ಕಾಲುವೆಯ ಕಟ್ಟೆಯ ಒಂದು ಬದಿ ಸರ್ಪಹುಣ್ಣಿನಿಂದ ನರಳುತ್ತ ಕುಳಿತ್ತಿದ್ದ ಕೆಳಮನಿ ಶಿವಾರೆಡ್ಡಿಯವರನ್ನೂ, ಅದರ ಇನ್ನೊಂದು ತುದಿಯಲ್ಲಿ ತನ್ನ ಒಡಕು ಚಾಳೇಸದ ಮೂಲಕ ಸೂರ್ಯನನ್ನು ನೋಡುವ ಸಾಹಸ ನಡೆಸಿದ್ದ ಕಠಾರಿ ಲಿಂಗಾರೆಡ್ಡಿಯವರನ್ನೂ ಮಾತಾಡಿಸಿ ನಡಿಗೆಯನ್ನು ತೀವ್ರಗೊಳಿಸಿದೆ. ಎಷ್ಟೋ ವರ್ಷಗಳ ಬಳಿಕ ಸೇರುತ್ತಿರುವ ದಾವಂತ ನನ್ನ ನಡಿಗೆಯಲ್ಲಿತ್ತು, ವಾಗಿಲಿಯ ಅಗಸೆ ಬಾಗಿಲು ದಾಟುವಾಗ ರೋಮಾಂಚನವಾಯಿತು. ದೂರದಲ್ಲಿ ಎಲ್ಲೋ ತಮ್ಮಟೆ ನುಡಿಸುತ್ತಿರುವ ಹುಡುಗರುಪ್ಪಡಿ ಕೇಕೆ ಹಾಕುತ್ತಿರುವ ಸದ್ದು ಕೇಳಿಸಿತು. ತಂಬಿಗೆಯೊಂದಿಗೆ ಎದುರಾದ ಜೀರ್ರ ಪಂಪಣ್ಣನನ್ನು ಕೇಳಿದ್ದಕ್ಕೆ ನಾಟಕ ಆಡುವವರು ಬಂದಾರೆ ಸ್ವಾಮಿ ಎಂದು ಸುಳಿವು ನೀಡಿದ. ವಾಗಿಲಿಯಲ್ಲಿ ನಾಟಕಗಳನ್ನು ಆಡುವವರು ಬಂದರೆಂದರೆ ಶಾಲೆ ನಡೆಯುವುದು ಕಷ್ಟ, ಮಕ್ಕಳ ಗೈರುಹಾಜರಿಯನ್ನೇ ನೆಪವಾಗಿಟ್ಟುಕೊಂಡು ಸಹೋದ್ಯೋಗಿಗಳು ಇಸ್ಪೀಟ್ ಚದುರಂಗಗಳಂಥ ಆಟಗಳನ್ನು ಆಶ್ರಯಿಸಿ ಕಾಲಕ್ಷೇಪಕ್ಕೆ ತೊಡಗುವುದು ಮಾಮೂಲು. ಅದಕ್ಕೆ ಸಂಬಂಧಿಸಿದ ಮನರಂಜನಾ ಸಂಘಗಳು ಅನಧಿಕೃತ ರೀತಿಯಲ್ಲಿ ಎಲ್ಲಂದರಲ್ಲಿರುವವು ಬೇರೆ. ಬೇಸರದೊಳಗೆ ಬೇಸರ. ಯೋಚಿಸುತ್ತಲೇ ನಾನು ತಲುಪಿದ ಮನೆಗೆ ಬೀಗ ಹಾಕಲಾಗಿತ್ತು, ಅದರ ಛಾವಿ ಕೊಡುತ್ತ ಮೂಲಿಮನಿ ಮೀಸೆ ಗೌಡ "ನಿಮ್ಮ ತಮ್ಮನೂ ಪರಶುರಾಮನೂ ಯಾವುದೋ ಊರಿಗೆ ಹೋದರು ಸ್ವಾಮಿ, ಇಗೋ ತಗೊಳ್ಳಿ" ಎಂದು ಹೇಳಿ ಛಾವಿ ನೀಡಿದನು. ಆ ಕ್ಷಣ ನನಗೆ ಆಗಿದ್ದು ಸಂತೋಷವೋ ಬೇಸರವೋ!

ಬೆಳಗ್ಗೆಯಿಂದಲೇ ನಾಪತ್ತೆಯಾಗಿರುವನೆಂದರೆ! ಓಹ್ ಇಂಥ ಸಂತೋಷದ ಸಂಗತಿ! ಹಾವು ತನ್ನ ಹುತ್ತ ಬದಲಾಯಿಸುವಂತೆ ಹುಲಿ ತನ್ನ ಕಾಡು ಬದಲಾಯಿಸುವಂತೆ ಶರಭ ಪರಶುರಾಮನ ಸಹಾಯದಿಂದ ಅಥವಾ ಆತನ ನಿರ್ದೇಶನದ ಮೇರೆಗೆ ತನ್ನ ವಾಸ್ತವ್ಯ

ಬದಲಾಯಿಸಿರಬಹುದೆ! ಸಂದೇಹ ಕಾಡಿತು. ಸಮಾಧಾನ ಪಡುತ್ತ ಶಾಲೆಯನ್ನು ದೇನಿಸುತ್ತ ಶಾಲೆಯ ಮಕ್ಕಳನ್ನು ಕನವರಿಸುತ್ತ ಅರೆಬರೆಯಾಗಿ ಉಳಿದಿರುವ ಕಾದಂಬರಿಯ ಹಸ್ತಪ್ರತಿಯ ಪುನರುದ್ದರಣೆಯ ಕನಸು ಕಾಣುತ್ತ ಅಗೋಚರ ಸ್ಥಿತಿಯಲ್ಲಿರಬಹುದಾದ ವೃಶ್ಚಿಕಗಳನ್ನು ಒಂದೊಂದಾಗಿ ಕ್ರಮಿಸುತ್ತ ನಾಲ್ಕಡಿ ವಿಸ್ತೀರ್ಣದ ಬಚ್ಚಲನ್ನು ಪ್ರವೇಶಿಸಿ ಐದು ತಂಬಿಗೆ ಸುರಿದು ಅಭಿಜಾತ ದೇಹಕ್ಕೆ ಸಾಂತ್ವನ ಹೇಳಿದ್ದಾಯಿತು. ಒಲೆ ಹೊತ್ತಿಸಿ ಅದರ ಮೇಲೆ ಅಕ್ಕಿಯನ್ನು ಅನ್ನವನ್ನಾಗಿ ಪರಿವರ್ತಿಸಿ ಭುಂಜಿಸಿ ಒಡಲ ತೀಟೆಯನ್ನು ತೀರಿಸಿದ್ದಾಯಿತು. ಇನ್ನು ನಾನು ಸರ್ವತಂತ್ರ ಸ್ವತಂತ್ರನೆಂದು ಭ್ರಮಿಸಿದೆ. ಬಿದಿರ ಮಂಚದ ಮೇಲೊರಗಿದೆ. ಮಾಡೊಳಗೆ ಇಲಿಗಳ ಓಡಾಟ! ತೊಲೆ ಜಂತುಗಳ ಸಂದುಗೊಂದುಗಳಲ್ಲಿರಬಹುದಾದ ಚೇಳುಗಳು! ಎದರಿಗಿರುವ ಕಪಾಟಿನಲ್ಲಿ ಪೇರಿಸಿಟ್ಟಿರುವ ಥರಾವರಿ ಪುಸ್ತಕಗಳು! ಅವುಗಳ ಪೈಕಿ ಯಾವುದೋ ಒಂದು ತನ್ನನ್ನೆತ್ತಿಕೊಳ್ಳುವಂತೆ ಅಂಗಲಾಚುತ್ತಿರುವಂಥ ಅನುಭವ. ಓಹ್! ಜೀನ್ ಪಾಲ್ ಸಾರ್ತ್ರೆಯೋ! ಅವನ ಸೇಂಟ್ ಜಿನೆಟ್ ಕೃತಿಯೋ! ಜಿನೆಟ್‌ನಂಥ ದಾರಿ ಬಡುಕ ಸುಲಿಗೆಕೋರ ಸಾರ್ತ್ರೆ ಮೇಲೆ ಅಚ್ಚಳಿಯದಂತಹ ಪ್ರಭಾವ ಬೀರಿರಬಹುದಾದರೆ ಈ ಬಾಡಿಗೆ ಕೊಲೆಗಾರ ಶರಭನ ವಿಲಕ್ಷಣ ವ್ಯಕ್ತಿತ್ವ ನನ್ನನ್ನು ಪ್ರಭಾವಿಸುವುದರಲ್ಲಿ ತಪ್ಪೇನು! ಉದ್ದೇಶಿತ ಕಾದಂಬರಿಯ ಪುಟಪುಟಗಳಲ್ಲಿ ಅವನನ್ನು ಯಾಕೆ ಪನರ್‌ನಿರೂಪಿಸಬಾರದು! ಕೃತಿಯ ಸಹಾಯದಿಂದ ಸಂಭವನೀಯ ಕೃತಿಯನ್ನು ಪುನಶ್ಚೇತನಗೊಳಿಸಬಾರದು!

ಏನೋ ಹೊಳೆದಂತಾಗಿ ಎಂದೋ ಬರೆದಿರುವ ಎಲ್ಲೋ ಇಟ್ಟಿರುವ ತನ್ನೊಳಗಿನ ಪಾತ್ರಗಳ ಮೂಲಕ ಅಗಾಗ್ಗೆ ಗಲಿಬಿಲಿಗೊಳಿಸುತ್ತಿರುವ ಕಾದಂಬರಿಯ ಹಸ್ತಪ್ರತಿ ಹುಡುಕಲಾರಂಭಿಸಿದೊಡನೆ ದೊರಕುವುದು ಸಾಧ್ಯವೆ! ಅದು ಬರೆಯುವವನ ಮನದ ಗೋಮಾಳದೊಳಗೆ ಮೇದುಂಡು ಪೊಗದಸ್ತಾಗಿ ಬೆಳೆಯಲಿ ಎಂಬ ಕಾರಣದಿಂದಲ್ಲವೆ ನಾನು ಅದರ ಗೊಡವೆಗೆ ಹಲವು ದಿವಸಗಳಿಂದ ದೂರ ಉಳಿದಿರುವುದು! ಆದರೆ ಹುಡುಕುವ ಕೈಗಳಿಗೆಟುಕದೆ ಕಣ್ಣಾಮುಚ್ಚೆ ಕಾಡೇಗೂಡೆ ಉದ್ದಿನ ಮೂಟೆ ಉರುಳೇ ಹೋಯಿತು ಎಂದು ಹಾಡುತ್ತಿರುವುದು ಸೋಜಿಗ. ಕಪಾಟಿನ ಪುಟ್ಟ ಪರಿಸರದಲ್ಲಿ ಅದರ ಕಳ್ಳಾಟ ನಡೆಯುವುದು, ಓಹ್ ಹುಡುಕುವುದು ದುಸ್ತರವಾಯಿತು. ಕೊನೆಗೂ ಅಗೋ ಅಲ್ಲಿ ದಾಸೋವಸ್ಕಿಯ ಅಜರಾಮರ ಕೃತಿ ಕ್ರೈಂ ಅಂಡ್ ಪನಿಷ್ಮೆಂಟ್ ಪಕ್ಕದಲ್ಲಿ ಅಂದರೆ ಋಷಿ ಸದೃಶ ಲೇಖಕ ಟಾಲ್‌ಸ್ಟಾಯ್‌ರವರ ವಾರ್ ಅಂಡ್ ಪೀಸ್ ಕೃತಿಯ ನಡುವೆ ಬೆಚ್ಚಗೆ ಅಡಗಿ ಕೂತಿರುವುದು! ತನ್ನ ಬೇಕುಬೇಡಗಳನ್ನು ಅಲಕ್ಷಿಸಿರುವ ನೀನೂ ಒಬ್ಬ ಲೇಖಕನೇ ಅಣಕಿಸುತ್ತಿರುವ ರೀತಿಯಲ್ಲಿ ಗೋಚರಿಸುತ್ತಿರುವುದು! ಮೊದಲು ತನ್ನನ್ನಲ್ಲಿಂದ ಕೈಗೆತ್ತಿಕೊಂಡು ಹಸಿವು ತೀರಿಸು ದಾಹ ತಣಿಸು ಎಂದು ಕೇಳಿಕೊಳ್ಳುತ್ತಿರುವುದು! ಕೂಲಿನಾಲಿ ಮುಗಿಸಿಕೊಂಡು ಬಂದ ತಾಯಿ ತನ್ನ ಮಗುವನ್ನೆತ್ತಿಕೊಳ್ಳುವಂತೆ ಅದನ್ನು ಕೈಗೆತ್ತಿಕೊಂಡೆ.

ಅದರ ಮೇಲೆ ಅಗತ್ಯಕ್ಕಿಂತ ಹೆಚ್ಚು ಲೇಪನಗೊಂಡಿದ್ದ ಧೂಳನ್ನು ನಿಚ್ಚಾಸದ ಸಹಾಯದಿಂದ ಊದಿ ನಿಚ್ಚಳಗೊಳಿಸಿದೆ. ಅದರ ಒಂದೊಂದು ಪುಟಗಳನ್ನು ಮಗುಚಿದೆ. ಕಾದಂಬರಿಯ ಆರಂಭದ ಭಾಗದಲ್ಲಿ ಕೋಸಿಗಿಯ ನಾರಾಯಣದೊರೆಯೂ, ಎರಡನೆ ಭಾಗದಲ್ಲಿ ಆತನ ಸಹೋದರ ಪಂಪನಗೌಡನೂ, ಮೂರನೆ ಭಾಗದಲ್ಲಂತೂ ಸರಿಯೇ! ಒಂದೊಂದು ಪುಟವೂ ಭೀಭತ್ಸಕರ. ಅವರಿವರನ್ನೆಲ್ಲ ಕಾದಂಬರಿಯಿಂದ ಉಚ್ಚಾಟಿಸಬೇಕು, ಆರಂಭದಿಂದ ಕಥಾನಕವನ್ನು ಪುನಃ ಮುರಿದು ಕಟ್ಟಬೇಕು. ಹಿಂಸೆ ಮತ್ತು ಪ್ರೇಮಗಳಂಥ ಮಾನವನ

ಮೂಲಭೂತ ಸಂವೇದನೆಗಳನ್ನು ಕಥಾನಕದುದ್ದಕ್ಕೂ ಹಾಸುಹೊಕ್ಕಾಗಿಸಬೇಕು. ನಗರೂರಿನ ಲಕ್ಷ್ಮಿಯ ಕಳೇಬರದ ಮೂಲಕ ಆಕೆಯ ಮರಣೋತ್ತರದ ಕಥೆಯನ್ನು ನಿರೂಪಿಸುವುದೋ! ಶರಭ ಮತ್ತು ವನಜಾಕ್ಷಿಯರೀರ್ವರ ಪ್ರೇಮ ಅಚಂದ್ರಾರ್ಕವೆಂದು ಸಾದರಪಡಿಸುವುದೋ! ಪ್ರೇಮಿಗಳೆನಿಸಿದವರಿಗೆ ಮರಣವೇ ಮಹಾನವಮಿ ಎಂದು ಸಾರುವುದೋ! ಕಾದಂಬರಿ ದುರಂತ ಅಂತ್ಯ ಕಂಡಲ್ಲಿ ವಿಮರ್ಶಕರು ಸಹೃದಯ ವಾಚಕರು ಸುಮ್ಮನಿರುವರೆ! ಎಂದೂ ಯೋಚಿಸಿದೆ. ಕಥೆಯುದ್ದಕ್ಕೂ ಮೈನವಿರೇಳಿಸುವ ಘಟನೆಗಳನ್ನು ಹಾಸುಹೊಕ್ಕಾಗಿಸಿದರೆ ಮೆಲೋಡ್ರಾಮ! ಅಕಸ್ಮಾತ್ತಾಗಿ ಸಿನೆಮಾದವರ ಗಮನ ಸೆಳೆದಲ್ಲಿ! ಜನಪ್ರಿಯ ನಿರ್ದೇಶಕರಿಗೆ ಕೃತಿಯ ಹಕ್ಕುಗಳನ್ನು ಕೊಡುವುದೋ! ಕಲಾತ್ಮಕ ರೀತಿಯಲ್ಲಿ ನಿರ್ದೇಶಕರಿಗೆ ಹಕ್ಕುಗಳನ್ನು ಕೊಡುವುದೋ! ಒಟ್ಟಿನಲ್ಲಿ ಯಾರೋ ಒಬ್ಬರಿಗೆ! ಕೂಸು ಹುಟ್ಟುವುದಕ್ಕೂ ಮೊದಲೆ! ನನಗೆ ನಾನೇ ನಗಾಡಿಕೊಂಡೆ.

ಎಲ್ಲೂ ರಾಜಿಗೊಳಗಾಗದೆ ಗಂಭೀರ ದಾಟಿಯಲ್ಲಿಯೇ ಬರಹ ಆರಂಭಿಸುವುದು ಮುಖ್ಯ! ಎಳೆ ಎಳೆಯಾಗಿ ಹೊಳೆಯುತ್ತಿರುವ ಘಟನೆಗಳು ಮನಃಪಟಲದಿಂದ ಕಳಚುವ ಮೊದಲೇ ಟಿಪ್ಪಣಿ ಮಾಡಿಟ್ಟುಕೊಳ್ಳುವುದು ಮುಖ್ಯ! ಇನ್ನೂ ಹಗಲು ಬಾಕಿ ಉಳಿದಿರುವುದು ಎಂಬುದಕ್ಕೆ ಕಿಟಿಕಿ ಬಾಗಿಲುಗಳಿಂದ ಬೆಳಕು ಮುಗುಳ್ನಗೆಯೋಪಾದಿಯಲ್ಲಿ ಒಳ ಹರಿಯುತ್ತಿರುವುದು ನನ್ನಂಥ ಯಾವುದೇ ಲೇಖಕನ ಸೌಭಾಗ್ಯ. ಇನ್ನು ತಡಮಾಡಬಾರದೆಂದು ನಿರ್ಧರಿಸಿ ಶರಭ ಶರಭನೆಂದೂ, ವನಜಳನ್ನು ವನಜಳೆಂದೂ.. ಬೇಡವೇ ಬೇಡ, ಇವೆರಡೂ ಹೆಸರುಗಳು ಕ್ಲೀಷೆ, ಹೆಸರುಗಳು ಧ್ವನಿಪೂರ್ಣವೆನಿಸುವುದು ಮುಖ್ಯ. ಶರಭನಿಗೆ ದಯಾನಂದನೆಂದೂ, ವನಜಳಿಗೆ ಉಷಾ ಎಂದೂ ಕರೆಯಬಹುದೇನೋ ಸರಿ, ಆದರೆ ಖಳನಾಯಕನನ್ನು ರಾಜಕಾರಣಿಯನ್ನಾಗಿಸುವುದೋ ಜಮೀನ್ದಾರನನ್ನಾಗಿಸುವುದೋ! ಅವನು ನಾಯಕನಿಗೆ ತಂದೆಯನ್ನಾಗಿಸುವುದೋ! ನಾಯಕಿಗೆ ತಂದೆಯನ್ನಾಗಿಸುವುದೋ! ಕಥೆ ವಾತಾವರಣ ಹಳ್ಳಿಯದ್ದೋ ನಗರದ್ದೋ! ಕಳೇಬರ ರೂಪದಲ್ಲಿ ಒಡನಾಡಿದ ಲಕ್ಷ್ಮಿಯ ಕಥೆಯನ್ನು ಕಥೆಯೊಳಗೆ ಉಪಕಥೆಯನ್ನಾಗಿ ಬಳಸಿದರೆ ಹೇಗೆ! ಕಥೆಯನ್ನು ಮಧ್ಯಭಾಗದಿಂದ ಆರಂಭಿಸುವುದೋ! ಅಂತ್ಯದಿಂದ ಆರಂಭಿಸುವುದೋ! ಇನ್ನಷ್ಟು ಒಳವಿವರಗಳನ್ನು ಸಂಗ್ರಹಿಸುವ ಸಲುವಾಗಿ ನಾನು ಹಲವು ದಿವಸಗಳ ಕಾಲ ಶರಭನೊಂದಿಗೂ ಲಕ್ಷ್ಮಿಯ ಊರಾದ ನಗರೂರೊಳಗೂ ಒಡನಾಡಿದ್ದಲ್ಲಿ ಕಥಾನಕ ಇನ್ನಷ್ಟು ಸಶಕ್ತವಾಗಿರುತ್ತಿತ್ತು. ಆದರೆ ಅದೃಷ್ಟವೋ ದುರಾದೃಷ್ಟವೋ! ಆ ಎರಡೂ ಪಾತ್ರಗಳು ನನ್ನಿಂದ ದೂರವಾಗಿವೆ. ಏನಿದ್ದರೂ ಕಲ್ಪಕತೆಯ ಸಹಾಯದಿಂದ ಕಥೆಯನ್ನು ವಿನ್ಯಾಸಗೊಳಿಸಬೇಕು. ಹೀಗೆ ಯೋಚಿಸುತ್ತ ಕೂತರೆ ಏನು ಪ್ರಯೋಜನ! ಮೈಚಳಿಬಿಟ್ಟು ಎದೆಯೊಳಗೆ ಅವಿತು ಹಿಂಸಿಸುತ್ತಿರುವ ಅನುಭವಗಳನ್ನು ಹೊರಹಾಕಿ ಅವುಗಳನ್ನು ಅಕ್ಷರ ಪ್ರಸಾದನಗಳಿಂದ ವಿನ್ಯಾಸಗೊಳಿಸಬೇಕು, ಒಂದೆರಡು ಪುಟಗಳನ್ನು ಬರೆದು ಅಂತರಂಗದ ಸ್ವಾಸ್ಥ್ಯ ಕಾಪಾಡಿಕೊಳ್ಳಬೇಕು, ಆಗ ಮಾತ್ರ ಕಥೆಗಾರನೂ ಕ್ಷೇಮ, ಕಥೆಯೂ ಕ್ಷೇಮ ಅಲ್ಲವೆ!

ಬರೆವಣಿಗೆ ಆರಂಭಿಸಿದೆ. ಒಂದು ಪುಟವನ್ನು ಪೂರೈಸಿದ್ದಾಯಿತು, ಆದರೆ ವನಜಾಕ್ಷಿಯಂಥ ದುರ್ಬಲ ಪಾತ್ರವನ್ನು ಹಿಂದೆ ಸರಿಸಿ ಸಶಕ್ತ ಪಾತ್ರವಾದ ಲಕ್ಷ್ಮಿ ಕಾಣಿಸಿಕೊಂಡುಬಿಡುವುದೆ! ಸದ್ಯಕ್ಕೆ ನೀನು ನೇಪಥ್ಯದಲ್ಲಿರು ಎಂದರೂ ತಾನು ಕೇಳಿಸಿಕೊಳ್ಳುತ್ತಿಲ್ಲ, "ಅನುಭವಕ್ಕೆ ದಕ್ಕದಿರುವ ವನಜಾಳನ್ನು ಹೇಗೆ ಅಭಿವ್ಯಕ್ತಿಸುವಿ! ಪ್ರಯಾಣದುದ್ದಕ್ಕೂ ನಿನ್ನ ತೊಡೆ ಮೇಲಿದ್ದ ನನ್ನ

ಪಾದಗಳನ್ನು, ಅವುಗಳನ್ನು ಅಪ್ಯಾಯತೆಯಿಂದ ಸ್ಪರ್ಶಿಸಿದ ಅನುಭವವನ್ನು ಮರೆತೆ ಏನು! ಆ ಅನುಭವದ ಮೂಲಕ ನನ್ನನ್ನು ಈಗಾಗಲೇ ಪತ್ನಿ ಪ್ರೇಯಸಿ ಎಂದು ಪರಿಭಾವಿಸಿರುವಿ ಎಂಬುದನ್ನು ಮರೆಯದಿರು! ಈಗಾಗಲೇ ಭೌತಿಕವಾಗಿ ನಷ್ಟವಾಗಿರುವ ನನ್ನನ್ನು ನೀನು ನಿನ್ನ ಕಥೆಯೊಳಗೆ ಬದುಕಿಸಿ ಪುಣ್ಯ ಕಟ್ಟಿಕೊಳ್ಳು" ಎಂದು ಹಕ್ಕು ಚಲಾಯಿಸುತ್ತಿರುವಂತೆ ಭಾಸವಾಯಿತು. ಹೌದು ಆಕೆಯ ಅಂತಿಮ ಆಪೇಕ್ಷೆಯನ್ನು ಈಡೇರಿಸುವುದು ಸೃಜನಶೀಲ ಲೇಖಕನ ನೈತಿಕ ಹೊಣೆ! ಆಕೆಯ ಮರಣ ಪೂರ್ವದ ಮರಣೋತ್ತರದ ಜೀವನದ ವಿವರಗಳನ್ನು ಕಲ್ಪಿಸಿಕೊಳ್ಳಲಾರಂಭಿಸಿದೆ.

ಈಗ ತನ್ನ ಪತ್ನಿ ಲಕ್ಷ್ಮಿ ಐದು ತಿಂಗಳ ಗರ್ಭಿಣಿ, ಆಕೆಯ ಸೀಮಂತಿನಿ ಸಂಭ್ರಮಾಚರಣೆಗೆ ಆ ಮನೆ ಎಲ್ಲಾ ರೀತಿಯಲ್ಲಿ ಸಜ್ಜುಗೊಂಡಿರುವುದು. ಆ ದಿವಸ ಅದೇ ಸಮಯಕ್ಕೆ ಸರಿಯಾಗಿ ನಗರೂರಲ್ಲಿ ಕ್ಷುಲ್ಲಕ ಕಾರಣಕ್ಕೆ ಎರಡು ಕೋಮುಗಳ ನಡುವೆ ಜಗಳ ಸಂಭವಿಸುತ್ತದೆ. ಅದೂ ಶ್ರಮಿಕರ ಧನಿಕರ, ಭೂಹೀನರ ಭೂಸ್ವಾಮಿಗಳ, ಶೋಷಿತರ ಶೋಷಕರ ನಡುವೆ! ಲಕ್ಷ್ಮಿಯ ಪತಿ ದಯಾನಂದ ಸುಶಿಕ್ಷಿತ, ಜನಪರ ಉಗ್ರ ಎಡಪಂಥೀಯ ಸಂಘಟನೆಗಳಲ್ಲಿ ಕ್ರಿಯಾಶೀಲವಾಗಿರುವ ತರುಣ, ಶೋಷಿತರ ನೇತೃತ್ವ ವಹಿಸಿರುವನು, ತನ್ನೂರಿನ ಬಹುಸಂಖ್ಯಾತ ಶೋಷಿತರ ನೆಮ್ಮದಿಯನ್ನು ಕಾಪಾಡುವ ಸಲುವಾಗಿ ತಾನು ಯಾಕೆ ಒಂದಿಬ್ಬರು ಶೋಷಕರನ್ನು ಭೌತಿಕವಾಗಿ ಅಳಿಸಬಾರದು ಎಂದು ಯೋಚಿಸುತ್ತಲೇ ಬೆಳೆದವನು. ಅದಕ್ಕೆ ಪೂರಕವಾಗಿ ಮಾವೋ ಸ್ಟ್ಯಾಲಿನ್‌ರಂಥ ಉಗ್ರಚಿಂತಕರ ಚಿಂತನೆಗಳಿಗೆ ಮಾರು ಹೋಗಿದ್ದಂಥವನು, ಪೋಲಿಸರ ತನ್ನ ಗೂಂಡಾ ಬೆಂಬಲಿಗರ ಸಹಾಯದಿಂದ ಪ್ರತಿಭಟನೆಯ ಧ್ವನಿಯನ್ನಡಗಿಸಲು ಸಂಚು ರೂಪಿಸಲು ತಯ್ಯಾರಿ ನಡೆಸಿದ್ದ ನಗರೂರಿನ ಜಮೀನ್ದಾರ ಲಕ್ಷ್ಮೀರೆಡ್ಡಿಯನ್ನು ಆತನ ಅರಮನೆ ಸದೃಶ ಮನೆಯಲ್ಲಿಯೇ ದಯಾನಂದ ಕೊಲೆ ಮಾಡುತ್ತಾನೆ, ಕ್ರಾಂತಿಕಾರಿ ಹೋರಾಟಗಳಿಗೆಂದೂ ಸಾವಿಲ್ಲ, ಶೋಷಣಾ ರಹಿತ ಸಮಾಜದ ನಿರ್ಮಾಣದ ಸಲುವಾಗಿ ಶೋಷಿತರೆಲ್ಲರ ಕೈಗಳಲ್ಲಿ ಆಯುಧಗಳಿರುವುದು ಮುಖ್ಯ ಎಂದು ಹೋರಾಟಗಾರರನ್ನುದ್ದೇಶಿಸಿ ಭಾಷಣ ಮಾಡಿ ತಲೆ ಮರೆಸಿಕೊಂಡಿದ್ದಾನೆ!

ಉದ್ದೇಶಿತ ಕಾದಂಬರಿಯ ಎರಡನೆ ಭಾಗದಲ್ಲಿ ನಗರೂರಿನಲ್ಲಿ ಒಂದುನೂರಾನಲವತ್ತೆರಡನೆ ಕಲಂ ಜಾರಿಯಾಗಿದೆ, ಕರ್ಫ್ಯೂ ಸಹ. ಬೀದಿಗಳೆಲ್ಲ ನಿರ್ಮಾನುಷಗೊಂಡಿವೆ. ಶೋಷಿತರಲ್ಲಿ ಬಹುಪಾಲು ಮಂದಿ ತಲೆಮರೆಸಿಕೊಂಡಿದ್ದಾರೆ, ಅನುಮಾನದ ಮೇಲೆ ನೂರಾರು ಕೃಷಿಕಾರ್ಮಿಕರನ್ನು ಬಂಧಿಸಲಾಗಿದೆ. ಆ ದುರ್ಘಟನೆಯಿಂದಾಗಿ ಲಕ್ಷ್ಮಿ ಗರ್ಭಸ್ರಾವಕ್ಕೀಡಾಗಿದ್ದಾಳೆ, ಆಕೆ ದಾಖಲಾಗಿರುವ ಸರ್ಕಾರಿ ಆಸ್ಪತ್ರೆ ಸೆರೆಮನೆಯಾಗಿ ಮಾರ್ಪಟ್ಟಿರುವುದು, ಆಕೆಯ ನೋವು ನರಳಾಟಗಳನ್ನು ಪೋಲಿಸರ ಪೈಕಿ ಕೆಲವರು ಆನಂದಿಸುತ್ತಿದ್ದರೆ ಇನ್ನೂ ಕೆಲವರು ಅಯ್ಯೋ ತಮಗೆ ರೌರವ ನರಕ ತಪ್ಪದೆಂದು ಪಾಶ್ಚಾತ್ತಾಪ ಅನುಭವಿಸುತ್ತಿರುವರು ಅದೂ ಕದ್ದುಮುಚ್ಚಿ. ಶುಶ್ರೂಷೆ ಚಿಕಿತ್ಸೆ ಬೇಗ ಮುಗಿದರೆ ಎಲ್ಲಿ ರೋಗಿಯನ್ನು ಡಿಸ್‌ಚಾರ್ಜ್ ಮಾಡುವರೋ! ಆಸ್ಪತ್ರೆಯ ಹಾದಿಯಲ್ಲಿರಬಹುದಾದ ಆರೋಪಿ ಪುನಃ ವಾಪಸ್ಸಾಗುವನೋ! ಎಂಬಿವೇ ಲೆಕ್ಕಾಚಾರಗಳಿಂದ ಎಸ್ಯೆ ಸಂತಾನಂ ವಿಳಂಬ ಧೋರಣೆಯಲ್ಲಿಯೇ ಚಿಕತ್ಸೆ ನಡೆಸಿ ಎಂದು ವೈದ್ಯಾಧಿಕಾರಿಗೆ ಕಟ್ಟುನಿಟ್ಟಾದ ಸಲಹೆಗಳನ್ನು ನೀಡುತ್ತಿದ್ದಾನೆ. ಈ ವಿಳಂಬ ನೀತಿಯಿಂದಾಗಿ ಬದುಕಿ ಉಳಿಯಬೇಕಿದ್ದ ಲಕ್ಷ್ಮಿ ಕೊನೆಯುಸಿರೆಳೆಯುತ್ತಾಳೆ, ಮಗಿಲು ಕಣ್ಣೀರು ಸುರಿಸುತ್ತಿರುವುದೇನೋ ಎಂಬಂತೆ ಮಳೆ ಆರಂಭಗೊಂಡಿದೆ. ಮಳೆಯನ್ನು ಲೆಕ್ಕಿಸದೆ

ಕಳೇಬರವನ್ನು ಶ್ಮಶಾನಕ್ಕೆ ಸಾಗಿಸಲಾಗಿದೆ, ತನ್ನ ಪತ್ನಿಯ ಅಂತಿಮ ಸಂಸ್ಕಾರಕ್ಕಾದರೂ ಆರೋಪಿ ಬಾರದಿರುವನೆ! ಆಲ್ಸೇಷಿಯನ್ ನಾಯಿಗಳೊಂದಿಗೆ ಪೋಲಿಸರು ಅಲ್ಲೂ ಹೊಂಚಿದ್ದಾರೆ, ಅಲ್ಲೂ ಅವರು ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ, ಕಳೇಬರ ಮೃತ್ತಿಕಾ ಸಾನ್ನಿಧ್ಯದಿಂದ ವಂಚಿತಗೊಂಡಿದೆ, ಹಲವು ತಾಸುಗಳಿಂದ ಸುರಿಯುತ್ತಿರುವ ವರ್ಷಧಾರೆಯಲ್ಲಿ ಉಸಿರುಗಟ್ಟಿಸುವಂಥ ಸೂತಕ ವಾತಾವರಣ! ಹಿಡಿಹಿಡಿ ಶಾಪಗಳು ಎಲ್ಲರ ಮನಸ್ಸುಗಳಲ್ಲಿ! ಮಳೆಗೆ ಎರೆ ಮಣ್ಣು ಜಾರುವ ಕೆಸರಾದ ವೇಳೆಯಲ್ಲಿ! ಇದ್ದಕ್ಕಿದ್ದಂತೆ ಆಲ್ಸೇಷಿಯನ್ ಕ್ರೂರ ಚತುಷ್ಪಾದಿಗಳು ತಮ್ಮ ಪೋಲಿಸರ ಕೈಯಿಂದ ಕೊಸರಿ ಬೊಗಳುತ್ತ ಓಡಲಾರಂಭಿಸುವವು, ಅವುಗಳ ಹಿಂದೆ ಪೋಲಿಸರು ದೌಡಾಯಿಸುವರು, ಭದ್ರಕಾವಲ ಗೈರುಹಾಜರಿಯಲ್ಲಿ ಲಕ್ಷ್ಮಿಯ ಕಳೇಬರದ ಅಂತಿಮ ಸಂಸ್ಕಾರ ಸಂಗೋಪಾಂಗವಾಗಿ ನಡೆಯುವುದು. ಇನ್ನು ಕಾದಂಬರಿಯ ಮೂರನೆ ಭಾಗದಲ್ಲಿ ದಯಾನಂದ ಮತ್ತು ಲಕ್ಷ್ಮಿಯರೀರ್ವರ ಪೂರ್ವಾಪರವನ್ನು ನಿರೂಪಿಸಬೇಕು. ಅದರಲ್ಲಿ ಶರಭನನ್ನು ಭಗ್ನಪ್ರೇಮಿಯನ್ನಾಗಿ ಚಿತ್ರಿಸಿದಲ್ಲಿ! ಓಹ್ ಅದ್ಭುತ! ಆದರೆ ವನಜಾಕ್ಷಿಯನ್ನಾಗಲೀ ಆಕೆಯ ತಂದೆ ಪುರುಷೋತ್ತಮರೆಡ್ಡಿಯನ್ನಾಗಲೀ ಏನು ಮಾಡುವುದು!

ಅದುವರೆಗೆ ಇದ್ದ ಉತ್ಸಾಹ ಆ ಎರಡು ನೆನಪುಗಳಿಂದಾಗಿ ಕಮರಿತು. ನನ್ನ ಕಾದಂಬರಿ ಕೇವಲ ಲಕ್ಷ್ಮಿಯ ಕಥೆಯಾಗದೆ ಅದು ರಾಯಲಸೀಮೆಯ ಸಮಗ್ರ ಕಥನವಾಗಬೇಕು. ಹಾಗಾಗಬೇಕಾದರೆ ಆ ಎರಡೂ ಪಾತ್ರಗಳಿಗೆ ಅದರಲ್ಲಿ ಸ್ಥಾನ ಕಲ್ಪಿಸುವುದು ಅಗತ್ಯ. ಶರಭನ ಸಂಗಡ ಇನ್ನೂ ಕೆಲವು ದಿವಸಗಳ ಕಾಲ ಒಡನಾಡಬೇಕಿತ್ತು, ಆದರೆ ಅವನು ಇದ್ದಕ್ಕಿದ್ದಂತೆ ಕಾಣೆಯಾಗಿರುವನು, ಅದೂ ಪರಶುರಾಮನ ನೆರಳಿನೊಂದಿಗೆ. ಅವನು ಮರಳುವನೋ ಇಲ್ಲವೋ! ಅಷ್ಟರಲ್ಲಿ ಇದ್ದಕ್ಕಿದ್ದಂತೆ ಅವನು ತನ್ನೊಂದಿಗೆ ಶಾಶ್ವತ ಪರಿಕರಗಳನ್ನೇನಾದರೂ! ದಿಗ್ಗನೆ ಎದ್ದು ನಿಂತೆ. ಹಣೆ ಮೇಲೆ ಮೂಡಿದ್ದ ಬೆವರ ಹನಿ ಬಿದ್ದು ಅಕ್ಷರಗಳನ್ನು ಮಲಿನಗೊಳಿಸಿದರೇನು ಗತಿ! ಜಾಗ್ರತೆಯಿಂದ ತುಸು ಬಾಗಿ ಹಸ್ತಪ್ರತಿಯನ್ನು ಮುಗುಚಿದ ಬಳಿಕ ನೇರವಾಗಿ ಅಡುಗೆ ಮನೆ ಪ್ರವೇಶಿಸಿ ಮೂಲೆಯಲ್ಲಿ ತಡಕಾಡಿದೆ, ನನ್ನ ಪುಣ್ಯ ನಾಡುಬಾಂಬುಗಳಿದ್ದ ಕಲಾತ್ಮಕ ಕಸೂತಿಯ ಚೀಲ ವನಜಾಕ್ಷಿಯೇ ತನ್ನ ಕೈಯಾರ ವಿನ್ಯಾಸಗೊಳಿಸಿರಬಹುದಾದ ಚೀಲ ಸ್ವಸ್ಥಾನದಲ್ಲಿರಲಿಲ್ಲ. ಅವುಗಳೊಂದಿಗೆ ಹೋಗಿರುವ ತಾನೇನಾದರು! ಎಂದೋ ನೋಡಿದ್ದ ಕಿರ್ಕ್ ಡಗ್ಲಾಸನ ಅಮೋಘ ಅಭಿನಯದ ಟಫ್‌ಗೈಸ್ ಭಯಾನಕ ಚಿತ್ರ ನೆನಪಾಯಿತು. ಊಹಿಸಲಾರಂಭಿಸಿದಂತೆ ಪುನಃ ಭಯ ಆತಂಕ ಆವರಿಸಿತು.

++++

ಎದೆಯ ಮುಂಭಾಗ ತುಸು ಬಾಗಿರುವ ಕಾರಣಕ್ಕೆ ನನಗಿಂತ ಎರಡು ಇಂಚು ಎತ್ತರವಿದ್ದರೂ ಎತ್ತರವೆನ್ನಿಸಿದ ವ್ಯಕ್ತಿ ವಾಗಿಲಿಯಲ್ಲಿ ಯಾರಾದರು ಇದ್ದಲ್ಲಿ ಆತ ನಿಸ್ಸಂದೇಹವಾಗಿ ಶೇಷಣ್ಣನೆ! ಆತ ನನಗೆ ಇಷ್ಟವಾಗಲು ಇರುವ ಕಾರಣಗಳು ಅನೇಕ. ಅವುಗಳಲ್ಲಿ ಮುಖ್ಯವಾದವುಗಳೆಂದರೆ. ತಾನು ಇನ್ನೊಬ್ಬರ ಮನಸ್ಸಿಗೆ ಅನುಗುಣವಾಗಿ ನೋವಾಗದ ರೀತಿಯಲ್ಲಿ ಮಾತನಾಡುವುದು! ಸಂಗ್ಯಾಬಾಳ್ಯಾದಂಥ ಡಪ್ಪಿನಾಟಗಳಿಂದ ಆರಂಭಿಸಿ ದುಶ್ಶಾನಸನ ಕಾಳಗ ವೀರಾಭಿಮನ್ಯುಗಳಂಥ ಬಯಲಾಟಗಳನ್ನು ಅಮೂಲಾಗ್ರವಾಗಿ ಬಾಯಿಪಾಠ ಮಾಡಿರುವುದು, ಮಹಾಪ್ರಾಣ ಅಲ್ಪಪ್ರಾಣಗಳಿಗೆ ಕುಂದು ಬಾರದ ರೀತಿಯಲ್ಲಿ

ಮಾತನಾಡುವುದು. ವಾಗಿಲಿಯ ಸಮಗ್ರ ಮಾಹಿತಿಯನ್ನು ಸಂಗ್ರಹಿಸಿ ವರದಿ ಒಪ್ಪಿಸುವುದು, ಆಗಾಗ್ಗೆ ಸರಿತಪ್ಪುಗಳನ್ನು ತಿದ್ದುವುದು, ಊರಲ್ಲಿ ಅಜಾತಶತ್ರುವೆಂದು ಹೆಸರು ಗಳಿಸಿರುವುದು, ಕೈಲಾಗದ ಷಂಡನಿಗೆ ನೂರು ಹೆಂಡರೋಪಾದಿಯಲ್ಲಿ ಅಗಣಿತ ಜಮೀನಿಗೆ ಒಡೆಯರಾಗಿರುವ ಹೆಬ್ಬಟಂ ಸೀತಾರಾಮರೆಡ್ಡಿಯವರ ಜಮೀನನ ಪೈಕಿ ಏಳೆಂಟು ಎಕರೆ ಹೊಲವನ್ನು ಸಾಗುವಳಿ ಮಾಡುವುದರ ಮೂಲಕ ಅವರ ವಿಶ್ವಾಸ ಗಳಿಸಿರುವುದು, ಓದು ಬರಹ ಬಲ್ಲವನಾದ ತಾನು ಅವರಿವರಿಗೆ ಬರುವ ಪತ್ರಗಳನ್ನು ಓದುವುದು, ತನ್ನದೇ ಆದ ಮೋಡಿ ಲಿಪಿಯಲ್ಲಿ ಭಾಷೆಯಲ್ಲಿ ಅವರಿವರಿಗೆ ಪತ್ರಗಳನ್ನು ಬರೆದು ಕೊಡುವುದರ ಮೂಲಕ ನೆರವು ನೀಡುತ್ತಿರುವುದು! ಇಂಥ ಅನೇಕ ಗುಣಗಳು ನನಗೆ ಹಿಡಿಸಿದವು.

ತಾನು ನನಗೆ ಇದ್ದಕ್ಕಿದ್ದಂತೆ ಪರಿಚಯವಾದ ವ್ಯಕ್ತಿಯಲ್ಲ. ನೈರುತ್ಯ ದಿಕ್ಕಿನ ಮೂಲಕ ವಾಗಿಲಿಯನ್ನು ಪ್ರವೇಶಿಸಿ ನನ್ನೆದುರಿಗೆ ನಿಂತ, ಮುಂಗೈ ಸ್ಪರ್ಶಿಸಿದ, ಅಪಾದಮಸ್ತಕ ದಿಟ್ಟಿಸಿದ, ನನ್ನ ಬಹುವಚನ ಸಂಬೋಧನೆಗೆ ಪರವಶನಾದ, ನನ್ನೊಳಗಿನ ಸೃಜನಶೀಲತೆಯನ್ನು ಗ್ರಹಿಸಿದ, ಒಂದೆರಡು ದಿವಸಗಳ ಕಾಲ ಶಾಲೆಯಲ್ಲಿ ಕೂತು ನನ್ನ ಬೋಧನೆಯನ್ನು ಮಾನಸಿಕವಾಗಿ ಪ್ರಶಂಸಿಕೊಂಡ. ಅಷ್ಟು ಮಾಡಿದ್ದರೆ ನಾನು ಆತನನ್ನು ಮರೆಯುತ್ತಿದ್ದೆನೇನೊ! ಆದರೆ ನನ್ನನ್ನು ತನ್ನೊಂದಿಗೆ ವಾಗಿಲಿಯ ಪ್ರತಿಯೊಂದು ಮನೆಗೆ ಕರೆದೊಯ್ದು ರೆಡ್ಡಿಗಳಿಗೆ ವಿಶೇಷಣಗಳ ಮೂಲಕ ಪರಿಚಯಿಸಿದ, ಮನೆ ಖಾಲಿ ಇದ್ದಲ್ಲಿ ಬಾಡಿಗೆ ಕೊಡುವಂತೆ ಭಿನ್ನವಿಸಿಕೊಂಡ. ಖಾಲಿ ಇದ್ದ ಮನೆಗಳೋ ಬಹುವಿಸ್ತೀರ್ಣ! ಭೂತಬಂಗಲೆ ಎಂದು ಕರೆಯಬಹುದಾದಷ್ಟು ದೊಡ್ಡವಿದ್ದವು. ನೂರಾರು ಮಂದಿ ವಾಸಿಸಲು ಯೋಗ್ಯವಿದ್ದ ಅಂಥ ಮನೆಗಳಲ್ಲಿ ಅವಿವಾಹಿತನಾದ ನಾನು ವಾಸಿಸಲಾದೀತೆ! ಒಂದು ಮಧ್ಯಾಹ್ನ ಸಂಕ್ರಯ್ಯನ ಹೂಟಲ್ಲಿಗೆ ಕರೆದೊಯ್ದು ಚಹಾ ಕುಡಿದು ಚೇತರಿಸಿಕೊಂಡ, ಇನ್ನು ಗ್ರಾಮದೊಳಗೆ ಬಾಡಿಗೆಗೆ ದೊರಕಬಹುದಾದ ಮನೆ ಎಂದರೆ ಅದು ಗಾದಿ ಪರಶುರಾಮನದು ಮಾತ್ರ, ಆದೋ ಒಂದು ಕಾಲದಲ್ಲಿ ಸುಪಾರಿ ಕೊಲೆ ವೃತ್ತಿ ಮೂಲಕ ಸಂಪಾದಿಸಿದ ಹಣದಲ್ಲಿ ಖರೀದಿಸಿರುವಂಥಾದ್ದು, ಅದರ ಮಾಲಕನೋ ಚರ್ಲಪಲ್ಲಿ ಜೈಲಿನಲ್ಲಿ ಮೂರು ವರ್ಷಗಳ ಕಾಲ ಕಠಿಣ ಶಿಕ್ಷೆ ಅನುಭವಿಸಿ ಬಂದು ತೀರಾ ಇತ್ತೀಚಿನ ದಿವಸಗಳಲ್ಲಿ ಒಳ್ಳೆಯವನೆಂದು ಹೆಸರು ಮಾಡಿರುವ ವ್ಯಕ್ತಿ, ಅಂಥವನ ಮನೆಯನ್ನು ಬಾಡಿಗೆ ಕೊಡಿಸುವುದು ತನಗೇನು ಕಷ್ಟದ ಕೆಲಸವಲ್ಲ, ಬಾಡಿಗೆದಾರ ಆತನ ಜಾಯಮಾನದೊಂದಿಗೆ ಹೊಂದಿಕೊಂಡು ಕಾಲಕ್ಷೇಪ ಮಾಡುವುದು ಮುಖ್ಯ. ಅದು ಕತ್ತಿ ಮೇಲೆ ಸಾಮು ಮಾಡಿದಂತೆ. ಹೇಗೋ ನನ್ನ ಬತ್ತಳಿಕೆಯಲ್ಲಿ ಬಹುವಚನ ಸಂಬೋಧಾನಸ್ತ್ರಗಳಿದ್ದವಷ್ಟೆ! ಒಪ್ಪಿಗೆ ಸೂಚಿಸಿದೆ.

ಕರೆದೊಯ್ದು ಭೆಟ್ಟಿ ಮಾಡಿಸಿದ್ದು ಇನ್ನೂ ನೆನಪಲ್ಲುಂಟು! ಅಷ್ಟೇನೂ ಎತ್ತರವಿರದಿದ್ದ ಆಕರ್ಷಕ ವ್ಯಕ್ತಿತ್ವ, ಆ ಬೆಳಿಗ್ಗೆ ಮುಖಕ್ಷೌರ ಮಾಡಿಕೊಂಡು ನಳನಳಿಸುತ್ತಿದ್ದ, ಅಲ್ಲಲ್ಲಿ ನೆರೆತಿದ್ದ ತಲೆಗೆ ಮುಂಡಾಸು ಸುತ್ತಿದ್ದ, ಸಚರಾಚರಗಳ ನಡಾವಳಿ ಅರಿವುಳ್ಳವನು ತಾನೆಂಬಂತೆ ನಮ್ಮ ಆಗಮನವನ್ನು ತುಸು ದೂರದಿಂದ ಗ್ರಹಿಸಿದವನಂತೆ ಗಂಭೀರ ವದನನಾದ, ಬಹುವಚನ ಪ್ರಯೋಗದಲ್ಲಿ. ನಮಸ್ಕಾರ ಪರಶುರಾಮಪ್ಪನವರೆ ಎಂದು ಸಂಬೋಧಿಸಿದೊಡನೆ ಮೆಲ್ಲಗೆ ತಲೆ ಎತ್ತಿ ನೋಡಿದ. ಆತನ ಮುಖ ಅರಳಿದ್ದು ನನ್ನ ಸೌಭಾಗ್ಯವೇ ಸರಿ! ಆದರೆ ಆ ಮುಖದಲ್ಲಿ ತಾನು ಒಳ್ಳೆಯವರಿಗೆ ಒಳ್ಳೆಯವನು ಕೆಟ್ಟವರಿಗೆ ಕೆಟ್ಟವನು ಎಂಬ ಭಾವ ಪ್ರಕಟವಾಯಿತು. ಶೇಷಣ್ಣ ಹೇಳಿದ, ಅದ್ದಕ್ಕೆ ತಾನು "ಮಕ್ಕಳಿಗೆ ಓದು ಕಲಿಸುವವರೆಗೆ ಮನೇನ ಬಾಡಿಗೆ ಕೊಟ್ಟು

ನಾನ್ಯಾವ ನರಕಕ್ಕೆ ಹೋಗಲಿ! ನಮ್ಮ ಮನೇಲಿರುವ ಚೇಳುಗಳು ಲಕ್ಷ್ಮಿಗೆ ಸಮಾನ, ಅವುಗಳನ್ನು ಕೊಲ್ಲದಿದ್ದರಾಯಿತು, ತಿಂಗಳಿಗೊಂದೆರಡು ಸಲ ಹಾವುಗಳು ಮನೆಯೊಳಗೆ ತೂರಿ ಸ್ವಲ್ಪ ಹೊತ್ತು ಇದ್ದು ಧಣಿವಾರಿಸಿಕೊಂಡು ಹೋಗುವುದುಂಟು, ಅವುಗಳ ತಂಟೆಗೆ ಹೋಗುವುದಿಲ್ಲವೆಂದು ಮಾತು ಕೊಟ್ಟರೆ ಮಾತ್ರ ಮನೆಯಲ್ಲಿರಬಹುದು, ಏನಂತೀರಿ?" ಎಂದು ತಣ್ಣಗೆ ಕರಾರು ವಿಧಿಸಿದ್ದು ವಿಚಿತ್ರವೆನಿಸಿತು. ನಾನು ಗರ್ಭದಲ್ಲಿದ್ದಾಗ ನನ್ನ ತಾಯಿ ಚೇಳಿನಿಂದ ಕುಟುಕಿಸಿಕೊಂಡಿದ್ದಳಂತೆ! ಆ ಕಾರಣಕ್ಕೆ ಚೇಳುಗಳ ನಂಜು ನನಗೆ ಏರುವುದಿಲ್ಲವಂತೆ! ಕುಟುಕಿಸಿಕೊಂಡಿರುವ ಅನುಭವವೂ ಇರಲಿಲ್ಲ, ಕುಟುಕಿಸಿಕೊಂಡು ಪರೀಕ್ಷಿಸಿದರಾಯಿತು, ಆದರೆ ನನಗೆ ಹಾವುಗಳೆಂದರೆ ಭಯ! ಮುಂದೆ ತಾನೆ ಅದೆಲ್ಲ! ಸಮ್ಮತಿಸಿದೆ. ಆ ಬಳಿಕ ಆತ ಮನೆಯನ್ನು ಮುಫತ್ತಾಗಿ ನೀಡಿದ್ದೂ ಆಯಿತು, ನಾನದರಲ್ಲಿ ವಾಸಿಸತೊಡಗಿದ್ದೂ ಆಯಿತು, ದಿನಗಳುರುಳಿದಂತೆ ನನ್ನೊಂದಿಗೆ ತಾನೂ ಆತನೊಂದಿಗೆ ನಾನೂ ಹೊಂದಿಕೊಂಡದ್ದೂ ಆಯಿತು.

ಈ ಪ್ರಕಾರವಾಗಿ ನನಗೆ ವಸತಿ ಸೌಕರ್ಯ ಕಲ್ಪಿಸಿರುವ ಶೇಷಣ್ಣ! ಮಾಂಸಾಹಾರಿ ಖಾದ್ಯಗಳನ್ನು ಸೊಗಸಾಗಿ ಮಾಡಬಲ್ಲ ಶೇಷಣ್ಣ, ಜಾಲಿಮರದ ಪಡಿಯಚ್ಚಿನಂತಿರುವ ಶೇಷಣ್ಣ, ಇನ್ನೂ ಒಂದು ಮಾತು ಹೇಳುವುದಾದರೆ ತಾನು ಮೂರನೆ ಸಲ ಮದುವೆಯಾಗಿ ವಿಧುರ ಪಟ್ಟವನ್ನು ಕಳಚಿಕೊಂಡಿರುವ ಶೇಷಣ್ಣ, ಒಂದೆರಡು ತಿಂಗಳುಗಳಲ್ಲಿ ಒಂಭತ್ತನೆ ಮಗುವಿನ ಅಭಿಮಾನದ ತಂದೆಯಾಗಲಿರುವ ಶೇಷಣ್ಣ, ವಾಗಿಲಿಯ ದೈನಂದಿನ ವಿದ್ಯಾಮಾನಗಳ ಬಾತ್ಮೀದಾರನೆನಿಸಿರುವ ಶೇಷಣ್ಣ, ಸಕಾರಣವಾಗಿ ಬಂದು ಹೋಗುವ ಶೇಷಣ್ಣ, ಬೀಡಿಯನ್ನು ಹದ ಮಾಡಿ ಅದಕ್ಕೆ ಬೆಂಕಿ ಮುಡಿಸುವ ಮೊದಲು ಕಣ್ಣಿನಿಂದ ಅನುಮತಿ ಪಡೆಯುವ ಶೇಷಣ್ಣ, ಸಕಾರಣವಾಗಿ ಭೆಟ್ಟಿ ಮಾಡುವ ಶೇಷಣ್ಣ, ಕೆಲವೊಮ್ಮೆ ನನ್ನತ್ತ ವಿಚಿತ್ರವಾಗಿ ನೋಡುತ್ತ ಕಾಲಕ್ಷೇಪ ಮಾಡುವ, ನನ್ನನ್ನು ಜೀವರಹಿತ ಗೊಂಬೆ ಎಂದೇ ಭಾವಿಸಿ ನೋಡುತ್ತ ಕೂಡ್ರುವ ಶೇಷಣ್ಣ ಅಷ್ಟು ದೂರದಲ್ಲಿ ಕಾಣಿಸಿಕೊಂಡ. ಎಂದಿನಂತೆ ವಿಧೇಯತೆಯೇ ಮೈವೆತ್ತಂತೆ ಒಳಪ್ರವೇಶಿಸಿದ, 'ಸೀ' ಆಕಾರದಲ್ಲಿ ಕುಳಿತ, ನನ್ನ ಕಡೆ ಅಭಿಮಾನಪೂರ್ವಕವಾಗಿ ನೋಡಿದ, ತನ್ನ ಕಿವಿ ಸಂಧಿಯಿಂದ ಬೀಡಿ ತೆಗೆದು ಹಿತವಾಗಿ ಮರ್ಧಿಸಿದ, ಏನೋ ಆಲೋಚಿಸಿ ಪುನಃ ಅದನ್ನು ಕಿವಿ ಸಂಧಿಯಲ್ಲಿರಿಸಿಕೊಂಡ.

"ಸಾರ್ ನಿಮ್ಮನ್ನ ಹುಡುಕಿಕೊಂಡು ಒಬ್ಬ ಬಂದಿದ್ದ, ಹೆಸರು ಜಲಂಧರ!" ಎಂದು ಮಾತು ಆರಂಭಿಸಿದ. ನೆನಪಿಸಿಕೊಂಡೆ, ನನ್ನ ಮನಸ್ಸಿನ ಖಾತೆಯಲ್ಲಿ ಆ ಹೆಸರಿನವರಿರಲಿಲ್ಲ, ಪ್ರಶ್ನಾರ್ಥಕ ನೋಟ ಬೀರಿದೆ.

"ನಾಟಕ ಕಂಪನಿ ನಮ್ಮೂರಲ್ಲಿ ಕ್ಯಾಂಪ್ ಮಾಡುತ್ತಿರುವುದಂತೆ, ಆತ ಅದರ ಮಾಲಕನಂತೆ ಆತ ಸಾರ್!" ಎಂದ, ಅರೆ ಹೌದಲ್ಲವೆ! ಅಗಸೆ ಬಾಗಿಲಲ್ಲಿ ಬಂದೊಡನೆ ನಾವು ಆಡಲಿರುವ ನಾಟಕಗಳನ್ನು ನೋಡಲು ಮರೆಯಬೇಡಿ ಕಲಾಭಿಮಾನಿಗಳೆ ಎಂಬ ಮಾತುಗಳು ಸ್ಮರಣೆಗೆ ಬಂದವು. ವಾಗಿಲಿ ಭೌಗೋಳಿಕವಾಗಿ ಸಾಮಾಜಿಕವಾಗಿ ಕುಗ್ರಾಮ, ಆದರೆ ಸಾಂಸ್ಕೃತಿಕವಾಗಿ ಸುಗ್ರಾಮವೇ ಸರಿ, ಕುಮಾರವ್ಯಾಸ ಲಕ್ಷ್ಮೀಶನಂಥ ಷಟ್ಪದಿಕವಿಗಳ ಕರುಳಬಳ್ಳಿಗಳು ಎಲ್ಲಂದರಲ್ಲಿ! ಜಗಳಗಳನ್ನೂ ಸಾವನ್ನೂ ಕಾವ್ಯಮಯವಾಗಿ ಆಸ್ವಾದಿಸುವವರು ಪ್ರತಿಯೊಂದು ಮನೆಯಲ್ಲಿ! ಮಹಾಪ್ರಾಣ ಅಲ್ಪಪ್ರಾಣಗಳ ಹಂಗಿಲ್ಲದೆ ನಿರರ್ಗಳವಾಗಿ ಮಾತಾಡುವವರಂತೂ ಅಗೋ ಅಲ್ಲಿ ಇಗೋ ಇಲ್ಲಿ! ಇನ್ನು ಆಟ ಬಯಲಾಟಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ! ವರ್ಷಕ್ಕೆರಡು ಮೂರು ಸಲ ಆಟ ಬಯಲಾಟಗಳನ್ನಾಡುವ ಅಭಿಜಾತ ಕಲಾವಿದರಿಗಿಲ್ಲಿ ಬರವಿಲ್ಲ, ದಿಕ್ಕುತಪ್ಪಿ

ಬರುವ ಕಲಾವಿದರ ಹಸಿದ ಹೊಟ್ಟೆಗಳನ್ನು ತುಂಬಿಸುವ ಕೈಗಳಿಗಿಲ್ಲಿ ಬರವಿಲ್ಲ. ಬಳಲಿಕೆಯಿಂದ ಬಾಯಾರಿದ ಬುರ್ರಕಥಾ ಕಿನ್ನರಿಜೋಗಿ ಹೆಳವರ ದಾಹ ತಣಿಸುವವರಿಗಿಲ್ಲಿ ಬರವಿಲ್ಲ. ಆದರೆ ಜಲಂಧರ ಎಂಬ ನಾಟಕ ಕಂಪನಿಯ ಮಾಲಕ ನನ್ನನ್ನು ಹುಡುಕುತ್ತಿರುವನೆಂದರೇನು! ಹುಡುಕಿಸಿಕೊಳ್ಳಲಿಕ್ಕೆ ನಾನೇನು ಊರಗೌಡನೆ! ಪುನಃ ಪ್ರಶ್ನಾರ್ಥಕ ನೋಟ ಬೀರಿದೆ. ಆ ನನ್ನ ನೋಟದಲ್ಲಿ ಯಾವ ಕಂಪನಿ ಯಾವ ನಾಟಕಗಳಿತ್ಯಾದಿ!

"ಯಾವ ಕಂಪನಿಯೋ ಏನು ಕಥೆಯೋ! ಯಾವುದೋ ಒಂದು ಕಂಪನಿ ಅಂತೆ ಸಾರ್! ನಾಟಕಗಳು ಒಂದೆರಡಾದರೆ ನೆನಪಿಟ್ಟುಕೊಳ್ಳಬಹುದಿತ್ತು! ಕಿತ್ತೂರು ರಾಣಿ ಚೆನ್ನಮ್ಮ ವೀರಸಿಂಧೂರ ಲಕ್ಷ್ಮಣ ಹೇಮರೆಡ್ಡಿ ಮಲ್ಲಮ್ಮನ ಕಥೆ ಹೀಗೆ ಒಂದೇ ಎರಡೇ ನಾಟಕಗಳು! ಸರಿಯಾಗಿ ನೆನಪಾಗುತ್ತಿಲ್ಲ ಸಾರ್" ಎಂದ. ಇದೆಲ್ಲಾ ಮಾಮೂಲು, ಇದನ್ನೆಲ್ಲ ಕಟ್ಟಿಕೊಂಡು ಆಗಬೇಕಾಗಿರುವುದಾದರೂ ಏನು! ಆಡುವವರು ಆಡುವರು ನೋಡುವವರು ನೋಡುವರು, ಕೊಡುವವರು ಕೊಡುವರು. ನಾಟಕಗಳನ್ನು ಆಡಿಸಿ ಆಡಿ, ಸ್ತ್ರೀ ಕಲಾವಿದೆಯರ ಸೌಂದರ್ಯಕ್ಕೆ ಮಾರುಹೋಗಿ ಸಾಲವಂದಿಗನಾಗಿರುವ ತಂದೆಯ ಮಗನೇ ನಾನು. ಆದಷ್ಟು ಕಲಾವಿದರ ತಂಟೆಗೆ ಹೋಗದಂತೆ ಹುಷಾರಾಗಿರುವುದು ಮುಖ್ಯ. ನಾನೇನು ಜಮೀನ್ದಾರನಲ್ಲ ಅವರ ಸಮಸ್ಯೆಗಳನ್ನು ಮೈಮೇಲೆಳೆದುಕೊಳ್ಳಲು! ಮಾಮೂಲು ಶಾಲಾ ಮಾಸ್ತರ, ನನ್ನದೇನಿದ್ದರೂ ಆ ಎಲ್ಲಾ ಅನುಭವಗಳಿಗೆ ಸೃಜನಶೀಲ ರೂಪ ಕೊಡುವ ಕೈಕಂರ್ಯ! ಮನಸ್ಸಿನಲ್ಲಿ ಲೆಕ್ಕ ಹಾಕುತ್ತ ಸುಮ್ಮನೆ ಹ್ಞೂಗುಟ್ಟುತ್ತಿದ್ದೆ, ಕಾರಣ ಬರೆಯಲಿರುವ ಕಾದಂಬರಿ ಎಲ್ಲಿ ದಾರಿ ತಪ್ಪುವುದೋ ಎಂಬ ಆತಂಕ. ಶ್ಮಶಾನದಲ್ಲಿನ ಕೆಸರನ್ನು ಲೆಕ್ಕಿಸದೆ ಪೋಲಿಸ್ ನಾಯಿಗಳು ಧಾವಿಸುತ್ತವೆ, ಆ ಮೂಲಕ ಪೋಲಿಸರ ಗಮನವನ್ನು ಕಥಾನಕದ ಪ್ರತಿನಾಯಕನತ್ತ ಸೆಳೆಯುತ್ತವೆ, ಆ ಎಲ್ಲ ಅವಘಡಗಳಿಂದ ದಯಾನಂದ ತಪ್ಪಿಸಿಕೊಳ್ಳುವ ಬಗೆ ಹೇಗೆ!

ಪುನಃ ಪ್ರಶ್ನಾರ್ಥಕ ನೋಟ ಬೀರಿದೆ.

"ಅಯ್ಯೋ ಅವನ ಪರಿಚಯವಿರದಿದ್ದರೂ ನಿಮ್ಮ ಪರಿಚಯ ಅವನಿಗಿರುವುದಂತೆ ಸಾರ್! ಅದೂ ಅಲ್ಲದೆ ಅವನಿಗೆ ಕೊಕ್ಕ ಬುಕ್ಕರ ಭಯ! ತಮ್ಮನ್ನು ಎದುರು ಹಾಕಿಕೊಂಡವರಿಗೆ ಈ ಊರಲ್ಲಿ ಉಳಿಗಾಲವಿಲ್ಲವೆಂದು ಹೆದರಿಸಿರುವರಂತೆ! ಅದನ್ನೆಲ್ಲ ಹೇಳಿಕೊಳ್ಳುವ ಸಲುವಾಗಿ ಏನಾದರೂ!" ಎನ್ನುತ್ತ ಬೀಡಿಯನ್ನು ಕಿವಿ ಸಂಧಿಯಿಂದ ತೆಗೆದು ಮರ್ಧಿಸಿ ಪುನಃ ತನ್ನ ಕಿವಿ ಸಂಧಿಯಲ್ಲಿರಿಸಿಕೊಂಡನು.

ಅವನಿಗೆ ನನ್ನ ಪರಿಚಯವೆ! ಆಶ್ಚರ್ಯವಾಯಿತು. ವಿಚಿತ್ರ ಹೆಸರು ಬೇರೆ! ನನ್ನ ಕಳೆದ ಕಾಲುಶತಮಾನದ ವಯೋಮಾನದಲ್ಲಿ ಆ ಹೆಸರಿನ ಯಾರೂ ನನಗೆ ಪರಿಚಯವಿಲ್ಲ. ಅಲ್ಲದೆ ನನಗೆ ನಾನು ನಾಟಕಕಾರರ ಹೆಸರುಗಳನ್ನಾಗಲೀ ನಾಟಕಗಳನ್ನಾಗಲೀ ಒತ್ತಾಸೆಯಿಂದ ನೋಡಿರುವವನೂ ಅಲ್ಲ. ಚಿಕ್ಕಂದಿನ ದಿನಗಳಲ್ಲಿ ತಂದೆಯ ಹೆಗಲೇರಿ ಒಂದೆರಡು ನಾಟಕಗಳನ್ನು ನೋಡಿರುವುದುಂಟು, ಆದರೆ ವೃತ್ತಿ ನಾಟಕ ಕಂಪನಿಗಳನ್ನು ಸುಳಿದಿರುವುದು ಬಹುತೇಕ ಕಡಿಮೆ, ಸುಳಿದರೂ ಅರ್ಧಾಂತರದಲ್ಲಿ ಎದ್ದು ಹೊರಟು ಹೋಗಿರುವುದುಂಟು, ಅವುಗಳ ಸಂಕಟಗಳಿಗೆ ಸ್ಪಂದಿಸುವುದಂತೂ ಇಲ್ಲವೇ ಇಲ್ಲ. ಅದಕ್ಕಿಂತ ಮುಖ್ಯವಾಗಿ ಆದರೆ ವಾಗಿಲಿಯ ಈ ಕೊಕ್ಕ ಬುಕ್ಕರಂಥ ಐಪೀಸಿ ಕೋಡುಗಳು ಸುಮಸುಮ್ಮನೆ ಧಮಕಿ ಹಾಕುವವರಲ್ಲ, ವಾಗಿಲಿಯಲ್ಲಿ ತಮ್ಮ ತಂದೆ ಹತ್ತಾರು ಎಕರೆ ಜಮೀನಿಗೆ ಒಡೆಯನಾಗಿದ್ದನಂತೆ! ಆ ಚರಾಸ್ತಿಯನ್ನು ಹೆಬ್ಬಟಂಗೌಡರು ಸಾಲಕ್ಕೆ ಮುಟ್ಟುಗೋಲು ಹಾಕಿಕೊಂಡಿರುವರಂತೆ! ಅದನ್ನು ನೆನಪಿಸಿಕೊಳ್ಳುತ್ತ ಈಗಲೂ

ಜಮೀನ್ದಾರಂತೆ ಬೀಗುವುದು ಅವರವರ ಜಾಯಮಾನ. ನಾಟಕದವರಿಂದ ಚೂರುಪಾರು ವಸೂಲಿ ಮಾಡಿ ಬದುಕುವುದು ಆ ಪರಾವಲಂಬಿಗಳಿಗೆ ಅನಿವಾರ್ಯ ಬೇರೆ. ತಾವೆಂದೂ ದುಡಿದು ಬದುಕುವವರಂತೂ ಮೊದಲೇ ಅಲ್ಲ. ಚಿಕ್ಕಪುಟ್ಟ ಜಗಳಗಳಲ್ಲಿ ಭಾಗವಹಿಸುವುದು, ಹೊಡೆಯುವುದು ಹೊಡೆಸಿಕೊಳ್ಳುವುದು, ಅಕಸ್ಮಾತ್ ಸಂಭವಿಸಿದ ಕೊಲೆಗಳಿಗೆ ತಾವು ಭಾಜನರಾಗುವುದು, ಸಕಾರಣಾತ್ಮಕವಾಗಿ ಜೈಲುಪಾಲಾಗುವುದು, ಐದು ಹತ್ತು ಕೊಡುವವರ ಪರವಾಗಿ ನ್ಯಾಯಾಲಯಗಳ ಕಟೆಕಟೆಗಳಲ್ಲಿ ಪರಮವಿಧೇಯತೆಯಿಂದ ನಿಂತು ಸಾಕ್ಷ್ಯ ನುಡಿಯುವುದು ಅವರಿಗೆಲ್ಲ ಮಾಮೂಲಾಗಿರುವುದು ಬೇರೆ. ಅದೂ ಅಲ್ಲದೆ ಕೊಕ್ಕನಾಗಲೀ, ಅವನ ಸಹೋದರ ಬುಕ್ಕನಾಗಲೀ ನನಗೆ ತೀರಾ ಪರಿಚಿತರಾಗಲೀ ಅಪರಿಚಿತರಾಗಲೀ ಅಲ್ಲವೇ ಅಲ್ಲ. ಸ್ಥಳೀಯವಾಗಿ ಸಂಭವಿಸಿದ ಯಾವುದೋ ಒಂದು ಕೊಲೆ ಕೇಸಿನಲ್ಲಿ ಅವರಿಬ್ಬರು ಚೆರ್ಲಪಲ್ಲಿ ಜೈಲಿನಲ್ಲಿದ್ದಾಗ ಅವರವರ ಹೆಂಡರ ಕರುಳ ಆಕ್ರಂದನಕ್ಕೆ ಅಕ್ಷರ ರೂಪ ಕರುಣಿಸಿ ಪತ್ರಗಳನ್ನು ಬರೆಯುತ್ತಿದ್ದವನು ನಾನು, ಆ ಋಣದಿಂದಾಗಿ ಅವರಿಬ್ಬರೂ ಊರಲ್ಲಿ ನನ್ನ ಮಾತನ್ನು ಕೇಳಿದರೂ ಕೇಳಬಹುದು, ಕೇಳದೆ ಇರಲೂಬಹುದು.

"ಚಪ್ಪಲಿಗಳನ್ನು ಎಲ್ಲಿಡಬೇಕೋ ಅಲ್ಲಿಟ್ಟರೇನೆ ಚಂದ, ಮಿಡತೆಗಳಂಥ ಅಂಥವರಿಗೆ ನಿಮ್ಮಂಥವರು ಸಲಿಗೆ ಕೊಡಬಾರದಿತ್ತು ಸಾರ್, ಅವರ ಬದುಕು ಒಂದು ಬದುಕೇ! ಥೂ! ನೋಡಲು ಜಲಂಧರ ಏನೂ ಕಡಿಮೆ ಇಲ್ಲ ಸಾರ್, ಗರಡಿ ಮನೆ ಪೈಲ್ವಾನನಂತೆ ಕಟ್ಟುಮಸ್ತಾಗಿದ್ದಾನೆ. ಆದರೇನು ಲಾಭ! ಪಾಪ ಬಡವ, ಒಂದು ತುತ್ತು ಅನ್ನ ಹುಡುಕಿಕೊಂಡು ನಮ್ಮೂರಿಗೆ ಬಂದಿರುವ ನಿರ್ಗತಿಕ" ಎಂದು ನಿಟ್ಟುಸಿರುಬಿಡುತ್ತ ಕೋಪವನ್ನೂ ಅನುಕಂಪವನ್ನೂ ಏಕಕಾಲಕ್ಕೆ ಪ್ರಕಟಿಸಿದ.

ಶೇಷಣ್ಣ ಕೋಪದಿಂದ ಮಾತಾಡಿದ್ದು ಅದೇ ಮೊದಲ ಸಲ. ಹಿಂದೆ ಯಾವತ್ತೋ ಇವನಿಗೂ ಅವರಿಗೂ ಕ್ಷುಲ್ಲಕ ಕಾರಣಕ್ಕೆ ಜಗಳ ಸಂಭವಿಸಿತ್ತಂತೆ! ಆ ವಿವರ ನನಗೆ ಸರಿಯಾಗಿ ತಿಳಿಯದು. ಶಾಲಾ ಮಾಸ್ತರನಾಗಿರುವ ನನಗೆ ಊರಲ್ಲಿನ ಒಳ್ಳೆಯವರು ಎಷ್ಟು ಮುಖ್ಯಾನೋ ಕೆಟ್ಟವರೂ ಅಷ್ಟೇ ಮುಖ್ಯ. ಊರ ಸಾಮಾಜಿಕ ವ್ಯಾದಿಗಳು ನನ್ನ ವೈಯಕ್ತಿಕ ವ್ಯಾಧಿಗಳಾಗುವುದು ಸಾಧ್ಯವಿಲ್ಲ ತಾನೆ! ಅಂಥ ವ್ಯಾಧಿಗಳ ಸಹಕಾರದಿಂದಾಗಿಯೇ ನಮ್ಮ ಶಾಲೆಯಲ್ಲಿ ಮಕ್ಕಳ ಹಾಜರಾತಿ ಹೆಚ್ಚಿರುವುದು. ನಾನು ಈ ಊರಿಗೆ ಬಂದ ಆರಂಭದ ದಿವಸಗಳಲ್ಲಿ.. ಎಲ್ಲರಂತೆ ಕೊಕ್ಕ ಬುಕ್ಕ ಸಹೋದರರೂ ನನ್ನನ್ನು ಹೆದರಿಸಲು ನೋಡಿದ್ದುಂಟು, ಏಕವಚನದಲ್ಲಿ ಸಂಬೋಧಿಸಿದ್ದುಂಟು, ಹಫ್ತಾ ವಸೂಲಿಗೆ ಪ್ರಯತ್ನಿಸಿದ್ದೂ ಉಂಟು. ದಿನ ಕಳೆದಂತೆ ಅವರಿಬ್ಬರೂ! ನನ್ನ ತಲೆಯೊಳಗಿರುವ ಶೈಕ್ಷಣಿಕ ಕನಸುಗಳು ಸಾಕಾರಗೊಳ್ಳಲು, ಶತಶತಮಾನಗಳಿಂದ ಅಕ್ಷರ ಸೌಲಭ್ಯ ವಂಚಿತ ಸ್ಥಳೀಯ ದಲಿತರ, ಜೀತದಾಳುಗಳ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳಲು, ಸವರ್ಣೀಯರ ವಿರೋಧವನ್ನು ನಿಗ್ರಹಿಸಲು ಕೊಕ್ಕಬುಕ್ಕರಂಥ ಉಲ್ಲಂಘನಾಕಾರರ ಸಹಕಾರ ತುಂಬ ಅಗತ್ಯವಿರುವುದು.

ಈ ಕುರಿತು ಒಮ್ಮೆ ಪ್ರಸ್ತಾಪಿಸಿದ್ದಕ್ಕೆ ವೀರಾರೆಡ್ಡಿ "ಮಾದಿಗರ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವುದು ಅದು ಹೇಗೆ ಸಾಧ್ಯ! ನಮ್ಮೂರಿನ ಮಾದಿಗರು ಬದುಕುತ್ತಿರುವುದೇ ಅವರವರ ಮಕ್ಕಳ ದುಡಿಮೆಯಿಂದ. ಅದೂ ಅಲ್ಲದೆ ನಮ್ಮಂಥವರ ಮಕ್ಕಳಿಗೆ ವಿದ್ಯೆ ಹತ್ತುವುದೇ ಕಷ್ಟ, ಇನ್ನು ನಮ್ಮ ಎಂಜಲುಣ್ಣುವವರ ಮಕ್ಕಳು ವಿದ್ಯೆ ಕಲಿಯುವುದು ಸಾಧ್ಯವೆ! ನಮ್ಮಂಥ ಒಳ್ಳೆಯವರು ಸುಮ್ಮನಿರಬಹದು, ಆದರೆ ಹೆಬ್ಬಟಂ ಸೀತಾರಾಮರೆಡ್ಡಿಯಂಥವರು

ಸುಮ್ಮನಿರುವರೆ! ಅದೂ ಅಲ್ಲದೆ ಸ್ಕೂಲು ನಡೆಯುತ್ತಿರುವುದು ದೇವಸ್ಥಾನದಲ್ಲಿ ಎನ್ನುವುದನ್ನು ಮರೆಯಬೇಡಿ! ಅದನ್ನು ಕಟ್ಟಿಸಿರುವುದು ಅವರ ಹಿರಿಯರು. ಅಂಥವರ ವಿರೋಧ ಕಟ್ಟಿಕೊಳ್ಳುವುದೆಂದರೆ ಹುಡುಗಾಟವೆ! ಯಾಕೆ ಬೇಕು ನಿಮಗೆ ಇದೆಲ್ಲ! ಯಾರು ಕಲಿತರೇನು ಯಾರು ಬಿಟ್ಟರೇನು! ನೀವು ಕ್ಷೇಮವಾಗಿರುವುದು ಮುಖ್ಯ. ನಿಮ್ಮ ಪಾಡಿಗೆ ನೀವು ಪ್ರತಿತಿಂಗಳು ಸಂಬಳ ಎಣಿಸಿಕೊಳ್ಳುತ್ತ ಆರಾಮಾಗಿರ್ರಿ ಮೇಸ್ಟ್ರೇ" ಎಂದು ಹೇಳಿದ್ದರು, ಅದೂ ಜಮೀನ್ದಾರೀ ಜಾಯಮಾನದ ತಣ್ಣನೆಯ ಮಾತುಗಳಲ್ಲಿ. ಅಂದ ಮಾತ್ರಕ್ಕೆ ನಾನು ಆ ಯೋಜನೆಯಿಂದ ವಿಮುಖನಾಗಿರಲಿಲ್ಲ, ಮುಂದೊಂದು ದಿವಸ ಕೊಕ್ಕ ಬುಕ್ಕರಂಥ ವಜ್ರಾಯುಧಗಳ ನೆರವಿನಿಂದ..

"ಒಂದು ಕಡೆಯಿಂದ ನೋಡಿದರೆ ಅವರು ಕೆಟ್ಟವರೇನಲ್ಲ" ಎಂದು ಒಂದು ಕ್ಷಣ ಯೋಚಿಸಿದ ಬಳಿಕ "ಜಲಂಧರ ನಿಮ್ಮನ್ನು ಭೆಟ್ಟಿ ಮಾಡಬೇಕೆಂದಿರುವುದು ಅದಕ್ಕೋ ಇನ್ಯಾತಕ್ಕೋ! ಅದೇನೇ ಇರಲಿ ದೇವರ ದಯೆಯಿಂದ ವಾಗಿಲಿಗೆ ವಾಪಾಸು ಬಂದಿದ್ದೀರಲ್ಲ ಅಷ್ಟೇ ಸಾಕು. ಆ ನಾಟಕದವನನ್ನು ನಾನೇ ಭೆಟ್ಟಿ ಮಾಡಿಸುವೆ, ಇಲ್ಲಿಗೆ ಕರಕೊಂಡು ಬರಲೋ ಇಲ್ಲಾ ಸ್ಕೂಲಿಗೆ ಕರಕೊಂಡು ಬರಲೋ!" ಎನ್ನುತ್ತ ಶೆಷಣ್ಣ ತನ್ನ ಬೆನ್ನೆಲುಬನ್ನು ನೇರ ಮಾಡಿಕೊಳ್ಳುವ ನಿಮಿತ್ತ ಆಸನ ಬದಲಿಸಿದ.

ಖಾಸಗಿ ಸಂಗತಿಗಳನ್ನು ಚರ್ಚಿಸಲು ಶಾಲೆ ಏನು ಪಾರ್ಲಿಮೆಂಟೆ!

"ಸ್ಕೂಲಲ್ಲಿ ಬೇಡಬಿಡಿ, ನಾಳೆ ಇದೇ ಸಮಯಕ್ಕೆ ಇಲ್ಲಿಗೆ ಕರಕೊಂಡು ಬರುವೆ" ಎನ್ನುತ್ತ ಮೇಲೇಳುವ ಸಲುವಾಗಿ ತನ್ನ ಮೊಣಕಾಲುಗಳಿಗೆ ತನ್ನೆರಡೂ ಕೈಗಳನ್ನು ಹಚ್ಚಿದ.

ಈ ಪರಿಚಿತನು ಏಕೆ ಆ ಅಪರಿಚಿತನ ಜೊತೆಯಲ್ಲಿ ಬರುವುದು!

"ಏನು ಮಾಡಲಿ ಸಾರ್! ನನಗೂ ನಾಟಕದವರೆಂದರೆ ಜೀವ" ಎಂದು ಒಂದುಕ್ಷಣ ಕಣ್ಣುಗಳನ್ನು ಮುಚ್ಚಿಕೊಂಡ ಧ್ಯಾನಸ್ಥನಾದಂತೆ. ಹೌದು ತನಗೆ ನಾಟಕದ ಕಲಾವಿದರೆಂದರೆ ಪಂಚಪ್ರಾಣ. ತನ್ನ ತಂದೆ ಡಪ್ಪಿನಾಟಗಳಿಗೆ ಹಾರ್ಮೊನಿಯಂ ನುಡಿಸುತ್ತಿದ್ದನಂತೆ, ಬಹುಕಾಲದ ಅದಕ್ಕೆ ತುಕ್ಕು ಹಿಡಿದು ತನ್ನ ಮನೆಯ ಮೂಲೆಯಲ್ಲಿರುವುದಂತೆ, ತನ್ನ ತಂದೆಯಂತೆಯೇ ತಾನು, ವಾಗಿಲಿಗೆ ಅತಿಥಿಗಳ ರೂಪದಲ್ಲಿ ಆಗಮಿಸುವ ನಾಟಕ ಕಲಾವಿದರನ್ನು ಹುಡುಕಿ ಭೆಟ್ಟಿ ಮಾಡುವುದು, ಸಾಲ ಮಾಡಿಯಾದರೂ ಅವರನ್ನು ಸತ್ಕರಿಸುವುದು ತನ್ನ ಹವ್ಯಾಸ. ಜಲಂಧರನೆಂಬ ಕಲಾವಿದನನ್ನೂ ಹಾಗೆಯೇ ತಾನು ಹಚ್ಚಿಕೊಂಡಿರಬಹುದೆಂದು ಭಾವಿಸಿದೆ. ಪುನಃ ಹೇಳಿದ "ಆದರೆ ಅವನ ಮನಸ್ಸು ಹೂವಿನಂತೆ ಮೃದು ಸಾರ್, ಅವನು ಸುಳ್ಳು ಹೇಳಿರಲಾರ, ನೀವೊಮ್ಮೆ ಅವನನ್ನು ನೋಡಿದಿರಿ ಎಂದರೆ ತಿಳಿಯುತ್ತದೆ, ಹಾಗಿದ್ದಾನೆ ಅವನು!"

ಕೆಲವೇ ಕೆಲವು ಮಾತುಗಳಲ್ಲಿ ಆ ಅಪರಿಚಿತನನ್ನು ನನ್ನೊಳಗೆ ಮೂರ್ತೀಕರಿಸಿದ. ಅವನ ಬಗ್ಗೆ ಸಹಜ ಕುತೂಹಲ ತಳೆದೆ, ಅವಕಾಶ ನೀಡಿದ್ದಲ್ಲಿ ಇನ್ನೇನು ತಾನು ಹೇಳಲಿದ್ದನೋ! ಏನನ್ನೋ ಪ್ರಸ್ತಾಪಿಸುವ ಸಲುವಾಗಿ ನನ್ನ ಕಡೆ ನೋಡುತ್ತ ಉಗುಳು ನುಂಗಿದ. ನನಗೋ ಕಾದಂಬರಿಯನ್ನು ಕೈಗೆತ್ತಿಕೊಳ್ಳುವ ಅವಸರ. ಒಮ್ಮೆ ಅವನ ಕಡೆಗೂ ಇನ್ನೊಮ್ಮೆ ಟೇಬಲ್ ಮೇಲಿದ್ದ ಹಾಳೆಗಳ ಕಡೆಗೂ ದೃಷ್ಟಿ• ಹಾಯಿಸಿದೆ. ಅಷ್ಟರಲ್ಲಿ ಅಂಗಳದಲ್ಲಿ ಕಾಣಿಸಿಕೊಂಡವನು ಮಟಕಾ ನಂಬರುಗಳಿಗಾಗಿ ತಡಕಾಡುವ ನಾದಿರ ಗೋವಿಂದ, ಆಡಲಿರುವ ಸಂಖ್ಯೆಗಳಿಗಾಗಿ ತನ್ನ ಕಣ್ಣುಗಳಿಂದ ಏನು ಸನ್ನೆ ಮಾಡಿದನೆಂಬುದು ತಿಳಿಯದು. ಆಡದಿದ್ದರೂ ಆಟಕ್ಕೆ ಸಂಬಂಧಿಸಿದ ಅಂಕೆಗಳನ್ನು ಹೇಳುವ ಸಲುವಾಗಿ ಶೇಷಣ್ಣ ಮೆಲ್ಲಗೆ ಎದ್ದು ಅಲ್ಲಿಂದ ಹೊರಟ.

ಅದುವರೆಗೆ ಅವನ ಸಂಗಡ ಮಾತಾಡುತ್ತಿದ್ದೆನಾದರೂ ನನ್ನ ಗಮನವೆಲ್ಲ ನನ್ನ ಅಂತರಂಗದ ಕಡೆಗೇ ಇತ್ತು. ಶ್ಮಶಾನದ ಅಂಚನ್ನು ತಲುಪಿದ್ದ ದಯಾನಂದ ಕಥೆಗಾರನಾದ ನನ್ನ ಕಡೆ ಆರ್ತತೆಯಿಂದ ನೋಡುತ್ತಿದ್ದ, ತಾನು ಪೋಲಿಸರ ಕೈಗೆ ದೊರಕಿ ಚಿತ್ರಹಿಂಸೆ ಅನುಭವಿಸುವುದೋ! ಅಥವಾ ನೇರವಾಗಿ ನೀವಿರುವ ವಾಗಿಲಿಗೆ ಬರಲೋ ಎಂದು ಅಂಗಲಾಚುತ್ತಿದ್ದ. ಓಹ್ ನನ್ನ ಕಾದಂಬರಿಯ ನಿರ್ಣಾಯಕ ಪಾತ್ರವೇನಾದರು ಪೋಲಿಸರ ಕೈಗೆ ದೊರಕಿದರೆ! ಪಾತ್ರಕ್ಕಿಂತ ಅದರ ಸೃಷ್ಟಿಕರ್ತನಾನದ ನನಗೇ ಭಯವಾಯಿತು. ಕಾರಿರುಳನ್ನು ಸುರಿವ ಮಳೆಯನ್ನು ಕೆಸರನ್ನು ಪೋಲಿಸ್ ನಾಯಿಗಳನ್ನು ಲೆಕ್ಕಿಸದೆ ಅವನು ಓಡುತ್ತಲೇ ಇರಬೇಕು, ಅದೂ ನೆನಪಿನ ರೂಪದಲ್ಲಿರುವ ತನ್ನ ಪ್ರೀತಿಯ ಹೆಂಡತಿ ಲಕ್ಷ್ಮಿಯ ಕಳೇಬರದೊಂದಿಗೆ. ಈಗ ತಾನು ನಿಂತಿರುವುದು ನಗರೂರು ಹೊರವಲಯದಲ್ಲಿರುವ ಚೌರಸ್ತಾದಲ್ಲಿ! ನಾಲ್ಕು ರಸ್ತೆಗಳಿರುವುದು ನಾಲ್ಕು ಊರುಗಳಿಗಭಿಮುಖವಾಗಿ. ತಪ್ಪಿಸಿಕೊಳ್ಳಲು ತಾನು ಯಾವ ರಸ್ತೆಯನ್ನು ಆಯ್ದುಕೊಳ್ಳಲಿ ಕಥೆಗಾರರೆ ಎಂದು ಕೇಳಿದಂತೆ ಭಾಸವಾಯಿತು. ಯಾವ ರಸ್ತೆಯನ್ನು ಯಾಕೆ! ನೇರವಾಗಿ ವಾಗಿಲಿಗೆ ಬಂದುಬಿಡು ಮಹರಾಯ, ಪೋಲಿಸರ ವಾಸನೆ ಇಲ್ಲದ ಏಕೈಕ ಗ್ರಾಮವೆಂದರೆ ಇದೇ ಕಣೊ, ಶರಭನಂಥ ಸುಪಾರಿ ಕೊಲೆಗಾರನ ಆಶ್ರಯದಾತನೆನಿಸಿರುವ ನಾನು ಎಡಪಂಥೀಯ ಕೊಲೆಗಾರನಾದ ನಿನಗೆ ಆಶ್ರಯ ಕಲ್ಪಿಸುವುದಿಲ್ಲವೆ ಎಂದೆ. ಹಾಗಿದ್ದರೆ ಹಾಳೆ ಪೆನ್ನು ಕೈಗೆತ್ತಿಕೊಂಡು ನನ್ನನ್ನು ಬರಮಾಡಿಕೊಳ್ಳಿರಿ ಎಂದು ನುಡಿದಂತೆನಿಸಿತು. ಆತುರಾತುರತೆಯಿಂದ ಹಸ್ತಪ್ರತಿಯನ್ನು ಪುನಃ ಕೈಗೆತ್ತಿಕೊಂಡೆ. ಅಲ್ಲಿಂದ ತಪ್ಪಿಸಿಕೊಂಡು ಓಡಿದ ದಯಾನಂದ ತಲುಪುವುದು ವಾಗಿಲಿಯನ್ನು! ವಾಗಿಲಿಯಲ್ಲಿನ ಪರಶುರಾಮನದು ಕೇವಲ ಪೋಷಕ ಪಾತ್ರ ಮಾತ್ರ, ಅದನ್ನು ವಿಜೃಂಭಿಸಿದರೆ ಕಥೆಯ ನಿರೂಪಕನನ್ನೆಲ್ಲಿ ಅಳವಡಿಸುವುದು! ಅದು ನಾನಾಗುವುದೋ, ಬೇರೆ ಇನ್ಯಾರೋ! ಗೊಂದಲ ಸೃಷ್ಟಿಯಾಯಿತು. ಅದಕ್ಕೆ ಅಡ್ಡಗಾಲು ಹಾಕಿದ್ದು ವಾಗಿಲಿಗೆ ಆಗಮಿಸಿರಲಿರುವುದು ಎನ್ನಲಾಗುವ ನಾಟಕ ಕಂಪನಿಯೂ, ಅದರ ಮಾಲಕನೆನ್ನಲಾಗುವ ಜಲಂಧರನೂ! ಪರಿಚಯಿಸಿಕೊಳ್ಳುವುದರ ಮೂಲಕ ತನಗೂ ನಿಮ್ಮ ಕಾದಂಬರಿಯೊಳಗೆ ಯಾವ ಸ್ಥಾನವನ್ನಾದರೂ ಕಲ್ಪಿಸಿ ಎಂದು ಅಂಗಲಾಚುತ್ತಿರುವನೆಂದುಕೊಂಡೆ. ಅರೆ ಹೌದಲ್ಲವೆ! ಪನ್ನಂಗಧರ ಎಂಬ ಪಾತ್ರವನ್ನು ಅಳವಡಿಸಿದಲ್ಲಿ ಕಾದಂಬರಿಗೆ ಹೊಸತಿರುವು ದೊರಕೀತು! ಮೊದಲು ಅವನೊಂದಿಗೆ ಒಡನಾಡುವುದು ಮುಖ್ಯ. ಅಪರಿಚಿತರನ್ನು ಪರಿಚಿತನನ್ನಾಗಿಸುವಲ್ಲಿ ಪರಿಚಿತರನ್ನು ಅಪರಿಚಿತರನ್ನಾಗಿಸುವಲ್ಲಿ ನಿಷ್ಣಾತನೆನಿಸಿರುವ ಶೇಷಣ್ಣ ಆತನೊಂದಿಗೆ ಬರುವುದು ಇಂದೋ ನಾಳೆಯೋ! ಆದಷ್ಟು ಬೇಗನೆ ಅವನನ್ನು ಭೆಟ್ಟಿ ಮಾಡಿ ಪೂರ್ವಾಪರ ಆಲಿಸಬೇಕೆಂದು ತಹತಹಿಸಿದೆ. ಭೆಟ್ಟಿಯಾಗುವ ಸ್ಥಳಯೋಗವನ್ನು ಅಲಕ್ಷಿಸುವಂತಿಲ್ಲ, ಅತಿಥಿಗಳನ್ನು ಕುಟುಕಲು ಹೊಂಚಿರುವ ಚೇಳುಗಳಿರುವ ಮನೆಗಿಂತ ಶಾಲೆ ಎಂಬ ಬಯಲುರಂಗಮಂದಿರವೇ ಮೇಲು! ಅದೂ ಸಮಸ್ತರ ಸಮಕ್ಷಮದಲ್ಲಿ ಇನ್ನೂ ಮೇಲು! ಆದರೆ ಅವನು ತನ್ನೊಳಗಿನ ನಿಗೂಢ ವಿಷಯಗಳನ್ನು ಪ್ರಸ್ತಾಪಿಸುವನೋ ಇಲ್ಲವೋ ಎಂಬ ಆತಂಕ ಶುರುವಾಯಿತು. ಏನೋ ಅರ್ಥವಾಗದ ಗೊಂದಲ! ಆದರೆ ಅದುವರೆಗೆ ನೇಪಥ್ಯಕ್ಕೆ ಜಾರಿದ್ದ ಶರಭ ಕೂಡಲೆ ನೆನಪಾದ, ದಯಾನಂದ ಎಂಬ ಕಾಲ್ಪನಿಕ ಪಾತ್ರ ಮುಖ್ಯವೋ, ನನ್ನಂಥ ನೈಜಪಾತ್ರ ಮುಖ್ಯವೋ ಎಂದು ಹಕ್ಕೊತ್ತಾಯ ಮಾಡಲಾರಂಭಿಸಿದ. ಹೌದು ಕಾಲ್ಪನಿಕ ಪಾತ್ರಗಳ ಜಾಯಮಾನವೇ ಬೇರೆ, ನೈಜಪಾತ್ರಗಳ ಅನನ್ಯತೆಯೇ ಬೇರೆ! ಆ ಎರಡೂ ವಿಭಿನ್ನದೃವಗಳನ್ನು

ಸಂಭವನೀಯ ಕಾದಂಬರಿಯೊಳಗೆ ಸಮೀಕರಿಸುವುದು ಸರಿಯಲ್ಲವೆಂದುಕೊಂಡೆ. ಅವೆರಡೂ ಅನುಪಸ್ಥಿತಿಯಲ್ಲಿರುವ ಪಾತ್ರಗಳೆ, ದಯಾನಂದನನ್ನು ಬದಿಗಿರಿಸಿದ ಮನಸ್ಸು ಶರಭನ ನೆನಪನ್ನು ಬೇಟೆಯಾಡಲಾರಂಭಿಸಿತು. ಅರೆ ಹೌದಲ್ಲ! ಈಗೆಲ್ಲಿರಬಹದು ತಾನು! ಪರಶುರಾಮ ತೋರಿಸುತ್ತಿರುವ ಹಾದಿಯಲ್ಲಿ ತಾನಿರುವನೋ! ಅಥವಾ ಅವನು ತೋರಿಸುತ್ತಿರುವ ಹಾದಿಯಲ್ಲಿ ಪರಶುರಾಮನಿರುವನೋ! ಒಟ್ಟಾರೆ ತಾವಿಬ್ಬರೂ ನಡೆಯಲು ಆಯ್ಕೆ ಮಾಡಿಕೊಂಡಿರುವ ಹಾದಿ ಒಂದೆಯೆ! ಅವರಿಬ್ಬರೆಲ್ಲಿರಬಹುದು! ತಮಗೆ ಆಶ್ರಯ ಕಲ್ಪಿಸಬಹುದಾದ ಯಾವ ಊರನ್ನು ತಲುಪಿರಬಹುದು! ಯಾರನ್ನು ಭೆಟ್ಟಿ ಮಾಡಿರಬಹುದು! ಭೆಟ್ಟಿ ಮಾಡಿರುವ ವ್ಯಕ್ತಿಯನ್ನೇನಾದರೂ ತಾವು! ಒಂದು ಕ್ಷಣ ಭಯದಿಂದ ನಡುಗಿದೆ.

ಸಾರ್ತ್ರೆಯ ಸೇಂಟ್ ಜೆನೆಟ್ ಕೃತಿಯ ಸಮಕ್ಷಮ ಆ ಕ್ಷಣ ಕಿರ್ಕ್‌ಡಗ್ಲಾಸ್‌ನ ಭಯಾನಕ ಅಭಿನಯದ ಟಫ್ ಗೈಸ್ ಪುನಃ ನೆನಪಾಯಿತು, ಅದೋ ಹಳೆಯ ಕಪ್ಪು ಬಿಳುಪಿನ ಚಿತ್ರ, ಅದರಲ್ಲಿ ಇಬ್ಬರು ಕುಖ್ಯಾತ ಅಪರಾಧಿಗಳು ಜೈಲಿನಿಂದ ತಪ್ಪಿಸಿಕೊಂಡು ಆಶ್ರಯ ಪಡೆಯುವ ಹಳ್ಳಿ! ಅದು ಅಮಯಾಕರಿಂದಲೂ ನಿರುಪದ್ರವಿಗಳಿಂದಲೂ.. ಅವರು ಅಲ್ಲಿ ಸೃಷ್ಟಿಸುವ ಭಯಾನಕ ವಾತಾವರಣವೋ! ನೆನಪಾಗಿ ಬೆವೆಯಲಾರಂಭಿಸಿದೆ.

++++

ಮಾರನೆ ದಿವಸ ರವಿವಾರ. ಶಾಲೆಗೆ ಹೋಗುವ ಪ್ರಮೇಯವಿರಲಿಲ್ಲ, ತೆಂಕಣಕ್ಕಿದ್ದ ಪುಟ್ಟ ಕಿಟಿಕಿಯಿಂದ ತೂರಿ ಹಿಂಸಿಸುತ್ತಿರುವ ವೈಶಾಖದ ಬಿಸಿಗಾಳಿ, ಅದಕ್ಕೆ ಚದುರುತ್ತಿರುವ ಹಸ್ತಪ್ರತಿಯ ಹಾಳೆಗಳು, ಅದರ ಮೇಲೆ ಕಲ್ಲಿರಿಸಿದೆ. ಮಧ್ಯಾಹ್ನದ ಮಂಪರು ಬೇರೆ, ಚಹಾ ತಯಾರಿಸಲೆಂದು ಅಡುಗೆ ಮನೆಯನ್ನು ಪ್ರವೇಶಿಸಿದೆ, ಕರ್ಮಕ್ಕೆ ಪಾತ್ರೆಯ ತಳದಲ್ಲಿದ್ದ ಹಾಲು ಕೆಟ್ಟಿತ್ತು, ಅದೇ ತಾನೆ ಗವಾಕ್ಷಿಯಿಂದ ಬೆಕ್ಕು ಕೆಳಕ್ಕೆ ಜಿಗಿಯಿತು, ಕಾಲ ಸಂದೊಳಗೆ ಮರ್ಧಿಸುತ್ತ ಮ್ಯಾವ್‌ಗುಟ್ಟಲಾರಂಭಿಸಿತು, ಚೇಳು ಮತ್ತಿತರ ಕ್ರಿಮಿಕೀಟಗಳ ಉಪಟಳದಿಂದ ಕಾಪಾಡುವ ಅದೆಂದರೆ ನನಗೆ ತುಂಬ ಪ್ರೀತಿ, ಅದರೆದರು ಹಾಲಿನ ಪಾತ್ರೆಯನ್ನಿರಿಸಿ ಪುನಃ ಸ್ವಸ್ಥಾನ ಸೇರಿಕೊಂಡೆ. ಒಂಟಿತನ ನಿವಾರಿಸಿಕೊಳ್ಳುವ ಸಲುವಾಗಿ ಕೋಣೆಯೊಳಗೆ ಶತಪಥ ಹೆಜ್ಜೆ ಹಾಕಿದೆ, ಬಳಿಕ ಮನೆಯ ಹೊಸ್ತಿಲು ದಾಟಿ ಅಂಗಳದಲ್ಲಿ ನಿಂತೆ, ನಿರ್ಮಾನುಷ ಬೀದಿಯನ್ನು ಅಮೂಲಾಗ್ರ ನೋಡಿದೆ, ಅಲ್ಲೊಂದಿಲ್ಲೊಂದು ಭಾರೀ ಎತ್ತರದ ಮನೆಗಳು, ಒಂದೆರಡು ಮಣ್ಣಿನ ಮನೆಗಳು, ನೋಡಿ ಸಾಂತ್ವನ ಪಡೆಯಲೆಂದರೆ ನರಹುಳದ ಸುಳಿವಿಲ್ಲ. ಶ್ಮಶಾನ ಸದೃಶ ಮೌನ! ಶರಭನಿದ್ದಿದ್ದಲ್ಲಿ ಮೌನಕ್ಕೆ ಶ್ಮಶಾನದ ಕಳೆ ಪ್ರಾಪ್ತವಾಗುತ್ತಿರಲಿಲ್ಲ, ಅವನಿದ್ದಲ್ಲಿ ಪೋಲಿಸ್ ಅಲಿ ವಕೀಲ ಜೀವೋತ್ತಮರಾವ್, ವನಜ ಆಕೆಯ ತಂದೆ ಊಳೂರು ಪುರುಷೋತ್ತಮರೆಡ್ಡಿ ವಗೈರೆ ವಗೈರೆ ಸ್ಮರಣಿಕೆಗಳ ಕಲಸು ಮೆಲೋಗರ. ಇನ್ನೇನು ಇವರನ್ನೆಲ್ಲ ಮರೆತೆ ಎನ್ನುವಷ್ಟರಲ್ಲಿ ನೆನಪಿನ ತಲಬಾಗಿಲಿಗೆ ಧಾವಿಸಿದೆ, ಬಿಚ್ಚಿಕೊಳ್ಳಲಾರಂಭಿಸಿದ ಅಪ್ಪ ಬರೆದಿರುವ ಪತ್ರಗಳು!

ಅವುಗಳ ಪೈಕಿ ಒಂದರಲ್ಲಿ ತಾನು.."ಶತ್ರುವಿನ ಶೇಷ ನಿವಾರಿಸಿಕೊಳ್ಳುವ ಸಲುವಾಗಿ ಹಣದ ಅಗತ್ಯವಿದೆ ಮಗನೇ, ಕೋರ್ಟಿಗೆ ಅಪೀಲ್ ಹೋದರೆ ಮಾತ್ರ ಕೇಸ್ ನಮ್ಮಂತಾಗುವುದು, ಹೊಸಪೇಟೆಯಲ್ಲಿರುವ ಲಾಯರ್ ತಟ್ಟಿ ರಂಗರಾವ್‌ಗೆ ಕೊಡುವ ಫೀಜ್ ಬಾಕಿ ಇದೆ, ಅಲಸಂದಿ ಕಳ್ಳನನ್ನು ಜೈಲಿಗೆ ಕಳಿಸದಿದ್ದಲ್ಲಿ ನಾನು ಬದುಕಿದ್ದೇನು ಸಾರ್ಥಕ! ಉಪವಾಸವಿದ್ದರೂ

ಹುಲಿ ಹುಲ್ಲು ತಿನ್ನುವುದಿಲ್ಲವೆನ್ನುವುದನ್ನು ಮರೆಯದಿರು. ಈ ಪತ್ರ ಮುಟ್ಟಿದ ಕೂಡಲೆ ಐದುನೂರು ಮೊನಿಯಾರ್ಡರ್ ಮಾಡು. ಅದರಿಂದ ಮಗನಾದ ನೀನು ತಂದೆಯಾದ ನನ್ನ ಮರ್ಯಾದೆಯನ್ನು ಕಾಪಾಡಿದಂತಾಗುವುದು. ಕಥೆಗಳನ್ನು ಬರೆಯುವ ನಿನ್ನನ್ನು ಹೆತ್ತಿರುವ ನಾನೆಂಥ ಕಥೆಗಾರ ಎಂಬುದನ್ನು ಮರೆಯಬೇಡ" ಎಂದು ಮುಂತಾಗಿ ಅಲವತ್ತುಕೊಂಡಿದ್ದ.

ತನ್ನ ಇನ್ನೊಂದು ಪತ್ರದಲ್ಲಿ ಅದೇ ಅಪ್ಪ– "ನನ್ನ ಪ್ರೀತಿ ಮಗನೇ, ಈ ಹೆತ್ತವನ ಮರ್ಯಾದೆ ಮಣ್ಣುಪಾಲು ಮಾಡುವ ಇರಾದೆ ನಿನಗಿರಲಾರದು. ನನ್ನ ಹಾಗೆ ನೀನು ಅಲ್ಪವಿದ್ಯಾವಂತನಾಗಲೀ, ಭೂಮಿಯಲ್ಲಿ ಮೈಬಗ್ಗಿಸಿ ದುಡಿಯುವವನಾಗಲೀ ಅಲ್ಲವೇ ಅಲ್ಲ, ನೀನೆಷ್ಟಿದ್ದರೂ ಸರ್ಕಾರಿ ಸಂಬಳವನ್ನು ಅನುಭವಿಸುತ್ತಿರುವವನು. ವೇಷಭೂಷಣ ಕಣ್ಣಿಗೆ ಬಣ್ಣದ ಚಾಳೇಸು ಮುಖಕ್ಕೆ ಸ್ನೋ ಪೌಡರು ಹೊತ್ತು ಹೊತ್ತಿಗೆ ತಿಂಡಿ ಊಟ ಇತ್ಯಾದಿ ಖರ್ಚುಗಳಿರುತ್ತವೆ ಎನ್ನುವುದು ನನಗೂ ಗೊತ್ತು. ಈ ಎಲ್ಲಾ ಖರ್ಚುಬಾಬತ್ತುಗಳಿಗೆ ಸಂಬಳ ಸಾಲದು ಎಂದ ಮೇಲೆ ನೀನು ನನಗೆ ಕಳಿಸುವುದೆಲ್ಲಿ ಸಾಧ್ಯ! ಅದಕ್ಕೆ ನನ್ನದೊಂದು ಸಲಹೆ ಇದೆ. ಅದೆಂದರೆ ಬರುವ ಮಹಾನವಮಿಗೆ ನಿನಗೆ ಇಪ್ಪತ್ತೈದು ತುಂಬಿ ಇಪ್ಪತ್ತಾರಲ್ಲಿ ಬೀಳುವುದು, ಈ ವಯಸ್ಸಿನಲ್ಲಿ ನಾನು ನಿನಗೆ ತಂದೆಯಾಗಿದ್ದೆ, ಅಲ್ಲದೆ ಇನ್ನಿಬ್ಬರು ಮಕ್ಕಳಿಗೂ. ಕೇವಲ ಶಾಲಾಮಾಸ್ತರನಾಗಿದ್ದಲ್ಲಿ ನಿನ್ನ ಮಕ್ಕಳೂ ಎರಡನೆ ಮೂರನೆ ತರಗತಿಗಳಲ್ಲಿ ಓದುತ್ತಿದ್ದವೇನೋ! ಅವು ನನ್ನನ್ನು ಅಜ್ಜಾ ಎಂದು ಬಾಯಿ ತುಂಬ ಕರೆಯುತ್ತಿದ್ದವೇನೋ! ಆದರೆ ನೀನು ಕಥೆಗಾರನಾಗಿರುವುದರಿಂದ ಅಪ್ಪ ಎಂದು ನೀನೂ, ಅಜ್ಜಾ ಎಂದು ನಾನೂ ಕರೆಸಿಕೊಳ್ಳುವ ಸೌಭಾಗ್ಯ ನಮ್ಮಿಬ್ಬರಿಗೂ ಇಲ್ಲ. ಆದರೆ ಕಾಲ ಇನ್ನೂ ಮಿಂಚಿಲ್ಲ. ಇದೇ ವರ್ಷ ವಿವಾಹಯೋಗವಿರುವುದಾಗಿ ನಿನ್ನ ಜಾತಕದಲ್ಲಿ ನಿಚ್ಚಳವಾಗಿರುವುದು. ಕೆಂಚನಳ್ಳಿಯ ಮಲ್ಲಪ್ಪ ಗೊತ್ತಿರಬೇಕಲ್ಲವೆ! ಅದೇ ಪಂಚಾಯ್ತಿಬೋರ್ಡ್ ಮೆಂಬರ್ರು! ಅದೇ ಎಮ್ಮೆಲ್ಲೆ ಸಿದ್ದಪ್ಪಗೆ ಬಲಗೈಯಾಗಿರುವನಲ್ಲ ಆ ಮಲ್ಲಪ್ಪ. ಆತಗೆ ಮಗಳಿದ್ದಾಳೆ, ಹೆಸರು ಪಾರ್ವತಿ, ಹೈಸ್ಕೂಲು ಕಟ್ಟೆ ಹತ್ತಿಲ್ಲವೆಂದ ಮಾತ್ರಕ್ಕೆ ಆ ಹುಡುಗಿ ನಿರಕ್ಷರಕುಕ್ಷಿಯಲ್ಲ, ಸಹಿ ಮಾಡುವಷ್ಟರಮಟ್ಟಿಗೆ ಅಕ್ಷರಾಭ್ಯಾಸ ಮಾಡಿದ್ದಾಳೆ. ಅಷ್ಟೇನೂ ಎತ್ತರಕ್ಕಿರದಿದ್ದರೂ ನಿನ್ನ ಭುಜಕ್ಕೆ ಬರುತ್ತಾಳೆ, ಮೈಬಣ್ಣ ಬಿಳಿಯಲ್ಲದಿದ್ದರೂ ಶುದ್ದ ಕಪ್ಪಲ್ಲ, ಎಣ್ಣೆ ಬಣ್ಣ. ಮೂಗು ನಿನಗಿರುವಂತೆ ನೀಳನಾಸಿಕವಲ್ಲ. ಆದರೆ ಆಕರ್ಷವಾಗಿದ್ದಾಳೆ. ಎಲ್ಲ ಆಕರ್ಷಣೆಗಿಂತ ಮುಖ್ಯವಾದುದೆಂದರೆ ಮಲ್ಲಪ್ಪಗೆ ಮಗಳೆಂದರೆ ಆಕೆಯೆ ಮಗನೆಂದರೂ ಆಕೆಯೆ. ಪಿತ್ರಾರ್ಜಿತವಾಗಿ ಬಂದಿರುವ ನೂರಾರೆಕರೆ ಭೂಮಿ, ಜೊತೆಗೆ ರಾಜಕಾರಣದ ನೆರವಿನಿಂದ ಲಕ್ಷಗಟ್ಟಲೆ ಹಣ ಸಂಪಾದಿಸಿರುವ ದೊಡ್ಡಕುಳ ಮಲ್ಲಪ್ಪ. ಇನ್ನೊಂದು ಮುಖ್ಯಸಂಗತಿ ಎಂದರೆ ಆತಗೆ ಈಗಾಗಲೆ ಎರಡು ಸಲ ಹಾರ್ಟ್ ಆಪರೇಷನ್ನಾಗಿದೆ. ಸರ್ಕಾರಿ ನೌಕರಿ ಅನುಭವಿಸುವವರಿಗೆ ತನ್ನ ಮಗಳನ್ನು ಕೊಡುವ ಆಸೆ ಆತನಿಗೆ. ನಿನ್ನನ್ನು ಎಂದೋ ನೋಡಿರುವನಂತೆ. ನಿನಗೆ ತನ್ನ ಮಗಳನ್ನು ಕೊಡಲು ಆತ ತುದಿಗಾಲ ಮೇಲೆ ನಿಂತು ಕಾಯುತ್ತಿದ್ದಾನೆ. ಕಣ್ಮುಚ್ಚಿ ಆ ಹುಡುಗಿಯನ್ನು ಮದುವೆಯಾದಲ್ಲಿ ಜೀವನಪರ್ಯಂತ ನೀನೂ ಸುಖವಾಗಿರುತ್ತಿ, ನಾವೂ ಆ ಸ್ಥಿರಚರ ಆಸ್ತಿ ಸಹಾಯದಿಂದ ಅಲಸಂದಿ ಕಳ್ಳನಿಗೆ ಜೀವಾವಧಿ ಶಿಕ್ಷೆಯನ್ನು ಕರುಣಿಸಬಹುದು. ಐದಾರು ಊರುಗಳನ್ನು ರಾಜರಂತೆ ಆಳಿ ಶಿವನ ಪಾದವನ್ನು ನೆಮ್ಮದಿಯಿಂದ ಸೇರಬಹುದು. ಖರ್ಚಿನದಲ್ಲದ ನನ್ನೀ ಆಸೆಯನ್ನು ಈಡೇರಿಸು. ಒಂದೆರಡು ದಿವಸ ರಜೆ ಹಾಕಿ ಬಂದುಬಿಡು ಊರಿಗೆ. ಕಾರನ್ನು ಬಾಡಿಗೆ ಮಾಡಿಕೊಂಡು ಕೆಂಚನಳ್ಳಿಗೆ ಹೋಗಿ ಹುಡುಗಿಯನ್ನು ನೋಡಿಕೊಂಡು ಬರೋಣ"

ಮತ್ತೊಂದು ಪತ್ರದಲ್ಲಿ ಮತ್ತೊಂದು. ಮಗುದೊಂದು ಪತ್ರದಲ್ಲಿ ಮಗುದೊಂದು ಏಳರ ಚಳಿ ಹುಟ್ಟಿಸುವಂಥ ಒಕ್ಕಣಿಕೆಗಳು! ಈಗಾಗಲೆ ಬಂದಿರುವ ಇನ್ನೂ ಬರುತ್ತಲೇ ಇರುವ ಪತ್ರಗಳಲ್ಲಿನ ಸಾರಾಂಶ ಒಂದೆ. ಅದು ಅಲಸಂದಿ ಕಳ್ಳನನ್ನು ಜೈಲಿಗೆ ಕಳಿಸುವುದು. ಆ ತನ್ನ ಕರ್ಮಕಾಂಡಕ್ಕೆ ತನ್ನ ಮಗನಾದ ನನ್ನನ್ನು ಆಯುಧವನ್ನಾಗಿ, ಮೂಲಬಂಡವಾಳವನ್ನಾಗಿ ಬಳಸಿಕೊಳ್ಳುವುದು. ಆಹ್ಹಾ ಅಪ್ಪನ ಕ್ರೌರ್ಯವೆ! ಆಹ್ಹಾ ಶತ್ರುಗಳನ್ನು ಸೃಷ್ಟಿಸಿಕೊಳ್ಳುವುದಕ್ಕಾಗಿ ಸೃಷ್ಟಿಸಿಕೊಂಡ ಶತ್ರುಗಳನ್ನು ಜೈಲಿಗೆ ಕಳಿಸುವುದಕ್ಕೆಂದೇ ಭೂಮಿಗೆ ಅವತರಿಸಿರುವ ಅಪ್ಪನ ಪರಾಕ್ರಮವೆ! ತನ್ನ ದುಡಿಮೆಯ ಪ್ರತಿಯೊಂದು ಕಿಲುಬು ಕಾಸನ್ನು ಕೋರ್ಟುಗಳಿಗೆ, ಅಲ್ಲಿನ ಪರಾವಲಂಬಿ ನ್ಯಾಯವಾದಿಗಳಿಗೆ, ತನ್ನ ಹೊಗಳುಬಂಟರುಗಳಿಗೆ ಖರ್ಚು ಮಾಡುವ ಅಪ್ಪನ ಔದಾರ್ಯವೆ!

ಅಪ್ಪನ ನರನಾಡಿಗಳಲ್ಲಿ ಪ್ರವಹಿಸುತ್ತಿರುವ ಕೋಪ ಸಿಟ್ಟು ಸೆಡವು ಸೇಡು ಇವೆಲ್ಲ ಸ್ವಯಾರ್ಜಿತವೋ! ಪಿತ್ರಾರ್ಜಿತವೋ! ಬಳ್ಳಾರಿ ಹಗರಿಸಾಲಿನವರ ಜಾಯಮಾನವೇ ಹಾಗೆ, ತಾವೂ ಸುಖವಾಗಿರುವುದಿಲ್ಲ, ನೆರೆಹೊರೆಯವರನ್ನೂ ಸುಖ ನೆಮ್ಮದಿಯಿಂದ ಬಾಳಲುಬಿಡುವುದಿಲ್ಲ. ಇದು ಬಳ್ಳಾರಿ ಹಗರಿಸಾಲ ಬದುಕಿನ ಜಾಯಮಾನ. ಅಪ್ಪನ ತಂಟೆಗೆ ಹೋಗುವುದೆಂದರೆ ಹೆಜ್ಜೇನ ಗೂಡಿನ ತಂಟೆಗೆ ಹೋಗುವುದೆಂದೇ ಅರ್ಥ! ಇದು ಯಾಕೆ ಅಪ್ಪನ ವಿರೋಧಿಗಳಿಗೆ ಅರಿವಾಗಲಿಲ್ಲ! ಅವರೆಲ್ಲ ತಮ್ಮ ಪಾಡಿಗೆ ತಾವಿದ್ದಿದ್ದಲ್ಲಿ ಎಲ್ಲೋ ಇರುವ ವಕೀಲರು ಸಿರಿವಂತರಾಗುತ್ತಿರಲಿಲ್ಲವೇನೊ! ಹ್ಹಾ ಅಂದ ಹಾಗೆ ಅಪ್ಪನ ಅಹರ್ನಿಶಿ ಶ್ರಮದಿಂದಾಗಿ ಬಳ್ಳಾರಿ ಸೆಂಟ್ರಲ್ ಜೈಲಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಮೂಗ ಕೇಸ ಕೊಟ್ರ ನೆನಪಿನಂಗಳದಲ್ಲಿ ಮಿನುಗಿದರು. "ನೀನು ಗಂಡಸಾದರೆ ನನ್ನನ್ನು ಜೈಲಿಗೆ ಕಳಿಸುವಿ" ಎಂದು ನೆನಪು ಮಾತ್ರದಿಂದ ಭ್ರಮೆ ಹುಟ್ಟಿಸುತ್ತಿರುವ ಅಲಸಂದಿ ಕಳ್ಳ ಎಂಬಭಿದಾನಕ್ಕೆ ಪಾತ್ರನಾಗಿರುವ ರಂಗಣ್ಣ! ಒಂದು ಕಾಲದಲ್ಲಿ ಅಪ್ಪನ ನೆರಳಾಗಿ ಬದುಕುತ್ತಿದ್ದ ರಂಗಣ್ಣ! ಕಂಡಾಗಲೆಲ್ಲ "ನೀನು ಕೂಸಿದ್ದಾಗ ನನ್ನೀ ಹೆಗಲ ಮೇಲಿಂದಿಳಿಯುತ್ತಲೇ ಇರಲಿಲ್ಲ ಧಣಿ" ಎಂದು ನನ್ನ ಬಾಲ್ಯವನ್ನು ನೆನಪಿಸುತ್ತಿರುವ ರಂಗಣ್ಣ! ಮೂಗನ ಸಹವಾಸದಿಂದಾಗಿ ಅಪ್ಪನ ವಿರುದ್ಧ ಹಲ್ಲು ಮಸೆಯುತ್ತಿರುವ ರಂಗಣ್ಣನೆಂಬ ಹೆಸರಿನ ಶತ್ರುಶೇಷ! ಆತನನ್ನು ಜೈಲಿಗೆ ಕಳಿಸುವ ಸಲುವಾಗಿ ನಾನು ನನ್ನ ಬೆವರಿನ ಸಿಂಹಪಾಲನ್ನು ಕಳಿಸುವುದೆಂದರೆ! ಯಾವುದೋ ಮುಗ್ದಹೆಣ್ಣನ್ನು ಮದುವೆಯಾಗಿ ಕನ್ಯಾಪಿತೃಗಳ ಸ್ಥಿರಚರ ಆಸ್ತಿಯನ್ನು ಲಪಟಾಯಿಸುವುದೆಂದರೆ! ತಂದೆಯ ಪಾಪದಲ್ಲಿ ಕ್ರೌರ್ಯದಲ್ಲಿ ಪಾಲುದಾರನಾಗುವುದೆಂದರೆ!

ಯೋಚಿಸಲಾರಂಭಿಸಿದಂತೆ ಬಿಸಿಲು ಪ್ರಖರಗೊಂಡಿತು, ಇನ್ನೇನು ತಾನು ಸುಟ್ಟುಭಸ್ಮವಾದೆ ಎಂದು ಭಾವಿಸುವಷ್ಟರಲ್ಲಿ ಎಲ್ಲೋ ನಾಯಿ ಬೊಗಳುತ್ತಿರುವ ಯಾರೋ ಮುಲುಕುತ್ತಿರುವ ಮೈ ಮುರಿಯುತ್ತಿರುವ ಶಪಿಸುತ್ತಿರುವ ಪದವನ್ನು ಗುನುಗುತ್ತಿರುವ ಬಹಿರಂಗದ ಈ ಎಲ್ಲಾ ವಿದ್ಯಮಾನಗಳಿಗಿಂತ ಭೀಕರವಾಗಿ ಅಂತರಂಗದ ಕುರುಚಲು ಕಾಡಲ್ಲಿ ವೃದ್ಧಾಪ್ಯದ ಕಾರಣಕ್ಕೆ ನಿತ್ರಾಣಗೊಂಡಿರುವ ಸಿಂಹದೋಪಾದಿಯಲ್ಲಿ "ಕರುಳ ಕರೆಗೆ ಕಿವುಡಾಗಿರುವ ನೀನೆಂಥ ಮಗನೋ" ಎಂದು ಗರ್ಜಿಸುತ್ತಿರುವ ಅಪ್ಪ! "ನೀನು ಹಣ ಕಳಿಸುವುದರ ಮೂಲಕ ನನ್ನ ಕುಟುಂಬ ಸದಸ್ಯರನ್ನು ಅನಾಥರನ್ನಾಗಿಸಬೇಡ ಧಣಿ, ನಿನ್ನನ್ನು ಎತ್ತಾಡಿಸಿರುವ ಈ ನನ್ನ ಕೈಗಳ ಋಣ ತೀರಿಸುವ ಸಲುವಾಗಿಯಾದರೂ.." ಎಂದು ಕರುಳ ನಂದನದಲ್ಲಿ ಅರಣ್ಯರೋಧಿಸುತ್ತಿರುವ ರಂಗಣ್ಣ! ಈ ನಿನ್ನ ಔರಸ ಸಹೋದರನೆಲ್ಲಿ ಎಂಬ ಪ್ರಶ್ನೆ ಇಲ್ಲದ ನೀನೆಂಥ ಅಣ್ಣನೋ ಎಂದು ಕೇಳುತ್ತಿರುವ ಶರಭನ ನೆನಪು! ಅಯ್ಯೋ ಹಾದಿ ನಡುವೆ

ಮನಸ್ತಾಪ ಹುಟ್ಟಿ ಶರಭನನ್ನು ಪರಶುರಾಮನಾಗಲೀ, ಪರಶುರಾಮನನ್ನು ಶರಭನಾಗಲೀ ಕೊಲೆ ಮಾಡಿದ್ದಲ್ಲಿ ಏನು ಮಾಡುವುದು ಎಂಬ ಉಪದ್ರವಿ ಸಂದೇಹವು!

ಇನ್ನೇನು ನನ್ನ ತಲೆ ಸಿಡಿಯಲಿರುವುದೆನ್ನುವಷ್ಟರಲ್ಲಿ.. ಅಗೋ ಅಲ್ಲಿ, ಅದೇ ಕ್ರಿಷ್ಣಾರೆಡ್ಡಿಯವರ ಹಾಳುಮನೆ ಮತ್ತು ಗೊಲ್ಲರೀರಯ್ಯನ ಮಣ್ಣಿನ ಮನೆಯ ನಡುವೆ ಇರುವ ಬೀದಿಯ ತುದಿಯಲ್ಲಿ ನೆರಳೊಂದು, ಅದರ ಪಕ್ಕದಲ್ಲಿಯೇ ಇನ್ನೊಂದು ನೆರಳು ಕಾಣಿಸಿಕೊಂಡಿತು. ಅದರ ನೇಪಥ್ಯದಲ್ಲಿ ಹೆಜ್ಜೆಯ ಸದ್ದು ಬೇರೆ. ಅರೆ ಅವು ಪುರುಷರವು ಎಂದು ಭಾವಿಸುವಷ್ಟರಲ್ಲಿ ಅವುಗಳ ಪೈಕಿ ಒಬ್ಬ ಶೇಷಣ್ಣ, ಇನ್ನೊಬ್ಬ ಮಾರುವೇಷದಲ್ಲಿರುವ ರಾಜಕುಮಾರ! ನನ್ನನ್ನು ನೋಡಿದೊಡನೆ ಅವರ ನಡಿಗೆ ಹ್ರಸ್ವಗೊಳ್ಳುತ್ತ ಹೋಯಿತು. ಅಷ್ಟರಲ್ಲಿ ಕೆಂಜೆಡೆಪ್ಪ, ರಾಮುಡು, ನಾರಾಣಿಯರ ಮನೆಗಳ ಮೇಲಿಂದಲೋ ಮತ್ತೆಲ್ಲಿಂದಲೋ ನಾಯಿಗಳು ಭೂಮಂಡಳಕ್ಕೆ ಜಿಗಿದು ಹೇಷಾರವಕ್ಕೆ ತೊಡಗಿದವು. ಆ ಸದ್ದಿಗೆ ತಮ್ಮ ತಮ್ಮ ಮನೆಗಳ ಅಗುಳಿ ಸರಿಸುತ್ತ ಇಣುಕಿದವರು, ಇಣುಕಿದಾದ ಬಳಿಕ ನಿಧನಿಧಾನವಾಗಿ ನಡೆಯುತ್ತ ಬಂದವರು, ಬರುಬರುತ್ತಲೇ ನಾಟಕದವ ನಾಟಕದವ ಎಂದು ಗೊಣಗಲಾರಂಭಿಸಿದವರು ಅಮೃತಾಂಜನ್ ಲಚುಮಿರೆಡ್ಡಿ, ಕೊರೆಬೀಡಿಯ ಕರುಣಾಕರರೆಡ್ಡಿ ಮತ್ತು ಬಸನಗೌಡರೇ ಮೊದಲಾದವರು. ಅವರೆಲ್ಲರ ಸಮಕ್ಷಮ ನಿಲ್ಲುವ ಧೈರ್ಯ ಸಾಲದೆ ಒಳಗೆ ಹೆಜ್ಜೆ ಇಟ್ಟ ನನ್ನನ್ನು ಅವರು ಹಿಂಬಾಲಿಸುವ ಮೊದಲು..

++++

ಆತ ಯುವಕ ಮಾತ್ರವಲ್ಲ, ವರ್ಚಸ್ವಿ ಸಹ. ಅದಕ್ಕೆ ನಿದರ್ಶವೆಂದರೆ ಅವರೆಲ್ಲ ತನಗೆ ದಾರಿ ಮಾಡಿಕೊಟ್ಟದ್ದು, ರೆಪ್ಪೆಯಾರಿಸದಂತೆ ನೋಡಿದ್ದು. ಆದರೂ ತಾನು ವಿನಯಪೂರ್ವಕವಾಗಿದ್ದ, ಒಂದು ಹೆಜ್ಜೆಗೆ ರಾಜಾವಿಕ್ರಮಾರ್ಕದ ಭೋಜರಾಜನನ್ನೂ, ಇನ್ನೊಂದು ಹೆಜ್ಜೆಗೆ ದ್ರೌಪದಿ ವಸ್ತ್ರಾಪಹರಣ ನಾಟಕದ ದುಶ್ಯಾಸನನನ್ನೂ, ಮತ್ತೊಂದು ಹೆಜ್ಜೆಗೆ ರಾಣಿ ಚೆನ್ನಮ್ಮ ನಾಟಕದ ಮಲ್ಲಸರ್ಜನನ್ನೂ, ಮಗುದೊಂದು ಹೆಜ್ಜೆಗೆ ಟಿಪ್ಪುಸುಲ್ತಾನ್ ನಾಟಕದ ಹೈದರಾಲಿಯನ್ನೂ ತನ್ನ ದೇಹದಿಂದ ವಿಸರ್ಜಿಸುತ್ತ ಒಳಗೆ ಪ್ರವೇಶಿಸಿ ಒಂದು ಮೂಲೆಯಲ್ಲಿ ಮೈದುಡಿ ಕುಳಿತುಕೊಂಡನು. ಸಹವಂದಿಗರನ್ನು ಅಪ್ಪ, ಅಣ್ಣ, ಧಣಿ, ಸಾಹುಕಾರ, ಅನ್ನದಾತ ಎಂಬ ಗೌರವಪೂರ್ವಕ ಸಂಬೋಧವಾಚಕಗಳನ್ನು ಉಪಯೋಗಿಸಿ ಅಲ್ಲಿದ್ದವರನ್ನು ಮಾತಾಡಿಸಿ ಪುಳಕಗೊಳಿಸಿದನು. ಸಾಹೇಬರೆ, ಸರಸ್ವತಿವರಪುತ್ರರೇ ಎಂದು ನನ್ನನ್ನೂ ಸಹ. ಪರವಾಯಿಲ್ಲ, ಬದುಕುವ ಕಲೆ ರಕ್ತಗತವಾಗಿರುವುದೆಂದುಕೊಳ್ಳುತ್ತ ದಿಟ್ಟಿಸುವ ಪ್ರಯತ್ನ ನಡೆಸಿದೆ, ಸಾಧ್ಯವಾಗಲಿಲ್ಲ. ಎಲ್ಲರೂ ಆತನತ್ತ ರೆಪ್ಪೆಯಾರಿಸದಂತೆ ನೋಡುತ್ತ ಉಗುಳು ನುಂಗುತ್ತಿರುವವರೆ!

ಪಪ್ಪಾಯಿವರ್ಣ, ದುಂಡುಮುಖ, ಹರವಾದ ನೊಸಲು, ನೀಳನಾಸಿಕ, ಹೊಳೆವ ಕಣ್ಣುಗಳು, ಕಾಮನಬಿಲ್ಲಿನೋಪಾದಿಯಲ್ಲಿ ಹುಬ್ಬುಗಳು, ತುಂಬುಗಲ್ಲ, ಕಪ್ಪನೆಯ ನೀಳಕೇಶರಾಶಿ, ಓಲೆಗಳಲಂಕರಿಸಿರುವ ಕಿವಿಗಳು, ಪರಶಿವನ ಕೊರಳನ್ನು ನೆನಪಿಸುವಂತಿರುವ ಕುತ್ತಿಗೆ, ಹರವಾದ ಎದೆ, ತುಂಬುದೋಳುಗಳು, ಒಟ್ಟಾರೆ ಹೇಳುವುದಾದರೆ ಭಸ್ಮಾಸುರನನ್ನು ಕೊಲ್ಲುವ ಸಂದರ್ಭದಲ್ಲಿ ವಿಷ್ಣು ತಾಳಿದ ಮೋಹಿನಿಯ ಅಪರಾವತಾರವೇ ತಾನೆನಿಸಿದ. ಜಲಂಧರ ಎಂಬ ಹೆಸರು ಸೂಕ್ತವೆನ್ನಿಸಲಿಲ್ಲದಿದ್ದರೂ ಶಿವನು ಇಂದ್ರನ ವಿರುದ್ಧ ಪ್ರಯೋಗಿಸಬೇಕೆಂದುಕೊಂಡಿದ್ದ ಕ್ರೋಧಾಗ್ನಿಯನ್ನು ಬೃಹಸ್ಪತಿಯ ಸಲಹೆ ಮೇರೆಗೆ ಲವಣ ಸಮುದ್ರದಲ್ಲಿ ವಿಸರ್ಜಿಸಿದ ಪೌರಾಣಿಕ

ಜಲಂಧರನನ್ನು ಜ್ಞಾಪಿಸಿಕೊಂಡೆ. ಪಾರ್ವತಿಯನ್ನು ಬಯಸುವುದರ ಮೂಲಕ ಶಿವನಿಂದ ಕೊಲೆಯಾದ ಜಲಂಧರ ಎಂಬ ರಾಕ್ಷಸನೂ ನೆನಪಾದನು. ಪೌರಾಣಿಕ ಕಾಲದ ಆ ಜಲಂಧರನೆಲ್ಲಿ! ವರ್ತಮಾನ ಕಾಲದ ಈ ಜಲಂಧರನೆಲ್ಲಿ! ಎಲ್ಲರೂ ಎಷ್ಟು ಹೊತ್ತು ಮೌನದಿಂದಿರಲಾದೀತು! ಎಂದಿನಂತೆ ನನ್ನ ಮನದಿಂಗಿತವನ್ನರಿತ ಶೇಷಣ್ಣನು.. "ಜಲಂಧರ ಎರಡು ಮೂರು ದಿವಸದಿಂದ ನೋಡಬೇಕೆಂದು ಕನವರಿಸುತ್ತಿದ್ದೆಯಲ್ಲವೆ! ಅಗೋ ಅವರೆ ನೋಡು, ನಿನ್ನ ಮನಸ್ಸಿನಲ್ಲಿರುವ ಸಾರ್‌ಗಿಂತ ನಿನ್ನೆದುರಿಗಿರುವ ಸಾರ್ ಒಳ್ಳೆಯವರು. ಅದೇನು ನಿನ್ನ ಮನಸ್ಸಿನಲ್ಲಿರುವುದೋ ಅದೆಲ್ಲವನ್ನೂ ಮಾತಾಡಿಬಿಡು, ಯಾವುದನ್ನೂ ಮನಸ್ಸಿನಲ್ಲಿ ಇಟ್ಟುಕೊಂಡು ಕೊರಗಬೇಡ. ಸುಮ್ಮನೆ ಯಾಕೆ ಕುಳಿತಿರುವಿ!" ಎಂದು ಮಾತಿಗೆ ಚಾಲನೆ ನೀಡಿದ.

ಅದಕ್ಕೆ ತಾನು ಎಲ್ಲರ ಕಡೆ ಮತ್ತು ನನ್ನ ಕಡೆ ವಿಶೇಷವಾಗಿ ನೋಡುತ್ತ "ವಾಗಿಲಿ ಎಂದಾಕ್ಷಣ ನೀವು ನೆನಪಾದಿರಿ ಸಾರ್, ನಿಮ್ಮಂಥ ಸರಸ್ವತಿ ವರಪುತ್ರರು ಶಾಲಾ ಮಾಸ್ತರರಾಗಿರುವುದು ಈ ಊರಿನ ಪುಣ್ಯ ಸಾರ್" ಎಂದು ವಿಶೇಷಣಗಳೊಂದಿಗೆ ಮಾತು ಆರಂಭಿಸಿದ, ನನಗೆ ಮಜುಗರವಾಯಿತು. ತಾನು ಕಲಾವಿದನೋ! ಹೊಗಳುಭಟ್ಟನೋ! ಇಲ್ಲವೆ ಕಲಾವಿದನೋ! ನೇರವಾಗಿ ಹೇಳಿದರಾಗುತ್ತಿತ್ತಲ್ಲವೆ! ಅದೆಲ್ಲ ಬಿಟ್ಟು ಹೊಗಳಿಕೆಯ ಮಾತುಗಳ ಅಗತ್ಯವೇನಿತ್ತು! ಅದನ್ನು ಗ್ರಹಿಸಿದ ಶೇಷಣ್ಣ ಆತನಿಗೆ ಮಾತ್ರ ಕೇಳಿಸುವಂತೆ ಕಿವಿಯಲ್ಲಿ ಏನೋ ಹೇಳಿದ, ಅದಕ್ಕೆ ಪುರಾವೆಯಾಗಿ ತಾನು ತನ್ನ ಜೇಬಿನಿಂದ ಮೆಲ್ಲಗೆ ವಾರ್ತಾಪತ್ರಿಕೆಯ ವಾರದ ಪುರವಣಿಯನ್ನು ತೆಗೆದು ಸಾದರಪಡಿಸುತ್ತ.. "ಈ ಕಥೆಯನ್ನು ಓದಿದಂದಿನಿಂದ ನಾನು ನಿಮ್ಮ ಅಭಿಮಾನಿಯಾಗಿರುವೆ ಸಾರ್" ಎಂದು ಹೇಳಿದ.

ಯಾವ ಕಥೆ! ಕಥೆಗಾರ ಯಾರು! ಕುತೂಹಲ ಇಮ್ಮಡಿಗೊಂಡಿತು. ಸಂಭ್ರಮದಿಂದ ಅದನ್ನು ಕೈಗೆತ್ತಿಕೊಂಡು ನೋಡಿದೆ. ಅರೆ ಅದನ್ನು ಬರೆದಿರುವ ಕಥೆಗಾರ ನಾನೆ! ಕೆಲವು ವಾರಗಳ ಹಿಂದೆ ಹೀಗೆ ಬರೆದು ಹಾಗೆ ಪ್ರಕಟಣೆ ಸಲುವಾಗಿ ರವಾನಿಸಿದ್ದೆ, ಮರೆತೂ ಬಿಟ್ಟಿದ್ದೆ, ಅದನ್ನು ಸಂಪಾದಕರು ಪ್ರಕಟಿಸಬಹದೆಂದು ಭಾವಿಸಿರಲಿಲ್ಲ. ಸಂಪಾದಕರು ಗೌರವಪ್ರತಿಯನ್ನು ನನಗೆ ಕಳಿಸಿರಬಹುದು, ಅದು ಪ್ರಯಾಣದ ನಡುವೆ ಎಲ್ಲೋ ಅಂತರ್ಧಾನಗೊಂಡಿರಲೂಬಹುದೆಂದು ಊಹಿಸಿದೆ. ಓಹ್! ಅದರಲ್ಲಿರುವುದು ವಾಗಿಲಿಯ ದೈನಂದಿನ ಕಥೆ, ಊರಲ್ಲಿನ ಯಾರಾದರು ಅದನ್ನು ಓದಿದ್ದರೆ! ಭಯವಾಯಿತು. ಓದಿರಲಿಕ್ಕಿಲ್ಲ, ಓದಿದ್ದರೆ ಸುದ್ದಿಯಾಗದೆ ಇರುತ್ತಿರಲಿಲ್ಲ. ಓದಿದ್ದರೂ ಅದು ಕಥೆ ಎಂದಾಗಲೀ ಅದರ ಕರ್ತೃ ನಾನೇ ಎಂದಾಗಲೀ, ಅದರಲ್ಲಿರುವ ವಸ್ತು ತಮ್ಮ ಊರಿನದ್ದೇ ಎಂದಾಗಲೀ ಅರ್ಥ ಮಾಡಿಕೊಂಡಿರಲಾರರು, ಇದು ನನ್ನಂಥ ಯಾವುದೇ ಕಥೆಗಾರನ ಸೌಭಾಗ್ಯವಲ್ಲದೆ ಇನ್ನೇನು!

ಉಳಿದವರು ನನ್ನ ಕೈಯಿಂದ ಇಸಿದುಕೊಂಡು ಒಬ್ಬೊಬ್ಬರಾಗಿ ಕಣ್ಣಾಡಿಸಿದರು. ಓದಲರಿಯದ, ಬರೆಯಲರಿಯದ, ಕಥೆ ಎಂದರೇನೆಂದರಿಯದ ಅವರೆಲ್ಲ ಅದನ್ನು ನೋಡಿ ಓಹ್ಹೋ, ಹ್ಹಾ ಹ್ಹಾ ಎಂದು ಉದ್ಗರಿಸುತ್ತ ಅದನ್ನು ಪುನಃ ಜಲಂಧರನಿಗೆ ಮರಳಿಸಿದರು. ಅದನ್ನು ತಾನು ಗೌರವಪೂರ್ವಕವಾಗಿ ಮಡಚಿ ತನ್ನ ಜೇಬಿನಲ್ಲಿರಿಸಿಕೊಂಡು ಮಾತು ಆರಂಭಿಸಿದನು.

"ದ್ವಾಪರ ಕಾಲದಲ್ಲಿ ರತ್ನಗಳನ್ನು ಮಾತ್ರ ತಿಂದು ಜೀವಿಸುತ್ತಿದ್ದ ಪಕ್ಷಿಗಳಿದ್ದವು, ಅವುಗಳಿಗೆ ಜೀವಿಸಲು ಕಲಿಯುಗದಲ್ಲಿ ಎಂಜಲೆಲೆ ಸಹ ಸಿಗುತ್ತಿಲ್ಲ, ಅವುಗಳಂತಾಗಿರುವುದು ನಮ್ಮಂಥ ಕಲಾವಿದರ ಪರಿಸ್ಥಿತಿ ಸಾರ್!" ಎಂದು ಹೇಳುತ್ತ ಹೇಳುತ್ತ ತನ್ನ ಕಣ್ಣುಗಳನ್ನು

ತೇವ ಮಾಡಿಕೊಂಡನು. ತಮ್ಮ ಕಂಪನಿಯ ದುರಂತ ಕಥೆಯನ್ನು ಅಪಾತ್ರರೆದುರು ವಿವರಿಸಬಾರದೆಂದೋ ಏನೋ! ಹೇಳುತ್ತಿದ್ದಂತೆ ಉಪಾಯಾಂತರದಿಂದ ಹಾಗೆ ಉಪಸಂಹರಿಸಿಕೊಂಡನು. ಅವರೆಲ್ಲರು ಅಲ್ಲಿಂದ ನಿರ್ಗಮಿಸಿದ ಬಳಿಕ ಹೇಳಿದರೊಳಿತೆಂದು ಭಾವಿಸಿ ಸಮಯ ಪ್ರಜ್ಞೆ ಮೆರೆದದ್ದು ನನಗೆ ಇಷ್ಟವೆನಿಸಿತು.

ಅವರೆಲ್ಲ ಅಲ್ಲಿಂದ ಹೊರಡುವ ಸನ್ನಾಹದಲ್ಲಿರುವಾಗಲೇ "ನಮ್ಮಂಥ ರಾಜರ ಪಾತ್ರವಹಿಸುವ ಗಂಡಸರು ಎಲ್ಲೋ ಒಂದು ಕಡೆ ಇರುವೆವು, ಆದರೆ ರಾಣಿ ಪಾತ್ರ ವಹಿಸುವ ಹೆಂಗಸರು ಎಲ್ಲಂದರಲ್ಲಿ ಇರಲಾಗುವುದೆ! ಅದರಲ್ಲೂ ನನ್ನ ಒಡಹುಟ್ಟಿದ ತಂಗಿಯ ಖಾಸಗಿ ಕೆಲಸಗಳಿಗೆ ಮುಚ್ಚುಮರೆ ಬೇಕಲ್ಲವೆ! ಪರಸ್ಥಳ ಪ್ರಾಣಸಂಕಟ! ನಿಮ್ಮೆದರು ಕೈಮುಗಿದು ಕೇಳಿಕೊಳ್ಳವೆ, ಊರಿನ ಪುಣ್ಯಾತ್ಮರಾದ ತಾವು ಎಂಥದಾದರೊಂದು ಮನೆಯನ್ನು ನಮಗೆ ಬಾಡಿಗೆ ಕೊಟ್ಟರೆ ಸಂತೋಷ, ಫ್ರೀಯಾಗಿ ಕೊಟ್ಟಲ್ಲಿ ಇನ್ನೂ ಸಂತೋಷ, ನಮ್ಮಂಥ ಬಡಕಲಾವಿದರಿಗೆ ತಂದೆ ಅಂದರೂ ನೀವೆ ತಾಯಿ ಎಂದರೂ ನೀವೆ ಅನ್ನದಾತರೆಂದರೂ ನೀವೆ" ಎಂದು ಸಮಕ್ಷಮ ಎದ್ದು ನಿಂತು ಕಲಾತ್ಮಕವಾಗಿ ಬಾಗಿ ಕೈಜೋಡಿಸಿ ನಮಸ್ಕರಿಸಿದನು, ಕಣ್ಣುಗಳಿಂದ ಅಂಗಲಾಚಿದನು.

ಇನ್ನೇನು ಹೊರಡುವ ಸನ್ನಾಹದಲ್ಲಿದ್ದ ಅವರೆಲ್ಲ ಅವನ ಕಣ್ಣುಗಳಲ್ಲಿದ್ದ ನೀರನ್ನು ಗ್ರಹಿಸಿದರು. ಅಭಿನಯದ ಮೂಲಕ ಹತ್ತಾರು ರಾಜಮಹಾರಾಜರುಗಳನ್ನು ಆವಹಿಸಿಕೊಳ್ಳುವ ಕಲಾವಿದ ತಮ್ಮಂಥ ಮಾಮೂಲು ಪ್ರಜೆಗಳಿಗೆ ನಮಸ್ಕರಿಸುವುದೆಂದರೆ! ಅಂಗಲಾಚುವುದೆಂದರೆ! ಕಣ್ಣಲ್ಲಿ ನೀರು ತಂದುಕೊಳ್ಳುವುದೆಂದರೆ! ಸಾಮಾನ್ಯ ಸಂಗತಿಯೆ! ನಿಂತವರು ಯೋಚಿಸಿ ಪುನಃ ಕುಳಿತರು. ಪರಸ್ಪರ ಮುಖಗಳನ್ನು ನೋಡಿಕೊಂಡರು.

ಅಲ್ಲಿದ್ದರವು ಮೊದಲೇ ಹಿಂದೆಮುಂದೆ ನೋಡದೆ ಸಹಾಯ ಹಸ್ತ ಚಾಚುವ ಕೈಗಳು. ರಾಜರುಗಳ ಪಾತ್ರ ನಿರ್ವಹಿಸುವವನೂ, ಕಂಪನಿಯ ಮಾಲಕನೂ ಸುಂದರ ಸಹೋದರಿಯ ಅಣ್ಣನೂ ಆದಂಥ ಜಲಂಧರ ತನ್ನ ಕಣ್ಣುಗಳನ್ನು ಒದ್ದೆಮಾಡಿಕೊಂಡು, ತಮ್ಮನ್ನು ಗೌರವಪೂರ್ವಕವಾಗಿ ಸಂಬೋಧಿಸಿದನೆಂದ ಮೇಲೆ ತಮ್ಮೆಲ್ಲರ ಮನಸ್ಸುಗಳು ಕರಗದಿರಲು ಸಾಧ್ಯವೆ! ಅದೂ ಅಲ್ಲದೆ ಅವರೆಲ್ಲ ತಮ್ಮೆದರು ದೇಹಿ ಎಂದು ನಿಂತವರನ್ನು ಎಂದು ಬರಿಗೈಲಿ ಕಳಿಸುವವರಂತೂ ಮೊದಲೇ ಅಲ್ಲ. ಹುಂಬತನಕ್ಕೆ ಉತ್ಸಾಹಕ್ಕೆ ಹೆಸರಾಗಿದ್ದ ಲಚುಮಿರೆಡ್ಡಿ ಎಂಬ ನಾಮವಾಚಕದಲ್ಲಿ ಅಮೃತಾಂಜನ ಎಂಬ ಉಪಾಧಿ ಅಂಟಿರುವುದಕ್ಕೆ ಕಾರಣವುಂಟು, ಅದೆಂದರೆ ತಾನು ಹೆಬ್ಬಟಂ ರೆಡ್ಡಿಯವರ ಸಾರೋಟಿನ ಖಾಯಂ ಸಾರಥಿಯು. ವಾಗಿಲಿ ಸ್ವಾಸ್ಥಿಯಾದರೂ ಬಳ್ಳಾರಿಯ ಪ್ರತಿಷ್ಠಿತ ಬಡಾವಣೆಯಲ್ಲಿ ವಾಸಿಸುತ್ತಿರುವ ಜಮೀನ್ದಾರ ರೆಡ್ಡಿಯವರು ಸದರಿ ಗ್ರಾಮಕ್ಕೆ ಆಗಮಿಸಿ ನಿರ್ಗಮಿಸುವುದು ವರ್ಷಕ್ಕೊಂದೆರಡು ಸಲ ಮಾತ್ರ. ಅದೂ ತಮಗೆ ಪಿತ್ರಾರ್ಜಿತವಾಗಿ ಬಂದಿರುವ ಸಾರೋಟಿನಲ್ಲಿ! ಉಳಿದಂತೆ ಅದಕ್ಕೆ ಕೆಲಸವಿರುವುದಿಲ್ಲ, ಲಚುಮಿರೆಡ್ಡಿಯ ದೈನಂದಿನ ಕಾಯಕವೆಂದರೆ ಆ ವಾಹನವನ್ನು ದಿನಕ್ಕೆರಡು ಸಲ ತೊಳೆದು ಶುಭ್ರಗೊಳಿಸುವುದು, ಅದರೆರಡು ಅಚ್ಚ ಬಿಳಿವರ್ಣದ ಕುದುರೆಗಳಿಗೆ ಜಳಕ ಸಂಧ್ಯವಂದನೆಗಳನ್ನು ಮಾಡಿಸುತ್ತ ಮಕ್ಕಳ ಹಾಗೆ ನೋಡಿಕೊಳ್ಳುವುದು, ಅವರಿವರೆದುರು ಆ ಮೂಕಪ್ರಾಣಿಗಳ ಗುಣಗಾನ ಮಾಡುವುದು. ಅಷ್ಟೇ ಅಲ್ಲದೆ ಪರರಿಗೆ ಸಹಾಯ ಮಾಡಲು ತುದಿಗಾಲಲ್ಲಿ ನಿಂತು ಓಡಾಡುವುದು, ತನ್ನ ಧಣಿಗೆ ಹೇಳಿ ಅವರಿವರಿಗೆ ಸಹಾಯ ಮಾಡಿಸುವುದು. ಹೀಗಾಗಿ ವಾಗಿಲಿಯ ಪ್ರತಿಯೊಂದು ಮನೆಗೆ

ತಾನು ಅನಿವಾರ್ಯ. ತಾನು ಯಾರ ಮನೆಗೇ ಹೋಗಲಿ, ಅನ್ನ ಕೇಳುವುದಿಲ್ಲ ಒಡವೆ ವಸ್ತ್ರ ಬಯಸುವುದಿಲ್ಲ, ತಾನು ತನ್ನ ಸುಕ್ಕುಗಟ್ಟಿದ ನೊಸಲನ್ನು ಮುಂದಕ್ಕೆ ಚಾಚಿ ಬಯಸುವುದು ಅಮೃತಾಂಜನವನ್ನು ಮಾತ್ರ. ಅವರು ತ್ರಿಕರಣಪೂರ್ವಕವಾಗಿ ನೀಡುವ ಅಮೃತಾಂಜನ ಡಬ್ಬಿಯ ಅರ್ಧಭಾಗವನ್ನು ತೋರುಬೆರಳಿಂದ ತೆಗೆದುಕೊಂಡು ತನ್ನ ನೊಸಲ ವಿಸ್ತೀರ್ಣದ ತುಂಬೆಲ್ಲ ಲೇಪಿಸಿಕೊಂಡನೆಂದರೆ ತಾನು ಉತ್ಸಾಹದ ಚಿಲುಮೆಯೇ ಆಗಿಬಿಡುವನು. ಆದ್ದರಿಂದಾಗಿ ಊರಲ್ಲಿ ಹತ್ತಾರು ಆ ಹೆಸರಿನವರಿರುವುದರಿಂದ ಆತನನ್ನು ಸಾಮಾಜಿಕವಾಗಿ ಗುರುತಿಸುವುದು ಅಮೃತಾಂಜನ ಲಚುಮಿರೆಡ್ಡಿ ಎಂದು. ಅಗತ್ಯವಿರದಿದ್ದರೂ ನಾನು ಆತನ ಸಲುವಾಗಿ ಪ್ರತಿ ತಿಂಗಳೂ ಅಮೃತಾಂಜನ ಡಬ್ಬಿಯನ್ನು ಖರೀದಿಸಿ ಆತನ ಕೈಗೆ ಎಟಕುವ ರೀತಿಯಲ್ಲಿ ಪ್ರದರ್ಶಕವಾಗಿ ಇಟ್ಟಿರುವುದು ಮಾಮೂಲು. ಆ ದಿವಸವೂ ಆತ ಬಂದವನೆ ಟೇಬಲ್ ಮೇಲಿದ್ದ ಅಮೃತಾಂಜನ ಸೀಸೆಯನ್ನು ಅಭಿಮಾನಪೂರ್ವಕವಾಗಿ ಕೈಗೆತ್ತಿಕೊಂಡ. ಬಾಮನ್ನು ತನ್ನ ನೊಸಲಿನಾದ್ಯಂತ ಲೇಪಿಸಿಕೊಂಡ, ಕಣ್ಣುಗಳಿಂದಲೂ ಮೂಗಿನಿಂದಲೂ ಧಾರಾಕಾರವಾಗಿ ಕೃತಕ ನೀರು ಸುರಿಸತೊಡಗಿದ, ವಿಜೃಂಭಿಸುತ್ತ ಪ್ರವರ ಆರಂಭಿಸಿದನು.

"ನಾವಿರುವಾಗ ಯಾಕೆ ಚಿಂತೆ ಮಾಡುವಿ ರಾಜ, ನಿನ್ನ ತಂಗಿ ಇರಲಿಕ್ಕೊಂದು ಮನೆ ಬೇಕು ತಾನೆ" ಎಂದು ಆಶ್ವಾಸನೆ ನೀಡಿದ. ಬಳಿಕ ಎದುರಿಗಿದ್ದ ಮನೆಯ ಮಹಡಿ ಕಡೆ ದೃಷ್ಟಿ ಸಾರಿಸಿ ಮೂಗಿನ ಮೇಲೆ ಬೆರಳಿರಿಸಿಕೊಂಡು ಓಹೋ ಎಂದು ಮೆಲ್ಲಗೆ ಉದ್ಗರಿಸಿದ, ಸಹವಂದಿಗ ಆರುಬೆರಳಿನ ಬಸವನಗೌಡನನ್ನುದ್ದೇಶಿಸಿ "ಮಾವ ನಿಮ್ಮ ಮನೆಯ ಮಹಡಿ ಖಾಲಿ ಇರುವುದಲ್ಲ, ಅದನ್ನು ನಮ್ಮ ಈ ರಾಜನ ತಂಗಿ ಇರಲಿಕ್ಕೆ ಮುಫತ್ತಾಗಿ ಕೊಟ್ಟುಬಿಡು" ಎಂದು ಅಧಿಕಾರಯುತವಾಗಿ ಹೇಳಿದ. ಅದೇ ಮಾತನ್ನು ಬೇರೆಯವರು ಹೇಳಿದ್ದಲ್ಲಿ ಬಸವನಗೌಡ ಕೇಳುತ್ತಿರಲಿಲ್ಲವೇನೊ! ಗೌಡ ಉಗುಳು ನುಂಗುತ್ತ ಒಪ್ಪಿಗೆ ಸೂಚಿಸಿದ. ಜಿಪುಣತೆಯನ್ನೇ ತನ್ನ ಜೀವನದ ನೀತಿಸಂಹಿತೆಯನ್ನಾಗಿ ಅಳವಡಿಸಿಕೊಂಡಿರುವ ಗೌಡ ಸಮ್ಮತಿಸಿದ ಮೇಲೆ ಉಳಿದವರು ಸುಮ್ಮನಿದ್ದಾರೆಯೆ! ಕರುಣಾಕರರೆಡ್ಡಿ ಹಾಲುಮೊಸರಿನ ಹೊಣೆಯನ್ನೂ ಗೊಲ್ಲರೀರಯ್ಯನು ತರಕಾರಿಯ ಜವಾಬ್ದಾರಿಯನ್ನೂ ವಹಿಸಿಕೊಂಡರು. ಅವರ ಆ ಎಲ್ಲಾ ಆಶ್ವಾಸನೆಗಳಿಂದ ಜಲಂಧರನ ಮುಖದಲ್ಲಿ ಆತ್ಮವಿಶ್ವಾಸ ಕಾಣಿಸಿಕೊಂಡಿತು. ಎಷ್ಟು ಹೊತ್ತು ಕುಳಿತುಕೊಂಡಿರಲಾದೀತು! ಅವರೆಲ್ಲ ಒಬ್ಬೊಬ್ಬರಾಗಿ ಹೊರಟು ಜಾಗ ಖಾಲಿ ಮಾಡಿದರು. ಬಳಿಕ ಮನೆಯೊಳಗೆ ಉಳಿದದ್ದು ಶೇಷಣ್ಣ ಜಲಂಧರ ಮತ್ತು ನಾನು ಮಾತ್ರ.

ಶಾಲೆ ಎದುರಿಗಿರುವ ಬೇವಿನಮರ ಅದರ ಆಶ್ರಯದಲ್ಲಿ ಬೀಡುಬಿಟ್ಟಿರುವವರು ನೆನಪಾದರು. ಆ ಪೋಷಕ ಕಲಾವಿದರು ಭಿಕ್ಷುಕರಿರಬಹುದೆಂದು ಅಪಾರ್ಥ ಮಾಡಿಕೊಂಡಿದ್ದು ನನ್ನ ತಪ್ಪು, ಪಾಶ್ಚಾತ್ತಾಪ ಪಡುವ ರೀತಿಯಲ್ಲಿ ನಿಟ್ಟುಸಿರುಬಿಟ್ಟು ಕ್ಷಮಿಸೆಂಬಂತೆ ಅವನ ಕಡೆ ನೋಡಿದೆ, ಅದನ್ನು ಅರ್ಥಮಾಡಿಕೊಂಡ ಶೇಷಣ್ಣನು.."ನಾನೂ ಅವರನ್ನೆಲ್ಲ ಭಿಕ್ಷುಕರೆಂದು ತಪ್ಪು ತಿಳಿದಿದ್ದೆ ಸಾರ್, ಹೊಟ್ಟೆಗಿದ್ದರೆ ಬಟ್ಟೆಗಿಲ್ಲ ಬಟ್ಟೆಗಿಲ್ಲ ಹೊಟ್ಟೆಗಿಲ್ಲ, ಅವಿಷ್ಟು ಮಂದಿಯನ್ನು ಈ ಪುಣ್ಯಾತ್ಮ ಅದು ಹೇಗೆ ಸಲಹುತಾನೋ! ನಾ ಬೇರೆ ಕಾಣೆ!" ಎಂದು ವಿವರಿಸಿದ. ಬಳಿಕ "ಯಾವ ಹುತ್ತದೊಳಗೆಂಥೆಂಥ ಹಾವಿದಾವೋ ಏನೋ" ಎಂದು ಸ್ವಗತ ರೀತಿಯಲ್ಲಿ ಗೊಣಗಿಕೊಂಡನು.

ಜಲಂಧರನ ವರ್ಚಸ್ವಿ ಮುಖ ಚೆಹರೆಯೊಂದಿಗೆ ಬೇವಿನಮರದ ಬುಡದಲ್ಲಿ ತೊಗಲುಗೊಂಬೆಗಳೋಪಾದಿಯಲ್ಲಿ ಬೀಡುಬಿಟ್ಟಿರುವವರ ಮುಖ ಚೆಹರೆಯನ್ನು ಹೋಲಿಸಿ

ನೋಡಿದೆ, ಅಜಗಜಾಂತರ ವ್ಯತ್ಯಾಸ ಗೋಚರಿಸಿತು. ಅವರೆಲ್ಲರು ಆಡಲಿರುವ ನಾಟಕಗಳ ಪೋಷಕ ಪಾತ್ರಗಳಿಗೂ ತಾಳೆಯಾಗುತ್ತಿಲ್ಲ, ಇವನು ದಾರಿಹೋಕರನ್ನೇನಾದರೂ! ಸಂದೇಹ ಬಂತು ನನಗೆ. ಅದನ್ನು ಅರ್ಥ ಮಾಡಿಕೊಂಡವನಂತೆ ಶೇಷಣ್ಣನು "ಛೇಛೇ ಎಲ್ಲಾದರು ಉಂಟಾ ಸಾರ್! ಕೆಳಮನಿ ತಿಪ್ಪಾರೆಡ್ಡಿ ಮುಖ ನೋಡಿದರೆ ಒಂದು ಕಾಲದಲ್ಲಿ ಸಾವರಾರೆಕರೆಗೆ ಜಮೀನ್ದಾರನಾಗಿದ್ದ ಅಂದರೆ ಯಾರಾದರು ನಂಬುತ್ತಾರೆ! ಬಣ್ಣ ಹಚ್ಚಿ ಸ್ಟೇಜೇರಿದ ಮೇಲೆಯೆ ತಿಳಿಯುವುದು ಯಾರೆಂಥವರೆಂಬುದು, ಅಲ್ಲೇನು ಜಲಂಧರ!" ಎನ್ನುತ್ತ ಅವನ ಕಡೆ ನೋಡಿದನು.

ಅದಕ್ಕೆ ಪ್ರತಿಯಾಗಿ ಅವನು ಸುದೀರ್ಘ ನಿಟ್ಟುಸಿರುಬಿಟ್ಟು.. "ಎಲ್ಲರಂತೆ ಕೂಲಿನಾಲಿ ಮಾಡಿಕೊಂಡಿದ್ದಲ್ಲಿ ನಾವು ಎಲ್ಲರಂತೆ ಸುಖವಾಗಿರುತ್ತಿದ್ದೆವೇನೋ! ಆದರೆ ನಮ್ಮ ಪೂರ್ವಿಕರು ಯಾವ ಜಾಗದಲ್ಲಿ ಏನನ್ನು ಕಳೆದುಕೊಂಡಿರುವರೋ ಅದೇ ಜಾಗದಲ್ಲಿ ಆ ವಸ್ತುವನ್ನು ಹುಡುಕಿಕೊಂಡು ಹೊರಟಿದ್ದೀವಲ್ಲ, ಇದೇ ನಾವು ಮಾಡುತ್ತಲೇ ಇರುವ ದೊಡ್ಡ ತಪ್ಪು ಸಾರ್" ಎಂದ, ಆತನ-ಮುಖದಲ್ಲಿ ಚಿಂತೆಯ ಗೆರೆ ಸ್ಪಷ್ಟವಾಗಿ ಕೋರೈಸಿತು.

"ಹುಟ್ಟಿಸಿರುವ ಆ ದೇವರು ಹುಲ್ಲು ಮೇಯಿಸುವುದಿಲ್ಲಪ್ಪಾ ಜಲಂಧರಾ, ನಮ್ಮ ವಾಗಿಲಿ ಭೋಜರಾಜನಾಳಿದ ಉಜ್ಜೈನಿ ಇದ್ದಂತೆ, ಇದು ನಿಮ್ಮನ್ನ ಬರಿಗೈಲಿ ಕಳಿಸುವುದಿಲ್ಲ, ಸಮಾಧಾನ ತಂದುಕೊ" ಎನ್ನುತ್ತ ಶೇಷಣ್ಣ ಆತನ ಭುಜದ ಮೇಲೆ ಕೈಹಾಕಿ ಮೆಲ್ಲಗೆ ಅದುಮಿದ. ಅದಕ್ಕೆ ಜಲಂಧರನು ಅವರ ಪೂರ್ವಾಪರಗಳನ್ನು ಕ್ಲುಪ್ತವಾಗಿ ವಿವರಿಸಿದ, ಎಲುಬಿನ ಗೂಡಿನಂತಿರುವ ಮುದುಕ ಒಂದು ಕಾಲದಲ್ಲಿ ಕುಕನೂರು ಬಾಬಣ್ಣನ ಕಂಪನಿಯ ಬಹುತೇಕ ಪೌರಾಣಿಕ ನಾಟಕಗಳಲ್ಲಿ ಅಶ್ವತ್ಥಾಮ ಶಿಶುಪಾಲ ಕಂಸ ಪಾತ್ರಗಳನ್ನು ವಹಿಸುತ್ತಿದ್ದನಂತೆ! ಬಾಣಂತಿಯೂ ಕೆಲವು ಕಂಪನಿಗಳಲ್ಲಿ ಉತ್ತರೆ ದ್ರೌಪದಿ ಸುಭದ್ರೆ ಪಾತ್ರ ವಹಿಸುತ್ತಿದ್ದಳಂತೆ! ಕೇಳಿದ ನನಗೆ ಆಶ್ಚರ್ಯವಾಯಿತು, ಏನೋ ಹೇಳಬೇಕೆನ್ನುವಷ್ಟರಲ್ಲಿ ತಾನೆ ಹೇಳಿದ.

"ಬಣ್ಣದ ಗೀಳುಬಿಟ್ಟು ಎಲ್ಲಾದರೂ ಹೋಗಿ ಬದುಕಿ ಎಂದರೂ ಕೇಳುತ್ತಿಲ್ಲ, ಬಣ್ಣ ಹಚ್ಚಿಕೊಂಡೇ ಹುಟ್ಟಿರುವ ನಾವು ಬಣ್ಣ ಹಚ್ಚಿಕೊಂಡೇ ಸಾಯುವುದಾಗಿ ಹೇಳುತ್ತಿದ್ದಾರಣ್ಣ, ಬಿಡುವಿನ ವೇಳೆಯಲ್ಲಿ ಚಿಕ್ಕಪುಟ್ಟ ಕೆಲಸಗಳನ್ನು ಮಾಡುವರು, ಭಿಕ್ಷೆಯನ್ನೂ ಬೇಡಿ ಹೇಗೋ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ, ಅವರ್ಯಾರೂ ನನಗಾಗಲೀ ನನ್ನ ಕಂಪನಿಗಾಗಲೀ ಹೊರೆಯಾಗಿಲ್ಲ, ಆದರೆ ಕಣ್ಣೆದುರು ಅವರು ದಿನಂಪ್ರತಿ ಸಾಯುವುದನ್ನು ನೋಡಲಿಕ್ಕಾಗುವುದಿಲ್ಲ. ನನಗೂ ಈ ಕಂಪನಿ ಸಹವಾಸಬಿಟ್ಟು ಎಲ್ಲಾದರು ಓಡಿ ಹೋಗಬೇಕು, ಯಾವುದಾದರೂ ಇನ್ನೊಂದು ಕಂಪನಿಯನ್ನು ಸೇರಿಕೊಂಡು ಆರಾಮಾಗಿರಬೇಕು ಎಂದು ಬಹಳ ಪ್ರಯತ್ನಿಸಿದೆ, ಆದರೆ ಮನಸ್ಸಾಕ್ಷಿ ಒಪ್ಪುತ್ತಿಲ್ಲ ಸಾರ್" ಎನ್ನುತ್ತ ಇನ್ನೊಂದು ದೀರ್ಘಉಸಿರುಬಿಟ್ಟನು.

ಅವನ ಮಾತುಗಳನ್ನಾಲಿಸಿದ ನನ್ನ ಮನಸ್ಸು ಘಾಸಿಗೊಂಡಿತು, ಪುನಃ ಆತನನ್ನು ಇಡಿಯಾಗಿ ನೋಡಿದೆ, ಚಲನಚಿತ್ರಗಳಲ್ಲಿನ ನಾಯಕ ಪಾತ್ರಗಳಿಗೆ ಹೇಳಿಮಾಡಿಸಿದಂತಿರುವ ಆಕರ್ಷಕ ವ್ಯಕ್ತಿತ್ವ, ಬಂಡವಾಳವಿಲ್ಲದವರು ಸಿನೇಮಾಗಳಲ್ಲಿ ಅಭಿನಯಿಸುತ್ತ ಸುಖವಾಗಿದ್ದಾರೆ, ಇವನ್ಯಾಕೆ!

"ಈತನೂ ಒಂದೆರಡು ಸಿನೆಮಾಗಳಲ್ಲಿ ಪಾರ್ಟು ಮಾಡಿರುವನಂತೆ ಸಾರ್, ಅವು ಯಾವ್ಯಾವೆಂಬುದನು ಹೇಳು ಜಲಂಧರ!" ಎಂದ ಶೇಷಣ್ಣ,

"ಅರೆ ಹೌದೇನು" ಎಂದೆ ಆಶ್ಚರ್ಯದಿಂದ.

"ಹೌದು ಸಾರ್, ಕೆಲವು ಸಿನೆಮಾಗಳಲ್ಲಿ ಚಿಕ್ಕಪುಟ್ಟ ಪಾತ್ರ ಮಾಡಿರುವೆ, ಇಗೋ ನೋಡಿ" ಎಂದು ಹೇಳುತ್ತ ತನ್ನ ಜೇಬಿನಿಂದ ಒಂದೆರಡು ಫೋಟೋಗಳನ್ನು ತೆಗೆದು ತೋರಿಸಿದ.

ನೋಡಿದೆ, ಅಷ್ಟಾಗಿ ಜನಪ್ರಿಯನಲ್ಲದ ನಟರೊಂದಿಗೆ ತೆಗೆಸಿಕೊಂಡಿರುವ ಫೋಟೊಗಳು ಅವು. "ಅಲ್ಲಿಯೇ ಇರಬಹುದಿತ್ತಲ್ಲವೆ!" ಎಂದು ಅದನ್ನು ಮರಳಿಸುತ್ತ ಹೇಳಿದೆ.

"ಅದೇ ಸಮಯಕ್ಕೆ ಸರಿಯಾಗಿ ನನ್ನ ತಂಗಿಯ ಗಂಡ!" ಎಂದ ದುಗುಡದಿಂದ.

"ಅಂದರೆ ನಿನ್ನ ತಂಗಿಯ ಗಂಡ!"

"ಆಕೆಯನ್ನು ಮದುವೆಯಾದ ಮಾರನೆ ವರ್ಷವೇ ನಾಪತ್ತೆಯಾಗಿಬಿಟ್ಟ ಸಾರ್, ಪದ್ಮ ತನ್ನ ಗಂಡನ ಕೂಡ ಒಂದು ವರ್ಷಾನೂ ಬಾಳುವೆ ಮಾಡಲಿಲ್ಲ"

ಕೇಳಿದ ನನಗೆ ಬೇಸರವಾಯಿತು, ನಾಟಕ ಪಾತ್ರಧಾರಿಗಳು ಸಮಾನ್ಯವಾಗಿ ನೈಜಜೀವನಕ್ಕೆ ಹೊಂದಿಕೊಳ್ಳುವುದು ಕಡಿಮೆ.

"ಹಡುಕಬಹುದಿತ್ತಲ್ಲವೆ!" ಎಂದು ಕೇಳಿದ್ದಕ್ಕೆ..

"ನಾವು ಹುಡುಕದ ಜಾಗವೇ ಇಲ್ಲ, ಬಾಬಣ್ಣನ ಕುಕನೂರು ಕಂಪನಿಯನ್ನು ಲೀಜ್ ತೆಗೆದುಕೊಂಡು ನಡೆಸುತ್ತಿದ್ದ, ಅದೇ ಕಂಪನಿಯಲ್ಲಿದ್ದ ನನ್ನ ತಂಗಿಯನ್ನು ಪ್ರೀತಿಸಿ ಮದುವೆಯಾಗಿದ್ದ, ಅವರಿಬ್ಬರೂ ಅನ್ಯೋನ್ಯವಾಗಿದ್ದರು, ಆದರೆ ಒಂದು ದಿವಸ ಇದ್ದಕ್ಕಿದ್ದಂತೆ ಕಣ್ಮರೆಯಾಗಿಬಿಟ್ಟ, ಕಂಪನಿ ಸಾಲ ಕೊಟ್ಟವರ ಪಾಲಾಯಿತು, ಪದ್ಮ ಬೀದಿಪಾಲಾದಳು"

"ಮರುಮದುವೆ ಮಾಡಬಹುದಿತ್ತಲ್ಲ!"

"ಬಣ್ಣ ಹಚ್ಚುವವರನ್ನು ಮದುವೆಯಾಗಲು ಯಾರು ತಾನೆ ಮುಂದೆ ಬಂದಾರು! ಒಂದು ಬಣ್ಣವನ್ನು ಇನ್ನೊಂದು ಬಣ್ಣ ಮದುವೆಯಾಗಬೇಕೇ ಹೊರತು ಪ್ರೇಕ್ಷಕರ್ಯಾರೂ ಕೈಹಿಡಿಯಲು ಮುಂದೆ ಬರುವುದಿಲ್ಲ ಸಾರ್, ಅಲ್ಲದೆ ದಿನದಿಂದ ದಿನಕ್ಕೆ ಕಂಪನಿಗಳು ತಮ್ಮ ಬಣ್ಣಗಳನ್ನು ಕಳೆದುಕೊಳ್ಳುತ್ತಿವೆ, ಉದಾಹರಣೆಗೆ ನಮ್ಮನ್ನೇ ನೋಡಿ, ಮೊನ್ನೆ ಇದ್ದಂತೆ ನಿನ್ನೆ ಇಲ್ಲ, ನಿನ್ನೆ ಇದ್ದಂತೆ ಇವತ್ತಿಲ್ಲ, ನಾಳೆಗಳನ್ನು ಎಣಿಸುವುದಾಗಿದೆ ನಮ್ಮ ಬದುಕು. ಪದ್ಮ ಇರದಿದ್ದಲ್ಲಿ ಅವನಂತೆ ನಾನೂ ತಲೆ ಮರೆಸಿಕೊಳ್ಳುತ್ತಿದ್ದೆನೇನೋ!" ಎಂದು ನಿಟ್ಟುಸಿರುಬಿಡುತ್ತ ಹೇಳಿದ.

ಪುನಃ ಒಂದು ಕ್ಷಣ ಮೌನ ಆವರಿಸಿತು. ಶೇಷಣ್ಣ ನನ್ನ ಕಡೆಗೊಮ್ಮೆ ಅವನ ಕಡೆಗೊಮ್ಮೆ ನೋಡಿದಾದ ಬಳಿಕ ನಗೆಯ ಎಸಳನ್ನು ತನ್ನ ತುಟಿಯ ನಡುವೆ ಸಿಂಗರಿಸಿಕೊಂಡನು. ನನ್ನ ಮನಸ್ಸಿನ ಒಂದು ಪಗಡೆಯಲ್ಲಿ ಆಕೆ, ಇನ್ನೊಂದು ಪಗಡೆಯಲ್ಲಿ ಈಕೆ! ಅಷ್ಟರಲ್ಲಿ ತಂದೆ ನನಗೆ ಬರೆಯಲಿರುವ ತನ್ನದೊಂದು ಪತ್ರದ ಒಕ್ಕಣಿಕೆಯನ್ನು ಕಲ್ಪಿಸಿಕೊಂಡೆ, ಅದರಲ್ಲಿ..

"ಕಥೆಗಳ ಸಹವಾಸದಿಂದಾಗಿ ಯಾರನ್ನೋ ಮದುವೆಯಾಗಿ ನಿನ್ನನ್ನು ನೀನು ಹಾಳು ಮಾಡಿಕೊಳ್ಳಬೇಡ ಮಗನೆ, ಹಾಗೇನಾದರು ಮಾಡಿದಿ ಎಂದರೆ ಹೆತ್ತ ತಪ್ಪಿಗೆ ನಾವು ಆತ್ಮಹತ್ಯೆ ಮಾಡಿಕೊಳ್ಳುವ ಬದಲು ಆತ್ಮವಿಶ್ವಾಸದ ನೆರವಿನಿಂದ ನಿನ್ನ ನೆನಪಿಗೆ ಎಳ್ಳುನೀರುಬಿಟ್ಟು ಆರಾಮಾಗಿರುತ್ತೇವೆ"

ಆತಂಕದಿಂದ ಕಳೆಗುಂದಿದ ನನ್ನ ಮುಖವನ್ನು ಗಮನಿಸಿದ ಶೇಷಣ್ಣ ಸ್ವಲ್ಪ ಉತ್ಸಾಹದಿಂದ.. "ಕೇಳುವುದನ್ನು ಮರೆತಿದ್ದೆ ಜಲಂಧರ, ನಾಟಕದವರಿಗೆ ಕುಲಗೋತ್ರ ಇರುವುದಿಲ್ಲವೆಂದು ಕೇಳಿರುವೆ, ಆದರೆ ನಮ್ಮ ಈ ವಾಗಿಲಿಯಲ್ಲಿ ಮಾತ್ರ!" ಎಂದು ಹೇಳಲುಪಕ್ರಮಿಸಿ ಮಾತು ನಿಲ್ಲಿಸಿದ. ವಾಗಿಲಿಯಲ್ಲಿನ ಜಾತಿ ವ್ಯವಸ್ಥೆಯ ಬುನಾದಿಯ ಕಲ್ಲುಗಳನ್ನು ಒಂದೊಂದಾಗಿ ಪರಿಚಯಿಸುವ ನಿಮಿತ್ತ ಪೀಠಿಕೆ ಹಾಕಲು ಪ್ರಯತ್ನಿಸಿದನೇನೊ! ಅರೆ ಅದನ್ನು ಕೇಳುವುದನ್ನು

ನಾನೂ ಮರೆತಿದ್ದೆ, ವಾಗಿಲಿ ಸ್ವಾತಂತ್ರೋತ್ತರವಾಗಿ ಜೀವಿಸುತ್ತಿರುವುದು ಹಲವು ಶತಮಾನಗಳ ಹಿಂದಿನ ಕರ್ಮಠ ಬದುಕನ್ನು, ಇಲ್ಲಿ ಅಪರಿಚಿತರ ಮೇಲ್ಪ್ರ ಲಕ್ಷಣಗಳು ಮುಖ್ಯವಲ್ಲ, ಅವರ ಜಾತಿ ಹಿನ್ನಲೆ ಮುನ್ನಲೆ ಮುಖ್ಯ. ತಮ್ಮ ದೇಹದ ನೆರಳುಗಳು ರೆಡ್ಡಿಗಳಿಗೆ ಸೋಂಕದ ಹಾಗೆ ದಲಿತರೂ, ಅವರ ನೆರಳುಗಳು ತಮಗೆ ಸೋಂಕದ ಹಾಗೆ ಸವರ್ಣೀಯರೂ! ಅದೇನೇ ಇರಲಿ, ಆದರೆ ವಿಲಕ್ಷಣವೂ ಅತ್ಯಾಕರ್ಷಕವೂ ಆದಂಥ ಹೆಸರಿನವನಾದ ಈತನ ಕುಲಗೋತ್ರ!

"ಇಲ್ಲೊಂದೇ ಅಲ್ಲ ಶೇಷಣ್ಣ, ಎಲ್ಲಾ ಕಡೆ ಇರುವುದೆ ಇದೆಲ್ಲ, ನೀನು ಕೇಳದಿದ್ದರೂ ಹೇಳುವುದು ನಮ್ಮ ಧರ್ಮ, ನನ್ನ ಪೂರ್ತಿ ಹೆಸರು ಜಲಂಧರಸಿಂಗ್, ನಾವು ರಜಪೂತರು" ಹೇಳುತ್ತಿದ್ದಂತೆ ಅವನ ಮುಖದಲ್ಲಿ ರಾಜಗಾಂಭೀರ್ಯ ಮಿಂಚಿ ಮರೆಯಾಯಿತು. ಕೇಳಿದೊಡನೆ ಶೇಷಣ್ಣನಿಗೆ ಆಶ್ಚರ್ಯವಾಯಿತು. ಕಾರಣ ಆ ಹೆಸರಿನ ಜಾತಿ ವಾಗಿಲಿಯಲ್ಲಿರಲಿಲ್ಲ.

"ಅಂದರೆ ಇವರು ಕ್ಷತ್ರೀಯರು ಶೇಷಣ್ಣ, ಯುದ್ದ ಮಾಡುವವರು!" ಎಂದು ಅವನ ತಿಳವಳಿಕೆ ತಿದ್ದಿದೆ, ಅದಕ್ಕೆ ಅವನು ಓಹ್ ಯುದ್ದ ಮಾಡುವವರು ಎಂದು ಸ್ವಗತ ರೀತಿಯಲ್ಲಿ ಗೊಣಗಿದ. ಬಳಿಕ ನಾನು "ರಜಪೂತರಾದ ನಿಮ್ಮಂಥವರು ನಾಟಕಗಳನ್ನಾಡುವುದೆಂದರೇನು ಜಲಂಧರ!" ಎಂದು ಕೇಳಿದೆ ಆಶ್ಚರ್ಯದಿಂದ.

ಅದಕ್ಕೆ ತಾನು.. "ಅದು ನನಗೂ ಅರ್ಥವಾಗಿಲ್ಲ ಸಾರ್, ಕೇಳಿದರೆ ನಮ್ಮ ಹಿರಿಯರು ಏನಾದರೊಂದು ಹೇಳಿ ಬಾಯಿ ಮುಚ್ಚಿಸ್ತಾರೆ, ಅದರೆ ಒಂದಂತೂ ನಿಜ, ನಮ್ಮ ಪೂರ್ವಿಕರು ದಿಲ್ಲಿಯನ್ನಾಳಿದ ಪೃಥ್ವಿರಾಜ ಚೌಹಾಣನ ವಂಶಸ್ಥರಂತೆ, ಘಜ್ನಿ ಘೋರಿಗಳೊಂದಿಗೆ ಸೆಣೆಸುತ್ತ ದಕ್ಷಿಣದ ಕಡೆ ವಲಸೆ ಬಂದರಂತೆ, ತಮಗೆ ಆಶ್ರಯ ನೀಡಿದ ರಾಜರ ಪರವಾಗಿ ಯುದ್ದ ಮಾಡುವ ಬಾಡಿಗೆ ಸೈನಿಕರಾಗಿದ್ದುಕೊಂಡು ಜೀವನ ಸಾಗಿಸುತ್ತಿದ್ದರಂತೆ, ಶ್ರೀಕೃಷ್ಣದೇವರಾಯನ ಕಾಲದಲ್ಲಿ ನಮ್ಮವರಿಗೆ ನಾಟಕದ ಗೀಳು ಅಂಟಿಕೊಂಡಿತಂತೆ ಸಾರ್, ನಮ್ಮವರ ಪ್ರತಿಭೆ ಮೆಚ್ಚಿ ರಾಯ ಉಂಬಳಿ ನೀಡಿರುವ ಬೊಮ್ಮಲಾಟವಾರಿಪಲ್ಲಿ ಎಂಬ ಹೆಸರಿನ ಗ್ರಾಮ ಅನಂತಪುರ ಜಿಲ್ಲೆಯಲ್ಲಿ ಈಗಲೂ ಇರುವುದಂತೆ! ಇದರಲ್ಲಿ ನಿಜವೆಷ್ಟೋ ಸುಳ್ಳೆಷ್ಟೋ! ಒಂದಂತೂ ಸತ್ಯ, ಸದ್ಯದ ಬದುಕೆಂಬ ಶತ್ರುವಿನೊಂದಿಗೆ ದಿನಂಪ್ರತಿ ಸೆಣೆಸುತ್ತಿರುವುದು!" ಎಂದು ಹೇಳಿದಾದ ಬಳಿಕ ನಿಟ್ಟುಸಿರಿಟ್ಟು ಶೂನ್ಯದ ಕಡೆ ದಿಟ್ಟಿಸಿದ.

ನನ್ನೆದುರಿಗೆ ಮಹಾ ಕಥಾನಕವೇ ಮನುಷ್ಯ ರೂಪ ಧರಿಸಿ ತನ್ನ ಇತಿವೃತ್ತ ಹೇಳಿಕೊಳ್ಳುತ್ತಿರುವಂತೆ ಭಾಸವಾಯಿತು. ಆತನ ವೈವಿಧ್ಯಮಯವೂ, ಸಾಹಸೋಪೇತವೂ ಆದಂಥ ಬದುಕಿನ ಮುಂದೆ ನನ್ನ ಸೃಜನಶೀಲತೆ ತೃಣಸಮಾನವೆನಿಸಿತು. ಆತ ತನ್ನ ಪೂರ್ವಾಪರ ಹೇಳಿಕೊಂಡಿದ್ದರಲ್ಲಿ ನಿಜವಿರದಿದ್ದರೂ ಸುಳ್ಳು ಖಂಡಿತವಿರಲಾರದು. ಇವನೇ ತನ್ನ ಬಿಂಬವನ್ನು ತಾನೇ ಮೋಹಿಸಿಕೊಳ್ಳುವವನಂತಿರುವಾಗ ಈತನ ತಂಗಿ ಇನ್ನು ಹೇಗಿರಬಹುದು! ಆಕೆಯ ರೂಪವನ್ನು ಕಲ್ಪಿಸಿಕೊಂಡೆ, ವಾಂಛೆ ಮಿಂಚಿ ಮರೆಯಾಯಿತು. ಅದುವರೆಗೆ ನನ್ನ ಕಡೆಗೇ ನೋಡುತ್ತಿದ್ದ ಶೇಷಣ್ಣ ಕತ್ತೊರಳಿಸಿ..

"ತಮ್ಮ ಜಲಂಧರ ಎಂಥ ಕಥೆಯಪ್ಪ ನಿನ್ನದು! ಕೇಳಿದರೆ ಮೈಜುಮ್ಮೆನ್ನುವಂತಿದೆ" ಎಂದು ಅವನ ಬೆನ್ನ ಮೇಲೆ ಕೈ ಇರಿಸಿ ಬಳಿಕ ಹೇಳಿದ "ಇನ್ನು ಮುಂದೆ ನೀನು ನಿನ್ನ ತಂಗಿ ಬಗ್ಗೆ ಯೋಚಿಸಬೇಡ. ವಾಗಿಲಿಯಲ್ಲಿ ವರಗಳಿಗೆ ಬರವಿಲ್ಲ, ನಮ್ಮ ಮೇಸ್ತ್ರಿ ಗೌಡರು ಎಲ್ಲರೂ ಸಹಾಯ ಮಾಡುವರು, ಜಾತಿ ಕುಲಗೋತ್ರ ನೋಡುವುದು ಬೇಡ, ಮದುವೆಯಾಗಿ ನಿನ್ನ ತಂಗಿ ಸುಖವಾಗಿರುವುದು ಮುಖ್ಯ. ಸುಖವಾಗಿ ನೋಡಿಕೊಳ್ಳುವ

ಹುಡುಗನನ್ನು ಇಲ್ಲೆ ಹುಡುಕಿದರಾಯಿತು" ಎಂದ ಸಹಜ ರೀತಿಯಲ್ಲಿ, ಅದನ್ನು ಕೇಳಿದೊಡನೆ ಸಿಂಗ್ ಸ್ವಲ್ಪ ಕೆರಳಿದವನಂತೆ "ನಾವು ಬಡವರಿದ್ದರೂ ಸ್ವಾಭಿಮಾನಿ ರಜಪೂತರು ಶೇಷಣ್ಣ, ಪ್ರಾಣಬಿಟ್ಟರೂ ಜಾತಿಬಿಡಬಾರದು, ಅದಲ್ಲದೆ ಇಂಥಲ್ಲೆಲ್ಲ ನಮ್ಮ ರಜಪೂತರಿರುವುದಿಲ್ಲ, ಬೇರೆ ಜಾತಿಯವರಿಗೇನಾದರೂ ನಮ್ಮ ತಂಗಿಯನ್ನು ಕೊಟ್ಟು ಮದುವೆ ಮಾಡಿದರೆ ನಮ್ಮ ರಜಪೂತ ಕುಲದ ಹಿರಿಯರು ಬಹಿಷ್ಕಾರ ಹಾಕುವರು. ಹೊಸಪೇಟೆಯಲ್ಲಿ ರುದ್ರಪ್ರತಾಪಸಿಂಗ್ ಎಂಬ ಹುಡುಗ ಇರುವನಂತೆ, ಅವನು ಅಲ್ಲಿ ರೇಲ್ವೇಸ್ಟೇಷನ್ನಿನಲ್ಲಿ ಹಮಾಲಿ ಕೆಲಸ ಮಾಡುತ್ತಿರುವನಂತೆ, ವಾಗಿಲಿ ಕ್ಯಾಂಪ್ ಮುಗಿದ ಬಳಿಕ ಅಲ್ಲಿಗೆ ಹೋಗಬೇಕಿದೆ" ಎಂದು ತುಸು ಖಾರವಾಗಿಯೆ ಪ್ರತಿಕ್ರಿಯಿಸಿದ, ಬಳಿಕ ತಾನೆ "ಹೀಗೆ ಹೇಳಿದೆನೆಂದು ತಪ್ಪು ತಿಳಿಯಬೇಡಿರಿ, ವರ ಯಾವ ಕೆಲಸ ಮಾಡುತ್ತಿರವನೆಂಬುದು ಮುಖ್ಯವಲ್ಲ ಅಣ್ಣಾ, ಯಾವ ಜಾತಿಯವನೆಂಬುದು ಮುಖ್ಯ" ಎಂದು ಸೌಜನ್ಯದಿಂದ ನುಡಿದ. ಆದರೂ ಶೇಷಣ್ಣನ ಮುಖದಲ್ಲಿ ಮೂಡಿದ್ದ ಚಿಂತೆಯ ಗೆರೆಗಳು ಹ್ರಸ್ವಗೊಳ್ಳಲಿಲ್ಲ.

ಇವರೆಲ್ಲ ರಾಜಪೋಷಾಕು ಧರಿಸಲು ಮಾತ್ರ ಅರ್ಹರೆಂದು ಭಾವಿಸಿದೆ.

++++

ಬಲಗೈಯ ಕೆಲ ಬೆರಳುಗಳ ತುದಿಯಲ್ಲಿನ ಶಂಖ ಚಕ್ರಗಳಿಗೆ ಹತ್ತಿದ್ದ ಇಂಕನ್ನು ಮುಂದಲೆಯ ಕೂದಲಿಗೆ ಒರೆಸಿಕೊಳ್ಳುತ್ತ ಕೇಳಿದೊಡನೆ "ಯಾವ ದಿಕ್ಕಿಗೆ ಹೋಗ್ಯಾರಂತ ಹೆಂಗ ಹೇಳ್ಲಿ ಅಯ್ಯಾ! ಹೇಳಲಕಾಗಲೀ ಕೇಳಲಕಾಗಲೀ ಅವರೇನು ನಮ್ಮಂಥ ಮಾಮೂಲು ಮನುಷ್ಯರೇನು! ಅವರು ವಾಪಾಸು ಬಂದಾಗಲೇ ಖಾಯಮ್ಮು ಅಯ್ಯಾ! ಅಂಥವರನ್ನು ಯಾಕೆ ತಲೆಗಚ್ಚಿಕೊಳ್ತೀರಿ!" ಎಂದು ಪರಶುರಾಮನ ಹೆಂಡತಿ ಗೌರಮ್ಮ ಹೇಳು ಹೇಳುತ್ತಲೇ ತನ್ನ ಕಣ್ಣೊಳಗೆ ನೀರು ತಂದುಕೊಂಡಳು. "ಇಂಥವರಿಗೆ ಹೆಂಡರು ಮಕ್ಕಳು ಯಾಕೆ ಬೇಕು! ಮುಂದೊಂದು ದಿನ ನಾನೇ ಹಾಳುಬಾವಿ ಹುಡುಕಿಕೊಂಡು ಹೋಗ್ತೀನಿ" ಎಂದು ತನ್ನ ಪಾಡಿಗೆ ಗೊಣಗುತ್ತ ಹೆಜ್ಜೆ ಹಾಕಿದಳು. ಆಕೆಯನ್ನು ದನಗಳನ್ನು ಹಿಂಬಾಲಿಸಿದವೋ ದನಗಳನ್ನೇ ತಾನು ಹಿಂಬಾಲಿಸಿದಳೊ! ಆಕೆಯ ಮಾತುಗಳು ದುಃಖ ತಪ್ತವೆನಿಸಿದವು, ಧ್ವನಿಪೂರ್ಣವೆನಿಸಿದವು, ಸಮಸ್ತ ಗ್ರಾಮೀಣ ಮಹಿಳೆಯರ ವಿವಾಹೋತ್ತರ ಬದುಕನ್ನು ಪ್ರತಿನಿಧಿಸಿದವು, ನಿಟ್ಟುಸಿರುಬಿಟ್ಟೆ.

ಪುನಃ ಟಫ್‌ಗೈಸ್ ಚಿತ್ರ ನೆನಪಾಯಿತು, ಅದೋ ಎಂದೋ ನೋಡಿದ್ದು, ಮಸುಕು ಮಸುಕಾದ ನೆನಪು, ಅದರಲ್ಲಿ ಕಿರ್ಕ್‌ಡಗ್ಲಾಸ್ ಮತ್ತು ಟರ್ನರರಿಬ್ಬರು ಪೈಪೋಟಿಯಿಂದ ಅಭಿನಯಿಸಿರುವರು, ಜೈಲಿನಿಂದ ಪಲಾಯನಗೈದಿರುವ ಆ ಅಪರಾಧಿಗಳು ತಾವು ಸೇರಿಕೊಳ್ಳವ ಮುಗ್ಧ ಹಳ್ಳಿಯಲ್ಲಿ ಆವಾಂತರಗಳನ್ನು ಸೃಷ್ಟಿಸುತ್ತಾರೆ, ಅಮಾಯಕರನ್ನು ಗೋಳಾಡಿಸುತ್ತಾರೆ. ಅವರಿಗಿಂತ ಇವರಿಬ್ಬರೂ ಕಡಿಮೆ ಇಲ್ಲವೆಂಬ ಅನುಮಾನ ಮೂಡಿತು. ಇವರು ಸೇರಿರಬಹುದಾದ ಹಳ್ಳಿಯನ್ನು ಕಲ್ಪಿಸಿಕೊಂಡೆ. ಅಲ್ಲೆಲ್ಲ ಇವರು ತಮ್ಮ ಉಪದ್ರಗಳನ್ನು ಆರಂಭಿಸಿರಬಹುದು, ಅಥವಾ ಪರಸ್ಪರ ಕೊಲೆಗೀಡಾಗಿರಬಹುದು. ಕೊಲೆಗೀಡಾಗಿರುವ ಇವರ ಕಳೇಬರಗಳು ಕೊಳೆಯುತ್ತಿರಲೂಬಹುದು. ಅಥವಾ ಶರಭನ ಒತ್ತಾಸೆ ಮೇರೆಗೆ ಪರಶುರಾಮ ವಕೀಲ ಜೀವೋತ್ತಮರಾವ್ ಅವರನ್ನು ಭೆಟ್ಟಿ ಮಾಡಿರಲೂಬಹುದು, ಅಥವಾ ವಕೀಲರೇ ಇವರನ್ನು ಪೋಲಿಸರ ವಶಕ್ಕೆ ಒಪ್ಪಿಸಿರಲೂಬಹುದು, ಅಥವಾ ಇವರು ತಮ್ಮ ದೈನಂದಿನ ಖರ್ಚುಗಳನ್ನು ಸರಿದೂಗಿಸುವ ಸಲುವಾಗಿ ಸುಪಾರಿ ಪಡೆದಿರಬಹುದು. ಇಂಥ ಅಸಂಬದ್ಧ

ಕಲ್ಪನೆಗಳ ಸರಮಾಲೆಯ ಕುಣಿಕೆಯಲ್ಲಿ ಸಿಲುಕಿದೆ, ಒಂದು ಕ್ಷಣ ನಖಶಿಖಾಂತ ಕಂಪಿಸಿದೆ. ಪರರಿಗೆ ಕೇಡು ಬಯಸುವ ದುಃಸ್ಥಿತಿಗೆ ತಲುಪಿದೆನಲ್ಲ ಎಂದು ಪಾಶ್ಚಾತ್ತಾಪ ಅನುಭವಿಸಿದೆ. ನನ್ನೊಳಗಿನ ಸೃಜನಶೀಲ ಲೇಖಕನನ್ನು ವಿಸರ್ಜಿಸಿ ನಿರಮ್ಮಳಗೊಳ್ಳುವ ಸಲುವಾಗಿ ಸಂಕಟ ಅನುಭವಿಸಿದೆ. 'ದೇವರೆ ಅವರಿಬ್ಬರು ಕ್ಷೇಮವಾಗಿ ವಾಗಿಲಿಗೆ ಮರಳುವಂತಾಗಲಿ' ಎಂದು ಬೇಡಿಕೊಂಡೆ, ಕಣ್ಣುಮುಚ್ಚಿದೆ, ಪುನಃ ತೆರೆದೆ. ವಾಗಿಲಿ ವಿಶ್ವಸುಂದರಿಯಂತೆ ಮನಸ್ಸಿನಲ್ಲಿ ಅವತರಿಸಿತು. ಮೆಲ್ಲಗೆ ನೋಟವನ್ನು ಓಣಿಯುದ್ದಕ್ಕೂ ಬೀರಿದೆ, ಅಗೋ ಅಲ್ಲಿ..

ತನ್ನ ತಂದೆಯ ನಿರ್ದೇಶನದಂತೆ ಅವಿವಾಹಿತ ರಂಗಾರೆಡ್ಡಿ ತಮ್ಮ ಮಹಡಿಮನೆಯನ್ನು ಆಳುಗಳ ಸಹಾಯದಿಂದ ಸ್ವಚ್ಚಗೊಳಿಸಲಾರಂಭಿಸಿರುವುದು ಗೋಚರಿಸಿತು. ಅದೂ ವಿಶೇಷ ಮುತುವರ್ಜಿಯಿಂದ. ಅದೋ ಗೋಪಾಲ, ಭೋಜ, ಅಯ್ಯಾಳಿಗಳಂಥವರು ತಮ್ಮ ಇಸ್ಪೀಟಾಟಕ್ಕೆ ಮೀಸಲಿರಿಸಿದ್ದ ಮನೆ. ಪ್ರತಿಯೊಂದು ಆಟಕ್ಕೂ ಇಂತಿಷ್ಟು ಹಣವೆಂದು ಮೀಸಲಿರಿಸುತ್ತಿದ್ದಂಥ ಮನೆ, ಅವರೆಲ್ಲರ ನಿದ್ರಾಮೈಥುನಗಳಿಗೆ ಆಶ್ರಯ ಕಲ್ಪಿಸುತ್ತಿದ್ದಂಥ ಮನೆ, ಅವರಿಗೆ ಏನು ಹೇಳುವುದು! ಅವರ ಮನರಂಜನೆಯಿಂದ ತಮಗೆ ಲಭಿಸುತ್ತಿದ್ದ ಹೆಚ್ಚುವರಿ ಆದಾಯ ಕೈ ತಪ್ಪುತ್ತಿರುವುದಲ್ಲ ಎಂಬ ಆತಂಕವನ್ನು ಅನುಭವಿಸುತ್ತಲೇ ರೆಡ್ಡಿ ನಿರ್ದೇಶನ ಮುಂದುವರಿಸಿದ್ದ, ನನ್ನ ಕಡೆ ಕೋಪ ಮಿಶ್ರಿತ ನೋಟ ಬೀರುತ್ತಿದ್ದ. ಅಲ್ಲಿಂದ ನೋಟವನ್ನು ಆತನ ತಂದೆ ಬಸವನಗೌಡನ ಕಡೆ ವಿಸ್ತರಿಸಿದೆ. ಆತ ಕೆಳಗಡೆ ಇದ್ದ ಮನೆಯ ಕಟ್ಟೆ ಮೇಲೆ ವಿಶಿಷ್ಟಭಂಗಿಯಲ್ಲಿ ಕೂತಿದ್ದ, ತನ್ನೆಡಗಾಲನ್ನು ಮಡಚಿ ಬಲಗಾಲನ್ನಿಳಿಬಿಟ್ಟುಕೊಂಡಿದ್ದ, ಮುಷ್ಟಿಯಲ್ಲಿ ತನ್ನಷ್ಟೆ ಗಾತ್ರದ ಕಾಳಹಸ್ತಿ ಬೀಡಿಯನ್ನು ಹಚ್ಚಿಕೊಂಡಿದ್ದ, ತುಸು ಮುಂದಕ್ಕೆ ಬಾಗಿ ಮೂಗು ಬಾಯಿಂದ ಹೊಗೆ ಉಗುಳುತ್ತಿದ್ದ, ಅದರ ಘಾಟಿಗೆ ಕೆಮ್ಮುತ್ತಿದ್ದ, ಓಣಿಯ ಚರಾಚರಗಳೊಂದಿಗೆ ನನ್ನನ್ನೂ ಸಮೀಕರಿಸಿ ನೋಡುತ್ತಿದ್ದ, ನನ್ನೊಂದಿಗೆ ಮಾತು ಆರಂಭಿಸಲು ತಾಲೀಮು ನಡೆಸಿದ್ದ. ಓಹ್ ದೇವರ ದಯೆ, ಆ ಅಸ್ತಮಾ ವ್ಯಾಧಿಪೀಡಿತನ ಮುಖ ಹಿಂದೆಂದಿಗಿಂತ ಕಳಾಪ್ರಪೂರ್ಣವಾಗಿರುವುದು.

ಆ ಓಣಿಯ ಇಕ್ಕಟ್ಟಾದ ಹಾದಿ ಸವರ್ಣೀಯರ ಮನೆಗಳ ನಡುವೆ ಇದ್ದ ಈಶ್ವರ ದೇವರ ಗುಡಿಗೂ, ದಲಿತರ ಓಣಿಯಲ್ಲಿದ್ದ ಕಂದಾರೆಮ್ಮನ ಗುಡಿಗೂ ಸಂಪರ್ಕ ಕಲ್ಪಿಸಿತ್ತು, ಹಾಗೆಯೇ ಹೊಲೆಯರ ಓಣಿಗೆ ಅಂಟಿಕೊಂಡಂತಿದ್ದ ಸವರ್ಣೀಯರ ಬಹಿರ್ದೆಸೆಯಂಥ ವಿಸರ್ಜನಾಕಾರ್ಯಗಳಿಗೂ. ನೀರು ತುಂಬಿದ ತಂಬಿಗೆಗಳ ತಮ್ಮೆಡಗೈಗಳಲ್ಲೂ, ಹೊಗೆಯಾಡುತ್ತಿದ್ದ ಚುಟ್ಟಗಳನ್ನು ತಮ್ಮ ಬಲಗೈಗಳಲ್ಲೂ ಹಿಡಿದು ಧಾವಂತದಲ್ಲಿದ್ದ ಕೆಲವರು ಗೌಡನೊಂದಿಗೆ ತುಸು ಚರ್ಚಿಸಿ, ಬಳಿಕ ನನ್ನ ಕಡೆ ಮಹಡಿ ಕಡೆ ಬೇಸರ ಮಿಶ್ರಿತ ನೋಟ ಬೀರಿ ಮುಂದುವರೆಯುತ್ತಿದ್ದರು. ಅವರ ನಡುವೆ ಸಂಭವಿಸುತ್ತಿದ್ದ ಕ್ಲುಪ್ತ ಮಾತುಕತೆ ನನಗೆ ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ, ಆದರೂ ಸೃಜನಶೀಲವಾಗಿ ಊಹಿಸಿಕೊಳ್ಳುತ್ತ ನಿಂತಿದ್ದೆ ಮೂಗನಂತೆ.

ಅಷ್ಟರಲ್ಲಿ ಕೋರೈಸಿದಂತಾಯಿತು, ಝಳ ಹೆಚ್ಚಿದಂತಾಯಿತು, ಸೂರ್ಯನ ಕಡೆ ನೋಡಿದೆ, ತನಗಡ್ಡವಿದ್ದ ಮೋಡಗಳು ಚದುರಿದ ಪರಿಣಾಮವಾಗಿ ಸೂರ್ಯ ನಿಚ್ಚಳಗೊಂಡಿದ್ದಮ ತನ್ನ ಚೂರಿಯಂಥ ಕಿರಣಗಳನ್ನು ಸಚರಾಚರಗಳ ಮೇಲೆ ಪ್ರಯೋಗಿಸಲಾರಂಭಿಸಲಾರಂಭಿಸಿದ್ದ . ಆ ಬಿಸಿಲಿನಿಂದ ಪ್ರಭಾವಿತನಾಗಿ ಗೌಡ ಉತ್ತರೀಯವನ್ನು ತನ್ನ ತಲೆ ಮೇಲೆಳೆದುಕೊಂಡ, ನನ್ನ ಕಡೆ ನೋಡುವ ಸಲುವಾಗಿ ಅಂಗೈಯನ್ನು ತನ್ನ ಬಿಳಿಹುಬ್ಬುಗಳ ಮೇಲಿರಿಸಿಕೊಂಡ, ಏನೋ ಹೇಳಲೆಂದು ಬಾಯಿ ತೆರೆದ. ಆದರೆ ಅಷ್ಟರಲ್ಲಿ ಆ ಕಡೆಯಿಂದ ಲಚುಮೀರೆಡ್ಡಿಯೂ,

ಈ ಕಡೆಯಿಂದ ಜಯರಾಮಿರೆಡ್ಡಿಯೂ, ಇನ್ನೊಂದು ಕಡೆಯಿಂದ ಗೊಲ್ಲರೀರಯ್ಯನೂ..

ಇನ್ನೇನು ಅವರೆಲ್ಲ ಕೋಮುಗಲಭೆಯಿಂದ ತತ್ತರಿಸಿರುವ ಆದವಾನಿ ಕುರಿತೋ, ಪ್ರಾತಃಕಾಲ ಸಮಯದಲ್ಲಿ ಬಹಿರ್ದೆಸೆಗೆ ಹೋಗುವುದರ ಮೂಲಕ ಕಾಣೆಯಾಗಿರುವ ಆಸ್ಪರಿ ತಮ್ಮಾರೆಡ್ಡಿಯವರ ನವವಿವಾಹಿತ ಸೊಸೆ ರುಕ್ಮಿಣಿ ಕುರಿತೋ, ಮಾಸನೂರು ಹಾದಿಬಡುಕರ ಕೈಗೆ ಒಂಟಿಯಾಗಿ ಸಿಕ್ಕು ಮಾರಣಾಂತಿಕವಾಗಿ ಹಲ್ಲೆಗೀಡಾಗಿ ತೆವಳುತ್ತ ಮನೆಗೆ ಮರಳಿ ನಾಟಿ ವೈದ್ಯ ಕುರುಬರ ಸೋಮಣ್ಣನಿಂದ ಚಿಕಿತ್ಸೆ ಪಡೆಯುತ್ತಿರುವ ದಿನಿಸಿನಂಗಡಿಯ ನಾರಾಯಣಶೆಟ್ಟಿ ಕುರಿತೋ, ಎಲ್ಲಿಂದಲೋ ಆಗಮಿಸಲಿರುವ ನಾಟಕಗಳ ಸ್ತ್ರೀಪಾತ್ರಧಾರಿ ಕುರಿತೋ, ರಜಪೂತ ಎಂಬ ವಿಲಕ್ಷಣ ಜಾತಿ ಸ್ಪೃಶ್ಯವೋ ಅಸ್ಪೃಶ್ಯವೋ ಎಂಬ ಕುರಿತೋ, ತಮ್ಮೂರೊಳಗೆ ಪ್ರದರ್ಶಿಸಲಿರುವ ನಾಟಕ ಸಾಮಾಜಿಕವೋ, ಪೌರಾಣಿಕವೋ ಎಂಬ ಕುರಿತೋ, ಅಥವಾ ಪರಸ್ಪರ ಉಭಯಕುಶಲೋಪರಿ ಕುರಿತೋ ಮಾತುಕತೆ ಆರಂಭಿಸಲಿರುವರು. ಆ ಚರ್ಚೆಗೆ ನನ್ನನ್ನೂ ಆಮಂತ್ರಿಸಿದಲ್ಲಿ ಏನು ಮಾಡುವುದು! ತಾಸುಗಳ ಪರ್ಯಂತ ನಡೆಯಲಿರುವ ಆ ವಿಚಾರ ಸಂಕಿರಣ ಸಮಾರೋಪಗೊಳ್ಳುವುದು ಕನಸಿನ ಮಾತು!

ಮೆಲ್ಲಗೆ ಹೊಸ್ತಿಲಲ್ಲದ ಹೊಸ್ತಿಲನ್ನು, ಬಾಗಿಲಲ್ಲದ ಬಾಗಿಲನ್ನು ದಾಟಿ ಒಳ ಪ್ರವೇಶಿಸಿದೆ. ಯಾರಾದರೂ ಬಂದು ಚಿತ್ತಾಪಹರಣ ಮಾಡದಿರಲೆಂದು ಕದವನ್ನು ತುಸು ಓರೆ ಮಾಡಿದೆ. ಉಸ್ಸೆಂದು ಬಿದಿರ ಹಂಸತೂಲಿಕಾತಲ್ಪದ ಮೇಲೆ ಮೈ ಚೆಲ್ಲಿದೆ. ಪುನಃ ಎದ್ದು ನಿಟಾರನೆ ಕುಳಿತೆ, ಬಳಿಕ ಕೋಣೆಯ ಒಳಾಂಗಣವನ್ನು ಅಮೂಲಾಗ್ರವಾಗಿ ಪರಿಶೀಲಿಸಿದೆ.

ತನ್ನತ್ತ ಕೈಯನ್ನು ಚಾಚಿದೆ ಎಂದರೆ ಹುಷಾರ್ ಎಂದು ಎಚ್ಚರಿಸುತ್ತಿರುವ ಅಪೂರ್ಣ ಕಾದಂಬರಿಯ ಹಸ್ತಪ್ರತಿ! ತಮ್ಮನ್ನು ಪೊರಕೆಯ ಸಹಾಯದಿಂದ ಗೂಡಿಸಿ ಹೊರಚೆಲ್ಲಿದೆ ಎಂದರೆ ಹುಷಾರ್ ಎಂದು ಎಚ್ಚರಿಸುತ್ತಿರುವ ಕಸ! ಶೀಲಾಪಹರಣಗೊಂಡಿರುವ ತನ್ನನ್ನು ಉಪಯೋಗಿಸಿದೆ ಎಂದರೆ ಹುಷಾರ್ ಎಂದು ಎಚ್ಚರಿಸುತ್ತಿರುವ ಸೊಳ್ಳೆಪರದೆ! ಏನಾದರೊಂದು ಗೊಣಗುವುದರ ಮೂಲಕ ಒಲೆಯ ಬೂದಿಯಲ್ಲಿ ಸೊಂಪಾಗಿ ಮಲಗಿರುವ ತನ್ನ ಏಕಾಗ್ರತೆಗೆ ಭಂಗ ತಂದಿ ಎಂದರೆ ಹುಷಾರ್ ಎಂದು ಎಚ್ಚರಿಸುತ್ತಿರುವ ಬೆಕ್ಕು! ಹಸಿಯುತ್ತಿರುವ ತನ್ನ ಗೇಣು ಗಾತ್ರದ ವಿಸ್ತೀರ್ಣಕ್ಕೆ ಅನ್ನ ಬೇಯಿಸಿ ಹಾಕಿದಿ ಎಂದರೆ ಹುಷಾರ್ ಎಂದು ಎಚ್ಚರಿಸುತ್ತಿರುವ ನನ್ನದೇ ಆದ ಉಪದ್ರವಿ ಒಡಲು! ನೆನಪಿಸಿಕೊಳ್ಳುವುದರ ಮೂಲಕ ನಗರೂರಿನ ಶ್ಮಶಾನದ ಮಣ್ಣೊಳಗೆ ಸೊಂಪಾಗಿ ನಿದ್ರಿಸುತ್ತಿರುವ ತನ್ನ ಏಕಾಗ್ರತೆಗೆ ಭಂಗ ತಂದಿ ಎಂದರೆ ಹುಷಾರ್ ಎಂದು ಎಚ್ಚರಿಸುತ್ತಿರುವ ಲಕ್ಷ್ಮಿಯ ಕಳೇಬರ! ಎರಡು ದಿವಸಗಳ ಮಟ್ಟಿಗಾದರೂ ನೀನು ನಮಗೆ ಅಳಿಯನಾಗದೆ, ನಮ್ಮ ನತದೃಷ್ಟ ಕರುಳ ಕುಡಿಯ ಗಂಡನಾಗದೆ ಹೋದೆಯಲ್ಲವೋ ಎಂದು ಅಧಿಕಾರಯುತವಾಗಿ ಕೇಳುತ್ತಿರುವ ಆಕೆಯ ತಂದೆ! ನಿನ್ನ ಹುಸಿ ಸಜ್ಜನಿಕೆಯ ನೆನಪುಗಳನ್ನು ಕೊಲ್ಲುವ ಸಲುವಾಗಿಯಾದರೂ ನನ್ನ ಆಯುಧವನ್ನು ಉಪಯೋಗಿಸು ಮಹರಾಯ ಎಂದು ವಿನಂತಿಸಿಕೊಳ್ಳುತ್ತಿರುವ ಚೂರಿಯೊಳಗಿನ ಉರುಕುಂದಿ! ಈ ನಿನ್ನ ತಮ್ಮನನ್ನು ಹಡುಕುವ ಸಲುವಾಗಿ ಇನ್ನೂ ಹೊರಡದಿರುವ ನೀನೆಂಥ ಅಣ್ಣನೋ ಎಂದು ಕೇಳುತ್ತಿರುವ ನೆನಪ ಕವಚದೊಳಗಿರುವ ಶರಭ!

"ಮನಃಪರಿವರ್ತನೆಗೊಂಡೇನಾದರೂ ಹಣ ಕಳಿಸುವುದರ ಮೂಲಕವೋ, ನಾನು ಸೂಚಿಸಿರುವ ಕನ್ಯಾಮಣಿ ಪಾರ್ವತಿಯನ್ನು ಒಪ್ಪುವ ಮೂಲಕವೋ ನನ್ನ ನಿರೀಕ್ಷೆಗಳನ್ನು ನಿಜ ಮಾಡಿದಿ ಎಂದರೆ ಅದನ್ನು ನಿಭಾಯಿಸುವ ಇಚ್ಛಾಶಕ್ತಿ ಈ ನಿನ್ನ ಬಡಪಾಯಿ ತಂದೆಗಿಲ್ಲವೋ

ಮಗನೇ, ನೀನು ನನ್ನ ನಿರ್ಧಾರಗಳನ್ನು ಜೀವನ ಪರ್ಯಂತ ವಿರೋಧಿಸುತ್ತಲೇ ಇರಬೇಕೆಂಬುದು ನನ್ನ ಅಂತಿಮ ಆಸೆ. ಸುಶಿಕ್ಷಿತನನ್ನಾಗಿಸಿರುವ ಪ್ರಾಯಶ್ಚಿತ್ತಕ್ಕೆ ನಾನು ಈ ತೀರದಲ್ಲೂ, ಆಕಸ್ಮಿಕ ಅಪಘಾತದೋಪಾದಿಯಲ್ಲಿ ವಿದ್ಯಾವಂತನೂ ಕ್ರಾಂತಿಕಾರಿ ಕಥೆಗಾರನೂ ಆಗಿರುವ ತಪ್ಪಿಗೆ ನೀನು ಆ ತೀರದಲ್ಲೂ ಕೊನೆಯುಸಿರೆಳೆಯುವ ತನಕ ಮುಂದುವರಿದರೇನೆ ಚಂದ" ಎಂದು ಸಾರಿ ಸಾರಿ ಹೇಳುತ್ತಿರುವ ತಂದೆ!

ಮನದ ಗೂಡೊಳಗಿನ ಅಸಂಖ್ಯಾತ ಮೊಟ್ಟೆಗಳು ಬಿರುಕುಬಿಡುತ್ತಿರುವಂತೆ, ಅವು ಬಗೆ ಬಗೆಯ ಸರಿಸೃಪಗಳಾಗಿ ಮನೆಯ ಮನದ ತುಂಬೆಲ್ಲಾ ಹರಿದಾಡಲಾರಂಭಿಸಿದಂತೆ ಭಾಸವಾಯಿತು. ಅದಲ್ಲದೆ ಹೃದಯದ ಎಡಹೃತ್ಕರ್ಣದಲ್ಲಿ ಪೋಲಿಸ್ ಅಲಿಯೂ ಬಲಹೃತ್ಕರ್ಣದಲ್ಲಿ ವಕೀಲ ಜೀವೋತ್ತಮರಾವೂ. ನೆನಪಿನ ಅಣುಅಣುವಿನಲ್ಲಿ ವನಜ, ಕೊಲೆಯಾಗಿರುವ ರೆಡ್ಡಿ, ಆ ಎಲ್ಲಾ ಕಹಿಘಟನೆಗಳು ಮುಪ್ಪರಿಗೊಂಡಿರುವ ಊಳೂರು! ಓಹ್ ಊಳೂರು! ಅರೆ! ನಾನಲ್ಲಿಗೆ ಒಂದೇ ಒಂದು ಸಲ ಹೋಗಿ ಬರಬೇಕಿತ್ತಲ್ಲವೆ!

ಭೆಟ್ಟಿಯಾಗುವುದರ ಮೂಲಕ ಉರುಕುಂದಿ ಎಂಬ ವೃದ್ಧ ಸುಪಾರಿ ಕೊಲೆಗಾರ ನಿಗೂಢ ರೀತಿಯಲ್ಲಿ ವಾಸಿಸುತ್ತಿರುವ, ಕ್ರೌರ್ಯವನ್ನು ಸಾಂಕ್ರಾಮಿಕಗೊಳಿಸುತ್ತಿರುವ, ನತದೃಷ್ಟ ಪ್ರತಿಬಿಂಬಗಳಿಂದ ಕಿಕ್ಕಿರಿದಿರುವ, ಸಮ್ಮೋಹನಾಸ್ತ್ರವೇ ತಾನೆಂಬಂತಿರುವ ಪಂಚಲೋಹ ಹಿಡಿಗತ್ತಿಯನ್ನು ಆಕೆಯ ಸುಂದರ ಕರದ್ವಯಗಳಲ್ಲಿಡುವ ಸಲುವಾಗಿಯಾದರೂ ನಾನು ಆ ಊರಿಗೆ ಒಂದೇ ಒಂದು ಸಲ ಹೋಗಿ ಬರಬೇಕಿತ್ತಲ್ಲವೆ!

ನೋಡು ನೋಡುತ್ತಿದ್ದಂತೆ ಚೀಲದೊಳಗೆ ಅರಗಳಿಗೆ ಕೋಲ್ಮಿಂಚು ಕಾಣಿಸಿದಂತೆ ಭಾಸವಾಯಿತು. ಅದೆಲ್ಲ ಇಡೀ ಮನೆಯನ್ನು ವ್ಯಾಪಿಸಿ ನೋಡಿದ ಕಣ್ಣುಗಳನ್ನು ಗಲಿಬಿಲಿಗೊಳಿಸಿತು. ಸಹಸ್ರಪದಿಯಂತೆ ನನ್ನತ್ತ ತೆವಳುತ್ತ ಧಾವಿಸುತ್ತಿರುವುದು ತನ್ನನ್ನು ತಾನು ಅಳೆದುಕೊಳ್ಳುತ್ತಿರುವ ಅಂಗುಲ ಹುಳುವಿನಂತೆ ಉರುಗದಂತೆ ಸರಿಸೃಪದಂತೆ ಇಂಬಳದಂತೆ! ಇನ್ನಾವುದೋ ವಿಚಿತ್ರ ಕ್ರೂರ ಪ್ರಾಣಿಯಂತೆ! ಅರೆ ಅದು ಇನ್ನೇನು ನನ್ನನ್ನು ಸಮೀಪಿಸಿಯೇಬಿಟ್ಟಿತು! ನನ್ನ ಮೈ ಮೇಲೆ ಅರೋಹಣಕ್ಕೆಳಸಿಯೇ ಬಿಟ್ಟಿತು ಎನ್ನುವಷ್ಟರಲ್ಲಿ ವಾಸ್ತವಕ್ಕೆ ಮರಳಿ ನೋಡಿದೆ, ಪುಣ್ಯಕ್ಕೆ ಅದು ಇದ್ದಲ್ಲೇ ಇರುವುದು. ನಿಡುಸುಯ್ದೆ ಸಮಾಧಾನದಿಂದ, ಬೆವರೊರೆಸಿಕೊಂಡೆ ಅಂಗಿಯ ತುದಿಯಿಂದ.

ರಾತ್ರಿ ಇಡೀ ಹಳವಂಡಗಳ ದುಃಸ್ವಪ್ನಗಳ ಕಾಟ, ನಿದ್ರೆ ಇಲ್ಲದೆ ಹೊರಳಾಡಿದ್ದು ನೆನಪಾಯಿತು. ಕಟ್ಟಿಕೊಂಡಿದ್ದ ಸೊಳ್ಳೆಪರದೆಯೊಳಗೆ ಸಂಗಡ ತಬ್ಬಿಕೊಂಡಿರುವುದು ಶರಭ ಎಂದು ನೆನಪಾದೊಡನೆ ಅದನ್ನು ಬಿಚ್ಚಿಸೆದ ನಂತರ, ಅದೂ ಮುಂಗೋಳಿ ಕೂಗುವ ಹೊತ್ತಲ್ಲಿ ನಿದ್ದೆ ಮೆಲ್ಲಗೆ ನನ್ನನ್ನು ವರಿಸಿದ್ದು. ಆದರೂ ಅದು ಕನಸು ಕನವರಿಕೆಗಳಿರದ ಪ್ರಶಾಂತ ನಿದ್ದೆಯಾಗಿರಲಿಲ್ಲ. ನಿದ್ದೆ ಮತ್ತು ಎಚ್ಚರಗಳ ನಡುವಿನ ಸೇತುವೆ ಮೇಲೆ ಚೂರಿ ಗಸ್ತು ತಿರುಗುತ್ತಿದ್ದುದೇ ಅದಕ್ಕೆ ಕಾರಣ. ಮೌರ್ಯರ ಕಾಲದ ವಿಷಕನ್ಯೆಯರಲ್ಲಿ ಯಾರಾದರೊಬ್ಬರು ಚೂರಿಯ ರೂಪದಲ್ಲಿರಬಹುದೆಂಬ ಸಂದೇಹ! ತನ್ನನ್ನು ಸ್ಪರ್ಶಿಸುವಂತೆ ಕೈಯಲ್ಲಿ ಹಿಡಿದು ತಿರುಗಾಡುವಂತೆ ವಿನಾಕಾರಣ ಸೃಷ್ಟಿಗೊಳ್ಳುವ ಶತ್ರುಗಳ ಮೇಲೆ ಪ್ರಯೋಗಿಸುವಂತೆ ತನ್ನನ್ನು ಇನಿಯಳೆಂದೇ ಭಾವಿಸಿ ಚುಂಬಿಸುವಂತೆ ಪ್ರೇರೇಪಿಸುತ್ತಿರುವ ಸುಂದರ ಚೂರಿ! ಈ ಚೀಲದೊಳಗಿನ ಮಾರಣಾಂತಿಕ ಚೂರಿ! ನನಗರಿವಿಲ್ಲದಂತೆ ಅದರ ಕಡೆ ಚಲಿಸುತ್ತಿರುವ ಕಾಲುಗಳು! ಅದನ್ನು ಸ್ಪರ್ಶಿಸಲು ಹಾತೊರೆಯುತ್ತಿರುವ ನನ್ನ ಕೈಗಳು! ಅದಕ್ಕೆ ಸಂಬಂಧಿಸಿದ

ಸಂಬಂಧಿಸಿರದ ಕಥಾನಕಗಳನ್ನು ಊಹಿಸಿಕೊಳ್ಳುತ್ತಿರುವ ಮನಸ್ಸು! ಛೇ ಛೆ ಇದಕ್ಕೊಂದು ಗತಿ ಕಾಣಿಸದ ಹೊರತು ನಾನು ದೈಹಿಕವಾಗಿ ಮಾನಸಿಕವಾಗಿ ನೆಮ್ಮದಿಯಿಂದಿರುವುದು ಅಸಾಧ್ಯವೆನಿಸಿತು. ಶರಭನೇನಾದರೂ ಕನಸಲ್ಲಿ ನನಸಲ್ಲಿ ಕಾಣಿಸಿಕೊಂಡು "ಎಲ್ಲಿ ಅಣ್ಣಾ ಎಲ್ಲಿ ನನ್ನ ಗುರುಗಳು ತಮ್ಮ ಸಂಸ್ಮರಣಾರ್ಥವಾಗಿ ನನಗೆ ನೀಡಿದ್ದ ಅಮೂಲ್ಯ ಕಾಣಿಕೆ!" ಎಂದು ಕೇಳಿದಲ್ಲಿ! ಛೇಛೆ! ಅಕಾಲ ಮರಣವನ್ನು ದಯಪಾಲಿಸುವವರು ಅಕಾಲ ಮರಣಕ್ಕೆ ತುತ್ತಾಗದಿರುವರೆ! ಅದೆಲ್ಲ ಅಸಂಭವ! ಅದರ ಮಾಲಕನಲ್ಲದ ಮಾಲಕ ಮರಳುವುದೆಂದರೆ! ಮರಳಿ ಇದನ್ನವನು ಕೇಳುವುದೆಂದರೆ! ಕೇಳಿದಲ್ಲಿ ನಾನವನಿಗೆ ತಗೊಳ್ಳೋ ನಿನ್ನ ಅನರ್ಘ್ಯವಸ್ತುವನ್ನು ಎಂದು ಹೇಳುತ್ತ ಕೊಡುವುದೆಂದರೆ! ಅದೆಲ್ಲ ಅಸಂಭವ.

ಅವನು ಬರುವುದರೊಳಗೆ, ನೆನಪೊಳಗೆ ಮೂಡುವುದರೊಳಗೆ ನಾನು ಈಕ್ಷಣವೇ ಇದಕ್ಕೊಂದು ಶಾಶ್ವತ ಸಮಾಧಿ ಕಲ್ಪಿಸಬೇಕೆಂದು ನಿರ್ಧರಿಸಿದೆ, ಆದರೆ ಏನೋ ಮಂಪರು ತೂಕಡಿಕೆ! ತುಸು ಹೊತ್ತು ನಿದ್ರಿಸಿ ನಿದ್ದೆಯಲ್ಲಿ ಅಥವಾ ಎಚ್ಚರ ಇರುವಾಗಲೇ ಎಚ್ಚರದಲ್ಲಿ! ಅಥವಾ ಅವೆರಡರ ನಡುವಿನ ವಿಲಕ್ಷಣ ಅವಸ್ಥೆಯಲ್ಲಿ!

++++

ಮನೆಯಲ್ಲಿ ಹಾರೆಗುದ್ದಲಿಗಳಿದ್ದವೆಂದರೆ ಇದ್ದವು ಇರಲಿಲ್ಲವೆಂದರೆ ಇರಲಿಲ್ಲ. ಅವುಗಳನ್ನು ನಿರ್ಭೀತ ನಿರ್ದಯಿ ಹಾವು ಚೇಳುಗಳನ್ನು ಕೊಲ್ಲುವ, ಹೆದರಿಸಿ ಓಡಿಸುವ ಸಲುವಾಗಿ ಆದವಾನಿಯಿಂದ ಖರೀದಿಸಿ ತಂದಿಟ್ಟುಕೊಂಡಿದ್ದೆ. ಒಂದು ಕೈಯಲ್ಲಿ ಅವುಗಳನ್ನೂ ಇನ್ನೊಂದು ಕೈಯಲ್ಲಿ ಚೂರಿ ಇದ್ದ ಚೀಲವನ್ನೂ ಹಿಡಿದುಕೊಂಡು ಮೆಲ್ಲಗೆ ಹೊರಟೆ. ಕಳ್ಳನಂತೆ ವಿಟಪುರುಷನಂತೆ ಪ್ರಳಯ ಸೂತಕಿಯಂತೆ!

ಅದೊಂದು ಭಯಾನಕ ಮಧ್ಯಾಹ್ನ. ಬೀದಿ ತನ್ನ ನಿರ್ಜನತೆಯಿಂದ ಸಹಕರಿಸಿತು. ಉಪಕರಿಸಿತು. ಆದರೆ ಶೂದ್ರರ ದಲಿತರ ಸಾಕು ನಾಯಿಗಳು ದೂರಸಂವೇದಿ ಉಪಗ್ರಹಗಳೋಪಾದಿಯಲ್ಲಿ ಮೂಸುತ್ತ ಹತ್ತಿರವಾಗಿ ಚೀಲವನ್ನು ಆಘ್ರಾಣಿಸಿ ರೋಮಾಂಚನಗೊಂಡವು. ಚೀಲದೊಳಗೆ ಹ್ರಸ್ವಗೊಂಡಿರುವ ಹತ್ತಾರು ಕಳೇಬರಗಳಿರಬಹುದೆಂದು ಅವು ಸಂದೇಹಿಸಿರಲೂಬಹುದು! ಇನ್ನೊಂದು ಕೈಯಲ್ಲಿದ್ದ ಸಾಮಾನುಗಳಿಂದ ಅವುಗಳ ಕಾಟವನ್ನು ನಿಗ್ರಹಿಸುತ್ತ ಸಾಗೀ ಸಾಗಿ ಊರ ಹೊರವಲಯದಲ್ಲಿದ್ದ ಡಣ್ಣೆ ಎಂಕಣ್ಣನ ಎರೆಹೊಲವನ್ನು ಪ್ರವೇಶಿಸಿದೆ.

ಎಂಟು ಕೂರಿಗೆಯಷ್ಟು ವಿಸ್ತೀರ್ಣವಿದ್ದ ಅದೋ ಬಿಳಿಜೋಳ ಬೆಳೆಯುವುದರಲ್ಲಿ ಹೆಸರಾಗಿರುವುದು, ಅದೂ ಕಡಿಮೆ ಮಳೆಗೆ. ಹೊಲದ ಮೇಲಿದ್ದ ಅಸಂಖ್ಯಾತ ಬಿರುಕುಗಳನ್ನು ಒಂದೊಂದಾಗಿ ಕ್ರಮಿಸುತ್ತ ಹಳ್ಳದ ಮಗ್ಗುಲಿದ್ದ ಮೇರೆಯನ್ನು ತಲುಪಿದೆ. ಆಲ ತುಗ್ಗಲಿ ಮರ ಪೊದೆಗಳ ನಡುವೆ ಇದ್ದ ಸ್ಥಳ ಹೂಳಲು ಪ್ರಶಸ್ತವೆಂದು ಪರಿಗಣಿಸಿದೆ. ಒಂದು ಕಡೆ ಚೀಲವನ್ನಿರಿಸಿ, ಕದಲದಿರಲೆಂದು ಅದರ ಮೇಲೆ ಕಲ್ಲಿನ ತುಂಡಿರಿಸಿದೆ, ತೋಡಲಾರಂಭಿಸಿದೆ. ಅಷ್ಟರಲ್ಲಿ ಎಳೆಮಗುವೊಂದು ರೋದಿಸುತ್ತಿರುವ ಕ್ಷೀಣವಾಗಿ ಕೇಳಿಬರಲಾರಂಭಿಸಿತು. ಊರಂಚಲ್ಲಿರುವ ತಮ್ಮ ಗುಡಿಸಲುಗಳಲ್ಲಿ ಯಾರೋ ನಿರ್ದಯಿಗಳು ತಮ್ಮ ಕೂಸನ್ನು ಬಿಟ್ಟು ಹೋಗಿರುವಂತಿದೆ. ಪಾಪಿಗಳು ಕರುಳ ಶೂನ್ಯರು ಎಂದು ಶಪಿಸುತ್ತಲೇ ತೋಡುವುದನ್ನು ಮುಂದುವರಿಸಿದೆ. ಆಶ್ಚರ್ಯವೆಂದರೆ ಕೂಸು ಅಳುತ್ತಿರುವುದು ನನಗೆ ತೀರಾ ಸನಿಹದಲ್ಲಿಯೇ! ಅದು ಇಲ್ಲಿರಬಹುದೆ! ಅದು ಇಲ್ಲಿರಬಹುದೆ! ಕಣ್ಣನೋಟದಿಂದ ತಡಕಾಡಿದೆ. ಎಲ್ಲೂ ಗೋಚರಿಸಲಿಲ್ಲ ಅಳುವ

ಹಸಿದಿರುವ ಎತ್ತಿಕೊಳ್ಳುವವರ ಕೈಗಳ ಸಲುವಾಗಿ ಅಂಗಲಾಚುವ, ತಾಯಿ ಮೊಲೆಗಳ ಸಲುವಾಗಿ ಹುಡುಕುತ್ತಲೇ ಅಂಬೆಗಾಲಿಟ್ಟು ಮೆಲುಮೆಲ್ಲಗೆ ನನ್ನತ್ತ ಬರುತ್ತಿರುವಂತಿದೆ ಮಾಯಾವಿ ಕೂಸು! ಅದನ್ನೂ ಅದರ ದುಃಖವನ್ನೂ ನಿರ್ಲಕ್ಷಿಸಿ ತೋಡೀ ತೋಡಿ..

ಮೊಳದುದ್ದಗಲದ ತಗ್ಗು ಮೂಡಲು ಹಿಡಿದ ಸಮಯ ಅರ್ಧತಾಸು, ತೋಡಿದವನ ದೇಹ ಸ್ರವಿಸಿದ ಬೆವರು ಲೀಟರಿನಷ್ಟು, ದೇಹದೊಳಗಿನ ಪುಟ್ಟ ಹೃದಯ ಕಂಪಿಸಿದ್ದು ಸಹಜಕ್ಕಿಂತ ನೂರರಷ್ಟು, ವಿಲಕ್ಷಣ ಭಾವನೆಗಳ ಹರಾಕಿರಿಯಂತೂ ಅಗಣಿತ. ನನ್ನೊಳಗೆ ನನ್ನ ಪ್ರತಿಬಿಂಬವನ್ನು ನೋಡಿಕೊಳ್ಳುತ್ತಿರುವಷ್ಟರಲ್ಲಿ ಕೂಸು ಅಳುವ ಸದ್ದು ತೀರಾ ಸನಿಹದಲ್ಲಂದರೆ ತೀರಾ ಸನಿಹದಲ್ಲಿ! ನೋಡಿದೆನಾದರೂ ಎಲ್ಲೂ ಗೋಚರಿಸಲಿಲ್ಲ, ಪ್ರೇತಪಿಶಾಚಿಗಳೇನಾದರೂ ಈ ವೈಶಾಖದ ಮಧ್ಯಾಹ್ನದ ಸಮಯದಲ್ಲಿ! ಛೇಛೆ ಇರಲಾರದು. ದೇವರನ್ನು ನಂಬದ ಕಟ್ಟಾನಾಸ್ತಿಕನಾಗಿರುವವನು ದೆವ್ವಗಳನ್ನು ನಂಬುವುದೆಂದರೆ! ಚೀಲದೊಂದಿಗೆ ಚೂರಿಯನ್ನು ಗುದ್ದಿನೊಳಗೆ ಇನ್ನೇನು ಸೇರಿಸಬೇಕೆನ್ನುವಷ್ಟರೊಳಗೆ! ಆಶ್ಚರ್ಯ, ಸಖೇದಾಶ್ಚರ್ಯ! ಕಾರಣ ಅಳುತ್ತಿರುವ ಕೂಸಿರುವುದು ನನ್ನ ಕೈಯೊಳಗೆ! ನನ್ನ ಅಂತರಂಗದ ಯಾವುದೋ ಒಂದು ಮೂಲೆಯಲ್ಲಿ! ಇನ್ನೂ ಆಶ್ಚರ್ಯವೆಂದರೆ ರೋದನದ ಸದ್ದು ಕೇಳಿಸುತ್ತಿರುವುದು ಹಿಡಿದಿರುವ ಚೀಲದೊಳಗಿಂದ! ಅದನ್ನು ಅದರೊಳಗೆ ಎಸೆಯಬೇಕೆನ್ನುವಷ್ಟರಲ್ಲಿ ಚೀಲದೊಳಗಿಂದ..

"ನನ್ನನ್ನು ಹೂತಿಯಾದರೆ ನೀನು ಶಿಶುಹತ್ಯಾ ಪಾಪಕ್ಕೆ ಗುರಿಯಾಗುವಿ ಅಯ್ಯಾ, ಅಳುತ್ತಿರುವುದು, ಶಿಶು ಸಹಜ ಭಾಷೆಯಲ್ಲಿ ಅಂಗಲಾಚುತ್ತಿರುವುದು ನಾನಯ್ಯಾ ಉರುಕುಂದಿ" ಎಂಬ ಮಾತುಗಳು, ಅಶ್ರುಬಿಂದುಗಳಿಂದಾವೃತ ಮಾತುಗಳು, ಕಿವಿ ಮೂಲಕ ನೇರವಾಗಿ ಪ್ರವೇಶಿಸಿ ಕರುಳಲ್ಲಿ ವಸಾಹತು ಸ್ಥಾಪಿಸುವಂಥ ಮಾತುಗಳು ಕೇಳಿಬರುವುದೆಂದರೇನು!

ಒಂದು ಕ್ಷಣ ಜಂಘಾಬಲ ಉಡುಗಿತು, ಪುನಃ ಚೇತರಿಸಿಕೊಂಡೆ. ಚೇತರಿಸಿಕೊಂಡ ಬಳಿಕ.. "ಓಹ್! ನೀನು ನುರಿತ ಕೊಲೆಗಾರನಷ್ಟೆ ಅಲ್ಲ, ಮಗುವಾಗಿ ರೂಪಾಂತರಗೊಳ್ಳುವಂಥ ಮಾಯಾವಿ ಎಂದರ್ಥವಾಯಿತು. ನಿನಗಿದೇ ಸರಿಯಾದ ಶಾಸ್ತಿ, ಅನುಭವಿಸು" ಎಂದದನ್ನು ಆಳಕ್ಕೆಸೆಯಲು ಪ್ರಯತ್ನಿಸಿದೆ ಎನ್ನುವಷ್ಟರಲ್ಲಿ!

"ಅಯ್ಯಾ ನಾನೆಷ್ಟೋ ಕೊಲೆಗಳನ್ನು ಮಾಡಿಸಿರಬಹುದು, ಮಾಡಿರಲೂಬಹುದು, ಅದರೆ ನಾನೂ ನನ್ನ ತಾಯಿ ಗರ್ಭದಲ್ಲಿ ಬೆಳೆದವನು, ಆಕೆಯ ಮಡಿಲಲ್ಲಿ ಮಗುವಾಗಿ ಆಡಿದವನೆಂಬುದನ್ನು ಮರೆಯದಿರು. ನಾನು ವೃದ್ಧನಿದ್ದರೂ, ಭೌತಿಕವಾಗಿ ಅಪಭ್ರಂಶಗೊಂಡಿದ್ದರೂ ನನ್ನೊಳಗಿನ ನನ್ನ ಬಾಲ್ಯ, ನನ್ನ ಶಿಶುತ್ವ, ಶಿಶು ಸಹಜ ಕನಸುಗಳಿನ್ನೂ ಜೀವಂತವಿವೆ ಎನ್ನುವುದನ್ನು ಮರೆಯಬೇಡ. ನೀನು ಹೂಳುತ್ತಿರುವುದು ನನ್ನನ್ನು ಮಾತ್ರವಲ್ಲ ನಿನ್ನ ಬಾಲ್ಯವನ್ನು! ಹೇಳುವುದನ್ನು ಹೇಳಿರುವೆನು, ಅದರ ಮೇಲೆ ನಿನ್ನಿಷ್ಟವಯ್ಯಾ" ಎಂದಂತೆಯೂ, ಅದಕ್ಕೆ ನಾನು ಏನೆಂದು ಹೇಳಲಿ!

ಪುನಃ ಅದರೊಳಗಿನ ತಾನೆ..

"ನೆಲದ ನಿಧಾನದೊಳಗೆ ಮರೆಯಾದ ಮಾತ್ರಕ್ಕೆ ಭೌತಿಕವಾಗಿ ಚೂರಿಯನ್ನು ನಿರ್ನಾಮಗೊಳಿಸಬಹುದು! ಆದರೆ ನಿಮ್ಮ ನಮ್ಮೆಲ್ಲರ ಎದೆಗಳೊಳಗೆ ಸದಾ ಕ್ರಿಯಾಶೀಲವಾಗಿರುವ ಚೂರಿಗಳ ಪೈಕಿ ಒಂದನ್ನಾದರೂ ನಿಷ್ಕ್ರಿಯಗೊಳಿಸು, ಕ್ರೌರ್ಯದ ವಿರುದ್ಧ ನಿನಗೆ ನಿಜವಾದ ಕಾಳಜಿ ಇದ್ದರೆ!" ಎಂದು ಸವಾಲು ಹಾಕಿತು, ಅದಕ್ಕೆ ಪ್ರತಿಯಾಗಿ ಏನು ಹೇಳಲಿ!

ಪುನಃ ಅದರೊಳಗಿನ ತಾನೆ!

"ನಿನಗಿನ್ನೂ ರಾಯಲಸೀಮೆಯ ಎದೆಯೊಳಗೆ ಅಂತರ್ಗತವಾಗಿ ಪ್ರವಹಿಸುತ್ತಿರುವ ಹಿಂಸೆ ಅರ್ಥ ಆಗಿಲ್ಲಯ್ಯಾ! ನಾನಾಗಲೀ, ನನ್ನ ಪ್ರಿಯ ಶಿಷ್ಯ ಶರಭನಾಗಲೀ ಜನ್ಮತಹ ಹಿಂಸೆಯ ಆರಾಧಕರಲ್ಲ, ನಾವೆಲ್ಲ ಪರಿಸ್ಥಿತಿಯ ಶಿಶುಗಳು ಮಾತ್ರ, ಹಿಂಸೆಯನ್ನು ಅರ್ಥ ಮಾಡಿಕೊಂಡವರಿಗೆ ಮಾತ್ರ ಕರುಣೆ ಅರ್ಥವಾಗಲು ಸಾಧ್ಯ, ದಮ್ಮೂರು ವೆಂಕಾವಧೂತರು ಏನು ಹೇಳಿರುವರು ಗೊತ್ತೇ? ಹ್ಞೂ ಹ್ಞು, ಅದೆಲ್ಲ ನಿನ್ನಂಥ ಸುಶಿಕ್ಷಿತರಿಗೆ ಲೇಖಕರಿಗೆ ಅಪಥ್ಯ, ಇನ್ನು ಮೇಲಾದರೂ ನೀನು!" ಎಂದು ಒಂದು ಕ್ಷಣ ಮೌನವಹಿಸಿತು. ಅದಕ್ಕೆ ನಾನೇನು ಹೇಳಲಿ!

"ಮುಖ್ಯವಾಗಿ ನಿನಗೆ ಗುರುವಿನ ಅಗತ್ಯವಿದೆ, ನಿನ್ನೆದೆಯೊಳಗಿನ ತೊಟ್ಟಿಲಲ್ಲಿ ನಿದ್ರಿಸುತ್ತಿರುವ ಮಗುವನ್ನು ಎಚ್ಚರಿಸುವ ಮಾಂತ್ರಿಕ ಶಕ್ತಿ ಇರುವುದು ಆ ಗುರುವಿಗೆ ಮಾತ್ರ. ಆ ಮಹಿಮಾನ್ವಿತ ಗುರು ಎಲ್ಲಿ ಎಂದು ತಾನೆ ನಿನ್ನ ಪ್ರಶ್ನೆ! ಅಯ್ಯೋ ಹುಚ್ಚಪ್ಪಾ ಮನೆ ಬಾಗಿಲಿಗೆ ಬಂದವನನ್ನು ಗುರು ಎಂದು ಗುರುತಿಸದಾದೆ, ಅದೇ ಕಣಪ್ಪಾ, ತಮ್ಮನ ರೂಪದಲ್ಲಿ ಒಡನಾಡಿ ರೂಪದಲ್ಲಿ ಸಖನ ರೂಪದಲ್ಲಿ ಇಷ್ಟು ದಿವಸ ಒಡನಾಡಿದ ಶರಭನೇ ನಿನ್ನಂಥವರಿಗೆ ಗುರು. ಅವನನ್ನು ಹುಡುಕು, ಅವನೊಳಗಿನ ಗುರುವನ್ನು ಪತ್ತೆ ಹಚ್ಚು, ನಿನಗೆ ಮಂಗಳವಾಗಲಿ" ಎನ್ನುತ್ತ ಪುನಃ ಚೂರಿಯೊಳಗೆ ಅಂತರ್ಧಾನಗೊಂಡವನು ಖಂಡಿತ ಎಳೆ ಕಂದಮ್ಮನಾಗಿರಲು ಸಾಧ್ಯವಿಲ್ಲ, ಅವನು ನಿಸ್ಸಂದೇಹವಾಗಿ ಉರುಕುಂದಿ! ಇಷ್ಟೆಲ್ಲಾ ಅವಧೂತಾತ್ಮಕ ರೀತಿಯಲ್ಲಿ ಹೇಳಿಕೊಂಡವನು ತನ್ನ ಪೂರ್ವಾಪರ ತಿಳಿಸಬಹುದಿತ್ತಲ್ಲವೆ!

ಚೂರಿಯನ್ನಲ್ಲಿಯೇಬಿಟ್ಟು ಖಾಲಿ ಕೈಗಳೊಡನೆ ಹೊರಡಬೇಕೆಂದು ನಿರ್ಧರಿಸಿದೆ, ಸ್ವಲ್ಪ ದೂರ ನಡೆದು ನಿಂತು ಹಿಂತಿರುಗಿ ನೋಡಿದೆ. ಮಧ್ಯಾಹ್ನ ಬಿಸಿಲನ್ನು ಪಲ್ಲವಿಸಲಾರಂಭಿಸಿತ್ತು, ಅದೂ ಮೋಹಕ ರೀತಿಯಲ್ಲಿ, ದೂರದ ದಾರಿಹೋಕರನ್ನು ತನ್ನ ಕಿರಣಗಳಿಂದ ಆಕರ್ಷಿಸುವ ರೀತಿಯಲ್ಲಿ, ನನ್ನನ್ನೂ ನಿಮ್ಮ ಮನೆ ಮಗನೆಂದು ಕಾಣಿರಯ್ಯಾ, ನನ್ನನ್ನು ಸಲಹಿ ಸಾಕಿರಯ್ಯಾ ಎಂದು ವಿನಂತಿಸಿಕೊಳ್ಳುವ ರೀತಿಯಲ್ಲಿ! ಕರೆಗೆ ಮನ ಕರಗಿ ಯಾರಾದರೂ ಅದನ್ನು ತಮ್ಮ ಮನೆಯಲ್ಲಿಟ್ಟುಕೊಂಡರೆ! ಒಂದು ಕ್ಷಣ ಭಯದಿಂದ ಕಂಪಿಸಿದೆ. ಉಭಯ ಸಂಕಟಕ್ಕೆ ಸಿಲುಕಿ ಅದರ ಸನಿಹಕ್ಕೆ ಹೋಗುವುದು ಬರುವುದು ನಡೆಸಿದೆ.

ಪುನಃ ಅದರೊಳಿಗಿಂದ ತಾನೆ..

"ಪೂರ್ವಸೂರಿಗಳ ಕೈಯಲ್ಲಿ ಒಡನಾಡಿರುವ ಅದನ್ನು ಏನೆಂದು ತಿಳಿದಿರುವಿ! ಅದಕ್ಕೆ ಯುಗಗಳ ಇತಿಹಾಸವಿದೆ ಅಯ್ಯಾ, ಇದರ ಮೇಲಿರುವ ಮೋಡಿಲಿಪಿ ಪ್ರಕಾರ ಶೂರ್ಪನಖಿಯ ಮೊಲೆ ಮೂಗುಗಳನ್ನು ಕತ್ತರಿಸಲು ತ್ರೇತಾಯುಗದಲ್ಲಿ ಶ್ರೀರಾಮಚಂದ್ರನಿಗೆ ಸಹಾಯ ಮಾಡಿದ್ದು ಇದೇ ಚೂರಿ ಅಯ್ಯಾ, ಇನ್ನು ದ್ವಾಪರಕ್ಕೆ ಬಂದರೆ ಇನ್ನೊಂದು ಕಥೆ, ಇನ್ನು ಕಲಿಯುಗಕ್ಕೆ ಬಂದರೆ ಮತ್ತೊಂದು ಕಥೆ, ಈ ಪ್ರಕಾರವಾಗಿ ಸಾವಿರಾರು ಕಥೆಗಳನ್ನು ಆಭರಣಗಳೋಪಾದಿಯಲ್ಲಿ ಮುಡಿದಿರುವ ಇದನ್ನು ಇಲ್ಲೇ ಅನಾಥವಾಗಿ ಬಿಟ್ಟು ಹೋಗಲು ನಿನಗೆ ಮನಸ್ಸು ಹೇಗೆ ಬಂತಯ್ಯಾ, ತೆಗೆದುಕೊಂಡು ಮನೇಲಿಟ್ಟು ಆರಾಧನಾ ಭಾವದಿಂದ ಪೂಜೆ ಮಾಡಯ್ಯಾ ಕಾಪಾಡಯ್ಯಾ, ನಿನಗೆ ಉತ್ತರೋತ್ತರವಾಗಿ ಒಳ್ಳೆಯದಾಗುವುದು" ಎಂದು ಹೇಳಿದಂತೆ ಭಾಸವಾಯಿತು.

ಮೆಲ್ಲಗೆ ಅಂಜುತ್ತ ಅಳುಕುತ್ತ ಸಮೀಪಿಸಿ, ತುಸು ಬಾಗಿ ಕಣ್ಣುಗಳನ್ನು ಹಿಗ್ಗಲಿಸಿ ನೋಡಿದೆ. ನೆತ್ತಿ ಮೇಲಿದ್ದ ಸೂರ್ಯ ಸಮಗ್ರ ಬಿಸಿಲನ್ನು ಆವಹಿಸಿಕೊಂಡಿರುವಂತೆ ಗೋಚರಿಸಿತು.

ನಡುಗುವ ಕೈಗಳಿಂದ ಹಿಡಿದು ಕಣ್ಣುಗಳಿಗಡ್ಡವಿರಿಸಿಕೊಂಡು ಪರಿಶೀಲಿಸಿದೆ. ಅರ್ಥವಾಗದ ಭಾಷೆಯ ಒಂದೆರಡು ವಾಕ್ಯಗಳು! ನೋಡಿ ಏನು ಪ್ರಯೋಜನ! ಓದಿ ಏನು ಪ್ರಯೋಜನ! ಅದನ್ನು ಚೀಲದೊಳಗೆ ಅಡಗಿಸಿಟ್ಟುಕೊಂಡು ವಾಗಿಲಿಯ ಅಗಸೆ ಬಾಗಿಲ ಕಡೆ ಹೆಜ್ಜೆ ಹಾಕಿದೆ. ಒಂದೊಂದು ಹೆಜ್ಜೆಗೆ ಒಂದೊಂದು ಭಾರದ ಅನುಭವ. ಎದೆಯೊಳಗೆ ಉರುಕುಂದಿಯೇ ನುಡಿದಿರಬಹುದಾದ ಮಾತುಗಳು ಪ್ರತಿಧ್ವನಿಸುತ್ತಿರುವಂಥ ಅನುಭವ ಬೇರೆ!

ನಿದ್ದೆ ಸವಿಯುತ್ತಿರುವ, ಉತ್ತರೋತ್ತರ ಕನಸುಗಳಲ್ಲಿ ಗಂಧರ್ವಲೋಕಗಳಲ್ಲಿ ವಿಹರಿಸುತ್ತಿರುವ, ದೇವಕನ್ಯೆಯರಿಂದ ಸೇವಿಸಿಕೊಳ್ಳುತ್ತಿರುವ ಮಗುವಿನೋಪಾದಿಯಲ್ಲಿ ಚೀಲದೊಳಗೆ ಅಳದೇ ಇರುವ ಕಾರಣಕ್ಕೋ, ಥಳಥಳ ಮಿಂಚುವುದನ್ನು ನಿಲ್ಲಿಸಿರುವ ಕಾರಣಕ್ಕೋ, ನಾನು ಸೂತಕಛಾಯೆ ಹೊತ್ತು ಹೆಜ್ಜೆ ಹಾಕುತ್ತಿದ್ದ ಕಾರಣಕ್ಕೋ ಬೀದಿನಾಯಿಗಳ ಪೈಕಿ ಯಾವುದೇ ಒಂದು ಬೊಗಳಲಿಲ್ಲ, ಹಿಂಬಾಲಿಸಲಿಲ್ಲ, ರಂಪಾಟ ಮಾಡಲಿಲ್ಲ. ಗುಟ್ಟಾಗಿಯೋ, ರಟ್ಟಾಗಿಯೋ ಮನೆಯನ್ನು ಸೇರಿಕೊಳ್ಳುವ ಹೊತ್ತಿಗೆ ಸೂರ್ಯ ಪಶ್ಚಿಮದ ಕಡೆ ವಾಲಿದ್ದನು.

ಹಾಸಿಗೆ ಮೇಲಿದ್ದವನು ಇದ್ದಕ್ಕಿದ್ದಂತೆ ಉರುಳಿ ಬಿದ್ದಾಗಲೇ ಎಚ್ಚರಗೊಂಡೆ. ಅನುಭವಿಸಿದ ಅನುಭವ ಕನಸೋ ನನಸೋ! ಅರ್ಥವಾಗಲಿಲ್ಲ. ನೋಡುತ್ತೇನೆ ಕೈಯಳತೆಯಲ್ಲಿಯೇ ಗುದ್ದಲಿ, ಹಾರೆಗಳು. ಕಣ್ಣಳತೆಯಲ್ಲಿಯೇ ಜೂರಿ ಇರುವ ಕಲಾತ್ಮಕ ಕಸೂತಿಯ ಚೀಲ! ಕೈಗಳಿಗಾಗಲೀ ಮನಸ್ಸಿಗಾಗಲೀ ಮಣ್ಣಿನ ಕೊಳೆ ಅವಶೇಷಗಳು ಅಂಟಿಲ್ಲ, ಆಶ್ಚರ್ಯವೆನಿಸಿತು. ಕನಸೋ ನನಸೋ! ಏನೋ ಒಂದು. ಆದರೆ ಸನಿಹದಲ್ಲಿರುವ ಚೀಲವನ್ನು ಎಲ್ಲಿ ಅಡಗಿಸಿಡುವುದು!

ಒಳಗೆ ಅದನ್ನೆಲ್ಲಿಡುವುದು? ಯಾರ ಕಣ್ಣಿಗೆ ಬೀಳದಂತೆ ನಗಂದಿಯ ಸಂಧಿಯಲ್ಲಿ ಅಡಗಿಸಿಡುವುದೋ! ನಾಸ್ತಿಕತ್ವ ಮೇಳೈಸಿದ್ದರೂ ಅಡುಗೆ ಮನೆಯಲ್ಲಿಯೇ ದೇವರ ಕೋಣೆಯಲ್ಲಿ ಸೃಷ್ಟಿಸಿ, ಅದಕ್ಕೆ ದೇವರ ಸ್ಥಾನಮಾನ ನೀಡುವುದೋ! ಅಥವಾ ಆಯುಧಗಳನ್ನೂ ಚೆಂಡಾಡಿದ ರುಂಡಗಳನ್ನೂ ಆಭರಣಗಳೋಪಾದಿಯಲ್ಲಿ ಮಡಿದಿರುವ ಗ್ರಾಮದ ಶ್ರೀವೀರಭದ್ರ ದೇವರ ಗುಡಿಗೆ ಸಮರ್ಪಿಸಿ ನಿರಮ್ಮಳವಾಗಿರುವುದೋ! ಯೋಚಿಸಿ ಅಂತಿಮವಾಗಿ "ಅಯ್ಯಾ ಚೂಥಿಪರಮಾತ್ಮನೇ, ಕನಸಲ್ಲಾಗಲೀ, ನನಸಲ್ಲಾಗಲೀ ಪ್ರಕಟವಾಗುತ್ತ ನನ್ನನ್ನು ಹಿಂಸಿಸದಿರು" ಎಂದು ವಿನಂತಿಸಿಕೊಂಡೆ.

++++

ಕಂಡ ಕನಸನ್ನು ನನಸಾಗಿ ನನಸನ್ನು ಕನಸಾಗಿ ಪರಿವರ್ತಿಸಿ ಅದಕ್ಕೆ ಅಕ್ಷರ ಸಾನ್ನಿಧ್ಯ ಕಲ್ಪಿಸಿ ಬಳಿಕ ಕೇಳಿದ್ದಕ್ಕೆ ಶೇಷಣ್ಣ "ಅವನು ಎಲ್ಲಿಗೆ ಹೋಗಿರುವನೆಂದು ಹೇಗೆ ಹೇಳಲಿ ಸಾರ್! ಮೊದಲೇ ತಾನು ಸುಂಟರಗಾಳಿಯಂಥ ಮನುಷ್ಯ. ನಾಟಕ ಪ್ರಚಾರದ ಸಲುವಾಗಿ ಏನಾದರೂ ಗೆಜ್ಜಳ್ಳಿ, ಕೂಡ್ಲೂರು, ಲಿಂಗದಳ್ಳಿ ಕಡೆಗೆ ಹೋಗಿರಬಹುದು ಸಾರ್" ಎಂದು ತನ್ನ ಊಹೆಯನ್ನು ಸಾದರಪಡಿಸಿದ. ಜಲಂಧರನದು ಪಾದರಸ ಜಾಯಮಾನ, ತಾನು ರಜಪೂತ ಬೇರೆ, ವಲಸೆ ಆ ಜಾತಿಯ ಮೂಲಭೂತ ಸಂವೇದನೆ, ಈ ಕ್ಷಣ ಇಲ್ಲಿ ಇದ್ದರೆ ಇನ್ನೊಂದು ಕ್ಷಣ ಅಲ್ಲಿ! ಶೇಷಣ್ಣ ಸಾದರ ಪಡಿಸಿದ ಹಳ್ಳಿಗಳು ನನಗೆ ಅರಪರಿಚಿತವಲ್ಲ. ಗಾತ್ರದಲ್ಲಿ ಕಡಿಮೆ ಇರುವ ಅವೆಲ್ಲ ವಾಗಿಲಿಗೆ ಕಾಲಳತೆಯಲ್ಲಿರುವ ಚಿಕ್ಕಪುಟ್ಟ ಗ್ರಾಮಗಳು. ಒಂದು ಊರಿನವರ ಕೆಮ್ಮು ಸೀನುಗಳು ಪಕ್ಕದೂರಿನವರು ಕೇಳಿಸಿಕೊಳ್ಳುವಂಥ ಬೇ ಚಿರಾಕ್ ಹಳ್ಳಿಗಳು. ಒಂದು ಉದರ ಬೇನೆಯಿಂದ ನರಳಿದರೆ ಇನ್ನೊಂದು ಔಷಧ ಸೇವಿಸುವಂಥ

ಪುಟ್ಟಪುಟ್ಟ ಗ್ರಾಮಗಳು. ಅಲ್ಲಿಗೆಲ್ಲ ಹೋಗಿರಬಹುದಾದ ಅವನನ್ನು ಸೃಜನಶೀಲವಾಗಿ ಕಲ್ಪಿಸಿಕೊಂಡೆ.

ಹೆಚ್ಚುವರಿಯಾಗಿ ಹೇಳುವುದಾದರೆ ತಾನು ನನಗಿಂತಲೂ ಸೃಜನಶೀಲ ವ್ಯಕ್ತಿ. ಅಪರಿಚಿತರ ಮನಸ್ಸಿನಲ್ಲಿ ಅಚ್ಚಳಿಯದ ಹಾಗೆ ತನ್ನನ್ನು ತಾನು ಪ್ರತಿಷ್ಠಾಪಿಸಿಕೊಳ್ಳುವುದರಲ್ಲಿ ನಿಸ್ಸೀಮ. ಅವನ ಕಟ್ಟುಮಸ್ತಾದ ದೇಹವೋ! ಅವನ ಆಕರ್ಷಕ ಮಾತುಗಾರಿಕೆಯೋ! ಅವನ ಚೇತೋಹಾರಿ ಪಂಚೇಂದ್ರಿಯಗಳೋ! ಅವನು ಅಲ್ಲಿಗೆಲ್ಲ ಪಯಣಿಸಿರಬಹುದಾದ ರೀತಿಯನ್ನು ಕಲ್ಪಿಸಿಕೊಂಡೆ. ತಾನು ಅಂಗಿಯ ಹರಿದ ಭಾಗಗಳನ್ನು ಕೋಟಿನೊಳಗೆ ಮರೆಮಾಚಿ ಆಕರ್ಷಕ ರೀತಿಯಲ್ಲಿ ವೇಷಭೂಷಿತನಾಗಿ ಗಾರ್ದಭದ ಮೇಲೋ ಅಶ್ವಾರೂಢನಾಗಿಯೋ ಹೊರಟಿರಬಹುದು. ಗೆಜ್ಜೆಹಳ್ಳಿಯಲ್ಲಿರುವ ಬಸ್ಸಿರೆಡ್ಡಿಯವರೆದರು, ಕೂಡ್ಲೂರಲ್ಲಿರುವ ತ್ರಿಪುರಾಂತಕರೆಡ್ಡಿಯವರೆದುರು, ಲಿಂಗದಹಳ್ಳಿಯಲ್ಲಿರುವ ಅಂಕಿರೆಡ್ಡಿಯವರೆದುರು ವಿನೀತಭಾವದಿಂದ ಕುಳಿತಿರಬಹುದು, ಭಾಷೆಯ ವ್ಯಾಕರಣ, ಛಂದಸ್ಸಿಗೆ ಚ್ಯುತಿ ಬಾರದ ರೀತಿಯಲ್ಲಿ ತನ್ನ ಪೂರ್ವಾಪರವನ್ನು ಪೀಠಿಕಾರೂಪದಲ್ಲಿ ಪ್ರಸ್ತಾಪಿಸಿರಲೂಬಹುದು, ನಾಟಕಗಳಿಗಿಂತ ಮುಖ್ಯವಾಗಿ ತಾನು ರಜಪೂತನೆಂದು ಬಿಂಬಿಸಿಕೊಂಡಿರಬಹುದು, ತಾನು ಅಕ್ಕಿನೇನಿ ನಾಗೇಶ್ವರರಾವ್, ನಂದಮೂರಿ ತಾರಕ ರಾಮರಾವ್ ಇನ್ನಿತರೆ ವಿಖ್ಯಾತ ತಾರೆಗಳ ಸಂಗಡ ತಾನು ತೆಗೆಸಿಕೊಂಡಿರಬಹುದಾದ ಸ್ಥಿರಚಿತ್ರಗಳನ್ನು ತೋರಿಸುವುದರ ಮೂಲಕ ಅವರನ್ನು ಪರವಶಗೊಳಿಸರಬಹುದು, ತನ್ನ ಪೂರ್ವಜರು ಕಾಳಗ ಪ್ರವೀಣರಾಗಿದ್ದರೆಂದು ಹೇಳುವುದನ್ನು ತಾನು ಮರೆತಿರಲಾರ. ಹೇಳಿಕೆಗಳಿಗೆಲ್ಲ ಕಿರೀಟಪ್ರಾಯವಾಗಿ ದ್ವಾಪರದಲ್ಲಿ ವಜ್ರವೈಢೂರ್ಯಗಳನ್ನು ಮಾತ್ರ ಸೇವಿಸಿ ಹಸಿವೆ ಹಿಂಗಿಸಿಕೊಳ್ಳುತ್ತಿದ್ದ ರತ್ನಪಕ್ಷಿ ಕಲಿಯುಗದಲ್ಲಿ ಎಂಜಲೆಲೆ ತಿಂದು ಜೀವನ ನಡೆಸುವಂತಾಗಿರುವುದೆಂದು ದೃಷ್ಟಾಂತ ನೀಡುವುದನ್ನು ಮರೆತಿರಲಾರ. ಇಷ್ಟು ಸಾಕಲ್ಲವೆ ಜಮೀನ್ದಾರೀ ವ್ಯವಸ್ಥೆಯೊಳಗೆ ಅನುಕಂಪದ ಬೇರುಗಳನ್ನು ಹರಡಲು! ಒಟ್ಟಿನಲ್ಲಿ ತಾನೋರ್ವ ಅದ್ಭುತ ನಿರೂಪಕ ಕಲಾವಿದ ಪ್ರಪಂಚಜ್ಞಾನ ಉಳ್ಳವ ಮಹತ್ವಾಕಾಂಕ್ಷಿ ಏನೆಲ್ಲ! ಅಂಥವನು ಲೇಖಕನಾಗಿದ್ದಲ್ಲಿ! ಅಂಥವನು ನನ್ನ ಶಿಷ್ಯನಾಗಿದ್ದಲ್ಲಿ! ಅಂಥವನೊಂದಿಗೆ ನಾನು ಹಲವು ವರ್ಷಗಳ ಕಾಲ ಒಡನಾಡಿದಲ್ಲಿ! ಊಹಿಸಿಕೊಳ್ಳುತ್ತ ರೋಮಾಂಚನಗೊಂಡೆ. ಪುನಃ....

ಜಲಂಧರನದೋ ನೋಡಿದವರ ಮನಸ್ಸಿನಲ್ಲಿ ಶಾಶ್ವತವಾಗಿ ಮೂಡಿಬಿಡುವ ಅಭಿಜಾತ ಆಕ್ರಮಣಶೀಲ ವ್ಯಕ್ತಿತ್ವ ಎಷ್ಟಿದ್ದರೂ ತಾನು ರಜಪೂತ ಕ್ಷತ್ರೀಯ! ಚಾರಿತ್ರಿಕವಾಗಿ ಸಂಭವಿಸಿರುವ ಧಾಳಿಗಳ ಶೋಷಣೆಗಳ ವಂಶವಾಹಿನಿ ತನ್ನ ರಕ್ತದ ಕಣಕಣದಲ್ಲಿ. ಅದಲ್ಲದೆ ತಾನು ನಾಟಕ ಕಂಪನಿಯ ಮಾಲಕ! ಸಿನೆಮಾಗಳಲ್ಲಿ ಅಭಿನಯಿಸಿರುವ ಅಭಿನಯಿಸಿರದ ಅನುಭವ ಬೇರೆ. ಹತ್ತಾರು ನಾಟಕಗಳನ್ನು ಸ್ವತಃ ನಿರ್ದೇಶಿಸಿರುವುದರಿಂದ, ಅನೇಕ ಪಾತ್ರಗಳನ್ನು ನಿರ್ವಹಿಸಿರುವುದರಿಂದ, ಒಂದರೊಳಗಿನ್ನೊಂದು ಭಾಷೆಯನ್ನು ಬೆರೆಸಿ ಅಸ್ಖಲಿತ ರೀತಿಯಲ್ಲಿ ಅದೂ ನಿರ್ಭೀತವಾಗಿ ಮಾತನಾಡುವುದರಿಂದ. ವಲಸೆ ಕಾರಣದಿಂದ, ನೂರಾರು ನದಿಹಳ್ಳಗಳ ನೀರು ಕುಡಿದಿರುವುದರಿಂದ, ತರಾವರಿ ಭಿಕ್ಷಾನ್ನಗಳನ್ನರಗಿಸಿಕೊಂಡಿರುವುದರಿಂದ ಕೇಳುಗರನ್ನು ತನ್ನ ಮಾತಿನ ಮೋಡಿಯಿಂದ ಪರವಶಗೊಳಿಸುತ್ತಿರಬಹುದು! ಹೇಳುತ್ತ ಹೇಳುತ್ತ ನೀಚಸ್ಥಾನದಿಂದ ಉಚ್ಚಸ್ಥಾನವನ್ನಲಂಕರಿಸಿರಲೂಬಹುದು! ಅದೂ ಅಲ್ಲದೆ ಆಯಾ ಗ್ರಾಮಗಳ ವಿವಾಹಿತ ಅವಿವಾಹಿತ ತರುಣಿಯರ ಪೈಕಿ ಕೆಲವರಾದರೂ ಮಾನಸಿಕವಾಗಿ ತನ್ನನ್ನು ಮೋಹಿಸುತ್ತಲೂ ಇರಬಹುದು! ಆಕರ್ಷಣೆ ಸುಳಿಗೆ ಪುರುಷರ ಪೈಕಿ ಕೆಲವರಾದರೂ ಪರವಶರಾಗಿರಬಹುದು!

ನನ್ನ ಮಾನಸಿಕ ಸ್ಥಿತಿ ಅವರೆಲ್ಲರಿಗಿಂತ ಭಿನ್ನವಿರಲಿಲ್ಲ. ಪ್ರತಿಕ್ಷಣ ಅವನೊಂದಿಗೆ ಒಡನಾಡುವ ಆಸೆ, ಅವನ ಜೀವನಾನುಭವಗಳನ್ನು ಆಲಿಸುವ ಕುತೂಹಲ. ಅವನಿಗೂ ಅವನು ಸಂಗಡಿಗರೆಲ್ಲರಿಗೂ ಸರ್ವರೀತಿಯಲ್ಲಿ ತ್ರಿಕರಣಪೂರ್ವಕವಾಗಿ ಸಹಕರಿಸುವ ಹಂಬಲ. ಮೊದಲೇ ನನ್ನದು 'ಊರ ದನಗಳನ್ನು ಕಾಯ್ದು ದೊಡ್ಡಬೋರ' ಎಂಬ ನಿರುಪದ್ರವಿ ಬಿರುದನ್ನು ಆಸ್ವಾದಿಸುವ ಜಾಯಮಾನ, ಅದು ನನ್ನ ವಂಶವಾಹಿನಿಯ ಪ್ರಮುಖ ಧಾರೆ. ನನ್ನ ಮನಸ್ಸಿನ ಒಂದು ಮೂಲೆಯಲ್ಲಿ ಜಲಂಧರ, ಇನ್ನೊಂದು ಮೂಲೆಯಲ್ಲಿ ಶರಭರೀರ್ವರೂ ಕಟ್ಟಿ ವಿಜೃಂಭಿಸುತ್ತಿರುವ ಜೇನುಗೂಡುಗಳು. ಅವುಗಳ ತಂಟೆಗೆ ಹೋದರೂ ಕಷ್ಟ ಹೋಗದಿದ್ದರೂ ಕಷ್ಟ! ಅವೆರಡನ್ನೂ ಜೋಪಾನಜತನದಿಂದ ನೋಡಿಕೊಳ್ಳುವ ಅನಿವಾರ್ಯತೆ ನನ್ನದು!

ಜಲಂಧರ ವಾಪಸ್ಸು ಬರುವ ಸಾಧ್ಯತೆ ನಿಚ್ಚಳ, ಆದರೆ ಹೇಳದೆ ಕೇಳದೆ ಗೂಡುಬಿಟ್ಟು ಕದಲಿರುವ ಶರಭ ಮರಳುವ ಸಾಧ್ಯತೆ ಕಡಿಮೆ. ಅವನೊಂದಿಗೆ ತೆರಳಿರುವ ಪರಶುರಾಮನಾದರೂ ಮರಳಬಹುದಿತ್ತಲ್ಲವೆ! ತಮ್ಮ ಅನುಭವಗಳನ್ನು ವ್ಯಾಖ್ಯಾನಿಸಬಹುದಿತ್ತಲ್ಲವೆ! ಆದರೆ ಅವನೂ ನಾಪತ್ತೆ. ಅವರಿಬ್ಬರೇನೋ ಸರಿ, ಆದರೆ ಅವರು ತಮ್ಮ ಮಾರಣಾಂತಿಕ ಅವಶೇಷಗಳನ್ನಾದರೂ ತಮ್ಮೊಂದಿಗೆ ಒಯ್ದಿದ್ದಲ್ಲಿ! ಮುಖ್ಯವಾಗಿ ಉರುಕುಂದಿ ನಿಗೂಢವಾಗಿ ಆಕರ್ಷಕರೀತಿಯಲ್ಲಿ ಅವಿತಿರುವ ಚೂರಿ ಸಲುವಾಗಿಯಾದರೂ ಅವರು ಮರಳಬಹುದಿತ್ತಲ್ಲವೆ! ಅದೋ ನನ್ನನ್ನು ತೇಲದಂತೆ ಮುಳಗದಂತೆ ನೋಡಿಕೊಳ್ಳುತ್ತಿರುವುದು! ತನ್ನ ನಿಜ ವಾರಸುದಾರ ಆಗಮಿಸಿ ತನ್ನ ಉಭಯಕುಶಲೋಪರಿ ವಿಚಾರಿಸುವ ಸಲುವಾಗಿ, ತನ್ನ ಅನಾಥತನವನ್ನು ನೀಗಿಸಿಕೊಳ್ಳುವ ಸಲುವಾಗಿ ಅದು ಕಾಯುತ್ತಿರುವಂತಿರುವುದು! ಯಾವತ್ತು ತನ್ನನ್ನು ಪೂರ್ಣಗೊಳಿಸಿ ಮುಕ್ತಿ ದಯಪಾಲಿಸುವೆಯೋ ಲೇಖಕನೇ ಎಂದು ಮೊರೆ ಇಡುತ್ತಿರುವ ಕಾದಂಬರಿಯ ಹಸ್ತಪ್ರತಿ ಬೇರೆ ಟೇಬಲ್ ಮೇಲೆ! ಇವೆಲ್ಲ ಕೊಡುತ್ತಿರುವ ತೊಂದರೆ ಒಂದು ತೂಕವಾದರೆ ಇನ್ನೊಂದು ತೂಕವೆಂದರೆ!

ನನ್ನ ಮನಸ್ಸಿನ ತುಂಬೆಲ್ಲ ವ್ಯಾಪಿಸಿರುವ ಲಕ್ಷ್ಮಿಯ ಕಳೇಬರ, ವಿಧುರ ಅಳಿಯನ ನಿರೀಕ್ಷೆಯಲ್ಲಿರುವ ಆಕೆಯನ್ನು ಹೆತ್ತವರು! ತನ್ನ ಖಾಕಿ ಜೇಬೊಳಗೆ ಕೊಲೆಗಾರನ ಸುಂದರ ಭಾವಚಿತ್ರವನ್ನಿರಿಸಿಕೊಂಡು ಬೇಟೆಗೆ ಹೊಂಚಿರುವ ಪೋಲಿಸ್ ಅಲಿ! ತನ್ನ ಕಂಕುಳಲ್ಲಿ ಕ್ರಿಮಿನಲ್ ಫೈಲುಗಳನ್ನಿರಿಸಿಕೊಂಡು ವಿಷ್ಣುನಾಮ ಜಪಿಸುತ್ತಲೇ ನ್ಯಾಯಲಯಕ್ಕೆ ಹೋಗಿ ಬರುತ್ತಿರುವ ಜೀವೋತ್ತಮರಾವ್! ತನ್ನ ಮನಸ್ಸಿನ ಮೂಲೆಯಲ್ಲಿ ಕ್ಷಮೆಯ ಒಂದು ತುಂಡನ್ನಿರಿಸಿಕೊಂಡಿರಬಹುದಾದ ಊಳೂರಿನ ವನಜಾಕ್ಷಿ! ನೂರಾರು ನೂರಾರು ಕಿಲೋಮೀಟರ್ ದೂರದ ಕೊಟ್ಟೂರಲ್ಲಿದ್ದು ತನ್ನ ಮಗನಾದ ನನ್ನ ಭವಿಷ್ಯವನ್ನು ನಿರ್ದೇಶಿಸುತ್ತಿರುವ ತಂದೆ! ನಿನ್ನನ್ನು ಹೊತ್ತಾಡಿಸಿದ ಈ ನನ್ನ ಹೆಗಲ ಋಣ ತೀರಿಸುವ ಸಲುವಾಗಿಯಾದರೂ ನೀನು ನಿನ್ನ ತಂದೆಯ ಕುಟಿಲ ಯೋಜನೆಗಳಿಗೆ ಸಹಕರಿಸ ಬೇಡ ಧಣಿ ಎಂದು ಅಂಗಲಾಚುತ್ತಿರುವ ಅಲಸಂದಿಕಳ್ಳನು! ಈ ಎಲ್ಲಾ ಸಮಸ್ಯೆಗಳು ವ್ಯಂಜಕಗಳು ತಳಿಗೆಯ ಸುತ್ತ ಅಲಂಕರಿಸಲ್ಪಟ್ಟಿರುವ ಬಿಸಿಯೂಟ! ತನ್ನ ಮಾಮೂಲು ಸಲುವಾಗಿ ಹಲ್ಲು ಕಿಸಿಯುತ್ತಿರುವ ಶಿಕ್ಷಣಾಧಿಕಾರಿ ವೇಣುಗೋಪಾಲರಾವ್! ನಾಗರಿಕ ಸಮಾಜದ ಸಂಪರ್ಕ ಕಳೆದುಕೊಳ್ಳಲು ಅಹರ್ನಿಶಿ ಶ್ರಮಿಸುತ್ತಲೇ ಇರುವ ವಾಗಿಲಿ! ಪ್ರದರ್ಶನಗೊಳ್ಳಲಿರುವ ಹೇಮರೆಡ್ಡಿ ಮಲ್ಲಮ್ಮಳಂಥ ಸಾಧ್ವಿಯ ಕಥಾನಕ! ಅದರಲ್ಲಿ ಪ್ರಮುಖ ಪಾತ್ರವಹಿಸಲಿರುವ ನಟಿ ಪದ್ಮಳ ನಿರೀಕ್ಷೆಯಲ್ಲಿರುವ ವಾಗಿಲಿಯ ವಯೋವೃದ್ಧರು! ಆಕೆಯ ವಾಸ್ತವ್ಯದ ಸಲುವಾಗಿ ಜಾತಕ

ಪಕ್ಷಿಯಂತೆ ಸಜ್ಜುಗೊಂಡಿರುವ ಕಣ್ಣಳತೆಯಲ್ಲಿರುವ ಮಹಡಿಮನೆಯು! ಆ ಕಡೆಗೊಮ್ಮೆ ಈ ಕಡೆಗೊಮ್ಮೆ ಪ್ರಶ್ನಾರ್ಥಕ ನೋಟಬೀರುತ್ತ ತಿರುಗಾಡುತ್ತಿರುವ ಹಾದಿಹೋಕರು! ಒಳಗಿರಲೂ ಆಗದೆ ಹೊರಗಿರಲೂ ಆಗದೆ ಅತಂತ್ರಸ್ಥಿತಿಯಲ್ಲಿರುವ ಹಾಗೆಯೇ ದಶದಿಕ್ಕುಗಳಲ್ಲಿ ಸಂಭವಿಸುತ್ತಿರುವ ಸಮಸ್ತ ವಿದ್ಯಾಮಾನಗಳನ್ನು ಅಭಿವ್ಯಕ್ತಿಕ್ರಮದಲ್ಲಿ ಅಳವಡಿಸುವುದಾದರೂ ಹೇಗೆ ಎಂದು ಆಲೋಚಿಸುತ್ತಿರುವ ನಾನು!

++++

ನಾನು ಯಾಕೆ ಇದ್ದಕ್ಕಿದ್ದಂತೆ ಹೊರಟೆನೆಂಬುದು ಸರಿಯಾಗಿ ತಿಳಿಯದು.

ಮಂಡಲ ಪ್ರಾಥಮಿಕ ಶಿಕ್ಷಕರ ಸಮಾವೇಶದಲ್ಲಿ ಭಾಗವಹಿಸುವ ಸಲುವಾಗಿಯೋ, ಮೂರನೆ ಹೆಣ್ಣುಮಗುವಿಗೆ ಎರಡು ದಿವಸಗಳ ಹಿಂದೆಯಷ್ಟೆ ಜನ್ಮ ನೀಡಿದ ತಂದೆಯ ಜೇಷ್ಠಪುತ್ರಿ ಅರ್ಥಾತ್ ಸಹೋದರಿಯ ಯೋಗಕ್ಷೇಮ ವಿಚಾರಿಸುವ ಸಲುವಾಗಿಯೋ, ಹೊರವಲಯದಲ್ಲಿರುವ ಸಿದ್ಧೇಶ್ವರ ದೇವುಳದೊಳಗಿನ ಪುರಾತನ ಭಿತ್ತಿಚಿತ್ರಗಳನ್ನು ನೋಡುವ ಸಲುವಾಗಿಯೋ, ಹಿಂದೊಮ್ಮೆ ನನ್ನಿಂದ ಹಲ್ಲೆಗೀಡಾಗಿ ಕ್ಷಯವ್ಯಾಧಿಪೀಡಿತನಾಗಿ ತನ್ನ ಗುಡಿಸಲೊಳಗೆ ಅಂಗಾತ ಮಲಗಿ ಸಾವಿನ ಬರ್ಬರ ಕ್ಷಣಗಳನ್ನೆಣಿಸುತ್ತಿರುವ ಭಯೋತ್ಪಾದಕ ಚಿಗ್ಯಾಟಿಚಂದ್ರನ ಉಭಯಕುಶಲೋಪರಿ ವಿಚಾರಿಸುವ ಸಲುವಾಗಿಯೋ, ಅಕಸ್ಮಾತ್ತಾಗಿ ಮಾರುವೇಷದಲ್ಲಿ ಊರೊಳಗೆ ತಲೆಮರೆಸಿಕೊಂಡಿರಬಹುದಾದ ಶರಭ ಮತ್ತವನ ಸಂಗಡಿಗ ಪಠಶುರಾಮನ ಸುಳಿವು ಪತ್ತೆಹಚ್ಚುವ ಸಲುವಾಗಿಯೋ! ಒಟ್ಟಿನಲ್ಲಿ ಯಾವುದೋ ಒಂದು ಕಾರಣದ ಸಲುವಾಗಿ!

ಕಾಲ್ನಡಿಗೆಯಲ್ಲಿ ಮೂರು ಹರದಾರಿ ದೂರದ ಹೊಳಗುಂದಿಗೆ ಹೋಗಿ ಮರಳಿ ವಾಗಿಲಿ ಎಂಬ ಗೂಡು ಸೇರಿಕೊಂಡೆ, ಅದೂ ಎರಡು ದಿವಸಗಳ ಬಳಿಕ. ಯಾವು ಯಾವುವೋ ಕೆಲಸಗಳ ಒತ್ತಡಗಳಿಂದಾಗಿ ಅಂಗಳದಲ್ಲಿ ಕಾಲಿರಿಸಲಿಕ್ಕಾಗಲಿಲ್ಲ, ಹೊರ ಇಣುಕಿ ಎದರು ಮನೆಯ ಅಂಗಳದಲ್ಲಿ ವೆಂಕಟರಾಮಿರೆಡ್ಡಿಯವರ ಪತ್ನಿ ರುಕ್ಮಿಣಿ ಹಾಕಿರಬಹುದಾದ ತರಾವರಿ ರಂಗವಲ್ಲಿಗಳನ್ನು ನೋಡುವುದಾಗಲಿಲ್ಲ, ಅಂದ ಮೇಲೆ ಎದುರಿರುವ ಮಹಡಿ ಕಡೆ ನೋಡುವುದೆಲ್ಲಿಂದ ಬರುವುದು! ಆದರೆ ಆಕಡೆ ನೋಟದ ತುಣಕುಗಳನ್ನು ಆಗಾಗ್ಗೆ ಹರಿಬಿಡುತ್ತಿದ್ದುಂಟು, ಅಮೃತಾಂಜನ ಲಕ್ಷ್ಮಿರೆಡ್ಡಿ ಸಂಗಡ ಮೂಲಿಮನಿ ಗೌಡರು ಉಡಾಫೆ ಮಾತುಕತೆಯಲ್ಲಿ, ಕಾಳಹಸ್ತಿಬೀಡಿ ವಿನಿಮಯಗಳಲ್ಲಿ ಅದೂ ಆಗಾಗ್ಗೆ ಗಹಗಹಿಸಿ ನಗಾಡುತ್ತಿರುವರು. ಮಹಡಿ ಮನೆಯ ವಿದ್ಯಾಮಾನಗಳು ಸಹ ಬದಲಾಗಿರುವಂತಿರುವುದು, ಅದು ಖಚಿತವಾದದ್ದು ಆ ಮಧ್ಯಾಹ್ನವೇ!

ರಣಬಿಸಿಲು ಬೆಳದಿಂಗಳೆಂದಾಗಲಿಲ್ಲ, ಸುಳಿವ ಸುಂಟರುಗಾಳಿ ತಂಗಾಳಿಯಾಗಲಿಲ್ಲ, ತಂಗಳು ಬಿಸಿಗೂಳಾಗಲಿಲ್ಲ, ವೃದ್ಧರು ಹರೆಯವನ್ನಾವಹಿಸಿಕೊಳ್ಳಲಾಗಲಿಲ್ಲ, ಕೆಟ್ಟವರು ಒಳ್ಳೆಯವರಾಗಲಿಲ್ಲ. ಆದರೆ ಶೇಷಣ್ಣ ಓಡೋಡಿ ಬಂದವನೆ ಮನೆಯನ್ನು ಪ್ರವೇಶಿಸಿ ತಲಬಾಗಿಲ ಮಗ್ಗುಲು ಎಂದಿನಂತೆ ಕೂತು "ಸಾರ್ ಏನಾಯಿತೆಂದರೆ!" ಎಂದು ಪ್ರವರ ಆರಂಭಿಸಿದ. ಆಗ್ಗೆ ತಾನು ಸ್ವಲ್ಪ ಹೊತ್ತಿನ ಹಿಂದೆ ತಮ್ಮ ಮನೆಯ ಮಾಳಿಗೆ ಮೇಲೆ ಬೆಳೆದಿದ್ದ ಹುಲ್ಲು ತೆಗೆಯಲಾರಂಭಿಸಿದನಂತೆ, ಮೊದಲೆ ನಿಶಿತ ಬೇಟೆಗಾರನಾದ ತನ್ನ ಕಿವಿಗೆ ಅಪರಿಚಿತ ಸದ್ದು ಕೇಳಿಸಿತಂತೆ, ಆ ಸದ್ದಿಗೂ ಕಳೆದ ರಾತ್ರಿ ತಾನು ಕಂಡ ಕನಸಿಗೂ ಹೋಲಿಸಿ

ಯೋಚಿಸಿದನಂತೆ, ನಿಸ್ಸಂದೇಹವಾಗಿ ಬೇತಾಳ ಸದೃಶ ಶಕ್ತಿಯೊಂದು ತಮ್ಮೆಲ್ಲರ ಪ್ರೀತಿಯ ಪಾಗಿಲಿಗ್ರಾಮಕ್ಕೆ ಧಾಳಿ ಮಾಡುವ ಸಲುವಾಗಿ ಆಗಮಿಸಲಿರುವುದೆಂದು ಯೋಚಿಸುತ್ತಲೇ ಎದ್ದು ನಿಂತು ನೈರುತ್ಯದಿಕ್ಕಿಗೆ ಮುಖ ಮಾಡಿ ಕಣ್ಣಹುಬ್ಬುಗಳ ಮೇಲೆ ಅಂಗೈಯನ್ನಿರಿಸಿ ತೀಕ್ಷ್ಣವಾಗಿ ದಿಟ್ಟಿಸಿದನಂತೆ, ದೂರದಲ್ಲೆಲ್ಲೋ ಅದೂ ಪೊದೆಗಳ ನಡುವೆ ಅದೂ ಆಳೆತ್ತರದ ಧೂಳು ಅದೂ ತಮ್ಮ ಗ್ರಾಮಾಭಿಮುಖವಾಗಿ!

ಕುತೂಹಲ ಅರಗಿಸಿಕೊಳ್ಳಲಾಗದೆ ತಾನು ಮಾಳಿಗೆಯಿಂದ ಇಳಿದು ಅಗಸೆಬಾಗಿಲು ದಾಟಿ ಸೇತುವೆ ಏರಿ ಪುನಃ ಹುಬ್ಬಿಗೆ ಕೈಹಚ್ಚಿ ನೋಡಲಾಗಿ..ಹೌದು! ಸೇತುವೆ ಸಮೀಪಿಸಿದೊಡನೆ ಅದು ಕಾರು ಎಂದು ಗ್ರಾಮಕ್ಕೆ ಮನವರಿಕೆಯಾಯಿತು. ಅದರೊಳಗಿರುವ ವ್ಯಕ್ತಿ ಕಲೆಕ್ಟರೋ ತಹಸೀಲ್ದಾರನೋ ಅಥವಾ ಹತ್ತೂರನ್ನಾಳುವ ದೊರೆಯೋ! ಒಳಗೆ ಯಾರಿದ್ದರೇನು? ಕಾರು ಕಾರು ತಾನೆ! ಮನುಷ್ಯರಾದವರ ಅಂಗಾಲುಗಳಿಗೆ ಮುಳ್ಳು ಚುಚ್ಚಿದಲ್ಲಿ ಕುಂಟುತ್ತಲೋ ತೆವಳುತ್ತಲೋ, ಅಥವಾ ಊರುಗೋಲಾಸರೆಯಿಂದ ನಡೆದಾರು! ಆದರೆ ಅದು ಎಷ್ಟಿದ್ದರೂ ಬಾಡಿಗೆ ಗುಜರಿಕಾರು, ಅದಕ್ಕೆ ತನ್ನನ್ನು ತಾನು ಸಂಭಾಳಿಸಿಕೊಳ್ಳುವ ತಾಕತ್ತು ಎಲ್ಲಿಂದ ಬಂದೀತು! ಕೈಮರ ಸಮೀಪಿಸಿದೊಡನೆ ಅದರ ಎರಡೂ ಚಕ್ರಗಳು ಪಂಥೇರಾಗಿಬಿಡುವುದೆ! ಕೈಮರಕ್ಕೆ ಅಂಟಿದಂತೆ ಇದ್ದ ಸೇತುವೆ ಕೆಳಗೆ ಅವಿತಿದ್ದ ಮಾಸನೂರು ಕಳ್ಳರು ಅದರ ಮೇಲ್ಪ್ರಲಕ್ಷಣಕ್ಕೆ ಪರವಶರಾಗಿ ಏನಾಯ್ತು ಡ್ರೈವರಣ್ಣ ಎಂದು ಕೇಳಿದ್ದಕ್ಕೆ ಆತನು ಊರನ್ನು ಸೇರಿಕೊಳ್ಳೋವರೆಗೆ ಸ್ವಲ್ಪ ದಬ್ಬಿ ಪುಣ್ಯ ಕಟ್ಟಿಕೊಳ್ಳಿರಣ್ಣಾ, ಪುಣ್ಯ ಬರತೈತೆ ಎಂದು ಹೇಳಿಕೊಂಡನಂತೆ, ಆತನ ಅಂಗಲಾಚುವಿಕೆಗಿಂತ ಮುಖ್ಯವಾಗಿ ಅಂಬ್ಯಾಸ್ಯಾಡರಿಗೆ ಮನಸೋತು ಹಂಗೆ ಆಗಲಿಬಿಡಣ್ಣಾ, ಹಾದಿಬಡುಕರಾಗಿದ್ದರೂ ನಮಗೆ ಯಾವುದು ಒಳ್ಳೇದು ಯಾವುದು ಕೆಟ್ಟದ್ದು ಎಂಬ ಪರಿಜ್ಞಾನಕ್ಕೇನು ಕಡಿಮೆ ಇಲ್ಲ, ನಿಮ್ಮಂಗೆ ನಾವೂನು ಮನುಷ್ಯರು ಎಂದು ಹೇಳುತ್ತ ಅದರ ಡಿಕ್ಕಿಗೆ ಕೈಹಚ್ಚಿ ತಳ್ಳಲಾರಂಭಿಸಿದರಂತೆ, ತಳ್ಳೀ ತಳ್ಳಿ ಊರು ಸಮೀಪಿಸಿದೊಡನೆ ಬಸವಳಿದರಂತೆ, ಬಸವಳಿದಾದ ಬಳಿಕ ಅವರ ಮುಖಂಡನು ಮಾಸನೂರಿನ ಸುವಿಖ್ಯಾತ ದರೋಡೆಕೋರರಾದ ತಾವು ಹಗಲ ಹೊತ್ತಿನಲ್ಲಿ ಸಜ್ಜನನಿರುವ ಊರನ್ನು ಪ್ರವೇಶ ಮಾಡಬಾರದಣ್ಣಾ, ಮಾಡಿದರೆ ನಮ್ಮ ಕುಲದೇವತೆಯಾದ ಪೋಲಾರಮ್ಮನ ಶಾಪ ತಟ್ಟುವುದು, ಅಗೋ ಅಲ್ಲಿರುವ ಜನರ ಸಹಾಯ ಪಡೆಯಿರಿ ಎಂದು ಹೇಳಿ ಸಂಗಡಿಗರೊಂದಿಗೆ ಪುನಃ ಕೈಮರದ ಕಡೆಗೆ ನಡೆದು ಮರೆಯಾದರಂತೆ!

ತಮ್ಮ ತಮ್ಮ ಕಣ್ಣಹುಬ್ಬುಗಳಿಗೆ ಕೈಹಚ್ಚಿ ವಿಸ್ಮಯ ಸಂಭ್ರಮ ವಿಲಕ್ಷಣ ಭಯದಿಂದ ನೋಡುತ್ತಿದ್ದವರು ಸುಮ್ಮನಿದ್ದಾರೆಯೆ! ಅಪರಿಚಿತ ಮನುಷ್ಯರಾಗಿದ್ದಲ್ಲಿ ತಾವು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲವೇನೋ! ತಮ್ಮೂರ ಮೇರೆ ಮೇಲೆ ಅಸಹಾಯಕತೆಯೇ ಮೈವೆತ್ತಂತೆ ನಿಂತಿರುವುದು ಬೆಳ್ಳಗೆ ಹೊಳೆಯುತ್ತಿರುವ ದುಬಾರಿ ಕಾರು! ಅದರೊಳಗಿರುವವರು ಕಿಮ್ಮತ್ತಿನ ಮಂದಿಯೇ ಇರಬಹುದೆಂದು ಅನ್ಯಥಾ ಭಾವಿಸಿದರು, ಕಾರು ಕಾರು ಎಂದು ಕೂಗು ಹಾಕಿದರು. ಅದರ ಪ್ರತಿಧ್ವನಿ ಕೇಳಿಸಿಕೊಂಡ ಹಲವರು ನಲ್ಮೊಲೆಯಿಂದ ಓಡೋಡಿ ಬಂದು ಸುತ್ತ ಜಮಾಯಿಸಿದರು, ಜಮಾಯಿಸಿ ಬಣ್ಣದ ಗಾಜೊಳಗೆ ಇಣುಕಿ ಗುರುತಿಸುವ ಯತ್ನಪ್ರಯತ್ನ ನಡೆಸಿದರು. ಹೆಣ್ಣೊಂದರ ಕೈಬಳೆ ನಿನಾದಕ್ಕೋ, ಅದಾಡಿದ ನಾಗರಿಕ ಭಾಷೆಗೋ ಮರುಳಾಗಿ ಕಾರಿನ ಡಿಕ್ಕಿಗೆ ಕೈಹಚ್ಚಿ ಪುಳಕಿತರಾದರು. ಹೈಸಾ ಹೈಸಾ ಎಂದು ಶಕ್ತಿಯನ್ನು ಆವಹಿಸಿಕೊಳ್ಳುತ್ತ ಗ್ರಾಮಾಭಿಮುಖವಾಗಿ ತಳ್ಳಲಾರಂಭಿಸಿದರು. ತಳ್ಳೀ ತಳ್ಳಿ ಅಗಸೆ

ಬಾಗಿಲನ್ನು ಹೇಗೋ ದಾಟಿಸಿದರು. ಆದರೆ ಯೋಜನ ಉದ್ದಗಲದ ಮನೆ ಮುಂದಿದ್ದ ಪುರಾತನ ಮತ್ತು ಆಳೆತ್ತರ ಕೆಸರು ಸುಂಕದ ಅಧಿಕಾರಿಯೋಪಾದಿಯಲ್ಲಿ ತಡೆದುಬಿಡುವುದೆ!

ಅದೇ ಸೇರಕ್ಕಿಅನ್ನ ಉಂಡು ತಾನಿನ್ನೇನು ಕೈತೊಳೆದುಕೊಳ್ಳಬೇಕು, ಸಮಸ್ತ ಗ್ರಾಮ ಆಲಿಸಿ ಹೌದು ಹೌದೆನ್ನುವಂತೆ ತಲೆದೂಗುವಂತೆ ತಾನಿನ್ನೇನು ಡರ್ರೆಂದು ಡೇಗಬೇಕೆಂದುಕೊಳ್ಳಬೇಕೆಂದು ಯೋಚಿಸುತ್ತ ವಯೋವೃದ್ಧ ಶಿವಣ್ಣ ಎಂಬ ಹೆಸರಿನ ಯಜಮಾನ ತಮ್ಮ ಅಸಂಖ್ಯಾತ ಮೊಮ್ಮಕ್ಕಳು ಕಾರು ಕಾರೆಂದು ಕೇಕೆ ಹಾಕಿದೊಡನೆ ಕತ್ತೊರಳಿಸಿ ನೋಡುತ್ತಾನೆ, ತಮ್ಮ ಮನೆಯ ಮುಂದೆ ನಯನ ಮನೋಹರವಾಗಿಯೂ, ಭಯಾನಕವಾಗಿಯೂ ಕಂಗೊಳಿಸುತ್ತಿರುವ ದವಳಕಾಂತಿಯ ವಾಹನವು! ಮಡಿಯುಡಿಯಿಂದ ಶಿವಪೂಜೆ ಪೂಜೆ ಮುಗಿಸಿದ್ದ ಕಾರಣಕ್ಕೆ ಅರೆನಗ್ನಸ್ಥಿತಿಯಲ್ಲಿದ್ದ ತಾನು ಹಾಗೆ ಧಾವಿಸಿ ಬಂದು ನೋಡುತ್ತಾನೆ ಭಯಭೀತನಾಗಿ. ಅದರೊಳಗಿನ ಕಿಮ್ಮತ್ತಿನ ಮಂದಿ ಯಾರಿರಬಹುದೆಂದು ಯೋಚಿಸುತ್ತಾನೆ, ಯೋಚಿಸಿ ಹುಬ್ಬುಗಳಿಗೆ ಅಂಗೈಯನ್ನಂಟಿಸಿ ನೋಡುತ್ತಾನೆ, ನೋಡಿ ತನ್ನ ಕೈಲಾದ ಸಹಾಯ ಮಾಡಲು ಉದ್ಯುಕ್ತನಾಗುತ್ತಾನೆ. ಅವನ ಹಾಗೆ ಸಹಾಯ ಹಸ್ತ ಚಾಚುತ್ತಿರುವವರು ಒಬ್ಬರಲ್ಲ ಇಬ್ಬರಲ್ಲ ಹತ್ತಾರು ಮಂದಿಯು! ಕುರುಕ್ಷೇತ್ರ ರಣಾಂಗಣದಲ್ಲಿ ಕರ್ಣನ ರಥದ ಚಕ್ರಗಳನ್ನು ನುಂಗಿರುವ ಕೆಸರಿನಂತಿರುವ ಕೆಸರೋ, ಸಾರಥಿ ಶಲ್ಯನೋಪಾದಿಯಲ್ಲಿ ಅಯ್ಯೋ ನನ್ನ ಕಾರೇ ಎಂದುದ್ಗರಿಸುತ್ತಿರುವ ಅದರ ಡ್ರೈವರಣ್ಣನೋ! ಅವನು ವಾಹನದ ಬಲಭಾಗದ ಕಿಟಿಕಿಯ ಗಾಜನ್ನಿಳಿಸಿ ಮೆಲ್ಲಗೆ ತನ್ನ ಕತ್ತನ್ನು ಹೊರಚಾಚಿ, ಮೆಲ್ಲಗೆ ತೆರೆದು ಮಾಡಿ ಒಮ್ಮೆಗೆ ಕುಪ್ಪಳಿಸಿ "ಇಳಿರಯ್ಯಾ ಇಳಿರಿ, ಬಾಡಿಗೆ ಬಂದುದಕ್ಕೆ ಒಳ್ಳೆ ಪಾಠ ಕಲಿಸಿದಿರಿ ನನಗೂ ನನ್ನ ಕಾರಿಗೂ" ಎಂದಂದ ಬಳಿಕ! ಈ ಕಡೆಯಿಂದ ಇಳಿದು ಗೋಚರಿಸಿದ ವ್ಯಕ್ತಿಯು ಸಾಕ್ಷಾತ್!

"ಓಹ್! ನೀನೇ ಏನು! ನಾವು ಯಾರೋ ಕಲೆಕ್ಟರೋ ತಹಶೀಲ್ದಾರ ಸಾಹೇಬನೋ ಹತ್ತೂರನ್ನಾಳುವ ದೊರೆಯೋ ಅಂದುಕೊಂಡಿದ್ದೆವು. ಕಾರಿನಲ್ಲಿ ಬಂದು ದಿಗಿಲುಟ್ಟಿಸಿಬಿಟ್ಟೆಯಲ್ಲಪ್ಪಾ" ಎಂದು ಅವರಿವರು ಗೊಣಗುತ್ತಿದ್ದುದನ್ನು ಕೇಳಿಸಿಕೊಳ್ಳುತ್ತ ಜಲಂಧರಸಿಂಗ್ ಅದರಿಂದ ಇಳಿದು ಕಾಣಿಸಿಕೊಂಡನಂತೆ. ತಾನು ಆ ವಾಹನದಿಂದ ಇಳಿಸಿದ ವ್ಯಕ್ತಿ ಅವಗುಂಠನಮುಖಿಯಾಗಿದ್ದ ಕಾರಣಕ್ಕೆ ತಾನು ಸುಂದರ ಮಹಿಳೆ ಎಂದು ಸಾಬೀತುಪಡಿಸಿದಳಂತೆ, ಜನ ಬೆರಗಾಗಿ ನೋಡು ನೋಡುತ್ತಿರಲು ಆಕೆಯು ಯಾವ ಕಾರಣಕ್ಕೂ ತನ್ನ ಮುಖಾರವಿಂದವನ್ನು ತೋರಿಸದೆ ಕುಪ್ಪಳಿಸಿ ಒಂದೇ ಹೆಜ್ಜೆಗೆ ಕೆಸರನ್ನು ದಾಟಿದಳಂತೆ, ಆಕೆ ಚೆಲುವೆ ಎನ್ನುವುದಕ್ಕೆ ಸಾಕ್ಷಿಯಾದ ಉಂಗುರಗಳುಳ್ಳ ನೀಳ ಬೆರಳುಗಳು, ನೀಳ್ದೋಳುಗಳು, ಮೆಹಂದಿಯಾವೃತ ಕೋಮಲ ಪಾದಗಳು, ಉದ್ಯಾಣದಿಂದಲಂಕೃತ ಸೊಂಟ, ಬಿಂದಿಗೆ ಗಾತ್ರದ ಜಘನಗಳು, ಪಾರದರ್ಶಕ ಪರದೆಯೊಳಗೆ ಕೋರೈಸಿದ ಬೊಗಸೆಗಂಗಳು, ಫಳಫಳ ಹೊಳೆವ ತುಟಿಗಳು, ನೀಳಕೇಶರಾಶಿ.. ಈ ಎಲ್ಲಾ ಸಲ್ಲಕ್ಷಣಗಳುಳ್ಳ ಆಕೆ ತಾನು ಹೆಜ್ಜೆ ಇರಿಸಿದರೆಲ್ಲಿ ಭೂಮಿಗೆಲ್ಲಿ ನೋವುವಾಗುವುದೋ, ಭೂಮಿ ತಾಕಿದರೆಲ್ಲಿ ತನ್ನ ಕೋಮಲ ಪಾದಗಳಿಗೆ ನೋವಾಗುವುದೋ, ಅವರಿವರ ನೋಟ ಸೋಂಕಿದರೆಲ್ಲಿ ತನ್ನ ಅಭಿಜಾತ ಸೌಂದರ್ಯ ಮಸುಕಾಗುವುದೋ ಎಂಬಿತ್ಯಾದಿ ಪೂರ್ವನಿರ್ಧಾರಿತ ಆಲೋಚನೆಗಳಿಂದ ಹೆಜ್ಜೆಹೆಜ್ಜೆ ಹಾಕುತ್ತ ಬಸನಗೌಡನ ಮನೆಯ ಮೆಟ್ಟಿಲುಗಳನ್ನೇರುತ್ತ ಮಹಡಿ ಪ್ರವೇಶಿಸಿ ಪರದೆ ಸರಿಸಿ ಮರೆಯಾದಳಂತೆ! ಪರಿಣಿತ ಮೌಖಿಕ ನಿರೂಪಕ ಶೇಷಣ್ಣ ಮುಂದೆ ಇನ್ನೇನು ಹೇಳಲಿದ್ದನೇನೋ ಅಷ್ಟರಲ್ಲಿ ಮಹಡಿಯಿಂದ ಇಳಿಯುತ್ತ ಜಲಂಧರನು

ನೇರವಾಗಿ ಬಂದವನೆ ನಮ್ಮ ಮನೆಯನ್ನು ಪ್ರವೇಶಿಸಿ ಕುಳಿತನು ಬೆರಗಿನಿಂದ ನಮ್ಮ ಕಡೆ ನೋಡುತ್ತ!

ಅತಂತ್ರ ಸ್ಥಿತಿಯ ನಾಟಕ ಮಾಲಕನಾಗಿರುವ, ತಮ್ಮ ಕಂಪನಿ ಅಭಿನಯಿಸಲಿರುವ ನಾಟಕಗಳನ್ನು ನೋಡಿರಿ ಎಂದು ಪ್ರತಿಯೊಬ್ಬರೆದುರು ಅಂಗಲಾಚುವ, ದೇಹದ ಸಮಸ್ತ ಎಲುಬುಗಳು ಖುದ್ದ ಗೋಚರಿಸುವಂಥವರನ್ನೇ ಕಂಪನಿಯಲ್ಲಿ ತುಂಬಿಕೊಂಡಿರುವ ಜಲಂಧರನು ತಮ್ಮ ತಂಗಿಯನ್ನು ಬಾಡಿಗೆ ಕಾರಿನಲ್ಲಿ ವಾಗಿಲಿಗೆ ಕರೆತಂದಿರುವುದೆಂದರೇನು! ತನ್ಮೂಲಕ ವಾಗಿಲಿಯ ಜಮೀನ್ದಾರರ ಹುಬ್ಬುಗಳನ್ನು ಮೇಲೇರಿಸಿರುವುದೆಂದರೇನು! ಈ ಕುರಿತಂತೆ ಸಿಂಗ್‌ನನ್ನು ಹೇಗೆ ಪ್ರಶ್ನಿಸುವುದು ಎಂಬ ಗೊಂದಲದಲ್ಲಿದ್ದಾಗ ಶೇಷಣ್ಣ..

"ನಿನ್ನಂಥವರು ನನ್ನಂಥವರ ಪಕ್ಕ ಕುಳಿತುಕೊಳ್ಳುವುದೆಂದರೇನು ಧಣಿ! ಅಗೋ ಅಲ್ಲಿರುವ ಕುರ್ಚಿ ಮೇಲೆ ಕಾಲ ಮೇಲೆ ಕಾಲನ್ನು ಹಾಕಿ ಕುಳಿತುಕೊಳ್ಳಿರಿ" ಎಂದು ಪ್ರತಿಕ್ರಿಯಿಸಿದ, ಅದೂ ವ್ಯಂಗ್ಯವಾಗಿ.

"ಇವತ್ತು ಹೀಗೇಕೆ ಮಾತಾಡುತ್ತಿರುವಿ! ಭೂಮಿಗೆ ಒಡೆಯರಾದ ನಿಮ್ಮಂಥವರೆಲ್ಲಿ ನಿರ್ಗತಿಕರಾದ ನಮ್ಮಂಥವರೆಲ್ಲಿ? ನೀನಾಡಿದ ಮಾತಿನಿಂದ ನನಗೆ ನೋವಾಯಿತು ಶೇಷಣ್ಣ" ಎಂದು ಪ್ರತಿಕ್ರಿಯಿಸಿದ ನೋವಿನಿಂದ.

"ಏನಿದ್ದರೇನು ಲಾಭ ಸಿಂಗಣ್ಣ! ಎಷ್ಟು ಬೆಳೆದರೂ ಒಂದು ಸೈಕಲ್ಲನ್ನು ಖರೀದಿಸಲಿಕ್ಕಾಗಿಲ್ಲ. ಈ ನಮ್ಮೂರಿನಲ್ಲಿ ನೂರಾರೆಕರೆ ಇರುವ ಜಮೀನ್ದಾರರೂ ಮೋಟಾರು ಗಾಡಿಯನ್ನು ಖರೀದಿಸಿಲ್ಲ. ಅವರೆಲ್ಲ ತಿರುಗಾಡಲು ಎತ್ತಿನ ಗಾಡಿಯನ್ನಿಟ್ಟುಕೊಂಡಿದ್ದಾರೆ, ಊರಿನ ಧಣಿ ಹೆಬ್ಬಟಂ ಗೌಡರಿಗೂ ಸಾರೋಟು ಬಿಟ್ಟರೆ ಇನ್ನೊಂದಿಲ್ಲ. ಆದರೆ ನಿನ್ನಂಥವರು ಕಾರಿನಲ್ಲಿ ಬರುವುದೆಂದರೇನು!" ಎನ್ನುತ್ತ ಕೂತಲ್ಲಿಂದ ತುಸು ದೂರ ಸರಿದನು.

ಆ ಮಾತಿಗೆ ಜಲಂಧರ ಒಂದುಕ್ಷಣ ಯೋಚಿಸಿ ಹೇಳಿದ. "ನನ್ನ ತಂಗಿ ಪದ್ಮಳನ್ನು ಕಾರಿನಲ್ಲಿ ಕರೆದುಕೊಂಡು ಬಂದಿದ್ದಕ್ಕೆ ತಾನೆ ನಿನ್ನ ಮನಸ್ಸಿಗೆ ನೋವಾಗಿರುವುದು!" ಎಂದು ದೀರ್ಘ ನಿಟ್ಟುಸಿರುಬಿಟ್ಟು ಕಾರಿನ ಪೂರ್ವಾಪರ ವಿವರಿಸಿದ. ಶ್ರೀಒಪ್ಪತ್ತೇಶ್ವರ ನಾಟಕ ಸಂಘ ಆದವಾನಿಯಲ್ಲಿ ಕ್ಯಾಂಪ್ ಹಾಕಿರುವುದೆಂದೂ, ಅದು ಕಣ್ಣಿದ್ದರೂ ಬುದ್ಧಿ ಬೇಕು ಎಂಬ ನಾಟಕವನ್ನು ಆಡುತ್ತಿರುವುದೆಂದೂ, ಅದರಲ್ಲಿ ತನ್ನ ತಂಗಿ ಪದ್ಮ ಮುಖ್ಯಪಾತ್ರ ಮಾಡುತ್ತಿದ್ದಳೆಂದೂ, ಕರಾರು ಮುಗಿದ ಬಳಿಕ ಅದರ ಮಾಲಕ ಶ್ರೀಕಂಠೇಶ್ವರ್ ಬಾಡಿಗೆ ಕಾರಲ್ಲಿ ತಮ್ಮನ್ನು ವಾಗಿಲಿಗೆ ಕಳಿಸಿಕೊಟ್ಟನೆಂದೂ!

"ದಾರಿ ಸರಿ ಇಲ್ಲ, ಎಷ್ಟು ಕೊಟ್ಟರೂ ವಾಗಿಲಿಗೆ ಮಾತ್ರ ಬರುವುದಿಲ್ಲವೆಂದು ಹುಸೇನಿ ಹಠ ಹಿಡಿದ, ಆದರೆ ಶ್ರೀಕಂಠಣ್ಣ ಕೇಳಿಸಿಕೊಳ್ಳಲಿಲ್ಲ ಶೇಷಣ್ಣ, ಬಲವಂತವಾಗಿ ಇಲ್ಲಿಗೆ ಕಳಿಸಿಕೊಟ್ಟ, ಇದರಲ್ಲಿ ನನ್ನ ತಪ್ಪೇನಿದೆ ನೀನೆ ಹೇಳು!" ಎಂದು ಚರ್ಚೆಯನ್ನು ಉಪಸಂಹರಿಸಿದ.

ಅದನ್ನೆಲ್ಲ ಕೇಳಿಸಿಕೊಂಡ ನನ್ನ ಮುಖದಲ್ಲಿ ಮಂದಹಾಸ ಕಾಣಿಸಿಕೊಂಡಿತು. ಅದಕ್ಕೆ ಕಾರಣ ಜಲಂಧರ ಕಾರಿನಲ್ಲಿ ಬರುವುದರ ಮೂಲಕ ಕಾಲಹಾದಿಗೆ ರಾಷ್ಟ್ರೀಯ ಹೆದ್ದಾರಿಯ ಪ್ರಭಾವಳಿ ಕರುಣಿಸಿದ್ದ. ಇದರ ಪ್ರಭಾವದಿಂದಾಗಿ ತಮ್ಮ ವಾಗಿಲಿಯ ಜಮೀನ್ದಾರರು ತಿಂಗಳೆರಡು ತಿಂಗಳುಗಳಲ್ಲಿ ಮೋಟಾರ್ ಬೈಕುಗಳೊಂದೇ ಅಲ್ಲದೆ ಕಾರುಗಳನ್ನೂ ಖರೀದಿಸಬಹುದೆಂದು ಊಹಿಸಿದೆ. ಅಲ್ಲದೆ ಈ ನೆಪದಿಂದಾಗಿ ನಡೆಯಲಿಕ್ಕೂ ದುಸ್ತರವಿರುವ ಹಾದಿ ಸುಧಾರಿಸಿದಲ್ಲಿ, ಅದರ ಇಕ್ಕೆಲದುದ್ದಕ್ಕೂ ಇರುವ ಪೊದೆಗಳು ನಿರ್ನಾಮಗೊಂಡಲ್ಲಿ,

ಕಳ್ಳಕಾಕರ ಹಾದಿಬಡುಕರ ಹಾವಳಿ ತಪ್ಪಿದಲ್ಲಿ, ಥಾರು ರಸ್ತೆಯನ್ನೇ ನೋಡದಿರುವ ವಾಗಿಲಿಯ ಶೂದ್ರ ದಲಿತರು ಆದವಾನಿಯಂಥ ನಗರಗಳಿಗೆ ಹೋಗಿ ಬರುವಂತಾದಲ್ಲಿ, ನಗರಗಳ ಒಡನಾಟದಿಂದಾಗಿ ಸಾಮಾಜಿಕ ಅಸಮಾನತೆ ಕುರಿತಂತೆ ಅವರೆಲ್ಲ ಯೋಚಿಸಿ ಪ್ರಾಥಮಿಕ ವರದಿ ಸಿದ್ಧಪಡಿಸಿಕೊಳ್ಳುವಂತಾದಲ್ಲಿ..

ಇಂಥ ಹತ್ತಾರು ಕನಸುಗಳನ್ನು ಕಾಣುತ್ತ ಹೆಮ್ಮೆಯಿಂದ ಜಲಂಧರನ ಕಡೆಗೆ ದೃಷ್ಟಿ ಹಾಯಿಸಿದೆ. ನನ್ನ ಮುಖದಲ್ಲಿ ಅಸಂತೃಪ್ತಿ ಇಲ್ಲದಿರುವುದನ್ನು ಗಮನಿಸಿದ ಜಲಂಧರ "ಸಾರ್ ನಮ್ಮ ತಂಗಿ ಕೇವಲ ನಟಿಯಷ್ಟೇ ಅಲ್ಲ ಕಥೆ ಕಾದಂಬರಿಗಳನ್ನೂ ಒದಿಕೊಂಡಿದ್ದಾಳೆ. ಆಕೆಗೆ ನಿಮ್ಮನ್ನು ನೋಡುವ ಆಸೆ, ನಿಮ್ಮೊಂದಿಗೆ ತನ್ನ ಸುಖದುಃಖಗಳನ್ನು ಹೇಳಿಕೊಳ್ಳುವ ಆಸೆ. ಆಕೆಯನ್ನು ಇಲ್ಲಿಗೇ ಕರೆದುಕೊಂಡು ಬರಲೋ ಅಥವಾ ನೀವೇ ಬರುವಿರೋ!" ಎಂದು ಹೇಳಿದ ಬಳಿಕ ಶೇಷಣ್ಣನ ಕಡೆ ತಿರುಗಿ "ಅಣ್ಣಾ ನೀನೂ ಮಾಸ್ಟರ್ ಸಂಗಡ ಮನೆಗೆ ಬರುವುದನ್ನು ಮರೆಯಬೇಡ" ಎಂದು ಸೌಜನ್ಯದಿಂದ ಕೇಳಿಕೊಂಡನು.

++++

ಹೀಗೆ ಹೋಗಿ ಹಾಗೆ ಮರಳಿದೆ. ಆಕೆ ಅಪರೂಪದ ಸುಂದರಿ ಅಲ್ಲದಿದ್ದರೂ ಕುರೂಪಿಯಂತೂ ಖಂಡಿತ ಅಲ್ಲ, ಒಂದು ರೀತಿಯ ಆಕರ್ಷಕ ವ್ಯಕ್ತಿತ್ವ ನೋಡಿದವರ ಮನಸ್ಸಿನಲ್ಲಿ ವೈರಾಗ್ಯ ಮೂಡಿಸುವಂಥ ಮಹಿಳೆ. ಈಕೆಯೊಂದಿಗೆ ಕಳೇಬರ ರೂಪದ ಆಕೆಯನ್ನು ಹೋಲಿಸಿ ನೋಡದೆ ಇದ್ದಲ್ಲಿ ತಾನು ಸುಂದರಿ ಎನ್ನಿಸುತ್ತಿದ್ದಳೇನೊ! ಮುಖಕ್ಕೆ ಮುಖ ಕೊಟ್ಟು ನೇರವಾಗಿ ಮಾತನಾಡಲಿಲ್ಲ. ಸನಿಹದಲ್ಲಿ ಶೇಷಣ್ಣ, ಆಕೆಯ ಅಣ್ಣ ಅಲ್ಲದೆ ಬಸವರೆಡ್ಡಿಯರಿದ್ದುದರಿಂದ ಆಕೆ ತನ್ನ ಮನಸ್ಸನ್ನು ನಿಸ್ಸಂಕೋಚವಾಗಿ ಬಿಚ್ಚಲು ಹಿಂದೇಟು ಹಾಕಿರಬಹುದು. ನಾನೂ ಹೊರಡುವ ಮುನ್ನ ತಾಲೀಮು ನಡೆಸಿ ಇಟ್ಟುಕೊಂಡಿದ್ದ ಪ್ರಶ್ನೆಗಳನ್ನೂ ಮಾತಕತೆಯನ್ನೂ ಪ್ರಸ್ತಾಪಿಸಲಾಗಲಿಲ್ಲ. ನನ್ನ ಮನಸ್ಸಿನಲ್ಲಿ ನಿಗಾವಹಿಸಿದ್ದ ನನ್ನ ಗೂರ್ಕಾ ಜಾಯಮಾನದ ನನ್ನ ತಂದೆಯೂ ಅದಕ್ಕೆ ತಡೆಯೊಡ್ಡಿರಬಹುದು. ನಮಗೆಲ್ಲ ಚಹಾ ಕಪ್ಪುಗಳನ್ನು ವಿತರಿಸಿ ಹೀಗೆ ಬಂದು ಹಾಗೆ ಮರೆಯಾದಳು. ಆ ಅಸಹನೀಯ ಮೌನದಲ್ಲಿ ಎಷ್ಟು ಹೊತ್ತು ಕುಳಿತಿರಲು ಸಾಧ್ಯ! ಎಷ್ಟು ಶೀಘ್ರವಾಗಿ ಅತ್ಯುತ್ಸಾಹದಿಂದ ಆ ಮಹಡಿ ಮನೆಯನ್ನು ಏರಿದೆನೋ ಅಷ್ಟೇ ವೇಗವಾಗಿ ಆ ಮನೆಯಿಂದ ಇಳಿದು ಪ್ರವೇಶಿಸಿ ನನ್ನ ಮನೆಯನ್ನು ತಲುಪಿದೆ ಅದೂ ದೈಹಿಕವಾಗಿ!

ಜಲಂಧರ ತನ್ನ ಮೂಲಭೂತ ಸಂವೇದನೆಯಾದ ವಾಚಾಳಿತನವನ್ನು ತನ್ನ ಸಹೋದರಿಯ ಸಮಕ್ಷಮ ಅಮಾನತ್ತಿನಲ್ಲಿಡುವ ಪ್ರಮೇಯವಿರಲಿಲ್ಲ, ಮಾತನಾಡಬಹುದಿತ್ತು, ಪುಂಖಾನುಪುಂಖವಾಗಿ ಪರಿಚಯಿಸಬಹುದಿತ್ತು. ಆದರೆ ಅವನು ಅತಿಥಿಗಳು ತೊಲಗಿದರೆ ಸಾಕು ಎಂಬಂತೆ ವರ್ತಿಸಿದ್ದು ಮಾತ್ರ ನನಗೆ ಮಜುಗರವನ್ನುಂಟು ಮಾಡಿತು. ಅಲ್ಲಿಗೆ ಹೋಗಬಾರದಿತ್ತೋ! ಸೂಜಿಯ ಮೊನೆಯನ್ನು ಚುಂಬಿಸಿದಂತೆ ಆಮಂತ್ರಣವನ್ನು ನಿರಾಕರಿಸಬಹುದಿತ್ತೋ! ಸೃಜನಶೀಲ ಗೊಂದಲದಲ್ಲಿ ಸಿಲುಕಿದೆ. ಅಲ್ಲಿಂದ ಮರಳಿದ ಬಳಿಕವೂ ಅಲ್ಲಿನ ವಿದ್ಯಾಮಾನಗಳು ನನ್ನ ಮನಸ್ಸಿಗೆ ಶೃಂಖಲೆ ತೊಡಿಸುವುದಾಗಲಿಲ್ಲ. ಯೌವನ ಸಹಜ ಭಾವನೆಗಳು ಕಾಣೆಯಾಗಿರುವ ಸಹಜ ಭಾವನೆಗಳ ತೊಳಲಾಟವೂ ಅರಿವೆಗೆ ಬರಲಿಲ್ಲ. ಏನೋ ಒಂದು ರೀತಿಯ ಚಡಪಡಿಕೆ ಒದ್ದಾಟ! ಯಾಂತ್ರಿಕತೆ ಅಸಹಜ ಕುತೂಹಲ! ವಿಲಕ್ಷಣ

ಅಪರಾಧಿ ಪ್ರಜ್ಞೆ ಬೇರೆ. ನೆರೆಹೊರೆಯವರು ನನ್ನ ಚಲನವಲನಗಳ ಮೇಲೆ ನಿಗಾವಹಿಸಿರುವರು, ನನ್ನ ನೈತಿಕತೆ ಕುರಿತಂತೆ ಮಾತನಾಡಿಕೊಳ್ಳುತ್ತಿರುವರು, ಹಲವು ಪ್ರಶ್ನೆಗಳಿಂದ ನನ್ನನ್ನು ಚಿತ್ ಮಾಡುವ ಸಲುವಾಗಿ ಹೊಂಚಿರುವರು ಎಂದು ವಿನಾಕಾರಣ ಯೋಚಿಸಲಾರಂಭಿಸಿದ ಪರಿಣಾಮವಾಗಿ ನನ್ನ ಮುಖ ತನ್ನ ಸಹಜ ಲವಲವಿಕೆಯನ್ನು ಕಳೆದುಕೊಳ್ಳಲಾರಂಭಿಸಿತು.

ಯಾಂತ್ರಿಕವಾಗಿ ಶಾಲೆಗೆ ಹೋಗುವುದು ಅಷ್ಟೇ ಯಾಂತ್ರಿಕ ರೀತಿಯಲ್ಲಿ ಮಕ್ಕಳಿಗೆ ಪಾಠ ಮಾಡುವುದು. ಸಹೋದ್ಯೋಗಿಗಳ ಸಂಗಡ ಮಾತನಾಡುವಾಗ ಮಹಾಪ್ರಾಣ ಅಲ್ಪಪ್ರಾಣಗಳಲ್ಲೂ ಸಹ ಏರುಪೇರಾಗುತ್ತಿರುವುದನ್ನು ಗ್ರಹಿಸಿದೆ, ಕಾರ್ತೀಕ ಸಂಭ್ರಮ ತೀರಿದ ಮಾರನೆ ದಿವಸದ ಶುಷ್ಕ ವಿಚಿತ್ರ ಅನುಭವ! ಇವೆಲ್ಲವುಗಳಿಂದ ಚೇತರಿಸಿಕೊಳ್ಳಬೇಕು, ಪಂಚೇಂದ್ರಿಯಗಳಿಗೆ ದಕ್ಕಿದ ದಕ್ಕಲು ಹವಣಿಸುತ್ತಿರುವ ಅನುಭವಗಳನ್ನು ಪುನಶ್ಚೇತನಗೊಳಿಸುವ ಮಾನಸಿಕ ಶಕ್ತಿಗೆ ನನ್ನಲ್ಲಿ ಬರವಿರಲಿಲ್ಲ ತಾನೆ! ಭೂತಕಾಲದ ನೆನಪುಗಳನ್ನು ವರ್ತಮಾನ ಕಾಲದ ಹಾಗೂ ಸಂಭವನೀಯ ಅನುಭವಗಳನ್ನು ಸೃಜನಶೀಲವಾಗಿ ವಿನ್ಯಾಸಗಳೊಳಿಸುವ ಚಾಣಾಕ್ಷ್ಯತೆಗೆ ನನ್ನಲ್ಲಿ ಬರವಿರಲಿಲ್ಲ ತಾನೆ! ತರಾವರಿ ಚಿಂತೆಗಳಿಂದಾವೃತಗೊಂಡಿರುವ ಸಂದರ್ಭಗಳಲ್ಲಿ ನನ್ನ ನೆರವಿಗೆ ಧಾವಿಸುವುದು, ಧಾವಿಸಿ ಮಾತೃವಾತ್ಸಲ್ಯದಿಂದ ಸಂತೈಸುವುದು, ನೀರೊಳಗೆ ಬಿದ್ದೊಡನೆ ಶಾಯಿಯ ಒಂದೇಒಂದು ಹನಿ ತಾನು ಬಿದ್ದ ನೀರಿನಾದ್ಯಂತ ಸಾಂಕ್ರಾಮಿಕಗೊಳ್ಳುವ ರೀತಿಯಲ್ಲಿಯೇ ಸೃಜನಶೀಲಗುಣವೇ ನನ್ನನ್ನು ಸಾಮಾಜಕೀಕರಣಗೊಳಿಸುತ್ತಿರುವುದು. ಇಷ್ಟೆಲ್ಲ ಸೃಜನಶೀಲ ಪುನರ್ವಸತಿ ಸೌಲಭ್ಯವನ್ನು ದೈವದತ್ತವಾಗಿ ಪಡೆದಿರುವ ನಾನು ಯಾಕೆ ಲೌಕಿಕ ಪ್ರಪಂಚದ ವಿದ್ಯಾಮಾನಗಳ ಕುರಿತು ಚಿಂತಿಸಲಿ! ಅಪೂರ್ಣಗೊಂಡಿರುವ ಕಾದಂಬರಿ ಸ್ಮರಣೆಗೆ ಬಂತು ತಕ್ಷಣ. ನಾನೇ ಅದನ್ನು ನೆನಪಿಸಿಕೊಂಡೆನೋ ಅದೇ ನನ್ನನ್ನು ನೆನಪು ಮಾಡಿಕೊಂಡಿತೋ! ಪರಸ್ಪರ ಹತ್ತಿರವಾದೆವು ಕಡಿಮೆ ಅವಧಿಯಲ್ಲಿ.

ಅದೇ ನನ್ನೆದುರು ಬಿಚ್ಚಿಕೊಂಡಿತೋ! ಅದನ್ನೇ ನಾನು ತೆರೆತೆರೆದು ಇಣುಕಿದೆನೋ! ನನ್ನ ಅಂತರಂಗವನ್ನು ಅದೇ ವಾಚಿಸತೊಡಗಿತೋ ಅದರ ಪುಟಪುಟಗಳನ್ನು ನಾನೇ ವಾಚಿಸಲಾರಂಭಿಸಿದೆನೊ! ಹಂತಹಂತವಾಗಿ ಕೊಳೆಯುತ್ತ ಮೃಣ್ಮಯಿಯಾಗುವುದರ ಮೂಲಕ ವರ್ತಮಾನವನ್ನು ವ್ಯಾಪಿಸುತ್ತಿರುವ ಲಕ್ಷ್ಮಿಯನ್ನು ಓದಿದೆ. ಖಳತ್ವವನ್ನು ಕಳಚಿಕೊಳ್ಳುವ ಸಲುವಾಗಿ ನಾಯಕತ್ವವನ್ನು ಆವಹಿಸಿಕೊಳ್ಳುವ ಸಲುವಾಗಿ, ಭಾರತೀಯ ದಂಡ ಸಂಹಿತೆಯ ಕಲಮುಗಳ ಕಣ್ಣಿಗೆ ಮಾವೋ ಪ್ರಣೀತ ಸಮಾಜವಾದದ ಮುಲಾಮನ್ನು ಲೇಪಿಸುವ ಸಲುವಾಗಿ, ಯಾರನ್ನೋ ಪ್ರೇಮಿಸುವ ಸಲುವಾಗಿ, ಪ್ರೇಮಿಗಳನ್ನು ಒಂದು ಮಾಡುವ ಸಲುವಾಗಿ, ಕಥಾನಕದ ಅಂತ್ಯದಲ್ಲಿ ಹುತಾತ್ಮನಾಗುವ ಸಲುವಾಗಿ ವಾಗಿಲಿಯ ಮಾರ್ಗಮಧ್ಯದಲ್ಲಿರುವ ದಯಾನಂದನನ್ನೂ ಓದಿದೆ. ಶರಭನ ರೂಪದಲ್ಲಿ ಆಗಮಿಸಲಿರುವ ಪರಶುರಾಮನನ್ನೂ, ಪರಶುರಾಮನ ರೂಪದಲ್ಲಿ ಆಗಮಿಸಲಿರುವ ಶರಭನನ್ನೂ ಓದಿಕೊಳ್ಳದೆ ಇರಲಿಲ್ಲ. ಇನ್ನು ಕಥಾನಕದ ವ್ಯಂಜಕಗಳೆಂದರೆ ಸಂಭವಿಸಲಿರುವ ಹೇಮರೆಡ್ಡಿ ಮಲ್ಲಮ್ಮನ ಕಥೆ! ಅದಕ್ಕೆ ಅಡಚಣೆಯೊಡ್ಡುವ ಕೊಕ್ಕಬುಕ್ಕರು! ಹೆಬ್ಬಟಂರೆಡ್ಡಿಯವರ ಮಗಳು ಸುಜಾತಳನ್ನು ಪ್ರೇಮಿಸಿ ಕಗ್ಗೊಲೆಯಾಗಲಿರುವ ಜಲಂಧರಗಳೇ ಮೊದಲಾದ ಪಾತ್ರಗಳನ್ನೂ ಓದಿಕೊಂಡೆ. ವಾಗಿಲಿ ಎಂಬ ತ್ರಿಕೋನಾಕೃತಿಯ ಮೂರೂ ಮೂಲೆಯಲ್ಲಿ ಪ್ರೇಮ ಹಿಂಸೆ ತ್ಯಾಗ. ಅದರ ಒಳ ಆವರಣದಲ್ಲಿ ಮೃಗೀಯ ಗ್ರಾಮೀಣ ಬದುಕು. ಇಷ್ಟು ಸಾಕಲ್ಲವೆ ಒಂದು ಕಥಾನಕ ಪರಿಪೂರ್ಣಗೊಳ್ಳಲು.

ಇನ್ನೇನು ಸಮಾಧಾನದ ಉಸಿರು ಬಿಡುವಷ್ಟರಲ್ಲಿ ತ್ರಿಕೋನಾಕೃತಿಯನ್ನು ಪ್ರವೇಶಿಸಲು ಹಾತೊರೆಯುತ್ತಿರುವ, ಪರಸ್ಪರ ಪೈಪೋಟಿಗೆ ಇಳಿದಿರುವ ಆ ಪಕ್ಕದಲ್ಲಿ ವನಜಾಕ್ಷಿ, ಈ ಪಕ್ಕದಲ್ಲಿ ಲಕ್ಷ್ಮಿಯ ಆತ್ಮವನ್ನು ಆವಹಿಸಿಕೊಂಡಿರುವ ಅನಾಮಧೇಯ ಯುವತಿಯ ಪಾತ್ರ! ಹೇಗೆ ಸಂಬಾಳಿಸುವುದು ಈ ಎರಡು ಸ್ತ್ರೀಪಾತ್ರಗಳನ್ನು! ಪಾತ್ರಗಳು ಸೃಷ್ಟಿಸಿದ ತಲೆನೋವಿನಿಂದ ಬಿಡುಗಡೆ ಪಡೆಯುವ ಸಲುವಾಗಿ ಹಸ್ತಪ್ರತಿಯನ್ನು ಮುಗುಚಿಟ್ಟು ಆರಾಮಛೇರಿನಲ್ಲಿ ಮೈಚೆಲ್ಲಿ ಕಣ್ಣುಗಳನ್ನು ಮುಚ್ಚಿಕೊಂಡೆ. ಮುಚ್ಚಿಕೊಂಡೇ ಮೆಲ್ಲಗೆ ಎರಡೂ ಕಾಲುಗಳನ್ನು ಚಾಚಿ ಎದುರಿಗಿದ್ದ ಕಂಭಕ್ಕಾನಿಸಿದೆ. ಕ್ರಮೇಣ ಮಂಪರು ಕವಿಯುತ್ತಿರುವಂತೆನ್ನಿಸಿತು, ಹಾಗೆ ನಿದ್ದೆ ಹೋದರೆಲ್ಲಿ ಶಂಕರಾಚಾರ್ಯ ವಿರಚಿತ ಸೌಂದರ್ಯಲಹರಿ ತನ್ನ ಪುಟಗಳನ್ನು ಬಿಚ್ಚಿಕೊಳ್ಳುವುದೋ! ಅದರ ಹಿಂದೆಯೇ ದುಃಸ್ವಪ್ನಗಳು ಕಾಣಿಸಿಕೊಳ್ಳುವವೋ ಎಂಬ ಆತಂಕದಿಂದ ಪುನಃ ತೆರೆದೆ. ಆದರೂ ಕಣ್ಣವಪೆಗಳು ಅಯಾಚಿತವಾಗಿ ಮುಚ್ಚಿಕೊಳ್ಳದೆ ಇರಲಿಲ್ಲ. ಕನಸುಗಳ ಮಾಯಾದರ್ಪಣದಲ್ಲಿ ಕಳೆದು ಹೋದ ಕಳೆದು ಹೋಗಲಿರುವ ವ್ಯಕ್ತಿಗಳನ್ನು ಕಲ್ಪಿಸಿಕೊಳ್ಳುವುದು, ಯೋಚಿಸುವುದು ವಿಚಿತ್ರ ಅನುಭವ. ಅದರಲ್ಲೂ ಮುಖ್ಯವಾಗಿ..

ಲಕ್ಷ್ಮಿಯ ಕಳೇಬರನ್ನು ಇಂಚು ಇಂಚಾಗಿ ಅರಗಿಸಿಕೊಳ್ಳಲಾರಂಭಿಸಿರುವ ನಗರೂರಿನ ವಿದ್ಯಾಮಾನಗಳು ನೆನಪುಗಳಾಗಿ ಕಾಡಲಾರಂಭಿಸಿದವು. ಶರಭ ಪರಶುರಾಮರೀರ್ವರು ಪ್ರವೇಶಿಸಿರಬಹುದಾದ ಕಾಲ್ಪನಿಕ ಗ್ರಾಮವನ್ನು ವಿನಾಕಾರಣ ಊಹಿಸಿಕೊಂಡೆ. ಪೋಲಿಸ್ ಅಲಿಯು ಕೊಲೆಗಾರನಿಲ್ಲದ ಊರಲ್ಲಿ ಕೊಲೆಗಾರನನ್ನು ಹುಡುಕುತ್ತಿರಬಹುದು. ಯಾಜ್ಞವಲ್ಕ್ಯ ಸ್ಮೃತಿಯನ್ನೂ ಒಂದು ಪಗಡೆಯಲ್ಲೂ ಇಲ್ಲೊಂದು ಪಗಡೆಯಲ್ಲಿ ಭಾರತೀಯ ಶಿಕ್ಷಾಸ್ಮೃತಿಯನ್ನೂ ಇರಿಸಿ ಬೇರೀಜು ಹಾಕುತ್ತಿರುವ ವಕೀಲ ಜೀವೋತ್ತಮರಾಯರನ್ನೂ, ಪ್ರೀತಿಸಿದ ತಪ್ಪಿಗೆ (ಪ್ರೀತಿಸಿರುವುದಾಗಿ ಹೇಳಿಕೊಂಡು ತಿರುಗಾಡುತ್ತಿರುವ ಶರಭ ಮಾನಸಿಕ ರೋಗಿಯಾಗಿದ್ದಲ್ಲಿ!) ಪ್ರಾಯಶ್ಚಿತ್ತ ಮಾಡಿಕೊಳ್ಳಲು ಆತ್ಮಹತ್ಯೆಗೆ ಸಂಬಂಧಿಸಿದ ತಾಲೀಮು ನಡೆಸಿರಬಹುದಾದ ಊಳೂರಿನ ವನಜಾಕ್ಷಿಯನ್ನೂ ಸಂಭವಿಸಲಿರುವ ಕನಸೊಳಗೆ ಆವಹಿಸಿಕೊಳ್ಳಲು ಪ್ರಯತ್ನಿಸಿದೆ.

ವೃಶ್ಚಿಕಕ್ಕೆ ಹೆದರಿದ ಮಾರ್ಜಾಲ ನಗಂದಿಯಿಂದ ನಗಂದಿಗೆ ಜಿಗಿದು ಸದ್ದು ಮಾಡಿದ್ದಕ್ಕೋ, ಪಡುವಣಕ್ಕೆ ಅದೇತಾನೆ ಪಥ ಬದಲಿಸಿದ್ದ ಸೂರ್ಯನ ನಿಶಿತ ಕಿರಣಗಳು ಗೋಡೆಗಂಟಿದ್ದ ಕನ್ನಡಿಗೆ ತಾಕಿ ಪ್ರತಿಫಲಿಸಿ ನನ್ನ ಮುಚ್ಚಿದ್ದ ಕಣ್ಣವಪೆಯ ಮೇಲೆ ದಾಳಿ ಮಾಡಿದ್ದಕ್ಕೋ ದಿಗ್ಗನೆ ಎಚ್ಚತ್ತು ನೋಡುತ್ತೇನೆ, ತನ್ನತ್ತ ಧೃತರಾಷ್ಟ್ರಾಲಿಂಗನದ ಸಲುವಾಗಿ ನನ್ನ ಕಡೆಗೆ ಮೋಹಕವಾಗಿ ಅಗೋಚರ ಕಬಂಧಭಾಹುಗಳನ್ನು ಚಾಚಿರುವ ಬೆಲ್ಜಿಯಂ ಕನ್ನಡಿ! ಎರಡು ತಿಂಗಳುಗಳ ಹಿಂದೆಯಷ್ಟೆ ಆದವಾನಿಯ ಏನುಗುಲ ವೆಂಕನ್ನನ ಅಂಗಡಿಯಿಂದ ಖರೀದಿಸಿ ತಂದಿದ್ದ ಹದಿನೆಂಟಿಂಚುದ್ದಗಲವಿರುವ ಕನ್ನಡಿ ಅದಾಗಿತ್ತು. ಎಂಟರಾಮಿರೆಡ್ಡಿ ಗೋಪಾಲರೆಡ್ಡಿ ರಾಮುಡುರೇ ಮೊದಲಾದ ಸೌಂದರ್ಯಾರಾಧಕರನ್ನು ಅತಿಥಿ ಅಭಾಗತರನ್ನು ತನ್ನತ್ತ ಸೂಜಿಗಲ್ಲಿನಂತೆ ಸೆಳೆಯುತ್ತಿತ್ತು. ಅವರು ತಮ್ಮ ತಮ್ಮ ಕ್ರಾಪುಗಳನ್ನು ಸರಿಪಡಿಸಿಕೊಳ್ಳಲು ಸಹಕರಿಸುತ್ತಿತ್ತು, ಅವರೆಲ್ಲರಲ್ಲಿ ಸೌಂದರ್ಯಪ್ರಜ್ಞೆಯನ್ನು ಉದ್ದೀಪನಗೊಳಿಸುತ್ತಿತ್ತು. ನೋಡಿಕೊಂಡವರ ಎದೆಯೊಳಗೆ ಜೀವನೋತ್ಸಾಹವನ್ನು ಪ್ರಸಾದಿಸುತ್ತಿದ್ದ ಕನ್ನಡಿ ಅದಾಗಿತ್ತು. ಎರಡುಮೂರು ಸಲ ಕೆಳಕ್ಕೆ ಬಿದ್ದರೂ ಒಡೆಯದೆ ಉಳಿದಿರುವ ಅಮಿತೋತ್ಸಾಹದ ಕನ್ನಡಿ ಅದಾಗಿತ್ತು, ನನ್ನೊಳಗೆ ನನ್ನನ್ನು ಕಂಡುಕೊಳ್ಳಲು ಅಹರ್ನಿಶಿ ಶ್ರಮಿಸುತ್ತಿದ್ದ ಕನ್ನಡಿ ಅದಾಗಿತ್ತು, ಅದನ್ನು ಖರೀದಿಸಿದ್ದು ಎರಡು ತಿಂಗಳುಗಳ ಹಿಂದೆ, ಅದೂ ಆದವಾನಿಯ ಏನುಗಲ ವೆಂಕನ್ನನ ಅಂಗಡಿಯಲ್ಲಿ.

ಗೋಚರಿಸಿದೊಡನೆ ಅರೆ ನನ್ನ ಕನ್ನಡಿ ಎಂದು ಉದ್ಗರಿಸುತ್ತ ಎಚ್ಚರಾದೆ. ಸನಿಹಕ್ಕೆ ಸಾಗಿ ಅದರಲ್ಲಿ ಇಣುಕಿ ಪ್ರತಿಬಿಂಬವನ್ನು ದರ್ಶಿಸುವ ಧೈರ್ಯ ನನ್ನಲ್ಲಿರಲಿಲ್ಲ. ಯಾಕೆ ಮಗನೇ ನನ್ನ ಸನಿಹಕ್ಕೆ ಬಾರದೆ ದೂರವಿರುವೆಯಲ್ಲ! ಹತ್ತಿರ ಬಂದು ನನ್ನೊಳಗೆ ನಿನ್ನನ್ನು ನೀನು ನೋಡಿಕೋ ಬಾ ಕಂದಾ ಎಂದು ಅಂತಃಕರಣದಿಂದ ಕರೆದಂತೆ ಭಾಸವಾಯಿತು. ಅರೆ ಹೌದಲ್ಲವೆ! ಅದರಲ್ಲಿ ನಾನು ನನ್ನನ್ನು ದರ್ಶಿಸಿಕೊಳ್ಳದೆ ಎಷ್ಟು ಶತಮಾನಗಳುರುಳಿರಬಹುದು! ವಶೀಕರಣಕ್ಕೊಳಗಾದವನಂತೆ ಮೆಲ್ಲಗೆ ಎದ್ದು ನಡೆದು ಹೋಗಿ ಇಣುಕಿದೆ, ಒಂದು ಕ್ಷಣ ಬೆಚ್ಚಿದೆ! ಅದರಲ್ಲಿ ಪ್ರತಿಫಲಿಸುತ್ತಿರುವುದು ನನ್ನ ಶವ ಸಮಾನ ಪ್ರತಿಬಿಂಬ. ಬೆಳೆದಿರುವ ಗಡ್ಡ ಸೌಂದರ್ಯಪ್ರಸಾದನ ವಂಚಿತ ಮುಖ ವರ್ತಮಾನದ ಪಲ್ಲಂಗದ ಮೇಲೆ ವಿರಾಜಮಾನಗೊಂಡಿರುವ ಭೂತಕಾಲ! ಕನ್ನಡಿಯ ನಸುನಕ್ಕು..

"ಹೋಗೋ ಹುಚ್ಚಪ್ಪ, ನೀನು ಕೂಡಲೆ ನಿನ್ನ ದೇಹದ ಮೇಲ್ಪ್ರಲಕ್ಷಣವನ್ನು ಅಮೂಲಾಗ್ರ ಬದಲಾಯಿಸಿಕೊಂಡು ಅಂತರಂಗದೊಳಗೆ ಪ್ರವೇಶ ಪಡೆ" ಎಂದು ಹೇಳಿದಂತೆ ಭಾಸವಾಯಿತು. ಸ್ಪರ್ಶದ ನೆರವಿನಿಂದ ದೈಹಿಕ ಅಸ್ತವ್ಯಸ್ತತೆ ಅರಿವಾಯಿತು. ತಿರುಪತಿಯಿಂದ ಮರಳಿದ ಬಳಿಕ ಮುಖಕ್ಷೌರ ಮಾಡುವುದಾಗಿ ಹೇಳಿದ್ದ ನಾದಿರ ಗೋವಿಂದ ವಾರದಿಂದ ಸುಳಿವಿಲ್ಲ, ಮೂಲೆಗುಂಪಾಗಿದ್ದ ಕ್ಷೌರದ ಪರಿಕರಗಳ ಪೈಕಿ ಕೆಲವುಗಳ ಕಾರ್ಯಕ್ಷಮತೆ ಕ್ಷೀಣಿಸಿತ್ತು, ಮುಖ್ಯವಾಗಿ ಭಾರತ್‌ಗೆ ಹಿಡಿದಿದ್ದ ತುಕ್ಕನ್ನು ತಿಕ್ಕಿ ಸರಿಪಡಿಸಿ ಕನ್ನಡಿ ಎದುರು ಮಟ್ಟಸ ರೀತಿಯಲ್ಲಿ ಕುಳಿತು ಮುಖಕ್ಷೌರ ಮುಗಿಸಿದೆ. ಅಡಿಯಿಂದ ಮುಡಿವರೆಗೆ ಸ್ನಾನ ಮಾಡಿದೆ, ಪ್ರಸಾದನಗಳನ್ನು ಲೇಪಿಸಿಕೊಂಡ ಬಳಿಕವೇ ಮುಖದಲ್ಲಿ ಗೆಲುವು ಕಾಣಿಸಿಕೊಂಡಿದ್ದು. ಚಾಕಲಿ ಭೋಜ ಇಸ್ತ್ರಿಸಿ ತಂದುಕೊಟ್ಟಿದ್ದ ವಸ್ತ್ರವಿಲಾಸವನ್ನು ಟ್ರಂಕಿನಿಂದ ಹೊರ ತೆಗೆದು ಧರಿಸಿದೆ, ಬಳಿಕ ಹೆಮ್ಮೆಯಿಂದ ಕನ್ನಡಿಯಲ್ಲಿಣುಕಿದೆ. ಪ್ರತಿಬಿಂಬವನ್ನು ದಿಟ್ಟಿಸಿದೆ, ನನ್ನದೇ ಪ್ರತಿರೂಪ ಅಲ್ಲಿರುವುದು, ಆ ಪ್ರತಿರೂಪವೇ ನನ್ನಲ್ಲಿರುವುದು, ನನ್ನ ಹಾಗೆಯೇ ಅದು ಅದರ ಹಾಗೆಯೇ ನಾನು. ದರ್ಪಣದೊಂದಿಗೆ ಮಾಡಿಕೊಂಡ ಒಪ್ಪಂದದಂತೆ ಅದರ ಸೌಂದರ್ಯ ಕಾಪಾಡುವುದಕ್ಕೆ ಪ್ರಥಮ ಆದ್ಯತೆ ನೀಡಬೇಕು, ಒಂದೇ ಸಾದೃಶ್ಯದ ಎರಡು ಮುಖಗಳು ನಾವಾಗಿರಬೇಕು. ಬಾಹ್ಯಸೌಂದರ್ಯಕ್ಕೆ ಆದ್ಯತೆ ನೀಡುವ ಕಾಪಾಡಿಕೊಳ್ಳುವ ಸಲುವಾಗಿ ಶರಭ, ಪರಶುರಾಮ, ಜಲಂಧರ, ಪದ್ಮ, ಲಕ್ಷ್ಮಿ, ಶೇಷಣ್ಣ ಮತ್ತಿತರೇ ವರ್ಗೈರೆಗಳನ್ನು ಅಂತರಂಗದಿಂದ ನಿಖಾಲೆ ಮಾಡಬೇಕು, ದೂರದ ಸಂವೇದಿ ಉಪಗ್ರಹದೋಪಾದಿಯಲ್ಲಿ ಕಾಡುತ್ತಿರುವ ತಂದೆ ಮತ್ತು ತಾನು ಪ್ರಯೋಗಿಸುತ್ತಲೇ ಇರುವ ಉಪದ್ರವಿ ಪತ್ರಗಳನ್ನು ಓದದೆ ಹರಿದೆಸೆಯಬೇಕು. ಇನ್ನು ನಾನಾಯಿತು ನನ್ನ ವೈಯಕ್ತಿಕ ಬದುಕಾಯಿತು. ಅಪೂರ್ಣಗೊಂಡಿರುವ ಕಾದಂಬರಿಯನ್ನು ಮುರಿದು ಪುನಃ ನಿರ್ಮಿಸಬೇಕೆಂದು ನಿರ್ಧರಿಸಿದೆ.

ಬರಹಗಾರನಾದ ನನ್ನ ಕರ್ಮವೋ! ನನ್ನಿಂದ ಬರೆಸಿಕೊಂಡ ಅದರ ಕರ್ಮವೋ! ಪೂರ್ವನಿರ್ಧಾರಿತ ಪಾತ್ರಗಳಿಂದಲೂ, ಸಂಭವಿಸಿದ ಘಟನಾವಳಿಗಳಿಂದಲೂ ಕಿಕ್ಕಿರಿದಿದ್ದ ಕಾದಂಬರಿಯ ಹಸ್ತಪ್ರತಿಯನ್ನು ಹರಿದು ಚಿಂದಿ ಮಾಡಿ ಅಗ್ನಿಗಾಹುತಿ ಕೊಡುವಾಗ ಮೂಡಿದ ಸಂಕಟ ಕಡಿಮೆ ಪ್ರಮಾಣದ್ದಾಗಿರಲಿಲ್ಲ. ಅದರೊಂದಿಗೆ ಶರಭನ ಪಳೆಯುಳಿಕೆಯಾದ ಚೂರಿಯನ್ನೂ ಹಸ್ತಪ್ರತಿಯೊಂದಿಗೆ ದಹಿಸುವುದು ಮಾತ್ರ ನನ್ನಿಂದ ಸಾಧ್ಯವಾಗಲೇ ಇಲ್ಲ. ಎಷ್ಟು ಕಾಲ ಅದು ನನ್ನ ಮನೆಯಲ್ಲಿರಬೇಕೆಂದು ಅದರ ಹಣೆ ಮೇಲೆ ಬರೆದಿರುವುದೋ! ನನ್ನ ಹಣೆಯ ಶಿಲಾಶಾಸನದಲ್ಲಿ ಕೆತ್ತಲಾಗಿರುವುದೋ ಅಷ್ಟು ಕಾಲ ಅದು ಮನೆಯ

ಅಜ್ಞಾತಸ್ಥಳದಲ್ಲಿ ಕೊಳೆಯುತ್ತಿರಲಿ ಎಂದುಕೊಂಡೆ. ಒಂದೆರಡು ತಿಂಗಳುಗಳೊಳಗೆ ಕಾದಂಬರಿಯನ್ನು ಪೂರ್ಣಗೊಳಿಸುವುದಕ್ಕೆ ಆದ್ಯತೆ ನೀಡುವುದು ಮುಖ್ಯ. ಹಾಗೆಯೇ ಅದನ್ನು ಯಾವುದಾದರೊಬ್ಬ ಪ್ರಕಾಶಕರ ತಲೆಗೆ ಕಟ್ಟುವುದು ಸಹ ಅಷ್ಟೇ ಮುಖ್ಯ. ಆ ಬಳಿಕ ಪಾಗಿಲಿಯಿಂದ ಯಾವುದಾದರೊಂದು ಸುಡುಗಾಡಿಗೆ ವರ್ಗ ಮಾಡಿಸಿಕೊಂಡರಾಯಿತು, ಆ ಕೆಲಸ ಮಾಡಿಕೊಡುವ ಸಲುವಾಗಿ ವಕೀಲ ಜೀವೋತ್ತಮರಾವ್ ತುದಿಗಾಲಲ್ಲಿ ನಿಂತಿರುವರು! ಅದಕ್ಕೆ ಸಂಬಂಧಿಸಿದ ಪರಿಭಾಷೆಯ ಕಲಿಕೆಯನ್ನು ಕಾದಂಬರಿಯ ಬರಹದೊಂದಿಗೇ ಆರಂಭಿಸುವುದು ಅಷ್ಟೇ ಮುಖ್ಯ!

ಪಗಾರದ ಮೂಗಿನಳತೆಗನುಸಾರವಾಗಿ ಕರ್ತವ್ಯ ನಿರ್ವಹಿಸುತ್ತ ಪಂಚೇಂದ್ರಿಯಗಳನ್ನು ಗಲಿಬಿಲಿಗೊಳಿಸಲಾರಂಭಿಸಿದ ಸಂಗತಿಗಳನ್ನೂ ಅನುಭವಗಳನ್ನೂ ಆಗಿಂದಾಗ್ಗೆ ವಿಸರ್ಜಿಸುತ್ತ, ಪ್ರತಿಯೊಂದಕ್ಕೂ ತಲೆಯನ್ನಲ್ಲಾಡಿಸುತ್ತ, ನೋಡಿಯೂ ನೋಡದವನಂತೆ ಕೇಳಿಯೂ ಕೇಳದವನಂತೆ ಮಾಡಿಯೂ ಮಾಡದವನಂತೆ ವರ್ತಿಸುವುದರ ಮೂಲಕ ಅವರಿವರನ್ನು ವಿಸ್ಮಯಗೊಳಿಸುತ್ತ, ಅಂದರಿಕಿ ಮಂಚಿವಾಡು ಎಂಬ ಬಿರುದನ್ನು ಅಡಿಗಡಿಗೆ ಅಲಂಕರಿಸುತ್ತ ದೊರಕಲಾರಂಭಿಸಿದ ಬಿಡುವಿನ ವೇಳೆಯಲ್ಲಿ ಹೊಸ ಕಾದಂಬರಿಯನ್ನು ಆರಂಭಿಸಿದೆ. ಅದೂ ಸುಮಾರು ಎರಡು ದಶಕಗಳ ಹಿಂದೆ ಬೆಂಗಳೂರಿನ ಸಿಂಫೋನಿಯಲ್ಲಿ ನೋಡಿದ್ದ ಇಂಗ್ಲೀಷ್ ಇಷರ್ ಸಿನೆಮಾ ಕಥೆಯ ಎಳೆಯನ್ನು ಆಧರಿಸಿ. ಇಮ್ಯಾಜಿನೇಷನ್ ಈಜ್ ಸ್ಟ್ರಾಂಗರ್ ದ್ಯಾನ್ ನಾಲೆಡ್ಜ್! ಯಾವ ಪುಣ್ಯಾತ್ಮ ಹೇಳಿರಬಹುದೀ ಮಾತನ್ನು!

ಇಮ್ಯಾಜಿನೇಷನ್ನೆಂಬುದು ನನ್ನ ಜೆನೆಟಿಕಲ್ ಪ್ರಾಬ್ಲೆಂ. ಅಷ್ಟೇ ಅಲ್ಲದೆ ನಮ್ಮ ವಂಶವಾಹಿನಿಯ ಮೂಲ ಬಂಡವಾಳ ಸಹ. ಈ ವಿಷಯದಲ್ಲಿ ನಮ್ಮ ತಂದೆ ನಿಸ್ಸೀಮ, ಆತ ಪುಂಖಾನುಪುಂಖವಾಗಿ ಹೇಳುತ್ತಿದ್ದ ಘಟನಾವಳಿಗಳಲ್ಲಿ ಸತ್ಯ ಒಂದು ಪೈಸೆಯದ್ದಿದ್ದರೆ ಕಲ್ಪನೆ ಸುಳ್ಳು ತೊಂಬತ್ತೊಂಬತ್ತು ಪೈಸೆಯಷ್ಟಿರುತ್ತಿತ್ತಲ್ಲವೆ! ಕೇಳುಗರನ್ನು ಮಂತ್ರಮುಗ್ಧರನ್ನಾಗಿಸುತ್ತಿದ್ದ ಅಪರೂಪದ ನಿರೂಪಣಾ ಶಕ್ತಿಯಿಂದಾಗಿಯೇ ತನ್ನೊಳಗೆ ಅಹಂಕಾರಕ್ಕೆ ರಹದಾರಿ ಕರುಣಿಸಿರುವಂಥವನು ನನ್ನ ಅಪ್ಪ! ತನ್ನೊಳಗಿನ ಅಹಂಕಾರದ ದಾಹವನ್ನು ತಣಿಸುವ ಸಲುವಾಗಿ ವಿರೋಧಿಗಳನ್ನು ಸೃಷ್ಟಿಸಿಕೊಂಡಂಥವನು ನನ್ನ ಅಪ್ಪ! ಸೃಷ್ಟಿಸಿಕೊಂಡ ಶತ್ರುಗಳನ್ನು ಶಾಶ್ವತವಾಗಿ ಮುಗಿಸುವ ಸಲುವಾಗಿಯೇ ಸ್ಥಿರಚರ ಆಸ್ತಿಯನ್ನು ಕಳೆದುಕೊಂಡಂಥವನು ನನ್ನ ಅಪ್ಪ! ಹಡೆದ ಮರುಗಳಿಗೆಯಲ್ಲಿಯೇ ತನ್ನ ಹಸಿವು ತೀರಿಸಿಕೊಳ್ಳುವ ಸಲುವಾಗಿ ತನ್ನ ಮರಿಯನ್ನು ತಾನೇ ತಿನ್ನುವ ಮಾರ್ಜಾಲದೋಪಾದಿಯಲ್ಲಿ ನನ್ನನ್ನು ಅಹರ್ನಿಶಿ ಬೇಟೆಯಾಡುತ್ತಲೇ ಇರುವ ನನ್ನ ಅಪ್ಪ! ಸ್ಥಿರಚರಾಸ್ತಿ ಇರದಿದ್ದರೂ ಜಮೀನ್ದಾರಿಕೆ ಗತ್ತನ್ನು ಅಡಿಗಡಿಗೆ ಪಲ್ಲವಿಸುತ್ತಲೇ ಇರುವ ನನ್ನ ಅಪ್ಪ! ತಾನಿರುವಲ್ಲಿಂದಲೇ ಸಚರಾಚರದ ನಡಾವಳಿಯನ್ನು ನಿಯಂತ್ರಿಸುತ್ತಿರುವ ರಿಮೋಟ್ ಕಂಟ್ರೋಲಿನಂತಿರುವ ನನ್ನ ಅಪ್ಪ! ನನ್ನ ಬದುಕಿನ ಕಥಾನಕದಲ್ಲಿ ಆತನೇ ಪ್ರತಿನಾಯಕನ ಸ್ಥಾನ ಪಡೆದ ಮೇಲೆ ಪ್ರಥಮಪುರುಷದಲ್ಲಿರುವ ನಾನು ಕಥಾನಾಯಕನ ಪಾತ್ರ ಆವಹಿಸಿಕೊಳ್ಳುವುದರಲ್ಲಿ ತಪ್ಪೇನಿದೆ! ಕೌಟುಂಬಿಕ ರೀತಿ ರಿವಾಜುಗಳನ್ನೂ ಹುಸಿನಾಗರಿಕ ಸಮಾಜದ ನೀತಿ ಸಂಹಿತೆಯನ್ನೂ ಉಲ್ಲಂಘಿಸುವುದರಲ್ಲಿ ತಪ್ಪೇನಿದೆ! ಮೊದಲೇ ನಾನು ಪಾತ್ರಗಳೊಂದಿಗೆ ನೈಜ ಘಟನೆಗಳೊಂದಿಗೆ ಚೆಲ್ಲಾಟವಾಡುತ್ತಿರುವ ಸೃಜನಶೀಲ ಲೇಖಕನಲ್ಲವೆ! ಇಷ್ಟು ಯೋಚಿಸಿದ್ದೇ ತಡ ಕಾದಂಬರಿ ಹೊಸ ತಿರುವು ಪಡೆಯಲಾರಂಭಿಸಿತು, ಅದೆಂದರೆ..

ಆಂಧ್ರದ ರಾಯಲಸೀಮೆಯಲ್ಲಿರುವ ಸೌಲಭ್ಯವಂಚಿತ ಕುಗ್ರಾಮ, ಅಲ್ಲೊಬ್ಬ ಜಮೀನ್ದಾರ, ಹೆಸರು ನರಸಿಂಹನಾಯ್ಡು, ತಾನು ಶತ್ರುಗಳನ್ನು ಸೃಷ್ಟಿಸಿಕೊಳ್ಳುವುದರಲ್ಲಿ, ಅವರನ್ನೆಲ್ಲ ಕಲಾತ್ಮಕವಾಗಿ ನಿರ್ನಾಮಗೊಳಿಸುವುದರಲ್ಲಿ ಪರಿಣಿತ. ಸಾಹಿತ್ಯಿಕ ಮಾರ್ಗಪರಂಪರೆಯನ್ನು ಅರಗಿಸಿಕೊಂಡಿರುವವನು. ತನ್ನ ಇದ್ದೊಬ್ಬ ಸುಶಿಕ್ಷಿತ ಮಗನನ್ನು ಆಯುಧವನ್ನಾಗಿ ಪರಿವರ್ತಿಸಲು ಸಾಹಿತ್ಯದ ತಿಳವಳಿಕೆಯ ನೆರವನ್ನು ಪಡೆಯುತ್ತಾನೆ. ನಿಧಾನವಾಗಿ ಅದರಲ್ಲಿ ತಾನು ಯಶಸ್ವಿಯಾಗುತ್ತಾನೆ. ಕರುಳಿಗೆ ಆಯುಧದ ಪರಿವೇಷ ತೊಡಿಸಿ ಅದನ್ನು ತನ್ನ ಶತ್ರುಗಳ ವಿರುದ್ಧ ಪ್ರಯೋಗಿಸುತ್ತಾನೆ! ನನ್ನ ಸೃಜನಾತ್ಮಕ ಕಲ್ಪನೆಗೆ ನಾನೇ ಬೆರಗಾಗುತ್ತ ಯೋಚಿಸತೊಡಗಿದೆ. ರುಗ್ಣಶಯ್ಯೆಯಲ್ಲಿರುವ ನಾಯ್ಡು ತನ್ನ ಮಗನನ್ನು ಬರಮಾಡಿಕೊಳ್ಳುವುದರ ಮೂಲಕ ಕಥೆ ಆರಂಭಗೊಳ್ಳುವುದು. ವೇದಾಂತಾವಧೂತ ಜ್ಞಾನದ ಪರಿಭಾಷೆಯ ಸಹಾಯದಿಂದ, ಪೌರಾಣಿಕ ಪಾತ್ರಗಳ ನೆರವಿನಿಂದ, ಒಳ್ಳೆಯವರು ಕೆಟ್ಟವರಾಗುವ, ಕೆಟ್ಟವರು ಒಳ್ಳೆಯವರಾಗುವ ಸಶಕ್ತ ಘಟನಾವಳಿಗಳನ್ನು ಆಕರ್ಷಕ ರೀತಿಯಲ್ಲಿ ಹೇಳುವುದರ ಮೂಲಕ ತನ್ನ ಮಗನೊಳಗಿನ ನಾಗರೀಕತೆಯನ್ನೂ ಸಜ್ಜನಿಕೆಯನ್ನೂ ಭೂತದಯೆಯನ್ನೂ ಒಂದೊಂದಾಗಿ ಕಳಚುವ ಪ್ರಯತ್ನ ಮಾಡುತ್ತಾನೆ! ಪ್ರತಿರೋಧ ಒಡ್ಡುತ್ತಲೇ ಮಗ ಅನುಕಂಪದ ಗಾಳಕ್ಕೆ ಇನ್ನೇನು ಸಿಕ್ಕಿದ ಎನ್ನುವಷ್ಟರಲ್ಲಿ! ಓಹೋ ರೋಮಾಂಚಕಾರಿ ಕಾದಂಬರಿಯೇ ಎಂದು ನನ್ನಷ್ಟಕ್ಕೆ ನಾನೆ ಉದ್ಗರಿಸಿಕೊಳ್ಳಬೇಕೆನ್ನುವಷ್ಟರಲ್ಲಿ! ಕೆಮ್ಮುವುದರ ಮೂಲಕ ಗಮನ ಸೆಳೆದ ವ್ಯಕ್ತಿ ಯಾರಿರಬಹುದೆಂದು ಕತ್ತೊರಳಿಸಿ ನೋಡುತ್ತೇನೆ, ಅರೆ!

ತನ್ನ ಗಂಟಲನ್ನು ಸರಿಪಡಿಸಿಕೊಳ್ಳುತ್ತಲೋ ಔಪಚಾರಿಕವಾಗಿ ನಮಸ್ಕರಿಸುತ್ತಲೂ ಒಳಗಡೆ ಹೆಜ್ಜೆ ಇರಿಸುತ್ತ ಬಂದ ವ್ಯಕ್ತಿ ಅಕ್ಷರಶಃ ಜಲಂಧರನೇ ಆಗಿದ್ದ, ನೀಟಾಗಿ ಡ್ರೆಸ್ ಮಾಡಿಕೊಂಡಿದ್ದ, ನನ್ನೆದುರಿಗಿದ್ದ ಸ್ಟೂಲ್ ಮೇಲೆ ಕುಳಿತು ವಿನಯಪೂರ್ವಕವಾಗಿ ಮುದುಡಿದ.

ಉಭಯಕುಶಲೋಪರಿಯಾದ ಬಳಿಕ ತನ್ನೆರಡೂ ಕೈಗಳಿಂದ ಕರಪತ್ರ ಚಾಚುತ್ತ "ದಿನಗಳನ್ನು ಕಳೆಯುವುದು ಕಷ್ಟ ಆಗುತ್ತಿದೆ ಸಾರ್, ಕಲಾವಿದರು ಉಪವಾಸವಿರುವುದನ್ನು ನೋಡಲಿಕ್ಕೆ ಆಗುತ್ತಿಲ್ಲ, ಈ ಊರಲ್ಲಿ ನಮ್ಮ ಅದೃಷ್ಟವನ್ನು ಪಣಕ್ಕಿಡುವುದೆಂದು ತೀರ್ಮಾನಿಸಿರುವೆ, ಆರಂಭಕ್ಕೆ ಕಿತ್ತೂರು ಚೆನ್ನಮ್ಮ ನಾಟಕವನ್ನು ಆಯ್ಕೆ ಮಾಡಿರುವೆವು, ನಾಡಿದ್ದು ಪ್ರದರ್ಶನ, ಕೊಕ್ಕಣ್ಣ ಬುಕ್ಕಣ್ಣ ತೊಂದರೆ ಕೊಡಬಹುದು, ಅವರಿಗೆ ನೀವೆ ಬುದ್ಧಿವಾದ ಹೇಳಬೇಕು. ಬಳ್ಳಾರಿಗೆ ಹೋಗಿ ಹೆಬ್ಬಟಂ ಸಾಹುಕಾರರನ್ನು ಒಪ್ಪಿಸಿ ಬಂದಿರುವೆ, ಅವರ ಸಂಗಡ ನೀವೂ ಇರಬೇಕು. ಸಾಹಿತಿಗಳಾದ ನೀವು ನಾಟಕವನ್ನು ಉದ್ಘಾಟಿಸಿ ಪ್ರೇಕ್ಷಕರ ಕರುಳು ಕರಗುವ ರೀತಿಯಲ್ಲಿ ಭಾಷಣ ಮಾಡಬೇಕು ಸಾರ್" ಎಂದು ವ್ಯಾಕರಣ ಶುದ್ಧವಾಗಿ ವಿನಂತಿಸಿಕೊಂಡ. ಶೇಷಣ್ಣನ ಗೈರುಹಾಜರಿ ಕಾಡಿತು, ಅವನ ಸಲುವಾಗಿ ಬಾಗಿಲ ಕಡೆ ದೃಷ್ಟಿ ಹಾಯಿಸಿದೆ, ಬಳಿಕ ಕರಪತ್ರ ನೋಡಿದೆ, ಅದು ಬಹುವರ್ಣದಾಗಿತ್ತು, ಮುಖ್ಯಅತಿಥಿಗಳ ಪೈಕಿ ಹೆಬ್ಬಟಂ ಸೀತಾರಾಮರೆಡ್ಡಿಯವರ ಹೆಸರು ಗಾತ್ರದಲ್ಲಿ ದೊಡ್ಡದಿತ್ತು. ತಿಪ್ಪಾರೆಡ್ಡಿ ಹೆಸರಿನ ಕೆಳಗೆ ಚಿಕ್ಕಗಾತ್ರದಲ್ಲಿ ನನ್ನ ಹೆಸರು ಪೂರ್ಣಪ್ರಮಾಣದಲ್ಲಿ ಮುದ್ರಿಸಲ್ಪಟ್ಟಿತ್ತು. ಯಾವುದನ್ನು ಕೆಲವು ವರ್ಷಗಳಿಂದ ಮರೆ ಮಾಚಿದ್ದೆನೋ, ಯಾವುದರಿಂದ ಕೀಳರಿಮೆಯಿಂದ ಬಳಲುತ್ತಿದ್ದೆನೋ ಆ ಜಾತಿ ಸೂಚಕ ಪದ ಹೆಸರಿನ ಪೂರ್ವಾರ್ಧದಲ್ಲಿ ಸ್ಪಷ್ಟವಾಗಿ ನಮೂದಿಸಲ್ಪಟ್ಟಿತ್ತು. ಎಲ್ಲಿ ಪತ್ತೆ ಹಚ್ಚಿರುವನೋ ನನ್ನ ಪೂರ್ವಾಪರವನ್ನೆಲ್ಲ! ಬಳಿಕ ತಲೆ ಎತ್ತಿ ನೋಡಿದೆ, ಆ ಕ್ಷಣ ಜಲಂಧರ್ ಕ್ಷತ್ರಿಯ ವರ್ಣದ ಸಿಂಗನಾಗಿ ಘರ್ಜನೆಯನ್ನು ಕಂಠದಲ್ಲಿರಿಸಿಕೊಂಡಿರುವಂತೆ, ಭೀಭತ್ಸಕರ

ರೀತಿಯಲ್ಲಿ ನನ್ನ ಕಡೆ ನೋಡುತ್ತಿರುವಂತೆ ಭಾಸವಾಯಿತು. ಪುನಃ ತಾನು ವಿನೀತಭಾವದಿಂದ ಹೇಳಿದ.

"ತಿಪ್ಪಾರೆಡ್ಡಿ ಒತ್ತಾಯ ಮಾಡಿದ್ದರಿಂದಾಗಿಯೇ ನಿಮ್ಮ ಹೆಸರಿನ ಮುಂದೆ ನಿಮ್ಮ ಜಾತಿ ಹಾಕುವಾಗ ಮನಸ್ಸಿಗೆ ನೋವಾಯಿತು ಸಾರ್! ನಾಟಕವನ್ನು ಆಡಲು ಸ್ಥಳದಾನ ಮಾಡಿದ ಧಣಿಗಳ ಮಾತನ್ನು ತೆಗೆದು ಹಾಕುವ ಧೈರ್ಯ ಬರಲಿಲ್ಲ. ಹೀಗೆ ಹಾಕಿರುವುದಕ್ಕೆ ದಯವಿಟ್ಟು ಬೇಸರ ಮಾಡಿಕೊಳ್ಳಬೇಡಿ ಕ್ಷಮಿಸಿ ಸಾರ್!" ಪ್ರಾಯಶ್ಚಿತ್ತದ ಮಾತುಗಳನ್ನು ಸೌಜನ್ಯಪೂರ್ವಕವಾಗಿಯೇ ಹೇಳಿಕೊಂಡನು. ಅದಕ್ಕೆ ನೋವಾದರೂ ನಸುನಕ್ಕು ಪ್ರೀತಿಯಿಂದ ಅವನ ಕಡೆ ನೋಡಿದೆ, ಅದರಿಂದ ಸಮಾಧಾನಗೊಂಡವನಂತೆ ಪುನಃ ಹೇಳಿದ.

"ದೇವರ ದಯೆ, ನೀವು ಕ್ಷಮಿಸಿದರಲ್ಲ, ಅಷ್ಟೆ ಸಾಕು. ಸಾರ್ ನಾಟಕದಲ್ಲಿ ಮಲ್ಲಸರ್ಜನ ಪಾತ್ರ ನನ್ನದು, ನನ್ನ ತಂಗಿ ಪದ್ಮಳದ್ದು ಚೆನ್ನಮ್ಮನ ಪಾತ್ರ. ಹುಬ್ಬಳ್ಳಿ ಬಾದಾಮಿ ಬಾಗಲಕೋಟೆ ಕಡೆಯಲೆಲ್ಲ ಈ ನಮ್ಮ ನಾಟಕ ತುಂಬಾ ಜನಪ್ರಿಯವಾಗಿದೆ, ಶತದಿನೋತ್ಸವ ಆಚರಿಸಿಕೊಂಡಿದೆ, ಅದೆಲ್ಲ ಆ ಕಾಲದ ಮಾತು. ಇರಲಿ. ಮಹಾನ್ ಕಥೆಗಾರರಾದ ನಿಮಗೆ ಹೇಳುವುದೇನಿದೆ! ಇತಿಹಾಸವನ್ನೂ, ವರ್ತಮಾನವನ್ನೂ ಅರ್ಥ ಮಾಡಿಕೊಳ್ಳಬಲ್ಲಿರಿ, ಅನುಕಂಪವನ್ನು ನಗದಾಗಿ ಪರಿವರ್ತಿಸುವಂಥ ಮಾಂತ್ರಿಕರು ನೀವು. ನೀವು ನಿಮ್ಮ ಭಾಷಣದೊಳಗೆ ಕಿತ್ತೂರಿನ ಇತಿಹಾಸವನ್ನೂ ಕಂಪನಿ ನಾಟಕಗಳಿಗೆ ಒದಗಿರುವ ದುಸ್ಥಿತಿಯನ್ನೂ ವಿವರಿಸುವುದನ್ನು ಮರೆಯಬೇಡಿ ಸಾರ್, ಜನ ಟಿಕೆಟ್ ತಗೊಂಡು ಬರಬೇಕು, ಹಾಗೆ ಭಾಷಣ ಮಾಡಬೇಕು ನೀವು ಹಾಲಲ್ಲಾದರೂ ಹಾಕಿ ನೀರಲ್ಲಾದರೂ ಹಾಕಿ" ಎಂದು ಅಂಜಲೀಬದ್ಧನಾಗಿ ನಿರ್ದೇಶನ ನೀಡಿದ.

ತನ್ನ ಮಾತುಗಳೆಂಬ ಪ್ರಸಾದನವನ್ನು ನನ್ನ ಮುಖಕ್ಕೆ ಲೇಪಿಸಿ ಸೌಂದರ್ಯಪ್ರಜ್ಞೆಯನ್ನು ಜಾಗೃತಗೊಳಿಸಿದ, ಹೊಗಳುವ ಉಭಯ ಸಂಕಟಕ್ಕೆ ಸಿಲುಕಿಸಿದ, ಉಗುಳು ನುಂಗುವಂತೆ ಮಾಡಿದ, ನನ್ನ ಹೆಸರಿನ ಉಪಾದಿಯನ್ನು ಜಗಜ್ಜಾಹಿರುಗೊಳ್ಳುವಂತೆ ಮಾಡಿದ, ತೇಲದ ಹಾಗೆ ಮುಳುಗದ ಹಾಗೆ ಎಚ್ಚರ ವಹಿಸಿದ ಮಹಾನುಭಾವ.

ಅವನನ್ನೇ ನೋಡುತ್ತ ಅವನಿಗೆ ಕೇಳಿಸದ ಹಾಗೆ ನಿಟ್ಟುಸಿರುಬಿಡುತ್ತ ನತದೃಷ್ಟ ಕಿತ್ತೂರು ಸಂಸ್ಥಾನದ ಇತಿಹಾಸವನ್ನು ನೆನಪಿಸಿಕೊಳ್ಳುತ್ತ ಗೌರವಪೂರ್ವಕವಾಗಿ ಕರಪತ್ರವನ್ನು ನೀಟಾಗಿ ಮಡಚಿ ಕಾದಂಬರಿಯ ಹಸ್ತಪ್ರತಿಯ ಎರಡನೇ ಅಧ್ಯಾಯದಲ್ಲಿರಿಸಿದೆ, ಒಪ್ಪಿಗೆ ಸೂಚಿಸಿದೆ. ಬಳಿಕ ತಾನಲ್ಲಿಂದ..

..... ಆ .....

# ದೃಶ್ಯ: ಮೂರು

ಓಹ್ ನನ್ನ ಪ್ರೀತಿಯ ವಾತ್ಸಲ್ಯಮಯಿ ಪೂತನಿಯಂಥ ವಾಗಿಲಿಯೇ! ವಾಗಿಲಿಯಲ್ಲಿನ ಪ್ರತಿಯೊಂದು ಮನೆಯೂ ನಾಟಕರಂಗವೆ, ಪ್ರತಿಯೊಬ್ಬರೂ ಮನೆಯಲ್ಲೂ ಕಲಾವಿದರೆ! ಒಬ್ಬೊಬ್ಬರು ಒಂದಲ್ಲಾ ಒಂದು ಕಲೆಯಲ್ಲಿ ಪರಿಣಿತರೆ. ಪಟ್ಟಿ ಮಾಡುತ್ತ ಹೋದಲ್ಲಿ ಹೆರಿಗೆ ಮಾಡಿಸಿಕೊಳ್ಳುವ ಬಸುರಿಯರು, ಅವರಿಗೆ ಹೆರಿಗೆ ಮಾಡಿಸುವ ಸೂಲಗಿತ್ತಿಯರು, ಅದೇ ಮೊದಲ ಸಲಕ್ಕೆ ತಾನು ಹೆತ್ತ ಕೂಸನ್ನು ಬಿಡುಗಣ್ಣಿನಿಂದ ನೋಡುವ ಹಸಿಹಸಿ ಬಾಣಂತಿಯರು, ಕೊನೆಯುಸಿರೆಳೆಯುವ ಮರಣೋನ್ಮುಖರು, ತಮ್ಮ ಮನೆಯ ಆಳುಗಳನ್ನು ಕೆಲಸಕ್ಕೆ ಅಹ್ವಾನಿಸುವ ಗೌಡರು, ಬಹಿರ್ದೆಸೆಗೆ ಹೊರಡುವ ಅವಸರದಲ್ಲಿರುವವರು, ಊಟಕ್ಕೆ ಬಡಿಸೆಂದು ಕೇಳುವ ಹಸಿದವರು, ತಮ್ಮ ಗಂಡಂದಿರಿಂದ ಹಲ್ಲೆಗೀಡಾಗುವ ಅವರವರ ಹೆಂಡಂದಿರು, ತಮ್ಮ ತಮ್ಮ ಗಂಡಂದಿರನ್ನು ಶಪಿಸುವ ಅವರವರ ಹೆಂಡಂದಿರು, ಗದ್ಯವನ್ನು ಪದ್ಯದೋಪಾದಿಯಲ್ಲಿ ಓದುವವರು, ಪದ್ಯವನ್ನು ಗದ್ಯದೋಪಾದಿಯಲ್ಲಿ ವಾಚಿಸುವವರು, ಸತ್ತವರನ್ನು ನೆನಪಿಸಿಕೊಳ್ಳುವವರು ಹೀಗೆ ಎಲ್ಲರೂ ಸಾಭಿನಯಪೂರ್ವಕವಾಗಿ ಅದೂ ಹಾಡುತ್ತಲೇ! ಅಷ್ಟೇ ಏಕೆ ನಿಂಗವ್ವ ಸವಾರೆಕ್ಕ ಓಬುಳವ್ವ ಚಂದ್ರವ್ವರಂಥ ಸಹಸ್ರ ದರ್ಶನ ಮಾಡಿರುವವರು, ಕತ್ತಲ ಠೊಣ್ಣೆ ಮಲ್ಲಯ್ಯ ಚೌಡವ್ವ ಸುಂಕಲವ್ವರಂಥ ಶತಾಯುಷಿಗಳು, ಸತ್ತವರಿಗೆ ಶ್ರದ್ಧಾಂಜಲಿಯನ್ನು ಸುಶ್ರಾವ್ಯ ರೀತಿಯಲ್ಲಿ ಅರ್ಪಿಸುವಂಥ ಚಾಗ ಭೋಜ ಗಾದೆಯ್ಯ ಎಲ್ಲವ್ವ ಪಕ್ಕೀರವ್ವರಂಥವರೆಲ್ಲ ಅಭಿಜಾತ ಕಲಾವಿದರೆ! ನಡಾವಳಿ ನಾಟಕೀಯ, ಮಾತುಗಳೆಲ್ಲ ನಾಟಕೀಯ. ನಿದ್ದೆ ಗೊರಕೆ ಕನವರಿಕೆ ಎಚ್ಚರಗಳೆಲ್ಲವೂ ನಾಟಕೀಯ! ಈ ಮಾನವ ಲೋಕದ ದ್ವಿಪಾದಿಗಳೊಂದೇ ಅಲ್ಲದೆ ವಾಗಿಲಿಯಲ್ಲಿನ ಚತುಷ್ಪಾದಿಗಳಲ್ಲೂ ಖಗಚರಗಳಲ್ಲೂ ಪ್ರತಿಭೆಗೆ ಕೊರತೆ ಇರಲಿಲ್ಲ. ಕೋಳಿಗಳ ಕೂಗಿನಲ್ಲೂ, ನಾಯಿಗಳ ಬೊಗಳುವಿಕೆಯಲ್ಲೂ ಗಾರ್ದಭಗಳ ಅರಚಾಟಗಳಲ್ಲೂ ಕಾಗೆ ಗುಬ್ಬಿ ಗೂಬೆಗಳ ಚಿವ್ ಚಿವ್ ಅರಚಾಟಗಳಲ್ಲೂ ರಾಸುಗಳ ಬೇಕುಬೇಡಗಳಲ್ಲೂ ರಂಗ ಸಂಗೀತದ ಸಂವೇದನೆ ಉಂಟು.

ವಾಗಿಲಿಯಲ್ಲಿ ಹೆಜ್ಜೆಹೆಜ್ಜೆಗೆ ಸಂಭವಿಸುತ್ತಿದ್ದ ಜಗಳಗಳೂ ಯಾವುದೇ ಗಾತ್ರಕಛೇರಿಗೆ ಕಡಿಮೆ ಇಲ್ಲ. ಒಟ್ಟಾರೆ ಹೇಳುವುದಾದರೆ ಸಂಗೀತ ಅಭಿನಯ ವಾಗಿಲಿಯ ಅವಿಭಾಜ್ಯ ಅಂಗವೇ ಸರಿ. ಅಂಥಾದ್ದರಲ್ಲಿ ತಮ್ಮೂರೊಳಗೆ ಅನಾಮಧೇಯ ಕಂಪನಿಯವರು ಅನಾಮಧೇಯ ನಾಟಕವನ್ನು ಅಭಿನಯಿಸಲಿರುವರೆಂದರೆ ಊರವರು ಸುಮ್ಮನಿದ್ದಾರೆಯೆ! ಎಲ್ಲಂದರಲ್ಲಿ ಸಂಭ್ರಮ ಕಾಣಿಸಿಕೊಂಡಿತು. ಯಾರ ನಡೆಯಲ್ಲಿ ಇಣುಕಿದರೂ ಅಭಿನಯ, ಯಾರ ನುಡಿಯಲ್ಲಿಣುಕಿದರೂ ಸಂಗೀತ! ರಕ್ತಗತವೋ ಎಂಬಂತೆ ನನ್ನೊಳಗೂ ಅದೇ ಸ್ಥಿತಿ. ಹೇಳಿಕೇಳಿ ನಾನೋ! ಹೌದು ನನ್ನ ತಂದೆಯೂ ಸಹ ಅಭಿಜಾತ ಕಲಾವಿದನೆ! ನಾಟಕಗಳನ್ನು ಆಡುವ ಸಲುವಾಗಿ ನಾಟಕಗಳಲ್ಲಿ ಪಾತ್ರವಹಿಸುವ ಸಲುವಾಗಿ ನಾಟಕಗಳಲ್ಲಿ ಅಭಿನಯಿಸುವ ಸುಂದರಿಯರನ್ನು ತನ್ನ ಹಾಸಿಗೆಗೆ ಆಮಂತ್ರಿಸುವ ಸಲುವಾಗಿ ಕಲಾವಿದ ಕಲಾವಿದೆಯರ ಬೇಕುಬೇಡುಗಳನ್ನು ಪೂರೈಸುವ ಸಲುವಾಗಿ ಅವರವರ ಮಕ್ಕಳಿಗೆ ವಿವಾಹವೆಂಬ ಗತಿ ಕಾಣಿಸುವ ಸಲುವಾಗಿ ಮಾಜಿ ಪ್ರೇಯಸಿಯರಿಗೆ ಶ್ರಾದ್ಧ ಮಾಡುವ ಸಲುವಾಗಿ ಪಿತ್ರಾರ್ಜಿತ ಸ್ವಯಾರ್ಜಿತ ಆಸ್ತಿಯನ್ನು ಧಾರಾಳವಾಗಿ ಖರ್ಚು ಮಾಡಿದ ತಂದೆಯ ಮಗ ನಾನು! ನಾನೂ ನನ್ನ ನಡೆನುಡಿಯಲ್ಲಿ, ಬರಹಗಳಿತ್ಯಾದಿಗಳಲ್ಲಿ ನಾಟಕೀಯ ಅಂಶಗಳನ್ನು ಅಭಿವ್ಯಕ್ತಿಸುತ್ತಿರುವವನು, ಅದೂ ನನಗರಿವಿಲ್ಲದಂತೆ. ಪ್ರೋತ್ಸಾಹಿಸುವುದರಲ್ಲಿ ನಾಟಕೀಯ ಹಾಗೂ ಜಮೀನ್ದಾರಿ ಅಂಶಗಳನ್ನು ಮೇಳೈಸಿಕೊಂಡೆ! ನಾನು ಸುಮ್ಮನಿದ್ದರೂ ನನ್ನೊಳಗಿನ ಅಪ್ಪ ಸುಮ್ಮನಿದ್ದರೆ ತಾನೆ! ಆತ ನನ್ನೊಳಗೆ ಅಭಿನಯಪಟುವನ್ನು ಗುರುತಿಸುತ್ತಲೇ ಬೆಳೆಸಿದ, ನಾಟಕಗಳನ್ನು ಆಡುವಂತೆ ಹುರಿದುಂಬಿಸುತ್ತಿದ್ದ, ಬಾಲಪಾತ್ರಗಳಿಗೆ ಬಣ್ಣ ಹಚ್ಚಿಸುತ್ತಿದ್ದ, ನಾಟಕದ ಮಾತುಗಳನ್ನು ಅದೂ ಮಹಾಪ್ರಾಣ ಅಲ್ಪಪ್ರಾಣಕ್ಕೆ ಚ್ಯುತಿ ಬಾರದ ಹಾಗೆ ಉಚ್ಚರಿಸಲು ವಿಫಲವಾಗುತ್ತಿದ್ದ ನನ್ನ ಕೆನ್ನೆ ಛಳೀರೆಂದು ಭಾರಿಸುತ್ತಿದ್ದ. ತಾನೂ ಕುಣಿಯುತ್ತಿದ್ದ, ನನಗೂ ಕುಣಿಯಲು ಆಜ್ಞಾಪಿಸುತ್ತಿದ್ದ, ಅಭಿನಯಿಸುವುದು ಬದುಕಿನ ಅಂಗವಾಗಿರಬೇಕೆಂದು ಅಧಿಕಾರವತ್ತಾಗಿ ಹೇಳುತ್ತಿದ್ದ. ಅದನ್ನು ಕಲಿಯದಿದ್ದರೂ ಅದು ನನ್ನೊಳಗೆ ನನ್ನ ಬರಹಗಳೊಳಗೆ ಕಪೋಲಕಲ್ಪಿತ ಮಾತುಗಳೊಳಗೆ ತನ್ನ ಅಸ್ತಿತ್ವ ಕಂಡುಕೊಂಡಿತ್ತು, ಇಲ್ಲದ ತೊಂದರೆಗಳನ್ನು ಮೈಮೇಲೆ ಎಳೆದುಕೊಳ್ಳುವಂತೆ ಮಾಡುತ್ತಲೇ ಇತ್ತು. ಅದರ ಪರಿಣಾಮವಾಗಿಯೇ ಆ ಶರಭ ಈ ಪರಶುರಾಮ ಈ ಜಲಂಧರ ವಗೈರೆಗಳು. ಹ್ಹಾಂ! ಅಂದ ಹಾಗೆ!

ಗ್ರಾಮದ ಕೆಲ ಹಿರಿಯರು ಜಲಂಧರನನ್ನು ಬರಮಾಡಿಕೊಂಡು ಏನಯ್ಯಾ ನಿನ್ನ ಕಂಪನಿ ನಮ್ಮ ರೆಡ್ಡಿ ಜನಾಂಗದ ಪ್ರಾತಃಸ್ಮರಣೀಯ ಶರಣೆ ಹೇಮರೆಡ್ಡಿ ಮಲ್ಲಮ್ಮನ ಕಥೆಯನ್ನು ಆಡುವುದಾಗಿ ನಾವೆಲ್ಲ ಭಾವಿಸಿದ್ದೆವು, ಆದರೆ ಕಿತ್ತೂರು ಚೆನ್ನಮ್ಮನ ಕಥೆಯನ್ನು ಆಡುತ್ತಿರುವೆಯಲ್ಲ! ಯಾವ ಕಿತ್ತೂರೋ ಯಾವ ಚೆನ್ನಮ್ಮನೋ! ಎಂದು ತಕರಾರೆತ್ತಿದರಂತೆ! ಅದಕ್ಕೆ ಕಂಪನಿಯ ಮಾಲಕನು ಕಿತ್ತೂರೆಂದರೆ ಕಿತ್ತೂರು ಚೆನ್ನಮ್ಮ ಎಂದರೆ ರಾಣಿಚೆನ್ನಮ್ಮ ಎಂದು ಪರಿಪರಿಯಿಂದ ವಿವರಿಸಿದನಂತೆ! ಬಳಿಕ ತಂದೆಗಳಿರಾ ನಾವೂ ಆ ಭಕ್ತಿರಸ ಪ್ರಧಾನ ಹೇಮರೆಡ್ಡಿ ಮಲ್ಲಮ್ಮ ನಾಟಕವನ್ನೇ ಆಡಬೇಕೆಂದು ಎಲ್ಲಾ ಸಿದ್ಧತೆ ನಡೆಸಿದ್ದೆವು ಆಡಬೇಕೆಂದುಕೊಂಡಿದ್ದೆವು, ಆದರೆ ಹೇಮರೆಡ್ಡಿಯ ಪಾತ್ರ ವಹಿಸಬೇಕಿದ್ದ ನಮ್ಮ ಮಾವ ನಾರಾಯಣಸಿಂಗು ಮೈಯಲ್ಲಿ ಹುಷಾರಿಲ್ಲದೆ ಹಾಸಿಗೆ ಹಿಡಿದಿರುವನು, ಶಕ್ತಿಶಾಲಿ ಇಂಜೆಕ್ಷನ್ನುಗಳಿಂದಲೂ ಮಾತ್ರೆಗಳಿಂದಲೂ, ಪರಿಣಾಮಕಾರಿ ಶುಶ್ರೂಷೆಯಿಂದಲೂ ಇದೀಗ ಚೇತರಿಸಿಕೊಳ್ಳುತ್ತಿರುವನು. ಇನ್ನು ಮಲ್ಲಮ್ಮನ ಗಂಡ ಭರಮರೆಡ್ಡಿ ಪಾತ್ರವಹಿಸಬೇಕಿದ್ದ ಹುಸೇನಸಾಬು ತನ್ನ ಹೆಂಡತಿಯ ಹೆರಿಗೆ ಸಲುವಾಗಿ

ಮಟಮಾರಿಗೆ ಹೋಗಿರುವನು, ನಿಮ್ಮೆಲ್ಲರ ದಯೆಯಿಂದ ಹೆರಿಗೆ ಸುಸೂತ್ರವಾಗಿ ಆಗಿರುವುದಂತೆ, ಇನ್ನೆರಡು ಮೂರು ದಿವಸಗಳಲ್ಲಿ ಬಂದು ಕಂಪನಿ ಸೇರಿಕೊಳ್ಳುವುದಾಗಿ ಪತ್ರ ಬರೆದಿರುವನು. ಅದೂ ಅಲ್ಲದೆ ನನ್ನ ತಂಗಿ ಪದ್ಮಾವತಿಯವರು ಶರಣೆ ಮಲ್ಲಮ್ಮ ಪಾತ್ರವಹಿಸುವ ಮೊದಲು ಶಂಭುಲಿಂಗನ ವ್ರತ ಆಚರಿಸಬೇಕಿರುವುದು. ಆದ್ದರಿಂದ ನೀವೆಲ್ಲರೂ ತಪ್ಪನ್ನು ಹೊಟ್ಟೆಯಲ್ಲಿ ಹಾಕಿಕೊಂಡು ಕಿತ್ತೂರು ಚೆನ್ನಮ್ಮಗೆ ಆಶೀರ್ವಾದ ಮಾಡಬೇಕು ಎಂದು ಕೈಮುಗಿದು ಕೇಳಿಕೊಂಡನಂತೆ. ಈ ವದಂತಿ ನಡುವೆಯೂ..

ಶಾಲೆಯ ಮಕ್ಕಳೂ ಸಹಶಿಕ್ಷಕರೂ ಕಾಲಕ್ಷೇಪ ಮಾಡುವ ಸಲುವಾಗಿ ಶಾಲೆ ಎಂಬ ಸಾರ್ವಜನಿಕ ಕಟ್ಟಡದೊಳಗೆ ಅಲ್ಲಿಂದ ಇಲ್ಲಿಯವರೆಗೆ ತಮ್ಮ ತಮ್ಮ ದೇಹಗಳನ್ನು ಚೆಲ್ಲುತ್ತಿದ್ದಂಥವರು, ಇಲ್ಲಿಗೆ ಬರುತ್ತಿದ್ದಂಥವರೂ ಅಲ್ಲಿಗೆ ಹೋಗುತ್ತಿದ್ದಂಥವರೆಲ್ಲರಲ್ಲೂ ನಾಟಕವೇ ನಾಟಕ! ಅಭಿನಯವೇ ಅಭಿನಯ! ಮಾತುಕತೆಗಳಲ್ಲೂ ನಾಟಕಗಳೇ ನಾಟಕಗಳು. ತನ್ನ ವಿವಾಹಪೂರ್ವದ ದಿನಗಳಲ್ಲಿ ನಾಟಕಗಳನ್ನು ಆಡಿಸಿದ್ದ ನಾಟಕಗಳಲ್ಲಿ ಅಭಿನಯಿಸಿದ್ದ ತಿಪ್ಪಾರೆಡ್ಡಿಯೂ ಅಭಿಜಾತ ಕಲಾವಿದನೆ! ಆ ಮಧ್ಯವಯಸ್ಕನು ತನ್ನ ಮನೆಯ ಒಂದು ಭಾಗದ ಬಯಲನ್ನೇ ಜಲಂಧರನಿಗೆ ಮುಫತ್ತಾಗಿ ಬಿಟ್ಟುಕೊಟ್ಟು ತನ್ನೊಂದು ಕೈಯ ಮುಷ್ಟಿಯಲ್ಲಿ ಹನಿಡ್ಯೂ ಹಚ್ಚಿಕೊಂಡು ದೇದಿಪ್ಯಮಾನವಾಗಿ ಗೋಚರಿಸುತ್ತಿರುವನು ಅಗೋ ಅಲ್ಲಿ! ಪರಮವಿಧೇಯತೆಯೇ ಮೈವೆತ್ತಂತೆ, ನಾಟಕೀಯವಾಗಿ ಅವರಿವರೆದುರು ಏನನ್ನೋ ಅಂಗಲಾಚುತ್ತ ಗ್ರಾಮದ ಸಮಸ್ತ ಅನುಕಂಪವನ್ನು ಕೊಳ್ಳೆ ಹೊಡೆಯುತ್ತಲೇ ಸಾಗಿರುವ ಜಲಂಧರ ಇಗೋ ಇಲ್ಲಿ! ಶಾಲೆಯ ಎದುರಿಗಿದ್ದ ಬೇವಿನಮರದ ಆಶ್ರಯದಲ್ಲಿ ವಾರಪರ್ಯಂತರ ಬೀಡುಬಿಟ್ಟಿದ್ದ ತರಗೆಲೆ ಸದೃಶ ಮಾನವ ಅವಶೇಷಗಳ ಸಂಭ್ರಮವಂತೂ ಅವರ್ಣನೀಯ. ಅವರೆಲ್ಲ ನಿನ್ನೆ ಇದ್ದಂತೆ ಇವತ್ತಿಲ್ಲ, ಕಳೆದ ಕ್ಷಣ ಇದ್ದಂತೆ ಈ ಕ್ಷಣ ಇಲ್ಲ, ವಿಕಾಸವಾದಕ್ಕನುಗುಣವಾಗಿ ಬದಲಾಗುತ್ತಲೇ ಇರುವರು. ಅವರ ಪೈಕಿ ಯಾರು ಥ್ಯಾಕರೆಯೋ! ಯಾರು ಸಂಗೊಳ್ಳಿ ರಾಯಣ್ಣನೋ! ಯಾರು ರುದ್ರಾಂಬದೇವಿಯೋ! ಯಾರು ಬ್ರಿಟೀಶರ ಸೈನಿಕರೋ! ಯಾರು ಕಿತ್ತೂರಿನ ಸೈನಿಕರೋ! ಕ್ಷಣದಿಂದ ಕ್ಷಣಕ್ಕೆ ಬದಲಾಗಲಾರಂಭಿಸಿದ್ದ ಅವರೆಲ್ಲರನ್ನು ನೋಡುವುದು ಆನಂದಿಸುವುದೊಂದು ಚಂದದ ಅನುಭವ! ಅವರಿವರೆಲ್ಲರನ್ನು ಬೆಕ್ಕಸಬೆರಾಗಿ ನೋಡುತ್ತಿರುವ, ತಮ್ಮ ಕೈಲಾದಷ್ಟು ರೀತಿಯಲ್ಲಿ ಸಹಕರಿಸುತ್ತಿರುವ ಮೂಲಿಮನಿ ಗೌಡರು, ಶಿವಾರೆಡ್ಡಿ, ಲಿಂಗಾರೆಡ್ಡಿ, ನಿಂಗವ್ವ, ಗೌರವ್ವ, ಅಗ್ಗಿರಾಮುಡು, ತಹಶೀಲ್ದಾರ ಡೋಮ, ಠೊಣ್ಣೆ ಮತ್ತಿತರರು. ಒಂದೇ ಮಾತಿನಲ್ಲಿ ಹೇಳುವುದಾರೆ ನೂರಾರು ಕಾದಂಬರಿ ಮಹಾಕಾವ್ಯಗಳ ಕಲಸುಮೇಲೋಗರದಂಥ ವಾತಾವರಣ ಸೃಷ್ಟಿಯಾಗಿತ್ತು.

ಆ ದಿವಸ ಸೂರ್ಯ ಬಹುಬೇಗನೆ ಪಶ್ಚಿಮದ ಕಡೆ ಪಾದ ಬೆಳೆಸಿದ. ಸಂಜೆಯಾಗುತ್ತಿದ್ದಂತೆ ತಿಪ್ಪಾರೆಡ್ಡಿಯ ಬಚ್ಚಲ ಬಯಲು ಪ್ರೇಕ್ಷಣೀಯ ಸ್ಥಳವಾಗಿ ಬದಲಾಯಿತು. ಗ್ರಾಮದ ನಲ್ಮೂಲೆಗಳಿಂದ ಜನ ಒಬ್ಬೊಬ್ಬರಾಗಿಯೋ ಗುಂಪುಗುಂಪಾಗಿಯೋ ಆಗಮಿಸಿ ಕಂಪನಿಯ ಚಲನವಲನಗಳನ್ನು ಕುತೂಹಲದಿಂದ ವೀಕ್ಷಿಸಲಾರಂಭಿಸಿದರು. ಸ್ಟೇಜು ಪ್ರಹರಿ ಮತ್ತಿತರ ಕಾರ್ಯಗಳಿಗೆ ಸಂಬಂಧಿಸಿದಂತೆ ಅವರೊಂದಿಗೆ ಇವರೂ ಇವರೊಂದಿಗೆ ಅವರೂ ಸಹಕರಿಸತೊಡಗಿದರು. ಅದೋ ಹೆಸರಿಗೆ ಮಾತ್ರ ಕರ್ನಾಟಕ ಲಕ್ಷ್ಮೀ ನಾಟಕ ಕಂಪನಿ! ಒಂದೇ ಕಡ್ಡಿ ಒಂದೇ ಬೀಡಿ. ಒಂದು ನಂದಿದರೆ ಇನ್ನೊಂದಿಲ್ಲ ಎನ್ನುವಂಥಾದ್ದು, ಇನ್ನು ಸ್ಟೇಜ್ ರಚಿಸಲಿಕ್ಕಾಗಲೀ ಪ್ರಹರಿಗೆ ಸಂಬಂಧಿಸಿದ ತಡಿಕೆ ವಗೈರೆಗಳನ್ನು ಕಟ್ಟುವುದಕ್ಕಾಗಲೀ ಸಾಮಾನು

ಸರಂಜಾಮುಗಳನ್ನು ಎಲ್ಲಿಂದ ತಂದಾರು! ಕಲಾಭಿಮಾನಿಗಳ ಪೈಕಿ ಕೆಲವರು ತಗಡುಗಳನ್ನು ಕೊಟ್ಟರೆ ಇನ್ನು ಕೆಲವರು ಅವು ಇವುಗಳನ್ನು ಪೂರೈಸಿದರು. ಹೊತ್ತು ಹೊರಳಿದಂತೆ ಸ್ಟೇಜೂ ಪ್ರಹರಿಯೂ ನಿರ್ಮಾಣಗೊಂಡಿತು. ನಮ್ಮ ಶಾಲೆಯ ತ್ಯಾಜ್ಯವಸ್ತುಗಳನ್ನು ಟಿಕೆಟ್ಟುಗಳನ್ನಾಗಿ ಪರಿವರ್ತಿಸಲಾಯಿತು. ಅವ್ವೋ ಐದು ಮೂರು ಎರಡು ಮತ್ತು ಒಂದರ ಮೌಲ್ಯದ ಟಿಕೆಟ್ಟುಗಳು! ಹ್ಹಾಂ ಅಂದ ಹಾಗೆ ಲಚುಮಿರೆಡ್ಡಿ ಗ್ರಾಮದ ಹಿರಿಯ ಜಮೀನ್ದಾರ ಹೆಬ್ಬಟಂ ಸಿತಾರಾಮರೆಡ್ಡಿಯವರನ್ನು ಕರೆತರುವ ಸಲುವಾಗಿ ತನ್ನ ಸಾರೋಟಿನೊಂದಿಗೆ ಕ್ರಾಸಿನ ಕಡೆ ಹೋಗಿರುವನು. ಅಪರೂಪಕ್ಕೆ ಆಗಮಿಸಿರಬಹುದಾದ ಅವರು ತಮ್ಮ ಬಹುವಿಸ್ತೀರ್ಣದ ವಾಡೆಯ ಮಹಡಿಕೋಣೆಯಲ್ಲಿ ವಿಶ್ರಮಿಸಿರಲೂಬಹುದು. ರಾತ್ರಿ ಎಂಟರ ಸುಮಾರಿಗೆ ನಿಧಾನಗತಿಯಲ್ಲಿ ಆರಂಭಗೊಂಡ ಭರಾಟೆ ಹತ್ತು ಕಳೆದ ಬಳಿಕ ತೀವ್ರಗೊಂಡಿತು. ಒಂದು ವಿಚಿತ್ರವೆಂದರೆ ಯಾರು ಗಲಾಟೆ ಮಾಡುವರೆಂದು ಹೇಳಲಾದ ಕೊಕ್ಕ ಬುಕ್ಕ ನಾರಾಣಿಯಂರಂಥವರೇ ಸ್ಥಳೀಯ ರೌಡಿಗಳೇ ಸ್ವಯಂಪ್ರೇರಿತರಾಗಿ ಕಂಪನಿಯ ಬಂಧೋಬಸ್ತಿಗೆ ಟೊಂಕಕಟ್ಟಿ ನಿಂತು ಶ್ರಮಿಸಿದರೆಂದ ಮೇಲೆ ಕೇಳುವುದೇನಿದೆ! ಹ್ಹಾ ಇನ್ನೊಂದು ವಿಷಯ, ಅದೆಂದರೆ ವಾಗಿಲಿಯಲ್ಲಿ ವಿದ್ಯುಚ್ಛಕ್ತಿ ಇರಲಿಲ್ಲವಷ್ಟೆ, ಆದ್ದರಿಂದ ಎಲ್ಲಿಂದಲೋ ಪೆಟ್ರೋಮ್ಯಾಕ್ಸು, ಲಾಂದರಗಳು ಬಂದವು. ಪಾತ್ರಧಾರಿಗಳು ತಮ್ಮ ಕಂಠಗಳನ್ನೇ ಧ್ವನಿವರ್ಧಕಗಳನ್ನಾಗಿ ಪರಿವರ್ತಿಸುವ ಅನಿವಾರ್ಯತೆ ಇತ್ತು. ಅದಕ್ಕೆ ಸಂಬಂಧಿಸಿದ ತಾಲೀಮು ಬೇವಿನಮರದ ಕೆಳಗೆ ನಡೆದೇ ಇತ್ತು. ಕಂಪನಿಯ ಕೆಲ ಸಣಕಲ ದೇಹದ ಸಹಕಲಾವಿದರು ಸಿಂಹಗಳೋಪಾದಿಯಲ್ಲಿ ವೀಕ್ಷಕವಿವರಣೆ ನೀಡಲಾರಂಭಿಸಿದ್ದು ಮಾತ್ರ ಶ್ರವಣೇಂದ್ರಿಗಳನ್ನು ಮುಳಕಗೊಳಿಸುವಂತಿತ್ತು.

ಕಿತ್ತೂರು ಚೆನ್ನಮ್ಮ ರಾತ್ರಿ ಒಂಭತ್ತಕ್ಕೆ ಆರಂಭವಾಗಬೇಕಿತ್ತು. ದ್ವಾದಶ ಚಂದ್ರನ ಬೆಳಕು ಯಾವುದೇ ಹುಣ್ಣುಮೆಗಿಂತ ಕಡಿಮೆ ಇರಲಿಲ್ಲ. ಸ್ಟೇಜಿನ ಪಕ್ಕ ಒಂದೆರಡು ಸಣ್ಣಪ್ರಮಾಣದ ಹೋಟಲ್ಲುಗಳು ತಲೆ ಎತ್ತಿ ಪ್ರೇಕ್ಷಕರಿಗೆ ತಿಂಡಿ ಎಂಬ ಪ್ರಸಾದವನ್ನು ಚಹಾದಂಥ ತೀರ್ಥವನ್ನು ಸರಬರಾಜು ಮಾಡುವುದರಲ್ಲಿ ನಿರತವಾಗಿದ್ದವು. ಪ್ರೇಕ್ಷಕರು ಒಳಗೆ ಹೋಗುವುದು ಹೊರಗೆ ಬರುವುದು ಮಾಡುತ್ತ ಹೆಬ್ಬಟಂ ಗೌಡರ ಮಹಡಿ ಮನೆ ಕಡೆ ನೋಟ ಬೀರುತ್ತಿದ್ದರು. ಅವರ ಪೈಕಿ ಕೆಲವರು ಈ ಗೌಡ ಈಟೊತ್ತಾದರೂ ಹೊರಗೆ ಹೊಂಡದೆ ಏನು ಮಾಡುತ್ತಿದ್ದಾನಪ್ಪಾ ಎಂದು ಗೊಣಗುತ್ತಿದ್ದುದು ಸರ್ವೇ ಸಾಮಾನ್ಯವಾಗಿತ್ತು. ಅದನ್ನೆಲ್ಲಾ ಕೆಳಿಸಿಕೊಳ್ಳುತ್ತ ನಾನು ಮುಂದಿನ ಸಾಲಲ್ಲಿ ಕುಳಿತುಕೊಂಡಿದ್ದೆ. ವೇದಿಕೆ ಮೇಲೆ ಮಲ್ಲಸರ್ಜನಾಗಿ ಪರಿವರ್ತನೆಗೊಳ್ಳಲಾರಂಭಿಸಿದ್ದ ಜಲಂಧರನು ಆಗಾಗ್ಗೆ ಕಾಣಿಸಿಕೊಳ್ಳುತ್ತ ವಿಳಂಬಕ್ಕೆ ಪ್ರೇಕ್ಷಕರಲ್ಲಿ ಕ್ಷಮೆ ಯಾಚಿಸುತ್ತಿದ್ದನು.

ರಾತ್ರಿ ಹತ್ತೂವರೆ ಕಳೆದೊಡನೆ ಪ್ರೇಕ್ಷಕರಲ್ಲಿ ಗದ್ದಲ ಕಾಣಿಸಿಕೊಂಡಿತು. ನೋಡು ನೋಡುತ್ತಿದ್ದಂತೆ ಹತ್ತಾರು ಮಂದಿ ವಂದಿಮಾಗಧರೊಂದಿಗೆ ಹೆಬ್ಬಟಂ ಗೌಡರು ಆಗಮಿಸಿ ವೇದಿಕೆ ಏರಿದರು. ನಾನೂ ಅವರೊಂದಿಗೆ ಸೇರಿಕೊಂಡೆ. ತಮ್ಮ ಪಕ್ಕ ಕುಳ್ಳಿರಿಸಿಕೊಂಡ ಗೌಡರು ನನ್ನ ಕ್ಷೇಮಲಾಭ ವಿಚಾರಿಸಿದರು, ಶಾಲೆಯ ಕಷ್ಟಸುಖ ವಿಚಾರಿಸಿದರು, ಬಳಿಕ ಉದ್ದನೆಯ ಹಲ್ಲುಗಳು ಕೆಲವು ಕಪ್ಪು ಮಚ್ಚೆಗಳಿದ್ದ ನಾಲಗೆಯ ಬಾಯಿಯನ್ನು ನನ್ನ ಕಿವಿಯೊಳಗಿರಿಸಿ "ನಾನೂ ನಿಮ್ಮ ಹಾಗೆ ಮಾರ್ಕ್ಸ್‌ವಾದಿಯೆ, ಗಾಂಧಿ ಲೋಹಿಯಾ ಅಂಥವರನ್ನು ತೀರಾ ಹತ್ತಿರದಿಂದ ನೋಡಿರುವೆ, ಅವರೆಲ್ಲರೊಂದಿಗೆ ಒಡನಾಡಿರುವೆ, ಒಮ್ಮೆ ನಮ್ಮ ಬಳ್ಳಾರಿ ಮನೆಗೆ ಬನ್ನಿ, ಕೆಲವು ಫೋಟೋಗಳನ್ನು ತೋರಿಸುವೆ. ಆದರೂ ಹಳ್ಳಿಯ ರೀತಿರಿವಾಜುಗಳನ್ನು ದಿಕ್ಕರಿಸುವುದಾಗುವುದು ಅಪಾಯ! ಹೊಲೆಯರ ಮಕ್ಕಳನ್ನು ಶಾಲೆಗೆ

ಸೇರಿಸಲು ನೂರುವರ್ಷವಾದರೂ ಕಾಯಬೇಕು" ಎಂದು ಬುದ್ಧಿವಾದವನ್ನೂ ನುಡಿದರು, ಅವರು ಇನ್ನೇನು ಉಪದೇಶ ನೀಡುತ್ತಿದ್ದರೇನೋ! ಅಷ್ಟರಲ್ಲಿ..

ನಾಟಕದ ಉದ್ಘಾಟನಾ ಸಮಾರಂಭವೆಂದರೆ ಕೇಳುವುದೇನಿದೆ! ಹೊರಗಡೆ ಎಲ್ಲಿಂದಲೋ ಪಟಾಕಿ ಸದ್ದು ಕೇಳಿಸಿತು. ಅದನ್ನು ಕೇಳಿಸಿಕೊಳ್ಳುತ್ತ ವೇದಿಕೆ ಮೇಲೆ ಅತಿಥಿಗಳು ತಮ್ಮ ತಮ್ಮ ಸಾಮಾಜಿಕ ಅಂತಸ್ತಿನಂತೆ ವಿರಾಜಮಾನರಾದರು. ಅವರೆಲ್ಲ ಮೂರು ಮಾತಾಡಿದರೆ ಹೆಚ್ಚು, ಎರಡು ಮಾತಾಡಿದರೆ ಕಡಿಮೆ. ತಾವೆಲ್ಲ ಹೊರಗಡೆ ಎಷ್ಟೇ ಭಯೋತ್ಪಾದಕರೆನಿಸಿದ್ದರೂ ವೇದಿಕೆ ಮೇಲೆ ಅಂಜುಬುರುಕರೇ ಸರಿ. ಅವರೆಲ್ಲ ತಮ್ಮ ಬಾಯಿಗಳನ್ನು ನನ್ನ ಕಿವಿ ಬಳಿಗೆ ಸರಿಸಿ ಮೇಸ್ಟ್ರೇ ನಮ್ಮದೆಲ್ಲವನ್ನೂ ನೀವೇ ಮಾತಾಡಬೇಕು ಎಂದು ಪಿಸು ನುಡಿದರು. ಅಲ್ಲದೆ ಜಲಂಧರನು ಅದನ್ನೇ ಹೇಳಿದ. ಅಷ್ಟು ಸವಲತ್ತು ದೊರಕಿದ ಬಳಿಕ ಕೇಳುವುದೇನಿದೆ! ಮೆಲ್ಲಗೆ ಸಾಗಿ ವೇದಿಕೆ ತುದಿಯಲ್ಲಿ ನಿಂತು ನೋಡಿದೆ, ಪ್ರೇಕ್ಷಕರ ಸಮುದಾಯ ನೂರಿನ್ನೂರು ಸಂಖ್ಯೆಯಲ್ಲಿದ್ದರೂ ಸಾವಿರಾರೆಂಬಂತೆ ಭಾಸವಾಯಿತು. ಧ್ವನಿವರ್ಧಕ ಬೇರೆ ಇರಲಿಲ್ಲ. ನರನಾಡಿಯ ತಾಕತ್ತೆಲ್ಲವನ್ನೂ ಗಂಟಲಿಗೆ ತಂದುಕೊಳ್ಳುವುದು ಅನಿವಾರ್ಯವಾಯಿತು. ಹಲವು ತಾಸುಗಳಿಂದ ಮಾನಸಿಕವಾಗಿ ತಾಲೀಮು ನಡೆಸಿ ಸಂಗ್ರಹಿಸಿಟ್ಟುಕೊಂಡಿದ್ದ ಟಿಪ್ಪಣಿಗಳನ್ನು ಒಂದೊಂದಾಗಿ ನೆನಪು ಮಾಡಿಕೊಳ್ಳದೆ ಇರಲಿಲ್ಲ.

ಆತ್ಮಸಾಕ್ಷಿಯನ್ನು ಅಮಾನತ್ತಿನಲ್ಲಿರಿಸಿ ಭಾಷಣವನ್ನಾರಂಭಿಸಿದೆ, ಕಂಪನಿ ನಾಟಕಗಳಿಗೊದಗಿರುವ ದುಃಸ್ಥಿತಿಯನ್ನು ಕರುಣಾಜನಕವೋ ಹೃದಯ ವಿದ್ರಾವಕ ಎಂಬಂತೆ ವರ್ಣಿಸಿದೆ, ಹೆಬ್ಬಟಂ ಗೌಡರ ವ್ಯಕ್ತಿತ್ವವನ್ನು ಮಲ್ಲಸರ್ಜದೇಸಾಯಿಯ ವ್ಯಕ್ತಿತ್ವಕ್ಕೆ ಸಮೀಕರಿಸಿ ಹೊಗಳಿದೆ, ಪ್ರೇಕ್ಷಕರು ಚಪ್ಪಾಳೆ ತಟ್ಟಿದರು. ಸುಮಾರು ಹದಿನೈದು ನಿಮಿಷಗಳ ಕಾಲ ಮಾತಾಡಿದೆ. ನನ್ನ ಮಾತುಗಳ ಪರಿಣಾಮವೋ! ಕಲಾವಿದರು ಅತಿಥಿಗಳ ಪಾದಗಳಿಗೆರಗಿದ ಪರಿಣಾಮವೋ! ಒಟ್ಟಿನಲ್ಲಿ ವಾಗಿಲಿಯ ಪಂಚಾಯತ್‌ನ ಆಜೀವ ಪರ್ಯಂತ ಅಧ್ಯಕ್ಷರೂ, ಗ್ರಾಮದ ಸಾವಿರಾರೆಕರೆ ಜಮೀನ್ದಾರರೂ, ಹಗಲುಕಗ್ಗೊಲೆ ಮಾನ್ಯಬಿರುದಾಂಕಿತರೂ ಆದ ಸೀತಾರಾಮರೆಡ್ಡಿಯವರು ನನ್ನ ಭಾಷಣದಿಂದ ಪರವಶಗೊಂಡರು, ನನ್ನ ಕಡೆ ಅಭಿಮಾನದಿಂದ ನೋಡಿದರು. ತುಂಬಾನೆ ಉತ್ತೇಜಿತರಾದರು. ಆ ಶ್ರೀಯುತರು ತಮ್ಮ ಉದ್ಘಾಟನಾ ಭಾಷಣದುದ್ದಕ್ಕೂ ಆಡಿದ ಮಾತುಗಳು, ನೀಡಿದ ಭರವಸೆಗಳು ಪ್ರೇಕ್ಷಕರನ್ನು ಅಚ್ಚರಿಗೀಡುಮಾಡಿದವು. ಕಂಪನಿಯ ಕಲಾವಿದರೆಲ್ಲರೂ ಪ್ರತಿದಿವಸ ತಮ್ಮ ಮನೆಯಲ್ಲಿಯೇ ಊಟೋಪಹಾರ ನಡೆಸಬೇಕೆಂದು ಆಜ್ಞಾಪೂರ್ವಕವಾಗಿ ಹೇಳಿದ್ದೇ ಅದಕ್ಕೆ ಕಾರಣ. ಅವರ ಧಾರಾಳತನದಿಂದ ಮೂಕವಿಸ್ಮಿತರಾದ ಉಳಿದ ಅತಿಥಿಗಳು ಸುಮ್ಮನಿದ್ದಾರೆಯೆ! ತಾವೂ ಕೊಡುಗೈದಾನಿಗಳೆಂದು ಸಾಬೀತುಪಡಿಸುವ ಸಲುವಾಗಿ ತೆಗೆದುಕೊಂಡ ನಿರ್ಣಯಗಳು, ನೀಡಿದ ಭರವಸೆಗಳು ಒಂದೇ ಎರಡೆ! ಅಷ್ಟೆಲ್ಲಾ ಭರವಸೆಗಳ ಮಹಾಪೂರದಿಂದ ಉತ್ತೇಜಿತರಾದ ಪಾತ್ರಧಾರಿಗಳು ಗದ್ಗದಿತರಾದರು, ಅನಿರೀಕ್ಷಿತ ಸಂತೋಷದಿಂದ ಕಂಪನಕ್ಕೊಳಗಾದರು, ಅತಿಥಿಗಳಿಗೆ ಪಾದಾಭಿವಂದನೆ ಸಲ್ಲಿಸುವುದರ ಮೂಲಕ ಕೃತಜ್ಞತೆಗಳನ್ನು ಅರ್ಪಿಸಿದ ಬಳಿಕ..

ನಾಟಕ ವಿದ್ಯುಕ್ತ ರೀತಿಯಲ್ಲಿ ಆರಂಭವಾಯಿತು. ಕಲಾವಿದರೆಲ್ಲರೂ ಪೈಪೋಟಿಯಿಂದ ಅಭಿನಯಿಸಿದರು. ಅದರಲ್ಲೂ ಚೆನ್ನಮ್ಮನ ಪಾತ್ರದಲ್ಲಿದ್ದ ಪದ್ಮಳ ಅಭಿನಯ ಅಮೋಘವೇ ಸರಿ. ಶೌರ್ಯಪ್ರಧಾನ ಪಾತ್ರವನ್ನೇ ಲೀಲಾಜಾಲವಾಗಿ ಅಭಿನಯಿಸಿದಾಕೆಯು ಇನ್ನು ಹೇಮರೆಡ್ಡಿಯ ಸತೀಮಣಿ ಮಲ್ಲಮ್ಮನ ಪಾತ್ರದಲ್ಲಿ! ಮೂಗಿನ ಮೇಲೆ ಬೆರಳಿರಿಸಿಕೊಂಡೇ

ನಾಟವನ್ನು ಆಸ್ವಾದಿಸಿದೆ. ನಾಟಕ ಮುಕ್ತಾಯವಾದಾಗ ಗೊಲ್ಲರೀರಯ್ಯನ ಹುಂಜ ಕೂಗಿ ಮುಂಜಾವನ್ನು ಸಾರಿತು. ಜಲಂಧರನನ್ನೂ ಸಹಕಲಾವಿದರನ್ನೂ ಅಭಿನಂದಿಸಿದೆ. ಆದರೆ ಕಿತ್ತೂರಿನ ರಾಣಿಯೇ ಆಗಿದ್ದ ಪದ್ಮಾವತಿಯನ್ನು ಖುದ್ದ ಕಂಡು ಅಭಿನಂದಿಸುವುದಾಗಲಿಲ್ಲ. ಕಾರಣ ಆಕೆ ಮೈಚಳಿಬಿಟ್ಟು ಎದುರಿಗೆ ಕಾಣಿಸಿಕೊಂಡರೆ ತಾನೆ!

++++

ಕುಲಕ್ಕೆ ಕುಲವೇ ವೈರಿ ರೆಡ್ಡಿಗಳಿಗೆ ರೆಡ್ಡಿಗಳೇ ವೈರಿ. ಈ ಗಾದೆ ಮಾತನ್ನು ನೆನಪಿಸುವುದಕ್ಕೆ ಕಾರಣಗಳುಂಟು. ಶಿಯಾ ಸುನ್ನಿ ಎಂಬ ಪ್ರಭೇದಗಳು ಮುಸ್ಲಿಮರಲ್ಲಿಯೂ, ಕ್ಯಾಥೋಲಿಕ್ ಪ್ರಾಟಿಸ್ಟೆಂಟ್ ಎಂಬ ಪಂಗಡಗಳು ಕ್ರಿಶ್ಚಿಯನ್ನರಲ್ಲೂ ಇರುವಂತೆಯೇ ರೆಡ್ಡಿ ಕುಲದಲ್ಲೂ ಮೋಟಾಟಿ ಪಾಕನಾಟಿ ಎಂಬ ಪ್ರಭೇದಗಳುಂಟು ತಾನೆ! ಹೆಬ್ಬಟಂ ಕುಟುಂಬದವರು ಮೋಟಾಟಿ ಕೋಮಿಗೆ ಸೇರಿದರೆ ವಾಗಿಲಿಯಲ್ಲಿನ ಬಹುಸಂಖ್ಯಾತ ರೆಡ್ಡಿ ಕುಟುಂಬಗಳು ಪಾಕನಾಟಿ ವರ್ಗಕ್ಕೆ ಸೇರಿದವುಗಳು. ತೋರಿಕೆಗೆ ಪರಸ್ಪರ ಸಂಬಂಧವಾಚಕಗಳಿಂದ ಸಂಬೋಧಿಸಿಕೊಳ್ಳುತ್ತಿದ್ದರೂ ಆಂತರಂಗಿಕವಾಗಿ ಅವರನ್ನು ಕಂಡರೆ ಇವರಿಗಾಗಲೀ ಇವರನ್ನು ಕಂಡರೆ ಅವರಿಗಾಗಲೀ ಆಗುವುದೇ ಇಲ್ಲ. ನಾನು ನನ್ನ ಹೆಬ್ಬಟಂ ರೆಡ್ಡಿಯವರನ್ನು ಮಲ್ಲಸರ್ಜದೇಸಾಯಿಗೆ ಹೋಲಿಸಿ ಭಾಷಣ ಮಾಡಿದ್ದು ವಾಗಿಲಿಯಲ್ಲಿನ ಅನೇಕ ಪಾಕನಾಟಿ ರೆಡ್ಡಿಗಳ ಅಸಮಾಧಾನಕ್ಕೆ ಕಾರಣವಾಯಿತು. ಆದರೆ ಅವರು ಪೈಕಿ ಯಾವೊಬ್ಬ ರೆಡ್ಡಿಯೂ ಮುಖಕ್ಕೆ ಮುಖ ಕೊಟ್ಟು ತನ್ನ ಅಸಮಾಧಾನವನ್ನು ತೋರಿಸಿಕೊಳ್ಳಲಿಲ್ಲ. ಆದರೂ ಅದು ಅನೇಕ ರೂಪದಲ್ಲಿ ಉತ್ತರೋತ್ತರವಾಗಿ ಪರಿಣಾಮ ಬೀರಿತು. ಅದೇನೇ ಇರಲಿ ಮುಖ್ಯವಾಗಿ ಜಲಂಧರ ಮತ್ತು ಆತನ ಕಲಾವಿದರಿಗೆ ನನ್ನ ಮಾತುಗಳಿಂದ ಸಾಕಷ್ಟು ಅನುಕೂಲವಾಯಿತು. ಅತಿಥಿ ಅಭಾಗತರ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುವ ವಿಷಯದಲ್ಲಿ ನಾನೇನು ಕಡಿಮೆ ತಾನೇನು ಕಡಿಮೆ ಎಂಬ ಪೈಪೋಟಿ ಆರಂಭವಾಯಿತು. ಇಂಥ ಆರೋಗ್ಯಕರ ಪೈಪೋಟಿಯನ್ನು ನಿರೀಕ್ಷಿಸಿಯೇ ನಾನು ಹೆಬ್ಬಟಂ ಗೌಡರನ್ನು ಆತ್ಮಸಾಕ್ಷಿಯನ್ನು ನಿರ್ಲಕ್ಷಿಸಿ ಹೊಗಳಿ ಅಟ್ಟಕ್ಕೇರಿಸಿದ್ದು. ಮೋಟಾಟಿ ಪಾಕನಾಟಿ ಪ್ರಭೇದಗಳೇನೇ ಇರಲಿ, ನನಗೆ ಹೆಬ್ಬಟಂ ಗೌಡರೆಂದರೆ ಅಭಿಮಾನ. ಅದಕ್ಕಿರುವ ಕಾರಣಗಳು ಹಲವಾರು.

ನನಗೆ ಮನವರಿಕೆಯಾಗಿರುವಂತೆ ಆಲೂರು ಪ್ರಾಂತದಲ್ಲಿರುವ ಹೊಳಗುಂದಿ, ಮೊಳಗುವಳ್ಳಿ, ನೇಮಕಲ್ಲು, ಚಿಪ್ಪಗಿರಿ, ಆಸ್ಪರಿಗಳಂಥ ಊರುಗಳಲ್ಲಿರುವ ರೆಡ್ಡಿಗಳು ಒಂದು ತೂಕವಾದರೆ ಹೆಬ್ಬಟಂ ರೆಡ್ಡಿಯವರು ಇನ್ನೊಂದು ತೂಕ. ವಾಗಿಲಿಯಲ್ಲಿರುವ ಹೆಬ್ಬಟಂ ರೆಡ್ಡಿಯವರ ಮನೆ ಎಂದರೆ ಅದು ಕೇವಲ ಮನೆಯಲ್ಲ, ಅದೊಂದು ರಾಜವಾಡೆ. ಗ್ರಾಮದ ಬಡಗಣದ ಕಡೆ ಎರಡು ಮೂರೆಕರೆ ವ್ಯಾಪಿಸಿರುವ ಅದು ಕಾಲದ್ದಲ್ಲವೇ ಅಲ್ಲ. ಅದಕ್ಕೆ ಒಂದೂವರೆ ಶತಮಾನದ ಇತಿಹಾಸವುಂಟು. ಸೀತಾರಾಮರೆಡ್ಡಿಯವರ ಪೂರ್ವಿಕರ ಪೈಕಿ ಪೆದ್ದೋಬುಳರೆಡ್ಡಿ ಕಾಲದಲ್ಲಿ ನಿರ್ಮಾಣಗೊಂಡಿರುವ ಅರಮನೆ ಸದೃಶ ಮನೆ ಅದು. ಸವಾರೆಕ್ಕ ಬುಳ್ಳವ್ವರಂಥವರ ಮೌಖಿಕ ಕಥನಗಳ ಪ್ರಕಾರ, ಹೆಳವರ ಹೇಳಿಕೆಗಳ ಪ್ರಕಾರ, ಜನರ ಬಾಯಿಯಲ್ಲಿರುವ ಐತಿಹ್ಯಗಳ ಪ್ರಕಾರ ಓಬುಳರೆಡ್ಡಿ ಸಾಮಾನ್ಯ ಜಮೀನ್ದಾರನಲ್ಲ, ಆತನೊಬ್ಬ ಸಣ್ಣಪಾಳ್ಳೇಗಾರನಾಗಿದ್ದನಂತೆ. ವಾಗಿಲಿಯ ಪಾಸಲೆಯಲ್ಲಿನ ಹದಿನೈದು ಊರುಗಳನ್ನಾಳುತ್ತಿದ್ದನಂತೆ, ಬರಗಾಲಗಳ ಅವಧಿಯಲ್ಲಿ ರೈತಾಪಿ ಜನರಿಗೆ ಆಸರೆಯಾಗಿದ್ದನಂತೆ, ರಾಸುಗಳಿಗೆ ಮೇವು ನೀರು ಒದಗಿಸಿ

ಪೊರೆದಿದ್ದನಂತೆ, ಆ ಕಾಲದಲ್ಲಿ ವಿಕ್ಟೋರಿಯಾರಾಣಿಯೇ ಖುದ್ದಾಗಿ ವಾಗಿಲಿಗೆ ಆಗಮಿಸಿ ಆ ಮನೆಯಲ್ಲಿ ಒಂದು ದಿವಸದ ಮಟ್ಟಿಗೆ ವಾಸ್ತವ್ಯ ಹೂಡಿ ಆತನಿಗೆ ರಾವ್‌ಬಹದ್ದೂರ್ ಎಂಬ ಬಿರುದನ್ನು ದಯಪಾಲಿಸಿದಳಂತೆ, ಆಕೆ ಬಹುಕರೀಸಿದ್ದೆನ್ನಲಾಗುವ ಕಂಪನಿ ಮೊಹರುಳ್ಳ ಚಿನ್ನದ ತೋಳಬಂಧಿ ಈಗಲೂ ಆ ಮನೆಯ ಖಜಾನೆಯಲ್ಲಿರುವುದಂತೆ. ಈ ಕಪೋಲಕಲ್ಪಿತ ಕಥಾನಕಗಳಲ್ಲಿ ನಿಜವೆಷ್ಟೋ ಸುಳ್ಳೆಷ್ಟೋ! ಆದರೆ ಒಂದಂತೂ ನಿಜ. ಅದೆಂದರೆ ಸೀತಾರಾಮರೆಡ್ಡಿಯ ತಾತ ಮುತ್ತಾತಂದಿರು ಸ್ವಾತಂತ್ರ್ಯಹೋರಾಟಗಾರರನ್ನು ಹಿಡಿದು ಬ್ರಿಟೀಷರಿಗೆ ಒಪ್ಪಿಸುವ ಮೂಲಕ ಸಾಕಷ್ಟು ಸ್ಥಿರಚರಾಸ್ತಿ ಮಾಡಿಕೊಂಡರೆಂಬುದು. ಹೆಬ್ಬಟಂ ಜಮೀನ್ದಾರರ ಇತಿಹಾಸದ ಪುಟಗಳಲ್ಲಿ ಕಪ್ಪು ಕಲೆಗಳಿಗೆ ಬರವಿರದಿದ್ದರೂ ಆ ಮನೆಯಲ್ಲಿ ಅನ್ನದಾಸೋಹಕ್ಕೆ ಮಾತ್ರ ಬರವಿಲ್ಲ, ತಮ್ಮ ಮನೆ ಬಾಗಿಲಿಗೆ ಬಂದು ಅಮ್ಮಾ ಎನ್ನುವವರನ್ನು ಬರಿಗೈಲಿಯಾಗಲೀ, ಖಾಲಿ ಹೊಟ್ಟೆಯಲ್ಲಾಗಲೀ ವಾಪಸ್ಸು ಕಳಿಸುವುದಿಲ್ಲ, ಇಂಥ ಕಾರಣಗಳಿಂದಾಗಿಯೇ ಆ ಮನೆಯ ಅಡುಗೆ ಮನೆಯಲ್ಲಿನ ಒಲೆಯ ಬೆಂಕಿ ನಂದದೇ ಶತಮಾನದಿಂದ ಉರಿಯುತ್ತಿರುವುದಂತೆ! ಐದಾರು ಮಂದಿ ಬಾಣಸಿಗರು ಅಹರ್ನಿಶಿ ಅಡುಗೆ ಬೇಯಿಸುತ್ತಲೇ ಇರುವರಂತೆ!

ಅನ್ನಸಂತರ್ಪಣಾ ಕೈಕಂರ್ಯ ಏನೇ ಇರಲಿ, ಹೆಬ್ಬಟಂ ಮನೆತನದವರೀಗಲೂ ಸಣ್ಣಹಿಡುವಳಿ ರೈತರಿಗೆ ಸಾಲ ಕೊಡುವುದರಲ್ಲಿ, ಬಡ್ಡಿಗೆ ಚಕ್ರಬಡ್ಡಿ ಹಾಕುವುದರಲ್ಲಿ, ನಿರ್ದಯತೆಯಿಂದ ಸಾಲ ವಸೂಲಿ ಮಾಡುವುದರಲ್ಲಿ, ಮನೆಮಠಗಳನ್ನು ಮುಳುಗಿಸಿ ಸ್ವಾಹಾ ಮಾಡುವುದರಲ್ಲಿ, ತಮ್ಮ ವಾಗಿಲಿ ಹಲವು ಶತಮಾನಗಳ ಹಿಂದಿನ ಬದುಕನ್ನು ಬದುಕುವಂತೆ ಮಾಡುತ್ತಿರುವಂತೆ ನೋಡಿಕೊಳ್ಳುವುದರಲ್ಲಿ, ಸ್ವಾತಂತ್ರೋತ್ತರ ಸರ್ಕಾರಗಳು ನೀಡುವ ಸವಲತ್ತುಗಳು ಊರ ಮೇರೆಯೊಳಗೆ ಸುಳಿಯದಂತೆ ನೋಡಿಕೊಳ್ಳುವುದರಲ್ಲಿ, ಎಲ್ಲಾ ಗುತ್ತಿಗೆಗಳು ತಮ್ಮ ನೆಂಟರಿಷ್ಟರಿಗೆ ಸಿಗುವಂತೆ ನೋಡಿಕೊಳ್ಳುವುದರಲ್ಲಿ, ತಮ್ಮ ವಂಶೋದ್ಧಾರಕರನ್ನು ದೂರದ ಶಹರುಗಳಲ್ಲಿನ ದುಭಾರಿ ಶಿಕ್ಷಣ ಸಂಸ್ಥೆಗಳಲ್ಲಿ ಓದಿಸುವ ವಿಷಯದಲ್ಲಿ, ತಣ್ಣನೆಯ ಮಾತುಗಳನ್ನೇ ಅಸ್ತ್ರಗಳನ್ನಾಗಿ ಪರಿವರ್ತಿಸಿ ಶತ್ರುಗಳ ಸೊಲ್ಲಡಗಿಸುವುದರಲ್ಲಿ, ಬೆಣ್ಣೆಯಲ್ಲಿ ಕೂದಲು ತೆಗೆಯುವ ವಿಷಯದಲ್ಲಿ, ದೊರಕಿದ ಕೂದಲನ್ನು ಎರಡಾಗಿ ಸೀಳುವ ವಿಷಯದಲ್ಲಿ, ಮುಗಳ್ನಗೆಯ ಮೂಲಕ ಕೊಲೆ ಮಾಡಿಸುವ ವಿಷಯದಲ್ಲಿ, ಅವರಿಗೆ ಅವರೇ ಸರಿಸಾಟಿ!

ಸೌಭಾಗ್ಯದ ಸಂಗತಿ ಎಂದರೆ ಸೀತಾರಾಮರೆಡ್ಡಿಯವರಾಗಲೀ, ಅವರ ಸಂತಾನವಾಗಲೀ ವಾಗಿಲಿಯಲ್ಲಿರುವುದು ಅಪರೂಪ. ಸ್ಥಳೀಯ ಪಾಕನಾಟಿ ಕೋಮಿನ ರೆಡ್ಡಿಯವರ ಉಪಟಳ ಅಸಹಕಾರಕ್ಕೆ ರೋಸಿಯೋ ಆತ್ಮರಕ್ಷಣೆ ಸಲುವಾಗಿಯೋ ಅವರು ವಾಗಿಲಿಯನ್ನು ತೊರೆದಿರುವರಂತೆ! ಆದೋನಿ ಬಳ್ಳಾರಿ ಶಹರಗಳ ಬಡಾವಣೆಗಳಲ್ಲಿನ ಬಂಗಲೆಗಳಲ್ಲಿ ತಮ್ಮ ತಮ್ಮ ಹೆಂಡರು ಮಕ್ಕಳ ಸಹಿತ ವಾಸಿಸುವ ಅವರು ವಾಗಿಲಿಗೆ ಬರುವುದು ಹಬ್ಬಹರಿದಿನಗಳಲ್ಲಿ ಸುಗ್ಗಿ ಕಾಲದಲ್ಲಿ ಚುನಾವಣಾ ಸಂದರ್ಭಗಳಲ್ಲಿ ಮಾತ್ರ. ಸಾಲ ಪಡೆಯುವವರು, ಸಾಲ ಮರಳಿಸುವವರು, ಅವರ ಭೂಮಿಗಳನ್ನು ಸಾಗುವಳಿ ಮಾಡುವವರು, ವಿನಾಕಾರಣ ದರ್ಶನ ಮಾಡುವವರು ಅವರಿರುವಲ್ಲಿಗೆ ಹೋಗಿ ಬರುವುದು ಮಾಮೂಲು. ಆ ದಿವಸ ಅಂಥ ಸೀತಾರಾಮರೆಡ್ಡಿ ನಾಟಕವನ್ನು ಉದ್ಘಾಟಿಸುವ ಸಲುವಾಗಿ ಬಂದರೋ ಅಥವಾ ಬೇರೆ ಇನ್ಯಾವುದೋ ಕೆಲಸಕ್ಕೆ ಬಂದರೋ! ಒಟ್ಟಿನಲ್ಲಿ ಜಲಂಧರನ ಅದೃಷ್ಟ ಹೊಸ ಆಯಾಮ ಪಡೆದುಕೊಂಡಿತು.

ಎದುರಿಗೆ ಬಂದ ಅವನನ್ನು ಕೇಳಿದೆ, ಅದಕ್ಕೆ? ಬೆಳಗಾಗುವುದಕ್ಕೂ ಪುರುಸೊತ್ತಿಲ್ಲ, ರೆಡ್ಡಿಯವರ ಮನೆಯ ಆಳುಗಳು ಅವರಿದ್ದಲೇ ಬರುತ್ತಾರೆ, ಕಲಾವಿದರು ಬೇಗನೇ ಎಚ್ಚರಗೊಳ್ಳುವಂತೆ ಮಾಡುತ್ತಾರೆ, ಮಾಡಿ ಮನೆಗೆ ಕರೆದೊಯ್ದು ಉಪ್ಪಿಟ್ಟೋ ಇಡ್ಲಿಯೋ ಏನೋ ಒಂದು ಉಪಹಾರ ಬಡಿಸುತ್ತಾರೆ, ಮಧ್ಯಾಹ್ನ ಮೃಷ್ಟಾನ್ನ ಭೋಜನ, ಪುನಃ ರಾತ್ರಿ ಸಹ. ಅವರು ಮೊದಲೇ ನಾಟಕದ ಕಲಾವಿದರು ಸದ್ವಿನಯಶೀಲರು. ಅವರು ಸುಮ್ಮನಿದ್ದರೆ ಅವರವರ ಬಾಯಿಗಳು ಸುಮ್ಮನಿದ್ದರೆ ತಾನೆ! ಅವರಿವರು ಕೇಳಿದ್ದಕ್ಕೆ ಒಂದಕ್ಕೆ ಇನ್ನೊಂದನ್ನು ಪೋಣಿಸಿ ಹೇಳುವುದು, ಹೌದು! ಸಣಕಲು ಬಡಕಲು ಬಡಕಲಾಗಿದ್ದ ಅವರೆಲ್ಲ ದೇಹಗಳು ಕೇವಲ ವಾರೊಪ್ಪತ್ತಲ್ಲಿ ಅರಳಲಾರಂಭಿಸಿದವು. ಚಹಾದಂಗಡಿ ಮುಂದೆ ಬೀಡಿ ಅಂಗಡಿಗಳಿರುವಂತೆ ಊರಲ್ಲಿ ಹೆಬ್ಬಟಂ ರೆಡ್ಡಿಯವರನ್ನು ಕಂಡರೆ ಆಗದವರು, ತಮ್ಮ ಜುಟ್ಟುಗಳಲ್ಲಿ ಮಲ್ಲಿಗೆ ಮುಡಿದು ರಾರಾಜಿಸುತ್ತಿದ್ದವರು, ಸಾಮಾಜಿಕ ಒಣಪ್ರತಿಷ್ಠೆ ಸಲುವಾಗಿ ಹಪಹಪಿಸುತ್ತಿದ್ದವರು, ಅದರಲ್ಲೂ ಕಲಾವಿದರಿಂದ ಸೈ ಅನ್ನಿಸಿಕೊಳ್ಳಬೇಕೆಂದು ತಹತಹಿಸುತ್ತಿದ್ದವರು ಇದ್ದರಷ್ಟೆ. ಇವತ್ತು ಕೆಳಮನಿ ಲಿಂಗಾರೆಡ್ಡಿ ಕಲಾವಿದರನ್ನು ತಮ್ಮ ಮನೆಗೆ ಕರೆದೊಯ್ದರೆ ನಾಳೆ ಬಚ್ಚಲಕಟ್ಟಿ ಪದ್ಮನಾಭರೆಡ್ಡಿ, ನಾಡಿದ್ದು ಪುಯ್ಯಾವುಲವರ ಮನೆಯವರು, ಇನ್ನೊಂದು ದಿವಸ ಇನ್ನೊಬ್ಬರು. ಒಬ್ಬರು ಜಿಲೇಬಿ ಮಾಡಿಸಿದರೆ ಇನ್ನೊಬ್ಬರು ಮಾಡಿಸುತ್ತಿದ್ದುದು ಮೈಸೂರುಪಾಕನ್ನು! ರೆಡ್ಡಿ ಕೋಮಿನವರಿಗಿಂತ ತಾವೇನು ಕಡಿಮೆ ಎಂದು ಗ್ರಾಮದ ಶೂದ್ರರು ಭಾವಿಸಿದ ಪರಿಣಾಮದಿಂದಾಗಿ ಕಲಾವಿದರಿರುವಲ್ಲಿಗೆ ಹಾಲುಹೈನ ಸರಬರಾಜು ಮಾಡಲಾರಂಭಿಸಿದವರೆಷ್ಟೋ! ಕಲಾವಿದರಾದ ನೀವು ಮಾಮೂಲು ಮನುಷ್ಯರಂತೆ ಬೀಡಿ ಸೇದುವುದೆಂದರೇನು ಎಂದು ಸಿಗರೇಟುಪ್ಯಾಕುಗಳನ್ನು ವಿಲೇವಾರಿ ಮಾಡಲಾರಂಭಿಸಿದವರೆಷ್ಟೋ! ನಿಮ್ಮಂಥ ಕಲಾವಿದರು ಬೇವಿನಮರದ ಬುಡದಲ್ಲಿರುವುದೆಂದರೇನು ಎಂದು ಭಾವಿಸಿ ಅವರಿಗೆ ತಮ್ಮ ಮನೆಗಳನ್ನು ಮುಫತ್ತಾಗಿ ನೀಡಲು ಮುಂದೆ ಬಂದವರೆಷ್ಟೋ!

ಈ ದೈಹಿಕ ಬದಲಾವಣೆ ಕೇವಲ ಕಲಾವಿದರಿಗೆ ಮಾತ್ರ ಸೀಮಿತವಾಗಿರಲಿಲ್ಲ, ನಮ್ಮ ಶಾಲೆಯ ಮಕ್ಕಳ ದೇಹಗಳೂ ಚೆಂದದಿಂದ ನಳನಳಿಸತೊಡಗಿದವು, ಸಹಶಿಕ್ಷಕರ ದೇಹಗಳೂ ಬದಲಾದವು, ಅತಿಥೇಯರು ತಮ್ಮ ತಮ್ಮ ಬಂಧುಬಾಂಧವರ ವರ್ತುಳದಲ್ಲಿ ಪ್ರತಿಷ್ಠೆ ಹೆಚ್ಚಿಸಿಕೊಳ್ಳುವ ಸಲುವಾಗಿ ಆ ಈ ಊರುಗಳಿಂದ ತಮ್ಮ ತಮ್ಮ ನೆಂಟರಿಷ್ಟರನ್ನೂ ವಾಗಿಲಿಗೆ ಬರಮಾಡಿಕೊಂಡು ಉಪಚರಿಸಲಾರಂಭಿಸಿದ ಪರಿಣಾಮವಾಗಿ! ಓಹ್! ಅದು ಇನ್ನೊಂದು ಕಥೆ!

ಇಷ್ಟೆಲ್ಲಾ ಸವಲತ್ತು ದೊರಕಿದ ಮೇಲೆ ಪ್ರಯೋಗಶೀಲತೆಯನ್ನು ಅಳವಡಿಸಿಕೊಳ್ಳದಿರಲಾಗುವುದೆ! ಹೊಸಹೊಸ ಪ್ರಯೋಗಗಳಿಗೆ ಹೆಸರಾದ ಕಂಪನಿ ಮಾಲಕ ಜಲಂಧರ ಸುಮ್ಮನಿದ್ದಾನೆಯೆ! ಇವತ್ತು ಕಿತ್ತೂರು ಚೆನ್ನಮ್ಮ ಆಡಿದರೆ ನಾಳೆ ಕೊಂಡುತಂದ ಗಂಡ, ನಾಡಿದ್ದು ಬಸ್ಸು ಕಂಡಕ್ಟರ್! ಹೀಗೆ ನಾಟಕಗಳನ್ನು ಬದಲಿಸುತ್ತ ಮನರಂಜನೆಯ ಮೆರುಗನ್ನು ಅಭಿವೃದ್ಧಿ ಪಡಿಸುತ್ತ ಹೋದ. ಜೊತೆಗೆ ಬ್ಯಾಟರಿ ಲೌಡ್‌ಸ್ಪೀಕರ್ ಮತ್ತಿತರ ತಾಂತ್ರಿಕ ಸವಲತ್ತುಗಳನ್ನೂ ಅಳವಡಿಸುವುದರ ಮೂಲಕ ಆಡುವ ಪ್ರತಿಯೊಂದು ನಾಟಕಗಳನ್ನು ಜನಪ್ರಿಯಗೊಳಿಸಿದ. ನೇಪಥ್ಯ ಸಂಗೀತವನ್ನು ತನ್ನ ಕಂಪನಿಯ ಕಲಾವಿದರೇ ಒದಗಿಸುತ್ತಿದ್ದರಷ್ಟೆ, ಅದೂ ಬಣ್ಣ ಹಚ್ಚಿಕೊಂಡವರ ಪೈಕಿ ಒಬ್ಬರೀ ಸಲ ಕೆಳಗಿಳಿದು ತಬಲ ನುಡಿಸಿದರೆ, ಇನ್ನೊಬ್ಬ ಕಲಾವಿದ ಹಾರ್ಮೋನಿಯಮ್ ನುಡಿಸುವುದು, ಅವೆರಡು ವಾದ್ಯಗಳನ್ನು ಹೊರತುಪಡಿಸಿದರೆ ಇನ್ನೊಂದು ವಾದ್ಯ ಕಂಪನಿಯಲ್ಲಿರಲಿಲ್ಲ, ಮಿಮಿಕ್ರಿಗೆ ಹೆಸರಾದ ಕಲಾವಿದರ ಪೈಕಿ ಒಬ್ಬರು

ತಮ್ಮ ಬಾಯಿಯಿಂದ ಕಂಜರಾ ನುಡಿಸಿದರೆ ಇನ್ನೊಬ್ಬ ಕಲಾವಿದ ಮೌತಾರ್ಗನ್ನನ್ನು ನಿರಾಯಾಸವಾಗಿ ನುಡಿಸುವುದರ ಮೂಲಕ! ಮಗುದೊಬ್ಬ ಕಲಾವಿದ ತನ್ನ ಬಾಯಿಯ ಸಹಾಯದಿಂದಲೇ ಬಿರುಗಾಳಿ ಚಂಡಮಾರುತಗಳನ್ನು ಸೃಷ್ಟಿಸುವುದರ ಮೂಲಕ! ಅದೊಂದು ಅತ್ಯದ್ಭುತ ಕಲಾ ಪರಿಣತಿಯೇ ಸರಿ. ತಿಂದದ್ದೆಲ್ಲವನ್ನೂ ಉಂಡದ್ದೆಲ್ಲವನ್ನೂ ಕಲಾವಿದರು ತಮ್ಮ ಬಹುಮುಖಪ್ರತಿಭೆಗೆ ಮೀಸಲಿರಿಸಿದರೆ ನಾಟಕಗಳ ಪ್ರದರ್ಶನ ನಿಗದಿತ ವೇಳೆಗೆ ಆರಂಭಗೊಂಡು ನಿಗದಿತ ವೇಳೆಗೆ ಮುಕ್ತಾಯಗೊಳ್ಳುವುದಾದರೂ ಹೇಗೆ! ಇದನ್ನು ಮನಗಂಡ ಸಿಂಗ್ ಅಗಸನೂರಿನಿಂದ ರಾಮಣ್ಣನೆಂಬ ತಬಲಾ ವಾದಕನನ್ನೂ, ಕರೂರಿನಿಂದ ಸಂಕರಣ್ಣನೆಂಬ ಹಾರ್ಮೋನಿಯಮ್ ವಾದಕನನ್ನೂ, ಇನ್ನೊಂದು ಊರಿನಿಂದ ಇನ್ನೊಬ್ಬ ಕಲಾವಿದನನ್ನೂ ತನ್ನ ಕಂಪನಿಗೆ ಬರಮಾಡಿಕೊಂಡ. ತನ್ನೆಲ್ಲಾ ಕೆಲಸಗಳ ನಡುವೆಯೂ ವಾರಕ್ಕೊಂದು ಸಲವಾದರೂ ಬಳ್ಳಾರಿಗೆ ಹೋಗಿ ಹೆಬ್ಬಟಂ ಗೌಡರಿಗೆ ಶಿರಸಾಸ್ಟಾಂಗ ಪ್ರಣಾಮ ಸಲ್ಲಿಸಿ ಆಶೀರ್ವಾದ ಪಡೆದು ಬರುವ ಮೂಲಕ ವಾಗಿಲಿಯಲ್ಲಿ ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಂಡ.

++++

ಆ ದಿವಸ ಜಲಂಧರ ಶೇಷಣ್ಣನ ಸಂಗಡ ನೇರವಾಗಿ ಮನೆಗೆ ಆಗಮಿಸಿ ತರಾವರಿ ಹಣ್ಣುಗಳಿದ್ದ ಪುಟ್ಟಿಯನ್ನು ನೀಡಿ ಸತ್ಕರಿಸಿ ಎಲ್ಲಾ ನಿಮ್ಮ ಅಮೂಲ್ಯ ಮಾತುಗಳ ಪರಿಣಾಮ ಸಾರ್ ಎಂದು ಅಂಜಲೀಬದ್ದನಾಗಿ ಕೃತಜ್ಞತೆಗಳನ್ನು ಅರ್ಪಿಸಿದ. ವಾಗಿಲಿಯೊಳಗೆ ಪ್ರವಾಹದೋಪಾದಿಯಲ್ಲಿ ಕಾಣಿಸಿಕೊಂಡಿದ್ದ ಪ್ರೋತ್ಸಾಹ ಗಮನಿಸಿ ನಾನೂ ದಿಗ್ಮೂಢಗೊಂಡೆನು. ಶೀಘ್ರಕೋಪಕ್ಕೆ ಅಪಾರ್ಥ ಮಾಡಿಕೊಳ್ಳುವುದಕ್ಕೆ ಮೊಸರಲ್ಲಿ ಕಲ್ಲು ಹುಡುಕುವುದಕ್ಕೆ ನಿರ್ದಯತೆಯಿಂದ ನಾಶ ಮಾಡುವುದಕ್ಕೆ ಹೆಸರಾಗಿರುವ ವಾಗಿಲಿಯ ಗ್ರಾಮಸ್ಥರಲ್ಲಿ ಕಾಣಿಸಿರುವ ಪ್ರೋತ್ಸಾಹವೆಂಬ ಮೇನಿಯಾ ನನ್ನೊಳಗೂ ಗಾಬರಿ ಹುಟ್ಟಿಸಿತ್ತು. ಆದರೆ ಯಾವುದಕ್ಕೂ ಯಾರೂ ಪರವಶರಾಗದೆ ಎಚ್ಚರ ಕಾಯ್ದುಕೊಳ್ಳುವುದು ಮುಖ್ಯ ತಾನೆ!

ನನ್ನ ಮನದಿಂಗಿತವನ್ನು ಅರ್ಥ ಮಾಡಿಕೊಂಡವನಾದ ಶೇಷಣ್ಣನು "ನೀವು ನಮ್ಮೂರಿಗೆ ಹೊಸಬರು ಜಲಂಧರ, ಇವರಟ್ಟಕ್ಕೇರಿಸುವುದಾಗಲೀ ಕೆಳಕ್ಕೆ ಕೆಡವುದಾಗಲೀ ತಡಾ ಇಲ್ಲ, ಇದು ಯಾವುದೂ ಶಾಶ್ವತ ಅಲ್ಲ. ಮುಖ್ಯವಾಗಿ ಕೈಯಿ ಬಾಯಿಗಳಿಗಿಂತ ಕಚ್ಚೆ ಭದ್ರವಾಗಿಟ್ಟುಕೊಳ್ಳುವುದು ಮುಖ್ಯ" ಎಂದು ಮೆಲ್ಲಗೆ ಹೇಳಿದ. ಅದೂ ನಿಜಸಂಗತಿಯನ್ನೇ ಹೇಳಿದ, ಅದೂ ಕೆಲವು ದೃಷ್ಟಾಂತಗಳ ಸಹಿತ. ಅವನಾಡಿದ ಮಾತಿನಲ್ಲಿನ ಸೂಕ್ಷ್ಮತೆ ಅರ್ಥಮಾಡಿಕೊಂಡೆ, ಸಿಂಗ್ ಕಡೆ ನೋಡಿದೆ. ಆತನ ಮುಖ ತುಸು ವಿವರ್ಣಗೊಂಡಿತ್ತು, ನುಂಗಲೆತ್ನಿಸಿದ ಉಗುಳು ಕೆಳಕ್ಕಿಳಿಯಲು ತ್ರಾಸುಪಡುತ್ತ ಗಂಟಲಲ್ಲಿರುವುದನ್ನು ಸೂಕ್ಷ್ಮವಾಗಿ ನಾನೂ ಗಮನಿಸದೆ. ಹೌದು! ಮಾಮೂಲು ಮನುಷ್ಯನಂತೆ ಹೊರನೋಟಕ್ಕೆ ಗೋಚರಿಸುವ ಶೇಷಣ್ಣ ಸಾಮಾನ್ಯ ವ್ಯಕ್ತಿಯಲ್ಲ, ತನ್ನ ಗಂಟಲಲ್ಲಿ ಹತ್ತಾರು ಆಟಬಯಲಾಟಗಳನ್ನಿಟ್ಟುಕೊಂಡಿರುವ ತಾನು ಮನಸ್ಸು ಮಾಡಿದ್ದಲ್ಲಿ ನಾಟಕಗಳನ್ನು ಕಲಿಸುವ ಮಾಸ್ತರ ನಾಗಬಹುದಿತ್ತು. ಅಲ್ಲದೆ ತನ್ನ ಪಂಚೇಂದ್ರಿಯಗಳಂತೂ ಸೂಕ್ಷ್ಮಸಂವೇದಿ ಉಪಗ್ರಹಗಳೇ, ತಾನಿದ್ದಲ್ಲಿಂದಲೇ ಪ್ರತಿಯೊಬ್ಬರ ಚಲನವಲನಗಳನ್ನು ಸೂಕ್ಷ್ಮವಾಗಿ ಗ್ರಹಿಸುವಲ್ಲಿ ತಾನು ನಿಸ್ಸೀಮ! ನನ್ನೊಳಗಿನ ಪಂಚೇಂದ್ರಿಯಗಳ ಮೂಗಿಗೆ ತನ್ನ ಮಾತುಗಳಿಂದ ಲಗಾಮು ಹಾಕುತ್ತಿದ್ದ, ಅರಿಷಡ್ವರ್ಗಗಳಿಗೆ ನೀತಿ ಪಾಠ ಬೋಧಿಸುತ್ತಿದ್ದ, ತಾನಿರುವಲ್ಲಿಂದಲೇ ಗ್ರಾಮದ

ಸಮಸ್ತ ವಿದ್ಯಾಮಾನಗಳನ್ನು ಕೂಲಂಕಷ ಗ್ರಹಿಸಿ ಪರಿಣಾಮಕಾರಿಯಾಗಿ ನನ್ನೆದುರು ನಿರೂಪಿಸುತ್ತಿದ್ದ, ನಾನು ಬರೆಯುವ ಕಥೆಗಳನ್ನು ಕೇಳಿಸಿಕೊಂಡು ತನ್ನದೇ ಆದ ರೀತಿಯಲ್ಲಿ ವಿಮರ್ಶಾಮಾತುಗಳನ್ನು ಆಡುತ್ತಿದ್ದ. ಅಂಥ ಶೇಷಣ್ಣ ತನ್ನ ಮಾತಿನಲ್ಲಿ ಕಚ್ಚೆಯ ಭದ್ರತೆಗೆ ಹೆಚ್ಚು ಒತ್ತುನೀಡಿದ್ದು ಜಲಂಧರನ ಕಸಿವಿಸಿಗೆ ಕಾರಣವಾಗಿತ್ತು.

ಜಲಂಧರ ಎಂಬ ನಾಮವಾಚಕವೂ ಆತನ ಸದೃಢ ಆಕರ್ಷಕ ಹರೆಯ ವ್ಯಕ್ತಿತ್ವವೂ ಕ್ಷತ್ರಿಯ ಜಾಯಮಾನವೂ ಪರಿಣಾಮಕಾರಿ ಆತನ ನಡೆನುಡಿಯೂ! ಇಷ್ಟು ಸಾಕಲ್ಲವೆ ಗ್ರಾಮದ ಅತೃಪ್ತ ಮಹಿಳೆಯರ ಹದಿಹರೆಯದ ತರುಣಿಯರ ಚಿತ್ತವನ್ನು ಅಪಹರಿಸಲು! ಇವನೊಂದಿಗೆ ಸಲಿಗೆಯಿಂದಿರುವವರೆಂದರೆ ಬಚ್ಚಲಕಟ್ಟೆ ತಿಪ್ಪಾರೆಡ್ಡಿಯವರ ಮಗಳು ಸುಶೀಲಾ, ಓಂಕಾರರೆಡ್ಡಿಯವರ ಸೊಸೆ ಕಲಾವತಿ, ಓರ್ವಾಯಿ ರಂಗಾರೆಡ್ಡಿಯವರ ವಿಧವಾ ಸೊಸೆ ರತ್ನ, ಯಾದಿ ಹೀಗೆ ಬೆಳೆಯುವುದು. ಈ ವಿಷಯವೆಂಬ ಹಸಿರನ್ನು ಇವನ ಮುಂದೆ ಪಸರಿಸಿರುವ ರಿಂದಮ್ಮನಂತೂ ತೊಡೆಗಳನ್ನು ಬದಲಿಸುವಲ್ಲಿ, ಕೂಡಿಸಿ ಒಲಿಸುವಲ್ಲಿ ಪಳಗಿದಾಕೆಯು ಮೊದಲೆ. ಈ ಕಚ್ಚೆಹರುಕತನದಿಂದಾಗಿ ಎಡಗಾಲನ್ನು ಕಳೆದುಕೊಂಡು ಹೆಳವನಾಗಿರುವ ನಾಗರಾಜ, ನಾಲಗೆ ಕಳೆದುಕೊಂಡು ಮೂಕನಾಗಿರುವ ಸುಬ್ಬು, ಅರೆಹುಚ್ಚನಾಗಿರುವ ಕೆಳಗೇರಿ ನರಸ ವರ್ತಮಾನ ಸಮಾಜದ ಕಣ್ಣೆದುರು ಇರುವಾಗ, ಇಂಥವನನ್ನು ಮನೆಯೊಳಗೆ ಕೂಡ್ರಿಸಿಕೊಂಡು ಬುದ್ಧಿ ಹೇಳಲಿಕ್ಕೆ ನಿನಗೇನಾಗಿತ್ತು ದಾಡಿ ಎಂದು ಕೇಳುವವರು ಎಲ್ಲಂದರಲ್ಲಿ ಇರುವಾಗ.. ನೆನಪಿಸಿಕೊಂಡರೇನೆ ಭಯವಾಗುವುದು!

"ತಪ್ಪು ತಿಳಿದಿರುವಿ ಶೇಷಣ್ಣ, ಅನ್ನ ಆಶ್ರಯ ನೀಡಿರುವ ಊರಿಗೆ ದ್ರೋಹ ಬಗೆಯುವವನು ನಾನಲ್ಲ, ಆಣೆಪ್ರಮಾಣ ಮಾಡೆಂದರೂ ಮಾಡುವೆ, ನಾಳೆಯೇ ಊರು ಬಿಡೆಂದರೂ ಬಿಟ್ಟು ಹೋಗುವೆ. ಆದರೆ ಯಾರನ್ನಾಗಲೀ ಕೆಟ್ಟಿಗಣ್ಣಿನಿಂದ ನೋಡಿಲ್ಲ, ಮಾತಾಡಿಸಿಲ್ಲ" ಎಂದು ಹೇಳಿದಾದ ಬಳಿಕ ತುಸು ಮೌನವಹಿಸಿ ನಿಟ್ಟುಸಿರಿಟ್ಟು ಮತ್ತೆ ಹೇಳಿದ "ನಾಳಿನ ನಾಟಕ ಸದಾರಮೆ, ಅದರಲ್ಲಿ ನನ್ನದು ಕಳ್ಳನ ಪಾತ್ರ, ನನ್ನ ತಂಗಿ ಸದಾರಮೆ ಪಾತ್ರ ಮಾಡುವಳು. ಕಲ್ಮಷವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೆ ನೀವೆಲ್ಲರೂ ಬಂದು ನೋಡಬೇಕು, ನಾವೆಲ್ಲರೂ ನಿಮ್ಮವರೆ, ನಿಮ್ಮ ಸಂತೋಷವೇ ನಮ್ಮ ಸಂತೋಷ" ಎಂದು ಹೇಳುತ್ತ ಮುಖ ತಗ್ಗಿಸಿದ.

ಸದಾರಮೆ ಎಂದೊಡನೆ ನನ್ನ ಕಣ್ಣಮುಂದೆ ಸುಳಿದದ್ದು ಆ ಹೆಸರಿನ ಸಿನೆಮಾ, ನಾಟಕವಲ್ಲ. ಅದೋ ನಾನು ಚಿಕ್ಕವನಿದ್ದಾಗ ನೋಡಿದ್ದ ನೆನಪು, ಸೊಂಟದಲ್ಲಿ ಹಿಡಿಗತ್ತಿಯನ್ನು ಸಿಕ್ಕಿಸಿಕೊಂಡು ತಾನು ಕಳ್ಳತನ ಮಾಡುವ ಮನೆಯ ಆಸುಪಾಸಲ್ಲಿ ಪದ ಹಾಡುವ ಕಳ್ಳನ ಚಿತ್ರ ಕಣ್ಣಮುಂದೆ ಸುಳಿದಾಡಿತು, ಆ ಚೂರಿ! ತಾನು ನಿಗೂಢ ರೀತಿಯಲ್ಲಿ ಅಡಗಿರುವ ತನ್ನನ್ನೇ ನಟನ ಕೈಗೊಪ್ಪಿಸಿ ಪುಣ್ಯ ಕಟ್ಟಿಕೋ ಎಂದು ಉರುಕುಂದಿ ಅಂಗಲಾಚಿದಂತೆ ಭಾಸವಾಯಿತು. ಅವನ ಮಾತನ್ನು ಪುರಸ್ಕರಿಸಿ ಕೊಡಬಹುದು, ಆದರೆ ಇವನು ಅದರಿಂದ ಸಹಕಲಾವಿದರ ಪೈಕಿ ಯಾರನ್ನಾದರೂ ಕೊಲೆ ಮಾಡಿದಲ್ಲಿ! ತನ್ನನ್ನೇ ತಾನು ಕೊಲೆ ಮಾಡಿಕೊಂಡಲ್ಲಿ! ಅಥವಾ ಮಾರಣಾಂತಿಕ ಹಲ್ಲೆ ನಡೆಸಿದಲ್ಲಿ! ವಿಚಿತ್ರ ಭಯ ಕಾಡಿತು.

ನಾಗನಾಥಾವಧೂತರ ತೋಪಿನಿಂದ ಗಾಂಜಾ ಸೊಪ್ಪು ತರುವ ಸಲುವಾಗಿ ಮೂಲಿಮನಿಗೌಡರು ಅಂಗಳದ ಅಂಚಿನಲ್ಲಿ ನಿಂತು ಕೈ ಸಜ್ಜೆ ಮಾಡಿದರು, ಅವರ ಕರೆಯನ್ನು ಪುರಸ್ಕರಿಸಿ ಶೇಷಣ್ಣ ಎದ್ದು ಅಲ್ಲಿಂದ ಹೊರಟು ಮರೆಯಾದ. ಮನೆಯಲ್ಲಿ ಉಳಿದವರು ನಾನು ಮತ್ತು ಜಲಂಧರ.

++++

"ಜಲಂಧರ.. ಶೇಷಣ್ಣ ಹೇಳಿದ್ದರಲ್ಲಿ ತಪ್ಪೇನಿಲ್ಲ, ನೀವೆಲ್ಲ ನೋಡಿರುವ ಊರುಗಳೇ ಬೇರೆ, ಈ ಊರೇ ಬೇರೆ. ಇದು ಇಲಿಯನ್ನು ಹುಲಿಯನ್ನಾಗಿ ಪರಿವರ್ತಿಸುವ ಜಾಯಮಾನದ ಊರು. ಇಲ್ಲಿರುವುದು ಒಂದೇ, ಕತ್ತಿ ಮೇಲೆ ಸಾಮು ಮಾಡುವುದೂ ಒಂದೆ. ಸೂಜಿಗೆ ಮುದ್ದು ಕೊಟ್ಟಂತೆ ಇಲ್ಲಿನವರೊಂದಿಗೆ ಸಂಬಂಧವಿಟ್ಟುಕೊಳ್ಳುವುದು ಮುಖ್ಯ. ನೀನು ಹೇಳಿದ ಮೇಲೆ ಅನುಮಾನ ಬಗೆ ಹರಿಯಿತು. ನಾಳೆ ದಿವಸ ಸದಾರಮೆ ಎಂದು ಹೇಳಿದಿಯಲ್ಲ! ಅದರಲ್ಲಿ ಕಳ್ಳನ ಪಾತ್ರ ತುಂಬ ಮುಖ್ಯ. ಕಳ್ಳ ಎಂದ ಮೇಲೆ ಸೊಂಟದಲ್ಲಿ ಏನಾದರೊಂದು ಆಯುಧವನ್ನಿಟ್ಟುಕೊಳ್ಳಬೇಕಲ್ಲವೆ! ಅಂಥ ಆಯುಧಗಳು ನಿಮ್ಮ ಬಳಿ ಇವೆಯೆ?" ಎಂದು ಕೇಳಿದೆ, ಅದನ್ನು ಕೊಟ್ಟು ನಿಶ್ಚಿಂತತೆಯಿಂದಿರಲು ಬಯಸಿ.

"ನಾವೂ ನಕಲಿ ನಾವು ಆಡುವ ನಾಟಕಗಳೂ ನಕಲಿ ಸಾರ್. ಇನ್ನು ಅಸಲಿ ಆಯುಧಗಳನ್ನು ಇಟ್ಟುಕೊಳ್ಳುವುದು ಎಲ್ಲಿ ಸಾಧ್ಯ! ಅಸಲಿ ಎಂದು ಪ್ರೇಕ್ಷಕರಲ್ಲಿ ಭ್ರಮೆ ಹುಟ್ಟಿಸುವುದು ನಮ್ಮ ಕರ್ತವ್ಯ, ಇನ್ನು ಸದಾರಮೆ ನಾಟಕದಲ್ಲಿನ ಕಳ್ಳನ ವಿಷಯಕ್ಕೆ ಬಂದರೆ ಅವನ ಸೊಂಟದಲ್ಲೋ ಕೈಯಲ್ಲೋ ನಿಜವಾದ ಆಯುಧವಿದ್ದರೆ ಒಳ್ಳೆಯದೆ! ಇಲ್ಲದ ಆಯುಧಗಳನ್ನು ಎಲ್ಲಿಂದ ತರಲಿ! ಸೊಂಟದಲ್ಲಿ ಕಟ್ಟಿಗೆ ತುಂಡಿಟ್ಟುಕೊಂಡು ಕಳ್ಳನ ಪಾತ್ರವಹಿಸುವುದು ಅಭ್ಯಾಸವಾಗಿದೆ ಸಾರ್. ಆಯುಧಗಳೇ ಬೇಕೆಂದೇನಿಲ್ಲ. ನಮಗೆ ನೈಜ ಆಯುಧದ ಅಗತ್ಯವಿರುವುದು ತಾಯಿಕರುಳು ನಾಟಕದಲ್ಲಿ ಮಾತ್ರ, ಆ ನಾಟಕದಲ್ಲಿ ಸೂಲಗಿತ್ತಿ ಈರವ್ವ ಮೊನಚಾದ ಆಯುಧವನ್ನು ಪ್ರೇಕ್ಷಕರಿಗೆ ತೋರಿಸಿಯೇ ಬಾಣಂತಿಯ ಹೊಕ್ಕಳಿಂದ ಮಗುವನ್ನು ಬೇರ್ಪಡಿಸುತ್ತಾಳೆ, ಆದರೆ ಅಂಥದ್ದೊಂದು ಆಯುಧ ಕಂಪನಿ ಹುಟ್ಟುವುದಕ್ಕೂ ಪೂರ್ವದಲ್ಲಿಯೇ ನಮ್ಮ ಬಳಿ ಇತ್ತು, ಅದು ವಿಜಯನಗರವನ್ನಾಳಿದ ಅರಸರ ಕಾಲದ್ದೆಂದು ಪ್ರತೀತಿ ಇತ್ತು, ಶ್ರೀಕೃಷ್ಣದೇವರಾಯನೇ ಅದನ್ನು ತನ್ನ ಸೊಂಟದಲ್ಲಿ ಇಟ್ಟುಕೊಂಡಿರುತ್ತಿದ್ದನಂತೆ! ಅದು ನಮ್ಮ ಪೂರ್ವಿಕರ ಸುಪರ್ದಿಗೆ ಹೇಗೆ ಬಂತೆಂಬುದು ತಿಳಿಯದು, ಅದನ್ನು ರಾಯನೇ ಕಾಣಿಕೆ ರೂಪದಲ್ಲಿ ನೀಡಿದ್ದನೋ ನಮ್ಮವರೆ ಅದನ್ನು ಲಪಟಾಯಿಸಿದ್ದರೋ ಎಂಬುದು ತಿಳಿಯದು. ಆ ಹಿಡಿಗತ್ತಿಯ ಮಹಿಮೆಯಿಂದಾಗಿಯೇ ನಮ್ಮ ಹಿರಿಯರು ಮುಟ್ಟಿದ್ದೆಲ್ಲ ಚಿನ್ನವಾಗುತ್ತಿತ್ತು. ಅದು ಹಲವು ತಲೆಮಾರುಗಳನಂತರವೂ ನಮ್ಮ ಹಿರಿಯರ ಬಳಿ ಇತ್ತು ಸಾರ್! ಆದರೆ ಏನು ಮಾಡುವುದು! ನಮ್ಮ ಕಂಪನಿ ಗುಂಡುಮುಳುಗು ಗ್ರಾಮದಲ್ಲಿ ಭಕ್ತಪ್ರಹ್ಲಾದ ನಾಟಕವನ್ನು ಆಡುತ್ತಿದ್ದಾಗ ಒಂದು ರಾತ್ರಿ ಕಳ್ಳರ ತಂಡ ಧಾಳಿ ನಡೆಸಿ ಲೂಟಿ ಮಾಡಿತು. ಕಳ್ಳರು ಚಿಕ್ಕಪುಟ್ಟ ಸಾಮಾನುಗಳೊಂದಿಗೆ ಅದನ್ನೂ ಅಪಹರಿಸಿದರು. ನಮ್ಮ ತಂದೆ ನರೇಂದ್ರಸಿಂಗ್ ಆ ಹಿಡಿಗತ್ತಿಯನ್ನು ಕನವರಿಸುತ್ತಲೇ ಪ್ರಾಣಬಿಟ್ಟರು. ಅದೆಲ್ಲ ನಡೆದದ್ದು ಇಪ್ಪತ್ತು ವರ್ಷಗಳ ಹಿಂದೆ. ಆದರೆ ಅದು ಕಾಣೆಯಾದಂದಿನಿಂದ ನಮ್ಮ ಕಂಪನಿಗೆ ಈ ದುರ್ಗತಿ ಒದಗಿದೆ ಸಾರ್! ಅದೆಲ್ಲ ಈಗ ಯಾಕೆ ಬಿಡಿ" ಎಂದು ಹೇಳುತ್ತ ಮ್ಲಾನವದನನಾದ, ಆತನ ಕಣ್ಣುಗಳಲ್ಲಿ ಅಶ್ರುಬಿಂದುಗಳೊಂದಿಗೆ ಮಿಂಚಿನ ಬೆಳಕು ಸಹ ಗೋಚರಿಸಿತು.

ಆತನ ಮಾತುಗಳನ್ನಾಲಿಸಿದ ನಾನು ಒಂದು ಕ್ಷಣ ಗಾಬರಿಗೊಂಡೆ. ಅವನ ಕಣ್ಣುಗಳಲ್ಲಿ ಚೂರಿ ತೆಕ್ಕನೆ ಮೈದೋರಿ ಮರೆಯಾದಂತೆ ಭಾಸವಾಯಿತು. ಅದೇ ಇದಾಗಿದ್ದರೆ! ಇದೇ ಅದಾಗಿದ್ದರೆ! ಅನುಮಾನ ಕಾಡಿತು. "ನೀನು ಅದನ್ನು ಖುದ್ದ ನೋಡಿರುವಿ ಏನು?" ಎಂದು ಕೇಳಿದೆ ಭಯ, ಕುತೂಹಲದಿಂದ.

"ನೋಡಿರುವುದು ಮಾತ್ರವಲ್ಲ ಸಾರ್, ಅದರೊಂದಿಗೆ ಒಡನಾಡಿದ್ದೇನೆ! ನನ್ನ ತಂದೆಯವರು ಅದನ್ನು ಧರಿಸಿದರೆಂದರೆ ಸಾಕ್ಷಾತ್ ಹಿರಣ್ಯಕಶಿಪುವೇ ತಾವಾಗಿಬಿಡುತ್ತಿದ್ದರು, ಪ್ರಹ್ಲಾದ ಪಾತ್ರಧಾರಿಯಾದ ನಾನು ಮಾತುಗಳು ಹೊಳೆಯದೆ ತೊದಲುತ್ತ ಕಂಗಾಲಾಗುತ್ತಿದ್ದೆ. ಹಿರಣ್ಯಕಶಿಪು ಆವೇಶದಲ್ಲಿ ಚುಚ್ಚಿದ ಗುರುತು ಇನ್ನೂ ನನ್ನ ಮುಂಗೈ ಮೇಲಿರುವುದು" ಎಂದು ಹೇಳುತ್ತ ತನ್ನ ಬಲಗೈಯನ್ನು ನನ್ನತ್ತ ಚಾಚಿದ, ನೋಡಿದೆ. ಎರಡು ಮೂರು ಇಂಚು ಉದ್ದದ ಗಾಯದ ಕುರುಹು ಅಲ್ಲಿ ನಿಚ್ಚಳವಾಗಿತ್ತು, ಪುನಃ ತಾನೇ ಹೇಳಿದ.

"ವಿಚಿತ್ರವೆಂದರೆ ಅದು ಸುಂದರವಾಗಿತ್ತು, ಆಕರ್ಷಕವಾಗಿತ್ತು ಭಯ ಹುಟ್ಟಿಸುವಂತಿತ್ತು. ಆದರೂ ಅದನ್ನು ಸದಾ ಸೊಂಟದಲ್ಲಿಟ್ಟುಕೊಳ್ಳಲು ಹಾತೊರೆಯುತ್ತಿದ್ದೆ, ಕೆಲವು ಸಲ ಹಿರಿಯರಿಂದ ಬಯ್ಯಿಸಿಕೊಂಡಿರುವುದೂ ಉಂಟು. ಅದರ ನೆನಪು ಇನ್ನೂ ಕಾಡುತ್ತಿದೆ ಸಾರ್! ಅದನ್ನು ಹುಡುಕಿ ಕೊಟ್ಟವರಿಗೆ ಅದರ ಸುಳಿವು ನೀಡಿದವರಿಗೆ ನಗದು ಬಹುಮಾನ ನೀಡುವುದಾಗಿ ಪತ್ರಿಕೆಗಳಲ್ಲಿ ಜಾಹಿರಾತು ಸಹ ಕೊಟ್ಟೆವು. ಆದರೆ ಪ್ರಯೋಜನವಾಗಲಿಲ್ಲ. ಅದು ವಾಸ್ತವವಾಗಿ ಕಾಣೆಯಾಗಿರಬಹುದು, ಆದರೆ ಅದರ ರೂಪ ನನ್ನ ಮನಸ್ಸಿನಲ್ಲಿ ನನ್ನ ಕಣ್ಣುಗಳಲ್ಲಿ ಅಚ್ಚಳಿಯದೆ ಉಳಿದಿದೆ ಸಾರ್. ಸಾಧ್ಯವಿದ್ದಿದ್ದಲ್ಲಿ ಅದನ್ನು ಕಣ್ಣಿನಿಂದ ತೆಗೆದು ತೋರಿಸುತ್ತಿದ್ದೆನೇನೊ!" ಎಂದ, ತನ್ನ ಮಾತುಗಳಲ್ಲಿ ತೀವ್ರತೆ, ಆವೇಶ ಇತ್ತು. ಅವನು ಆಡಿದ ಮಾತುಗಳನ್ನು ಕೇಳಿ ಕುತೂಹಲ ಇಮ್ಮಡಿಸಿತು, ಅನುಮಾನದ ಹೊಗೆ ಸಹ ಕಾಣಿಸಿಕೊಂಡಿತು.

"ಸುಮ್ಮನೆ ಕುತೂಹಲಕ್ಕೆ ಕೇಳುತ್ತಿರುವೆ ಜಲಂಧರ, ನಿನಗೆ ನೆನಪಿದ್ದರೆ ಅದರ ಚೆಹರೆ ವಿವರಿಸುವಿಯಾ! ಅದರ ಒರೆಯ ಮೇಲೆ, ಅಥವಾ ಅದರೊಳಗಿದ್ದ ಚೂರಿಯ ಮೇಲೇನಾದರು ಗುರುತುಗಳಿದ್ದವೆ!" ಎಂದು ಆಪೇಕ್ಷಿಸಿದೆ.

"ಒರೆಯ ಮೇಲೆ ಏನಿತ್ತು ಎಂಬುದನ್ನು ಖಚಿತವಾಗಿ ಹೇಳಲಾರೆ ಸಾರ್! ಒಮ್ಮೆ ನೋಡಿದವರನ್ನು ಮರುಳಾಗಿಸುವಷ್ಟು ಕಲಾತ್ಮಕವಾಗಿತ್ತು ಅದರ ಒರೆ. ಅದರ ಮೇಲೆ ಪಂಚಲೋಹ ಮಿಶ್ರಣದ ಬಳ್ಳಿಗಳಿದ್ದವು. ಹಿಡಿ ನಡುವೆ ಉದ್ದವಾಗಿ ಒಂದೇ ಒಂದು ವಾಕ್ಯವಿತ್ತು. ಅದೋ ಐದಾರು ಶಬ್ದಗಳ ವಾಕ್ಯ! ಅವು ತೆಲುಗೋ ಕನ್ನಡವೋ ಸಂಸ್ಕೃತವೋ ಅಥವಾ ಪರ್ಷಿಯನ್ ಭಾಷೆಯವೋ! ಸರಿಯಾಗಿ ನೆನಪಿಲ್ಲ. ಆ ಮಾಯಾವಿ ಆಯುಧ ತಾನು ಇರುವಷ್ಟೂ ಕಾಲ ನಮಗೆ ಒಳ್ಳೆಯದನ್ನು ಮಾಡಿತೇ ಹೊರತು ಕೆಟ್ಟದ್ದನ್ನು ಮಾಡಲಿಲ್ಲ. ನಮ್ಮಂಥ ಕ್ಷತ್ರಿಯರನ್ನು ಹೊರತುಪಡಿಸಿದರೆ ಅದು ಬೇರೆಯವರಿಗೆ ಒಳ್ಳೆಯದನ್ನು ಮಾಡಿರಲಾರದು ಎನ್ನುವುದಂತೂ ನಿಜ. ಚಂಚಲ ಸ್ವಭಾವದ ಅದು ಬೇರೆಯವರ ಬಳಿ ಇರುವುದೋ! ದೇಶದಿಂದ ಪಲಾಯನ ಮಾಡಿರುವುದೋ! ಅಥವಾ!" ಹೇಳುತ್ತ ಒಂದು ಕ್ಷಣ ಕಣ್ಣುಗಳನ್ನು ಮುಚ್ಚಿ ತೆರೆದ, ನಿಟ್ಟುಸಿರುಬಿಟ್ಟು ಪುನಃ ಹೇಳಿದ "ಹೋಗಲಿಬಿಡಿ ಸಾರ್! ಯಾಕೆ ಅದರ ನೆನಪು ಮಾಡಿಕೊಟ್ಟಿರೆಂಬುದು ತಿಳಿಯದು! ಅದೆಲ್ಲ ನೆನಪು ಮಾಡಿಕೊಂಡರೇನೆ ಮನಸ್ಸಿಗೆ ನೋವಾಗುವುದು" ಪುನಃ ನಿಟ್ಟುಸಿರುಬಿಟ್ಟು ನೇರವಾದನು.

ಬಳಿಕ ನಮ್ಮಿಬ್ಬರ ನಡುವೆ ಮೌನ ಆವರಿಸಿತು. ವಿಷಯಕ್ಕೆ ಸಂಬಂಧಿಸಿರದಿದ್ದರೂ ನಾನು ಅದನ್ನು ಪ್ರಸ್ತಾಪಿಸಿದ್ದು ಅಪ್ರಾಸಂಗಿಕವೆನಿಸಿತು. ಅದುವರೆಗೆ ತಗ್ಗಿಸಿದ್ದ ತಲೆಯನ್ನು ಮೆಲ್ಲಗೆ ಎತ್ತಿದ, ನನ್ನ ಕಡೆ ದಿಟ್ಟಿಸಿ ನೋಡುತ್ತ ಕೇಳಿದ "ಸಾರ್ ಆಯುಧಗಳನ್ನು ಅದರಲ್ಲೂ ಆ ಚೂರಿಯನ್ನು ಯಾಕೆ ನೆನಪು ಮಾಡಿಕೊಂಡಿರೆಂಬುದು ಅರ್ಥವಾಗುತ್ತಿಲ್ಲ. ನಿಮಗೂ ಆಯುಧಗಳಿಗೂ ನಡುವೆ ಏನಾದರು ಮನಸ್ತಾಪ!" ಎಂದು ಹೇಳುತ್ತಿದ್ದವನು ಆಡಲಿದ್ದ

ಮಾತುಗಳನ್ನು ಉಪಸಂಹರಿಸಿಕೊಂಡ. ಆಯುಧಗಳ ಗೋದಾಮು ಮನುಷ್ಯ ರೂಪ ಪಡೆದು ತನ್ನೆದುರು ಇರುವುದೇನೋ ಎಂಬಂತೆ ನೋಡಲಾರಂಭಿಸಿದ, ಗಾಬರಿ ಹೆಚ್ಚಿಸಿದ. ಅವನ ಆ ನೋಟ ನನ್ನನ್ನು ಆತಂಕಕ್ಕೆ ಈಡು ಮಾಡಿತು. ತಲೆ ತಗ್ಗಿಸುವುದು ಎತ್ತುವುದು ವಿಲಕ್ಷಣ ಗಾಂಭೀರ್ಯ ತಳೆಯುವುದು ಮುಂದುವರೆಸಿದೆ. ತಾನೆಲ್ಲಿ ನನ್ನ ಮನಸ್ಸಿನೊಳಗಿರುವ ಮನೆಯೊಳಗಡಗಿರುವ ಚೂರಿಯ ಪತ್ತೆ ಹಚ್ಚಿದನೋ ಎಂಬ ಭಯ ಒಂದು ಕ್ಷಣ ನನ್ನನ್ನು ಕಾಡಿತು. ಸ್ವಲ್ಪ ಚೇತರಿಸಿಕೊಂಡು ಹೇಳಿದೆ:

"ಪ್ರತಿಯೊಂದು ನಾಟಕಕ್ಕೂ ಒಂದಲ್ಲಾ ಒಂದು ಆಯುಧದ ಅಗತ್ಯವಿರುತ್ತದೆ ತಾನೆ, ಅದಕ್ಕೆ ಕೇಳಿದೆ ಮಹಾರಾಯ! ನೀನು ಸದಾರಮೆಯನ್ನು ಪ್ರಸ್ತಾಪಿಸದಿದ್ದಲ್ಲಿ ನಾನು ಆಯುಧಗಳನ್ನು ನೆನಪು ಮಾಡಿಕೊಳ್ಳುತ್ತಿರಲಿಲ್ಲವೇನೊ! ಅದೂ ಅಲ್ಲದೆ ನಿಮ್ಮದು ಕ್ಷತ್ರೀಯ ರಜಪೂತರ ವಂಶ! ಅಗತ್ಯವಿದ್ದರೂ ಇರದಿದ್ದರೂ ಅಲಂಕಾರಕ್ಕಾದರೂ ಆಯುಧಗಳನ್ನು ಇಟ್ಟುಕೊಂಡಿರುತ್ತೀರೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ನಿಜ ಹೇಳಬೇಕೆಂದರೆ ಕ್ಷತ್ರಿಯರಲ್ಲದ ನಮ್ಮಂಥವರ ಮನೆಯಲ್ಲೂ ಹತ್ತಾರು ಆಯುಧಗಳಿದ್ದವಪ್ಪಾ! ಹತ್ತಾರು ವಿಧದ ಚೂರಿಗಳು ತರಾವರಿ ಖಡ್ಗ ಗುರಾಣಿಗಳು ಕಂಚಿನ ಹಿಡಿಕೆಗಳುಳ್ಳ ಈಟಿಗಳು ಈಗಲೂ ನಮ್ಮ ಮನೆಯಲ್ಲಿವೆ ಜಲಂಧರ. ಶಸ್ತ್ರಗಳನ್ನು ಸಂಗ್ರಹಿಸುವ ಖಯಾಲಿ ತಾತಮುತ್ತಾತ ಕಾಲದಿಂದ ಬಂದಿರುವುದಂತೆ, ಅವುಗಳ ಕಥೆಗಳನ್ನು ಹೇಳುತ್ತ ಕಾಲಕ್ಷೇಪ ಮಾಡುವುದು ನಮ್ಮ ತಂದೆಯ ನೆಚ್ಚಿನ ಹವ್ಯಾಸ. ನಿನ್ನ ಹಾಗೆ ಚಿಕ್ಕಂದಿನಲ್ಲಿ ನಾನೂ ಅವುಗಳೊಂದಿಗೆ ಒಡನಾಡಿರುವುದುಂಟು, ಅದಕ್ಕೆ ಕೇಳಿದೆ. ತಾಯಿಕರುಳು, ಹೆತ್ತವ್ವ ಏನು ಕೊಟ್ಟರು ಸಿಕ್ಕಾಳು ಎಂಬಂಥ ನಾಟಕಗಳು ಆಯುಧಗಳಿಲ್ಲದೆ ನಡೆಯಲಿಕ್ಕೆ ಸಾಧ್ಯವೆ! ನಾಟಕಗಳಲ್ಲಿ ನಕಲಿ ಆಯುಧಗಳನ್ನು ಬಳಸುವುದಕ್ಕೆ ಬದಲು ಅಸಲಿ ಆಯುಧಗಳನ್ನು ತೋರಿಸುತ್ತ ಅಭಿನಯಿಸಿದರೆ ಪರಿಣಾಮಕಾರಿಯಾಗಿರುತ್ತದೆ ಅಲ್ಲವೆ!" ಎಂದು ಸಾಂದರ್ಭಿಕವಾಗಿ ಸಮರ್ಥಿಸಿಕೊಂಡೆ. ಕಣ್ಣುಗಳನ್ನು ತೆರೆದೇ ಚೂರಿಯನ್ನು ಧೇನಿಸಿದೆ, ಒಳಗಡೆ ಹೋದಂತೆಯೂ, ಅದನ್ನು ಅಲ್ಲಿಂದ ತಂದು ಅವನಿಗೆ ಅರ್ಪಿಸಿದಂತೆಯೂ ಭ್ರಮಿಸಿ ವಾಸ್ತವಕ್ಕೆ ಮರಳಿದೆ.

"ನೀವು ಹೇಳುತ್ತಿರುವುದೇನೋ ಸರಿ! ಆದರೆ ಅಸಲಿ ಆಯುಧಗಳನ್ನು ಎಲ್ಲಿಂದ ತರುವುದು! ಚೂರಿ ಕಳುವಾದ ಘಟನೆಯನ್ನು ಮರೆಯಲಿಕ್ಕಾಗುತ್ತಿಲ್ಲ. ಅದರ ಚಿಂತೆಯಲ್ಲಿಯೇ ಅಪ್ಪ ಕೊರಗೀ ಕೊರಗಿ ಪ್ರಾಣಬಿಟ್ಟರು" ಎನ್ನುತ್ತ ಕಣ್ಣಲ್ಲಿ ನೀರು ತಂದುಕೊಂಡನು.

"ಪೋಲಿಸರಿಗೆ ದೂರು ಕೊಡಬಹುದಿತ್ತಲ್ಲವೆ!"

"ಹೇಗೆ ಕೊಡುವುದು ಸಾರ್! ಅದು ಮೊದಲೇ ಪೂರ್ವಕಾಲದ್ದು, ಅಂಥ ವಸ್ತುಗಳನ್ನು ಅನಧಿಕೃತವಾಗಿ ಇಟ್ಟುಕೊಳ್ಳುವುದು ಅಪರಾಧ, ಪೋಲಿಸರ ಭಯ ಬೇರೆ. ಆ ಕಾರಣದಿಂದ ದೂರು ಕೊಡಲಿಕ್ಕೆ ಹೋಗಿರಲಿಕ್ಕಿಲ್ಲ ನಮ್ಮ ತಂದೆಯವರು"

"ಹೌದು ನೀನು ಹೇಳುವುದೇ ಸರಿ, ಕಳ್ಳರ ಭಯಕ್ಕಿಂತ ಪೋಲಿಸರ ಭಯ ಹೆಚ್ಚು ಅಪಾಯಕಾರಿ! ಚೂರಿ ಎಲ್ಲಿರಬಹುದೆಂದು ಊಹಿಸು, ಕುತೂಹಲಕ್ಕೆ ಕೇಳುತ್ತಿರುವೆ"

"ಈ ದೇಶದಲ್ಲಿರಲಾರದು ಸಾರ್, ಅದಿದ್ದರೆ ಲಂಡನ್ ಅಮೇರಿಕಾದ ಮ್ಯೂಜಿಯಂಗಳಲ್ಲಿ!" ಎನ್ನುತ್ತ ನಿಟ್ಟುಸಿರುಬಿಟ್ಟನು. ಭಾರತದ ಪ್ರಾಚೀನ ಪಳೆಯುಳಿಕೆಗಳಿರುವ ಪಾಶ್ಚಿಮಾತ್ಯ ದೇಶಗಳಲ್ಲಿನ ಪ್ರಾಚ್ಯವಸ್ತುಸಂಗ್ರಹಾಲಯಗಳನ್ನು ಕಲ್ಪಿಸಿಕೊಂಡೆ. ಪ್ರಾಚೀನತೆಯನ್ನು ಆನಂದಿಸುವ, ಅನುಭವಿಸುವ ಪಶ್ಚಿಮ ದೇಶಗಳ ಆಧುನಿಕ ಮನಸ್ಸನ್ನು ಊಹಿಸಿಕೊಂಡೆ.

ಅಯ್ಯೋ ಆ ನಾಟಕದವನಿಗೆ ಕೊಡಲು ಯೋಚಿಸುತ್ತಿರುವೆಯಲ್ಲವೋ! ನಾನು ಪ್ರದರ್ಶಕ ವಸ್ತುವಲ್ಲ ಎಂಬುದನ್ನು ಮರೆಯಬೇಡವೋ ಮೂರ್ಖ! ಎಂದು ಕೇಳಿದಂತಾಯಿತು. ಅದರ ಮನವಿಯನ್ನು ತಿರಸ್ಕರಿಸಲು ಇದೇ ಸರಿಯಾದ ಸಮಯ. ಅದನ್ನು ಇವನಿಗೆ ಕೊಟ್ಟು ಕೈತೊಳೆದುಕೊಳ್ಳುವುದೇ ವಾಸಿ.

"ಜಲಂಧರ ಈ ಕ್ಷಣವೇ ಅದು ಅಥವಾ ಅದನ್ನೇ ಹೋಲುವಂಥಾದ್ದು ನಿನಗೆ ಸಿಕ್ಕರೆ!" ಏಂದೆ, ಉಕ್ಕಿ ಬಂದ ನಗೆಯನ್ನು ಉಪಸಂಹರಿಸಿಕೊಳ್ಳುತ್ತ. ನನ್ನ ಮಾತಿನಿಂದ ಅವನ ಮುಖ ಅರಳಿತು. ಯುದ್ಧ ಗೆದ್ದವನಂತೆ ಒಂದು ಕ್ಷಣ ಸಂಭ್ರಮಿಸಿದ. ನನ್ನ ಮುಖವನ್ನು ಎವೆಯಿಕ್ಕದೆ ನೋಡುತ್ತ.. "ಏನು ಸಾರ್ ನೀವು ಹೇಳುತ್ತಿರುವುದು! ನನಗೆ ನಂಬಲಿಕ್ಕಾಗುತ್ತಿಲ್ಲ. ಒಂದಂತೂ ಸತ್ಯ ಸಾರ್, ಅದು ಏನಾದರು ದೊರಕಿದರೆ ಪುನಃ ನಮ್ಮ ಕಂಪನಿಗೆ ಪುನರ್ಜನ್ಮ ಕೊಡುವೆ. ಅಥವಾ ಅದನ್ನು ಹಂಪಿಗೆ ಒಯ್ದು ವಿರೂಪಾಕ್ಷನ ಸನ್ನಿಧಿಗೆ ಅರ್ಪಿಸುವೆ, ಇದರಿಂದ ಅಪ್ಪನ ಆತ್ಮಕ್ಕೆ ಶಾಂತಿ ಸಿಕ್ಕಂತಾಗುವುದು!" ಎಂದು ಅತಿ ಉತ್ಸಾಹದಿಂದ ಹೇಳಿದ, ಒಂದು ಕ್ಷಣ ಮೌನವಹಿಸಿದ ಬಳಿಕ "ಸಾರ್ ನೀವು ಹೇಳುತ್ತಿರುವುದನ್ನು ಕೇಳಿದರೆ!" ಎಂದು ಮಾತಿನ ಉತ್ತರಾರ್ಧವನ್ನು ನುಂಗಿದ.

ಅವನ ಸಂದೇಹದಿಂದ ನನ್ನಲ್ಲಿ ಮಂಕು ಆವರಿಸಿತು. ನಾನು ಹೇಳಿದ್ದೋ ತುಟಿ ಜಾರಿದ ಪರಿಣಾಮವಾಗಿ, ಯಾವುದೋ ಒಂದು ಅದೃಶ್ಯ ಶಕ್ತಿ ನನ್ನಿಂದ ಹೇಳಿಸಿದ ಪರಿಣಾಮವಾಗಿ. ಹೇಳಿದ್ದು ಹೇಳಿಯಾಗಿರುವುದು. ಅದನ್ನು ಇವನಿಗೆ ಕೊಡದೆ ಬೇರೆ ದಾರಿ ಇಲ್ಲ, ಅದರ ವಾರಸುದಾರ ಶರಭ ಮರಳಿ ಬರುವ ಸಾಧ್ಯತೆ ಇಲ್ಲ, ಅದನ್ನು ಮನೆಯಲ್ಲಿಟ್ಟುಕೊಂಡು ಉಭಯ ಸಂಕಟ ಅನುಭವಿಸುವುದಕ್ಕಿಂತ ಕೊಟ್ಟು ನಿರಮ್ಮಳತೆಯಿಂದ ಇರುವುದು ಒಳ್ಳೆಯದು. ಅದನ್ನು ಪಡೆದವನ ಜೀವನದಲ್ಲಿ ಸಂಭವಿಸುವ ವಿದ್ಯಮಾನಗಳ ಬಗ್ಗೆಯೂ ಯೋಚಿಸಿದೆ. ಜಲಂಧರ ತನ್ನ ಕ್ಷತ್ರಿಯತ್ವದಿಂದ ಅದಕ್ಕೆ ಹೊಂದಿಕೊಳ್ಳುವನು, ಅಥವಾ ಅದೇ ತನ್ನ ರಕ್ತಪಿಪಾಸುತನವನ್ನು ತ್ಯಜಿಸಬಹುದು. ನನ್ನ ನಿರ್ಧಾರವನ್ನು ಮನಸ್ಸಿನಲ್ಲಿದ್ದ ಶರಭ ಅಲಿ ಜೀವೋತ್ತಮರಾವ್ ವನಜಾಕ್ಷಿ ವಗೈರೆಗಳು ಖಂಡಿಸುತ್ತಿರುವಂತೆ ಭಾಸವಾಯಿತು. ಏನೇ ಆಗಲಿ!

ಅಂತಿಮವಾಗಿ ಒಳಗಡೆ ಹೋಗಿ ನಡುಗುವ ಕೈಗಳಿಂದ ಹಿಡಿದು ಅದು ಇದಲ್ಲದಾಗಿರಲಿ, ಇದು ಅದಲ್ಲದಾಗಿರಲಿ ಎಂದುಕೊಳ್ಳುತ್ತ ಹೊರಗಡೆ ಕಾಣಿಸಿಕೊಂಡೆ. ಸಹಸ್ರ ಯಜ್ಞದ ಫಲವನ್ನು ಧಾರೆ ಎರೆಯುತ್ತಿರುವೆನೇನೋ ಎನ್ನುವಂತೆ ಅವನ ಕಡೆ ನನ್ನೆರಡೂ ಕೈಗಳನ್ನು ಚಾಚಿದೆ. ಅವನೂ ಕೈಗಳನ್ನು ಬೊಗಸೆ ರೀತಿಯಲ್ಲಿ ಒಡ್ಡಿದನಾದರೂ ಮುಟ್ಟುವ ಧೈರ್ಯ ಸಾಲದೆ ಕಂಪಿಸಿದ. ಕಣ್ಣುಗಳನ್ನು ಸಾಧ್ಯವಾದಷ್ಟು ವಿಸ್ತರಿಸಿ ರೆಪ್ಪೆಯಾರಿಸದೆ ನೋಡಿದ. ತೆರೆದಿದ್ದ ತನ್ನ ಕಣ್ಣುಗಳಲ್ಲಿ ನೀರು ತುಂಬಿದ್ದಾಗಲೀ ಅದು ಜಲಪಾತದೋಪಾದಿಯಲ್ಲಿ ಆ ವಸ್ತುವಿನ ಮೇಲೆ ಸುರಿಯಲಾರಂಭಿಸಿದ್ದಾಗಲೀ ವಿಳಂಬವಾಗಲಿಲ್ಲ. ಪಾಪವಿನಾಶಿನಿ ತೀರ್ಥದಲ್ಲಿ ಮಿಂದು ತನ್ನ ಮೇಲಿನ ನೆತ್ತರ ಕಲೆಗಳನ್ನು ತೊಳೆದುಕೊಳ್ಳುತ್ತಿರುವುದೇನೋ ಎನ್ನುವ ರೀತಿಯಲ್ಲಿ ನಿಚ್ಚಳಗೊಳ್ಳತೊಡಗಿತು. ಭಯ ಹಿಂಜರಿಕೆ ಉತ್ಸಾಹಗಳಂಥ ಸಂವೇದನೆಗಳನ್ನು ತನ್ನ ಕಣ್ಣುಗಳು ಪಲ್ಲವಿಸಲಾರಂಭಿಸಿದವು. ಬೆವರತೊಡಗಿದ್ದ ಕೈಗಳನ್ನು ಮುಂದಕ್ಕೆ ಚಾಚುವುದು ಉಪಸಂಹರಿಸಿಕೊಳ್ಳುವುದು ನಡೆಸಿದ. ಒಂದು ಹೆಜ್ಜೆ ಮುಂದಕ್ಕೆ ಎರಡು ಹೆಜ್ಜೆ ಹಿಂದಕ್ಕೆ ಇಕ್ಕುವುದು ನಡೆಸಿ ಅಂತಿಮವಾಗಿ ನಿಶ್ಚಲಗೊಂಡ. ನಂತರ ಮೆಲ್ಲಮೆಲ್ಲಗೆ ಅಂತೂ ಸ್ಪರ್ಶಿಸಿಯೇಬಿಟ್ಟನು. ಅದನ್ನು ಭಕ್ತಿಪೂರ್ವಕವಾಗಿ ಪಡೆದು ಅದಕ್ಕೆ ತನ್ನೆರಡೂ ತುಟಿಗಳಿಂದ

ಭಾವುಕವಾಗಿ ಉತ್ಕಟವಾಗಿ ಚುಂಬಿಸಿದ, ತನ್ನ ಕಣ್ಣುಗಳಿಗೆ ಒತ್ತಿಕೊಂಡ. ಬಳಿಕ ತನ್ನೆರಡೂ ಕಣ್ಣುಗಳಿಂದ ಕೃತಜ್ಞತೆಯ ಹೊಳೆಯನ್ನು ಹರಿಸಿದ.

"ಜಲಂಧರ ಇದು ನಿನ್ನ ಪೂರ್ವಿಕರದ್ದು ಹೌದೋ ಅಲ್ಲವೋ! ಅದೇ ಇದು ಎಂದಾಗಲೀ, ಇದೇ ಅದು ಎಂದಾಗಲೀ ಭಾವಿಸಿಕೊಳ್ಳಬೇಡ. ಇದು ನನ್ನನ್ನು ಸೇರಿಕೊಂಡಿದ್ದೊಂದು ದೊಡ್ಡ ಕಥೆ! ಅದನ್ನು ಹೇಳದಿದ್ದರೆ ನಾನು ಕ್ಷೇಮ, ಕೇಳಿಸಿಕೊಳ್ಳದಿದ್ದರೆ ನೀನೂ ಕ್ಷೇಮ!" ಎಂದೆ ಸ್ವಲ್ಪ ಕಠೋರವಾಗಿ. ನನ್ನ ಮಾತುಗಳನ್ನು ಕೇಳಿಸಿಕೊಳ್ಳುತ್ತಲೇ ಚೂರಿಯನ್ನು ಉತ್ತರೀಯದಲ್ಲಿ ಮರೆಮಾಚಿ ತನ್ನ ಕಂಕುಳಲ್ಲಿರಿಸಿಕೊಂಡು ಹೇಳಿದ "ಋಷಿಯ ಮೂಲದಂತೆ ಯಾವುದೇ ಆಯುಧದ ಪೂರ್ವಾಪರ ಹುಡುಕಲೂಬಾರದು ಸಾರ್! ಅದೇ ಇದೋ ಇದೇ ಅದೋ! ಒಟ್ಟಿನಲ್ಲಿ ಯಾವುದೋ ಒಂದು. ನಮ್ಮ ಮುತ್ತಾತ ಅರ್ಜುನಸಿಂಗ್ ಕಮಲಾಪುರದಲ್ಲಿ ಇನ್ನೂ ಇರುವರು. ಅವರು ಮಾತ್ರ ಇದರ ಇತಿವೃತ್ತ ಹೇಳಲು ಸಾಧ್ಯ! ಇದರ ಪೂರ್ವಾಪರ ತಿಳಿದು ಏನಾಗಬೇಕಿದೆ ಈಗ! ನೀವು ನೀಡಿದಿರಿ ನಾನು ಪಡೆದೆ, ಇಷ್ಟು ಮಾತ್ರ ಸತ್ಯ"

"ಆದರೆ ಇನ್ನೊಂದು ಮಾತು ಜಲಂಧರ!"

"ಏನು ಹೇಳಿ ಸಾರ್!"

"ನಾನು ಕೊಟ್ಟಿರುವ ಸಂಗತಿಯನ್ನು ಯಾರಿಗೂ ಹೇಳಬಾರದು!"

"ಅಷ್ಟೇ ತಾನೆ! ನಾನು ಏನೋ ಭಾವಿಸಿದ್ದೆ. ಆಯ್ತು ಬಿಡಿ ಸಾರ್ ನಿಮ್ಮಿಷ್ಟ, ಯಾರಿಗೂ ಹೇಳುವುದಿಲ್ಲ" ಎಂದು ಆಶ್ವಾಸನೆ ನೀಡಿದ. ಸಮಾಧಾನದ ಉಸಿರುಬಿಟ್ಟೆ. ಇನ್ನೇನು ಅಲ್ಲಿಂದ ಹೊರಡಲಿದ್ದ ಅವನನ್ನು ನಿಲ್ಲಿಸಿ ಹೇಳಿದೆ "ಹ್ಹಾಂ! ಅಂದ ಹಾಗೆ ನೀನದನ್ನು ಜೋಪಾನವಾಗಿ ನೋಡಿಕೊ! ತೊಂದರೆ ಕೊಟ್ಟಲ್ಲಿ ಬಾವಿಗೆಸೆದುಬಿಡು, ಅದೂ ನೀರಿರುವ.."

++++

ಮರುದಿವಸ ನನಗೆ ವಾಗಿಲಿಯಲ್ಲಿರಲಾಗಲಿಲ್ಲ. ಇದ್ದರೂ ನಡೆಯುತ್ತಿತ್ತು. ಅಂಥ ತುರ್ತಾದ ಕೆಲಸ ಆಲೂರಲ್ಲಿರಲಿಲ್ಲ. ಹಾಡುತ್ತ ನರ್ತಿಸುತ್ತ ಕಳ್ಳತನಕ್ಕೆ ಹೋಗುವ ಸದಾರಮೆಯ ಕಳ್ಳನನ್ನು ನೋಡಬಾರದೆಂದೋ! ಸದಾರಮೆ ಪಾತ್ರದಲ್ಲಿ ಪದ್ಮಾವತಿಯನ್ನು ನೋಡುವ ಹಿಂಸೆಯಿಂದ ತಪ್ಪಿಸಿಕೊಳ್ಳಲೆಂದೋ! ಚೂರಿಯೊಡನೆ ಸಂಭ್ರಮಿಸುವ ಜಲಂಧರನನ್ನು ನೋಡದಿರಲೆಂದೋ! ಆ ದಿವಸ ಮಧ್ಯಾಹ್ನ ಬಿಪಿಎಂ ರಾಘಪ್ಪಸ್ವಾಮಿ ಅಪ್ಪನಿಂದ ವಕ್ಕರಿಸಬಹುದಾದ ಮಹರಾಜರಾಜಶ್ರೀ ಎಂದು ವಕ್ಕಣಿಕೆಯಿಂದ ಆರಂಭಗೊಳ್ಳುವ ಇನ್‌ಲ್ಯಾಂಡ್ ಲೆಟರನ್ನು ನನ್ನ ಗೈರುಹಾಜರಿಯಲ್ಲಿ ಮನೆಯೊಳಗೆ ಎಸೆಯಲು ಅನುಕೂಲವಾಗಲೆಂದೋ! ಸೆವೆನ್ನೆವೆನ್ ಬಾರಿನಲ್ಲಿ ಬೀರು ಪ್ರಾಶನ ಮಾಡಿ ಸಾಂತ್ವನ ಪಡೆಲೆಂದೋ! ಕ್ರಾಸಿನ ನಿರ್ಜನ ಪ್ರದೇಶದಲ್ಲಿ ಎರಗಬಹುದಾದ ಮಾಸನೂರು ಹಾದಿಬಡುಕರ ಮೇಲೆ ಸೈಕಲ್ ಚೈನನ್ನು ಪ್ರಯೋಗಿಸಿ ವರ್ತಮಾನದ ಕೋಪವನ್ನು ತೀರಿಸಿಕೊಳ್ಳಲೆಂದೋ! ಅಕಾಲಮರಣಕ್ಕೆ ತುತ್ತಾಗಲೆಂದೋ! ಹೀಗೆ ನಿಷ್ಕಾರಣವಾಗಿ ವಾಗಿಲಿಯಿಂದ ಮಟಮಟ ಮಧ್ಯಾಹ್ನ ಹೊರಟೆ, ಅದೂ ಯಾರೊಬ್ಬರಿಗೆ ಸುಳಿವು ನೀಡದೆ. ಕ್ರಾಸ್ ರೋಡ್ ತಲುಪಿದೆ, ಯಾವುದೇ ಅವಘಡ ಸಂಭವಿಸಲಿಲ್ಲ, ಕರ್ಮಕ್ಕೆ ಹೊತ್ತಿಗೆ ಸರಿಯಾಗಿ ಇಲಾಹಿ ಬಂದುಬಿಡುವುದೆ! ಡಣಾಪುರ ಕ್ರಾಸಿನಲ್ಲಿ ಚಂದ್ರ ಸಹ!

ತಲುಪಿದಾಗ ಅಗತ್ಯಕ್ಕಿಂತ ಹೆಚ್ಚು ಹೊತ್ತಾಗಿತ್ತು. ಸುತ್ತ ನೋಡಿದೆ. ಅದೇ ಆಲೂರು! ಅದೇ ಜನ! ಅವೇ ರಸ್ತೆಗಳು! ಅವೇ ಸುದ್ದಿಗಳು! ತಾಲ್ಲೂಕು ಪಂಚಾಯಿತಿ ಕಛೇರಿಯಲ್ಲಿ ಅದೇ

ಶಿಕ್ಷಣಾಧಿಕಾರಿ ವೇಣುಗೋಪಾಲರಾವ್! ಅದೇ ಕ್ಲಾರ್ಕ್ ದೇವದಾನಂ! ಅದೇ ಜವಾನ ಓಬಯ್ಯ! ಗೋಡೆಗಳ ಮೇಲೆ ಅವೇ ಗಾಂಧೀಜಿ, ಇಂದಿರಾಗಾಂಧಿ, ವಿವೇಕಾನಂದ ವಗೈರೆಗಳು! ಅವೇ ಟೇಬಲ್ಲುಗಳು ಕುರ್ಚಿಗಳು ಕಡತಗಳು! ಅವೇ ಮಧ್ಯಾಹ್ನ ಬಿಸಿಭೋಜನ, ಮಕ್ಕಳ ಹಾಜರಾತಿಗೆ ಸಂಬಂಧಿಸಿದ ಮಾಸಿಕ ವಿವರಗಳು! ಹತ್ತಿಪ್ಪತ್ತರ ನೋಟುಗಳ ವಿನಿಮಯ ಕ್ರಿಯಾಕಲಾಪಗಳು!

ಎಲ್ಲಾ ಮುಗಿಸಿಕೊಂಡು ಅಲ್ಲಿಂದ ಬಸ್‌ನಿಲ್ದಾಣದ ಕಡೆ ದಾಪುಗಾಲು ಹಾಕಿದೆ. ರಸ್ತೆ ಇಕ್ಕೆಲದಲ್ಲಿ ನೆತ್ತರಸ್ಕೃತಿಯ ಅವೇ ಕಂದಕಗಳು! ನೆನಪಿನಲ್ಲಿ ಕಳೆದ ವರ್ಷದ ಹಿಂದೆ ಅದೇ ದಿವಸ ಅದೇ ಹೊತ್ತು ಅದೇ ಬರ್ಬರ ರೀತಿಯಲ್ಲಿ ಕೊಲೆಗೀಡಾದ ಹಲಗೇರಿ ವೀರಾರೆಡ್ಡಿ! ರಕ್ತಸಿಕ್ತ ಹತಾರಗಳೊಡನೆ ಜಲತವನಿಧಿ ಕಡೆ ನಡೆದು ಹೋದ ನಿರ್ಧಯಿ ಕೊಲಗಡುಕರು! ಅದೊಂದು ಸಾಮಾನ್ಯ ಸಾರ್ವಜನಿಕ ಕ್ರಿಯಾಕಲಾಪವೆಂಬಂತೆ ವೀಕ್ಷಿಸಿದ ಜನರು! ಹೆಜ್ಜೆಹೆಜ್ಜೆಗೆ ನೆನಪುಗಳನ್ನು ಆವಹಿಸಿಕೊಳ್ಳುತ್ತ ವಿಸರ್ಜಿಸುತ್ತ ಹೊರಟು ಸೇರಿದೊಡನೆ..

"ಓಹ್ ಕಥೆಗಾರರು! ಎಲ್ಲಿ ಹೋಗಿದ್ದಿರಿ ಸ್ವಾಮಿ, ತಿಂಗಳಾಯಿತು ನಿಮ್ಮನ್ನು ನೋಡದೆ! ಅಲಿ ಸಾಹೇಬರಿಗಂತೂ ನಿಮ್ಮದೇ ಕನವರಿಕೆ ಮೇಸ್ಟ್ರೆ, ಬನ್ನಿ ಬನ್ನಿ, ಕಾಫಿಗಿಂತ ಮೊದಲು ಮಸಾಲೆಗೆ ಆರ್ಡರು ಕೊಡಲೇನು! ಇವತ್ತಿನ ಆಂಧ್ರಜ್ಯೋತಿ ನೋಡಿದಿರೋ ಇಲ್ಲವೋ! ಮುಟ್ಟಿದರೆ ಬೆರಳಿಗೆ ರಕ್ತ ಅಂಟುತ್ತೆ ಸ್ವಾಮಿ" ಎನ್ನುತ್ತ ಸ್ವಾಗತಿಸಿದ ಶ್ರೀಕೃಷ್ಣಭವನ್ ಮಾಲಕ ಹೆಬ್ಬಾರ್. ಆರ್ಡರ್ ಮಾಡದಿದ್ದರೂ ಈರಣ್ಣ ಕಾದಕಾವಲಿ ಮೇಲೆ ಭೂಗೋಳಾಕೃತಿಯಲ್ಲಿ ಹಿಟ್ಟು ಸುರುವಿದ, ಬಳಿಕ ತನ್ನ ತುಟಿ ಸಂದಿಯಲ್ಲಿದ್ದ ಗಣೇಶ ತುದಿಗೆ ಕಡ್ಡಿ ಗೀರುತ್ತ ವಾಗಿಲಿಯ ಸಮಾಚಾರ ಆಲಿಸುವ ಸಲುವಾಗಿ ಹತ್ತಿರ ಬರುತ್ತಿರುವಂತೆ ಗೋಚರಿಸಿದ, ಅದೇ ಸಮಯಕ್ಕೆ ಸರಿಯಾಗಿ ಹೆಬ್ಬಾರ್ ನನ್ನೆದುರು ಪೇಪರ್ ಎಸೆದ, ನನ್ನ ಸಮಕ್ಷಮ ಉಗ್ರ ಭಯೋತ್ಪಾದಕನೋರ್ವ ವೃತ್ತಪತ್ರಿಕೆಯ ರೂಪದಲ್ಲಿರುವನೆಂದೆನ್ನಿಸಿತು ನೋಡಿದೊಡನೆ. ಕೂಡಲೆ ತಲೆಯನ್ನು ಒಂದು ಅಡಿ ದೂರಕ್ಕೆ ಎಳೆದುಕೊಂಡೆ. ಕಾರಣ ಅದರಲ್ಲಿ ಪ್ರಕಟವಾಗಿರಬಹುದಾದ ರಕ್ತರಂಜಿತ ವರದಿಗಳನ್ನು ಓದುವುದೆಂದರೆ ಎದೆಯೊಳಗೆ ತರಾವರಿ ಹಿಂಸೆಯ ಪರಿಕರಗಳನ್ನು ಸಂತೆಯಲ್ಲಿಟ್ಟಂತೆಯೇ ಸರಿ! ಆದರೂ ತನ್ನನ್ನು ಕೈಗೆತ್ತಿಕೋ ಮೊಲೆಯುಣಿಸು ಎಂದು ಪೂತನಿಯನ್ನು ಪುಸಲಾಯಿಸಿದ ಕಂದ ಮುಕುಂದನಂತೆ ಅಂಗಲಾಚುತ್ತಿರುವ ವೃತ್ತಪತ್ರಿಕೆ ಎದುರಲ್ಲಿ! ಓದುವುದೋ! ಓದದೆ ಇರುವುದೋ! ಸಂದಿಗ್ಧತೆಯನ್ನು ಅನುಭವಿಸುವುದನ್ನು ಆನಂದಿಸುತ್ತಲೇ ಗಿರಾಕಿಗಳೊಂದಿಗೆ ಒಡನಾಡುತ್ತಿರುವ ಹೆಬ್ಬಾರ ಉಸಿರಳತೆಯಲ್ಲಿ. ಮಗು ತನ್ನ ತಾಯಿಯ ತೋಳ್ತೆಕ್ಕೆಗೆ ಅವಸರಿಸುವಂತೆ, ಹಸಿದವನು ಮೃಷ್ಟಾನ್ನಕ್ಕವಸರಿಸುವಂತೆ, ಕಾಮಿಯೋರ್ವ ಪ್ರೇಯಸಿಯ ಆಲಿಂಗನಕ್ಕವಸರಿಸುವಂತೆ, ಸೀಳುನಾಯಿ ಮಾಂಸದ ಎಂಜಲದ ಕಡೆ ಧಾವಿಸಿವಂತೆ ತೆಕ್ಕನೆ ಪತ್ರಿಕೆಯನ್ನು ಕೈಗೆತ್ತಿಕೊಂಡೆ.

ಕನೂಲು ಬಸ್ ನಿಲ್ದಾಣದಲ್ಲಿ ಕೊಲೆಗೀಡಾಗಿರುವ ಕಪ್ಪಟ್ರಾಳ ವೆಂಕಪ್ಪನಾಯ್ಡುವಿನ ಜೀವಚ್ಛವ ಪತ್ರಿಕೆಯ ಮುಖಪುಟದ ಅರ್ಧಭಾಗವನ್ನು ಆವರಿಸಿದ್ದರೆ, ಕೊಲಿಮಿಗುಂಡ್ಲದ ಕುಖ್ಯಾತ ಫ್ಯಾಕ್ಷನಿಷ್ಟ್ ಭೈರೆಡ್ಡಿ ರಾಜಶೇಖರರೆಡ್ಡಿಯ ಜೀವನ ವಿವರಗಳು ಉಳಿದರ್ಧ ಪುಟದಲ್ಲಿ ಪ್ರಕಟವಾಗಿತ್ತು. ಎರಡನೇ ಪುಟದಲ್ಲಿ ನಲ್ಲಮಲ ಅರಣ್ಯದಲ್ಲಿನ ನಕ್ಸಲೈಟರ ಸಲುವಾಗಿ ಪೋಲಿಸರು ನಡೆಸಿರುವ ಕೂಂಬಿಂಗ್ ಕಾರ್ಯಾಚರಣೆ, ವೆಲುಪನೂರಿನ ಬುಡ್ಡಾ ವೆಂಗಳರೆಡ್ಡಿ ತನ್ನ ಪ್ರತಿಸ್ಪರ್ಧಿ ಚಲ್ಲಾ ರಾಮಕ್ರಿಷ್ಣಾರೆಡ್ಡಿ ಮೇಲೆ ಛೂಬಿಟ್ಟಿರುವ ಸುಪಾರಿ ಹಂತಕರ ವಿವರಗಳು, ಅಲ್ಲಲ್ಲಿ ರೈತರ ಆತ್ಮಹತ್ಯೆಯ ವಿವರಗಳು, ಸಂಪಾದಕೀಯದಲ್ಲಿ ಚಲ್ಲಸಾನಿ

ಪ್ರಸಾದರಾವ್ ತೋಡಿಕೊಂಡಿರುವ ಅದೇ ಅಳಲು! ಇಷ್ಟೆ ತಾನೆ! ಇನ್ನೇನು ಅದನ್ನು ಮಡಚಿ ಇನ್ನೊಂದು ಟೇಬಲ್ಲಿಗೆ ಎಸೆಯಬೇಕೆನ್ನುವಷ್ಟರಲ್ಲಿ ಹೆಬ್ಬಾರ್ ಧಾವಿಸಿ ಬಂದವನೆ..

"ಎಂಥ ಕಥೆ ಬರೆಯುವಿರಿ ಸ್ವಾಮಿ! ನಿಜವಾದ ಐಟಂ ಸುದ್ದಿಯನ್ನೆ ಓದಲಿಲ್ಲ ನೀವು" ಎನ್ನುತ್ತ ಅದನ್ನೆತ್ತಿಕೊಂಡನು, ತನ್ನ ಮೂಗಿನ ತುದಿಗೆ ಜಾರಲಾರಂಭಿಸಿದ್ದ ಚಾಳೇಸವನ್ನು ಪುನಃ ಭ್ರೂಮಧ್ಯೆ ಸರಿಸಿದ, ಇಗೋ ಇಲ್ಲಿ ಎಂದು ತೋರಿಸಿದ. ನೋಡುತ್ತೇನೆ ಅಲ್ಲಿ ಪ್ರಕಟವಾಗಿರುವ ವಾರ್ತೆಯನ್ನು ನಾನು ನಿರೀಕ್ಷಿಸಿರಲಿಲ್ಲ, ಅದೆಂದರೆ ಊಳೂರು ಜಮೀನ್ದಾರ ಪುರುಷೋತ್ತಮರೆಡ್ಡಿಯ ಕೊಲೆಗಾರ ಪೋಲಿಸರ ವಶದಲ್ಲಿರುವ ಸುದ್ದಿ ಪ್ರಕಟವಾಗಿತ್ತು! ಅದೂ ಸಚಿತ್ರವಾಗಿ. ವಿವಿಧಾಂತರಗಳಿಂದ ವಿವಿಧ ಕೋನಗಳಿಂದ ನೋಡಿದೆ, ಫೋಟೋದಲ್ಲಿರುವ ವ್ಯಕ್ತಿ ಶರಭನನ್ನೇ ಹೋಲುತ್ತಿದ್ದನಾದರು ಅವನಾಗಿರಲಿಲ್ಲ. ಅವನೇ ಬೇರೆ, ಚಿತ್ರದಲ್ಲಿರುವ ವ್ಯಕ್ತಿಯೇ ಬೇರೆ!

ತನ್ನ ಖಾಕಿ ಜೇಬಿನಲ್ಲಿ ಶರಭನ ಭಾವಚಿತ್ರವಿರಿಸಿಕೊಂಡು ಅಪರಾಧಿಯನ್ನು ಹುಡುಕುವುದರಲ್ಲಿ ನಿರತನಾಗಿದ್ದ, ಅವನನ್ನು ಬಂಧಿಸುವುದರ ಮೂಲಕ ಮುಖ್ಯಮಂತ್ರಿಗಳ ಚಿನ್ನದ ಪದಕದ ನಿರೀಕ್ಷೆಯಲ್ಲಿದ್ದ ಅಲಿಯ ಮುಖ ಯಾವ ಪ್ರಮಾಣದಲ್ಲಿ ವಿವರ್ಣಗೊಂಡಿರಬಹುದೆಂದು ಊಹಿಸಲಾರಂಭಿಸಿದೆ. ಅವನು ಸಂಧಿಸಿದೊಡನೆ ಅಯ್ಯಾ ನಿಜವಾದ ಕೊಲೆಗಾರ ಬಂಧನಕ್ಕೊಳಗಾಗಿಲ್ಲ ಎಂದು ಹೇಳುವುದರ ಮೂಲಕ ಅಲಿಯಲ್ಲಿ ಗೆಲುವು ತುಂಬಿದರೆ ಎಂದೂ ಯೋಚಿಸಿದೆ. ಆ ಕ್ಷಣ ನನ್ನ ಮುಖದಲ್ಲಿ ತಾಂಡವನೃತ್ಯಗೈಯ ಲಾರಂಭಿಸಿದ್ದು ಗೆಲುವೋ ಸೋಲೋ! ನನ್ನನ್ನು ನಾನು ನೋಡಿಕೊಳ್ಳೋಣವೆಂದರೆ ಅಗೋ ಅಲ್ಲಿ ಒಲೆಯ ಹಿಂಬದಿಯ ಇಲ್ಲಾಣದ ಗೋಡೆಗಂಟಿರುವ ನಿರುಪದ್ರವಿ ಕನ್ನಡಿ. ಪ್ರತಿಬಿಂಬ ನೊಡಿಕೊಳ್ಳುವ ಸಲುವಾಗಿ ಏಳುವುದು ಕೂಡ್ರುವುದು ನಡೆಸಿದೆ. ಅದುವರೆಗೆ ನನ್ನ ಮುಖದ ಬದಲಾವಣೆಗಳನ್ನು ನಿಶಿತ ರೀತಿಯಲ್ಲಿ ಗಮನಿಸುತ್ತಿದ್ದ ಹೆಬ್ಬಾರ್ ಮೆಲ್ಲಗೆ ಸಮೀಪಿಸುತ್ತ..

"ಎಂಥ ವಿಚಿತ್ರ ನೋಡಿ, ಕಥೆ ಅಂದರೆ ಇದೇ ಸ್ವಾಮಿ, ಕೊಲೆ ಮಾಡಿದವನು ಇಷ್ಟು ಸುಲಭವಾಗಿ ಸಿಗಬಹುದೆಂದು ಪೋಲಿಸ್ ಇಲಾಖೆ ಊಹಿಸಿರಲಿಲ್ಲವಂತೆ! ಈಗ ಅಲಿ ಏನಾದರು ಬಂದರೆ!" ಎಂದು ಕತ್ತೊರಳಿಸಿ ನೋಡುತ್ತಾನೆ, ಅಗೋ ಅಲ್ಲಿ ಸೂತಕ ಹೆಜ್ಜೆ ಇರಿಸುತ್ತ ಬರುತ್ತಿರುವ ಸಮವಸ್ತ್ರಧಾರಿ ಅಲಿಯು! ತನ್ನ ಜೇಬಿನಿಂದ ಶರಭನ ಬಹುವರ್ಣೀಯ ಭಾವಚಿತ್ರವನ್ನು ಎವೆಇಕ್ಕದೆ ನೋಡಿ ಹರಿದು ಚೂರು ಚೂರು ಮಾಡುತ್ತ ಬರುತ್ತಿರುವ ಅಲಿಯು, ಹರಿದ ತುಂಡುಗಳನ್ನು ತನ್ನ ಮುಷ್ಟಿಯಲ್ಲಿ ಬಿಗಿಯಾಗಿ ಹಿಡಿದುಕೊಂಡು ಇನ್ನೇನು ನನ್ನನ್ನು ಸಮೀಪಿಸಿದ ಅಲಿಯು, ಕೂಡ್ರುವ ಮೊದಲು ನನ್ನ ಕಡೆಗೊಮ್ಮೆ, ಹೆಬ್ಬಾರನ ಕಡೆಗೊಮ್ಮೆ ನೋಡುತ್ತಿರುವ ಅಲಿಯು!

ಅವನ ಪಕ್ಕದಲ್ಲಿಯೇ ಕುರ್ಚಿಯನ್ನೆಳೆದುಕೊಂಡು ಆಸೀನನಾಗುತ್ತ ಹೆಬ್ಬಾರ್ "ನಿಮ್ಮ ಕುರಾನಿನಲ್ಲಿ ದೀರ್ಘಾಯುಷ್ಯ ಕುರಿತಂತೆ ಹೇಳಿದೆಯೋ ಇಲ್ಲವೋ ಅಲಿಸಾಬ್! ಆದರೆ ನೆನದವರ ಮನದಲ್ಲಿ ಎಂಬ ಮಾತು ಮಾತ್ರ ಚಾಲ್ತಿಯಲ್ಲಿದೆ ನೋಡಿ, ನಿಮ್ಮ ಹೆಸರನ್ನು ಹೇಳುತ್ತಿದ್ದಂತೆ ನೀವಲ್ಲಿ ಕಾಣಿಸಿಕೊಂಡು ಬಂದೇಬಿಟ್ಟಿರಿ, ನೀವು ನೂರು ವರ್ಷ ಬದುಕಿರುವುದು ಖಂಡಿತ" ಎಂದು ಆರಂಭಿಸಿಯೇಬಿಟ್ಟನು.

ನನ್ನ ಎದುರಿಗೆ ತನ್ನ ಮುಷ್ಟಿಯಲ್ಲಿದ್ದ ಚೂರುಗಳನ್ನು ಪ್ರದರ್ಶಿಸುವುದು ಮುಚ್ಚುವುದು ನಡೆಸುತ್ತ ತನ್ನ ಕಣ್ಣುಗಳಿಂದ ಕ್ಷಕಿರಣಗಳನ್ನು ಹರಿಬಿಡುತ್ತಿರುವ ಅಲಿಯ ನೋಟದ

ಬಲೆಯಿಂದ ತಪ್ಪಿಸಿಕೊಳ್ಳುವ ಬಗೆ ಕುರಿತಂತೆಯೂ, ತಾನು ಕೇಳಬಹುದಾದ ಪ್ರಶ್ನೆಗಳನ್ನು ಊಹಿಸಿಕೊಳ್ಳುತ್ತಲೂ, ಅವಕ್ಕೆ ಸಂಬಂಧಿಸಿದ ಜವಾಬುಗಳಿಗಾಗಿ ತಡಕಾಡುತ್ತಲೂ, ಪ್ರಶ್ನೆಗಳಿಗೂ ಉತ್ತರಗಳಿಗೂ ನಡೆಯಲಿರುವ ಚರ್ಚೆಗೂ ನನಗೂ ಸಂಬಂಧವೇ ಇಲ್ಲವೆಂಬಂತೆ ಸ್ಥಿತಪ್ರಜ್ಞತೆಯ ಮುಖವಾಡ ಧರಿಸುತ್ತಲೂ, ದೀರ್ಘಶ್ವಾಸೋಚ್ವಾಸದ ಮೂಲಕ ರಕ್ತದೊತ್ತಡವನ್ನು ನಿಯಂತ್ರಿಸಬಹುದೆ ಎಂದು ಯೋಚಿಸುತ್ತಲೂ..

ಮಸಾಲೆ ಈರಣ್ಣ ಚಹಾದ ಕಪ್ಪುಗಳನ್ನು ಟೇಬಲ್ ಮೇಲೆ ಒಂದು ಆಕಾರದಲ್ಲಿಟ್ಟು ಅದರ ಟ್ರೇಯನ್ನು ತನ್ನೆದೆಗೆ ಆನಿಸಿಕೊಂಡು ಲಯಬದ್ಧವಾಗಿ ಬಡಿಯುತ್ತ ಸಿನೆಮಾದ ಯಾವುದೋ ಒಂದು ಹಾಡನ್ನು ಗೊಣಗುತ್ತ ನಮ್ಮ ಕಡೆ ಆಸಕ್ತಿಯಿಂದ ವ್ಯಂಗ್ಯವಾಗಿ ನೋಡಲಾರಂಭಿಸಿದನು. ವರ್ತುಳಾಕಾರದಲ್ಲಿ ಗಿರಕಿ ಹೊಡೆಯತೊಡಗಿದ ನೊಣಗಳನ್ನೇ ನೋಡುತ್ತ ಒಂದು ಕಪ್ಪನ್ನು ಕೈಗೆತ್ತಿಕೊಂಡೆ, ಅಲಿಯೂ ಕಪ್ಪನ್ನು ನಿಧಾನವಾಗಿ ತನ್ನ ಕೈಗೆ ತೆಗೆದುಕೊಂಡ, ಕುಡಿಯುವ ಮೊದಲು ನನ್ನ ಕಡೆ ಪ್ರಶ್ನಾರ್ಥಕವಾಗಿ ನೋಡಲಾರಂಭಿಸಿದ. ಯಾರು ಮೊದಲು ಮಾತಾನ್ನಾರಂಭಿಸುವುದೆಂಬ ಯಕ್ಷಪ್ರಶ್ನೆ ನಮ್ಮಲ್ಲಿ ಕಾಣಿಸಿಕೊಂಡಿತು. ಯಾವ ವಿಷಯ ಕುರಿತು! ನನ್ನ ಮನಸ್ಸಿನಲ್ಲಿ ಏನಿದೆಯೋ ಎಂದು ಅವನೂ! ಅವನ ಮನಸ್ಸಿನಲ್ಲಿ ಏನಿದೆಯೋ ಎಂದು ನಾನೂ! ದೃಷ್ಟಿ ಯುದ್ದವೂ ಸಹ. ಯಾರೊಬ್ಬರು ಪಟ್ಟು ಸಡಿಲಿಸಿದರೆ ತಾನೆ! ಸೇರಿಗೆ ಸವ್ವಾಸೇರು ಬೇರೆ. ಅಂತಿಮವಾಗಿ ಅಲಿಯೇ ಚಹಾ ಕುಡಿದು ಮುಗಿಸಿದ. ನಿಸ್ಸಂದೇಹವಾಗಿ ಅವನ ಮುಖದ ಗೆರೆಗಳಲ್ಲಿ ಅವಮಾನದ ಅನುಮಾನದ ಎಳೆಯ ಭ್ರೂಣಗಳು! ಇದು ನನ್ನ ಗೆಲುವಲ್ಲದೆ ಇನ್ನೇನು! ನನಗೆ ಒಂದು ಗುಟುಕು ಮಾತ್ರ ಕುಡಿಯಲು ಸಾಧ್ಯವಾಯಿತು. ಅದೃಷ್ಟವೋ ಎಂಬಂತೆ ನೊಣ ಚಹಾದೊಳಗೆ ಬಿದ್ದು ಸಾಯದೆ ಬದುಕಿ ಉಳಿಯಲು ಶಕ್ತಿಮೀರಿ ಶ್ರಮಿಸಲಾರಂಭಿಸಿತು. ನಮ್ಮೆಲ್ಲರ ಗಮನ ಅದರತ್ತ ಕೇಂದ್ರೀಕೃತಗೊಂಡಿತು. ನನ್ನ ಕಣ್ಣೆದುರು ಅದು ಹುತಾತ್ಮಗೊಳ್ಳುವುದೆಂದರೇನು! ಚಮಚಾ ಸಹಾಯದಿಂದ ಅದರ ದುರ್ಬಲ ರೆಕ್ಕೆಗಳಿಗೆ ದಕ್ಕೆಯಾಗದ ಹಾಗೆ ಅದರ ಜೀವನೋತ್ಸಾಹಕ್ಕೆ ಭಂಗ ಬಾರದ ಹಾಗೆ ಕಲಾತ್ಮಕವಾಗಿ ಮೇಲೆತ್ತಿ ಟೇಬಲ್ ಮೇಲೆ ಇರಿಸಿದೆ. ಒಡನೆಯೇ ಚೇತರಿಸಿಕೊಂಡು ಅದು ಚಲಿಸತೊಡಗಿತು, ಪುನಃ ಹಾರಲು ಶಕ್ತಿಯನ್ನು ಸಂಚಯಿಸಿಕೊಳ್ಳಲಾರಂಭಿಸಿತು, ಅದು ಬದುಕಿ ಉಳಿಯುವುದನ್ನು ನಿರೀಕ್ಷಿಸಿರಲಿಲ್ಲ.

ಅದರ ಚಲನವಲನಗಳ ನಿಗಾ ಇಟ್ಟಿದ್ದ ಹೆಬ್ಬಾರ್! ಅದು ತಮ್ಮ ಹೋಟಲ್ ವ್ಯವಹಾರಕ್ಕೆ ಬಗೆದ ದ್ರೋಹವೆಂದು ಪರಿಗಣಿಸಿದ ಹೆಬ್ಬಾರ್! ಪುನಃ ಹಾರಲಿರುವ ಅದು ಎಲ್ಲಿ ಕ್ರಿಮಿಕೀಟಗಳನ್ನು ತಮ್ಮ ವ್ಯವಹಾರದ ವಿರುದ್ಧ ಸಂಘಟಿಸುವುದೋ ಎಂದು ಯೋಚಿಸಿದ ಹೆಬ್ಬಾರ್! ಈರಣ್ಣನ ಕಡೆ ನೋಟದಿಂದ ಏನನ್ನೋ ಸುಳಿವು ನೀಡಿದ ಹೆಬ್ಬಾರ್! ಅದರ ಸಾವಿನ ವಿಳಂಬವನ್ನು ಸಹಿಸದಾದ ಹೆಬ್ಬಾರ್ ಸ್ಥಳೀಯ ಸರ್ಕಾರದ ಆಡಳಿತ ವೈಖರಿಯನ್ನು ಕಾವ್ಯಾತ್ಮಕತೆಯಿಂದ, ಕಠಿಣ ಶಬ್ದಗಳಿಂದ ಶಪಿಸಲಾರಂಭಿಸಿದ. ಈರಣ್ಣ ಟೇಬಲ್ ಶುಚಿಗೊಳಿಸಲು ಬರುವುದಕ್ಕೂ ಅಲಿಯು ತನ್ನ ಮುಷ್ಟಿಯನ್ನು ಬಿಗಿಗೊಳಿಸುವುದಕ್ಕೂ ಸರಿ ಹೋಯಿತು. ಇದ್ದಕ್ಕಿದ್ದಂತೆ ತನಗೆ ಏನನ್ನಿಸಿತೋ ಏನೊ! ಅವನು ಮುಷ್ಟಿಯ ಹಿಡಿತವನ್ನು ಸಡಿಲಗೊಳಿಸುವುದಕ್ಕೂ ಕರೆಂಟ್ ಹೋದ ಪರಿಣಾಮವಾಗಿ ಅದುವರೆಗೆ ತಿರುಗುತ್ತಿದ್ದ ಆ ಕಾಲದ ಫ್ಯಾನ್ ತನ್ನ ಚಲನೆಯನ್ನು ಸ್ಥಗಿತಗೊಳಿಸುವುದಕ್ಕೂ ಸರಿ ಹೋಯಿತು. ಮುಷ್ಟಿಯನ್ನು ನಿಧಾನವಾಗಿ ತೆರೆದ, ಟೇಬಲ್ ಮೇಲೆ ಚದುರಿದ ಚಿತ್ರಗಳನ್ನು ಚೆಲ್ಲಿದ, ಅದೂ ಅಂಗಾತವಾಗಿ.

ಓರೆಗಣ್ಣಿನಿಂದ ಕುತೂಹಲ ಭಯ ಆತಂಕದಿಂದ ನೋಡಿದೆ. ಚಿತ್ರದ ಅಸಂಖ್ಯಾತವೆಂಬ ಭ್ರಮೆ ಹುಟ್ಟಿಸುವ ಚೂರುಗಳಲ್ಲಿರುವುದು ಜರಾಸಂಧನೋ! ಧುರ್ಯೋಧನನ ಆಸ್ಥಾನದಲ್ಲಿ ಶ್ರೀಕೃಷ್ಣನ ತಳಿಗೆಯ ಆಕ್ರಮಣಕ್ಕೆ ಸಿಕ್ಕು ಶಿರಶ್ಚೇಧಗೊಂಡಿರುವ ಶಿಶುಪಾಲನೋ! ನೋಟದ ಸಹಾಯದಿಂದ ಎಣಿಸಿದೆ. ಒಟ್ಟು ಆರು ತುಂಡುಗಳು! ಅಪರಿಚಿತ ವ್ಯಕ್ತಿಯೊಬ್ಬನ ಅರ್ಧ ದೇಹದ ಆರುಭಾಗಗಳು! ನಮ್ಮೆಲ್ಲರ ಉಸಿರಾಟದ ಝಂಝಾನಿಲದ ಧಾಳಿಗೆ ಕಂಪಿಸುತ್ತಿರುವ ಬಹುವರ್ಣದ ಚೂರುಗಳು! ಅದು ಯಾರದ್ದಿರಬಹುದು! ಸ್ವಲ್ಪ ಹೊತ್ತು ಕಾದ ಬಳಿಕ ಅಲಿಯೇ ಅವುಗಳನ್ನು ವಿಶೇಷ ಪರಿಣತಿಯಿಂದ ಜೋಡಿಸಿ ಆಕಾರ ನೀಡಿದ. ನಿಸ್ಸಂದೇಹವಾಗಿ ಅವನದೆ! ಬಳಿಕ ಸಸುನಕ್ಕ ವ್ಯಂಗ್ಯವಾಗಿ ಕ್ರೂರವಾಗಿ ಖಾರವಾಗಿ..

"ನೀವಿಬ್ಬರು ಕಣ್ತುಂಬ ನೋಡಿ, ನನ್ನ ನಸೀಬ ಕೈಕೊಟ್ಟಿರುವುದನ್ನು ಕೈ ತುತ್ತಿನ ಅನ್ನ ಚೆಲ್ಲಾಪಿಲ್ಲಿಯಾಗಿರುವುದನ್ನು ನೋಡಿರಿ" ಎನ್ನುತ್ತ ಅಗತ್ಯಕ್ಕಿಂತ ಹೆಚ್ಚು ಉಸಿರುಬಿಟ್ಟ. ಚಿತ್ರದ ತುಂಡುಗಳು ಒಂದು ಕ್ಷಣ ಕಂಪಿಸಿ ಪುನಃ ನಿಶ್ಚಲಗೊಂಡವು. ಆದರೆ ಅದರ ಆಕಾರಕ್ಕೆ ದಕ್ಕೆ ಬರಲಿಲ್ಲ. ನನಗಾದ ಸಂತೋಷವನ್ನು ಭಾವನೆ ಮೂಲಕ ವ್ಯಕ್ತಪಡಿಸಲಿಲ್ಲ.

"ಇವರ ಅವಸ್ಥೆ ನೋಡಿದರೆ ಅಯ್ಯೋ ಅನ್ನಿಸುತ್ತೆ! ಮೊದಲೇ ದಿಲ್ದಾರ್ ಮನುಷ್ಯ! ಹೀಗಾಗಬಾರದಿತ್ತು. ಕೆಲವೇ ದಿವಸಗಳಲ್ಲಿ ನಿಜವಾದ ಕೊಲೆಗಾರನನ್ನು ಬಂಧಿಸುವುದಾಗಿ ಮೊನ್ನೆ ತಾನೆ ಹೇಳಿದ್ದರು ಪಾಪ! ಇವರಿಗೆ ಮುಖ್ಯಮಂತ್ರಿಗಳ ಚಿನ್ನದ ಪದಕವೂ ಸಿಗುತ್ತಿತ್ತು, ಪ್ರಮೋಷನ್ನೂ ಸಿಗುತ್ತಿತ್ತು, ನಮ್ಮ ಹೋಟಲ್ಲಿಗೂ ಭರ್ಜರಿ ವ್ಯಾಪಾರಾನೂ ಆಗುತ್ತಿತ್ತು" ಎಂದು ಸ್ವಗತ ರೀತಿಯಲ್ಲಿ ಹೇಳಿದ ಹೆಬ್ಬಾರ್ ಮುಂದುವರೆದು "ಅಲ್ರೀ ಅಲಿಸಾಬ್ ಕೇಸನ್ನು ಪುನಃ ರೀಓಪನ್ ಮಾಡಿಸಬಹುದಲ್ಲವೆ!" ಎಂದು ಕೇಳಿದ.

"ರೀಓಪನ್ ಮಾಡುವುದೆಲ್ಲಿಂದ ಬಂತು ಸ್ವಾಮಿ! ಹಾಳಾದ ಅಂಥೋಣಿ ತಾನೇ ಕೊಲೆ ಮಾಡಿರುವುದಾಗಿ ಹೇಳಿಕೆ ನೀಡಿದ್ದಾನಲ್ಲ! ಅದೂ ಅಲ್ಲದೆ ರೆಡ್ಡಿ ಮಗಳು ಬೇರೆ ಉಲ್ಟಾ ಹೊಡೀತಿದ್ದಾಳೆ, ಎಲ್ಲಾ ಕೋಗಿಲೆತೋಟದ ರೆಡ್ಡಿಯ ಕರಾಮತ್ತು! ಯಾರನ್ನು ನಂಬಿದರೂ ಈ ಹುಡುಗಿಯರನ್ನು ನಂಬಬಾರದು ನೋಡಿ" ಎಂದು ಪುನಃ ನಿಟ್ಟುಸಿರುಬಿಟ್ಟ.

ಅವರಿಬ್ಬರೂ ಉತ್ತರಕ್ಕಾಗಿ ನನ್ನ ಕಡೆ ನೋಡಲಾರಂಭಿಸಿದರು. ಅಮಾಯಕನಂತೆ ಕೇಳಿಸಿಕೊಳ್ಳುತ್ತ ನಾನು ತೆಪ್ಪಗಿದ್ದುದೇ ಅದಕ್ಕೆ ಕಾರಣ. ಕಾಲಕ್ಷೇಪಕ್ಕ ಸಲುವಾಗಿ ಚೀಲದಿಂದ ಯಾವುದೋ ಒಂದು ಕಡತ ತೆಗೆದು ನೋಡುವುದರ ಮೂಲಕ ಅವರಿಗೆ ಇರುಸುಮುರುಸನ್ನುಂಟು ಮಾಡಿದೆ, ಅದು ಅವರಿಗೆ ಸರಿ ಕಾಣಲಿಲ್ಲ..

"ಎಂಥ ಮನುಷ್ಯರು ನೀವು! ನಮ್ಮ ಮಾತುಗಳನ್ನು ಕೇಳಿಸಿಕೊಳ್ಳುತ್ತಿಲ್ಲ ನೀವು! ಕೇಳಿಸಿ ಕೊಂಡರೂ ತುಟ್ಟಿ ಬಿಚ್ಚುತ್ತಿಲ್ಲವಲ್ಲ ನೀವು! ಕಥೆ ಬರೆಯುವವರೆಂದರೆ ಹೇಗಿರಬೇಕು ಏನು ಕಥೆ! ಆದರೆ ನೀವು! ಛೇಛೆ! ನಿಮಗೆ ಒಂದು ಒಳ್ಳೆ ಸಬ್ಜೆಕ್ಟ್ ಸಿಗಲಿ ಒಳ್ಳೆಯ ಕಥೆ ಬರಲಿ ಅಂತ ತಾನೆ! ಆದರೆ ನೀವು ತುಟಿ ಬಿಚ್ಚದೆ ಸುಮ್ಮನೆ ಕೂತಿರುವಿರಲ್ಲ! ಯಾವ ಸೀಮೆ ಕಥೆಗಾರರು ನೀವು" ಎಂದು ಹೆಬ್ಬಾರ್ ನನ್ನನ್ನು ಮಾತಿಗೆಳೆಯಲು ಪ್ರಯತ್ನಿಸಿದ, ಜೊತೆಗೆ ನನ್ನ ಸೃಜನಶೀಲ ಕರ್ಮವನ್ನು ಹಂಗಿಸಿದ. ನಾನು ಮೆಲ್ಲಗೆ ಕಡತವನ್ನು ಚೀಲದೊಳಗೆ ಸೇರಿಸುತ್ತ..

"ಏನು ಹೇಳಲಿ ರಾಯರೆ! ಕೊಲೆಗಳ ಬಗ್ಗೆ ನನಗೆ ಯಾವ ಕುತೂಹಲವಿಲ್ಲ. ಕೊಲೆಯಾಗಿರುವವರು ಯಾರೋ! ಕೊಲೆ ಮಾಡಿರುವವರು ಯಾರೋ! ಅದನ್ನೆಲ್ಲ ಕಟ್ಟಿಕೊಂಡು ನನಗೇನು ಆಗಬೇಕಾಗಿದೆ! ಈ ಆಂಧ್ರಕ್ಕೆ ಯಾಕೆ ಸೇರಿಕೊಂಡೆನೋ ಏನೊ! ಈ

ಆಲೂರಿಗೆ ಬಂದು ಹೋದಾಗಲೆಲ್ಲ ಕೊಲೆಗಳನ್ನು ಕೇಳುವುದಾಗಿದೆ ನನ್ನ ಕರ್ಮಕ್ಕೆ! ಇಲ್ಲಿಗೆ ಬರುವುದು ಕಥೆಗಳಿಗೆ ಸಬ್ಜಕ್ಟ್ ಹುಡುಕಲಿಕ್ಕೆ ಅಲ್ಲ ರಾಯರೆ!" ಎಂದು ಕುತೂಹಲವಿದ್ದರೂ ತುಸು ಖಾರವಾಗಿಯೇ ಪ್ರತಿಕ್ರಿಯಿಸಿದೆ. ತಲೆ ಎತ್ತಿ ನೋಡಿದೆ, ಪರಸ್ಪರ ಮುಖಗಳನ್ನು ನೋಡಿಕೊಂಡರು. ಅವರಿಗೆ ಬೇಸರವಾಗಿರಬಹುದೆಂದುಕೊಂಡೆ, ಅದನ್ನು ಪರಿಹರಿಸುವ ಸಲುವಾಗಿ ಕ್ಷಮೆ ಕೇಳಿದೆ.

"ಯಾಕೋ ಮೇಸ್ಟ್ರ ಮೂಡ್ ಖರಾಬಿದ್ದಂತಿದೆ ಹೆಬ್ಬಾರ್. ಕೊಲೆಗಳ ಸುದ್ದಿಯನ್ನು ಪ್ರಸ್ತಾಪಿಸುವುದು ಬೇಡ, ಕೊಲೆಗಾರನನ್ನು ಹುಡುಕುವ ನೆಪದಲ್ಲಿ ನಾವಿಬ್ಬರೂ ವಾಗಿಲಿಗೆ ಹೋಗಬೇಕೆಂದುಕೊಂಡಿದ್ದೆವು, ಆದರೆ ಎಡವಟ್ಟಾಯಿತು" ಎನ್ನುತ್ತ ಅಲಿ ತನ್ನ ಮುಖವನ್ನು ಸಪ್ಪಗೆ ಮಾಡಿಕೊಂಡ.

"ವಾಗಿಲಿಗೆ ಬಂದು ಹೋಗುವುದಕ್ಕೆ ಕೊಲೆಗಳಾಗಬೇಕೆಂದೇನೂ ಇಲ್ಲವಲ್ಲ! ನೀವಿಬ್ಬರೂ ನಾಳೇನೆ ಬನ್ನಿ, ಹೇಗೋ ನಾಟಕ ಕಂಪನಿ ಬಂದಿದೆ, ಸದಾರಮೆ ನಾಟಕವನ್ನು ನೋಡಿಕೊಂಡು ಬರಬಹುದು" ಎಂದು ಆಮಂತ್ರಣ ನೀಡಿದೆ. ಶರಭನಿಲ್ಲ ಎಂಬ ಧೈರ್ಯದಿಂದ.

"ಅಂತೂ ಈಗಲಾದರೂ ಕರೆದಿರಲ್ಲ, ಅಷ್ಟೇ ಸಾಕು. ಈ ತಿಂಗಳೆಲ್ಲ ಬ್ಯುಜಿ, ನಾಳೇನೆ ಕೊಲೆಗಾರನನ್ನು ಕೋರ್ಟಿಗೆ ಹಾಜರುಪಡಿಸಬೇಕಿದೆ, ಕರ್ನಾಟಕದ ಪೋಲಿಸರ ನೆರವಿನಿಂದ ಊಳೂರಿಗೆ ಹೋಗಿ ವನಜಾಳನ್ನು ವಿಚಾರಿಸಬೇಕಿದೆ, ಹ್ಹಾಂ ಮತ್ತೆ ಕೊಲೆ ವಿಷಯ! ಸಾರಿ. ಬಿಡುವಿದ್ದರೆ ಸ್ಟೇಷನ್ನಿಗೆ ಬಂದು ಹೊಗುವಿರಾ! ನಮ್ಮ ಹೊಸ ಎಸ್ಸೈ ಇಂಟರೆಸ್ಟಿಂಗ್ ಆಪೀಸರ್! ಪರಿಚಯ ಮಾಡಿಕೊಳ್ಳಬಹುದು, ಹಾಗೆಯೇ ಕೊಲೆಗಾರನನ್ನ ಖುದ್ದ ನೋಡಬಹುದು" ಅಲಿ ತಣ್ಣಗಿನ ಧ್ವನಿಯಲ್ಲಿ ಹೇಳಿದ.

"ಈ ಛಾನ್ಸ್ ಕಳೆದುಕೊಳ್ಳಬೇಡಿ ಮೇಸ್ಟ್ರೆ, ಕೋರ್ಟಿಗೆ ಸರೆಂಡರ್ ಮಾಡಿದ ಮೇಲೆ ನೋಡಲಾಗುವುದಿಲ್ಲ" ಎಂದು ಹೆಬ್ಬಾರ್ ಧ್ವನಿಗೂಡಿಸಿದ.

ಪುನಃ ನನ್ನೊಳಗೆ ಕುತೂಹಲ ಕೆರಳಿತು. ತಾನೇ ಕೊಲೆ ಮಾಡಿರುವುದಾಗಿ ಶರಭ ಹೇಳಿರುವುದು ಸುಳ್ಳೋ ನಿಜವೋ ಎಂಬ ಸಂದೇಹ ಕಾಡಲಾರಂಭಿಸಿತು, ಅದಕ್ಕೆ ಕಾರಣಗಳಿದ್ದವು. ರಾಯಲಸೀಮಾದ ಗ್ರಾಮಾಂತರ ಪ್ರದೇಶದಲ್ಲಿ ಮಾಡದ ಕೊಲೆಗಳನ್ನು ಮೈಮೇಲೆ ಎಳೆದುಕೊಂಡು ಸಾಮಾಜಿಕ ಮೌಲ್ಯ ಹೆಚ್ಚಿಸಿಕೊಳ್ಳುವುದು ಮಾಮೂಲು! ಅಲ್ಲದೆ ಶರಭನನ್ನು ನೋಡಿದ ಯಾರೊಬ್ಬರೂ ಅವನಿಗೆ ಕೊಲೆಗಾರನ ಪಟ್ಟ ಕಟ್ಟುವುದು ಸಾಧ್ಯವಿಲ್ಲ. ಅಲ್ಲದೆ ತಾನು ಪ್ರೀತಿಸಿದ ಹುಡುಗಿಯ ತಂದೆಯನ್ನು ಕೊಲೆ ಮಾಡುವುದೆಂದರೆ! ಮಾಡಿರುವುದಾಗಿ ಹೇಳಿಕೊಂಡು ತಿರುಗಾಡುವುದೆಂದರೆ! ಅವನಂತೆ ಪೋಲಿಸರಿಗೆ ದೊರಕಿರುವ ಅಂಥೋಣಿ ಸಹ ಕೊಲೆ ಮಾಡಿರುವನೋ ಇಲ್ಲವೋ ಎಂಬ ಅನುಮಾನ ಕಾಡಲಾರಂಭಿಸಿತು.

ಅಲಿ ಸಂಗಡ ಸ್ಟೇಷನ್ನಿಗೆ ಹೋದಲ್ಲಿ! ಎಸ್ಸೈ ಅವರ ಪರಿಚಯ ಮಾಡಿಕೊಂಡಲ್ಲಿ! ಅವರ ನೆರವಿನಿಂದ ಆಪಾಧಿತನನ್ನು ಕಂಡಲ್ಲಿ! ಶರಭನ ಹಾಗೆ ಅಂಥೋಣಿ ಸಹ ನನ್ನನ್ನು ಸಮ್ಮೋಹನಗೊಳಿಸಿದಲ್ಲಿ! ನನ್ನ ಭಾವನೆಗಳ ಜೊತೆ ಚೆಲ್ಲಾಟವನ್ನಾಡಲಾರಂಭಿಸಿದಲ್ಲಿ! ಚಲನವಲನಗಳನ್ನುಕ್ಷುಣ್ಣವಾಗಿಗ್ರಹಿಸುವಪೋಲಿಸರುನನ್ನೊಳಗೂಅಪರಾಧಿಗಳಿರಬಹುದೆಂದು ಸಂದೇಹಿಸಿದಲ್ಲಿ! ಹೀಗೆ ಯೋಚಿಸುತ್ತ ಉಭಯ ಸಂಕಟಕ್ಕೆ ಸಿಲುಕಿದೆ, ಗೊಂದಲಕ್ಕೀಡಾದೆ. ಆದರೆ ನಾನು ಸುಮ್ಮನಿದ್ದರೂ ನನ್ನೊಳಗಿನ ಸೃಜಶೀಲ ಕಥೆಗಾರ ಸುಮ್ಮನಿರಬೇಕಲ್ಲವೆ!

ಕಥೆಗಳಾಗಲು ಹಾತೊರೆಯುವ ವಿಷಯಗಳು ಸುಮ್ಮನಿರಬೇಕಲ್ಲವೆ! ಹೊರಡಲು ನಾನು ನಿರ್ಧರಿಸದಿದ್ದರೂ ಅವೇ ನಿರ್ಧರಿಸಿದ ಪರಿಣಾಮವಾಗಿ, ನನ್ನ ಜಾಯಮಾನಕ್ಕೆ ಒಗ್ಗದ ಅಮಾಯಕತ್ವವನ್ನೂ, ಮುಗ್ಧತೆಯನ್ನೂ ಆವಹಿಸಿಕೊಳ್ಳುತ್ತ, ಯಾವ್ಯಾವ ಮಾತುಗಳನ್ನು ಹೇಗೆ ಹೇಗೆ ಪ್ರಕಟಿಸಬೇಕೆಂದು ಅಂತರಂಗದಲ್ಲಿ ತಾಲೀಮು ನಡೆಸುತ್ತ, ಕುಂದಾಪುರ ಮೂಲದ ಹೆಬ್ಬಾರ ನನ್ನ ಗೈರುಹಾಜರಿಯಲ್ಲಿ ಯೋಚಿಸಬಹುದಾದ ಭಾವನೆಗಳ ನಕರಾತ್ಮಕತೆಯನ್ನೂ ಸಕಾರಾತ್ಮಕತೆಯನ್ನೂ ಲೆಕ್ಕ ಹಾಕುತ್ತ ಮೆಲ್ಲಗೆ ಏಳುತ್ತ ಚೀಲವನ್ನು ಹೆಗಲಿಗಿಳಿಬಿಟ್ಟುಕೊಂಡೆ, ಇನ್ನೇನು ಹೋಟಲ್ಲಿನ ಬಾಗಿಲು ದಾಟಬೇಕೆನ್ನುವಷ್ಟರಲ್ಲಿ..

++++

ಅರೆ ಪನ್ನಂಗಧರ!

ಎಲ್ಲಿಗೆ ಹೊರಟಿರುವಿ ಎಂದು ಯಾರೋ ಕೇಳಿದಂತೆ ಭಾಸವಾಯಿತು. ಹೊರಳಿ ನೋಡಿದೆ. ಅರೆ ಪನ್ನಂಗಧರ! ಕೆಲವು ತಿಂಗಳುಗಳ ಹಿಂದೆಯಷ್ಟೆ ಪೋಲಿಸ್ ಲಾಕಪ್ಪಿನಲ್ಲಿ ನಿರ್ದಯ ರೀತಿಯಲ್ಲಿ ಸತ್ತ ಸಿಂಗಾಡಿ ಪನ್ನಂಗಧರ! ತೆಲುಗಿನ ವಿಪ್ಲವ ಕವಿ ಚರಬಂಡರಾಜುರವರ ಹಾಡುಗಳನ್ನು ತಮಟೆ ಭಾರಿಸುತ್ತ ಮೈಮರೆಯುತ್ತಿದ್ದ ಕಾಮ್ರೇಡ್! ಅಲ್ಲಿಗೆ ಹೋಗುವ ಮೊದಲು ತನ್ನ ಕೊಳೆತ ಕಳೇಬರವನ್ನು ನೆನಪು ಮಾಡಿಕೋ ಎಂದು ಎಚ್ಚರಿಸುತ್ತಿರುವ ನಕ್ಸಲ್ಬೈಟ್! ಅವನ ಐದೂವರೆ ಅಡಿ ಉದ್ದದ ಕಳೇಬರ ಕಣ್ಣು ಶುಕ್ಲಪಟಲದುದ್ದಕ್ಕೂ ಮೂಡಿದೊಡನೆ ಶಕ್ತಿಗುಂದಿ ನಡೆಯಲಸಾಧ್ಯವಾಯಿತು. ನಿಂತೊಡನೆ ತಾನು ನಿಚ್ಚಳಗೊಳ್ಳಲಾರಂಭಿಸಿದ.

ಮಾಸಲು ಬಣ್ಣದ ಅವನು ನನಗೆ ತೀರಾ ಅಪರಿಚಿತನಲ್ಲದಿದ್ದರೂ ಚಿರಪರಿಚಿತನೇನಲ್ಲ. ನೋಡಿದೊಡನೆ ಅಚ್ಚಳಿಯದೆ ಮೂಡಿಬಿಡುವಂಥ ಆಕರ್ಷಕವಲ್ಲದ ವ್ಯಕ್ತಿತ್ವದವನು ತಾನಾಗಿದ್ದ. ಉಗ್ರ ಎಡಪಂಥೀಯ ಚಟುವಟಿಕೆಗಳಲ್ಲಿ ಸದಾ ತೊಡಗಿಸಿಕೊಂಡಿರುತ್ತಿದ್ದ. ಪ್ರತಿಕ್ಷಣ ಸಾಮಾಜಿಕ ಸಮಸ್ಯೆಗಳಿಗೆ ಸಂಬಂಧಿಸಿದ ದುಃಸ್ವಪ್ನಗಳನ್ನು ಕಾಣುತ್ತಿದ್ದ ಮತ್ತು ಸೃಷ್ಟಿಸಿಕೊಂಡು ಹೋರಾಡುತ್ತಿದ್ದ. ಚಿಕ್ಕ ಚಿಕ್ಕ ಗುಂಪುಗಳಿಂದ ಪ್ರಭಾವಿತನಾಗಿ ಒತ್ತಕ್ಷರಗಳಿಂದ ತುಂಬಿದ ಭಾಷಣ ಮಾಡುತ್ತಿದ್ದ. ಸಮಾಜದ ತಲೆನೋವುಗಳನ್ನು ಪ್ರೀತಿಸುತ್ತಿದ್ದ. ಶ್ರಮಜೀವಿಗಳ ಕಷ್ಟ ಸಂಕಟಗಳೊಂದಿಗೆ ಒಡನಾಡುತ್ತಿದ್ದ. ಅಹರ್ನಿಶಿ ಮಾರ್ಕ್ಸ್ ಚೆಗೆವಾರ ಮಾವೋಗಳ ಸೂಕ್ತಿಗಳನ್ನು ಪುಂಖಾನುಪುಂಖವಾಗಿ ಉದ್ದರಿಸುತ್ತಿದ್ದ. ಯಾರು ತಮ್ಮ ದೇಹಗಳನ್ನು ಪ್ರೀತಿಸುವರೋ ಅಂಥವರು ದೇಶವನ್ನು ಪ್ರೀತಿಸಲಾರರು ಎಂದು ದೃಢವಾಗಿ ನಂಬಿದ್ದ, ಸ್ನಾನ ಮುಖಕ್ಷೌರ, ನಿದ್ರಾಮೈಥುನಗಳಂಥ ಉಪಾಧಿಗಳಿಂದ ದೂರ ಇರುತ್ತಿದ್ದ, ಕೆಂಪುವರ್ಣದ ಉಡುಪು ಧರಿಸಿ ಧಗಧಗ ಉರಿಯುತ್ತಿದ್ದ, ಪ್ರತಿ ಮಾತುಗಳಿಗೂ ಒತ್ತಕ್ಷರ ಮುಡಿಸಿ ನುಡಿಯುತ್ತಿದ್ದ, ಹಮಾಲಿ ಸಂಘ ಸೈಕಲ್ ರಿಕ್ಷಾವಾಲರ ಸಂಘ ಅಷ್ಟೇ ಅಲ್ಲದೆ ಭಿಕ್ಷುಕರ ಸಂಘಗಳನ್ನು ತನ್ನ ಬೆನ್ನಹುರಿಯ ಮೇಲೆ ಹೊತ್ತುಕೊಂಡು ದೈಹಿಕವಾಗಿ ಕ್ಷೀಣಿಸುತ್ತಲೇ ಇದ್ದ. ಸರ್ಕಾರಿ ನೌಕರರೂ ಸಮಾಜದ ಶತ್ರುಗಳೇ ಎಂದು ಅಪಾರ್ಥ ಮಾಡಿಕೊಂಡು ಕಿಡಿಕಾರುತ್ತಿದ್ದ, ಅಂಥವರನ್ನು ತನ್ನ ಕಿರಿಕಿರಿ ಮಾತುಗಳಿಂದ ಕಾಡುತ್ತಿದ್ದ, ಹಂಗಿಸುತ್ತಿದ್ದ.

ಆಲೂರಿಗೆ ಹೋದಾಗಲೆಲ್ಲ ನಾನು ಅವನನ್ನು ಎವೆ ಇಕ್ಕದೆ ಗಮನಿಸುತ್ತಿದ್ದೆ, ಅವರಿವರ ಮೂಲಕ ಮಾಹಿತಿ ಸಂಗ್ರಹಿಸುತ್ತಿದ್ದೆ, ಪರಿಚಯಕ್ಕೆ ಸಂಬಂಧಿಸಿದ ಉಭಯ ಸಂಕಟಕ್ಕೆ ಸಿಲುಕಿ ಒದ್ದಾಡುತ್ತಿದ್ದೆ. ಅವನ ಪರಿಚಯವಾದ ದಿನವನ್ನು ಕ್ಷಣವನ್ನು ಮರೆಯಲಾರೆ. ತಾನು

ನನಗೆ ಪರಿಚಯವಾದದ್ದು ಇಂಥಾದ್ದೇ ಮಟಮಟ ಮಧ್ಯಾಹ್ನದ ಸಮಯದಲ್ಲಿ! ಅದೂ ಶ್ರೀಕೃಷ್ಣಭವನದಲ್ಲಿ! ನನಗೆ ಅಭಿಮುಖವಾಗಿ ಕುಳಿತಿದ್ದ ಅವನನ್ನು ವಾರೆ ನೋಟದಿಂದ ಗಮನಿಸುತ್ತಿದ್ದೆ, ಅವನ ದೇಹ ಸೂಸುತ್ತಿದ್ದ ವಿಲಕ್ಷಣ ಪರಿಮಳವನ್ನು ಗುಟ್ಟಾಗಿ ಆಸ್ವಾದಿಸುತ್ತಿದ್ದೆ. ಯಾರಾದರೂ ಪರಸ್ಪರ ಪರಿಚಯಿಸಬಾರದೆ ಎಂದು ಎಲ್ಲರತ್ತ ಆರ್ತತೆಯಿಂದ ನೋಡುತ್ತಿದ್ದೆ. ಆದರೆ ತಾನು ನಿರ್ಭಾವುಕ ಸ್ಥಿತಿಯಲ್ಲಿ ಪುಷ್ಕಳವಾಗಿ ತಿಂಡಿ ತಿಂದು ಮುಗಿಸಿದ, ನೆರೆಹೊರೆಯವರು ಆಘ್ರಾಣಿಸುವಂತೆ ಕೇಳಿಸಿಕೊಳ್ಳುವಂತೆ ಡೇಗಿ ಸದ್ದು ಮಾಡಿದ್ದು ನನ್ನನ್ನು ಪುಳಕಗೊಳಿಸಿತು. ಮಾಣಿ ತನ್ನ ಎದುರು ಇರಿಸಿದ ಬಿಲ್ಲನ್ನು ನನ್ನ ಕಡೆ ತಳ್ಳಿದ, ನಾನು ಅದನ್ನು ಹಿಂದಕ್ಕೆ ತಳ್ಳಿದೆ, ತಳ್ಳಾಟ ಎರಡು ಮೂರು ಸಲ ನಡೆಯಿತು. ಬಿಲ್ಲಿನ ಮೊತ್ತ ಸಂದಾಯ ಮಾಡುವಂತೆ ತಾನು ಹೇಳಿದ, ಮನವಿಯಾಗಿದ್ದಲ್ಲಿ ಕೊಡುತ್ತಿದ್ದೆನೇನೊ! ನೆರಳಲ್ಲಿ ಕೂತು ಪ್ರತಿತಿಂಗಳು ಪಡೆಯುವ ಸಂಬಳವನ್ನು ಪ್ರಸ್ತಾಪಿಸಿದ, ಹಾಗೆ ಕಥೆಗಳ ಸಂಭಾವನೆಯನ್ನೂ! ಪಾವತಿಸಿದೆ, ಅದಕ್ಕೆ ಕೃತಜ್ಞತೆ ಸೂಚಿಸುವ ಸೌಜನ್ಯ ತೋರಿಸಲಿಲ್ಲ. ಆ ಘಟನೆಯಿಂದಾಗಿ ಪನ್ನಂಗಧರ ನನಗೆ ಹತ್ತಿರವಾದದ್ದು, ಕಥೆಗಳ ಸಹವಾಸದಿಂದಾಗಿಯೇ ನನ್ನ ಹೆಗಲ ಮೇಲೆ ತಾನು ಕೈಹಾಕಿ ನಡೆಯಲಾರಂಭಿಸಿದ್ದು. ಕಠತಿಜಡಿ ರಡಿಠಿ ಠಣಣ ಠಜಿ ಣುಜ ಛಚಿಡಿಡಿಜಟ ಠಜಿ ಚಿ ರಣಟಿ ಎಂದು ಹೇಳುತ್ತಲೇ ನನ್ನ ಜೇಬಲ್ಲಿ ಕೈ ತೂರಿಸಿ ಸಿಕ್ಕಷ್ಟು ಹಣವನ್ನು ತೆಗೆದು ಗೋಚರಿಸಿದ ಅಸಹಾಯಕರಿಗೆ ಕೊಡುವ ತನ್ನ ಧಾರಾಳತನದಿಂದಾಗಿಯೇ ಆತ ನನ್ನಲ್ಲಿ ಭೀತಿಯನ್ನು ಹುಟ್ಟಿಸಿದ್ದು, ನಿಂತ ನಿಂತಲ್ಲಿಯೇ ಕುಳಿತ ಕುಳಿತಲ್ಲಿಯೇ ಪುಂಖಾನುಪುಂಖವಾಗಿ ಆಶುಕವಿತೆಗಳನ್ನು ವಾಚಿಸುತ್ತಿದ್ದ ಕಾರಣದಿಂದಾಗಿಯೇ ಆತ ಸುವರ್ಣ ಚೌಕಟ್ಟುಗಳಲ್ಲಿ ನನ್ನೊಳಗಿನ ದುಃಸ್ವಪ್ನಗಳನ್ನು ಬಂಧಿಸಿದ್ದು.

ಓಹ್ ಆತನ ಸಾಮಿಪ್ಯವೇ!

ನಮ್ಮಿಬ್ಬರನ್ನು ಹತ್ತಿರವಾಗಿಸಿದ್ದು, ಒಂದೇ ಎರಕದಲ್ಲಿ ಇರುಕಿಸಿದ್ದು ಇದೇ ಸಾಹಿತ್ಯವೆ! ಆ ಮಾಯಾವಿಯು ತನ್ನೊಳಗಿನ ಎಡಪಂಥೀಯ ಚಿಂತನೆಗಳ ಮಾಂತ್ರಿಕ ಸ್ಪರ್ಶದಿಂದ ನನ್ನೊಳಗಿನ ಸಾಮಾಜಿಕ ಅನುಕಂಪವನ್ನು ಆಯುಧವನ್ನಾಗಿ ಪರಿವರ್ತಿಸಲು ಸಂಚು ಆರಂಭಿಸಿದ್ದ. ಅದಕ್ಕೆ ಪೂರಕವಾಗಿ ತನ್ನ ಜೇಬಿನಲ್ಲಿ ಅಪ್ರಕಟಿತ ಕವಿತೆಗಳನ್ನು ದಂಡಿಯಾಗಿಟ್ಟುಕೊಂಡಿರುತ್ತಿದ್ದ, ಪ್ರಕಟಿಸಬಹುದಾಗಿತ್ತಲ್ಲವೆ ಎಂದು ಕೇಳಿದ್ದಕ್ಕೆ ಗಹಗಹಿಸಿ ನಗಾಡಿದ, ಮಾವೋತ್ಸೆತುಂಗ ಮಹಾಶಯನ ಆತ್ಮ ಸಂಪಾದಕತ್ವ ವಹಿಸಿಕೊಂಡಿರಬಹುದಾದ ಚೀನಿ ಭಾಷೆಯ ಪತ್ರಿಕೆಗಳೆಲ್ಲಿ ಈ ಬೂರ್ಜ್ವಾ ದೇಶದಲ್ಲಿ! ಎಂದು ಹೇಳಿ ನನ್ನನ್ನು ದಿಗ್ಭ್ರಮೆಗೊಳಿಸಿದ.

ಓಹ್ ಆತನ ಎಡಪಂಥೀಯ ಚಿಂತನೆಗಳೆ!

ವಿಲಕ್ಷಣ ವ್ಯಕ್ತಿತ್ವದ ಪನ್ನಂಗಧರ, ಚಿತ್ರವಿಚಿತ್ರವಾಗಿ ಆಲೋಚಿಸುತ್ತಿದ್ದ ಪನ್ನಂಗಧರ, ತನ್ನ ಕೆಲವೇ ಮಾತುಗಳಿಂದ ಮೋಡಿ ಮಾಡಿ ಪರವಶಗೊಳಿಸುತ್ತಿದ್ದ ಪನ್ನಂಗಧರ, ಕುರುಡರೆದುರು ಕಾಮನಬಿಲ್ಲುಗಳನ್ನು ವರ್ಣಿಸುತ್ತಿದ್ದ ಪನ್ನಂಗಧರ, ಕಾಲಿಲ್ಲದವರ ಕಂಕುಳಿಂದ ಊರುಗೋಲುಗಳನ್ನು ಕಸಿದುಕೊಂಡು ನಡೆಯುವಂತೆ ಪುಸಲಾಯಿಸುತ್ತಿದ್ದ ಪನ್ನಂಗಧರ, ಬಾಯಾರಿದವರೆದುರು ಮೃಗಜಲನಿಧಿಗಳನ್ನು ಸಾಕಾರಗೊಳಿಸುತ್ತಿದ್ದ ಪನ್ನಂಗಧರ, ಅವನಿಗೆ ನಾನೇ ಮನಸೋತೆನೋ ಅವನೇ ನನ್ನ ಕನಸು ಕನವರಿಕೆಗಳಲ್ಲಿ ಕಾಡಲಾರಂಭಿಸಿದನೋ! ಸರಿಯಾಗಿ ತಿಳಿಯದು. ಅವನಿರುತ್ತಿದ್ದ ಆಲೂರಿನ ಕೊಚ್ಚೆ ಕೊಳಚೆ ಪ್ರದೇಶಗಳು ನನಗೆ ನಂದನದಂತೆ ಭಾಸವಾಗಲಾರಂಭಿಸಿದವು. ಕೆಲಸವಿದ್ದರೂ ಕೆಲಸಗಳಿರದಿದ್ದರೂ ಸೂಜಿಗಲ್ಲಿನಂತೆ

ಆಕರ್ಷಿಸುತ್ತಿದ್ದ, ಆಲೂರಿಗೆ ಧಾವಿಸುತ್ತಿದ್ದೆ, ಹುಡುಕಾಡಿ ಅವನನ್ನು ಭೆಟ್ಟಿಯಾಗುತ್ತಿದ್ದೆ, ಕೂಡ್ರಬಾರದ ಕಡೆ ಕೂಡ್ರುವಂತೆ ಹೇಳುತ್ತಿದ್ದ, ನಿಲ್ಲಬಾರದ ಕಡೆ ನಿಲ್ಲುವಂತೆ ಹೇಳುತ್ತಿದ್ದ, ತಿನ್ನಬಾರದ ಆಹಾರವನ್ನು ತಿನ್ನಲು ಸೂಚಿಸುತ್ತಿದ್ದ, ಕುಡಿಯಬಾರದ ದ್ರವವನ್ನು ಸೇವಿಸುವಂತೆ ಆಜ್ಞಾಪಿಸುತ್ತಿದ್ದ, ನನ್ನನ್ನು ತನ್ನ ಬೆನ್ನ ಹಿಂದೆ ಇರಿಸಿಕೊಂಡು ಅನೈತಿಕ ಸ್ಥಳಗಳಲೆಲ್ಲ ಅಲೆದಾಡಿಸುತ್ತಿದ್ದ ಮಹಾನುಭಾವ ತಾನಾಗಿದ್ದ. ಹೀಗೆ ತುಚ್ಛವಾಗಿ ನಿಕೃಷ್ಟವಾಗಿ ಪರಿಗಣಿಸುತ್ತಿದ್ದರೂ ನಾನು ನಿರಾಸೆಗೊಳ್ಳುತ್ತಿರಲಿಲ್ಲ, ಅವನ ಪ್ರತಿಯೊಂದು ಮಾತನ್ನು ತ್ರಿಕರಣಪೂರ್ವವಾಗಿ ಪಾಲಿಸುತ್ತಿದ್ದೆ, ಕಾರಣ ಅವನನ್ನು ವೈಚಾರಿಕ ತವನಿಧಿಯೆಂದೇ ಭಾವಿಸಿದ್ದೆ.

ಓಹ್ ಆತನ ಸಮ್ಮೋಹಕ ವ್ಯಕ್ತಿತ್ವವೇ!

ಆ ದಿವಸ ಕಂಡ ನನ್ನ ಮುಂಗೈ ಹಿಡಿದು ಸರಾಯಿ ದುಖಾನಿಗೆ ಕರೆದೊಯ್ದ, ಮೂಗು ಮುಚ್ಚಿಕೊಂಡು ಒಂದು ಗ್ಲಾಸ್ ಖಾಲಿ ಮಾಡುವಂತೆ ಸೂಚಿಸಿದ, ಬಳಿಕ ಸರ್ಕಾರಿ ನೌಕರಿ ಮುಖವಾಡ ಧರಿಸಿಯೇ ಸಾಮಾಜಿಕ ಅನಿಷ್ಟಗಳ ವಿರುದ್ಧ ನೀನ್ಯಾಕೆ ಹೋರಾಡಬಾರದೆಂದು ಪ್ರಶ್ನಿಸಿದ, ತಲೆ ಅಲ್ಲಾಡಿಸಿದೆ. ನೀನ್ಯಾಕೆ ನಿನ್ನ ಶ್ರಮರಹಿತ ದುಡಿಮೆಯ ಅರ್ಧಭಾಗವನ್ನು ನಮ್ಮ ಸಂಘಟನೆಗೆ ಕೊಡಬಾರದೆಂದು ನಿರ್ಭಿಡೆಯಿಂದ ಕೇಳಿದ, ತಲೆ ಅಲ್ಲಾಡಿಸಿದೆ. ಬಳಿಕ ವಿವಾಹ ಪದ್ಧತಿ ಕುರಿತಂತೆ, ಹೆಂಡತಿ ಮಕ್ಕಳೆಂಬ ಶೃಂಖಲೆ ಕುರಿತಂತೆ ವಿದ್ವತ್ಪೂರ್ಣವಾಗಿ ಮಾತಾಡಿದ. ತಾನೂ ನವವಿವಾಹಿತನೆಂದೂ ತನ್ನ ಪತ್ನಿ ಚೊಚ್ಚಿಲ ಗರ್ಭಿಣಿ ಎಂದೂ ಆ ಎಲ್ಲ ಬಂಧನಗಳನ್ನು ಕಳಚಿಕೊಂಡು ತಾನು ಆಲೂರಿನಲ್ಲಿ ತಲೆ ಮರೆಸಿಕೊಂಡಿರುವುದಾಗಿಯೂ ಹೇಳಿದ. ಕೇಳಿ ನಾನು ದಿಗ್ಭ್ರಮೆಗೊಳ್ಳದೆ ಇರಲಿಲ್ಲ.

ಓಹ್ ಪನ್ನಂಗಧರನೆಂಬ ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿಯೇ!

ಆತನೊಂದಿಗಿನ ಒಂದೊಂದು ಭೆಟ್ಟಿಯೂ ವಿನೂತನ ಅನುಭವ. ಆರಂಭದ ದಿವಸಗಳಲ್ಲಿ ಕೇಳಿದಾಗ ಕೊಡುತ್ತಿದ್ದೆ, ನಂತರದ ದಿವಸಗಳಲ್ಲಿ ಆತ ಕೇಳದಿದ್ದರೂ ಕೊಡಲಾರಂಭಿಸಿದೆ. ಕೆಲವೊಂದು ಸಲ ಆತನೇ ನನ್ನ ಅಸಹಾಯಕತೆಯನ್ನು ಗಮನಿಸಿ ಆರ್ಥಿಕಾಸರೆಯಾಗಿರುವುದೂ ಉಂಟು. ತಾನು ಮಾಡುತ್ತಿದ್ದ ಸಾಲಗಳನ್ನು ತೀರಿಸುವಂತೆ ಸೂಚಿಸುತ್ತಿದ್ದುದೂ ಉಂಟು. ನಮ್ಮಿಬ್ಬರ ಈ ಒಡನಾಟವನ್ನು ಅನೈತಿಕ, ಸಮಾಜ ವಿರೋಧಿ ಎಂದು ಗುಮಾನಿಯಿಂದ ನೋಡುತ್ತಿದ್ದವರು ಆಲೂರು ಪಟ್ಟಣದ ಹಲವು ಕಡೆ ತಲೆಮರೆಸಿಕೊಂಡಿದ್ದರು. ಆದರೆ ಶ್ರೀಕೃಷ್ಣಭವನದ ಮಾಲಕ ಹೆಬ್ಬಾರ್ ಹೃದಯವಿದ್ರಾವಕವೂ, ಕರುಣಾಜನಕವೂ, ಅಷ್ಟೇ ಭೀಭತ್ಸಕಾರಿಯೂ ಆದ ಕೆಲವು ಘಟನೆಗಳನ್ನು ಹೇಳಿದ ಬಳಿಕ ಜಾಗ್ರತೆ ವಹಿಸಿದೆ, ಎಚ್ಚತ್ತುಕೊಂಡೆ. ಅವನ ಸುತ್ತ ಹರಡಿದ್ದ ವದಂತಿಗಳನ್ನು ಆಲಿಸಿ ಬೆಚ್ಚಲಾರಂಭಿಸಿದೆ, ಆಲೂರಿಗೆ ಬಂದು ಹೋಗುವುದನ್ನು ಹ್ರಸ್ವಗೊಳಿಸಿದೆ. ಅನಿವಾರ್ಯ ಸಂದರ್ಭಗಳಲ್ಲಿ ಆಯ್ದುಕೊಳ್ಳುತ್ತಿದ್ದುದೂ ಒಳದಾರಿಗಳನ್ನೆ! ಆರಂಭದ ರಾತ್ರಿಗಳ ಕನಸುಗಳಲ್ಲಿ ಕಾಣಿಸಿಕೊಳ್ಳುತ್ತಿದ್ದವನು ಕ್ರಮೇಣ ಕನಸು ಕನವರಿಕೆಗಳಿಂದಲೂ ದೂರ ಸರಿದು ಉಪಕರಿಸಿದ ಸಹಕರಿಸಿದ.

ಓಹ್ ಪನ್ನಂಗಧರನೆಂಬ ಸರ್ವಾಂತರ್ಯಾಮಿಯೇ!

ಎರಡು ತಿಂಗಳುಗಳಿಂದ ಆಲೂರು ಕಡೆ ಮುಖ ಹಾಕಿ ಮಲಗಿರಲಿಲ್ಲ. ನನ್ನ ಪಾಡಿಗೆ ನಾನು ಹೋಗುವುದು ಬರುವುದು ನನ್ನ ಪಾಡಿಗೆ ನಡೆದೇ ಇತ್ತು. ಆ ದಿವಸ ಮಧ್ಯಾಹ್ನ, ಬೆಳಗಿನ ತರಗತಿಯನ್ನು ಮುಗಿಸಿ ಮನೆ ಕಡೆ ಹೆಜ್ಜೆ ಹಾಕಿದೆ. ಮನೆ ಬಾಗಿಲು ಮುಚ್ಚಿರಲಿಲ್ಲ,

ತೆರೆದೇ ಇತ್ತು, ಕೇಳಿದ್ದಕ್ಕೆ ಮೂಲಿಮನಿ ಗೌಡರು "ಯಾರೋ ನಿಮ್ಮ ಕಡೆಯವರಂತೆ ಮೇಸ್ಟ್ರೇ! ಛಾವಿ ಕೇಳಿದರು ಕೊಟ್ಟೆ, ಒಳಗಿರಬಹುದೇನೊ!" ಎಂದು ಹೇಳಿದರು. ಕೇಳಿಸಿಕೊಂಡ ನನಗೆ ಭಯವಾಯಿತು, ನಮ್ಮ ಕಡೆಯವರೆಂದರೆ ಯಾರಿರಬಹುದು! ಅವರಿರಬಹುದೆ, ಇವರಿರಬಹುದೆ ಎಂದು ನಿಂತು ಯೋಚಿಸಿದೆ. ಹೊಳೆಯಲಿಲ್ಲ. ಮೆಲ್ಲಗೆ ಹೋಗಿ ಹೊಸ್ತಿಲು ದಾಟಿದೆ. ಅಡುಗೆ ಪರಿಮಳ ಘಮ್ಮನೆ ಮೂಗನ್ನು ಪ್ರವೇಶಿಸಿತು. ಕೈಯಲ್ಲಿ ಚೌಟು ಹಿಡಿದಿದ್ದ ವ್ಯಕ್ತಿಯನ್ನು ಹೊಗೆಯಲ್ಲಿ ಗುರುತಿಸುವುದಾಗಲಿಲ್ಲ. ತಾನೇ ಸಮೀಪಿಸಿದ. ನೋಡಿದೊಡನೆ ಭಯದಿಂದ ನಡುಗಿದೆ. ಪನ್ನಂಗಧರ! ಯಾರನ್ನು ಜೀವನಪರ್ಯಂತ ನೋಡಬಾರದೆಂದು ನಿರ್ಧರಿಸಿದ್ದೆನೋ ಅದೇ ಪನ್ನಂಗಧರ! ಹಿಂದೆಂದಿಗಿಂತ ಹೆಚ್ಚು ಆಕರ್ಷಕವಾಗಿ ಗೋಚರಿಸುತ್ತಿರುವ ಪನ್ನಂಗಧರ! ಮಾತು ಹೊರಡಲಿಲ್ಲ. ತಾನೇ ಇನ್ನೂ ಸಮೀಪಿಸಿ ಉಸಿರಳತೆಯಲ್ಲಿ ನಿಂತು "ನಿನ್ನನ್ನು ಹುಡುಕಿಕೊಂಡು ನಾನೇ ಬಂದೆ, ಹೊಟ್ಟೆ ಬೇರೆ ಹಸಿದಿತ್ತು, ಅಡುಗೆ ಮಾಡಿರುವೆ, ನೀನೂ ಹಸಿದಿರುವಂತಿದೆ, ಮೊದಲು ಊಟ, ನಂತರ ಮಾತುಕತೆ" ಎಂದು ಹೇಳಿದ. ನೀನು ಬರಬಾರದಿತ್ತು, ಬಂದು ಅನಧಿಕೃತವಾಗಿ ಮನೆಯನ್ನು ಪ್ರವೇಶಿಸಬಾರದಿತ್ತು, ಪ್ರವೇಶಿಸಿ ನಳಪಾಕ ಇಳಿಸಬಾರದಿತ್ತು, ಇಳಿಸಿ ತಾಯಿಯಂತೆ ಊಟ ಬಡಿಸಬಾರದಿತ್ತು, ಬಡಿಸುವುದರ ಮೂಲಕ ನನ್ನನ್ನು ಸಮ್ಮೋಹನಗೊಳಿಸಬಾರದಿತ್ತು, ಕೇಳಲಾಗಲಿಲ್ಲ.

ಓಹ್ ಪನ್ನಂಗಧರನೆಂಬ ಮಾಯಾವಿಯೆ!

ನನ್ನ ಎದುರು ಮಟ್ಟಸರೀತಿಯಲ್ಲಿ ಪದ್ಮಾಸನಯಕ್ತನಾಗಿ ಕುಳಿತ, ಎವೆ ಇಕ್ಕದಂತೆ ನೋಡಿ ಪರವಶಗೊಳಿಸಲಾರಂಭಿಸಿದ, ತನ್ನೆರಡೂ ಕೈಗಳನ್ನು ಒಟ್ಟಿಗೆ ನನ್ನ ಭುಜದ ಮೇಲಿರಿಸಿ ಅಪ್ಯಾಯತೆಯಿಂದ ಸ್ಪರ್ಶಿಸಿದ, ಮಾಂತ್ರಿಕ ಜಲವನ್ನು ಆವಹಿಸಿಕೊಂಡು ತನ್ನ ಕಣ್ಣುಗಳಲ್ಲಿ ತುಂಬಿಕೊಂಡ. "ನೀನು ಇಂಥ ಕಡೆ ಇರಬಾರದು, ನೀನು ಇರಲು ಪ್ರಶಸ್ತ ಸ್ಥಳವೆಂದರೆ ಅದು ನಮ್ಮೆಲ್ಲರ ಹೋರಾಟದ ಕುರುಕ್ಷೇತ್ರವೆಂದು ಹೆಸರಾಗಿರುವ ನಲ್ಲಮಲ ನೈಮಿಷಾರಣ್ಯ ಕಣೋ!" ಎಂದು ಹೇಳುತ್ತ ಅದನ್ನು ನನ್ನೊಳಗೆ ಸಾಕ್ಷಾತ್ಕಾರಗೊಳಿಸಲಾರಂಭಿಸಿದ.

ಓಹ್ ನಲ್ಲಮಲ ಅರಣ್ಯವೇ!

ನನ್ನೊಳಗೆ ಒಡಮೂಡಿದ ಅದು ತನ್ನ ತುರುಬಲ್ಲಿ ಕಾಳ್ಗಿಚ್ಚು ಮುಡಿದು ಧಗಧಗನೆ ಉರಿಯಲಾರಂಭಿಸಿತು. ಅಣ್ಣಂದಿರ ಪ್ರವೇಶದಿಂದ ಕಂಗೆಟ್ಟ ಸಿಂಹ ಶಾರ್ದೂಲವೇ ಮೊದಲಾದ ವನ್ಯಪ್ರಾಣಿಗಳು ದಿಕ್ಕೆಟ್ಟು ಪಲಾಯನ ಮಾಡಲಾರಂಭಿಸಿದವು. ಅಲ್ಲಿ ಎಲ್ಲಂದರಲ್ಲಿ ಅಣ್ಣಂದಿರ ಕವಾಯತುಗಳು ಒತ್ತಕ್ಷರಗಳುಳ್ಳ ಭಾಷಣಗಳು ಪ್ರತಿಧ್ವನಿಸಲಾರಂಭಿಸಿದವು.

ಪುನಃ ನನ್ನ ದುರ್ಬಲ ಶ್ರವಣೇಂದ್ರಿಯಗಳಲ್ಲಿ ತನ್ನ ಬಾಯಿಯಿರಿಸಿ "ಕುರುಕ್ಷೇತ್ರ ರಣಾಂಗಣದಲ್ಲಿ ನಿರ್ಣಾಯಕ ಪಾತ್ರ ವಹಿಸಿ ಅಕ್ಷೋಹಿಣಿ ಅಕ್ಷೋಹಿಣಿ ದುಷ್ಟರ ಸಂಹಾರಕ್ಕೆ ಕಾರಣನಾದ ಶ್ರೀಕೃಷ್ಣನನ್ನು ನೆನಪು ಮಾಡಿಕೊ" ಎಂದ, ಆ ಶ್ಯಾಮ ಸುಂದರ ನೆನಪಿಲ್ಲದೆ ಏನು! ಶತಶತಮಾನಗಳ ಸಾಹಿತ್ಯದಲ್ಲಿ ಮರುಹುಟ್ಟು ಪಡೆಯುತ್ತಲೇ ಇರುವ, ವಿವಿಧಾಕಾರಗಳಲ್ಲಿ ಗೋಚರಿಸುತ್ತಲೇ ಇರುವ, ಪ್ರತಿಯೊಂದು ಅಕ್ಷರಕ್ಕೂ ಪೂತನಿಯ ಸ್ತನ್ಯಪಾನ ಮಾಡಿಸುತ್ತಲೇ ಇರುವ ಆ ಮಾಯಾವಿ ಯಾರಿಗೆ ತಾನೆ ತಿಳಿಯದು! ತಲೆ ಅಲ್ಲಾಡಿಸಿದೆ.

ಪುನಃ ತಾನೆ "ಅವನ ಹನ್ನೊಂದನೆ ಅವತಾರವೆನಿಸಿರುವ ಮುಪ್ಪಾಳು ಲಕ್ಷ್ಮಣರಾವ್ ನಲ್ಲಮಲ ಕುರುಕ್ಷೇತ್ರದಿಂದ ನೇರವಾಗಿ ಹೊರಬಂದು ಆಲೂರಲ್ಲಿದ್ದಾನೆ" ಎಂದ.

ಓಹ್ ಮುಪ್ಪಾಳ್ ಲಕ್ಷ್ಮಣರಾವ್!

ಭಾರತೀಯ ಕಾನೂನು ನೀತಿ ಸಂಹಿತೆ ಎಂಬ ಕಾಳಿಂಗದ ಸುರುಸುಂದರ ಹೆಡೆ ಮೇಲೆ ಕಾಲೂರಿ ನಿಂತು ಮುರುಳಿ ನುಡಿಸುತ್ತಲೇ ಇರುವ ಮುಪ್ಪಾಳ್ ಲಕ್ಷ್ಮಣರಾವ್! ಒಂದು ಕ್ಷಣ ಆ ಅಗೋಚರ ಪ್ರಿಡೇಟರನನ್ನು ಕಲ್ಪಿಸಿಕೊಂಡೆ. ಅವನು ಲಕ್ಷ್ಮಿ ಎಂಬ ಹೆಸರಿನಲ್ಲಿ ಬರೆಯುತ್ತಿರುವ ಕಥೆ ಕವಿತೆಗಳನ್ನು ನೆನಪಿಸಿಕೊಂಡೆ. ಅವುಗಳ ಪೈಕಿ ಕೆಲವು ಕಥೆಗಳನ್ನು ಕನ್ನಡಕ್ಕೆ ಅನುವಾದಿಸುವುದನ್ನೂ, ಅವುಗಳಿಂದ ಸಂದಾಯವಾಗಿರುವ ಸಂಭಾವನೆಯನ್ನೂ, ಆ ಸಂಪಾದನೆಯ ಸಹಾಯದಿಂದ ಸೇವಿಸಿರುವ ಮಾದಕಪೇಯಗಳನ್ನೂ ನೆನಪು ಮಾಡಿಕೊಂಡೆ. ಒಡಲೊಳಗಿನ ಆಹಾರ ವಾಂತಿ ರೂಪದಲ್ಲಿ ಗಂಟಲಲ್ಲಿ ಕಾಣಿಸಿಕೊಂಡು ಅಲ್ಲಿಯೇ ಸ್ಥಗಿತವಾಯಿತು. ಒಡಲೊಳಗಿನ ಪ್ರತಿಯೊಂದು ಅನ್ನದ ಅಗುಳಿನಲ್ಲಿ ಆ ಅಗೋಚರ ವ್ಯಕ್ತಿ ಪುರುಷಸೂಕ್ತವನ್ನು ಪಠಿಸಲಾರಂಭಿಸಿದ. ಅಪಧಮನಿ ಅಭಿದಮನಿಗಳಲ್ಲಿ ನರನಾಡಿಗಳಲ್ಲಿ ಅದು ಪ್ರತಿಧ್ವನಿಸಲಾರಂಭಿಸಿತು. ನಿನ್ನ ಕನಸುಕನವರಿಕೆಗಳಲ್ಲಿ ಮೂಡಿ ಮರೆಯಾಗುತ್ತಿದ್ದವನು ನಾನೇ ಎಂದು ಹೇಳುತ್ತಿರುವಂತೆ ಭಾಸವಾಯಿತು.

ಓಹ್ ಅದೇ ಲಕ್ಷ್ಮಣರಾವ್!

ಮಾವೋವಾದಿಗಳಲ್ಲಿ ಗಣಪತಿ ಎಂಬಭಿದಾನದಿಂದ ಪ್ರಸಿದ್ಧನಾಗಿರುವನೋ ಅದೇ ಲಕ್ಷ್ಮಣರಾವ್! ಸುಳಿವು ನೀಡಿದವರಿಗೆ ಹತ್ತು ಲಕ್ಷ! ಕೊಲೆ ಮಾಡುವ ಮೂಲಕ ಪರಾಕ್ರಮ ಮೆರೆಯುವವರಿಗೆ ಇಪ್ಪತ್ತು ಲಕ್ಷ ಬಹುಮಾನ ನೀಡುವುದಾಗಿ ಸರ್ಕಾರ ಕರಪತ್ರಗಳನ್ನು ಸಚಿತ್ರ ಭಿತ್ತಿಪತ್ರಗಳನ್ನು ಆಲೂರು ಕರ್ನೂಲು ಆದವಾನಿಗಳಂಥ ನಗರಗಳ ಗೋಡೆಗಳ ಮೇಲೆಲ್ಲಾ ಅಂಟಿಸಿರುವುದಲ್ಲಾ, ಅದೇ ಲಕ್ಷ್ಮಣರಾವ್! ನನಗಿಂತ ಐದುವರ್ಷ ಕಿರಿಯನಿರಬಹುದಾದ ನಿಮಗಿಂತ ಎರಡು ವರ್ಷ ಹಿರಿಯನಿರಬಹುದಾದ ಅದೇ ಲಕ್ಷ್ಮಣರಾವ್! ಕಾರಂಪೂಡಿಯಲ್ಲಿ ದಲಿತರ ಕಗ್ಗೊಲೆಗೆ ಕಾರಣರಾದ ಜಮೀನ್ದಾರ ಸುಬ್ಬಾರೆಡ್ಡಿಯನ್ನು, ಸಿರಿಸಿಲ್ಲಾದ ನರಮೇಧಕ್ಕೆ ಕಾರಣನಾದ ಹರಿಶ್ಚಂದ್ರರೆಡ್ಡಿಯನ್ನು, ನಕಲಿ ಎನ್‌ಕೌಂಟರ್ ಸ್ಪೆಷಲಿಸ್ಟ್ ಡಿವೈಎಸ್ಪಿ ಬೋಸ್‌ನನ್ನು ಪ್ರಜಾಕೋರ್ಟಿನಲ್ಲಿ ವಿಚಾರಣೆಗೊಳಪಡಿಸಿ ಮರಣ ದಂಡನೆ ನೀಡಿದ ಅದೇ ಲಕ್ಷ್ಮಣರಾವ್!

ನೆನಪಿಸಿಕೊಳ್ಳಲಾರಂಭಿಸಿದೆ, ಊಹಿಸಿಕೊಳ್ಳಲಾರಂಭಿಸಿದೆ, ಭಯದಿಂದ ಕಂಪಿಸಲಾರಂಭಿಸಿದೆ, ರೋಮಾಂಚನವನ್ನು ಶ್ವೇದ ರಂದ್ರಗಳಲ್ಲಿ ಪಲ್ಲವಿಸಲಾರಂಭಿಸಿದೆ. ಮಾತುಗಳನ್ನರಿಯದ ಮೂಗನಂತೆ ಅನಪೇಕ್ಷಿತ ಅತಿಥಿಯ ಕಡೆ ಮುಗ್ದತೆ ಅಮಾಯಕತೆ ಅಪ್ಯಾಯತೆಯಿಂದ ನೋಡುತ್ತ ಸ್ರವಿಸಲಾರಂಭಿಸಿದೆ. ಪುನಃ ತಾನೆ

"ಅಂತೂ ಈಗಲಾದರೂ ಸ್ಮರಣೆಗೆ ತಂದುಕೊಂಡೆಯಲ್ಲ ಆ ಮರ್ಯಾದಾ ಪುರುಷೋತ್ತಮನ ದಿವ್ಯರೂಪವನ್ನು! ಆ ಅವನನ್ನು ಅತಿಥಿಯಾಗಿ ಬರಮಾಡಿಕೊಳ್ಳಲು ಉದ್ದಿಮೆಗಳು, ಪಂಚತಾರಾ ಹೋಟಲುಗಳು ಮಾಲಕರು, ಅಧಿಕಾರಿಗಳು, ರಾಜಕಾರಣಿಗಳು ತುದಿಗಾಲಲ್ಲಿ ನಿಂತು ಕಾಯುತ್ತಿದ್ದಾರೆ. ಆದರೆ ಆ ಎಲ್ಲಾ ಐಷಾರಾಮಿ ಸವಲತ್ತುಗಳನ್ನು ದಿಕ್ಕರಿಸಿ ಆ ಲಕ್ಷ್ಮೀವಲ್ಲಭ ನನ್ನಂಥ ಕುಚೇಲನ ಕುಟೀರದಲ್ಲಿ, ನನ್ನಂಥ ವಿಧುರನ ಮನೆಯಲ್ಲದ ಮನೆಯಲ್ಲಿ ಅತಿಥಿಯಾಗಿರುವುದು ನನ್ನ ಪೂರ್ವಜನ್ಮದ ಸುಕೃತ ತಾನೆ! ಇಂಡಿಯನ್ ಪಿನಲ್ ಕೋಡುಗಳ ಮೇಲೆ ಧೀರೋದಾತ್ತವಾಗಿ ನಡೆದು ಅಷ್ಟು ದೂರದಿಂದ ಆಲೂರಿನ ವರೆಗೆ ತಾನು ದಯಮಾಡಿಸಿರುವುದು ಯಾಕೆ ಎಂಬುದು ನಿನ್ನ ಸಂದೇಹ ತಾನೆ! ಅದೇ ಸಮರ್ಥ ಗಾಂಡೀವಿಯನ್ನು ಅರಸಿಕೊಂಡು, ಗಾಂಡೀವಿ ಅಂದರೆ ಅದೇ ಖಾಂಡವವನ

ದಹನದಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಧನಸ್ಸು! ಆ ಧನಸ್ಸು ಧರಿಸಲು ನೀನೇ ಯೋಗ್ಯ! ನೀನು ಇನ್ನು ತಡಮಾಡದೆ ನನ್ನೊಂದಿಗೆ ಹೊರಡು. ಹೊರಟು ಆತನ ಸಾನ್ನಿಧ್ಯದಲ್ಲಿ ಸ್ಥಾನ ಪಡೆದುಕೊ! ಆ ತ್ರಿಕಾಲಜ್ಞಾನಿ ಸಂಗಡ ಮನಸ್ಸು ತೆರೆದು ಸಮಕಾಲೀನ ಸಮಾಜದ ಸಮಸ್ಯೆಗಳ ಕುರಿತು ಚರ್ಚಿಸು! ವರ್ತಮಾನ ಸಮಾಜದ ಮೈ ತುಂಬ ಇರುವ ಗಾಯಗಳ ಪರಿಚಯ ಮಾಡಿಕೊ! ನಿನ್ನಂಥ ಲೇಖಕ ಮನೆ ಬಾಗಿಲಿಗೆ ಬಂದಿರುವ ಈ ಸುವರ್ಣಾವಕಾಶವನ್ನು ಕಳೆದುಕೊಳ್ಳಕೂಡದು. ಹ್ಞಾಂ ಅಂದ ಹಾಗೆ ರಿಕ್ತ ಹಸ್ತಗಳೊಂದಿಗೆ ಹೊರಡುವುದು ಥರವಲ್ಲ, ನಗದೇನಾದರು ಇದ್ದರೆ ನಗದನ್ನು, ಉಳಿತಾಯ ಖಾತೆಯ ಪುಸ್ತಕಗಳನ್ನು, ಚಿನ್ನದ ರೂಪದಲ್ಲಿರುವ ಉಂಗುರ ಚೈನುಗಳನ್ನು, ಒಂದು ಜೊತೆ ಬಟ್ಟೆಬರೆಗಳನ್ನು ಚೀಲದಲ್ಲಿಟ್ಟುಕೊ ಆದಷ್ಟು ಬೇಗನೆ. ಹೊರಡೋಣ, ತಡಮಾಡುವುದು ಬೇಡ" ಎಂದು ಅವಸರಿಸಿದ.

ಅದಕ್ಕೆ ಏನು ತಾನೆ ಹೇಳಲಿ! ನಖಶಿಖಾಂತ ಬೆವೆತೆ. ಮಾತಾಡಲು ತಡವರಿಸಿದೆ. ಪ್ರಾಣೋತ್ಕ್ರಮಣ ಸ್ಥಿತಿಯಲ್ಲಿರುವ ವ್ಯಕ್ತಿಯಂತೆ ಮನೆಯ ಒಳಗಡೆ ಎಲ್ಲ ನೋಡಿದೆ. ನಿಟ್ಟುಸಿರುಬಿಟ್ಟೆ. ನಾಡಿದ್ದು ಬರುವುದಾಗಿ ಹೇಳಿದೆ, ನಿಡಿದಾಗಿ ನೋಡಿ ನಿಡುಸುಯ್ದು, "ಲೌಕಿಕ ಪ್ರಪಂಚವನ್ನು ತ್ಯಜಿಸುವುದು ಕಷ್ಟ, ನನಗೂ ಗೊತ್ತು. ಆತನ ಸಂಗಡ ಚರ್ಚಿಸಿ ಮೊದಲು ಅನುಮಾನ ಬಗೆ ಹರಿಸಿಕೊ, ಸಮಾಜದ ಗಾಯಗಳನ್ನು ಅರ್ಥ ಮಾಡಿಕೊ. ಚಿಕಿತ್ಸೆ ನೀಡುವುದು ಲೇಖಕನಾದವನ ಕರ್ತವ್ಯವೆನಿಸಿದರೆ ಮಾತ್ರ ನೀನು ನಲ್ಲಮಲ ಅರಣ್ಯದ ಕಡೆ ಹೊರಡಬಹುದು, ಏನನ್ನುವಿ?" ಎಂದು ಸಲಹೆ ನೀಡಿದ.

ಗಾಯಗಳಲ್ಲ ಅವು! ಕುಷ್ಟದ ನಿಕೃಷ್ಟಾತಿ ನಿಕೃಷ್ಟ ಕಲೆಗಳವು! ಅವುಗಳನ್ನು ಕೋವಿ ಸಹಾಯದಿಂದ ಚಿಕಿತ್ಸೆ ಕೊಡುವುದೆಂದರೆ! ನಾಡಿದ್ದು ತಪ್ಪದೆ ಬರುವುದಾಗಿ ಪುನಃ ಹೇಳಿದೆ. ಅವನು ತೊಲಗಿದರೆ ಸಾಕೆಂದೆನ್ನಿಸಿತು. ಒಲ್ಲದ ಮನಸ್ಸಿನಿಂದ ಸಮ್ಮತಿಸಿದ. ಹೊರಡುವ ಸನ್ನಾಹದಲ್ಲಿ ಹೊರಡುವುದೋ, ಹೊರಡದೆ ಇರುವುದೋ ಎಂದು ಸಂದೇಹಿಸಿ. ಅಂತಿಮವಾಗಿ ಎಷ್ಟಿದೆ ನಿನ್ನ ಬಳಿ ಎಂದು ಕೇಳಿದ. ಐವತ್ತೋ ನೂರೋ ಎಂದೆ, ಸಾಲದೆಂದ. ಎಲ್ಲಾದರು ಸಾಲ ಮಾಡಿ ಸಾವಿರವಾದರೂ ಕೊಡು ಎಂದ. ಅದು ನನ್ನ ಮೂರು ತಿಂಗಳ ದುಡಿಮೆ, ಎಲ್ಲಿಂದ ತರುವುದು! ಯಾರನ್ನು ಕೇಳುವುದು! ಮೂಲಿಮನಿ ಗೌಡರ ಬಳಿ ಮನ್ನೂರನ್ನು ಕೈಗಡ ಪಡೆದುಕೊಂಡು ಬಂದು ಶುಲ್ಕ ಸಂದಾಯ ಮಾಡಿದೆ. ಮರು ಮಾತಾಡದೆ ಇಸಿದುಕೊಂಡು ಹೊರಟು ನಿಂತ. ಬೀಳ್ಕೊಡುವ ಸಲುವಾಗಿ ನಾನೂ ಚಪ್ಪಲಿ ಧರಿಸಿದೆ.

ಅಗಸೆ ಬಾಗಿಲನ್ನು ಮಾತ್ರವಲ್ಲದೆ ಸಿದ್ಧಾರೂಢರ ಗುರುತಿನ ಸ್ಥಳವನ್ನು ತಲುಪುವವರೆಗೆ ನಾವಿಬ್ಬರು ಮಾತಿನ ನೆರವು ಪಡೆಯಲಿಲ್ಲ. ಅಗಲುವಾಗ ಇದ್ದಕ್ಕಿದ್ದಂತೆ ಆಲಂಗಿಸಿಕೊಂಡ, "ನಿನ್ನನ್ನು ಕರೆದುಕೊಂಡು ಬರುವುದಾಗಿ ಕಾಮ್ರೇಡ್ ಅವರಿಗೆ ಮಾತು ಕೊಟ್ಟಿರುವೆ, ತಪ್ಪದೆ ಬರುವಿ ತಾನೆ!" ಎನ್ನುತ್ತ ಒದ್ದೆ ಕಣ್ಣುಗಳನ್ನು ಒರೆಸಿಕೊಂಡ. ಒಪ್ಪಿಗೆ ಸೂಚಿಸಿದ ಬಳಿಕ ನಡೆಯುತ್ತ ಮರೆಯಾದ. ಆತನ ದೇಹ ಕಣ್ಮರೆಯಾಗುವವರೆಗೆ ನೋಡುತ್ತ ನಿಂತಿದ್ದು ವಾಗಿಲಿ ಕಡೆ ಮರಳಿದೆ.

ಓಹ್ ಪನ್ನಂಗಧರನೆಂಬ ಗರಿಷ್ಠ ಉಷ್ಣತಾಮಾನವೆ!

++++

ಪನ್ನಂಗಧರ ದೈಹಿಕವಾಗಿ ಕಣ್ಮರೆಯಾದರೂ ಮಾನಸಿಕವಾಗಿ ಕಣ್ಮರೆಯಾಗಲಿಲ್ಲ. ನೋಡಿದವರು ಸುಮ್ಮನಿರಲಾದೀತೆ! ಅವರು ಕೇಳುತ್ತಿದ್ದ ಪ್ರಶ್ನೆಗಳೋ! ವ್ಯಕ್ತಪಡಿಸುತ್ತಿದ್ದ

ಸಂದೇಹಗಳೋ! ತಮಗೆ ತಾವೆ ಸೃಷ್ಟಿಸಿಕೊಳ್ಳುತ್ತಿದ್ದ ಊಹೆಗಳೋ! ಹರಡಿಸಲಾರಂಭಿಸಿದ ವದಂತಿಗಳೋ! ಇವೆಲ್ಲ ಒಂದು ತೂಕವಾದರೆ ಕಾಡಲಾರಂಭಿಸಿದ ಅವನ ನೆನಪು ಇನ್ನೊಂದು ತೂಕವೆನಿಸಿತು. ಶುಷ್ಕ ಎಲುಬಿನಲ್ಲಿ ನೆತ್ತರ ಪಸೆ ಇಲ್ಲವೆಂದು ತಿಳಿದಿದ್ದರೂ ಶುನಕ ಅದನ್ನು ಕಡಿದೂ ಕಡಿದು ತನ್ನ ವಸುಡುಗಳು ಸ್ರವಿಸುವ ರಕ್ತವನ್ನೇ ಸವಿಯುತ್ತ ತನ್ನ ಹಸಿವು ಹಿಂಗಿಸಿಕೊಳ್ಳುವಂತೆ ನಾನು ಅವನ ಹಿಂಸಪ್ರದ ನೆನಪುಗಳನ್ನು ಮೆಲುಕು ಹಾಕಲಾರಂಭಿಸಿದೆ. ದುಃಸ್ವಪ್ನಗಳನ್ನು ಆಸ್ವಾದಿಸಲಾರಂಭಿಸಿದೆ, ಅವನೆಂಬ ಗುರುತ್ವಾಕರ್ಷಣೆಯಿಂದ ತಪ್ಪಿಸಿಕೊಳ್ಳಲು ಶಕ್ತಿಮೀರಿ ಶ್ರಮಿಸಲಾರಂಭಿಸಿದೆ. ನನ್ನ ಒಳತೋಟಿಗೆ ಅಕ್ಷರ ರೂಪ ಕೊಡುವ ವಿಫಲ ಪ್ರಯತ್ನ ನಡೆಸಿದೆ.

ಪನ್ನಂಗಧರ ಎಂಬ ಹೆಸರಿನ ಗ್ರಹಕ್ಕಿಂತಲೂ ಮುಪ್ಪಾಳ್ ಲಕ್ಷ್ಮಣರಾವ್ ಎಂಬ ಹೆಸರಿನ ಗ್ರಹ ಶಕ್ತಿಶಾಲಿ ಪ್ರಭಾವಶಾಲಿ. ಕೊಂಡಪಲ್ಲಿ ಸೀತಾರಾಮಯ್ಯ ಎಂಬ ಮಾನಸ ಸರೋವರದೊಳಗಿಂದ ಒಡಮೂಡಿರುವ ವೈಶಂಪಾಯನ ಸರೋವರದ ಅಪರಾವತಾರವೇ ತಾನು! ಆತನನ್ನು ನೋಡುವ, ಆತನೊಂದಿಗೆ ಒಡನಾಡುವ, ಆತನ ಮಾವೋ ಪ್ರಣೀತ ಮಾತುಗಳನ್ನು ಗಾಂಧೀ ಪ್ರಣೀತ ನಿಕಷಕ್ಕೊಡುವ ಮಹದಾಸೆ ನನ್ನಲ್ಲಿಲ್ಲದೆ ಇರಲಿಲ್ಲ. ಅವರಿರುವಲ್ಲಿಗೆ ಹೊರಡಲು ಆ ಎರಡು ದಿವಸಗಳಲ್ಲಿ ಶಕ್ತಿಮೀರಿ ಪ್ರಯತ್ನಿಸಿದೆ. ಅನೇಕ ಸಲ ಹಾದಿ ಮಧ್ಯದವರೆಗೆ ಹೋಗಿ ಧೈರ್ಯ ಸಾಲದೆ ಮರಳಿ ಬಂದು ಸುರಕ್ಷತಾ ಬಿಲ ಸೇರಿಕೊಂಡೆ. ಇಂಥ ಗಾಯಗಳಿಗೆ ಮುಲಾಮು ಸವರುವ ಸಲುವಾಗಿಯೇ ದಿನಗಳು ಒಂದರ ಹಿಂದೊಂದರಂತೆ ಉರುಳುತ್ತಲೇ ಇರುತ್ತವೆ. ಕಾಲವೇ ತುಮುಲಗಳನ್ನು ತಬ್ಬಿಕೊಂಡು ಸಂತೈಸುವುದು. ದಿನಗಳುರುಳಿದಂತೆ ನಾನು ಆಲೂರು ದಾರಿಯನ್ನು ಮರೆತೇಬಿಟ್ಟೆ. ಅದು ಸಕಾರಣವಾಗಿಯೋ! ನಿಷ್ಕಾರಣವಾಗಿಯೋ! ತಿಳಿಯದು.

ಓಹ್ ಪನ್ನಂಗಧರನೆಂಬ ಪ್ರದರ್ಶಕ ಫಿರಂಗಿಯೇ!

ಆ ದಿವಸವನ್ನಾಗಲೀ ಆ ರಾತ್ರಿಯನ್ನಾಗಲೀ ಆ ಕನಸನ್ನಾಗಲೀ ಮರೆಯಲಾರೆ. ಮನಃಪಟಲದಿಂದ ಶಾಶ್ವತ ರೀತಿಯಲ್ಲಿ ನಿರ್ಗಮಿಸಿದ್ದ ಪನ್ನಂಗಧರ ವಿನಾಕಾರಣ ಬೆಳಗಿನಿಂದಲೇ ಕಾಡಲಾರಂಭಿಸಿದ. ಹೊತ್ತಿನ ಅವಸ್ಥೆಗನುಗುಣವಾಗಿ ಗೆಳೆಯ ಸಂತ ಅವಧೂತ ಪ್ರೇಯಸಿ ಹೆಂಡತಿ ತಾಯಿ ಮಗು ಹೀಗೆ ಅವಸ್ಥಾಂತರಗೊಳ್ಳಲಾರಂಭಿಸಿದ. ಆ ರಾತ್ರಿ ಕನಸುಕನವರಿಕೆಗಳಲ್ಲಂತೂ ಅವನ ರೋಧನ ಮುಗಿಲು ಮುಟ್ಟಿತು. ಆ ಹಸುಗೂಸನ್ನು ಮಾಂಸ ಮುದ್ದೆಯನ್ನು ರಾಕ್ಷಸಗಾತ್ರದ ರಣಹದ್ದೊಂದು ಆಗಸಕ್ಕೆ ಎತ್ತಿಕೊಂಡು ಹೋಯಿತು. ಅದರಷ್ಟೇ ಗಾತ್ರದ ಇನ್ನೊಂದು ರಣಹದ್ದುವಿನೊಂದಿಗೆ ಸಂಭವಿಸಿದ ಸೆಣೆಸಾಟದಿಂದಾಗಿ ಕೊಕ್ಕುಗಳಿಂದ ಕಳಚಿದ ಕೂಸು ನನ್ನ ಬೊಗಸೆಗೆ ಬಿದ್ದೊಡನೆ ಎಚ್ಚರಗೊಂಡೆ, ನಖಶಿಖಾಂತ ಕಂಪಿಸಿದೆ. ಕೃತುನಿಶ್ಚಯಿಸಿ ಆಲೂರು ಕಡೆ ಚಾಚಿದ್ದ ದುರ್ಗಮ ಹಾದಿ ಹಿಡಿದೆ.

ಆಲೂರು ತಲುಪಿದಾಗ ಸೂರ್ಯ ಆಗಸದ ನೆತ್ತಿ ಸಮೀಪಿಸಲು ಹವಣಿಸಿದ್ದ. ಊರೊಳಗೆ ಹೋದರೆಲ್ಲಿ ಕಾಣಿಸಿಕೊಳ್ಳಬಹುದಾದ ತಾನು ತನ್ನ ತಾಯ್ತನದ ತೆಕ್ಕೆಗೆ ಎಳೆದುಕೊಳ್ಳುವನೋ! ತನ್ನ ಮಾಯಾವಿ ಮಾತುಗಳಿಂದ ಎಲ್ಲಿ ಪರವಶಗೊಳಿಸುವನೋ! ಪ್ರಹರಿ ಗೋಡೆಗಳನ್ನಲಂಕರಿಸಿರಬಹುದಾದ ಭಿತ್ತಿಚಿತ್ರಗಳಲ್ಲಿರುವ ಮುಪ್ಪಾಳ್ ಲಕ್ಷ್ಮಣರಾವ್ ತನ್ನ ಮುಗುಳ್ನಗೆಯಿಂದ ಸಮ್ಮೋಹನಗೊಳಿಸುವನೋ! ಅವೇ ಭಿತ್ತಿ ಚಿತ್ರಗಳಲ್ಲಿನ ಒಕ್ಕಣಿಕೆಯಲ್ಲಿನ ಲಕ್ಷಗಳ ಆಮಿಷಕ್ಕೆ ಬಲಿಯಾಗುವೆನೋ! ಇಂಥ ಕಾರಣಗಳಿಂದ ತಾಲ್ಲೂಕು ಸಮಿತಿ

ಕಛೇರಿಯನ್ನು ತಲುಪಲು ನಾನು ಆಯ್ದುಕೊಂಡಿದ್ದು ದುರ್ಗಮ ಕಾಲು ಹಾದಿಯನ್ನು! ಅಲ್ಲಿನ ಕೆಲಸಗಳನ್ನು ಅವಸರದಿಂದ ಮುಗಿಸಿಕೊಂಡು ಪರಾವರ್ತಿತ ಪ್ರತಿಕ್ರಿಯೆಗೆ ಒಳಪಟ್ಟವನಂತೆ ಆಲೂರಿನ ಬೀದಿಗಳನ್ನು ಪ್ರವೇಶಿಸಿದೆ. ಎದುರಾದ ಪ್ರತಿಯೊಬ್ಬರಲ್ಲಿ ಪ್ರತಿಯೊಂದರಲ್ಲಿ ಅವನನ್ನು ಅನ್ವೇಷಿಸಲಾರಂಭಿಸಿದೆ. ಕೊಚ್ಚೆ ಕೊಳಚೆಗಳಲ್ಲಿ ಗಡಂಗುಗಳಲ್ಲಿ ಭಿಕ್ಷುಕರಲ್ಲಿ ಹಮಾಲರಲ್ಲಿ ತಲೆಹಿಡುಕರಲ್ಲಿ ಸೂಳೆಯರಲ್ಲಿ ಅವನ ಸುಳಿವು ಇಲ್ಲವೇ ಇಲ್ಲ. ಯಾರಾದರು ಎದುರಾಗಿ ನಾನೆ ಪನ್ನಂಗಧರ ಎಂದು ಹೇಳಿದರೆ ಸಾಕಾಗಿತ್ತು. ಸಂಜೆವರೆಗೆ ತಿರುಗಾಡಿದ ಬಳಿಕ ಅನಿವಾರ್ಯವೆಂಬಂತೆ ಶ್ರೀಕೃಷ್ಣಭವನ ಸಮೀಪಿಸುವುದು ಅನಿವಾರ್ಯವಾಯಿತು. ನೋಡಿದೊಡನೆ ಹೆಬ್ಬಾರ್ ನನ್ನ ತೋಳನ್ನು ಹಿಡಿದು ಹೋಟಲ್ಲಿನ ಮೂಲೆಗೆ ಕರೆದೊಯ್ದು..

"ಇನ್ನೂ ಕೆಲವು ದಿವಸ ನೀವು ಆಲೂರಿಗೆ ಬಾರದಿದ್ದರೆ ಚೆನ್ನಾಗಿತ್ತು ಮೇಸ್ಟ್ರೆ! ಯಾಕೆ ಕಾಣಿಸಿಕೊಂಡಿರಿ ನೀವು ಊರೊಳಗೆ! ಬರುವುದು ಬಂದಾಗಿದೆ, ಏನು ಮಾಡಲಿಕ್ಕೂ ಬರುವುದಿಲ್ಲ, ಎಲ್ಲದಕ್ಕೂ ಆ ದೇವರಿದ್ದಾನೆ, ಮುಖ್ಯವಾಗಿ ನಾನಿರುವೆ. ಕನ್ನಡಿಗರು ಕನ್ನಡಿಗರ ಯೋಗಕ್ಷೇಮ ನೋಡಿಕೊಳ್ಳದೆ ತೆಲುಗರು ನೋಡಿಕೊಳ್ಳುವುದುಂಟೇನು! ಏನು ಏಕೆ ಎಂದು ಕೇಳುವುದು ಬೇಡವೇ ಬೇಡ, ಮೊದಲು ಚಹಾ ಕುಡಿದು ದಣಿವಾರಿಸಿಕೊಳ್ಳಿ" ಎಂದು ಹೇಳಿದಾದ ಬಳಿಕ ತಾನೇ ತಯಾರಿಸಿದ ಚಹಾ ವಿತರಿಸಿದ.

ಕೈಗಳು ಕಂಪನಕ್ಕೀಡಾದವು, ಶುಷ್ಕ ಗಂಟಲು ಚಹಾ ಇಳಿಸಲು ಹೆಣಗಿತು. ಸ್ವಲ್ಪ ಹೊತ್ತಿನ ಬಳಿಕ ಹೆಬ್ಬಾರ್ ತನ್ನ ಮುಖವನ್ನು ಉಸಿರಳತೆಗೆ ತಂದು "ಬೆಳ್ಳಗಿರುವುದನ್ನೆಲ್ಲಾ ಹಾಲೆಂದು ಭ್ರಮಿಸಬಾರದಿತ್ತು ನೀವು. ಅವನ ಸಹವಾಸ ಮಾಡಬೇಡಿರೆಂದು ಹೇಳಿದೆವು, ಕೇಳಿಸಿಕೊಂಡಿರೇನು! ಗರ್ಭಿಣಿ ಹೆಂಡತಿಯನ್ನೇ ಪ್ರೀತಿಸದವರು ದೇಶವನ್ನು ಪ್ರೀತಿಸುವುದು ಸಾಧ್ಯವೆ! ಅಂಥವರಿಗೆ ದೇವರು ತಕ್ಕ ಶಾಸ್ತಿ ಮಾಡಿದ ನೋಡಿ" ಎಂದು ಒಗಟಿನಂತೆ ಹೇಳಿದ.

"ನೀವು ಹೇಳುತ್ತಿರುವುದು ಒಂದೂ ಅರ್ಥ ಅಗಲಿಲ್ಲ ರಾಯರೆ!" ಅರೆಬರೆ ಅರ್ಥವಾದರೂ ಕೇಳಿದೆ.

"ಅಯ್ಯೋ ಯಾರೆಂಬುದು ಅರ್ಥ ಆಗಲಿಲ್ಲವೆ! ಒಳ್ಳೆ ಕಥೆಗಾರರಿ ನೀವು. ಅದೇ ಮೇಸ್ಟ್ರೆ ನಿಮ್ಮ ಪನ್ನಂಗಧರನ ದುರಂತ ಕಥೆ! ಅವನು ಒಂದು ದಿವಸ ಇದ್ದಕ್ಕಿದ್ದಂತೆ ನಾಪತ್ತೆಯಾದ, ಹೆಂಡತಿ ಮನೆಗೋ, ನಲ್ಲಮಲ ಫಾರೆಸ್ಟ್ ಕಡೆಗೋ ಹೋಗಿರಬಹುದೆಂದು ಅನುಮಾನಪಟ್ಟೆವು, ಅವನ ಹೆಣ ಕೆರೆ ಏರಿ ಪಕ್ಕ ಅನಾಥ ರೀತಿಯಲ್ಲಿ ಬಿದ್ದಾಗಲೇ ತಿಳಿಯಿತು ಲಾಕಪ್ ಡೆತ್ ಅಂತ! ಅದೂ ಅಲ್ಲದೆ ಪೋಲಿಸರು ಅನುಮಾನ ಬಂದವರನ್ನೆಲ್ಲ ಎಳೆದೊಯ್ದರು, ಕೆಲವರನ್ನು ಹೈದರಾಬಾದಿಗೆ ಕಳಿಸಿದರು, ಇನ್ನೂ ಕೆಲವರನ್ನು ಹಿಗ್ಗಾಮುಗ್ಗಾ ಥಳಿಸಿ ಬಿಟ್ಟರು" ಎಂದು ಹೇಳಿದಾದ ಬಳಿಕ ಮುಖದ ಮೇಲಿನ ಬೆವರನ್ನು ಒರೆಸಿಕೊಂಡ. ನನಗಾದ ಭಯವನ್ನು ಅರ್ಥ ಮಾಡಿಕೊಂಡು ಬಳಿಕ "ನಿಮ್ಮನ್ನೂ ಹುಡುಕಿದರು ಮೇಸ್ಟ್ರೆ, ಇನ್ನೇನು ವಾಗಿಲಿಗೆ ಹೋಗಲು ಎಲ್ಲಾ ತಯ್ಯಾರಿ ನಡೆಸಿದ್ದರು. ಆದರೆ ಅಲಿ ಮತ್ತು ನಾನು ಸುಮ್ಮನಿದ್ದರೆ ತಾನೆ! ಎಸ್ಸೈಗೆ ಏನೋ ಒಂದು ಹೇಳಿ ನಿಮ್ಮ ಹೆಸರನ್ನು ತೆಗೆದು ಹಾಕಿಸಿದೆವು, ಇನ್ನು ಮುಂದೆ ನೀವು ಇಂಥವರ ತಂಟೆಗೆ ಹೋಗದೆ ಹುಷಾರಾಗಿರಬೇಕು" ಎಂದು ಹೇಳಿದ.

ಪನ್ನಂಗಧರನ ಹೋರಾಟದ ಬದುಕು ಹೀಗೆ ಅಂತ್ಯಗೊಳ್ಳಬಹುದೆಂದು ಊಹಿಸಿರಲಿಲ್ಲ. ಕಣ್ಣೊಳಗೆ ಮೂಡಿದ ಹನಿಗಳು ಉದುರದೆ ಪುನಃ ವಾಪಸ್ಸಾದವು. ಅರೆ ಹುಚ್ಚನಂತೆ ಅವಧೂತನಂತೆ ನೊಂದವರ ಕಣ್ಣೀರು ತೊಡೆಯುವವನಂತೆ ಏನೂ ಇಲ್ಲದ ಅನಾಥನಂತೆ

ಇದ್ದ ಅವನನ್ನು ಪೋಲಿಸರು ಬಂಧಿಸುವುದೆಂದರೆ! ವಿಚಾರಣೆಯ ನೆಪದಲ್ಲಿ ಹಿಂಸಿಸಿ ಕೊಲ್ಲುವುದೆಂದರೆ! ಕೊಂದು ಕೆರೆಯ ಪಕ್ಕ ಬೀಸಾಡುವುದೆಂದರೆ! ಅವನ ಶವಸಂಸ್ಕಾರ ಮಾಡಲಿದ್ದವರನ್ನು ವಿಚಾರಿಸುವುದೆಂದರೆ! ಪುನಃ ತಾನೇ

"ಅವನು ಮೋಸ್ಟ್ ವಾಂಟೆಡ್ ಕ್ರಿಮಿನಲ್ಲಂತೆ ಮೇಸ್ಟ್ರೆ! ನಿರುದ್ಯೋಗಿ ಯುವಕರ ಬ್ರೇನ್ ವಾಷ್ ಮಾಡುವುದು, ಬಳಿಕ ಅವರನ್ನು ನಲ್ಲಮಲ ಫಾರೆಸ್ಟಿಗೆ ಕಳಿಸುವುದು, ನಕ್ಸಲೈಟ್ ಲೀಡರ್ ಗಣಪತಿಯೂ ಅವನ ಗುಡಿಸಲ್ಲಿ ಇಡೀ ವಾರ ಅಡಗಿದ್ದನೆಂದರೆ ನೀವೇ ಯೋಚಿಸಿ ಅವನೆಂಥ ಕ್ರಿಮಿನಲ್ಲಂತ! ಏನೇ ಅಗಲಿ ಅವನ ಹೆಣ ಅಂತ್ಯ ಸಂಸ್ಕಾರ ಕಾಣದೆ ಅನಾಥ ರೀತಿಯಲ್ಲಿದ್ದು ಕೊಳೆಯಬಾರದಾಗಿತ್ತು, ಅದೊಂದೆ ಪೋಲಿಸರು ಮಾಡಿದ ತಪ್ಪು" ಎಂದು ನಿಟ್ಟುಸಿರುಬಿಟ್ಟ.

ಕೇಳಿಸಿಕೊಂಡೊಡನೆ ವಿಷಣ್ಣನಗೆ ಮೂಡಿ ಮಾಯವಾಯಿತು. ಪೋಲಿಸರು ಅವನಿಗೆ ಕ್ರಿಮಿನಲ್ ಪಟ್ಟ ಕಟ್ಟಿದ್ದರೋ ಇಲ್ಲವೋ, ಆದರೆ ಹೆಬ್ಬಾರಂಥವರು ಮೋಸ್ಟ್ ವಾಂಟೆಡ್ ಕ್ರಿಮಿನಲ್ ಎಂದು ಹೇಳಿದ್ದು ಸರಿ ಎನ್ನಿಸಲಿಲ್ಲ. ಕಾರಣ ಪನ್ನಂಗಧರ ದೈಹಿಕವಾಗಿ ದುರ್ಬಲನಿದ್ದ, ಅದೂ ಯಾರಾದರು ಉಫ್ ಎಂದು ಊದಿದರೆ ಬೀಳುವಷ್ಟು ನರಪೇತಲನಿದ್ದ. ಸ್ವಭಾವತಃ ಪುಕ್ಕಲ ಸ್ವಭಾವದ ತಾನು ಮಹಾಕ್ರಾಂತಿ ಎಂಬಂತೆ ತನ್ನನ್ನು ತಾನು ಸಾರ್ವಜನಿಕವಾಗಿ ಬಿಂಬಿಸಿಕೊಳ್ಳುತ್ತಿದ್ದ. ಯಾರ ಮೇಲೂ ಹಲ್ಲೆ ನಡೆಸಿರದ, ಕೊಲೆಯನ್ನು ಕನಸಲ್ಲೂ ಊಹಿಸಿಕೊಳ್ಳಲಾರದ ಅಂಥ ನಿರುಪದ್ರವಿಯನ್ನು ಎಳೆದೊಯ್ದು ಹಿಂಸಿಸಿ ಸಾಯಿಸಿದ ಪೋಲಿಸರು ನಿಜವಾದ ಕೊಲೆಗಾರರು. ಮುಪ್ಪಾಳ್ ಲಕ್ಷ್ಮಣರಾವ್ ಅಂಥವನಲ್ಲಿ ಆಶ್ರಯ ಪಡೆದಿದ್ದನೋ! ಅಥವಾ ಹಾಗೆ ಹೇಳಿಕೊಂಡು ವಿಲಕ್ಷಣ ಆನಂದವನ್ನು ತಾನು ಅನುಭವಿಸಿದನೋ! ಹೆಬ್ಬಾರ್ ಕಡೆ ಸೂತಕ ನೋಟ ಬೀರಿದ್ದು ಮಾತ್ರ ಇನ್ನೂ ನೆನಪಲ್ಲುಂಟು.

ಅವನ ನೆನಪಾಗದಿದ್ದಲ್ಲಿ ನಾನು ನೇರವಾಗಿ ಪೋಲಿಸ್ ಠಾಣೆ ತಲುಪಿ ಹೊಸ ಎಸ್ಪೈ ಅಶೋಕ ಸಾಹೇಬರನ್ನು ಪರಿಚಯ ಮಾಡಿಕೊಳ್ಳುತ್ತಿದ್ದೆನೇನೊ! ಕವಲು ದಾರಿಯಲ್ಲಿ ಯೋಚಿಸುತ್ತ ನಿಂತು ಬಳಿಕ ಬಸ್ ನಿಲ್ದಾಣದ ಕಡೆ ಹೆಜ್ಜೆ ಹಾಕಿದೆ.

# ದೃಶ್ಯ: ನಾಲ್ಕು

ಪುನಃ ಆಲೂರಿನಿಂದ ಮರಳಿದ ಬಳಿಕ ಬರೆಯುತ್ತಿದ್ದ ಕಾದಂಬರಿ ಪ್ರಶ್ನಾರ್ಥಕವಾಗಿ ನನ್ನ ಕಡೆ ನೋಡಿತು. ಅದಕ್ಕೆ ಪನ್ನಂಗಧರನ ನೆನಪು ಮರುಕಳಿಸಿದ್ದೇ ಕಾರಣ. ಸದ್ಯಕ್ಕೆ ನೀನು ಅವತರಿಸುವುದು ಬೇಡವೆಂದರೂ ತಾನು ಕೇಳಿಸಿಕೊಳ್ಳಲಿಲ್ಲ. ನತದೃಷ್ಟೆ ಲಕ್ಷ್ಮಿಯ ನತದೃಷ್ಟ ಪತಿಯ ಸ್ಥಾನ ನೀಡಿದ್ದು ತನಗೆ ಇಷ್ಟವಾಗಲಿಲ್ಲವೇನೊ! ಲೇಖಕನ ಗೈರಿನಲ್ಲಿ ತಾನು ಕಾದಂಬರಿಯ ಹಸ್ತಪ್ರತಿಯನ್ನು ಪರಿಶೀಲಿಸಿರುವನೋ ಎಂಬಂತೆ ನೆನಪಲ್ಲಿ ಮೂಡಿ ಹೇಳಿದ.

"ನಾನು ವಿವಾಹಿತ ಮಾತ್ರವಲ್ಲ ಬ್ರಹ್ಮಚಾರಿ ಕೂಡ. ಹೆಣ್ಣುಗಳನ್ನು ಆಕರ್ಷಿಸದ ರೀತಿಯಲ್ಲಿ ನನ್ನ ದೇಹದ ಮೇಲೆ ಅವಲಕ್ಷಣಗಳನ್ನೇ ಆಭರಣಗಳನ್ನಾಗಿಸಿ ಧರಿಸಿರುವುದನ್ನು ನೀನು ಗಮನಿಸಲಿಲ್ಲವೆ! ಗಾಂಧೀಜಿ ತಮ್ಮ ದೇಹದ ಬೇಕುಬೇಡಗಳನ್ನು ತಿರಸ್ಕರಿಸದಿದ್ದರೆ ಎಲ್ಲಿ ತಾವು ಈ ದೇಶವನ್ನು ಪ್ರೀತಿಸುತ್ತಿದ್ದರು! ಹಾಗೆಯೇ ನಾನು. ಸ್ನಾನ ಒತ್ತಟ್ಟಿಗಿರಲಿ ದಂತಮಜ್ಜನ ಮಾಡುತ್ತಿದ್ದುದು ವಾರಕ್ಕೆ ಒಂದೆರಡು ಸಲ ಮಾತ್ರ. ಕುಡಿಯುತ್ತಿದ್ದ ನೀರಿನಲ್ಲಿ ಪ್ರತಿಬಿಂಬವನ್ನು ನೋಡಿಕೊಳ್ಳುತ್ತಿದ್ದುದನ್ನು ಹೊರತುಪಡಿಸಿದರೆ ನಾನು ಯಾವುದೇ ಕನ್ನಡಿಯನ್ನು ಅವಲಂಭಿಸುತ್ತಿರಲಿಲ್ಲ. ಯಾವುದಾದರೊಂದು ನಿಷ್ಪ್ರಯೋಜಕ ಬ್ಲೇಡಿನಿಂದಲೋ, ಆತ್ಮರಕ್ಷಣೆ ಸಲುವಾಗಿ ಇಟ್ಟುಕೊಂಡಿರುತ್ತಿದ್ದ ತುಕ್ಕು ಹಿಡಿದ ಕತ್ತರಿಯಿಂದಲೋ ಮುಖ ತಲೆಯ ಹೆಚ್ಚುವರಿಯ ಕೂದಲನ್ನು ಕತ್ತರಿಸಿಕೊಳ್ಳುತ್ತಿದ್ದ ನಾನು ಕ್ಷೌರಿಕರ ಅಂಗಡಿಗಳ ಸಮೀಪ ಸುಳಿಯುತ್ತಿರಲೇ ಇಲ್ಲ. ಎಲ್ಲೋ ಮಲಗಿರುತ್ತಿದ್ದವನು ಎಚ್ಚರಗೊಳ್ಳುತ್ತಿದ್ದುದು ಇನ್ಯಾವುದೋ ಜಾಗದಲ್ಲಿ! ಏನನ್ನೋ ತಿನ್ನುತ್ತಿದ್ದೆ, ಏನನ್ನೋ ಕುಡಿಯುತ್ತಿದ್ದೆ. ತಿನ್ನದಿದ್ದರೂ ಕುಡಿಯದಿದ್ದರೂ ಲವಲವಿಕೆಯಿಂದ ಇರುತ್ತಿದ್ದೆ. ಒಡಕು ಚಾಳೇಸದ ಮೂಲಕ ಕಣ್ಣಾಡಿಸುವ ಪ್ರತಿಯೊಂದನ್ನು ಅಂತರಂಗಕ್ಕೆ ಇಳಿಸಿಕೊಳ್ಳುತ್ತಿದ್ದೆ, ನೋಡುತ್ತಿದ್ದ ಪ್ರತಿಯೊಂದು ಸಂಗತಿ, ಓದುತ್ತಿದ್ದ ಪ್ರತಿಯೊಂದು ಪಠ್ಯ ನನ್ನೊಳಗೆ ಹೊಸ ರೂಪ ಪಡೆದುಕೊಳ್ಳುತ್ತಿತ್ತು. ಅವುಗಳ ಮೂಲಕ

ಸಮಾಜದ ಗಾಯಗಳನ್ನು ಅರ್ಥ ಮಾಡಿಕೊಳ್ಳುತ್ತಿದ್ದೆ, ದಿನಂಪ್ರತಿ ಅವುಗಳನ್ನು ದೇಹದಾದ್ಯಂತ ಮುಡಿದುಕೊಳ್ಳುತ್ತಿದ್ದೆ, ಹೀಗೆ ಇಂಥ ಗಾಯಗಳನ್ನು ಅಲಂಕರಿಸಿಕೊಂಡಿರುತ್ತಿದ್ದ ನನ್ನನ್ನು ಯಾರು ತಾನೆ ಪ್ರೀತಿಸುವುದು ಸಾಧ್ಯ! ಇಂಥ ನಾನು ಯಾರನ್ನು ಮದುವೆಯಾಗಲು ಸಾಧ್ಯ! ಆದ್ದರಿಂದ ನಿನ್ನ ಕಥಾನಕದೊಳಗೆ ನನ್ನನ್ನು ವಿವಾಹಿತನೆಂದಾಗಲೀ, ಸ್ತ್ರೀಲೋಲುಪನೆಂದಾಗಲೀ ಚಿತ್ರಿಸಬೇಡ, ಆದರೆ ಸ್ಥಾನಭ್ರಷ್ಟನನ್ನಾಗಿಸಬೇಡ" ಎಂದು ಹೇಳಿದಂತೆ ಭಾಸವಾಯಿತು.

ಹೌದು ಅವನು ಹೇಳಿದ್ದರಲ್ಲಿ ಉತ್ಪ್ರೇಕ್ಷೆ ಇರಲಿಲ್ಲ. ತನ್ನ ದೇಹದ ಒಳಹೊರಗೆಲ್ಲ ತರಾವರಿ ಗಾಯಗಳಿಗೆ ಪುನರ್ವಸತಿ ಸೌಲಭ್ಯ ಒದಗಿಸಿದ್ದ, ಗಾಯಗಳ ವಸ್ತುಸಂಗ್ರಹಾಲಯವೇ ತಾನಾಗಿದ್ದ. ಆ ಗಾಯಗಳಿಗೆಲ್ಲ ತಾನು ಜನ್ಮಜಾತ ಮಾಲಕನೆಂಬಂತಿದ್ದ, ಸದಾ ಗಾಯಾಳುಗಳಿಂದ ಸುತ್ತುವರಿದಿರುತ್ತಿದ್ದ, ಗಾಯಗಳಿಗೆ ಸಂಬಂಧಿಸಿದ ರೂಪಕಗಳನ್ನು ಬಳಸಿ ಮಾತಾಡುತ್ತಿದ್ದ, ಗಾಯಗಳಿಗೆ ಹೊಸ ವ್ಯಾಖ್ಯಾನ, ಭಾಷ್ಯ ಬರೆಯುತ್ತಲೇ ಇದ್ದ. ಗಾಯಗಳೊಂದಿಗೆ ಜನಿಸಿದವನಂತಿದ್ದ, ಗಾಯಗಳ ಪೋಷಕನಂತಿದ್ದ, ಗಾಯಗಳ ರಾಯಭಾರಿಯಂತಿದ್ದ. ಬದುಕಿನ ಪ್ರತಿಯೊಂದು ಕ್ಷಣ ಅವನ ದೇಹದ ಮೇಲೆಲ್ಲಾ ಗಾಯಗಳನ್ನು ಮುಡಿಸುತ್ತ ಹೋಯಿತೋ! ತಾನೆ ಸಮಾಜದ ಮೈತುಂಬೆಲ್ಲಾ ಗಾಯಗಳನ್ನು ಮುಡಿಸುತ್ತ ಹೋದನೇನೋ! ಒಂದೇ ಮಾತಿನಲ್ಲಿ ಹೇಳುವುದಾದರೆ ಗಾಯವೇ ತಾನು ತಾನೆ ಗಾಯವೆಂಬಂತೆ ಬದುಕಿದ, ಗಾಯಗಳ ಒಳಸಂಚಿನಿಂದಾಗಿಯೆ ಪೋಲಿಸರ ಅತಿಥಿಯಾದ, ಗಾಯಗಳಿಂದ ಬೇರ್ಪಡಿಸುವ ಸಲುವಾಗಿಯೇ ಪೋಲಿಸರು ಭೌತಿಕವಾಗಿ ಅವನಿಗೆ ಮುಕ್ತಿ ಕರುಣಿಸಿದರು. ಆದರೆ ಅವನು ಅಳಿದ, ಗಾಯಗಳು ಉಳಿದವು. ಸಂತ್ರಸ್ತಗೊಂಡಿರುವ ಅವುಗಳಿಗೆ ಸಾವೆಂಬುದಿಲ್ಲ, ಕನಿಕರವೆಂಬುದಿಲ್ಲ. ಪುನರ್ವಸತಿ ಸಲುವಾಗಿ, ಆಶ್ರಯದಾತರ ಸಲುವಾಗಿ. ಕಾಲ ಕಾಲದ ತಮ್ಮ ಹಸಿವು ತೃಷೆಗಳಿಗೆ ಮಾತೃವಾತ್ಸಲ್ಯದಿಂದ ಸ್ಪಂದಿಸುವವರನ್ನು ಪತ್ತೆ ಹಚ್ಚುವ ಸಲುವಾಗಿ ಅವು ಸಾಮೂಹಿಕವಾಗಿ ಪ್ರಯಾಣ ಕೈಕೊಂಡಿರಬಹುದು. ಸಹಸ್ರಪದಿಗಳಂಥ ಅವು, ತ್ರಿಕಾಲಜ್ಞಾನಿಗಳಂಥ ಅವು, ಉಪದ್ರವಗಳ ವಿತರಣಾ ವ್ಯವಸ್ಥೆಯ ವಹಿವಾಟನ್ನು ನಿಭಾಯಿಸುತ್ತಿರುವ ಅವು ನನ್ನನ್ನು ಹುಡುಕಿಕೊಂಡು ವಾಗಿಲಿಗೆ ಆಗಮಿಸಿದರೆ! ಭಯವಾಯಿತು. ಆತಂಕದಿಂದ ರಸ್ತೆ ಕಡೆ ನೋಡಿದೆನೋ ಇಲ್ಲವೋ!

ಅಲ್ಲಿ ಕಾಣಿಸಿಕೊಂಡು ಓಣಿಯ ತುದಿಯಲ್ಲಿ ನಿಂತದ್ದು ನಿಸ್ಸಂದೇಹವಾಗಿ ಪೋಸ್ಟ್ ಮಾಸ್ಟರ್ ರಾಘಪ್ಪಸ್ವಾಮಿಯ ಮಗ ತ್ರಯಂಭಕನೆ! ತಾನೋ ಪೋಸ್ಟ್ ಮಾಸ್ಟರ್ ರಾಘಪ್ಪಸ್ವಾಮಿಯವರ ಏಕಮಾತ್ರ ಸುಪುತ್ರ. ಶಾಲೆಯ ಅರೆಕಾಲಿಕ ವಿದ್ಯಾರ್ಥಿಯೂ ಹೌದು! ತನ್ನ ತಂದೆಯು ಇಸ್ಪೀಟ್ ಕಲೆಯನ್ನು ಜನಪ್ರಿಯಗೊಳಿಸಲು ಅಹರ್ನಿಶಿ ಶ್ರಮಿಸುತ್ತಿರುವ ಕಾರಣದಿಂದಾಗಿ ಪೋಸ್ಟಿಗೆ ಸಂಬಂಧಿಸಿದ ಕೆಲಸ ಕಾರ್ಯಗಳ ಜೊತೆಗೆ ಗೃಹಕೃತ್ಯಗಳ ಹೊಣೆಯನ್ನು ತನ್ನ ಹೆಗಲಿಗೇರಿಸಿಕೊಂಡಿರುವ ತ್ರಯಂಭಕನ ಮೂಗು ಮತ್ತು ಮೇಲ್ದುಟಿಗಳ ನಡುವೆ ಕಳೆದ ತಿಂಗಳಷ್ಟೆ ಮೀಸೆ ಮೊಳೆತಿರುವುದು. ಆ ಪ್ರೌಢಾವಸ್ಥೆಯೇ ಕಂಚಿಶ್ರೀಗಳ ಅಮೃತ ಹಸ್ತದಿಂದ ಅಕ್ಷರಾಭ್ಯಾಸಕ್ಕೆ ಶ್ರೀಕಾರ ಹಾಕಸಿಕೊಂಡಿರುವ ಅವನನ್ನು ಐದನೇ ತರಗತಿಯಲ್ಲಿರುವಂತೆ ನೋಡಿಕೊಳ್ಳುತ್ತಿರುವುದು. ಹೆಬ್ಬಟಂ ಗೌಡರ ರಾಜಕೀಯ ಸಲಹೆಗಾರರೂ ಆಗಿರುವ ಸ್ವಾಮಿಯು "ನನ್ನ ಮಗನನ್ನು ಹೇಗಾದರೂ ಮಾಡಿ ಏಳನೆ ತರಗತಿ ದಾಟಿಸಿ ಪುಣ್ಯ ಕಟ್ಟಿಕೊಳ್ಳಿ, ಇಲ್ಲದಿದ್ದರೆ ನಮ್ಮ ನಂತರ ಅವನಿಗೆ ಬಿಪಿಎಂ ಕೆಲಸ ಸಿಗುವುದಿಲ್ಲ, ಮೊದಲೇ ನಾವು ಬ್ರಾಹ್ಮಣರು, ಗೌರ್ನಮೆಂಟ್ ನೌಕರಿ ಸಿಗುವುದು ಕಷ್ಟ, ಅವನು

ಶಾಲೆಗೆ ಬರದಿದ್ದರೂ ಮುಂದಿನ ತರಗತಿಗೆ ಬಡ್ತಿ ನೀಡಿ ಸಾರ್" ಎಂದು ಪ್ರತಿಸಲದಂತೆ ಮೊನ್ನೆ ಸಹ ವಿನಂತಿಸಿಕೊಂಡಿರುವರು. ಇಷ್ಟೆಲ್ಲಾ ಕರ್ತವ್ಯಗಳ ನಡುವೆಯೂ ಹದಿಹರೆಯದ ಭಾವನೆಗಳಿಗೆ ಪೌಷ್ಟಿಕಾಂಶಗಳನ್ನು ಸರಬರಾಜು ಮಾಡುತ್ತಿರುವ ತ್ರಯಂಭಕ ನಿಂತಲ್ಲಿಯೇ ಯಾವ್ಯಾವ ಮಾತುಗಳನ್ನು ಹೇಗೆ ಹೇಗೆ ನುಡಿಯಬೇಕೆಂದು ತಾಲೀಮು ನಡೆಸಿ ಮೆಲ್ಲಗೆ ಮನೆಯ ಹೊಸ್ತಿಲ ಬಳಿ ಸಮೀಪಿಸಿದನು.

ತನ್ನೆರಡೂ ಕೈಗಳನ್ನು ನುರಿತ ಯೋಗಪಟುವಿನಂತೆ ಕಟ್ಟಿ ಫೋನ್ ಬಂದಿರುವುದಾಗಿಯೂ, ಮಾಡಿರುವ ವ್ಯಕ್ತಿ ಲೈನಿನಲ್ಲಿ ಕಾಯುತ್ತಿರುವುದಾಗಿಯೂ ಹೇಳಿದನು. ತಾನು ಬಂದಷ್ಟೇ ವೇಗವಾಗಿ ಮರಳಿ ಕಣ್ಮರೆಯಾದನು. ವಾಗಿಲಿಯನ್ನು ಲೌಕಿಕ ಪ್ರಪಂಚಕ್ಕೆ ಬೆಸೆದಿರುವ ಏಕಮಾತ್ರ ಯಂತ್ರೋಪಕರಣವೆಂದರೆ ಅಲ್ಲಿ ಇರುವ ಫೋನು ಮಾತ್ರ. ಲೌಕಿಕ ಪ್ರಪಂಚದೊಂದಿಗೆ ಸಂಪರ್ಕ ಬೆಸೆಯಲಿಕ್ಕೆಂದೇ ತಾಮ್ರದ ಶಿಖೆಯ ಸಾಧನವನ್ನು ಆ ಮನೆಯ ಮಾಳಿಗೆ ಮೇಲೆ ಎತ್ತರಕ್ಕೆ ಕಟ್ಟಿ ಹರಡಲಾಗಿರುವುದು. ಹೊರಪ್ರಪಂಚದಿಂದ ಬರುವ ಕರೆಗಳ ಸ್ವೀಕೃತಿ ತಿರಸ್ಕೃತಿಯನ್ನು ನಿರ್ಧರಿಸುವುದು ಅದೆ. ಅದೂ ವಾತಾವರಣದ ಅನುಕೂಲ ಅನಾನುಕೂಲವನ್ನು ಅವಲಂಭಿಸಿ ನಡೆಯುವುದು. ತನ್ನೆರಡೂ ಕಡೆ ಕಟ್ಟಿರುವ ಬಿದಿರು ಗಳಗಳು ಕಿಂಚಿತ್ ಗಾಳಿಗೆ ಧರೆಗೆ ಉರುಳುವ ಕಾರಣದಿಂದಾಗಿ ಅದು ಆಗಾಗ್ಗೆ ನೆಲ ಕಚ್ಚುವುದುಂಟು. ಅದು ನೆಲ ಕಚ್ಚಿ ಕಿಗ್ಗಲುಗೆಡುವುದುಂಟು, ಇಂಥ ಹಲವು ಕಾರಣಗಳಿಂದ ಎಲ್ಲೆಂದಲೋ ಬರುವ ದೂರವಾಣಿ ಕರೆಗಳು ಹೀಗೆ ಬಂದು ಹಾಗೆ ಮರಳುವುದು ಮಾಮೂಲು. ಅಂದ ಹಾಗೆ ಇನ್ನೊಂದು ವಿಷಯ! ಏನೆಂದರೆ ಫೋನ್ ಕರೆಗಳು ಸಾಮಾನ್ಯವಾಗಿ ಉಭಯಕುಶಲೋಪರಿಗೆ ಸಂಬಂಧಿಸಿದವುಗಳಾಗಿರುವುದಿಲ್ಲ, ಅವುಗಳಲ್ಲಿ ಬಹುಪಾಲು ಮರಣ ವಾರ್ತೆಗೆ ಸಂಬಂಧಿಸಿದವುಗಳೆ. ಆದ್ದರಿಂದ ಅಂಥ ಕರೆಗಳು ಬಂದೊಡನೆ ಕೇಳಿಸಿಕೊಂಡವರು ಗೊಳೋ ಎಂದು ಅತ್ತು ರಂಪಾಟ ಮಾಡುವುದು ಮಾಮೂಲು. ತ್ರಯಂಭಕ ಹೇಳಿದೊಡನೆ ನಾನೂ ಹಾಗೆ ಭಾವಿಸಿ ಹೊರಟೆ.

ಕೊಟ್ಟೂರಿನ ಮನೆಯಲ್ಲಿರುವ ಕುಟುಂಬ ಸದಸ್ಯರನ್ನು ಜ್ಞಾಪಿಸಿಕೊಂಡೆ, ಮೋಕಾ ಪತ್ತಿಕೊಂಡ ತೆಕ್ಕಲಕೋಟೆ ಮತ್ತಿತರ ಕಡೆ ಇರುವ ನೆಂಟರನ್ನು ನೆನಪು ಮಾಡಿಕೊಂಡೆ, ಅವರಿಗೆ ಬಂದಿರಬಹುದಾದ ಮಾರಣಾಂತಿಕ ವ್ಯಾಧಿಗಳನ್ನು ಊಹಿಸಿಕೊಂಡೆ, ಅವರ ಪೈಕಿ ಹೆಚ್ಚು ವಯಸ್ಸಾಗಿರುವ ವ್ಯಕ್ತಿಗಳೆಂದರೆ ನನ್ನ ಇಬ್ಬರು ಶತಾಯುಷಿ ಅಜ್ಜಿಯಂದಿರು. ಇನ್ನೂ ಎರಡು ಶತಮಾನಗಳ ಪರ್ಯಂತರ ಬದುಕಿರುವ ಸಾಧ್ಯತೆಗಳಿರುವ ಅವರು ಸತ್ತಿರಲಾರರೆಂದೇ ಭರವಸೆ ತಳೆದೆ. ಶರಭ ಪರಶುರಾಮ ಅಲಿ ಹೆಬ್ಬಾರ್ ವಕೀಲ ಜೀವೋತ್ತಮರಾವ್ ಇವರೊಂದೇ ಅಲ್ಲದೆ ಲಕ್ಷ್ಮಿ ಪನ್ನಂಗಧರಂಥ ಭೌತಿಕವಾಗಿ ಅಪಭ್ರಂಶಗೊಂಡಿರುವವರು ನೆನಪಾದರು, ಅಕಸ್ಮಾತ್ ಏನಾದರೂ ಯಾವುದಾದರು ಕೋರ್ಟುಗಳಿಂದ ಯಾವುದಾದರು ಸಮನ್ಸ್ ಬಂದಿದ್ದರೆ! ಭಯವಾಯಿತು! ಹೀಗೆ ಸೂತಕ ಅಹಿತಕರ ವಾರ್ತೆಗಳನ್ನು ನೆನಪು ಮಾಡಿಕೊಳ್ಳುತ್ತ ಮೊಹರಂ ಬೀದಿಯನ್ನು ಪ್ರವೇಶಿಸಿದೆ, ಮಸೀದಿ ಪಕ್ಕದಲ್ಲಿದ್ದ ಶ್ರೀ ಲಕ್ಷೀವೆಂಕಟೇಶ್ವರ ಪ್ರಸನ್ನ ಎಂಬ ಬರಹವನ್ನು ಧರಿಸಿದ್ದ ಮಣ್ಣಿನ ಮನೆಯನ್ನು ಪ್ರವೇಶ ಮಾಡಿದೆ, ಇಸ್ಪೀಟಾಟದಲ್ಲಿ ಮಗ್ನರಾಗಿದ್ದ ಕೆಲವರು ತಮ್ಮ ತಮ್ಮ ಕೈಗಳಲ್ಲಿ ಎಲೆಗಳನ್ನು ಹಿಡಿದುಕೊಂಡೇ ನನ್ನ ಕಡೆ ತಲೆ ಎತ್ತಿ ಅನುಕಂಪದಿಂದ ನೋಡಿದರು. ಅವರೆಲ್ಲರ ಪೈಕಿ ರಾಜಗೋಪಾಲರೆಡ್ಡಿ ಸದಾರಮೆ ನಾಟಕವನ್ನು ನೋಡಿದಿರೇನು ಮೇಸ್ಟ್ರೇ ಎಂದು ಕೇಳಿದ. ಸ್ವಲ್ಪ ಉಡಾಫೆ ಸ್ವಭಾವದ ಆತನ ಪ್ರಶ್ನೆಗೆ ಉತ್ತರ ಕೊಡುವ ಗೋಜಿಗೆ ಹೋಗಲಿಲ್ಲ. ನಡುಗುವ ಕೈಗಳಿಂದ ಅಂಗಾತವಿರಿಸಿದ್ದ

ರಿಸೀವರನ್ನು ಎತ್ತಿಕೊಂಡು ಹಲೋ ಎನ್ನುವುದಕ್ಕೂ ಮಳೆ ಆರಂಭವಾಗುವುದಕ್ಕೂ ಸರಿ ಹೋಯಿತು. ಅದು ಅಕಾಲಿಕವೂ ಕುಂಭದ್ರೋಣವೂ!

++++

ಪತ್ರಕರ್ತ ಚೌಗಲೆ ನನಗೆ ಪರಿಚಿತನೂ ಹೌದು ಅಪರಿಚಿತನೂ ಹೌದು. ಆದರೆ ಚಕ್ರವರ್ತಿಯ ಪರಿಚಯ ಮಾತ್ರ ಇರಲಿಲ್ಲ. ಅವರಿಬ್ಬರೂ ಇದ್ದ ಬೆಂಗಳೂರಿ ಪರಿಚಯ ಇರುವುದೆಂದರೆ ಇರುವುದು ಇಲ್ಲವೆಂದರೆ ಇಲ್ಲ. ಕಾರಣ ನಾನು ಆ ನಗರಕ್ಕೆ ಹೋಗುತ್ತಿದ್ದು ತುಂಬಾ ವಿರಳ, ಅಲ್ಲಿಗೆ ಹೋಗುತ್ತಿದ್ದುದು ಯಾವುದಾದರೂ ಸಭೆ ಸಮಾರಂಭಗಳಿದ್ದರೆ ಮಾತ್ರ. ರಜೆಗಳ ಕೊರತೆಯಿಂದಾಗಿಯೋ, ಆರ್ಥಿಕ ಅಡಚಣೆಯಿಂದಾಗಿಯೋ, ಅಭಿಜಾತ ಮೃದ್ವಂಗಿತನದಿಂದಾಗಿಯೋ ಅಲ್ಲೆಲ್ಲ ತಿರುಗಾಡುವುದಾಗುತ್ತಿರಲಿಲ್ಲ, ಲೇಖಕ ಪತ್ರಕರ್ತ ಮಿತ್ರರ ಕೈಗಳನ್ನು ಕುಲುಕಿ ಪರಿಚಯ ಮಾಡಿಕೊಳ್ಳುವುದಾಗುತ್ತಿರಲಿಲ್ಲ. ಪರಿಚಯವಾದವರೆದುರು ಮನಸ್ಸು ಬಿಚ್ಚಿ ನಿಸ್ಸಂಕೋಚವಾಗಿ ಮಾತಾಡುವುದಾಗುತ್ತಿರಲಿಲ್ಲ. ಹೀಗೆ ಹೋದವನು ಹಾಗೆ ವಾಪಸ್ಸಾಗುತ್ತಿದ್ದೆ. ಆದರೂ ಅಲ್ಲಿನ ಅನೇಕರ ಪರಿಚಯ ನನಗೆ ಇಲ್ಲದಿರಲಿಲ್ಲ, ಅದೂ ಅಂಚೆಯ ಬಟವಾಡೆ ಮೂಲಕ. ನಾನು ಅವರಿಗೆ ಬರೆಯುತ್ತಿದ್ದ ಪತ್ರಗಳೋ! ಅವರು ನನಗೆ ಬರೆಯುತ್ತಿದ್ದ ಪತ್ರಗಳೋ! ಅವುಗಳ ಪೈಕಿ ಹಲವು ಪ್ರಯಾಣದ ನಡುವೆ ಅಕಾಲ ಮರಣಕ್ಕೆ ತುತ್ತಾಗುತ್ತಿದ್ದ ರೀತಿಯೋ! ಹೋದರೆ ಹೋಗುತ್ತಿದ್ದವು, ಬಂದರೆ ಬರುತ್ತಿದ್ದವು. ಅದೂ ಸ್ಥಳೀಯ ಪೋಸ್ಟ್ ಮಾಸ್ಟರ್ ಕೃಪೆಯಿಂದಾಗಿ. ಆದ್ದರಿಂದ ಸನಾತನವೂ ಆಧುನಿಕವೂ ಅಪಾಯಕಾರಿಯೂ ಆದ ರಾಘಪ್ಪಸ್ವಾಮಿಯವರ ಮನಸ್ಸಿಗೆ ನೋವಾಗದ ಹಾಗೆ ಸಂಭಾಳಿಸಿಕೊಂಡು ಹೋಗುವುದು ಅನಿವಾರ್ಯವಾಗಿತ್ತು.

ಅಂಚೆಪತ್ರಗಳ ಕನಸುಗಳ ನೆನಪುಗಳ ಮೂಲಕ ಬರುತ್ತಿದ್ದವರು ದೈಹಿಕವಾಗಿ ಬರಲಿರುವುದೆಂದರೇನು! ಅದೂ ವಾಗಿಲಿಗೆ! ನಾನಿರುವಲ್ಲಿಗೆ! ಕಾರಣ ಕೇಳಿದರೆ ಅವನೂ ಹೇಳಲಿಲ್ಲ. ಒತ್ತಾಯಿಸುತ್ತಿದ್ದೆನೇನೊ! ಆದರೆ ಅಂಚೆಯ ಮೊಹರುಗಳಿಗೆ ಸಮೀಪದಲ್ಲಿ ಇಸ್ಪೀಟಾಡುವವರ ಉಪದ್ರವಿ ಶ್ರವಣೇಂದ್ರಿಯಗಳ ಭಯ ನನ್ನನ್ನು ಆವರಿಸಿತು. ಬೆಳಗಿನ ವಾಯುವಿಹಾರಕ್ಕೆ ಮಾತ್ರ ತಮ್ಮ ತಮ್ಮ ಕಾಲುಗಳನ್ನು ಉಪಯೋಗಿಸುವ ಅಂಥವರಿಗೆ ಚಾರಣದ ಅನುಭವಿರುವುದು ಹೇಗೆ ಸಾಧ್ಯ! ಎಲ್ಲೆಲ್ಲಿ ಯಾವ್ಯಾವ ವಾಹನಗಳ ಮೂಲಕ ಪ್ರಯಾಣಿಸಿದರೆ ವಾಗಿಲಿಯನ್ನು ತಲುಪಬಹುದೆಂದು ನಾನೂ ಅವರಿಗಾಗಲೀ ಬೇರೆ ಯಾರಿಗಾಗಲೀ ಮಾಹಿತಿ ನೀಡಿರಲೂ ಇಲ್ಲ. ನೀಡಬಹುದಿತ್ತು, ನನ್ನನ್ನು ಅಪಾರ್ಥ ಮಾಡಿಕೊಂಡರೆ ಸಹಿಸಿಕೊಳ್ಳಬಹುದು. ಆದರೆ ಆ ಸುರಕ್ಷಿತರು ನನ್ನನ್ನು ಪೊರೆಯುತ್ತಿರುವ ಪ್ರದೇಶವನ್ನು ಅಪಾರ್ಥ ಮಾಡಿಕೊಂಡರೆ! ವದಂತಿಗಳನ್ನು ಸೃಜನಶೀಲವಾಗಿ ಹರಡಿ ಅಪಮಾನಗೊಳಿಸಿದರೆ! ಆದರೂ ಬಂದಿರುವರೆಂದರೆ ಅದು ತಮ್ಮ ಪೂರ್ವಜನ್ಮದ ಪಾಪವಲ್ಲದೆ ಇನ್ನೇನು! ಆದರೂ ಅವರು ಅಲ್ಲಿಗೆ ತಲುಪಿರುವುದರ ಕುರಿತು ಯೋಚಿಸದೆ ಇರಲಿಲ್ಲ ನಾನು.

ಕಂದಾಯ ನಕ್ಷೆಯಲ್ಲಾಗಲೀ ರಾಜಕೀಯ ನಕ್ಷೆಯಲ್ಲಾಗಲೀ ಸ್ಪಷ್ಟವಾಗಿ ನಮೂದಿಸಲ್ಪಟ್ಟಿರದ, ಪೀನ ನಿಮ್ನಮಸೂರಗಳ ನೆರವು ಪಡೆದು ನೋಡಿದರೂ ಗೋಚರಿಸದ, ಗೋಚರಿಸಿದರೂ ಶತಮಾನ ಪೂರ್ವದ ನವವಧುವಿನಂತೆ ನೇಪಥ್ಯಕ್ಕೆ ಜಾರುವ ನಾಚಿಕೆ ಸ್ವಭಾವದ

ಹೊಳಗುಂದಿಯನ್ನಾಗಲೀ ವಾಗಿಲಿಯನ್ನಾಗಲೀ ಗುರುತಿಸುವುದು ಸುಲಭ ಸಂಗತಿಯಲ್ಲ. ಹೊರಡುವ ಮೊದಲು ಯೋಚಿಸಬೇಕಿತ್ತು, ಸಂಪರ್ಕಿಸಿ ಮಾಹಿತಿ ಸಂಗ್ರಹಿಸಬೇಕಿತ್ತು, ತಾಲೀಮು ನಡೆಸಬೇಕಿತ್ತು, ಆತ್ಮರಕ್ಷಣೆಯ ಪರಿಕರಗಳನ್ನು ಜೊತೆಯಲ್ಲಿ ಇರಿಸಿಕೊಳ್ಳಬೇಕಿತ್ತು ಅವರು, ಆದರೆ!

ರಾಜಧಾನಿಯಿಂದ ಬಳ್ಳಾರಿಗೆ ಆಗಮಿಸಿದಷ್ಟು ಸುಲಭವಲ್ಲ ಕರ್ನಾಟಕ ಗಡಿರೇಖೆಗೆ ತನ್ನ ಕಾಲುಗಳನ್ನು ಚಾಚಿರುವ ಹೊಳಗುಂದಿಯನ್ನು ತಲುಪುವುದು! ಬಳ್ಳಾರಿಯಿಂದ ಮಹಾದೇವಕ್ಕೆ ಹೊರಟು ಆಲೂರನ್ನು ತಲುಪುವಷ್ಟು ಸುಲಭವಲ್ಲ ಹೊಳಗುಂದಿಯನ್ನು ಸೇರಿಕೊಳ್ಳುವುದು! ಅಲ್ಲಿಗೆ ಅವರು ಸೇರಿಕೊಳ್ಳಲು ಸಹಕರಿಸಿರುವುದು ನೀಲಕಂಠೇಶ್ವರನೋ ಮುಬಾರಕ್ಕೋ! ಹಾಗೆ ಬಾರದೆ ತಾವೇನಾದರು ಮೋಕಾದ ಮೂಲಕ ಇರುವ ಬಸರಕೋಡಿನ ಹಾದಿಯನ್ನೇನಾದರೂ ತಮ್ಮ ಪ್ರಯಾಣಕ್ಕೆ ಆಯ್ಕೆ ಮಾಡಿಕೊಂಡಿದ್ದಲ್ಲಿ! ಭಯಪಡುವ ಆತಂಕಕ್ಕೆ ಒಳಗಾಗುವ ಪ್ರಮೇಯವಿಲ್ಲ. ಹೇಗೋ ಒಂದು ರೀತಿ ಅವರು ಹೊಳಗುಂದಿಯನ್ನು ಸೇರಿಕೊಂಡಿರುವರು. ಅವರಿವರನ್ನು ವಿಚಾರಿಸಿರಬಹುದು, ನನ್ನ ಸಹೋದರಿಯ ಮನೆಯಲ್ಲಿ ಆಶ್ರಯ ಪಡೆದಿರಬಹುದು, ಉಪಚರಿಸುವ ನೆಪದಲ್ಲಿ ನನ್ನ ಮಾವ ತನ್ನ ವಿಲಕ್ಷಣ ಪ್ರಶ್ನಪತ್ರಿಕೆಯನ್ನು ಅವರ ಮುಂದಿರಿಸಿಬಹುದು, ಅದನ್ನು ನೋಡಿ ಅವರು ಕಂಗಾಲಾಗಿರಲೂಬಹುದು. ತೋಚಿದಂತೆ ಉತ್ತರಗಳನ್ನು ಮೌಖಿಕವಾಗಿ ಬರೆದಿರಲೂಬಹುದು. ಈ ಪ್ರಕಾರವಾಗಿ ಹೊಳಗುಂದಿಯಲ್ಲೂ ಮಾವನ ಮನೆಯಲ್ಲೂ ಮನರಂಜನೆಯ ಜೀವಂತ ಆಟಿಕೆಗಳಾಗಿರಲೂಬಹುದು.

ಅಲ್ಲಿ ಅವರಿಗೆಲ್ಲ ಆಗಿರುವಷ್ಟು ಅವರ ಪರಿಚಯ ನನಗಿಲ್ಲವಲ್ಲ! ತಮ್ಮ ಮುಖಗಳ ಚಹರೆ ಮನಃಪಟಲದ ಮೇಲೆ ಬೇರೂರುವಷ್ಟು ಅವರು ನನ್ನೊಂದಿಗೆ ಒಡನಾಡಿಲ್ಲವಲ್ಲ! ಅಷ್ಟು ದೂರದಿಂದ ಹೊರಟು ವಾಗಿಲಿ ಇರುವ ದಿಕ್ಕಿಗೆ ಮುಖ ಮಾಡಿ ನಿಂತಿರುವ ಪ್ರಮೇಯವೇ ಅರ್ಥವಾಗುತ್ತಿಲ್ಲ. ಅದೂ ಭೂಪಟಕ್ಕೂ ತನ್ನ ಅಸ್ತಿತ್ವದ ಸುಳಿವು ನೀಡದಿರುವ ಈ ವಾಗಿಲಿಯನ್ನು! ಇಲ್ಲಿ ಅವರ ಕೆಲಸ ಏನಿರುವುದೋ ಏನೊ! ರೆಡ್ಡಿಗಳ ಪೈಕಿ ಇರಬಹುದಾದ ನೆಂಟರನ್ನೋ ಮತ್ಯಾರನ್ನೋ! ಅಥವಾ ಬೇರೆ ಯಾವುದಾದರೂ ಏನಾದರೂ! ಯೋಚಿಸುತ್ತಲೇ ಕೇಳಿದ್ದಕ್ಕೆ ಮೂಲಿಮನಿ ಗೌಡರು ಒಪ್ಪಿದ್ದೂ ಆಯಿತು, ಶೇಷಣ್ಣ ಎತ್ತಿನ ಬಂಡಿಯ ಸಾರಥ್ಯವಹಿಸಲು ಸಮ್ಮತಿಸಿದ್ದೂ ಆಯಿತು, ಸವಾರಿ ಬಂಡಿಯನ್ನು ಅಗಸೆ ಬಾಗಿಲವರೆಗೆ ಕಳಿಸಿ ಬಂದು ನಾನು ಮನೆಯಲ್ಲಿ ಕಾಯಲಾರಂಭಿಸಿದ್ದೂ ಆಯಿತು, ಅವರು ಬರುವವರೆಗೆ ಕಾಲಕ್ಷೇಪದ ಸಲುವಾಗಿ ಕಾದಂಬರಿಯ ಹಸ್ತಪ್ರತಿಯ ಕಡತವನ್ನು ಮುಂದೆ ಇರಿಸಿಕೊಂಡಿದ್ದೂ .ಆಯಿತು.

ವಾಗಿಲಿಯ ಮಾರ್ಗಮಧ್ಯೆ ದಯಾನಂದನನ್ನೂ ಪನ್ನಂಗಧರನನ್ನೂ ಪರಸ್ಪರ ಮುಖಾಮುಖಿಯಾಗಿಸಿದರೆ ಹೇಗೆ! ಓಹ್ ಅದ್ಭುತ! ಒಂದು ಶಸ್ತ್ರವಾದರೆ ಇನ್ನೊಂದು ಶಾಸ್ತ್ರ! ಅದೇ ತಾನೆ ಕುಂಭದ್ರೂಣ ಮಳೆ ಸುರಿದು ನಿಂತಿದೆ. ಎಲ್ಲಾರ್ತಿ ಕಡೆಯಿಂದ ಇವನೂ ಲಿಂಗದಳ್ಳಿ ಕಡೆಯಿಂದ ಅವನೂ ಕಾಣಿಸಿಕೊಳ್ಳುತ್ತಾರೆ, ಸಮೀಪಿಸಿದಂತೆ ಪರಸ್ಪರ ದರೋಡೆಕೋರ ಪೋಲಿಸರಿರಬಹುದೆಂದು ಸಂದೇಹಿಸುತ್ತಾರೆ, ನಿಂತಲ್ಲಿಯೇ ನಿಂತು ತೀಕ್ಷ್ಣವಾಗಿ ಆತಂಕದಿಂದ ನೋಡಿಕೊಳ್ಳುತ್ತಾರೆ. ತಮ್ಮ ಹೆಜ್ಜೆಗಳನ್ನು ಕಸಿದುಕೊಳ್ಳುತ್ತಿರುವ ಕೆಸರ ಕಡೆ ಅವರ ಗಮನವಿಲ್ಲ, ಕಣ್ಣಳತೆಯಲ್ಲಿ ತಮ್ಮನ್ನು ಕೈಬೀಸಿ ಕರೆಯುತ್ತಿರುವ ಉಬ್ಬುತಗ್ಗುಗಳ ರಸ್ತೆ, ದೂರದಲ್ಲೆಲ್ಲೋ ಮಿಂಚಿ ಮಾಯವಾಗುತ್ತಿರುವ ವಾಗಿಲಿ, ಹಿಂದಕ್ಕೆ ಮರಳುವಂತಿಲ್ಲ ಮುಂದಕ್ಕೆ ತೆರಳುವಂತಿಲ್ಲ. ಮನಸ್ಸಿನಲ್ಲಿ ಭವಿಷ್ಯದ ಅತಂತ್ರ ಸ್ಥಿತಿಯ ಲೆಕ್ಕಾಚಾರ, ನಿಚ್ಚಳಗೊಂಡಿರುವ ಬಿಸಿಲಲ್ಲಿ

ಬಳಕುತ್ತಿರುವ ತಮ್ಮ ಪ್ರತಿಬಿಂಬಗಳು, ಮಾಸನೂರಿನ ಹಾದಿಬಡುಕರ ಪೈಕಿ ಒಬ್ಬ ಹೆಜ್ಜೆ ಸಪ್ಪಳವನ್ನು ಸೂಕ್ಷ್ಮವಾಗಿ ಗ್ರಹಿಸುತ್ತಾನೆ, ಅಡಗುತಾಣದಿಂದಲೇ ತನ್ನ ಕತ್ತನ್ನು ಹೊರಚಾಚಿ ಎರಡೂ ಕಡೆ ನೋಡುತ್ತಾನೆ, ಅವರಿಬ್ಬರ ಬಳಿ ಯಾವುದೇ ಸಾಮಾನುಗಳಿಲ್ಲ, ಜೇಬುಗಳಲ್ಲಿ ಏನಾದರೂ! ಎಷ್ಟಿದ್ದರೂ ಸರಿಯೆ ಏನಾದರೂ ಸರಿಯೆ, ಕಳೆದ ಎರಡು ದಿವಸಗಳಿಂದ ತಮ್ಮ ಒಡಲುಗಳಿಗೆ ಒಂದು ಮುಷ್ಟಿ ಅನ್ನ ದೊರಕಿಲ್ಲ ಬೇರೆ, ಹಣಕ್ಕಿಂತ ಮುಖ್ಯವಾಗಿ ಯಾವುದೇ ರೂಪದ ಆಹಾರ ದೊರಕಿದರಾಯಿತು. ತಾವು ಆರು ಜನ ಬದುಕಲು ಅವರಿಬ್ಬರನ್ನು ಕೊಂದರೆ ತಪ್ಪೇನಿಲ್ಲ, ಪಾಪ ಪುಣ್ಯ ಸರಿ ತಪ್ಪುಗಳ ಬೇರೀಜಿಗಿಂತ ತಮ್ಮ ತತ್ಕಾಲದ ಬದುಕು ಮುಖ್ಯ! ಭಾಷೆಯ ಹಂಗು ತೊರೆದು ಅವರು ಪರಸ್ಪರ ಚರ್ಚಿಸುತ್ತಿರುವಾಗಲೆ, ಇಣುಕಿ ನೋಡುತ್ತಿರುವಾಗಲೇ, ತಮ್ಮ ಅತ್ಯಂತ ಕಳಪೆ ಹತ್ಯಾರುಗಳನ್ನು ಜೋಡಿಸಿಕೊಳ್ಳುತ್ತಿರುವಾಗಲೇ, ಆಕ್ರಮಣಕಾರಿ ಭಾವನೆಗಳನ್ನು ತಮ್ಮವಲ್ಲದ ಮುಖಗಳಲ್ಲಿ ಆರೋಪಿಸಿಕೊಳ್ಳುತ್ತಿರುವಾಗಲೇ!

ಪ್ರಾಣವನ್ನು ಮುಷ್ಟಿಯಲ್ಲಿರಿಸಿಕೊಂಡು ಆ ಕಡೆಯಿಂದ ದಯಾನಂದ, ಈ ಕಡೆಯಿಂದ ಪನ್ನಂಗಧರ ಮುಂದೆ ಮುಂದಕ್ಕೆ ನಡೆಯಲಾರಂಭಿಸುತ್ತಾರೆ, ವರ್ತಮಾನದಿಂದ ಹಲ್ಲೆಗೊಳಗಾಗುತ್ತಲೇ ಇರುವ, ತಮ್ಮ ಕುಟುಂಬದ ಸದಸ್ಯರ ಮೇಲೆ ಮಾವೋ ಪ್ರಣೀತ ಸಿದ್ಧಾಂತಗಳಿಂದ ಮಾರಾಣಾಂತಿಕವಾಗಿ ಹಲ್ಲೆ ನಡೆಸಿರುವ, ಭವಿಷ್ಯದ ದೃಷ್ಟಿಯಲ್ಲಿ ಜೀವಚ್ಛವಗೊಂಡಿರುವ ತಾನು ತಮ್ಮಿಂದ ಕೈಯಲ್ಲಿ ಅವರು ಹಲ್ಲೆಗೊಳಗಾದಲ್ಲಿ, ಭೌತಿಕವಾಗಿ ನಷ್ಟ ಹೊಂದಿದಲ್ಲಿ ತಪ್ಪೇನು ಎಂದು ಯೋಚಿಸುತ್ತಲೇ ರಸ್ತೆಯನ್ನು ಸಮೀಪಿಸುತ್ತಾರೆ, ಸಮೀಪಿಸಿ ತಾವಿಬ್ಬರು ಉಸಿರಳತೆಯಲ್ಲಿ ನಿಲ್ಲಬೇಕು, ಪರಸ್ಪರ ದೃಷ್ಟಿಯುದ್ದಕ್ಕೆ ತೊಡಗಬೇಕೆನ್ನುವಷ್ಟರಲ್ಲಿ ತಮ್ಮ ಅಡಗುತಾಣದಿಂದ ದರೋಡೆಕೋರರು ಮೆಲ್ಲಗೆ ಎದ್ದು ಕಾಣಿಸಿಕೊಂಡವರೆ!

ಅವರ ಮೇಲೆ ಇವರಿಂದ ಹಲ್ಲೆ ನಡೆಯುವಂತೆ ಅಭಿವ್ಯಕ್ತಿಸುವುದೋ, ಇವರ ಮೇಲೆ ಅವರಿಂದ ಹಲ್ಲೆ ನಡೆಯುವಂತೆ ಚಿತ್ರಿಸುವುದೋ! ಸೃಜನಶೀಲ ಬಿಕ್ಕಟ್ಟು ತಲೆದೋರಿತು, ಅದು ಬಲಗೊಳ್ಳಲಾರಂಭಿಸಿತು. ದರೋಡೆಕೋರರ ದೈಹಿಕ ತಾಕತ್ತಿಗಿಂತ ಸಾಮಾಜಿಕವಾಗಿ ಹೋರಾಡುವವರ ಮಾನಸಿಕ ತಾಕತ್ತನ್ನು ನಿರ್ಲಕ್ಷಿಸಲಾಗದು. ದಯಾನಂದ ಪನ್ನಂಗಧರರೀರ್ವರೂ ಸಮಾನ ಮನಸ್ಕರು ಮತ್ತು ಸಮಾನ ಅಭಿರುಚಿ ಉಳ್ಳವರೆ! ಚಿಂತನೆಯ ಪೂರ್ವಾಶ್ರಮದಲ್ಲಿ ಅವನನ್ನು ಇವನೂ, ಇವನನ್ನು ಅವನೂ ಪರಸ್ಪರ ಹುಡುಕಾಡುತ್ತಿದ್ದಂಥವರೆ! ತಮ್ಮ ತಮ್ಮ ಮಾನಸಿಕ ಮಾಯಾದರ್ಪಣದಲ್ಲಿ ಪರಸ್ಪರ ಅಸ್ಪಷ್ಟ ಬಿಂಬಗಳನ್ನು ದರ್ಶಿಸುತ್ತಿದ್ದಂಥವರೆ! ಅಕಸ್ಮಾತ್ತಾಗಿ ದೊರಕುವ ಪನ್ನಂಗಧರನಿಗೆ ತಾನು ಆಯುಧವಾಗ ಬೇಕೆಂದು ದಯಾನಂದನೂ, ಉತ್ತರೋತ್ತರವಾಗಿ ದೊರಕುವ ದಯಾನಂದನಿಗೆ ತಾನು ಮೆದುಳಾಗಬೇಕೆಂದು ಪನ್ನಂಗಧರನೂ ಯೋಚಿಸುತ್ತಿದ್ದಂಥವರೆ! ಅಂಥ ತಮ್ಮಿಬ್ಬರನ್ನು ಒಂದುಗೂಡಿಸುವ ಆಪ್ತ ಎಳೆಯ ಅಗತ್ಯವಿರುವುದು ಮುಖ್ಯ ತಾನೆ! ಅಪರಿಚಿತವೂ ಭಯಾನಕವೂ ಆದ ಆ ಸ್ಥಳದಲ್ಲಿ ಅದನ್ನು ಎಲ್ಲಿಂದ ಜೋಡಿಸುವುದು! ಸೃಜನಶೀಲ ಉಪಟಳ ಹೆಚ್ಚಲಾರಂಭಿಸಿತು. ಎರಡು ಮೂರು ಪಾರಿಭಾಷಿಕ ಶಬ್ದಗಳನ್ನು ಜೋಡಿಸಿ ಮಾತುಗಳನ್ನು ಪ್ರಯೋಗಿಸಿದಲ್ಲಿ ಸಮಾನ ಮನಸ್ಕರಾದ ಅವರಿಬ್ಬರು ಒಂದುಗೂಡುವುದು ದೊಡ್ಡ ಸಂಗತಿಯಲ್ಲ, ಆದರೆ ಅವರನ್ನು ಸುತ್ತುರವರಿದಿರುವ ದರೋಡೆಕೋರರನ್ನು ಹೇಗೆ ನಿಭಾಯಿಸುವುದು! ಅಕಸ್ಮಾತ್ ಆ ಆರೂ ಜನರ ಕೈಯಿಂದ ಇವರಿಬ್ಬರನ್ನು ಕೊಲೆ ಮಾಡಿಸಿದರೆ! ಅಥವಾ ಇವರಿಂದಲೇ ಅವರನ್ನು ಕೊಲೆ ಮಾಡಿಸಿದರೆ! ಧರೆಗೆ ಉರುಳಲಿರುವ ಹೆಣಗಳು ಕಾನೂನಿನ ಸಮಸ್ಯೆಯನ್ನು ಹುಟ್ಟು ಹಾಕಿದರೆ!

ಪೋಲಿಸರು ಪುನಃ ಕೊಲೆಗಾರರನ್ನು ಹುಡುಕಿಕೊಂಡು ವಾಗಿಲಿಗೆ ಬರಬೇಕಲ್ಲವೆ! ಸಂದೇಹಿಸಿ ಕಥೆಗಾರನಾದ ನನ್ನನ್ನು ವಿಚಾರಣೆಗೆ ಒಳಪಡಿಸಬಹುದಲ್ಲವೆ! ಅಂಥ ಘಟನೆ ಸಂಭವಿಸಿದಲ್ಲಿ ನನ್ನ ಗತಿ ಏನು ನಾನು ಬರೆಯುತ್ತಿರುವ ಕಾದಂಬರಿ ಅರ್ಧಾಂತರಗೊಳ್ಳದೆ ಇರುವುದೆ! ತನ್ನ ನಿಸ್ತೇಜತನವನ್ನು ಸಾಬೀತುಪಡಿಸಲಿರುವೆನು ಎಂಬಂತೆ ಪೆನ್ನು ತನ್ನ ಮೊನೆಯಿಂದ ಎರಡು ಹನಿಯನ್ನು ಹಸ್ತಪ್ರತಿಯ ಮೇಲೆ ಕಾರಿ ಬಿಡುವುದೆ! ಅದೇ ತಾನೆ ಬೀಸಿದ ಗಾಳಿಗೆ ಚದುರಿದ ಶಾಯಿ ನಿಧಾನವಾಗಿ ತಾನು ಆವರಿಸಿದ ವಾಕ್ಯಗಳು ಎರಡಕ್ಕಿಂತ ಹೆಚ್ಚಿರಲಿಲ್ಲ. ಕೂಡಲೆ ಸೀಮೆಸುಣ್ಣವನ್ನು ಇರಿಸದಿದ್ದಲ್ಲಿ ಕನಿಷ್ಟ ಮೂರು ನಾಲ್ಕು ವಾಕ್ಯಗಳಾದರೂ ಅಳಿಸಿ ಹೋಗದೆ ಇರುತ್ತಿರಲಿಲ್ಲ.

ಆ ಎರಡು ವಾಕ್ಯಗಳನ್ನು ಅಳಿಸಿ ಹೊಸ ವಾಕ್ಯಕ್ಕೆ ನಾಂದಿ ಹಾಡುವುದು ಅನಿವಾರ್ಯವಾಯಿತು. ರೆಡ್‌ಪೋರ್ಟನ್ನು ಬಿಚ್ಚಿದೆ, ಉಳಿದಿದ್ದ ಕೆಲವು ಹನಿಗಳನ್ನು ಅಂಗಳಕ್ಕೆ ಚೆಲ್ಲಿದೆ, ಪುನಃ ತುಂಬಬೇಕೆಂದರೆ ಕರ್ಮಕ್ಕೆ ಬೇರೆ ಇಂಕಿನ ಶೀಸೆ ಖಾಲಿಯಾಗಿತ್ತು. ಕಪ್ಪು ಶಾಯಿಯ ಬಾಟಲುಗಳು ತಿಪ್ಪಯ್ಯಶೆಟ್ಟಿಯ ಅಂಗಡಿಯಲ್ಲಿ ಇರುವವೋ ಇಲ್ಲವೋ! ಅದೂ ಅಲ್ಲದೆ ಕೊಡುವ ಮುನ್ನ ಶೆಟ್ಟಿ "ಇದೇ ಲಾಸ್ಟು ಮೇಸ್ಟ್ರೆ, ಅಡ್ವಾನ್ಸಾಗಿ ಹೇಳಿದರೆ ಆದೋನಿಗೆ ಹೋದಾಗ ತರುವ" ಎಂದು ಹೇಳಿದ್ದೂ ನೆನಪಾಯಿತು. ಅದನ್ನು ಬದಿಗೆ ಸರಿಸಿ ಎತ್ತಿಕೊಂಡ ಪೆನ್ನು ಕೆಂಪು ಶಾಯಿಯದ್ದಾಗಿತ್ತು. ಕೆಂಪು ಶಾಯಿಯಿಂದ ಮುಂದುವರೆಸುವುದೋ! ಕಪ್ಪು ಶಾಯಿಗಾಗಿ ಕಾಯುವುದೋ!

ಬರಹ ಸ್ಥಗಿತವಾದ ವೇಳೆಯಲ್ಲಿ ಯೋಚಿಸಿದೆ, ಶಾಯಿ ಕೆಲವು ವಾಕ್ಯಗಳನ್ನು ಅಳಿಸಿದ್ದು ಒಳ್ಳೆಯದೇ ಆಯಿತು. ಒಂದೇ ಸ್ವಭಾವದ ಅವರಿಬ್ಬರು ರಸ್ತೆಯಲ್ಲಿ ಸಂಧಿಸುವುದಕ್ಕಿಂತ ಬೇರೆ ಬೇರೆ ಅವಧಿಯಲ್ಲಿ ವಾಗಿಲಿಯಲ್ಲಿ ಸಂಧಿಸುವುದೇ ಸೂಕ್ತವೆಂದು ಭಾವಿಸಿದೆ. ವಾಗಿಲಿಗೆ ದಯಾನಂದನನ್ನು ಬರ ಮಾಡಿಕೊಳ್ಳುವುದೋ! ಪನ್ನಂಗಧರನನ್ನು ಮೊದಲು ಬರ ಮಾಡಿಕೊಳ್ಳುವುದೋ! ಕಥೆಯ ಭೂಮಿಕೆ ನಿರ್ಮಾಣಗೊಳ್ಳುವುದು ಮುಖ್ಯ ತಾನೆ!

++++

ನಾಲ್ಕಾರು ಮಂದಿ ಬೀದಿಯ ಅಂಚಲ್ಲಿ ಕಾಣಿಸಿಕೊಂಡರು. ಅವರಲ್ಲಿ ಅತಿಥಿಗಳ ಸಲುವಾಗಿ ಕಣ್ಣಾಯಿಸಿದೆ, ಆದರೆ ಶೇಷಣ್ಣ ಗೋಚರಿಸಿ ಮನೆ ಕಡೆ ಬರಲಾರಂಭಿಸಿದ, ಆತನ ಹೆಗಲ ಮೇಲೆ ಬಾರಕೋಲು ಇಳಿಬಿದ್ದಿತ್ತು. ತನ್ನ ಮುಖದ ಮೇಲೆ ಆತಂಕ ಬೇಸರದ ಗೆರೆಗಳನ್ನು ಸ್ಪಷ್ಟವಾಗಿ ಅಲಂಕರಿಸಿಕೊಂಡಿದ್ದ, ಅತಿಥಿಗಳು ಬಂದರೋ ಅಥವಾ ಹಾದಿಯೇ ಹೆದರಿಸಿ ಅವರನ್ನು ಮರಳಿಸಿತೋ! ಕೇಳುವುದಕ್ಕಿಂತ ಮೊದಲೆ ತಾನೆ ಹೇಳಿದ.

"ಅವರ್ಯಾವ ಸೀಮೆಯ ಜನ ಸಾರ್! ನನ್ನ ಮಾತು ಅವರಿಗೆ ಅರ್ಥ ಆಗಲಿಲ್ಲ, ಅವರ ಮಾತು ನನಗೆ ಅರ್ಥ ಆಗಲಿಲ್ಲ. ಕೇಳಿದ್ದಕ್ಕೆ ಏನೋ ಒಂದು ಹೇಳಿದರು. ದಾರಿಯುದ್ದಕ್ಕೂ ಅವರಿಬ್ಬರು ತಮ್ಮ ಪಾಡಿಗೆ ತಾವೇ ಮಾತಾಡಿಕೊಳ್ಳುತ್ತಿದ್ದರು, ಅವರ ಭಾಷೆ ಕನ್ನಡವಂತೂ ಅಲ್ಲವೇ ಅಲ್ಲ" ಎಂದು ಹೇಳಿದ ಬಳಿಕ ತಾನೇ ಎದ್ದು ಅಡುಗೆ ಮನೆಗೆ ಹೋದ, ಆತ ನೀರು ಕುಡಿದದ್ದು ಸ್ಪಷ್ಟವಾಗಿ ಕೇಳಿಸಿತು.

"ಅದು ಬೆಂಗಳೂರಿನ ಭಾಷೆ ಶೇಷಣ್ಣ, ನಿನ್ನಂಥವರಿಗೆ ಅರ್ಥವಾಗುವುದು ಸುಲಭವಲ್ಲ, ಅದಿರಲಿ ಅವರು ಬಂದರೋ ಇಲ್ಲವೋ!" ಎಂದು ಕೇಳಿದೆ, ಅದಕ್ಕೆ ತಾನು

"ಬರದೆ ಎಲ್ಲಿಗೆ ಹೋಗುತ್ತಾರೆ ಸಾರ್, ಅವರನ್ನು ನೋಡಿದ ಜನ ಸುಮ್ಮನಿದ್ದರೆ ತಾನೆ! ಅಲ್ಲಿ ಅದೇನು ಮಾತುಕತೆ ನಡೆಯುತ್ತಿರುವುದೋ ಏನೋ! ಬೇವಿನಮರದ ವೆಂಕಟರಾಮಿರೆಡ್ಡಿ ಅವರನ್ನು ಇಲ್ಲಿಗೆ ಕರೆದುಕೊಂಡು ಬರುತ್ತಿರಬಹುದು" ಎಂದು ಹೇಳಿದ, ಕೆಲವು ತಿಂಗಳುಗಳ ಹಿಂದೆಯಷ್ಟೆ ಬೆಂಗಳೂರಿನ ನಿಮ್ಹಾನ್ಸಿನಲ್ಲಿ ತನ್ನ ಮಾನಸಿಕ ಅಸ್ವಸ್ಥತೆಗೆ ಚಿಕಿತ್ಸೆ ಪಡೆದುಕೊಂಡು ಬಂದಿರುವ, ಬಂದ ಬಳಿಕ ಅಗತ್ಯಕ್ಕಿಂತ ಹೆಚ್ಚು ವಾಚಾಳಿಯಾಗಿರುವ, ಸ್ವಯಂಭ್ರಮಿತ ತ್ರಿಕಾಲ ಸತ್ಯಗಳನ್ನು ತ್ರಿಕರಣಪೂರ್ವಕವಾಗಿ ಪುಂಖಾನುಪುಂಖವಾಗಿ ನುಡಿಯುತ್ತಿರುವ, ಹೀಗೆ ಮಾತಾಡುವ ಮೂಲಕ ತನ್ನ ಹೆಂಡತಿಯನ್ನು ತಾತ್ಕಾಲಿಕವಾಗಿ ಆಕೆಯನ್ನು ತವರು ಮನೆಗೆ ಕಳಿಸಿರುವ ವೆಂಕಟರಾಮಿರೆಡ್ಡಿ ಕೇಳುತ್ತಿರಬಹುದಾದ ಪ್ರಶ್ನೆಗಳನ್ನು ಊಹಿಸಿಕೊಂಡೆ. ಅಷ್ಟರಲ್ಲಿ ಅವನೊಂದಿಗೆ ಅತಿಥಿಗಳು ಕಾಣಿಸಿಕೊಂಡೇಬಿಟ್ಟರು, ವಿಸ್ಮಯದಿಂದ ನೋಡುತ್ತ ಮನೆಯನ್ನು ಸಮೀಪಿಸಿಯೇಬಿಟ್ಟರು, ನಾನು ಹೌದೋ ಅಲ್ಲವೋ ಎಂದು ನೋಡುತ್ತ ಮನೆಯ ಹೊಸ್ತಿಲನ್ನು ದಾಟಿಯೇಬಿಟ್ಟರು.

ಅವರಿಬ್ಬರಲ್ಲಿ ಚೌಗಲೆ ಯಾರೋ! ಚಕ್ರವರ್ತಿ ಯಾರೋ! ಸೃಜನಶೀಲ ಊಹಾತ್ಮಕವಾಗಿ ಗುರುತಿಸಲು ಪ್ರಯತ್ನಿಸುತ್ತ ಚೌಗಲೆಯನ್ನು ಚಕ್ರವರ್ತಿ ಎಂದೂ ಚಕ್ರವರ್ತಿಯನ್ನು ಚೌಗಲೆ ಎಂದೂ ಸಂಬೋಧಿಸಿದೆ. ಅವರಿಬ್ಬರ ಪೈಕಿ ಎತ್ತರಕ್ಕಿಂತ ಅಗಲಕ್ಕಿದ್ದ ವ್ಯಕ್ತಿ ನನ್ನ ಮಾತಿನಿಂದ ತುಸು ಕೆರಳಿದಂತೆ ಬೇಸರಗೊಂಡಂತೆ ಗೋಚರಿಸಿದ, ಚಾಳೇಸದ ಮೂಲಕವೂ ಅದನ್ನು ತೆಗೆದೂ ವಿಲಕ್ಷಣವಾಗಿ ನೋಡಿದ, ಹಾಗೆಯೇ ಅರ್ಥವಾಗದ ಭಾಷೆಯಲ್ಲಿ ಗೊಣಗಿದ, ಅಗತ್ಯಕ್ಕಿಂತ ವೇಗವಾಗಿ ಹತ್ತಿರ ಧಾವಿಸಿ ಕಣ್ಣಲ್ಲಿ ತನ್ನ ಕಣ್ಣುಗಳನ್ನಿರಿಸಿ ತೀಕ್ಷ್ಣವಾಗಿ ನೋಡಿದ, ಅದೂ ಅಪಾದಮಸ್ತಕವಾಗಿ. ಮೆಲ್ಲಗೆ ತನ್ನ ಮುಖದ ಮೇಲೆ ಬೇಸರವನ್ನು ಅಲಂಕರಿಸಿಕೊಂಡ. ಆಗಲೇ ಸುತ್ತ ನೆರೆದಿದ್ದ ಹಲವರ ಕಡೆ ಅಪ್ಯಾಯತೆಯಿಂದ ನೋಡಿದ. ತಾನು ಯಾರು ಎಂಬುದನ್ನು ಗುರುತಿಸು ಎಂಬಂತೆ ಕಣ್ಣ ನೋಟ ಬೀರಿದ. ಆತ ಒಂದೆರಡು ದಿನ ಒಡನಾಡಿದ್ದರೆ ಗುರುತಿಸಲು ಸಾಧ್ಯ, ಆದರೆ ಇದ್ದಕ್ಕಿದ್ದಂತೆ ವಕ್ಕರಿಸಿ ಗುರುತಿಸು ಎಂದು ಸವಾಲು ಹಾಕಿದರೆ ಹೇಗೆ ಗುರುತಿಸಲಿ! ಬೆರಗಿನಿಂದ ಅಸಹಾಯಕತೆಯಿಂದ ನೋಡಿದೆ. ತಾನು ಪುನಃ ಏನಯ್ಯಾ ಕಾಗೆ ಎಂಜಲು ಮಾಡುತ್ತಿದ್ದ ನನ್ನನ್ನೇ ಗುರುತಿಸದ ನೀನು ಎಂಥ ಗೆಳೆಯನಯ್ಯಾ ಎಂದು ಹಂಗಿಸಿದ. ಕಾಗೆ ಎಂಜಲು ಅದೆಲ್ಲ ಬಾಲ್ಯದ ನೆನಪು. ಆ ಕಾಲದ ಗೆಳೆಯರು ಒಬ್ಬೊಬ್ಬರಾಗಿ ಸುಳಿದು ಹೋದರು, ಅವರ ಯಾದಿಯಲ್ಲಿ ತಾನಿರಲಿಲ್ಲ. ಅದರಿಂದ ಸ್ಫೂರ್ತಗೊಂಡ ತಾನೇ ಪುನಃ ನಿನ್ನ ಬಾಲ್ಯದ ಗೆಳೆಯರನ್ನು ಸಹಪಾಠಿಗಳನ್ನು ನೆನಪು ಮಾಡಿಕೊ, ಅದರಲ್ಲೂ ಮುಖ್ಯವಾಗಿ ಸ್ಯಾಮುಯಲ್ ನೆನಪಿರದಿದ್ದರೆ ಹೇಗೆ! ಎಂದು ಪ್ರಶ್ನಿಸಿದ.

ನೆನಪಿನ ಕೋಶದಿಂದ ಒಡಮೂಡಿದ ಗೆಳೆಯನೋರ್ವ ನಿಚ್ಚಳಗೊಳ್ಳಲು ಆರಂಭಿಸಿದ, ಓಹ್ ಸ್ಯಾಮ್! ತನ್ನ ಕೂಡು ಹುಬ್ಬುಗಳಿಂದಾಗಿ ಸಹಪಾಠಿಗಳ ಪೈಕಿ ಭಿನ್ನನಿದ್ದ, ತನ್ನ ಸಹಪಾಠಿಗಳಲ್ಲಿ ಮುಖ್ಯವಾಗಿ ನನ್ನನ್ನು ಗೋಳಾಡಿಸುತ್ತಿದ್ದ, ತಮ್ಮನ್ನೂ ಗೋಳಾಡಿಸುತ್ತಿದ್ದರೂ ಶಿಕ್ಷಕರು ಅವನನ್ನು ಕ್ಷಮಿಸಿ ಔದಾರ್ಯ ಮೆರೆಯುತ್ತಿದ್ದರು, ಅದಕ್ಕೆ ಕಾರಣ ಅವನ ಬುದ್ಧಿವಂತಿಕೆ, ತರಗತಿಗಳಿಗೆ ಚಕ್ಕರ್ ಹಾಕುವುದರಲ್ಲಿ ನಿಸ್ಸೀಮನಿದ್ದರೂ ಪ್ರತಿಯೊಂದು ವಿಷಯಗಳಲ್ಲಿ ನಮ್ಮೆಲ್ಲರಿಗಿಂತ ಹೆಚ್ಚು ಅಂಕಗಳನ್ನು ಗಳಿಸುತ್ತಿದ್ದ. ಅಂಥ ಗೆಳೆಯನನ್ನು ಮರೆಯುವುದು ಸಾಧ್ಯವೆ! ಆದರೂ ನಿರ್ಲಿಪ್ತತೆಯಿಂದ ನೋಡಿದೆ.

ಸ್ಯಾಮ್‌ನ ನೆನಪಿರದಿದ್ದರೂ ಅವನ ತಾಯಿ ಸ್ಟೆಲ್ಲಾ ನೆನಪಿರಬಹುದಲ್ಲವೆ! ಅದೇ ನಿಮ್ಮ ಮನೆಯ ಹಿಂದಿನ ಓಣಿಯ ಕೊನೆಯಲ್ಲಿ ಕಣಗಿಲೆ ಗಿಡಗಳ ನಡುವೆ ಇದ್ದ ಕೆಂಪು ಹೆಂಚಿನ ಮನೆ! ಎಂದು ಸುಳಿವು ನೀಡಿದ. ನೆನಪುಗಳನ್ನು ಕೆದಕಿದೆ. ತನ್ನ ವೃದ್ಧ ತಾಯಿಯೊಂದಿಗೆ ವಾಸಿಸುತ್ತಿದ್ದ ಸ್ಟೆಲ್ಲಾ! ಛೀಫಾಸೀಸರ್ ಗೋವಿಂದರಾಯರು ನುಡಿಸುತ್ತಿದ್ದ ಹಾರ್ಮೋನಿಯಂ ವಾದನಕ್ಕೆ ಸ್ವರ ಜೋಡಿಸಿ ಹಾಡುತ್ತಿದ್ದ ಸ್ಟೆಲ್ಲಮ್ಮ! ಲೋಕೋಪಯೋಗಿ ಗುತ್ತಿಗೆದಾರ ಸುಬ್ರಹ್ಮಣ್ಯನಾಯ್ಡು ಅವರ ಹಾಡಿಗೆ ನರ್ತಿಸುತ್ತಿದ್ದ ಸ್ಟೆಲ್ಲಮ್ಮ! ನಮ್ಮ ನಮ್ಮ ಮನೆಗಳ ಹಿರಿಯರ ನೀತಿ ಸಂಹಿತೆಯನ್ನು ಉಲ್ಲಂಘಿಸಿ ಅಣಕಿಸುವ ಸಲುವಾಗಿ ಇಣುಕುತ್ತಿದ್ದ ನಮ್ಮ ನಮ್ಮ ಎಳೆಯ ಅಂಗೈಗಳಲ್ಲಿ ಏನಾದರೊಂದು ಸಿಹಿತಿಂಡಿ ಚೂರುಗಳನ್ನಿರಿಸಿ ತಲೆ ನೇವರಿಸುತ್ತಿದ್ದ ಸ್ಟೆಲ್ಲಮ್ಮ! ವಾರಕ್ಕೊಂದು ಸಲವಾದರೂ ಪಾರ್ಶ್ವವಾಯುಪೀಡಿತ ತನ್ನ ತಾಯಿಯಿಂದ ವಾಚಾಮಗೋಚರ ನಿಂದನೆಗೊಳಾಗುತ್ತಿದ್ದ ಸ್ಟೆಲ್ಲಮ್ಮ! ತನ್ನ ಉಸಿರಳತೆಯಲ್ಲಿರುವವರಿಗಷ್ಟೆ ಕೇಳಿಸುವಂತೆ ರೋಧಿಸುತ್ತಿದ್ದ ಸ್ಟೆಲ್ಲಮ್ಮ! ನೆರೆಹೊರೆಯವರು ಮಾಡುತ್ತಿದ್ದ ಆಪಾದನೆಗಳನ್ನು ಪ್ರಸಾದವೆಂಬಂತೆ ಸ್ವೀಕರಿಸುತ್ತಿದ್ದ ಸ್ಟೆಲ್ಲಮ್ಮಳನ್ನು ಮರೆಯುವುದು ಸಾಧ್ಯವೆ! ಆದರೂ ನಿರ್ಲಿಪ್ತತೆಯಿಂದ ನೋಡಿದೆ.

ಸ್ಟೆಲ್ಲಾ ನೆನಪಿರದಿದ್ದರೂ ಆಕೆಯ ಅಭಿನಯ ನೆನಪಿರಬಹುದಲ್ಲವೆ! ಅದೇ ಅಮ್ಯಾಚ್ಯೂರ್ ಆರ್ಟಿಸ್ಟ್ ರೇಣುಕಾ! ಎಂದು ಸುಳಿವು ನೀಡಿದ. ಆಕೆಗೆ ಸಂಬಂಧಿಸಿದ ನೆನಪುಗಳನ್ನು ಶೋಧಿಸಿದೆ. ತನ್ನ ಪುಟ್ಟ ಕೌಟುಂಬಿಕ ವಲಯದಲ್ಲಿ ಸ್ಟೆಲ್ಲಾ ಎಂದು ಕರೆಸಿಕೊಳ್ಳುತ್ತಿದ್ದ ಆಕೆ ರಂಗಭೂಮಿ ವಲಯದಲ್ಲಿ ರೇಣುಕಾ ಎಂದೇ ಹೆಸರಾಗಿದ್ದಳು. ಹವ್ಯಾಸಿ ಕಲಾವಿದೆಯಾಗಿದ್ದ ತಾನು ಕರೆದ ಕಡೆಯಲ್ಲೆಲ್ಲಾ ಹೋಗಿ ಅಭಿನಯಿಸುತ್ತಿದ್ದಳು. ಆಕೆ ಸಂಭಾವನೆಗೆ ಮರುಳಾಗಿ ತನ್ನ ಅಭಿರುಚಿಗೆ ಹೊಂದದ ಪಾತ್ರಗಳನ್ನು ಸ್ವೀಕರಿಸುತ್ತಿರಲಿಲ್ಲ, ಅಶ್ಲೀಲ ಸಂಭಾಷಣೆಯನ್ನು ಗೌರವಿಸುತ್ತಿರಲಿಲ್ಲ, ಇಷ್ಟೆಲ್ಲಾ ನಿಬಂಧನೆಗಳ ನಡುವೆಯೂ ಆಕೆ ಬಹು ಬೇಡಿಕೆಯ ಕಲಾವಿದೆಯಾಗಿದ್ದಳು, ವಾರಕ್ಕೊಂದು ಸಲವಾದರೂ ಪರ ಊರುಗಳಿಗೆ ಹೋಗಿ ನಾಟಕಗಳಲ್ಲಿ ಅಭಿನಯಿಸಿ ಊರಿಗೆ ಮರಳಿ ಅಡಗುದಾಣವೆಂಬಂತಿದ್ದ ತಮ್ಮ ಮನೆಯಲ್ಲಿ ಮೈಮರೆಸಿಕೊಳ್ಳುತ್ತಿದ್ದಳು, ಆದರೆ ಆಕೆ ಓಣಿಯ ಸಾರ್ವಜನಿಕರಿಗೆ ಕಾಣಿಸಿಕೊಳ್ಳುತ್ತಿದ್ದು ತೀರಾ ಅಪರೂಪವಾಗಿತ್ತು. ಅಂಥ ಆ ಸಾಧ್ವಿಯನ್ನು ಮರೆಯಲಾದೀತೆ! ಆದರೂ ನಿರ್ಲಿಪ್ತತೆಯಿಂದ ನೋಡಿದೆ. ಅದಕ್ಕೆ ತಾನು ಅಯ್ಯೋ ತನ್ನ ದುರಾದೃಷ್ಟವೆ ಎಂಬಂತೆ ನೋಡಿದ.

ಪುನಃ ತಾನೆ ಇಷ್ಟೆಲ್ಲಾ ಸುಳಿವು ನೀಡಿದರೂ ಪ್ರಯೋಜನವಾಗಲಿಲ್ಲವೆಂದ ಮೇಲೆ ನೀನೆಂಥ ಕಥೆಗಾರ ಎಂದು ಸಂದೇಹಿಸಿದ. ಕೂತಲ್ಲಿಯೇ ಚಡಪಡಿಸಿದ, ಚಹಾ ಕುಡಿದ ಬಳಿಕ ಚೇತರಿಸಿಕೊಂಡು ನನ್ನ ಕಡೆ ನೆಟ್ಟನೆ ನೋಡಿದ, ಪುನಃ ತಾನೆ.. ದಿನಗಳೆದಂತೆ ನನ್ನ ತಾಯಿಗೆ ಅಗತ್ಯಕ್ಕಿಂತ ಹೆಚ್ಚು ವಯಸ್ಸಾಯಿತು. ಸಕ್ಕರೆ ಖಾಯಿಲೆ ರಕ್ತದೊತ್ತಡಗಳಂಥ ವ್ಯಾಧಿಗಳಿಗಿಂತ ಮುಖ್ಯವಾಗಿ.. ಎಂದು ಉಗುಳು ನುಂಗಿ ಮೌನವಹಿಸಿದ. ಮೆಲ್ಲಗೆ ಪ್ಯಾಂಟಿನ ಜೇಬಿನಿಂದ ಕರವಸ್ತ್ರ ಹೊರತೆಗೆದು ತನ್ನ ಕಣ್ಣುಗಳ ಮೇಲಿರಿಸಿಕೊಂಡ. ಉಳಿದವು ಎಷ್ಟು ಸತ್ಯವೋ! ಆದರೆ ಹರೆಯದ ಹೊಸ್ತಿಲನ್ನು ಅದೇ ತಾನೆ ದಾಟಿದ್ದ ಸ್ಯಾಮ್ ಊರಿನಿಂದ ಮನೆಯಿಂದ ಕಾಣೆಯಾದದ್ದು ಅಷ್ಟೇ ಸತ್ಯ. ಸ್ಟೆಲ್ಲಮ್ಮ ಸ್ಟೆಲ್ಲಮ್ಮಳಾಗಿ ತನ್ನ ಮಗನನ್ನು ಹುಡುಕುವ ಪ್ರಯತ್ನ ಮಾಡಲಿಲ್ಲ, ಸ್ಟೆಲ್ಲಮ್ಮ ರೇಣುಕಾಳಾಗಿ ಹುಡುಕುವ ಪ್ರಯತ್ನ ಮಾಡಲಿಲ್ಲ. ಆದರೆ ಆಕೆಯ ಮನಸ್ಸು ಮಗನನ್ನು ಅರಸಿಕೊಂಡು ದೇಶಾಂತರ

ಹೋಯಿತು. ತನ್ನ ಮನಸ್ಸಿನ ಗೈರುಹಾಜರಿಯಲ್ಲಿ ಸಕ್ಕರೆ ರಕ್ತದೊತ್ತಡಗಳಂಥ ಖಾಯಿಲೆಗಳು ಆಕೆಯ ಕೋಮಲ ದೇಹದಲ್ಲಿ ವಾಸ್ತವ್ಯ ಹೂಡಿದವು. ಅವುಗಳ ವಿರುದ್ಧ ಸೆಣಸಲು ತಾನು ಯಾವುದೇ ಚಿಕಿತ್ಸೆಯ ನೆರವು ಪಡೆಯಲಿಲ್ಲ, ಒಂದೆರಡು ವರ್ಷಗಳಲ್ಲಿ ತನ್ನ ತಾಯಿಯ ವೃದ್ಯಾಪ್ಯಕ್ಕಿಂತ ಹೆಚ್ಚು ವೃದ್ಯಾಪ್ಯವನ್ನು ಆವಹಿಸಿಕೊಂಡು ಹಣ್ಣು ಹಣ್ಣು ವೃದ್ದೆಯಾದಳು. ತಾನು ಮೊದಲು ಸಾಯುವುದಾಗಿ ಆಕೆಯ ತಾಯಿಯೂ, ತನ್ನ ತಾಯಿಗಿಂತ ತಾನೇ ಮೊದಲು ಸಾಯುವುದಾಗಿ ಆಕೆಯೂ ಪ್ರತಿದಿವಸ ಪೈಪೋಟಿ ಅನುಭವಿಸಿದರು. ನಮ್ಮೆಲ್ಲರಿಗೆ ತಿಳಿದಂತೆ ತಾಯಿಯನ್ನು ಸ್ಟೆಲ್ಲಮ್ಮ ವಾರದ ಬಳಿಕ ಹಿಂಬಾಲಿಸಿದಳು. ಆ ಮೂಲಕ ತಮ್ಮ ಮನೆಯಲ್ಲಿದ್ದ ತಬಲ ಹಾರ್ಮೋನಿಯಂ ಕಾಲ್ಗೆಜ್ಜೆಗಳನ್ನು ವೇಷಭೂಷಣಗಳನ್ನು ಅನಾಥವನ್ನಾಗಿಸಿದರು. ಸಂಗೀತಕ್ಕೆ ಸಂಬಂಧಿಸಿದಂತೆ ಸಹವರ್ತಿಗಳಾಗಿದ್ದ ಛೀಫಾಸಿರನಾಗಲೀ ಗುತ್ತಿಗೆದಾರನಾಗಲೀ ಶವಸಂಸ್ಕಾರದಲ್ಲಿ ಭಾಗವಹಿಸಲಿಲ್ಲ. ಕರುಳ ಕರೆಯನ್ನು ಪುರಸ್ಕರಿಸಿ ಮಗನಾದರೂ! ಹ್ಞೂ ಹ್ಞೂಂ ಅವನೂ ಸುಳಿಯಲಿಲ್ಲ, ಸ್ಟೆಲ್ಲಾಳಿಗೆ ಪ್ರತ್ಯೇಕ ಶ್ಮಶಾನ ಎಲ್ಲಿರಲು ಸಾಧ್ಯ! ರೇಣುಕಾಳಿಗೆ ಮಾತ್ರ ಇತ್ತಷ್ಟೆ, ಆ ಶವಯಾತ್ರೆಯಲ್ಲಿ ತಂದೆಯ ಸಂಗಡ ನಾನೂ ಭಾಗವಹಿಸಿದ್ದಂತೆ ನೆನಪು. ನೆನಪುಗಳಲ್ಲಿ ಅತ್ಯುಚ್ಛ್ರಾಯ ಸ್ಥಿತಿಯಲ್ಲಿರುವ ಆ ಘಟನೆಯನ್ನು ಮರೆಯಲಾಗುವುದೆ! ಆದರೂ ನಿರ್ಲಿಪ್ತತೆಯಿಂದ ನೋಡಿದೆ. ಅದರಿಂದ ಅವನಲ್ಲಿ ದುಃಖ ಉಮ್ಮಳಿಸಿ ಬಂತು, ಚಕ್ರವರ್ತಿ ಮತ್ತಿತರರ ಸಮಕ್ಷಮದಲ್ಲಿ ಅತ್ತರೆ ಏನೆಂದುಕೊಳ್ಳುವರೋ ಎಂಬ ಭಯ ಕಾಡಿತೇನೋ!

ಪುನಃ ತಾನೆ ನಿನ್ನಂಥ ಕಲ್ಲು ಹೃದಯದವನು ಅದು ಹೇಗೆ ವಿದ್ರಾವಕ ಕಥೆಗಳನ್ನು ಬರೆಯುತ್ತೀಯೋ ಎಂಬಂತೆ ನನ್ನ ಕಡೆ ನೋಡಿದ. ಅದಾದ ನಾಲ್ಕನೆ ದಿವಸ ತಾನು ಬಂದಿದ್ದನ್ನು ನೆನಪಿಸಿಕೊಳ್ಳುವಂತೆ ನೋಟದಿಂದ ಅಂಗಲಾಚಿದ, ಆ ದಿವಸ ನನ್ನ ನೆನಪಲ್ಲಿ ಅಚ್ಚಳಿಯದೆ ಉಳಿದಿರುವುದುಂಟು. ಹೌದು ಆ ದಿವಸ ಬಂದ, ಹಲವು ಮರಳುಗಾಡುಗಳನ್ನು ಕಾಲ್ನಡಿಗೆಯಿಂದ ಕ್ರಮಿಸಿರುವವನಂತೆ ದೈಹಿಕವಾಗಿ ಅಸ್ತವ್ಯಸ್ತಗೊಂಡಿದ್ದ, ಮೊದಮೊದಲು ಗುರುತಿಸದಿದ್ದರೂ ಕ್ರಮೇಣ ನೆರೆಹೊರೆಯವರು ಗುರುತಿಸಿದರು, ನೀನೆಂಥ ಮಗನೋ ಎಂದು ಹಂಗಿಸಿದರು, ಬಳಿಕ ಹಿರಿಯರ ಪೈಕಿ ಹಲವರು ಅವನನ್ನು ತಮ್ಮ ಎದೆಗಳಿಗೆ ಅವುಚಿಕೊಂಡು ನಿನ್ನಂಥ ನತದೃಷ್ಟ ಇನ್ನೊಬ್ಬರಿರಲಿಕ್ಕಿಲ್ಲವೆಂದು ಹಳಿದರು, ಬಳಿಕ ಅವನನ್ನು ಶ್ಮಶಾನಕ್ಕೆ ಬೀಳ್ಕೊಟ್ಟರು, ಇಲ್ಲಿಯೇ ನಿನ್ನ ತಾಯಿ ಮಲಗಿರುವುದು ಎಂದು ಅವರು ಪರಿಚಯಿಸಿದ ಜಾಗ ಗಜ ವಿಸ್ತೀರ್ಣವಿತ್ತು. ಮಗ ಅದರ ಮೇಲೆ ಮುಖವಿರಿಸಿ ಅತ್ತು ಮಣ್ಣಿನ ಶುಷ್ಕತೆಯನ್ನು ನಿವಾರಿಸಿದ ದೃಶ್ಯ ಕಣ್ಣಿಗೆ ಕಟ್ಟಿದಂತಿರುವುದು. ಆದರೂ ಅವನ ಕಡೆ ನಿರ್ಲಿಪ್ತತೆಯಿಂದ ನೋಡಿದೆ. ತಾನು ಕೂತಲ್ಲಿಂದ ಎದ್ದು ಬಂದು ನನ್ನೆದುರು ಕುಸಿದು ಕೂತ, ಮುಖದಲ್ಲಿ ಮುಖವಿರಿಸಿ ನೋಡಿದ, ಕ್ಷಮಿಸದಿರುವ ನೀನೆಂಥ ಬಾಲ್ಯಸಖನೋ ಎಂಬಂತೆ ನೋಡಿದ, ತಾನು ತನ್ನ ಮಾತೃಋಣ ತೀರಿಸುವ ಸಲುವಾಗಿ!

ಅಯ್ಯೋ ತಾನು ಋಣಮುಕ್ತಗೊಳ್ಳುವ ಸಲುವಾಗಿ ಅದೆಲ್ಲ ಮಾಡುವ ಅಗತ್ಯವಿರಲಿಲ್ಲ. ತನ್ನ ಸಮಾಧಿಯ ಮೇಲೆ ಅಮೃತಶಿಲೆಗಳನ್ನು ಪೇರಿಸಲು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದ. ಶ್ರೀಮತಿ ಸ್ಟೆಲ್ಲಾ (ರೇಣುಕಾ) ಪ್ರಸಿದ್ಧ ರಂಗಕಲಾವಿದೆ ಎಂದು ಸುಂದರ ಶಿಲಾಪಲಕ ಕೆತ್ತಿಸಿ ಅದರ ಮೇಲೆ ಅಂಟಿಸಿದ, ಋಣಿಯ ಜನ ಭುಂಜಿಸಲು ಒಪ್ಪಿದ್ದಲ್ಲಿ ಅನ್ನಸಂತರ್ಪಣೆ ನಡೆಸುತ್ತಿದ್ದನೇನೊ! ಮರಳಿದವನು ಮರಳಿ ಹೋಗಿಯೇಬಿಟ್ಟ, ಆ ದಿವಸವೇ ನಾನಿವನನ್ನು

ಸ್ಪಷ್ಟವಾಗಿ ನೋಡಿದ್ದು, ಅವನ ಕಡೆ ನಿರ್ಲಿಪ್ತತೆಯಿಂದ ನೋಡಿದೆ. ಪಾತಾಳಕ್ಕೆ ಕುಸಿದವನಂತೆ ಗೋಚರಿಸಿದ, ತನ್ನನ್ನು ಇನ್ನಾದರೂ ಗುರುತಿಸುವಂತೆ, ಗುರುತಿಸಿ ಬಾಲ್ಯಸಖನೆಂದು ಒಪ್ಪಿಕೊಳ್ಳುವಂತೆ ತನ್ನ ಕಣ್ಣುಗಳಿಂದ ಅಂಗಲಾಚಿದ, ಬಿಕ್ಕಳಿಸಲಿರುವನೆಂಬಂತೆ ಮುಖ ಮಾಡಿದ, ಆ ಸ್ಯಾಮುವೆಲ್‌ನ ಗುರುತೇ ಅಸ್ಪಷ್ಟವಿರುವಾಗ ಈ ಚೌಗಲೆಯನ್ನು ಗುರುತಿಸುವುದಾದರೂ ಹೇಗೆ! ಆದರೂ ಗುರುತಿಸಿದಂತೆ ನಟಿಸಿಯಾಗಿದೆ, ನಟಿಸಿ ಬರಮಾಡಿಕೊಂಡಾಗಿದೆಯಲ್ಲವೆ! ನೆನಪುಗಳನ್ನು ಪುನರ್ ನವೀಕರಿಸುವ ಅಗತ್ಯವೇಕೆ! ಆತನ ಭುಜಗಳ ಮೇಲೆ ಕೈಗಳನ್ನಿರಿಸಿ ಸಮಾಧಾನದ ವಿನಿಮಯ ನಡೆಸಿದೆ.

ಆ ಸ್ಯಾಮುಯಲ್ ಎಲ್ಲಿ! ಈ ಚೌಗಲೆ ಇಲ್ಲಿ! ಅವನ ಕಣ್ಣುಗಳ ಅಶ್ರುಬಿಂದುವಿನೊಳಗಿಂದ ಸ್ಟೆಲ್ಲಮ್ಮ ಒಡಮೂಡಿ ಸಮಾಧಾನದ ನಗೆ ಚೆಲ್ಲಿದಂತೆ ಭಾಸವಾಯಿತು, ಮೆಲ್ಲಗೆ ಅದುಮಿದೆ, ಆ ಸ್ಪರ್ಶದಿಂದ ಸಂತೈಸಿದೆ, ಕ್ಷಮೆಯನ್ನು ಆದರಿಂದ ಬರಮಾಡಿಕೊಂಡು ಪಲ್ಲವಿಸಿದೆ. ಅರಳಿದ ಕಣ್ಣುಗಳೊಡನೆ ಏನೆಲ್ಲ ಹೇಳಲು ಉಪಕ್ರಮಿಸಿದ. ಮೆಲ್ಲಗೆ ನಾವಿಬ್ಬರು ಎದ್ದೆವು, ಪರಾವರ್ತಿತಪ್ರತಿಕ್ರಿಯೆಗೆ ಒಳಪಟ್ಟವರಂತೆ ಪರಸ್ಪರ ಅಪ್ಪಿಕೊಂಡೆವು. ಅಂತೂ ಈಗಲಾದರೂ ಗುರುತಿಸಿದೆಯಲ್ಲವೆ ಎಂದ. ಮುಗುಳ್ನಗೆಯನ್ನು ಸಾಂಕ್ರಾಮಿಕಗೊಳಿಸಿದೆವು. ಪರಿಚಯಗೊಳ್ಳಲು ಹಾತೊರೆಯುತ್ತಿದ್ದ ಚಕ್ರವರ್ತಿ ನೆಮ್ಮದಿಯ ಉಸಿರುಬಿಟ್ಟಿದ್ದನ್ನು ಗಮನಿಸಿದೆವು, ತನ್ನೊಳಗೂ ಅದಕ್ಕಿಂತ ಮಿಗಿಲಾದ ಕಥೆ ಇರುವುದಾಗಿ ಚಕ್ರವರ್ತಿ ಹೇಳುವ ಸನ್ನಾಹದಲ್ಲಿದ್ದ, ಅವುಗಳನ್ನು ಹೇಳಿ ಪ್ರಯೋಜನವೇನು! ಕೇಳಿ ಪ್ರಯೋಜನವೇನು! ನಮ್ಮೆಲ್ಲರೊಳಗೂ ಅಂಥ ಕಥೆಗಳಿಗೆ ಬರವಿರಲಿಲ್ಲ, ಪಾಶ್ಚಾತ್ತಾಪಗಳಿಗೂ ಬರವಿರಲಿಲ್ಲ, ಆದರೆ ಬರವಿರುವುದು ಆಲಿಸಿ ಉದಾರವಾಗಿ ಸಂತೈಸುವವರನ್ನು ಎಲ್ಲಿ ಹುಡುಕುವುದು! ಆ ಅಲೌಕಿಕ ಸಂವೇದನೆ ನಮ್ಮಲ್ಲಿರುವುದೋ ಇಲ್ಲವೊ! ಇರಲಿ ಅದೆಲ್ಲ, ಆದರೆ!

ಸ್ಯಾಮುಯಲ್ ಪತ್ರಕರ್ತ ಚೌಗಲೆಯಾಗಿ ರೂಪಗೊಂಡ ಬಗೆ ಕುರಿತು ನಾನೂ! ನಾನು ಕಥೆಗಾರನಾದ ಬಗೆ ಕುರಿತು ಅವನೂ! ಇವುಗಳನ್ನು ನಮ್ಮಿಬ್ಬರೊಳಗೆ ರೂಪಿಸಿದ ಮಾಂತ್ರಿಕ ದಂಡ ಯಾವುದು! ಪರಸ್ಪರ ಆಲಿಸುವ ತಿಳಿದುಕೊಳ್ಳುವ ಕುತೂಹಲ ನಮ್ಮಿಬ್ಬರಲ್ಲಿ ಇಲ್ಲದಿರಲಿಲ್ಲ. ಆದರೆ ಅದೆಲ್ಲ ಏಕಾಂತದಲ್ಲಿ ಸಂಭವಿಸುವ ಕ್ರಿಯೆ. ಮುಖ್ಯವಾಗಿ ಇನ್ನಿತರರನ್ನು ಗಮನಿಸಿದೆ, ಮಾತಿನ ಹಂಗು ತೊರೆದು ನಮ್ಮಿಬ್ಬರ ನಡುವೆ ಸಂಭವಿಸಿದ ಮಾತುಕತೆ ಯಾರೊಬ್ಬರಿಗೂ ಅರ್ಥ ಆಗಿರಲಿಲ್ಲ, ಅವರೆಲ್ಲರ ಮುಖಗಳ ನಿರಿಗೆಗಳಲ್ಲಿ ಪ್ರಶ್ನೆಗಳಿದ್ದವು ಒಗಟುಗಳಿದ್ದವು. ಆದರೆ ಉತ್ತರಗಳಾಗಲೀ ಸಮಾಧಾನಗಳಾಗಲೀ ನಮ್ಮಲ್ಲಿರಲಿಲ್ಲ.

ಅಷ್ಟರೊಳಗೆ ಧೂಮ್ರಪಾನದಿಂದ ಪುನಶ್ಚೇತರಿಸಿಕೊಂಡು ಬಂದಿದ್ದ ಶೇಷಣ್ಣ "ಈ ನಿಮ್ಮ ಗೆಳೆಯರು ಅಷ್ಟು ದೂರದ ಬೆಂಗಳೂರಿನಿಂದ ನಮ್ಮ ವಾಗಿಲಿವರೆಗೆ ಯಾಕೆ ಬಂದಿರುವರೆಂಬುದು ನಮಗಿನ್ನೂ ಅರ್ಥವಾಗಿಲ್ಲ ಸಾರ್! ಅದನ್ನು ಬಿಡಿಸಿ ಹೇಳಿದಿರೆಂದರೆ" ಎಂದು ಕೇಳಿದ. ಅದು ನನಗೂ ಅರ್ಥ ಆಗಿರಲಿಲ್ಲ.

ಅದಕ್ಕೆ ಚೌಗಲೆ "ನಿಮಗೆ ತಿಳಿದಿರುವುದೋ ಇಲ್ಲವೋ! ನಾನು ನನ್ನ ತಾಯಿ ಹೆಸರಿನಲ್ಲಿ ಪ್ರತಿಷ್ಠಾನ ಸ್ಥಾಪಿಸಿರುವೆ" ಎಂದೊಡನೆ ನಾನು ಮನಸ್ಸಿನಲ್ಲಿ ಓಹೋ ಎಂದು ಉದ್ಗರಿಸಿದೆ. ಬೆಂಗಳೂರು ಎಷ್ಟು ಪ್ರಸಿದ್ದವೋ ಕಾಕ್ಸ್‌ಟೌನ್ ಪ್ರದೇಶದಲ್ಲಿರುವ ಆ ಪ್ರತಿಷ್ಠಾನವೂ ಅಷ್ಟೇ ಪ್ರಸಿದ್ಧ. ಅದು ಪ್ರತಿವರ್ಷ ವೃತ್ತಿರಂಗಭೂಮಿಯಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ನೀಡುತ್ತಿರುವ ಪ್ರಶಸ್ತಿಯೂ ಸಹ ಅಷ್ಟೇ ಪ್ರಸಿದ್ಧ. ಅಷ್ಟೇ ಅಲ್ಲದೆ ಪ್ರತಿವರ್ಷವೂ ನಾಟಕೋತ್ಸವಗಳನ್ನು

ಹಮ್ಮಿಕೊಳ್ಳುತ್ತಿರುವುದಲ್ಲದೆ ವಿಚಾರ ಸಂಕಿರಣಗಳನ್ನೂ ಏರ್ಪಡಿಸುತ್ತ ಬಂದಿರುವುದು. ಅದು ಯಾವುದೇ ಅಕಾಡೆಮಿಗಿಂತ ಕಡಿಮೆ ಇಲ್ಲ, ಅದರ ಸಂಸ್ಥಾಪಕ ತನ್ನ ಸಮಕ್ಷಮದಲ್ಲಿದ್ದಾನೆ, ಆತ ನನ್ನ ಬಾಲ್ಯದ ಗೆಳೆಯನಾಗಿದ್ದಾನೆ, ಆತ ತನ್ನ ತಾಯಿಯ ಋಣವನ್ನು ಈ ಮೂಲಕ ಸಂದಾಯ ಮಾಡುತ್ತಿದ್ದಾನೆ, ನಾನು ಆತನ ಕಡೆ ಅಭಿಮಾನದಿಂದ ನೋಡಿದೆ, ನನ್ನ ಕೈಗಳು ನನಗರಿವಿಲ್ಲದಂತೆ ಸಾಗಿ ಆತನ ಕೈಯನ್ನು ಕುಲುಕಿದವು.

ಅದರಿಂದ ಮತ್ತಷ್ಟು ಸಂತುಷ್ಟಗೊಂಡ ಚೌಗಲೆಯು "ಪ್ರತಿಷ್ಠಾನದ ಸಮಿತಿ ಪದ್ಮಾವತಿಯವರಿಗೆ ಪ್ರಶಸ್ತಿ ಕೊಡುವುದೆಂದು ತೀರ್ಮಾನಿಸಿದೆ, ಅದೂ ಹೇಮರೆಡ್ಡಿ ಮಲ್ಲಮ್ಮ ನಾಟಕದಲ್ಲಿನ ಅವರ ಉತ್ಕೃಷ್ಠ ಅಭಿನಯಕ್ಕಾಗಿ" ಎಂದು ಪ್ರಚುರಪಡಿಸಿದ. ಅದನ್ನು ಕೇಳಿಸಿಕೊಂಡ ನಮ್ಮೆಲ್ಲರ ಕಣ್ಣುಗಳು ಅರಳಿದವು. ಒಂದು ಕ್ಷಣ ಮೌನದ ಬಳಿಕ ತಾನೆ "ಹ್ಹಾ ಇನ್ನೊಂದು ಸಂತೋಷದ ಸಂಗತಿ ಎಂದರೆ ಪದ್ಮಾವತಿಯವರಿಗೆ ಈ ಸಲದ ರಾಜ್ಯೋತ್ಸವ ಪ್ರಶಸ್ತಿ ನೀಡುವುದೆಂದು ತೀರ್ಮಾನಿಸಿದೆ, ಸರ್ಕಾರದ ಪರವಾಗಿ ಇಲಾಖೆಯ ನಿರ್ದೇಶಕರು ಖುದ್ದ ನನ್ನೊಂದಿಗೆ ಬಂದಿದ್ದಾರೆ, ಇವರೇ ಅವರು" ಎಂದು ತನ್ನೊಂದಿಗೆ ಇದ್ದ ವ್ಯಕ್ತಿಯ ಕಡೆ ಬೆರಳು ಮಾಡಿ ತೋರಿಸಿದ. ನಮ್ಮೆಲ್ಲರ ಕಣ್ಣುಗಳು ಆತನ ಕಡೆ ನೆಟ್ಟವು.

ಚಕ್ರವರ್ತಿ ಒಂದೆರಡು ಹೆಜ್ಜೆ ಮುಂದೆ ಬಂದು "ಅವರಿಗಾಗಿ ನಾವು ಎಲ್ಲ ಕಡೆ ಅಲೆದಾಡಿದೆವು, ಕೊನೆಗೆ ಆದೋನಿಯಲ್ಲಿರುವ ಶ್ರೀಕಂಠೇಶ್ವರರ ಸಹಾಯದಿಂದ ನಾವಿಲ್ಲಿಗೆ ಬರಲು ಸಾಧ್ಯವಾಯಿತು. ಇರುವ ಸ್ಥಳ ತಿಳಿಸಿದರೆ ನಾವು ಅವರಿರುವಲ್ಲಿಗೆ ಹೋಗಿ ಭೆಟ್ಟಿ ಮಾಡುವೆವು" ಎಂದು ಹೇಳಿದ ವಿನಯಪೂರ್ವಕವಾಗಿ. ಆತನ ಮಾತುಗಳು ಅಲ್ಲಿ ನೆರೆದಿದ್ದವರ ಮೇಲೆ ಪರಿಣಾಮ ಬೀರಿದವು. ಅವರೆಲ್ಲರ ಬಾಯಿಗಳು ಪರಾವರ್ತಿತವಾಗಿ ಅದೇ ನಮ್ಮ ಕಿತ್ತೂರು ಚೆನ್ನಮ್ಮ! ಅದೇ ನಮ್ಮ ಸದಾರಮೆ! ಅದೇ ಶ್ರೀಮಂತ ಹೇಮರೆಡ್ಡಿಯ ಹೆಂಡತಿಯಾಗಲಿರುವ ನಮ್ಮ ಮಲ್ಲಮ್ಮ! ಎಂದು ಉದ್ಗರಿಸಿದವು, ಹಾಗೆಯೇ ನಮ್ಮೆಲ್ಲರ ಕಣ್ಣುಗಳು ನಿಧನಿಧಾನವಾಗಿ ಅದೇ ಓಣಿಯಲ್ಲಿದ್ದ ಬಸವನಗೌಡರ ಮಹಡಿಮನೆ ಕಡೆ ತಿರುಗಿದವು.

ಮೆಟ್ಟಿಲುಗಳನ್ನು ಒಂದೊಂದಾಗಿ ಏರಿ ತಲುಪಿ ಮುಚ್ಚಿದ್ದ ಬಾಗಿಲನ್ನು ತೆರೆಯಲಿದ್ದ ಜಲಂಧರ ಯಾರೂ ಎಂದು ಕೂಗಿದೊಡನೆ!

++++

ಅದೇ ದಿವಸದ ಸರದಿ ಮೂಲಿಮನಿ ಗೌಡರಿಗೆ ಒಲಿದಿತ್ತು, ವಿಷಯ ತಿಳಿದ ಅವರು ಸುಮ್ಮನಿದ್ದಾರೆಯೆ! ಮೈಸೂರುಪಾಕ್ ಮಾಡಿಸಿದ್ದ ಅವರು ಹೆಚ್ಚುವರಿಯಾಗಿ ಜಿಲೇಬಿ ಸಹ ಮಾಡಿಸಿದರು. ವಿಷಯ ತಿಳಿದು ಸಂಭ್ರಮಿಸಿದ ಪಾಕಪ್ರವೀಣ ವಿಠೋಬಶೆಟ್ಟಿ ಗೌಡರು ಕೊಡಲು ಬಂದ ಮಜ್ದೂರಿಯನ್ನು ತೆಗೆದುಕೊಳ್ಳಲು ಸುತಾರಾಂ ಒಪ್ಪಲಿಲ್ಲ. ಬಲವಂತ ಮಾಡಿದ್ದಕ್ಕೆ ಶೆಟ್ಟಿ "ಅಡುಗೆ ಮಾಡಿದ್ದಕ್ಕೆ ಕೂಲಿ ಪಡೆದು ನಾನ್ಯಾವ ನರಕಕ್ಕೆ ಹೋಗಲಿ ಧಣಿ! ಆ ದೇವರು ನಾಟಕ ಕಲಾವಿದರಿಗೆ ಹೊಟ್ಟೆ ತುಂಬ ಅನ್ನ ಹಾಕುವ ಶಕ್ತಿಯನ್ನು ಕೊಟ್ಟಿಲ್ಲ, ಆದರೆ ಅಡುಗೆ ಮಾಡುವ ಶಕ್ತಿಯನ್ನು ಕೈತುಂಬ ಕೊಟ್ಟಿರುವನು, ಇದು ನನ್ನ ಸೇವೆ ಅಂತ ತಿಳಿಯಿರಿ" ಎಂದು ನಯವಾಗಿಯೇ ನಿರಾಕರಿಸಿದನು.

ವೈಶ್ಯ ಕೋಮಿನವನಾದ ವಿಠೋಬ ತನ್ನ ಹೆಸರಿನ ಉತ್ತರಾರ್ಧದಲ್ಲಿದ್ದ ಶೆಟ್ಟಿ ಎಂಬ ಜಾತಿ ಸೂಚಕ ಪದವನ್ನು ಕೆಲವು ವರ್ಷಗಳ ಹಿಂದೆಯೇ ಬೇಕೆಂದೇ ವಿಸರ್ಜಿಸಿಕೊಂಡಿದ್ದನು,

ಶ್ರೀಮಂತರ ಮನೆಗಳಲ್ಲಿ ಅಡುಗೆ ಮಾಡಿ ಹೊಟ್ಟೆಹೊರೆಯುತ್ತಿರುವ ತನಗೆ ಶೆಟ್ಟಿ ಎಂದು ಕರೆಸಿಕೊಳ್ಳಲು ಮಜುಗರವಾಗುವುದೆಂದು ಕೈ ಜೋಡಿಸಿ ವಿನಂತಿಸಿಕೊಳ್ಳುತ್ತಿದ್ದನು, ತಾನೇನು ಜನ್ಮಜಾತ ಬಡವನಲ್ಲ, ಒಂದು ಕಾಲದಲ್ಲಿ ಆದೋನಿ ಕರ್ನೂಲುಗಳಂಥ ಶಹರಗಳಲ್ಲಿ ಮಿಠಾಯಿ ದುಕಾನುಗಳಿಗೆ ಮಾಲಕನಾಗಿದ್ದಂಥವನೆ! ರಜಕಾರರ ದೊಂಬೆಗಳಿಂದಾಗಿಯೂ ಆಗಾಗ್ಗೆ ಸಂಭವಿಸಿದ ಕೋಮುಗಲಭೆಗಳಿಂದಾಗಿಯೂ ಕ್ಷೀಣಿಸುತ್ತ ಹೋಗಿ ಬಡತನದ ಸುಳಿಗೆ ಸಿಲುಕಿದ್ದನು. ಕೊಲೆಗೀಡಾದ ಹಾಲ್ವಿ ಸಿದ್ದರಾಮಪ್ಪನವರ ಶ್ರಾದ್ಧಾ ಕಾರ್ಯಕ್ರಮದಲ್ಲಿ ತ್ರಿಕರಣಪೂರ್ವಕವಾಗಿ ಭಾಗವಹಿಸಿದ್ದ ಹೆಬ್ಬಟಂ ಸೀತಾರಾಮರೆಡ್ಡಿಯವರು ಷಡ್ರಸೋಪಚಾರಕ್ಕೆ ಬೆರಗಾಗಿ ಬಾಣಸಿಗ ಶೆಟ್ಟಿಯನ್ನು ವಾಗಿಲಿಗೆ ಕರೆತಂದಿದ್ದರು, ಕೇವಲ ಇಪ್ಪತ್ತೈದು ರೂಪಾಯಿಗಳಿಗೆ ತಮ್ಮ ಎರಡು ಅಂಕಣದ ಮನೆಯನ್ನು ಆತನ ಹೆಸರಿಗೆ ಮಾಡಿಸಿ ಪುನರ್ವಸತಿ ಕಲ್ಪಿಸಿದ್ದರು. ವಿವಿಧ ಖಾದ್ಯಗಳನ್ನು ತಯಾರಿಸುವುದರಲ್ಲಿ ಪರಿಣತಿ ಹೊಂದಿರುವ ಶೆಟ್ಟಿ ಅಡುಗೆ ಮಾಡುವುದನ್ನೇ ತನ್ನ ಜೀವನೋಪಾಯವನ್ನಾಗಿಸಿಕೊಂಡು ಕಳೆದ ಎರಡು ದಶಕಗಳಿಂದ ವಾಗಿಲಿಯಲ್ಲಿ ಆರಕ್ಕೇರದ ಮೂರಕ್ಕಿಳಿಯದ ರೀತಿಯಲ್ಲಿ ತನ್ನ ಬೃಹತ್ ಸಂಸಾರವನ್ನು ತೂಗಿಸುತ್ತ ಜನಾನುರಾಗಿಯಾಗಿರುವನು.

ಅಂಥ ಶೆಟ್ಟಿಯು ಆ ಔತಣಕೂಟದ ಉಸ್ತುವಾರಿಯನ್ನು ವಹಿಸಿಕೊಂಡನೆಂದರೆ ಕೇಳುವುದೇನುಂಟು! ಐವತ್ತು ಜನರು ಭಾಗವಹಿಸುವಲ್ಲಿ ನೂರಾರು ಜನರು ಅತಿಥಿಗಳ ರೂಪದಲ್ಲಿ ಭಾಗವಹಿಸಿದರೆಂದರೆ ಕೇಳುವುದೇನುಂಟು! ಒಬ್ಬೊಬ್ಬರು ವಾರದ ಕವಳವನ್ನು ಒಟ್ಟಿಗೆ ತಮ್ಮ ಜಠರಗಳಿಗೆ ಇಳಿಸಿದರೆಂದರೆ ಕೇಳುವುದೇನುಂಟು! ಪದ್ಮಾವತಿಯ ರೂಪದಲ್ಲಿರುವ ತಮ್ಮ ಮನೆಯ ಮಗಳಿಗೇ ಪ್ರಶಸ್ತಿ ಬಂದಿರುವುದು ಎಂದು ಮೂಲಿಮನಿ ಗೌಡರು ಸಂಭ್ರಮಿಸಿದರೆಂದರೆ ಕೇಳುವುದೇನುಂಟು! ಹೌದು ಪನ್ನಂಗಧರನ ನಾಟಕ ಕಂಪನಿಯ ಕಲಾವಿದರು ಆ ದಿವಸ ಕೇವಲ ಕಲಾವಿದರು ಮಾತ್ರ ತಾವು ಆಗಿರಲಿಲ್ಲ, ಆ ದಿವಸದ ಅತಿಥಿಗಳು ಮಾತ್ರ ತಾವಾಗಿರಲಿಲ್ಲ. ಅವರೆಲ್ಲ ಅದನ್ನು ತಮ್ಮ ಮನೆ ಎಂದೇ ಭಾವಿಸಿದರು, ತಾವೇ ಖುದ್ದ ಬಡಿಸಿದರು, ಎಂಜಲೆಲೆಗಳನ್ನು ಎತ್ತಿದರು, ಔತಣಕ್ಕೆ ಆಶ್ರಯ ನೀಡಿದ ನೆಲವನ್ನು ಪವಿತ್ರವೆಂದು ಭಾವಿಸಿ ತೊಳೆದು ಚೊಕ್ಕಟಗೊಳಿಸಿದರು. ಇನ್ನೂ ಊಟ ಮಾಡದೆ ಸೇವೆ ಮಾಡುವುದರಲ್ಲಿ ನಿರತಳಾಗಿದ್ದ ಪ್ರಶಸ್ತಿ ಪುರಸ್ಕೃತೆ ಪದ್ಮಾವತಿಯನ್ನು ಗೌಡ ದಂಪತಿಗಳು ಆದರದಿಂದ ದೇವರ ಮನೆಗೆ ಕರೆದೊಯ್ದು ತಮ್ಮ ಕೈಯಾರೆ ಆಕೆಗೆ ಊಟ ಬಡಿಸಿದರಲ್ಲದೆ ಹೊಸ ಸೀರೆ ಕುಪ್ಪಸ ಕಣ ನೀಡಿ ಸತ್ಕರಿಸಿದರೆಂದರೆ ಕೇಳುವುದೇನುಂಟು! ಆಕೆ ಅದಕ್ಕೆ ಪ್ರತಿಯಾಗಿ ಅವರ ಪಾದಗಳನ್ನು ತನ್ನ ಆನಂದ ಬಾಷ್ಪಗಳ ನೆರವಿನಿಂದ ತೊಳೆದಳೆಂದರೆ ಕೇಳುವುದೇನುಂಟು! ಅಷ್ಟಾದಶ ಚಂದ್ರನು ಆ ಎಲ್ಲ ಸಂಭ್ರಮಕ್ಕೆ ಎಷ್ಟು ಸಾಧ್ಯವೋ ಅಷ್ಟೂ ಬೆಳಕು ಸುರಿಸಿ ಪಶ್ಚಿಮದ ನೇಪಥ್ಯಕ್ಕೆ ಸರಿದಿದ್ದನೆಂದರೆ ಕೇಳುವುದೇನುಂಟು!

++++

ಮೂಲಿಮನಿ ಗೌಡರ ಮನೆಯ ಮಾಳಿಗೆ ಹಂಸತೂಲಿಕಾತಲ್ಪವೆಂದು ನನಗೆ ಮನವರಿಕೆಯಾದ ಆ ಇರುಳನ್ನು, ಮೇಲ್ನೋಟಕ್ಕೆ ಅತೀ ಸರಳವೆಂಬಂತೆ ಗೋಚರಿಸುವ ಕಲಾವಿದೆ ಪದ್ಮಾವತಿಯ ಉಳಿದ ಆ ಎರಡು ಮುಖಗಳನ್ನು ಅತಿಥಿಗಳ ಮೂಲಕ ಪರಿಚಯಿಸಿದ ಆ ಇರುಳನ್ನು ಮರೆಯಲು ಸಾಧ್ಯವಿಲ್ಲ. ಆಕೆಯ ಒಂದು ಮುಖವನ್ನು ಚೌಗಲೆ

ಪರಿಚಯಿಸಿದರೆ ಇನ್ನೊಂದು ಮುಖವನ್ನು ಚಕ್ರವರ್ತಿ ಸುದೀರ್ಘವಾಗಿ ಪರಿಚಯಿಸಿದ. ಆಕೆಯ ಸಹೋದರ ತನ್ನ ತಂಗಿ ಸದಭಿರುಚಿ ವಾಚನಾಭಿರುಚಿ ಉಳ್ಳವಳೆಂದೂ ಲೇಖಕಿಯೂ ಎಂದು ಹಿಂದೆಯೇ ಎರಡೇ ಎರಡು ಮಾತುಗಳಲ್ಲಿ ಹೇಳಿಕೊಂಡಿದ್ದನಷ್ಟೆ. ನಾನೂ ಆ ಕುರಿತಂತೆ ಹೆಚ್ಚು ತಲೆಯನ್ನು ವೆಚ್ಚ ಮಾಡುವ ಗೋಜಿಗೆ ಹೋಗಿರಲಿಲ್ಲ. ಅದು ನಿಜವೆಂದಾದಲ್ಲಿ ಆಕೆ ನನ್ನೊಂದಿಗೆ ಸಾಹಿತ್ಯ ಕುರಿತಂತೆ ತನ್ನ ಆಲೋಚನೆಗಳನ್ನು ಹಂಚಿಕೊಳ್ಳಬಹುದಿತ್ತು! ನನ್ನ ಮನೆಯ ಕಪಾಟಿನೊಳಗಿರುವ ಪುಸ್ತಕಗಳನ್ನು ಕೈಗಡ ರೀತಿಯಲ್ಲಿ ಪಡೆದು ಓದಬಹುದಿತ್ತು! ವಿಚಿತ್ರವೆಂದರೆ ತಾನು ಹಾಗೆ ವರ್ತಿಸಿರಲಿಲ್ಲ, ಏನೂ ಅರಿಯದವಳಂತೆ ಮಗುಂ ಆಗಿ ಉಳಿದುಬಿಟ್ಟಿದ್ದಳು. ಲಾಂದ್ರದ ಬೆಳಕಿನಲ್ಲಿ ಚಿಮಣಿ ಹೊಗೆಯಲ್ಲಿ ಅವರು ತಮ್ಮೊಂದಿಗೆ ತಂದಿದ್ದ ಕಡತಗಳನ್ನು ಹರಡಿ ತೋರಿಸಿದಾಗಲೇ ನನಗೆ ಅರಿವಾದದ್ದು ಆಕೆಯೂ ಸ್ವತಃ ಲೇಖಕಿ ಎಂಬ ಸಂಗತಿಯು. ಪದ್ಮಾವತಿ ತನ್ನ ತಂದೆಯವರ ಕುರಿತು ಬರೆದಿರುವ ಜೀವನ ಚರಿತ್ರೆಯನ್ನು ವಾರಪತ್ರಿಕೆಯೊಂದು ಧಾರವಾಹಿಯಾಗಿ ಪ್ರಕಟಿಸಿದ್ದರೆ, ಇನ್ನೊಂದು ನಿಯತಕಾಲಿಕವು ಆಕೆಯ ಬಿಡಿ ಲೇಖನಗಳನ್ನು ಪ್ರಕಟಿಸಿತ್ತು, ಮತ್ತೊಂದು ಮಾಸಪತ್ರಿಕೆಯಲ್ಲಿ ಆಕೆಯ ಕಥೆ ಕವಿತೆಗಳಿದ್ದರೆ ಮಗುದೊಂದು ಪತ್ರಿಕೆಯಲ್ಲಿ ಆಕೆಯ ಸಂದರ್ಶನಗಳಿದ್ದವು. ಸರ್ಕಾರದ ಅಧಿಕಾರಿಯೂ ಹಾಗೂ ಅನುವಾದಕನೂ ಆಗಿದ್ದ ಚಕ್ರವರ್ತಿಯು ಆಕೆಯ ಬರಹಗಳನ್ನು ಇಂಗ್ಲೀಷ್ ಭಾಷೆಗೆ ಅನುವಾದಿಸುವುದರ ಮೂಲಕ ನಾಡಿನ ಹಾಗೂ ದೇಶದ ವಿದ್ವಾಂಸರ ಗಮನ ಸೆಳೆದಿದ್ದನು. ನನ್ನನ್ನು ದಿಗ್ಭ್ರಮೆಗೀಡು ಮಾಡಿದ ಹೆಚ್ಚುವರಿ ಮಾಹಿತಿ ಎಂದರೆ ಪದ್ಮಾವತಿ ಸಭೆ ಸಮಾರಂಭಗಳಲ್ಲಿ ಭಾಗವಹಿಸಿದ್ದಳೆಂಬುದು! ಅಲ್ಲೆಲ್ಲ ವೃತ್ತಿರಂಗಭೂಮಿ ಕುರಿತಂತೆ ಅಶಕ್ತ ರಂಗಕಲಾವಿದರ ಕುರಿತಂತೆ ಉಪನ್ಯಾಸಗಳನ್ನು ನೀಡಿದ್ದಳೆಂಬುದು! ಸಂಘಸಂಸ್ಥೆಗಳು ಪ್ರತಿಷ್ಠಾನಗಳು ನೀಡಿರುವ ಗೌರವ ಪುರಸ್ಕಾರಗಳನ್ನೂ ಪಡೆದಿರುವಳೆಂಬುದು! ಈ ಎಲ್ಲಾ ಸಾಧನೆಗಳನ್ನು ಪರಿಗಣಿಸಿಯೇ ಚೌಗಲೆ ಸಂಸ್ಥಾಪಿಸಿರುವ ಪ್ರತಿಷ್ಠಾನವು ಈ ಸಲದ ತನ್ನ ಪ್ರಶಸ್ತಿಗೆ ಪದ್ಮಾವತಿಯನ್ನು ಆಯ್ಕೆ ಮಾಡಿತ್ತು. ಅವರೀರ್ವರು ಹೇಳಿದ್ದೆಲ್ಲವನ್ನು ಕೇಳಿ ಸಾಕ್ಷ್ಯಾಧಾರಗಳನ್ನು ಓದಿ ಅಹಂಕಾರವಳಿದು ನಾನು ಸಣ್ಣವನಾಗಿಬಿಟ್ಟೆ. ಕೀಳರಿಮೆಯಿಂದಾಗಿಯೋ ಅಂಥ ಕಲಾವಿದರ ಸಾನ್ನಿಧ್ಯದಲ್ಲಿರುವ ಮೇಲರಿಮೆಯಿಂದಾಗಿಯೋ ಆ ರಾತ್ರಿ ನಾನು ನಿದ್ರಾಹೀನತೆಯಿಂದ ನರಳದೆ ಇರಲಿಲ್ಲ.

ಮಾರನೆ ದಿವಸದ ಅರುಣೋದಯವು ಕೇವಲ ಹಗಲ ಮುನ್ಸೂಚನೆಯಾಗಿರಲಿಲ್ಲ. ವಾಗಿಲಿಯಾದ್ಯಂತ ಆರಂಭದಲ್ಲಿ ಮೆಲುಮೆಲ್ಲಗೆ ಅವತರಿಸಿದ ಸಂಭ್ರಮ ಆಶ್ಚರ್ಯವು ಗಳಿಗೆಗಳು ಗತಿಸಿದಂತೆ ಬೆಳೆದು ಹೆಮ್ಮರಗೊಂಡ ಪರಿಣಾಮ ಅಷ್ಟಿಷ್ಟಲ್ಲ! ಪ್ರಶಸ್ತಿ ಬಹುಮಾನ! ಬೆಂಗಳೂರು! ಹುಡುಕಿಕೊಂಡು ಬಂದಿರುವ ವಿಶಿಷ್ಟ ವೇಷಭೂಷಣದ ಅತಿಥಿಗಳು! ದೇವನಾಗರೀ ಪರಿವೇಷ ಧರಿಸಿರುವ ಅವರಾಡುವ ಭಾಷೆ! ನಡೆದಿರುವ ನಡೆಯಲಿರುವ ಮಾತುಕತೆ! ಕುತೂಹಲ ಸಂಭ್ರಮವಾಗಿ ಪರಿವರ್ತಿತಗೊಂಡಿತು, ಇವೆಲ್ಲವುಗಳ ಕುರಿತಂತೆ ವಾಗಿಲಿಯ ಮುಗ್ದ ಜನತೆ ಕಥೆಗಳನ್ನು ಕಟ್ಟುತ್ತ ಹೋದ ಪರಿಣಾಮ ಅಷ್ಟಿಷ್ಟಲ್ಲ! ಕಲ್ಪನೆಗಳನ್ನು ಒಂದರ ಮೇಲೆ ಇನ್ನೊಂದರಂತೆ ಪೇರಿಸಿ ಕಿವಿಯಿಂದ ಕಿವಿಗೆ ಹೇಳುತ್ತ ಹೋದ ಪರಿಣಾಮ ಅಷ್ಟಿಷ್ಟಲ್ಲ. ತಮ್ಮ ತಮ್ಮ ದೈನಂದಿನ ವಿಧಿವಿಧಾನಗಳನ್ನು ಅಮಾನತ್ತಿನಲ್ಲಿರಿಸಿದ ಪರಿಣಾಮ ಅಷ್ಟಿಷ್ಟಲ್ಲ! ಪದ್ಮ ಪದ್ಮಾವತಿ ಅಮ್ಮನವರಾದ ಪರಿಣಾಮ ಅಷ್ಟಿಷ್ಟಲ್ಲ! ಆಕೆಯನ್ನು ಅವರು ಕಣ್ಣಾರೆ ನೋಡುವ ಬಯಕೆಯೋ! ನೋಡಿ ಮಾತಾಡುವ ಬಯಕೆಯೋ! ಮಾತಾಡಿ ಆಕೆಯ

ಕೈಕುಲುಕುವ ಬಯಕೆಯೋ! ಹೇಗೋ ಒಂದು ರೀತಿಯಲ್ಲಿ ಪ್ರಶಸ್ತಿಯ ಮೌಲ್ಯ ತಿಳಿದುಕೊಳ್ಳುವ ಬಯಕೆಯೋ! ಜಲಂಧರ ಅವರೆಲ್ಲರ ಪ್ರಶ್ನೆಗಳಿಗೆ ತನಗೆ ತೋಚಿದಂತೆ ಉತ್ತರಗಳನ್ನು ಕೊಡುತ್ತಿರಬಹುದೆಂದು ಊಹಿಸಿದೆ. ಪ್ರಶಸ್ತಿಯ ಮೌಲ್ಯ ಲಕ್ಷಗಳಿಂದ ಕೋಟಿಗೇರಬಹುದೆಂದು ಊಹಿಸಿದೆ, ಕೇಳಿಸಿಕೊಂಡವರು ಅವನನ್ನು ಸಾಲಕ್ಕಾಗಿ ಪೀಡಿಸಬಹುದೆಂದೂ ಊಹಿಸಿದೆ. ಅವರೆಲ್ಲ ಏನು ಕೇಳಿದರೋ ಅದಕ್ಕವನು ಏನು ಹೇಳಿದನೋ!

ಹೊತ್ತು ಏರಿದಂತೆ ವೈಯಕ್ತಿಕ ಮಟ್ಟದಲ್ಲಿದ್ದ ಸಂಭ್ರಮ ಸಮಸ್ತ ಗ್ರಾಮದ ಸಂಭ್ರಮವಾಗಿ ಪರಿವರ್ತನೆಗೊಂಡಿತು. ನೋಡು ನೋಡುತ್ತಿದ್ದಂತೆ ಕೊರಚರರಾಮ ಮತ್ತವನ ಸಂಗಡಿಗರು ಬ್ಯಾಂಡುಬಜಂತ್ರಿಗಳೊಡನೆ ಬಂದು ನುಡಿಸಲಾರಂಭಿಸಿದರೆ ಬ್ಯಾಗೇರ ರಾಮ ಕಹಳೆ ಊದಿ ರಂಜಿಸತೊಡಗಿದನು. ಕುರುಕುಂದಿ ನಾಗ, ರೊಡ್ಡ ಮತ್ತಿತರರು ತಪ್ಪಡಿಗಳೊಡನೆ ಆಗಮಿಸಿ ನುಡಿಸಲಾರಂಭಿಸಿದರು. ಅಮೃತಾಂಜನ ಲಕ್ಷ್ಮೀರೆಡ್ಡಿ ಗಲಾಟೆಯ ನಾದದ ಹಾದಿಯ ಮೂಲಕ ಎಲ್ಲಿಂದಲೋ ಬಂದು ಕಾಣಿಸಿಕೊಂಡು ಕುಣಿಯುವ ಸಲುವಾಗಿ ತಮ್ಮ ತಮ್ಮ ಕಾಲುಗಳನ್ನು ನೋಡಿಕೊಳ್ಳುತ್ತಿದ್ದ ಕೆಲವು ತರುಣರಿಗೆ ಬೀಡಿ ವಿತರಿಸಿ ಸಮ್ಮತಿ ಸೂಚಿಸಿದೊಡನೆ ತರಾವರಿ ನೃತ್ಯ ಆರಂಭಗೊಂಡಿತು. ನಾಚಿಕೆ ಮಜುಗರದ ಜೊತೆಗೆ ಭಯಮಿಶ್ರಿತ ಭಾವನೆಯನ್ನು ವ್ಯಕ್ತಪಡಿಸಿದ ಜಲಂಧರನಿಗೆ ಮೂಲಿಮನಿ ಗೌಡರು "ಇದು ನಿನ್ನ ತಂಗಿಗೆ ಬಂದಿರುವ ಪ್ರಶಸ್ತಿಯಲ್ಲಪ್ಪಾ, ಇದು ನಮ್ಮ ಊರಿಗೆ ಬಂದಿರುವ ಗೌರವ, ನೀನೊಂದೆ ಸುಮ್ಮನಿರು" ಎಂದು ಹೇಳಿರಬಹುದೆಂದು ಊಹಿಸಿದೆ. ಅದನ್ನೆಲ್ಲ ಗಮನಿಸುತ್ತ ಮೌನವಾಗಿದ್ದ ಚೌಗಲೆ ತನ್ನ ಎಡಗೈಯಿಂದ ನನ್ನನ್ನೂ ಬಲಗೈಯಿಂದ ಚಕ್ರವರ್ತಿಯನ್ನೂ ಹಿಡಿದುಕೊಂಡು ಸಂಭ್ರಮಿಸುತ್ತಿದ್ದ ಗುಂಪಿನ ಬಳಿಗೆ ಕರೆದೊಯ್ದನು.

ತಾನೇ ಮಹಡಿ ಏರಿ ಮನೆಯ ಮೂಲೆಯಲ್ಲಿ ಅಡಗಿದವಳಂತಿದ್ದ ಪದ್ಮಾವತಿಯ ಸಂಗಡ ಕೆಳಗಿಳಿದು ಬಂದ ಮೇಲೆ ಕೇಳುವುದೇನಿದೆ! ಲಕ್ಷ್ಮೀರೆಡ್ಡಿ ಹೆಬ್ಬಟಂ ಗೌಡರ ಸಾರೋಟಿನೊಂದಿಗೆ ಬಂದ ಮೇಲೆ ಕೇಳುವುದೇನಿದೆ! ಅದನ್ನು ಕೆಲವು ಹುಡುಗರು ತಳಿರು ತೋರಣಗಳಿಂದ ಸಿಂಗರಿಸಿದ ಮೇಲೆ ಕೇಳುವುದೇನಿದೆ! ಜೀರ್ರ ಪಂಪಾಪತಿ ಹೂವಿನ ಮಾಲೆಗಳೊಂದಿಗೆ ಬಂದ ಮೇಲೆ ಕೇಳುವುದೇನಿದೆ! ಚಕ್ರವರ್ತಿ ತನ್ನ ಕೈಯಲ್ಲಿದ್ದ ಕೆಮೆರಾದಿಂದ ಫೋಟೋ ತೆಗೆಯಲಾರಂಭಿಸಿದ ಮೇಲೆ ಕೇಳುವುದೇನಿದೆ! ಅಚ್ಚ ಬಿಳಿವರ್ಣದ ಕುದುರೆಗಳು ಸಮಸ್ತ ಗ್ರಾಮಕ್ಕೆ ಕೇಳಿಸುವಂತೆ ಹೇಷಾರವ ಮಾಡಿದೊಡನೆ ಕೇಳುವುದೇನಿದೆ! ಯಶೋಧಮ್ಮ, ರತ್ನಮ್ಮರಂಥ ಗೌರವಾನ್ವಿತ ಮಹಿಳೆಯರು ಆರತಿ ಬೆಳಗಿ ಶುಭ ಹಾರೈಸಿದ ಮೇಲೆ ಕೇಳುವುದೇನಿದೆ! ರುಕ್ಮಿಣಿ ಶಾರದ ಸುಲೋಚನರಂಥ ಅವಿವಾಹಿತ ತರುಣಿಯರು ಪದ್ಮಾವತಿಯನ್ನು ಸಾರೋಟೊಳಗೆ ಕೂರಿಸಿದ ಮೇಲೆ ಕೇಳುವುದೇನಿದೆ! ಕೊಕ್ಕ ಬುಕ್ಕ ನಾರಾಯಣಿಯರಂಥ ಜಗಳಗಂಟರು ಕಿತ್ತೂರು ಚೆನ್ನಮ್ಮಾಕಿ ಜೈ ಸದಾರಮೇಕಿ ಜೈ ಹೇಮರೆಡ್ಡಿ ಮಲ್ಲಮ್ಮಾಕಿ ಜೈ ಎಂದು ಜಯಕಾರ ಹಾಕಲಾರಂಭಿಸಿದ ಮೇಲೆ ಕೇಳುವುದೇನಿದೆ! ಅದೇ ತಾನೆ ನಾಟಕ ಕಂಪನಿಯ ಒಡೆಯ ಶ್ರೀಕಂಠೇಶ್ವರರು ತಮ್ಮ ಕಂಪನಿಯ ಕಲಾವಿದ ಕಲಾವಿದೆಯರೊಂದಿಗೆ ಗುಂಪನ್ನು ಸೇರಿಕೊಂಡರೆಂದರೆ ಕೇಳುವುದೇನಿದೆ! ವೆಂಕಟೇಶ ಸುಧಾಕರ ಅಲ್ಲೆಲ್ಲೋ ಪಟಾಕಿ ಹಚ್ಚಿದರೆಂದರೆ ಕೇಳುವುದೇನಿದೆ! ಮೆರವಣಿಗೆಗೆ ಚಾಲನೆ ದೊರೆತ ಮೇಲೆ ಕೇಳುವುದೇನಿದೆ! ತಮ್ಮ ತಮ್ಮ ಮನೆಗಳ ಮುಂದೆ ಮೆರವಣಿಗೆ ಬಂದೊಡನೆ ಆಯಾ ಮನೆಗಳ ಹೆಂಗಸರು ಪ್ರಶಸ್ತಿಪುರಸ್ಕೃತೆಗೆ ಆರತಿ ಬೆಳಗಲಾರಂಭಿಸಿದರೆಂದರೆ ಕೇಳುವುದೇನಿದೆ! ತೊರೆಗಳು ಸೇರುವ

ಮೂಲಕ ನದಿಯ ಗಾತ್ರವನ್ನು ಹಿಗ್ಗಿಸುವ ರೀತಿಯಲ್ಲಿ ಜನರು ಜನರನ್ನು ಸೇರಿದರೆಂದರೆ ಕೇಳುವುದೇನಿದೆ! ಒಟ್ಟಾರೆ ಆ ಸಮಯಕ್ಕೆ ಆರಂಭಗೊಂಡ ಮೆರವಣಿಗೆ ಈ ಸಮಯಕ್ಕೆ ಮುಕ್ತಾಯಗೊಳ್ಳುವಷ್ಟರಲ್ಲಿ ಸಂಜೆ ಗ್ರಾಮವನ್ನು ಆವರಿಸದೆ ಇರಲಿಲ್ಲ.

ಆ ದಿವಸ ಹೊಸ ನಾಟಕ ಆಡಲಿರುವುದಾಗಿ ಜಲಂಧರ ಘೋಷಿಸಿದ್ದ, ಆದರೆ ಜನರ ಒತ್ತಾಯದ ಮೇರೆಗೋ, ಚೌಗಲೆಯ ಅಭಿಲಾಷೆಯ ಮೇರೆಗೋ ತಾಳಿಯ ತಕರಾರು ಎಂಬ ನಾಟಕದ ಬದಲಿಗೆ ಪುನಃ ಸದಾರಮೆ ನಾಟಕವನ್ನು ಅಭಿನಯಿಸಲಿರುವುದಾಗಿ ಪ್ರಕಟಿಸಿದ. ಅಭಿಮಾನಿಗಳ ಋಣ ತೀರಿಸುವ ಸಲುವಾಗಿ ಉಚಿತ ಪ್ರದರ್ಶನ ನೀಡಲಿರುವುದಾಗಿಯೂ ಪ್ರಚಾರ ಮಾಡಿದ. ಪ್ರಹರಿ ರೂಪದಲ್ಲಿದ್ದ ತಡಿಕೆ ತಗಡುಗಳನ್ನು ತೆಗೆದು ಅನಾವರಣಗೊಳಿಸುವುದನ್ನು ತಾನು ಮರೆಯಲಿಲ್ಲ. ಅದೋ ಕಳೆದ ವಾರವಿಡೀ ಯಶಸ್ವಿ ಪ್ರದರ್ಶನ ಕಂಡಿದ್ದ ನಾಟಕ, ಆ ನಾಟಕವನ್ನು ಜನ ಪುನಃ ನೋಡಲಾರರೆಂದೇ ಭಾವಿಸಿದ್ದನೇನೊ! ಆದರೆ ಜನ ಸಾವಿರಾರು ಸಂಖ್ಯೆಯಲ್ಲಿ ಜಮಾವಣೆಗೊಳ್ಳುವ ಮೂಲಕ ಆತನ ಲೆಕ್ಕಾಚಾರವನ್ನು ತಲೆಕೆಳಗೆ ಮಾಡಿದರು. ಆ ಪ್ರದರ್ಶನ ಎಷ್ಟೊಂದು ವೈಶಿಷ್ಟಪೂರ್ಣವಾಗಿತ್ತೆಂದರೆ!

ನಾಟಕದ ಆರಂಭದಲ್ಲಿ ವೇದಿಕೆ ಮೇಲೆ ಸರಳ ಸಮಾರಂಭ ನಡೆಯಿತು. ಎಂದಿನಂತೆ ತಿಪ್ಪಾರೆಡ್ಡಿ ಬಸವನಗೌಡ ಭೋಜಪ್ಪರಂಥ ಗ್ರಾಮದ ಹಿರಿಯರು ಒತ್ತಾಯದ ಮೇರೆಗೆ ವೇದಿಕೆ ಮೇಲೆ ಆಸೀನರಾದರು. ಅವರೆಲ್ಲರ ಸಮಕ್ಷಮದಲ್ಲಿ ಚೌಗಲೆ ಅಭಿನಂದನಾ ನುಡಿಗಳನ್ನು ಸೌಜನ್ಯಪೂರ್ವಕವಾಗಿ ಆಡಿದ, ತಮ್ಮ ಪ್ರತಿಷ್ಠಾನ ಕುರಿತಂತೆ ಪ್ರಶಸ್ತಿ ಕುರಿತಂತೆ ವಿವರಿಸಿದ, ಪದ್ಮಾವತಿಯವರ ಅಭಿಜಾತ ಪ್ರತಿಭೆಯನ್ನು ಮುಕ್ತಕಂಠದಿಂದ ಶ್ಲಾಘಿಸುವುದನ್ನು ತಾನು ಮರೆಯಲಿಲ್ಲ. ಅಂಥ ಕಲಾವಿದೆ ಇರುವುದು ನಾಟಕಗಳಲ್ಲಿ ಅಭಿನಯಿಸುತ್ತಿರುವುದು ಊರಿನ ಸೌಭಾಗ್ಯ ಎಂದು ಹೇಳಿ ಪ್ರೇಕ್ಷಕರನ್ನು ರೋಮಾಂಚನಗೊಳಿಸುವುದನ್ನು ತಾನು ಮರೆಯಲಿಲ್ಲ. ಆ ಬಳಿಕ ಇನ್ನೊಂದು ವಿಶೇಷ ಘಟನೆ ಸಂಭವಿಸಿತು. ಅದೆಂದರೆ..

ಚೌಗಲೆ ತಾನೇ ಮೇಕಪ್ ಕೋಣೆಗೆ ಧಾವಿಸಿ ಕಳ್ಳನ ವೇಷ ಧರಿಸಿದ್ದು, ನಾಟಕದಾದ್ಯಂತ ಸೊಗಸಾಗಿ ಅಭಿನಯಿಸುವುದರ ಮೂಲಕ ತನ್ನೊಳಗೂ ಕಲಾವಿದನಿರುವನೆಂದು ಸಾಬೀತು ಪಡಿಸಿದ್ದು. ಮತ್ತೊಂದು ವಿಶೆಷ ಘಟನೆ ಸಂಭವಿಸಿತು, ಅದೆಂದರೆ.. ಅಂದಿನ ಪ್ರದರ್ಶನ ಶೇಕಡಾ ನೂರರಷ್ಟು ಉಚಿತಪ್ರದವಾಗಿತ್ತಷ್ಟೆ, ಸದಾರಮೆಯ ಪಾತ್ರದಲ್ಲಿ ಪದ್ಮಾವತಿ ರಂಗದ ಮೇಲೆ ಕಾಣಿಸಿಕೊಂಡಾಗಲೆಲ್ಲ ಪ್ರೇಕ್ಷಕರು ಚಪ್ಪಾಳೆ ಸಿಳ್ಳೆ ಜಯಕಾರಗಳೊಡನೆ ಸಂಭ್ರಮಿಸುತ್ತಿದ್ದರಷ್ಟೆ, ಗೊಲ್ಲರೀರಯ್ಯ ಮುಂದಿನ ಸಾಲಲ್ಲಿ ಕುಳಿತಿದ್ದನಷ್ಟೆ, ಆತನು ವೇದಿಕೆಯನ್ನು ಏರಿ ತನ್ನ ಸೊಂಟದ ಬಾಳೆಕಾಯಿಯಿಂದ ನೂರರ ನೋಟನ್ನು ತೆಗೆದು ಸದಾರಮೆಗೆ ಆಯಿರು ಮಾಡುವುದರ ಮೂಲಕ ದೇಣಿಗೆಗೆ ಚಾಲನೆ ನೀಡಿದನು. ಯಕಃಶ್ಚಿತ್ ಗೊಲ್ಲರವನು ಪೆಟ್ರೋಮ್ಯಾಕ್ಸ್ ಬೆಳಕಿನಲ್ಲಿ ತೋರಿಸಿದ ಆ ತುಸು ವಿಸ್ತೀರ್ಣದ ನೋಟು ಹಲವರ ಕಣ್ಣುಗಳನ್ನು ಕುಕ್ಕದೆ ಇರಲಿಲ್ಲ, ಆತನಿಗಿಂತ ತಾವೇನು ಕಡಿಮೆ ಎಂಬ ಭಾವನೆಯನ್ನು ಉದ್ದೀಪಿಸದೆ ಇರಲಿಲ್ಲ. ಅದರಿಂದ ಉತ್ತೇಜಿತರಾದ ತಿಪ್ಪಾರೆಡ್ಡಿ ನೂರರ ಐದು ನೋಟುಗಳನ್ನು ಆಯಿರು ಮಾಡಿದರೆ ಲಿಂಗಾರೆಡ್ಡಿ ನೂರರ ಹತ್ತು ನೋಟುಗಳನ್ನು ಕಾಣಿಕೆ ರೂಪದಲ್ಲಿ ನೀಡಿದನು. ಗೌಡರ ಮನೆಗಳಲ್ಲಿ ಕಸಮುಸುರೆ ಮಾಡುವ ಹೆಂಗಸರು ಐದರ ನೋಟುಗಳನ್ನು ನೀಡಿದರೆ, ಜೀತದಾಳುಗಳಾದ ಚಂದ್ರ ಲಸುಮ ನಿಂಗರಂಥ ಜೀತದಾಳುಗಳು ತಾವೇನು ಕಡಿಮೆ ಎಂಬಂತೆ ಐದರ ಹತ್ತರ ನೋಟುಗಳನ್ನು ನೀಡಿದರು.

ಇಂಥ ಸಂಭ್ರಮದಿಂದಾಗಿ ಆ ದಿವಸದ ಪ್ರದರ್ಶನ ಮುಗಿದಾಗ ಬೆಳ್ಳಿಚುಕ್ಕಿಯು ಅದೇ ತಾನೆ ಮೂಡಣದಲ್ಲಿ ಕಾಣಿಸಿಕೊಂಡಿತ್ತು. ಉದುರದೆ ತುಳುಕಾಡುತ್ತಿದ್ದ ಆನಂದಬಾಷ್ಪಗಳನ್ನು ಕರವಸ್ತ್ರದಿಂದ ಒರೆಸಿಕೊಳ್ಳದೆ ಕಳ್ಳನ ಪಾತ್ರಧಾರಿಯನ್ನು ಅಭಿನಂದಿಸಿದ್ದಕ್ಕೆ ಚೌಗಲೆಯು ತನ್ನ ತಾಯಿ ಸ್ಟೆಲ್ಲಮ್ಮಳನ್ನು ಜ್ಞಾಪಿಸಿಕೊಂಡ, ತನ್ನ ಬಾಲ್ಯದ ದಿನಗಳನ್ನು ಸ್ಮರಿಸಿಕೊಂಡ, ತಾನು ಸದಾರಮೆಯೊಂದೇ ಅಲ್ಲದೆ ಹೇಮರೆಡ್ಡಿ ಮಲ್ಲಮ್ಮ ನಾಟಕದಲ್ಲಿ ಹೇಮರೆಡ್ಡಿ ಭರಮರೆಡ್ಡಿಗಳಂಥ ವಿಭಿನ್ನ ಪಾತ್ರಗಳನ್ನೂ ನಿಭಾಯಿಸಿರುವುದಾಗಿ ಹೇಳಿಕೊಂಡ. ನಮ್ಮ ಮುವ್ವರ ನಡುವೆ ಪ್ರಶ್ನೋತ್ತರ ಬೆಳಗಾಗುವವರೆಗೆ ಅವ್ಯಾಹತವಾಗಿ ನಡೆಯಿತು. ನಾವು ಯಾವಾಗ ನಿದ್ದೆ ಹೋದೆವೋ ಯಾವಾಗ ಎಚ್ಚರಾದೆವೋ!

ಮಾರನೆ ದಿವಸ ಬೆಳಿಗ್ಗೆ ವಾಗಿಲಿಯ ಬಹುತೇಕ ಮನೆಗಳಿಂದ ಅತಿಥಿಗಳಿಗೆ ಉಪಹಾರದ ಕರೆಯ ಮಹಾಪೂರವೇ ಹರಿದು ಬಂದಿತು. ಗ್ರಾಮಕ್ಕೆ ಗ್ರಾಮವೇ ಉಪಹಾರ ಖಾದ್ಯಗಳ ಪರಿಮಳದಿಂದ ಆವೃತಗೊಂಡಿತು. ಕರೆ ನಮಗೆ ಮಾತ್ರ ಸೀಮಿತವಾಗಿರದೆ ಕಂಪನಿ ಕಲಾವಿದರೆಲ್ಲರನ್ನೂ ಒಳಗೊಂಡಿತ್ತು, ತಮಗಿರುವುದು ಗೇಣು ಗಾತ್ರದ ಹೊಟ್ಟೆ, ಅಲ್ಲದೆ ತಾವು ಬೆಂಗಳೂರಿನ ಲಘು ಆಹಾರಕ್ಕೆ ಹೊಂದಿಕೊಂಡಂಥವರು ಬೇರೆ, ಯಾರ ಮನೆಗೆ ಹೋಗುವುದು! ಹೋದರೂ ಕಷ್ಟ, ಹೋಗದಿದ್ದರೂ ಕಷ್ಟ! ಅಂಥದ್ದೊಂದು ವಿಚಿತ್ರ ಪೇಚಿಗೆ ಸಿಲುಕಿದ ಅವರಿಗೆ ಮೂಲಿಮನಿ ಗೌಡರು "ಅವರೆಲ್ಲ ಪ್ರೀತಿಯಿಂದ ಕರೆಯುತ್ತಿರುವರೆಂದರೆ ಹೋಗುವುದು ಒಳ್ಳೆಯದು, ಹತ್ತು ತುತ್ತಿಗೆ ಬದಲು ಒಂದೇ ತುತ್ತಿಗೆ ಕೈ ತೊಳೆದುಕೊಂಡರೆ ಇನ್ನೂ ಒಳ್ಳೆಯದು" ಎಂದು ಸಲಹೆ ನೀಡಿದರು, ವಾಗಿಲಿಯ ಜನರ ಆಹ್ವಾನವನ್ನು ನಿರಾಕರಿಸಿದರೆ ಉತ್ತರೋತ್ತರವಾಗಿ ಸಂಭವಿಸುವ ಅನಾಹುತವನ್ನು ಪ್ರಸ್ತಾಪಿಸುವುದು ಹೇಗೆ! ತಡಕಾಡಿದ ಬಳಿಕ ನಾನೂ ಗೌಡರ ಸಲಹೆಯನ್ನು ಬೆಂಬಲಿಸದೆ ಇರಲಿಲ್ಲ. ಅದೇ ತಾನೆ ಸನ್ನದ್ದನಾಗಿ ಬಂದ ಜಲಂಧರನೂ ದನಿಗೂಡಿಸದೆ ಇರಲಿಲ್ಲ. ಸಮೀಪದಲ್ಲಿದ್ದ ರಾಮಕ್ರಿಷ್ಣಾರೆಡ್ಡಿಯವರ ಮನೆಯಿಂದ ಆರಂಭಗೊಂಡ ಬೆಳಗಿನ ಉಪಹಾರದ ಪ್ರಕ್ರಿಯೆ ಸಾಲಗುಂದಿ ಮುಕ್ಕುಂದಿ ಪುಯ್ಯಾವುಲ ಗೌಡರ ಮನೆಗಳನ್ನು ದಾಟುತ್ತ ಹೋಗಿ ಅಂತಿಮವಾಗಿ ದೇಗುಲದಾಳು ಲಕ್ಷ್ಮೀಕಾಂತರೆಡ್ಡಿಯವರ ಮನೆಯನ್ನು ತಲುಪಿತು. ಇನ್ನೂ ಹತ್ತಾರು ಅತಿಥೇಯರ ಮನೆಗಳು ಬಾಕಿ ಉಳಿಯದೆ ಇರಲಿಲ್ಲ. ಅಂಥ ಕೆಲವು ಮನೆಗಳಲ್ಲಿನ ಉಪಹಾರವನ್ನು ಕಣ್ಣು ಮೂಗುಗಳ ಮೂಲಕ ಸ್ವೀಕರಿಸುವುದು ಅನಿವಾರ್ಯವೆನಿಸಿತು, ಇನ್ನೂ ಕೆಲವು ಮನೆಗಳಲ್ಲಿನ ಉಪಹಾರವನ್ನು ಕೈಗಳಿಂದ ಸ್ಪರ್ಶಿಸಿ ಸಂತೃಪ್ತಗೊಳಿಸುವುದು ಅನಿವಾರ್ಯವೆನಿಸಿತು. ಇನ್ನೂ ಕೆಲವು ಮನೆಯವರು "ಸರಿಯಾಗಿ ಉಣ್ಣುವಂತಿದ್ದರೆ ತಿನ್ನುವಂತಿದ್ದರೆ ಮಾತ್ರ ನಮ್ಮ ವಾಗಿಲಿಗೆ ಬರಬೇಕರಿ" ಎಂದು ಎಚ್ಚರಿಕೆ ನೀಡುವುದನ್ನು ಮರೆಯಲಿಲ್ಲ.

ಈ ಪ್ರಕಾರವಾಗಿ ಉಪಹಾರ ಸೇವಿಸಿ ಸುಸ್ತಾದ ಅತಿಥಿಗಳೀರ್ವರು ನಡೆ ಎಂದರೆ ಹೇಗೆ ನಡೆದಾರು! ಹೊರಡು ಎಂದರೆ ಹೇಗೆ ಹೊರಟಾರು! ಮಾರ್ಗಮಧ್ಯೆ ತಮ್ಮ ಒಡಲುಗಳಲ್ಲಿ ಅಸಹಕಾರ ಚಳವಳಿ ನಡೆದು ಜೀರ್ಣಕ್ರಿಯೆ ಸ್ಥಗಿತಗೊಂಡರೆ ಎಂಬ ಆತಂಕ ಕಾಡದೆ ಇರಲಿಲ್ಲ. ದ್ವಾಪರ ಕಾಲದ ಗಾಂಧಾರಿಯ ಗರ್ಭವೇ ಈ ಕಲಿಯುಗದಲ್ಲಿ ವಾಗಿಲಿ ರೂಪ ಪಡೆದಿರುವುದು ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಲೇ ಚೌಗಲೆ ಹಾಸಿಗೆಯಲ್ಲಿ ಮೈಚೆಲ್ಲಿದ, ತುಸು ಹೊತ್ತು ನನ್ನೊಂದಿಗೆ ಹರಟಿದ ಚಕ್ರವರ್ತಿಯು ಬಳಿಕ ಏನನ್ನೋ ಬರೆದುಕೊಳ್ಳುವುದರಲ್ಲಿ ನಿಮಗ್ನನಾದ. ಅದೇತಾನೆ ಆಗಮಿಸಿದ ಶೇಷಣ್ಣ ನನ್ನ ಕಡೆ ನೋಡುತ್ತಲೂ, ನಾನು ಅವನ ಕಡೆ ನೋಡುತ್ತಲೂ..

ಚೌಗಲೆ ಚಕ್ರವರ್ತಿ ಬೆಂಗಳೂರು ಕಡೆ ಹೋದ ಹದಿನೈದು ದಿನಕ್ಕೆ ಪದ್ಮಾವತಿ ಪ್ರಶಸ್ತಿ ಸ್ವೀಕರಿಸುವ ಸಲುವಾಗಿ ಬೆಂಗಳೂರಿಗೆ ಪ್ರಯಾಣ ಬೆಳೆಸಿದಳು. ಆಕೆಯೊಂದಿಗೆ ಜಲಂಧರನೂ ಹೊರಟ. ಗ್ರಾಮದ ಜನತೆಯೊಂದಿಗೆ ನಾನೂ ಸಹ ಅಡ್ಡರಸ್ತೆಯವರೆಗೆ ಹೋಗಿ ಅವರಿಬ್ಬರನ್ನು ಬೀಳ್ಕೊಟ್ಟು ವಾಪಸ್ಸಾದೆ.

ಮುಖ್ಯ ಕಲಾವಿದರಾದ ಅವರಿಬ್ಬರ ಗೈರಿನಲ್ಲಿ ಕಂಪನಿಯ ಸಹಕಲಾವಿದರು ಕೆಲವು ದಿವಸಗಳ ಕಾಲ ಚಿಕ್ಕಪುಟ್ಟ ಪ್ರಹಸನಗಳನ್ನು ಅಭಿನಯಿಸುವುದರ ಮೂಲಕ ಹೇಗೋ ಕೆಲವು ದಿನಗಳನ್ನು ನೂಕಿದರು. ಆ ಬಿಡುವಿನ ದಿವಸಗಳಲ್ಲಿ ಅಪೂರ್ಣಗೊಂಡಿದ್ದ ಕಾದಂಬರಿಯನ್ನು ಕೈಗೆತ್ತಿಕೊಂಡೊಡನೆ! ದಯಾನಂದ ಪಾತ್ರವು ಗ್ರಾಮದ ಮೇರೆಯ ಎತ್ತರದ ಸ್ಥಳದಲ್ಲಿ ನಿಂತು ಗ್ರಾಮ ಕಡೆ ಸಿಂಹಾವಲೋಕನ ಮಾಡಲಾರಂಭಿಸಿದೊಡನೆ...

..... ☙ .....

# ದೃಶ್ಯ: ಐದು

ಕುರುಚಲು ಗಡ್ಡದ ಅದೋ, ಭಿಕ್ಷುಕನನ್ನು ಹೋಲುತ್ತಿರುವ ಅದೋ! ತನ್ನನ್ನು ತಾನು ಅಡಿಯಿಂದ ಮುಡಿಯವರೆಗೆ ನೋಡಿಕೊಳ್ಳುತ್ತಿರುವ ಅದೋ! ತನ್ನ ದೇಹವನ್ನು ತಾನೇ ಸಂತೈಸುತ್ತಿರುವ ಅದೋ! ಭೂತ ವರ್ತಮಾನದ ಸಂಕ್ರಮಣ ಸ್ಥಿತಿಯ ಸಂಧಿಗ್ಧತೆಯನ್ನು ಅನುಭವಿಸುತ್ತಿರುವ ಅದೋ! ಕಣ್ಣಳತೆಯಲ್ಲಿರುವ ಊರನ್ನು ಪ್ರವೇಶಿಸುವುದೋ ಪುನಃ ವಾಪಸ್ಸು ತೆರಳುವುದೋ ಎಂದು ಯೋಚಿಸುತ್ತಿರುವ ಅದೋ! ಅದನ್ನು ಆ ಸ್ಥಿತಿಯಲ್ಲಿ ನೋಡುವುದು ನನ್ನಿಂದಾಗಲಿಲ್ಲ. ಅದು ಆ ಸ್ಥಿತಿಯಲ್ಲಿ ಊರನ್ನು ಪ್ರವೇಶಿಸುವುದು ನನಗೆ ಸಮಂಜಸವೂ ಎನಿಸಲಿಲ್ಲ, ಜಮೀನ್ದಾರೀ ವ್ಯವಸ್ಥೆಯ ವಿರುದ್ಧ ಹೋರಾಡಲಿರುವ ಅದು ದೈಹಿಕವಾಗಿ ಆಕರ್ಷಕವಿರುವುದು ಮುಖ್ಯವೆಂದು ಭಾವಿಸಿದೊಡನೆ ನಾದಿರ ಗೋವಿಂದ ಅದಕ್ಕೆ ಮುಖಕ್ಷೌರ ಮಾಡಿದ, ಟೈಲರ್ ಸೀನನು ಅದಕ್ಕೆ ನೀಟಾಗಿ ಉಡುಪುಗಳನ್ನು ಹೊಲಿದು ನೀಡಿದ, ಸ್ನಾನ ಸಂಧ್ಯಾವಂದನೆಗಳನ್ನು ಪೂರೈಸಿದಾದ ಬಳಿಕ ಅದು ನೀಟೆನಿಸಿತು. ಅಪರಿಚಿತನಾದವನು ನಿರುದ್ಯೋಗಿಯಾದವನು ಗ್ರಾಮದ ಒಳ ವಿನ್ಯಾಸವನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯ ತಾನೆ! ಭಿಕ್ಷುಕನ ಅವಧೂತನ ಯಾರದಾದರೂ ಮನೆಯ ನೆಂಟನ ಕೃಷಿಕಾರ್ಮಿಕನ ಅಥವಾ ಭಗ್ನಪ್ರೇಮಿಯ! ಇವೆಲ್ಲಕ್ಕಿಂತ ಮುಖ್ಯವಾಗಿ ಅದಕ್ಕೆ ನನ್ನದೇ ಆದ ಶಾಲಾ ಶಿಕ್ಷಕನ ಪರಿವೇಷ ತೊಡಿಸುವುದು ಮುಖ್ಯವೆನಿಸಿತು. ಕೂಡಲೆ ಅದರ ಮುಖದ ಗಂಟು ನಿರಿಗೆಗಳನ್ನು ಸರಿಪಡಿಸಿದೆ, ಭಾವನೆಗಳನ್ನು ತಿಳಿಗೊಳಿಸಿದೆ, ಅದರ ಒಂದು ಕೈಯಲ್ಲಿ ಕೆಳದರ್ಜೆಯ ಚೀಲವನ್ನೂ ಇನ್ನೊಂದು ಕೈಯಲ್ಲಿ ಅಪಾಯಿಂಟ್‌ಮೆಂಟ್ ಆರ್ಡರನ್ನೂ ನೀಡಿ ಗ್ರಾಮದ ಅಗಸೆ ಬಾಗಿಲು ಪ್ರವೇಶಿಸಲು ಅನುವು ಮಾಡಿಕೊಟ್ಟೆ.

ದಯಾನಂದ ಅಮಾಯಕನಂತೆ ಏನನ್ನೂ ಅರಿಯದವಂತೆ ಸದರಿ ಗ್ರಾಮದೊಳಗೆ ತನ್ನ ವೃತ್ತಿ ಜೀವನವನ್ನು ಆರಂಭಿಸುತ್ತಾನೆ, ಮಕ್ಕಳ ಎದೆಗಳೊಳಗೆ ಅಕ್ಷರಗಳ ಹಣತೆಗಳನ್ನು ಬೆಳಗಿಸುತ್ತಾನೆ, ಮೊದಮೊದಲು ಮಹಾಭಾರತ ರಾಮಾಯಣಕ್ಕೆ ಸಂಬಂಧಿಸಿ ಕಥೆ

ಉಪಕಥೆಗಳನ್ನು ಹೇಳುತ್ತಿದ್ದವನು ಬಳಿಕ ರಷ್ಯಾದ ಜಾರ್, ಜರ್ಮನಿಯ ಹಿಟ್ಲರ್, ಇಟಲಿಯ ಮಸಲೋನಿಯರಂಥ ನಿರಕುಂಶ ದೊರೆಗಳ ಕಥೆಗಳನ್ನೂ ಹೇಳಲಾರಂಭಿಸುತ್ತಾನೆ. ಜೊತೆಗೆ ನಿರಂಕುಶ ವ್ಯವಸ್ಥೆ ವಿರುದ್ಧ ಹೋರಾಡಿದ ಮಾರ್ಕ್ಸ್, ಕ್ಯೂಬಾದ ಚೆಗೆವಾರ, ಲೆಬೆನಾನ್‌ನ ಒಮರ್ ಮುಖ್ತಾರ್‌ಗಳಂಥವರ ಕಥೆಗಳನ್ನೂ ಹೇಳಲಾರಂಭಿಸುವನು. ಕಥೆಗಳನ್ನು ಹೇಳುವವನು ಕಥೆಗಳನ್ನು ಆಲಿಸದಿರಲಾಗುವುದೆ! ತನ್ನ ಬಿಡುವಿನ ವೇಳೆಯನ್ನು ಗ್ರಾಮದ ಶೂದ್ರ ದಲಿತರೊಂದಿಗೆ ಒಡನಾಡಲು ಮೀಸಲಿರಿಸುವನು. ಅವರ ಕಷ್ಟಕಾರ್ಪಣ್ಯಗಳನ್ನು ಆಲಿಸುವನು, ಮರುಗುವನು ಪರಿಹಾರ ಸೂಚಿಸುವವನು ತಾನಾಗುವನು. ಶೋಷಿತರ ನಿಕಟವರ್ತಿಯಾಗಲು ಅಹರ್ನಿಶಿ ಶ್ರಮಿಸುತ್ತಾನೆ. ಆದರೆ ಅದೆಲ್ಲ ಆರಂಭದಲ್ಲಿ ಸಾಧ್ಯವಾಗುವುದಿಲ್ಲ, ಅದಕ್ಕಾಗಿ ತಾನು ದಲಿತರ ಕೇರಿಗಳಲ್ಲಿ ಅಲೆಯುವುದು ಅನಿವಾರ್ಯವೆನಿಸುವುದು. ಅವರ ಗುಡಿಸಲು ಜೋಪಡಿಗಳನ್ನು ಪ್ರವೇಶಿಸುವುದು ಅವರೊಂದಿಗೆ ಎಂಜಲು ತಂಗಳನ್ನು ಉಣ್ಣುವುದು ಅವರ ಮಕ್ಕಳು ಮರಿಗಳನ್ನು ಎತ್ತಿಕೊಂಡು ಮುದ್ದಾಡುವುದು ಅನಿವಾರ್ಯವೆನಿಸುವುದು. ಇಷ್ಟೆಲ್ಲಾ ಮಾಡಿದರೂ ಶೋಷಿತರು ತನ್ನನ್ನು ತಮ್ಮ ಅಂತರಂಗದೊಳಗೆ ಬಿಟ್ಟುಕೊಳ್ಳುವುದಿಲ್ಲ. ಅವರೆಲ್ಲರಲ್ಲಿ ಹಿಂಜರಿಕೆ ಆತಂಕ ಅನುಮಾನ! ಆದರೂ ಕಥಾ ನಾಯಕ ದೃತಿಗೆಡುವುದಿಲ್ಲ, ಬದಲಿಗೆ ಅಸ್ಪೃಶ್ಯರ ಕೇರಿಯ ಗುಡಿಯೊಂದರಲ್ಲಿ ರಾತ್ರಿ ಶಾಲೆ ಆರಂಭಿಸುವನು, ಮೊದ ಮೊದಲು ಅಕ್ಷರದ ಸಹವಾಸವೆಂದರೆ ಕಾಳ್ಗಿಚ್ಚಿನ ಸಹವಾಸ ಮಾಡಿದಂತೆಯೇ ಸರಿ ಎಂಬ ದಲಿತರ ಆತಂಕವನ್ನು ತನ್ನ ಮೃದುವಚನಗಳಿಂದ ಹೋಗಲಾಡಿಸುವಲ್ಲಿ ಅಂತೂ ಯಶಸ್ವಿಯಾಗುತ್ತಾನೆ, ಅವರ ನಡುಗುವ ಕೈಗಳಿಂದ ಮರಳಲ್ಲಿ ಅಕ್ಷರ ತಿದ್ದಿಸುತ್ತಾನೆ, ಸಹಿ ಮಾಡುವಷ್ಟರಮಟ್ಟಿಗೆ ಕಲಿಸುತ್ತಾನೆ, ಕಲಿಸುವುದರ ಮೂಲಕ ಅವರ ಪಂಚೇಂದ್ರಿಯಗಳ ಬಾಗಿಲುಗಳನ್ನು ಒಂದೊಂದಾಗಿ ತೆರೆದು ಅನಾವರಣಗೊಳಿಸುತ್ತಾನೆ, ಮೊಲದಂಥ ಯಕಃಶ್ಚಿತ್ ಪುಟ್ಟ ಪ್ರಾಣಿ ತನ್ನ ಜಾಣ್ಮೆಯಿಂದ ಕಾಡಿನ ಬಲಿಷ್ಟ ಪ್ರಾಣಿ ಸಿಂಹವನ್ನು ಕೊಂದಂಥ ಕಥೆಗಳನ್ನು ಅವರದೇ ಭಾಷೆಯನ್ನು ಹೇಳಲಾರಂಭಿಸುತ್ತಾನೆ, ಜೀತಪದ್ದತಿಯನ್ನು ಬಕಾಸುರನಿಗೂ, ಸಾಮಾಜಿಕ ಅಸಮಾನತೆಯನ್ನು ಕಂಸನಿಗೂ ಹೋಲಿಸುತ್ತಾನೆ, ಅವುಗಳನ್ನು ನಿರ್ಮೂಲನೆ ಮಾಡುವ ಸಲುವಾಗಿ ದಲಿತರೆಲ್ಲ ಭೀಮ ಕೃಷ್ಣರಾಗಬೇಕೆಂದು ಕರೆ ನೀಡುತ್ತಾನೆ. ಆದರೆ ಅದೆಲ್ಲ ಅವರಿಗೆ ಅರ್ಥವಾದರೆ ತಾನೆ! ಸುಮ್ಮನೆ ತಮ್ಮ ತಲೆಗಳನ್ನು ಅಲ್ಲಾಡಿಸುತ್ತಾರೆ, ತಮ್ಮೂರಿನ ತಮ್ಮ ಪಿತೃಸಮಾನರಾದ ಶೋಷಕರು ಬಕಾಸುರ ಕಂಸರಂಥ ರಾಕ್ಷಸರೆ! ಅಲ್ಲಿಗೂ ಕಥಾನಾಯಕ ನಿರಾಶನಾಗುವುದಿಲ್ಲ.

ಅರೆ ಅದೇ ಸಮಯಕ್ಕೆ ಸರಿಯಾಗಿ ಅದೇ ಗ್ರಾಮದ ಸರಹದ್ದಿನಲ್ಲಿ ಕಾಣಿಸಿಕೊಳ್ಳುತ್ತಿರುವ ಗಡ್ಡಧಾರಿ ಕಾಷಾಯಾಂಬರಧಾರಿ ವ್ಯಕ್ತಿಯನ್ನು ಎಲ್ಲೋ ನೋಡಿರುವುದಂತಿರುವುದಲ್ಲಾ! ನಿಸ್ಸಂದೇಹವಾಗಿ ಆತ ಅವಧೂತನ ವೇಷದಲ್ಲಿರುವ ಕಾಮ್ರೇಡ್ ಪನ್ನಂಗಧರ! ಪೋಲಿಸರ ಕಣ್ತಪ್ಪಿಸಿ ಬಂದಿರುವಂತಿದೆ, ಜೋಳಿಗೆಯಲ್ಲಿ ವೇದಾಂತ ಕೃತಿಗಳ ನಡುವೆ ಉಗ್ರ ಎಡಪಂಥೀಯ ಸಾಹಿತ್ಯವನ್ನು ಅಡಗಿಸಿಟ್ಟುಕೊಂಡಿರುವನು, ಅಲ್ಪಸ್ವಲ್ಪ ಮಾಂತ್ರಿಕ ವಿದ್ಯೆಯನ್ನೂ ಬಲ್ಲವನಾಗಿರುವ ತಾನು ಶೂನ್ಯದಿಂದ ವಸ್ತುಗಳನ್ನು ಸೃಷ್ಟಿಸುವುದರ ಮೂಲಕ ಚಿಕ್ಕ ಚಿಕ್ಕ ಮಕ್ಕಳನ್ನು ರಂಜಿಸುತ್ತಿರುವನು, ಮಂತ್ರದಿಂದ ಮರಗಳಿಂದ ಮಾವಿನಕಾಯಿಗಳನ್ನು ಉದುರಿಸುತ್ತಿರುವನು, ಅಲೌಕಿಕ ನುಡಿಗಳನ್ನು ಆಡುವುದರ ಮೂಲಕ ಗ್ರಾಮದ ಹಿರಿಯರನ್ನೂ ಪರವಶಗೊಳಿಸುತ್ತಿರುವನು, ಅಸ್ಖಲಿತ ರೀತಿಯಲ್ಲಿ ಕಾರಣಿಕ ಬೇರೆ ನುಡಿಯುತ್ತಿರುವನು, ತನ್ನ ಮಾಯಾವಿ ಮಾಂತ್ರಿಕ ಮಾತುಗಳ

ಜಾಲದಿಂದ ಕಷ್ಟಗಳಿಗೆ ಪರಿಹಾರ ಸೂಚಿಸುತ್ತಿರುವನು, ತನ್ನ ಸ್ಪರ್ಶ ಮಾತ್ರದಿಂದ ವ್ಯಾಧಿಗಳನ್ನೂ ಗುಣಪಡಿಸುತ್ತಿರುವನು, ಹ್ಹಾ ಹ್ಹಾ ಹೊ ಹೋ ಎಂಬ ಉದ್ಗಾರಗಳಿಂದ ಸತ್ಕರಿಸಿಕೊಳ್ಳುತ್ತಿರುವನು. ಇಷ್ಟು ಸಾಕಲ್ಲವೆ ಊರೊಳಗೆ ತಾನು ತನ್ನ ಅಸ್ತಿತ್ವ ಗಟ್ಟಿಗೊಳಿಸಿಕೊಳ್ಳಲು! ಇಷ್ಟೆಲ್ಲ ಇರುವ ತನಗೆ ಕಥೆಗಾರನಾದವನು ಜಮೀನ್ದಾರರ ನೆರವಿನಿಂದ ಪುನರ್ವಸತಿ ಕಲ್ಪಿಸಿದಿರಲಾಗುವುದೆ! ಆದರೆ ಅದಕ್ಕೆ ಶಾಲಾ ಶಿಕ್ಷಕ ದಯಾನಂದನಿಂದ ತಕರಾರು ಬೇರೆ!

"ಅವಧೂತನ ವೇಷದಲ್ಲಿರುವ ವ್ಯಕ್ತಿ ಬೇರೆ ಯಾರು ಅಲ್ಲ ಕಣೋ ದಯಾನಂದ! ಅವನು ಮಾರು ವೇಷದಲ್ಲಿರುವ ಜನಪರ ಹೋರಾಟಗಾರ ಪನ್ನಂಗಧರ! ಯಾವನ ತಲೆಗೆ ಪೋಲಿಸ್ ವ್ಯವಸ್ಥೆ ಹತ್ತು ಲಕ್ಷ ಇನಾಮು ಘೋಷಿಸಿರುವುದೋ ಅದೇ ನಕ್ಸಲೈಟ್ ಲೆನಿನ್! ಚೆಲ್ಲೆಲಚೆಲಿಮಲದ ನರಸಿಂಹನಾಯ್ಡು ಕರಿವೇಮಲದ ಮಾಧವರೆಡ್ಡಿ ಮಾರ್ಕಾಪುರಂನ ಕರಣಂ ರಾಮಚಂದ್ರರಾವ್ ಇವರೇ ಮೊದಲಾದ ಜಮೀನ್ದಾರರನ್ನು ಜನತಾ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿ ಅವರಿಗೆ ಶಾಶ್ವತ ಮೋಕ್ಷ ದಯಪಾಲಿಸಿರುವ ಕಾಮ್ರೇಡ್ ಮುಕುಂದ! ತನ್ನ ಒಂದು ಕಾಲನ್ನು ನಲ್ಲಮಲ ಅರಣ್ಯದಲ್ಲೂ ತನ್ನ ಇನ್ನೊಂದು ಕಾಲನ್ನು ಆದೋನಿ ಪರಿಸರದ ಜನಾರಣ್ಯದಲ್ಲೂ ಇಟ್ಟು ಭಾರತೀಯ ಕಾನೂನು ಸಂಹಿತೆಗೆ ಚಳ್ಳೆಹಣ್ಣು ತಿನ್ನಿಸುತ್ತ ತಲೆ ಮರೆಸಿಕೊಂಡಿರುವ ಬೋಸ್ ಎಂದು ಅರ್ಥ ಮಾಡಿಕೋ" ಎಂದು ಹೇಳಿದೆ, ಆ ಪಾತ್ರಕ್ಕೆ ಸಹಕರಿಸುವಂತೆ ವಿನಂತಿಸಿಕೊಂಡೆ, ಅದಕ್ಕೆ ಅವನು ಭಯಗೊಂಡವನಂತೆ ಗೋಚರಿಸಿದ, ಕೇಳಿದ: "ಅತ್ಮ ರಕ್ಷಣೆಗೆ ಗುರಾಣಿಯಷ್ಟೆ ಸಾಕು, ಖಡ್ಗದ ಅಗತ್ಯವಿಲ್ಲ, ಅವನನ್ನು ದಯವಿಟ್ಟು ವಾಪಸ್ಸು ಕಳಿಸಿ ಕಥೆಗಾರರೆ".

ಅದಕ್ಕೆ ನಾನು "ನದಿಗಳಿಗೆ ಹೊಳೆ ಹಳ್ಳಗಳ ಅಗತ್ಯವಿದೆ, ಸಮುದ್ರಕ್ಕೆ ನದಿಗಳ ಅಗತ್ಯವಿದೆ, ಮಿದುಳುಗಳಿರದಿದ್ದಲ್ಲಿ ತಲೆಗೆ ಅಸ್ತಿತ್ವವಿಲ್ಲ, ಗುರಾಣಿಗಳಿರುವಲ್ಲಿ ಖಡ್ಗಗಳಿರಲೇಬೇಕು, ಶಾಸ್ತ್ರಗಳಿರುವಲ್ಲಿ ಶಸ್ತ್ರಗಳಿರಲೇಬೇಕು. ಅವನಿಲ್ಲಿ ಬಂದಿರುವುದು ನೀನಿರುವ ಕಾರಣಕ್ಕೆ, ನಿನ್ನ ಶಾಸ್ತ್ರೀಯ ಹೋರಾಟಕ್ಕೆ ಖಚಿತ ದಿಕ್ಕು ತೋರಿಸುವುದಕ್ಕೆ" ಎಂದು ವಿವರಿಸಿದೆ.

"ಅಯ್ಯೋ ಶಾಸ್ತ್ರಗಳಿಗೆ ಶಸ್ತ್ರಗಳ ಅಗತ್ಯವಿಲ್ಲ ಸ್ವಾಮಿ! ಕೈಮುಗಿಯುವೆ, ಅವನನ್ನು ದಯವಿಟ್ಟು ವಾಪಸ್ಸು ಕಳಿಸಿಬಿಡಿ, ನನ್ನೊಟ್ಟಿಗೆ ಅವನನ್ನೂ ಪರಿಚಯಿಸಿದಿರೆಂದರೆ ನೀವು ಬರೆಯುತ್ತಿರುವ ಈ ಕಾದಂಬರಿ ತನ್ನ ಆಹ್ಲಾದಕರ ಗುಣವನ್ನು ಕಳೆದುಕೊಳ್ಳುವುದು. ನನ್ನ ನೆಚ್ಚಿನ ಮುಗ್ದ ಶೋಷಿತರ ದುರ್ಬಲ ಕೈಗಳಿಗೆ ಆಯುಧಗಳನ್ನು ಧರಿಸುವ ತ್ರಾಣವಿಲ್ಲ ಸ್ವಾಮಿ" ಎಂದು ಅಲವತ್ತುಕೊಂಡ.

"ಆಯುಧಗಳ ಅಗತ್ಯವಿರುವುದು ತಲೆಗಳಿಗೇ ಹೊರತು ಹಸ್ತಗಳಿಗಲ್ಲ ದಯಾನಂದ, ದಯವಿಟ್ಟು ಅರ್ಥ ಮಾಡಿಕೊ!"

"ಹಿಂದೊಮ್ಮೆ ನಾನೂ ಆಯುಧಗಳ ಆಶ್ರಯದಲ್ಲಿದ್ದವನೆ ಸ್ವಾಮಿ, ಹಿಂಸೆಯಿಂದ ರೋಸಿ ಅಹಿಂಸಾವಾದಿಯಾಗಿರುವೆ, ನನಗೆ ಗಾಂಧಿವಾದ ಮುಖ್ಯವೇ ಹೊರತು ಮೋವೋವಾದವಲ್ಲ"

"ಈ ರಾಯಲಸೀಮೆಯಲ್ಲಿ ಗಾಂಧಿವಾದದ ಚಲಾವಣೆ ಸಾಧ್ಯವಿಲ್ಲ, ಇಲ್ಲಿ ಏನಿದ್ದರೂ ಜಿಸ್ ಕೀ ಲಾಠಿ ಉಸ್ ಕೀ ಭೈಸ್, ನೀನಿರುವ ಗ್ರಾಮ ಗ್ರಾಮವಲ್ಲ, ಇದು ಶಸ್ತ್ರಾಗಾರ, ಮಾರಕಾಯುಧಗಳು ಎಲ್ಲರ ಮನಸ್ಸಿನಲ್ಲಿವೆ, ಈ ಹಿಂದೆ ನಿನ್ನನ್ನು ಮುಗಿಸಲು ನಡೆದ ಪ್ರಯತ್ನಗಳನ್ನು ಒಂದೊಂದಾಗಿ ಜ್ಞಾಪಿಸಿಕೋ, ನೀನು ರಕ್ಷಿಸಿಕೊಳ್ಳಬೇಕೆಂದರೆ ನಿನ್ನ ಕೈಯಲ್ಲಿ ಆಯುಧವನ್ನು ಹಿಡಿಯುವುದು ಅನಿವಾರ್ಯ"

"ಇದು ನಿಜವಲ್ಲ, ಇದು ನಿಮ್ಮಂಥ ಕಥೆಗಾರರ ಕಲ್ಪನೆ, ನನ್ನ ದೃಷ್ಟಿಯಲ್ಲಿ ಸಮಾಜದಲ್ಲಿ ಕೆಟ್ಟವರು ಇಲ್ಲವೇ ಇಲ್ಲ, ಇರುವುದು ಸ್ವಲ್ಪ ಒಳ್ಳೆಯವರು ಬಹಳ ಒಳ್ಳೆಯವರು ಮಾತ್ರ, ಸ್ವಲ್ಪ ಒಳ್ಳೆಯವರನ್ನು ಬಹಳ ಒಳ್ಳೆಯವರನ್ನಾಗಿಸುವುದೇ ನನ್ನ ಗುರಿ, ಇದಕ್ಕಾಗಿ ನಾನು ಆತ್ಮಾಹುತಿ ಮಾಡಿಕೊಳ್ಳಲೂ ಸಿದ್ದ ಕಥೆಗಾರರೆ"

"ನೀನು ಹೇಳುವುದೇನೋ ಸರಿ ದಯಾನಂದ, ಪನ್ನಂಗಧರನೂ ಸ್ವಲ್ಪ ಒಳ್ಳೆಯವನು ತಾನೆ, ಅವನನ್ನೂ ಅಹಿಂಸಾವಾದಿಯನ್ನಾಗಿಸಬಾರದೇಕೆ!"

"ಶಸ್ತ್ರದ ಸಹವಾಸದಿಂದ ಶಾಸ್ತ್ರ ತನ್ನ ತಿಳವಳಿಕೆಯನ್ನು ಕಳೆದುಕೊಂಡರೆ!"

"ಇದು ಆತ್ಮವಿಶ್ವಾಸದ ಅಭಾವ. ಶಾಸ್ತ್ರದ ಸಹವಾಸದಿಂದ ಶಸ್ತ್ರ ತನ್ನನ್ನು ತಾನು ತಿದ್ದಿಕೊಳ್ಳಬಾರದೇಕೆ! ಒಂದು ಅವಕಾಶ ನೀಡಿ ಬರಮಾಡಿಕೋ, ಸವಾಲಾಗಿ ಸ್ವೀಕರಿಸು"

ಸ್ವಲ್ಪ ಯೋಚಿಸಿದಾದ ಬಳಿಕ..

"ಕಥೆಗಾರನಾದ ನಿನ್ನ ಮಾತು ಮೀರುವ ಶಕ್ತಿ ಈ ನಿನ್ನ ಪಾತ್ರಗಳಿಗೆಲ್ಲಿಯದು! ನಿನ್ನಿಷ್ಟದಂತೆ ಆಗಲಿ" ಎಂದು ಸಮ್ಮತಿಸಿದ. ಅದನ್ನು ಕೇಳಿದ ನನಗೆ ಎಷ್ಟೋ ಸಮಾಧಾನವಾಯಿತು.

ಶಸ್ತ್ರದ ಎದುರು ಶಾಸ್ತ್ರ ಸೋಲುವುದೋ! ಶಾಸ್ತ್ರದ ಎದುರು ಶಸ್ತ್ರ ಸೋಲುವುದೋ! ಅದನ್ನು ಕಥೆಯೊಳಗಿನ ವರ್ತಮಾನ ನಿರ್ಧರಿಸಬೇಕಷ್ಟೆ.

ಕಥೆಯೊಳಗೆ ಆ ಎರಡೂ ಪಾತ್ರಗಳನ್ನು ಮುಖಾಮುಖಿಯನ್ನಾಗಿಸಿದೆ, ನೋಡಿದೊಡನೆ ಮುಗುಳ್ನಗೆ ಹಂಚಿಕೊಂಡವು, ಒಂದರ ಹೆಗಲ ಮೇಲೆ ಇನ್ನೊಂದು ಕೈ ಹಾಕಿ ಹಿತವಾಗಿ ಸ್ಪರ್ಶಿಸಿದವು, ಪರಸ್ಪರ ವಿಚಾರ ವಿನಿಮಯ ನಡೆಸಿದವು, ಹೋರಾಟದ ವಿಧಿವಿಧಾನ ಕುರಿತಂತೆ ಚರ್ಚಿಸಿದವು. ಓಹ್! ಪರವಾಯಿಲ್ಲ, ಪಾತ್ರಗಳ ನಡುವೆ ಪರಸ್ಪರ ತದ್ಯಾತ್ಮಕ್ಕೆ ಅನುಸಂಧಾನಕ್ಕೆ ಬರವಿಲ್ಲ.

ಅನುಮಾನ ವ್ಯಕ್ತಪಡಿಸಿದ ನೆರೆಹೊರೆಯವರಿಗೆ ತನ್ನ ಚಿಕ್ಕಪ್ಪನೆಂದು ದಯಾನಂದ ಪರಿಚಯಿಸಿದ, ಆತನನ್ನು ತನ್ನ ಮನೆಯೊಳಗೆ ಇರಿಸಿಕೊಂಡ. ದಯಾನಂದ ಹಗಲ ಶಾಲೆಯನ್ನೂ, ಪನ್ನಂಗಧರ ಹೊಲೆಯರ ಕೇರಿಯಲ್ಲಿನ ರಾತ್ರಿ ಶಾಲೆಯನ್ನೂ ಪರಸ್ಪರ ಹಂಚಿಕೊಂಡರು. ಅಷ್ಟೇ ಅಲ್ಲದೆ ಅವರಿಬ್ಬರೂ ಅತಿಥಿಗಳ ರೂಪದಲ್ಲಿ, ಪೂರ್ವಜನ್ಮದ ನೆಂಟರ ರೂಪದಲ್ಲಿ, ಖಾಸಾ ಗೆಳೆಯರ ರೂಪದಲ್ಲಿ ಅಸ್ಪೃಶ್ಯರ ಮನೆಗಳನ್ನು ಪ್ರವೇಶಿಸಲಾರಂಭಿಸಿದರು. ಉಭಯಕುಶಲೋಪರಿ ಮಾತುಗಳ ಮೂಲಕ, ಅವರ ಕಷ್ಟ ಸುಖಗಳಿಗೆ ಅಪ್ಯಾಯತೆಯಿಂದ ಸ್ಪಂದಿಸುವ ಮೂಲಕ, ಶಕ್ತಿವಂತರನ್ನು ದುರ್ಬಲರು ಸೋಲಿಸುವ ಕಥೆಗಳನ್ನು ದೃಷ್ಟಾಂತಗಳನ್ನು ಹೇಳುವ ಮೂಲಕ, ಹಾಡುವ ಮೂಲಕ, ಹಾಡಿಸುವ ಮೂಲಕ, ಕುಣಿಯುವ ಮೂಲಕ ಕುಣಿಸುವ ಮೂಲಕ ದುರ್ಬಲರನ್ನು ಮಾನಸಿಕವಾಗಿ ಸಬಲರನ್ನಾಗಿಸಲಾರಂಭಿಸಿದರು. ದೇಶೀಯ ಕಥೆಗಳ ಮೂಲಕ ರಷ್ಯಾ ಜರ್ಮನಿ ಕ್ಯೂಬಾದಂಥ ದೇಶಗಳ ಹೋರಾಟದ ಕಥೆಗಳನ್ನು ಮನವರಿಕೆ ಮಾಡಿಕೊಡಲಾರಂಭಿಸಿದರು. ಲಾಂದ್ರಗಳನ್ನು ವಿತರಿಸುವುದರ ಮೂಲಕ ಪ್ರತಿಯೊಂದು ಗುಡಿಸಲು ಜೋಪಡಿಗಳಲ್ಲಿನ ಕತ್ತಲನ್ನು ನೀಗಿಸಲಾರಂಭಿಸಿದರು. ಮಾರ್ಕ್ಸ್ ಮಾವೋ ಚೆಗೆವಾರಗಳಂಥ ನಾಮವಾಚಕಗಳನ್ನು ಬಾಯಿಪಾಠ ಮಾಡಿಸಲಾರಂಭಿಸಿದರು. ಆ ವಿಲಕ್ಷಣ ನಾಮವಾಚಕಗಳನ್ನು ಅವರ ಮಕ್ಕಳುಮರಿಗಳಿಗೆ ನಾಮಕರಣ ಮಾಡಲಾರಂಭಿಸಿದರು. ಅವರವರ ಹೆಸರುಗಳನ್ನು ಅವರವರು ಬರೆಯುವುದನ್ನು ಕಲಿಸಿದರು. ಪ್ರಾಂಸರಿ ಕ್ರಯ ವಿಕ್ರಯ ಪತ್ರಗಳನ್ನು ಸರಾಗವಾಗಿ ಓದುವುದನ್ನು ಕಲಿಸಲಾರಂಭಿಸಿದರು.

ಪನ್ನಂಗಧರ ಒಂದು ದಿವಸ ಇದ್ದಕ್ಕಿದ್ದಂತೆ ಕಾಣೆಯಾದ, ಎರಡನೆ ದಿವಸ ದೊಡ್ಡ ಗಂಟನ್ನು ತಲೆ ಮೇಲೆ ಹೊತ್ತುಕೊಂಡು ಊರಿಗೆ ಮರಳಿದ. ಗಂಟಿನ ತುಂಬೆಲ್ಲ ತರಾವರಿ ಕನ್ನಡಿಗಳಿದ್ದವು. ಕಾರಣ ಸದರಿ ಗ್ರಾಮದ ಕೃಷಿಕಾರ್ಮಿಕರಾಗಲೀ, ಜೀತದಾಳುಗಳಾಗಲೀ ಯಾವತ್ತೂ ತಮ್ಮ ಪ್ರತಿಬಿಂಬಗಳನ್ನು ತಾವು ನೋಡಿಕೊಂಡಿರಲಿಲ್ಲ. ಹೋರಾಟದ ಪೀಠಿಕಾಪ್ರಹಸನದಲ್ಲಿ ಅವರೆಲ್ಲ ತಮ್ಮನ್ನು ತಾವು ನೋಡಿಕೊಳ್ಳುವ ಅಗತ್ಯವಿತ್ತು. ಆ ದಿವಸ ಅವರಿಬ್ಬರು ಕನ್ನಡಿಗಳನ್ನು ಪ್ರತಿಬಿಂಬ ವಂಚಿತರಿಗೆ ವಿತರಿಸಿದರು. ಇನ್ನು ಮುಂದೆ ತಾವು ಕನ್ನಡಿಗಳ ವಾರಸುದಾರರು, ಆದರೆ ಅವರಿಗೆಲ್ಲ ಅದರಲ್ಲಿ ಇಣುಕುವ ಭಯ ಆತಂಕ ನಾಚಿಕೆ. ತಮ್ಮ ಬದಲಿಗೆ ಯಾರಾದರು ಗೋಚರಿಸಿದರೆ! ಸಂಘಟಕರು ನಿರಾಶರಾಗದೆ ತಮ್ಮ ತಮ್ಮ ಪ್ರತಿಬಿಂಬಗಳನ್ನು ಹೇಗೆ ದರ್ಶಿಸುವುದು ಎಂದು ಕಲಿಸಿಕೊಟ್ಟರು. ಬಳಿಕ ನೋಡಿಕೊಳ್ಳುತ್ತಾರೆ, ತಮ್ಮ ಪ್ರತಿಬಿಂಬಗಳನ್ನು ಮೊಟ್ಟಮೊದಲ ಸಲ ದರ್ಶಿಸಿದ ಅವರೆಲ್ಲರ ಅನುಭವ ಅನನ್ಯ ವಿಸ್ಮಯ ದುಃಖ! ತಮ್ಮ ಕುರಿತು ತಾವು ಭಾವಿಸಿದ್ದೇ ಬೇರೆ, ತಾವು ಕಾಣುತ್ತಿರುವುದೇ ಬೇರೆ! ಮಾಂತ್ರಿಕ ಪನ್ನಂಗಧರ ಇನ್ನೊಂದು ಹೆಜ್ಜೆ ಮುಂದೆ ಹೋದ, "ನಿಮ್ಮ ಕೈಯಲ್ಲಿರುವುದು ಮಾಮೂಲು ಕನ್ನಡಿಗಳಲ್ಲ, ಅವು ಮಾಯಾದರ್ಪಣಗಳು. ಅವುಗಳಲ್ಲಿ ನೀವು ತ್ರಿಕಾಲ ಸತ್ಯಗಳನ್ನು ಕಾಣಬಹುದು, ನಿಮ್ಮನ್ನು ಈ ದುರವಸ್ಥೆಗೆ ಈಡು ಮಾಡಿರುವವರ ಚೆಹರೆಗಳನ್ನೂ ಕಾಣಬಹುದು" ಎಂದು ನೋಡಿಕೊಳ್ಳುವ ಸೂಕ್ಷ್ಮಗಳನ್ನೂ ವಿತರಿಸಿದ. ಬಳಿಕ ನೋಡಿಕೊಳ್ಳುತ್ತಾರೆ, ಅರೆ ತಮ್ಮ ಗ್ರಾಮದ ಜಮೀನ್ದಾರರ ಮುಖಗಳು! ವ್ಯಾಪಾರಿ ದಲ್ಲಾಳಿಗಳ ಮುಖಗಳು! ಅರ್ಚಕ ಪುರೋಹಿತರ ಮುಖಗಳು! ಧರ್ಮಗುರುಗಳ ಪೀಠಾಧಿಪತಿಗಳ ಮುಖಗಳು! ಇವೆಲ್ಲ ತಮಗೆ ಚಿರಪರಿಚಿತ ಮುಖಗಳೇನೋ ಸರಿ! ಆದರೆ ಇನ್ನೂ ಎರಡು ಮುಖಗಳು ಕಂಡೂ ಕಾಣದ ಹಾಗೆ ಕಾಣಿಸಿಕೊಳ್ಳುತ್ತ ನೆರಳ ನೇಪಥ್ಯಕ್ಕೆ ಸರಿಯುತ್ತಿರುವವಲ್ಲ! ಅವು ಯಾರ ಪ್ರತಿಬಿಂಬಗಳಿದ್ದಿರಬಹುದು! ಅಣ್ಣಂದಿರಾ ಬನ್ನಿ ಇಲ್ಲಿ ನೋಡಿ ಗುರುತಿಸಿರಿ ಇವರು ಯಾರೆಂಬುದನ್ನು ಎಂದು ಅಂಗಲಾಚಿದ್ದಕ್ಕೆ ಅವರಿಬ್ಬರು ನೋಡುತ್ತಾರೆ, ಅರೆ ಆ ಪ್ರತಿಬಿಂಬಗಳೆರಡೂ ತಮ್ಮವು! ಪಾಪಪ್ರಜ್ಞೆಯಿಂದ ನರಳಿದರು, ಭಯಭೀತರಾದರು. ಇನ್ನೇನು ಅವರಿಬ್ಬರು ತಮ್ಮ ಪ್ರತಿಬಿಂಬಗಳಿಂದ ಚೇತರಿಸಿಕೊಳ್ಳಲಾರಂಭಿಸಿದರು. ಬಳಿಕ ಅವರು ತಮ್ಮ ಹೋರಾಟಕ್ಕೆ ತಮ್ಮ ಸಂಘಟನೆಗೆ ಹಣದ ಅಗತ್ಯವಿರುವುದಾಗಿ ಕಥೆಗಾರನಾದ ನನ್ನ ಮೇಲೆ ಒತ್ತಡ ಹೇರಲಾರಂಭಿಸಿದರು, ಹಣ ಹೊಂದಿಸಿ ಕೊಡದಿದ್ದಲ್ಲಿ ದರೋಡೆ ಕೊಲೆ ಸುಲಿಗೆ ಮಾಡುವುದಾಗಿ ಎಚ್ಚರಿಸಲಾರಂಭಿಸಿದರು! ತನ್ನ ನಿರುಪದ್ರವಿ ಕಾದಂಬರಿಯ ಪಾತ್ರಗಳು ಅಂಥ ನೀಚ ಕೆಲಸ ಮಾಡುವುದೆಂದರೇನು! ನಿಮಗೆ ಹಣ ಬೇಕು ತಾನೆ! ಎರಡೇ ಎರಡು ದಿವಸ ಕಾಲಾವಕಾಶ ನೀಡಿ ಎಂದು ಕೇಳಿಕೊಂಡೆ, ಅವು ನೇಪಥ್ಯಕ್ಕೆ ಸರಿದವು. ಅವುಗಳ ದೈನಂದಿನ ಖರ್ಚಿಗೆ ಹಣ ಒದಗಿಸುವುದು ಕಥೆಗಾರನಾದ ನನ್ನ ಕರ್ತವ್ಯ. ಆದರೆ ಎಲ್ಲಿಂದ ಜೋಡಿಸಿ ಕೊಡುವುದು ಎಂಬ ಚಿಂತೆಯಲ್ಲಿದ್ದಾಗ ಎಲ್ಲಿಂದಲೋ ಕಾಣಿಸಿಕೊಂಡ ಶೇಷಣ್ಣನು..

"ಪದ್ಮಾವತೆಮ್ಮನೂ ಆಕೆಯ ಅಣ್ಣನೂ ಇದೇ ತಾನೆ ಬಂದರು ಸಾರ್, ಹೆಬ್ಬಟಂ ಗೌಡರು ತಮ್ಮ ಸಾರೋಟಿನಲ್ಲಿ ಇದೇ ತಾನೆ ಕರೆದುಕೊಂಡು ಬಂದರು, ಅಗೋ ನೋಡಿರಲ್ಲಿ" ಎಂದು ಬೆರಳು ಚಾಚಿ ತೋರಿಸಿದನು. ಕತ್ತೊರಳಿಸಿ ನೋಡಿದೆ, ಅವರಿಬ್ಬರ ನಮ್ಮ ಮನೆ ಕಡೆ ನೋಡುತ್ತ ತಮ್ಮ ಮನೆಯ ಮಹಡಿ ಏರುತ್ತಿರುವುದು ಗೋಚರಿಸಿತು. ಪದ್ಮಾವತಿ ಕೇವಲ ರಂಗನಟಿ ಮಾತ್ರವಲ್ಲ, ಲೇಖಕಿ ಹೋರಾಟಗಾರ್ತಿ ಸಂಘಟಕಿ. ಈಗ

ಆಕೆಯ ಮುಂಗೈಗೆ ಜೋತಾಡುತ್ತಿರುವ ವ್ಯಾನಿಟ್ ಬ್ಯಾಗ್ ಕುರಿತಂತೆ ಯೋಚಿಸಿದೆ, ಅದು ಚೆಕ್ ರೂಪದಲ್ಲಿರುವುದೋ! ನಗದಾಗಿ ಪರಿವರ್ತನೆಗೊಂಡಿರುವುದೋ! ಅವರೀರ್ವರು ನಡೆಸುತ್ತಿರುವ ಶಾಲೆಯ ಅಭಿವೃದ್ಧಿಗೆ ಹೋರಾಟಕ್ಕೆ ಇನ್ನಿತರ ಖರ್ಚುಗಳಿಗೆ ಕಿಂಚಿತ್ತಾದರೂ ದೇಣಿಗೆ ನೀಡೆಂದು ಕೇಳಿದರೆ ಹೇಗೆ! ಅದೇ ಸಮಯಕ್ಕೆ ಸರಿಯಾಗಿ ಬಂದ ಅವರಿಬ್ಬರನ್ನು ಆಕೆಗೆ ಪರಿಚಯಿಸಿದೆ. ನಮ್ಮ ಕೆಲವೇ ಕೆಲವು ಮಾತುಗಳನ್ನು ತಾನು ಅರ್ಥ ಮಾಡಿಕೊಂಡಳು, ಸಮ್ಮತಿ ಸಲುವಾಗಿ ತನ್ನ ಸಹೋದರನ ಕಡೆ ನೋಡಿದಳು, ಪನ್ನಂಗಧರನೂ ಒಪ್ಪಿಗೆ ನೀಡಿದ.

"ಅಯ್ಯೋ ಸಾರ್ ಅದಕ್ಕೆ ಯಾಕೆ ಸಂಕೋಚ! ಈ ಗ್ರಾಮದ ಶೋಷಿತರಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿದರೆ ನಾನು ಕಲಾವಿದೆಯಾಗಿದ್ದಕ್ಕೂ ಸಾರ್ಥಕ, ತೆಗೆದುಕೊಳ್ಳಿ" ಎಂದು ನೀಡಿಯೇಬಿಟ್ಟಳು. ಪಡೆದ ಹಣವನ್ನು ಅವರ ಕೈಗೆ ವರ್ಗಾಯಿಸಿದೆ. ಅವರು ಅದನ್ನು ಪಡೆಯುವಾಗ ತಮ್ಮ ನೀರು ತುಂಬಿದ ನೋಟದಿಂದ ಸಾಷ್ಟಾಂಗ ಪ್ರಣಾಮ ಸಲ್ಲಿಸದೆ ಇರಲಿಲ್ಲ.

ಈ ಕಾಲ್ಪನಿಕ ಘಟನೆಯಿಂದಾಗಿ ನನ್ನ ಕಾದಂಬರಿ ಅನಿರೀಕ್ಷಿತ ತಿರುವು ಪಡೆದುಕೊಂಡಿತು. ಕಾದಂಬರಿಯೊಳಗೆ ಪದ್ಮಾವತಿಯನ್ನು ಯಾವ ರೂಪದಲ್ಲಿ ಅಳವಡಿಸುವುದು ಎಂದು ಯೋಚಿಸಲಾರಂಭಿಸುತ್ತ ಬರೆಯುವ ಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಅಷ್ಟರಲ್ಲಿ ಒಂದು ಪಾರ್ಶ್ವದಿಂದ ಕಾಣಿಸಿಕೊಂಡ ಸ್ತ್ರೀ ಪಾತ್ರವು ಲಕ್ಷ್ಮಿಯದ್ದಾಗಿದ್ದರೆ ಇನ್ನೊಂದು ಪಾತ್ರವು ನಿಸ್ಸಂದೇಹವಾಗಿ ವನಜಾಕ್ಷಿಯದ್ದಾಗಿತ್ತು. ಅವೆರಡೂ ಪಾತ್ರಗಳು ಕಾಣಿಸಿಕೊಳ್ಳುವುದು ನನಗೆ ಇಷ್ಟವಿರಲಿಲ್ಲ, ಅವರಿಬ್ಬರನ್ನು ನಿರಾಕರಿಸಲು ಪ್ರಯತ್ನಿಸಿದೆನಾದರೂ ಸಾಧ್ಯವಾಗಲಿಲ್ಲ, ಜಿಗಣೆಗಳಂತೆ ಅವು ಕಾಡಲಾರಂಭಿಸಿದವು, ಮಹಿಳಾ ಪಾತ್ರಗಳು ಹೆಚ್ಚಿದ್ದಷ್ಟು ಕಥೆಗೆ ಸಾಮಾಜಿಕ ಕಿಮ್ಮತ್ತು ಪ್ರಾಪ್ತಿಯಾಗುವುದೆಂದು ಹೇಳಿದವು, ಅದೇನೋ ನಿಜ, ಆದರೆ ಅದರಲ್ಲಿ ಇದನ್ನು ಮೇಳೈಸುವುದೋ! ಇದರಲ್ಲಿ ಅದನ್ನು ಮೈಳೈಸುವುದೋ! ಅವೆರಡನ್ನೂ ಒಂದರೊಳಗೆ ಅಳವಡಿಸುವುದೋ! ಅವೆರಡರೊಳಗೆ ಪದ್ಮಾವತಿಯನ್ನು ಸ್ಥಿರೀಕರಿಸುವುದೋ! ಹೆಚ್ಚುವರಿಯಾಗಿ ಉಳಿದಿರುವ ಶರಭನನ್ನು ಏನು ಮಾಡುವುದು ಎಂಬ ಸಮಸ್ಯೆ ತಲೆದೋರದೆ ಇರಲಿಲ್ಲ. ನಾಯಕ ಗುಣಗಳಿಲ್ಲದ ಅದನ್ನು ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯನ್ನಾಗಿಯೋ ಮಾನವರೂಪಿ ಆಯುಧವನ್ನಾಗಿಯೋ ಚಿತ್ರಿಸಿದರೆ ಹೇಗೆ! ಅಥವಾ ಅದನ್ನು ದಯಾನಂದನ ವ್ಯಕ್ತಿತ್ವದೊಳಗೆ ಸಮೀಕರಿಸಿದಲ್ಲಿ ಕಾದಂಬರಿಯ ಪರಿಣಾಮ ಏನಾಗಬಹುದು! ಹ್ಞೂಹ್ಞು ಬೇಡವೇ ಬೇಡ! ಅದರ ಜಾಯಮಾನವೇ ಬೇರೆ ದಯಾನಂದ ಪಾತ್ರದ ಜಾಯಮಾನವೇ ಬೇರೆ. ಶರಭನ ಕುರಿತಂತೆ ಹೊಸ ಕಾದಂಬರಿಯನ್ನು ಬರೆಯುವುದೇ ಮೇಲು ಎಂದು ನಿರ್ಧರಿಸಿದೆ. ಹೀಗೆ ಯೋಚಿಸುತ್ತ ಕಾಲಹರಣ ಮಾಡುತ್ತಿರುವಷ್ಟರಲ್ಲಿ ಇಂಧನದ ಕೊರತೆಯಿಂದಾಗಿ ಲಾಂದ್ರದ ಬೆಳಕು ಕ್ಷೀಣಿಸಲಾರಂಭಿಸಿತು. ಅಳಿದುಳಿದಿರುವ ಬೆಳಕಿನಲ್ಲಿ ಹಾಸಿಗೆಯನ್ನು ಸಜ್ಜುಗೊಳಿಸಿದ್ದಾಗಲೀ ಗೋಚರಿಸುವುದರ ಮೂಲಕ ದಯವಿಟ್ಟು ನಿದ್ದೆಗೆ ಭಂಗವನ್ನುಂಟು ಮಾಡಬೇಡಿ ಎಂದು ದುಃಸ್ವಪ್ನಗಳನ್ನು ಅಂಗಲಾಚಿದ್ದಾಗಲೀ ಅದರ ಮೇಲೆ ಮೆಲ್ಲಗೆ ಉರುಳಿದ್ದಾಗಲೀ!

++++

ನಾಲ್ಕು ದಿವಸಗಳ ಬಳಿಕ ವಾಗಿಲಿಗೆ ಮರಳಿದ್ದೆ. ಅದೂ ಆತಂಕದ ಮುಖ ಹೊತ್ತು. ನನ್ನ ಅಂತರಂಗದ ವಿದ್ಯಾಮಾನಗಳ ಕಡೆ ಗಮನ ಹರಿಸಿದ್ದೆನೇ ಹೊರತು ವಾಗಿಲಿಯ

ವಿದ್ಯಾಮಾನಗಳ ಕಡೆ ಗಮನವಿರಲಿಲ್ಲ. ಶೇಷಣ್ಣ ಏನೋ ಹೇಳುವ ನಿಮಿತ್ತ ಎರಡು ಮೂರು ಸಲ ಬಂದು ಮರಳಿದ್ದರ ಕಡೆಗೂ ನನ್ನ ಗಮನವಿರಲಿಲ್ಲ. ಹೋದ ದಾರಿಯ ಮೂಲಕ ಮರಳಿದ್ದಲ್ಲಿ ಇಷ್ಟೊಂದು ಗೊಂದಲ ಅನುಭವಿಸುವ ಅಗತ್ಯವಿರುತ್ತಿರಲಿಲ್ಲ. ಅಲ್ಲಿ ಕಂಡವರು ಅವರು ಹೌದೋ ಅಲ್ಲವೋ! ಅಕಸ್ಮಾತ್ ಅವರೇ ಆಗಿದ್ದಲ್ಲಿ! ಅಥವಾ ಆಗಿರದಿದ್ದಲ್ಲಿ!

ಆ ದಿವಸ ವೃತ್ತಿಗೆ ಸಂಬಂಧಿಸಿದ ಕಡತದೊಂದಿಗೆ ಜಿಲ್ಲಾ ಕೇಂದ್ರವಾದ ಕರ್ನೂಲಿಗೆ ಹೋಗಿದ್ದೆ. ಸಂಬಂಧಿತ ಕಾರಖೂನ ಚಂದ್ರನಾಥ ರಜೆ ಮೇಲೆ ಹೋಗಿರದಿದ್ದಲ್ಲಿ ಕಛೇರಿ ಕೆಲಸ ಕಾರ್ಯ ಮುಗಿಸಿಕೊಂಡು ಸಂಜೆ ವೇಳೆಗೆ ವಾಪಸ್ಸಾಗಬಹುದಿತ್ತು. ಆದರೆ ಆತ ಆಗಮಿಸಿ ಕಡತವನ್ನು ಕೈಗೆತ್ತಿಕೊಂಡಿದ್ದು ಮಾರನೆ ದಿವಸ. ದಿನಗಳ ಪರ್ಯಂತರ ಸುಮ್ಮನೆ ಸತಾಯಿಸಿದ ಪುಣ್ಯಾತ್ಮ. ಕೊಡುವುದನ್ನು ಕೊಟ್ಟು ಪಡೆಯುವುದನ್ನು ಪಡೆದುಕೊಂಡು ಬಸ್‌ನಿಲ್ದಾಣ ತಲುಪಿದಾಗ ಮಧ್ಯಾಹ್ನ.

ಉರಿಬಿಸಿಲಲ್ಲಿ ನಿಂತು ಕಾಯುತ್ತಿರುವಾಗ ಆದವಾನಿ ಕಡೆ ಹೊರಟಿದ್ದ ಬಸ್ಸು ಕಣ್ಣೆದುರಿಗೆ ನಿಂತಿತು. ಕುತೂಹಲ ತಡೆಯಲಾರದೆ ನೋಡಿದೆ, ಕರಿವೇಮಲ ಪೋಲ್ಕಲ್ ದೇವನಕೊಂಡ ಎಂಬ ಹೆಸರಿನ ಗ್ರಾಮವಾಚಕಗಳ ನಡುವೆ ನಗರೂರು ಎಂಬ ಗ್ರಾಮವಾಚಕ ಸ್ಪಷ್ಟವಾಗಿ ಗೋಚರಿಸಿತು. ಆ ಒಡನೆಯೆ ಲಕ್ಷ್ಮಿ ಮತ್ತು ಆಕೆಯನ್ನು ಹೆತ್ತವರು ನೆನಪಾದರು. ಅಗೋಚರ ಆರ್ತ ಕರೆ ಕಿವಿಯಲ್ಲಿ ಮೊರೆಯಿತು. ನನಗರಿವಿಲ್ಲದಂತೆ ನನ್ನ ಕಾಲುಗಳು ಅದರ ಕಡೆ ಚಲಿಸಿದವು. ಪುನಃ ಎಚ್ಚತ್ತು ಎಂಥ ತಪ್ಪನ್ನೆಸಗುವುದರ ಮೂಲಕ ನನ್ನನ್ನು ನಾನೇ ಮೋಸ ಮಾಡಿಕೊಳ್ಳುತ್ತಿರುವೆನಲ್ಲ! ಪುನಃ ಅದರಿಂದ ಇಳಿದೆ, ಆದರೂ ಏರುವುದು ಇಳಿಯುವುದು ನಡೆಸಿದೆ, ತುಸು ಕಪ್ಪಗೆ ನರಕಲೋಕದ ರಾಯಭಾರಿಯಂತಿದ್ದ ಕಂಡಕ್ಟರ್ ನನ್ನ ಕಡೆ ಅನಾರೋಗ್ಯಕರ ರೀತಿಯಲ್ಲಿ ನೋಡುತ್ತ ಬರುವಿರೋ ಇಲ್ಲವೋ ಎಂದು ಗದರಿದ, ಹೊರಡಲಿದ್ದ ಬಸ್ಸಿನ ಬಾಗಿಲಲ್ಲಿ ಒಂದು ಕಾಲನ್ನೂ ಇನ್ನೊಂದು ಕಾಲನ್ನು ನೆಲದ ಮೇಲೂ ಇಟ್ಟು ಇನ್ನೇನು ಬೀಳಲಿದ್ದ ನನ್ನ ತೋಳು ಹಿಡಿದು ಒಳಕ್ಕೆ ಎಳೆದುಕೊಂಡೇಬಿಟ್ಟನು. ಪ್ರಯಾಣಿಕರ ದಟ್ಟಣೆಯಿಂದಾಗಿ ಇಳಿಯುವುದಾಗಲಿಲ್ಲ. ಬಸ್ಸು ತನ್ನ ವೇಗ ಹೆಚ್ಚಿಸಿಕೊಳ್ಳುತ್ತ ಹೋಯಿತು. ನನ್ನೊಳಗೂ ಮೊಳೆತ ನಗರೂರು ಅರಣ್ಯದ ರೂಪ ತಳೆದು ವಿಸ್ತಾರವಾಯಿತು. ಇರುಳು ಅವತರಿಸಿತು, ದಾದರ್ ಎಕ್ಸ್‌ಪ್ರೆಸ್ ಕರ್ಕಶ ರೀತಿಯಲ್ಲಿ ಶಿಳ್ಳೆ ಹಾಕುತ್ತ ಓಡಲಾರಂಭಿಸಿತು. ಈಗಲಾದರೂ ನಮ್ಮನ್ನು ನೋಡುವ ಸಲುವಾಗಿ, ಲಕ್ಷ್ಮಿಯ ಸಮಾಧಿಯ ಮೇಲೆ ಹೂಗುಚ್ಛವನ್ನು ಇರಿಸುವ ಸಲುವಾಗಿ, ಪುನರ್ಜನ್ಮ ಸಂಬಂಧೀ ನೆನಪುಗಳನ್ನು ನವೀಕರಿಸಿಕೊಳ್ಳುವ ಸಲುವಾಗಿ, ಕಣ್ಣುಗಳನ್ನು ಒದ್ದೆ ಮಾಡಿಕೊಳ್ಳುವ ಸಲುವಾಗಿ ಅಂತೂ ಹೊರಟಿರುವೆಯಲ್ಲ! ಅಷ್ಟೇ ಸಾಕು, ನಗರೂರು ನಿನಗೆ ಹೊಸ ಊರಿರಬಹುದು, ಆದರೆ ನೆನಪುಗಳು ಎಂದೂ ಹಳತಾಗುವುದಿಲ್ಲ. ಪರಸ್ಪರ ನೆನಪುಗಳೂ ಅಸ್ಪಷ್ಟವೆಂದು ಹಿಂಜರಿಯದಿರು. ಬಸ್‌ನಿಲ್ದಾಣದಲ್ಲಿ ಕಾಯುತ್ತಿರುವ ಅಸಂಖ್ಯಾತರ ನಡುವೆ ಇರಬಹುದಾದ ನಮ್ಮನ್ನು ನೀನು ಗುರುತಿಸುವೆಯೋ! ನಿನ್ನನ್ನು ನಾವೇ ಗುರುತಿಸುವುದೋ! ಮಗಳ ಶವಸಂಸ್ಕಾರದ ನಂತರವೂ ಒಡನಾಡಿದ್ದಲ್ಲಿ ಪರಸ್ಪರ ಗುರುತಿಸುತ್ತಿದ್ದೆವೇನೊ! ಆದರೂ ಕಾಲ ಮಿಂಚಿಲ್ಲ, ನಮ್ಮ ನಮ್ಮ ಕರುಳುಗಳಿಗಿರುವ ಕಣ್ಣುಗಳ ಮೂಲಕ ಒಬ್ಬರನ್ನೊಬ್ಬರು ಗುರುತಿಸಿದರಾಯಿತು ಎಂದು ಹೇಳಿದಂತೆ ಭಾಸವಾಯಿತು.

ನಿನ್ನ ಅಪ್ಯಾಯಮಾನ ಸ್ಪರ್ಶದ ಸಹಾಯದಿಂದ ಪ್ರೇತ ಸ್ಥಾನ ಅಲಂಕರಿಸಿರುವ ನನ್ನ ಪರಿಧಿ ನಿನ್ನ ಆಗಮನದ ನಿರೀಕ್ಷೆಯಲ್ಲಿದೆ, ನಿನ್ನ ದೇಹದಲ್ಲಿ ಆಶ್ರಯ ಪಡೆಯುವುದರ

ಮೂಲಕ ಲೌಕಿಕ ಪ್ರಪಂಚವನ್ನು ಅನುಭವಿಸುವ ಆಸೆ ನನ್ನಲ್ಲಿನ್ನೂ ಜೀವಂತವಿದೆ. ಇಪ್ಪತ್ತನ್ನು ಪೂರೈಸುವ ಮೊದಲೇ ಮದುವೆಯಾದ, ಮದುವೆ ಎಂಬ ಅಪಘಾತಕ್ಕೆ ಸಿಕ್ಕು ಗರ್ಭಿಣಿಯಾದ, ಗರ್ಭಿಣಿಯಾದ ತಪ್ಪಿಗೆ ಅಕಾಲಮರಣಕ್ಕೆ ತುತ್ತಾದ ನನಗೂ ಬದುಕುವ ಆಸೆ ಇದೆ ಎಂಬುದನ್ನು ಮರೆಯಬೇಡ, ನಿನ್ನ ಮೂಲಕ ಬದುಕನ್ನು ಕಲ್ಪಿಸು ಎಂದು ಆಕೆ ಅಂಗಲಾಚುತ್ತಿರುವಂತೆಯೂ ಭಾಸವಾಯಿತು.

ಅರೆ ನನ್ನನ್ನು ನಾನು ನಾಶ ಮಾಡಿಕೊಳ್ಳಲು ಬಲೆಯೊಂದನ್ನು ಸೃಷ್ಟಿಸಿಕೊಳ್ಳುತ್ತಿರುವೆನಲ್ಲ! ಕರಿವೇಮಲದಲ್ಲಿ ಇಳಿಯಲು ಪ್ರಯತ್ನಿಸಿದೆನಾದರೂ ಸಾಧ್ಯವಾಗಲಿಲ್ಲ, ದೇವಲಕೊಂಡದಲ್ಲಿ ಇಳಿಯಲು ಪ್ರಯತ್ನಿಸಿದೆನಾದರೂ ಸಾಧ್ಯವಾಗಲಿಲ್ಲ. ಬಾಗಿಲ ಬಳಿಗೆ ಹೋಗುವುದು ಮರಳುವುದು ಮಾಡಲಷ್ಟೆ ಸಾಧ್ಯವಾಯಿತು. ಸಹಪ್ರಯಾಣಿಕರು ನನ್ನನ್ನು ಇಳಿಯಲು ಬಿಟ್ಟರೆ ತಾನೆ! ನಿನ್ನ ಸಲುವಾಗಿ ಚಾತಕಪಕ್ಷಿಗಳಂತೆ, ಶಬರಿಯಂತೆ, ಅತಂತ್ರ ಸ್ಥಿತಿಯಲ್ಲಿರುವ ಆತ್ಮಗಳಂತೆ ಪ್ರತಿಕ್ಷಣ ಕಾಯುತ್ತಿರುವ ನಮ್ಮನ್ನು ನಿರಾಶೆಗೊಳಿಸಿದೆಯಾದರೆ ಮಣ್ಣಾಗುತ್ತಲೇ ಇರುವ ಲಕ್ಷ್ಮಿಯ ಆಣೆ, ಆಕೆಯನ್ನು ಪ್ರತಿಕ್ಷಣ ಮಣ್ಣು ಮಾಡುತ್ತಲೇ ಈ ದೇಶದ ಪವಿತ್ರ ಮಣ್ಣಿನ ಮೇಲೆ ಆಣೆ ಎಂದು ಆಣೆ ಪ್ರಮಾಣಗಳ ಮೂಲಕ ನನ್ನ ಕಾಲುಗಳ ಶಕ್ತಿಯನ್ನು ಕುಂದಿಸುತ್ತಿರುವ ಆ ಹೆತ್ತವರೋ!

ನೀರಲ್ಲಿ ಘೃತಬಿಂದು ಹೇಗಿರುವುದೋ ಹಾಗೆಯೇ ನಾನು ಕರಗದ ರೀತಿಯಲ್ಲಿ ಮಣ್ಣೊಳಗಿದ್ದು ನಿನ್ನ ಆಗಮನದ ಸಲುವಾಗಿ ಕಾಯುತ್ತಿರುವೆ, ನನ್ನ ಆತ್ಮವನ್ನು ನಿರಾಶೆಗೊಳಿಸಿದೆಯಾದರೆ ನಿನ್ನ ಸೃಜನಶೀಲ ಶಕ್ತಿಯ ಮೇಲಾಣೆ ಎಂದು ನನ್ನ ನರನಾಡಿಗಳಲ್ಲಿ ಪ್ರವಹಿಸುತ್ತಿರುವ ಆಕೆಯ ನೆನಪೋ! ನೀನಲ್ಲಿಗೆ ಹೋದರೆಲ್ಲಿ ನಿಶ್ಯೇಷವಾಗುವಿಯೋ ಅಪೂರ್ಣಗೊಂಡಿರುವ ನಮ್ಮನ್ನೆಲ್ಲಿ ತ್ರಿಶಂಕು ಸ್ಥಿತಿಯಲ್ಲಿಡುವಿಯೋ, ಹಾಗೇನಾದರೂ ಮಾಡಿದಿ ಎಂದರೆ ನಮ್ಮಂಥ ಕಾಲ್ಪನಿಕ ಪಾತ್ರಗಳು ಜೀವಂತ ಪ್ರೇತಗಳಿಗಿಂತ ಹೆಚ್ಚು ಅಪಾಯಕಾರಿ ಎಂಬುದನ್ನು ಮರೆಯದಿರು ಎಂದು ಎಚ್ಚರಿಸುತ್ತಿರುವ ದಯಾನಂದ ಪನ್ನಂಗಧರ ವನಜಾಕ್ಷಿ ಶರಭರಿತ್ಯಾದಿ ಪಾತ್ರಗಳು! ಮೊನ್ನೆ ತಾನೆ ಹಾಕಿರುವ ಸುದೀರ್ಘ ಪತ್ರ ವಾಗಿಲಿಯ ನಿನ್ನ ಮನೆಯ ಬಾಗಿಲಲ್ಲಿ ಕಾಯುತ್ತಿದೆ. ಅದನ್ನು ಓದುವ ಸಲುವಾಗಿಯಾದರೂ ನೀನು ನಗರೂರನ್ನು ಪ್ರವೇಶಿಸಬೇಡವೋ ಎಂದು ಕರುಳ ಕಾಡ ಹೆಬ್ಬಂಡೆ ಮೇಲೆ ಗೊಮ್ಮಟ ಸದೃಶ ರೀತಿಯಲ್ಲಿ ನಿಂತು ಕೂಗುತ್ತಿರುವ ಅಪ್ಪ! ಅಡಕತ್ತರಿಯ ನಡುವೆ ಉಭಯ ಸಂಕಟಗಳ ಪುಷ್ಕರಣಿಯ ನಟ್ಟನಡುವೆ ಸಂದಿಗ್ಧತೆ ನಡುವೆ ಹೊಯ್ದಾಡಿದೆ. ತಾನು ಪ್ರಯಾಣಿಸಲು ಆಯ್ಕೆ ಮಾಡಿಕೊಂಡಿರುವುದು ಮಾಮೂಲಿ ವಾಹನವಲ್ಲ, ಸಾಲಂಕೃತ ಹೆಣಗಳನ್ನು ಶಾಶ್ವತವಾಗಿ ಸಾಗಿಸಲು ಉಪಯೋಗಿಸುತ್ತಿರುವ ಪುಷ್ಪಕವಿಮಾನವೆಂದೆನ್ನಿಸಿತು. ಸಹಪ್ರಯಾಣಿಕರ ಕಡೆ ದೃಷ್ಟಿ ಸಾರಿದೆ, ಅವರೆಲ್ಲ ಜೀವಂತ ಕಳೇಬರಗಳಂತೆ ಪ್ರೇತಗಳಂತೆ ಗೋಚರಿಸಿದರು. ಕಂಡಕ್ಟರ್ ಚಾಲಕರನ್ನೂ ನೋಡಿದೆ, ಅವರಿಬ್ಬರೂ ಯಮಧೂತರಂತೆ ಭಾಸವಾದರು. ಹತ್ತುವಷ್ಟು ಸುಲಭವಲ್ಲವೋ ವಾಹನದಿಂದ ಅಕಾಲಿಕವಾಗಿ ನಿರ್ಗಮಿಸುವುದು ಎಂದು ಹೇಳುತ್ತಿರುವರೆಂದು ಊಹಿಸಿದೆ. ಆ ದಿವಸದ ಆ ಹೊತ್ತಿನ ವಾತಾವರಣದ ಉಷ್ಣತೆ ನಲತ್ತೈದು ದಾಟಿತ್ತು. ನನ್ನ ದೇಹದೊಳಗಿನ ಉಷ್ಣತೆ ಅದಕ್ಕಿಂತ ಮಿಗಿಲಾಗಿತ್ತು. ಶ್ವೇದರಂದ್ರಗಳಿಂದ ದುಮ್ಮಿಕ್ಕುತ್ತಿರುವ ಬೆವರು, ಮೈಗಂಟಿ ಕಳೆಗುಂದಿರುವ ವಸ್ತ್ರವಿಲಾಸ! ಮತ್ತೆ ಮತ್ತೆ ಸ್ಮರಣೆಯ ಹೆಬ್ಬಾಗಿಲಲ್ಲಿ ಕಾಣಿಸಿಕೊಳ್ಳುತ್ತಿರುವ ಆ ಕಳೇಬರದ ತಾರುಣ್ಯಪೂರ್ಣ ಅವಗುಂಟನ ಮುಖ! ಕೊಳೆತ ಹಣ್ಣು ನೊಣಗಳನ್ನು

ಆಕರ್ಷಿಸುವ ರೀತಿಯಲ್ಲಿ ಆಕೆಯ ನೆನಪು ನನ್ನನ್ನು ಆಕರ್ಷಿಸಿತು. ನಾಡಬಾಂಬುಗಳ ತಯಾರಿಕಾ ಘಟಕಗಳಿಗೆ ಕುಖ್ಯಾತವೆನಿಸಿರುವ ಗುಮ್ಮನೂರು ದಾಟಿದೊಡನೆ ನಗರೂರು ಕಣ್ಣಳತೆಯಲ್ಲಿ ಗೋಚರಿಸಿಯೇಬಿಟ್ಟಿತು.

ಬಸ್ಸು ಮಂದಗತಿಯಲ್ಲಿ ನಗರೂರನ್ನು ಪ್ರವೇಶಿಸುತ್ತಿರುವಾಗಲೇ ಹೋಬಳಿ ಮಟ್ಟದ ಚಿಕ್ಕದೂ ಅಲ್ಲದ ದೊಡ್ಡದೂ ಅಲ್ಲದ ಊರೆಂದು ಕ್ರಮೇಣ ಅರಿವಿಗೆ ಬಂತು. ರಾಜ್ಯಮಟ್ಟದ ಹೆದ್ದಾರಿ ಇನ್ನೂ ಥಾರಿನ ಮುಖ ಕಾಣದೆ ಅರೆಬರೆ ಉಳಿದಿರುವ ಹೆದ್ದಾರಿ ಊರಿನ ಹೃದಯ ಭಾಗವನ್ನು ಸೀಳಿದ್ದರಿಂದಾಗಿ ತರಾವರಿ ವಾಹನಗಳ ಓಡಾಟಕ್ಕೆ ಬರವಿರಲಿಲ್ಲ. ಅವುಗಳು ಎಬ್ಬಿಸುತ್ತಿದ್ದ ಧೂಳಿನಿಂದಾಗಿ ಸಾಲುಸಾಲು ಕಟ್ಟಡಗಳು ಒಮ್ಮೊಮ್ಮೆ ಕಣ್ಮರೆಯಾಗಿ ಪುನಃ ನಿಚ್ಚಳವಾಗುತ್ತಿದ್ದವು. ಇನ್ನೇನು ತಾವು ಅಪಘಾತಕ್ಕೆ ತುತ್ತಾಗಿ ಸತ್ತೇಬಿಡುವೆವೋ ಎನ್ನುವಂತೆ ಹಾದಿಹೋಕರು ಚಲಿಸುವ ಬಸ್ಸಿಗೆ ಮುಖಾಮುಖಿಯಾಗುತ್ತಿದ್ದರು, ಚಾಲಕ ಅಂಥವರನ್ನು ಅಶ್ಲೀಲವಾಗಿಯೂ ಅಂಥವರ ಜೀವ ಕಾಪಾಡುತ್ತಿದ್ದ ದೇವರನ್ನು ಶ್ಲೀಲವಾಗಿಯೂ ಬಯ್ಯುತ್ತಲೂ ಶ್ಲಾಘಿಸುತ್ತಲೂ ಚಾಕಚಕ್ಯತೆಯಿಂದ ತನ್ನ ಕರ್ತವ್ಯ ನಿರ್ವಹಿಸುತ್ತಿದ್ದನು. ನಿಲ್ದಾಣ ಸಮೀಪಿಸಿದಂತೆ ಬಸ್ ತನ್ನ ವೇಗವನ್ನು ಕ್ಷೀಣಿಸಿಕೊಂಡಿತು. ತನ್ನ ತಲೆ ಮೇಲೆ ಶಿಶುವಿನ ರೂಪದ ದೈವವನ್ನು ಪುಟ್ಟಿಯಲ್ಲಿ ಹೊತ್ತು ನಡೆದ ವಸದೇವನಿಗೆ ಕಾಳಿಂದಿ ಯಾವ ಪ್ರಕಾರವಾಗಿ ಇಬ್ಭಾಗವಾಗಿ ದಾರಿ ಮಾಡಿಕೊಟ್ಟಿತೋ ಅದೇ ರೀತಿ ಜನರು ಹೋಳಾಗಿ ಅದಕ್ಕೆ ದಾರಿ ಮಾಡಿಕೊಟ್ಟರು. ಕ್ರಮೇಣ ಅದು ತನ್ನ ಚಲನೆಯನ್ನು ಸ್ಥಗಿತಗೊಳಿಸಿ ನಿಂತೇಬಿಟ್ಟಿತು, ಇಳಿಯುವವರ ಬಲಕ್ಕಿಂತ ಹತ್ತುವವರ ಬಲವೇ ಹೆಚ್ಚಾಯಿತು. ನೂಕುನುಗ್ಗಲು ಬೇರೆ, ಕ್ರಿಯೆ ಪ್ರತಿಕ್ರಿಯೆಗಳ ನಡುವೆ ಸಿಲುಕಿದ್ದ ನನಗೆ ಇಳಿಯುವ ನಿಲ್ದಾಣದ ನೆಲವನ್ನು ಸ್ಪರ್ಶಿಸುವ ಇರಾದೆ ಇರಲಿಲ್ಲ. ಆದರೂ ತಳ್ಳಾಟಕ್ಕೆ ಸಿಕ್ಕು ಇಳಿಯುವುದು ಅನಿವಾರ್ಯವಾಯಿತು.

ಇಳಿದೊಡನೆ ಸುತ್ತ ಕಣ್ಣಾಯಿಸಿದೆ. ರಾಯಲಸೀಮೆಯ ಬಹುತೇಕಿ ಫ್ಯಾಕ್ಷನ್ ಉಪಟಳಕ್ಕೆ ತುತ್ತಾದ ಗ್ರಾಮಗಳಿಗಿಂತ ಭಿನ್ನವಲ್ಲದ ಊರು. ಯಾವುದೋ ಶತಮಾನದಲ್ಲಿ ನಿರ್ಮಾಣಗೊಂಡಂತಿರುವ ಮಣ್ಣಿನ ಕಟ್ಟಡಗಳು! ಶತಶತಮಾನಗಳ ಗಲೀಜನ್ನು ತಮ್ಮ ಮೈಮೇಲೆ ಲೇಪನ ಮಾಡಿಕೊಂಡಂತಿರುವ ಜನರು! ಅವರಲ್ಲಿ ಅವರಿರಬಹುದೆ ಎಂದು ದೃಷ್ಟಿ ಹಾಯಿಸುತ್ತ ನಿಂತಲ್ಲೆ ನಿಂತೆ. ಅಗೋ ಅಲ್ಲಿ ಅವರು! ಇಗೋ ಇಲ್ಲಿ ಇವರು! ದಣಿವನ್ನು ನಿವಾರಿಸಿಕೊಳ್ಳಲೆಂದೋ ಕಾಲಕ್ಷೇಪ ಮಾಡಲೆಂದೋ ಹತ್ತಿರದಲ್ಲಿದ್ದ ಹೋಟಲ್ಲನ್ನು ಪ್ರವೇಶಿಸಿದೆ, ಗಿರಾಕಿಗಳ ಪೈಕಿ ಕೆಲವರು ನನ್ನ ಕಡೆ ಹಸಿದಿರುವ ನರಭಕ್ಷಕರಂತೆ ನೋಡುತ್ತಿರುವರು ಬೇರೆ! ಅದೂ ಅಪಾದಮಸ್ತಕವಾಗಿ. ಇಕ್ಕೆಲದಲ್ಲಿ ಕೂತಿದ್ದ ಇಬ್ಬರು ಯಾರು ಯಾವೂರು ಇಲ್ಲಿಗೆ ಬಂದಿರುವ ಕಾರಣ! ಅವರನ್ನು ಕಾಣುವುದಿತ್ತೆ ಇವರನ್ನು ಕಾಣುವುದಿತ್ತೆ ಎಂಬ ಪ್ರಶ್ನೆಗಳನ್ನು ಕೇಳಲಾರಂಭಿಸಿದರು ಬೇರೆ! ನಿಷ್ಕಾರಣವಾಗಿ ಇಳಿದಿರುವ ನಾನು ಏನೆಂದು ಉತ್ತರಿಸಲಿ! ಏನೋ ಒಂದು ಹೇಳಿದೆ, ಅದಕ್ಕೆ ಅವರು ತೃಪ್ತರಾದವರಂತೆ ಕಾಣಿಸಲಿಲ್ಲ. ನೀರು ಕುಡಿದ ಬಳಿಕ ಚಹಾವನ್ನೂ ಸೇವಿಸಿ ಹೋಟಲ್ಲಿನಿಂದ ಹೊರಟು ಪುನಃ ನಿಲ್ದಾಣ ಸೇರಿಕೊಂಡೆ, ತುರ್ತಾಗಿ ಜಾಗ ಖಾಲಿ ಮಾಡುವ ಸಲುವಾಗಿ. ಆದೋನಿ ಕಡೆ ಹೊರಡುವ ಬಸ್ಸು ಸಲುವಾಗಿ ತಪಾಸಣೆ ಆರಂಭಿಸಿದೆ. ನನ್ನನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಿರುವ ಎಲ್ಲೋ ಇರಬಹುದಾದ ಶ್ಮಶಾನ! ಅದರಲ್ಲಿ ಎಲ್ಲೋ ಇರಬಹುದಾದ ಸಮಾಧಿ! ನನ್ನ ಕರ್ಮಕ್ಕೆ ನೋಟಕ್ಕೆ ನಿಲುಕದಿರುವ ಆದೋನಿ ಬಸ್ಸು! ಇನ್ನೇನು ಯಾವುದೋ ಒಂದು ಬಸ್ಸನ್ನು ಏರಿ

ಹೊರಟೇಬಿಡಬೇಕೆನ್ನುವಷ್ಟರಲ್ಲಿ ದೂರದಲ್ಲಿದ್ದ ಇಬ್ಬರು ನನ್ನ ಗಮನ ಸೆಳೆದರು. ಅವರನ್ನು ಎಲ್ಲೋ ನೋಡಿರುವಂಥ ನೆನಪು ಗುರುತು! ನನ್ನ ಹಾಗೆ ಅವರೂ ಸಹ! ಅರೆ ಅವರು ಅವರೇ ಆಗಿದ್ದಲ್ಲಿ! ಭಯವಾಯಿತು ವಿನಾಕಾರಣ! ಇನ್ನೇನು ಅವರಿಬ್ಬರು ನನ್ನನ್ನು ಸಮೀಪಿಸಿಯೇಬಿಡಬೇಕೆನ್ನುವಷ್ಟರಲ್ಲಿ ಸರ್ರನೆ ಯಾವುದೋ ಒಂದು ಬಸ್ಸನ್ನು ಸಮೀಪಿಸಿದೆ, ಹತ್ತಿ ಪ್ರವೇಶಿಸಿಯೇಬಿಟ್ಟೆ, ಮೆಲ್ಲಗೆ ಕಿಟಿಕಿ ಮೂಲಕ ತುಂಡು ನೋಟವನ್ನು ಹರಿಸಿದೆ, ಇನ್ನೇನು ನನ್ನನ್ನು ಗುರುತಿಸಿಯೇಬಿಟ್ಟರೆನ್ನುವ ರೀತಿಯಲ್ಲಿ ಚಲಿಸಲಿದ್ದ ಬಸ್ಸನ್ನು ತಡೆಯುವ ಸಲುವಾಗಿ ಸಮೀಪಿಸಿಯೇಬಿಟ್ಟರೆನ್ನುವಷ್ಟರಲ್ಲಿ ಯಾವುದೋ ಒಂದು ನಾಮವಾಚಕವನ್ನು ಅಸ್ಪಷ್ಟ ರೀತಿಯಲ್ಲಿ ಉಚ್ಚರಿಸಿಯೇಬಿಟ್ಟರೆನ್ನುವಷ್ಟರಲ್ಲಿ ನಾನಿದ್ದ ಬಸ್ಸು ಹೊರಟೇಬಿಟ್ಟಿತೆನ್ನುವಷ್ಟರಲ್ಲಿ!

++++

ನಗರೂರು ಕಡೆ ಹೋಗಬಾರದಿತ್ತು, ಅದೂ ವಿನಾಕಾರಣ. ಆಂಧ್ರಕ್ಕೆ ಕಾಲಿರಿಸಿದ ಆರಂಭದ ದಿವಸಗಳಲ್ಲಿ ರಮೇಶ "ನೀವು ಅನ್ ಮ್ಯಾರೀಡು, ಎಲ್ಲಿದ್ದರೂ ಒಂದೆ, ಮ್ಯೂಚುವಲ್‌ಗೆ ಟ್ರೈ ಮಾಡೋಣ, ನೀವಿಲ್ಲಿಗೆ ನಾನಲ್ಲಿಗೆ, ಒಂದೇ ಮಾತಿನಲ್ಲಿ ಹೇಳುವುದಾದರೆ ವಾಗಿಲಿಗಿಂತ ನಗರೂರು ವಾಸಿ" ಎಂದು ಅಂಗಲಾಚಿದ್ದ, ಆ ಊರನ್ನು ಉತ್ಪ್ರೇಕ್ಷಿತ ರೀತಿಯಲ್ಲಿ ವರ್ಣಿಸಿದ್ದನ್ನು ನೆನಪು ಮಾಡಿಕೊಂಡೆ. ಅದನ್ನು ಒಮ್ಮೆ ನೋಡುವ ಆಸೆ ನನ್ನಲ್ಲಿ ಇಲ್ಲದಿರಲಿಲ್ಲ. ಆ ಘಟನೆ ಸಂಭವಿಸಿದ ಬಳಿಕ ಅದು ನನ್ನೊಳಗೆ ಹೆಮ್ಮರವಾಗಿ ವ್ಯಾಪಿಸಿತ್ತು, ತಾನು ಹರಪ್ಪ ಮೆಹೆಂಜೋದಾರವೋ ಎಂಬಂತೆ ಕೈ ಬೀಸಿ ಆಮಂತ್ರಿಸುತ್ತಲೇ ಇತ್ತು. ಅದಕ್ಕೆ ಮಣಿದೋ ಮಣಿಯದಯೋ ಹೊರಟು ತಲುಪಿದ್ದೇ ಪರಪಾಟಾಯಿತೇನೋ! ಹೀಗೆ ತಲುಪಿ ಹಾಗೆ ವಾಪಸ್ಸಾಗುವ ಕಾರಣದಿಂದಾಗಿಯೇ ಹೋದೆನೇನೊ! ಆದರೆ ಅವರಿಗೆ ಬದಲು ಅವರು ಅವರೆಂದು ಭಾಸವಾಗಿಬಿಡುವುದೆ! ಅವರು ಅವರೋ! ಅಥವಾ ಅವರು ಅವರೆಂಬ ಭ್ರಮೆಯೊ! ಕಣ್ಣಳತೆಯಲ್ಲಿ ಅಕಸ್ಮಾತ್ ಗೋಚರಿಸಿದರು. ರೆಪ್ಪೆಯಾರಿಸದಂತೆ ನನ್ನ ಕಡೆ ನೋಡಿದರು, ನಾನು ನಾನೇ ಅಲ್ಲವೆಂದು ಸಾಬೀತುಪಡಿಸುವವನಂತೆ ಎತ್ತಲೋ ನೋಡುತ್ತ ಅಭಿನಯಿಸಿದೆ, ಸಾಧ್ಯವಾಗಲಿಲ್ಲ, ವ್ಹಾರೆ ನೋಟ ಬೀರುತ್ತಲೂ ಬೆವರೊರೆಸಿಕೊಳ್ಳುತ್ತಲೂ ಅವರ ಕಡೆ ನಡೆಯುತ್ತಲೂ! ನಡೆಯದೆ ಇರುತ್ತಲೂ! ಆದರೆ ಸಾಧ್ಯವಾಗಲಿಲ್ಲ. ಇನ್ನೇನು ಅವರನ್ನು ನಾನೇ ಸಮೀಪಿಸುವ, ಅವರೇ ನನ್ನನ್ನು ತಲುಪುವ ಪ್ರಯತ್ನಗಳು ಸಮಪಾತಳಿಯಲ್ಲಿ ಸಂಭವಿಸಿದವು. ಪರಸ್ಪರ ಸಮೀಪಿಸಿಯೇಬಿಟ್ಟೆವು ಎನ್ನುವಷ್ಟರಲ್ಲಿ ಬಸ್ಸು ಬಂದದ್ದಾಗಲೀ ನಾನು ಅದರೊಳಗೆ ಕುಳಿತದ್ದಾಗಲೀ ಅದು ಚಲಿಸಲಾರಂಭಿಸಿದ್ದಾಗಲೀ ವಿಳಂಬವಾಗಲಿಲ್ಲ. ಅದರಿಂದ ವಿಚಲಿತರಾಗದೆ ಅವರು ಚಲಿಸಲಿದ್ದ ಬಸ್ಸಿಗೆ ಅಡ್ಡ ನಿಲ್ಲಲು, ಹೆಸರು ಹಿಡಿದು ಕೂಗಲು ತಮ್ಮ ತಮ್ಮ ಕೈಗಳನ್ನು ಊರ್ಧ್ವಮುಖವಾಗಿ ಎತ್ತಿ ಬೀಸಲು ಪ್ರಯತ್ನಿಸಿದಂತೆ ಭಾಸವಾಯಿತು. ನಗರೂರಿನ ಮೇರೆ ದಾಟಿದ ಬಳಿಕವೂ ನಾನು ಸಹಪ್ರಯಾಣಿಕರಲ್ಲಿ ಅವರ ಸಲುವಾಗಿ ಹುಡುಕಾಟ ನಡೆಸದೆ ಇರಲಿಲ್ಲ, ಅವರಿರದಿದ್ದನ್ನು ಖಚಿತಪಡಿಸಿಕೊಂಡ ಬಳಿಕವೇ ನನಗೆ ಸಮಾಧಾನವಾಗಿದ್ದು.

ವಾಗಿಲಿಯನ್ನು ತಲುಪಿದ ಬಳಿಕವೂ ಅವರಿಬ್ಬರ ನೆನಪು ಸಂಭವಿಸಲಿರುವ ದುಃಸ್ವಪ್ನಗಳ ರೀತಿಯಲ್ಲಿ ಕಾಡುವುದನ್ನು ಮುಂದುವರೆಸಿರುವುದು ದುರದೃಷ್ಟಕರ. ಅವರು ಅವರಾಗಿರಲಾರರು, ಅಪ್ಪಟ ಕನ್ನಡ ಜಾಯಮಾನದವರಾದ ಅವರು ಅಲ್ಲಿಗೆ

ಹೋಗಿರಲಾರರು ಎಂದು ಯೋಚಿಸುತ್ತ ಮನಸ್ಸಿನ ಬಗ್ಗಡವನ್ನು ತಿಳಿಗೊಳಿಸುವ ವಿಫಲ ಪ್ರಯತ್ನ ಮುಂದುವರೆಸಿದೆ. ಅಸ್ವಸ್ಥತೆಯನ್ನು ಅನುಭವಿಸುತ್ತಲೇ ಶಾಲೆಗೆ ಹೋಗುವುದು ಬರುವುದು ಮಾಡಿದೆ. ಬಿಡುವಿನ ವೇಳೆಯಲ್ಲಿ ಕಥಾನಕದ ಉಪೋದ್ಘಾತವನ್ನು ಉದ್ದರಿಸುವ ಸಲುವಾಗಿ ಕಾದಂಬರಿಯ ಹಸ್ತಪ್ರತಿಯನ್ನೂ ಕೈಗೆತ್ತಿಕೊಳ್ಳದೆ ಇರಲಿಲ್ಲ. ಕಾದಂಬರಿಯ ಪಾತ್ರಗಳೊಂದಿಗೆ ಅವರಿಬ್ಬರ ಅಸ್ಪಷ್ಟ ಮುಖಗಳು ಸಂಘರ್ಷವನ್ನಾರಂಭಿಸಿದ ಪರಿಣಾಮವಾಗಿ ಬರೆಯುವುದೂ ಸಾಧ್ಯವಾಗಲಿಲ್ಲ. ಒಂದು ಕಡೆ ನೆಮ್ಮದಿಯಿಂದ ಕೂಡ್ರುವುದಾಗಲೀ, ಒಂದು ಕಡೆ ನೆಮ್ಮದಿಯಿಂದ ನಿಲ್ಲುವುದಾಗಲೀ, ದಾರಿಹೋಕರನ್ನು ನಿಲ್ಲಿಸಿ ಉಭಯಕುಶಲೋಪರಿ ವಿಚಾರಿಸುವುದಾಗಲೀ, ಆರೋಗ್ಯಕರ ರೀತಿಯಲ್ಲಿ ಶ್ವಾಸೋಚ್ಛ್ವಾಸವನ್ನು ಆನಂದಿಸುವುದಾಗಲೀ, ವರ್ತಮಾನವನ್ನು ಅನುಭವಿಸುವುದಾಗಲೀ ಸಾಧ್ಯವಾಗಲಿಲ್ಲ. ಒಂದು ವಾರ ರಜೆ ಹಾಕಿ ಊರ ಕಡೆ ಹೊರಟು ತಂದೆಯ ಕಥೆಗಳ ಸಮಕ್ಷಮ ವಿರಾಜಮಾನಗೊಂಡರೆ ಹೇಗೆ ಎಂದೂ ಯೋಚಿಸಿದೆ. ವಾಗಿಲಿಯನ್ನು ಸೇರಿಕೊಂಡಷ್ಟು ಸುಲಭವಲ್ಲ ನನ್ನೂರನ್ನು ನಾನು ಸೇರಿಕೊಳ್ಳುವುದು! ಕರುಳ ಸಂಬಂಧೀ ವಿಚ್ಛೇಧಿತ ಭಾವನೆಗಳನ್ನು ಪುನಃ ಅನುಭವಿಸುವುದು! ಅಷ್ಟರಲ್ಲಿ ಅವನೇ ನಾನಿರುವಲ್ಲಿಗೆ ಬಂದನೋ! ನಾನೇ ಅವನನ್ನು ಕರೆದೆನೋ! ಸ್ವಲ್ಪ ಹೊತ್ತಿನಿಂದ ಊರ ಬೀದಿಯಲ್ಲಿ ಕಾಣಿಸಿಕೊಂಡಿರುವ ಊಹಾಪೋಹ ಕುರಿತಂತೆ ನಿವೇದಿಸು ಎಂದು ನಾನೇ ಕೇಳಿಕೊಂಡೆನೋ! ತಾನೇ ಸ್ವಗತ ರೀತಿಯಲ್ಲಿ ನಿವೇದಿಸಿಕೊಳ್ಳಲಾರಂಭಿಸಿದನೋ! ಆ ಮಾಹಿತಿಯನ್ನು ನಂಬಲಿಕ್ಕಾಗಲಿಲ್ಲ, ನಂಬದೆ ಇರಲಿಕ್ಕಾಗಲಿಲ್ಲ. ಒಂದು ಮಾಹಿತಿ ಪ್ರಕಾರ..

ಕಲಾವಿದೆ ಪದ್ಮಾವತಿ ಪ್ರಶಸ್ತಿ ಸ್ವೀಕರಿಸುವ ಸಲುವಾಗಿ ತನ್ನ ಸಹೋದರ ಜಲಂಧರಸಿಂಗ್ ಸಂಗಡ ಬೆಂಗಳೂರು ಕಡೆ ಪ್ರಯಾಣ ಬೆಳೆಸಿದ್ದು ಎಷ್ಟು ನಿಜವೋ ಅಲ್ಲಿ ಪ್ರಶಸ್ತಿ ಪ್ರಧಾನ ಸಮಾರಂಭ ನಡೆಯದಿದ್ದುದು ಅಷ್ಟೇ ನಿಜವಂತೆ! ಚೌಗಲೆ ಇಲ್ಲಿರುವಾಗಲೇ ವರಮಾನ ಇಲಾಖೆಯ ಅಧಿಕಾರಿಗಳು ಆತನ ಸ್ಥಿರಚರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡರಂತೆ! ಅಮಾಯಕ ರೀತಿಯಲ್ಲಿ ತಲುಪಿದ ಆತನನ್ನೂ ಬಂಧಿಸಿ ಕರೆದುಕೊಂಡು ಹೋದರಂತೆ! ಬಂಧನಕ್ಕೆ ಹೆಚ್ಚುವರಿ ಕಾರಣಗಳೂ ಇರುವವಂತೆ! ಇನ್ನೊಂದು ಮಾಹಿತಿ ಪ್ರಕಾರ ಸಮಾರಂಭ ನಡೆದದ್ದು ಎಷ್ಟು ನಿಜವೋ ನಗದು ಪ್ರಶಸ್ತಿ ಎಂಬುದು ಸಹ ಅಷ್ಟೇ ಸುಳ್ಳಂತೆ! ನಾವು ಪ್ರಧಾನ ಮಾಡಿದಂತೆ ನಟಿಸುವೆವು ನೀವು ಸ್ವೀಕರಿಸಿದಂತೆ ಅಭಿನಯಿಸಿರಿ ಎಂದು ಅವನಲ್ಲದೆ ಇನ್ಯಾರೋ ಅಂಗಲಾಚಿದರಂತೆ! ಪ್ರಶಸ್ತಿ ಪರುಸ್ಕೃತರು ಬರಿಗೈಯಲ್ಲಿ ಮರಳಿದರೆಂಬುದು ಅಪ್ಪಟ ಸತ್ಯವಂತೆ! ಮತ್ತೊಂದು ಮಾಹಿತಿಯಂತೆ ಅಲ್ಲಿ ನಗದು ರೂಪದಲ್ಲಿ ಪ್ರಶಸ್ತಿ ಪಡೆದಿರುವುದು ಎಷ್ಟು ಸತ್ಯವೋ ಅವರು ಅದನ್ನು ಅಲ್ಲಿನ ಬ್ಯಾಂಕಿನಲ್ಲಿ ಠೇವಣಿ ಇರಿಸಿರುವುದು ಅಷ್ಟೇ ಸತ್ಯವಂತೆ! ಅವರಿವರು ಸಾಲ ಕೈಗಡ ಕೇಳುವರೆಂಬ ಆತಂಕದಿಂದ, ದಾನಧರ್ಮ ಕೇಳಿಯಾರೆಂಬ ಮುನ್ನೆಚ್ಚರಿಕೆಯಿಂದ, ನಡೆಯಲಿರುವ ಮದುವೆಗೋ ವರದಕ್ಷಿಣೆ ಇತ್ಯಾದಿ ಖರ್ಚುಗಳಿಗೋ! ಇವುಗಳಲ್ಲಿ ಸತ್ಯವಿರಬಹುದು ಇಲ್ಲದಿರಬಹುದು. ಆದರೆ ಇನ್ನೊಂದು ಘಟನೆಯನ್ನು ಅಲ್ಲಗಳೆಯಲಿಕ್ಕಾಗದು. ಅದೆಂದರೆ ಮಧ್ಯಾಹ್ನದ ಸುರಿವ ಬಿಸಿಲಲ್ಲಿ ಜಲಂಧರ ತನ್ನ ಸಹೋದರಿಯ ಸಂಗಡ ಕ್ರಾಸಿನಲ್ಲಿ ಇಳಿಯುತ್ತಾರೆ, ನಿರ್ಮಾನುಷ ಸ್ಥಳ, ಮಾಸನೂರಿನ ಹಾದಿಬಡುಕರು ದೋಚುವ ಸಲುವಾಗಿ ಅವರನ್ನು ಮುತ್ತುತ್ತಾರೆ,

"ಅಯ್ಯೋ ತಾಯಿ ನೀನೇ ಏನಮ್ಮಾ ನಾವು ಯಾರೋ ಅಂದುಕೊಂಡಿದ್ದೆವು! ವೇಷಮರೆಮಾಚಿಕೊಂಡು ನೀವು ಆಡಿದ ನಾಟಕಗಳನ್ನು ನೋಡಿರುವೆವಮ್ಮಾ, ಕಿತ್ತೂರು

ಚೆನ್ನಮ್ಮ ಸದಾರಮೆ ನಾಟಕಗಳನ್ನು ನೋಡಿರುವೆವಮ್ಮಾ, ಸದಾರಮೆ ನಾಟಕದಲ್ಲಿನ ಕಳ್ಳನ ಪಾತ್ರ ಮಾಡಿದ್ದನಲ್ಲ! ಆತನೇನು ಈತ. ಕಳ್ಳನೆಂದರೆ ಥೇಟ್ ಕಳ್ಳನೇ ಸರಿ, ಈತ ನಿನ್ನ ಒಡಹುಟ್ಟಿದ ಅಣ್ಣನೆಂದರೆ ನಂಬಲಿಕ್ಕಾಗುತ್ತಿಲ್ಲ! ಅಂತೂ ನಿಮ್ಮಿಬ್ಬರ ದರ್ಶನ ಈ ರೀತಿ ಒದಗಿ ಬಂತಲ್ಲ, ಅಷ್ಟೇ ಸಾಕು" ಎಂದು ಹೇಳುತ್ತಾರೆ. ಅವರೇ ಇವರನ್ನು ಗ್ರಾಮದ ಗಡಿ ಮುಟ್ಟಿಸಿ ವಾಪಸ್ಸಾಗುತ್ತಾರೆ! ಶೇಷಣ್ಣ ಮೂಲಿಮನಿ ಗೌಡರು ಪೈಪೋಟಿಯಿಂದ ವರದಿ ಒಪ್ಪಿಸಿದರು. ಕವಿಯಾರೆ ಆಲಿಸಿದೆ, ಅವರ ನಿರೂಪಣೆಯಲ್ಲಿನ ಸೃಜನಶೀಲಗುಣಕ್ಕೆ ಬೆರಗಾದೆ.

ಆ ಕಥೆಗಳನ್ನು ವದಂತಿಗಳನ್ನು ತಾವೆಲ್ಲರೂ ಎಷ್ಟು ನಂಬಿದ್ದರೋ ನಂಬಿರಲಿಲ್ಲವೋ! ಅವುಗಳನ್ನು ಅವರು ಸಂತೋಷಿಸುತ್ತಿದ್ದರೋ ಇಲ್ಲವೋ!

++++

ಮಾರನೆ ದಿವಸ ಮಧ್ಯಾಹ್ನ ಜಲಂಧರ ಆಗಮಿಸಿದ. ಸಂಗಡ ಶೇಷಣ್ಣ ಸಹ ಇದ್ದ, ಆತನ ಮುಖದಲ್ಲಿ ಚಿಂತೆ ಮಡುಗಟ್ಟಿರುವುದನ್ನು ಗಮನಿಸಿದೆ, ಉಭಯಕುಶಲೋಪರಿಗೆ ಸಂಬಂಧಿಸಿದ ಮಾತುಗಳನ್ನು ಆಡಿದೆ, ಅಪ್ಪಿತಪ್ಪಿ ಏನು ನಡೆಯಿತು ಏನು ಬಿಟ್ಟಿತು ಎಂಬುದನ್ನು ಪ್ರಸ್ತಾಪಿಸುವ ಗೋಜಿಗೆ ಹೋಗಲಿಲ್ಲ, ತಮ್ಮ ಕಂಪನಿಯ ನಾಟಕಕ್ಕೆ ಸಂಬಂಧಿಸಿದಂಥ ಕರಪತ್ರಗಳ ಸುರುಳಿಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡಿದ್ದ, ಸ್ವಲ್ಪ ಹಿಂಜರಿಕೆಯಿಂದಲೇ ಅವುಗಳ ಪೈಕಿ ಒಂದೆರಡನ್ನು ನನ್ನ ಕಡೆ ಚಾಚುತ್ತ "ಸಾರ್ ಇದೇ ನಮ್ಮ ಕಂಪನಿಯ ಕೊನೆಯ ನಾಟಕ, ಇದು ಇಲ್ಲಿನ ಜನರಿಗೆ ಹಿಡಿಸಿದರೆ ಇನ್ನೂ ಕೆಲವು ದಿವಸ ಈ ಊರಲ್ಲಿರುವೆವು" ಎಂದು ಕ್ಷೀಣ ಸ್ವರದಲ್ಲಿ ಹೇಳಿದ.

ಅದನ್ನು ತೆರೆದು ನೋಡಿದೆ, ಹೇಮರೆಡ್ಡಿ ಮಲ್ಲಮ್ಮನ ಕಥೆ ಎಂದಿತ್ತು ಅದರಲ್ಲಿ. ಬಳಿಕ ದಿಟ್ಟಿಸಿ ನೋಡಿದೆ, ಆತನ ಮುಖದಲ್ಲಿ ಪ್ರಶ್ನೆಗಳೊಂದಿಗೆ ಉತ್ತರಗಳು ಸಹ ಇದ್ದವು. ಅಲ್ಲದೆ ಯಾವುದು ಅವಮಾನ, ಯಾವುದು ಅನುಮಾನ ಎಂಬ ಸಂದಿಗ್ಧತೆ ಸಹ ಇತ್ತು, ಕೀಳರಿಮೆ ಮೇಲರಿಮೆ ಹಾಸುಹೊಕ್ಕಾಗಿತ್ತು. ಕ್ಷಣಕ್ಷಣಕ್ಕೂಮ್ಮೊಮ್ಮೆ ನಿಟ್ಟುಸಿರುಬಿಡುತ್ತಿರುವುದನ್ನು ಗಮನಿಸಿದೆ, ಯಾವುದು ಸತ್ಯವೋ ಯಾವುದು ಸುಳ್ಳೋ! ಕೇಳಿ ತಿಳಿದುಕೊಳ್ಳುವ ಬಯಕೆ ಏನೋ ನನ್ನಲ್ಲಿತ್ತು, ಆದರೆ ಶುಶ್ರೂಷೆ ಮಾಡುವುದಾದರೆ ಮಾತ್ರ ಗಾಯಗಳನ್ನು ಕೆಣಕಬಹುದು! ವರ್ತಮಾನ ಸಮಾಜದಲ್ಲಿ ಗಾಯಗಳನ್ನು ಸೃಷ್ಟಿಸುವುದು ಸುಲಭ, ಆದರೆ ಅವುಗಳನ್ನು ವಾಸಿ ಮಾಡುವುದು ಕಷ್ಟ, ಏನೆಂದು ಕೇಳುವುದು! ಕೇಳಿದರೆ ಏನು ಪ್ರಯೋಜನ, ಕೇಳದಿದ್ದರೆ ಏನು ಪ್ರಯೋಜನ! ಯೋಚಿಸುತ್ತ ನಾನೂ ಮೌನವಹಿಸಿದೆ. ಅದುವರೆಗೆ ನಮ್ಮಿಬ್ಬರ ಮೌನವನ್ನು ಗಮನಿಸುತ್ತ ಸುಮ್ಮನಿದ್ದ ಶೇಷಣ್ಣನೇ..

"ಪಟ್ಟಣಗಳಲ್ಲಿರುವ ಮಂದಿಯನ್ನು ನಂಬಲೇಬಾರದು ಸಾರ್! ಮನೆ ಬಾಗಿಲಿಗೆ ಬಂದು ಕರೆದವರೂ ಅವರೆ ಇವರನ್ನು ಬರಿಗೈಯಲ್ಲಿ ಕಳಿಸಿದವರೂ ಅವರೆ! ಹೀಗೆ ಮಾಡಬಹುದೇ ಅವರು!" ಎಂದು ಸೂಚ್ಯವಾಗಿ ಪೀಠಿಕೆ ಹಾಕಿದ. ಅದಕ್ಕೆ ನಾನು ಏನಾದರೂ ಹೇಳುವುದೆಂದು ಯೋಚಿಸಿದೆ, ಅಷ್ಟರಲ್ಲಿ ಜಲಂಧರನೇ..

"ಪಾಪ ಅದರಲ್ಲಿ ನಿಮ್ಮ ಸ್ನೇಹಿತರದೇನೂ ತಪ್ಪಿಲ್ಲ ಸಾರ್, ನಾವು ಹೋದ ಹಿಂದಿನ ದಿವಸವೇ ಚೌಗಲೆ ಸಾಹೇಬರನ್ನು ಆರೆಸ್ಟ್ ಮಾಡಿ ಕರೆದೊಯ್ದಿದ್ದರಂತೆ, ಕಾರಣ ತಿಳಿಯಲಿಲ್ಲ, ಪತ್ರಿಕೆಗಳಲ್ಲಿ ಏನೇನೋ ಪ್ರಕಟಗೊಂಡಿತ್ತು. ದುಃಖದ ವಾರ್ತೆಗಳನ್ನು ಸಂಗಡ ಒಯ್ಯುವುದು

ಥರವಲ್ಲವೆಂದು ಯೋಚಿಸಿ ಅವುಗಳನ್ನು ಅಲ್ಲಿಯೇಬಿಟ್ಟೆವು, ಒಂದೆರಡು ತಿಂಗಳ ಮಟ್ಟಿಗೆ ಸಮಾರಂಭವನ್ನು ಮುಂದೆ ಹಾಕಿರುವುದಾಗಿ ಕೆಲವರು ಹೇಳಿದರು. ಚಕ್ರವರ್ತಿ ಸಾಹೇಬ ಬೇರೆ ಕಾಣಿಸಲಿಲ್ಲ. ಆ ಮಹಾನಗರದಲ್ಲಿ ಅವರನ್ನು ಎಲ್ಲೆಂದು ಹುಡುಕುವುದು! ಯಾರೋ ಪುಣ್ಯಾತ್ಮ ಐದು ನೂರು ರೂಪಾಯಿ ಕೊಟ್ಟರು ಸರಿಹೋಯಿತು, ಇಲ್ಲದಿದ್ದರೆ ನಮ್ಮನ್ನು ಆ ದೇವರೆ ಕಾಪಾಡಬೇಕಿತ್ತು" ಎನ್ನುತ್ತ ತನ್ನ ಕಣ್ಣುಗಳಲ್ಲಿ ನೀರು ತಂದುಕೊಂಡನು. ಕೇಳಿಸಿಕೊಂಡ ನನಗೂ ಕೆಟ್ಟೆನ್ನಿಸದೆ ಇರಲಿಲ್ಲ, ಪೋಲಿಸರಿಂದ ಬಂಧನಕ್ಕೊಳಗಾಗುವಂಥ ಅಪರಾಧವನ್ನು ಚೌಗಲೆ ಮಾಡಿರಬಹುದೆಂದು ಊಹಿಸುವುದು ನನಗೆ ಕಷ್ಟವೆನಿಸಿತು.

"ಜಲಂಧರ ಧೈರ್ಯ ತಂದುಕೋ! ಅದೊಂದು ದುಃಸ್ವಪ್ನವೆಂದು ಭಾವಿಸಿ ಮರೆತುಬಿಡು. ಹೇಗೋ ವಾಗಿಲಿಯಲ್ಲಿ ಹೇಮರೆಡ್ಡಿ ಮಲ್ಲಮ್ಮನ ನಾಟಕ ಆಡಲಿರುವಿ ತಾನೆ!" ಎಂದು ಹೇಳಿದಾದ ಬಳಿಕ ತುಸು ಯೋಚಿಸಿ ಬಳಿಕ "ಹ್ಹಾ! ಒಂದು ಮಾತು, ಎರಡು ಮೂರು ದಿವಸ ತಡವಾದರೂ ಚಿಂತಿಸಬೇಡ, ಲಿಂಗದಹಳ್ಳಿ ಗೆಜ್ಜೆಹಳ್ಳಿ ಕೂಡ್ಲೂರು ಹೆಬ್ಬಟಂ ನಾಗನಾಥನಹಳ್ಳಿಗಳಿಗೆ ನಿಮ್ಮವರನ್ನು ಕಳಿಸಿ ಪ್ರಚಾರ ನಡೆಸುವುದನ್ನು ಮಾತ್ರ ಮರೆಯಬೇಡ. ಕಾರಣ ಅಲ್ಲೆಲ್ಲ ಇರುವುದು ಹೇಮರೆಡ್ಡಿ ಮಲ್ಲಮ್ಮನ ಒಕ್ಕಲು. ಆ ಭಕ್ತಿರಸಪ್ರಧಾನ ನಾಟಕ ಹಿಡಿಸಿತೆಂದರೆ ಅವರ್ಯಾರೂ ನಿಮ್ಮನ್ನು ಕೈಬಿಡುವುದಿಲ್ಲ. ಆ ನಂಬಿಕೆ ನನಗಿದೆ" ಎಂದು ವ್ಯವಹಾರಿಕವಾಗಿ ಹೇಳಿದೆ.

ಅದುವರೆಗೆ ಸುಮ್ಮನಿದ್ದ ಶೇಷಣ್ಣನು "ಏಳೆಂಟು ವರ್ಷಗಳ ಹಿಂದೆ ಯಾವುದೋ ಒಂದು ಕಂಪನಿ ನಮ್ಮೂರಿಗೆ ಬಂದಿತ್ತಪ್ಪಾ, ಅವರು ಆರೇಳು ತಿಂಗಳುಗಳ ಕಾಲ ಹೇಮರೆಡ್ಡಿ ಮಲ್ಲಮ್ಮನ ಕಥೆ ಆಡಿ ಕೈತುಂಬ ರೊಕ್ಕ ಮಾಡಿಕೊಂಡು ಹೋದರು ಜಲಂಧರ, ಶ್ರೀಶೈಲ ಮಲ್ಲಿಕಾರ್ಜುನನ ಮೇಲೆ ಭಾರ ಹಾಕಿ ನಿಶ್ಚಿಂತೆಯಿಂದಿರು" ಎಂದೂ ಧನಿಗೂಡಿಸಿದ. ಅದಕ್ಕೆ ಆತನು ತನ್ನ ಮನಸ್ಸಿನಲ್ಲಿ ಶ್ರೀಶೈಲಗಿರಿಯನ್ನು ಸೃಷ್ಟಿಸಿಕೊಂಡು ಒಂದು ಕ್ಷಣ ಕಣ್ಣುಗಳನ್ನು ಮುಚ್ಚಿ ತೆರೆದು ನಿಡಿದಾದ ಉಸಿರುಬಿಟ್ಟನು. ಯಾವ ಮುಖ ಹೊತ್ತು ಅಲ್ಲೆಲ್ಲ ಪ್ರಚಾರಕ್ಕೆ ಹೊರಡುವುದೆಂದು ತಾನು ಯೋಚಿಸಿದನೇನೊ! ಅದನ್ನು ಅರ್ಥ ಮಾಡಿಕೊಂಡ ಶೇಷಣ್ಣನು.. "ಹೆದರಲಿಕ್ಕೆ ನೀನು ಮಾಡಿರುವ ತಪ್ಪಾದರೂ ಏನು ಜಲಂಧರ! ಮೋಸ ಮಾಡುವವರು ಹೆದರಬೇಕೇ ಹೊರತು ಮೋಸ ಹೋಗಿರುವ ನಿಮ್ಮಂಥವರು ಹೆದರಬಾರದು ಕಣಪ್ಪಾ. ಅಲ್ಲಿಗೆಲ್ಲ ನಾನು ನಿನ್ನ ಸಂಗಡ ಬರುವೆ ಯೋಚಿಸಬೇಡ" ಎಂದು ಧೈರ್ಯದ ಮಾತುಗಳನ್ನು ನುಡಿದನು.

ಅವರು ಅಲ್ಲಿಂದ ಹೊರಟ ಬಳಿಕ ಸುಮ್ಮನೆ ಕೂಡ್ರಲಿಲ್ಲ. ಹೇಮರೆಡ್ಡಿ ಮಲ್ಲಮ್ಮ ನಾಟಕಕ್ಕೆ ಸಂಬಂಧಿಸಿದಂತೆ ಕ್ರಿಯಾಶೀಲರಾದರೆಂದೇ ಊಹಿಸಿದೆ. ಒಂದು ಗುಣಾತ್ಮಕ ವಿಷಯವೆಂದರೆ ವಾಗಿಲಿ ಗ್ರಾಮದಾದ್ಯಂತ ಕಂಪನಿ ನಾಟಕ ಕಲಾವಿದರಿಗೆ ಸಂಬಂಧಿಸಿದಂತೆ ಅನುಕಂಪದ ಅಲೆ ಕಾಣಿಸಿಕೊಂಡಿತ್ತಷ್ಟೆ, ನಗರಗಳು ಮೋಸಗಾರರ ವಸಹಾತುಗಳು, ಅಲ್ಲಿರುವವರೆಲ್ಲ ಮೋಸಗಾರರು ಎಂಬ ಪೂರ್ವಾಗ್ರಹ ಅದಕ್ಕೆ ಕಾರಣ. ಮಹಿಳೆಯರು ಮಹಡಿ ಏರಿ ಪದ್ಮಾವತಿಗೆ ಧೈರ್ಯ ಹೇಳುವುದು, ಚಿಕ್ಕಪುಟ್ಟ ಸಹಾಯ ಮಾಡುವುದು ಸಾಮಾನ್ಯ ದೃಶ್ಯವಾಗಿತ್ತು ಬೇರೆ. ಆ ಅನುಕಂಪದ ಶಿಖರಕ್ಕೆ ಕಳಸವಿರಿಸಿದಂತೆ ಕಂಪನಿಯವರು ಅಭಿನಯಿಸಲಿರುವುದು ಮಹಾಸಾಧ್ವಿ ಮಲ್ಲಮ್ಮನ ಕಥೆ, ಶ್ರೀಶೈಲಮಲ್ಲಿಕಾರ್ಜುನನ ಪವಾಡಗಳನ್ನು ಸಾರುವ ಕಥೆ, ಜನರು ಸಹಾಯ ಮಾಡದೆ ಸುಮ್ಮನಿದ್ದಾರೆಯೆ!

ವಾಗಿಲಿಯ ಗೋಡೆಗಳ ಮೇಲೆ ಭಿತ್ತಿಪತ್ರಗಳು ರಾರಾಜಿಸಲಾರಂಭಿಸಿದವು. ಅಂದ ಮೇಲೆ ಇನ್ನಿತರ ಗ್ರಾಮಗಳ ಗೋಡೆಗಳ ಮೇಲೆ ರಾರಾಜಿಸದೆ ಇರಲು ಸಾಧ್ಯವೆ! ಅವನ್ನೆಲ್ಲ ಓದಿ ಅರ್ಥ ಮಾಡಿಕೊಳ್ಳುವುದು ಎಲ್ಲರಿಗೆ ಹೇಗೆ ಸಾಧ್ಯವಾಗುವುದು! ನಮ್ಮ ಶಾಲೆಯ ನಾಲ್ಕು ಮತ್ತು ಐದನೆ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ಮಕ್ಕಳು ಭಿತ್ತಿಪತ್ರಗಳನ್ನು ಓದುವುದು, ಅವುಗಳಲ್ಲಿ ಒಕ್ಕಣಿಕೆಯನ್ನು ತಮ್ಮದೇ ಭಾಷೆಯಲ್ಲಿ ತರ್ಜುಮೆ ಮಾಡಿ ಆ ಕಥೆಯನ್ನು ತಮ್ಮದೇ ಆದ ರೀತಿಯಲಿ ವಿಸ್ತರಿಸಿ ವಿವರಿಸಿ ಹೇಳುವುದು ಸಾಮಾನ್ಯ ದೃಶ್ಯವಾಯಿತು. ಕಲಾವಿದರು ಕೈಗೊಂಡ ಪ್ರಚಾರ ಕಾರ್ಯಕ್ಕೆ ವಾಹನ ಸಾರ್ಥಗಳ ಸೌಕರ್ಯ ಮನಗಂಡು ಗ್ರಾಮದ ಅಗಸರು ತಮ್ಮ ಕೇರಿಗಳಲ್ಲಿನ ನಿರುದ್ಯೋಗಿ ಗಾರ್ದಭಗಳನ್ನು ಒದಗಿಸಿದರೆ ಗೊಲ್ಲರೀರಯ್ಯ ಯಾದವರ ಭೋಜಪ್ಪ ತಮ್ಮ ಬಂಡಿ ಎತ್ತುಗಳನ್ನು ಸಾರಥಿಗಳ ಸಹಿತ ಒದಗಿಸಿದರು. ಅವರೊಂದೇ ಅಲ್ಲದೆ ಅಮೃತಾಂಜನ ಲಕ್ಷ್ಮೀರೆಡ್ಡಿ, ಮೂಲಿಮನಿ ಗೌಡರು ಪ್ರಚಾರ ಕಾರ್ಯಗಳಲ್ಲಿ ತೊಡಗಿದವರಿಗೆ ಬೀಡಿ ಚಹ ಸರಬರಾಜು ಮಾಡಲಾರಂಭಿಸಿದರು. ಆ ಪ್ರಚಾರ ಕಾರ್ಯದಲ್ಲಿ ನಾನೂ ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷ ರೀತಿಯಲ್ಲಿ ಭಾಗಿಯಾಗಿದ್ದೆನು, ಕೇಳುತ್ತಿದ್ದವರಿಗೆ ಕೇಳದೆ ಇರುತ್ತಿದ್ದವರಿಗೆಲ್ಲ ಕಂಪನಿಯ ಕಲಾವಿದರ ಅಭಿಜಾತ ಪ್ರತಿಭೆ ಕುರಿತಂತೆ, ಹೇಮರೆಡ್ಡಿ ನಾಟಕದ ವೈಶಿಷ್ಟ್ಯಗಳ ಕುರಿತಂತೆ ಉತ್ಪ್ರೇಕ್ಷೆಯಿಂದ ಹೇಳದೆ ಇರಲಿಲ್ಲ.

ನನ್ನ ಹಳೆಯ ವಿದ್ಯಾರ್ಥಿನಿ ವರಲಕ್ಷ್ಮಿಯ ಸೀಮಂತಿನಿ ಕಾರ್ಯವನ್ನು ಸಾಲಗುಂದಿ ರೆಡ್ಡಿಯವರು ಅದ್ಧೂರಿಯಾಗಿ ತಮ್ಮ ಮನೆಯಲ್ಲಿ ಆ ಮಧ್ಯಾಹ್ನವೇ ಹಮ್ಮಿಕೊಂಡಿದ್ದರು. ತಮ್ಮ ಆಪ್ತೇಷ್ಟರೊಂದೇ ಅಲ್ಲದೆ ಕಂಪನಿಯ ಕಲಾವಿದರನ್ನೂ ನನ್ನನ್ನೂ ಊಟಕ್ಕೆ ಹಿಂದಿನ ದಿವಸವೇ ಆಹ್ವಾನಿಸಿದ್ದರು. ಪುನಃ ಕರೆದೊಡನೆ ಹೋಗದೆ ಇರಲಾಗಲಿಲ್ಲ. ಧಾವಿಸಿ ಊಟ ಮಾಡಿ ಬರುವುದಕ್ಕೂ ಬೀದಿಯ ಮೂಲೆಯಲ್ಲಿ ಕಾಣಿಸಿಕೊಂಡ ರಾಘಪ್ಪಸ್ವಾಮಿಯವರ ಮಗ ತ್ರಯಂಭಕ ಹಿಂಜರಿಕೆಯಿಂದಲೇ ಬಂದು ಫೋನ್ ಬಂದಿರುವುದಾಗಿ ಹೇಳುವುದಕ್ಕೂ ಸರಿ ಹೋಯಿತು. ಲುಂಗಿಯೊಡನೆ ಹೊರಟೆ ಅಲ್ಲಿಂದ ಬಂದಿರಬಹುದೆ ಇಲ್ಲಿಂದ ಬಂದಿರಬಹುದೆ ಎಂದು ಯೋಚಿಸುತ್ತ. ಇಕ್ಕೆಲದಲ್ಲಿ ಗಗನಚುಂಬಿ ಮನೆಗಳ ಗೋಡೆಗಳಿದ್ದವು. ಭಿತ್ತಿಪತ್ರದಲ್ಲಿದ್ದ ಶ್ರೀಶೈಲಮಲ್ಲಿಕಾರ್ಜುನನ್ನು ತಿನ್ನಲು ಹೊಂಚಿದ್ದ ಕತ್ತೆಯೊಂದನ್ನು ಓಡಿಸಿದ ಅಪ್ಪಾರಿ ನನ್ನ ಕಡೆ ನೋಡಿ ಮುಗುಳ್ನಕ್ಕನು. ಅವನ ಕಡೆ ಅಭಿಮಾನಪೂರ್ವಕವಾಗಿ ನೋಡಿದಾದ ಬಳಿಕ ಸಾಗಿ ಸ್ವಾಮಿಯ ಮನೆಯನ್ನು ತಲುಪಿದೆ. ನನ್ನ ಪುಣ್ಯಕ್ಕೆ ಅಲ್ಲಿ ಇಸ್ಪೀಟಾಡುವವರು ಇರಲಿಲ್ಲ. ಅವತ್ತು ಏಕಾದಶಿ ಎಂದು ಬಳಿಕ ತಿಳಿಯಿತು.

ಅಂಗಾತವಿರಿಸಿದ್ದ ರಿಸೀವರನ್ನು ಎತ್ತಿಕೊಳ್ಳುವಾಗ ಸಹಜವಾಗಿ ಬಲಗೈ ಕಂಪಿಸಿತು. ಆಶ್ಚರ್ಯವೆಂದರೆ ಆ ಕಡೆಯ ಬೆಂಗಳೂರಿನಿಂದ ಹಲೋ ಎಂದು ಪಲಕರಿಸಿದ್ದು ಚೌಗಲೆ! ರಾಜಕಾರಣದ ಪಿತೂರಿಯಿಂದಾಗಿ ತನ್ನನ್ನು ಪೋಲಿಸರು ಬಂಧಿಸಿದರೆಂದೂ, ಬೆಳಿಗ್ಗೆ ಜಾಮೀನು ಪಡೆದು ತಾನು ಹೊರ ಬಂದಿರುವುದಾಗಿಯೂ ಹೇಳಿದ. ಅದಕ್ಕೆ ಪ್ರತಿಯಾಗಿ ಏನು ಹೇಳುವುದೆಂದು ಹೊಳೆಯಲಿಲ್ಲ. ಇದು ನಡೆಯಬಾರದಿತ್ತು ಎಂದು ಮಾತ್ರ ಹೇಳಲು ಸಾಧ್ಯವಾಯಿತು. ನನ್ನ ಪ್ರಶ್ನಾರ್ಥಕ ಮಾತನ್ನು ತಾನು ಅಪಾರ್ಥ ಮಾಡಿಕೊಂಡನೇನೊ! ಗದ್ಗದಿತನಾದ, ಬಿಕ್ಕಳಿಸಿದ, ಕ್ಷಮೆ ಯಾಚಿಸಿದ, ತಾನು ಬರೆಯಲಿರುವ ಪತ್ರದ ಸಾರಾಂಶ ವಿವರಿಸಲಾರಂಭಿಸಿದ. ತನ್ನ ನಿರೂಪಣೆಯಲ್ಲಿ ಎರಡು ಮೂರು ಭಾಷೆಗಳನ್ನು ಸಮ್ಮಿಶ್ರ ಮಾಡಿದ್ದಕ್ಕೋ, ದುಃಖದಲ್ಲಿ ಆತ್ಮವಿಶ್ವಾಸ ಮೇಳೈಸಿದ್ದರಿಂದಾಗಿಯೋ, ಉಪಗ್ರಹಕ್ಕೂ

ಭೂಮಿಗೂ ನಡುವೆ ಇದ್ದ ವಾತಾವರಣದ ಅಡಚಣೆಯಿಂದಾಗಿಯೋ, ಟೆಲಿಫೋನ್ ಎಕ್ಸ್‌ಛೇಂಜ್ ನೌಕರರ ಬೇಜವಾಬ್ದಾರಿತನದಿಂದಾಗಿಯೋ ಆತನ ಧ್ವನಿ ಅಸ್ಪಷ್ಟಗೊಳ್ಳಲಾರಂಭಿಸಿ ಗಳಿಗೆಗಳು ಉರುಳಿದಂತೆ ಕ್ರಮೇಣ ಸ್ಥಗಿತಗೊಂಡಿತು. ಪುನಃ ನಾನೇ ಟ್ರಂಕ್‌ಕಾಲ್ ಬುಕ್ ಮಾಡಿ ಕಾದೆನಾದರೂ ಲೈನ್ ದೊರಕಲಿಲ್ಲ. ವಿಚಾರಿಸಿದ್ದಕ್ಕೆ ಆದವಾನಿಯಲ್ಲಿದ್ದ ಎಕ್ಸ್‌ಛೇಂಜಿನ ಕಡೆಯವರು ಯಾರೋ ಎಲ್ಲೋ ಕಾಣಿಸಿಕೊಂಡಿರುವ ಬಿರುಗಾಳಿ ಕಡೆಗೆ ಬೆರಳು ಮಾಡಿ ತೋರಿಸಿದರು, ಜೊತೆಗೆ ರಾತ್ರಿ ಹತ್ತರ ನಂತರ ಪ್ರಯತ್ನಿಸುವಂತೆ ಸಲಹೆ ನೀಡಿದರು. ಗೆಳೆಯ ಚೌಗಲೆಯನ್ನೂ ಆತನ ಮಾತುಗಳನ್ನೂ ಎದೆಯೊಳಗೆ ತುಂಬಿಕೊಂಡು ಮನೆ ಕಡೆ ಹೆಜ್ಜೆ ಹಾಕಿದೆ.

ಚೌಗಲೆಯ ಅಸಹಾಯಕತೆಯನ್ನು ಜಲಂಧರನ ಎದುರು ವಿವರಿಸುವ ಸಲುವಾಗಿ ಅದಕ್ಕೆ ಸಂಬಂಧಿಸಿದ ಪರಿಭಾಷೆಯನ್ನು ರೂಢಿಸಿಕೊಳ್ಳುತ್ತ ಮನೆಯನ್ನು ಸಮೀಪಿಸಿದೆ. ಮುಚ್ಚಿದ್ದ ಕದಗಳ ಕಿಂಡಿಯಲ್ಲಿ ಮುಖ ತೂರಿಸಿ ತನ್ನ ಘ್ರಾಣೇಂದ್ರಿಯನ್ನು ಚುರುಕುಗೊಳಿಸಿದ್ದ ಬೀದಿ ನಾಯಿ ಕಡೆ ಎಸೆಯುವ ಸಲುವಾಗಿ ತುಂಡುಕಲ್ಲು ಕಡೆಗೆ ಹಾಯಿಸಿದ ದೃಷ್ಟಿಯನ್ನೇ ಕ್ರಮೇಣ ಮಹಡಿ ಮನೆ ಕಡೆ ತಿರುಗಿಸಿ ಪರಿಶೀಲಿಸಿದೆ. ಇಬ್ಬರು ಕೆಳಗಿನಿಂದ ಮೇಲಕ್ಕೆ ಏರುತ್ತಿದ್ದರೆ ಮುವ್ವರು ಮೇಲಿಂದ ಕೆಳಕ್ಕೆ ಇಳಿಯುತ್ತಿದ್ದರು. ಪುಷ್ಕಳ ಕೇಶವಿನ್ಯಾಸದಿಂದಾಗಿ, ಭ್ರೂಮಧ್ಯೆ ಇದ್ದ ತಿಲಕಗಳಿಂದಾಗಿ, ಮುಖಗಳನ್ನು ಆವರಿಸಿದ್ದ ನೀಳನಾಸಿಕಗಳಿಂದಾಗಿ, ನೋಡಿಯೂ ನನ್ನನ್ನು ಗುರುತಿಸದ ಕಾರಣದಿಂದಾಗಿ ಅವರು ಅಪರಿಚಿತ ಕಲಾವಿದರಿರಬಹುದೆಂದು ಭಾವಿಸಿದೆ. ಪ್ರಚಾರ ಕಾರ್ಯದಿಂದ ದೂರ ಉಳಿದು ಮನೆಯಲ್ಲಿರಬಹುದಾದ ಪದ್ಮಾವತಿಯನ್ನು ಭೆಟ್ಟಿ ಮಾಡಿ ಚೌಗಲೆ ನನ್ನೊಂದಿಗೆ ಹಂಚಿಕೊಂಡ ಮಾತುಕತೆಯನ್ನು ಹೇಳಿದರೆ ಹೇಗೆ ಎಂದೂ ಯೋಚಿಸಿದೆ. ಹೇಳಲಿಕ್ಕಾಗಲೀ ಕೇಳಲಿಕ್ಕಾಗಲೀ ಆಕೆಗಿಂತ ಆತನೇ ಸೂಕ್ತ ಎಂದು ಭಾವಿಸಿ ನೋಡಿದೊಡನೆ ನಾಯಿ ತನ್ನ ಮುಖವನ್ನು ಬಾಗಿಲ ಸಂಧಿಯಿಂದ ಉಪಸಂಹರಿಸಿಕೊಂಡು ಬಾಲವನ್ನು ತನ್ನ ಹಿಂಗಾಲುಗಳ ನಡುವೆ ಮರೆ ಮಾಚಿಕೊಳ್ಳುತ್ತ ಹೋಗಿ ಮೂಲಿಮನಿ ಗೌಡರ ಆಳೆತ್ತರದ ಕಟ್ಟೆ ಮೇಲೆ ಅಜೇಯ ರೀತಿಯಲ್ಲಿ ನಿಂತಿತು.

++++

ಆ ದಿವಸ ಶಾಲೆಗೆ ಹೋದೆ. ಅಲ್ಲೊಂದು ವಿಚಿತ್ರ ಕಾದಿತ್ತು, ಅದೆಂದರೆ ಬೇವಿನಮರದ ಕಟ್ಟೆಯ ಮೇಲೆ ಕೃತಕ ಲಿಂಗವನ್ನು ಪ್ರತಿಷ್ಠಾಪಿಸಲಾಗಿತ್ತಲ್ಲದೆ ಆದರ ಮೇಲೆ ವರ್ತುಳ ರೀತಿಯಲ್ಲಿ 'ಸ್ರೀಸೈಲ ಮೊಲ್ಲಿಖಾರ್ಜನ ಪ್ರೆಶೆನ್ನ' ಎಂಬ ಶಬ್ದಗಳನ್ನು ಪಾರದರ್ಶಕ ಬ್ಯಾಗಡಿಗಳನ್ನು ಉಪಯೋಗಿಸಿ ಕೆತ್ತಿ ಅಲಂಕರಿಸಲಾಗಿತ್ತು. ನೋಡು ನೋಡುತ್ತಿದ್ದಂತೆಯೇ ಮೇಲ್ಗಿರಿ ತಿಮ್ಮನ ಔರಸಪುತ್ರ ನರಸ ಯಾವುದೋ ಸ್ತ್ರೀ ಆಕಾರದ ಗೊಂಬೆಯನ್ನು ಹೊತ್ತು ತಂದು ಅದರೆದುರಿಗೆ ಇರಿಸಿದ, ಕೇಳಿದವರಿಗೆ ಏಮ್ರೆಡ್ಡಿ ಮೊಲ್ಲಮ್ಮ ಎಂದು ಪರಿಚಯಿಸಿದ. ರಾಘಪ್ಪಸ್ವಾಮಿ ಮನೆಗೆ ಇಸಪೀಟ್ ಆಡಲು ಹೋಗಿದ್ದ ಪಂಪಯ್ಯ ತನ್ನ ಮನೆ ಕಡೆ ಇದ್ದ ಹೊರಳು ದಾರಿಯಿಂದ ತಕ್ಷಣ ಹಿಂತಿರುಗಿ ನೋಡಿದ, ತನಗೆ ಏನನ್ನಿಸಿತೋ ಏನೋ ಮೆಲ್ಲಗೆ ಹತ್ತಿರ ಬಂದು ತದೇಕ ಚಿತ್ತದಿಂದ ನೋಡುತ್ತ ತನ್ನ ಬಲಗೈಯ ತೋರು ಬೆರಳನ್ನು ಗದ್ದದ ಮೇಲಿರಿಸಿಕೊಂಡು ಯೋಚಿಸಿದ, ಒಂದು ಕ್ಷಣ ಕಣ್ಣು ಮುಚ್ಚಿ ತೆರೆದ, ತನಗೆ ಏನು ತೋಚಿತೋ! ಕೂಡಲೆ ಮನೆಗೆ ಧಾವಿಸಿ ಕಣ್ಮರೆಯಾದ, ಐದು ನಿಮಿಷ ಕಳೆಯುವಷ್ಟರಲ್ಲಿ

ಸ್ನಾನ ಮುಗಿಸಿ ಸೊಂಟದ ಕೆಳಗೆ ತುಂಡು ಕೆಂಪುವಸ್ತ್ರ ಧರಿಸಿ ಪೂಜಾ ಸಾಮಾಗ್ರಿಗಳೊಡನೆ ಆಗಮಿಸಿದ. ಹತ್ತಾರು ಶಾಲಾ ಮಕ್ಕಳ ಸಮಕ್ಷಮದಲ್ಲಿ ಪೂಜೆ ಮುಗಿಸಿ ಗಂಟೆ ಭಾರಿಸಿದ. ಅದಕ್ಕಿಂತ ಮಿಗಿಲಾಗಿ ಏರು ದನಿಯಲ್ಲಿ ಬ್ರಹ್ಮಮುರಾರಿ ಸುರಾರ್ಚಿತಲಿಂಗಂ ಎಂಬ ಲಿಂಗಾಷ್ಟಕ ಮಂತ್ರವನ್ನು ಹೇಳಲಾರಂಭಿಸಿದ. ಅದಕ್ಕೆ ತನ್ನ ಮಗ ಧ್ವನಿಗೂಡಿಸದೆ ಇರಲಿಲ್ಲ. ಆ ಸದ್ದು ಊರಿನ ನಲ್ಮೂಲೆಗಳಿಗೆ ಹರಡಿ ಪ್ರತಿಧ್ವನಿಸಿತು. ಲಿಂಗದ ಎದುರು ಹಚ್ಚಿದ ಅಗರಬತ್ತಿಯ ಪರಿಮಳ ನಿಧನಿಧಾನವಾಗಿ ಓಣಿ ದಾಟಿ ಊರನ್ನೆಲ್ಲ ವ್ಯಾಪಿಸಿತು. ಎಲ್ಲರನ್ನೂ ಆ ಕಡೆ ಇಣುಕುವಂತೆ ಮಾಡಿತು.

ಅದರ ಅರ್ಚಕ ಸ್ಥಾನದಲ್ಲಿ ಪಂಪಯ್ಯ ತನ್ನ ಅಂಗವಿಕಲ ಮಗ ಶಂಕರಯ್ಯನನ್ನು ನೇಮಕ ಮಾಡಿದನೆಂದರೆ ಕೇಳುವುದೇನಿದೆ! ಆ ಪೂಜೆಯಿಂದ ಉತ್ತೇಜಿತರಾದ ಶಾಲಾ ಮಕ್ಕಳು ಬರುವ ಮತ್ತು ಹೋಗುವ ಪೂರ್ವದಲ್ಲಿ ಅದಕ್ಕೆ ನಮಸ್ಕರಿಸತೊಡಗಿದ ಮೇಲೆ ಕೇಳುವುದೇನಿದೆ! ತಿಪ್ಪಾರೆಡ್ಡಿಯವರ ಪತ್ನಿ ಅಲುಮೇಲಮ್ಮ ತನ್ನ ಅವಿವಾಹಿತ ಮಲಮಗಳು ರತ್ನಳ ಸಂಗಡ ಮಡಿಯುಡಿಯಿಂದ ಮನೆಯಿಂದ ಹೊರಗೆ ಕಾಣಿಸಿಕೊಂಡು ಆ ಸ್ಥಾವರಕ್ಕೆ ಪೂಜೆ ಸಲ್ಲಿಸಿದಳೆಂದರೆ ಕೇಳುವುದೇನಿದೆ! ಸೋಮವಾರ ಬೇರೆ, ಶ್ರೀಶೈಲಮಲ್ಲಿಕಾರ್ಜುನನ ದಿನ ಬೇರೆ, ಅಲ್ಲಿರುವ ಬಹುಸಂಖ್ಯಾತರು ಆತನ ಒಕ್ಕಲು ಬೇರೆ. ಅಲ್ಲದೆ ಶೈವ ಧರ್ಮಕ್ಕೆ ಸಂಬಂಧಿಸಿದಂತೆ ಗ್ರಾಮದಲ್ಲಿ ಒಂದಾದರೂ ಶಿವ ದೇವಾಲಯವಿರಲಿಲ್ಲವೆಂದೇನೋ ಅಲ್ಲ, ಇತ್ತು. ಆದರೆ ಅದು ಭೂಸುಧಾರಣಾ ಕಾಯಿದೆಗೆ ಬಲಿಯಾಗಿ ಸ್ಥಳಾಂತರಗೊಳ್ಳುತ್ತ ಸಾಗಿ ಹೊಲೆಯರ ಕೇರಿಯ ಕಟ್ಟಕಡೆಯ ಮೂಲೆಯನ್ನು ಸೇರಿಕೊಂಡಿರುವುದು. ಸವರ್ಣೀಯರು ಅದರಲ್ಲೂ ಭೂಸ್ವಾಮಿ ಕುಟುಂಬದ ಸದಸ್ಯರು ಅಲ್ಲಿಗೆಲ್ಲ ಹೋಗಲಾದೀತೆ! ಈ ಕಾರಣದಿಂದಾಗಿಯೇ ಬೇವಿನಮರದ ಬುಡ ಶ್ರೀಶೈಲದ ಪ್ರಭಾವಳಿ ಮುಡಿದುಕೊಂಡಿತು. ಅದರ ಪೂರ್ವಾಪರ ಏನೇ ಇರಲಿ, ಒಬ್ಬರ ಹಿಂದೆ ಒಬ್ಬರಂತೆ ಅಲ್ಲಿಗೆ ಆಗಮಿಸಿ ಪೂಜೆ ಸಲ್ಲಿಸಲಾರಂಭಿಸಿದರು. ಮಲ್ಲಿಕಾರ್ಜುನ ಎಂಬ ಹೂವಿನೊಂದಿಗೆ ಮಲ್ಲಮ್ಮ ಎಂಬ ನಾರೂ ಸ್ವರ್ಗದ ಕಡೆ ಆರೋಹಣ ಕೈಗೊಳ್ಳದೆ ಇರಲಿಲ್ಲ. ನಾನು ನೀರೀಕ್ಷಿಸಿದಂತೆ ಕಂಪನಿ ಅಭಿನಯಿಸಲಿರುವ ಹೇಮರೆಡ್ಡಿ ಮಲ್ಲಮ್ಮನ ಕಥೆಗೂ ಅದು ಸಶಕ್ತ ಭೂಮಿಕೆಯನ್ನು ಒದಗಿಸಿತು.

ಕಂಪನಿಯ ಮಾಲಕ ಜಲಂಧರ ಚಾಣಾಕ್ಷನೋ ಊರವರು ಚಾಣಾಕ್ಷರೋ ಮುಗ್ದರೋ! ಒಟ್ಟಿನಲ್ಲಿ ಆ ದಿವಸ ಮಧ್ಯಾಹ್ನ ಕಳೆದ ಬಳಿಕ ಶ್ರೀಶೈಲಮಲ್ಲಿಕಾರ್ಜುನ ಲಿಂಗವನ್ನೂ ಮಲ್ಲಮ್ಮನ ಕಾಲ್ಪನಿಕ ಚಿತ್ರವನ್ನೂ ಗ್ರಾಮದ ಮುಖ್ಯಬೀದಿಗಳಲ್ಲಿ ಬ್ಯಾಂಡುಭಜಂತ್ರಿ ಸಹಿತ ಅದ್ಧೂರಿ ರೀತಿಯಲ್ಲಿ ಮೆರವಣಿಗೆ ಮಾಡಲಾಯಿತು. ಸಂಜೆಯಾಗುತ್ತಿದ್ದಂತೆ ಲಿಂಗದಹಳ್ಳಿ ಕಡೆಯಿಂದ ಶ್ರೀಶೈಲರೆಡ್ಡಿಯವರು ತಮ್ಮ ಅಪಾರ ಸಂಗಡಿಗರೊಂದಿಗೆ ಆಗಮಿಸಿದರೆ ಗೆಜ್ಜೆಹಳ್ಳಿಯಿಂದ ಹೇಮರೆಡ್ಡಿಯವರು ತಮ್ಮ ಅಪಾರ ಕುಟುಂಬ ಸದಸ್ಯರೊಂದಿಗೆ ಆಗಮಿಸಿದರು. ಇನ್ನು ಕೂಡ್ಲೂರು ಕಡೆಯಿಂದ ಅವರೂ ಹೊಳಗುಂದಿ ಕಡೆಯಿಂದ ಇವರೂ ಆಗಮಿಸಿದರೆಂದರೆ ಕೇಳುವುದೇನಿದೆ! ತಮ್ಮ ಪಾಕನಾಟಿ ಕುಲಬಾಂಧವರನ್ನು ಲಿಂಗಾರೆಡ್ಡಿ ರಾಮಿರೆಡ್ಡಿಗಳು ತಮ್ಮ ತಮ್ಮ ಮನೆಗಳಿಗೆ ಕರೆದೊಯ್ದರೆ ತಮ್ಮ ಮೋಟಾಟಿ ಕುಲಬಾಂಧವರನ್ನು ರಾಘವರೆಡ್ಡಿ ಶಿವಾರೆಡ್ಡಿಗಳು ತಮ್ಮ ತಮ್ಮ ಮನೆಗಳಿಗೆ ಕರೆದೊಯ್ಯದೆ ಇರಲಿಲ್ಲ. ಅತ್ತ ಪಾಕನಾಟಿಯೂ ಅಲ್ಲದ ಇತ್ತ ಮೋಟಾಟಿಯೂ ಅಲ್ಲದ ಕೆಲವು ರೆಡ್ಡಿ ಕುಲಬಾಂಧವರನ್ನು ಪ್ರಹ್ಲಾದರೆಡ್ಡಿ ತಿಮ್ಮಾರೆಡ್ಡಿಗಳು ತಮ್ಮ ತಮ್ಮ ಮನೆಗಳಿಗೆ ಕರೆದೊಯ್ದರು ಉಪಚರಿಸುವ ಸಲುವಾಗಿ. ಆದರೆ ಯಾವಾಗ

ಹೆಬ್ಬಟಂ ಸೀತಾರಾಮಿರೆಡ್ಡಿಯವರು ವಿರಾಜಮಾನರಾಗಿರುವ ಸಾರೋಟಿನ ದಡಕೂಬಡಕೂ ಸದ್ದೂ ಮತ್ತು ಅದಕ್ಕೆ ಹೂಡಿದ್ದ ಕುದುರೆಗಳ ಖಿರಪುಟದ ಸದ್ದೂ ಕೇಳಿಸಿತೋ! ಅಲ್ಲಲ್ಲಿ ಹರಿದುಹಂಚಿ ಹೋಗಿದ್ದ ಸಮಸ್ತ ರೆಡ್ಡಿ ಕುಲಬಾಂಧವರೆಲ್ಲ ಅವರ ಉಪ್ಪರಿಗೆ ಮನೆ ಕಡೆ ದೌಡಾಯಿಸಿದರು. ಎಷ್ಟೋ ಹೊತ್ತಿನವರೆಗೆ ಅವರೆಲ್ಲ ಗಟ್ಟಿಯಾಗಿ ನಗುವುದು ಜೋರಾಗಿ ಮಾತನಾಡುವುದೆಲ್ಲವೂ ನಾವಿದ್ದ ಶಾಲೆವರೆಗೆ ಕೇಳಿಸುತ್ತಲೇ ಇತ್ತು.

ರಾತ್ರಿಯಾದೊಡನೆ ಸಮಸ್ತ ಊರೆಲ್ಲವೂ ದೀಪಾವಳಿ ಎಂಬಂತೆ ಕಂಗೊಳಿಸಿತು. ಎಲ್ಲಿ ನೋಡಿದರೂ ಸ್ಥಳೀಯರೊಂದಿಗೆ ಪರಸ್ಥಳವದವರೂ ತುಂಬಿತುಳುಕಿದರು. ನನ್ನ ಕಾದಂಬರಿಗಿಂತ ಹೇಮರೆಡ್ಡಿ ಮಲ್ಲಮ್ಮ ನಾಟಕಕ್ಕಿಂತ ಊರ ಸಂಭ್ರಮಕ್ಕಿಂತ ಜಲಂಧರ ಉತ್ತರೋತ್ತರವಾಗಿ ಯಶಸ್ವಿಯಾಗುವುದು ಮುಖ್ಯವಾಗಿತ್ತು. ಕರೆ ಬಂದೊಡನೆ ನಾನೂ ಹೋಗದೆ ಇರಲಾಗಲಿಲ್ಲ. ಅಗತ್ಯಕ್ಕಿಂತ ವಿಶೇಷವಾಗಿ ಅಲಂಕರಿಸಿಕೊಂಡು ಹೊರಟೆ. ಪೆಟ್ರೋಮ್ಯಾಕ್ಸ್ ಬೆಳಕಿನಲ್ಲಿ ಕೈಬೀಸಿ ಕರೆದ ವ್ಯಕ್ತಿ ಹೆಬ್ಬಟಂ ಗೌಡರೆಂದು ಅವರ ಕೈಬೆರಳುಗಳಿಗಿದ್ದ ವಜ್ರದುಂಗುರಗಳು ಚೆಲ್ಲಿದ ಬೆಳಕಿನಿಂದ ಅರ್ಥ ಮಾಡಿಕೊಂಡೆ. ಅರೆಬರೆ ಮೇಕಪ್ ಮಾಡಿಕೊಂಡಿದ್ದ ಜಲಂಧರ ಧಾವಿಸಿ ಬಂದವನೆ ನನ್ನ ಮುಂಗೈ ಹಿಡಿದು ವೇದಿಕೆ ಬಳಿಗೆ ಕರೆದೊಯ್ದನು. ಕಣ್ಣಾಯಿಸಿದೆ, ಹಳೆಯ ಕಲಾವಿದರುಗಳ ನಡುವೆ ಕೆಲ ಅತಿಥಿ ಕಲಾವಿದರೂ ಇದ್ದರು. ಅವರ ಪೈಕಿ ಹಾರ್ಮೋನಿಯಂ ಮಾಸ್ಟರ್ ಕರೂರು ತಿಮ್ಮಪ್ಪ, ತಬಲಾವಾದಕ ದಾರದ ಪಂಪಣ್ಣ, ನೇಪಥ್ಯ ಸಂಗೀತಗಾರ ಓಬಳೇಶುರಂಥವರು ತಮ್ಮ ಕಣ್ಸನ್ನೆ ಮತ್ತು ಕೈಯಾಡಿಸುವುದರ ಮೂಲಕ ನಮಸ್ಕಾರಗಳ ವಿನಿಮಯ ನಡೆಸಿದರು. ಹೇಮರೆಡ್ಡಿ ಪಾತ್ರಕ್ಕೆ ಹೆಸರಾಗಿದ್ದ ಅಂಬಳಿ ಬಸಯ್ಯನವರನ್ನು ಕಮತಗಿ ಕಂಪನಿಯಿಂದಲೂ, ಭರಮರೆಡ್ಡಿ ಪಾತ್ರಕ್ಕೆ ಹೆಸರಾಗಿದ್ದ ಮಾರುತಿ ಪುಳೆಯವರನ್ನು ಕಲಾವಿಲಾಸ ಕಂಪನಿಯಿಂದಲೂ, ಶ್ರೀಶೈಲಮಲ್ಲಿಕಾರ್ಜುನ ಪಾತ್ರಕ್ಕೆ ಹೆಸರಾಗಿದ್ದ ಫಕ್ರುದ್ದೀನ್ ಸಾಹೇಬರನ್ನು ಅರಿಷಣಗೋಡಿ ಕಂಪನಿಯಿಂದಲೂ, ಸೂಳೆ ಪಾತ್ರಕ್ಕೆ ಹೆಸರಾಗಿದ್ದ ಎರ್ರಂಗಳಿ ಶಿವಣ್ಣನವರನ್ನು ಗವಾಯಿ ಕಂಪನಿಯಿಂದಲೂ ಜಲಂಧರನು ಬರಮಾಡಿಕೊಂಡಿದ್ದುದು ವಿಶೇಷವೆನಿಸಿತು. ಉಳಿದಂತೆ ಸೂಗೀರ ನಾಗಮ್ಮ ಧರಮರೆಡ್ಡಿ ಮಾದೇವಿಯಂಥ ಪೋಷಕ ಪಾತ್ರಗಳನ್ನು ಸ್ಥಳೀಯ ಕಂಪನಿಯ ಕಲಾವಿದರೇ ಹಂಚಿಕೊಂಡಿದ್ದರು. ನಾಟಕಕ್ಕೆ ಹೇಗೆ ಚಾಲನೆ ದೊರೆಯಿತೆಂದರೆ..

ಯಾರು ಸೂಚಿಸಿದರೇನೊ, ಹೆಬ್ಬಟಂ ಗೌಡರ ನೇತೃತ್ವದಲ್ಲಿ ಗುಂಪೊಂದು ಬೇವಿನಮರದ ಕಡೆ ಹೊರಟಿತು. ಅಲ್ಲಿದ್ದ ಹದಿಹರೆಯದ ಶ್ರೀಶೈಲಮಲ್ಲಿಕಾರ್ಜುನ ಲಿಂಗಕ್ಕೆ ವಿದ್ಯುಕ್ತ ರೀತಿಯಲ್ಲಿ ಪೂಜೆ ನಿರ್ವಹಿಸಿತು. ಅಲ್ಲಿಂದ ಮರಳಿ ಲಿಂಗವನ್ನು ಸಾಂಕೇತಿಕವಾಗಿ ವೇದಿಕೆ ಮೇಲೆ ಪ್ರತಿಷ್ಠಾಪಿಸಲಾಯಿತು. ಎಂದಿನಂತೆ ಧ್ವನಿವರ್ಧಕದ ಸಮಕ್ಷಮ ವಿನಯಪೂರ್ವಕವಾಗಿ ನಿಂತು ಜಲಂಧರನು ನಾಟಕದ ವಿಶೇಷತೆಯನ್ನು ಸೂಚ್ಯವಾಗಿಯೂ ಮಾರ್ಮಿಕವಾಗಿಯೂ ವಿವರಿಸಿದನು. ಅತಿಥಿ ಕಲಾವಿದರನ್ನು ಒಬ್ಬೊಬ್ಬರನ್ನಾಗಿ ನೇಪಥ್ಯದಿಂದ ಬರಮಾಡಿಕೊಂಡು ಪ್ರೇಕ್ಷಕರಿಗೂ ಗಣ್ಯರಿಗೂ ಪರಿಚಯಿಸಿದನು. ಇಂದ್ರಲೋಕದ ಅಪ್ಸರೆಯೇ ಸೂಳೆ ಪಾತ್ರದಲ್ಲಿರುವಳೇನೋ ಎಂಬಂತೆ ಗೋಚರಿಸಿದ ವ್ಯಕ್ತಿ ಪುರುಷ ಎಂದು ತಿಳಿದೊಡನೆ ಹರ್ಷೋದ್ಗಾರ ಮುಗಿಲು ಮುಟ್ಟದೆ ಇರಲಿಲ್ಲ. ಬಳಿಕ ಔಪಚಾರಿಕವಾಗಿ ಮಾತಾಡುವ ಸರದಿ.

ಧ್ವನಿವರ್ಧಕದೆದುರು ನಿಂತ ಹೆಬ್ಬಟಂ ಗೌಡರು ಒಂದು ಕ್ಷಣ ಹೈದರಾಬಾದಿನ ಚಂಚಲಗೂಡ ಜೈಲಿನಲ್ಲಿರು ತಮ್ಮ ಪ್ರೀತಿಯ ಮಗ ಸೂರ್ಯಪ್ರತಾಪರೆಡ್ಡಿಯನ್ನು

ನೆನಪು ಮಾಡಿಕೊಂಡು ಗದ್ಗದಿತರಾದರು, ಆವೇಶದಿಂದ ಒಂದು ದವಡೆಗೆ ಇನ್ನೊಂದು ದವಡೆಯನ್ನು ಮಸೆದರು, ಕಣ್ಣಲ್ಲಿ ನೀರು ತಂದುಕೊಂಡರು. ಬಳಿಕ ರೇಶ್ಮೆ ಉತ್ತರೀಯದಿಂದ ಒರೆಸಿಕೊಳ್ಳುತ್ತ ಚೇತರಿಸಿಕೊಂಡರು. ಬೆಂಗಳೂರಿನವರು ಮೋಸ ಮಾಡಬಹುದು, ಹೈದರಾಬಾದಿನಲ್ಲಿರುವವರು ಮೋಸ ಮಾಡಬಹುದು, ಆದರೆ ಶ್ರೀಶೈಲಮಲ್ಲಿಕಾರ್ಜುನಸ್ವಾಮಿ ಮೋಸ ಮಾಡಲಾರ ಎಂದರು. ಲಕ್ಷ ಸಂಗ್ರಹವಾಗುವವರೆಗೆ ಮಲ್ಲಮ್ಮನ ಕಥೆಯನ್ನು ನೋಡಿ ಪುನೀತರಾಗಬೇಕೆಂದು ಪ್ರೇಕ್ಷಕರಿಗೆ ಕರೆ ನೀಡಿದರು. ತಮ್ಮ ನಿಲುವಂಗಿಯ ಜೇಬೊಳಗಿಂದ ಒಂದು ಹಿಡಿ ನೋಟುಗಳನ್ನು ತೆಗೆದು ಪ್ರದರ್ಶಿಸಿ ಮಲ್ಲಮ್ಮನ ವೇಷದಲ್ಲಿದ್ದ ಪದ್ಮಾವತಿಯ ಬೊಗಸೆಗೆ ಹಾಕುತ್ತ ಧೈರ್ಯವಾಗಿರು ಮಗಳೆ ನಾವಿದ್ದೇವೆ ಎಂದು ಹೇಳಿದ್ದು ಕೇಳಿ ನಮ್ಮೆಲ್ಲರಿಗೂ ಪರಮಾಶ್ಚರ್ಯವಾಯಿತು, ಅದರಿಂದ ಸ್ಫೂರ್ತರಾದ ಲಿಂಗದಹಳ್ಳಿ ಕೂಡ್ಲೂರು ಗೆಜ್ಜೆಹಳ್ಳಿ ಕಡೆಯಿಂದ ಬಂದಿದ್ದ ಗೌಡರು ಸುಮ್ಮನಿದ್ದರೆ ತಾನೆ! ಕೇಸುಖಟ್ಲೆಗಳ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ವಕೀಲರ ಮೇಲೆ ಸೇಡು ತೀರಿಸಿಕೊಳ್ಳುವ ಸಲುವಾಗಿಯೋ, ಪ್ರಥಮ ದರ್ಜೆಯ ಗುತ್ತಿಗೆದಾರರಾದ ತಾವು ಹೈದರಾಬಾದು ಬೆಂಗಳೂರುಗಳಲ್ಲಿದ್ದ ಲೋಕೋಪಯೋಗಿ ಇಲಾಖೆಗಳ ಮೇಲಿನ ಕೋಪವನ್ನು ತೀರಿಸಿಕೊಳ್ಳುವ ಸಲುವಾಗಿಯೋ, ಪ್ರಭಾವಿ ವ್ಯಕ್ತಿಗಳೆಂದೇ ಬಿಂಬಿಸಲ್ಪಟ್ಟಿದ್ದ ಹೆಬ್ಬಟಂ ಗೌಡರಿಂದ ಸೈ ಅನ್ನಿಸಿಕೊಳ್ಳುವ ಸಲುವಾಗಿಯೋ, ಆ ಶಿವಶರಣೆ ಮಲ್ಲಮ್ಮತಾಯಿಯ ಕೃಪಾಶೀರ್ವಾದ ಪಡೆಯುವ ಸಲುವಾಗಿಯೋ, ಮುಂಬರುವ ಸಾರ್ವತ್ರಿಕ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಮತದಾರರ ಗಮನ ಸೆಳೆಯುವ ಸಲುವಾಗಿಯೋ, ತಮ್ಮ ತಮ್ಮ ಜಮೀನ್ದಾರಿಕೆಯ ಗತ್ತನ್ನು ತೋರ್ಪಡಿಸಿಕೊಳ್ಳುವ ಸಲುವಾಗಿಯೋ ತಮ್ಮ ತಮ್ಮ ಜೇಬುಗಳಲ್ಲಿಂದ ಸಿಕ್ಕಷ್ಟನ್ನು ತೆಗೆದು ಕೊಡುವುದರ ಮೂಲಕ ನಮ್ಮೆಲ್ಲರನ್ನು ಇನ್ನಷ್ಟು ದಿಗ್ಭ್ರಮೆಗೊಳಿಸಿದರು. ಒಳ್ಳೆಯ ನಾಲ್ಕು ಮಾತುಗಳನ್ನು ಹೊರತುಪಡಿಸಿದರೆ ನನ್ನಲ್ಲಿ ಕೊಡಲು ಏನಿರುವುದು! ನಾನು ನನ್ನ ಭಾಷಣದಲ್ಲಿ ಚೌಗಲೆ ಫೋನಿನ ಸಂಭಾಷಣೆಯನ್ನು ಸೂಚ್ಯವಾಗಿ ವಿವರಿಸಿದೆ, ಬಳಿಕ ಕಷ್ಟಗಳು ಮನುಷ್ಯರಿಗೆ ಬಾರದೆ ಮರಗಳಿಗೆ ಬರುವುದು ಸಾಧ್ಯವೆ ಎಂದು ಹೇಳಿ ನನ್ನ ಮಾತನ್ನು ಮುಕ್ತಾಯಗೊಳಿಸಿದೆನು. ಬಳಿಕ ಜಲಂಧರನು ಕಣ್ಣೀರನ್ನು ಕಪಾಳಕ್ಕೆ ತಂದುಕೊಂಡು ಅವರಿಗೆಲ್ಲ ಕೃತಜ್ಞತೆಗಳನ್ನು ಅರ್ಪಿಸಿದನು. ಅದಾದ ಬಳಿಕ ಅತಿಥಿಗಳು ನಿರ್ಗಮಿಸಿ ತಮಗಾಗಿ ಕಾಯ್ದಿರಿಸಿದ್ದ ಆಸನಗಳಲ್ಲಿ ವಿರಾಜಮಾನರಾದರು.

ಸೋಮರೆಡ್ಡಿ ಮನೆಯ ದೃಶ್ಯವಿದ್ದ ತೆರೆ ನಿಧಾನವಾಗಿ ವೇದಿಕೆ ಮೇಲೆ ಅನಾವರಣಗೊಂಡಿತು. ಅದರ ಮುಂದೆ ಕಲಾವಿದರೆಲ್ಲ ಅಂಜಲೀಬದ್ಧರಾಗಿ ಸಾಲುಸಾಲಾಗಿ ನಿಂತರು, ಕರೂರು ತಿಮ್ಮಪ್ಪ ಭೂಪ ರಾಗ ಆಡಾ ಚೌತಾಳದಲ್ಲಿ ಹಾರ್ಮೋನಿಯಂ ನುಡಿಸಲಾರಂಭಿಸಿದ, ಎಲ್ಲರೂ ಒಕ್ಕೊರಲಿನಿಂದಲೂ ಸುಶ್ರಾವ್ಯವಾಗಿಯೂ "ಶುಭಕರ ಶಿವ ಮಲ್ಲಿಕಾರ್ಜುನ। ಘನ। ಶ್ರೀಶೈಲನಾಥ ಪೊರೆಯೋ ವರದಾತ ಶಾಂತಮನಾ' ಎಂದು ಆರಂಭಿಸಿದರು. ಆಗ ನಾನು ಅದರ ಕರ್ತೃ ನಲವಡಿ ಶ್ರೀಕಂಠಶಾಸ್ತ್ರಿಗಳ ಸಾಹಿತ್ಯದ ಶ್ರೀಮಂತಿಕೆಯನ್ನೂ ಅನುಭವಿಸಿದ ಬಡತನದ ಬವಣೆಯನ್ನೂ ನಾಟಕದ ಬದಲಾದ ಪ್ರತಿಯೊಂದೂ ದೃಶ್ಯದೊಂದಿಗೆ ತಾಳೆ ಹಾಕುತ್ತ ಕಣ್ಣುಗಳನ್ನು ತೇವ ಮಾಡಿಕೊಳ್ಳುತ್ತ ಆನಂದಿಸಿದೆನು. ಮಲ್ಲಮ್ಮನ ಪಾತ್ರದಲ್ಲಿ ತನ್ನ ಮನೋಜ್ಞ ಅಭಿನಯದಿಂದಾಗಿ ಪದ್ಮಾವತಿ ಪ್ರೇಕ್ಷಕರ ಮನಸ್ಸನ್ನು ಎಷ್ಟೊಂದು ಸೂರೆಗೊಂಡಳೆಂದರೆ ಅಷ್ಟು ಸೂರೆಗೊಂಡಳು. ಆಕೆ ಅಭಿಜಾತ ಕಲಾವಿದೆ ಮಾತ್ರವಲ್ಲ ಅಪೂರ್ವ ಸುಂದರಿ ಎಂದು ನನಗೆ ಮನವರಿಕೆಯಾದದ್ದು ಆ ನಾಟಕವನ್ನು ನೋಡಿದ ಮೇಲೆಯೆ! ಆಕೆಯನ್ನು ಯಾರಾದರೂ

ಮೋಹಿಸಿದರೇನು ಗತಿ ಎಂದು ಯೋಚಿಸಿದೊಡನೆ ಒಂದು ಕ್ಷಣ ನನಗೆ ಭಯವಾಗದೆ ಇರಲಿಲ್ಲ.

++++

ಜಲಂಧರ ಚಾಣಾಕ್ಷನಲ್ಲದಿದ್ದಲ್ಲಿ ಹೇಮರೆಡ್ಡಿ ಮಲ್ಲಮ್ಮ ನಾಟಕವನ್ನು ಅದ್ಧೂರಿಯಾಗಿಸುತ್ತಿರಲಿಲ್ಲ. ಆ ನಾಟಕದ ಪ್ರಮುಖ ಪಾತ್ರಗಳಿಗೆ ಪರಿಣಿತ ಕಲಾವಿದರನ್ನು ಬೇರೆ ಬೇರೆ ಕಡೆಯಿಂದ ಕರೆ ತಂದದ್ದು ಅದಕ್ಕೆ ಕಾರಣ. ಅವರ ಪೈಕಿ ಭರಮರೆಡ್ಡಿ ಹೇಮರೆಡ್ಡಿ ಪಾತ್ರಧಾರಿಗಳು ಪೈಪೋಟಿ ಮೇಲೆ ತಮ್ಮ ತಮ್ಮ ಕಲಾ ನೈಪುಣ್ಯತೆಯನ್ನು ಮರೆದರು. ಹಾರ್ಮೋನಿಯಂ ಮಾಸ್ಟರ್ ಕರೂರು ತಿಮ್ಮಪ್ಪನೂ ಅಷ್ಟೆ, ನೇಪಥ್ಯ ಗಾಯಕರೂ ಅಷ್ಟೆ.

ಈ ನಾಟಕದಿಂದಾಗಿ ವಾಗಿಲಿ ಪ್ರೇಕ್ಷಣೀಯ ಪ್ರಭಾವಳಿಯನ್ನು ಧರಿಸಿಕೊಂಡಿತು. ದಿನಗಳೆದಂತೆ ಸುತ್ತಮುತ್ತಲ ಊರುಗಳಿಂದ ಜನರು ಬಂಡಿಬಡಗೋಲುಗಳನ್ನು ಕಟ್ಟಿಕೊಂಡು ವಾಗಿಲಿಗೆ ಬರಲಾರಂಭಿಸಿದರು. ಟಿಕೆಟ್ ಖರೀದಿಸುವ ಪೂರ್ವದಲ್ಲಿ ಬೇವಿನಮರದ ಆಶ್ರಯದಲ್ಲಿ ನೆಲೆಗೊಂಡಿದ್ದ ಮಲ್ಲಿಕಾರ್ಜುನ ಲಿಂಗಕ್ಕೆ ಪೂಜೆ ಸಲ್ಲಿಸುವುದನ್ನು ಮರೆಯುತ್ತಿರಲಿಲ್ಲ. ಪ್ರೇಕ್ಷಕರ ಭಕ್ತಿಯನ್ನು ಸೂರೆಗೊಳ್ಳುವ ಸಲುವಾಗಿ ಪಂಪಯ್ಯ ಮಾಡಿದ ಘನಕಾರ್ಯ ಶ್ಲಾಘನೀಯವಾದುದೇ ಸರಿ.

ಆ ದಿವಸ ವಾಗಿಲಿಯ ಗಣ್ಯರು ಊರ ಅಗಸೆ ಬಾಗಿಲ ಇಕ್ಕೆಲದ ಕಟ್ಟೆಗಳ ಮೇಲೆ ಮುಖ ಅಭಿಮುಖವಾಗಿ ಕುಳಿತು ಪರಸ್ಪರ ಉಭಯಕುಶಲೋಪರಿಗೆ ತೊಡಗಿದ್ದರು. ಅವರು ಆಗೊಮ್ಮೆ ಈಗೊಮ್ಮೆ ಬೇವಿನಮರದ ಬುಡದಲ್ಲಿ ನೆಲಗೊಂಡಿದ್ದ ಶ್ರೀಶೈಲಮಲ್ಲಿಕಾರ್ಜುನ ಕಡೆ ವ್ಹಾರೆ ನೋಟ ಬೀರುತ್ತಿದ್ದರು. ಎಂದಿನಂತೆ ಗೋಚರಿಸಿದ ಪಂಪಯ್ಯನು ತನ್ನ ಸೊಂಟದ ಸುತ್ತ ಕೆಂಪುವಸ್ತ್ರ ಧರಿಸಿದ್ದನು, ಅಲ್ಲದೆ ತನ್ನ ದೇಹದ ವಿವಿಧ ಭಾಗಗಳ ಮೇಲೆ ಅಗತ್ಯಕ್ಕಿಂತ ಹೆಚ್ಚು ವಿಭೂತಿ ಮುದ್ರೆಗಳನ್ನು ಎಳೆದಿದ್ದನು. ಪಕ್ಕೆಲುಬುಗಳು ಎದ್ದು ಕಾಣುತ್ತಿದ್ದ ಹೃದಯ ಸ್ಥಾನದಲ್ಲಿ ತನ್ನಷ್ಟೇ ತೂಕದ ಲಿಂಗದಕಾಯಿ ಮಿರಮಿರನೆ ಮಿಂಚುತ್ತಿತ್ತು. ಸಾಮಾಗ್ರಿಗಳೊಂದಿಗೆ ಬೇವಿನಮರದ ಕಡೆ ಸಾಗಿ ಪೂಜಾಕಾರ್ಯ ನೆರವೇರಿಸಿದ, ಸಮ್ಮಿಶ್ರ ಮಂತ್ರಗಳನ್ನು ಪುಷ್ಕಳ ರೀತಿಯಲ್ಲಿ ಪಠಿಸಿದ, ಗಂಟೆಯನ್ನು ಹೆಚ್ಚು ಕಾಲ ಮೊಳಗಿಸಿದ. ಗಣ್ಯರು ಊರ ಪ್ರಮುಖರು ಕೇಳಿಸಿಕೊಂಡಿರಬಹುದು ಎಂದು ಯೋಚಿಸುತ್ತ ಅಗಸೆ ಬಾಗಿಲನ್ನು ಸಮೀಪಿಸಿದ. ಅವರೆಲ್ಲರೆದುರು ವಿನೀತ ಭಂಗಿಯಲ್ಲಿ ನಿಂತ, ಅವರೆಲ್ಲರ ಕಡೆ ಹೃದಯವಿದ್ರಾವಕ ಎಂಬಂತೆ ನೋಡಿದ. ಏನು ವಿಶೇಷ ಸ್ವಾಮಿ ಎಂದು ತಿಪ್ಪಾರೆಡ್ಡಿ ಕೇಳಿದ್ದಕ್ಕೆ ನಿಡಿದಾದ ಉಸಿರು ಚೆಲ್ಲಿದ, ಆ ಭಗವಂತನ ಲೀಲೆ ಬಲ್ಲವರಿಲ್ಲ ಗೌಡ ಎಂದು ಪ್ರವರ ಆರಂಭಿಸಿದ.

"ನಿಮ್ಮಂಥ ದೊಡ್ಡವರೆದುರು ಏನು ಹೇಳುವುದೆಂದು ತಿಳಿಯುತ್ತಿಲ್ಲ, ರಾತ್ರಿ ಇಂಥದ್ದೊಂದು ಕನಸು ಬೀಳಬಹುದೆಂದು ಕನಸುಮನಸಿನಲ್ಲೂ ಯೋಚಿಸಿರಲಿಲ್ಲ ಗೌಡರೆ. ಅದು ನನಗೆ ಮಾತ್ರ ಸಂಬಂಧಿಸಿದ್ದಲ್ಲ, ಊರಿಗೆ ಸಂಬಂಧಿಸಿದ್ದು. ಆದ್ದರಿಂದ ಹೇಳುವುದು ನನ್ನ ಧರ್ಮ ಕೇಳುವುದು ನಿಮ್ಮ ಧರ್ಮ ಗೌಡರೆ. ಅದೇನೆಂದರೆ ನಾನು ಮಡಿಯುಡಿಯಿಂದ ಬೇವಿಮರದ ಕಟ್ಟೆ ಮೇಲೆ ಕುಳಿತಿದ್ದೆ, ಈಶಾನ್ಯ ದಿಕ್ಕಿನಿಂದ ಅಪರಿಚಿತ ವೃದ್ಧನೊಬ್ಬ ನನ್ನ ಎದುರು ನಿಂತ, ಮಗನೇ ಎಂದ, ನೋಡಿದೆ. ಹಣ್ಣು ಹಣ್ಣು ಮುದುಕ, ತಲೆ ತುಂಬೆಲ್ಲ ಮಾರುದ್ದ ಕೂದಲು, ಮೈ ತುಂಬೆಲ್ಲಾ ವಿಭೂತಿ ಪಟ್ಟೆಗಳು, ಕೊರಳ ತುಂಬೆಲ್ಲಾ ರುದ್ರಾಕ್ಷಿ

ಸರಗಳು, ಕೈಯಲ್ಲಿ ಊರುಗೋಲು. ಯಾರು ತಾತ ನೀನು ಎಂದು ಕೇಳಿದೆ, ಅದಕ್ಕೆ ತಾನು ನಾನು ಕಣಪ್ಪಾ ಶ್ರೀಶೈಲ ಮಲ್ಲಯ್ಯ ಎಂದ, ಕೇಳಿದೊಡನೆ ಕೈಜೋಡಿಸಿ ನಮಸ್ಕಾರ ಮಾಡಿದೆ. ಅಪ್ಪಣೆ ಕೊಡು ತಂದೆಯೇ ಎಂದು ಕೇಳಿದೆ, ಅದಕ್ಕೆ ಆ ಪರಶಿವನು ಈ ಪ್ರಕಾರ ಅಪ್ಪಣೆ ಕೊಡಿಸಿದ, ನನ್ನ ಶಿಶು ಮಕ್ಕಳಿಂದ ತುಂಬಿರುವ ಈ ವಾಗಿಲಿಯಲ್ಲಿ ನಾನು ನೆಲೆಗೊಂಡು ಸಾವಿರಾರು ವರ್ಷ ಕಳೆದಿರುವವು, ಹೊಲಗೇರಿಯಲ್ಲಿ ಅನಾಥ ರೀತಿಯಲ್ಲಿ ಬಿದ್ದಿರುವ ನನಗೆ ಪೂಜೆ ಇಲ್ಲ ಪುನಸ್ಕಾರವಿಲ್ಲ ಮಗನೆ. ನನ್ನನ್ನು ಹೊಲೆಗೇರಿಯಿಂದ ಬಿಡುಗಡೆ ಮಾಡಿ ಊರು ತುಂಬಿಸಿಕೊಳ್ಳುವಿರೋ ಇಲ್ಲವೋ! ನನ್ನ ಶಿಶುಮಕ್ಕಳಿಗೆ ನೀನೇ ಬುದ್ದಿವಾದ ಹೇಳಬೇಕು, ಇಲ್ಲದಿದ್ದಲ್ಲಿ ನನ್ನ ದಾರಿಯನ್ನು ನಾನು ನೋಡಿಕೊಳ್ಳುವೆ ಎಂದು ಹೇಳಿದಂತಾಯಿತು ಗೌಡರೆ, ಅದಕ್ಕೆ ನಾನು ಸ್ವಾಮಿ ಇಷ್ಟು ವರ್ಷಗಳ ಕಾಲ ಹೊಲಗೇರಿಯಲ್ಲಿದ್ದ ತಮಗೆ ನಮ್ಮ ನೆನಪು ಬರಲಿಲ್ಲವೇನು ಎಂದು ಕೇಳಿದೆ, ಅದಕ್ಕೆ ಆ ಸ್ವಾಮಿಯು ಹೇಮರೆಡ್ಡಿ ಮಲ್ಲಮ್ಮ ನಾಟಕವೇ ಕಾರಣ ಎಂದು ಹೇಳಿದಂತಾಯಿತು ಗೌಡರೆ, ಹೊಲಗೇರಿಯಲ್ಲಿರುವ ಲಿಂಗವನ್ನು ಊರೊಳಗೆ ವಿದ್ಯುಕ್ತ ರೀತಿಯಲ್ಲಿ ಪ್ರತಿಷ್ಠಾಪನೆ ಮಾಡಿದರೆ ಊರಿಗೆ ಕ್ಷೇಮ, ಕನಸು ಕಂಡಿರುವ ನನಗೂ ಕ್ಷೇಮ, ಮುಂದೇನು ಮಾಡಬೇಕೆಂಬುದನ್ನು ನೀವೇ ಯೋಚಿಸಿ" ಎಂದು ತನ್ನ ಕನಸಿನ ಸಾರಾಂಶವನ್ನು ಅತಿರಂಜಕ ರೀತಿಯಲ್ಲಿ ವಿವರಿಸಿದನು.

ಪಂಪಯ್ಯ ಕಂಡ ಕನಸು ಸುಳ್ಳೋ ನಿಜವೋ! ಆದರೆ ಹೊಲಗೇರಿಯ ಕಟ್ಟಕಡೆಯಲ್ಲಿ ಅನಾಥ ರೀತಿಯಲ್ಲಿರುವ ಲಿಂಗಕ್ಕೆ ತನ್ನದೇ ಆದ ಇತಿಹಾಸವಿರುವುದು. ಸರಿಸುಮಾರು ಎರಡು ಮೂರು ಮಣ ತೂಕವಿರುವ ಅದು ವಾಗಿಲಿ ಗ್ರಾಮದ ಇತಿಹಾಸದಷ್ಟೆ ಪೂರ್ವದ್ದು. ಗ್ರಾಮದ ಹೊರವಲಯದಲ್ಲಿ ಶ್ರೀಶೈಲಮಲ್ಲಿಕಾರ್ಜುನ ಗುಡಿ ಸಣ್ಣಪ್ರಮಾಣದಲ್ಲಿತ್ತು. ಒತ್ತುವರಿ ಅತಿಕ್ರಮಣ ಅನಾಕ್ರಮಣಕ್ಕೆ ತುತ್ತಾಗಿ ಇದ್ದೊಂದು ಗುಡಿಯೂ ಕ್ರಮೇಣ ನಾಶಗೊಳ್ಳದೆ ಇರಲಿಲ್ಲ. ಯಾವಾಗ ಅದಿದ್ದ ಭೂಪ್ರದೇಶ ಉಚ್ಚಾಟಿತ ಕಂಡಕ್ಟರ್ ಓಬಲೇಸುವಿನ ಚಿತಾವಣೆಯಿಂದಾಗಿ ಹೊಲೆಯರ ನಿವೇಶನಗಳ ಪಾಲಾಯಿತೋ ಆ ದಿವಸದಿಂದ ಲಿಂಗ ವಲಸೆ ಹೋಗೀ ಹೋಗಿ ಈಗಿರುವ ಜಾಗವನ್ನು ತಲುಪಿತು. ತಮ್ಮ ಕೇರಿಯಲ್ಲಿರುವುದೆಂದ ಮಾತ್ರಕ್ಕೆ ಹೊಲೆಯರೇನು ಅದಕ್ಕೆ ಕಡಿಮೆ ಮಾಡಿಲ್ಲ, ಅದನ್ನೇನು ಉಪವಾಸವಿಟ್ಟಿಲ್ಲ. ತಮ್ಮ ಎಂಜಲು ಹಳಸು ಆಹಾರದ ಒಂದು ಭಾಗವನ್ನು ಅದರೆದುರಿಗೆ ಇರಿಸುವುದನ್ನು ಮರೆತಿಲ್ಲ, ಕೇರಿಯ ದೇಹಶಾಸ್ತ್ರತಜ್ಞರೆಂದೇ ಖ್ಯಾತರಾಗಿರುವ ಠೊಣ್ಣಿ ಡೋಮ ಉಪ್ಪಳಿ ಕತ್ತಲರೇ ಮೊದಲಾದವರು ಅದರ ಸಮಕ್ಷಮದಲ್ಲಿಯೇ ಇಹಲೋಕ ವ್ಯಾಪಾರ ಮುಗಿಸಿದ ಚತುಷ್ಪಾದಿಗಳನ್ನು ಕೊಯ್ದು ಚರ್ಮವನ್ನು ಬೇರ್ಪಡಿಸುತ್ತಿರುವರು, ತಂಗಳು ಮಾಂಸವನ್ನು ತಮ್ಮ ಕೇರಿಯ ಮನೆಗಳಿಗೆಲ್ಲ ವಿತರಿಸುವುದನ್ನು ರೂಢಿ ಮಾಡಿಕೊಂಡಿರುವರು, ವಾರಕ್ಕೊಂದು ಸಲುವೋ ಹದಿನೈದು ದಿವಸಕ್ಕೊಂದು ಸಲವೋ ಸ್ನಾನ ಮಾಡುತ್ತಿದ್ದ ಕೆಲವರು ಅದರೆದುರು ಕೈಮುಗಿದು ನಿಂತು ಸ್ವಾಮಿ ನಮ್ಮಪ್ಪನೇ ಕಾಪಾಡು ಎಂದು ಬೇಡಿಕೊಳ್ಳುತ್ತಿರುವರು, ಅಭಿಜಾತ ಮೌಖಿಕ ಗಾಯಕಿಯರಾದ ಸವ್ವಾರೆವ್ವ ತಿಂದವ್ವ ಉಡುಸಲವ್ವರು ಅದರೆದುರು ಮಟ್ಟಸ ರೀತಿಯಲ್ಲಿ ಕುಳಿತು ತಮ್ಮ ಗಾಯನ ಸೇವೆಯನ್ನು ನೆರವೇರಿಸುತ್ತಿರುವರು, ಪಡಸಲ ಕೆಮ್ಮ ಗೂರಲ ದಮ್ಮಜ್ಜರೇ ಮೊದಲಾದ ಕೇರಿಯ ಶತಾಯುಷಿಗಳು ಅದನ್ನೇ ತಲೆದಿಂಬನ್ನಾಗಸಿ ಮಲಗಿ ವಿಶ್ರಾಂತಿ ಅನುಭವಿಸುತ್ತ ಯಮನೊಂದಿಗೆ ಸಂದರ್ಶನ ನಡೆಸುತ್ತ ಇನ್ನೂ ಬದುಕಿರುವರು, ಶ್ಲೀಲ ಅಶ್ಲೀಲಕ್ಕೆ ಸಂಬಂಧಿಸಿದ ಆಣೆ ಪ್ರಮಾಣಗಳು ಸಹ ನಡೆಯುತ್ತಿರುವುದೂ ಅಲ್ಲಿಯೇ,

ಚೌಕಾಬಾರದಂಥ ಆಟಗಳು ನಡೆಯುತ್ತಿರುವುದೂ ಅಲ್ಲಿಯೇ. ಸ್ವಾಮಿ ನಮ್ಮಪ್ಪನೇ ನಮ್ಮ ಗಂಡಂದಿರಿಗೆ ಸದ್ಬುದ್ಧಿಯನ್ನು ದಯಪಾಲಿಸು ಎಂದು ಕೆಲ ಹೆಂಡಂದಿರೂ, ಸ್ವಾಮಿ ನಮ್ಮ ಹೆಂಡಂದಿರು ತಪ್ಪು ದಾರಿ ತುಳಿಯದಂತೆ ನೋಡಿಕೊಳ್ಳುವ ಜವಾಬ್ದಾರಿ ನಿನ್ನದೇ ತಂದೆ ಎಂದು ಕೆಲ ಗಂಡಂದಿರೂ, ಸ್ವಾಮಿ ನಮ್ಮ ಮಕ್ಕಳು ಮರಿಗಳಿಗೆ ರೋಗ ರುಜಿನ ಬರದಂತೆ ನೋಡಿಕೋ ಎಂದು ಹೆತ್ತವರೂ, ಸ್ವಾಮಿ ತಂಗಳು ಹಳಸಿದ್ದು ಕೊಡುವ ಬದಲು ಬಿಸಿಬಿಸಿ ಆಹಾರವನ್ನು ತಮ್ಮ ಸಿಲವಾರ ಬೋಗುಣಿಗಳಿಗೆ ಸುರಿಯುವಂಥ ಸದ್ಬುದ್ಧಿಯನ್ನು ಊರ ಗೌಡತಿಯರಿಗೆ ದಯಪಾಲಿಸು ಎಂದು ಜೀತದಾಳುಗಳೂ, ಸ್ವಾಮಿ ನಮ್ಮಪ್ಪನೆ ನಮಗೆ ಸಲೀಸಾಗಿ ಬೇಟೆಗಳು ದೊರಕುವಂತೆ ಮಾಡು ಎಂದು ಶಿಕಾರಿಗಳೂ, ಸ್ವಾಮಿ ನಮ್ಮಪ್ಪನೆ ಕತ್ತಲಲ್ಲಿ ನಡೆಯುವ ನಮಗೆ ದಾರಿ ತೋರಿಸು, ನೂರಿನ್ನೂರಾದರೂ ದೊರಕುವಂತೆ ಮಾಡು ಎಂದು ಕಳ್ಳರೂ ಅದಕ್ಕೆ ಬೇಡಿಕೊಳ್ಳುವುದು ಮಾಮೂಲು ಸಂಗತಿ. ಇನ್ನೊಂದು ವಿಶೇಷ ಸಂಗತಿ ಎಂದರೆ ಕೇರಿಯ ಹೆಸರಾಗಿರುವ ಮುನುಸೋಬ ಮಾಯಿಗ, ಕಲೆಟ್ಟರು ಕರಿಯ, ಕಾಮರೇಡು ಕವಳೆಪ್ಪರಂಥ ಕೇರಿಯ ಮಹಾನ್ ಜಗಳಗಂಟರೂ ಕುಡುಕರೂ ಸೋಂಭೇರಿಗಳು ತಮಗೆ ಬರುತ್ತಿದ್ದ ಅಸಾಧಾರಣ ಕೋಪವನ್ನು ಪ್ರದರ್ಶಿಸುತ್ತಿದ್ದುದು ಅದರ ಮೇಲೆಯೆ! ಖಗಚರಗಳು ಪುಷ್ಕಳವಾಗಿ ಉದುರಿಸುತ್ತಿದ್ದ ಇಕ್ಕಿಗಳಿಂದಲೂ, ಶುನಕಗಳು ತೀರಿಸಿಕೊಳ್ಳುತ್ತಿದ್ದ ದೈಹಿಕಬಾಧೆಗಳಿಂದಲೂ ಅದು ಮಸ್ತಕಾಭಿಷೇಕ ಸ್ನಾನ ಸಂಧ್ಯಾವಂದನೆಗಳನ್ನು ನೆರವೇರಿಸಿಕೊಳ್ಳುತ್ತ ತನ್ನ ಪಾಡಿಗೆ ತಾನಿರುವುದು. ಇಷ್ಟೆಲ್ಲಾ ಅವಘಡಗಳ ನಡುವೆಯೂ ದಾಸರ ತಿಮ್ಮಯ್ಯ ಪ್ರತಿ ಮಂಗಳವಾರ ಅದರ ಸಮಕ್ಷಮದಲ್ಲಿಯೇ ದೇವಿ ಪುರಾಣವನ್ನು ಪಾರಾಯಣ ನಡೆಸುತ್ತ ಅಲೌಕಿಕ ಆನಂದವನ್ನು ಅನುಭವಿಸುತ್ತಿರುವನು ಬೇರೆ, ಇಂಥ ಲೌಕಿಕ ಅಲೌಕಿಕ ಚಟುವಟಿಕೆಗಳಿಂದ ಆ ಲಿಂಗ ಕೇರಿಯ ಸತ್ತ್ರಜೆಯೆಂದೇ ಪರಿಗಣಿಸಲ್ಪಟ್ಟಿರುವುದು. ಕೇರಿಯ ಅಬಾಲವೃದ್ಧರೆಲ್ಲರೊಂದಿಗೆ ಭಾವನಾತ್ಮಕ ಸಂಬಂಧವನ್ನು ಸ್ಥಾಪಿಸಿಕೊಂಡಿರುವುದು.

ತನ್ನ ಕನಸಿನ ಹುಳವನ್ನು ಊರ ಪ್ರಮುಖರ ತಲೆಯಲ್ಲಿ ಬಿಟ್ಟ ಬಳಿಕವೂ ಪಂಪಯ್ಯ ಸುಮ್ಮನೆ ಕೂಡ್ರಲಿಲ್ಲ. ಅದೇ ದಿವಸ ಮಧ್ಯಾಹ್ನವೇ ಹೊಲಗೇರಿಗೆ ಸಕುಟುಂಬ ಪರಿವಾರ ಸಮೇತ ಹೋದನು. ಹೊಲೆಯರೆಲ್ಲ ಸಂಭ್ರಮಾಶ್ಚರ್ಯದಿಂದ ಸ್ವಾಗತಿಸಿ ಕಾರಣ ಕೇಳಿದ್ದಕ್ಕೆ ಮಹಾ ವಾಗ್ಮಿಯಾದ ತಾನು ಅವರೆಲ್ಲರ ತಲೆಯಲ್ಲಿ ತನ್ನ ಇನ್ನೊಂದು ಕನಸಿನ ಸಹಸ್ರಪದಿಗಳನ್ನು ವಿತರಿಸಿದನು. ಇಷ್ಟೆಲ್ಲಾ ಸೇವೆ ಮಾಡುತ್ತಿರುವ ತಮ್ಮ ಕನಸುಗಳಲ್ಲಿ ಕಾಣಿಸಿಕೊಳ್ಳದ ಸ್ವಾಮಿಯು ತಿರುಗಿ ನೋಡದಿರುವವರ ಕನಸಿನಲ್ಲಿ ದರ್ಶನ ಕೊಡುವುದೆಂದರೇನು! ಕೆಲವರು ತಮಗಾದ ಬೇಸರವನ್ನು ವ್ಯಕ್ತಪಡಿಸುವ ಗೋಜಿಗೆ ಹೋಗಲಿಲ್ಲ. ಹೌದೇನು ಸ್ವಾಮಿ ಹೌದೇನು ಅಯ್ಯಾ ಎಂದು ತಲೆ ಅಲ್ಲಾಡಿಸಿ ದಾರಿ ಮಾಡಿಕೊಟ್ಟರು. ಪಂಪಯ್ಯ ತನ್ನ ಮನೆಯವರ ಸಹಾಯದಿಂದ ಮತ್ತು ತಮ್ಮ ಮನೆಯಿಂದ ನೇರವಾಗಿ ಜೊತೆಯಲ್ಲಿಯೇ ತಂದಿದ್ದ ಪೊರಕೆ ಚೆಲಿಕೆ ಗುದ್ದಲಿಯಂಥ ಹತ್ಯಾರಗಳ ನೆರವಿನಿಂದ ಲಿಂಗದ ಪರಿಸರವನ್ನು ಕೆತ್ತಿ ಗೂಡಿಸಿ ಶುಚಿಗೊಳಿಸಿದ, ಸಂಗಡ ತಂದಿದ್ದ ಕೊಡ ನೀರನ್ನು ಸುರಿದು ಅದರ ಮೈಯನ್ನು ತಿಕ್ಕಿ ತೊಳೆದ, ಎಲ್ಲರ ಅಚ್ಚರಿಗಣ್ಣುಗಳ ಸಮಕ್ಷಮದಲ್ಲಿ ಪೂಜಾಕಾರ್ಯ ನೆರವೇರಿಸಿ ಪ್ರಸಾದದ ರೂಪದಲ್ಲಿ ಕಡ್ಲಿ ಮಂಡಾಳು ಕೊಬ್ಬರಿ ಚೂರುಗಳನ್ನು ವಿತರಿಸುವುದರ ಮೂಲಕ ತನ್ನ ಹಕ್ಕು ವಸಾಹತು ಸ್ಥಾಪಿಸಿ ಮರಳಿದ. ಪ್ರತಿ ದಿವಸ ಹೀಗೆಯೇ!

ದಿನಗಳುರುಳಿದಂತೆ ಗ್ರಾಮದಲ್ಲಿ ನಾಟಕಕ್ಕಿಂತ ಮುಖ್ಯವಾಗಿ ಲಿಂಗ ಸಾರ್ವಜನಿಕರ ಚರ್ಚೆಗೆ ಒಳಗಾಯಿತು. ರೆಡ್ಡಿಗಳ ಮನೆಗಳಲ್ಲಿ ಚಿಕ್ಕಪುಟ್ಟ ತೊಂದರೆ ತಾಪತ್ರಯಗಳು ಕಾಣಿಸಿಕೊಳ್ಳದೆ ಇರಲಿಲ್ಲ. ಅವುಗಳು ಸಾಮಾನ್ಯ ತೊಂದರೆಗಳು ಎಂದು ಪುರುಷರು ಭಾವಿಸಿದಷ್ಟು ಸರಳವಿರಲಿಲ್ಲ ಆಯಾ ಮನೆಗಳ ಮಹಿಳೆಯರು ಭಾವಿಸುವುದು. ಇದು ಶ್ರೀಶೈಲಮಲ್ಲಿಕಾರ್ಜುನನ ಕಾಡಾಟವೆಂದೇ ಅನ್ಯಥಾ ಭಾವಿಸಿದರು. ಲಿಂಗವನ್ನು ವಿದ್ಯುಕ್ತವಾಗಿ ಗ್ರಾಮಕ್ಕೆ ಬರಮಾಡಿಕೊಳ್ಳಿರೆಂದು ತಮ್ಮ ತಮ್ಮ ಮನೆಗಳ ಯಜಮಾನರ ಮೇಲೆ ಒತ್ತಡ ಹೇರಲಾರಂಭಿಸಿದರು. ಅತ್ತ ನಾಸ್ತಿಕರೂ ಅಲ್ಲದ ಇತ್ತ ಆಸ್ತಿಕರೂ ಅಲ್ಲದ ಆ ಸವರ್ಣೀಯ ಪುರುಷರು ತಮ್ಮ ಹೆಂಡರ ಮಾತಿಗೆ ಬೆಲೆ ನೀಡಿದರೆ ತಾನೆ! ನೀವೇ ಅದನ್ನು ಹೊತ್ತು ತಂದು ಊರಲ್ಲಿ ಯಾಕೆ ಮನೆಯಲ್ಲೇ ಇಟ್ಟುಕೊಳ್ಳಿ ಎಂದು ಕೈಕೊಡವಿದರು. ಪೊರಕೆಯನ್ನೂ ಸ್ಥಳಾಂತರಿಸುವ ಪ್ರಾಥಮಿಕ ತಿಳವಳಿಕೆಯಿಂದಲೂ ದೂರ ಉಳಿದಿದ್ದ ತಾವು ಅದನ್ನಲ್ಲಿಂದ ತರುವುದು ಎಂದರೇನು! ಕ್ರಮೇಣ ಮಹಿಳೆಯರೇ ಹೊಲಗೇರಿಗೆ ಹೋಗಿ ಲಿಂಗವನ್ನು ಪೂಜಿಸಿ ಬರಲಾರಂಭಿಸಿದರು. ಅದರಿಂದಾಗಿ ಹೊಲಗೇರಿಯಲ್ಲಿನ ಸತ್ತಜೆಗಳ ದಿನಚರಿಯಲ್ಲಿ ಏರುಪೇರುಗಳು ಕಾಣಿಸಿಕೊಳ್ಳದೆ ಇರಲಿಲ್ಲ. ಸವರ್ಣೀಯರು ತಮ್ಮ ಅಸ್ಪೃಶ್ಯಕೇರಿಗೆ ಬಂದು ಹೋಗುತ್ತಿರುವುದು ಶುಭವೋ ಅಶುಭವೋ! ಈ ಸಂಕ್ರಮಣ ಸ್ಥಿತಿಯನ್ನು ಇತ್ತ ನುಂಗಲಿಕ್ಕೂ ಆಗದೆ ಅತ್ತ ಉಗುಳಲಿಕ್ಕೂ ಆಗದೆ ಆ ಆದಿದ್ರಾವಿಡರು ಉಭಯ ಸಂಕಟ ಭಾಷೆಯ ಇಕ್ಕಳಕ್ಕೆ ನಿಲುಕುವಂತಿರಲಿಲ್ಲ.

ಸೋಮವಾರವನ್ನು ಹೊರತುಪಡಿಸಿ ಆ ಲಿಂಗದ ಎದುರು ಕೂತು ಪಿಳಿ ಪಿಳಿ ನೋಡುತ್ತಿದ್ದವರೆಷ್ಟೋ! ಎಷ್ಟೊ ವರ್ಷಗಳಿಂದ ಕೇರಿಯ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿರುವ ನಮ್ಮಂಥವರಿಗಿಂತ ಅವರೇ ನಿನಗೆ ಹೆಚ್ಚಾದರಲ್ಲಯ್ಯಾ ತಂದೆ ಎಂದು ಮರುಗಲಾರಂಭಿಸಿದವರೆಷ್ಟೋ! ನೀನಿರುವ ನೆಪದಿಂದಾಗಿ ಅವರೆಲ್ಲ ನಮ್ಮ ಕೇರಿಗೆ ಬರುವಂತಾದರಲ್ಲಯ್ಯಾ ತಂದೆ ಎಂದು ತಮಗೆ ತಾವೇ ಸಮಾಧಾನ ತಂದುಕೊಳ್ಳುತ್ತಿದ್ದವರೆಷ್ಟೋ! ಅಂತೂ ನೀನು ನಮ್ಮ ನೆಲದ ನೆಲದ ಮೈಲಿಗೆಯನ್ನು ಕಳೆದೆಯಲ್ಲಯ್ಯಾ ಮಲ್ಲಯ್ಯಾ ಎಂದು ನೆಮ್ಮದಿಯನ್ನು ತಾಳುತ್ತಿದ್ದರೆಷ್ಟೋ!

++++

ಮೋಲ್ನೋಟಕ್ಕೆ ಸುಖಿಗಳಂತೆ ಗೋಚರಿಸುತ್ತಿದ್ದ ಹೆಬ್ಬಟಂ ಸೀತಾರಾಮರೆಡ್ಡಿಯವರು ತಮ್ಮ ಅಂತರಂಗದಲ್ಲಿ ಬಿರುಗಾಳಿಗಳನ್ನು ಅನುಭವಿಸುತ್ತಿದ್ದರು. ಅಪಾರ ದುಃಖವನ್ನು ಅನುಭವಿಸುತ್ತಿದ್ದರು. ಶ್ರೀಮಂತರಿಗೂ ದುಃಖಕ್ಕೂ ಅವಿನಾಭಾವ ಸಂಬಂಧವಿರುವುದು ಎನ್ನುವುದಕ್ಕೆ ಅವರಿಗಿದ್ದ ಚರಸ್ಥಿರ ಆಸ್ತಿಯೇ ನಿದರ್ಶನ. ಪಿತ್ರಾರ್ಜಿತವಾಗಿ ಬಂದಿರುವುದು ಒಂದು ತೂಕವಾದರೆ ಸ್ವಯಾರ್ಜಿತವಾಗಿ ಗಳಿಸಿರುವುದು ಇನ್ನೊಂದು ತೂಕ. ತಮ್ಮ ಆಸ್ತಿ ಬೇರೆಯವರ ಪಾಲಾಗಬಾರದೆನ್ನುವ ಕಾರಣದಿಂದಾಗಿ ಒಂದರ ಹಿಂದೊಂದರಂತೆ ಮೂರು ಸಲ ಮದುವೆಯಾಗಿದ್ದರು. ತಮ್ಮ ಮುವ್ವರು ಪತ್ನಿಯರೂ ಸತತವಾಗಿ ಮಕ್ಕಳನ್ನು ಹೆತ್ತೂ ಹೆತ್ತು ಅಕಾಲ ಮರಣಕ್ಕೆ ತುತ್ತಾದರೂ ಅವರು ಎದೆಗುಂದಲಿಲ್ಲ, ತಮ್ಮ ಲೈಂಗಿಕ ಸಾಮರ್ಥ್ಯವನ್ನು ಸಾಬೀತುಪಡಿಸಲೋಸುಗವೋ, ಇನ್ನೂ ಹೆಚ್ಚು ಮಕ್ಕಳನ್ನು ಪಡೆಯುವ ಅಭಿಲಾಷೆಯಿಂದಾಗಿಯೋ ತಾವು ಚತುರ್ಥ ಪತ್ನಿಯನ್ನು ಮದುವೆಯಾಗಿರುವವರೆಂಬ

ಊಹಾಪೋಹ ಉಂಟು. ಆದರೆ ಆ ಸಂಗತಿ ದೃಢಪಡದೆ ಇನ್ನೂ ನೇಪಥ್ಯದಲ್ಲಿರುವುದು. ಆ ಚತುರ್ಥ ಪತ್ನಿಯು ಆದವಾನಿಯಲ್ಲಿರುವುದಾಗಿ ಕೆಲವರೂ, ಅನಂತಪುರ ಶಹರದಲ್ಲಿರುವುದಾಗಿ ಕೆಲವರೂ ಹೇಳಿಕೊಳ್ಳುತ್ತಿರುವರು. ಆದರೆ ವದಂತಿಗಳ ಬಗೆಗಾಗಲೀ ಊಹಾಪೋಹಗಳ ಬಗೆಗಾಗಲೀ ಅವರು ತಲೆ ಕೆಡಿಸಿಕೊಂಡಿಲ್ಲ. ಆಳುವವರಿಗೆ ಆರು ಜನ ಎಂಬ ಮಾತೇ ಇರುವುದು ತಾನೆ! ಅದರಲ್ಲೂ ಹೆಚ್ಚು ಹೆಚ್ಚು ಪತ್ನಿಯರಿದ್ದಷ್ಟು ಜಮೀನ್ದಾರಿಕೆಗೆ ಗತ್ತು ಪ್ರಾಪ್ತವಾಗುವುದು! ಸಾಮಾಜಿಕ ವರ್ಚಸ್ಸು ನೂರ್ಮಡಿಗೊಳ್ಳುವುದು ಬೇರೆ!

ಇಂಥ ಕಾರಣಗಳಿಂದಾಗಿ ಕೌಟುಂಬಿಕ ನೇಪಥ್ಯದಲ್ಲಿರುವ ಆ ನಿಗೂಢ ಮಹಿಳೆ ಪ್ರೇಯಸಿಯೋ ಅವರ ಚತುರ್ಥ ಪತ್ನಿಯೋ ಎಂಬುದನ್ನು ತಿಳಿದುಕೊಳ್ಳುವ ಉಸಾಬರಿಗೆ ಇದುವರೆಗೆ ಯಾರೊಬ್ಬರೂ ಹೋಗಿಲ್ಲ. ಎಪ್ಪತ್ತರ ಆಜುಬಾಜಲ್ಲಿದ್ದರೂ ಅವರು ಉತ್ತಮ ರತಿಕ್ರೀಡಾಪಟು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಅದೇ ಅವರ ಕೌಟುಂಬಿಕ ಪರಿಸರದ ಸ್ವಾಸ್ಥ್ಯವನ್ನು ಕೆಡಿಸಿರುವುದು. ಅದಕ್ಕೆ ಒಂದೇ ಒಂದು ನಿದರ್ಶನವೆಂದರೆ, ಐದಾರು ಮೊಮ್ಮಕ್ಕಳಿಂದ ತಾತ ಎಂದು ಕರೆಸಿಕೊಳ್ಳುವ ದಶರಥರೆಡ್ಡಿ ಅವರ ಜೇಷ್ಠಸುಪುತ್ರನು. ಬಳ್ಳಾರಿಯ ಸೇಂಟ್ ಫಿಲೋಮೆನಾದಲ್ಲಿ ಎರಡನೆ ಇಯತ್ತೆ ಕಲಿಯುತ್ತಿರುವ ಯುಗಂಧರರೆಡ್ಡಿ ಎಂಬ ಹೆಸರಿನ ಬಾಲಕ ದಶರಥರೆಡ್ಡಿಯ ಖಾಸಾ ಸಹೋದರ. ಅಂದ ಮೇಲೆ ಇಲ್ಲಿ ಸಂಬಂಧ ವಾಚಕಗಳ ಪ್ರಶ್ನೆ ಉದ್ಭವಿಸುವುದು ಸಹಜ ತಾನೆ! ಆದರೂ ಹೆಬ್ಬಟಂ ಗೌಡರು ತಮ್ಮ ಕುಟುಂಬದೊಳಗಿನ ವಿಲೋಮ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸುವ ಗೋಜಿಗೆ ಹೋಗದೆ ಸೃಷ್ಟಿಕ್ರಿಯೆಗೆ ತಮ್ಮನ್ನು ತಾವು ಸಮರ್ಪಿಸಿಕೊಂಡಿರುವರು, ಇನ್ನೂ ಹೆಚ್ಚು ಹೆಚ್ಚು ಮಕ್ಕಳಿಗೆ ತಂದೆಯಾಗುವ ಸಲುವಾಗಿ ಅಹರ್ನಿಶಿ ಶ್ರಮಿಸುತ್ತಲೇ ಇರುವರು, ಯುವಜನಾಂಗ ಕಣ್ಣು ಕಿಸರಾಗುವಂತೆ ಬದುಕಿರುವರು. ಆದರೆ ಸಾಂತಾನಿಕ ಬೇಜವಾಬ್ದಾರಿ ಫಲದ ಕಹಿಯನ್ನು ಈ ತಮ್ಮ ವೃದ್ಯಾಪ್ಯದಲ್ಲಿ ಒಳಗೊಳಗೇ ಅನುಭವಿಸುತ್ತಿರುವರು. ಮಕ್ಕಳ ಪೈಕಿ ಷಷ್ಟ್ಯಬ್ಧಿಯ ಹೊಸ್ತಿಲಲ್ಲಿರುವ ದಶರಥರೆಡ್ಡಿ ಕೇಶವರೆಡ್ಡಿಯರಾಗಲೀ, ಐವತ್ತರ ಅಂಚಲ್ಲಿರುವ ಶೇಷಶಯನರೆಡ್ಡಿ ವಿಷ್ಣುವರ್ಧನರೆಡ್ಡಿಯರಾಗಲೀ, ಮುವ್ವತ್ತರ ಆಜುಬಾಜಲ್ಲಿರುವ ಕರುಣಾಕರರೆಡ್ಡಿ ನರಸಿಂಹರೆಡ್ಡಿ ವೀರಸೇನಾರೆಡ್ಡಿಯವರಾಗಲೀ, ಕರ್ನೂಲು ಶಾದ್‌ನಗರ್ ಹೈದರಾಬಾದ್‌ಗಳಂಥ ಶಹರಗಳಲ್ಲಿ ಬೀಜದ ಹೋರಿಗಳೆಂದೇ ಹೆಸರಾಗಿರುವ ತಿರುಮಲರೆಡ್ಡಿ ತ್ರಿಪುರಾಂತಕರೆಡ್ಡಿ ಪಾಲಾಕ್ಷರೆಡ್ಡಿಯವರಾಗಲೀ ತಮ್ಮ ತಂದೆಯವರ ನೀತಿಸಂಹಿತೆಯನ್ನು ಉಲ್ಲಂಘಿಸುವುದನ್ನೇ ತಮ್ಮ ನಿತ್ಯಕಾಯಕವನ್ನಾಗಿಸಿಕೊಂಡಿರುವರು. ಕೂತು ಉಣ್ಣುವವರಿಗೆ ಕುಡಿಕೆ ಹೊನ್ನು ಸಾಲದು ಎನ್ನುವಂತೆ ಅನೈತಿಕ ಹಾಗೂ ಕಾನೂನುಬಾಹಿರ ಚಟುವಟಿಕೆಗಳಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿರುವರು. ಅವರ ಗಂಡುಸಂತಾನದ ಕಥೆ ಈ ರೀತಿ ಇದ್ದರೆ ಅವರ ಹೆಣ್ಣು ಸಂತಾನದ ಕಥೆ ಇನ್ನೊಂದು ರೀತಿಯದ್ದು. ಆದರೆ ಅವರೆಲ್ಲರ ಚಾರಿತ್ರ್ಯ ಈ ಕಥಾನಕಕ್ಕೆ ಹೊಂದುವುದಿಲ್ಲವಾದ್ದರಿಂದ ನೇರವಾಗಿ ಅವರ ಪಂಚಮ ಸುಪುತ್ರ ಸೂರ್ಯಪ್ರತಾಪರೆಡ್ಡಿಯ ವಿಷಯಕ್ಕೆ ಬರೋಣ.

ಅವರಿಗೆ ಉಳಿದೆಲ್ಲಾ ಮಕ್ಕಳು ಒಂದು ತಲೆನೋವಾದರೆ ಪ್ರತಾಪರೆಡ್ಡಿಯೇ ಇನ್ನೊಂದು ತಲೆನೋವು. ಆತ ಅವರ ನೇರ ಸಂತಾವಲ್ಲವೆಂದು ಕೆಲವರು ಹೇಳಿದರೆ ಇನ್ನು ಕೆಲವರು ಮರಣ ಶಯ್ಯೆಯಲ್ಲಿದ್ದ ತಮ್ಮ ದ್ವಿತೀಯ ಪತ್ನಿ ವೆಂಕಟಲಕ್ಷ್ಮಮ್ಮನವರಿಗೆ ಇವರು ಏನೋ ಮಾತು ಕೊಟ್ಟಿದ್ದರೆಂದು ಹೇಳುವರು, ಇನ್ನೂ ಕೆಲವರು ಅಂದರೆ ಅವರ ಸಮಕಾಲೀನರ

ಅಭಿಪ್ರಾಯದಲ್ಲಿ ಆತನ ಜಾತಕದಲ್ಲಿ ಮುಖ್ಯಮಂತ್ರಿಯಾಗುವ ಯೋಗ ಇರುವುದಂತೆ! ಆದರೆ ಇದರಲ್ಲಾಗಲೀ ಅದರಲ್ಲಾಗಲೀ ಎಷ್ಟು ಸುಳ್ಳಿರುವುದೋ ಎಷ್ಟು ನಿಜವಿರುವುದೋ! ಆದರೆ ಒಂದಂತೂ ಸತ್ಯ. ಅದೆಂದರೆ ಸೂರ್ಯಪ್ರತಾಪರೆಡ್ಡಿ ಬಾಲ್ಯದಿಂದಲೇ ಮಹತ್ವಾಕಾಂಕ್ಷೆ ಉಳ್ಳವನು. ಶತ್ರುಗಳನ್ನು ಸೃಷ್ಟಿಸಿಕೊಳ್ಳುವುದರಲ್ಲಿ ಶತ್ರುಗಳನ್ನು ನಿರ್ನಾಮ ಮಾಡುವುದರಲ್ಲಿ, ಚಾಣಾಕ್ಷತನದಲ್ಲಿ, ಅಂತಸ್ತಿಗನುಸಾರವಾಗಿ ಸ್ನೇಹ ಸೂರೆಗೊಳ್ಳುವುದರಲ್ಲಿ, ತನ್ನ ಆರೋಹಣಕ್ಕೆ ಸಹಕರಿಸಿದ ನಿಚ್ಚಣಿಕೆಗಳನ್ನು ನಿರ್ಲಕ್ಷಿಸುವುದರಲ್ಲಿ, ವಾಮಮಾರ್ಗಗಳನ್ನು ಆಯ್ಕೆ ಮಾಡಿಕೊಳ್ಳುವುದರಲ್ಲಿ, ಪ್ರತಿಷ್ಠಿತ ರಾಜಕಾರಿಣಿಗಳ ಸ್ನೇಹ ಸಂಪಾದಿಸುವುದರಲ್ಲಿ, ಈ ಸಮುದ್ರದಲ್ಲಿ ಮುಳುಗಿ ಇನ್ನೊಂದು ಸಮುದ್ರದಲ್ಲಿ ಕಾಣಿಸಿಕೊಳ್ಳುವುದರಲ್ಲಿ ಹೆಸರಾಗಿರುವನು.

ಇಂಥ ಕಾರಣಗಳಿಂದಾಗಿ ತನ್ನ ಇಂಜಿನಿಯರಿಂಗ್ ಪದವಿಯನ್ನು ಪೂರ್ಣಗೊಳಿಸುವು ದಾಗಲಿಲ್ಲ, ಹೆಬ್ಬಟಂ ಗೌಡರೂ ತಮ್ಮ ಈ ಪ್ರೀತಿಯ ಮಗನನ್ನು ಶಾಸಕನನ್ನಾಗಿಸಲು ಅಹರ್ನಿಶಿ ಶ್ರಮಿಸಿದರು. ಅದರ ಸಲುವಾಗಿ ಹಲವು ಲಕ್ಷಗಳನ್ನು ನೀರಿನಂತೆ ಖರ್ಚು ಮಾಡಿದರು. ಆದರೆ ತಮ್ಮ ದುರಾದೃಷ್ಟವೋ ಅವನ ದುರಾದೃಷ್ಟವೋ! ಇನ್ನೇನು ಕಾಂಗ್ರೇಸ್ ಪಕ್ಷದ ಟಿಕೆಟ್ ದೊರಕಿತು ಎನ್ನುವಷ್ಟರಲ್ಲಿ ಪ್ರತಾಪರೆಡ್ಡಿ ಹೈದರಾಬಾದಿನ ಜುಬ್ಲಿ ಹಿಲ್ಸ್ ಪ್ರದೇಶದಲ್ಲಿ ನಡೆದ ಕೊಲೆ ಕೇಸಿನಲ್ಲಿ ಬಂಧನಕ್ಕೊಳಗಾಗಿ ಜೈಲುಪಾಲಾದ. ಜಿಲ್ಲಾ ನ್ಯಾಯಾಲಯ ಅವನಿಗೆ ಮರಣದಂಡನೆ ವಿಧಿಸಿದರೆ ಹೆಚ್ಚವರಿ ನ್ಯಾಯಾಲಯ ಶಿಕ್ಷೆಯನ್ನು ಜೀವಾವಧಿಗೆ ಇಳಿಸಿತು. ಅದರಿಂದ ಧೃತಿಗೆಡದೆ ರೆಡ್ಡಿಯವರು ದೆಹಲಿಯ ಪ್ರಸಿದ್ಧ ವಕೀಲರೊಂದಿಗೆ ಸಮಾಲೋಚಿಸಿ ಹೈದರಾಬಾದಿನ ಉಚ್ಚನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದರು. ತಮ್ಮ ಮಗನ ಪರವಾಗಿ ವಾದಿಸುವ ಸಲುವಾಗಿ ದೆಹಲಿಯ ವಕೀಲರನ್ನು ನೇಮಿಸಿದರು. ಎರಡು ವರ್ಷಗಳ ಸತತ ಹೋರಾಟ ಅಂತಿಮ ಹಂತ ತಲುಪಿರುವುದು. ವಾದ ಪ್ರತಿವಾದಗಳನ್ನು ಆಲಿಸಿರುವ ನ್ಯಾಯಾಲಯ ತನ್ನ ಅಂತಿಮ ತೀರ್ಪನ್ನು ಕಾಯ್ದಿರಿಸಿರುವುದು. ತಮ್ಮ ಮಗಳ ಮದುವೆ ಸಲುವಾಗಿ ರಜೆ ಮೇಲೆ ತೆರಳಿರುವ ನ್ಯಾಯಮೂರ್ತಿಗಳು ಕರ್ತವ್ಯಕ್ಕೆ ಆಗಮಿಸಿದೊಡನೆ ಎತ್ತಿಕೊಳ್ಳಲಿರುವುದು ತಮ್ಮ ಮಗನ ಅಳಿವು ಉಳಿವು ಪ್ರಶ್ನೆಗೆ ಸಂಬಂಧಿಸಿದ ಕಡತವನ್ನು! ತೀರ್ಪಿನಲ್ಲಿ ಗೋಪ್ಯವಾಗಿರುವುದು ಮರಣ ದಂಡನೆಯೋ! ಜೀವಾವಧಿಯೋ! ಅಥವಾ ಬಿಡುಗಡೆಯೋ!

++++

ಕಳೆದೆರಡು ದಿವಸಗಳಿಂದ ಪಂಪಯ್ಯ ರಾಘಪ್ಪಸ್ವಾಮಿಯರೀರ್ವರು ವಾಗಿಲಿಯಲ್ಲಿ ಹರಡಿದ ಸುದ್ದಿ ಆಲಿಸಿದ ನನಗೆ ಆಶ್ಚರ್ಯವಾಯಿತು. ಅದೆಂದರೆ, ಕಳೆದೊಂದು ವಾರದಿಂದ ಹೈದರಾಬಾದಿನಲ್ಲಿ ವಾಸ್ತವ್ಯ ಹೂಡಿರುವ ರೆಡ್ಡಿಯವರು ಯಾರೋ ಪ್ರಸಿದ್ಧ ಜ್ಯೋತಿಷಿಗಳ ಸಮಕ್ಷಮ ಅಂಜಲೀಬದ್ಧರಾಗಿ ಪ್ರಶ್ನೆ ಕೇಳಿಕೊಂಡರಂತೆ! ಅದಕ್ಕೆ ಆ ಜ್ಯೋತಿಷಿಯು ಇದು ಧರ್ಮದ್ರೋಹ ಫಲ, ನಿನ್ನ ಊರಲ್ಲಿ ಅನಾಥವಾಗಿರುವ ಶ್ರೀಶೈಲಮಲ್ಲಿಕಾರ್ಜುನನ ಶಾಪವನ್ನು ಅನುಭವಿಸುತ್ತಿರುವಿ. ಅದನ್ನು ಪುನಃ ಪ್ರತಿಷ್ಠಾಪನೆ ಮಾಡಿದರೆ ಮಾತ್ರ ನಿನ್ನ ಮಗ ಬಿಡುಗಡೆಯಾಗುವನು ಎಂದು ಅಪ್ಪಣೆ ಕೊಡಿಸಿದರಂತೆ!

++++

ಹೆಬ್ಬಟಂ ಗೌಡರು ಆ ದಿವಸ ಐದಕ್ಕೆಲ್ಲಾ ಮೇಲಿಗೆ ಆದವಾನಿಯಲ್ಲಿಳಿದರು. ಶ್ರೀನಿವಾಸದ

ಏಸಿ ರೂಮಿನಲ್ಲಿ ಬ್ರಾಹ್ಮೀಮುಹೂರ್ತದ ಸ್ನಾನ ಸಂಧ್ಯಾವಂದನೆ ಪೂರೈಸಿದವರೆ ತಮಗಾಗಿ ಕಾದಿದ್ದ ಫೋರ್ಡ್ ಏರಿ ಕ್ರಾಸಿನಲ್ಲಿಳಿದು ಅದೇ ತಾನೆ ಮೂಡಣದಲ್ಲಿ ಕಾಣಿಸಿಕೊಂಡಿದ್ದ ಸೂರ್ಯ ಭಗವಾನನಿಗೆ ಕೈ ಜೋಡಿಸಿ ಅಪ್ಪಾ ಇನ್ನೆರಡು ಮೂರು ದಿವಸಗಳಲ್ಲಿ ನನ್ನ ಮಗ ಪ್ರತಾಪ ಜೈಲಿನಿಂದ ಬಿಡುಗಡೆಯಾಗುವಂತೆ ಕರುಣಿಸು ಎಂದು ಬೇಡಿಕೊಂಡರು. ಆಳುಕಾಳುಗಳೊಂದಿಗೂ ವಿವಿಧ ಹತ್ಯಾರುಗಳೊಂದಿಗೂ ಬಂದು ಅಷ್ಟು ದೂರದಲ್ಲಿ ನಿಂತು ತನ್ನ ಬಾಯಿಯೊಳಗಿನ ಬೀಡಿ ಹೊಗೆಯನ್ನು ನಿಶ್ಯೇಷಗೊಳಿಸಿ ಸಮೀಪಿಸಿದ ಸಾರಥಿ ಲಕ್ಷ್ಮೀರೆಡ್ಡಿಯ ಸಂಗಡ ಎರಡೇ ಎರಡು ಮಾತುಗಳನ್ನು ಸೂಜಿಗೆ ಮುದ್ದು ಕೊಟ್ಟಂತೆ ಆಡಿದರು. ಎಲ್ಲದಕ್ಕೂ ದೇವರು ಕಣ್ಣು ಬಿಡುವುದು ಮುಖ್ಯ ಎನ್ನುತ್ತ ಸಾರೋಟು ಏರಿದರು.

ತಗ್ಗು ದಿನ್ನಿಗಳ ಹಾದಿಯಲ್ಲಿ ನಿಧಾನಗತಿಯಲ್ಲಿ ಚಲಿಸಲಾರಂಭಿಸಿತು ಸಾರೋಟು. ದೂರದಲ್ಲಿ ಎಲ್ಲೋ ಅಸ್ಪಷ್ಟ ರೀತಿಯಲ್ಲಿ ಗೋಚರಿಸುತ್ತಿರುವ ತಮ್ಮ ವಾಗಿಲಿ ಮರಗಿಡಗಳ ನಡುವೆ ಇರುವುದು. ಹೂಡಿದ್ದ ಕುದುರೆಗಳ ಕಡೆ ನೋಡಿದರು, ಅವುಗಳಿಗೂ ತಮಗಾಗಿರುವಂತೆ ವಯಸ್ಸಾಗಿರುವುದು, ಇವೆರಡನ್ನು ಖರೀದಿಸಿದ್ದು ತಮ್ಮ ಮಗ ಕೊಲೆ ಕೇಸಿನಲ್ಲಿ ಸಿಕ್ಕಿದ ಹಿಂದಿನ ದಿವಸ, ಅದೂ ಬೆಂಗಳೂರಿನ ಟರ್ಫ್ ಕ್ಲಬ್‌ನ ರಾಬರ್ಟ್ ಸಹಕಾರದಿಂದ, ಕುದುರೆಗಳ ಆಮದು ರಫ್ತು ಮಾಡುವುದರ ಮೂಲಕ ಹೇರಳ ಹಣ ಗಳಿಸಿರುವ ಕುಂದೇರಾ ಈ ಎರಡು ಕುದುರೆಗಳ ಸೋಲಿನಿಂದ ಕಂಗೆಟ್ಟಿದ್ದ. ದಯಾಮರಣ ಕರುಣಿಸಿ ಇವುಗಳನ್ನು ಇಹಲೋಕದಿಂದ ಮುಕ್ತಗೊಳಿಸುವುದೆಂದು ತೀರ್ಮಾನಿಸಿದ್ದ. ಆದರೆ ಟ್ರೈನರ್ ರಾಬರ್ಟ್‌ಗೆ ಮಾನಸಿಕವಾಗಿ ಅದು ಇಷ್ಟವಿರಲಿಲ್ಲ. ತನ್ನ ಕಣ್ಣೆದುರಿಗೆ ಬೆಳೆದಿರುವ ತನ್ನಿಂದ ತರಭೇತು ಪಡೆದಿರುವ ನೂರಾರು ಕುದುರೆಗಳನ್ನು ರೇಸಿನಲ್ಲಿ ಸೋಲಿಸಿರುವ ತನ್ನ ಕುದುರೆಗಳನ್ನು ನಿರ್ಧಯ ರೀತಿಯಲ್ಲಿ ಕೊಲೆಗೈಯುವುದೆಂದರೇನು! ತನ್ನ ಟ್ರೈನರ್ ನೀಡಿದ ಸಲಹೆಯನ್ನು ನಿರ್ಲಕ್ಷಿಸುವ ಧೈರ್ಯ ಕುಂದೇರಾಗೆ ಬರಲಿಲ್ಲ. ನಿಮ್ಮ ಮಗ ಪ್ರತಾಪ್ ನಮ್ಮ ಕಸ್ಟಮರ್ ರೆಡ್ಡಿಗಳೆ ಎಂದು ನೆನಪಿಸಿಕೊಂಡೇ ಒಪ್ಪಿಸಿದ್ದ, ಅದೂ ಪುಕ್ಕಟೆ. ಅದೂ ತಮ್ಮಂಥ ಜಮೀನ್ದಾರರು ಪುಕ್ಕಟೆ ಪಡೆಯುವುದೆಂದರೆ! ತಮ್ಮ ಬ್ರಿಫ್‌ಕೇಸಿನಿಂದ ನೋಟುಗಳ ಕಟ್ಟನ್ನು ಹೀಗೆ ತೆಗೆದು ಹಾಗೆ ಕೊಟ್ಟಿದ್ದರು, ಅದರಲ್ಲಿದ್ದದ್ದು ಹತ್ತು ಸಾವಿರವೋ ಇಪ್ಪತ್ತು ಸಾವಿರವೋ ಐವತ್ತು ಸಾವಿರವೋ! ಅದನ್ನೆಲ್ಲಾ ಕರಾರುವಾಕ್ಕಾಗಿ ನೆನಪಿಸಿಕೊಳ್ಳುವುದು ಸಹ ಜಮೀನ್ದಾರಿ ವ್ಯವಸ್ಥೆಗೆ ಅಪಮಾನ ಮಾಡಿದಂತೆಯೇ ಸರಿ.

ವಾರಕ್ಕೆರಡು ಸಲವಾದರೂ ಪ್ರತಾಪರೆಡ್ಡಿಗೌಡರು ಕನಸಿನಲ್ಲಿ ಕಾಣಿಸಿಕೊಳ್ಳುತ್ತಿರುವರು ಎಂದು ಹೇಳುವುದೋ! ಸಂಭವಿಸಲಿರುವ ತೀರ್ಮ ಕುರಿತಂತೆ ಪ್ರಸ್ತಾಪಿಸುವುದೋ! ಊರಿನ ಹೇಮರೆಡ್ಡಿ ಮಲ್ಲಮ್ಮ ನಾಟಕ ಪಡೆದುಕೊಳ್ಳುತ್ತಿರುವ ಜನಪ್ರಿಯತೆ ಕುರಿತಂತೆ ವಿವರಿಸುವುದೋ! ಕಾರು ಸಲುವಾಗಿಯಾದರೂ ರಸ್ತೆ ಕಾಮಗಾರಿ ಆರಂಭಿಸಿ ಎಂದು ಸಲಹೆ ನೀಡುವುದೋ! ಗೊಂದಲದಲ್ಲಿದ್ದ ಸಾರಥಿಗೆ ಗೌಡರು ಕುದುರೆಗಳ ವೃದ್ಯಾಪ್ಯ ಕುರಿತಂತೆ ಪ್ರಸ್ತಾಪಿಸಿದರು, ಹೊಸ ಕುದುರೆಗಳನ್ನು ತರುವ ಬಗ್ಗೆ, ಸಾರೋಟನ್ನು ನವೀಕರಣಗೊಳಿಸುವ ಕುರಿತಂತೆ ಸೂಚ್ಯವಾಗಿ ಪ್ರಸ್ತಾಪಿಸಿದರು. ಕೇಳಿಸಿಕೊಂಡ ಬಳಿಕ ಸಾರಥಿ ಪ್ರತಾಪಣ್ಣನವರು ಹೇಗಿದ್ದಾರೆ ಧಣಿ ಎಂದು ಕೇಳಿದೊಡನೆ ಗದ್ಗದಿತರಾದರು.

ಎರಡು ದಿವಸಗಳ ಹಿಂದೆಯಷ್ಟೆ ಚಂಚಲಗೂಡ ಜೈಲಿಗೆ ಹೋಗಿ ಸರಳುಗಳ ಹಿಂದೆ ಗೋಚರಿಸಿದ ಮಗನ ಮೈದಡವಿ ರೋಮಾಂಚನಗೊಂಡಿದ್ದರು, ಅಳಲೆಂದು ನೀರ ಸಲುವಾಗಿ

ತಮ್ಮ ಕಣ್ಣುಗಳನ್ನು ತಡಕಾಡಿದ್ದರು, ಪ್ರಸಿದ್ಧ ಕ್ರಿಮಿನಲ್ ಲಾಯರ್ ಪತಂಗೆ ಬಿಡುಗಡೆಗೊಳ್ಳುವ ಭರವಸೆ ನೀಡಿರುವುದಾಗಿ ಹೇಳಿ ಧೈರ್ಯ ತುಂಬಿದ್ದರು, ಬಿಡುಗಡೆಗೊಳ್ಳಲಿರುವವನ ಸಾಮಾಜಿಕ ವರ್ತನೆ ಹೇಗಿರಬೇಕು ಹೇಗಿರಕೂಡದು ಎಂದೂ ವಿವರಿಸಿದ್ದರು,

ನಿವೃತ್ತ ನ್ಯಾಯಮೂರ್ತಿ ಮಧುರಾಂತಕಂ ನರೇಂದ್ರರೆಡ್ಡಿಯವರ ಮಗಳು ಶ್ರೀಲಕ್ಷ್ಮಿಯನ್ನು ಇನ್ನಾದರೂ ಮರೆತು ಈಗಾಗಲೇ ತಾವು ಗೊತ್ತು ಮಾಡಿರುವ ಜೊಹರಾಪುರಂ ಶಶಿಧರರೆಡ್ಡಿಯವರ ಏಕೈಕ ಸಂತಾನ ಸುಭದ್ರಳನ್ನು ಮದುವೆಯಾಗುವಂತೆ ಎಂದೂ ಹೇಳಿದ್ದರು. ಕಾರಣ ತಮ್ಮ ಮಗ ಬಿಡುಗಡೆಯಾದಲ್ಲಿ ಅದರ ಶ್ರೇಯಸ್ಸು ನಿಸ್ಸಂದೇಹವಾಗಿ ಜೊಹರಾಪುರಂ ಗೌಡರಿಗೇ ಸಲ್ಲಬೇಕು ಎಂಬ ಕೃತಜ್ಞತಾಭಾವದಿಂದ. ಅವರ ಸಲಹೆ ಮೇರೆಗಲ್ಲವೆ ತಾವು ಜ್ಯೋತಿಷಿಗಳೂ ಪವಾಡಪುರುಷರೂ ಆದಂಥ ಪತಂಜಲಿಶಾಸ್ತ್ರಿಗಳನ್ನು ಸಂಪರ್ಕಿಸಿ ಪ್ರಶ್ನೆ ಕೇಳಿದ್ದು! ಅಷ್ಟೆಲ್ಲಾ ತಾವು ಮಾತಾಡಿದರೂ ಅವನ ಬಾಯಿಂದ ಒಂದೇ ಒಂದು ಶುಭಸೂಚಕ ಮಾತು ಹೊರಬರಲಿಲ್ಲ. ಮದುವೆಯಾಗುವುದು ಒತ್ತಟ್ಟಿಗಿರಲಿ, ಒಂದು ಸಲ ಹೋಗಿ ನೋಡಿಕೊಂಡು ಬರೋಣ, ಋಣ ಇದ್ದಲ್ಲಿ ಯಾಕಾಗಬಾರದು ಎಂದಾದರೂ ಹೇಳಬಹುದಿತ್ತಲ್ಲವೆ! ಹ್ಞು ಹ್ಞೂ ಯಾವುದೂ ಇಲ್ಲ, ಎಷ್ಟಿದ್ದರೂ ಅವನು ತಮ್ಮ ಮುತ್ತಾತ ರಾವ್ ಬಹದ್ದೂರ್ ನರಸಿಂಹರೆಡ್ಡಿಯವರ ಪಡಿಯಚ್ಚು ತಾನೆ! ಅದೇ ಗತ್ತು ಅದೇ ಅಹಂಕಾರ! ಅದೇ ಅದೇ ವ್ಯಕ್ತಿತ್ವ! ಅದೇ ಪೌರುಷ! ಅವರ ಹಾಗೆಯೇ ಮುಂಗೋಪಿ! ಅವರ ಹಾಗೆಯೇ ಕ್ರೂ..! ದೇವರ ದಯೆಯಿಂದ ಅವನು ಚಂಚಲಗೂಡ ಜೈಲಿನಿಂದ ಬಿಡುಗಡೆಯಾದೊಡನೆ ತಾವು ಮಾಡಲಿರುವ ಮೊಟ್ಟಮೊದಲೆ ಕೆಲಸವೆಂದರೆ ಜೊಹರಾಪುರಂ ಕುಟುಂಬದ ಹೆಣ್ಣನ್ನು ಅವನ ಕೊರಳಿಗೆ ಕಟ್ಟುವುದು. ಗೌಡರು ಯೋಚಿಸುತ್ತ ನೆಮ್ಮದಿಯ ಉಸಿರುಬಿಟ್ಟರು.

ವಾಗಿಲಿಯಲ್ಲಿನ ತಮ್ಮ ರೆಡ್ಡಿ ಕುಲಬಾಂಧವರ ಚನಲವಲನಗಳನ್ನು ನೆನಪು ಮಾಡಿಕೊಂಡರು. ಅಲ್ಲಿರುವ ಬಹುಸಂಖ್ಯಾತರು ತಮ್ಮ ವಿರುದ್ಧ ಶೂದ್ರ ದಲಿತರನ್ನು ಎತ್ತಿಕಟ್ಟಲು ನಡೆಸಿರಬಹುದಾದ ಪ್ರಯತ್ನಗಳು ಒಂದೇ ಎರಡೆ! ಅವರ ಪೈಕಿ ಕೆಲವರು ತಮ್ಮನ್ನು ರಾಜಕೀಯವಾಗಿ ಮುಗಿಸಲು ಪರಾಜಿತ ಅಭ್ಯರ್ಥಿ ದೇವದಾನಂ ಜೊತೆ ಸೇರಿಕೊಂಡು ನಡೆಸಿದ ಕರಾಮತ್ತುಗಳನ್ನೂ ನೆನಪು ಮಾಡಿಕೊಂಡರು, ಅವರ ಪೈಕಿ ಕೆಲವರು ತಮ್ಮನ್ನು ಸಾಮಾಜಿಕವಾಗಿ ಮುಗಿಸಲು ಚಕ್ರಾಲ ಲಿಂಗಾಲ ಕಡೆಯ ಸುಪಾರಿ ಹಂತಕರನ್ನು ಸಂಪರ್ಕಿಸಿದ ಘಟನೆಯನ್ನೂ ನೆನಪು ಮಾಡಿಕೊಂಡರು, ಆ ಎಲ್ಲಾ ಘಟನೆಗಳಿಗೆ ಕಾರಕರಾದ ಬಸ್ಸಿರೆಡ್ಡಿ ಪರಪ್ಪನಾಯ್ಡು ಅವರಿಬ್ಬರನ್ನು ಚಾಣಾಕ್ಷತನದಿಂದ ಮುಗಿಸಿದ ತಮ್ಮ ಮಗ ಪ್ರತಾಪರೆಡ್ಡಿನನ್ನು ಕೃತಜ್ಞತಾಪೂರ್ವಕವಾಗಿ ಜ್ಞಾಪಿಸಿಕೊಂಡರು.

ಆದರೂ ಶತ್ರುಶೇಷ ವಾಗಿಲಿಯಲ್ಲಿ ಉಳಿದಿರುವ ಸಂಗತಿ ತಮಗೂ ಗೊತ್ತು, ತಮ್ಮ ಗೈರುಹಾಜರಿಯಲ್ಲಿ ಅಂಥವರಿಂದ ಅಲ್ಲಿ ಸಂಭವಿಸಿರಬಹುದಾದ ವಿದ್ಯಾಮಾನಗಳನ್ನು ತಮ್ಮ ಆರನೆ ಇಂದ್ರಿಯದ ಮೂಲಕ ಊಹಿಸಿಕೊಳ್ಳಲಾರಂಭಿಸಿದರು, ಕೆಳಮನಿ ಶಿವಾರೆಡ್ಡಿ ಕುರುವಳ್ಳಿ ತಿಪ್ಪಾರೆಡ್ಡಿ ಇವರಿಬ್ಬರನ್ನು ಮುಂದೆ ಯಾವತ್ತಾದರೂ! ಪುನಃ ಅದೇ ಹಿಂಸೆ! ಛೇಛೆ! ತಾವೂ ತಮ್ಮ ಕುಟುಂಬದ ಸದಸ್ಯರೂ ಈಗ ಅನುಭವಿಸುತ್ತಿರುವುದು ಸಾಕು, ಇನ್ನು ಮೇಲಾದರೂ ಹಿಂಸೆಯ ಸಹವಾಸದಿಂದ ದೂರ ಉಳಿಯಬೇಕು, ಪಿತ್ರಾರ್ಜಿತವಾಗಿ ಬಂದಿರುವುದೊಂದೇ ಅಲ್ಲದೆ ಸ್ವಯಾರ್ಜಿತ ಶ್ರೀಮಂತಿಕೆಯ ಪಾವಲಿ ಭಾಗವನ್ನಾದರೂ ವಾಗಿಲಿಯ ಅಭಿವೃದ್ಧಿಯ ಕೆಲಸ ಕಾರ್ಯಗಳಿಗೆ ವಿನಿಯೋಗಿಸಬೇಕು, ನಾಲ್ಕು ಜನರ ಬಾಯಿಯಿಂದ

ಸೈ ಅನ್ನಿಸಿಕೊಳ್ಳಬೇಕು ಎಂದುಕೊಳ್ಳುತ್ತ ಪ್ರಸನ್ನವದನರಾದರು. ಶ್ರೀಶೈಲ ಮಲ್ಲಯ್ಯನ ದಯೆಯಿಂದ ಬಿಡುಗಡೆಗೊಳ್ಳಲಿರುವ ತಮ್ಮ ಮಗ ಪ್ರತಾಪರೆಡ್ಡಿಯನ್ನು ಬೆಂಗಳೂರಿಗೆ ಕರೆದೊಯ್ದು ಅಲ್ಲಿನ ಬ್ರಹ್ಮಕುಮಾರಿ ವಿಶ್ವವಿದ್ಯಾಲಯದ ಕುಲಪತಿ ಈಶ್ವರಚಂದ್ರಪ್ರಸಾದ್ ಅವರ ಉಡಿಯಲ್ಲಿ ಹಾಕಿ ತಾವು ನೆಮ್ಮದಿಯಿಂದ ಶೇಷಾಯುಷ್ಯ ಕಳೆಯುವುದು ಮುಖ್ಯ, ನಿರ್ಮಾಣಗೊಳ್ಳುತ್ತಿರುವ ತಮ್ಮ ಸಮಾಧಿಯ ವಿನ್ಯಾಸವನ್ನು ಶ್ರೀಮಂತಗೊಳಿಸುವುದು ಮುಖ್ಯ. ಸಹಜ ಮರಣ ದಯಪಾಲಿಸು ಎಂದು ಅವನಲ್ಲಿ ಬೇಡಿಕೊಳ್ಳುವುದು ಮುಖ್ಯ, ಒಂಭತ್ತು ವರ್ಷಗಳ ಬಳಿಕ ಸಹಸ್ರ ಚಂದ್ರ ದರ್ಶನ ಮಹೋತ್ಸವವನ್ನು ಅನ್ನಸಂತರ್ಪಣೆಯ ಸಹಿತ ಅದ್ಧೂರಿಯಾಗಿ ಆಚರಿಸಿಕೊಳ್ಳುವುದು ಮುಖ್ಯ, ಅದಕ್ಕೆ ಪೂರಕವಾಗಿ ಶತ್ರುಗಳ ಮನವೊಲಿಸಿ ತಮ್ಮ ಕಡೆ ಸೆಳೆಯುವುದಂತು ತೀರಾ ಮುಖ್ಯ. ಅವರ ಒಂದೊಂದು ಪ್ರಶ್ನೆಗೆ ಲಕ್ಷ್ಮೀರೆಡ್ಡಿ ನೀಡಿದ ಉತ್ತರಗಳು ಸಮಾಧಾನಕರವೆನಿಸಿದವು. ಹೀಗೆ ಬದುಕಿನ ಸಾಧಕ ಬಾಧಕಗಳ ಬಗ್ಗೆ ಯೋಚಿಸಿದಾದ ಬಳಿಕ ಗೌಡರು ತುಂಬ ಗೆಲುವಾದರು. ವಾಗಿಲಿಯಲ್ಲಿನ ಹೇಮರೆಡ್ಡಿ ಮಲ್ಲಮ್ಮ ನಾಟಕಕ್ಕೆ ಸಂಬಂಧಿಸಿದಂತೆ, ಅದರ ಮಾಲಕ ಜಲಂಧರನ ನಡಾವಳಿ ಕುರಿತಂತೆ, ತಮ್ಮ ಕುಲಬಾಂಧವರ ಚಲನವಲನಗಳ ಕುರಿತಂತೆ ಮಾಹಿತಿಯನ್ನು ಸಾರಥಿ ಲಕ್ಷ್ಮೀರೆಡ್ಡಿಯಿಂದ ತಿಳಿದುಕೊಂಡ ಬಳಿಕ ಮತ್ತಷ್ಟೂ ಗೆಲುವಾದರು.

ಅವರಿದ್ದ ಸಾರೋಟನ್ನು ಸಿದ್ಧಾರೂಢರೇ ಸಮೀಪಿಸಿದರೋ ಸಾರೋಟೇ ಆ ಮಹಿಮಾನ್ವಿತರನ್ನು ಸಮೀಪಿಸಿತೋ! ನಿಂತ ವಾಹನದಿಂದ ಮೆಲ್ಲಗೆ ಇಳಿದು ಆ ವಿಶಾಲವಾದ ಕಪ್ಪು ಶಿಲೆಗೆ ಭಕ್ತಿಪೂರ್ವಕವಾಗಿ ನಮಿಸಿದರು. ತಮ್ಮ ಸುಪುತ್ರ ಬಿಡುಗಡೆಯಾದನೆಂದರೆ ಅದರ ಸುತ್ತ ಪ್ರಹರಿಗೋಡೆ ನಿರ್ಮಿಸುವುದೆಂದು ನಿರ್ಧರಿಸಿದರು. ಅದೇ ಸಮಯಕ್ಕೆ ಸರಿಯಾಗಿ ಪಂಪಯ್ಯನೊಂದಿಗೆ ರಾಘಪ್ಪಸ್ವಾಮಿ ಬಂದು ಸೇರಿಕೊಂಡನು. ಅವರಿಗೆ ಇವರು ಏನು ಹೇಳಿದರೋ ಇವರಿಗೆ ಅವರು ಏನು ಹೇಳಿದರೋ! ರಾಘಪ್ಪಸ್ವಾಮಿ ಎಲ್ಲಾದರು ಉಂಟಾ ತಮ್ಮಂಥವರು! ಎಂದು ಉದ್ಗಾರ ತೆಗೆಯುವಷ್ಟರಲ್ಲಿ ಸಾರೋಟು ವಾಗಿಲಿಯ ಅಗಸೆ ಬಾಗಿಲನ್ನು ಅದೇ ತಾನೆ ಪ್ರವೇಶಿಸಿತು.

++++

ಹೆಬ್ಬಟಂ ಗೌಡರಿಂದ ಕರೆ ಬಂದೊಡನೆ ವಾಗಿಲಿಯ ಹೊಲೆಯರ ಕೇರಿಯಲ್ಲಿ ಸಂಚಲನ ಕಾಣಿಸಿಕೊಳ್ಳದೆ ಇರಲಿಲ್ಲ. ಠೊಣ್ಣಿ ಡೋಮನ ಕಡೆ ನೋಡಿದರೆ ಡೋಮನು ಕತ್ತಲನ ಕಡೆ ನೋಡಿದನು, ಕತ್ತಲನು ದಾಸರ ತಿಮ್ಮಯ್ಯನ ಕಡೆ ನೋಡಿದರೆ ತಿಮ್ಮಯ್ಯನು ಕಂಡಕ್ಟರ್ ಓಬಲೇಸನ ಕಡೆ ನೋಡಿದನು. ಓಬಲೇಸು ತನ್ನ ಏಕೈಕ ಪುತ್ರಿ ರೇಣುಕೆಯನ್ನು ತನ್ನ ಏಕೈಕ ಸುಪುತ್ರ ಚಂದ್ರನಿಗೆ ತಂದುಕೊಳ್ಳುವ ಸಲುವಾಗಿ ದೂರದ ಆಸ್ಪರಿಯಿಂದ ಬಂದಿದ್ದ ಪಾಂಡುರಂಗನ ಕಡೆ ನೋಡಿದನು. ಬಳಿಕ ಕೇರಿಯ ಅಷ್ಟದಿಕ್ಕುಗಳಿಂದ ಸವ್ವಾರೆವ್ವ ನಿಂಗವ್ವ ತಂಗಳವ್ವ ಕಂದಾರೆವ್ವ ಸುಂಕಲವ್ವರೇ ಮೊದಲಾದ ಸ್ತ್ರೀದೇವತೆಗಳು ಆಗಮಿಸಿದರೆ ಕೇರಿಯ ಸಹಸ್ರ ಸಹಸ್ರ ಶ್ವೇದರಂದ್ರಗಳಿಂದ ಉಪ್ಪಳಿ ಸಂಬು ಕರಿಯ ಸುಬ್ಬುಲು ಡೇಗಯ್ಯ ನಿರ್ವಾಣಿಯರೇ ಮೊದಲಾದ ಋತ್ವಿಜರು ಆಗಮಿಸಿ ಕಳೆಗಟ್ಟಿದರು.

ತಮ್ಮೆಲ್ಲರ ನೆನಪಿನಲ್ಲಿರುವಂತೆ ಹೆಬ್ಬಟಂ ಗೌಡರಿಂದ ಕರೆ ಬಂದಿರುವುದು ಇದೇ ಮೊದಲ ಸಲ. ಕಾರಣ ಕೇಳಿದರೆ ತಲಾಠಿ ಲಾಂಛನದ ಮೇಲೆ ತನ್ನ ದೇಹದ ಸಮಸ್ತಭಾರವನ್ನು

ಸಮರ್ಪಿಸಿ ನಿಂತಿದ್ದ ರಾಮ ದೊಡ್ಡೋರ ಮನಸ್ಸಿನ ಕಡೆ ಪ್ರಶ್ನಾರ್ಥಕ ನೋಟ ಬೀರಿದ. ಸುದ್ದಿ ತಂದಿರುವ ಅವನೂ ತಮ್ಮವನೆ! ಆದರೆ ತಲಾಠಿ ಲಾಂಛನವಾದ ತನಗಿಂತಲೂ ಎತ್ತರದ ಕೋಲನ್ನು ಧರಿಸಿದನೆಂದರೆ, ಗೌಡರು ತನಗೆ ದಯಪಾಲಿಸಿರುವ ಮುಂಡಾಸನ್ನು ತನ್ನ ತಲೆಗೆ ಸುತ್ತಿದನೆಂದರೆ ರಾಮ ತಮ್ಮವನಲ್ಲವೇ ಅಲ್ಲ. ಹೋಗೆಂದರೆ ಹೋಗುವವನಲ್ಲ, ಬಾ ಎಂದರೆ ಬರುವವನೂ ಅಲ್ಲ. ಒಂದು ರೀತಿಯಲ್ಲಿ ಬಿಡಿಸಲಾರದಂಥ ಒಗಟೇ ಮನುಷ್ಯ ರೂಪ ಧಾರಣ ಮಾಡಿರುವುದೋ ಎಂಬಂತಿರುವ ಸಣಕಲ ವ್ಯಕ್ತಿ. ಅವನನ್ನು ವಿಚಾರಿಸಿದರೇನು ಪ್ರಯೋಜನ! ತಮಗೆ ತಾವೇ ಮಾತಾಡಿಕೊಳ್ಳಲಾರಂಭಿಸಿದರು. ತನ್ನ ವ್ಯಕ್ತಿತ್ವದಲ್ಲಿ ಅಲ್ಪ ಕಾಮ್ರೇಡತನವನ್ನೂ ಸ್ವಲ್ಪ ಅಂಬೇಡ್ಕರತನವನ್ನೂ ರೂಢಿಸಿಕೊಂಡಿದ್ದ ಪಾಂಡುರಂಗನಿಗೆ ಕೇರಿಯ ದಲಿತರು ಸವರ್ಣೀಯರ ಕರೆಯನ್ನು ಶಿರಸಾವಹಿಸುವುದು ಇಷ್ಟವೆನಿಸಲಿಲ್ಲ. ತಕರಾರು ವ್ಯಕ್ತಪಡಿಸಿದ. ಅದನ್ನು ಕಂಡಕ್ಟರೋಬಲೇಸು ಸಮ್ಮತಿಸಿದ, ಆದರೆ ಕೇರಿಯ ಹಿರಿಯನಾದ ದಾಸರಿ ತಿಮ್ಮಯ್ಯನು ಅಪ್ಪಾ ನೀನು ಪಿಂಚಣಿ ಮೇಲೆ ಜೀವನ ನಡೆಸೋನು ಎಂದು ಓಬಲೇಸುನಿಗೂ, ಅಪ್ಪಾ ನೀನು ಒಂದೆರಡು ದಿವಸ ಇದ್ದು ಹೋಗುವವನು ಎಂದು ಪಾಂಡುರಂಗನಿಗೂ, ಎಬ್ಬಟಂ ಗವುಡರು ತಮ್ಮ ಬಲಗಣ್ಣಿಂದ ನೋಡಿದರೆ ನಮಗೆ ಒಳ್ಳೆಯದಾಗುವುದು ಅವರು ತಮ್ಮ ಎಡಗಣ್ಣಿಂದ ನೋಡಿದರೆ ನಮಗೆ ಕೆಟ್ಟದ್ದಾಗುವುದು, ದೇವಿ ಮ್ಯಾಲ ಭಾರ ಹಾಕಿ ಹೋಗಿ ಅವರು ಏನು ಹೇಳುವರೆಂದು ಕೇಳೋಣ, ಇದರಲ್ಲಿ ತಪ್ಪೇನು! ಎಂದು ತಮ್ಮ ಕೇರಿಯ ಸಹಬಾಂಧವರಿಗೆ ಹೇಳಿದನು. ಅದಕ್ಕೆ ಇನ್ನಿತರರೆಲ್ಲ ತಲೆ ಅಲ್ಲಾಡಿಸಿದರು. ಒಡನೆ ರಾಮನ ಹಿಂದೆ ಹೆಜ್ಜೆ ಹಾಕಿದರು. ಅವರನ್ನೆಲ್ಲ ಗರುಡಗಂಭದಂತೆಯೋ, ಹರಕೆಯ ಕುರಿಗಳ ಬಾಯಿಯೊಳಗೆ ಲಾಲಾರಸೋತ್ಪಾದನೆ ಮಾಡುವ ಎಳೆಯ ತೋರಣದಂತೆಯೋ, ಪಂಚಲೋಹದಿಂದ ಮಾಡಲ್ಪಟ್ಟ ಶೂಲದಂತೆಯೋ ಆಕರ್ಷಿಸಲಾರಂಭಿಸಿತು ಹೆಬ್ಬಟಂ ಗೌಡರ ಮನೆಯು. ಕೀ.ಶೇ.ರಾಜಾರೆಡ್ಡಿಯವರು ಒಂದೂವರೆ ಶತಮಾನದ ಹಿಂದೆಯೇ ವಾಸ್ತುತಜ್ಞರನ್ನು ತಿರುಪತಿಯಿಂದ ವಿಶೇಷ ರೀತಿಯಲ್ಲಿ ಬರಮಾಡಿಕೊಂಡು ಅವರ ಸಲಹೆ ಮೇರೆಗೆ ಕಟ್ಟಿಸಿರುವ ಸಿಂಹಾಯದ ಅರಮನೆ ಸದೃಶ ಮನೆ ಅದಾಗಿರುವುದು.

ಸಮುದ್ರ ತೀರದಲ್ಲಿರುವ ದೀಪದ ಗೋಪುರವಿರದಿದ್ದಲ್ಲಿ ಜಹಜುಗಳು ಹೇಗೆ ದಡ ಸೇರುವುದಿಲ್ಲವೋ ಹಾಗೆಯೇ ಹೆಬ್ಬಟಂ ಗೌಡರ ಉಪ್ಪರಿಗೆ ಮನೆ ಇರದಿದ್ದಲ್ಲಿ ಹೊಸಬರು ವಾಗಿಲಿಯನ್ನು ಸೇರಲಾರರು. ಗ್ರಾಮದಲ್ಲಿ ತುಸು ಎತ್ತರದಲ್ಲಿರುವ ಆ ಮನೆಯು ಹೊರನೋಟಕ್ಕೆ ಸಾಧಾರಣವೆನ್ನಿಸುವಂತಿದ್ದರೂ ಒಳಗಿನ ವಿನ್ಯಾಸವಂತೂ ಬೆರಗುಗೊಳಿಸುವಂತೆ ಇರುವುದು. ಅಕಸ್ಮಾತ್ ಯಾರಾದರೂ ಒಳಪ್ರವೇಶಿಸಿದರೆ ಅಂಥವರನ್ನು ಅದು ದಿಕ್ಕು ತಪ್ಪಿಸುವುದಂತು ನಿಜ. ಆದ್ದರಿಂದ ಹೊಸಬರು ಅದರೊಳಗೆ ಇಣುಕಿ ಅಬ್ಬಬ್ಬಾ ಎಂದು ಉದ್ಗರಿಸಿ ಹೊರ ಹೋಗಬೇಕಾದದ್ದೆ. ಅದರ ಪ್ರಾಂಗಣದ ಸುತ್ತ ಕೋಟೆ ಇತ್ತೆಂದೂ ಸರಿಯಾಗಿ ನೋಡಿಕೊಳ್ಳುವವರು ಇಲ್ಲದೆ ಅದು ನಶಿಸಿರುವುದೆಂದೂ ಅವರಿವರು ಹೇಳುವುದುಂಟು. ಅದರ ಕುರುಹುಗಳು ಅದರ ಆಜುಬಾಜಲ್ಲಿ ಈಗಲೂ ಇವೆ. ಕೂಡ್ಲೂರು ಗೌಡರ ಮನೆಗೆ ಹೊರಳುವ ಹಾದಿಯಲ್ಲಿ ಎಡಕ್ಕೆ ತಿರುಗುವುದು ಎಷ್ಟು ಮುಖ್ಯವೋ ತುಸು ಮುಂದಕ್ಕೆ ಚಲಿಸಿ ಫತೇಪುರ ಸಿಕ್ರಿಯ ಬುಲಂದೇ ದರವಾಜನ್ನು ನೆನಪಿಸುವ ಅದರ ಬಾಗಿಲಲ್ಲಿ ನಿಲ್ಲುವುದೂ ಅಷ್ಟೇ ಮುಖ್ಯ. ಒಂದೇ ಮಾತಿನಲ್ಲಿ ಹೇಳುವುದಾದರೆ ಹೊಲೆಯರ ಕೇರಿಯ ಕಿಮ್ಮತ್ತಿಗಿಂತ ನೂರರಷ್ಟು ಕಿಮ್ಮತ್ತು ಆ ಬಾಗಿಲಿಗಿರುವುದು. ಅದನ್ನು ದಾಟಿದರೆ ವಿಶಾಲವಾದ ಪ್ರಾಂಗಣ,

ಅದನ್ನು ಕ್ರಮಿಸಿದರೆ ಇನ್ನೊಂದು ಪ್ರಾಂಗಣ. ಅದನ್ನು ದಾಟಿದರೆ ನೂರಾರು ಮಂದಿ ಏಕಕಾಲಕ್ಕೆ ಭೋಜನ ಮಾಡಬಹುದಾದಷ್ಟು ಮತ್ತೊಂದು ವಿಶಾಲ ಪ್ರಾಂಗಣ. ಅದನ್ನು ದಾಟಿದರೆ ಅಡುಗೆ ಮನೆ, ಮೈದಾನ ಗಾತ್ರದ ಬಚ್ಚಲ ಮನೆ, ಇನ್ನೂ ಮುಂದಕ್ಕೆ ಹೋದರೆ ಉಗ್ರಾಣದ ಮನೆ. ಅದಕ್ಕೆ ನೆಲ ಮಾಳಿಗೆಯಲ್ಲಿ ಹಲವು ತಿಜೋರಿಗಳಿರುವ ಮನೆ, ಅದರ ನೆಲಮಾಳಿಗೆಯಲ್ಲಿ ಮೊನ್ನೆಮೊನ್ನೆಯವರೆಗೆ ಸೆರೆಮನೆ ಇತ್ತಂತೆ, ಅಲ್ಲಿ ಕೆಲವರಿಗೆ ಮರಣ ದಂಡನೆಯನ್ನೂ ವಿಧಿಸಿರುವುದೂ ಉಂಟಂತೆ. ಪ್ರತಿಯೊಂದು ಮನೆಯಲ್ಲೂ ಹಗಲಿರುಳು ಉರಿಯುವ ಪುರಾತನ ಕಾಲದ ಲಾಂದ್ರಗಳು, ವಂಶಪಾರಂಪರ್ಯವಾಗಿ ಅಹರ್ನಿಶಿ ಕೆಲಸ ಮಾಡುವ ಆಳುಕಾಳುಗಳು, ಅದರ ಭದ್ರತಾ ವ್ಯವಸ್ಥೆಯನ್ನು ತಮಗೆ ತಾವೆ ವಹಿಸಿಕೊಂಡಿರುವ ಹತ್ತಾರು ಬೀದಿ ನಾಯಿಗಳು. ಆ ಮನೆಯ ವರ್ಣನೆ ಸಾಮಾನ್ಯ ಭಾಷೆಗೆ ನಿಲುಕುವಂಥಾದ್ದಲ್ಲ.

ಹೊಲೆಯರನ್ನು ಬರಹೇಳಿರುವ ಕಾರಣಕ್ಕೆ ಆ ದಿವಸ ಗೌಡರು ಹೆಬ್ಬಾಗಿಲ ಮುಂದಿದ್ದ ವಿಶಾಲ ಪ್ರಾಂಗಣದಲ್ಲಿ ಮುಲಾಕಾಟ್ ಸಭೆಯನ್ನು ಏರ್ಪಡಿಸಿದ್ದರು. ಅವರು ಸ್ವಲ್ಪ ಎತ್ತರದ ಕಟ್ಟೆ ಮೇಲೆ ಸಿಂಹಾಸನ ಸದೃಶ ಆಸನದ ಮೇಲೆ ವಿರಾಜಮಾನರಾಗಿದ್ದರೆ ಗಣ್ಯರು ತಮ್ಮ ತಮ್ಮ ಅಂತಸ್ತಿಗನುಸಾರವಾಗಿ ಕಟ್ಟೆಯ ಕೆಳಗೆ ಹಾಸಿದ್ದ ಜಮಖಾನ ಚಾಪೆಗಳ ಮೇಲೆ ವಿವಿಧ ಭಂಗಿಗಳಲ್ಲಿ ಕುಳಿತಿದ್ದರು. ಅವರಲ್ಲಿ ನಾಟಕ ಕಂಪನಿಯ ಮಾಲಕ ಜಲಂಧರ ಸಹ ವಿನಯಪೂರ್ವಕ ರೀತಿಯಲ್ಲಿ ಕುಳಿತಿದ್ದನು. ಹಾಗೆಯೇ ನಾನೂ ಶೇಷಣ್ಣನ ಪಕ್ಕದಲ್ಲಿ ಕುಳಿತಿದ್ದೆನು. ಅಷ್ಟು ದೂರದಲ್ಲಿ ಕಾಣಿಸಿಕೊಂಡ ತಲವಾರ ರಾಮ ಕೈಗೋಲಿನ ಅರ್ಧಕ್ಕೆ ಹ್ರಸ್ವಗೊಂಡು ವಿಷಯ ತಿಳಿಸುವುದಕ್ಕೂ ದಾಸರಿ ತಿಮ್ಮಯ್ಯನ ನೇತೃತ್ವದಲ್ಲಿ ಹತ್ತು ಹಲವರಿದ್ದ ಗುಂಪೊಂದು ಕಣ್ಣಳತೆ ದೂರದಲ್ಲಿ ಕಾಣಿಸಿಕೊಂಡು ಹ್ರಸ್ವಗೊಳ್ಳುವುದಕ್ಕೂ ಸರಿ ಹೋಯಿತು. ದೃಷ್ಟಿ ಯುದ್ದದಲ್ಲಿ ನಿಷ್ಣಾತರಿದ್ದ ತಿಪ್ಪಾರೆಡ್ಡಿ ಲಿಂಗಾರೆಡ್ಡಿ ಹುಚ್ಚಾರೆಡ್ಡಿಗಳು ತಮ್ಮ ಮಾರಕ ವ್ಹಾರೆ ನೋಟಗಳ ಮೂಲಕ ಅವರನ್ನೆಲ್ಲ ಕುಬ್ಜಗೊಳಿಸಲು ಪ್ರಯತ್ನಿಸಿ ಯಶಸ್ವಿಯಾದರು. ಆದರೆ ತಮ್ಮವರನ್ನು ತಳ್ಳಿಕೊಂಡು ಮುಂಚೂಣಿಗೆ ವೀರಾವೇಶದಿಂದ ಬಂದ ಕಂಡಕ್ಟರೋಬಲೇಸು ಅರೆಕ್ಷಣದಲ್ಲಿ ಕುಬ್ಜಗೊಂಡು ಸ್ವಲ್ಪ ಹಿಂದಕ್ಕೆ ಸರಿದು ತಲೆ ತಗ್ಗಿಸಿಕೊಂಡು ತನ್ನೆರಡೂ ಕೈಗಳನ್ನು ಒಂದರೊಳಗಿನ್ನೊಂದನ್ನಿರಿಸಿ ನಿಂತನು. ತನ್ನ ಪಕ್ಕದಲ್ಲಿದ್ದ ಬೀಗನ ಮೈಯನ್ನು ಸ್ಪರ್ಶಿಸುವುದರ ಮೂಲಕ ಹ್ರಸ್ವಗೊಳ್ಳುವಂತೆ ಸೂಚಿಸಿ ವಿಫಲನಾಗಿ ಉಗುಳು ನುಂಗಿದ. ತಮ್ಮ ಸವರ್ಣೀಯ ನೋಟಗಳಿಂದ ಒಂದೇ ಸಮನೆ ತನ್ನ ಮೇಲೆ ಅವಿರತ ಆಕ್ರಮಣ ನಡೆಸಿದ್ದ ಗೌಡರ ಕಡೆ ದುರುಗುಟ್ಟಿ ನೋಡುತ್ತಲೂ, ಅವರೆಲ್ಲರಿಗೆ ಸಮಾನಾಂತರದಲ್ಲಿ ಕುಳಿತುಕೊಳ್ಳುವುದೋ, ಹತ್ತೇ ಹತ್ತು ಹೆಜ್ಜೆಗಳನ್ನಿರಿಸಿ ಸಮೀಪಿಸಿ ಹೆಬ್ಬಟಂ ಗೌಡರ ಪಕ್ಕದಲ್ಲಿ ಕುಳಿತುಕೊಳ್ಳುವುದೋ ಎಂದು ಆ ಅಪರಿಚಿತ ಯೋಚಿಸುತ್ತಿರಬಹುದೆಂದು ಹಲವರು ಊಹಿಸಿ ಮೂಡಿದ ಬೆವರನ್ನು ಒರೆಸಿಕೊಂಡರು.

ಅಂಥ ವ್ಯಕ್ತಿಗಳನ್ನು ತಮ್ಮ ತಮ್ಮ ಧಮನಿಧಮನಿಗಳಲ್ಲಿ ಅರಗಿಸಿಕೊಂಡಿದ್ದ ಗೌಡರು "ತಮ್ಮಾ ಓಬಯ್ಯಾ ಯಾರೀತ! ಊರಿಗೆ ಹೊಸಬನಿದ್ದಂತಿದ್ದನಿರುವನಲ್ಲಾ!" ಎಂದು ಕೇಳಿದರು. ಅವರ ಬಾಯಿಯಿಂದ ಬಂದ ತಮ್ಮಾ ಎಂಬ ಸಂಬೋಧವಾಚಕಕ್ಕೆ ಸೌಜನ್ಯಕ್ಕೆ ಪರವಶಗೊಂಡ ಅವನು ಹೀಗೀಗೆ ಎಂದು ಪರಿಚಯಿಸಿದ. ಅದಕ್ಕೆ ಗೌಡರು "ಓಹೋ ಹಾಗೇನು! ನಿನ್ನ ಮಗಳು ಊರಿಗೆಲ್ಲ ಮಗಳಿದ್ದಂತೆ ತಮ್ಮಾ, ಯೋಚಿಸಬೇಡ, ಬೀಗರು ನೋಡಲಿಕ್ಕೆ ಒಳ್ಳೆಯವರಿದ್ದಂತಿದ್ದಾರೆ, ಮಗಳ ಮದುವೆಯನ್ನು ಪರಸ್ಥಳದಲ್ಲಿ ಮಾಡುವುದು

ಬೇಡ, ಅದು ನಮ್ಮೂರಲ್ಲಿಯೇ ನಡೆಯಲಿ, ಮದುವೆ ಖರ್ಚಿನ ಬಗ್ಗೆ ಯೋಚಿಸಬೇಡ, ನಾವಿದ್ದೀವಿ" ಎಂದು ಹೇಳುವುದರ ಮೂಲಕ ಅವನನ್ನು ಇನ್ನಷ್ಟು ಪರುವಶಗೊಳಿಸಿದರು. ಬಳಿಕ "ಬರುವ ನವರಾತ್ರಿಯಲ್ಲಿ ದೇವಿಪುರಾಣ ಪುಣ್ಯ ಶ್ರವಣವನ್ನು ನಮ್ಮ ರಾಮದೇವರ ಗುಡಿಯಲ್ಲಿ ಇಟ್ಟುಕೊಳ್ಳಬೇಕೆಂದಿರುವೆವು, ಅದು ನಿಮ್ಮ ನೇತೃತ್ವದಲ್ಲಿಯೇ ನಡೆಯಬೇಕು" ಎಂದು ಹೇಳುವುದರ ಮೂಲಕ ದಾಸರ ತಿಮ್ಮಯ್ಯನನ್ನೂ ಪರವಶಗೊಳಿಸದೆ ಇರಲಿಲ್ಲ, ಅದರಿಂದ ನನ್ನೊಳಗಿನ ಸೃಜನಶೀಲ ಲೇಖಕ ಭ್ರಮನಿರಸನಗೊಂಡನು. ಕಾರಣ ಆ ಮುವ್ವರೂ ಜಮೀನ್ದಾರಿ ವ್ಯವಸ್ಥೆಯೊಡ್ಡುವ ಆಸೆ ಆಮಿಷಗಳಿಗೆ ಬಲಿಯಾಗಲಾರರೆಂದೇ ತಾನು ಭಾವಿಸಿದ್ದ, ಬಳಿಕ ನಡೆದ ಇನ್ನೊಂದು ಘಟನೆ ಎಂದರೆ ಅಡುಗೆ ಮನೆಯ ಉಸ್ತುವಾರಿಯನ್ನು ನೋಡಿಕೊಳ್ಳುವ ಶಿವಯ್ಯ ವಿತರಿಸಿದ ಚಹಾವನ್ನು ವಿನಯಪೂರ್ವಕವಾಗಿ ಪಡೆದು ಅವರೆಲ್ಲ ಗುಟುಕು ಗುಟುಕಾಗಿ ಸೇವಿಸಿದ್ದು, ಅದೂ ತಮಗೆಂದೇ ಮೀಸಲಿರಿಸಿದ್ದ ಅಲ್ಯೂಮೀನಿಯಂ ಕಪ್ಪುಗಳಲ್ಲಿ! ಅವರ ಪೈಕಿ ಒಬ್ಬರಾದರೂ ನಿರಾಕರಿಸಬಹುದಿತ್ತಲ್ಲವೆ! ನನ್ನೊಳಗಿನ ಲೇಖಕ ಅಲ್ಲಿಂದ ನಿರ್ಗಮಿಸಲು ಯೋಚಿಸಿದ, ನಾನೇ ಅವನನ್ನು ತಡೆದು ನಿಲ್ಲಿಸಿ ಕುತೂಹಲ ತಳೆದೆ.

ಗೌಡರೇ ಕಣ್ಸನ್ನೆ ಮಾಡಿದರೋ, ರಾಘಪ್ಪಸ್ವಾಮಿ ತೊಡೆ ಚಿವುಟಿದನೋ, ವಿಶೇಷ ರೀತಿಯಲ್ಲಿ ಶೈವಲಕ್ಷಣಗಳನ್ನು ದೇಹದಾದ್ಯಂತ ಧರಿಸಿದ್ದ ಪಂಪಯ್ಯಹಿಂದಿನ ಸಾಲಿನಿಂದ ಮುಂದಿನ ಸಾಲಿಗೆ ಆಗಮಿಸಿದ, ಗೌಡರ ಕಡೆ ಕಣ್ಣುಗಳಿಂದ ಸಾಷ್ಟಾಂಗ ವಂದನೆ ಸಲ್ಲಿಸಿ ಎಲ್ಲರಿಗೂ ಕೇಳಿಸುವಂತೆ, ಯಾರೊಬ್ಬರಿಗೂ ಅರ್ಥವಾಗದ ರೀತಿಯಲ್ಲಿ ಸಂಸ್ಕೃತ ಮಂತ್ರವನ್ನು ಪಠಣ ಮಾಡಿದ ಶಿವಓಂ ಎಂದು ಉದ್ಗರಿಸಿದ, ಸ್ವಲ್ಪ ಹೊತ್ತು ಮೌನದಿಂದಿದ್ದು ಯಾವ್ಯಾವ ಮಾತುಗಳನ್ನು ಹೇಗೆ ವ್ಯಕ್ತಪಡಿಸಬೇಕೆಂದು ತಾಲೀಮು ನಡೆಸಿದ. ಬಳಿಕ ಮುತ್ತೈದೆ ನೊಸಲಿಗೆ ಕುಂಕುಮ ತಿಲಕ ಹೇಗೆ ಮುಖ್ಯವೋ ಹಾಗೆ ವಾಗಿಲಿ ಎಂಬ ಮುತ್ತೈದೆಗೆ ಶ್ರೀಶೈಲ ಮಲ್ಲಿಕಾರ್ಜುನಲಿಂಗವೇ ಭೂಷಣವೆಂದು ಅಲಂಕಾರಿಕ ರೀತಿಯಲ್ಲಿ ಹೇಳಿದ, ಆ ಬಳಿಕ ಪೀಠಿಕಾರೂಪದಲ್ಲಿ ಕೆಲವು ಮಾತುಗಳನ್ನಾಡಿದ. ತನ್ನ ಕನಸುಗಳಲ್ಲಿ ದರ್ಶನ ನೀಡುತ್ತಿರುವ ವೃದ್ಧನು ನಿಸ್ಸಂದೇಹವಾಗಿ ಮಲ್ಲಯ್ಯನೆಂದು ಹೇಳುತ್ತ ತನ್ನ ಕೆನ್ನೆಗಳನ್ನು ತಟ್ಟಿಕೊಂಡ, ತನ್ನದೇ ಆದ ಆದ್ಯಾತ್ಮಿಕ ಭಾಷೆಯಲ್ಲಿ ಶ್ರೀಶೈಲಮಲ್ಲಿಕಾರ್ಜುನ ಲಿಂಗಕ್ಕೆ ಪುನರ್ವಸತಿ ಕಲ್ಪಿಸುವ ಕುರಿತಂತೆಯೂ ವಿವರಿಸಿದ.

"ಶುಕ್ಲಪದ ಶುದ್ಧ ಸೋಮವಾರ ಪ್ರಶಸ್ತ ರೋಹಿಣಿ ನಕ್ಷತ್ರ, ಲಿಂಗ ಪ್ರತಿಷ್ಠಾಪನೆಗೂ ಪಾಪ ವಿನಾಶಕ್ಕೂ ಪುಣ್ಯಾರ್ಜನೆಗೂ ಹೇಳಿ ಮಾಡಿಸಿದ ದಿನ. ಲಿಂಗ ಕಳಿಸುವವರಿಗೂ ಲಿಂಗವನ್ನು ಪ್ರತಿಷ್ಠಾಪಿಸುವವರಿಗೂ ಒಳ್ಳೆಯದಾಗುವ ಶುಭದಿನ, ಹೆಬ್ಬಟಂ ಗೌಡರು ಅದರ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡಿರುವುದು ವಾಗಿಲಿಯ ಪುಣ್ಯ, ಈ ಸತ್ಕಾರ್ಯಕ್ಕೆ ಮಾದಿಗ ಬಂಧುಗಳು ಕೇರಿಯಲ್ಲಿರುವ ಲಿಂಗವನ್ನು ಭಕ್ತಿಯಿಂದ ಕಳಿಸಿಕೊಡಬೇಕು. ನಿಮ್ಮೆಲ್ಲರ ಒಪ್ಪಿಗೆ ಇರುವುದು ತಾನೆ!"

"ಇಂಥದಕ್ಕೆಲ್ಲ ಅವರನ್ನೇನು ಕೇಳುವುದು ಪಂಪಯ್ಯ! ಕಳಿಸಲಿಕ್ಕೆ ಅದೇನು ಅವರ ನೆಂಟನ! ಗೌಡರು ನಿರ್ಧರಿಸಿದ ಮೇಲೆ ಮುಗಿಯಿತು, ಅಲ್ಲವೆ ತಿಮ್ಮಯ್ಯ!" ಎಂದು ರಾಘಪ್ಪಸ್ವಾಮಿ ಹೇಳಿದ.

ಕೇಳಿಸಿಕೊಂಡ ಹೊಲೆಯರು ಪರಸ್ಪರ ಮುಖಗಳನ್ನು ನೋಡಿಕೊಂಡರು. ಅದೇನು ನಿನ್ನೆಮೊನ್ನೆಯಿಂದ ತಮ್ಮ ಕೇರಿಯಲ್ಲಿಲ್ಲ, ಅನಾದಿ ಕಾಲದಿಂದ ತಮ್ಮ ಕೇರಿಯಲ್ಲಿರುವುದು,

ತಾವು ಉಂಡರೆ ಉಣ್ಣುವುದು ತಾವು ಉಪವಾಸವಿದ್ದರೆ ಅದೂ ಉಪವಾಸವಿರುವುದು. ಅದು ತಮ್ಮ ನೆಮ್ಮದಿಯ ಕೇಂದ್ರ. ಪಂಪಯ್ಯ ಪೂಜೆ ಮಾಡಲಾರಂಭಿಸಿದಂದಿನಿಂದ ತಾವ್ಯಾರು ಅದರ ಸನಿಹ ಸುಳಿದಿಲ್ಲ. ಬೇಡರ ಕಣ್ಣಪ್ಪನ ಕಾಳಹಸ್ತಿ ಲಿಂಗ ತಮ್ಮೆಲ್ಲರ ಮನಸ್ಸಿನಲ್ಲಿ ಸುಳಿದು ಮರೆಯಾಯಿತು. ಅವರೆಲ್ಲರ ಪರವಾಗಿ ಪಾಂಡುರಂಗ..

"ನೀವು ಕೇಳುತ್ತಿರುವುದರಲ್ಲಿ ತಪ್ಪಿಲ್ಲ ಸ್ವಾಮಿ, ಅದಕ್ಕೆ ಗುಡಿ ಕಟ್ಟಿಸುವುದಿದ್ದರೆ ನಮ್ಮ ಕೇರಿಯಲ್ಲಿಯೇ ಕಟ್ಟಿಸಬಹುದಲ್ಲವೆ!" ಎಂದು ಮೆಲು ದನಿಯಲ್ಲಿಯೇ ತನ್ನ ಅಭಿಪ್ರಾಯ ವ್ಯಕ್ತಪಡಿಸಿದ.

"ನಿನ್ನ ಮಾತು ನಿಜ, ಆದರೆ ಅದೇ ನಿಮ್ಮನ್ನು ಅಲ್ಲಿಂದ ಒಕ್ಕೆಲೆಬ್ಬಿಸಿದರೆ ಏನು ಮಾಡುವಿರಿ! ಅದೂ ಅಲ್ಲದೆ ನಿಮ್ಮ ಕೇರಿಯಲ್ಲಿಯೇ ಗುಡಿ ಕಟ್ಟಿಸುವುದು ದೊಡ್ಡ ವಿಷಯವೇನಲ್ಲ. ಅದಕ್ಕೆ ಮೂರು ವ್ಯಾಳೆ ಪೂಜೆ ಮಾಡಬೇಕು, ಮಡಿಯುಡಿಯಿಂದ ನಡೆದುಕೊಳ್ಳಬೇಕು, ಕುಡಿಯುವುದು ತಿನ್ನುವುದು ಬಿಡಬೇಕು, ಅದೆಲ್ಲ ಹೇಳವ ಮಾತಲ್ಲ ಕೇಳುವ ಮಾತಲ್ಲ. ಅದೊಂದು ದೊಡ್ಡ ತಲೆನೋವು ಪಾಂಡುರಂಗ, ನೀನು ಈ ಊರಿಗೆ ಹೊಸಬ, ನಿನಗೆ ಇದೆಲ್ಲ ಅರ್ಥ ಆಗುವುದಿಲ್ಲ. ಒಂದೆರಡು ದಿವಸ ಇದ್ದು ಹೋಗಲಿಕ್ಕೆ ಬಂದಿರುವ ನೀನು ನಿನ್ನ ಕೆಲಸ ಮುಗಿಸಿಕೊಂಡು ಹೋಗುವುದು ಒಳ್ಳೆಯದು" ಎಂದು ಅದುವರೆಗೆ ಸುಮ್ಮನಿದ್ದ ಲಿಂಗಾರೆಡ್ಡಿ ತುಸು ಖಾರವಾಗಿಯೇ ಹೇಳಿದ.

"ಲಿಂಗಾರೆಡ್ಡಿ ಅಣ್ಣ ಹೇಳಿದ್ದು ನಿಜ ಪಾಂಡುರಂಗ, ಮಾದಿಗರು ನಮ್ಮ ಮಕ್ಕಳಿದ್ದಂತೆ, ಅವರು ಎಂದೂ ಹೆಬ್ಬಟಂ ಗೌಡರ ಉಗುಳು ದಾಟಿದವರಲ್ಲ. ನಿಮ್ಮನ್ನೆಲ್ಲ ಮನೆ ಬಾಗಿಲವರೆಗೆ ಕರೆಸಿಕೊಂಡು ಕೇಳುತ್ತಿರುವುದು ನಿಮ್ಮ ಪುಣ್ಯ. ಅದನ್ನವರು ಹೋರಿಸಿ ತಂದಿದ್ದರೆ ನೀವೆಲ್ಲ ತಡೆಯುತ್ತಿದ್ದಿರೇನು! ಅದನ್ನು ನೂರಾರು ವರ್ಷಗಳ ಹಿಂದೆ ಕೆತ್ತಿಸಿದವರು ಗುಡಿ ಕಟ್ಟಿಸಿ ಸ್ಥಾಪಿಸಿದವರು ಯಾರೆಂದು ತಿಳಿದಿರುವಿ, ನಮ್ಮ ಹೆಬ್ಬಟಂ ಗೌಡರ ಮುತ್ತಾತ ರಾಜಾರೆಡ್ಡಿ ಸಾಹುಕಾರರು. ಟೆನ್ನೆನ್ಸಿ ಕಾನೂನಿಂದಾಗಿಯಲ್ಲವೆ ಅದರ ದೇವಸ್ಥಾನ ಮಣ್ಣುಪಾಲಾದದ್ದು, ಅದು ನಿಮ್ಮ ಕೇರಿಯನ್ನು ಸೇರಿಕೊಂಡಿದ್ದು. ಅದೆಲ್ಲ ದೊಡ್ಡ ಕತೆ, ಹೇಳಿ ಏನು ಪ್ರಯೋಜನ ಕೇಳಿ ಏನು ಪ್ರಯೋಜನ!" ಎಂದು ಒಂದೇ ಉಸಿರಿಗೆ ಹೇಳಿ ದಣಿವಾರಿಸಿಕೊಂಡು ಪುನಃ ತಿಪ್ಪಾರೆಡ್ಡಿ "ವಾರಕ್ಕೊಂದು ಸಲ ಸ್ನಾನ ಮಾಡುವ ನೀವು ಅದನ್ನು ನೋಡಿಕೊಳ್ಳುವುದು ಸಾಧ್ಯವೇನು! ನಿಮ್ಮ ಕೇರಿಯಲ್ಲಿ ಗುಡಿ ಕಟ್ಟಿಸಿದರೆ ಪರಸ್ಥಳದವರು ನಮಗೆ ಉಗುಳುವುದಿಲ್ಲವೇನು! ಹೋಗುವವರು ಹೇಗೆ ಹೋದಾರು! ಬರುವವರು ಹೇಗೆ ಬಂದಾರು! ನೀವೇ ಯೋಚನೆ ಮಾಡಿ. ಭಕ್ತರಿಂದ ನಿಮ್ಮ ಕೇರಿಗೆ ತೊಂದರೆಯಾಗುವುದಿಲ್ಲವೆ! ಬಳಿಕ ಭಕ್ತರ ಓಡಾಟ ಹೆಚ್ಚುವುದಂತೂ ನಿಜ, ಅವರಿಂದ ಕೇರಿಗೆ ತೊಂದರೆಯಾಗುವುದಂತೂ ಇನ್ನೂ ನಿಜ" ಎಂದು ಎಲ್ಲರಿಗೂ ಕೇಳಿಸುವಂತೆ ಗೊಣಗಿದ.

ಅದುವರೆಗೆ ಕುತೂಹಲದಿಂದ ಗಮನಿಸುತ್ತಿದ್ದ ಹುಚ್ಚಾರೆಡ್ಡಿ "ಊರಿಗೆ ಒಳ್ಳೆಯದಾಗಲೆಂದೇ ನಮ್ಮ ಧಣಿ ಗುಡಿ ಕಟ್ಟಿಸಲು ನಿರ್ಧರಿಸಿರುವುದು, ಅದರಲ್ಲಿ ಅವರ ಸ್ವಾರ್ಥ ಎಳ್ಳಷ್ಟೂ ಇಲ್ಲ" ಎಂದು ಹೇಳಿದ್ದಾದ ಬಳಿಕ ಎಲ್ಲರ ಕಡೆ ನೋಡಿ ಪುನಃ "ಈ ಜಲಂಧರನ ಕಂಪನಿ ಹೇಮರೆಡ್ಡಿ ಮಲ್ಲಮ್ಮ ನಾಟಕ ಆಡದಿದ್ದಲ್ಲಿ ಆ ಶ್ರೀಶೈಲಮಲ್ಲಿಕಾರ್ಜುನ ಈ ನಮ್ಮ ವಾಗಿಲಿಯನ್ನು ನೆನಪು ಮಾಡಿಕೊಳ್ಳುತ್ತಿರಲಿಲ್ಲವೇನೊ! ಆತನ ಮೂಲ ಸ್ಥಳವೇ ನಮ್ಮ ವಾಗಿಲಿ. ಆತ ಇಲ್ಲಿಗೆ ಬಂದ ಮೇಲೆ ಭ್ರಮರಾಂಬದೇವಿಯನ್ನು ಮದುವೆಯಾದದ್ದು, ಆ ಆದಿಶಕ್ತಿಯ ಸಂಗಡ ನಲ್ಲಮಲ

ಅರಣ್ಯಕ್ಕೆ ಹೋಗಿದ್ದು, ಅಲ್ಲವೆ ತಿಮ್ಮಯ್ಯ!" ಎಂದು ಹುಚ್ಚಾರೆಡ್ಡಿ ತನ್ನ ಪೌರಾಣಿಕ ಜ್ಞಾನ ಪ್ರಕಟಿಸಿದ.

"ಹುಚ್ಚಾರೆಡ್ಡಿಗೌಡರು ಹೇಳಿದ್ದು ನಿಜ, ಸ್ಕಂಧಪುರಾಣದ ಪ್ರಕಾರ ಭ್ರಮರಮ್ಮನ ಒಕ್ಕಲೇ ನಾವು, ಮಲ್ಲಿಕಾರ್ಜುನಸ್ವಾಮಿನ ನೀವಿಟ್ಟುಕೊಳ್ಳಿ, ಭ್ರಮರಮ್ಮದೇವಿನ ನಾವಿಟ್ಟುಕೊಳ್ಳುವೆವು. ನಮ್ಮ ಕೇರಿಯಲ್ಲಿಯೇ ಆ ತಾಯಿಗೊಂದು ಗುಡಿ ಕಟ್ಟಿಸಿಬಿಡಿ ಧಣಿ" ಎಂದು ಹೇಳುವುದರ ಮೂಲಕ ತಿಮ್ಮಯ್ಯ ಹೊಸ ಸಮಸ್ಯೆಯನ್ನು ಸೃಷ್ಟಿಸಿದ. ಅದನ್ನು ಕೇಳಿಸಿಕೊಂಡ ಎಲ್ಲರೂ ತಮ್ಮ ಕಣ್ಣುಗಳನ್ನು ಹುರಿಗೊಳಿಸಿದರು.

"ಅಳಿಯನಾದ ಮಾತ್ರಕ್ಕೆ ಶಾಶ್ವತವಾಗಿ ಬೀಗರ ಮನೆಯಲ್ಲಿ ಠಿಕಾಣಿ ಹೂಡಲಿಕ್ಕೆ ಆಗುವುದೇನು! ಗಂಡ ಒಂದು ಕಡೆ ಹೆಂಡತಿ ಇನ್ನೊಂದು ಕಡೆ ಇದ್ದರೆ ಬಾಳುವೆ ನಡೆಯುವುದಾದರು ಹೇಗೆ ತಿಮ್ಮಯ್ಯ! ಅದೂ ಅಲ್ಲದೆ ಜಾಮಾತೋ ದಶಮಗ್ರಹ ಅಂತ ಹಿರಿಯರೇ ಹೇಳಿದ್ದಾರೆ, ಆತನೇನಾದರೂ ತನ್ನ ಹೆಂಡತಿ ಮೇಲಿನ ಕೋಪವನ್ನು ನಿಮ್ಮ ಮೇಲೆ ತೋರಿಸಿದನೆಂದರೆ ನಿಮ್ಮ ಕೇರಿಗೆ ಒಳ್ಳೆಯದಾಗುವುದಿಲ್ಲ. ಅಷ್ಟೊಂದು ಭಕ್ತಿ ಇದ್ದರೆ ನೀವು ಕೈಮುಗಿದು ಹೋಗಿರಿ, ಅದಕ್ಕೆ ನಾವ್ಯಾರೂ ಬೇಡವೆನ್ನುವುದಿಲ್ಲ, ಅದೆಲ್ಲ ಮುಂದೆ. ಈಗ ಸದ್ಯಕ್ಕೆ ಊರ ಹಿರಿಯರು ಹೇಳಿದಂತೆ ಕೇಳಿ" ಎಂದು ಅಯ್ಯನಗೌಡ ಸ್ವಲ್ಪ ತಮಾಷೆ ಬೆರೆಸಿ ಉತ್ತರೋತ್ತರ ಲೋಕಜ್ಞಾನ ಪ್ರಕಟಿಸಿದ.

ಆತನ ಮಾತು ಆಲಿಸಿದ ಎಲ್ಲರೂ ಹೌದೌದೆಂದು ತಲೆಗಳನ್ನು ಅಲ್ಲಾಡಿಸಿದರು. ಆದರೆ ಹೊಲೆಯರ ಮುಖಗಳಲ್ಲಿ ಮಂಕು ಆವರಿಸದೆ ಇರಲಿಲ್ಲ. ಅತ್ತ ಶ್ರೀಶೈಲಮಲ್ಲಿಕಾರ್ಜುನ ಎಂಬ ಹೆಸರಿನ ತಂದೆಯೂ ಇಲ್ಲ, ಇತ್ತ ಭ್ರಮರಾಂಭ ಎಂಬ ಹೆಸರಿನ ತಾಯಿಯೂ ಇಲ್ಲ ಎಂದರೆ ಹೇಗೆ! ಇದು ಯಾವ ನ್ಯಾಯ! ನಮ್ಮ ಕೇರಿ ಏನು ಊರಿಗೆ ದೂರವಿರುವುದೆ! ಕಣ್ಣಳತೆಯಲ್ಲಿ ಕೂಗಳತೆಯಲ್ಲಿರುವುದು, ಗಂಡನಾದವನು ಹೀಗೆ ಆಗಮಿಸಿ ನೋಡಿಕೊಂಡು ತನ್ನ ಹೆಂಡತಿಯ ಸುಖದುಃಖ ವಿಚಾರಿಸಿಕೊಂಡು ಹಾಗೆ ನಿರ್ಗಮಿಸಬಹುದಲ್ಲವೆ! ಪರಸ್ಪರ ಗುಸುಗುಸು ಮಾತಾಡಿಕೊಂಡ ಬಳಿಕ ತಿಮ್ಮಯ್ಯನ ಕಡೆ ನೋಡಿದರು, ಅದಕ್ಕೆ ಆ ಪುರಾಣಿಕನು "ಗೌಡರು ಹೇಳುವುದೇ ಸರಿ ಕಣರಪ್ಪಾ, ಗಂಡನಿರುವ ಕಡೆ ಹೆಂಡತಿ ಇರುವುದು ನ್ಯಾಯ, ಈಗ ಇರುವ ಕಂದಾರೆಮ್ಮ ಸುಂಕಲಮ್ಮ ದುರುಗಮ್ಮ ಚೌಡಮ್ಮ ಇವರೆಲ್ಲ ಯಾರೆಂದುಕೊಂಡಿರುವಿರಿ! ಅವರೆಲ್ಲ ಆ ತಾಯಿಯ ವಿವಿಧ ರೂಪಗಳೆ. ಅವರೆಲ್ಲ ಇದ್ದರೂ ಒಂದೆ ಇರದಿದ್ದರೂ ಒಂದೆ, ಏನೇ ಅಗಲಿ ಗೌಡರ ನಿಷ್ಠುರ ಕಟ್ಟಿಕೊಳ್ಳುವುದು ಬೇಡ. ಅವರಿಗೆ ಏನೇನು ಬೇಕೋ ಅದೆಲ್ಲವನ್ನೂ ತೆಗೆದುಕೊಂಡು ಹೋಗಲಿ" ಎಂದು ಬುದ್ಧಿವಾದ ಹೇಳಿದನು. ತಾನೆಷ್ಟಿದ್ದರೂ ಏಳೂರು ಗೌಡಿಕೆಯನ್ನು ನಡೆಸಿದ ಮುನಸೋಬ ವಂಶಸ್ಥನು, ಕಾಯಿದೆ ಕಿರ್ದಿಗಳನ್ನೊಂದೇ ಅಲ್ಲದೆ ಪುರಾಣ ಪುಣ್ಯಕಥೆಗಳನ್ನು ಕೇಳಿರುವಂಥವನು, ಅದರಿಂದ ವಾಚಾಳಿತನವನ್ನು ರೂಢಿಸಿಕೊಂಡಿರುವಂಥವನು, ಕಾಲಕ್ಷೇಪದ ಸಲುವಾಗಿ ನಾಲ್ಕಾರು ಮಂದಿಯನ್ನು ಹಿಂದೆ ಮುಂದೆ ಇರಿಸಿಕೊಂಡಿರುವಂಥವನು, ಆದರೆ ತಾನು ಮಹಾನ್ ನಿಷ್ಠುರವಾಗಿ ಅಷ್ಟೇ ಅಲ್ಲದೆ ಕರ್ಮಠ ಜಾತಿವಾದಿಯೂ ಹೌದು. ಅವರಂಥವರ ಮಾತುಕತೆಯನ್ನು ದೂರದಿಂದಲೇ ಗ್ರಹಿಸಿ ಪ್ರಸನ್ನವದನರಾದ ಹೆಬ್ಬಟಂ ಗೌಡರು..

"ತುಂಬ ತೂಕದ ಮಾತುಗಳನ್ನು ಆಡಿದಿ ಅಯ್ಯನಗೌಡ, ಆಯ್ತು ನಮ್ಮ ಒಕ್ಕಲು ಸುಖವಾಗಿರುವುದು ಮುಖ್ಯ, ಅವರು ಜನತಾಮನೆ ಕಟ್ಟಿಸಿಕೊಳ್ಳಲಿಕ್ಕೆ ಇನ್ನೊಂದೆರಡೆಕರೆ ಊರ

ಮುಂದಿರುವ ಹೊಲ ಕೊಟ್ಟರಾಯಿತಲ್ಲ, ಹೇಗೋ ಎಮ್ಮೆಲ್ಲೆ ನಮ್ಮವನೆ" ಎಂದು ಆಶ್ವಾಸನೆ ನೀಡಿದರು. ಅವರ ಮಾತಿನಿಂದಾಗಿ ಹೊಲೆಯರ ಕಣ್ಣುಗಳು ಹೊಳೆಯದೆ ಇರಲಿಲ್ಲ. ಅದು ತಮ್ಮ ಬಹುದಿವಸದ ಬೇಡಿಕೆ ಸಹ. ಸುತ್ತಮುತ್ತಲಿನ ಎಲ್ಲಾ ಗ್ರಾಮಗಳಲ್ಲಿನ ಹೊಲೆಯರಿಗೆ ಸರ್ಕಾರದ ಜನತಾ ಮನೆಗಳು ಲಭಿಸಿದ್ದರೆ ತಮಗೆ ಮಾತ್ರ ಅವು ದೊರಕಿರಲಿಲ್ಲ, ಸ್ಥಾವರಕ್ಕಿಂತ ತಮ್ಮೆಲ್ಲರ ಎದೆಯೊಳಗಿನ ಜಂಗಮತ್ವ ಮುಖ್ಯ. ಎಲ್ಲರೂ ಪರಸ್ಪರ ಮುಖಗಳನ್ನು ನೋಡಿಕೊಂಡು ಸಮಾಧಾನದ ಉಸಿರುಬಿಟ್ಟರು, "ಅಷ್ಟು ಮಾಡಿ ಧಣಿ, ಏಳೇಳು ಜನ್ಮಕ್ಕೂ ನೆನಪು ಮಾಡಿಕೊಳ್ತೀವಿ" ಎಂದು ಸಾಮೂಹಿಕವಾಗಿ ಕೈಮುಗಿದರು. ಆದರೆ ಪಾಂಡುರಂಗ ಅಲ್ಲಿಂದ ಮೆಲ್ಲಗೆ ಹೊರಟು ಹೋಗದೆ ಇರಲಿಲ್ಲ. ಓಬಲೇಸು ತನ್ನ ಬೀಗನನ್ನು ತಡೆಯುವ ಪ್ರಯತ್ನ ಸಹ ಮಾಡಲಿಲ್ಲ.

ತಮ್ಮವರಿಂದ ತುಸು ಮುಂದೆ ಬಂದು ಕರಜೋಡಿಸಿ "ಶ್ರೀಶೈಲ ಮಲ್ಲಿಕಾರ್ಜುನ ನಮ್ಮ ಕೇರಿಯಲ್ಲಿ ಅಷ್ಟೈಭೋಗ ಅನುಭವಿಸುವುದು ಅಷ್ಟರಲ್ಲೇ ಇದೆ ಧಣಿ. ಎಲ್ಲಾದರೂ ಆ ಪರಮಾತ್ಮ ಸುಖವಾಗಿದ್ದರಾಯಿತು. ನಮಗೆ ಪಾಪಾನೂ ಗೊತ್ತಿಲ್ಲ ಪುಣ್ಯಾನೂ ಗೊತ್ತಿಲ್ಲ. ಆದರೆ ನಮಗೆಲ್ಲಾ ಜನತಾ ಮನೆ ಬರುವಂತೆ ಮಾಡಿ ಪುಣ್ಯ ಕಟ್ಟಿಕೊಳ್ಳಿ ಧಣಿ" ಎಂದು ಓಬಲೇಸು ಕೈಜೋಡಿಸಿ ಬೇಡಿಕೊಂಡ.

"ಓಬಲೇಸು ನಮ್ಮ ಗೌಡರು ಮಾತು ಕೊಟ್ಟರೆಂದರೆ ಮುಗಿತು, ಅವರು ಮನಸ್ಸು ಮಾಡಿದರೆ ಎರಡೆಕರೆ ಯಾಕೆ ನಾಲ್ಕೆಕರೆಯನ್ನೂ ಕೊಟ್ಟಾರು! ಎಮ್ಮೆಲ್ಲೆ ರತ್ನಂ ನಮ್ಮ ಗೌಡರು ಹಾಕಿದ ಗೆರೆ ದಾಟೋದಿಲ್ಲ. ವರ್ಷ ಕಳೆಯುವುದರೊಳಗೆ ನೀವೆಲ್ಲ ಜನತಾಮನೆಗಳಲ್ಲಿರುತ್ತೀರಿ ಅಷ್ಟೆ" ಎಂದು ವೆಂಕಟರೆಡ್ಡಿ ಹೇಳಿ ತನ್ನ ಸಹಬಾಂಧವರ ಕಡೆ ದೃಷ್ಟಿ ಹಾಯಿಸಿದ. ಕಾರಣ ಅವರೆಲ್ಲ ಹೆಬ್ಬಟಂ ಗೌಡರ ಊರ ಮುಂದಿನ ಹೊಲಗಳ ಮೇಲೆ ಕಣ್ಣಿಟ್ಟಿದ್ದವರೆ! ಅವರ ಸ್ಥಿರಾಸ್ತಿಯನ್ನು ಕಂತು ಕಂತಾಗಿ ಕರಗಿಸಲು ವಾಮಮಾರ್ಗಗಳಲ್ಲಿ ಪ್ರಯತ್ನಿಸುತ್ತಿದ್ದಂಥವರೆ! ಕೊಟ್ಟ ಮಾತಿನಂತೆ ನಡೆಯದಿದ್ದ ಪಕ್ಷದಲ್ಲಿ ಹೊಲೆಯರ ವಿರೋಧವನ್ನು ಸೃಷ್ಟಿಸಿದರಾಯಿತೆಂದು ಯೋಚಿಸುತ್ತಿದ್ದಂಥವರೆ! ಪರಾಜಿತ ಎಮ್ಮೆಲ್ಲೆ ಅಭ್ಯರ್ಥಿ ದೇವದಾನಂ ಜೊತೆ ತೆರೆಮರೆಯಲ್ಲಿ ಕೈ ಜೋಡಿಸಿದ್ದಂಥವರೆ! ಒಬ್ಬರು ಸತ್ತಂತೆ ಅಭಿನಯಿಸುವುದರಲ್ಲಿ ಇನ್ನೊಬ್ಬರು ಅತ್ತಂತೆ ಅಭಿನಯಿಸುವುದರಲ್ಲಿ ನಿಷ್ಣಾತರೆನಿಸಿದ್ದಂಥವರೆ! ತಮ್ಮ ನಿರೀಕ್ಷೆಗಳು ಒಂದೊಂದಾಗಿ ಬಗೆಹರಿದ ಮೇಲೆ ಕೇಳುವುದೇನಿದೆ!

ಗೌಡರು ಆ ಕ್ಷಣ ಜೈಲಿನಲ್ಲಿನ ತಮ್ಮ ಮಗನನ್ನು ನೆನಪು ಮಾಡಿಕೊಂಡರು. ಎಲ್ಲರ ಹಾರೈಕೆ ತಮ್ಮ ಮಗನ ಮೇಲಿರುವುದು ಮುಖ್ಯ, ಅದರ ಸಲುವಾಗಿ ತಾವು ಕಳೆದುಕೊಳ್ಳುವುದರಲ್ಲಿ ಸಂತೋಷ ಕಾಣುವುದು ಮುಖ್ಯವೆಂದು ಭಾವಿಸಿ ಕಣ್ಸನ್ನೆ ಮೇರೆಗೆ ಸಾಂಬ ಮೈಲಾರಿ ಉಗ್ರಾಣದಿಂದ ಜೋಳ ಮತ್ತಿತರ ಕಾಳುಕಡಿಯನ್ನು ತಂದು ಹೊಲೆಯರ ಶಲ್ಯೆಗಳಿಗೆ ತಲಾ ಇಷ್ಟಿಷ್ಟೆಂದು ವಿತರಿಸಿದರು.

ಅದೇ ವೇಳೆಗೆ ತ್ರಯಂಬಕ ಓಡುತ್ತ ಬಂದ, ಹೈದರಾಬಾದಿನ ವಕೀಲರಿಂದ ಫೋನ್ ಬಂದಿರುವುದಾಗಿ ಹೆಬ್ಬಟಂ ಗೌಡರಲ್ಲಿ ನಿವೇದಿಸಿಕೊಂಡ. ಕಳೆದೆರಡು ದಿವಸಗಳಿಂದ ತಮ್ಮ ಮನೆಯಲ್ಲಿದ್ದ ಫೋನ್ ತನ್ನ ಕಾರ್ಯಚಟುವಟಿಕೆಯನ್ನು ತಾಂತ್ರಿಕವಾಗಿ ಸ್ಥಗಿತಗೊಳಿಸಿತ್ತು ಬೇರೆ, ತಾವೇ ಅಲ್ಲಿಗೆ ಹೋಗುವುದೋ ಹೋಗದೆ ಇರುವುದೋ! ಮುಖ್ಯವಾಗಿ ತಮ್ಮ ಆಪ್ತಸಹಾಯಕ ರಾಘಪ್ಪಸ್ವಾಮಿಯನ್ನು ಕಳಿಸಿ ವಿಷಯ ತಿಳಿದುಕೊಳ್ಳುವುದೋ!

ಸಂದಿಗ್ಧತೆಯನ್ನು ಅನುಭವಿಸುತ್ತ ಗೌಡರು ಏಳುವುದು ಕೂಡ್ರುವುದು ನಡೆಸಿದರು. ತಮ್ಮ ಕಡೆ ಪ್ರಶ್ನಾರ್ಥಕ ನೋಟ ಬೀರಲಾರಂಭಿಸಿದ ಹೊಲೆಯರಿಗೆ ಹೊರಡುವಂತೆ ಸೂಚಿಸಿದರು. ಅವರ ಅಪ್ಪಣೆಯಂತೆ ಅವರೆಲ್ಲ ಅಲ್ಲಿಂದ ನಿರ್ಗಮಿಸಿದರೇನೋ ಸರಿ!

++++

ಆದರೆ ಹೆಬ್ಬಟಂ ಗೌಡರ ವಾಡೆಯ ಅಂಗಳದಲ್ಲಿ ನಡೆದ ಮಾತುಕತೆ ವಿವಿಧ ಟೊಂಗೆ ಟಿಸಿಲುಗಳನ್ನು ಮುಡಿದು ಗ್ರಾಮದ ಮತ್ತು ಹೊಳಗುಂದಿ ಫಾಸಲೆಯಾದ್ಯಂತ ಹರಡಿತು. ಎಲ್ಲಾ ಊರುಗಳಲ್ಲಿರುವಂತೆ ಅಲ್ಲೂ ಸುತ್ತಮುತ್ತಲ ಗ್ರಾಮಗಳಲ್ಲೂ ಕಟ್ಟಾ ಧರ್ಮೀಯರು ಇದ್ದರಷ್ಟೆ, ಅದನ್ನು ಕೇಳಿ ಅವರೆಲ್ಲ ಕೆರಳಿ ಕೆಂಡಾಮಂಡಲವಾದರು, ಅದರ ಔಚಿತ್ಯ ಕುರಿತಂತೆ ಅವರೆಲ್ಲ ಅಲ್ಲಲ್ಲಿ ಪರಸ್ಪರ ಚರ್ಚಿಸಲಾರಂಭಿಸಿದರು. ಅವರಲ್ಲಿ ಕೆಲವು ವಯೋವೃದ್ಧರು ಅದರ ವಿರುದ್ಧವಾಗಿಯೂ ಕೆಲವು ಯುವಕರು ಅದರ ಪರವಾಗಿಯೂ, ಅದರ ತಮ್ಮ ವಾದ ವಿವಾದಗಳನ್ನು ಮಂಡಿಸಲಾರಂಭಿಸಿದರು.

ಅದೂ ಹೊಲೆಯರ ಕೇರಿಯಲ್ಲಿನ, ಹಲವು ದಶಕಗಳ ಕಾಲ ತನ್ನ ಸಮಕ್ಷಮದಲ್ಲಿಯೇ ಹಲವಾರು ದನಕರುಗಳ ಕಳೇಬರಗಳನ್ನು ಕೊಯ್ಯಿಸಿಕೊಂಡಿರುವ, ಮಾಂಸಮದ್ಯೆಗಳಿಂದ ಸೇವಿಸಿಕೊಂಡಿರುವ, ತಮ್ಮಂಥ ಕಟ್ಟಾ ಧಾರ್ಮಿಕರಿಂದ ಬಹಿಷ್ಕರಿಸಲ್ಪಟ್ಟಿರುವ, ಪೂಜೆಪುನಸ್ಕಾರಗಳಿಂದ ವಂಚಿಸಲ್ಪಟ್ಟಿರುವ ಲಿಂಗವನ್ನು ಸ್ಥಳಾಂತರಿಸುವುದೆಂದರೇನು? ಅದನ್ನು ಪುನಃ ಪ್ರತಿಷ್ಠಾಪಿಸುವುದೆಂದರೇನು? ಅದಕ್ಕೆ ಬದಲಾಗಿ ಹೊಸಲಿಂಗವನ್ನು ಕೆತ್ತಿಸಿ ಅದಕ್ಕೆ ಶ್ರೀಶೈಲಮಲ್ಲಿಕಾರ್ಜುನ ಎಂದು ವಿದ್ಯುಕ್ತ ರೀತಿಯಲ್ಲಿ ನಾಮಕರಣ ಮಾಡಿ ಪ್ರತಿಷ್ಠಾಪಿಸಬಹುದಲ್ಲವೆ! ಎಂದು ಹಿರಿಯ ಶ್ರೋತ್ರಿಗಳೂ,

ಅಪ್ಪಟ ಚಿನ್ನ ಎಲ್ಲೇ ಇದ್ದರೂ ತನ್ನ ಮೂಲಗುಣವನ್ನು ಕಳೆದುಕೊಳ್ಳುವುದಿಲ್ಲವೋ ಹಾಗೆಯೇ ಅದು ಸಹ. ಲಿಂಗವೆಂದರೆ ಲಿಂಗ, ಅದು ಎಲ್ಲೇ ಇದ್ದರೂ ತನ್ನ ಮೂಲಗುಣವನ್ನು ಕಳೆದುಕೊಳ್ಳುವುದಿಲ್ಲ, ಪರಮೇಶ್ವರನ ವಾಸಾಸ್ಥಾನ ಶ್ಮಶಾನವಲ್ಲದೆ ಅರಮನೆಯೆ! ರೆಡ್ಡಿಗಳಿಗೆ ಸದ್ಬುದ್ಧಿ ಬಂದಿರುವುದು ಮುಖ್ಯವೇ ಹೊರತು ಲಿಂಗದ ವರ್ತಮಾನವಾಗಲೀ ಅದರ ವಸ್ತುಸ್ಥಿತಿಯಾಗಲೀ ಮುಖ್ಯವಲ್ಲ ಎಂದು ಯುವ ಶ್ರೋತ್ರಿಗಳೂ,

ಜಮೀನ್ದಾರರ ದಕ್ಷಿಣೆ ಭೋಜನೋಪಚಾರಕ್ಕೆ ಮರುಳಾಗುವವರಲ್ಲ ನಾವು. ಶಾರ್ದೂಲವು ಉಪವಾಸವಿದ್ದು ಸಾಯಬಲ್ಲುದೇ ವಿನಃ ಸಸ್ಯಾಹಾರವನ್ನು ಹೇಗೆ ಸೇವಿಸುವುದಿಲ್ಲವೋ ಹಾಗೆಯೇ ಪುರೋಹಿತರಾದ ನಾವು ರೆಡ್ಡಿಗಳು ಹಮ್ಮಿಕೊಂಡಿರುವ ಲಿಂಗಪ್ರತಿಷ್ಠಾನ ಕಾರ್ಯಕ್ರಮದಲ್ಲಿ ಮಾತ್ರ ಪಾಲ್ಗೊಂಡು ಆಚಾರ ವಿಚಾರಕ್ಕೆ ದ್ರೋಹ ಬಗೆಯುವುದಿಲ್ಲವೆಂದು ಹಿರಿಯರೂ,

ಕಾಲಾಯ ತಸ್ಮೈ ನಮಃ ಅರ್ಥ ಮೂಲೌ ಧರ್ಮಕಾಮೌ ಅಂತ ಹಿರಿಯರೇ ಹೇಳಿರುವರು, ಈ ಕಾಲದಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವುದೇ ಅಪರೂಪ, ಅದರಲ್ಲೂ ಪೌರೋಹಿತ್ಯವನ್ನು ಅವಲಂಭಿಸಿ ಬದುಕುವ ನಮ್ಮಂಥವರಿಗೆ ಶಾಸ್ತ್ರಗಳು ಏನು ಹೇಳಿವೆ ಎಂಬುದು ಮುಖ್ಯವಲ್ಲ, ಹಣವಂತರು ಏನು ಹೇಳುವರು ಎನ್ನುವುದು ಮುಖ್ಯ. ವಾಗಿಲಿಯ ರೆಡ್ಡಿಗಳು ಅದರಲ್ಲೂ ಹೆಬ್ಬಟಂ ಗೌಡರು ಸಾಮಾನ್ಯರೇನು! ಅಂಥವರ ಆಹ್ವಾನವನ್ನು ಗೌರವಿಸುವುದು ವಿವೇಕ, ಇತ್ತೀಚೆಗಂತೂ ಶ್ರೀಮಂತರಾದವರು ಧಾರ್ಮಿಕ

ಕಾರ್ಯಕ್ರಮಗಳನ್ನು ನಡೆಸುವುದೇ ಅಪರೂಪವಾಗಿದೆ. ಅವರು ತಮ್ಮಂಥ ಶ್ರೋತ್ರಿಗಳನ್ನು ನೆನಪು ಮಾಡಿಕೊಳ್ಳುವುದು ತಿಥಿ ಶ್ರಾದ್ಧಾಗಳಲ್ಲಿ ಮಾತ್ರ. ಶೂದ್ರರ ಹಾಗೆ ನಾವು ಕೂಲಿನಾಲಿ ಬದುಕುವುದು ಸಾಧ್ಯವೇನು! ಅಂಥವರ ಮಾತನ್ನು ಮೀರಿ ಬದುಕುವುದಾಗುವುದೆ! ಪಾಪ ಪುಣ್ಯ ಒಳ್ಳೆಯದು ಕೆಟ್ಟದ್ದೆಲ್ಲವನ್ನೂ ಆ ಭಗವಂತ ನೋಡಿಕೊಳ್ಳುವನು ಎಂದು ಕಿರಿಯರೂ.

ಕಾಲ ತಾನು ಕೆಡುವುದರ ಜೊತೆಗೆ ಯುವ ತಲೆಮಾರಿನ ತಿಳವಳಿಕೆಯನ್ನೂ ಕೆಡಿಸಿದೆ. ಧರ್ಮಬಾಹಿರ ಕೆಲಸ ಮಾಡುವವರು ಸುಖ ಅನುಭವಿಸುವುದು ತಾತ್ಕಾಲಿಕ, ಉತ್ತರೋತ್ತರವಾಗಿ ಅಂಥವರಿಗೆ ನರಕ ಶತಃಸಿದ್ಧ, ನಮ್ಮಂಥ ಹಿರಿಯರ ಮಾತು ಕೇಳದಿದ್ದಲ್ಲಿ ನೀವೆಲ್ಲ ಹಾಳಾಗಿ ಹೋಗುವಿರಿ, ಸದ್ಗತಿಯಿಂದ ವಂಚಿತರಾಗಿ ಮರಣೋತ್ತರ ದಿನಗಳಲ್ಲಿ ಬ್ರಹ್ಮಪಿಶಾಚಿಗಳಾಗಿ ಅಲೆದಾಡುವಿರಿ, ಆದ್ದರಿಂದ ಕಲಿತಿರುವ ವೈದಿಕ ವಿದ್ಯೆಯನ್ನು ದುರುಪಯೋಗ ಮಾಡಿಕೊಳ್ಳದಿರಿ, ದಯವಿಟ್ಟು ವಾಗಿಲಿಯ ಕಡೆ ಮುಖವಿರಿಸಿ ಮಲಗದಿರಿ ಎಂದು ಹಿರಿಯರೂ.

ಹಿರಿಯರು ಬದಲಾದ ಕಾಲ ಧರ್ಮಕ್ಕನುಸಾರವಾಗಿ ನೀವು ನಿಮ್ಮ ಆಲೋಚನಾ ವಿಧಾನವನ್ನು ಜೀವನ ಶೈಲಿಯನ್ನು ಬದಲಾಯಿಸಿಕೊಳ್ಳುವುದು ಮುಖ್ಯ. ನಾಳೆಯ ನರಕಗಳನ್ನು ಊಹಿಸುತ್ತ ಸದ್ಯದ ಸುಖವನ್ನು ಅಲಕ್ಷಿಸುವುದು ಅವಿವೇಕತನದ ಪರಮಾವಧಿ. ಗಾಳಿ ಬೀಸುವ ಕಡೆ ತೂರಿಕೊಳ್ಳುವುದೇ ವಿವೇಕ, ನಿಮ್ಮ ಸಲಹೆಯಂತೆ ನಡೆದುಕೊಂಡರೆ ಮಣ್ಣು ತಿಂದು ಜೀವಿಸಬೇಕಾಗುವುದು, ವೈದಿಕಕ್ಕೆ ಸಂಬಂಧಿಸಿದ ಬಲೆಗಳನ್ನು ಸೃಷ್ಟಿಸಿರುವುದು ಶೂದ್ರ ದಲಿತರನ್ನು ಅದರಲ್ಲಿ ಕೆಡವುದಕ್ಕೆ ಹೊರತು ಅದರಲ್ಲಿ ನಾವು ಬಂಧನಕ್ಕೆ ಒಳಗಾಗಲಿಕ್ಕಲ್ಲ, ರೆಡ್ಡಿಗಳು ರೆಡ್ಡೀನೆ, ಲಿಂಗಗಳು ಲಿಂಗವೆ ಎಂದು ಕಿರಿಯರೂ,

ಪೌರೋಹಿತ್ಯಕ್ಕೆ ಸಂಬಂಧಿಸಿದ ವಾದೋಪವಾದಗಳು ಒಂದು ತೆರನಿದ್ದರೆ ಹೆಬ್ಬಟಂ ಗೌಡರು ವಾಗಿಲಿಯಲ್ಲಿ ಇದ್ದಕ್ಕಿದ್ದಂತೆ ಲಿಂಗ ಪ್ರತಿಷ್ಠಾಪನೆ ಕುರಿತಂತೆ ತಲೆ ಕೆಡಿಸಿಕೊಂಡಿರುವುದರ ನೇಪಥ್ಯದಲ್ಲಿರುವ ಕಾರಣಗಳ ಶೋಧನಾಕಾರ್ಯ ಹೊಳಗುಂದಿಯ ಫಾಸಲೆಯಲ್ಲಿ ಕಾಣಿಸಿಕೊಳ್ಳದೆ ಇರಲಿಲ್ಲ. ಅವರು ಗುಟ್ಟಾಗಿರಿಸಿದ್ದು ಗುಟ್ಟಾಗಿ ಉಳಿಯಲಿಲ್ಲ, ತಮ್ಮ ಮಗ ಸೂರ್ಯಪ್ರತಾಪರೆಡ್ಡಿ ಬಿಡುಗಡೆಗೊಳ್ಳುವ ಸಲುವಾಗಿಯಲ್ಲವೆ ಅವರು ಈ ಧಾರ್ಮಿಕ ಚಟಚವಟಿಕೆಗಳನ್ನು ಆರಂಭಿಸಿರುವುದು! ಲಿಂಗ ಹೊಲೆಗೇರಿಯಲ್ಲೇ ಉಳಿದರೂ ಚಿಂತೆ ಇಲ್ಲ, ಆದರೆ ತ್ರಿಕರಣಗಳನ್ನು ಅಮೂಲಾಗ್ರವಾಗಿ ಕೆಡಿಸಿಕೊಂಡು ಕುಖ್ಯಾತನಾಗಿರುವ ಆ ಅವರ ಮಗ ಜೈಲಿನಿಂದ ಬಿಡುಗಡೆಗೊಳ್ಳುವುದು ಬೇಡವೇಬೇಡವೆಂದು ಕೆಲವರು ಏರು ದನಿಯಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲಾರಂಭಿಸಿದರು. ವಿಷಯವನ್ನು ಯಾವ ಮೂಲದಿಂದಲೋ ಗ್ರಹಿಸಿದ ಆದವಾನಿ ಆಲೂರು ಪಟ್ಟಣಗಳಲ್ಲಿದ್ದ ಪ್ರಜಾ ಸಂಕ್ಷೇಮ ವೇದಿಕೆಯ ಕಾರ್ಯಕರ್ತರು ಸುಮ್ಮನಿದ್ದರೆ ತಾನೆ! ರಸ್ತೆ ಕುಡಿಯುವ ನೀರಿನಂಥ ಪ್ರಾಥಮಿಕ ಸೌಲಭ್ಯಗಳನ್ನು ಪ್ರಜೆಗಳಿಗೆ ಮೊದಲು ಒದಗಿಸಿರಿ, ಆನಂತರ ಗುಡಿಗುಂಡಾರುಗಳ ಕಡೆ ಗಮನ ಹರಿಸಿರಿ ಪ್ರಜಾಪ್ರತಿನಿಧಿಗಳೇ ಎಂದು ಕೂಗುತ್ತ ವಾಗಿಲಿ ಕಡೆ ಪಾದಯಾತ್ರೆ ಕೈಗೊಂಡರು. ಅವೇ ಪಟ್ಟಣಗಳಲ್ಲಿದ್ದ ಮಾದಿಗ ದಂಡೋರಾ ಕಾರ್ಯಕರ್ತರು ವಾಗಿಲಿಯಲ್ಲಿನ ದಲಿತರಿಗೆ ಜನತಾಮನೆಗಳನ್ನು ಕಟ್ಟಿಸಿಕೊಡುವುದಾಗಿ ವಾಗ್ದಾನ ಮಾಡಿರುವ ಹೆಬ್ಬಟಂ ಗೌಡರ ಪರವಾಗಿ ನಿಂತರು. ಆಯಾ ಹೋರಾಟಗಳು ಪ್ರತಿಭಟನೆಗಳು ರಾಯಲಸೀಮೆಯಲ್ಲಿ ಹೀಗೆ ಕಾಣಿಸಿಕೊಂಡು ಹಾಗೆಯೇ ನೇಪಥ್ಯಕ್ಕೆ ಸರಿದಿರುವ ಉದಾಹರಣೆಗಳು ಸಾಕಷ್ಟು ಉಂಟು.

ಆದ್ದರಿಂದ ಅವುಗಳ ಕುರಿತು ಇಲ್ಲಿ ಪ್ರಸ್ತಾಪಿಸುವುದು ಸರಿಯಲ್ಲ. ಅವೆಲ್ಲಕ್ಕಿಂತ ಮುಖ್ಯವಾಗಿ ಲಿಂಗ ಪ್ರತಿಷ್ಠಾಪನೆ ವಿಷಯಕ್ಕೆ ಬರುವುದಾದರೆ!

ಯಾರು ಹೇಳಿದರೋ ಯಾರು ಹೇಳಲಿಲ್ಲವೋ ಎನ್ನುವುದು ಮುಖ್ಯವಲ್ಲ, ವಾಗಿಲಿಯ ಸುತ್ತಮುತ್ತಲ ಗ್ರಾಮಗಳಿಂದ ಸಾವಿರಾರು ಜನರು ವಾಗಿಲಿಗೆ ಪ್ರವಾಹದೋಪಾದಿಯಲ್ಲಿ ಹರಿದು ಬಂದು ಸೇರಿದರು ಎನ್ನುವುದು ಮುಖ್ಯ. ಆಯಾ ಊರುಗಳಿಂದ ಸಮಾಳ ನಂದಿಕೋಲು ಬ್ಯಾಂಡುಭಜಂತ್ರಿಗಳು ಬಂದು ನುಡಿಯಲಾರಂಭಿಸಿದವು ಎನ್ನುವುದು ಮುಖ್ಯ, ಕೂಡ್ಲೂರಿನ ವೀರಗಾಸೆ ತಂಡದವರು ಶಿವತಾಂಡವ ನೃತ್ಯ ಆರಂಭಿಸಿದೊಡನೆ ಹತ್ತಾರು ಮಂದಿ ಆಸ್ತಿಕರ ಮೈಯಲ್ಲಿ ಶ್ರೀಶೈಲಮಲ್ಲಿಕಾರ್ಜುನ ಕಾಣಿಸಿಕೊಂಡು ಕಾರಣಿಕ ನುಡಿಯಲಾರಂಭಿಸಿದ ಎನ್ನುವುದು ಮುಖ್ಯ. ಚೆನ್ನತುಂಬಳದಿಂದ ಶಿವರಾಮಶಾಸ್ತ್ರಿಗಳು ತಮ್ಮ ಅಪಾರ ಶಿಷ್ಯರೊಂದಿಗೆ ಬ್ರಾಹ್ಮೀಮುಹೂರ್ತಕ್ಕೂ ಪೂರ್ವದಲ್ಲಿಯೇ ಆಗಮಿಸಿ ಕಿವಿಗಡಚಿಕ್ಕುವಂತೆ ಮಂತ್ರಪಠಣ ಆರಂಭಿಸಿದರೆನ್ನುವುದು ಇನ್ನೂ ಮುಖ್ಯ, ಹೋಮಹವನ ಧೂಪದ ಪರಿಮಳ ಸಮಸ್ತ ಗ್ರಾಮವನ್ನಾವರಿಸಿದ ಪರಿಣಾಮವಾಗಿ ವಾಗಿಲಿಯ ಬಹುತೇಕ ಜನರು ಅಪರೂಪವೋ ಎಂಬಂತೆ ಸ್ನಾನ ಮಾಡಿ ಶುಚಿರ್ಭೂತರಾದರೆನ್ನುವುದೂ ಮುಖ್ಯ ಸಂಗತಿಯೆ. ಅಡ್ಡಪಲ್ಲಕಿ ಎಲ್ಲಿಂದ ಬಂತೆನ್ನುವುದು ತಿಳಿಯದು, ಅದನ್ನು ಯಾರು ಅಲಂಕರಿಸಿದರೆನ್ನುವುದು ತಿಳಿಯದು, ಅದು ಯಾವಾಗ ಹೊಲೆಗೇರಿಯನ್ನು ಪ್ರವೇಶಿಸಿತೋ, ಅಲ್ಲಿದ್ದ ಐದಾರು ಮಣ ತೂಕದ ಕಪ್ಪು ಶಿಲೆಯ ಲಿಂಗವನ್ನು ಅದರೊಳಗೆ ಕೂರಿಸಿಕೊಂಡು ಮೆರವಣಿಗೆಯಲ್ಲಿ ಬೇವಿನಮರದವರೆಗೆ ಸಾಗಿಸಿ ತಂದದ್ದಂತೂ ಸಾಹಸಗಾಥೆಯೇ ಸರಿ. ಪ್ರತಿಷ್ಠಾಪನಾಕಾರ್ಯ ಅಲ್ಲಿ ಆರಂಭಗೊಳ್ಳುವುದಕ್ಕೂ ಕೆಳಮನಿ ಶಿವಾರೆಡ್ಡಿಯವರ ಕಣದ ವಿಶಾಲ ಬಯಲಲ್ಲಿ ಅನ್ನಸಂತರ್ಪಣೆ ಮುಕ್ತಾಯಗೊಳ್ಳುವುದಕ್ಕೂ ಸರಿ ಹೋಯಿತು.

++++

ಬೆಳಿಗ್ಗೆ ಐದರಿಂದ ಕಾದಂಬರಿಯ ಬರಹವನ್ನು ಮುಂದುವರಿಸಿದ್ದೆನಷ್ಟೆ.

ಪನ್ನಂಗಧರನ ಸಲಹೆ ಮೇರೆಗೆ ದಯಾನಂದ ಹೊಲೆಯರ ಕೇರಿಯಲ್ಲಿದ್ದ ಶ್ರೀಶೈಲಮಲ್ಲಿಕಾರ್ಜುನ ಹೆಸರಿನ ಲಿಂಗವನ್ನು ಅಸ್ತ್ರವನ್ನಾಗಿ ಪರಿವರ್ತಿಸಿ ಅದರ ಮೂಲಕ ಶೋಷಿತರನ್ನು ಸಂಘಟಿಸುವ ಪ್ರಯತ್ನ ಆರಂಭಿಸಿದ್ದ. ಅದು ಆದಿವಾಸಿಗಳ ಶೂದ್ರ ದಲಿತರ ಹಕ್ಕು ಎಂದು ತನ್ನ ಲಘು ಭಾಷಣದಲ್ಲಿ ಅದೇ ತಾನೆ ಪ್ರಸ್ತಾಪಿಸಿದ, ಬೇಡರ ಕಣ್ಣಪ್ಪನ ಕಥೆಯನ್ನು ಹೇಳುವುದರ ಮೂಲಕ ಅವರನ್ನು ಪರವಶಗೊಳಿಸಿದ. ಆಳಿಗೊಂದು ಕಲ್ಲು ಜೋಡಿಸಿ ಅದಕ್ಕೊಂದು ಗುಡಿ ಸ್ವರೂಪದ ನೆಲೆಯನ್ನು ಕಲ್ಪಿಸುವುದು ಮುಖ್ಯವೆಂದು ಒತ್ತಿ ಹೇಳಿದ. ಅದಕ್ಕೆ ಅವರೆಲ್ಲ ಸಮ್ಮತಿಸಿದರು. ಎಲ್ಲೆಲ್ಲಿಂದಲೋ ತಲಾ ಒಂದೊಂದು ಕಲ್ಲುಗಳನ್ನು ತಂದು ಗುಡ್ಡೆ ಹಾಕಿದರು. ಇನ್ನೇನು ಕಟ್ಟಡಕ್ಕೆ ಬುನಾದಿ ಹಾಕಬೇಕೆನ್ನುವಷ್ಟರಲ್ಲಿ ಗೌಡರ ಕಡೆಯಿಂದ ಕರೆ ಬರುವುದು, ಶೋಷಕರ ಕರೆಯನ್ನು ಮನ್ನಿಸುವುದೋ ತಿರಸ್ಕರಿಸುವುದೋ ಎಂಬ ಗೊಂದಲ ಚರ್ಚೆ ವಾಗ್ವಾದ. ಅದೇ ದಿವಸ ರಾತ್ರಿ ಸವರ್ಣೀಯರ ಪೈಕಿ ಕೆಲವರು ಲಿಂಗವನ್ನು ಅಪಹರಿಸುವ ಸಲುವಾಗಿ ಕೇರಿಗೆ ಬರುವರು, ಆದರೆ ಕಾವಲಿದ್ದ ದಲಿತರು ಪ್ರತಿಭಟಿಸಿದ್ದರಿಂದಾಗಿ ಕಳ್ಳರು ಬರಿಗೈಲಿ ಮರಳುವುದು ಅನಿವಾರ್ಯವಾಗುವುದು. ಪುನಃ ಅಪಹರಣ ಒಕ್ಕಲೆಬ್ಬಿಸುವ ಪ್ರಯತ್ನಗಳು ಮರುಕಳಿಸುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ಗುಡಿಯ ನಿರ್ಮಾಣದ

ಕಾರ್ಯ ಮುಗಿಯುವವರೆಗೆ ಲಿಂಗವನ್ನು ಎಲ್ಲಾದರೂ ಅಡಗಿಸುವುದು ಮುಖ್ಯ. ಗೌಡರ ಕಡೆಯ ಸಶಸ್ತ್ರಧಾರಿಗಳು ಕೇರಿಯ ಗುಡಿಸಲು ಝೋಪಡಿಗಳನ್ನು ಕೂಲಂಕಷ ಶೋಧಿಸದೆ ಇರಲಾರರು. ಅದನ್ನು ಗೌಡರ ತೋಟದಲ್ಲಿಯೇ ಅಡಗಿಸಿಡುವುದೆಂದು ಸೂಚಿಸಿದ ಕಂಡಕ್ಟರೋಬಲೇಸನನ್ನು ಪನ್ನಂಗಧರ ಸ್ಪರ್ಶಿಸಿ ಅಭಿನಂದಿಸುತ್ತಾನೆ. ಗೌಡರ ಮನೆಯ ಜೀತದಾಳುಗಳ ಸಹಕಾರದಿಂದ ಲಿಂಗವನ್ನು ಸಾಗಿಸಿ ತೋಟದ ಮೂಲೆಯಲ್ಲಿದ್ದ ಬಣವೆಯಲ್ಲಿ ಅಡಗಿಸಿಟ್ಟಿದ್ದಾಯಿತು. ಅವರೆಲ್ಲ ಅಲ್ಲಿಂದ ಮರಳುವಷ್ಟರಲ್ಲಿ ಪೂರ್ವದ ದಿಗಂತದಲ್ಲಿ ಬೆಳಗು ಕಾಣಿಸಿಕೊಳ್ಳುವುದಕ್ಕೂ ಕಾದಂಬರಿಯ ಏಳನೆ ಆಶ್ವಾಸ ಪೂರ್ಣಗೊಳ್ಳುವುದಕ್ಕೂ ಸರಿ ಹೋಗುತ್ತದೆ.

ಮುಂದಿನ ಆಶ್ವಾಸದಲ್ಲಿ ನಗರೂರು ಲಕ್ಷ್ಮಿಯನ್ನು ಕಲಾವಿದೆ ಪದ್ಮಾವತಿಯ ಪಾತ್ರದೊಳಗೆ ಅಳವಡಿಸುವುದೋ, ಆ ಎರಡೂ ಪಾತ್ರಗಳನ್ನು ಸಮೀಕರಿಸಿ ಹೊಸದೊಂದು ಪಾತ್ರವನ್ನು ಸೃಷ್ಟಿಸುವುದೋ ಎಂಬ ಗೊಂದಲದಲ್ಲಿಯೇ ತನ್ನ ನಿರ್ವಿರಾಮ ಕ್ರಿಯಾಶೀಲತೆಯಿಂದ ದಣಿದಿದ್ದ ಪೆನ್ನಿನ ಮೊನೆಗೆ ಕ್ಯಾಪು ತೊಡಿಸುವ ಸಲುವಾಗಿ ಅದನ್ನು ಎಡಗೈಯಲ್ಲಿ ಹಿಡಿದುಕೊಂಡೆ. ಕಾದಂಬರಿಯ ಕ್ಲೈಮ್ಯಾಕ್ಸಿನಲ್ಲಿ ಕ್ರಾಂತಿಕಾರಿ ಪಾತ್ರಗಳಲ್ಲಿ ಒಂದೇ ಒಂದು ಉಳಿಯುವುದು ಮುಖ್ಯ, ಅವೆರಡೂ ಮುಂದುವರೆದಲ್ಲಿ ಕಾದಂಬರಿ ಅಗತ್ಯಕ್ಕಿಂತ ಹೆಚ್ಚು ಬೆಳೆಸಬೇಕಾಗುವುದು. ಎಂಟನೆ ಆಶ್ವಾಸದಲ್ಲಿ ಪನ್ನಂಗಧರನನ್ನು ಬಲಿಗೊಡುವುದೋ! ದಯಾನಂದನನ್ನು ಕೊನೆಗಾಣಿಸುವುದೋ! ಅದನ್ನು ಭೌತಿಕವಾಗಿ ನಶ್ವರಗೊಳಿಸುವುದು ಗೌಡರ ಸುಪಾರಿ ಕೊಲೆಗಾರರ ಮೂಲಕವೋ! ಪೋಲಿಸರ ನಕಲಿ ಎನ್‌ಕೌಂಟರ್ ಮೂಲಕವೋ! ಕಥಾನಕದಿಂದ ನಿರ್ಗಮಿಸಲಿರುವ ಪಾತ್ರ ಅವಿವಾಹಿತವಾಗಿರುವುದು ಎಷ್ಟು ಮುಖ್ಯವೋ ಪ್ರೇಮಕಲಾಪಗಳಿಂದ ದೂರವಿರುವುದು ಸಹ ಅಷ್ಟೇ ಮುಖ್ಯ. ಆ ಅರ್ಹತೆ ಇರುವುದು ಅವಧೂತ ವೇಷಧಾರಿ ಪನ್ನಂಗಧರನಿಗೆ ಮಾತ್ರ. ಅಷ್ಟರೊಳಗೆ ಅದು ತನ್ನೆಲ್ಲಾ ಶಾಸ್ತ್ರಜ್ಞಾನವನ್ನು ಎಡಪಂಥೀಯ ವಿಚಾರಧಾರೆಯನ್ನು ಮಾನವರೂಪೀ ಶಸ್ತ್ರಗಳಿಗೆ ಧಾರೆ ಎರೆಯುವುದು ತೀರಾ ಅಗತ್ಯ. ಅವಧೂತ ವೇಷದಲ್ಲಿರುವ ಅದನ್ನು ಹಿಂಸಿಸಿ ಕೊಲ್ಲುವುದಕ್ಕೆ ಬದಲು ಅದನ್ನು ನಲ್ಲಮಲ ಅರಣ್ಯದ ಕಡೆಗೋ ಹಿಮಾಲಯದ ಕಡೆಗೋ ಕಳಿಸಿದರೆ ಹೇಗೆ ಎಂದೂ ಯೋಚಿಸಲಾರಂಭಿಸಿದೆ. ಅದರ ನಿರ್ಗಮನ ಸಕಾರಣಿಕವಾಗಿರಬೇಕು ತರ್ಕಶುದ್ಧವಾಗಿರಬೇಕು, ಅದಕ್ಕೆ ಪೂರಕವಾಗಿ ಕೆಲವು ಘಟನೆಗಳನ್ನು ಸೃಷ್ಟಿಸಬೇಕು. ಸುಂದರಿ ಸುಖಿ ಸದ್‌ಗೃಹಿಣಿ ಅಮೃತಮತಿ ಕುರೂಪಿ ಅಷ್ಟಾವಂಕನನ್ನು ಮೋಹಿಸಿದ ಕಾರಣಗಳ ಕುರಿತಂತೆ, ಎಂಟು ವರ್ಷದ ಮಗುವಿನ ತಾಯಿ ಅನ್ನಾಳ ಅತೃಪ್ತ ಕಾಮನೆಗಳ ಕುರಿತಂತೆಯೂ ಯೋಚಿಸಲಾರಂಭಿಸಿದೆ. ಜನ್ನ, ಟಾಲ್‌ಸ್ಟಾಯ್‌ಗಳಂಥ ಅವುಗಳ ಮೇಧಾವಿ ಕರ್ತೃಗಳು ಪಾತ್ರಗಳ ವರ್ತನಾ ಚಿಕಿತ್ಸೆ ಕುರಿತಂತೆ ಯೋಚಿಸಿದ್ದಲ್ಲಿ ಅಮೃತಮತಿ ಅಷ್ಟಾವಂಕನಿಂದ ಮರಳದೆ ಇರುತ್ತಿರಲಿಲ್ಲ, ಅನ್ನಾ ವ್ರಾಂಸ್ಕಿಯ ತೊಡೆ ಮೇಲಿನ ತನ್ನ ಕೈಯನ್ನು ಉಪಸಂಹರಿಸಿಕೊಳ್ಳದೆ ಇರುತ್ತಿರಲಿಲ್ಲವೇನೊ! ಹೋರಾಟಗಾರರ ವ್ಯಕ್ತಿತ್ವದಲ್ಲಿ ಅಮೃತಮತಿಯನ್ನು, ಅನ್ನಾಳನ್ನು ಸೃಷ್ಟಿಸಿದರೆ ಮಾತ್ರ ಪನ್ನಂಗಧರನಂಥ ಪಾತ್ರವನ್ನು ಸುಲಭವಾಗಿ ಕಾದಂಬರಿಯಿಂದ ಹೊರ ಕಳಿಸಬಹುದಲ್ಲವೆ! ಕಾರಣ ಸ್ತ್ರೀತನವಿಲ್ಲದವರು ಹೋರಾಟಗಾರರಾಗಲೀ ಸನ್ಯಾಸಿಗಳಾಗಲೀ ಆಗಲಾರರು ಅಲ್ಲವೆ! ಹೀಗೆ ಯೋಚಿಸುತ್ತ ಪೆನ್ನಿನ ಮೊನೆಗೆ ಅದರ ಕ್ಯಾಪನ್ನು ನಿಧಾನವಾಗಿ ಪೋಣಿಸುವುದಕ್ಕು ಹೊಸ್ತಿಲಾಚೆ ಕಾಣಿಸಿಕೊಂಡ ನೆರಳು ನನ್ನ ಕಾಲನ್ನು ಸ್ಪರ್ಶಿಸುವುದಕ್ಕೂ ಸರಿ ಹೋಯಿತು. ತಲೆ ಹೊರಳಿಸಿ ನೋಡಿದೆ.

ತೊಡೆ ಮೇಲ್ಭಾಗದವರೆಗೆ ಕಟ್ಟಿಕೊಂಡಿದ್ದ ಪಂಚೆಯನ್ನು ಮೊಣಕಾಲ ಕೆಳಗೆ ಇಳಿಸಿದಾದ ಬಳಿಕ ಶೇಷಣ್ಣ ಮೆಲ್ಲಗೆ ತನ್ನ ಬಲಗಾಲನ್ನು ಹೊಸ್ತಿಲೀಚೆ ಇರಿಸಿ ಅದುವರೆಗೆ ತಗ್ಗಿಸಿದ್ದ ತಲೆಯನ್ನು ತುಸು ಎತ್ತಿ ನನ್ನ ಕಡೆ ನೋಡಿದ. ಏನೋ ಯೋಚಿಸಿ ಅದನ್ನು ಪುನಃ ಉಪಸಂಹರಿಸಿಕೊಳ್ಳಲಿದ್ದ, ಹಸ್ತಪ್ರತಿಯನ್ನು ದೂರಕ್ಕೆ ಸರಿಸಿ ಆಗಮನಕ್ಕೆ ಸಂಬಂಧಿಸಿದ ಭಾವನೆಗಳನ್ನು ಸರಳಗೊಳಿಸಿದೆ. ಪೂರ್ಣಪ್ರಮಾಣದಲ್ಲಿ ಒಳಗೆ ಪ್ರವೇಶಿಸಿ ತನ್ನ ಹೆಗಲ ಮೇಲಿದ್ದ ವಲ್ಲಿಯ ಸಹಾಯದಿಂದ ನೆಲವನ್ನು ತಕ್ಕಮಟ್ಟಿಗೆ ಶುದ್ದಗೊಳಿಸಿ ನಿಧಾನ ಗತಿಯಲ್ಲಿ ಕುಳಿತು ಗೋಡೆಗೆ ಬೆನ್ನನ್ನು ಆನಿಸಿ ನಿಶ್ಚಿಂತನಾದನು.

ನೆಟ್ಟನೆ ನೋಡಿದೆ, ಅದೇ ದಿವಸ ಬೆಳೆಗ್ಗೆ ಮುಖಕ್ಷೌರ ಮಾಡಿಸಿಕೊಂಡಿರುವಂಥ ಮುಖದ ಹಲವು ಕಡೆ ಎದ್ದು ಕಾಣುತ್ತಿರುವ ಎಲುಬುಗಳು, ಹಣ್ಣಾಗಿದ್ದರೂ ಹುರಿಗೊಂಡಿರುವ ರಾಯಸೀಮೆ ಶೈಲಿಯ ಮೀಸೆ, ಪೊದೆ ಹುಬ್ಬುಗಳಲ್ಲಿ ಅಲ್ಲಲ್ಲಿ ನೆರೆತಿರುವ ನೀಳ ಕೂದಲು, ಮೂಗಿನೊಳಗಿನ ಮೇಲ್ಭಾಗದಿಂದಲೂ ಕಿವಿಗಳ ಅಂಚಿನ ಮೇಲೂ ಹೊರಚಾಚಿರುವ ಇಂಚುಗಾತ್ರದ ಕೂದಲು, ತನ್ನ ಮೇಲ್ದುಟಿಯ ಮೇಲೆ ಚಾಚಿರುವ ಮೂಲಂಗಿ ಸದೃಶ ಮೂಗು. ಯಾವುದೇ ನಾಟಕಗಳ ನಾಯಕ ಪಾತ್ರಗಳಿಗೆ ಹೇಳಿ ಮಾಡಿಸಿದಂತಿರುವ ವ್ಯಕ್ತಿತ್ವ ತನ್ನದು. ತದೇಕವಾಗಿ ನೋಡಿದೆ, ಒಟ್ಟಿನಲ್ಲಿ ಯಾವುದೋ ವಿಶೇಷತೆ ತನ್ನಲ್ಲಿತ್ತು. ಏನು ಸಮಾಚಾರ ಎಂದು ನಾನು ಕೇಳುವ ಮೊದಲೆ ತಾನೆ..

"ನನ್ನ ಮಗಳು ಉಡಸಲಿಯನ್ನು ನೋಡಲು ಲಿಂಗದಳ್ಳಿಯ ಬೀಗರು ಬಂದಿದ್ದರು ಸಾರ್" ಎಂದು ಹೇಳಿದ. ಅದನ್ನು ಕೇಳಿದೊಡನೆ ನನಗೆ ಸಂತೋಷವಾಯಿತು. ಆತನಂತೆ ಆತನ ಮಗಳು ಉಡುಸಲಮ್ಮ ನನಗೆ ಚಿರಪರಿಚಿತಳು. ವಾರಕ್ಕೆರಡು ಮೂರು ಸಲ ನಮ್ಮ ಮನೆಗೆ ಬಂದು ಕಸಗೂಡಿಸಿ ಹೋಗುತ್ತಿದ್ದಳು, ತಾಯಿಯ ಹೊಟ್ಟೆಯಲ್ಲಿದ್ದಾಗಲೇ ಲಘು ಪೋಲಿಯೋಕ್ಕೆ ತುತ್ತಾಗಿ ತನ್ನೆರಡೂ ಕಾಲುಗಳನ್ನು ಊನಗೊಳಿಸಿಕೊಂಡಿದ್ದ ಉಡುಸಲಮ್ಮ ಸುಂದರಿಯಲ್ಲದಿದ್ದರೂ ಕುರೂಪಿ ಏನಲ್ಲ. ಇನ್ನೂ ಹನ್ನೆರಡು ಹದಿಮೂರರ ನಡುವೆ ಇರುವ ಚಿಕ್ಕ ವಯಸ್ಸು. ಋತುಮತಿ ಸಹ ಆಗಿರಲಿಲ್ಲ, ಇನ್ನೆರಡು ಮೂರು ಕಾಯಬಹುದಿತ್ತಲ್ಲವೆ!

"ಆಕೆಗೆ ಗಂಡು ಸಿಗುವರೋ ಇಲ್ಲವೋ ಎಂದುಕೊಂಡಿದ್ದೆ ಸಾರ್. ನನ್ನ ಪುಣ್ಯಕ್ಕೆ ಬಂದರು, ನೋಡಿದರು, ಮಾತುಕತೆಯೂ ಆಯಿತು, ವರದಕ್ಷಿಣೆ ಏನೂ ಇಲ್ಲ, ಬರುವ ಮಾಘಮಾಸದಲ್ಲಿ ಮನೆ ಮುಂದೆ ಮದುವೆ ಮಾಡಿಕೊಡಬೇಕಿದೆ! ಎಲ್ಲಾ ಶ್ರೀಶೈಲಮಲ್ಲಿಕಾರ್ಜುನನ ದಯೆ ಸಾರ್!" ಎಂದು ಆಸ್ತಿಕನಂತೆ ಹೇಳಿದ. ನನಗೂ ಒಂದು ಮಾತು ತಿಳಿಸಬಹುದಿತ್ತಲ್ಲವೆ ಎಂದು ಕೇಳಬೇಕೆಂದಿದ್ದೆ, ಅದಕ್ಕೆ ತಾನೆ "ಅವರು ಬಂದದ್ದು ತಡಾಗಲಿಲ್ಲ ಹೋಗಿದ್ದೂ ತಡಾಗಲಿಲ್ಲ ಸಾರ್, ಹುಡುಗನದ್ದೂ ಇನ್ನೂ ಚಿಕ್ಕ ಪ್ರಾಯ, ಆದರೆ ಅವನಿಗೆ ಒಂದು ಕಣ್ಣು ಮಾತ್ರ ಇಲ್ಲ, ಇನ್ನೊಂದು ಪರವಾಯಿಲ್ಲ. ಹೆಂಡತಿ ಹುಡುಗನನ್ನು ಒಪ್ಪಿದ್ದು ನನ್ನ ಪುಣ್ಯ. ಹುಡುಗಿಯರನ್ನು ಕೈಗೆ ಬರುವುದಕ್ಕೂ ಮೊದಲೆ ಮನೆಯಿಂದ ಕಳಿಸುವುದು ಮುಖ್ಯ, ಇಲ್ಲಾಂದರೆ ಆ ಕಂಡಕ್ಟರೋಬನ ಗತಿ ನನ್ನಂಥವರಿಗೂ ಬರುವುದು, ಪಾಪ!" ಎಂದು ನಿಟ್ಟುಸಿರುಬಿಟ್ಟನು.

ಹೆಬ್ಬಟಂ ಗೌಡರ ಮನೆಯಲ್ಲಿ ಮಾತುಕತೆಯಾದ ಬಳಿಕ ಓಬಲೇಸನಿಗೂ ಆಸ್ಪರಿ ಪಾಂಡುರಂಗನಿಗೂ ಶ್ರೀಶೈಲಮಲ್ಲಿಕಾರ್ಜುನಲಿಂಗ ಸ್ಥಳಾಂತರ ವಿಷಯಕ್ಕೆ ಸಂಬಂಧಿಸಿದಂತೆ ವಾಗ್ವಾದ ನಡೆಯಿತಂತೆ! ತನ್ನ ಮಗಳ ಮದುವೆಗಿಂತ ಮುಖ್ಯವಾಗಿ ತನ್ನ ಕೇರಿಯವರಿಗೆ ಮನೆ ಕಟ್ಟಿಕೊಳ್ಳಲು ಜಾಗ ಸಿಗುವುದು ಮುಖ್ಯವೆಂದು ಓಬ ವಾದಿಸಿದನಂತೆ! ಪಾಂಡುರಂಗ ಆತನ

ವಾದವನ್ನು ಒಪ್ಪಲಿಲ್ಲವಂತೆ! ಸ್ವಾಭಿಮಾನವಿಲ್ಲದವರ ಮನೆಯವರ ಮಗಳು ಬೇಡವೆಂದು ಹೇಳಿ ಹೋದನಂತೆ! ಕೇಳಿದ ನನಗೆ ಕೆಟ್ಟೆನಿಸಿತು. ಕಳೆದ ವರ್ಷವಷ್ಟೆ ಆದೋನಿಯ ವಸತಿ ಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ಪಾಸಾಗಿರುವ ಓಬಲೇಸನ ಮಗಳು ಇಂದಿರಾಳನ್ನೂ ನಾನು ನೋಡಿರುವುದುಂಟು, ತನ್ನ ತಂದೆಯಂತೆ ಲಕ್ಷಣವಾಗಿರುವ ಹುಡುಗಿ, ಪಾಂಡುರಂಗ ನಿರಾಕರಿಸಿದ್ದು ಒಳ್ಳೆಯದೆ, ಹೇಗೋ ಕಷ್ಟಪಟ್ಟು ಟಿಸಿಹೆಚ್ ಮಾಡಿಸಿದಲ್ಲಿ ಓಬಲೇಸನಿಗೆ ಒಳ್ಳೆಯ ಅಳಿಯ ದೊರಕದೆ ಇರಲಾರನು.

ವಾಗಿಲಿಯಲ್ಲಿನ ದಲಿತರ ಓಣಿಯಲ್ಲಿರುವ ಮನೆಗಳನ್ನು ನೋಡುವುದೆಂದರೆ ಯುದ್ಧಾನಂತರದ ಕಳಿಂಗದ ರಣಭೂಮಿಯನ್ನು ನೆನಪು ಮಾಡಿಕೊಂಡಂತೆಯೇ ಸರಿ. ಓಬಲೇಶ ದಾಸರಿ ತಿಮ್ಮಯ್ಯನಂಥವರ ಮನೆಗಳನ್ನು ಹೊರತುಪಡಿಸಿದರೆ ಉಳಿದಂತೆ ಎಲ್ಲವೂ ಅಭದ್ರವೆ. ಬಿರುಗಾಳಿಗೆ ಹಾರಿ ಹೋಗುವಂಥ ತಂಗಾಳಿಗೆ ನೆಲಕಚ್ಚುವಂಥ ಗುಡಿಸಲುಗಳು ಝೋಪಡಿಗಳು. ಗಂಡಸರದೇನೋ ಸರಿ, ಆದರೆ ದಲಿತ ಮಹಿಳೆಯರ ಸ್ನಾನದಂಥ ಖಾಸಗಿ ಕ್ರಿಯೆ ನಡೆಯುತ್ತಿದ್ದುದೂ ಸಹ ಬಯಲಲ್ಲಿ. ಮನೆ ಇಲ್ಲದವರಿಗೆ ಮಾನ ಇಲ್ಲ ಎನ್ನುವುದಕ್ಕೆ ವಾಗಿಲಿಯ ದಲಿತರೇ ಸಾಕ್ಷಿ. ಆದ್ದರಿಂದ ಮುಖ್ಯವಾಗಿ ವಾಗಿಲಿಯ ದಲಿತರು ವಾಸಿಸಲಿಕ್ಕೆ ನಿವೇಶನಗಳು ದೊರಕುವುದು ಮುಖ್ಯ, ಶಾಸಕ ರಾಜಾರತ್ನಂ ಅವರ ನೆರವಿನಿಂದ ಅವರೆಲ್ಲರು ವಾಸಿಸುವುದಕ್ಕೆ ಸೂರು ದೊರಕುವುದು ಮುಖ್ಯ. ಮನೆ ಎನ್ನುವುದು ಯಾವುದೇ ನಾಗರಿಕನ ಸ್ವಾಭಿಮಾನದ ಪ್ರತೀಕ. ಆದರೆ ಹೆಬ್ಬಟಂ ಗೌಡರು ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು, ತಮಗಿರುವ ಸಹಸ್ರಾರು ಎಕರೆ ಜಮೀನಿನ ಪೈಕಿ ವಾಗಿಲಿಯ ಸರಹದ್ದಿನಲ್ಲಿರುವ ಹೊಲಗಳೇ ಅಧಿಕ. ಅದರಲ್ಲಿ ಎರಡೇ ಎರಡು ಎಕರೆ! ಕೊಡುವರೋ ಇಲ್ಲವೋ!

"ಕೊಟ್ಟ ಮಾತಿನಂತೆ ನಡೆದುಕೊಂಡಿದ್ದರೆ ಅವರ್‍ಯಾಕೆ ಊರುಬಿಟ್ಟು ಹೋಗುತ್ತಿದ್ದರು ಸಾರ್! ಊರ ಸುತ್ತಲಿರುವುದು ಬಂಗಾರದಂಥ ಜಮೀನು. ಅದೂ ಅಲ್ಲದೆ ಪ್ರತಿಯೊಂದು ಹೊಲದಲ್ಲೂ ಅವರ ಪೂರ್ವಿಕರ ಸಮಾಧಿಗಳಿವೆ. ತಮ್ಮ ಇನ್ನೊಂದು ಹೊಲದಲ್ಲಿ ತಮ್ಮ ಸಮಾಧಿ ಕಟ್ಟಿಸಿಕೊಳ್ಳಲು ತಯ್ಯಾರಿ ನಡೆಸಿರುವರು, ಅವು ಇರುವ ಕಾರಣಕ್ಕೆ ಕೊಡುವುದು ಎಷ್ಟು ಕಷ್ಟವೋ ಪಡೆಯುವುದೂ ಅಷ್ಟೇ ಕಷ್ಟ ಸಾರ್!" ಎಂದು ಹೇಳಿದಾದ ಬಳಿಕ ಮೌನವಹಿಸಿದ, ಏನೋ ಯೋಚಿಸಿದಾದ ಬಳಿಕ ತಾನೇ "ಸೀತಾರಾಮರೆಡ್ಡಿಯವರೇನೋ ಒಳ್ಳೆಯವರು, ಧಾರಾಳಿಗಳು. ಆದರೆ ಅವರ ಮಕ್ಕಳು ಒಳ್ಳೆಯವರಲ್ಲ, ಇವರು ಕೊಟ್ಟರೆಂದರೆ ಅವರು ಹಿಂದೆಯೇ ಕಸಿದುಕೊಳ್ಳುವರು, ತಮ್ಮ ಮಾತನ್ನು ಕೇಳದವರಿಗೆ ಹಿಂಸೆ ಕೊಡುವುದು, ರೋಸಿ ಊರುಬಿಡುವಂತೆ ಮಾಡುವುದು ಇದೆಲ್ಲ ಮಾಮೂಲು ಸಾರ್. ಅದರಲ್ಲೂ ಅವರ ಮಗ ಪ್ರತಾಪರೆಡ್ಡಿ ತುಂಬಾ ಕೆಟ್ಟವನು, ಉಳಿದವರು ನೀರಿರುವ ಕಡೆ ಕುತ್ತಿಗೆ ಕೊಯ್ದರೆ ಅವನು ನೀರಿಲ್ಲದ ಕಡೆ ಕತ್ತು ಹಿಚುಕುವುದರಲ್ಲಿ ನಿಸ್ಸೀಮ, ಆದ್ದರಿಂದ ಅವನು ಮಾತ್ರ ಜೈಲಿನಿಂದ ಬಿಡುಗಡೆಯಾಗಲೇಬಾರದು ಸಾರ್!" ಎಂದು ಹೇಳುತ್ತ ತನ್ನ ಮುಖವನ್ನು ತುಸು ವ್ಯಗ್ರವಾಗಿಸಿಕೊಂಡ. ಪ್ರತಾಪರೆಡ್ಡಿಯ ಅಟಾಟೋಪಗಳು ಕುರಿತಂತೆ ಕೇಳಿದ್ದೆನೇ ಹೊರತು ಖುದ್ದ ನೋಡಿರಲಿಲ್ಲ, ಕಳೆದ ಕೆಲವು ವರ್ಷಗಳಿಂದ ಕರ್ನೂಲು ಕಡಪಾ ಜೈಲುಗಳಿಂದ ಸ್ಥಳಾಂತರಗೊಂಡು ಅಂತಿಮವಾಗಿ ಹೈದರಾಬಾದಿನ ಕುಖ್ಯಾತ ಚಂಚಲಗೂಡ ಜೈಲಿನಲ್ಲಿರುವ ಆತನನ್ನು ನೋಡುವ ಪ್ರಮೇಯ ನನಗೆ ಒದಗಿರಲಿಲ್ಲ.

ನಮ್ಮೀರ್ವರ ನಡುವೆ ಮಾತುಕತೆ ನಡೆಯುತ್ತಿದ್ದ ಹೊತ್ತಿನಲ್ಲಿ ಎಲ್ಲೆಲ್ಲಿಂದಲೋ!

..... ☙ .....

# ದೃಶ್ಯ: ಆರು

ನಾನು ವಾಗಿಲಿಗೆ ಬಂದದ್ದು ಕೆಲವು ವರ್ಷಗಳ ಹಿಂದೆ, ಆದರೆ ಹೆಬ್ಬಟಂ ಸೀತಾರಾಮರೆಡ್ಡಿಯವರ ಮಗ ಸೂರ್ಯಪ್ರತಾಪರೆಡ್ಡಿಯನ್ನು ಹತ್ತಿರದಿಂದಾಗಲೀ ದೂರದಿಂದಾಗಲೀ ನೋಡಿರಲಿಲ್ಲ. ನೋಡುವ ಪ್ರಮೇಯವೂ ಒದಗಿರಲಿಲ್ಲ. ಪ್ರತಿವರ್ಷ ಶಾಲೆಯಲ್ಲಿ ಹಮ್ಮಿಕೊಳ್ಳುವ ಧ್ವಜಾರೋಹಣ ಕಾರ್ಯಗಳಿಗೂ ಔಪಚಾರಿಕವಾದರೂ ಆತನನ್ನು ಆಹ್ವಾನಿಸಿರಲಿಲ್ಲ. ದಾರಿಯಲ್ಲಿ ಹೋಗುವ ಮಾರಿಯನ್ನು ನಿಲ್ಲಿಸಿ ಮಾತಾಡುವ ಪರಿಚಯ ಮಾಡಿಕೊಳ್ಳುವ ಸ್ವಭಾವದವನು ನಾನಾಗಿದ್ದರೂ ಆತನನ್ನು ಕಾಣಬೇಕೆಂಬ ಹಂಬಲ ನನ್ನನ್ನು ಕಾಡಿರಲೂ ಇಲ್ಲ, ಸುಂಟರಗಾಳಿ ಜಾಯಮಾನದ ಆತ ಒಂದು ಕಡೆ ಇದ್ದರೆ ತಾನೆ ಕಾಣುವುದು! ಇವತ್ತು ಬಳ್ಳಾರಿಯಲ್ಲಿದ್ದರೆ ನಾಳೆ ಇನ್ನೆಲ್ಲೋ! ಊರಿನ ಕೆಲ ವಾಚಾಳಿಗಳು ನನ್ನ ಬಳಿ ಆತನನ್ನು ಅತಿರಂಜನೀಯವಾಗಿ ವರ್ಣಿಸುತ್ತಿದ್ದುದೂ ಉಂಟು, ನನ್ನ ಕಲ್ಪನಾ ಲೋಕದಲ್ಲಿ ತಾನು ಅತಿಮಾನವನಾಗಿ ಸಂಚರಿಸುತ್ತಿದ್ದುದೂ ಉಂಟು, ಕನಸುಗಳಲ್ಲಿ ಹೀಗೆ ಮೂಡಿ ಹಾಗೆ ಮರೆಯಾಗುತ್ತಿದ್ದುದೂ ಉಂಟು, ಕಥೆಗಳ ಕೆಲವು ಪಾತ್ರಗಳಲ್ಲಿ ಆತನನ್ನು ಸಮೀಕರಿಸಿರುವುದೂ ಉಂಟು, ತಿಳಿದೋ ತಿಳಿಯದೆಯೋ ಆತನ ಕುರಿತಂಥ ವದಂತಿ ಊಹಾಪೋಹಗಳನ್ನು ಆಲಿಸುತ್ತಿದ್ದುದೂ ಉಂಟು, ನನ್ನ ಮನಸ್ಸು ಆತನನ್ನು ಕಾಣುವ ಸಲುವಾಗಿ ಕೆಲವೊಮ್ಮೆ ಚಡಪಡಿಕೆಗೆ ಒಳಗಾಗುತ್ತಿದ್ದುದೂ ಉಂಟು, ಆದರೆ ಆತನನ್ನು ಖುದ್ದ ಭೆಟ್ಟಿಯಾಗುವ ಮಾತನಾಡುವ ಅವಕಾಶ ಒದಗಿಬರಲೇ ಇಲ್ಲ.

ಹೈದರಾಬಾದಿನ ಜುಬ್ಲಿಹಿಲ್ಸ್ ಪ್ರದೇಶದಲ್ಲಿ ಕೊಲೆ ಸಂಭವಿಸಿದ ವಿಷಯ ತಿಳಿದದ್ದೂ ಅವರಿವರ ಮೂಲಕವೇ! ಆ ಕೊಲೆ ಕೇಸಿನಲ್ಲಿ ಆತ ನೇರವಾಗಿ ಭಾಗವಹಿಸಿದ್ದನೆಂದೂ, ಪೋಲಿಸರು ಆತನನ್ನು ಹುಡುಕುವ ಸಲುವಾಗಿ ಬಳ್ಳಾರಿ ವಾಗಿಲಿಯ ಮನೆಗಳನ್ನು ಶೋಧಿಸಿದರೆಂದೂ, ಹೆಬ್ಬಟಂ ಗೌಡರನ್ನು ಹೈದರಾಬಾದಿಗೆ ಕರೆಸಿಕೊಂಡು ವಿಚಾರಿಸಿದರೆಂದೂ

ತಿಳಿದದ್ದು ಅವರಿವರ ಮೂಲಕವೇ! ನನ್ನ ದುರಾದೃಷ್ಟವೋ ಎಂಬಂತೆ ಆ ಎಲ್ಲಾ ಘಟನೆಗಳು ಒಂದರ ಹಿಂದೊಂದರಂತೆ ಸಂಭವಿಸಿದ್ದು ನಾನು ರಜೆ ಮೇಲೆ ಹೋಗಿದ್ದಾಗ. ಕೆಲವು ಮಾಹಿತಿ ಪ್ರಕಾರ ಆತ ವಾಗಿಲಿಗೆ ತುಸು ದೂರದಲ್ಲಿರುವ ತಮ್ಮ ತೋಟದ ಮನೆಯಲ್ಲಿ ಹಗಲಿರುಳು ತಲೆ ತಪ್ಪಿಸಿಕೊಂಡಿದ್ದನಂತೆ! ಪೋಲಿಸರಿಗೆ ತನ್ನ ಅಡಗುದಾಣ ತಿಳಿಯದ ಹಾಗೆ ಸಶಸ್ತ್ರಧಾರಿಯಾಗಿ ಎಚ್ಚರವಹಿಸಿದ್ದನಂತೆ! ತನ್ನನ್ನು ಕಾಯುವ ಸಲುವಾಗಿ ಹತ್ತಾರು ಮಂದಿ ಅಂಗರಕ್ಷಕರನ್ನು ಇಟ್ಟುಕೊಂಡಿದ್ದನಂತೆ! ದೊಡ್ಡಗೌಡರೇ ತಮ್ಮ ಮಗನ ಇರುವಿಕೆ ಬಾಹ್ಯಪ್ರಪಂಚಕ್ಕೆ ತಿಳಿಯದ ಹಾಗೆ ಎಚ್ಚರ ವಹಿಸಿದ್ದರಂತೆ! ತನ್ನ ಬಾತ್ಮೀದಾರರ ಸಹಾಯದಿಂದ ಪ್ರತಾಪರೆಡ್ಡಿ ತನ್ನ ಗ್ರಾಮದ ಹಾಗೂ ಹೊರಪ್ರಪಂಚದ ವಿದ್ಯಾಮಾನಗಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದನಂತೆ! ನನ್ನ ಬಗ್ಗೆ ತನಗೆ ಯಾರು ಹೇಳಿದರೆನ್ನುವುದು ತಿಳಿಯದು! ಹೊಸ ಮೇಸ್ಟ್ರು ನನ್ನನ್ನು ಕಂಡೇ ಇಲ್ವಲ್ಲಾ ಎಂದು ಅವರಿವರನ್ನು ಕೇಳಿದ್ದನಂತೆ! ಹಾಗೆ ಕೇಳಿಸಿಕೊಂಡವರು "ಪ್ರತಾಪರೆಡ್ಡಿಗೌಡರು ನಿಮ್ಮನ್ನು ತುಂಬಾ ಕೇಳಿದರು, ಅದು ನಿಮ್ಮ ಅದೃಷ್ಟ, ಯಾವುದಕ್ಕೂ ತೋಟದ ಮನೆಗೆ ಹೋಗಿ ಒಮ್ಮೆ ಭೆಟ್ಟಿ ಮಾಡಿರಿ" ಎಂದು ಐಚ್ಛಿಕ ರೀತಿಯಲ್ಲಿ ಸಲಹೆ ನೀಡಿದ್ದರು. ಇನ್ನೂ ಕೆಲವರು ಆಪ್ತರು "ಆ ಪೀಡೆಯನ್ನು ಯಾಕೆ ಕಾಣುವಿರಿ, ನಿಮ್ಮ ಪಾಡಿಗೆ ನೀವು ಇದ್ದುಬಿಡಿ" ಎಂದೂ ಎಚ್ಚರಿಸಿದ್ದರು. ಆದರೂ ಆತನ ನೆನಪು ಅಂತರಂಗದಲ್ಲಿ ಬೆಳೆಯುತ್ತಿತ್ತು, ಭೆಟ್ಟಿ ಮಾಡುವಂತೆ ನನ್ನನ್ನು ಪುಸಲಾಯಿಸುತ್ತಿತ್ತು. ಏನೋ ವಿಲಕ್ಷಣ ಕುತೂಹಲ ಬೇರೆ. ಅಲ್ಲದೆ ಗೌಡರ ತೋಟವೇನು ವಾಗಿಲಿಗೆ ಹತ್ತಿರದಲ್ಲಿರಲಿಲ್ಲ, ಒಂದೂವರೆ ಮೈಲು ದೂರದ ಕೂಡ್ಲೂರು ಹಾದಿಯ ಮೂಲೆಯಲ್ಲಿ ವಾರಾಂಗನೆಯಂತೆ ಇತ್ತು, ನೋಡುವ ಸಲುವಾಗಿ ಅನೇಕ ಸಲ ತೋಟದವರೆಗೆ ಹೋಗಿದ್ದೆ, ಆತನ ದಿನಚರಿ ಹಾಗೂ ಅಭಿರುಚಿಗಳು ಇಷ್ಟವಾಗದೆ ವಾಪಸ್ಸು ಮರಳಿದ್ದೆನು. ಹಾದಿಯಲ್ಲಿ ಎದುರಾದ ಇದೇ ಶೇಷಣ್ಣ ನನ್ನನ್ನು ತಡೆಯುತ್ತಿದ್ದ! ದೊಡ್ಡವರನ್ನು ನೋಡುವುದು ಒಂದೆ, ಕೆಸರಲ್ಲಿ ಕಲ್ಲು ಹಾಕಿ ಮುಖಕ್ಕೆ ಸಿಡಿಸಿಕೊಳ್ಳುವುದೂ ಒಂದೆ ಹೇಳುತ್ತಿದ್ದ! ಆತನ ವ್ಯಕ್ತಿತ್ವದ ಪ್ರಭಾವಕ್ಕೆ ಒಮ್ಮೆ ಸಿಲುಕಿದಿರೆಂದರೆ ಅದರಿಂದ ವಾಪಸ್ಸು ಬರುವುದು ಕಷ್ಟವೆಂದು ಹೇಳುತ್ತಿದ್ದ! ಅರ್ಧ ದಾರಿಯಿಂದ ನನ್ನನ್ನು ಮರಳಿ ಕಳಿಸುತ್ತಿದ್ದ! ನಾನು ನಿರಾಸೆಯಿಂದ ಮರಳಿದ್ದೆ!

ಏಳೆಂಟು ದಿವಸಗಳ ಕಾಲ ರಜೆಯ ಮೇಲೆ ಊರಿಗೋ ಮತ್ತೆಲ್ಲಿಗೋ ಹೋಗಿದ್ದ ದಿನಗಳು ಅವು. ಪ್ರತಾಪರೆಡ್ಡಿ ಇದ್ದಕ್ಕಿದ್ದಂತೆ ತನ್ನ ತೋಟದ ಮನೆಯಿಂದ ಕಾಣೆಯಾದ. ಹಾಗೆ ನಾಪತ್ತೆಯಾದವನು ಹೈದರಾಬಾದಿನ ನ್ಯಾಯಾಲಯದಲ್ಲಿ ಪ್ರತ್ಯಕ್ಷನಾದ. ಪೋಲಿಸರೇ ವಾಗಿಲಿಗೆ ಆಗಮಿಸಿ ಆತನನ್ನು ಬಂಧಿಸಿ ಕರೆದೊಯ್ದರೆನ್ನುವುದು ತಿಳಿಯದು, ಅಥವಾ ನುರಿತ ಕ್ರಿಮಿನಲ್ ವಕೀಲರ ಸಲಹೆ ಮೇರೆಗೆ ಗೌಡರೇ ತಮ್ಮ ಮಗನನ್ನು ಗುಟ್ಟಾಗಿ ಹೈದರಾಬಾದಿಗೆ ಕರೆದೊಯ್ದು ನ್ಯಾಯಾಧೀಶರ ಸಮಕ್ಷಮ ಸಾಬೀತು ಪಡಿಸಿದರೆನ್ನುವುದು ತಿಳಿಯದು! ಅಥವಾ ಪ್ರತಾಪರೆಡ್ಡಿಯನ್ನು ನ್ಯಾಯಾಧೀಶರ ಸುಶಿಕ್ಷಿತ ಮಗಳು ಪ್ರಿಯಂವದೆ ಆತನನ್ನು ಸೂಜಿಗಲ್ಲಿನಂತೆ ಆಕರ್ಷಿಸಿ ಬರಮಾಡಿಕೊಂಡಳೆನ್ನುವುದು ತಿಳಿಯದು, ಅಥವಾ ವಿರೋಧ ಪಕ್ಷದ ಹೈಕಮಾಂಡ್ ಆದೇಶದ ಮೇರೆಗೆ ತಾನೇ ಸರೆಂಡರಾದನೆನ್ನುವುದು ತಿಳಿಯದು. ಎಲ್ಲವೂ ಅಸ್ಪಷ್ಟ. ಒಟ್ಟಿನಲ್ಲಿ ಪ್ರತಾಪರೆಡ್ಡಿ ಜೈಲುಪಾಲಾದ. ಅದರ ಪೂರ್ವಾಪರ ಕುರಿತಂತೆ ನಾನು ತಲೆ ಕೆಡಿಸಿಕೊಳ್ಳುವ ಗೋಜಿಗೆ ಹೋಗಲಿಲ್ಲ. ಅನುಕಂಪದ ನೆರವಿನಿಂದಾಗಿ ಕಣ್ಣುಗಳಲ್ಲಿ ನೀರು ಕಾಣಿಸಿಕೊಂಡಿತು. ಕೆಟ್ಟವರು ಒಳ್ಳೆಯವರಾಗಿ ಪರಿವರ್ತನೆಗೊಂಡಲ್ಲಿ! ನಿಡುಸುಯ್ದೆ.

ಹೊರಡುವ ಮೊದಲು ಕೇಳಿದ್ದಕ್ಕೆ ಶೇಷಣ್ಣ "ರೂಪವೇನೋ ಮನ್ಮಥ ಆದರೆ ಗುಣ ಮಾತ್ರ ಸುಮಾರು" ಎಂಬ ಎರಡೇ ಮಾತುಗಳಲ್ಲಿ ಆತನ ವ್ಯಕ್ತಿತ್ವವನ್ನು ಅನಾವರಣಗೊಳಿಸಿದ್ದ. ಬರೆಯುತ್ತಿದ್ದ ಕಾದಂಬರಿಯಲ್ಲಿ ಆತನ ವ್ಯಕ್ತಿತ್ವವನ್ನು ಯಾವ ರೀತಿ ಅಭಿವ್ಯಕ್ತಗೊಳಿಸುವುದು, ಒಳ್ಳೆಯವನೆಂದೋ! ಕೆಟ್ಟವನೆಂದೋ! ಒಳ್ಳೆಯವನು ಕೆಟ್ಟವನಾಗಿ ಪರಿವರ್ತಿತನಾದನೆಂದೋ! ಆದರೆ ಜನ್ಮಜಾತವಾಗಿ ಯಾರೂ ಕೆಟ್ಟವರಲ್ಲ, ಎಂಥ ಕೆಟ್ಟವರಲ್ಲೂ ಒಂದಾದರೂ ಒಳ್ಳೆಯ ಗುಣ ಇದ್ದೇ ಇರುವುದು, ಅದನ್ನು ಪತ್ತೆ ಹಚ್ಚಿ ಅಭಿವ್ಯಕ್ತಿಸುವುದು ನನ್ನಂಥ ಲೇಖಕನ ಸೃಜನಶೀಲ ಕರ್ತವ್ಯ ಎಂದು ಭಾವಿಸಿ ಬರೆಯಲಾರಂಭಿಸಿದೆ.

ರುಗ್ಣಶಯ್ಯೆಯಲ್ಲಿರುವ ಶೋಷಕ ರೆಡ್ಡಿಯ ಹೆಸರು! ಹ್ಞಾಂ! ಹರಿಶ್ಚಂದ್ರರೆಡ್ಡಿ! ಅದೇ ಸರಿಯಾದ ಹೆಸರು. ಆತನನ್ನು ಯಾವುದೋ ಒಂದು ಮಾರಣಾಂತಿಕ ಖಾಯಿಲೆ ಬಾಧಿಸುತ್ತಿದೆ. ಕುಟುಂಬದ ತಜ್ಞವೈದ್ಯ ವೈಕುಂಠಂ ವೈದ್ಯಕೀಯ ತಪಾಸಣೆ ನೆರವೇರಿಸಿದ ಬಳಿಕ ನಿಡುಸುಯ್ದು ಕೈಚೆಲ್ಲುವರು, ರೆಡ್ಡಿಯವರದ್ದು ಅಸಹಾಯಕ ಸ್ಥಿತಿ, ತಮ್ಮನ್ನು ಕಾಡುತ್ತಿರುವ ಶತ್ರುಗಳು, ತಮ್ಮನ್ನು ಮುಗಿಸಲು ಎಲ್ಲೆಂದರಲ್ಲಿ ಹೊಂಚಿರುವ ವೈರಿಗಳು, ತಮ್ಮ ಸ್ಥಿರ ಚರಕ್ಕೆ ಸಂಬಂಧಿಸಿದ ಅಪಾರ ಆಸ್ತಿಯನ್ನು ಕಬಳಿಸಲು ಹೊಂಚಿರುವ ತಮ್ಮ ಅವಸಾನವನ್ನು ಸಂಭ್ರಮಿಸಲಿರುವ ದಾಯಾದಿಗಳು! ಒಟ್ಟಾರೆ ತಮ್ಮದು ಅಸಹಾಯಕ ಸ್ಥಿತಿ. ಆದರೆ ತಮಗಿರುವುದು ಒಬ್ಬನೇ ಒಬ್ಬ ಕುಲಪುತ್ರ, ಅವನು ತಮ್ಮಿಂದ ಅಗಲಿ, ನಿಮ್ಮ ಸಹವಾಸಬೇಡ ಎಂದು ಕರುಳ ನೆನಪುಗಳಿಗೆ ತಿಲಾಂಜಲಿ ಇತ್ತು ತಮ್ಮಿಂದ ದೂರ ಹೋಗಿರುವ ತಮ್ಮ ಮಗ ನರಸಿಂಹರೆಡ್ಡಿ, ನೋಟರಿಯ ಸಹಾಯದಿಂದ ತನ್ನ ಹೆಸರುಗಳನ್ನು ಬದಲಿಸಿಕೊಳ್ಳುತ್ತಲೇ ಇರುವ ತಮ್ಮ ಮಗ! ಅವನಲ್ಲದೆ ಇನ್ನಿತರ ಮಕ್ಕಳಿದ್ದಿದ್ದಲ್ಲಿ ತಮಗೆ ಈ ಸ್ಥಿತಿ ಒದಗುತ್ತಿರಲಿಲ್ಲ. ಒಂದಕ್ಕಿಂತ ಹೆಚ್ಚು ಅಂದರೆ ನಾಲ್ಕು ಸಲ ಮದುವೆಯಾದರೂ ಹೆಚ್ಚು ಮಕ್ಕಳಿಗೆ ತಾವು ತಂದೆಯಾಗಲಿಲ್ಲ. ಅದು ತಮ್ಮ ಕರ್ಮ. ಅವನನ್ನು ಹೇಗಾದರೂ ತಾವಿರುವಲ್ಲಿಗೆ ಬರಮಾಡಿಕೊಳ್ಳಬೇಕು, ಆದರೆ ತಮ್ಮ ಮನಸ್ಸು ಒಪ್ಪುತ್ತಿಲ್ಲ, ಆದರೂ ಅವನನ್ನು ಕರೆಸಿಕೊಳ್ಳುವುದು ಅನಿವಾರ್ಯ, ಆದರೆ ಅವನು ಬರುವನೋ ಇಲ್ಲವೋ! ಬಂದರೂ ಅವನು ತಮ್ಮ ಅಪಾರ ಆಸ್ತಿಗೆ ಉತ್ತರಾಧಿಕಾರಿಯಾಗುವನೋ ಇಲ್ಲವೋ! ತಮ್ಮ ನೆರವೇರದೆ ಬಾಕಿ ಉಳಿದಿರುವ ಆಸೆಗಳನ್ನು ನೆರವೇರಿಸುವನೋ ಇಲ್ಲವೋ! ಆದರೂ ಕರೆಸಿಕೊಂಡು ಒಳ್ಳೆಯ ಮಾತುಗಳಿಂದ ಅವನ ಮನಸ್ಸನ್ನು ಪರಿವರ್ತಿಸುವುದು ತಮಗೆ ಕಷ್ಟವಾಗಲಾರದು, ಆದರೆ ಅದರಲ್ಲಿ ತಾವು ನಿಷ್ಣಾತರು, ಎಂಥೆಂಥವರನ್ನೋ ಮಾರಕಾಯುಧಗಳನ್ನಾಗಿ ಪರಿವರ್ತಿಸಿರುವ ತಮಗೆ ತಮ್ಮ ಕರುಳ ಕುಡಿಯ ಅಂತರಂಗದಲ್ಲಿ ಕ್ರೌರ್ಯವನ್ನು ತುಂಬುವುದು ಕಷ್ಟವಾಗಲಾರದು, ಮುಖ್ಯವಾಗಿ ಅವನು ತಮ್ಮಲ್ಲಿಗೆ ಹಾಜರಾಗುವುದು ಮುಖ್ಯ. ಆದರೆ ಅವನು ಬರುವನೋ ಇಲ್ಲವೋ! ಪ್ರಯತ್ನಿಸುವುದರಲ್ಲಿ ತಪ್ಪೇನೂ ಇಲ್ಲ, ತಮ್ಮ ಆಪ್ತಸಹಾಯಕ ರಾಘಪ್ಪಸ್ವಾಮಿ ಸಲಹೆ ನೀಡಿದ್ದರಲ್ಲಿ ತಪ್ಪಿಲ್ಲ, ಕೂಡಲೆ ಹೊರಟು ಬರುವಂತೆ ತಮ್ಮ ಬಾಯಿಯಲ್ಲಿ ಗಂಗಾಜಲ ಬಿಡುವುದರ ಮೂಲಕ, ತಮ್ಮ ಕಳೇಬರಕ್ಕೆ ಅಗ್ನಿಸ್ಪರ್ಶ ಮಾಡುವ ಮೂಲಕ ಪಿತೃಋಣ ತೀರಿಸುವಂತೆ ಅವನಿಗೆ ತಂತಿ ಸಂದೇಶ ಕಳಿಸುವರು.

ತಂತಿ ಲಭಿಸಿದೊಡನೆ ಶಶಾಂಕ! ಪುನಃ ತನ್ನ ಹೆಸರನ್ನು ಕಳೆದ ತಿಂಗಳ ಹಿಂದೆಯಷ್ಟೆ ಬದಲಿಸಿಕೊಂಡಿರುವ ಶಶಾಂಕ! ರೆಡ್ಡಿ ಎಂಬ ಜಮೀನ್ದಾರೀ ವ್ಯವಸ್ಥೆಯ ಪ್ರತಿನಿಧಿತ್ವವನ್ನು ತನ್ನ ಹೆಸರಿನ ಉತ್ತರಾರ್ಧದಿಂದ ಕಳಚಿಕೊಂಡಿರುವ ಶಶಾಂಕ! ಪುನಃ ಹೆಸರು ಬದಲಿಸಿಕೊಳ್ಳಲು

ನ್ಯಾಯಾಲಯ ಒಪ್ಪಲಾರದು ಎಂದು ನೋಟರಿಯವರಿಂದ ಹೇಳಿಸಿಕೊಂಡಿರುವ ಶಶಾಂಕ! ದಿನಂಪ್ರತಿ ನೆನಪುಗಳ ದುಃಸ್ವಪ್ನಗಳಿಂದ ಬೇಟೆಗೊಳಗಾಗುತ್ತಲೇ ಇರುವು ಶಶಾಂಕ! ಹಿಂದಿನ ವರ್ಷವಷ್ಟೆ ಪದವಿ ಪೂರೈಸಿರುವ ಶಶಾಂಕ! ವಂಶದ ಹಿರಿಯರ ಕ್ರೌರ್ಯದ ನೆನಪುಗಳಿಂದ ಬಿಡುಗಡೆ ಪಡೆಯುವ ಸಲುವಾಗಿ ಓಶೋ ಜಿಡ್ಡು ವಗೈರೆಗಳ ಚಿಂತನೆಗಳನ್ನು ಆಶ್ರಯಿಸಿರುವ ಶಶಾಂಕ! ಹೆತ್ತವರ ಮೇಲೆ ಸೇಡು ತೀರಿಸಿಕೊಳ್ಳುವ ಸಲುವಾಗಿ ದಲಿತ ವಿಧವೆಯನ್ನು ಮದುವೆಯಾಗಲೆಂದೇ ಪ್ರೀತಿಸುತ್ತಿರುವ ಶಶಾಂಕ! ತನ್ನ ದೈಹಿಕ ಸೌಂದರ್ಯವನ್ನು ಜಮೀನ್ದಾರಿ ಗತ್ತನ್ನು ಮರೆ ಮಾಚುವ ಸಲುವಾಗಿ ಮುಖದ ತುಂಬ ಗಡ್ಡ ಬೆಳೆಸಿರುವ ಅಸ್ತವ್ಯಸ್ತಗೊಂಡಿರುವ ಶಶಾಂಕ! ಹಗಲು ಹೊತ್ತಿನಲ್ಲಿ ಅಂಧ ಮಕ್ಕಳ ವಸತಿ ಶಾಲೆಯಲ್ಲೂ, ಸಂಜೆ ಸಮಯದಲ್ಲಿ ವೃದ್ಧರ ಆಶ್ರಮದಲ್ಲೂ ಸೇವೆ ಸಲ್ಲಿಸುತ್ತಿರುವ ಶಶಾಂಕ! ಬೆಳಗಿನ ಮತ್ತು ಸಂಧ್ಯಾ ಸಮಯದಲ್ಲಿ ಯೋಗ ಪ್ರಾಣಾಯಾಮಗಳನ್ನು ತಪ್ಪದೆ ಆಚರಿಸುತ್ತಿರುವ ಶಶಾಂಕ! ಅಂಥ ಕಥಾನಾಯಕ ಶಶಾಂಕ ಒಂದು ಕ್ಷಣ ನಖಶಿಖಾಂತ ಕಂಪಿಸುವನು, ಆ ಕ್ಷಣ ಮೂಡಲೆತ್ನಿಸಿದ ಪ್ರೇತಕಳೆಯನ್ನು ದೂರಕ್ಕೆ ತಳ್ಳುವನು, ಓ ದೇವರೆ ಮರಣೋತ್ತರವಾಗಿ ತಮ್ಮ ತಂದೆಯವರಿಂದ ಘಟಿಸಿರುವ ಅಕ್ಷಮ್ಯ ಅಪರಾಧಗಳನ್ನು ಕ್ಷಮಿಸು, ಸಾವಿನ ಬಳಿಕ ಅವರಿಗೆ ಸದ್ಗತಿಯನ್ನು ದಯಪಾಲಿಸು ಎಂದು ಮೌನವಾಗಿ ಬೇಡಿಕೊಳ್ಳುವನು.

ಮೆಲ್ಲಗೆ ನೋಡುತ್ತಾನೆ. ತಂತಿಯ ಸಂದೇಶದಲ್ಲಿರುವುದು ಕೆಲವೇ ಕೆಲವು ಅಕ್ಷರಗಳು, ಅವುಗಳ ಮಾಯಾದರ್ಪಣದಲ್ಲಿ ತಮ್ಮ ತಂದೆಯ ಕಳಾಹೀನ ಪ್ರತಿಬಿಂಬ, ಅವರು ತನ್ನನ್ನು ಹೆತ್ತು ಸಾಕಿ ಸಲಹಿ ಬೆಳೆಸಿರುವ ತನ್ನ ಸ್ವಾಭಿಮಾನಿ ತಂದೆ, ರುಗ್ಣ ಶಯ್ಯೆಯಲ್ಲಿ ತನ್ನ ಬರುವಿಕೆ ಸಲುವಾಗಿ ಕಾಯುತ್ತಿರುವ ತನ್ನ ಅಸಹಾಯಕ ತಂದೆ, ಮೃತ್ಯುವಿನಿಂದ ಶಾಶ್ವತ ರೀತಿಯಲ್ಲಿ ಕೊಲೆಯಾಗಲಿರುವ ತನ್ನ ತಂದೆ. ಹೋಗುವುದೋ ಹೋಗದೆ ಇರುವುದೋ! ಅರ್ಥವಾಗದ ಸಂದಿಗ್ಧತೆ, ಒದ್ದಾಟ. ತನಗೆ ತಲೆ ಇರಿಸಲು ತನ್ನ ತೊಡೆಯನ್ನು ಕರುಣಿಸಿರುವ ಆ ವಿಧವೆ ಕಡೆ ನೋಡುತ್ತ ದುಃಖಿಸುತ್ತಾನೆ. ತನ್ನ ಮನೋವೇದನೆಯನ್ನು ನಿವೇದಿಸಿಕೊಳ್ಳುತ್ತಾನೆ, ಆ ಸುಂದರ ತರುಣಿಯದ್ದೂ ಅದೇ ಅಂತಂಕ, ಆಕೆಯ ಯುವ ಪತಿಯೂ ಗೊನೆಗೊಂಡ್ಲ ರೆಡ್ಡಿಯವರ ಬಳಿ ಅಂಗರಕ್ಷಕನಾಗಿದ್ದಂಥವನೆ! ತನ್ನ ಅನ್ನದಾತನ ಪ್ರಾಣವನ್ನು ರಕ್ಷಿಸುವ ಸಲುವಾಗಿ ಆತ್ಮಾಹುತಿ ಮಾಡಿಕೊಂಡಂಥವನೆ! ಮದುವೆ ಆಗಿದ್ದೇ ಆಗಿದ್ದು ತನ್ನ ಪತಿಯ ಮುಖ ತನಗೆ ಸರಿಯಾಗಿ ನೆನಪಿಲ್ಲ. ಆತ್ಮಹತ್ಯೆ ಮಾಡಿಕೊಳ್ಳಲಿದ್ದ ತನ್ನನ್ನು ರಕ್ಷಿಸಿದ, ತನಗೆ ಆಶ್ರಯ ಕಲ್ಪಿಸಿದ, ತನ್ನನ್ನು ಮದುವೆಯಾಗುವುದಾಗಿ ವಾಗ್ದಾನ ನೀಡಿದ, ಇಂಥ ಶಶಾಂಕನಿಗೆ ಅಂಥ ಆತಂಕದ ಕರೆ ಬಂದೀತೆಂದು ತಾನು ಕನಸು ಮನಸಿನಲ್ಲೂ ಊಹಿಸಿರಲಿಲ್ಲ. ಧೈರ್ಯವಾಗಿ ಹೋಗಿ ಬನ್ನಿರೆಂದು ಹೇಳಬಹುದು, ಆದರೆ ಮರಳಿ ಬಾರದಿದ್ದಲ್ಲಿ ತನಗೆ ಇನ್ಯಾರು ಗತಿ! ಆಕೆ ಯೋಚಿಸುತ್ತಾಳೆ, ತನ್ನ ಸ್ವಾರ್ಥ, ತನ್ನ ಭವಿಷ್ಯದ ಸ್ವಾರ್ಥ, ತನ್ನ ತಾಯ್ತನದ ಹಂಬಲ, ತನ್ನ ನೆರವೇರಲಿರುವ ಕನಸುಗಳು! ಗೊನೆಗೊಂಡ್ಲ ಭೀಮರೆಡ್ಡಿಯನ್ನು ಈ ಆಶ್ರಯದಾತ ಶಶಾಂಕನ ಮೂಲಕ ಮುಂದೆಂದಾದರೂ ಭೌತಿಕವಾಗಿ ಮೂಲೋತ್ಪಾಟನೆ ಮಾಡಬೇಕೆಂಬ ಸೇಡಿಗೆ ಸಂಬಂಧಿಸಿದ ಕನಸು! ಆಕೆ ಉಭಯ ಸಂಕಟಗಳಿಂದ ದ್ವಂದ್ವಗಳಿಂದ ಒದ್ದಾಡುವಳು. ಪುನಃ ಯೋಚಿಸುತ್ತಾಳೆ, ಸಾಯಲಿರುವ ತಂದೆ ಕೇವಲ ತಂದೆ ಮಾತ್ರವಲ್ಲ, ಆತನೊಳಗೂ ತಾಯಿಯೂ ಇರುವಳಲ್ಲವೆ! ಆಕೆಯನ್ನು ತಾನು ನಿರಾಶಗೊಳಿಸುವುದು ಸರಿಯಲ್ಲ. ಯೋಚಿಸಿ ಹೋಗಿ ಬನ್ನಿರೆಂದು ಸಮ್ಮತಿಸುತ್ತಾಳೆ, ಅಲ್ಲಿನ ಆಸ್ತಿಗೆ ವಾರಸುದಾರರಾಗಿ ಅದನ್ನು ತನ್ನಂಥ

ಶೋಷಿತರ, ಅಸಹಾಯಕರ ಕಲ್ಯಾಣ ಕಾರ್ಯಗಳ ಸಲುವಾಗಿ ವಿನಿಯೋಗಿಸುವುದರಲ್ಲಿ ತಪ್ಪಿಲ್ಲವೆಂದು ಸಲಹೆ ನೀಡುತ್ತಾಳೆ. ಇಂಥ ಉಭಯ ಸಂಕಟಗಳನ್ನು ಅನುಭವಿಸುತ್ತಿರುವಾಗಲೇ ಊರಿನಿಂದ ಜೀತದಾಳು (ಅಲ್ಲ ಅಲ್ಲ ಗ್ಲಾಡಿಯೇಟರ್) ತನ್ನನ್ನು ಹುಡುಕಿಕೊಂಡು ಬರುತ್ತಾನೆ. ಕೃಶಗೊಂಡಿರುವ ತನ್ನ ತಂದೆಯ ದೈಹಿಕ ಸ್ಥಿತಿಯನ್ನು ಹೃದಯವಿದ್ರಾವಕ ಪರಿಭಾಷೆಯಲ್ಲಿ ವಿವರಿಸುತ್ತಾನೆ, ತನ್ನ ಕರುಳುಗಳನ್ನು ಇಂಚಿಂಚಾಗಿ ಕರಿಗಿಸುತ್ತ ಹೋಗುತ್ತಾನೆ, ಪಿತೃಋಣವನ್ನು ತನ್ನ ಕಣ್ಣ ಮುಂದೆ ಮೇರು ಸದೃಶ ರೀತಿಯಲ್ಲಿ ಪೇರಿಸುತ್ತಾನೆ. ಇನ್ನೇನು ತಾನು ಹೊರಡಬೇಕೆನ್ನುವಷ್ಟರಲ್ಲಿ!

ಓಹ್! ಎಷ್ಟೊಂದು ಪರಿಣಾಮಕಾರಿಯಾಗಿ ಬೆಳೆಯಿತು ನನ್ನ ಕನಸಿನ ಕಾದಂಬರಿ! ಎರಡನೆಯ ಮೂರನೆಯ ರೀರೈಟಿಂಗಿನಲ್ಲಿ ಶಶಾಂಕನ ಮತ್ತಾತನ ಪ್ರೇಯಸಿಯ ಮನಃಸ್ಥಿತಿಯನ್ನು ಮನೋಜ್ಞವಾಗಿಸುವುದು ಮುಖ್ಯ. ಅವೆರಡೂ ಪಾತ್ರಗಳ ಮೂಲಕ ಭಾರತೀಯ ಕೌಟುಂಬಿಕ ವ್ಯವಸ್ಥೆಯ ಹಲವು ಮುಖಗಳನ್ನು, ಯುವ ಮನಸ್ಸುಗಳ ದ್ವಂದ್ವಗಳನ್ನು ದಟ್ಟವಾಗಿ ಚಿತ್ರಿಸುವುದು ಮುಖ್ಯ. ಶಶಾಂಕ ತನ್ನ ತಂದೆಯನ್ನು ಭೆಟ್ಟಿಯಾಗುವ ಸನ್ನಿವೇಶವನ್ನು ಉಜ್ವಲಗೊಳಿಸುವುದು ತೀರಾ ಮುಖ್ಯ. ಯಾವ ಕಾರಣಕ್ಕೂ ಹರಿಶ್ಚಂದ್ರರೆಡ್ಡಿಯವರ ಪಾತ್ರವನ್ನು ಕೊನೆಗೊಳಿಸಬಾರದು. ಯಯಾತಿಯಂತೆ ಆ ವೃದ್ಧ ಪಾತ್ರವೂ ತಮ್ಮ ಮಗ ಶಶಾಂಕ ತಾರುಣ್ಯವನ್ನು ಆವಹಿಸಿಕೊಳ್ಳಬೇಕು, ಶಶಾಂಕನನ್ನು ಮಾನಸಿಕವಾಗಿ ವೃದ್ಧನನ್ನಾಗಿ ಪರಿವರ್ತಿಸಿದಲ್ಲಿ! ಅಥವಾ ವೃದ್ಧ ಹರಿಶ್ಚಂದ್ರರೆಡ್ಡಿಯವರನ್ನು ಮಾನಸಿಕವಾಗಿ ತರುಣರನನ್ನಾಗಿಸಿದಲ್ಲಿ! ಅಥವಾ ತಂದೆಯಿಂದ ಮಗನನ್ನೋ ಮಗನಿಂದ ತಂದೆಯನ್ನೋ ಕೊಲೆ ಮಾಡಿಸಿದಲ್ಲಿ! ಅಥವಾ ತಂದೆಯ ಮರಣೋತ್ತರ ಆತ್ಮ ಮಗನ ದೇಹದೊಳಗೆ ಆಶ್ರಯ ಪಡೆದುಕೊಂಡರೆ! ಅಥವಾ ನಗರೂರಿನ ಲಕ್ಷ್ಮಿಯ ಆತ್ಮವನ್ನು ಆವಹಿಸಿಕೊಂಡ ಸಂಭವನೀಯ ಪತ್ನಿ ಶಶಾಂಕನನ್ನು ಅರಸಿಕೊಂಡು ಊರಿಗೆ ಆಗಮಿಸಿದರೆ! ಶಶಾಂಕನೋ ಆತನ ತಂದೆಯೋ ಅಥವಾ ಅವರಿಬ್ಬರ ಸೂಚನೆ ಮೇರೆಗೆ ಸುಪಾರಿ ಪಡೆದವನಿಂದ ಕೊಲೆಯಾಗಲಿರುವ ದಯಾನಂದನ ಪತ್ನಿಯೇ ಸೇಡು ತೀರಿಸಿಕೊಳ್ಳುವ ಸಲುವಾಗಿ ಶಶಾಂಕನ ಕೈಯನ್ನು ಹಿಡಿಸಿದರೆ! ಪಾತ್ರಗಳಲ್ಲಿ ಕ್ರೌರ್ಯ ಸೃಷ್ಟಿಸುವುದು, ಅವುಗಳ ಕ್ರಿಯಾಕಲಾಪಗಳನ್ನು ನಿರ್ದೇಶಿಸುವುದು, ಒಂದರೊಳಗೆ ಇನ್ನೊಂದನ್ನು ಸಮೀಕರಿಸುವುದು ನನ್ನಂಥ ಲೇಖಕನಿಗೆ ಸವಾಲಿನ ಸಂಗತಿಯೇ ಸರಿ. ಕಲ್ಪನೆಗಿಂತ ಮಿಗಿಲಾದ ಶಕ್ತಿ ಇನ್ನೊಂದಿಲ್ಲವೆಂಬ ಮಾತು ಅಂತರಂಗದಲ್ಲಿ ಪ್ರತಿಧ್ವನಿಸಿತು.

ಕಾದಂಬರಿಯ ಮುಂದಿನ ಭಾಗದಲ್ಲಿ ಮಗ ಬಹಳ ಕಾಲದ ಬಳಿಕ ತನಗೆ ಜನ್ಮ ನೀಡಿದ ಮನೆಯ ಹೊಸ್ತಿಲ ಬಳಿ ನಿಲ್ಲುತ್ತಾನೆ, ಒಳಗೆ ಹೆಜ್ಜೆಯನ್ನು ಇರಿಸುವುದೋ ಪುನಃ ವಾಪಸ್ಸು ಹೊರಡುವುದೋ ಎಂದು ಯೋಚಿಸಲಾರಂಭಿಸುತ್ತಾನೆ. ತನ್ನ ತಂದೆಯ ಮುಖವನ್ನು ಕಲ್ಪಿಸಿಕೊಳ್ಳುತ್ತಾನೆ, ತಾನು ಅನುಭವಿಸುವ ಇಬ್ಬಂದಿತನವನ್ನು, ಪರವಿರೋಧಗಳ ತಾಕಲಾಟವನ್ನು ಪರಿಣಾಮಕಾರಿಯಾಗಿ ಚಿತ್ರಿಸಬೇಕಿರುವುದು. ವ್ಯಕ್ತಿತ್ವಗಳು ಪರಸ್ಪರ ವಿನಿಮಯಗೊಳ್ಳುವ ಪ್ರಕ್ರಿಯೆ ಕುರಿತಂತೆ ಯೋಚಿಸಬೇಕಿರುವುದು. ಹಾಗೆಯೇ ಮನುಷ್ಯನ ವರ್ತನೆಗಳ ಬಗ್ಗೆ ಮನಶ್ಶಾಸ್ತ್ರಜ್ಞರು ಮಂಡಿಸಿರುವ ಸಿದ್ಧಾಂತಗಳನ್ನು ಅಧ್ಯಯನ ಮಾಡಬೇಕು. ನನ್ನ ಕರ್ಮಕ್ಕೆ ಫ್ರಾಯ್ಡ್ ಎರಿಕ್‌ಫ್ರಾಮ್ ವಗೈರೆಗಳು ಕಪಾಟಿನಲ್ಲಿಲ್ಲ ಬೇರೆ. ಅವುಗಳನ್ನು ಹುಡುಕುವ ಸಲುವಾಗಿ ಬಳ್ಳಾರಿಗೆ ಹೋಗುವುದೋ! ಬೆಂಗಳೂರಿಗೆ ಹೋಗುವುದೋ!

ಅಥವಾ ನನ್ನೊಳಗಿನ ಕಥೆಗಾರನನ್ನೇ ಮನಶ್ಯಾಸ್ತ್ರಜ್ಞನಾಗಿ ಸಲಹೆ ನೀಡಯ್ಯಾ ಎಂದು ಕೇಳಿಕೊಳ್ಳುವುದೋ! ನನ್ನ ಬರಹದ ಕರ್ಮ ಏನೇ ಇರಲಿ, ಜೈಲು ಎನ್ನುವ ನಿಗೂಢ ಪ್ರಪಂಚದಿಂದ ವಾಸ್ತವ ಪ್ರಪಂಚವನ್ನು ಪ್ರವೇಶಿಸಿರುವ ಸೂರ್ಯಪ್ರತಾಪರೆಡ್ಡಿ ಕಾದಂಬರಿಯ ಅಕ್ಷರ ಪ್ರಪಂಚದೊಳಗೆ ಶಶಾಂಕ ಎಂಬ ಹೆಸರಿನಲ್ಲಿ ಮರುಹುಟ್ಟು ಪಡೆದಿರುವನಲ್ಲ ಅಷ್ಟೇ ಸಾಕು. ಆತನನ್ನು ನಾನು ಹತ್ತಿರದಿಂದ ನೋಡುವ ಅವಕಾಶ ದೊರಕಿದ ಬಳಿಕ ಶಶಾಂಕ ಇನ್ನಾವ ರೀತಿಯಲ್ಲಿ ಮರುಹುಟ್ಟು ಪಡೆಯುವನೋ! ಕಾದು ನೋಡಬೇಕೆಂದುಕೊಂಡೆ.

ಹೀಗೆ ಏನೇನೋ ಸೃಜನಶೀಲ ಗೊಂದಲಗಳನ್ನು ಅನುಭವಿಸಲಾರಂಭಿಸಿದೆ. ಬರಹ ಸ್ಥಗಿತಗೊಂಡಿತು. ಹಸ್ತಪ್ರತಿಯನ್ನು ಪಕ್ಕಕ್ಕೆ ಸರಿಸಿ ದಣಿದಿದ್ದ ಪೆನ್ನಿನ ಮೊನೆಗೆ ಅದರ ಕ್ಯಾಪನ್ನು ಅಳವಡಿಸಿ ಆರಾಮ ಛೇರಿನ ಹಿಂದಕ್ಕೆ ಮೈಚಾಚಿ ಮುರಿದೆ, ಬೆನ್ನಮೂಳೆಯ ಪಕ್ಕೆಲುಬುಗಳು ಲಟಲಟ ಸದ್ದು ಮಾಡಿದವು. ಹಾಗೆ ಸದ್ದು ಮಾಡದೆ ಆಕಳಿಸಿ ಒಂದು ಕ್ಷಣ ಕಣ್ಣುಗಳನ್ನು ಮುಚ್ಚಿದೆ. ಅದಕ್ಕೆ ಕಾರಣ ಇಲ್ಲದಿರಲಿಲ್ಲ. ತಂದೆ ಹಗಲು ಕನಸಿನೊಳಗಾದರೂ ಕಾಣಿಸಿಕೊಳ್ಳಲು ಅನುಕೂಲವಾಗಲೆಂದು. ಆತನಿಂದ ಎಂದಿನಂತೆ ಪತ್ರ ಬಂದಿದ್ದರೆ ಕನಸುಗಳ ಮೊರೆ ಹೋಗುವ ಅಗತ್ಯವಿರಲಿಲ್ಲ.

ಪುಣ್ಯವೋ ಎಂಬಂತೆ ಕನಸೊಂದು ರೆಕ್ಕೆಗಳೊಂದಿಗೆ ಮಾನಸಸರೋವರದ ದಡದಲ್ಲಿಳಿಯಿತು. ಅದರ ಬೆನ್ನೇರಿ ಆಗಮಿಸಿದ ಇಬ್ಬರು ವ್ಯಕ್ತಿಗಳಿಗೆ ನಿಖರ ಮುಖ ಚೆಹರೆಗಳಿರಲಿಲ್ಲ. ಅವರು ಅವರು ಇರಬಹುದೆ, ಇವರು ಇವರು ಇರಬಹುದೆ!

++++

ಶಶಾಂಕ ಇಡಲಿದ್ದ ಹೆಜ್ಜೆಯನ್ನು ಕೂಡಲೆ ಉಪಸಂಹರಿಸಿಕೊಂಡ, ಒಳಗೆ ಹೆಜ್ಜೆ ಇರಿಸಿದರೆಲ್ಲಿ ಹೆಬ್ಬಾವು ಸದೃಶ ಮನೆ ತನ್ನನ್ನು ಜೀರ್ಣಿಸಿಕೊಳ್ಳುವುದೋ ಎಂಬ ಆತಂಕ ತನ್ನನ್ನು ಕಾಡಲಾರಂಭಿಸಿತು, ತಡೆಯಲು ಮಾರಕಾಯುಧಗಳೊಡನೆ ಆಗಮನಿಸಿ ಇಬ್ಬರ ಪೈಕಿ ಒಬ್ಬ ನಿಸ್ಸಂದೇಹವಾಗಿ ಓಬುಳರೆಡ್ಡಿ! ತಾನು ಆತನನ್ನು ಗುರುತಿಸಿದೆನಾದರೂ ಅವನು ತನ್ನನ್ನು ಕೂಡಲೆ ಗುರುತಿಸಲಿಲ್ಲ, ಕಾರಣ ತನ್ನ ಮೈಲ್ಟ್ಸ್‌ಲಕ್ಷಣ, ತನ್ನ ದೇಹ ವಂಶವಾಹಿನಿಗನುಸಾರವಾಗಿ ಆರಡಿಯ ಆಜುಬಾಜು, ಅಸ್ತವ್ಯಸ್ತಗೊಂಡಿರುವ ತಲೆಗೂದಲು, ಮೇಲ್ದುಟಿ ಮೇಲೆ ಬೆಳೆದಿರುವ ಮೀಸೆ ಅರೆಬರೆ ಬೆಳೆದಿರುವ ಗಡ್ಡ, ಹುಬ್ಬುಗಳೇನೋ ತನ್ನ ತಂದೆಗಿರುವಂತೆ ಪೊದೆಗಳೆ, ಆದರೆ ಕಣ್ಣುಗಳು ಮಾತ್ರ ಸಂತನವು, ಅಚ್ಚಬಿಳಿವರ್ಣದ ಮಾಸಲು ಕುರ್ತಾಪೈಜಾಮು, ಹೆಗಲಲ್ಲಿ ತೂಗಾಡುತ್ತಿರುವ ಕೈಮಗ್ಗದ ಚೀಲದಲ್ಲಿ ಗಾಂಧೀಜಿ ವಿರಚಿತ ಅಹಿಂಸೆ ಮತ್ತು ಸತ್ಯಕ್ಕೆ ಸಂಬಂಧಿಸಿದ ಒಂದೆರಡು ಪುಸ್ತಕಗಳು. ಕಣ್ಸನ್ನೆಯಿಂದ ನಿಲ್ಲಿಸಿದ, ಉಸಿರಳತೆಯಲ್ಲಿ ನಿಂತ, ತದೇಕವಾಗಿ ದಿಟ್ಟಿಸಿದ, ತನ್ನ ಸುಡುಗಣ್ಣು ನೋಟದಿಂದ ತಪಾಸಣೆ ನಡೆಸಿದ, ಅದೂ ಸಾಲದೆ ತನ್ನೆರಡೂ ಕೈಗಳನ್ನು ದೇಹದ ಮೇಲೆ ಹರಿದಾಡಿಸಿದ, ಮುಖ್ಯವಾಗಿ ಚೀಲವನ್ನು ಬೆದಕಿದ, ಅವೇ ಪುಸ್ತಕಗಳು, ಮುಖದಲ್ಲಿ ಮುಖವಿರಿಸಿ ನೋಡಿದ, ಯಾರು ಏನು ಕೆಲಸ ಎಂದು ಕೇಳಲಿದ್ದನೇನೋ! ಕ್ರಮೇಣ ಗುರುತಿಸಿಯೇಬಿಟ್ಟನು, ಅಯ್ಯಾ ಚಿಕ್ಕಧಣಿ ಅಲ್ಲವೆ ತಾವು! ಯಾರೋ ಅಂದುಕೊಂಡಿದ್ದೆ, ಮಾಫ್ ಮಾಡಯ್ಯಾ ಎಂದು ಉದ್ಗರಿಸಿ ತನ್ನ ಕಾಲುಗಳಿಗೆ ಬೀಳಲಿದ್ದ ಆತನನ್ನು ಶಶಾಂಕ ತಡೆದ, ತನ್ನನ್ನು ಎತ್ತಿ ಆಡಿಸಿದ ಆತ ನನ್ನ ಕಾಲುಗಳಿಗೆ ಬೀಳುವುದೆಂದರೇನು! ಆತನ ಎರಡೂ ಕೈಗಳನ್ನು ತನ್ನ ಬೊಗಸೆಗೆ ತೆಗೆದುಕೊಂಡ. ತನ್ನ

ಬಾಲ್ಯದ ಸವಾರಿಗೆ ಸಹಕರಿಸಿದ್ದ ಆತನ ವಿಶಾಲ ಭುಜಗಳನ್ನು ಬೆನ್ನನ್ನು ಹಿತವಾಗಿ ಸ್ಪರ್ಶಿಸಿದ, ಕಾಕ ಎಂದು ಸಂಬೋಧಿಸುವುದರ ಮೂಲಕ ಆತನ ಕಣ್ಣುಗಳನ್ನು ಒದ್ದೆಗೊಳಿಸಿದ, ತನ್ನೆರಡೂ ಕೈಗಳಿಂದ ಬರಸೆಳೆದು ಆಲಂಗಿಸಿಕೊಳ್ಳುವುದರ ಮೂಲಕ ಸಾತ್ವಿಕತೆಯನ್ನು ವಿನಿಮಯಗೊಳಿಸಿದ, ತಾನೇನು ಹೇಳಬೇಕೆಂದಿದ್ದನೋ ಅವನೇನು ಕೇಳಬೇಕೆಂದಿದ್ದನೋ! ಅಷ್ಟರಲ್ಲಿ ಹತ್ತಾರು ಜನ ಇಕ್ಕೆಲದಲ್ಲಿ ಜಮಾವಣೆಗೊಂಡರು, ಬೀದಿಯಲ್ಲಿದ್ದವರು ಅಂಗಳಕ್ಕೆ ಓಡಿಬಂದರು, ಮನೆಯ ಒಳಗಡೆ ಇದ್ದವರು ಹೊಸ್ತಿಲು ಉಲ್ಲಂಘಿಸಿ ಹೊರಗೆ ಧಾವಿಸಿದರು, ಅವರಲ್ಲಿ ರಾಘಪ್ಪಸ್ವಾಮಿ ಸಹ ಇಲ್ಲದಿರಲಿಲ್ಲ, ಮಾರಣಹೋಮಕ್ಕೆ ಸಂಬಂಧಿಸಿದ ಯಜ್ಞದಂತೆ ಗುಗ್ಗಳದಂತೆ ಪ್ರಜ್ವಲಿಸಬೇಕಿದ್ದ ಶತ್ರುಗಳನ್ನು ಸಜೀವವಾಗಿ ಕಾಳ್ಗಿಚ್ಚಿನಂತೆ ದಹಿಸಬೇಕಿದ್ದ ತಮ್ಮ ಪಯ್ಯಾವುಲ ವಂಶದ ಏಕೈಕ ಕುಡಿ ನಂದಾದೀಪದಂತೆ ಭಾಸವಾಗುತ್ತಿರುವುದಲ್ಲವೆ! ಅವರೆಲ್ಲರಿಗೋ ಆಶ್ಚರ್ಯ ಭಯ ವಿಚಿತ್ರ ಆತಂಕ ಸಂಭ್ರಮ! ಶಶಾಂಕ ಆ ಎಲ್ಲ ಸಂಭ್ರಮದಿಂದ ಪರವಶಗೊಳ್ಳುವುದಿಲ್ಲ, ಉಪ್ಪರಿಗೆ ಮನೆಯನ್ನು ಅಡಿಯಿಂದ ಮುಡಿವರೆಗೆ ನೋಡುತ್ತಾನೆ, ಅವರೆಲ್ಲರ ನೋಟಗಳಿಗೆ ಮಣಿದು ಮುಂದಕ್ಕೆ ಹೆಜ್ಜೆಗಳನ್ನಿರಿಸುತ್ತಾನೆ, ತಲಬಾಗಿಲ ಹೊಸ್ತಿಲ ಮೇಲೆ ಜಡಿದು ಅಲಂಕರಿಸಿದ್ದ ವಿವಿಧ ರಾಣಿರೂಪಾಯಿಗಳನ್ನು ನೋಡುತ್ತಾನೆ, ದಾಟಲಿದ್ದ ಹೆಜ್ಜೆಯನ್ನು ಕೂಡಲೆ ಉಪಸಂಹರಿಸಿಕೊಂಡು ಅವರೆಲ್ಲರಲ್ಲಿ ಪುನಃ ಆತಂಕ ಸೃಷ್ಟಿಸುತ್ತಾನೆ, ಇದು ತನ್ನ ವಾರಸತ್ವದ ಮನೆ! ಇದು ತನ್ನ ಪೂರ್ವಜರಾಳಿದ ಮನೆ! ಇದು ತಾನು ಆಳಬೇಕಿರುವ ಉತ್ತರಾಧಿಕಾರತ್ವದ ಮನೆ! ಇದು ತಾನು ಹುಟ್ಟಿಬೆಳೆದಿರುವ ಮನೆ! ಇದು ನವವಧುಗಳಿಗೆ ವೈಧವ್ಯವನ್ನು ಕರುಣಿಸಿರುವ ತನ್ನ ಮನೆ! ಇದು ಅರಿಷಡ್ವರ್ಗಗಳಿಗೆ ಆಶ್ರಯ ನೀಡಿರುವ ತನ್ನ ಮನೆ! ಇದು ಅಕಾಲಮೃತ್ಯುವನ್ನು ದಯಪಾಲಿಸುವ ತನ್ನ ಮನೆ! ಇದು ಬಿಳಿವರ್ಣವನ್ನು ಕಡುಗಪ್ಪಾಗಿ ಪರಿವರ್ತಿಸುವ ಪಾತಾಳಭೈರವಿ ಗುಹೆ ಸದೃಶ ತನ್ನ ಮನೆ! ಕ್ಷುದ್ರಗ್ರಹಗಳನ್ನು ಆಕರ್ಷಿಸಿ ಜೀರ್ಣಿಸಿಕೊಳ್ಳುವ ಮಂತ್ರಸದೃಶ ತನ್ನ ಮನೆ! ಪ್ರವೇಶಿಸುವ ಸಲುವಾಗಿ ಹೆಜ್ಜೆಯನ್ನೇನೋ ಇರಿಸಿದ, ಆದರೆ ತಾನೆಷ್ಟೇ ಪ್ರಯತ್ನಿಸಿದರೂ ಪುನಃ ಉಪಸಂಹರಿಸಿಕೊಳ್ಳಲು ಹೆಣಗಾಡಿದ. ತನ್ನ ಅಸಹಾಯಕತೆಯನ್ನು ಗಮನಿಸಿದ ಬೆಳ್ಳಿರೂಪಾಯಿಗಳ ಮೇಲಿದ್ದ ರಾಣಿಯರು ಗಹಗಹಿಸಿ ನಕ್ಕಂತೆ ಭಾಸವಾಯಿತು. ತನ್ನನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿರುವ ಮನೆಯ ಒಳ ಆವರಣ, ತನ್ನನ್ನು ಒಳಕ್ಕೆ ನುಗ್ಗಿಸಲು ಪ್ರಯತ್ನಿಸುತ್ತಿರುವ ಬಾಹ್ಯಪ್ರಪಂಚ. ತನ್ನೆದೆಯ ನಲ್ಮೊಲೆಗಳಲ್ಲಿ ನನ್ನನ್ನು ಮರೆಯಬೇಡವೋ ಎಂದು ಕೂಗುತ್ತಿರುವ ಹದಿಹರೆಯದ ಸಂತಾನವಹೀನಾ ವಿಧವೆ ಊರ್ಮಿಳೆ! ಉಭಯ ಸಂಕಟಗಳಿಂದ ನಲುಗಿದ, ತನ್ನನ್ನು ಯಾರೋ ಒಳಗೆ ತಳ್ಳಿದಂತೆ, ಯಾರೋ ತನ್ನನ್ನು ಬರಸೆಳೆದಂತೆ ಭಾಸವಾಯಿತು, ಹೊಸ್ತಿಲು ದಾಟಿದೊಡನೆ ನಖಶಿಖಾಂತ ಜಲಜಲ ಬೆವೆಯಲಾರಂಭಿಸುತ್ತಾನೆ ತನ್ನ ಕಾದಂಬರಿಯ ಬಹುಮುಖ್ಯ ಪಾತ್ರವೆನಿಸಿರುವ ಶಶಾಂಕ!

ಒಂದೆರಡು ನಿಮಿಷಗಳಲ್ಲಿ ನಿಚ್ಚಳಗೊಳ್ಳಲಿರುವ ಶಶಾಂಕ! ಒಂದು ಹಿಡಿ ಬೆಳಕಿನಲ್ಲಿ ತನ್ನ ಪೂರ್ವಜರ ತೈಲವರ್ಣದ ಭಾವಚಿತ್ರಗಳನ್ನು ನೋಡಲಿರುವ ಶಶಾಂಕ! ನಾಡಬಾಂಬುಗಳ ಮದ್ದಿನ ಘಾಟುವಾಸನೆಗೆ ಕರವಸ್ತ್ರದಿಂದ ತನ್ನ ಘ್ರಾಣೇಂದ್ರಿಯವನ್ನು ಮರೆಮಾಚಿಕೊಳ್ಳಲಿರುವ ಶಶಾಂಕ! ಹಿತವಾಗಿ ಸಮೀಪಿಸಿದ ಎಳೆಗರುವಿನ ಮೈಯನ್ನು ನೇವರಿಸಲಿರುವ ಶಶಾಂಕ! ಮರಣೋನ್ಮುಖ ತನ್ನ ತಂದೆ ಮಲಗಿರಬಹುದಾದ ಹಂಸತೂಲಿಕಾ ರುಗ್ಣಶಯ್ಯೆಯನ್ನು ನೆನಪು ಮಾಡಿಕೊಳ್ಳಲಿರುವ ಶಶಾಂಕ! ಹಿಂದೆ ಎಂದೋ ತನ್ನ ತಂದೆ ಕೇಳಿದ ಯಕ್ಷಪ್ರಶ್ನೆಗಳನ್ನು ಕೇಳಿ

ತಬ್ಬಿಬ್ಬಾಗಿದ್ದ ಶಶಾಂಕ! ಉತ್ತರಿಸಲು ತಡವರಿಸಿದ್ದ ಶಶಾಂಕ! ಆ ಪ್ರಶ್ನೆಗಳನ್ನೆಲ್ಲ ಪುನಃ ನೆನಪು ಮಾಡಿಕೊಳ್ಳುತ್ತಿರುವ ಶಶಾಂಕ! ಮರಣದ ಘಳಿಗೆಗಳನ್ನು ಎಣಿಸುತ್ತಿರುವ ತನ್ನ ತಂದೆ ಪುನಃ ಅವೇ ಪ್ರಶ್ನೆಗಳನ್ನು ಕೇಳಿದರೆ ಏನೆಂದು ಉತ್ತರಿಸುವುದು ಎಂದು ಯೋಚಿಸುತ್ತಿರುವ ಶಶಾಂಕ!

ಇನ್ನೇನು ಆ ನನ್ನ ಪ್ರೀತಿಯ ಪಾತ್ರದ ನೆನಪುಗಳ ಮೂಲಕ ಪುಯ್ಯಾವುಲ ವಂಶದ ಹಿರಿಯರ ಪೂರ್ವಾಪರವನ್ನು ಅಭಿವ್ಯಕ್ತಿಸಲು ಸಿದ್ದತೆ ನಡೆಸಿದೆ. ಮನಸ್ಸಿನಲ್ಲಿ ಟಿಪ್ಪಣಿ ಮಾಡಿಸಿರಿಸಿಕೊಂಡಿದ್ದ ಉಯ್ಯಾಲವಾಡ ನರಸಿಂಹರೆಡ್ಡಿ ಯುಗಂಧರರೆಡ್ಡಿ ವೆಂಗಳರೆಡ್ಡಿ ತಿಮ್ಮಾರೆಡ್ಡಿ ಪೆದ್ದೋಬಳರೆಡ್ಡಿ ಚಿನ್ನನರಸಿಂಹರೆಡ್ಡಿ ಹೀಗೆ ತಮ್ಮ ಪೂರ್ವೇತಿಹಾಸವನ್ನು ನಿವೇದಿಸಿಕೊಳ್ಳಲಾರಂಭಿಸಿದರು, ಆದರೆ ಅವರ ನಿವೇದನೆಯನ್ನು ಭಂಗಗೊಳಿಸುವ ರೀತಿಯಲ್ಲಿ ಎಲ್ಲೆಲ್ಲಿಂದಲೋ ಪಟಾಕಿ ಸದ್ದು ಕೇಳಿಬರಲಾರಂಭಿಸಿತು.

ತೀರಾ ಹತ್ತಿರದಲ್ಲಿ ಎನ್ನುವುದಕ್ಕೆ ಸಾಕ್ಷಿಯಾಗಿ ಅದರ ಮದ್ದಿನ ಘಾಟುಪರಿಮಳ ನನ್ನ ಘ್ರಾಣೇಂದ್ರಿಯವನ್ನು ವಿಚಲಿತಗೊಳಿಸಿತು. ಆ ಪುಯ್ಯಾವುಲ ವಂಶದ ಹಿರಿಯರನ್ನು ನೇಪಥ್ಯಕ್ಕೆ ಸರಿಸಿದೆ, ಹಸ್ತಪ್ರತಿಯ ಕಡತವನ್ನು ಮುಗುಚಿಟ್ಟು ಪೆನ್ನಿನ ಮೊನೆಗೆ ಕ್ಯಾಪನ್ನು ಸಿಕ್ಕಿಸಿದೆ. ಮತ್ತೆ ಮತ್ತೆ ಸ್ಫೋಟಿಸುತ್ತಿರುವ ಪಟಾಕಿಗಳು, ಮದ್ದಿನ ಘಾಟು ವಾಸನೆಯ ಜೊತೆಗೆ ದೂರದಿಂದಲೆಲ್ಲೋ ಕೇಳಿಬರುತ್ತಿರುವ ಘೋಷಣೆಗಳು ಕೇಕೆಗಳು ಹರ್ಷೋದ್ಗಾರಗಳು! ಏನಾದರೊಂದು ಸಂತೋಷದ ಘಟನೆ ಊರಲ್ಲಿ ಸಂಭವಿಸಿರಬಹುದೆಂದು ಊಹಿಸಿದೆ, ಆದರೆ ಅದರ ಮೂಲ ಅರ್ಥವಾಗಲಿಲ್ಲ, ಹೋಕರನ್ನು ಕೇಳಿ ತಿಳಿದುಕೊಳ್ಳುವ ಸಲುವಾಗಿ ಹಾದಿಯಲ್ಲಿಣುಕಿದೆ, ಆದರೆ ಯಾವುದೇ ನರಹುಳುವಿನ ಸುಳಿವಿಲ್ಲ. ಅದೇ ಸಮಯಕ್ಕೆ ಸರಿಯಾಗಿ ಕರೆಕಳಿಸಿದಂತೆ ಶೇಷಣ್ಣ ತನ್ನ ಬಾಯಿಗೆ ಅಡ್ಡ ವಲ್ಲಿ ಇರಿಸಿಕೊಂಡು ಕೆಮ್ಮುತ್ತ ಮನೆಯನ್ನು ಪ್ರವೇಶಿಸಿದನು, ಕೇಳುವ ಮೊದಲೆ ತಾನೆ..

"ಹೆಬ್ಬಟಂ ಗೌಡರ ಕುಪುತ್ರ ಜೈಲಿನಿಂದ ಬಿಡುಗಡೆಯಾಗಿರುವನಂತೆ ಸಾರ್! ಗೌಡನ ಶೋಭನಕ್ಕೆ ತಳವಾರ ತನ್ನ.." ಎಂದು ತನ್ನ ಗಾದೆ ಮಾತನ್ನು ಅಪೂರ್ಣಗೊಳಿಸಿದ. ಹೊಲೆಗೇರಿಯಲ್ಲಿದ್ದ ಶ್ರೀಶೈಲಮಲ್ಲಿಕಾರ್ಜುನಲಿಂಗದ ಪ್ರತಿಷ್ಠಾಪನೆಗೂ ಆತನ ಬಿಡುಗಡೆಗೂ ಸಂಬಂಧವೇನಾದರೂ ಇರಬಹುದೆ ಎಂದು ಯೋಚಿಸಿದೆ, ಏನೇ ಆಗಲಿ ನನ್ನ ಕಾದಂಬರಿಯ ಉಜ್ವಲ ಹಾಗೂ ಪ್ರೀತಿಯ ಪಾತ್ರ ಪ್ರತಾಪರೆಡ್ಡಿ ಅಲ್ಲ ಅಲ್ಲ ಶಶಾಂಕ ಬಿಡುಗಡೆಯಾದನೆ! ನನ್ನ ಸೃಜನಶೀಲ ಮನಸ್ಸು ಹರ್ಷವ್ಯಕ್ತಪಡಿಸಿತು. ಶೇಷಣ್ಣ ಪುನಃ ತಾನೆ "ನಮ್ಮ ಊರಿಗೆ ಇನ್ನು ಮೇಲೆ ಕೇಡುಗಾಲ ಶುರುವಾಗುವುದು ಸಾರ್, ಸೀತಾರಾಮರೆಡ್ಡಿಗೌಡರು ಏನು ಕರ್ಮ ಮಾಡಿದ್ದರೋ ಅಂಥ ಮಕ್ಕಳನ್ನು ಪಡೆಯಲಿಕ್ಕೆ! ಅದರಲ್ಲೂ ಅವರೆಲ್ಲರಿಗಿಂತ ಪ್ರತಾಪರೆಡ್ಡಿ ಹಿತ್ತಾಳೆಯಂಥವನು, ತಾನು ಕಿಲುಬುವುದಲ್ಲದೆ ತಾನಿರುವ ಜಾಗವೂ ಕಿಲುಬುವಂತೆ ಮಾಡುತ್ತಾನೆ, ನೆಮ್ಮದಿಯನ್ನು ಹದಗೆಡಿಸುತ್ತಾನೆ. ನಮ್ಮ ಊರು ಆರಕ್ಕೇರದೆ ಇರುವುದಕ್ಕೆ ಅವನೇ ಕಾರಣ" ಎಂದು ನಿಟ್ಟುಸಿರು ಚೆಲ್ಲಿ ಕ್ಷಣ ಹೊತ್ತು ಮೌನದಿಂದಿದ್ದು ಏನನ್ನೋ ನೆನಪಿಸಿಕೊಂಡು ಪುನಃ ಕೇಳಿದ "ಸಾರ್ ಅವನನ್ನು ನೀವು ನೋಡಿದಂತಿಲ್ಲ, ಎಲ್ಲಿ ನೋಡಲು ಸಾಧ್ಯ! ನೀವು ನಮ್ಮ ಊರಿಗೆ ಬಂದ ವರ್ಷವೇ ಹೈದರಾಬಾದಿನಲ್ಲಿ ಕೊಲೆ ಆಗಿದ್ದು, ಆತನನ್ನು ಪೋಲಿಸರು ಆರೆಸ್ಟ್ ಮಾಡಿರಲಿಲ್ಲ. ಇದೇ ಊರಲ್ಲಿರುವ ತೋಟದ ಮನೆಯಲ್ಲಿ ತಿಂಗಳ ದಿನಮಾನ ತಲೆ ಮರೆಸಿಕೊಂಡಿದ್ದ, ನಾನೇ ಅವನಿರುವಲ್ಲಿಗೆ ಊಟ ಸರಬರಾಜು ಮಾಡುತ್ತಿದ್ದೆ, ಪ್ರತಿಸಲ ನಿಮ್ಮ ಬಗ್ಗೆ ವಿಚಾರಿಸುತ್ತಿದ್ದ, ನಾನೇ ಏನೋ ಒಂದು ಹೇಳಿ ಬಾಯಿ ಮುಚ್ಚಿಸುತ್ತಿದ್ದೆ,

ನೋಡುವ ಕುತೂಹಲ ನಿಮಗೂ ಇತ್ತು, ಆದರೆ ಅದು ನನ್ನಿಂದಾಗಿ ನೆರವೇರಲಿಲ್ಲ, ನಿಮಗೆ ಬೇಸರವಾಗಿರಬಹುದು, ನಾನು ತಡೆದದ್ದು ನಿಮ್ಮ ಒಳ್ಳೆಯದಕ್ಕೆ, ತನ್ನೊಂದಿಗೆ ಮಾತಾಡಿದವರನ್ನು ತನ್ನ ಸಂಗಡ ಒಡನಾಡಿದವರನ್ನು ಪರವಶಗೊಳಿಸುವುದರಲ್ಲಿ ನಿಸ್ಸೀಮ, ಸಿಂಬಳದ ಅಂಟಿಗೆ ಸಿಲುಕಿದ ನೊಣ ಯಾವ ರೀತಿ ತಪ್ಪಿಸಿಕೊಳ್ಳಾರದೋ ಹಾಗೆಯೇ ಆತನ ವ್ಯಕ್ತಿತ್ವದ ಪ್ರಭಾವದಿಂದ ನಿಮ್ಮಂಥವರು ತಪ್ಪಿಸಿಕೊಳ್ಳಲಾರರು. ನಾನೇನಾದರು ಪರಿಚಯಿಸಿದ್ದಲ್ಲಿ ನೀವು ನೌಕರಿಬಿಟ್ಟು ಅವನೊಂದಿಗೆ ಓಡಿ ಹೋಗುತ್ತಿದ್ದಿರೇನೊ! ಅದಕ್ಕೆ ಪರಿಚಯಿಸುವ ಗೋಜಿಗೆ ಹೋಗಲಿಲ್ಲ, ಆದ್ದರಿಂದ ದಯವಿಟ್ಟು ತಪ್ಪು ತಿಳಿದಿದ್ದರೆ ಕ್ಷಮಾ ಮಾಡಿ ಸಾರ್" ಎಂದು ಸೌಜನ್ಯಯುತವಾಗಿ ಕೇಳಿಕೊಂಡ.

"ಹಾಗ್ಯಾಕೆ ಹೇಳುವಿ ಶೇಷಣ್ಣ, ನನಗೆ ಗೊತ್ತು ಕಾರಣವಿಲ್ಲದೆ ನೀನು ತಡೆಯುವವನಲ್ಲಂತ, ಒಳ್ಳೆಯವನೋ ಕೆಟ್ಟವನೋ! ಆದರೆ ಆತನನ್ನು ಭೆಟ್ಟಿಯಾಗುವ ಆಸೆ ನನಗೂ ಇತ್ತು, ಆದರೆ ಅದು ನೆರವೇರಲಿಲ್ಲ, ಇರಲಿಬಿಡು, ಈಗ ಹೇಗೋ ಹೊರಗೆ ಬಂದಿರುವಲ್ಲವೆ! ಮುಂದೆಂದಾದರೂ ಪರಸ್ಪರ ಭೆಟ್ಟಿಯಾಗಲೂ ಬಹುದು. ಆದರೆ ನನ್ನದೊಂದು ಮಾತು, ಆತನ ಬಗ್ಗೆ ಇಲ್ಲದ ಭಯ ಇಟ್ಟುಕೊಳ್ಳುವುದು ಸರಿಯಲ್ಲ, ಮೊದಲೇ ತಾನು ಕೆಲವು ವರ್ಷಗಳ ಕಾಲ ಜೈಲಿನಲ್ಲಿದ್ದು ನೊಂದಿರುವ ವ್ಯಕ್ತಿ, ಒಳ್ಳೆಯವನಾಗಿರಬಹುದು, ಆತನಿಂದ ಊರಿಗೆ ಒಳ್ಳೆಯದಾಗಲೂಬಹುದು, ಒಳ್ಳೆಯವರನ್ನು ಕೆಟ್ಟವರನ್ನಾಗಿ, ಕೆಟ್ಟವರನ್ನು ಒಳ್ಳೆಯವರನ್ನಾಗಿ ಪರಿವರ್ತಿಸುವ ಶಕ್ತಿ ಸಮಾಜಕ್ಕಿದೆ" ಎಂದೆ ಅಲೌಕಿಕ ರೀತಿಯಲ್ಲಿ. ನನ್ನ ಮಾತುಗಳು ತನಗೆ ವಿಚಿತ್ರವೆನ್ನಿಸಿದವೇನೋ! ತನ್ನ ಮೀಸೆ ಕೆಳಗೆ ವಿಲಕ್ಷಣ ನಗು ಕಾಣಿಸಿಕೊಂಡು ಹಾಗೆಯೇ ಮರೆಯಾಯಿತು.

"ಕಾಶಿಗೆ ಹೋಗಿ ಬಂದಾಕ್ಷಣ ಕಾಗೆ ಕೋಗಿಲೆಯಾಗುವುದೆ ಸಾರ್! ಅದೆಲ್ಲ ಸುಳ್ಳು ಮಾತು, ನಮ್ಮ ಈ ಊರಲ್ಲಿ ಏನೇನು ನಡೆದವೆಂಬುದು ನಿಮಗೆ ತಿಳಿದಿರುವುದೋ! ಅಥವಾ ತಿಳಿದಿದ್ದರೂ" ಎಂದು ಮುಂತಾಗಿ ವಿವರಿಸಿದ.

ನಾನು ಈ ಊರಿಗೆ ಬರುವ ಪೂರ್ವದಲ್ಲಿ ನಡೆದ ಎರಡು ಕೊಲೆಗಳು, ಬಂದ ನಂತರ ನಡೆದ ಮೂರು ಕೊಲೆಗಳ ಹಿಂದೆ ಆತನ ಕೈವಾಡ ಇರುವುದೆಂಬ ಊಹಾಪೋಹ ಹರಡಿತ್ತು, ಹಾಗೆಯೇ ಗ್ರಾಮದಿಂದ ಇದ್ದಕ್ಕಿದ್ದಂತೆ ನಾಪತ್ತೆಯಾದ ಕೆಲವು ತರುಣಿಯರಿಗೆ ಸಂಬಂಧಿಸಿದ ವದಂತಿಗಳನ್ನು ಒಂದೊಂದಾಗಿ ನೆನಪು ಮಾಡಿಕೊಂಡೆ, ಅವರ ಪೈಕಿ ಕೆಲವರು ದೆಹಲಿ ಮುಂಬಯಿ ಹೈದರಾಬಾದುಗಳಂಥ ಶಹರಗಳಲ್ಲಿ! ಅದೆಲ್ಲ ಅವರವರ ಸ್ವಯಂಕೃತ ಆಪರಾಧವೋ! ಅಥವಾ ರೆಡ್ಡಿಯಲ್ಲದೆ ಬೇರೆಯವರು ಯಾರಾದರೂ! ಇದರಲ್ಲಿ ಎಷ್ಟು ಸುಳ್ಳು ಇರುವುದೋ ಎಷ್ಟು ನಿಜವಿರುವುದೋ! ಬಲ್ಲವರ್ಯಾರು? ಆದರೆ ಒಂದಂತೂ ನಿಜ, ಅದೆಂದರೆ ವಾಗಿಲಿ ಆರಂಭದಿಂದಲೂ ಮೂಲಸೌಲಭ್ಯವಂಚಿತ ಗ್ರಾಮ, ಇಲ್ಲಿನ ಶಿಕ್ಷಣವಂಚಿತ ಪ್ರಜಾನಿಕಕ್ಕೆ ತಮ್ಮ ಊರಿನ ಹೆಸರು ಗೊತ್ತಿರಬಹುದೇ ಹೊರತು ಈ ದೇಶದ ಹೆಸರು ತಿಳಿದಿಲ್ಲ. ಭಾರತೀಯ ಸಂವಿಧಾನ ಇದುವರೆಗೆ ಇಂಥ ಕಡೆ ಕಣ್ಣೆತ್ತಿ ಸಹ ನೋಡಿಲ್ಲ. ಆದ್ದರಿಂದಾಗಿಯೇ ಯಾರ ಕೈಯಲ್ಲಿ ಬಡಿಗೆ ಇರುವುದೋ ಅವರದ್ದೇ ಕೋಣ ಎನ್ನುವಂಥ ಸಾಮಾಜಿಕ ಪರಿಸ್ಥಿತಿ, ಆದ್ದರಿಂದಾಗಿಯೆ ಅಂಥ ಇಂಥ ಸಮಾಜಿಕ ಅವಘಡಗಳು ಸಂಭವಿಸುತ್ತಲೇ ಇರುವವು. ಅವಕ್ಕೆಲ್ಲ ಶನೇಶ್ವರನ ಕಡೆ ಬೆರಳು ಮಾಡಿ ತೋರಿಸುವ ಜನರು ಮಾನಸಿಕವಾಗಿ ಬದಲಾಗುವುದು ಮುಖ್ಯ, ತಮ್ಮನ್ನು ತಾವು ಸಂರಕ್ಷಿಸಿಕೊಳ್ಳುವುದು

ಪ್ರತಿಭಟಿಸುವುದು ಮುಖ್ಯ, ತಮ್ಮ ಮೂಲಭೂತ ಹಕ್ಕುಗಳ ಸಲುವಾಗಿ ಜನಪ್ರತಿನಿಧಿಗಳ ಕೊರಳಪಟ್ಟಿ ಹಿಡಿದು ಆಜ್ಞಾಪೂರ್ವಕ ರೀತಿಯಲ್ಲಿ ಕೇಳುವುದು ಪಡೆಯುವುದು ಮುಖ್ಯ. ಆದರೆ ಅಜ್ಜನೆಟ್ಟಾಲದಂತಿರುವ ಈ ಗ್ರಾಮ ಇಲ್ಲಿನ ಮುಗ್ದ ಜನತೆ! ಅಸಹಾಯಕತೆಯಿಂದ ಕಂಪನಕ್ಕೊಳಗಾದೆ, ನಿಟ್ಟುಸಿರುಗಳನ್ನು ಚೆಲ್ಲಿದೆ, ದೈಹಿಕವಾಗಿ ಹ್ರಸ್ವಗೊಂಡೆ.

ಮುಂದೆ ನಮ್ಮಿಬ್ಬರ ನಡುವೆ ಇನ್ಯಾವ ವಿಷಯಗಳಿಗೆ ಸಂಬಂಧಿಸಿದಂತೆ ಮಾತುಕತೆ ನಡೆಯುತ್ತಿತ್ತೇನೋ! ಅದೇ ಸಮಯಕ್ಕೆ ಸರಿಯಾಗಿ ನಾಟಕ ಕಂಪನಿ ಮಾಲಕ ಜಲಂಧರ ಆಗಮಿಸಿದ, ಅದೂ ಹಾರ್ಮೋನಿಯಂ ಮಾಸ್ತರ್ ಕರೂರು ತಿಮ್ಮಪ್ಪ ತಬಲಾವಾದಕ ಅಗಸನೂರು ಓಬಳೇಶರ ಸಂಗಡ. ತಿಮ್ಮಪ್ಪ ನನ್ನ ಪೂರ್ವಾಪರ ವಿಚಾರಿಸುವ ಸಲುವಾಗಿ ಬಾಯಿ ತೆರೆಯಬೇಕೆನ್ನುವಷ್ಟರಲ್ಲಿ ಜಲಂಧರ "ಸಾರ್ ನಮ್ಮ ಹೇಮರೆಡ್ಡಿ ಮಲ್ಲಮ್ಮ ಇಷ್ಟು ಜನಪ್ರಿಯವಾದೀತೆಂದು ಕನಸುಮನಸಿನಲ್ಲೂ ಊಹಿಸಿರಲಿಲ್ಲ, ಎಲ್ಲಾ ಶ್ರೀಶೈಲಮಲ್ಲಿಕಾರ್ಜುನನ ದಯೆ, ಮುಂದಿನ ತಿಂಗಳು ಹದಿನೆಂಟನೇ ತಾರೀಕಿಗೆ ನಮ್ಮ ನಾಟಕದ ಪ್ರದರ್ಶನ ನೂರು ದಿವಸ ಪೂರೈಸುವುದು, ಅದರ ಸಲುವಾಗಿ ಶತದಿನೋತ್ಸವ ಸಮಾರಂಭ ನಡೆಸಬೇಕೆಂದಿರುವೆವು, ಅದನ್ನು ಹೇಗೆ ಆಚರಿಸುವುದು ಕಾರ್ಯಕ್ರಮಕ್ಕೆ ಯಾರನ್ನು ಆಮಂತ್ರಿಸುವುದು?" ಎಂದು ಹೇಳಿದ.

ಬಳಿಕ ಒಮ್ಮೆ ನನ್ನ ಕಡೆಗೂ ಇನ್ನೊಮ್ಮೆ ಶೇಷಣ್ಣನ ಕಡೆಗೂ ಪ್ರಶ್ನಾರ್ಥಕ ನೋಟ ಬೀರಿದ. ಏನನ್ನೋ ನುಡಿಯುವ ಸಲುವಾಗಿ ಶೇಷಣ್ಣ ತನ್ನ ಅಂತರಂಗದಲ್ಲಿ ತಾಲೀಮು ನಡೆಸಲಾರಂಭಿಸಿದ ವೇಳೆಯಲ್ಲಿಯೇ ನಾನು ಮೊನ್ನೆ ಕಂಡ ಕನಸನ್ನು ವಿನಾಕಾರಣ ನೆನಪಿಸಿಕೊಂಡೆ, ಅವರೆಲ್ಲ ಪರಸ್ಪರ ನಡೆಸಿದ್ದ ಮಾತುಕತೆಯಿಂದ ಕ್ರಮೇಣ ದೂರ ಸರಿದು ಕನಸಿನ ಬೆನ್ನಿನ ಮೇಲಿಂದ ಇಳಿದ ಅವರ ಅಸ್ಪಷ್ಟ ಮುಖಗಳು ನನ್ನ ಕಣ್ಣವಪೆಯೊಳಗೆ ಸುಳಿದಾಡಲಾರಂಭಿಸಿದವು. ನಗರೂರಿನ ಬಸ್‌ನಿಲ್ದಾಣದಲ್ಲಿ ಗೋಚರಿಸಿದವರೇನಾದರೂ!

++++

ನನ್ನ ಮಾತನ್ನು ಜಯರಾಮರೆಡ್ಡಿ ಸಹ ಅನುಮೋದಿಸಿದರು. ಆದರೆ ಶೇಷಣ್ಣ ಹೇಳಲಿದ್ದ ಮಾತುಗಳನ್ನು ನಿಧಾನವಾಗಿ ನುಂಗಿ ತನ್ನ ಗಂಟಲಲ್ಲಿರಿಸಿಕೊಳ್ಳುತ್ತ ಮುಖ ಬಿಗಿದನು. ಜಲಂಧರ ನಮ್ಮಿಬ್ಬರ ಕಡೆ ಅಪ್ಯಾಯತೆಯಿಂದಲೂ ಶೇಷಣ್ಣನ ಕಡೆ ವಿಷಣ್ಣತೆಯಿಂದಲೂ ನೋಡಿದಾದ ಬಳಿಕ ತಾನು ಬಳ್ಳಾರಿಯನ್ನು ಪ್ರವೇಶಿಸರಬಹುದು, ಗಣ್ಯರನ್ನು ರಿಕ್ತಹಸ್ತಗಳೊಡನೆ ಭೆಟ್ಟಿಯಾಗಬಾರದೆನ್ನುವ ಸಾಮಾನ್ಯಜ್ಞಾನವಂದಿಗನಾದ ಅವನು ಈಗಾಗಲೆ ಕೌಲ್ ಬಜಾರ್ ಮಾರುಕಟ್ಟೆಯನ್ನುಪ್ರವೇಶಿಸಿ ಸಿಹಿತಿಂಡಿಗಳನ್ನು ಖರೀದಿಸಿರಬಹುದೇ ಅಥವಾ ಗೌಡರು ಮಲಬದ್ದತೆಯಿಂದ ನರಳುತ್ತಿರುವುದನ್ನು ಸೂಕ್ಷ್ಮವಾಗಿ ಗ್ರಹಿಸಿ ಅಂಜೂರಗಳನ್ನು ಖರೀದಿಸಿರಬಹುದೇ! ಅಲ್ಪಸ್ವಲ್ಪ ಗಿಡಮೂಲಿಕೆಗಳ ಪರಿಜ್ಞಾನವಂದಿಗನಾಗಿರುವ ತಾನು ತಾಲೀಮು ನಡೆಸುತ್ತ ಆಡಬೇಕಿರುವ ಮಾತುಗಳನ್ನು ಸಜ್ಜುಗೊಳಿಸಿಕೊಳ್ಳುತ್ತ ಸದ್ವಿನಯವನ್ನು ಆವಹಿಸಿಕೊಳ್ಳುತ್ತ ಅವರ ಬಂಗಲೆ ಸದೃಶ ಮನೆಯನ್ನು ಸಮೀಪಿಸಿ ನಿಲುವಂಗಿಯ ಮೇಲ್ಬಾಗದ ಗುಂಡಿಗಳನ್ನು ಒಂದೊಂದಾಗಿ ಹಾಕಿಕೊಳ್ಳುತ್ತಿರಲೂಬಹುದು. ತಂದೆ ಏನೋ ತನಗೆ ಪ್ರಾತಃಸ್ಮರಣೀಯರೆ, ಆದರೆ ಜೈಲಿನಿಂದ ಕೆಲವು ದಿವಸಗಳ ಹಿಂದೆಯಷ್ಟೆ ಬಿಡುಗಡೆಯಾಗಿ ಮನೆಯಲ್ಲಿರುವ ಅವರ ಸತ್ಪುಪುತ್ರ ಸೂರ್ಯಪ್ರತಾಪರೆಡ್ಡಿಯವರನ್ನು

ತಾನು ಖುದ್ದಾಗಿ ಭೆಟ್ಟಿ ಮಾಡಲಿರುವುದು ಇದೇ ಮೊದಲ ಸಲ! ಆತನ ಕ್ರಿಮಿನಲ್ ಹಿನ್ನಲೆ ಕುರಿತಂತೆ ತಾನು ಯೋಚಿಸುತ್ತಿರಲೂಬಹುದು, ತನ್ನ ನಾಟಕಗಳಲ್ಲಿನ ಕ್ರಿಮಿನಲ್ ಹಿನ್ನಲೆಯ ಪಾತ್ರಗಳೊಂದಿಗೆ ಹೋಲಿಸಿ ನೋಡುತ್ತಿರಲೂಬಹುದು. ಎಷ್ಟಿದ್ದರೂ ತಾನೂ ಅಂಥ ಪಾತ್ರಗಳನ್ನು ಲೀಲಾಜಾಲವಾಗಿ ಅಭಿನಯಿಸುತ್ತಿರುವನು ತಾನೆ! ಅದಕ್ಕೆ ಸಂಬಂಧಿಸಿದ ಭಾವನೆ ಸಂವೇದನೆಗಳನ್ನು ಆವಹಿಸಿಕೊಳ್ಳುವುದಾಗಲೀ ವಿಸರ್ಜಿಸುವುದಾಗಲೀ ತನಗೆ ದ್ರವಪದಾರ್ಥ ಸೇವಿಸಿದಷ್ಟು ಸುಲಭ!

ಹೊರಡುವ ಮೊದಲು ಅವನು ತನ್ನನ್ನೂ ಕರೆದ, ಸಂಗಡ ಹೊರಡುವ ಆಸೆ ನನಗೂ ಇಲ್ಲದಿರಲಿಲ್ಲ. ಹೋಗಬಹುದಿತ್ತಲ್ಲವೆ! ಮಾನಸಿಕವಾಗಿ ಸಿದ್ದನಿದ್ದೆ, ಆದರೆ ಹೋಗಲಾಗಲಿಲ್ಲ. ಹೋಗಿದ್ದರೆ ಶಶಾಂಕ ಪಾತ್ರವನ್ನು ಸದೃಢಗೊಳಿಸಿಕೊಳ್ಳಬಹುದಿತ್ತು. ಅರೆ ಕಾದಂಬರಿಯ ಶಶಾಂಕ ಪಾತ್ರವೆ! ತನ್ನ ತಂದೆಯನ್ನು ಭೆಟ್ಟಿ ಮಾಡಿಸು ಎಂದು ಅಲವತ್ತುಕೊಳ್ಳುತ್ತಿರುವ ಕಾದಂಬರಿಯ ಪ್ರತಿನಾಯಕ ಶಶಾಂಕನೆ! ಅರೆ ಹೌದಲ್ಲವೆ ಕೂಡಲೆ ಅದನ್ನು ತನ್ನ ತಂದೆಯ ಸಮಕ್ಷಮಕ್ಕೆ ಕರೆದೊಯ್ದು ನಿಲ್ಲಿಸುವುದು ಮುಖಾಮುಖಿಯಾಗಿಸುವುದು ಕಾದಂಬರಿಕಾರನಾದ ನನ್ನ ಆದ್ಯ ಕರ್ತವ್ಯ. ಆ ಕೂಡಲೆ ಬಳ್ಳಾರಿಯಲ್ಲಿರುವ ಜಲಂಧರನ್ನು ಮನಸ್ಸಿನಿಂದ ವಿಸರ್ಜಿಸಿ ಕಾದಂಬರಿಯ ಹಸ್ತಪ್ರತಿಯನ್ನು ಕೈಗೆತ್ತಿಕೊಂಡೆ. ಮನೆಯ ಮೊಗಸಾಲೆಯ ಮೆಟ್ಟಿಲುಗಳನ್ನು ಶಶಾಂಕ ಒಂದೊಂದಾಗಿ ಕ್ರಮಿಸಲಾರಂಭಿಸುವನು, ಅದೂ ಚಾಣಾಕ್ಷ ರಾಘಪ್ಪಸ್ವಾಮಿಯ ಮಾರ್ಗದರ್ಶನದಲ್ಲಿ. ಒಂದೊಂದು ಮೆಟ್ಟಿಲುಗಳನ್ನು ಕ್ರಮಿಸಲು ಅನಿರ್ವಚನೀಯ ದುಃಖ ಆತಂಕ ಸಂವೇದನೆಗಳನ್ನು ಅನುಭವಿಸಲಾರಂಭಿಸುತ್ತಾನೆ, ತನ್ನ ಬಾಲ್ಯದ ಕ್ಷಣಗಳನ್ನು ನೆನಪು ಮಾಡಿಕೊಳ್ಳುತ್ತ ಗದ್ಗದಿತನಾಗುತ್ತಾನೆ.

ಮಾರಣಾಂತಿಕ ಖಾಯಿಲೆಯಿಂದ ನರಳುತ್ತ ಸತ್ತ ಬಾಣಂತಿ ತಾಯಿ ತನ್ನ ಮಗನ ಕಣ್ಣವಪೆಗಳ ಪರ್ಣಶಾಲೆಯನ್ನು ಪ್ರವೇಶಿಸುವಳು, ಅಯ್ಯೋ ನನ್ನ ಪ್ರೀತಿಯ ಮಗನೆ ಎಂದು ಉದ್ಗರಿಸುತ್ತ ಅಪ್ಪಿಮುದ್ದಾಡುವಳು, ನೀನು ಆಚಾರಕ್ಕೆ ಅರಸನಾಗುವಿ, ನೀತಿಗೆ ಪ್ರಭುವಾಗುವಿ, ಮಾತಿಗೆ ಚೂಡಾಮಣಿಯಾಗುವಿ, ಈ ನತದೃಷ್ಟ ಜಗಕ್ಕೆ ಜ್ಯೋತಿಯಾಗುವಿ ಎಂದೇನೆಲ್ಲ ಕನಸು ಕಾಣುತ್ತಿದ್ದೆನಲ್ಲೋ ಮಗನೆ! ನನ್ನ ನಿರೀಕ್ಷೆಯಂತೆ ಸಂಭವಿಸಲಿದ್ದ ನಿನ್ನನ್ನು ತಂತಿ ಸಂದೇಶ ದಾರಿ ತಪ್ಪಿಸಿತಲ್ಲಾ ಮಗನೆ! ನಿನ್ನನ್ನು ಬೇಟೆಯಾಡಲು ಹೊಂಚಿರುವ ನಿನ್ನ ತಂದೆಯನ್ನು, ನಿನ್ನೊಳಗೆ ಬದುಕಲು ಹಾತೊರೆಯುತ್ತಿರುವ ನಿನ್ನ ತಂದೆಯನ್ನು, ಲಗ್ನವಾದೊಡನೆ ವೈಧವ್ಯದ ದುಃಸ್ವಪ್ನಗಳನ್ನು ಅನುಭವಿಸುವುದು ಹೇಗೆ ಎಂದು ಹೇಳಿಕೊಟ್ಟ ನನ್ನ ಗಂಡನನ್ನು ಕಾಣುವುದು ಸರ್ವಥಾ ಯೋಗ್ಯವಲ್ಲ ಮಗನೆ! ನೀನು ಪ್ರವೇಶಿಸಿರುವುದು ಶ್ಮಶಾನ ರೂಪದಲ್ಲಿರುವ ಸುಂದರ ಮನೆ ಮಾಯವಿಯ ಗುಹೆ ಅಕಾಲಿಕ ಮೃತ್ಯುವಿನ ವಾಸಸ್ಥಾನ ಕಣೋ! ಧರಿಸಲಿರುವ ಗರ್ಭಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುವುದರ ದ್ವಾರಾ ಭೌತಿಕವಾಗಿ ನಷ್ಟಹೊಂದಿರುವ ನಿನ್ನ ಹೆತ್ತತಾಯಿ ನೀಡುತ್ತಿರುವ ಸಲಹೆಯನ್ನು ತಿರಸ್ಕರಿಸದಿರು ಕಂದಾ ಎಂದು ಹೇಳುತ್ತಾಳೆ ಅಂಗಲಾಚುತ್ತಾಳೆ.

ಆದರೆ ಮೂರನೆ ಮೆಟ್ಟಲನ್ನು ಆಗಲೆ ಏರಿರುವ ಶಶಾಂಕ ಅಸಹಾಯಕತೆಯಿಂದ ಒದ್ದಾಡುತ್ತಾನೆ, ನಿರ್ಗಮಿಸುವ ಸಲುವಾಗಿ ನೋಡುತ್ತಾನೆ, ಅಲ್ಲಿ ಎರಡನೆ ಮೆಟ್ಟಲು ಕಾಣೆಯಾಗಿರುವುದು, ನಾಲ್ಕನೆ ಮೆಟ್ಟಲು ತನ್ನನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿರುವುದು. ಯಾವುದೋ ಅಗೋಚರ ಶಕ್ತಿಗೆ ಸಿಲುಕಿ ತನ್ನ ಕಾಲನ್ನು ಮೇಲೆತ್ತಬೇಕೆನ್ನುವಷ್ಟರಲ್ಲಿ ಗೋಡೆಗಳನ್ನು

ಸಾಲುಸಾಲಾಗಿ ಅಲಂಕರಿಸಿರುವ ತನ್ನ ಪುಯ್ಯಾವುಲ ವಂಶಜರ ಅಕಾಲಿಕ ಮೃತ್ಯುವಿನ ನೆತ್ತರ ಅರಮನೆಯಲ್ಲಿ ಶಾಶ್ವತ ವಿಶ್ರಾಂತಿ ಪಡೆದಿರುವವರ ತೈಲವರ್ಣದ ಭಿತ್ತಿಚಿತ್ರಗಳ ಕಡೆ ಅಕಸ್ಮಿಕವಾಗಿ ಕಣ್ಣೊರಳಿಸುವನು. ತಾನು ಅವರ ಪೈಕಿ ಯಾರೊಬ್ಬರೊಂದಿಗೂ ಒಡನಾಡಿದ ನೆನಪಿಲ್ಲ. ಕಥೆಗಳಲ್ಲಿ ಬದುಕಿದವರು ಕಥೆಗಳಲ್ಲಿ ಸತ್ತವರು ತನ್ನನ್ನು ಎತ್ತಿಮುದ್ದಾಡಿರುವುದು ಅಸಂಭವ. ಅವರಿಗೆ ಸಂಬಂಧಿಸಿದ ವದಂತಿಗಳ ಮರುಜೀವಣಿಗೆ ತನ್ನ ಅಂತರಂಗದಲ್ಲಿ ಅಚ್ಚಳಿಯದ ರೀತಿಯಲ್ಲಿ ಉಂಟು, ಆದರೂ ಅವರೆಲ್ಲ ತನಗೆ ಅಪರಿಚಿತರೆ! ಆದರೆ ತನ್ನ ಹೆಜ್ಜೆಗಳನ್ನು ನಿರ್ದೇಶಿಸುತ್ತಿರುವ ರಾಘಪ್ಪಸ್ವಾಮಿ ಪ್ರಾಚ್ಯವಸ್ತುಸಂಶೋಧಕನಂತೆ, ರೋಮ್ ಪ್ರವಾಸಿಗರ ಮಾರ್ಗದರ್ಶಕನಂತೆ, ಗ್ಲಾಡಿಯೇಟರುಗಳ ಉಪಪ್ರಬಂಧಕನಂತೆ ತೈಲಚಿತ್ರಗಳಲ್ಲಿ ನೆಲೆ ನಿಂತವರ ಪೂರ್ವಾಪರಗಳನ್ನು ಸಂಕ್ಷಿಪ್ತ ಹಾಗೂ ಪರಿಣಾಮಕಾರಿ ಭಾಷೆಯಲ್ಲಿ ಪರಿಚಯಿಸುತ್ತಿರುವನು. ಅನ್ಯಮನಃಸ್ಥಿತಿಯಲ್ಲಿ ಆಲಿಸುತ್ತಿರುವ ಶಶಾಂಕನ ಮನಸ್ಸನ್ನು ವಿಹ್ವಲಗೊಳಿಸುತ್ತಿರುವನು. ಭೋಜರಾಜನ ಸಿಂಹಾಸನದ ಅಸಂಖ್ಯಾತ ಮೆಟ್ಟಿಲುಗಳಂತೆ ಭಾಸವಾಗುತ್ತಿರುವ ಮೆಟ್ಟಿಲುಗಳ ಪೈಕಿ ಕೊನೆಯ ಮೆಟ್ಟಿಲ ಮೇಲೆ ಹೆಜ್ಜೆ ಇರಿಸುತ್ತಲೇ ಶಶಾಂಕ ತನ್ನ ನೋಟವನ್ನು ರುಗ್ಣಶಯ್ಯೆ ಕಡೆ ಹರಿಸುವುದಕ್ಕೂ ನನ್ನ ಕರುಳ ಅರಣ್ಯದ ಒಡಲಲ್ಲಿ ಮಗನೇ ಎಂಬ ಆರ್ತಧ್ವನಿ ಕೇಳಿಬರುವುದಕ್ಕೂ ಸರಿ ಹೋಯಿತು.

ಬರಹವನ್ನು ಸ್ಥಗಿತಗೊಳಿಸಿ ನೋಡುತ್ತೇನೆ ವೃದ್ಧನಲ್ಲದ ವೃದ್ಧನೋರ್ವ ಕಾಡಿನಂಚಿನಲ್ಲಿ ಗೋಚರಿಸಿದಾದ ಬಳಿಕ ಸ್ಪಷ್ಟಗೊಳ್ಳುತ್ತ ನನ್ನ ಕಡೆ ದಿಟ್ಟಿಸು ಮೊದಲು ಬಲ ಅಂಗೈಯನ್ನು ತನ್ನ ಕಣ್ಣುಗಳ ಮೇಲ್ಛಾವಣೆ ಮೇಲಿರಿಸಿಕೊಂಡು "ಮಗನೇ ನಾನು ಕಣಪ್ಪಾ ನಿನ್ನ ತಂದೆ" ಎಂದು ಕೇಳಿಸುವಂತೆ ಕೂಗುತ್ತಾನೆ. ಅರೆ ಅಲ್ಲಿರುವುದು ನನ್ನ ತಂದೆ! ಧಾವಿಸಬೇಕೆನ್ನುವಷ್ಟರಲ್ಲಿ ಆತನನ್ನು ಪುನಃ ಅರಣ್ಯದೊಡಲಿಗೆ ನೂಕಲೆತ್ನಿಸುತ್ತಿರುವ, ಕಾದಂಬರಿ ಮುಗಿದಾದ ಬಳಿಕವಷ್ಟೆ, ಅಲ್ಲಿತನಕ ಅರಣ್ಯದ ನೇಪಥ್ಯದಲ್ಲಿರು ಎಂದು ಸಲಹೆ ನೀಡುತ್ತ ವಾಪಸ್ಸು ಕಳಿಸುತ್ತಿರುವ ಅಪರಿಚಿತ! ನನ್ನ ತಂದೆಯನ್ನು ಪುನಃ ಕಾಡಿಗೆ ಮರಳಿಸುವ ಹಕ್ಕನ್ನು ಅವನಿಗೆ ಕೊಟ್ಟವರು ಯಾರು! ಧಾವಿಸಿ ತಡೆದೆ, ನೋಡಿದೆ, ಅರೆ ನನ್ನನ್ನೇ ಹೋಲುತ್ತಿದ್ದರೂ ಅಪರಿಚಿತ! ಯಾರು ನೀನು! ನನ್ನ ತಂದೆಯನ್ನು ತಡೆಯಲು ಎಷ್ಟು ಧೈರ್ಯ ಎಂದು ಕೇಳಿದ್ದಕ್ಕೆ ಅವನು ನಾನ್ಯಾರೆಂದು ತಿಳಿದಿರುವಿ! "ಆಶ್ರಯದಾತನಾಗಿರುವ ನೀನು ಮರೆಯುವುದೆಂದರೇನು! ನಿನ್ನ ತಂದೆಯಾದ ಮಾತ್ರಕ್ಕೆ ಈ ವೃದ್ಧನು ಸೃಜನಶೀಲ ಕಾರ್ಯಕ್ಕೆ ತೊಂದರೆ ಕೊಡುವುದು ನನಗೆ ಸರಿ ಕಾಣಲಿಲ್ಲ. ಅದಕ್ಕೆ ವಾಪಸ್ಸು ಕಳಿಸುತ್ತಿರುವೆ" ಎಂದು ಸಕಾರಣ ಸಹಿತ ವಿವರಿಸಿದ. ಓಹ್! ನನ್ನೊಳಗಿನ ಲೇಖಕನೆ! ಅಪಾದಮಸ್ತಕ ದಿಟ್ಟಿಸಿದೆ, ಅಪರೂಪಕ್ಕೆ ಭೆಟ್ಟಿಯಾಗುವ ಸಲುವಾಗಿ ದೂರದಿಂದ ಆಗಮಿಸಿರುವ ತಂದೆಯ ಭೆಟ್ಟಿಯನ್ನು ನಿರಾಕರಿಸದಿರು ಎಂದು ಅಂಗಲಾಚಿದೆ. ಅದಕ್ಕೆ ತಾನು "ತಂದೆಯಾದರೇನಂತೆ! ಲೇಖಕನಾದವನ ಏಕಾಗ್ರತೆ ಭಂಗ ತರುವುದು ಅಕ್ಷಮ್ಯ, ಮೊದಲು ಶಶಾಂಕ ತನ್ನ ತಂದೆ ಹರಿಶ್ಚಂದ್ರರೆಡ್ಡಿಯವರನ್ನು ಭೆಟ್ಟಿಯಾಗಲಿ, ಆ ಬಳಿಕ ನೀನು ನಿನ್ನ ತಂದೆ ಸಂಗಡ ಸ್ವಚ್ಛಂಧ ರೀತಿಯಲಿ ವಿಹರಿಸು, ಅದಕ್ಕೆ ನನ್ನ ತಕರಾರಿಲ್ಲ" ಎಂದು ಖಡಾಖಂಡಿತ ಧ್ವನಿಯಲ್ಲಿ ನಿರಾಕರಿಸುತ್ತಿರುವನು. ಅವನನ್ನು ತಕ್ಕ ಉತ್ತರಗಳಿಂದ ಸಮಾಧಾನಪಡಿಸಿದಾದಬಳಿಕ ನಾನು ನನ್ನ ತಂದೆ ಸಮಕ್ಷಮ ಸಾಷ್ಟಾತ್ಕಾರವಾದೆ, ಅಪಾದಮಸ್ತಕ ದಿಟ್ಟಿಸಿದೆ, ಅಲ್ಸರ್ ಖಾಯಿಲೆಯಿಂದ ಕೃಶಗೊಂಡಿರುವ ತನ್ನ ತಂದೆ! ಪಾಪಪ್ರಜ್ಞೆಯಿಂದ ಕೀಳರಿಮೆಯಿಂದ ನರಳುತ್ತ ಕಾದಂಬರಿಯ ಕಡತವನ್ನು ಪಕ್ಕಕ್ಕೆ ತಳ್ಳಿದೆ.

ಹೆತ್ತ ತಂದೆಯವರನ್ನು ನೋಡದೆ ಆರು ತಿಂಗಳುಗಳ ಕಾಲವನ್ನು ಕಳೆದಿರುವ ನನ್ನ ಕ್ರೌರ್ಯವೇ! ಕನಿಷ್ಟಪಕ್ಷ ಪತ್ರದಲ್ಲಾದರೂ ಅವರ ಯೋಗಕ್ಷೇಮ ವಿಚಾರಿಸಿದಿರುವ ನನ್ನ ಕ್ರೌರ್ಯವೇ! ಸದಸದ್ವಿವೇಕವನ್ನು ವಿವೇಚನೆಯನ್ನು ಅಳಿಸಿರುವ ಅಕ್ಷರಗಳನ್ನು ಅವಲಂಭಿಸಿರುವ ನನ್ನ ಕ್ರೌರ್ಯವೇ! ನೆನಪುಗಳಲ್ಲಿ ಪ್ರತಿಬಿಂಬವನ್ನು ನೋಡಿಕೊಂಡೆ. ವಿಕಾರವೆನ್ನಿಸಿತು. ಬದುಕಿಗೆ ನೆಲೆ ಕಲ್ಪಿಸಿರುವ ನೌಕರಿ ದರಿದ್ರವೆನ್ನಿಸಿತು, ಬಿಡುವಿನ ವೇಳೆಯನ್ನು ಬಲಿ ತೆಗೆದುಕೊಳ್ಳುತ್ತಿರುವ, ವಾತ್ಯಲ್ಯದ ತೀವ್ರತೆಯನ್ನು ಹ್ರಸ್ವಗೊಳಿಸಿರುವ ಸಾಹಿತ್ಯದ ಬಗ್ಗೆ ಅಸಹ್ಯ ಹುಟ್ಟಿತು. ಕಾಲ ಮಿಂಚಿಲ್ಲ, ಕೆಲವು ದಿವಸಗಳಮಟ್ಟಿಗಾದರೂ ಏಳೆಂಟು ದಿವಸಗಳ ಕಾಲ ರಜೆ ಹಾಕಿ ಊರಿಗೆ ದೌಡಾಯಿಸಬೇಕು. ಒಡನಾಡುವುದರ ಮೂಲಕ ನತದೃಷ್ಟ ತಂದೆ ಎಂದು ನಿಮ್ಮನ್ನು ನೀವು ಪರಿಗಣಿಸಿದಿರಿ ಎಂದು ಅವರಿಗೆ ಮನದಟ್ಟು ಮಾಡಿಕೊಡಬೇಕು, ಅವರಲ್ಲಿ ಜೀವನೋತ್ಸಾಹವನ್ನು ಉದ್ದೀಪಿಸಬೇಕು, ನೊಂದಿರುವ ಕರುಳುಗಳಿಗೆ ಸಾಂತ್ವನ ಹೇಳಬೇಕು ಅವುಗಳಲ್ಲಿ ದುರ್ಬಲಗೊಂಡಿರುವ ಭಾಗಗಳನ್ನು ಸೃಜನಶೀಲವಾಗಿ ರಿಪೇರಿ ಮಾಡಬೇಕು.

ಅಂತರಂಗದಲ್ಲಿ ತಂದೆ ಬೆಳೆಯಲಾರಂಭಿಸಿದರು, ಎಷ್ಟೆತ್ತರವೆಂದರೆ ಅಷ್ಟೆತ್ತರದವರೆಗೆ! ಅವರ ಕಣ್ಣುಗಳಿಂದ ಅಶ್ರುಧಾರೆ ದುಮ್ಮಿಕ್ಕಿ ಪ್ರವಾಹದ ರೂಪ ಧರಿಸಿತು. ಕೂಡಲೆ ಹೊರಡುವುದೋ! ಈ ಕ್ಷಣ ಕಾದಂಬರಿಯ ಬದಲಿಗೆ ಸುದೀರ್ಘ ಪತ್ರವನ್ನು ಬರೆದು ರವಾನಿಸುವುದೋ! ಏನೋ ಒಂದು ಮಾಡುವ ಗೊಂದಲದಲ್ಲಿ ಸಿಲುಕಿದೆ. ಅಷ್ಟರಲ್ಲಿ!

++++

ಸೂರ್ಯನ ಪ್ರಖರ ಕಿರಣಗಳು ಬಾಗಿಲ ಮೂಲಕ ನೇರವಾಗಿ ಒಳಗಡೆ ಕೂತಿದ್ದ ನನ್ನ ಪಾದಗಳ ಮೇಲೆ ಬಿದ್ದಿದ್ದವು, ಅದರ ಪರಿಣಾಮವಾಗಿ ನನ್ನ ದೇಹದ ಒಂದು ಭಾಗದ ನೆರಳು ಗೋಡೆ ಮೇಲೆ ಮೂಡಿತ್ತು, ಅದು ನನ್ನ ದೇಹದ ಮೂರುಪಟ್ಟಿತ್ತು. ಕುರ್ಚಿಯನ್ನು ಹಿಂದಕ್ಕೆ ತಳ್ಳುವ ಸಲುವಾಗಿ ಮೇಲೇಳುವಷ್ಟರಲ್ಲಿ ವ್ಯಕ್ತಿಯೋರ್ವನ ನೆರಳು ಹೊಸ್ತಿಲ ಮೇಲೆ ಬಿದ್ದು ನಿಧಾನವಾಗಿ ಒಳಗಡೆ ಚಾಚಿ ಸ್ಥಗಿತಗೊಂಡಿತು, ನನ್ನ ಗಮನ ಸೆಳೆಯುವ ಸಲುವಾಗಿ ತಾನು ಕೆಮ್ಮಿದ. ಆ ಸದ್ದನ್ನೂ ನಿರ್ಲಕ್ಷಿಸಿದೆ, ಅದರಿಂದ ಆತ ತನ್ನ ಕತ್ತನ್ನು ಒಳಗಡೆ ಚಾಚಿದ, ಬಿಸಿಲಿಗೆ ಬೆನ್ನು ಮಾಡಿದ್ದರಿಂದಾಗಿ ಆತನ ಚೆಹರೆ ಸ್ಪಷ್ಟವಾಗಿ ಗೋಚರಿಸದಿದ್ದರೂ ತಾನು ತಲವಾರ ರಾಮನೆಂದು ಖಚಿತವಾಯಿತು. ಏನು ವಿಷಯವೆಂದು ಕೇಳುವ ಮೊದಲು ತಾನೆ ಹೀಗೀಗೆ ಎಂದು ಹೇಳಿದ್ದೂ ತಡವಾಗಲಿಲ್ಲ, ನನ್ನ ಉತ್ತರಕ್ಕೂ ಕಾಯದೆ ಅಲ್ಲಿಂದ ತನ್ನ ನೆರಳನ್ನು ಉಪಸಂಹರಿಸಿಕೊಂಡು ನಿರ್ಗಮಿಸಿದ್ದೂ ತಡವಾಗಲಿಲ್ಲ.

ವಿಷಯ ತಿಳಿದು ಗಾಬರಿ ಮತ್ತು ಅಚ್ಚರಿಯಾಗದೆ ಇರಲಿಲ್ಲ, ಒಡನೆಯೇ ದೇಹದಾದ್ಯಂತ ಬೆವರು ಕಾಣಿಸಿಕೊಂಡಿತು. ಕಾರಣ ಕೆಲವು ತಿಂಗಳುಗಳ ಹಿಂದೆ ಪರಶುರಾಮನ ಸಂಗಡ ಶರಭನೋ ಶರಭನ ಸಂಗಡ ಪರಶುರಾಮನೋ ಇದ್ದಕ್ಕಿದ್ದಂತೆ ಕಾಣೆಯಾಗಿದ್ದರಲ್ಲ! ಅವರಿಬ್ಬರೂ ಊರಿನ ಗಡಿಯನ್ನು ದಾಟಿರುವುದೂ ಅಲ್ಲದೆ ಅಗಸೆ ಬಾಗಿಲನ್ನು ಸಮೀಪಿಸಿರುವರೆಂದು ತಿಳಿಯಿತು. ಅದೂ ನಾಗನಾಥನಹಳ್ಳಿಯ ಪ್ರಸಿದ್ಧ ವೆಂಕಾವಧೂತರಿಂದ ಬೋಧ ಸ್ವೀಕರಿಸಿ! ತಕ್ಷಣ ನಂಬುವುದಾಗಲಿಲ್ಲ, ಕೇಳಿದಾಕ್ಷಣ ಮೈಯ ಶ್ವೇದರಂದ್ರಗಳು ಬೆವರಿನಿಂದ ತುಳುಕಿ ಅದನ್ನು ಹಿಂದೆಯೇ ಹಿಂಗಿಸಿಕೊಂಡು ನಿಶ್ಚಲಗೊಂಡು ಬರಿದಾದವು. ಹೊಳೆಯದೆ ಮಾತುಗಳಿಗಾಗಿ ತಡಕಾಡದೆ ಇರಲಿಲ್ಲ. ಕಾರಣ ಭಯೋತ್ಪಾದಕರು ಸುಪಾರಿ ಕೊಲೆಗಡುಕರು

ಬೆಣ್ಣೆಯಲ್ಲಿ ಕೂದಲು ಸೀಳುವ ನಿಷ್ಣಾತರು ಬೋಧ ತೆಗೆದುಕೊಳ್ಳುವುದೆಂದರೇನು! ಬೋಧ ತೆಗೆದುಕೊಳ್ಳುವುದೆಂದರೆ ಹುಡುಕಾಟದ ಸಂಗತಿಯಲ್ಲ, ಅದೂ ವೆಂಕಾವಧೂತರ ಸಮಕ್ಷಮದಲ್ಲಿ! ನಾಗನಾಥನಹಳ್ಳಿ ಎಲ್ಲರಿಗೆ ತಿಳಿದಿರುವಂತೆ ನನಗೂ ತಿಳಿದಿರುವುದು, ಹಾಗೆಯೇ ಅಲ್ಲಿನ ಅವಧೂತರೂ ಸಹ. ಅದಿರುವುದು..

ಎಮ್ಮಿಗನೂರು ಮತ್ತು ನಾಗಲಾಪುರಗಳ ನಡುವೆ ನೈರುತ್ಯ ದಿಕ್ಕಿನ ಮೂಲೆಯಲ್ಲಿ, ವಾಗಿಲಿಗೆ ಬಂದ ಆರಂಭದ ದಿವಸಗಳಲ್ಲಿ ಅದೂ ಸಹ ರಾಯಸೀಮೆಯ ಕುಗ್ರಾಮಗಳ ಪೈಕಿ ಒಂದೆನ್ನಿಸಿತ್ತು. ಅದು ಪ್ರವರ್ಧಮಾನಕ್ಕೆ ಬಂದದ್ದು ಕಳೆದ ಎರಡು ಮೂರು ವರ್ಷಗಳ ಹಿಂದೆ, ಅದೂ ಅಂದಿನ ಮುಖ್ಯಮಂತ್ರಿ ವಿಜಯಭಾಸ್ಕರರೆಡ್ಡಿಯವರ ಸಲಹೆ ಮೇರೆಗೆ ಮಾಜಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಹೆಲಿಕ್ಯಾಪ್ಟರಲ್ಲಿ ಇಳಿದು ಅವಧೂತರ ದರ್ಶನ ಪಡೆದಂದಿನಿಂದ, ಅವರ ನುಡಿವಾಣಿಯಂತೆ ತಾವು ಉತ್ತರಪ್ರದೇಶದ ರಾಯ್‌ಬರೇಲಿ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾದೆವೆಂದು ಭಾವಿಸಿದಂದಿನಿಂದ, ಅವರ ಆಶೀರ್ವಾದದಿಂದ ತಾವು ಪುನಃ ಪ್ರಧಾನಿ ಹುದ್ದೆಯನ್ನು ಅಲಂಕರಿಸಿದಂದಿನಿಂದ! ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ ಎಂಬ ಗಾದೆ ಮಾತನ್ನು ಸಾಬೀತುಪಡಿಸುವುದರಲ್ಲಿ, ಒಂದು ಕುರಿಯನ್ನು ಇಡೀ ಕುರಿ ಮಂದೆಯು ವಿವೇಚನಾರಹಿತರೀತಿಯಲ್ಲಿ ಹಿಂಬಾಲಿಸುವ ರೀತಿಯಲ್ಲಿ, ತಾವೂ ಸನಾತನಿಗಳೆಂದು ಸಾಬೀತುಪಡಿಸುವ ಸಲುವಾಗಿ ರಾಜಕಾರಣಿಗಳು, ಶ್ರೀಮಂತರು, ಸಮಾಜದ ಗಣ್ಯವ್ಯಕ್ತಿಗಳು ಸಾಂಕ್ರಾಮಿಕಗೊಂಡ ವಿಷಯ ತಿಳಿದು ನಾಗನಾಥನಹಳ್ಳಿಯನ್ನು ತಲುಪಿ ಅವಧೂತರ ದರ್ಶನ ಪಡೆದುಕೊಂಡು ಹೋಗಲಾರಂಭಿಸಿದರು. ತಮಗದು ನಿಜವಾಯಿತು, ತಮಗಿದು ನಿಜವಾಯಿತು ಎಂದು ಸುದ್ದಿ ಹರಡಿಸಲಾರಂಭಿಸಿದರು, ಒಂದು ಸುದ್ದಿ ಒಡಲೊಳಗಿಂದ ನೂರಾರು ಸುದ್ದಿ ಮೊಟ್ಟೆಗಳು ಉದುರಲಾರಂಭಿಸುವುದು ಈ ದೇಶದಲ್ಲಿ ಮಾಮೂಲು ತಾನೆ! ಈ ದೇಶದಲ್ಲಿ ವರ್ತಮಾನಕ್ಕಿಂತ ಭೂತಕಾಲಕ್ಕೆ ಆದ್ಯಬೆಲೆ ನೀಡುವುದು ಮಾಮೂಲು ತಾನೆ!

ಅವಧೂತರು ತಮ್ಮ ಆರನೇ ಇಂದ್ರಿಯದ ಮೂಲಕ ದೆಹಲಿ ಸೇರಿದಂತೆ ದೇಶದ ಹಲವು ಪ್ರಮುಖ ರಾಜಕಾರಣಿಗಳ ಸಂಪರ್ಕ ಇರಿಸಿಕೊಂಡಿರುವರು ಎಂಬ ವದಂತಿಗಳು ಪುಂಖಾನುಪುಂಖ ರೀತಿಯಲ್ಲಿ ಹರಡಲಾರಂಭಿಸಿದಂದಿನಿಂದ, ದೇಶದ ರಾಜ್ಯಗಳ ಹಲವು ರಾಜಕಾರಣಿಗಳು ಗಣ್ಯರು ಕೋಟ್ಯಾಧಿಪತಿಗಳು ಅವರ ದರ್ಶನಾಕಾಂಕ್ಷಿಗಳಾಗಿರುವರು ಎಂಬ ವರ್ತಮಾನ ಹರಡಿದಂದಿನಿಂದ ನಾಗನಾಥನಹಳ್ಳಿಗೆ ತಾರಾಮೌಲ್ಯ ಪ್ರಾಪ್ತವಾಗಿರುವುದು. ನಮ್ಮ ವಾಗಿಲಿಯ ಹೆಬ್ಬಟಂ ರೆಡ್ಡಿಯವರೂ ಅಲ್ಲಿಗೆ ಹಲವು ಸಲ ಹೋಗಿ ಬಂದಿರುವುದುಂಟಂತೆ! ಅವಧೂತರು ಇವರಿಗೆ ದರ್ಶನ ಕೊಡದೆ ತುದಿಗಾಲಲ್ಲಿ ನಿಲ್ಲಿಸಿರುವರಂತೆ! ಇನ್ನೂ ಹತ್ತು ಹಲವು ವದಂತಿಗಳು ಊಹಾಪೋಹಗಳು ಅವರ ಪೂರ್ವೇತಿಹಾಸ ಕುರಿತಂತೆ ಹರಡಿರುವವು.

ಅವರು ಜನಿಸಿಯೇ ಏಳೆಂಟು ಶತಮಾನಗಳು ಗತಿಸಿರುವವಂತೆ! ವಿಜಯನಗರವನ್ನಾಳಿದ ಪ್ರೌಢದೇವರಾಯನ ಕಾಲದಲ್ಲಿ ಹಂಪಿ ಪರಿಸರದ ಗಿರಿಗಹ್ವರಗಳಲ್ಲಿ ವಾಸಿಸಿದ್ದ ನೂರೆಂಟು ವಿರಕ್ತರ ಪೈಕಿ ಹಲವರಿಗೆ ಗುರುಗಳಾಗಿದ್ದರಂತೆ! ಬೇತಾಳಗಳನ್ನೂ ಪಿಶಾಚಿಗಳನ್ನೂ ವಶಪಡಿಸಿಕೊಂಡು ತಮ್ಮ ಅಧೀನದಲ್ಲಿಟ್ಟುಕೊಂಡಿರುವರಂತೆ! ಹಸಿವು ತೃಷೆಗಳು ಅವರ ಬಳಿ ಸುಳಿಯುವುದಿಲ್ಲವಂತೆ! ಹಂಪಿಯ ಬಜಾರದಲ್ಲಿರುವ ಕಲ್ಲಿನಕೋಳಿಯ ಕಾಲಿನ ಬುಡದವರೆಗೆ ಪ್ರವಾಹ ಬಂದಿದ್ದಾಗ ಸ್ನಾನ ಮಾಡಿದ್ದೇ ಕೊನೆಯಂತೆ! ಪುನಃ ತಾವು ಸ್ನಾನ ಮಾಡಲು ಅಂಥ ಐತಿಹಾಸಿಕ ಕ್ಷಣಕ್ಕಾಗಿ ಕಾಯುತ್ತಿರುವರಂತೆ! ಮೃತ್ಯುಂಜಯರೆನ್ನುವುದಕ್ಕೆ ಸಾಕ್ಷಿಯಾಗಿ ಅವರ

ಮೈಮೇಲೆ ಕೋಟ್ಯಾಂತರ ಸುಕ್ಕುಗಳಿರುವವಂತೆ! ಅವರ ತಲೆ ಮೇಲೆ ಅದಕ್ಕೆ ಸಾಕ್ಷಿಯಾಗಿ ಕೆಲವು ಮಾರುದ್ದದ ಕೇಶರಾಶಿಯೇ ಇರುವುದಂತೆ! ಅದರ ಭಾರವನ್ನು ತಾಳಲಾರದೆ ಅದನ್ನು ತಮ್ಮ ತಲೆಯ ಮೇಲೆ ಜಟೆಯ ರೂಪದಲ್ಲಿ ಸುರುಳಿ ಸುರುಳಿಯಾಗಿ ಎರಡು ಮೊಳದೆತ್ತರಕ್ಕೆ ಕಟ್ಟಿಕೊಂಡಿರುವರಂತೆ! ಅಷ್ಟೇ ಅಲ್ಲದೆ ಮೊಳಗಳುದ್ದದ ಗಡ್ಡವಂತೂ ತಮ್ಮ ದೇಹಕ್ಕೂ ಮೀರಿ ಬೆಳೆದು ಇಲ್ಲಿಂದ ಅಲ್ಲಿಯವರೆಗೆ ಇಳಿಬಿದ್ದಿರುವುದಂತೆ! ಇನ್ನೂ ಹಲವು ವದಂತಿಗಳ ಪ್ರಕಾರ ಹಲವು ಶತಮಾನಗಳಿಂದ ನೀರಿನ ಉಸಾಬರಿಗೆ ಹೋಗದಿದ್ದರೂ ಅವರ ದೇಹದಿಂದ ಅಲೌಕಿಕ ಪರಿಮಳ ಹಗಲಿರುಳು ಸೂಸುತ್ತಿರುವುದಂತೆ! ಅದು ನಾಗನಾಥನಹಳ್ಳಿಯ ಬರಡು ಪರಿಸರವನ್ನು ಪರಿಮಳಯುಕ್ತವಾಗಿ ಇರಿಸಿರುವುದಂತೆ! ಇಂಥ ಅಂತೆಕಂತೆಗಳು ಒಂದೇ ಎರಡೇ!

ಇಂಥ ವದಂತಿಗಳ ಪರಿಣಾಮವಾಗಿ ನಾನು ಅಲ್ಲಿಗೆ ಹೋಗಿ ಬರಲು ಹಲವು ಸಲ ಪ್ರಯತ್ನಿಸಿರುವುದುಂಟು, ಸಮಯದ ಅಭಾವದಿಂದಾಗಿಯೋ ಈ ದೇಶದಲ್ಲಿ ಇದೆಲ್ಲ ಸರ್ವೇ ಸಾಮಾನ್ಯವೆಂಬ ಕಾರಣದಿಂದಾಗಿಯೋ ಅಂಥ ಪ್ರಯತ್ನಗಳಿಂದ ವಿರಮಿಸಿರುವೆನು. ಎಂಥೆಂಥವರಿಗೋ ನಿಲುಕದ ಅಂಥ ಅವಧೂತರು ಇವರಂಥವರನ್ನು ತಮ್ಮ ಬಳಿ ಬರಮಾಡಿಕೊಳ್ಳುವುದೆಂದರೇನು! ಬರಮಾಡಿಕೊಂಡಿರುವುದೂ ಅಲ್ಲದೆ ಬೋಧ ಕರುಣಿಸಿರುವುದೆಂದರೇನು! ಇವರಿಬ್ಬರೂ ಚಾಣಾಕ್ಷರೆಂದು ಖಚಿತಪಡಿಸಿಕೊಂಡೆ. ಅವರನ್ನು ಸ್ವಾಗತಿಸುವ ಸಲುವಾಗಿ ಅಲ್ಲಿನ ವಿದ್ಯಾಮಾನಗಳನ್ನು ಕುತೂಹಲದಿಂದ ಗಮನಿಸುವ ಸಲುವಾಗಿ ನಾನು ಹೊರಡದೆ ಇರಲಾಗಲಿಲ್ಲ.

ಇದ್ದದುರಲ್ಲಿ ನೀಟಾಗಿ ಉಡುಪು ಧರಿಸಿ ಮನೆಯಿಂದ ಹೊರ ಬಂದು ಬಾಗಿಲು ಮುಚ್ಚಿ ಅದಕ್ಕೆ ಬೀಗ ಹಾಕು ಸನ್ನಾಹದಲ್ಲಿದ್ದಾಗ ಪಕ್ಕದ ಮನೆಯಲ್ಲಿ ಅಂದರೆ ಪರಶುರಾಮನ ಮನೆಯಲ್ಲಿ ಮಡುಗಟ್ಟಿದ್ದ ದುಃಖ ನನ್ನನ್ನು ನೋಡಿದೊಡನೆ ತಾರಕಕ್ಕೇರಿತು. ಆತನ ಹದಿಹರೆಯದ ಮಕ್ಕಳು ಮಂದ್ರಸ್ಥಾಯಿಯಲ್ಲಿ ದುಃಖಿಸುತ್ತಿದ್ದರೆ ಆತನ ಹೆಂಡತಿ ಊರಿನ ಸಮಸ್ತರಿಗೆ ಕೇಳಿಸುವಂತೆ ಸಶಾಬ್ದಿಕವಾಗಿ ದುಃಖಿಸುತ್ತಿದ್ದಳು. ಅವರ ದುಃಖದಲ್ಲಿ ಶಾಪಕ್ಕೆ ಸಂಬಂಧಿಸಿದ ಅಶ್ಲೀಲಪದಗಳಂತೂ ಹೇರಳವಾಗಿದ್ದವು. ಬದಲಿಗೆ ತಮ್ಮ ನಸೀಬವನ್ನು ಹೀನಾಯವಾಗಿ ಹಳಿದುಕೊಳ್ಳುತ್ತಿದ್ದರು. ತಮ್ಮೆಲ್ಲ ಅನಿಷ್ಟಗಳಿಗೆ ಶನೇಶ್ವರನೇ ಕಾರಣವೆಂಬಂತೆ ಹೊಸ್ತಿಲವರೆಗೆ ಬಂದು ನನ್ನ ಕಡೆ ಗುರಿಯಿಟ್ಟು ನೋಡುತ್ತ ಪರೋಕ್ಷ ರೀತಿಯಲ್ಲಿ ನನ್ನನ್ನೂ ಹಳಿಯಲಾರಂಭಿಸಿದ್ದನ್ನು ಸ್ಪಷ್ಟವಾಗಿ ಕೇಳಿಸಿಕೊಂಡೆ. ಅದೇ ಸಮಯಕ್ಕೆ ಸರಿಯಾಗಿ ಆಗಮಿಸಿದ ಶೇಷಣ್ಣನೂ ಮೂಲಿಮನಿ ಗೌಡರೂ ಬಳಿಗೆ ಹೋಗಿ ಸಮಾಧಾನದ ಮಾತುಗಳನ್ನು ಹೇಳಲಾರಂಭಿಸಿದರು.

ಅದಕ್ಕೆ ಅನುವಾಗಲೆಂದು ಶೇಷಣ್ಣ ಮಕ್ಕಳನ್ನು ತಬ್ಬಿಕೊಂಡು "ಯಾಕೆ ಅಳುವಿರಿ! ನಿಮ್ಮ ಅಪ್ಪ ನಿಮಗೆ ಕಡಿಮೆ ಮಾಡಿರುವುದಾದರೂ ಏನು!" ಎಂದು ಸಮಾಧಾನದ ಮಾತುಗಳನ್ನು ಹೇಳುತ್ತಿದ್ದರೆ, ವಯಸ್ಸಿನಲ್ಲಿ ಹಿರಿಯರೂ, ಮಾನಸಿಕವಾಗಿ ಭಾವುಕರೂ ಆದ ಗೌಡರು ಪರಶುರಾಮನ ಪತ್ನಿಯ ತಲೆಯನ್ನು ನೇವರಿಸುತ್ತ "ನಿನ್ನ ಗಂಡ ಬೋಧ ಪಡೆದಿರುವುದು ಸಾಮಾನ್ಯ ಸಂಗತಿಯಲ್ಲ ತಂಗಿ, ಅದೂ ನಾಗನಾಥನಳ್ಳಿ ತಾತನವರಿಂದ ಅಂದರೆ ಹುಡುಗಾಟದ ಮಾತಲ್ಲಮ್ಮಾ, ಅಂಥ ಗಂಡನನ್ನು ಪಡೆಯಲಿಕ್ಕೆ ಪುಣ್ಯ ಮಾಡಿರುವಿಯಮ್ಮಾ, ಧೈರ್ಯ ತಂದುಕೋ, ಅಗೋ ಅಲ್ಲಿ ಮೇಸ್ಟ್ರನ್ನೇ ನೋಡು, ಅವರ ಸದ್ಯ ತಮ್ಮನೇ ಬೋಧ

ತೆಗೆದುಕೊಂಡಿದ್ದರೂ ನಗುನಗುತ್ತಾ ಇರುವರು" ಎಂದು ಧೈರ್ಯದ ಮಾತುಗಳನ್ನು ಹೇಳುತ್ತ ನನ್ನ ಕಡೆ ಬೆರಳು ಚಾಚಿ ತೋರಿಸಿದಾದ ಬಳಿಕ ಮುಂದುವರಿದು "ಸ್ನಾನ ಮುಗಿಸಿ ಪೂಜಾ ಸಾಮಾನುಗಳೊಂದಿಗೆ ಹೊರಡಮ್ಮಾ ಹೊರಡು, ತಡಾ ಮಾಡಬೇಡಮ್ಮಾ, ವೆಂಕಾವಧೂತರು ತಾವಿರುವ ಜಾಗದಿಂದಲೇ ಎಲ್ಲಾನೂ ಗಮನಿಸುತ್ತಿರುವರು ಎನ್ನುವುದನ್ನು ಮರೆಯಬೇಡ ಕಣಮ್ಮಾ" ಎಂದು ಹೇಳಿದರು. ಅದನ್ನು ಕಿವಿಯಾರ ಕೇಳಿಸಿಕೊಂಡೆ.

ಅವನೊಬ್ಬ ತಮ್ಮ! ನಾನೊಬ್ಬ ಅಣ್ಣ! ನಗು ಬಂತು. ಹಾಗೆಯೇ ಅದನ್ನು ಉಪಸಂಹರಿಸಿಕೊಂಡು ಗಂಭೀರತೆ ಪ್ರಕಟಿಸಿದೆ. ಬೋಧ ಎಂದರೇನೆನ್ನುವುದು ನನಗೆ ಅರ್ಥವಾಗಿದ್ದರೆ ತಾನೆ! ಬಳಿಕ ನನ್ನನ್ನು ಸೇರಿಕೊಂಡ ಗೌಡರು "ಬೋಧ ಎಂದರೆ ಹುಡುಕಾಟದ ಮಾತಲ್ಲ ಮೇಸ್ಟ್ರೇ! ಅದೂ ನಾಗನಾಥನಹಳ್ಳಿ ವೆಂಕಾವಧೂತರಿಂದ!" ಎಂದು ಅವರ ಮುಖ ಚೆಹರೆಗಳನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು ಕಣ್ಣುಗಳನ್ನು ಮುಚ್ಚಿ ತೆರೆದು ನಿಡಿಸುಯ್ದರು.

ಅವರೂ ಒಂದು ಅರ್ಥದಲ್ಲಿ ಬೋಧ ಸ್ವೀಕರಿಸಿದ್ದಂಥವರೆ, ಶೇಷಣ್ಣನೂ ಸಹ. ಏನೇ ಹೇಳಿದರೂ ಅವೆಲ್ಲವು ಎಲ್ಲರಿಗೂ ತಿಳಿದಿರುವ ಸಂಗತಿಗಳೇ! ಈ ಹಿಂದೆ ತಿಳಿಸಿರುವಂತೆ ವಾಗಿಲಿಗೆ ಕಾಲಳತೆ ದೂರದಲಿ ಬೆಳೆದಿರುವ ಗಿಡಮರಗಳು ದಟ್ಟವಾಗಿ ಬೆಳೆದಿರುವವ್ಲು ಪುಟ್ಟ ಕಾಡನ್ನುನೆನಪಿಸುವಂತಿರುವವು. ಅದರಲ್ಲಿ ಸಿದ್ಧಾರೂಢರು ತಪಸ್ಸು ಮಾಡಿದ್ದರೆಂಬ ಪ್ರತೀತಿ ಇರುವುದು, ಅವರು ವಾಗಿಲಿಯಿಂದ ಧಾರವಾಡದ ಕಡೆ ಹೊರಡುವ ಪೂರ್ವದಲ್ಲಿ ತಮ್ಮ ಅಚ್ಚುಮೆಚ್ಚಿನ ಶಿಷ್ಯೆ ಲಕ್ಷ್ಮಿ ಎಂಬಾಕೆಗೆ ಅದರ ಉಸ್ತುವಾರಿಯನ್ನು ವಹಿಸಿದರಂತೆ, ಆಕೆ ಅಲ್ಲಿಯೇ ಸಜೀವ ಸಮಾಧಿ ಹೊಂದಿರುವಳಂತೆ, ಆದ್ದರಿಂದಾಗಿ ಅದಕ್ಕೆ ಲಚುಮವ್ವನ ತೋಪು ಎಂದು ಪ್ರಸಿದ್ಧವಾಗಿರುವುದಂತೆ, ಹಲವು ಸಾಧುಗಳು ತಮ್ಮ ಸ್ಥಿತಿವಂತ ಶಿಷ್ಯರನ್ನವಲಂಭಿಸಿ ಅಲ್ಲಿಯೇ ವಾಸಿಸುತ್ತಿರುವರು. ಅಂಥ ಶಿಷ್ಯರ ಪೈಕಿ ಈ ನಮ್ಮ ಶೇಷಣ್ಣ, ಮೂಲಿಮನಿ ಗೌಡರು. ಇವರಿಬ್ಬರು ಪ್ರತಿ ಹುಣ್ಣುಮೆ ಅಮವಾಸ್ಸೆಗಳ ಮೆಲ್ಲಗೆ ವಾಗಿಲಿಯ ಸಮೀಪದ ಲಚುಮವ್ವನ ತೋಪು ಸೇರಿಕೊಳ್ಳುತ್ತಿದ್ದುದೂ, ಅಲ್ಲಿ ಸಾಧುಗಳು ರಾತ್ರಿ ಇಡೀ ನಡೆಸುತ್ತಿದ್ದ ಭಜನಾ ಕಾಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದುದೂ, ಗಾಂಜಾತೊಪ್ಪಲು ತುಂಬಿದ ಗುಡುಗುಡಿಯನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತ ಸೇದಿ ಲೌಕಿಕ ಪ್ರಪಂಚದ ಹಾಗುಹೋಗುಗಳನ್ನು ಮರೆಯುತ್ತಿದ್ದುದೂ, ಬೆಳಗಾದ ಬಳಿಕ ಮರಳಿ ತಮ್ಮ ಕುಟುಂಬ ಸದಸ್ಯರ ಟೀಕೆಟಿಪ್ಪಣಿಗಳನ್ನು ಪ್ರಸಾದವೆನ್ನುವಂತೆ ಸ್ವೀಕರಿಸುತ್ತಿದ್ದುದೂ ಬಲ್ಲವನಾದ ನಾನು ಅವರ ಮಾತಿಗೆ ಚಕಾರ ವ್ಯಕ್ತಪಡಿಸಲಿಲ್ಲ.

ಇಲ್ಲೊಂದೇ ಅಲ್ಲದೆ ವಾಗಿಲಿಯ ಆಜುಬಾಜಲ್ಲಿನ ಗ್ರಾಮಗಳಾದ ಕೂಡ್ಲೂರು ಗೆಜ್ಜೆಹಳ್ಳಿ ಹೊಳಗುಂದಿ ಸುಳುವಾಯಿ ಮತ್ತಿತರ ಕಡೆಗಳಲ್ಲಿ ಸ್ವಯಂಘೋಷಿತ ಸಾಧು ಸಂತರಿಗೆ ಬರವಿರಲಿಲ್ಲ, ಒಂದು ಅರ್ಥದಲ್ಲಿ ವಾಗಿಲಿಯಲ್ಲಿನ ಸಾಂಸಾರಿಕ ತಾಪತ್ರಯಗಳಿಗೆ ರೋಸಿದ್ದವರ ಸಂಘಕ್ಕೆ ಅನೌಪಚಾರಿಕ ಅಧ್ಯಕ್ಷ ಗೌಡರಾಗಿದ್ದರೆ ಶೇಷಣ್ಣ ಅದರ ಕಾರ್ಯದರ್ಶಿಯಾಗಿದ್ದನು. ಅವರಿಬ್ಬರು ತಮ್ಮ ಅನಧಿಕೃತ ಸಂಘಕ್ಕೆ ಸದಸ್ಯರ ನೋಂದಾಪಣೆ ಮಾಡಿಕೊಳ್ಳಲು ಹಗಲಿರುಳು ಶ್ರಮಿಸುತ್ತಿದ್ದರು. ತಮ್ಮ ಹೆಂಡಂದಿರು ಮಕ್ಕಳ ಅಸಹಕಾರಕ್ಕೆ ರೋಸಿಯೋ, ಸಾಲಗಾರರ ಉಪಟಳಕ್ಕೆ ಬೇಸತ್ತೋ, ತಮ್ಮ ಕನಸುಗಳು ನನಸಾಗದ ಕಾರಣಗಳಿಂದಾಗಿಯೋ ಲಚುಮವ್ವನ ತೋಪನ್ನು ಸೇರಲು ಹಾತೊರೆಯುತ್ತಿದ್ದ ಮಹಾನುಭಾವರು ವಾಗಿಲಿಯಲ್ಲಿ ಶೇಕಡಾ ಇಪ್ಪತ್ತರಷ್ಟಿದ್ದರು. ಅವರೆಲ್ಲ ಥೂ ಈ ತಮ್ಮ ನರಜನ್ಮವೇ, ಥೂ ನಮ್ಮ ಸಂಸಾರವೇ ಎಂದು

ಮುಂತಾಗಿ ತಮ್ಮನ್ನು ತಾವೇ ಲೇವಡಿ ಮಾಡಿಕೊಳ್ಳುತ್ತಿದ್ದುದು ಮಾಮೂಲು ದೃಶ್ಯವಾಗಿತ್ತು. ಅಂಥವರನ್ನು ಇಂಥವರು ಸಕಾರಣವಾಗಿ ಏಕಾಂತದಲ್ಲಿ ಸಂಧಿಸುವುದು, ವೇದಾಂತ ಜ್ಞಾನಸಿಂಧು ಕೃತಿಯಲ್ಲಿನ ಪುಟಗಳನ್ನು ತೆರೆದು ವಾಚಿಸುವುದು, ಸಂಸಾರವೆನ್ನುವುದು ನೀರ ಮೇಲಣ ಗುಳ್ಳೆ, ಹೆಂಡತಿ ಮಾಯೆ, ಮಕ್ಕಳೂ ಮಾಯೆ, ಅದರ ಮಾಯೆಯನ್ನು ಬಲ್ಲವರಿಲ್ಲ ಎಂದು ಬೋಧಿಸುತ್ತ ನಿಟ್ಟುಸಿರುಗಳನ್ನು ಬಿತ್ತುವುದು, ಅದರಿಂದ ತುಸು ನೆಮ್ಮದಿ ಪಡೆಯುವ ಸಲುವಾಗಿ ಇಗೋ ಒಂದೇ ಒಂದು ಧಮ್ಮು ಎಳೆಯಿರಿ ಎಂದು ಹೇಳುತ್ತ ಅಂಥವರ ಕೈಗೆ ಗುಡುಗುಡಿಯನ್ನು ನೀಡುವುದು ಇದೆಲ್ಲ ತೆರೆಮರೆಯಲ್ಲಿ ನಡೆದೇ ಇತ್ತು. ಗುಡುಗುಡಿಯ ಅಲೌಕಿಕ ಪರಿಮಳಕ್ಕೆ ಮರುಳಾಗಿ ಸಂಘದ ಸದಸ್ಯರಾಗುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇತ್ತೇ ಹೊರತು ಕಡಿಮೆಯಾಗಿರಲಿಲ್ಲ. ಸಾಲಗುಂದಿ ರಂಗಾರೆಡ್ಡಿ, ಅಭಿನವ ಕುಮಾರವ್ಯಾಸರೆಂದೇ ಕರೆಸಿಕೊಳ್ಳುತ್ತಿದ್ದ ಹುಚ್ಚಾರೆಡ್ಡಿಯಂಥ ಗಣ್ಯರು ಸಂಘದ ಹೊಸ್ತಿಲಲ್ಲಿ ನಿಂತು ಉಭಯ ಸಂಕಟಗಳನ್ನು ಅನುಭವಿಸುತ್ತಿದ್ದರು, ಒಂದೆರಡು ಧಮ್ಮು ಗಾಂಜಾ ಸೇದಿ ಇದ್ದಕ್ಕಿದ್ದಂತೆ ನಾಪತ್ತೆಯಾಗುತ್ತಿದ್ದರು. ಅಮಲು ಇಳಿದ ಬಳಿಕ ಪುನಃ ಸಂಸಾರ ಸಾಗರದಲ್ಲಿ ತೇಲುತ್ತಿದ್ದರು. ಅವರದ್ದೆಲ್ಲ ಒತ್ತಟ್ಟಿಗಿರಲಿ, ಶೇಷಣ್ಣನ ಸಹಾಯದಿಂದ ಗೌಡರೂ ತಮ್ಮ ಸಂಘಕ್ಕೆ ನನ್ನನ್ನೂ ಸೆಳೆಯುವ ಸಲುವಾಗಿ ಬಲೆ ಬೀಸುವುದನ್ನು ಮುಂದುವರೆಸಿದ್ದರು. ಸದಾ ತನ್ನ ಅಂಗಿಯ ಜೇಬುಗಳ ಪೈಕಿ ಒಂದರಲ್ಲಿ ಚಿಮಣಿಯನ್ನು, ಇನ್ನೊಂದರಲ್ಲಿ ಗಾಂಜಾ ತೊಪ್ಪಲನ್ನೂ ಇಟ್ಟುಕೊಂಡಿರುತ್ತಿದ್ದ ಶೇಷಣ್ಣ ಹಿಂದೊಮ್ಮೆ "ಎರಡೇ ಎರಡು ಧಮ್ಮು ಎಳೆದಿರೆಂದರೆ ಐದು ಪೇಜಿ ಬರೆವಲ್ಲಿ ಹತ್ತು ಪೇಜಿ ಬರೆಯುವಿರಿ, ಕಥೆಗಳಲ್ಲವೂ ಕಥೆಗಳಾಗುವವು, ಪ್ರಪಂಚದಲ್ಲಿರುವ ಎಲ್ಲಾ ಕಥೆಗಳು ನಿಮ್ಮ ಹತ್ತಿರ ಓಡೋಡಿ ಬರುವವು ಸಾರ್" ಎಂದು ಪುಸಲಾಯಿಸಿದ್ದ, ಅಂಥ ಅವಕಾಶಕ್ಕಾಗಿ ಕಾಯುವುದನ್ನು ಮುಂದುವರೆಸಿದ್ದ, ಪ್ರಾಯೋಗಿಕವಾಗಿ ಒಂದೆರಡು ಧಮ್ಮು ಎಳೆದು ರುಚಿ ನೋಡಲು ಪ್ರಯತ್ನಿಸಿ ವಿಫಲನಾಗಿದ್ದೆ. ಬೋಧದ ಸಾಧಕ ಬಾಧಕಗಳು ಏನೇ ಇರಲಿ, ಅದು ತನ್ನ ವ್ಯಾಪ್ತಿಗೆ ಬಂದವರಿಗೆ ಸ್ನಾನ ಶೌಚದ ಔಚಿತ್ಯ ಕಲಿಸುತ್ತಿತ್ತು, ವ್ಯಾಕರಣ ಶುದ್ಧ ರೀತಿಯಲ್ಲಿ ಮಾತನಾಡುವುದನ್ನು ಕಲಿಸುತ್ತಿತ್ತು, ಪರಸ್ತ್ರೀಯರನ್ನು ಭ್ರಾತೃತ್ವದ ಮಸೂರದಿಂದ ನೋಡುವುದನ್ನು ಕಲಿಸುತ್ತಿತ್ತು. ಅಂಥವರಿಗೆ ಗಡ್ಡ ಬಿಡುವುದನ್ನೂ, ತಲೆಗೆ ನೀಟಾಗಿ ವಲ್ಲಿ ಸುತ್ತಿಕೊಳ್ಳುವುದನ್ನೂ, ನೊಸಲಿಗೆ ವಿಭೂತಿ ಗೆರೆಗಳನ್ನು ಲೇಪಿಸಿಕೊಳ್ಳುವುದನ್ನೂ, ಭ್ರೂ ಮಧ್ಯೆ ಕುಂಕುಮ ತಿಲಕ ಇಟ್ಟುಕೊಳ್ಳುವುದನ್ನೂ, ಸಾಮಾಜಿಕರನ್ನು ಅಣ್ಣ ತಮ್ಮ ಅಕ್ಕ ತಂಗಿ ಎಂದು ಮುಂತಾದ ಸಂಬೋಧವಾಚಕಗಳಿಂದ ಸಂಬೋಧಿಸುವುದನ್ನೂ, ಅರಿಷಡ್ವರ್ಗಗಳ ಉಪಟಳದಿಂದ ಬಿಡುಗಡೆಗೊಳ್ಳುವುದು ಹೇಗೆ ಎನ್ನುವುದನ್ನೂ, ಹೆಣ್ಣು ಮಾಯೆ, ಹೆಣ್ಣೇ ಸಕಲ ದುಃಖಕ್ಕೆ ಕಾರಣ ಎನ್ನುವುದನ್ನೂ, ಒಟ್ಟಿನಲ್ಲಿ ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ ಎಂಬ ತತ್ವವನ್ನು ಕಲಿಸುತ್ತಿತ್ತು. ಆದರೆ ಮಾಂಸ ಮದ್ಯೆಗಳ ಸೇವನೆಯಿಂದ ದೂರವಿರಬೇಕೆಂದು ಮಾತ್ರ ಹೇಳುತ್ತಿರಲಿಲ್ಲ, ಹೆಣ್ಣು ಮಾಯೆ ಎಂದ ಮೇಲೆ, ರತಿಕ್ರೀಡೆ ನರಕಕ್ಕೆ ರಹದಾರಿ ಎಂದ ಮೇಲೆ ಹಾಸಿಗೆ ಪಥ್ಯೆ ಮಾಡುವುದು ಕಡ್ಡಾಯ ತಾನೆ! ಆದರೂ ತೋಪಿನಲ್ಲಿದ್ದ ಮಹಿಳಾ ಸದಸ್ಯೆಯರೊಂದಿಗೆ ಪುರುಷ ಸಾಧುಗಳು!

ನಾವು ಅಲ್ಲಿ ಮುಳುಗಿ ಇಲ್ಲಿ ತೇಲಿ ಆ ಸ್ಥಳಕ್ಕೆ ಹತ್ತಿರವಾದೆವು, ಆನೆ ಮರಿ ಎಂಕಣ್ಣನ ಮನೆ ಅಗಸೆಬಾಗಿಲಿಗೆ ಅನತಿ ದೂರದಲ್ಲಿತ್ತು, ಆ ಮನೆಯಷ್ಟೇ ದೊಡ್ಡದು ಅದರ ಮುಂದಿದ್ದ ವಿಶಾಲವಾದ ಕಟ್ಟೆ, ಅದರ ತುಂಬೆಲ್ಲಾ ಅಲ್ಲಿಂದ ಇಲ್ಲಿಯವರೆಗೆ ಹಾಸಲಾಗಿದ್ದ ಕರಿಕಂಬಳಿ

ಎಂಕಣ್ಣನಷ್ಟೇ ಕಪ್ಪಗಿತ್ತು, ಅದರ ಮೇಲೆ ಅವರಿಬ್ಬರೂ ಸಾಲಂಕೃತರಾಗಿ ಘನಗಂಭೀರತೆಯಿಂದ ಮಟ್ಟಸರೀತಿಯಲ್ಲಿ ಆಸೀನರಾಗಿದ್ದರು. ಅವರನ್ನು ಸ್ವಾಗತಿಸುವ ಸಲುವಾಗಿ ವಾಗಿಲಿಯ ತೋಪಿನಿಂದಲೂ ಇನ್ನಿತರ ಊರುಗಳಿಂದಲೂ ವಿವಿಧ ವಯೋಮಾನದ ಸಾಧುಗಳು ಅವರ ಸಮಕ್ಷಮದಲ್ಲಿ ನೆರೆದಿದ್ದರು. ಅವರ ಪೈಕಿ ಕೆಲವರು ಈ ದೇಅ ಮೂರ್ರೇ ದಿನ ಅಲ್ಲವೇನೋ ಎಂದೋ ಘುಡಿಯ ನೋಡಿರ್ರಣ್ಣಾ ದೇಅದ ಗುಡಿಯ ನೋಡಿರ್ರಣ್ಣಾ ಎಂದೋ ಭಜನೆಯ ಹಾಡುಗಳನ್ನು ಡಕ್ಕಿಗಳನ್ನು ಭಾರಿಸುತ್ತ ಏರುದನಿಯಲ್ಲಿ ಹಾಡುತ್ತಿದ್ದರು, ಇನ್ನೂ ಕೆಲವರು ನಿಸ್ಸಂಕೋಚವಾಗಿ ಗಾಂಜಾ ಸೇದುತ್ತ ಸೇದಿದ ಎಂಜಲು ಚಿಮಣಿಯನ್ನು ಪಕ್ಕದಲ್ಲಿದ್ದವರಿಗೆ ವರ್ಗಾಯಿಸುತ್ತಿದ್ದರು, ಇನ್ನೂ ಕೆಲವರು ಅವರನ್ನು ತದೇಕಚಿತ್ತದಿಂದ ನೋಡುತ್ತ ನಿಟ್ಟುಸಿರುಗಳನ್ನು ಬಿಡುತ್ತಿದ್ದರು, ಮತ್ತೆ ಕೆಲವರು ಬರುತ್ತಿದ್ದವರನ್ನು ಕಣ್ಸನ್ನೆಗಳಿಂದ ಕೈ ಸನ್ನೆಗಳಿಂದ ಬಾಯಿ ಮಾತುಗಳಿಂದ ಸ್ವಾಗತಿಸುತ್ತಿದ್ದರು. ಕಟ್ಟೆಯ ಮುಂದೆ ತುಸು ದೂರದಲ್ಲಿದ್ದ ವಿಶಾಲ ಬಯಲಲ್ಲಿ ನಾಗರಿಕವೂ ಸುಸಂಸ್ಕೃತವೂ ಆದ ಬೀದಿ ನಾಯಿಗಳು ಸಾಮೂಹಿಕವಾಗಿ ಮೊಣಕಾಲ ಮೇಲೂರಿ ಕಿವಿ ನಿಗುರಿಸಿ ಅಲ್ಲಿನ ವಿದ್ಯಾಮಾನಗಳನ್ನು ಗಮನಿಸುತ್ತ ಬೊಗಳುವ ಸನ್ನಾಹದಲ್ಲಿದ್ದವು, ಅವುಗಳ ಪೈಕಿ ಕೆಲವಂತೂ ಮುಗಿಲಿಗೆ ಮುಖ ಮಾಡಿ ಅಶ್ಲೀಲವಾಗಿಯೂ ಅಮಂಗಳಕರವಾಗಿಯೂ ಊಳಿಡುತ್ತಿದ್ದವು.

ಇನ್ನೇನು ಅವುಗಳ ಕಡೆ ಎಸೆಯುವ ಸಲುವಾಗಿ ತನ್ನ ಬಲಗೈಯಲ್ಲಿ ಕಲ್ಲಿನ ತುಂಡನ್ನು ಹಿಡಿದುಕೊಂಡಿದ್ದ ಎಂಕಣ್ಣನ ಹಿರಿಯ ಮಗ ಅಟುಬಿ ನಮ್ಮನ್ನು ನೋಡಿ ಏನನ್ನೋ ಉದ್ಗರಿಸಿ ಬರಮಾಡಿಕೊಂಡನು. ಶೇಷಣ್ಣನೊಡನೆ ಗೌಡರು ನನ್ನೆಡಬಲದಿಂದ ತಪ್ಪಿಸಿಕೊಂಡು ಸಾಧುಗಳನ್ನು ಸೇರಿದರು, ನಾನು ಗುಂಪಿನ ಎಡಬದಿಯಲ್ಲಿ ಅಂದರೆ ಅವರಿಬ್ಬರ ಕಣ್ಣಳತೆಯಲ್ಲಿ ನಿಂತುಕೊಳ್ಳುವ ಆರಂಭದಲ್ಲಿ ಎರಡೂ ಕೈಗಳನ್ನು ಹೃದಯ ಭಾಗದಲ್ಲಿ ಕಟ್ಟಿಕೊಳ್ಳುವುದನ್ನು ಮರೆಯಲಿಲ್ಲ. ಕಣ್ಣುಗಳನ್ನು ಹತ್ತಿರಕ್ಕೆ ಚಾಚಿ ಆಸ್ವಾದಿಸಲಾರಂಭಿಸಿದೆ, ಅದೇ ಬೆಳೆಗ್ಗೆ ನೀಟಾಗಿ ಕ್ಷೌರ ಮಾಡಿಸಿಕೊಂಡಿರುವ ಕಾರಣಕ್ಕೆ ಮುಖದ ಎಲುಬುಗಳನ್ನು ಖಚಿತವಾಗಿ ಎಣಿಕೆ ಮಾಡಬಹುದಿತ್ತು, ಗಾಂಜಾದೊಂದಿಗೆ ಸಾರಾಯಿಯನ್ನೂ ಸೇವಿಸಿದ್ದರಿಂದಾಗಿ ಅವರಿಬ್ಬರ ಕಣ್ಣುಗಳು ಆಗೊಮ್ಮೆ ಈಗೊಮ್ಮೆ ಹ್ರಸ್ವಗೊಳ್ಳುತ್ತಿದ್ದರೂ ಚುರುಕಾಗಿ ತಮ್ಮ ಸುತ್ತಲಿನ ವಿದ್ಯಾಮಾನಗಳನ್ನು ಗಮನಿಸುತ್ತಿದ್ದವು, ಆಗಾಗ್ಗೆ ನಾಲಗೆಗಳನ್ನು ಹೊರಚಾಚಿ ತಮ್ಮ ತುಟ್ಟಿಗಳ ಮೇಲೆ ಹರಿದಾಡಿಸುತ್ತಿದ್ದರು, ಆಗಾಗ್ಗೆ ನನ್ನ ಕಡೆ ಅಯ್ಯೋ ನರಹುಳವೇ ಎಂಬಂತೆ ನೋಡುತ್ತಿದ್ದರು.

ಅದೇ ಸಮಯಕ್ಕೆ ಸರಿಯಾಗಿ ಹೆಂಗಳೆಯರ ಸಹಾಯದಿಂದ ತನ್ನ ಕರುಳಕುಡಿಗಳೊಡನೆ ಆಗಮಿಸಿದ ಲಚುಮವ್ವ ಚಕ್ರಬಿಂಬ ಕೋಟೆ ಸದೃಶ ಕೋಟೆಯನ್ನು ಇಚ್ಛಾಶಕ್ತಿಯಿಂದ ಭೇದಿಸಿಕೊಂಡು ಮುಂದಕ್ಕೆ ಧಾವಿಸಿದಳು, ತನ್ನ ಗಂಡ ಪರಶುರಾಮನ ಕಡೆ ತನ್ನೆರಡೂ ಕೈಗಳನ್ನು ಚಾಚುತ್ತ ಅಯ್ಯೋ ನಿನಗೇನು ಬಂತೋ ಕೇಡುಗಾಲ, ಹೆಂಡ್ರು ಮಕ್ಕಳು ನೆನಪಾಗಲಿಲ್ಲವೇನೋ ನಿನಗೆ ಎಂದು ತಾರಕ ಸ್ವರದಲ್ಲಿ ಶಪಿಸಲಾರಂಭಿಸಿದಳು, ಸ್ಥಿತಪ್ರಜ್ಞನಂತೆ ಕುಳಿತಿದ್ದ ಆತ ತನ್ನ ಹೆಂಡತಿಯನ್ನು ನೀರ ಮೇಲಿನ ಗುಳ್ಳೆಯೆಂದೇ ಭಾವಿಸಿ ಒಂದು ಕ್ಷಣ ಮಗಳೆ ಎಂದೂ ಇನ್ನೊಂದು ಕ್ಷಣ ತಾಯಿ ಎಂದೂ, ಮತ್ತೊಂದು ಕ್ಷಣ ಆದಿಸಗುತಿ ಎಂದೂ ಸಂಬೋಧಿಸುವ ಪ್ರಯತ್ನ ನಡೆಸಿದ, ಅದೂ ತೊದಲುತ್ತ ಅಸ್ಪಷ್ಟವಾಗಿ. ಅದು ಯಾರಿಗೆ ಕೇಳಿಸಿತೋ ಯಾರಿಗೆ ಕೇಳಿಸಲಿಲ್ಲವೋ! ಯಾರೊಬ್ಬರೂ ಅವರಿಬ್ಬರ ನಡುವೆ

ಉದ್ಭವಿಸಿದ್ದ ಮಾತುಕತೆಯನ್ನು ತಡೆಯಲು ಪ್ರಯತ್ನಿಸಲಿಲ್ಲ, ಕಾರಣ ಸಂಬಂಧಗಳು ಅಂತಿಮಗೊಳ್ಳುವ ಸಂಕ್ರಮಣ ಕಾಲ ಅದಾಗಿತ್ತು, ಮಹಿಳಾ ಸಾಧುಗಳ ಪೈಕಿ ಸ್ಥೂಲಕಾಯದ ಓರ್ವ ಸದಸ್ಯೆಯು ಲಚುಮವ್ವಳನ್ನು ಬಿಗಿದಪ್ಪಿ ಮರೆಗೆ ಕರೆದೊಯ್ದು ಏನನ್ನು ಕುಡಿಸಿದಳೋ ಏನನ್ನು ಸೇದಿಸಿದಳೋ! ಒಟ್ಟಿನಲ್ಲಿ ಲಚುಮವ್ವ ಮರೆಯಿಂದ ಪುನಃ ಕಾಣಿಸಿಕೊಂಡವಳೆ ತಲೆಗೂದಲನ್ನು ಬೆನ್ನ ಹಿಂದೆ ಚೆಲ್ಲೊಡೆದು ಹಿಂದಕ್ಕೂ ಮುಂದಕ್ಕೂ ಎಡಕ್ಕೂ ಬಲಕ್ಕೂ ಓಲಾಡಲಾರಂಭಿಸಿದಳು, ಎಲವೋ ಎಂಕವಾದೂತನೆಂಬ ನನ್ನಾಟಗಳ್ಳನೆ, ನನ್ನನ್ನು ಯಾರೆಂದು ತಿಳಿದಿರುವಿಯೆಲೋ ಭಾಡ್ಕಾವ್, ನಾನು ಸಿದ್ದಾರೂಡರ ಸಿಸ್ಯೆ ಲಚ್ಮಿ ಎಂದು ಘೋಷಿಸಿದೊಡನೆ ಸಾಧುಗಳು ಸಾಮೂಹಿಕವಾಗಿ ಆಕೆಯ ಪಾದಕ್ಕೆರಗಿ ತಾಯೀ ನಮ್ಮವ್ವನೇ ಅಂತೂ ದರುಸನ ಕೊಟ್ಟೆಯಲ್ಲಾ ಎಂದು ಉದ್ಗರಿಸಿದರು. ಆದರೂ ಆಕೆಯ ಗಂಡ ತನ್ನ ಸ್ಥಿತಪ್ರಜ್ಞತೆಯನ್ನು ಮುಂದುವರೆಸಿದ್ದನು.

ಪೂರ್ವಜನ್ಮದಲ್ಲಿ ಈಕೆ ಆತಗೆ ಹೆಂಡತಿಯಾಗಿದ್ದಳು, ಆತ ಈಕೆಗೆ ಗಂಡನಾಗಿದ್ದ, ಇದೆಲ್ಲ ಸರಿ, ಆದರೆ ಅದೇ ಪೂರ್ವಜನ್ಮದಲ್ಲಿ ಆತ ಈತಗೆ ಅಣ್ಣನಾಗಿದ್ದ, ಈತ ಆತಗೆ ತಮ್ಮನಾಗಿದ್ದ, ಸಹೋದರತ್ವದ ಕೊಂಡಿ ಕಳಚುವ ಪೂರ್ವದಲ್ಲಿ ಅಣ್ಣನ ಅಂತರಂಗದಲ್ಲಿ ಸಂಬಂಧಗಳಿಗೆ ಸಂಬಂಧಿಸಿದ ಕ್ಷೋಭೆ ಕಾಣಿಸಿಕೊಳ್ಳುವುದು ಮುಖ್ಯ ತಾನೆ! ಆದರೆ ಅಣ್ಣನಾದವನು ನಿರ್ಭಾವುಕ ಸ್ಥಿತಿಯಲ್ಲಿ ಗಮನಿಸುತ್ತಿರುವುದೆಂದರೇನು? ಕೆಲವರು ನನ್ನ ಕಡೆ ಪ್ರಶ್ನಾರ್ಥಕ ರೀತಿಯಲ್ಲಿ ನೋಡಲಾರಂಭಿಸಿದರು, ಇನ್ನೂ ಕೆಲವರು ಧಾವಿಸಿದವರೆ ನನ್ನ ಎರಡೂ ಕೈಗಳನ್ನು ಹಿಡಿದು ನನ್ನ ನಕಲಿ ತಮ್ಮನ ಬಳಿಗೆ ಕರೆದೊಯ್ದು ನಿಲ್ಲಿಸಿದರು, "ಮೋಕ್ಷದ ಹಾದಿಯಲ್ಲಿರುವ ನಿನ್ನ ತಮ್ಮ ಹೇಗಿರುವನು ನೋಡಯ್ಯಾ ನೋಡು, ಏನು ಹೇಳುವುದಿದ್ದರೆ ಈಗಲೇ ಹೇಳಿಕೋ, ಏನಾದರು ಕೇಳಿಕೊಳ್ಳುವುದಿದ್ದರೆ ಈಗಲೇ ಕೇಳಿಕೋ, ಈ ಅವಕಾಶ ಇನ್ನೊಂದು ಸ್ವಲ್ಪ ಹೊತ್ತು ಕಳೆದ ಬಳಿಕ ಏನು ಕೊಟ್ಟರೂ ಸಿಗುವುದಿಲ್ಲ, ಅಳುವುದಿದ್ದರೆ ಅತ್ತು ಎದೆಯನ್ನು ಹಗುರ ಮಾಡಿಕೊಂಡುಬಿಡು" ಎಂದು ಪುಸಲಾಯಿಸಲಾರಂಭಿಸಿದರು.

ಏನನ್ನು ಹೇಳುವುದು ಏನನ್ನು ಕೇಳುವುದು! 'ಅಲ್ಲವೋ ಅಷ್ಟು ದೂರದ ನಗರೂರಿನ ಬಸ್‌ನಿಲ್ದಾಣದಲ್ಲಿ ಕಂಡವನು ನೀನೆ ತಾನೆ!' ಎಂದು ಪ್ರಶ್ನಿಸುವುದೋ! ಕೊಲೆಯಾಗಿರುವ ಊಳೂರಿನ ಜಮೀನ್ದಾರ, ಆತನ ಮಗಳು ವನಜಾಕ್ಷಿ, ವಕೀಲ ಜೀವೋತ್ತಮರಾವ್, ಬಡ್ತಿಯಿಂದ ಮುಖ್ಯಮಂತ್ರಿಗಳ ಚಿನ್ನದ ಪದಕದಿಂದ ವಂಚಿತಗೊಂಡಿರುವ ಅಲಿ, ನಾನೇ ಕೊಲೆಗಾರ ಎಂದು ತಪ್ಪೊಪ್ಪಿಗೆ ನೀಡಿರುವ ಅಂಥೋಣಿ, ಜಾಮೀನು, ಕೋರ್ಟು! ನೇಪಥ್ಯದಲ್ಲಿ ಉತ್ತರಗಳಿಗಾಗಿ ತಹತಹಿಸುತ್ತಿರುವ ಪ್ರಶ್ನೆಗಳು ಒಂದೇ ಎರಡೆ! ರಾಯಲಸೀಮೆಯ ನಿಗೂಢ ನಾಗನಾಥನಹಳ್ಳಿ, ಅಲ್ಲಿನ ಅಷ್ಟೇ ನಿಗೂಢ ಸಂತ ವೆಂಕಾವಧೂತ! 'ಬೋಧ ತೆಗೆದುಕೊಂಡವನು ನೇರವಾಗಿ ಊಳೂರಿಗೆ ಹೋಗುವುದುಬಿಟ್ಟು ಇಲ್ಲಿಗೆ ಬಂದಿರುವಿ ಯಾಕೆ!' ಎಂದು ಪ್ರಶ್ನಿಸುವುದೋ! ಸಂದಿಗ್ಧತೆಯನ್ನು ಅನುಭವಿಸುತ್ತಲೇ ತುಟಿಗಳ ನಡುವೆ ನಗೆಯನ್ನು ಎಳೆದು ಪ್ರಯೋಗಿಸಿದೆ, ವ್ಯಂಗ್ಯವಾಗಿ ನೋಡಿದೆ, ಸ್ಪರ್ಶಿಸುವ ಸಲುವಾಗಿ ಕೈಗಳನ್ನು ಅವನ ಕಡೆ ಚಾಚಿದೆ. ಆದರೆ ತಾನು ಮಾತ್ರ ನನ್ನ ಕಡೆ ಅಪರಿಚಿತನಂತೆ, ತಮ್ಮಿಬ್ಬರ ನಡುವೆ ಯಾವುದೇ ಸಂಬಂಧಗಳು ಇಲ್ಲವೆನ್ನುವಂತೆ ನೋಡಿದ, ಅಪಮಾನಿಸಿದ. ಬೆಚ್ಚಿ ಹಿಂದಕ್ಕೆ ಎರಡು ಹೆಜ್ಜೆಗಳನ್ನು ಇರಿಸಿದೆ.

ಅದರಿಂದ ಉತ್ತೇಜಿತಗೊಂಡ ಸಾಧು, "ಅದ್ಯಾವ ಸೀಮೆ ಅಣ್ಣನಪ್ಪಾ ನೀನು, ಆ ಲಚುಮವ್ವನ್ನ ನೋಡಿ ಕಲಿತುಕೋ ಹೆಂಗ ಅಳಬೇಕೆನ್ನುವುದನ್ನು, ಎದೆ ಗುಂಡಿಯನ್ನು ಕಲ್ಲು

ಮಾಡಿಕೊಂಡರೆ ನರಕ ಶತಸಿದ್ಧ" ಎಂದು ಬೋಧ ಆರಂಭಿಸಿದ. ಅಲ್ಲಿಂದ ಮರಳಿ ಗೂಡು ಸೇರಿಕೊಳ್ಳಲೆತ್ನಿಸಿದೆನಾದರೂ ಸಾಧ್ಯವಾಗಲಿಲ್ಲ, ಕಾರಣ ಕೋಟೆ ಸದೃಶ ರೀತಿಯಲ್ಲಿದ್ದವರು ನನ್ನನ್ನು ಹಿಂದಕ್ಕೆ ಬಿಟ್ಟರೆ ತಾನೆ!

ಘಳಿಗೆಗಳು ಉರುಳಿದಂತೆ ಗಾಂಜಾ ಸೇದುವವರ, ತೀರ್ಥದ ರೂಪದಲ್ಲಿ ಸರಾಯಿ ಸರಬರಾಜು ಮಾಡುವವರ, ಎಲ್ಲೆಲ್ಲಿಂದಲೋ ಆಗಮಿಸಿದ ವಾದ್ಯಗಳನ್ನು ನುಡಿಸುವವರ ಸಂಖ್ಯೆ ಹೆಚ್ಚಿತು. ಸಮೂಹಕ್ಕೆ ಸಮೂಹವೇ ಅಮಲಿನಿಂದ ತೂರಾಡಲಾರಂಭಿಸಿತು. ಕ್ರಮೇಣ ವಿಧಿ ವಿಧಾನಗಳು ಅಂತಿಮ ಘಟ್ಟ ತಲುಪಿದವು, ಅಷ್ಟರೊಳಗೆ ಅಮಲಿಳಿದು ವಾಸ್ತವಕ್ಕೆ ಮರಳಿದ್ದ ಲಚುಮವ್ವ, "ಅವನೇ ಇಲ್ಲದ ಮನೆಗೆ ಹೋಗಿ ಏನು ಮಾಡ್ಲಿ! ಸಂಸಾರ ಬ್ಯಾಡ ಸ್ಯಾಟ ಬ್ಯಾಡ, ನನಗೂ ಬೋಧ ಕೊಡಿರಿ" ಎಂದು ಪಟ್ಟು ಹಿಡಿದು ಕೂತಳು ತನ್ನ ಗಂಡನ ಸಮಕ್ಷಮದಲ್ಲಿ. ಅದೇ ತಾನೆ ಹನ್ನೆರಡನೇ ದಮ್ಮೆಳೆದು ಚಿಮಣಿಯನ್ನು ಮೂಲಿಮನಿ ಗೌಡರ ಕೈಗೆ ವರ್ಗಾಯಿಸಿದ ಹುಚ್ಚಾರೆಡ್ಡಿ ವೇದಾಂತಾವೇಶದೊಡನೆ ಆಕೆಗೆ

"ಎಂಥಾ ಹುಚ್ಚದೀ ಲಚುಮವ್ವ, ನಿನ್ನಂಥ ಲೌಕಿಕರಿಗೆ ಬೋಧ ಕೊಡಲಿಕ್ಕಾಗುವುದೇನು? ಬೋಧ ಪಡೆದು ಗಂಡನ ಕೂಡೆ ವಾಸಿಸಲಿಕ್ಕೆ ತೋಪೇನು ಲಾಡ್ಜಾ ಹೋಟಲ್ಲಾ! ನೀನೇನಿದ್ದರೂ ಸಂಸಾರದೊಳಗೆ ಸುಖ ಕಾಣು, ಅಲ್ಲಿಯೇ ನಿನಗೆ ಮೋಕ್ಷ ಸಿಗ್ತದೆ" ಎಂದು ಹೂಂಕರಿಸಿದನು. ಆತನ ಮಾತು ಕೇಳಿಸಿಕೊಂಡ ಆಕೆಯು, "ನಿಮ್ಮ ಮೋಕ್ಷಕ್ಕೆ ಬೆಂಕಿ ಬೀಳಲಿ, ಮಾನ ಮರುವಾದೆ ಐತೇನ್ರಲೋ ನನ್ನ ಭಾಡ್ಕಾವುಗಳಿರಾ, ದುಡಿಲಾರದ ಸಂಸಾರ ನಡೆಸಲಾರದ ನಿಮ್ಮಂಥ ಸೂಗರಿಗೆ ಒಂದು ನ್ಯಾಯ, ನಮ್ಮಂಥ ಹೆಣುಮಕ್ಕಳಿಗೊಂದು ನ್ಯಾಯಾನ! ಥೂ ನಿಮ್ಮ ಜನುಮಕ್ಕೆ ಬೆಂಕಿ ಹಾಕ, ನಿಮ್ಮ ಹೆಂಡರು ರಂಡ್ಯಾಗ, ಇದು ಗಂಡ ಹೆಂಡಿರು ನಡುವಿನ ಜಗಳ, ಇದರಲ್ಲಿ ಅಡ್ಡ ಬಾಯಿ ಹಾಕಿದಿರೆಂದರೆ ಹುಷಾರ್!" ಎಂದು ಎಚ್ಚರಿಕೆ ನೀಡಿದಾದ ಬಳಿಕ ತನ್ನ ಗಂಡನ ಕಡೆ ತಿರುಗಿ

"ಲೋ ನನ್ನಾಟಗಳ್ಳ, ನಾಚಿಕೆ ಆಗೊಲ್ವೇನ್ಲೋ ಬಾಡ್ಯಾ, ಮಾಡೋ ಪಾಪಾನೆಲ್ಲಾ ಮಾಡಿ ಈಗ ಬೋಧಾ ತಗೊಂಡಿ ಏನೋ! ಈ ವೇಸಾ ಕಳಚಿಟ್ಟು ಮರ್ಯಾದೆಯಿಂದ ಮನೆಗೆ ಹೊಂಡು, ನೀನು ದುಡಿದು ಹಾಕೋದು ಬ್ಯಾಡ, ನಾನು ಗಂಡಸಿನಂಗ ದುಡಿದು ನಿನ್ನ ಸಾಕ್ತೀನಿ" ಎಂದು ಅರ್ಭಟಿಸಿದಾದ ಬಳಿಕ ತನ್ನ ಮಕ್ಕಳ ಕಡೆ ತಿರುಗಿ, "ಸುಮ್ಮನೆ ಏನು ನೋಡ್ತೀರಿ, ಹೊತ್ತುಕೊಂಡೊಯ್ಯಿರೋ ಈ ನಿಮ್ಮಪ್ಪನೆಂಬ ಷಂಡನನ್ನ" ಎಂದು ಆಜ್ಞಾಪಿಸಿ ತನ್ನ ಗಂಡ ಪರುಶುರಾಮನ ತೋಳುಗಳಿಗೆ ಕೈ ಹಚ್ಚಿದಳು. ಆತನನ್ನು ಒಂದು ಕಡೆಯಿಂದ ಹೆಂಡತಿ ಮಕ್ಕಳೂ ಇನ್ನೊಂದು ಕಡೆಯಿಂದ ಹುಚ್ಚಾರೆಡ್ಡಿ ನೇತೃತ್ವದಲ್ಲಿ ಸಾಧುಗಳೂ ಎಳೆದಾಡಲಾರಂಭಿಸಿದರು. ಒಂದು ವಿಚಿತ್ರವೆಂದರೆ ಹಗಲು ಕಗ್ಗೊಲೆ ಮಾನ್ಯ ಬಿರುದಾಂಕಿತ ಪರುಶುರಾಮ ಅವರಿವರಿಂದ ಎಳೆದಾಡಿಸಿಕೊಂಡನೇ ವಿನಹ ಪ್ರತಿಭಟನೆ ತೋರಲಿಲ್ಲ. ತಮ್ಮ ಗಂಡಂದಿರನ್ನು ಬೋಧ ಎಂಬ ಉಪಟಳದಿಂದ ಕಳೆದುಕೊಂಡಿದ್ದ, ಬೋಧ ಪಡೆಯಲು ಹಾತೊರೆಯುತ್ತಿದ್ದ ಗಂಡಂದಿರ ಹೆಂಡಂದಿರು ಅಲ್ಲಲ್ಲಿದ್ದರು ತಾನೆ! ಇಂಥವರನ್ನು ಯಾವ ಪುರುಷಾರ್ಥಕ್ಕೆ ತಾವು ಮದುವೆಯಾದೆವೋ ಎಂದು ಪಾಶ್ಚಾತ್ತಾಪ ಪಡುತ್ತಿದ್ದ ನತದೃಷ್ಟ ವನಿತೆಯರು ಅಲ್ಲಲ್ಲಿದ್ದರು ತಾನೆ! ಅಲ್ಲಲ್ಲಿದ್ದ ಅವರೆಲ್ಲ ಧಾವಿಸಿ ಬಂದು ಪರಶುರಾಮನ ಹೆಂಡತಿ ಪರವಾಗಿ ನಿಂತು ಕವ್ವ ಕವ್ವ ಗಲಾಟೆ ಆರಂಭಿಸಿದರು. ಅವರೊಂದಿಗೆ ಅವರವರ ಮಕ್ಕಳೂ ಸೇರಿದ ಪರಿಣಾಮವಾಗಿ..

ಮುಂದೆ ಏನು ಸಂಭವಿಸಿತೆನ್ನುವುದು ಅಸ್ಪಷ್ಟ, ಆದರೆ ಕೆಲವರು ಲಚುಮವ್ವನನ್ನೂ ಆಕೆಯ ಮಕ್ಕಳನ್ನೂ ಎಳೆದೊಯ್ದರು ಎಲ್ಲಿಗೋ! ಆಕೆಯನ್ನು ಬೆಂಬಲಿಸಿದ ಮಹಿಳೆಯರನ್ನು ಅವರವರ ಗಂಡಂದಿರು ಚಚ್ಚುವುದು ತುಸು ಹೊತ್ತು ನಡೆಯಿತು, ಅದುವರೆಗೆ ಸಜ್ಜನಿಕೆಯಿಂದ ಗಮನಿಸುತ್ತಿದ್ದ ಬೀದಿ ನಾಯಿಗಳು ಸಹ ಸೈರಣೆ ಕಳೆದುಕೊಂಡು ಬೊಗುಳಲಾರಂಭಿಸಿದವು. ಆದರೂ ಅವರಿಬ್ಬರೂ ವಿಚಲಿತರಾಗದೆ ತೆಪ್ಪಗಿರುವುದು ಕಂಡು ನನಗೆ ವಿಚಿತ್ರವೆನಿಸಿತು. ತೆಪ್ಪಗಿರುವುದೇ ಬೋಧ ತತ್ವಗಳ ಪ್ರಮುಖ ಅಂಶವಿರಬಹುದೆಂದು ಭಾವಿಸಿದೆ. ಅಷ್ಟರಲ್ಲಿ ಜಲಂಧರನೂ ಆತನ ಸಹೋದರಿ ಪದ್ಮಾವತಿಯೂ ಆಗಮಿಸಿ ನನ್ನ ಸನಿಹದಲ್ಲಿ ನಿಂತುಕೊಂಡರು. ಜಲಂಧರ ನನ್ನ ಕೈಯನ್ನು ಅಮುಕುತ್ತ

"ವಾಗಿಲಿಗೆ ಬಂದ ಆರಂಭದಲ್ಲಿ ನಿಮ್ಮ ತಮ್ಮನ ಬಗ್ಗೆ ಕೇಳಿದ್ದೆ, ಆದರೆ ನೋಡಿರಲಿಲ್ಲ, ಥೇಟ್ ನಿಮ್ಮ ಹಾಗೆ ತುಂಬಾ ಲಕ್ಷಣವಾಗಿದ್ದಾನೆ, ಆದರೆ ಚಿಕ್ಕ ವಯಸ್ಸಿನಲ್ಲಿ ಬೋಧ ತಗೊಳ್ಳಬಾರದಿತ್ತು ಸಾರ್! ಈ ದುಃಖ ಸಹಿಸಿಕೊಳ್ಳುವ ಶಕ್ತಿ ಆ ದೇವರು ನಿಮಗೆ ಕೊಡಲಿ" ಎಂದು ಸಾಂತ್ವನದ ಮಾತುಗಳನ್ನಾಡಿದ. ಆತನ ಮಾತುಗಳನ್ನು ಕೇಳಿ ನನಗೆ ನಗು ಬಾರದೆ ಇರಲಿಲ್ಲ, ಆ ಪುಣ್ಯಾತ್ಮ ಅಸಲಿ ತಮ್ಮನಲ್ಲ, ನಕಲಿ ತಮ್ಮನೋ ಜಲಂಧರ ಎಂದು ಹೇಳಲು ಧೈರ್ಯ ಸಾಲಲಿಲ್ಲ. ನಿನಗೆ ಒಪ್ಪಿಸಿರುವ ಕಲಾತ್ಮಕ ಚೂರಿ ಯಾರದೆಂದು ತಿಳಿದಿರುವಿ, ಅದರ ನೈಜ ವಾರಸುದಾರ ಅಗೋ ಅಲ್ಲಿ ಎಂದು ಹೇಳಲೂ ಧೈರ್ಯ ಸಾಲಲಿಲ್ಲ. ಪುನಃ ಅವನೇ..

"ಆ ನಿಮ್ಮ ತಮ್ಮ ವಿವಾಹಿತನೋ ಅವಿವಾಹಿತನೋ!" ಎಂದು ಸಂದೇಹ ವ್ಯಕ್ತಪಡಿಸಿದ, ಅದಕ್ಕೆ ತಲೆ ಅಲ್ಲಾಡಿಸಿದೆ, ಅದಕ್ಕೊಂದು ಅರ್ಥ ಕಲ್ಪಿಸಿಕೊಂಡು ತಾನೆ "ಅದಕ್ಕೆ ಆತನ ಮುಖದಲ್ಲಿ ತೇಜಸ್ಸು ಕಳೆ ಎದ್ದು ಗೋಚರಿಸುತ್ತಿರುವುದು! ಮದುವೆಯಾಗದೆ ಇದ್ದುದೇ ವಾಸಿ ಬಿಡಿ ಸಾರ್, ಆಗಿದ್ದಲ್ಲಿ ಆತನ ಹೆಂಡತಿ ಮಕ್ಕಳನ್ನು ನೀವೇ ಸಾಕಬೇಕಿತ್ತು" ಎಂದು ತನಗೆ ತಾನೆ ಸಮಾಧಾನ ತಂದುಕೊಂಡನು. ಆದರೆ ಆತನ ಸಹೋದರಿ ಪದ್ಮಾವತಿ ಮಾತ್ರ ಶರಭನ ಕಡೆ ತದೇಕವಾಗಿ ನೋಡುವುದನ್ನು ಮುಂದುವರೆಸಿದ್ದಳು.

ತಾಳಿ ಕಟ್ಟಿಸಿಕೊಂಡ ಹೆಂಡತಿ ರಂಪಾಟ ಮಾಡಿ ಹೋದರೇನಂತೆ! ಪರಶುರಾಮ ತನ್ನ ಪೂರ್ವಾಶ್ರಮದಲ್ಲಿ ಇಟ್ಟುಕೊಂಡಿದ್ದನೆಂದು ಹೇಳಲಾಗುವ ಬ್ಯಾಗೇರ ಕಾಳಿ ಇದ್ದಳಲ್ಲವೆ! ಶಾಸ್ತ್ರೋಕ್ತವಾಗಿ ಹೆಂಡತಿ ಪದವಿಯನ್ನು ನೀಡಿ ಆಕೆಯನ್ನು ಕರೆತಂದು ಆತನ ಎದುರು ನಿಲ್ಲಿಸಿದರು. ಭ್ರಾತೃತ್ವಕ್ಕೆ ತಿಲಾಂಜಲಿ ನೀಡುವ ಸಲುವಾಗಿ ನಾನೂ ಶರಭನೆದುರು ನಿಲ್ಲುವುದು ಅನಿವಾರ್ಯವಾಯಿತು. ಅದೇ ಕೆಲವು ಕ್ಷಣಗಳ ಹಿಂದೆ ಕಟ್ಟಿದ್ದ ತಾಳಿಯನ್ನು ಕಾಳಿ ನಿರ್ವಂಚನೆಯಿಂದ ಬಿಚ್ಚಿಕೊಟ್ಟರೆ ನಾನು ಸಾಧುಗಳ ನಿರ್ದೇಶನದಂತೆ ಎಳ್ಳು ನೀರುಬಿಡುತ್ತ ಈ ಕ್ಷಣದಿಂದ ನಾನು ಈತನಿಗೆ ಅಣ್ಣನಲ್ಲ, ಈ ಕ್ಷಣದ ಬಳಿಕ ಈತ ನನಗೆ ತಮ್ಮನಲ್ಲ ಎಂದು ವಿದ್ಯುಕ್ತವಾಗಿ ಘೋಷಿಸಿದೆ. ಅದೇ ಬೇಕಿತ್ತಲ್ಲವೆ ನನಗೂ! ಆ ನಂತರ ಯಾವ್ಯಾವೋ ಕಾರ್ಯಕ್ರಮಗಳು ಸಾಂಗೋಪಾಂಗವಾಗಿ ನಡೆದವು. ಹಿರಿಯ ಸಾಧುಗಳ ನಿರ್ದೇಶನದಂತೆ ಪರಶುರಾಮನಿಗೆ ಪರಂಧಾಮಾವಾಧೂತನೆಂದೂ, ಶರಭನಿಗೆ ತಿರುಮಲಾವಧೂತನೆಂದೂ ಪುನರ್ನಾಮಕರಣ ಮಾಡಲಾಯಿತು, ಬಳಿಕ ಮಂಗಳವಾದ್ಯಗಳೊಂದಿಗೆ ಅವರಿಬ್ಬರನ್ನು ಲಚುಮವ್ವನ ತೋಪಿಗೆ ಕರೆದೊಯ್ಯಲಾಯಿತು.

ನೆಮ್ಮದಿಯನ್ನು ಅನುಭವಿಸುತ್ತ ನಾನು!

++++

ಮನೆ ಸೇರಿಕೊಂಡ ಬಳಿಕವೂ ಅವರಿಬ್ಬರ ನೆನಪುಗಳಿಂದ ಕಳಚಿಕೊಳ್ಳಲಾಗಲಿಲ್ಲ, ಕಿವಿಯಳತೆಯಲ್ಲಿ ಸನಿಹದಲ್ಲಿದ್ದ ಮನೆ ದುಃಖದ ಆಡೊಂಬೊಲವಾಗಿತ್ತು. ಲಚುಮವ್ವ ತನ್ನ ಗಂಡನನ್ನು ನೆನಪು ಮಾಡಿಕೊಂಡು ಅಳುವುದು ಮುಂದುವರೆದಿತ್ತು, ಆಕೆಯ ಮಕ್ಕಳಲ್ಲಿ ಕೆಲವು ಹರೆಯಕ್ಕೆ ಬಂದಿರುವವು ಇದ್ದವಷ್ಟೆ, ಅವು ತನ್ನ ತಂದೆಯನ್ನು ಒಂದು ಕೈ ನೋಡಿಯೇಕೊಳ್ಳುವುದಾಗಿ ಘೋಷಿಸುವುದು ಕೇಳಿಸುತ್ತಲೇ ಇತ್ತು. ತನ್ನ ಗಂಡ ಸಾಧುವಾಗಿರುವುದನ್ನು ಆಕೆ ಹೇಗೋ ಸಹಿಸಿಕೊಂಡಾಳು! ಆದರೆ ತನ್ನ ಗಂಡನ ಸೂಳೆ! ಎಂದೋ ತನ್ನಿಂದ ಹಲ್ಲೆಗೀಡಾಗಿದ್ದ ಹೆಂಗಸು! ಮುಂದೆಂದೂ ನಿನ್ನ ಗಂಡನ ತಂಟೆಗೆ ಬರುವುದಿಲ್ಲವೆಂದು ಕಂದಾರೆಮ್ಮನ ಗುಡಿಯಲ್ಲಿ ದೈವಸ್ಥರ ಸಮಕ್ಷಮ ಪ್ರಮಾಣ ಮಾಡಿದ್ದ ತನ್ನ ತಲೆಗೂದಲ ವರ್ಣದ ಮೂರುಕಾಸಿನ ಹೆಂಗಸು ತನ್ನ ಬದಲಿಗೆ ಬಂದು ಆತನ ಕೈಯಿಂದ ತಾಳಿ ಕಟ್ಟಿಸಿಕೊಳ್ಳುವುದೆಂದರೆ! ಅದನ್ನು ಶಾಸ್ತ್ರೋಕ್ತ ರೀತಿಯಲ್ಲಿ ಕಳಚಿ ವಿಧವೆ ಪಟ್ಟ ಗಿಟ್ಟಿಸಿಕೊಳ್ಳುವುದೆಂದರೆ! ತನ್ನ ಕೊರಳಲ್ಲಿ ಇನ್ನೂ ತಾಳಿ ಗುಂಡುಕಲ್ಲಿನಂತಿರುವಾಗಲೇ, ತಾನಿನ್ನೂ ಗುಂಡುಕಲ್ಲಿನಂತೆ ಜೀವಂತವಿರುವಾಗಲೇ ಅವಳು ಅದರ ಲಾಭ ಪಡೆಯುವುದೆಂದರೆ! ಇದು ತನಗಾದ ಅವಮಾನವಲ್ಲವೆ!

ಲಚುಮವ್ವನ ಮನಸ್ಥಿತಿ ಕುರಿತಂತೆ ನನ್ನ ಮನಸ್ಸು ಸೃಜನಶೀಲ ರೀತಿಯಲ್ಲಿ ಆಲೋಚಿಸಲಾರಂಭಿಸಿತು. ಆಕೆ ಮುಂದಿನ ದಿವಸಗಳಲ್ಲಿ ಏನು ಮಾಡುಬಹುದು! ತಾನು ಸಾಮಾನ್ಯಳಲ್ಲ, ಸುಪಾರಿ ಕೊಲೆಗಾರನ ಹೆಂಡತಿ, ಐದಾರು ಜಮೀನ್ದಾರರಿಗೆ ಸರಿ ಸಮಾನ ತನ್ನ ಗಂಡ, ಜಮೀನ್ದಾರರನ್ನೇ ನಿರ್ದಯ ರೀತಿಯಲ್ಲಿ ಮುಗಿಸುವವನು ಅವರೆಲ್ಲರಿಗಿಂತ ಮಿಗಿಲಲ್ಲದೆ ಇನ್ನೇನು! ಅವನ ವ್ಯಕ್ತಿತ್ವದ ಸಿಂಹಪಾಲು ತನ್ನಲ್ಲಿಲ್ಲದೆ ಇರಲಾದೀತೆ! ಯೋಚಿಸತೊಡಗಿ ಸಹನೆ ಕಳೆದುಕೊಳ್ಳುವಳು, ಕೈಗೆ ಸಿಕ್ಕ ಹತಾರುಗಳನ್ನು ಹಿಡಿದು ತಲೆಗೂದಲು ಚೆಲ್ಲೊಡೆದು ಬ್ಯಾಗೇರ ಓಣಿಯನ್ನು ಪ್ರವೇಶಿಸುವಳು, ಆಕೆಯ ದುರ್ಬಲ ಮನೆಯ ಅಂಗಳದಲ್ಲಿ ಅಬ್ಬರಿಸಿ ಕೇರಿ ಗಮನ ಸೆಳೆಯುವಳು, ಓಣಿಯ ಹಲವರು ಸುತ್ತ ಜಮಾಯಿಸಿ ಆಕೆಯನ್ನು ಸಮಾಧಾನಪಡಿಸಲು ಪ್ರಯತ್ನಿಸುವರು. ಬ್ಯಾಗೇರ ಕಾಳಿ ಸಹ ಸಾಮಾನ್ಯಳಲ್ಲ, ತೊಡೆಗಳನ್ನು ಬದಲಿಸುವುದರಲ್ಲಿ ಆಕೆಗೆ ಸರಿಸಾಟಿ ವಾಗಿಲಿಯಲ್ಲಿ ಇನ್ನೊಬ್ಬರಿಲ್ಲ, ವಾಗಿಲಿಯ ಬಹುತೇಕ ಪುರುಷರ ದೇಹಗಳ ಆಯಕಟ್ಟಾದ ಸ್ಥಳಗಳಲ್ಲಿನ ಮಚ್ಚೆಗುರುತುಗಳ ಪರಿಚಯ ಉಳ್ಳವಳಾದ ತಾನು! ಲೈಂಗಿಕ ಸುಖವನ್ನು ವಿಕ್ರಯಿಸುವುದೇ ತನ್ನ ಜೀವನದ ಉಪಕಸುಬನ್ನಾಗಿ ಸ್ವೀಕರಿಸಿದ್ದರೂ ದೈಹಿಕವಾಗಿ ಸದೃಢಳಿರುವ ತಾನು! ತೀರಾ ಇತ್ತೀಚಿಗೆ ಅಂದರೆ ಮಹಾಲಯ ಅಮವಾಸ್ಸೆ ಕಳೆದಂದಿನಿಂದ ಗೊಲ್ಲರ ಭೋಜನನ್ನು ತನ್ನ ಖಾಯಂ ಗಿರಾಕಿಯನ್ನಾಗಿಟ್ಟುಕೊಂಡಿರುವ ತಾನು! ಲಚುಮವ್ವನ ಮೇಲೆ ಸೇಡು ತೀರಿಸಿಕೊಳ್ಳುವ ಸಲುವಾಗಿಯೆ ಹುಚ್ಚಾರೆಡ್ಡಿಯ ಕರೆಯನ್ನು ಗೌರವಿಸಿ ತನ್ನ ಮಾಜಿ ಪ್ರಿಯಕರ ಪರಶುರಾಮನ ದೇಹದ ಸಮಕ್ಷಮ ನಿಂತು ಪರಿಣಾಮಕಾರಿ ನೋಟದ ಮೂಲಕ ಅವನಲ್ಲಿನ ಬೋಧತ್ವವನ್ನು ಅಳಿಸಲು ಯತ್ನಿಸಿದ ತಾನು! ತನ್ಮೂಲಕ ಅವನಲ್ಲಿ ಗೃಹಸ್ಥ ಜೀವನದ ಆಸೆಯನ್ನು ಪುನಶ್ಚೇತನಗೊಳಿಸಲು ಪ್ರಯತ್ನಿಸಿದ ತಾನು! ತನ್ನಂಥ ತಾನು ಯಕಶ್ಚಿತ್ ಲಚುಮವ್ವನ ಬಾಯಿಗೆ ಹೆದರುವುದು ಸಾಧ್ಯವೆ! ಮನೆಯಲ್ಲಿರಬಹುದಾದ ಆಕೆ ಭೋಜನ ತೆಕ್ಕೆಯಿಂದ ಬಿಡಿಸಿಕೊಂಡು ಹೊರಗೆ ಬರುವಳು, "ಏನೇ ನನ್ನ ಸವತಿ, ನೀನು ಸರಿಯಾಗಿದ್ದಿದ್ದರೆ ಯಾಕೆ ನನ್ನ ಹಳೆಯ ಮಿಂಡ ಬೋಧ ಪಡೆಯುತ್ತಿದ್ದನೇ!" ಎಂದು ಪ್ರತಿಅಸ್ತ್ರ ಪ್ರಯೋಗಿಸುವಳು.

ಲಚುಮವ್ವನ ಬಾಯಿಯಿಂದ ಸೂಳೆ ಎಂಬ ಪದ ಕೇಳಿ ಕೆರಳಿ "ಖಬರ್ದಾರ್! ಇನ್ನೊಂದು ಸಲ ಸೂಳೆ ಎಂದರೆ ಸುಮ್ಮನಿರೋದಿಲ್ಲ, ಈ ಬ್ಯಾಗೇರ ಕಾಳಿ ಎಂದರೇನೆಂದು ತಿಳಿದಿರುವಿ ನನ್ನ ಮಿಂಡನ ಹೆಂಡತಿಯೇ! ಆ ನಿನ್ನ ಗಂಡ ನನ್ನ ದೇಹದ ರುಚಿ ನೋಡದಿದ್ದಲ್ಲಿ ಹಿಂದೆ ಯಾವತ್ತೋ ಬೋಧ ತಗೊಳ್ತಿದ್ದ ಅಥವಾ ದೇಸಾಂತರ ಹೋಗಿರುತ್ತಿದ್ದನೇ! ಬೋಧ ತಗೊಂಡಿದ್ದರೇನಾಯ್ತು, ಹೆಂಡತಿಯಾದವಳು ರಮ್ಮಿಸಿ ಕರೆ ತಂದು ಮನೇಲಿಟ್ಟುಕೊಳ್ಳಬಹುದಿತ್ತಲ್ಲ! ನಿನ್ನನ್ನು ನೋಡಿದಾಕ್ಷಣ ಅವನಲ್ಲಿ ಬೋಧತ್ವ ದ್ವಿಗುಣವಾಗುತ್ತಲೇ ಹೋಯಿತು, ಆದರೆ ನನ್ನೇ ತಗೋ, ಉಸಿರಳತೆಯಲ್ಲಿ ನಿಂತು ಉಸಿರು ಬಿತ್ತಿದೆ, ಮುಂಗೈಯನ್ನು ಮುಟ್ಟಿ ರೋಮಾಂಚನಗೊಳಿಸಿದೆ, ಕಣ್ಸನ್ನೆ ಮೂಲಕ ಎದ್ದು ಹೊರಟು ಬಂದು ನನ್ನ ದೇಹವನ್ನು ಅನುಭವಿಸು ಎಂದು ಸಂದೇಶ ನೀಡಿದೆ, ಆದರೆ ಮುದುಕ ಹುಚ್ಚಾರೆಡ್ಡಿ ನನ್ನ ಯೋಜನೆಗೆ ಕಲ್ಲು ಹಾಕಿದ, ಪರುಶುರಾಮ ಎಷ್ಟು ದಿವಸ ತೋಪಿನಲ್ಲಿರಲಾದೀತು, ಮುಂದೊಂದಿವಸ ಬಂದೇ ಬರುವನು, ವಾರ ಇಟ್ಟುಕೊಂಡು ರುಚಿ ಕಲಿಸಿ ಅವನನ್ನು ಪುನಃ ನಿನ್ನಲ್ಲಿಗೆ ಕಳಿಸುವೆ, ಗಲಾಟೆ ಮಾಡುವುದನ್ನುಬಿಟ್ಟು ಮನೆಗೆ ಹೋಗವ್ವಾ ಹೋಗು" ಎಂದು ಸಹನೆಯಿಂದ ಬುದ್ಧಿವಾದ ಹೇಳುವಳು, ಅಡುಗೆ ಮನೆಯ, ಅಥವಾ ಅಲ್ಲಿನ ಒಲೆಗಂಟಿಕೊಂಡಂತಿರುವ ಕೌದಿ ಮೇಲಿರಬಹುದಾದ ಭೋಜ ಕೇಳಿಸಿಕೊಂಡು 'ಶಹಬ್ಬಾಷ್ ಕಾಳಿ' ಎಂದು ಉದ್ಗರಿಸುವನು.

ತನ್ನ ಗಂಡನ ಮೇಲಿನ ಸಮಸ್ತ ಕೋಪವನ್ನು ಆಕೆಯ ಮೇಲೆ ಕಾರಿಕೊಳ್ಳಬೇಕು, ಕೆರಳಬಹುದಾದ ಆಕೆಯ ತಲೆಗೂದಲಿಗೆ ಕೈಹಚ್ಚಿ ನೆಲಕ್ಕೆ ಕೆಡವಿ ನುಗ್ಗಾಗಿಸಬೇಕು, ಬಯ್ಯುವುದರ ಮೂಲಕ ಜಗಳವಾಡುವುದರ ಮೂಲಕ ಆಕೆಯನ್ನು ಅಭಿನಂದಿಸಬೇಕೆಂದಲ್ಲವೆ ತಾನು ಸಜ್ಜಾಗಿ ಆಕೆಯ ಮನೆ ಬಾಗಿಲಿಗೆ ಬಂದಿರುವುದು! ತಾನೆಷ್ಟೇ ಅಶ್ಲೀಲಾತಿ ಅಶ್ಲೀಲವಾಗಿ ಬಯ್ದರೂ ಕಾಳಿ ಎಷ್ಟು ತಣ್ಣಗೆ ಬುದ್ಧಿ ಮಾತುಗಳನ್ನು ಹೇಳಿದಳಲ್ಲವೆ! ತನ್ನ ಗಂಡನನ್ನು ಪುನಃ ಸಾಂಸಾರಿಕನನ್ನಾಗಿಸಲು ತ್ರಿಕರಣಪೂರ್ವಕವಾಗಿ ಪ್ರಯತ್ನಿಸಿದ ಆಕೆಯನ್ನು, ಅವನು ಮುಂದೊಂದು ದಿವಸ ಬಂದೇ ಬಂದು ತನ್ನೊಂದಿಗೆ ಮಲಗುವುದಾಗಿಯೂ, ಲೈಂಗಿಕವಾಗಿ ಸಂತೃಪ್ತಗೊಳಿಸಿದಬಳಿಕ ಅವನನ್ನು ಪುನಃ ಗೃಹಸ್ಥನನ್ನಾಗಿ ಪರಿವರ್ತಿಸುವುದಾಗಿ ಹೇಳಿದ ಕಾಳಿ ನಿಜವಾದ ಸಂತೆಯಂತೆ ಲಚುಮವ್ವಗೆ ಗೋಚರಿಸಬಹುದು, ಆಕೆಗೆ ಈಕೆ ಕಣ್ಣುಗಳಿಂದ ಕೃತಜ್ಞತೆಗಳನ್ನರ್ಪಿಸಿ ಮನೆಗೆ ಮರಳಲೂಬಹುದಲ್ಲವೆ! ಅಥವಾ ಮನೆಗೆ ಮರಳಿದ ಬಳಿಕ!

ವಿಷಯ ತಿಳಿದೊಡನೆ ವೃದ್ಧ ತಂದೆ ತನ್ನ ಮಗಳನ್ನು ನೋಡುವ ಸಲವಾಗಿ ವಾಗಿಲಿಗೆ ಬರಲೂಬಹುದಲ್ಲವೆ! ಬಂದು ಆಕೆಯ ಖೊಟ್ಟಿ ನಸೀಬ ಹಳಿದಾದ ಬಳಿಕ ಆಕೆಯನ್ನು ತವರಿಗೆ ಕರೆದೊಯ್ಯಲು ಪುಸಲಾಯಿಸಲೂಬಹುದಲ್ಲವೆ! ಕರೆಯನ್ನು ನಿರಾಕರಿಸುತ್ತ ಆಕೆ ತಾನು ಬದುಕಿದರೆ ಇಲ್ಲೇ ಬದುಕುವುದಾಗಿಯೂ, ತಾನು ಸತ್ತರೆ ಇಲ್ಲಿಯೇ ಸಾಯುವುದಾಗಿ ಹೇಳಬಹುದಲ್ಲವೆ! ಅಥವಾ ತಂದೆಯೊಡನೆ ತೋಪಿಗೆ ಹೋಗಿ ಗಂಡನ ಸಮಕ್ಷಮ ಆಕೆ ಸತ್ಯಾಗ್ರಹವನ್ನೂ ಆರಂಭಿಸಬಹುದಲ್ಲವೆ! ಯೋಚಿಸುತ್ತ ಹೋದೆ, ಆದರೆ ಅದಕ್ಕೆ ಅಂತ್ಯವಿರಲಿಲ್ಲ. ಆದರೆ ನನ್ನ ಮನಸ್ಸು ಸೃಜನಶೀಲವಾಗಿ ಅವರಿಬ್ಬರಿಗೆ ಅವಧೂತ ಪದವಿಯನ್ನು ಕರುಣಿಸಿದ ಸಂದರ್ಭ ಕುರಿತಂತೆ ಯೋಚಿಸಲಾರಂಭಿಸಿತು.

ಮುಖ್ಯವಾಗಿ ಅಂಥೋಣಿ ಮಾಡದ ಅಪರಾಧವನ್ನು ತನ್ನ ಮೈಮೇಲೆ ಎಳೆದುಕೊಂಡಿರುವನೆಂದರೆ ಅದರ ನೇಪಥ್ಯದಲ್ಲಿ ಬಲವಾದ ಕಾರಣಗಳಿಗೆ ಕೊರತೆ ಇರಲಾರದು. ಕೋಗಿಲೆತೋಟದ ರೆಡ್ಡಿಯೇ ಅವನನ್ನೊಪ್ಪಿಸಿರಲೂಬಹುದು, ಅಥವಾ

ನಗರೂರಿನ ರೆಡ್ಡಿಗಳ ಪೈಕಿ ಯಾರಾದರೂ ತೋರಿಸಿರಬಹುದಾದ ಆಮಿಷಕ್ಕೆ ಅಂಥೋಣಿ ಬಲಿಯಾಗಿರಲೂಬಹುದು, ಆದರೆ ಯಾವ ಜಮೀನ್ದಾರನೂ ತನ್ನ ನಂಬಿಗಸ್ಥ ಸುಪಾರಿ ಕೊಲೆಗಾರ ಅವಧೂತ ಪದವಿಗೇರುವುದನ್ನು ಸಹಿಸಲಾರನು, ಬೆಂಬಲಿಸಲಾರನು. ಅಥವಾ ತಾತ್ಕಾಲಿಕವಾಗಿ ತಮ್ಮ ಮೇಲಿನ ಆಪಾದನೆಗಳಿಂದ ಬಿಡುಗಡೆ ಪಡೆಯುವ ಸಲುವಾಗಿ ಅವರಿಬ್ಬರೂ ನಾಗನಾಥನಹಳ್ಳಿಯಲ್ಲಿ ತಲೆ ಮರೆಸಿಕೊಂಡಿರಲೂಬಹುದು, ಆದರೆ ಮಾಯಾವಿ ವೆಂಕವಾಧೂತರ ಗಮನವನ್ನು ಇವರೇ ಸೆಳೆದರೋ, ಅಥವಾ ಅವಧೂತರೇ ಇವರ ಗಮನವನ್ನು ಸೆಳೆದರೋ! ಅಥವಾ ಅವಧೂತರೇ ತಮ್ಮ ಪೂರ್ವಾಶ್ರಮದಲ್ಲಿ ಇವರ ಹಾಗೆಯೇ ಕುಖ್ಯಾತ ಹಿನ್ನಲೆಯವರಾಗಿದ್ದಲ್ಲಿ! ಖಚಿತ ಮಾಹಿತಿ ಶೇಷಣ್ಣನಲ್ಲಿರಲೂಬಹುದು, ದಿನಕ್ಕೆರಡು ಮೂರು ಸಲ ಊರಿನ ವಿದ್ಯಮಾನಗಳನ್ನು ಸಶಕ್ತ ರೀತಿಯಲ್ಲಿ ನಿರೂಪಿಸುತ್ತಿದ್ದ ಅವನನ್ನು ನೋಡದೆ ಎರಡು ದಿವಸಗಳಾಗಿರುವವು, ಆ ನನ್ನ ಪ್ರೀತಿಯ ಬಾತ್ಮೀದಾರನು, ಸಖನು ತೋಪಿನಲ್ಲಿ ಸಾಧುಗಳ ಸಂಗಡ ಇರಬಹುದೋ! ಊರಲ್ಲಿ ಎಲ್ಲಾದರೂ ಪಾಪಪ್ರಜ್ಞೆಯಿಂದ ನರಳುತ್ತ ತಲೆ ಮರೆಸಿಕೊಂಡಿರಬಹುದೊ! ಊರಿಗೆ ಬಂದವರು ಹೇಗೆ ಬಾವಿ ಬಾರದೆ ಇರಲಾರರೋ ಹಾಗೆಯೇ ಅವನು ಖಂಡಿತ ನಾಳೆ ದಿವಸ ನನ್ನಲ್ಲಿಗೆ ಬಾರದೆ ಇರಲಾರನು, ನಾಳೆಯೂ ಬಾರದಿದ್ದಲ್ಲಿ ನಾನೇ ಅವನಿರಬಹುದಾದ ಮನೆಯ ಬಾಗಿಲನ್ನು ಬಡಿದರಾಯಿತೆಂದುಕೊಂಡೆ.

ಇನ್ನೇನು ಕಾದಂಬರಿಯ ಹಸ್ತಪ್ರತಿಯನ್ನು ಕೈಗೆತ್ತಿಕೊಳ್ಳಬೇಕೆನ್ನುವಷ್ಟರಲ್ಲಿ ಜಲಂಧರ ಮತ್ತವನ ಸಹೋದರಿ ಪದ್ಮಾವತಿ ನೆನಪಿನ ಮುಂಚೂಣಿಯಲ್ಲಿ ಕಾಣಿಸಿಕೊಂಡರು. ಅವರಿಬ್ಬರೂ ಅಲ್ಲಿಗೆ ದೈಹಿಕವಾಗಿ ಕಾಣಿಸಿಕೊಳ್ಳುವ ಅಗತ್ಯವಿರಲಿಲ್ಲ. ಎಷ್ಟೇ ಕುತೂಹಲವಿದ್ದರೂ ಬಂದಿದ್ದರೂ ಆಗುತ್ತಿತ್ತು, ಬಾರದಿದ್ದರೂ ಆಗುತ್ತಿತ್ತು. ತಾನೊಬ್ಬನೇ ಬಾರದೆ ತನ್ನ ಸಂಗಡ ತನ್ನ ತಂಗಿಯನ್ನೂ ಕರೆದುಕೊಂಡು ಬರುವ ಜರೂರತ್ತಿರಲಿಲ್ಲ, ಬಂದಿದ್ದೂ ಅಲ್ಲದೆ ನನ್ನ ಒಂದು ಪಕ್ಕ ಅವನು ಇನ್ನೊಂದು ಪಕ್ಕ ಆಕೆಯೂ! ತನ್ನ ದೇಹಕ್ಕೆ ಯಾವ ಪ್ರಸಾದನವನ್ನು ಪೂಸಿಕೊಂಡಿದ್ದಳೇನೋ! ಪರಿಮಳ ವ್ಯಾಪಿಸದಿದ್ದಲ್ಲಿ ನನ್ನ ಕಣ್ಣುಗಳು ಆಯಾಚಿತವಾಗಿ ಹೊರಳಿ ಆಕೆಯ ದೇಹದ ಒಂದು ಪಾರ್ಶ್ವವನ್ನು ಗ್ರಹಿಸುತ್ತಿರಲಿಲ್ಲವೇನೊ! ಒಂದು ಕ್ಷಣ ಮಹಾಶ್ವೇತೆಯಂತೆ ಹೊಳೆದಳು, ಇನ್ನೊಂದು ಕ್ಷಣ ಭಯಾನಕ ಚಿತ್ರಗಳಲ್ಲಿನ ಮೋಹಿನಿಯಂತೆ ಭಾಸವಾದಳು. ಮನಸ್ಸಿನಲ್ಲಿ ಕಾಳ್ಗಿಚ್ಚು ಹರಡುವಷ್ಟು ಸುಂದರಿಯಲ್ಲ, ನೋಡಿದವರ ಮನಸ್ಸಿನಲ್ಲಿ ವೈರಾಗ್ಯ ಮೂಡಿಸುವಂಥ ಸೌಂದರ್ಯರಾಶಿ ಆಕೆಯದ್ದು, ಸೋಂಕಿದವರ ದೇಹಗಳನ್ನು ಸುಟ್ಟುಭಸ್ಮ ಮಾಡುವಂಥ ಮಂತ್ರಸದೃಶ ಸೌಂದರ್ಯ ಆಕೆಯ ದೇಹದ ಇಂಚು ಇಂಚಲ್ಲೂ! ಎಷ್ಟು ಸಾಧ್ಯವೋ ಅಷ್ಟು ದೂರಕ್ಕೆ ಸರಿದೆ, ಆದರೆ ಆಕೆ ತನ್ನ ದೃಷ್ಟಿಯನ್ನು ಶರಭನ ಕಡೆ ಕೇಂದ್ರೀಕರಿಸಿದ್ದುದಂತೂ ಸ್ಪಷ್ಟ. ಅವಧೂತರಲ್ಲಿ ಇನ್ನಷ್ಟು ಜೀವನೋತ್ಸಾಹವನ್ನು ಕುಂದಿಸುವ ಸಂಚು ಆಕೆಯ ನೋಟದಲ್ಲಿ ಅಡಿಗಿದ್ದಿರಬಹುದೆ ಎಂಬ ಸಂದೇಹ ಹೀಗೆ ಕಾಣಿಸಿಕೊಂಡು ಹಾಗೆ ಮರೆಯಾಯಿತು. ಅವರನ್ನೆಲ್ಲ ಇವರನ್ನೆಲ್ಲ ಬದಿಗಿರಿಸಿ ಏಳನೆ ಆಶ್ವಾಸವನ್ನು ಪೂರ್ಣಗೊಳಿಸುವ ಸಲುವಾಗಿ ಕಾದಂಬರಿಯ ಹಸ್ತಪ್ರತಿಯನ್ನು ಮುಂದಕ್ಕೆ ಎಳೆದುಕೊಂಡೆ.

ಕಾದಂಬರಿಯೊಳಗಿನ ಕಲ್ಪಿತ ವಾಸ್ತವವನ್ನು ವಾಗಿಲಿಯಲ್ಲಿ ಸಂಭವಿಸುತ್ತಿರುವ ವರ್ತಮಾನದೊಂದಿಗೆ ಹೋಲಿಸಿ ನೋಡಿದೆ, ಪರವಾ ಇಲ್ಲ, ಅವೆರಡೂ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಪಾತಳಿಯಲ್ಲಿ ಸಂಭವಿಸುತ್ತಿರುವುದು ಯಾವುದೇ ಕಾದಂಬರಿಕಾರನ ಅದೃಷ್ಟ. ಶಶಾಂಕ ಪಾತ್ರವನ್ನು ಇನ್ನಷ್ಟು ಉಜ್ವಲಗೊಳಿಸುವುದು ಮುಖ್ಯ. ಅವನು ಒಂದೊಂದಾಗಿ ಮೆಟ್ಟಿಲನ್ನು

ಏರಿದಾದ ಬಳಿಕ ಅಂತಿಮ ಮೆಟ್ಟಿಲನ್ನು ತಲುಪಿರುವನು, ಅದು ಮೆಟ್ಟಿಲ ರೂಪದಲ್ಲಿರುವ ತನ್ನ ಬದುಕಿನ ನಿರ್ಣಾಯಕ ಘಟ್ಟ. ಅದನ್ನು ದಾಟಿದನೆಂದರೆ ತಲುಪಲಿರುವುದು ತನ್ನ ತಂದೆ ಮಲಗಿರುವ ಹಂಸತೂಲಿಕಾತಲ್ಪವನ್ನು, ಅದು ಕೇವಲ ಶಯನಕ್ಕೆ ಮಾತ್ರ ಸೀಮಿತವಲ್ಲ, ಶತಮಾನಗಳಷ್ಟು ಪುರಾತನದಾದ ಅದು ನೂರಾರು ಶೋಭನಪ್ರಸ್ತಗಳಿಗೆ ದೈಹಿಕ ಸಮಾಗಮಗಳಿಗೆ ವೇದಿಕೆಯಾಗಿರುವುದು, ತನ್ನಂಥ ನೂರಾರು ಮಂದಿ ವಂಶೋದ್ಧಾರಕರ ಗರ್ಭಧಾರಣೆಗೆ ಸಾಕ್ಷಿಯಾಗಿರುವುದು, ನೂರಾರು ತಾಯಂದಿರು ಹೆರಿಗೆ ನೋವುಗಳನ್ನು ಅನುಭವಿಸಿರುವುದು ಅದರ ಮೇಲೆಯೇ, ಅದು ನೂರಾರು ಶಿಶುಗಳ ಆಟದ ಮೈದಾನ, ಅದು ಅಕಾಲಿಕ ವೃದ್ಯಾಪ್ಯ ಕರುಣಿಸುವ ಮಾಂತ್ರಿಕ ತಾಣ, ಅದರ ಮೇಲೆಯೇ ಅಸಂಖ್ಯ ಗಾಯಾಳುಗಳು ನರಳಿರುವುದು, ಅದರ ಮೇಲೆಯೇ ತನ್ನ ವಂಶದ ತಮ್ಮ ಹಿರಿಯರ ಪ್ರಾಣ ಪಕ್ಷಿಗಳು ಹಾರಿ ಬಟಾಬಯಲಲ್ಲಿ ಲೀನವಾಗಿರುವುದು, ಅದರ ಮೇಲೆಯೇ ಪುಯ್ಯಾವುಲ ವಂಶದ ಹಿರಿಯರು ಮಲಗಿ ಸಾವುಗಳಿಗೆ ಸಂಬಂಧಿಸಿದ ದುಃಸ್ವಪ್ನಗಳನ್ನು ಕಂಡಿರುವುದು, ಬೆಚ್ಚಿಬಿದ್ದಿರುವುದು, ಮಾರಣಾಂತಿಕ ಯೋಜನೆಗಳ ನೀಲನಕ್ಷೆಗಳನ್ನು ರೂಪಿಸಿರುವುದು. ಅದೇನು ತನಗೆ ಅಪರಿಚಿತ ನೆಲೆಯಲ್ಲ, ತಾನು ಜನಿಸಿರುವುದೂ, ತನ್ನ ಶಿಶುತ್ವದಿಂದ ಬಾಲ್ಯಕ್ಕೆ ಬಡ್ತಿ ಪಡೆದಿರುವುದು, ಬಾಲ್ಯದ ಹಲವು ದಿವಸಗಳ ಕಾಲ ಆಡಿರುವುದು, ತನಗೆ ತನ್ನ ತಾಯಿ ಉಣ್ಣಿಸಿರುವುದು, ಎತ್ತಿ ಆಡಿಸಿರುವುದು ಎಲ್ಲವೂ ಅದರ ಮೇಲೆಯೇ! ಅಂಥ ಮಾಯಾವಿ ಶಯನ ತಾಣದ ಮೇಲೆ ತನ್ನ ತಂದೆ ತನ್ನ ಮಗನಾದ ನನ್ನ ಬರುವಿಕೆ ಸಲುವಾಗಿ ಪ್ರತಿಕ್ಷಣಗಳನ್ನೂ ಎಣಿಸುತ್ತಿರುವನು. ಹ್ಹಾಂ! ಅಂದ ಹಾಗೆ ಆತ ಪೀಡಿತನಾಗಿ ನರಳುತ್ತಿರುವ ಖಾಯಿಲೆ ಯಾವುದೆಂದು ತನಗಿನ್ನೂ ಸ್ಪಷ್ಟವಾಗಿಲ್ಲ, ಅನುವಂಶಿಕವಾಹಿನಿಯಲ್ಲಿ ಅಸ್ತಮಾ ರಕ್ತದೊತ್ತಡ ಸಕ್ಕರೆಯಂಥ ಹಲವು ಖಾಯಿಲೆಗಳಿಗೆ ಬರವಿಲ್ಲ, ಅವುಗಳ ಪೈಕಿ ಯಾವ ವ್ಯಾಧಿ ತನ್ನ ತಂದೆಯನ್ನು ಬಾಧಿಸುತ್ತಿರಬಹುದು!

ಶಶಾಂಕ ಒಂದು ಕ್ಷಣ ನಿಂತಲ್ಲಿಯೇ ನಿಂತು ಯೋಚಿಸಲಾರಂಭಿಸಿದ್ದು ರಾಘಪ್ಪಸ್ವಾಮಿಗೆ ಸರಿ ಎನ್ನಿಸಲಿಲ್ಲ, ಹ್ಹಾಂ! ಅರೆ ರಾಘಪ್ಪಸ್ವಾಮಿಯವರೆ ತಾವ್ಯಾಕೆ ಇತ್ತ ತಲೆ ಹಾಕುತ್ತಿರುವಿರಿ ಎಂದು ಕೇಳಿದ್ದಕ್ಕೆ ಅದು ಕಿವಿಯಲ್ಲಿ ಬಾಯಿಯಿರಿಸಿ ಪಿಸುಗುಟ್ಟಿದ್ದು ಕೇಳಿ ದಿಗ್ಭ್ರಮಿತನಾದೆ, ಅದರ ಮಾತಿನಂತೆ ಬರೆದರೆ ವಾಚಕರಾದರೂ ಏನೆಂದು ತಿಳಿಯುವರು! ವಂಶವಾಹಿನಿಯಂತೆ ಶಶಾಂಕ ಯಾವ ರೀತಿಯಲ್ಲೂ ತನ್ನ ತಂದೆ ಹರಿಶ್ಚಂದ್ರರೆಡ್ಡಿಯವರನ್ನು ನಡೆ ನುಡಿಯಲ್ಲಿ ಹೋಲುತ್ತಿಲ್ಲವಂತೆ! ಕಾರಣ ಅವರ ಪತ್ನಿಯನ್ನು ಸ್ವಾಮಿ ಒಂದೆರಡು ಸಲ..! ಇದು ನಂಬುವ ಮಾತಲ್ಲವೆನ್ನಿಸಿತು. ಕೆಲವು ತೆಲುಗು ವಿದ್ವಾಂಸರ ಅಭಿಪ್ರಾಯದಂತೆ ಶ್ರೀಕೃಷ್ಣದೇವರಾಯನ ತಾಯಿ ನಾಗಲಾಂಬಿಕೆಯೊಡನೆ ಪ್ರಧಾನಿ ತಿಮ್ಮರಸ ಅಕ್ರಮ ಸಂಬಂಧವಿರಿಸಿಕೊಂಡಿರಲಿಲ್ಲವೆ ಎಂದು ಕೇಳಿದ್ದಕ್ಕೆ ಏನು ಹೇಳುವುದೆಂದು ತೋಚಲಿಲ್ಲ. "ಸ್ವಾಮಿ ಕಾದಂಬರಿಯ ಹಾದಿ ತಪ್ಪಿಸಬೇಡಿ ದಯವಿಟ್ಟು" ಎಂದು ಹೇಳಿ ಅದನ್ನು ಪಕ್ಕಕ್ಕೆ ಸರಿಸುವಷ್ಟರಲ್ಲಿ ಸಾಕು ಸಾಕಾಗಿ ಹೋಯಿತು. ಆದರೂ ಅದರ ಮಾತು ನನ್ನ ತಲೆಯೊಳಗೆ ಮರಕುಟಿಗನಹಕ್ಕಿಯಂತೆ ಕುಟಕಲಾರಂಭಿಸಿತು. ಪ್ರತಿಯೊಂದು ಪ್ರತಿಭೆಯ ಸೃಷ್ಟಿಯ ನೇಪಥ್ಯದಲ್ಲಿ ತಮ್ಮ ಲೈಂಗಿಕ ಕೈವಾಡವಿರುವುದಾಗಿ ಆರೋಪಿಸುವ ಪುರೋಹಿತಶಾಹಿಯ ಹುನ್ನಾರನ್ನು ಲಕ್ಷಿಸುವುದೋ ಅಲಕ್ಷಿಸುವುದೋ! ಗೊಂದಲಕ್ಕೆ ಸಿಲುಕಿದೆ. ಕಥೆಯ ಬ್ಯಾಕ್‌ಫ್ಲಾಷ್‌ನಲ್ಲಿ ಶಶಾಂಕನ ತಾಯಿ ಅನುಭವಿಸಿರಬಹುದಾದ ಅತೃಪ್ತ ಕಾಮನೆಗಳನ್ನು, ಅದಕ್ಕೆ ತಾನು ಅನುಸರಿಸಿರಬಹುದಾದ

ವಾಮಮಾರ್ಗಗಳನ್ನು ಚಿತ್ರಿಸಿದರೆ ಹೇಗೆ! ಚಿತ್ರಿಸದಿದ್ದರೆ ಹೇಗೆ! ಬೆಳೆಯಬಹುದಾದ ಕಾದಂಬರಿಯ ಸಾಧಕ–ಬಾಧಕಗಳ ಬಗ್ಗೆ ಯೋಚಿಸಲಾರಂಭಿಸಿದೆ. ರೂಪದಲ್ಲಿ ಅಷ್ಟಾವಂಕನನ್ನು ಹೋಲುತ್ತಿರುವ ರಾಘಪ್ಪಸ್ವಾಮಿ ಎಲ್ಲಿ! ಸುರಸುಂದರಾಂಗರಾದ ಹರಿಶ್ಚಂದ್ರರೆಡ್ಡಿಯರೆಲ್ಲಿ! ರೆಡ್ಡಿಯವರ ಪತ್ನಿಯಲ್ಲಿರಬಹುದಾದ ಅತೃಪ್ತಕಾಮನೆಗಳು ಎಂದರೆ ಯಾವುವು! ಅವು ದೈಹಿಕ ಸೌಂದರ್ಯಕ್ಕೆ ಪುರುಷತ್ವಕ್ಕೆ ಸಂಬಂಧಿಸಿದವೋ! ಅಥವಾ ಸಂಗೀತ ಸಾಹಿತ್ಯಕ್ಕೆ ಸಂಬಂಧಿಸಿದವುಗಳೋ! ಹಾಗಿದ್ದರೆ ವೈದಿಕ ಸಂಜಾತ ಸ್ವಾಮಿಯ ಪಠ್ಯೇತರ ವ್ಯಕ್ತಿತ್ವದಲ್ಲಿ ಯಾವುದಾದರು ವಿಶೇಷವಿರುವುದು ಮುಖ್ಯ, ಅದನ್ನು ರೆಡ್ಡಿಯವರ ಪತ್ನಿಯ ವ್ಯಕ್ತಿತ್ವದೊಂದಿಗೆ ಅದನ್ನು ಸಮೀಕರಿಸುವುದು ಮುಖ್ಯ, ಆದರೆ ಅದು ಹೇಗೆ ಎಂದು ತಿಳಿಯದಾಯಿತು. ತುಸು ಹೊತ್ತು ಯೋಚಿಸಿದ ಬಳಿಕ ಸ್ವಾಮಿಯ ಹುನ್ನಾರನ್ನು ನೇಪಥ್ಯಕ್ಕೆ ಸರಿಸುವುದೇ ಮೇಲೆನ್ನಿಸಿತು. ಪುನಃ ಬರೆಯುವುದನ್ನು ಮುಂದುವರೆಸಿದೆ,

ಶಶಾಂಕ ತನ್ನ ಬದುಕಿನ ನಿರ್ಣಾಯಕ ಘಟ್ಟವನ್ನು ತಲುಪಿರುವನು, ಹಜಾರದ ಮೇಲೆ ಹೆಜ್ಜೆ ಇರಿಸಲು ಹರಸಾಹಸ ಅನುಭವಿಸುವನು, ವಾಡೆಯಿಂದ ನಿರ್ಗಮಿಸಬೇಕೆಂದರೆ ಅವರೋಹಣದ ಮೆಟ್ಟಿಲು ತನ್ನ ಹೆಜ್ಜೆಯನ್ನು ಸ್ವೀಕರಿಸಲು ನಿರಾಕರಿಸುತ್ತಿರುವುದು, ಪ್ರವೇಶಿಸಿದವರನ್ನು ಮರಳಿ ಕಳಿಸುವುದಕ್ಕೆ ಇದೇನು ಸದ್ಗೃಹಸ್ಥರು ವಾಸಿಸುವ ಸಾಮಾನ್ಯ ಮನೆಯೆ! ಪುಯ್ಯಾವುಲ ವಂಶದ ಜಮೀನ್ದಾರರು ವಾಸಿಸಿದ ವಾಸಿಸುತ್ತಿರುವ ಅರಮನೆ ಸದೃಶ ವಾಡೆ! ವಿಕ್ಟೋರಿಯಾ ರಾಣಿಯನ್ನೂ ದಿಗ್ಭ್ರಮೆಗೊಳಿಸಿರುವ ವಾಡೆ! ಸೂರ್ಯ ಅಸ್ತಮಿಸದ ಸಾಮ್ರಾಜ್ಯದ ಅಧಿಪತಿ ಮುಕ್ತಕಂಠದಿಂದ ಶ್ಲಾಘಿಸಿರುವ ವಾಡೆ! ಆಳುವವರಿಗೆ ಶೋಷಕರಿಗೆ ಕ್ರೌರ್ಯಕ್ಕೆ ಸಂಬಂಧಿಸಿದ ಪಾಠಗಳನ್ನು ಬೋಧಿಸಿರುವ ವಾಡೆ! ಒಳ್ಳೆಯವರನ್ನು ಕೆಟ್ಟವರನ್ನಾಗಿಸುವ ಕೆಟ್ಟವರನ್ನು ಕ್ರೂರಿಗಳನ್ನಾಗಿಸುವ ವಾಡೆ! ವಾಡೆಯ ಅಂಗಳಲ್ಲಿ ಹೆಜ್ಜೆ ಇರಿಸುವವರನ್ನು ಸೂಜಿಗಲ್ಲಿನಂತೆ ಸೆಳೆದು ತನ್ನೊಳಗೆ ಬಿಟ್ಟುಕೊಳ್ಳುವ ವಾಡೆ! ತನ್ನೊಳಗೆ ಒಮ್ಮೆ ಬಿಟ್ಟುಕೊಂಡಿತೆಂದರೆ ಅವರ ಕಥೆ ಮುಗಿದಂತೆಯೇ ಸರಿ. ಆಗಮಿಸುವ ಪೂರ್ವದಲ್ಲಿ ಸಂದೇಶದ ಪೂರ್ವಾಪರ ಕುರಿತಂತೆ ಯೋಚಿಸಬಹುದಾಗಿತ್ತಲ್ಲವೆ! ಬರುವುದು ಬಂದಾಗಿರುವುದು, ಹೊಸ್ತಿಲು ದಾಟಿ ಪ್ರವೇಶಿಸಿಯೂ ಆಗಿರುವುದು, ಹತ್ತಾರು ಮೆಟ್ಟಿಲುಗಳನ್ನು ಧೀರೋದಾತ್ತವಾಗಿ ಕ್ರಮಿಸಿ, ಕ್ರಮಿಸುವ ಪೂರ್ವದಲ್ಲಿ ನೆನಪುಗಳನ್ನು ಒಂದೊಂದಾಗಿ ವಿಸರ್ಜಿಸಿ ಸುಂದರವೂ ಸುವಿಶಾಲವೂ ಆದ ಮೊಗಸಾಲೆಯ ಪ್ರಾಂಗಣವನ್ನೂ ಸಮೀಪಿಸಿದ್ದಾಗಿದೆ, ಗಜದಗಲ ಗಾರೆ ಗೋಡೆಗಳ ಮೇಲೆ ಸಾಲು ಸಾಲಾಗಿರುವ ಪುಯ್ಯಾವುಲ ವಂಶದ ಪೂರ್ವಿಕರ ತೈಲವರ್ಣದ ಭಿತ್ತಿಚಿತ್ರಗಳನ್ನು ಒಂದೊಂದಾಗಿ ನೋಡುವುದರ ಮೂಲಕ ಅವರೆಲ್ಲರ ಅಸ್ಪಷ್ಟ ನೆನಪುಗಳೊಂದಿಗೆ ತನ್ನ ಸಮಕಾಲೀನ ನೆನಪುಗಳನ್ನು ಸಮೀಕರಿಸಿಕೊಂಡಾಗಿದೆ, ನಾಲ್ಕೂ ಕಡೆ ಇರುವ ಗೋಡೆಗಳೂ ಭಯದ ಪ್ರಚಾರದ ಪರಿಕರಗಳೆ! ಅವುಗಳ ಮೇಲೆ ಹಲವು ಕಡೆ ಕಾಡುಕೋಣಗಳ, ಹುಲಿ, ಚಿರತೆಗಳ ತಲೆಬುರುಡೆಗಳು, ಅವುಗಳಿಗಿರುವ ಕಣ್ಣುಗಳು ಅಸಲಿಯಲ್ಲ, ಕಣ್ಣುಗಳ ಜಾಗದಲ್ಲಿ ಗಾಜಿನ ಗೋಲಿಗಳನ್ನು ಅಳವಡಿಸಲಾಗಿರುವುದು, ನೈಜ ಕಣ್ಣುಗಳಿಗಿಂತ ಅವುಗಳ ನೋಟ ಕ್ರೌರ್ಯವೆನ್ನಿಸಿತು, ರಾಘಪ್ಪಸ್ವಾಮಿ ಅವುಗಳಿಂದ ಪ್ರಭಾವಿತನಾಗಿ ಪುಯ್ಯಾವುಲ ವಂಶಸ್ಥರ ಬೇಟೆಯ ಕೌಶಲ್ಯವನ್ನು ವರ್ಣಿಸಲಾರಂಭಿಸಿದ ಕಿವಿ ಗಡಚಿಕ್ಕುವಂತೆ. ತನ್ನ ತಂದೆ ಕೋವಿಯೊಂದಿಗೆ ಅರಣ್ಯಕ್ಕೆ ಹೋಗದಿದ್ದರೂ, ಯಾವುದೇ ಒಂದು ಕಾಡುಪ್ರಾಣಿಯನ್ನು ಬೇಟೆಯಾಡದಿದ್ದರೂ ತನ್ನ ಪೂರ್ವಿಕರಿಗಿಂತ

ಚಾಣಾಕ್ಷ ಬೇಟೆಗಾರ ಎಂದು ಶಶಾಂಕ ಯೋಚಿಸುತ್ತಿರುವಾಗಲೇ ಬಾಗಿಲ ಸನಿಹದಲ್ಲಿ ಹೆಜ್ಜೆ ಸಪ್ಪಳವಾಯಿತು, ತಿರುಗಿ ನೋಡಿದರೆ..

++++

ಮೂಲಿಮನಿ ಗೌಡರೂ ಶೇಷಣ್ಣನೊಂದಿಗೆ ದನಿಗೂಡಿಸಿ ಒತ್ತಾಯಿಸಬಹುದೆಂದು ಊಹಿಸಿರಲಿಲ್ಲ. ಎರಡನೆ ಸಲ ಅವರ ಕಡೆ ಕಣ್ಣಾಯಿಸಿದೆ, ಕೆಲವೇ ದಿವಸಗಳಲ್ಲಿ ಅವರಿಬ್ಬರ ದೇಹದ ಮೇಲ್ಪ್ರಲಕ್ಷಣ ನಿರೀಕ್ಷೆಗೆ ಮೀರಿ ಬದಲಾಗಿರುವುದು, ಅಗತ್ಯಕ್ಕಿಂತ ಹೆಚ್ಚು ವಿಭೂತಿ ಪಟ್ಟೆಗಳನ್ನು ಢಾಳಾಗಿ ಲೇಪಿಸಿಕೊಂಡಿರುವ ನೊಸಲುಗಳು, ಭ್ರೂಮಧ್ಯೆ ಪೈಸೆಯಷ್ಟಗಲದ ಕುಂಕುಮ ತಿಲಕ, ಕಿವಿಗಳ ಸಂದಿಯಲ್ಲಿ ಇರಿಸಿಕೊಂಡಿರುವ ಮಲ್ಲಿಗೆ ಹೂವುಗಳಿನ್ನೂ ಬಾಡಿರಲಿಲ್ಲ, ಮೇಲ್ದುಟಿ ಮುಚ್ಚವಂತೆ ಚಾಚಿರುವ ಮೀಸೆ, ಮುಖದ ಎಲುಬುಗಳನ್ನು ಮರೆ ಮಾಚಿರುವ ಕುರುಚಲು ಗಡ್ಡ, ತಲೆಗೂದಲನ್ನು ಮರೆಮಾಚಿರುವ ಮಂಡಾಸು. ಪುನಃ ಪುನಃ ನೋಡಿಸಿಕೊಳ್ಳುವ ಮುಖಗಳ ಅಲೌಕಿಕತೆ. ಮಾತು ಮಾತಿಗೆ ಶಿವಾಯನಮಃ ಜಗಾನುಮಾತೆ ಆದಿಶಕ್ತಿ ಎಂಬ ಉವಾಚಗಳು. ಅವರಿಬ್ಬರ ದೇಹಗಳ ನವರಂದ್ರಗಳಿಂದ ಒಂದೇ ಅಲ್ಲದೆ ಸಹಸ್ರಾರು ಶ್ವೇದರಂದ್ರಗಳಿಂದಲೂ ಗಾಂಜಾದ ಪರಿಮಳ ಹರಡಲಾರಂಭಿಸಿತ್ತು ಬೇರೆ, ಪಕ್ಕದ ಮನೆಯಲ್ಲಿದ್ದ ಲಚುಮವ್ವನ ಘ್ರಾಣೇಂದ್ರಿಯವನ್ನೂ ಅದು ಕೆರಳಿಸಿತ್ತೇನೋ! ಆ ಕಾರಣದಿಂದಾಗಿ ಆಕೆ ಅವರಿಗೆ ಕೇಳಿಸಲೆಂದು ದುಃಖ ತೋಡಿಕೊಳ್ಳಲಾರಂಭಿಸಿದ್ದಳು. ಹಾದಿಹೋಕರು ಒಂದು ಕ್ಷಣ ನಿಂತು ಅವರನ್ನು ಗಮನಿಸಿದಾದ ಬಳಿಕ ಏನನ್ನೋ ಗುನುಗುತ್ತ ಮುಂದಕ್ಕೆ ಹೋಗುತ್ತಿದ್ದರು. ತಮ್ಮ ತಂದೆಯನ್ನು ಕರೆಯುವ ಸಲುವಾಗಿ ಸುಧಾಕರ ಎರಡು ಸಲ ಬಂದು ಇಣುಕಿ ಕರೆಯಲು ಧೈರ್ಯ ಸಾಲದೆ ಮರಳಿದ್ದನ್ನು ಗಮನಿಸಿದೆ. ಅವರನ್ನು ಖಾಲಿ ಕೈಯಿಂದ ಮರಳಿಸಲು ಆನೇಕ ಸಬೂಬುಗಳನ್ನು ತೋಡಿಕೊಂಡರೂ ಪ್ರಯೋಜನವಾಗಲಿಲ್ಲ. ನಾಳೆ ಅಂದವನು ಸಂಜೆಗೆ ಇಳಿದರೂ ಅವರು ಕೇಳಿಸಿಕೊಳ್ಳಲು ಸಿದ್ದರಿರಲಿಲ್ಲ. ಸಾರ್ ಎನ್ನುವ ಬದಲಿಗೆ ಅವರು ಪ್ರತಿ ಮಾತಿಗೂ ಸ್ವಾಮಿ ಎಂದು ಸಂಬೋಧಿಸುತ್ತಿದ್ದುದು ಕಿರಿಕಿರಿಯನ್ನುಂಟು ಮಾಡುತ್ತಿತ್ತು.

"ನಿಮ್ಮ ತಮ್ಮಂದಿರು ದೈವಾಂಶ ಸಂಭೂತರೆಂಬ ಸಂಗತಿ ತ್ರೇತಾಯುಗದ ಆಂಜನೇಯಸ್ವಾಮಿಗೂ ಅರ್ಥವಾಗಿದೆ ನೋಡಿ ಸ್ವಾಮಿ, ಅದಕ್ಕೆ ಆತ ಖುದ್ದ ತನ್ನ ಭಕ್ತನನ್ನ ನೋಡಲಿಕ್ಕೆ ತೋಪಿಗೆ ಆಗಮಿಸಿರುವುದು, ಅದೂ ಅಲ್ಲದೆ ತಿರುಮಲಾನಂದರು ಗಳಿಗೆ ಗಳಿಗೊಮ್ಮೆ ನಿಮ್ಮನ್ನು ನೋಡಲಿಕ್ಕೆ ಆಪೇಕ್ಷಪಡುತ್ತಿದ್ದಾರೆ ಸ್ವಾಮಿ, ಅಲೌಕಿಕರಿಗೆ ಕರುಳಿನ ಬೆಲೆ ಅರ್ಥವಾದಷ್ಟು ಲೌಕಿಕರಿಗೆ ಅರ್ಥವಾಗುವುದಿಲ್ಲ ಸ್ವಾಮಿ, ನಿಮ್ಮ ಶರೀರದಲ್ಲೂ ಅವರ ಶರೀರದಲ್ಲೂ ಹರಿಯುತ್ತಿರುವ ರಕ್ತದ ಗುಣ ಒಂದೇ ಅಲ್ಲವೆ ಸ್ವಾಮಿ ಅದಕ್ಕೆ!" ಎಂದು ಗೌಡರು ಹೇಳಿದಾದ ಬಳಿಕ ಕಣ್ಣುಗಳನ್ನು ಒಂದು ಕ್ಷಣ ಮುಚ್ಚಿ ತೆರೆದು ಪುನಃ ತಾವೇ ಮಾತನ್ನು ಮುಂದುವರೆಸಿದರು "ನಿಮ್ಮ ತಮ್ಮಂದಿರಿಗೂ ತ್ರೇತಾಯುಗಕ್ಕೂ ಸಂಬಂಧವಿರದಿದ್ದಲ್ಲಿ ಆಂಜನೇಯಸ್ವಾಮಿ ಯಾಕೆ ಅವರನ್ನು ಹುಡುಕಿಕೊಂಡು ಬರುತ್ತಿದ್ದನು! ಆದ್ದರಿಂದಾಗಿಯಲ್ಲವೆ ನಿಮಗೆ ಸರಸ್ವತೆಮ್ಮನ ಒಲುಮೆಯಾಗಿರುವುದು, ನೀವೇ ಯೋಚಿಸಿ ಸ್ವಾಮಿ!"

ಆಂಜನೇಯಸ್ವಾಮಿ ಎಂದರೆ ಯಾವುದಾದರೊಂದು ಮರ್ಕಟ ತೋಪನ್ನು ಪ್ರವೇಶಿಸಿರಬಹುದೆಂದು ಊಹಿಸಿದೆ. ಕಾರಣ ಮಾಯಾಮೃಗಳು ಮೊಲಗಳು ಚಿರತೆಗಳು

ವಾಗಿಲಿಯ ಪ್ರದೇಶದಲ್ಲಿ ಅಲ್ಲಲ್ಲಿ ಗೋಚರಿಸುತ್ತಿದ್ದವೇ ಹೊರತು ಆ ಮಾನವಕುಲದ ಪೂರ್ವಜನು ಮಾತ್ರ ಅಪ್ಪಿತಪ್ಪಿ ಎಲ್ಲೂ ಕಾಣಿಸಿಕೊಂಡಿರಲಿಲ್ಲ, ಕೇಳಿಸಿಕೊಂಡರೂ ನಾನು ರೋಮಾಂಚನಗೊಳ್ಳಲಿಲ್ಲ, ಹ್ಹಾಂ ಹೌದೇನು ಎಂದು ಆಶ್ಚರ್ಯವ್ಯಕ್ತಪಡಿಸಲಿಲ್ಲ.

ಅದರಿಂದ ನಿರಾಶನಾದ ಶೇಷಣ್ಣನು "ಗೌಡರು ಹೇಳಿದ್ದು ನಿಜ ಸ್ವಾಮಿ, ಬಂದು ನೋಡಿದಿರೆಂದರೆ ನಿಮಗೇ ತಿಳಿಯುವುದು, ಆಂಜನೇಯನ ದರ್ಶನ ಪಡೆಯುವ ಸಲುವಾಗಿ ಹೊಳಗುಂದಿ ಎಲ್ಲಾರ್ತಿ ಕಡೆಲಿಂದ ಜನ ಬಂದು ಹೋಗುತ್ತಿದ್ದಾರೆ ಸ್ವಾಮಿ, ಹೆಬ್ಬಟಂ ಧಣಿಗಳೂ ತೋಪಿಗೆ ಆಗಮಿಸುವರೆಂಬ ವರ್ತಮಾನ, ಎಮ್ಮೆಲ್ಲೆ ರಾಜರತ್ನಂ ಬಂದರೂ ಆಶ್ಚರ್ಯವಿಲ್ಲ, ಅವರೆಲ್ಲ ಬಂದು ಹೋಗುವುದಕ್ಕೂ ಮೊದಲು ಅಣ್ಣ ಎನ್ನಿಸಿಕೊಂಡಿರುವ ನೀವು ಹೋಗಿ ಅವರ ಸಮಕ್ಷಮ ಕುಳಿತೆದ್ದು ಬರುವುದು ಒಳ್ಳೆಯದು ಸ್ವಾಮಿ" ಎಂದು ವಿಲಕ್ಷಣ ರೀತಿಯಲ್ಲಿ ಒತ್ತಡ ಹೇರಲಾರಂಭಿಸಿದನು.

ಅದೇ ಹೊತ್ತಿಗೆ ಸರಿಯಾಗಿ ತೀರಾ ಹತ್ತಿರದಲ್ಲಿ ಅಂದರೆ ಗೋಡೆಯ ಪಕ್ಕದಲ್ಲಿ, ಅಂದರೆ ವಾಸ್ತುವಿಗನುಸಾರವಾಗಿ ಮುಚ್ಚಿದ್ದ ಅಂಗೈಯಗಲದ ಕಿಟಿಕಿಯ ಪಕ್ಕದಲ್ಲಿ, ಅಂದರೆ ತಮ್ಮ ಮನೆ ಅಂಗಳದ ಗಡಿಭಾಗದಲ್ಲಿ ಲಚುಮವ್ವ ದೀರ್ಘವಾಗಿ ಉಸಿರಾಡಲಾರಂಭಿಸಿದ್ದು ಸ್ಪಷ್ಟವಾಗಿ ಕೇಳಿಬರಲಾರಂಭಿಸಿತು. ಗೌಡರ ಸಂಜ್ಞೆ ಮೇರೆ ಶೇಷಣ್ಣ ತುಸು ಕತ್ತೊರಳಿಸಿ ನಿಟ್ಟುಸಿರು ಬಿಟ್ಟು ಆದಿಶಕ್ತಿಯೇ ಎಲ್ಲಾ ನಿನ್ನ ಮಾಯೆ ಎಂದು ನಾಮ ಸ್ಮರಣೆ ಮಾಡಿದ್ದನ್ನು ಕೇಳಿಸಿಕೊಂಡೆ. ಬಾಗಿಲ ಎರಡೂ ಪಕ್ಕ ನೆರಳುಗಳು ಕಾಣಿಸಿಕೊಂಡು ಹಿಂದೆ ಸರಿದವು, ನಿಸ್ಸಂದೇಹವಾಗಿ ಅವರಿಬ್ಬರಲ್ಲಿ ಒಂದು ಈಕೆಯದ್ದೂ ಇನ್ನೊಂದು ಆಕೆಯದ್ದೂ! ಗೌಡರ ಮುಖವನ್ನು ಶೇಷಣ್ಣನೂ, ಶೇಷಣ್ಣನ ಮುಖವನ್ನು ಗೌಡರೂ ನೋಡಿದಾದ ಬಳಿಕ ಉಗುಳು ನುಂಗುವ ಸನ್ನಾಹದಲ್ಲಿದ್ದರು, ಅಷ್ಟರಲ್ಲಿ ಬಾಗಿಲಲ್ಲಿ ಕಾಣಿಸಿಕೊಂಡ ರತ್ನಮ್ಮ ಅಂದರೆ ಗೌಡರ ದ್ವಿತೀಯ ಪತ್ನಿಯು ತನ್ನ ಗಂಡನನ್ನು ಅಪಾದಮಸ್ತಕ ದಿಟ್ಟಿಸಿದಳು, "ಹ್ಹಾ ಹ್ಹಾ ನನ್ನ ಗಂಡನೇ, ನೀನು ನಿನ್ನ ಸೌಂದರ್ಯವನ್ನು ಕನ್ನಡಿಯಲ್ಲಿ ನೋಡಿಕೊಂಡಿರುವಿ ಏನೋ" ಎಂದು ಉದ್ಗರಿಸಿದಳು, ಗೌಡರು ಆಕೆಯ ಕಡೆ ತಿರುಗಿ ಅಪರಿಚಿತಳೆಂಬಂತೆ ನೋಡಿ ಕ್ರಮೇಣ ಗುರುತಿಸಿ "ಓಹೋ ರತ್ನಮ್ಮ ಹೆಸರಿನ ಶಾಂಭವಿಯವರು! ತಾವ್ಯಾಕೆ ಇಲ್ಲಿವರೆಗೆ ಬರುವ ತ್ರಾಸು ತಗೊಂಡಿರಿ ಸ್ವಾಮಿ!" ಎಂದು ಇನ್ನೇನು ಹೇಳಲಿದ್ದರೇನೋ ಅಷ್ಟರಲ್ಲಿ ಆಕೆಯೇ "ನಾನು ಶಾಂಭವಿ ಅಲ್ಲ, ಸ್ವಾಮಿಯಂತೂ ಮೊದಲೇ ಅಲ್ಲ, ಕರ್ಮ ಮಾಡಿರೋ ನಿನ್ನ ಹೆಂಡತಿ ನಾನು! ಮರ್ಯಾದೆಯಿಂದ ಮನೆಗೆ ಬರ್ತೀಯೋ ಇಲ್ಲೋ ಅಷ್ಟು ಹೇಳು!" ಎಂದು ಅಧಿಕಾರಯುತವಾಗಿ ಕೇಳಿಯೇಬಿಟ್ಟಳು, ಅದನ್ನು ಕೇಳಿಸಿಕೊಂಡ ಗೌಡರು ಅಪ್ರತಿಭರಾದರು, ತಮ್ಮ ಅವನತಮುಖೀ ಪತ್ನಿಯು ಇನ್ನೊಬ್ಬರ ಮನೆ ಬಾಗಿಲಲ್ಲಿ ಕಾಣಿಸಿಕೊಂಡಿದ್ದೂ ಅಲ್ಲದೆ ಸೀ ಸಹಜ ಮೈಚಳಿ ಬಿಟ್ಟು ತಮ್ಮನ್ನು ಮನೆಗೆ ಆಹ್ವಾನಿಸಿದ್ದು ಇದೇ ಮೊದಲು! ತಮ್ಮ ಗೌರವಾನ್ವಿತ ಮನೆತನಕ್ಕೆ ಆಕೆ ಅಪಮಾನ ಬಗೆದಳೆಂದೇ ಭಾವಿಸಿದರು. ತಮ್ಮ ಒಳಗಿದ್ದ ಗಾಂಜಾದ ಅಮಲು ಅವರ ಭಾವನೆಗಳನ್ನು ಎಷ್ಟು ಸಾಧ್ಯವೋ ಅಷ್ಟು ನಿಯಂತ್ರಿಸಿತು. ನುಂಗಲಿದ್ದ ಉಗುಳನ್ನು ಮುಗುಳ್ನಗೆಯನ್ನಾಗಿ ಪರಿವರ್ತಿಸಿ "ಬರದೆ ಎಲ್ಲಿರಲಾದೀತು ಸ್ವಾಮಿ, ಇಷ್ಟು ದಿವಸ ತಾಳ್ಮೆಯಿಂದಿರುವ ನೀನು ಇನ್ನೆರಡು ದಿವಸ ತಡೆದುಕೊಳ್ಳಲಾರೆ ಏನು ಸ್ವಾಮಿ!" ಎಂದು ನಾಟಕೀಯವಾಗಿ ಪ್ರತಿಕ್ರಿಯಿಸಿದರು. ಅದಕ್ಕೆ ಕೆರಳಿದ ಆಕೆ ತಲೆಯ ಮೇಲಿದ್ದ ಮೇಲ್ಸೆರಗನ್ನು ತೆಗೆದು ಸೊಂಟಕ್ಕೆ ಸುತ್ತಿಕೊಂಡಳಲ್ಲದೆ ತಲೆಗೂದಲನ್ನು ಚೆಲ್ಲೊಡೆದು ತುರುಬು

ಕಟ್ಟಿಕೊಳ್ಳುತ್ತ "ನೀನು ಮನೆಗೆ ಬರೋದು ಬ್ಯಾಡ, ತೋಪಿನಲ್ಲಿದ್ದುಬಿಡು, ನಿನ್ನಂಥವರಿಗೆ ಯಾಕೆ ಮನೆಮಠ ಹೆಂಡತಿ ಮಕ್ಕಳು! ನಾನು ಎರ್ರಗುಡಿಗೆ ಹೋಗ್ತೀನಿ, ಅಲ್ಲಿಯೇ ಉಪವಾಸ ವನವಾಸ ಇದ್ದು ಸಾಯ್ತೀನಿ" ಎಂದು ಹೇಳಿದಾದ ಬಳಿಕ ತುಸು ಹಿಂದಕ್ಕೆ ಸರಿದು ಮರೆಯಲ್ಲಿ ನಿಂತು ದೀರ್ಘ ಉಸಿರಾಟವನ್ನು ಆರಂಭಿಸಿದಳು.

ಆಕೆಗೆ ಧೈರ್ಯ ತುಂಬ ಸಲುವಾಗಿಯೋ, ಆಕೆಯಿಂದ ಸ್ಫೂರ್ತಿ ಪಡೆದೋ, ತಮ್ಮಿಬ್ಬರ ಹಣೆಬರಹ ಒಂದೇ ಎಂಬ ಕಾರಣದಿಂದಾಗಿಯೋ, ತನ್ನ ಗಂಡ ನಿಧನಿಧಾನವಾಗಿ ಬೋಧ ಪಡೆಯುವ ಮಟ್ಟ ತಲುಪಲು ನಿನ್ನ ಗಂಡ ಗೌಡನೇ ಕಾರಣ ಎಂದು ನೆನಪಿಸುವ ಸಲುವಾಗಿಯೋ ಮರೆಯಲ್ಲಿದ್ದ ಲಚುಮವ್ವ ರತ್ನಮ್ಮನ ಸನಿಹಕ್ಕೆ ಬರುವ ಮೊದಲು ನಶ್ಯೆಪುಡಿಯನ್ನು ಉಜ್ಜಿದ ಗಸಗಸ ಸದ್ದು ಮಂದ್ರಸ್ಥಾಯಿಯಲ್ಲಿ ಕಿವಿಗೆ ಬಿತ್ತು. ಗಾಳಿಯೊಂದಿಗೆ ಬೆಂಕಿ ಸೇರಿತೆಂದು ಭಾವಿಸಿದ್ದು ಕ್ಷಣಾರ್ಧದಲ್ಲಿ ನಿಜವಾಯಿತು. ಇನ್ನೇನು ಆಕೆ ಈಕೆಯ ಉಸಿರಳತೆಯಲ್ಲಿ ನಿಂತು ತನ್ನ ಗಂಡ ಹಾಳಾಗಲಿಕ್ಕೆ ನಿನ್ನ ಗಂಡನೇ ಕಾರಣ ಎಂದು ಕೇಳುವಳೆಂದು ನಾನು ಭಾವಿಸಿದ್ದು ಹೇಗೆ ಸುಳ್ಳಾಯಿತೆಂದರೆ ಹಾಗೆ ಸುಳ್ಳಾಯಿತು. ರತ್ನಮ್ಮಳ ಪಾದಗಳ ಬುಡದಲ್ಲಿ ತಲೆಗೆ ತನ್ನೆರಡೂ ಕೈಗಳನ್ನು ಅಂಟಿಸಿ ಕುಸಿದು ಕೂತ ಲಚುಮವ್ವ

"ನಾವೇನು ಕರುಮ ಮಾಡಿದ್ದೆವಮ್ಮಾ ಗೌಡ್ತಿ ಇಂಥ ನಾಮರ್ಧರ ಹೆಂಡರಾಗಲಿಕ್ಕೆ! ಹಿತ್ತಾಳೆ ಸಹವಾಸ ಮಾಡಿ ಬಂಗಾರದಂಥ ನನ್ನ ಗಂಡ ಕೆಟ್ಟು ಕೆರ ಹಿಡಿದು ಹಾಳಾಗಿ ಹೋದನಲ್ಲಾ! ನಿಮ್ಮ ಗೌಡನ ಮಾತು ಮೀರೋನಲ್ಲ ನನ್ನ ಗಂಡ, ಹೆಂಗಾರ ಮಾಡಿ ನನ್ನ ಗಂಡ ತೋಪಿನಿಂದ ಬಿಡಿಸಿಕೊಡು ತಾಯಿ" ಎಂದು ಒಂದೇ ಸಮನೆ ಕಣ್ಣು ಮೂಗುಗಳಿಂದ ಜಲಧಾರೆ ಹರಿಸಿದಳು. ತನ್ನ ಗಂಡನನ್ನು! ಊರು ಮಾಡುವ ಗೌಡಿಕೆ ವಂಶಸ್ಥನಾದ ತನ್ನ ಗಂಡನನ್ನು! ಬರೋಬ್ಬರಿ ನೂರೈವತ್ತೆಕರೆ ಜಮೀನಿಗೆ ಒಡೆಯನಾದ ತನ್ನ ಗಂಡನನ್ನು! ಪಾಡಾಖರ್ಚಿಗೆ ಐವತ್ತು ನೂರರ ನೋಟುಗಳನ್ನು ಧಾರಾಳವಾಗಿ ಕೊಡುತ್ತಿದ್ದ ತನ್ನ ಗಂಡನನ್ನು ಯಕಃಶ್ಚಿತ್ ಕುರುಬರನ ಹೆಂಡತಿಯು, ಒಂದು ಕಾಲನ್ನು ಜೈಲಿನಲ್ಲೂ ತನ್ನ ಇನ್ನೊಂದು ಕಾಲನ್ನು ಗೃಹಸ್ಥಾಶ್ರಮದಲ್ಲಿರಿಸಿ ಜೀವಿಸುವ ಹಲಾಲಕೋರನ ಗಂಡನ ಹೆಂಡತಿಯಾದ ಲಚುಮವ್ವ ಹಿತ್ತಾಳೆಗೆ ಹೋಲಿಸುವುದೆಂದರೇನು! ಅದೂ ನಾಮರ್ಧ ಎಂಬ ವಿಶೇಷಣದಿಂದ! ಯೋಚಿಸುತ್ತ ನಖಶಿಖಾಂತ ಉರಿದ ರತ್ನಮ್ಮ ಆಶ್ಚರ್ಯಕರ ರೀತಿಯಲ್ಲಿ ತಣ್ಣಗಾಗಿ ತನ್ನ ಕಣ್ಣಾಲಿಗಳನ್ನು ಹ್ರಸ್ವಗೊಳಿಸಿಕೊಂಡಳು. ಆಕೆಯನ್ನು ಬಯ್ಯುವ ಸಲುವಾಗಿ ಅಶ್ಲೀಲ ಪದಗಳ ಸಲುವಾಗಿ ತಡಕಾಡಿದಾದ ಬಳಿಕ ಒಳಗಡೆ ದೃಷ್ಟಿ ಹಾಯಿಸಿದಳು. ಬೆಕ್ಕಿನ ದರ್ಶನ ಮಾತ್ರದಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಇಲ್ಲದ ಬಿಲವನ್ನು ಕಲ್ಪಿಸಿಕೊಳ್ಳುವ ಮೂಷಕದ ಪಾಡಾಯಿತು ಮೂಲಿಮನಿ ಗೌಡರದ್ದು. ಆಕೆಯನ್ನು ಸಮಾಧಾನ ಪಡಿಸುವಂತೆ ಶೇಷಣ್ಣನ ತೊಡೆ ಚಿವುಟಿದರಾದರೂ ಪ್ರಯೋಜನವಾಗಲಿಲ್ಲ. ಅಷ್ಟೊತ್ತಿಗಾಗಲೇ ತಲೆಯಿಂದ ವಲ್ಲಿ ತೆಗೆದು ಅದರಲ್ಲಿ ತನ್ನ ಮುಖವನ್ನು ಮರೆಮಾಚಿಕೊಂಡಿದ್ದ ಶೇಷಣ್ಣ ಮೆಲ್ಲಗೆ ಕಂಭದ ಮರೆಗೆ ಸರಿಯಬಹುದೆಂದು ಗೌಡರು ನಿರೀಕ್ಷಿಸಿರಲಿಲ್ಲ.

ಅವರಿಬ್ಬರ ಅಸಹಾಯಕತೆಯಿಂದ ರತ್ನಮ್ಮ ಮತ್ತು ಲಚುಮವ್ವ ಸ್ಫೂರ್ತಿ ಪಡೆಯದೆ ಇರಲಿಲ್ಲ, ಲಚುಮವ್ವ ದಿಗ್ಗನೆ ಎದ್ದು ನಿಂತು ತುರುಬನ್ನು ಕಟ್ಟಿಕೊಂಡರೆ ರತ್ನಮ್ಮ ಬಾಗಿಲ ತೋಳುಗಳಿಗೆ ತನ್ನೆರಡೂ ಕೈಗಳನ್ನು ಆನಿಸಿ ತುಸು ಒಳಗೆ ಬಾಗಿ "ಕವಡೆ ಕಿಮ್ಮತ್ತಿಲ್ಲದ ಹೆಂಗಸರು ಸುಭೇದಾರನಂಥ ನನ್ನ ಗಂಡನನ್ನು ಹಿತ್ತಾಳೆಗೆ ಹೋಲಿಸಿದರಲ್ಲಾ ಶಿವನೆ!

ನಾಮರ್ದ ಎಂದು ಕರೆಯುವಂತಾದರಲ್ಲ ಶಿವನೆ! ನಿನ್ನ ಕಿವಿಗೆ ಬೀಳಲಿಲ್ಲವೇನೋ! ಕೇಳಿಸಿಕೊಂಡೂ ಗುಂಡುಕಲ್ಲಿನಂತೆ ಕೂತಿರುವಿಯಲ್ಲವೋ!" ಎಂದು ಅಸಹಾಯಕತೆಯಿಂದ ಬುಸುಗುಟ್ಟಲಾರಂಭಿಸಿದಳು. ಮುಖ್ಯವಾಗಿ ನನ್ನ ಕಡೆ ದುರುಗುಟ್ಟುತ್ತ ಬಾಗಿಲ ತೋಳುಗಳಿಂದ ವಾಪಸ್ಸು ಪಡೆದ ತನ್ನೆರಡೂ ಕೈಗಳಿಂದ ಕಣ್ಣುಗಳನ್ನು ಒರೆಸಿಕೊಳ್ಳುತ್ತ ನೆಲಮುಗಿಲಿಗೇಕಾಗಿ ಎನ್ನುವಂತೆ ನಿಂತಳು, ಆಕೆಯ ಧ್ವನಿಯನ್ನು ಕೇಳಿಸಿಕೊಂಡು ಮೃದು ಸ್ವಭಾವದವನೂ ಮಿತ ಭಾಷಿಕನೂ ಆದ ಸುಧಾಕರ ಬಂದು ತಲುಪಿದನು, ಅಸಹಾಯಕತೆಯಿಂದ ತನ್ನ ತಾಯಿಯ ಕಡೆಗೂ ತನ್ನ ತಂದೆಯ ಕಡೆಗೂ ನೋಡಿದನು, ಏನೊಂದು ತೋಚದೆ ಆಕಾಶದ ಕಡೆ ಮುಖ ಚಾಚಿದನು. ಕೂಡಲೆ ಏನೆಂದು ಪ್ರತಿಕ್ರಿಯಿಸುವುದು! ಇಷ್ಟು ಸಾಕಲ್ಲವೆ ಬೋಧ ಪಡೆದು ಶಾಶ್ವತವಾಗಿ ತೋಪು ಸೇರಿಕೊಳ್ಳಲು! ತಮ್ಮ ಪತ್ನಿಯ ಕಡೆ ಬೀರಲು ಅನುಕಂಪ ನೋಟದ ಸಲುವಾಗಿ ತಮ್ಮ ಕಣ್ಣುಗಳಲ್ಲಿ ತಡಕಾಡಿದರು, ಸಂಸಾರ ಹೆಂಡತಿ ಮಕ್ಕಳು ಕುರಿತಂತೆ ತತ್ವಪದಕಾರರು ಏನೇನು ಹೇಳಿರುವರೆಂದು ಯೋಚಿಸಿದರಾದರೂ ಆ ಕ್ಷಣ ಹೊಳೆಯದೆ ಅಸಹಾಯಕತೆಯಿಂದ ಮುದುಡಿ ಕುಬ್ಜರಾದರು, ಅದೇ ಅಂತಿಮ ನೋಟವೆಂಬಂತೆ ತಮ್ಮ ಏಕಮಾತ್ರ ಪುತ್ರ ಸುಧಾಕರನ ಕಡೆ ನೋಡಿದರು. ಅವರ ಆ ಸ್ಥಿತಿ ಕಂಡು ನನಗೆ ಅಯ್ಯೋ ಅನ್ನಿಸದೆ ಇರಲಿಲ್ಲ.

ಮೂಲಿಮನಿ ಗೌಡರ ಪರಿಸ್ಥಿತಿಗಿಂತ ಲಚುಮವ್ವನ ಸ್ಥಿತಿಯೂ ಭಿನ್ನವಿರಲಿಲ್ಲ. ರತ್ನಮ್ಮ ತನ್ನನ್ನು ಕವಡೆ ಕಿಮ್ಮತ್ತಿಲ್ಲವದವಳೆಂದು ರಾಜಾರೋಷವಾಗಿ ಹೇಳಿದ್ದಕ್ಕೆ ಕಾರಣ ತನ್ನ ತುಟಿಜಾರಿದ ಮಾತು. ದುಃಖತಪ್ತೆಯಾದ ತಾನು ಆಕೆಯ ಗಂಡನನ್ನು ಹಿತ್ತಾಳೆಗೆ ಹೋಲಿಸಬಾರದಿತ್ತಲ್ಲವೆ! ನಾಮರ್ಧ ಎಂದು ಬಯ್ಯಬಾರದಿತ್ತಲ್ಲವೆ! ಮಾತು ಆಡಿಯಾಗಿರುವುದು, ಮುತ್ತು ಒಡೆದು ಮಣ್ಣು ಪಾಲಾಗಿರುವುದು. ಇನ್ನು ಅವೆರಡೂ ತನಗೆ ದಕ್ಕುವುದು ಅಸಂಭವ! ಇನ್ನೇನಿದ್ದರೂ ತಾನು!

"ಯಾರನ್ನಂದು ಏನು ಪ್ರಯೋಜನ ತಾಯಿ, ಎಲ್ಲಾ ನಮ್ಮ ಕರ್ಮ. ನನ್ನ ಗಂಡ ಬೋಧ ತಗೊಳ್ಳದಿದ್ದಲ್ಲಿ ನನ್ನ ಬಾಯಿಂದ ಇಂಥ ಹೊಲಸು ಮಾತುಗಳು ಯಾಕೆ ಬರುತಿದ್ದವು ತಾಯಿ! ನನ್ನ ಗಂಡ ತೋಪು ಸೇರಿಕೊಳ್ಳದಿದ್ದಲ್ಲಿ ನಾನ್ಯಾಕೆ ಹಿಂಗ ಬಜಾರದಾಗ ನಿಂತು ದುಕ್ಕ ತೋಡಿಕೊಳ್ಳುತ್ತಿದ್ದೆ! ಇನ್ನು ಮ್ಯಾಲ ನಮ್ಮಂಥ ಹೊಲಸು ಮುಂಡೇರು ನಿಮ್ಮಂಥ ಮರ್ಯಾದಸ್ತರ ಓಣಿಯಲ್ಲಿರಬಾರದು, ಇನ್ನೊಂದು ವಾರಪ್ಪೊತ್ತು ನೋಡ್ತೀನಿ, ಅವನು ಬರದಿದ್ದ ಪಕ್ಷದಲ್ಲಿ ಮಕ್ಕಳಿಗೆ ಇಸಾ ಕೊಟ್ಟು ನಾನೂ ಇಸಾ ತಗೊಂತೀನಿ" ಎಂದು ನಿಧನಿಧಾನವಾಗಿ ಪಾಶ್ಚಾತ್ತಾಪ ಅನುಭವಿಸಿದಳಲ್ಲದೆ ಪಾಪಪ್ರಜ್ಞೆಯಿಂದಲೂ ಬಿಡುಗಡೆಗೊಂಡಿರುವುದಾಗಿ ಭಾವಿಸಿದಳು. ತಾನಿನ್ನೇನನ್ನು ನುಡಿಯಲಿದ್ದಳೇನೋ ಅಷ್ಟರಲ್ಲಿ ಆಕೆಯ ಇಬ್ಬರ ಮಕ್ಕಳು ಹೊಲದಿಂದ ಅದೇ ತಾನೆ ಮರಳಿದರು. ಅವರ ಪೈಕಿ ತಡಸಲ ಎಂಬ ಹೆಸರಿನ ತಿಳವಳಿಕಸ್ಥ ಮಗ "ನಿನಗೇನು ತಲಿಗಿಲಿ ಕೆಟ್ಟೈತೋ ಹೆಂಗೆ! ನಮ್ಮಪ್ಪ ಹೋಗಿರೋದು ತೋಪಿಗೆ, ಸುಡುಗಾಡಿಗಲ್ಲ. ಆತ ಆರೇಳು ವರ್ಷ ಜೈಲಿಗೆ ಹೋಗಿದ್ದಾಗ ದುಕ್ಕ ಮಾಡಿದಾಕಿಯಲ್ಲ ನೀನು, ಈಗ ಬೋಧ ತಗೊಂಡಿರೋ ಮಾತ್ರಕ್ಕೆ ತಲಿ ಕೆಡಿಸಿಕೊಂಡಿರುವಿಯಲ್ಲ" ಎಂದು ಬುದ್ಧಿವಾದ ಹೇಳಿ ಆಕೆಯ ತೋಳು ಹಿಡಿದು ಮನೆಗೆ ಕರೆದೊಯ್ದನು. ತನ್ನ ಸಹಪಾಠಿಯೂ ವಾರಿಗೆಯವನೂ ಆದ ತಡಸಲನ ಮಾತಿನಿಂದ ಸ್ಫೂರ್ತಿ ಪಡೆದ ಸುಧಾಕರನೂ ಜುಲುಮಿಯಿಂದ ತನ್ನ ತಾಯಿಯನ್ನು ಮನೆಗೆ ಕರೆದೊಯ್ದನು. ಮಳೆ ನಿಂತ ಬಳಿಕವೂ ತಟತಟ ಹನಿಯುವುದನ್ನು ಮರಗಳು

ಯಾವ ರೀತಿ ಮುಂದುವರೆಸುವವೋ ಹಾಗೆಯೇ ಆ ಎರಡೂ ಮನೆಗಳಿಂದ ಅವರಿಬ್ಬರು ಇಡೀ ಓಣಿ ಆಲಿಸುವಂತೆ ವಟಗುಟ್ಟುತ್ತಿದ್ದುದು ನಿರಂತರವಾಗಿ ಮುಂದುವರೆಯಿತು.

ಅವರ ನಿರ್ಗಮನದ ಬಳಿಕ ಅವರಿಬ್ಬರೂ ಸಮಾಧನದ ಉಸಿರುಗಳನ್ನು ಬಿಟ್ಟರು, ಮದುವೆಯಾಗಬಾರದಿತ್ತೆಂದು ಒಬ್ಬರೂ, ಸಂಸಾರ ಸಾಗರದಲ್ಲಿ ಈಜಬೇಕು ಇದ್ದು ಜೈಸಬೇಕೆಂದು ಇನ್ನೊಬ್ಬರು ಪರಸ್ಪರ ಚರ್ಚಿಸಿದರು, ತಮ್ಮ ನಿಲುವಂಗಿಗಳಿಗಿದ್ದ ಜೇಬುಗಳನ್ನು ಸ್ಪರ್ಶಿಸಿ ಮರ್ಧಿಸಿ ರೋಮಾಂಚನಗೊಂಡರು, ಈ ಕೂಡಲೆ ಚಿಲುಮೆ ತೆಗೆದು ಒಂದೆರಡು ಧಮ್ಮೆಳೆದರೆ ಹೇಗೆ ಎಂದು ಮನಸ್ಸಿನಲ್ಲಿ ಲೆಕ್ಕ ಹಾಕಿದರು, ಬಳಿಕ ತಮ್ಮೆರಡೂ ಕೈಗಳನ್ನು ಜಠರ ಭಾಗದಲ್ಲಿರಿಸಿಕೊಂಡು ನನ್ನ ಕಡೆ ಅಪಾದಮಸ್ತಕ ನೋಡಿ ತಮ್ಮ ತುಟಿಗಳ ನಡುವೆ ಅಲೌಕಿಕವೂ ವಿಲಕ್ಷಣವೂ ಅಪಾಯಕಾರಿಯೂ ಆದ ನಗೆಯನ್ನು ಸಾಕ್ಷಾತ್ಕರಿಸಿಕೊಂಡರು, ಬಳಿಕ ನನ್ನ ಕಡೆ ಮ್ಲಾನವದನರಾಗಿ ನೋಡಿದರು.

++++

ತಿಪ್ಪಯ್ಯಶೆಟ್ಟಿ ಅಂಗಡಿಯನ್ನು ದಾಟುವಷ್ಟರಲ್ಲಿ ನಾದಿರ ಗೋವಿಂದ ಎದುರಿಗೆ ಬಚ್ಚಲಕಟ್ಟೆ ಸಮೀಪ ಗೋಚರಿಸಿದ, ತನ್ನ ಎಡಗೈಯಲ್ಲಿ ಹಜಾಮತಿಗೆ ಸಂಬಂಧಿಸಿದ ಕಾಷ್ಠದ ಪೆಟ್ಟಿಗೆಯನ್ನೂ ಬಲಗೈಯಲ್ಲಿ ಬಣ್ಣಬಣ್ಣದ ಕಾಗದಗಳ ಸುರುಳಿಯನ್ನೂ ಹಿಡಿದುಕೊಂಡಿದ್ದ. ಹಜಾಮನಾದ ತಾನು ಎದುರಾದರೆ ಮುಖ್ಯವಾಗಿ ಮೂಲಿಮನಿ ಗೌಡರು ಮಂಗಳಕರವೆಂದು ಭಾವಿಸುವರೋ ಅಮಂಗಳಕರವೆಂದು ಭಾವಿಸುವರೋ ಎಂದು ಊಹಿಸುತ್ತ ನಿಂತಲ್ಲಿಯೇ ನಿಂತು ಯೋಚಿಸುತ್ತಿರುವನಂತೆ ಕಂಡುಬಂದ, ಹಿಂದಕ್ಕೆ ತಿರುಗಿ ಗಾಣಿಗರ ಕ್ರಿಷ್ಟಪ್ಪನ ಮುಂದೆ ಇದ್ದ ಹಾದಿ ಹಿಡಿಯಲಿದ್ದನೇನೋ, ಆದರೆ ಅಸಂಖ್ಯಾತ ರಾಸುಗಳು ಸಾಲಗುಂದಿ ಗೌಡರ ಮನೆಗಭಿಮುಖವಾಗಿ ಬರುತ್ತಿದ್ದವು. ಅವುಗಳಲ್ಲಿದ್ದ ಕೆಲವು ದೊಡ್ಡ ಕೋಡಿನ ಎಮ್ಮೆಗಳು ಗೌಡರನ್ನು ನೋಡಿದೊಡನೆ ತುರಿಸಿಕೊಳ್ಳುವ ಸಲುವಾಗಿ ಅವರ ಎದೆಯ ಸಮಕ್ಷಮಕ್ಕೆ ನಿಂತು ಸ್ಪರ್ಶವನ್ನು ಆಪೇಕ್ಷಿಸಿದವು, ಅವುಗಳ ಮೈಮೇಲೆ ಗೌಡರು ಕೈಯಾಡಿಸುತ್ತ ಗೌರೀ ಗಂಗೆ ಎಂದು ಅಪ್ಯಾಯತೆಯಿಂದ ಸೌಖ್ಯ ವಿಚಾರಿಸಿ ಬೀಳ್ಕೊಟ್ಟರು. ಆ ಬಳಿಕ ಗೋವಿಂದ ಅಂಜುತ್ತ ಅಳುಕುತ್ತ ಅವರೆದುರಿದುರಿಗೆ ಹಾಯುವುದು ಅನಿವಾರ್ಯವಾಯಿತು. ಏನನ್ನೋ ನುಡಿಯಲಿದ್ದ ಗೌಡರನ್ನು ಅಪಾದಮಸ್ತಕ ದಿಟ್ಟಿಸಿದ ನಾದಿರನು "ಗಡ್ಡ ಮಾಡಿಸಿಕೊಳ್ಳದೆ ವಾರಾಯ್ತು ಗೌಡ, ನಿಮ್ಮಂಥೋರೆ ಬೋಧ ತಗೊಂಡರೆ ನಮ್ಮಂಥ ಹಜಾಮರು ಹೊಟ್ಟೆ ಹೊರೆಯೋದು ಹೆಂಗೆ!" ಎಂದು ಕೇಳಿದ, ಅದಕ್ಕೆ ಪ್ರತಿಯಾಗಿ ಗೌಡರು ಏನ್ಲೇ ಭೋಸೂಡ್ಕೆ ಎನ್ನಲಿದ್ದವರು ಒಡನೆಯೇ ನಾಲಗೆಯ ಮೇಲೆ ಹತೋಟಿ ಸಾಧಿಸಿದರು, "ಜಾತ್ರೆ ಮುಗಿದಿದೆ, ಗಡ್ಡ ಮಾಡಿಸಿಕೊಂಡರೇನು ಬಿಟ್ಟರೇನು ಗೋವಿಂದ, ಅದಿರಲಿ ಆಂಜನೇಯಸ್ವಾಮಿ ದರ್ಶನ ಪಡೀಲಿಕ್ಕೆ ತೋಪಿಗೆ ಹೊರಟೀವಿ, ನೀನೂ ಬರೊಲ್ವೇನು!" ಎಂದು ಕೇಳಿದರು. ಅದಕ್ಕೆ ಪ್ರತಿಯಾಗಿ ನಾದಿರನು "ಅಲ್ಲಿಂದಲೇ ಬರ್ತಿದ್ದೀನಿ ಧಣಿ, ನಾಲ್ಕು ಕಣ್ಣು ಸಾಲವು ಆ ಸ್ವಾಮೀನ ನೋಡಲಿಕ್ಕೆ! ಏನ್ ಚಿನ್ನಾಟ ಏನ್ ಹುಡುಗಾಟ ಆ ಸ್ವಾಮೀದು!" ಎಂದು ಹೇಳಿದಾದ ಬಳಿಕ ನನ್ನ ಕಡೆ ತಿರುಗಿ "ಅಂಥ ತಮ್ಮನ್ನ ಪಡಿದೀರೋ ನೀವೇ ಪುಣ್ಯವಂತರು ಸಾರ್" ಎಂದು ಕಣ್ಣು ದಣಿಯೆ ನೋಡಿದನು.

ಚೇತರಿಸಿಕೊಳ್ಳುವಷ್ಟರಲ್ಲಿ ತಾನೇ ಉತ್ಸಾಹವನ್ನು ಆವಹಿಸಿಕೊಂಡು, "ಎರಡು ದಿನಕ್ಕೊಮ್ಮೊಮ್ಮೆ ಜಲಂಧರಣ್ಣನ ಸೇವಿಂಗನ ನಾನೇ ಮಾಡೋದು ಸಾರ್, ಅವಯ್ಯನದೊಂದೇ

ಅಲ್ಲದೆ ನಾಟಕ ಕಂಪನಿಯ ಎಲ್ಲರೂ ನನ್ನ ಗಿರಾಕಿಗಳೆ, ನಾಟಕ ಕಂಪನಿ ಬಂದಲಾಗಾಯ್ತು ಹೆಂಡರು ಮಕ್ಕಳೆಲ್ಲ ಸುಖವಾಗಿದ್ದೀವಿ, ಎಲ್ಲಾ ಸ್ರೀಸೈಲಮಲ್ಲಿಕಾರ್ಜುನಸ್ವಾಮಿ ದಯೆ, ಇನ್ನೊಂದು ವಿಷಯ, ನನ್ನ ಮಗ ಎಂಟೇಶೀನೂ ಹೇಮರೆಡ್ಡಿ ಮಲ್ಲಮ್ಮ ನಾಟಕದಲ್ಲಿ ಸಣ್ಣಪುಟ್ಟ ಪಾರ್ಟುಗಳನ್ನು ಮಾಡ್ತಿದ್ದಾನೆ, ಅವನನ್ನ ಜಲಂಧರಣ್ಣನ ಕೈಗೊಪ್ಪಿಸಿಬಿಡ್ತೀನಿ ಸಾರ್, ಅವಯ್ಯ ಹಾಲಿನಲ್ಲಾದ್ರೂ ಹಾಕಲಿ, ನೀರಿನಲ್ಲಾದ್ರೂ ಹಾಕಲಿ" ಎಂದು ಹೇಳಿದ, ಅದೂ ಒಂದೇ ಉಸಿರಿನಲ್ಲಿ, ಅದೂ ನಮ್ಮ ಯಾರೊಬ್ಬರ ಸಲಹೆಯನ್ನು ನಿರೀಕ್ಷಿಸದೆ. ಮತ್ತದೇ ಅವಸರದಲ್ಲಿ ನಾಟಕದ ಶತದಿನೋತ್ಸವಕ್ಕೆ ಸಂಬಂಧಿಸಿದ ಕರಪತ್ರಗಳನ್ನು ವಿತರಿಸಿದ, ಬಳಿಕ ಎರಡು ಹೆಜ್ಜೆ ಹಿಮ್ಮುಖವಾಗಿ ನಡೆದು ಸಾಲಗುಂದಿ ಗೌಡರ ಮನೆಯನ್ನು ತಲುಪಿದನೋ ಇಲ್ಲವೋ!

ಹೆಜ್ಜೆ ಹಾಕುತ್ತಿರುವಾಗಲೇ ಕುತೂಹಲ ಗರಿಗೆದರಿತು, ನನ್ನ ಹೊರತಾಗಿ ಅವರಿಬ್ಬರಿಗೆ ಕುತೂಹಲವಾಗಲೀ ಸಂಭ್ರಮವಾಗಲೀ ಇರಲಿಲ್ಲ, ಗೌಡರು ಏನನ್ನೋ ನುಡಿಯುವ ಸಲುವಾಗಿ ಶಬ್ದಗಳಿಗೆ ತಡಕಾಡುತ್ತಿದ್ದರೆ ಶೇಷಣ್ಣ ಅದನ್ನು ತನ್ನ ಮುಷ್ಟಿಯಲ್ಲಿ ಮುದುಡಿ ಹಿಡಿದುಕೊಂಡಿದ್ದನು. ನಡಿಗೆಯನ್ನು ಮಂದ್ರಗೊಳಿಸಿ ಕಣ್ಣುಗಳಿಗಡ್ಡ ಹಿಡಿದೆ.ಅದೇ ಮಾಮೂಲಿ ಒಕ್ಕಣಿಕೆ, ಕರಪತ್ರದ ಬಲ ಪಾರ್ಶ್ವದಲ್ಲಿ ಹೆಬ್ಬಟಂ ಗೌಡರ ಹಳೆ ಭಾವಚಿತ್ರವಿದ್ದರೆ ಎಡಪಾರ್ಶ್ವದಲ್ಲಿ ಅವರ ಮಗನ ಭಾವಚಿತ್ರವಿತ್ತು, ನಡೆಗೆಯನ್ನು ಸ್ಥಗಿತಗೊಳಿಸಿ ತೀಕ್ಷ್ಣವಾಗಿ ನೋಡಿದೆ, ತುಂಬು ಮುಖ, ದಟ್ಟಗೂದಲ ತಲೆ, ಹೊಳೆವ ಕಣ್ಣುಗಳು, ನೀಳನಾಸಿಕ, ಫ್ರೆಂಚ್‌ಕಟ್ ಮೀಸೆ. ಒಟ್ಟಾರೆ ಆಕರ್ಷಕ ವ್ಯಕ್ತಿತ್ವ ಸೂರ್ಯಪ್ರತಾಪರೆಡ್ಡಿಯವರದ್ದು, ಫೋಟೋಜೆನಿಕ್ ಫೇಸ್ ಸಹ, ಭಾವಚಿತ್ರ ಹಳೆಯದೋ, ತೀರಾ ಇತ್ತೀಚಿನದೋ! ಇಕ್ಕೆಲದಲ್ಲಿ ನಡೆಯುತ್ತಿದ್ದವರನ್ನು ಕೇಳಬೇಕೆಂದರೆ ಅವರು ಲೌಕಿಕವಾಗಿ ಆಸಕ್ತಿ ಕಳೆದುಕೊಂಡಂತಿದ್ದರು. ಆತನ ಕುರಿತಂತೆ ಏನೇನೋ ಊಹಿಸಿಕೊಳ್ಳುತ್ತ ಕರಪತ್ರವನ್ನು ಗೌರವಪೂರ್ವಕವಾಗಿ ಮಡಚಿ ಜೇಬಿನಲ್ಲಿರಿಸಿಕೊಂಡೆ.

ಅಗೋ ಅಲ್ಲಿ ಕಣ್ಣಳತೆಯಲ್ಲಿರುವ ಲಚುಮವ್ವನ ತೋಪು ನನಗೆ ತೀರಾ ಪರಿಚಿತವೂ ಅಲ್ಲ, ಅಪರಿಚಿತವೂ ಅಲ್ಲ. ಅದು ತರಾವರಿ ಔಷಧೀಯ ಸಸ್ಯಗಳ ತವರು ಬೇರೆ, ವಿವಿಧ ರೀತಿಯ ಪಕ್ಷಿಗಳು ಅಲ್ಲಿಗೆ ವಲಸೆ ಬಂದು ತಮ್ಮ ಸಂತಾನ ವೃದ್ಧಿಸಿಕೊಂಡು ಪುನಃ ಅಲ್ಲಿಂದ ಹೊರಡುತ್ತಿದ್ದುದೂ ಉಂಟು. ಇಂಥ ಹಲವು ಕಾರಣಗಳಿಂದಾಗಿ ಅದು ಶೈಕ್ಷಣಿಕ ಪಠ್ಯೇತರ ಚಟುವಟಿಕೆಗಳಿಗೆ ಹೇಳಿ ಮಾಡಿಸಿದಂತಿರುವುದು. ಎರಡು ಮೂರು ವರ್ಷಗಳ ಹಿಂದೆ ಮಕ್ಕಳ ಸಂಗಡ ಅಲ್ಲಿಗೆ ಲಘುಪ್ರವಾಸ ಕೈಗೊಂಡಿದ್ದೆ, ವರ್ಷಕ್ಕೆರಡು ಸಲ ಹೋಗುವ ಇರಾದೆ ಇತ್ತು, ಆದರೆ ಸಾಧುಗಳ ಉಪಟಳವೇನೋ ಸರಿ, ಆದರೆ ಗಾಂಜಾ ಮದ್ಯಸೇವನೆಗಳಂಥ ಕಾನೂನು ಬಾಹಿರ ಚಟುವಟಿಕೆಗಳನ್ನು ಹೇಗೆ ಸಹಿಸಿಕೊಳ್ಳುವುದು! ಶಾಲಾ ಮಕ್ಕಳಲ್ಲಿ ಕೆಲವರು ಅದರ ಪ್ರಭಾವಕ್ಕೆ ಒಳಗಾಗಿ ಕ್ರಮೇಣ ಅದರಿಂದ ಬಿಡುಗಡೆಗೊಂಡಿರುವುದೂ ಉಂಟು. ಅದೂ ಅಲ್ಲದೆ ಅಲ್ಪಸ್ವಲ್ಪ ಪರಿಚಯವಾದುದೇ ತಡ ಸಾಧುಗಳು ಸುಂಕದ ಅಧಿಕಾರಿಗಳ ರೀತಿಯಲ್ಲಿ ನನ್ನಂಥವರನ್ನು ಎಲ್ಲಂದರಲ್ಲಿ ನಿಲ್ಲಿಸಿ ಒಂದೆರಡು ರೂಪಾಯಿಗಳ ಸಲುವಾಗಿ ಪೀಡಿಸುತ್ತಿದ್ದುದೂ ಉಂಟು. ಒಂದೆರಡು ಸಲ ಕೊಟ್ಟು ಬಳಿಕ ಕೆಲವರ ನಿಷ್ಠುರ ಕಟ್ಟಿಕೊಂಡಿರುವುದೂ ಉಂಟು. ಇಂಥ ಕೆಲವು ಕಾರಣಗಳಿಂದಾಗಿ ಸಾಧುಗಳನ್ನು ನೋಡುವುದು ಮಾತನಾಡಿಸುವುದು ಒತ್ತಟ್ಟಿಗಿರಲಿ, ತೋಪಿರುವ ದಿಕ್ಕಿಗೆ ಮುಖ ಮಾಡಿ ಮಲಗುವುದಕ್ಕೂ ಹೋಗಿರಲಿಲ್ಲ. ಇತ್ತೀಚಿನ ದಿವಸಗಳಲ್ಲಿ ಅದಕ್ಕೆ ತಾರಾಮೌಲ್ಯ ಪ್ರಾಪ್ತವಾಗಿರುವುದು ಪರಶುರಾಮ, ಶರಭ ಸಾಧುಗಳ ಛದ್ಮವೇಷ ಧರಿಸಿ

ಅಲ್ಲಿಗೆ ಸೇರಿದಂದಿನಿಂದ, ತಾರಾಮೌಲ್ಯ ದ್ವಿಗುಣಗೊಂಡಿರುವುದು ಯಾವುದೋ ಒಂದು ಮರ್ಕಟ ಆಂಜನೇಯ ಎಂಬಭಿದಾನದಿಂದ ಅಲ್ಲಿಗೆ ಪ್ರವೇಶಿಸಿರುವ ಕಾರಣದಿಂದ. ತಿರುಪತಿ ಶ್ರೀಶೈಲ ಪೆನ್ನೋಬಳ ಪೆದ್ದೋಬಳ ಕಡೆ ಎಲ್ಲಂದರಲ್ಲಿ ಪುಷ್ಕಳವಾಗಿರುವ ಮಂಗಗಳನ್ನು ವಾಗಿಲಿ ಯಾಕೆ ಆಕರ್ಷಿಸಲಿಲ್ಲವೋ! ಆದರೆ ಯಾವುದೋ ಒಂದು ಮಂಗ ತೋಪಿನಲ್ಲಿ ಎಂಟ್ರಿ ಕೊಟ್ಟಾಗಿರುವುದು! ಅವರಿವರು ಹೇಳುತ್ತಿರುವುದು ನೋಡಿದರೆ ಅದು ವನ್ಯಸಹಜ ಮಂಗವಾಗಿರಲಾರದು, ಪ್ರಾಯಶಃ ಯಾರೋ ಸಾಕಿರಬಹುದಾದ, ಪಳಗಿಸಿರಬಹುದಾದ, ದಾರಿ ತಪ್ಪಿ ಬಂದಿರಬಹುದಾದ ಮಂಗವಾಗಿರಲೂಬಹುದು. ಅಕಸ್ಮಾತ್ ಅದೇನಾದರೂ ಶರಭ ಹಿಂದೆ ಎಂದೋ ಸಾಕಿರಬಹುದಾದ ಮಂಗವಾಗಿದ್ದರೆ! ಎಂದು ಮುಂತಾಗಿ ಊಹಿಸಲಾರಂಭಿಸದೆ ಇರಲಿಲ್ಲ ನಾನು. ಅದೂ ಅಲ್ಲದೆ ನಾನು ಮಂಗಗಳನ್ನು ಖಿದ್ದ ನೋಡದೆ ಹಲವು ವರ್ಷಗಳೇ ಸಂದಿರುವವು ಬೇರೆ, ನೋಡುವ ಕುತೂಹಲ ಗರಿಗೆದರಿತು ನನ್ನಲ್ಲಿ.

ದಾರಿ ಉದ್ದಕ್ಕೂ ಬಂದು ಹೋಗುತ್ತಿರುವವರ ಸಂಖ್ಯೆ ಕಡಿಮೆ ಇರಲಿಲ್ಲ, ಅವರಲ್ಲಿ ವಾಗಿಲಿಯ ಗಣ್ಯ ವ್ಯಕ್ತಿಗಳಲ್ಲಿ ಮಹಿಳೆಯರೂ ಕಾಣಿಸಿಕೊಂಡರು, ಅದೂ ತಮ್ಮ ತಮ್ಮ ಕೈಯಲ್ಲಿ ಪೂಜಾ ಸಾಮಾಗ್ರಿಗಳೊಂದಿಗೆ. ನೋಡಿದ ಒಡನಾಡಿದ ತಮ್ಮ ಅನುಭವಗಳನ್ನು ಸಹವ್ಯಕ್ತಿಗಳೊಂದಿಗೆ ವಿನಿಮಯ ಮಾಡಿಕೊಳ್ಳುತ್ತಿರುವರು ಬೇರೆ. ಮಾತುಕತೆಯನ್ನು ಅವಲೋಕಿಸಿದರೆ ಅವರು ಅದಕ್ಕೆ ದೈವಿಕ ಸ್ಥಾನಮಾನ ನೀಡಿದಂತಿರುವುದು, ಅದರ ಚೇಷ್ಟೆಗಳಿಗೆ ಅನುಭಾವದ ರೂಪ ಕೊಟ್ಟಂತಿರುವುದು, ತ್ರೇತಾಯುಗದಲ್ಲಿ ಶರಭ ವಾಲಿ ಸುಗ್ರೀವರೊಂದಿಗೆ ಒಡನಾಡಿರಬಹುದೆಂದು ಲೆಕ್ಕ ಹಾಕಿದಂತಿರುವುದು. ಅವರ ಪೈಕಿ ಕೆಲವರು ನನ್ನನ್ನು ನಿಲ್ಲಿಸಿ ಅಪಾದಮಸ್ತಕ ದಿಟ್ಟಿಸುವುದು, ಅಲೌಕಿಕ ರೀತಿಯಲ್ಲಿ ತುಲನೆ ನಡೆಸುವುದು, ಕಂಪಿಸುವ ಕೈಗಳಿಂದ ಸ್ಪರ್ಶಿಸುವುದು, ಅಂತೂ ಜ್ಞಾನ ಪ್ರಾಪ್ತವಾಗಿರುವಂತಿರುವುದೆಂದು ಭಾವಿಸುವುದು! ಈ ಎಲ್ಲಾ ಭಾವನೆಗಳು ಅವರಲ್ಲಿದ್ದವೋ! ಅಥವಾ ನನ್ನ ಸೃಜನಶೀಲಾತ್ಮಕ ಕಲ್ಪನೆಯೋ! ಇದೂ ಒಂದು ರೋಚಕ ಅನುಭವವೇ ಸರಿ.

ತೋಪನ್ನು ಬಳಸಿ ಸಾಗುತ್ತಿದ್ದ ಹಳ್ಳದ ಕೊರಕಲನ್ನು ಸಮೀಪಿಸಿದೊಡನೆ ಮೂಲಿಮನಿ ಗೌಡರು ಪೌರಾಣಿಕ ಪ್ರಜ್ಞೆಯನ್ನು ಆವಹಿಸಿಕೊಂಡರು. ಸಿದ್ಧರೂಢರು ಅಗೋ ಅಲ್ಲಿ ಸ್ನಾನ ಮಾಡುತ್ತಿದ್ದರೆಂದೂ, ಅಗೋ ಆ ಬಂಡೆಗಲ್ಲಿನ ಮೇಲೆ ವಿರುಪಣ್ಣತಾತನವರು ತಪಸ್ಸು ಮಾಡುತ್ತ ನೇರವಾಗಿ ಸ್ವರ್ಗದ ಕಡೆ ಸದೇಹದೊಡನೆ ಧಾವಿಸಿದರೆಂದೂ! ತನ್ನ ಪತ್ನಿ ಸೀತಾಮಾತೆಯ ದಾಹ ತಣಿಸುವ ಸಲುವಾಗಿ ಶ್ರೀರಾಮಚಂದ್ರನು ಬಾಣ ಪ್ರಯೋಗಿಸಿ ನೀರ ಸೆಲೆ ಸೃಷ್ಟಿಸಿದನೆಂದೂ! ಖಾಂಡವ ವನವನ್ನು ದಹಿಸಿದ ಬಳಿಕ ಅರ್ಜುನನು ಶ್ರೀಕೃಷ್ಣನ ಸಲಹೆಯಂತೆ ಸ್ನಾನ ಮಾಡಿದ ಸ್ಥಳ ಅಗೋ ಅದೇ! ಗೌಡರು ಕಟ್ಟುಕತೆಗಳ ವಾರಸುದಾರೇನೋ ಸರಿ, ಆದರೆ ಒಂದಂತೂ ನಿಜ, ಅದೆಂದರೆ ತುಂಗಾಭದ್ರೆಗೆ ಅಣೆಕಟ್ಟು ನಿರ್ಮಿಸುವ ಪೂರ್ವದಲ್ಲಿ ಈ ಜಲನಿಧಿ ತುಂಬಿ ಹರಿಯುತ್ತಿತ್ತು, ವಾಗಿಲಿಯ ಸಚರಾಚರದ ದಾಹ ತಣಿಸುತ್ತಿತ್ತು, ಅವರೆಲ್ಲರ ಮೈಕೊಳೆಯನ್ನು ತೊಳೆಯುತ್ತಿತ್ತು, ಧಾನ್ಯವನ್ನು ತಿನ್ನುವ ಆಹಾರವನ್ನಾಗಿ ಪರಿವರ್ತಿಸುತ್ತಿತ್ತು, ಕಳೆದ ಎರಡು ವರ್ಷಗಳ ಹಿಂದಿನವರೆಗೂ ಹಳ್ಳದಲ್ಲಿ ಜಲಕ್ಕೆ ಬರವಿರಲಿಲ್ಲ, ಅಲ್ಲಲ್ಲಿ ಎರಡು ಮೂರು ತೊರೆಗಳಿದ್ದವು, ಆದರೆ ಈಗ ಇರುವುದು ಒಂದೆರಡು ಕವಲುಗಳು ಮಾತ್ರ. ಸಾರ್ವಜನಿಕರು ತನ್ನ ಮೇಲಿಟ್ಟಿರುವ ನಂಬಿಕೆಯನ್ನು ಹಳ್ಳ

ಹುಸಿಗೊಳಿಸಿಲ್ಲ, ಹಬ್ಬಹರಿದಿವಸಗಳಲ್ಲಿ ಬೇಳೆ ಹುರುಳಿ ಬೇಯಿಸುವ ಸಲುವಾಗಿ ವಾಗಿಲಿಯ ಕೆಲವರು ಹಳ್ಳದ ನೀರನ್ನೇ ಬಳಸುತ್ತಿರುವರು, ಹುಚ್ಚಾರೆಡ್ಡಿ ಅಯ್ಯಾಳಿ ಕೆಳಮನಿ ಶಿವಾರೆಡ್ಡಿಯರಂಥ ವಾಗಿಲಿಯ ಪುರಾತನರು ಸೂರ್ಯೋದಯಕ್ಕೂ ಮೊದಲೇ ಪಾದಯಾತ್ರೆ ಕೈಗೊಳ್ಳುವುದರ ಮೂಲಕ ಹಳ್ಳವನ್ನು ತಲುಪುವುದು, ದಂಡೆ ಮೇಲೆ ಶೌಚಕಾರ್ಯ ಮುಗಿಸುವುದು, ಸೋಪಿನ ಸಹಾಯವಿಲ್ಲದೆ ಜಳಕ ಸಂಧ್ಯಾವಂದನೆಗಳನ್ನು ಮುಗಿಸುವುದು, ತೋಪನ್ನು ಪ್ರವೇಶಿಸಿ ಸಿದ್ದಾರೂಢರ ಗದ್ದುಗೆಗೆ ಸಾಸ್ಟಾಂಗಪ್ರಣಾಮ ಸಲ್ಲಿಸುವುದು, ವ್ಯಾಧಿಪೀಡಿತರಿಗೆ ಆರೋಗ್ಯಪ್ರಜ್ಞೆ ಉಳ್ಳವರಿಗೆ ಹಳ್ಳದ ನೀರನ್ನೇ ಬಳಸಿ ಆರೋಗ್ಯ ವೃದ್ಧಿಸಿಕೊಳ್ಳಿರೆಂದು ಪ್ರಚಾರ ಮಾಡುವುದು ನಡೆದೇ ಇರುವುದು. ಯಾರು ಏನೇ ಹೇಳಲಿ ಹೇಳದಿರಲಿ ತೋಪನ್ನು ಬಳಸಿ ಹರಿಯುತ್ತಿರುವ ಹಳ್ಳ ಇನ್ನೂ ಜೀವಂತವಾಗಿರುವುದು ವಿಶೇಷವೇ ಸರಿ.

ಹಳ್ಳ ಸಮೀಪಿಸಿದೊಡನೆ ಶೇಷಣ್ಣ ಜಲಬಾಧೆ ತೀರಿಸಿಕೊಂಡು ಬಂದರೆ ಮೂಲಿಮನಿ ಗೌಡರು ದೋತರವನ್ನು ಮೊಣಕಾಲ ಮೇಲಿನವರೆಗೆ ಎತ್ತಿ ಕಟ್ಟಿದ್ದೂ ಅಲ್ಲದೆ ತಮ್ಮ ನೀಳಕಾಯವನ್ನು ಎಷ್ಟು ಸಾಧ್ಯವೋ ಅಷ್ಟು ಭಾಗಿಸಿ ಮುಖವನ್ನು ಕೈಗಳ ಸಹಾಯದಿಂದ ಗಸಗಸ ಉಜ್ಜಿ ತೊಳೆದರು, ಬಲಗೈಯ ಮುಂಭಾಗವನ್ನು ಗಂಟಲಿಗೆ ತೂರಿಸಿ ಕಂಠದಲ್ಲಿ ಶೇಖರಣೆಗೊಂಡಿದ್ದ ಕಫವನ್ನು ವಿಶಿಷ್ಟ ರೀತಿಯಲ್ಲಿ ಸದ್ದು ಮಾಡುತ್ತ ಕಕ್ಕಿ ಶಕ್ತಿಮೀರಿ ದೂರಕ್ಕೆ ಉಗುಳಿ ಪುನಶ್ಚೇತನಗೊಂಡರು. ಹೀಗೆ ಶುಚಿರ್ಭೂತರಾದ ತಾವಿಬ್ಬರೂ ಸೂರ್ಯನ ಕಡೆ ತಲೆ ನಿಗುರಿಸಿ ತಮ್ಮೆರಡೂ ಕೈಗಳನ್ನು ಊರ್ಧ್ವಮುಖವಾಗಿ ಎತ್ತಿ ಹಿಡಿದು ವಿಶೇಷ ರೀತಿಯಲ್ಲಿ ದೇವಾನುದೇವತೆಗಳ ನಾಮಸ್ಮರಣೆ ಮಾಡಿದರು. ಬಳಿಕ ನಿಶ್ಚಲತೆಯಿಂದಲೂ ಕುತೂಹಲದಿಂದಲೂ ಗಮನಿಸುತ್ತಿದ್ದ ನನ್ನ ಕಡೆ ಒಟ್ಟಿಗೆ ನೋಡಿ ನಿಟ್ಟುಸಿರು ಚೆಲ್ಲಿದರು.

ಚಿಕ್ಕಪುಟ್ಟ ಮೀನುಗಳ ಚಲನವಲನಗಳ ಕಡೆ ಹರಿಯಲು ಹಾತೊರೆಯಲಾರಂಭಿಸಿದ ನೋಟವನ್ನು ಉಪಸಂಹರಿಸಿಕೊಳ್ಳುತ್ತ ಅವರನ್ನು ತಲುಪುವುದಕ್ಕೂ ತೋಪಿನ ಒಡಲೊಳಗಿಂದ ಜಾಗಟೆ ಶಂಖಗಳೇ ಮೊದಲಾದ ವಾದ್ಯಗಳು ಮೊಳಗಲಾರಂಭಿಸುವುದಕ್ಕೂ ಸರಿ ಹೋಯಿತು. ಬೆಳೆಗಿನ ಪೂಜೆಯ ಸಂದರ್ಭದಲ್ಲಿ ತಾವಿಬ್ಬರೂ ಉಪಸ್ಥಿತರಿದ್ದಂಥವರೆ, ಕೇವಲ ಐದಾರು ತೂಗು ಗಂಟೆಗಳು ಮಾತ್ರ ಮೊಳಗಿದ್ದವು, ಆದರೆ ಜಾಗಟೆ ಸಹಿತ ಶಂಖ ಸೇರಿಕೊಂಡಿರುವುದು ಅವರ ಆಶ್ಚರ್ಯಕ್ಕೆ ಕಾರಣವೆನಿಸಿತು. ಅವೆರಡನ್ನು ಯಾರು ಕೊಡುಗೆ ರೂಪದಲ್ಲಿ ನೀಡಿರಬಹುದೆಂದು ಪರಸ್ಪರ ಚರ್ಚಿಸಿದರು. ಅವರು ಪ್ರಸ್ತಾಪಿಸಿದ ಹತ್ತಾರು ಹೆಸರುಗಳ ಪೈಕಿ ಕೆಲವು ನಾಮಫಾಚಕಗಳು ನನಗೂ ಚಿರಪರಿಚಿವಾಗಿದ್ದವು.

++++

ತೋಪು ಹೊರಗಡೆ ನೋಡುವುದಕ್ಕೆ ಕಾಡಿನಂತಿತ್ತು, ಅದಕ್ಕೆ ಕಾರಣ ಸಾಗವಾನಿ ಆಸು ತುಗ್ಗಲಿ ಹುಣುಸೆ ಬೇವು ಆಲವೇ ಮೊದಲಾದ ವೃಕ್ಷಗಳು ಎತ್ತರಕ್ಕೆ ದಟ್ಟವಾಗಿ ಬೆಳೆದಿದ್ದವು. ಅಂಟಿಕೊಂಡಂತೆ ನೆಲದ ಮರೆಯಲ್ಲಿ ಪ್ರವಹಿಸುತ್ತಿದ್ದ ಹಳ್ಳ ಅದಕ್ಕೆ ಕಾರಣ, ಪ್ರತಿಯೊಂದೂ ವೃಕ್ಷದ ಬುಡದಲ್ಲೂ ಗತಿಸಿದ ಸಾಧುಗಳ ಸಮಾಧಿಗಳಿದ್ದುದೂ ಇನ್ನೊಂದು ಕಾರಣ, ಪ್ರತಿಯೊಂದೂ ಮರದಲ್ಲೂ ವಾಗಿಲಿಯಲ್ಲಿ ಸತ್ತವರ ಪ್ರೇತಾತ್ಮಗಳು ನಿವಸಿಸುತ್ತಿವೆ ಎನ್ನುವುದೂ ಮತ್ತೊಂದು ಕಾರಣ. ಇಂಥ ಹಲವು ಕಾರಣಗಳಿಂದಾಗಿ ಮರಗಟುಕರು ಅವುಗಳ ಬಳಿ ಸುಳಿಯುವುದಾಗಲೀ, ಅವುಗಳ ಸೊಪ್ಪಸೆದೆಯನ್ನು ತರಿದು ದನಕರುಗಳಿಗೆ ಉಣ್ಣಿಸುವುದಾಗಲೀ,

ಸೌದೆ ಸಂಗ್ರಹಕಾರರು ಒಣಕಟ್ಟಿಗೆ ಆಯುವ ಸಲುವಾಗಿ ಅತ್ತ ಸುಳಿಯುವುದಾಗಲೀ ಸಾಧ್ಯವಿರಲೇ ಇಲ್ಲ. ತರಾವರಿ ಖಗಚರಗಳು ಮಾತ್ರ ಯಾವುದೇ ವದಂತಿಗಳಿಗೆ ಸೊಪ್ಪು ಹಾಕದೆ ತಮ್ಮ ಸಂಸಾರ ಸಮೇತ ಅಲ್ಲಿನ ಪ್ರತಿಯೊಂದು ಗಿಡಗಂಟೆಗಳ ತುಂಬೆಲ್ಲಾ ನಿರ್ಭೀತಿಯಿಂದ ವಾಸಿಸುತ್ತ ಅಲ್ಲಿನ ವಾತಾವರಣಕ್ಕೆ ತಾಯ್ತನದ ಸೊಬಗನ್ನು ಕರುಣಿಸಿದ್ದವು. ಅವುಗಳ ನಡುವೆ ಹಾದಿಗಳಿಗೆ ಬರವಿರದಿದ್ದರೂ ಕಣ್ಣುಮುಚ್ಚಿಕೊಂಡು ನಡೆಯುವುದು ದುಸ್ತರವಾಗಿತ್ತು, ಬಗ್ಗಬೇಕಾದ ಕಡೆ ತಲೆ ತಗ್ಗಿಸಿ ಎತ್ತಬೇಕಾದ ತಲೆ ಎತ್ತಿ ನಡೆಯುವುದು ಅನಿವಾರ್ಯವಾಗಿತ್ತು. ಅವರಿಬ್ಬರು ಸಲೀಸಾಗಿ ನಡೆದಷ್ಟು ಸುಲಭವಿರಲಿಲ್ಲ ನಾನು ನಡೆಯುವುದು. ಅಂತೂ ಹೇಗೋ ನಡೆದು ತೋಪನ್ನು ಪ್ರವೇಶಿಸಿದೆವು. ಪ್ರವೇಶಿಸಿದೊಡನೆ ಒಂದು ಕ್ಷಣ ಅವಾಕ್ಕಾದೆನು, ಕಾರಣ ತೋಪಿನ ಒಳ ಆವರಣ ದಟ್ಟವಾಗಿರದೆ ಹೆಚ್ಚು ಆಹ್ಲಾದಕರವಾಗಿತ್ತು. ಅಲ್ಲಲ್ಲಿ ನನಗೆ ಚಿರಪರಿಚಿತವಾದ ಔಷಧೀಯ ಗಿಡಗಂಟೆಗಳು ಅಚ್ಚುಕಟ್ಟಾಗಿ ಬೆಳೆದಿದ್ದವು. ಕಣಗಿಲೆ ದಾಸವಾಳ ಮಲ್ಲಿಗೆ ಜಾಜಿಯಂಥ ಹೂವಿನ ಗಿಡಪೊದೆಗಳೊಂದೇ ಅಲ್ಲದೆ ಕಾಮಕಸ್ತೂರಿ ತುಳಸಿಯಂಥ ಔಷಧೀಯ ಸಸ್ಯಗಳ ಆರೋಗ್ಯಕರ ಪರಿಮಳ ನಾಸಿಕಾಗ್ರಗಳನ್ನು ಪರವಶಗೊಳಿಸುವಂತಿತ್ತು, ಅವುಇವುಗಳೊಂದೇ ಅಲ್ಲದೆ ಮೊಲ ಜಿಂಕೆಗಳಂಥ ವನ್ಯಜಾತಿಯ ಪ್ರಾಣಿಗಳೊಂದಿಗೆ ಕೆಲವು ಶುನಕಗಳು ಅನ್ಯೋನ್ಯತೆಯಿಂದ ಸಂಚರಿಸುತ್ತಿದ್ದವು. ಅವುಇವುಗಳೊಂದೇ ಅಲ್ಲದೆ ಕೆಲವು ನವಿಲುಗಳು ಸಹ ವಾಸಿಸುತ್ತಿದ್ದವು.

ಅವುಗಳನ್ನೆಲ್ಲ ಅಚಾನಕ್ಕಾಗಿ ನೋಡಿದೊಡನೆ ನನ್ನ ಮನಸ್ಸು ತಪ್ಪಿತಸ್ಥ ಭಾವನೆಯಿಂದ ನರಳಲಾರಂಭಿಸಿತು. ಅದಕ್ಕೆ ಕಾರಣ ಪೂರ್ವಾಗ್ರಹ ಪೀಡಿತ ಕಾರಣಗಳಿಂದಾಗಿ ನಾನು ಅಲ್ಲಿಗೆ ಬಂದಿರುವುದು ಬರೋಬ್ಬರಿ ಎರಡು ಮೂರು ವರ್ಷಗಳ ಬಳಿಕ. ಇಷ್ಟೆಲ್ಲಾ ನೈಸರ್ಗಿಕವೂ ಜೀವಂತವೂ ಆದ ಅಲೌಕಿಕ ಪ್ರಾಕೃತಿಕ ವಿನ್ಯಾಸವಿರುವುದಾಗಿ ತಿಳಿದಿದ್ದಲ್ಲಿ ನಾನು ವಾರಕ್ಕೆ ಎರಡು ಮೂರು ಬಂದು ತುಸು ಹೊತ್ತು ವಿಶ್ರಮಿಸಿ ವರ್ತಮಾನದ ಬೇಗುದಿಗಳಿಂದ ಸಾಂತ್ವನ ಪಡೆಯುತ್ತಿದ್ದೆನೇನೊ! ಇರಲಿ, ಕಾಲ ಇನ್ನೂ ಮಿಂಚಿಲ್ಲ, ಇನ್ನು ಮೇಲಾದರೂ ಆಗಾಗ್ಗೆ ಬಂದು ಹೋಗಬೇಕೆಂದು ನಿರ್ಧರಿಸಿದೆನು. ನನಗಿಂತ ಮೊದಲೇ ಹೋದ ಗೌಡರು ಯಾರಿಗೆ ಏನನ್ನು ಹೇಳಿದರೋ ಏನೋ ಕೆಲವು ಸಾಧುಗಳು ಅಲ್ಲಲ್ಲಿ ನಿಂತು ನನ್ನ ಕಡೆ ಸ್ಥಿತಪ್ರಜ್ಞತೆಯಿಂದ ಗಮನಿಸಲಾರಂಭಿಸಿದರು, ಅವರ ಪೈಕಿ ಕೆಲವರು ಸಮೀಪಿಸಿ ನನ್ನ ಸೌಖ್ಯ ಪರಾಂಬರಿಸತೊಡಗಿದರು. ಅಲ್ಲಲ್ಲಿದ್ದ ಲೌಕಿಕರ ಪೈಕಿ ಕೆಲವರು ತೀರಾ ಪರಿಚಿತರೆಂಬಂತೆ ಸಮೀಪಿಸಿ ನನ್ನ ಕೈಗಳನ್ನು ಕುಲುಕಿ ಹೆಗಲ ಮೇಲೆ ಅಪ್ಯಾಯತೆಯಿಂದ ಕೈಗಳನ್ನಿರಿಸಿ ಎಂಥ ಅದೃಷ್ಟವಂತ ಅಣ್ಣಂದಿರು ನೀವು, ಸರ್ಕಾರಿ ನೌಕರಿಗೆ ರಾಜಿನಾಮೆ ನೀಡಿ ತಮ್ಮನ ಸೇವೆ ಮಾಡುತ್ತಿದ್ದು ಮೋಕ್ಷದ ಹಾದಿಯನ್ನು ಕಂಡುಕೊಳ್ಳಿ, ಹೇಗೋ ನೀವಿನ್ನೂ ಅವಿವಾಹಿತರು ಬೇರೆ ಎಂದು ಬುದ್ಧಿವಾದ ಹೇಳಲಾರಂಭಿಸಿದರು. ನನಗದೆಲ್ಲ ಕಿರಿಕಿರಿ ಎನ್ನಿಸಿದರೂ ತಾಳ್ಮೆಯಿಂದ ಕೇಳಿಸಿಕೊಳ್ಳದೆ ಇರಲಿಲ್ಲ, ಔಪಚಾರಿಕವಾಗಿ ತಲೆ ಅಲ್ಲಾಡಿಸದೆ ಇರಲಿಲ್ಲ, ಸಹಜ ವರ್ತನೆಗಳ ನಡುವೆಯೂ ಬಿಡುವು ಮಾಡಿಕೊಂಡು ಅಲ್ಲಲ್ಲಿ ನಡೆಯುತ್ತಿದ್ದ ಚಟುವಟಿಕೆಗಳನ್ನು ಗಮನಿಸುತ್ತಿರದೆ ಇರಲಿಲ್ಲ. ಮರಗಳ ತಣ್ಣೆಳಲಲ್ಲಿ ಕುಕ್ಕರಗಾಲಲ್ಲಿ, ಅನಾಗರಿಕ ರೀತಿಯಲ್ಲಿ ಕುಕ್ಕರಗಾಲಲ್ಲಿ ಕೂತಿದ್ದ ಕಾಷಾಯಾಂಬರಧಾರಿ ಮತ್ತು ಅರೆನಗ್ನ ಸಾಧುಗಳು ತಮ್ಮೆರಡೂ ಮೊಣಕಾಲುಗಳ ಮೇಲೆ ಮೊಣಕೈಗಳನ್ನಿರಿಸಿ ಎರಡೂ ಮುಷ್ಟಿಗಳಲ್ಲಿ ಚಿಲುಮೆಗಳನ್ನು ಹಿಡಿದು ಸರ್ರಂತ ಎಳೆದುಕೊಂಡು ಕೂಡಲೆ ನಾಸಿಕಾಗ್ರದ ಎರಡೂ ಹೊಳ್ಳೆಗಳಿಂದ ಕಕ್ಕುತ್ತಿದ್ದ

ಹೊಗೆ ದಟ್ಟತೆಯಿಂದ ಹರಡಿ ಕ್ರಮೇಣ ವಾತಾವರಣದಲ್ಲಿ ಲೀನವಾಗುತ್ತಿತ್ತು. ಬಳಿಕ ಅವರು ಕಣ್ಣುಮುಚ್ಚಿ ಜೈಸಾಂಭವೀ ಎಂದು ಉದ್ಗರಿಸಿ ಎಂಜಲಾದ ಚೆಲುಮೆಯನ್ನು ಅಕ್ಕಪಕ್ಕದಲ್ಲಿ ಕಾಯುತ್ತಿದ್ದವರಿಗೆ ವಿತರಿಸುತ್ತಿದ್ದುದು ಇನ್ನೂ ಆಸಕ್ತಿದಾಯಕವಾಗಿತ್ತು. ಹಾಗೆ ಪಡೆಯುತ್ತಿದ್ದವರ ಪೈಕಿ ವೃತ್ತಿಪರ ಧೂಮ್ರಪಾನಿಗಳು ಕಡಿಮೆ ಪ್ರಮಾಣದಲ್ಲಿದ್ದರು, ಅಂಥವರು ಅರ್ಧ ಸೇದಿ ಹೊಗೆ ನೆತ್ತಿಗೆ ಹರಡುತ್ತಿದ್ದ ಪರಿಣಾಮವಾಗಿ ಕೊಕ್ ಕೊಕ್ ಕೆಮ್ಮಿ ಸದ್ದು ಮಾಡುತ್ತಿದ್ದರು. ಇನ್ನು ಕೆಲವು ಕಡೆ ಸಾಧುಗಳು ಸ್ತ್ರೀಸಾಧುಗಳ ಸಂಗಡ ಸಲಿಗೆಯಿಂದ ಚರ್ಚಿಸುತ್ತ ಕಿಲಕಿಲ ನಗಾಡುತ್ತಿದ್ದರು. ಇನ್ನೂ ಕೆಲವು ಕಡೆ ಸಾಧುಗಳು ತಮ್ಮ ತಲೆಗಳನ್ನು ನೆಲದೊಳಗೆ ಮರೆಮಾಚಿದ್ದರೆ ಇನ್ನೂ ಕೆಲವು ಕಡೆ ಒಂಟಿಗಾಲಲ್ಲಿ ನಿಂತು ಧ್ಯಾನಮಗ್ನರಾಗಿದ್ದ ಸಾಧುಗಳಿಗೆ ಕೊರತೆ ಇರಲಿಲ್ಲ. ಇವೊಂದೇ ಅಲ್ಲದೆ ತಂಬೂರಿಗಳನ್ನು ಮೀಟುತ್ತಿದ್ದವರೂ, ಡಕ್ಕಿಗಳನ್ನು ನುಡಿಸುತ್ತಿದ್ದವರೂ, ಕರ್ಕಶ ರೀತಿಯಲ್ಲಿ ಹಾಡುಗಳನ್ನು ಗುನುಗುತ್ತಿದ್ದವರೂ, ಭಕ್ತಾದಿಗಳು ನೀಡುತ್ತಿದ್ದ ತಿಂಡಿ ತಿನಿಸುಗಳನ್ನು ಅನಾಗರಿಕ ರೀತಿಯಲ್ಲಿ ಭುಂಜಿಸುತ್ತಿದ್ದವರೂ, ಅಸ್ವಾಭಾವಿಕ ರೀತಿಯಲ್ಲಿ ಹೆಂಡದ ಮಗಿಗಳನ್ನು ಹಿಡಿದು ಮುಗಿಲಿಗೆತ್ತಿ ಕುಡಿಯುತ್ತಿದ್ದವರೂ, ತಮ್ಮ ಹಳೆಯ ನೆನಪುಗಳನ್ನು ರಾಗಯುಕ್ತವಾಗಿ ಕೆದಕಿ ದುಕ್ಕಿಸುತ್ತಿದ್ದವರೂ, ತಾವು ಅಳುತ್ತಲೇ ಇನ್ನೊಬ್ಬರ ಕಣ್ಣೀರು ಒರೆಸುತ್ತಿದ್ದವರೂ! ನಾನು ಮೈಮರೆತಿದ್ದಾಗಲೇ ಶೇಷಣ್ಣ ಕೆಲವು ಕಡೆ ಧಾವಿಸಿ ಒಂದೆರಡು ಧಮ್ಮು ಎಳೆದು ನನ್ನನ್ನು ಸೇರಿಕೊಂಡಿದ್ದನು. ಹೀಗೆ ಅಸಂಗತ ಜೀವಂತ ಸರಕುಗಳಿಂದಲೇ ತೋಪಿನ ಒಳ ಆವರಣ ತುಂಬಿ ಜೀಕರಿಸುತ್ತಿದ್ದುದನ್ನು ನಾನು ದರ್ಶಿಸಿದ್ದು ಅದೇ ಮೊದಲ ಸಲ. ಬಳಿಕ ಇನ್ಯಾವ ದೃಶ್ಯಗಳನ್ನು ನೋಡಲಿದ್ದೆನೋ, ಇನ್ಯಾವ ರಾಗಾಲಾಪನೆಗಳನ್ನು ಕೇಳಿಸಿಕೊಳ್ಳಲಿದ್ದೆನೋ! ಅಷ್ಟರಲ್ಲಿ ದೂರದಲ್ಲೆಲ್ಲೋ ನಿಂತಿದ್ದ ಮೂಲಿಮನಿ ಗೌಡರು ಕಣ್ಸನ್ನೆ ಮಾಡಿದ್ದಕ್ಕೋ, ತನ್ನ ಆರನೆ ಇಂದ್ರಿಯಕ್ಕೆ ಹೊಳೆದೋ ಶೇಷಣ್ಣ ಬನ್ನಿ ಸ್ವಾಮಿ ಎಂದು ತೋಪಿನ ಗರ್ಭದ ಕಡೆ ಕರೆದೊಯ್ದನು.

ಅಲ್ಲೊಂದು ಮನೆ ಇದ್ದಿರಬಹುದೆಂದು ಊಹಿಸಿದ್ದು ತಲೆಕೆಳಗಾಯಿತು, ಅದರ ಬದಲಿಗೆ ತುಸು ದೊಡ್ಡಪ್ರಮಾಣದ ಗುಡಿಸಿಲು ಕಣ್ಣಳತೆಯಲ್ಲಿತ್ತು. ಅದರ ಮುಂದೆ ವಿಶಾಲವಾದ ಕಟ್ಟೆ, ಅದರ ಮೇಲೊಂದು ಕರಿಗಂಬಳಿ ದಿಂಬುಗಳನ್ನು ಜೋಡಿಸಿಸಲಾಗಿತ್ತು, ಮುಂದಿನ ಅಂಗಳದಲ್ಲಿ ತರಾವರಿ ಜನರು ವಿಚಿತ್ರ ಭಂಗಿಯಲ್ಲಿ ಕುಳಿತು ಕಾಯುತ್ತಿದ್ದರು. ಪ್ರಾಯಶಃ ಅವಧೂತರೀರ್ವರು ಒಳಗಡೆ ದೇವಿ ಉಪಾಸನೆ ನೆಪದಲ್ಲಿ ಗಾಂಜಾ ಅಥವಾ ಹೆಂಡ ಸರಾಯಿಂದ ಮಾದಕಪೇಯಗಳನ್ನು ಸೇವಿಸುವುದರಲ್ಲಿ ಮಗ್ನರಾಗಿಬಹುದೆಂದು ಊಹಿಸುತ್ತ ಅವನನ್ನು ಅನುಸರಿಸಿ ಸಮೀಪಿಸಿದೆ. ಅಷ್ಟೊತ್ತಿಗಾಗಲೇ ಅಮಲಿಗೊಳಗಾಗಿದ್ದ ಕೆಲವರು ನನ್ನ ಕಡೆ ವಿಲಕ್ಷಣ ನೋಟಬೀರಿದರು, ಕೆಲವರು ಜಾಗ ಮಾಡಿಕೊಡುತ್ತ ಕೂಡ್ರಲು ಸೂಚಿಸಿದರೂ ನಾನು ಒಂದು ಮೂಲೆಯಲ್ಲಿ ನಿಂತೆನು. ಕೈಗಳನ್ನು ಹಿಂದಕ್ಕೆ ಕಟ್ಟುವುದೋ ಎದೆಭಾಗದಲ್ಲಿ ಕಟ್ಟುವುದೋ! ಬೆನ್ನಿಗೆ ಸಮೀಪದಲ್ಲಿರುವ ಬೇವಿಮರಕ್ಕೆ ಆತುಕೊಳ್ಳುವುದೋ ಅಥವಾ ಹಾಗೆಯೇ ನೇರವಾಗಿ ನಿಂತುಕೊಳ್ಳುವುದೋ! ಪ್ರಯತ್ನಿಸಿದೆನಾದರೂ ಬಗೆಹರಿಯಲಿಲ್ಲ. ನನ್ನ ಒದ್ದಾಟವನ್ನು ಗಮನಿಸುತ್ತಲೇ ಶೇಷಣ್ಣ ಒಂದೆರಡು ಸಲ ಒಳಗಡೆ ಹೋಗಿ ಪುನಃ ಮರಳಿ ನನ್ನ ಸನಿಹದಲ್ಲಿ ನಿಂತುಕೊಂಡನು. ಏನನ್ನೋ ಹೇಳುವ ಸಲುವಾಗಿ ಬಾಯಿ ತೆರೆಯುವುದು ಮುಚ್ಚುವುದು ನಡೆಸಿದನು, ಅವನ ಗಲಿಬಿಲಿ ಕಿರಿಕಿರಿ ಎನ್ನಿಸಿತು. ಇನ್ನೇನು ಹೊರಗಡೆ ಆಗಮಿಸಲಿರುವ, ಆಗಮಿಸಿ ಪ್ರಶ್ನಾರ್ಥಕ ನೋಟಗಳನ್ನು ಬೀರಲಿರುವ, ತಮ್ಮ ಕೃತಕ

ಮಾತುಗಳಿಂದ ಮಣಿಸಲು ಯೋಚಿಸಲಿರುವ ಆ ಛದ್ಮವೇಷಧಾರಿಗಳನ್ನು ನೋಡುವುದಕ್ಕಿಂತ ಪಾಪಸ್ಸು ಹೊರಡುವುದೇ ಮೇಲೆಂದು ಯೋಚಿಸಿದೆ. ಆದರೆ ನನಗರಿವಿಲ್ಲದಂತೆ ಇನ್ನೊಂದು ಪಕ್ಕ ಮೂಲಿಮನಿ ಗೌಡರು ಭದ್ರಕೋಟೆಯಂತೆ ನಿಂತಿದ್ದರು, ಎರಡೂ ಪಕ್ಕ ಅವರಿಬ್ಬರು, ಮುಂದುಗಡೆ ಭಕ್ತಾದಿಗಳು! ಹೊರಡುವ ಪ್ರಶ್ನೆ ಉದ್ಭವಿಸುವುದೆಲ್ಲಿ ಬಂತು. ಸ್ವಲ್ಪ ಹೊತ್ತು ಗತಿಸಿದ ಬಳಿಕ..

ಪರಶುರಾಮನ ಬೆನ್ನ ಹಿಂದೆಯೇ ಶರಭ ಒಳಗಡೆಯಿಂದ ಆಗಮಿಸಿದವರೇ ಭಕ್ತ ಸಮೂಹದ ಕಡೆ ಆಶೀರ್ವಾದ ಭಂಗಿಯಲ್ಲಿ ತಮ್ಮೆರಡೂ ಕೈಗಳನ್ನು ಎತ್ತಿ ಅಲುಗಾಡಿಸುತ್ತ ತಮ್ಮ ನೋಟವನ್ನು ನಿಧಾನವಾಗಿ ನನ್ನ ಕಡೆ ಹರಿಸಿ ಕೇಂದ್ರೀಕರಿಸಿದರು. ಅವರ ಆ ನೋಟ ಎಷ್ಟು ತೀಕ್ಷ್ಣವಾಗಿತ್ತೆಂದರೆ ಅದರ ಮೂಲಕ ನಾನು ಪರಾವರ್ತಿತ ಪ್ರತಿಕ್ರಿಯೆಗೆ ಒಳಪಟ್ಟು ಚಲಿಸಿ ಅವರ ಪಾದಗಳ ಬಳಿ ಕುಸಿದು ಬೀಳಬೇಕು ಅಷ್ಟು ಸಮ್ಮೋಹಕವಾಗಿತ್ತು. ಒಂದು ಕ್ಷಣ ಕಂಪನಕ್ಕೀಡಾಗಿ ಸಾವರಿಸಿಕೊಂಡು ಹಾಗೆಯೇ ನಿಂತದ್ದು ಅಸಮಾಧಾನಕ್ಕೆ ಕಾರಣವಾಯಿತು. ಗೌಡರ ಸಲಹೆ ಮೇರೆಗೆ ಶೇಷಣ್ಣ ನನ್ನನ್ನು ಅವರಿರುವಲ್ಲಿಗೆ ಕರೆದೊಯ್ಯಲು ಪ್ರಯತ್ನಿಸಿದನಾದರೂ ಸಾಧ್ಯವಾಗಲಿಲ್ಲ. ಭಕ್ತ ಸಮೂಹದ ದೃಷ್ಟಿ ಅವರ ಕಡೆಯಿಂದ ಬಾಗಿಲ ಕಡೆ ಚಲಿಸುವುದಕ್ಕೂ ಒಳಡೆಯಿಂದ ಛಂಗನೆ ನೆಗೆದು ಆಗಮಿಸಿ ಶರಭನ ಹೆಗಲ ಮೇಲೆ ಮಂಗ ಕುಳಿತುಕೊಳ್ಳುವುದಕ್ಕೂ ಸರಿ ಹೋಯಿತು.

ಅದು ಮಂಗವೋ ಅಥವಾ ಅದನ್ನು ಹೋಲುವ ಬೇರೆ ಇನ್ಯಾವುದಾದರ ಪ್ರಾಣಿಯೋ ಎಂದು ಖಚಿತಪಡಿಸಿಕೊಳ್ಳುವ ಪ್ರಯತ್ನದಲ್ಲಿ ನಾನಿದ್ದಾಗ ಭಕ್ತವೃಂದವು ಆಂಜನೇಯ ಮಾರಾಜ್ಞಾ ಜೈ ಎಂದು ಜಯಘೋಷ ಹಾಕಿತು. ಎಷ್ಟು ಸಾಧ್ಯವೋ ಅಷ್ಟು ಕಣ್ಣಾಲಿಗಳನ್ನು ಹಿಗ್ಗಲಿಸಿ ನೋಡಿದೆ, ಅದು ತನ್ನ ಮಾಲೀಕರ ಬಂಧನದಿಂದ ತಪ್ಪಿಸಿಕೊಂಡು ಬಂದಿರುವ ಸಾಕು ಮಂಗ ಎನ್ನುವುದರಲ್ಲಿ ಎರಡನೇ ಮಾತಿಲ್ಲ, ಅಥವಾ ಅದು ಶರಭನ ಪೂರ್ವಾಶ್ರಮದ ಗೆಳೆಯರ ಪೈಕಿ ಏನಾದರು! ನನ್ನ ಊಹೆಯನ್ನು ಗಟ್ಟಿಗೊಳಿಸುವ ರೀತಿಯಲ್ಲಿ ಅದು ಅವನ ಶರೀರಕ್ಕೆ ತಾನೇ ನಿಜವಾದ ವಾರಸುದಾರ ಎಂಬಂತೆ ವರ್ತಿಸುತ್ತಿರುವುದು! ಅವನ ಶರೀರವನ್ನೇ ಆಟದ ಮೈದಾನವನ್ನಾಗಿ ಪರಿವರ್ತಿಸಿಕೊಂಡಿರುವುದು! ಈ ಕ್ಷಣ ಅವನ ಹೆಗಲ ಮೇಲೆ ಇನ್ನೊಂದು ಕ್ಷಣ ಭಕ್ತಾದಿಗಳ ಪೈಕಿ ಯಾರೋ ಒಬ್ಬರ ಮೈಮೇಲೆ! ಪ್ರತಿಯೊಬ್ಬರೂ ಅದರ ಸ್ಪರ್ಶದ ಸಲುವಾಗಿ ಹಾತೊರೆಯುತ್ತಿರುವರು! ತಮ್ಮ ಮೈಮೇಲೆ ಕುಳಿತುಕೊಳ್ಳುವಂತೆ ನೋಟಗಳ ಮೂಲಕ ಅಂಗಲಾಚುತ್ತಿರುವರು! ಕುಳಿತುಕೊಳ್ಳಲು ಅನುವಾಗುವ ರೀತಿಯಲ್ಲಿ ಬಾಳೆಹಣ್ಣುಗಳಂಥ ಕಡಿಮೆ ಕಿಮ್ಮತ್ತಿನ ಹಣ್ಣಿನ ಆಮಿಷ ತೋರಿಸುತ್ತಿರುವರು! ಆದರೆ ಚಲಾಕಿಯಾದ ಅದು ಹಣ್ಣುಗಳನ್ನು ಹಿಡಿದವರ ಕಡೆ ಧಾವಿಸುತ್ತಿಲ್ಲ, ಐದು ಹತ್ತರ ನೋಟುಗಳನ್ನು ಹಿಡಿದವರ ಕಡೆಗೂ ಹೋಗುತ್ತಿಲ್ಲ, ನೂರರ ನೋಟುಗಳನ್ನು ಹಿಡಿದವರ ಕಡೆ ಮಾತ್ರ ಧಾವಿಸುತ್ತಿರುವುದು, ನೋಟನ್ನು ಸ್ವತಹ ತನ್ನ ಕೈಯಿಂದ ಸ್ವೀಕರಿಸಿ ಬಳಿಕ ಅದನ್ನು ತನ್ನ ಬಾಯಿಯ ದವಡೆಯಲ್ಲಿರಿಸಿಕೊಳ್ಳುವುದು, ತೊಡೆಯ ಮೇಲೆ ಅರೆಕ್ಷಣ ವಿಶ್ರಮಿಸಿಕೊಳ್ಳುವುದು, ಹೆಗಲು ತಲೆ ಮೇಲೆಲ್ಲ ಕುಣಿದು ಕುಪ್ಪಳಿಸುವುದು, ಬಳಿಕ ಛಂಗನೆ ನೆಗೆದು ಶರಭನ ಮುಂದೆ ಬಾಯಿಯಿಂದ ನೋಟುಗಳನ್ನು ಉದುರಿಸುವುದು, ಹೀಗೆಯೇ ಅದರ ವ್ಯವಹಾರಿಕ ಚಾಣಾಕ್ಷತನ.

ನಡು ನಡುವೆ ಭಜನೆ ಬೇರೆ, ಪರಶುರಾಮ ಪಲ್ಲವಿಯನ್ನು ಎತ್ತಿಕೊಂಡರೆ, ಶರಭ ಎತ್ತಿಕೊಳ್ಳುವುದು ಅನುಪಲ್ಲವಿಯನ್ನು, ಮೂಲಿಮನಿ ಗೌಡರು ಡಕ್ಕಿಯನ್ನು

ನುಡಿಸಲಾರಂಭಿಸಿದರೆ, ಶೇಷಣ್ಣ ನುಡಿಸಲಾರಂಭಿಸುವುದು ಹಾರ್ಮೋನಿಯಂ ವಾದ್ಯವನ್ನು! ಮುಂದಿನ ಸಾಲಿನ ಭಕ್ತರು ಏರು ದನಿಯಲ್ಲಿ ಭಜನೆಯನ್ನು ಪ್ರತಿಧ್ವನಿಸುತ್ತಿರುವರು. ಉಳಿದವರು ಅದಕ್ಕೆ ಸೋ ಎಂದು ದನಿಗೂಡಿಸುವುದು. ಏನೋ ಒಂದು ರೀತಿಯ ಸಮೂಹ ಸನ್ನಿ, ಆಧ್ಯಾತ್ಮಿಕ ಅಲೌಕಿಕ ಲೇಪನದ ವ್ಯಾಧಿ ಆವರಿಸಿರುವಂಥ ವಾತಾವರಣ. ಭಕ್ತರ ನಡುವೆ ಅಲ್ಲಲ್ಲಿ ದೈಹಿಕವಾಗಿಯೂ ಮಾನಸಿಕವಾಗಿಯೂ ದುರ್ಬಲವಿರುವ ಮಹಿಳೆಯರು ತಮ್ಮ ಅಂತರಂಗಗಳಲ್ಲಿ ದೆವ್ವಪ್ರೇತಗಳನ್ನು ಆವಹಿಸಿಕೊಳ್ಳಲು ನಿರರ್ಥಕ ಪ್ರಯತ್ನ ನಡೆಸುತ್ತಿರುವರು ಬೇರೆ! ಅದಕ್ಕೆ ಪೂರಕವಾಗಿ ತಮ್ಮ ತಲೆಗೂದಲನ್ನು ಚೆಲ್ಲೊಡೆದೋ ತಮ್ಮ ಎದೆ ಮೇಲಿನ ಸೆರಗನ್ನು ಹಾರೊಡೆದೋ ಶ್ಲೀಲವೂ ಅಲ್ಲದ ಅಶ್ಲೀಲವೂ ಅಲ್ಲದ ನೃತ್ಯವನ್ನು ಮಾಡಲಾರಂಭಿಸುತ್ತಿರುವರು ಬೇರೆ! ನಡುನಡುವೆ ಮಂಗಳಾರತಿ ಹೆಸರಿನಲ್ಲಿ ದೇಣಿಗೆ ಸಂಗ್ರಹಣಾ ಕಾರ್ಯ ಅವಿಚ್ಛಿನ್ನ ರೀತಿಯಲ್ಲಿ ನಡೆಯುತ್ತಿರುವುದು. ಪ್ರಸಾದ ತೀರ್ಥಗಳ ರೂಪದಲ್ಲಿ ಅಯೋಗ್ಯ ತಿಂಡಿದಿನಿಸುಗಳ ಹಂಚುವಿಕೆ ಬೇರೆ, ಬರುವರು ಬರುತ್ತಿರುವರು ಹೋಗುವವರು ಹೋಗುತ್ತಿರುವರು ಬೇರೆ, ಬರುವವರನ್ನು ಬನ್ನಿ ಎನ್ನುವವರಿಲ್ಲದಿದ್ದರೂ, ಹೋಗುವವರನನ್ನು ಹೋಗಿರಿ ಎನ್ನುವವರಿಲ್ಲದಿದ್ದರೂ! ಒಂದು ರೀತಿಯಲ್ಲಿ ಸಂಕಲನ ವ್ಯವಕಲನ ಲೆಕ್ಕಾಚಾರ! ಧೂಪ ದೀಪದ ಹೊಗೆ ಬೆಳಕಲ್ಲಿ ಎಲ್ಲವೂ ಅಸ್ಪಷ್ಟ ಅಗೋಚರ! ಇನ್ನೂ ಸ್ವಲ್ಪ ಹೊತ್ತು ನಿಂತರೆಲ್ಲಿ ನಾನೂ ಸಹ ಸಂಕಲನಗೊಳ್ಳುವೆನೋ! ವ್ಯವಕಲನಗೊಳ್ಳುವೆನೋ! ಅಥವಾ ಭಾಗಾಕಾರಕ್ಕೆ ತುತ್ತಾಗಿ ನಿಸ್ಸೇಷಗೊಳ್ಳುವೆನೋ ಎಂಬ ಆತಂಕ ಕಾಡಲಾರಂಭಿಸಿತು. ಆದಿ ಅಂತ್ಯಗಳಿಲ್ಲದ ಅನುಭಾವದ ಹಾಡುಗಳು ಪೂರ್ಣಗೊಂಡ ಬಳಿಕ, ಅವರ ಪೈಕಿ ಯಾರಾದರೊಬ್ಬರ ತಮ್ಮ ಆಯಸ್ಕಾಂತ ಸದೃಶ ಪರಿಭಾಷೆಯ ಮಾತುಗಳಿಂದ ಕರೆದರೆ! ಸಮೀಪಿಸಿದೊಡನೆ ತಮ್ಮ ಮಾಂತ್ರಿಕ ಸ್ಪರ್ಶದಿಂದ ಮೈದಡವಿದರೆ! ಉರುಕುಂದಿಯೇ ತಾನು ತಾನೇ ಉರುಕುಂದಿಯು ಎಂದು ಮನವರಿಕೆ ಮಾಡಿದಾದ ಬಳಿಕ ಚೂರಿಯನ್ನು ತನ್ನ ಸನ್ನಿಧಿಯಲ್ಲಿ ಅರ್ಪಿಸು ಎಂದು ಆಜ್ಞಾಪಿಸಿದರೆ! ಅದಿರದಿದ್ದ ಪಕ್ಷದಲ್ಲಿ ಸಾಂಸ್ಕಾರಿಕ ನೌಕರಿಗೆ ಸಂಬಂಧಿಸಿದ ಬಂಧನಗಳನ್ನು ಶಾಶ್ವತ ರೀತಿಯಲ್ಲಿ ಕಳಚಿಕೋ, ಅಲೌಕಿಕ ತಾಣವೆನಿಸಿರುವ ಲಚುಮವ್ವನ ತೋಪನ್ನು ಸೇರಿಕೊಂಡು ಮೋಕ್ಷದ ಹಾದಿಗಳನ್ನು ಕಂಡುಕೋ, ಆಂಜನೇಯಸ್ವಾಮಿಯನ್ನು ಆದರ್ಶವೆಂದು ಪರಿಗಣಿಸು ಎಂದು ಮುಂತಾಗಿ ಆಜ್ಞಾಪಸಿದರೆ! ಊಹಿಸಿಕೊಳ್ಳತೊಡಗಿದಂತೆ ಭಯವಾಯಿತು ಅಸಹ್ಯವೆನಿಸಿತು. ಇನ್ನೇನವರಿಂದ ಕರೆ ಬಂದೇಬಿಟ್ಟಿತೆಂದು ಕಲ್ಪಿಸಿಕೊಂಡ ನಾನು ಅಲ್ಲಿಂದ ನಿಧಾನವಾಗಿ..

++++

ನೆನಪುಗಳೊಂದಿಗೆ ಮುಖಾಮುಖಿಯಾಗುತ್ತ, ಕೆಲವು ನೆನಪುಗಳ ಕೈಯಲ್ಲಿ ಸೋಲುತ್ತ, ಕೆಲವು ನೆನಪುಗಳನ್ನು ಜಯಿಸುತ್ತ ಶಶಾಂಕ ಮೊಗಸಾಲೆಯ ಕಡೆ ದೃಷ್ಟಿ ಹಾಯಿಸಿದ, ಸುತ್ತಲೂ ತರಾವರಿ ಬಳ್ಳಿಗಳ ಕಲಾತ್ಮಕ ನೇಯ್ಗೆ, ನಡುವೆ ವರ್ತುಳಾಕಾರದಲ್ಲಿ ಹಲವು ಹೂಗಳು. ಮೆಲ್ಲಗೆ ತಲೆ ಎತ್ತಿ ಮಾಡಿನ ಕಡೆ ನೋಡಿದ. ಅಲ್ಲಿ ನಿಸ್ತೇಜಗೊಂಡಿರುವ ಹಲವು ಶತಮಾನಗಳಷ್ಟು ಪೂರ್ವದ ಭಾರಿಗಾತ್ರದ ಲಾಂದ್ರ. ಅದು ಬೆಳಗುತ್ತಿರುವುದೋ ಇಲ್ಲವೋ ಎಂಬುದು ತಿಳಿಯದು ತನಗೆ. ಕಿಟಿಕಿಗಳು ಒಳಗಡೆ ಹರಿದಿರುವ ಬಿಸಲ ಕೋಲುಗಳು, ಅಲ್ಲಲ್ಲಿ ಪಕ್ಷಿಗಳು ಹಾರಾಡುತ್ತಿರುವ ನೆರಳುಗಳು, ಅವುಗಳ ನಡುವೆ ಮನುಷ್ಯರ ನೆರಳುಗಳಿಗೆ ಬರವಿರಲಿಲ್ಲ.

ಆ ಎಲ್ಲಾ ನೆರಳುಗಳು ಭಯಾನಕವೆಂಬಂತೆ ತನಗೆ ಭಾಸವಾಗತೊಡಗಿದವು. ಇಡಲಿದ್ದ ಹೆಜ್ಜೆಯನ್ನು ಕೂಡಲೆ ಉಪಸಂಹರಿಸಿಕೊಂಡ.

ಪಕ್ಕದಲ್ಲಿರುವುದೂ ಅಲ್ಲದೆ ತನ್ನ ಮುಂಗೈಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದ ರಾಘಪ್ಪಸ್ವಾಮಿ, "ಯಾಕೆ ದೊರೆ ಈ ವಾಡೆಯ ವಾರಸುದಾರರಾದ ನೀವೇ ಮೊಗಸಾಲೆ ಪ್ರವೇಶಿಸಲು ಹಿಂಜರಿಯುವುದೇನು? ಇದು ನಿಮಗೆ ನಡೆಯುವುದನ್ನು ಕಲಿಸಿದ ಮೊಗಸಾಲೆ, ನಮ್ಮೆಲ್ಲರ ಹೆಗಲುಗಳ ಮೇಲೆ ಸವಾರಿ ಮಾಡಿದ ಮೊಗಸಾಲೆ. ಅದರ ಮೇಲೇ ಧೀರೋದಾತ್ತ ಹೆಜ್ಜೆ ಇಡುವುದು ನಿಮ್ಮ ಹಕ್ಕು ದೊರೆ. ಹೆದರಬೇಡಿ ನಡೆಯಿರಿ ಮುಂದಕ್ಕೆ, ಹಿರಿಯ ದೊರೆಗಳು ನರಳುತ್ತಿರುವುದನ್ನು ಕೇಳಿಸಿಕೊಂಡಾದರೂ ಹೆಜ್ಜೆ ಇರಿಸಿರಿ" ಎಂದು ಒತ್ತಾಯಿಸುತ್ತಿರುವರು. ಅವರೊಂದೇ ಅಲ್ಲದೆ ಉಳಿದವರೂ ಸಹ, ತನ್ನಲ್ಲಿ ಉತ್ಸಾಹ ತುಂಬುವ ಸಲುವಾಗಿ ತಮ್ಮ ಹೆಗಲುಗಳನ್ನು ತೋರಿಸುತ್ತಿರುವರು, ಪುನಃ ತಾವು ಎತ್ತಿ ಆಡಿಸುವ ಸಲುವಾಗಿ ಇನ್ನೊಮ್ಮೆ ಮಗುವಾಗಿರಿ ಎಂದು ಅಂಗಲಾಚುತ್ತಿರುವರು, ಕದಲದ ರೀತಿಯಲ್ಲಿ ಅಬೇಧ್ಯಕೋಟೆಯನ್ನು ನಿರ್ಮಿಸುತ್ತಲೇ ಇರುವರು, ತನ್ನ ಮನಸ್ಸಿಗೆ ಕರುಳುಗಳಿಂದ ಸೃಜಿಸಿದ ಶೃಂಖಲೆಯನ್ನು ತೊಡಿಸುತ್ತಿರುವರು, ತಮ್ಮ ವಾತ್ಸಲ್ಯಪೂರಿತ ಮಾತುಗಳಿಂದ ತನ್ನನ್ನು ಪರವಶಗೊಳಿಸುತ್ತಿರುವರು. ಎಷ್ಟೊಂದು ಕರಾರುವಾಕ್ಕಾಗಿ ಪ್ರಸ್ತಾಪಿಸುತ್ತಿರುವರಲ್ಲ ತನ್ನ ಬಾಲ್ಯದ ನೆನಪುಗಳನ್ನು!

ಆದರೆ ತನ್ನ ಅಂತರಂಗದ ಪಿಸುಮಾತಿನ ಪರ್ಣಕುಟಿಯಲ್ಲಿ ಊರ್ಮಿಳೆಯು, "ಅವರ ಮಾತಿಗೆ ಮರುಳಾದಿರೆಂದರೆ ಮರಳುವುದು ಅಸಂಭವ ನನ್ನ ದೊರೆಯೇ, ಹೆಜ್ಜೆ ಇಟ್ಟಿರೆಂದರೆ ಅಲ್ಲಿಂದ ಸಹಜ ಬದುಕಿಗೆ, ನಿಮ್ಮ ನನಸಾಗದೆ ಉಳಿದಿರುವ ಕನಸುಗಳ ಲೋಕಕ್ಕೆ ಮರಳದಿದ್ದಲ್ಲಿ ನನ್ನ ಗತಿ ಏನು? ದಯವಿಟ್ಟು ಅಲ್ಲಿಂದ ಕೂಡಲೆ ಹೊರಟು ಬಂದುಬಿಡಿ ದೊರೆ, ನೀವು ಮುಂದಕ್ಕೆ ಹೆಜ್ಜೆ ಇರಿಸಿದಿರೆಂದರೆ ನಾನು ನೀವಿರುವಲ್ಲಿಗೆ ಬಂದು ಆತ್ಮಾಹುತಿ ಮಾಡಿಕೊಳ್ಳುವೆನು" ಎಂದು ಕಠೋರ ಮಾತುಗಳಿಂದ ಎಚ್ಚರಿಸುತ್ತಿರುವಂತೆ ಭಾಸವಾಯಿತು.

ತನ್ನ ಕನಸುಗಳನ್ನು ಸಾಕಾರಗೊಳಿಸಲು ಅಹರ್ನಿಶಿ ಶ್ರಮಿಸುತ್ತಿರುವ, ತನಗೆ ದಿನವಹಿ ಪ್ರೀತಿಯ ಹಲವು ಮುಖಗಳನ್ನು ಪರಿಚಯಿಸುತ್ತಲೇ ಇರುವ, ಸವಿ ನಿದ್ದೆ ಸವಿಯುವ ಸಲುವಾಗಿ ತನ್ನ ಹರವಾದ ತೊಡೆಯನ್ನು ಸಮರ್ಪಿಸಿರುವ, ವಾಸ್ತವ್ಯಕ್ಕೆ ತನ್ನ ಹೃದಯವನ್ನೇ ಬಿಟ್ಟುಕೊಟ್ಟಿರುವ, ತನ್ನ ಬೊಗಸೆಗಂಗಳ ಬೆಳಕಲ್ಲಿ ಬದುಕಿನ ನಾನಾ ರೂಪಗಳನ್ನು ಪರಿಚಯಿಸಿರುವ ಊರ್ಮಿಳೆ! ನನ್ನ ಉತ್ತರೋತ್ತರ ಜೀವನಕ್ಕೆ ಊರುಗೋಲಾಗಿರುವ ನನ್ನ ಊರ್ಮಿಳೆ! ದೂರದಲ್ಲಿ ಎಲ್ಲೋ ಅರುಂಧತಿ ನಕ್ಷತ್ರದಂತೆ ಹೊಳೆಯುತ್ತಿದ್ದವಳು ದಿನಗಳೆದಂತೆ ಅಂಗೈಯ ದಿಗಂತದಲ್ಲಿ ಪೂರ್ಣಚಂದಿರನಂತೆ ನೆಲಸಿದ ನನ್ನವಳೇ ಆದ ಊರ್ಮಿಳೆ! ಆಕೆ ತನ್ನ ಬದುಕಿನ ಕೋಣೆಯನ್ನು ಪ್ರವೇಶಿಸಿದ ಕ್ಷಣವನ್ನು ಸಕಾರಣವಾಗಿ ನೆನಪು ಮಾಡಿಕೊಳ್ಳಬೇಕೆಂದರೆ ಸಹವರ್ತಿಗಳ ಪೈಕಿ ಒಬ್ಬರೂ ಅನುವು ಮಾಡಿಕೊಡುತ್ತಿಲ್ಲ. ಜೇನಿನ ಹೊರಮೈಗೆ ಅದೇ ತಾನೆ ರೆಕ್ಕೆ ಅಂಟಿಸಿದ ದುಂಬಿಯಂತೆ ಅಸಹಾಯಕತೆಯಿಂದ ಒದ್ದಾಡಲಾರಂಭಿಸಿದ, ಆಕೆ ಆತ್ಮಾಹುತಿ ಮಾಡಿಕೊಳ್ಳಲಿರುವ ದೃಶ್ಯವನ್ನು ಕಲ್ಪಿಸಿಕೊಳ್ಳುತ್ತಲೇ ಗದ್ಗದಿತನಾದ, ಬಿಕ್ಕಳಿಸುತ್ತಲೇ ಸ್ವಾಮಿ ಕಡೆ ತಿರುಗಿ

"ಕಾಕಾ! ತಂದೆಯವರ, ಅದೂ ಸಾವಿನ ಕ್ಷಣಗಳನ್ನು ಎಣಿಸುತ್ತಿರುವ ನನ್ನ ಹೆತ್ತ ತಂದೆಯವರ, ನೋಡಿದೊಡನೆ ಬಿಗಿದಪ್ಪಿಕೊಳ್ಳಲು ತಮ್ಮ ದುರ್ಬಲ ಕೈಗಳನ್ನು ಚಾಚಲಿರುವ ನನ್ನ ಪರಾಕ್ರಮಿ ತಂದೆಯವರ, ಯಜ್ಞದೋಪಾದಿಯಲ್ಲಿ ಪ್ರಜ್ವಲಿಸಿ ಕಾಲದ ಕಾಲ್ತುಳಿತಕ್ಕೆ ಸಿಕ್ಕು

ಕಳೆಗುಂದಿರಬಹುದಾದ ಕಣ್ಣುಗಳಿಗೆ ಒಡೆಯರಾಗಿರುವ ನನ್ನ ತಂದೆಯವರ ಸಮಕ್ಷಮ ನಿಲ್ಲು ಧೈರ್ಯ ನನಗಿಲ್ಲ ಕಾಕಾ! ಮನಸ್ಸಿನಲ್ಲಿರುವ ಸಾವಿಗಾತೀತರೆನಿಸಿರುವ ಆ ತಂದೆ ಸಾಕು ನನಗೆ, ಸಾಯಲಿರುವ ತಂದೆ ಯಾಕೋ ನನಗೆ ಮುಖ್ಯರೆನಿಸುತ್ತಿಲ್ಲ ಕಾಕಾ! ಯೋಚಿಸಲಿಕ್ಕೆ ವಾರ ಕಾಲಾವಕಾಶ ನೀಡಿ, ಮುಂದಿನ ಸೋಮವಾರ ಪುನಃ ಬರುವೆ" ಎನ್ನುತ್ತಲೇ ಹೆಜ್ಜೆಯನ್ನು ಮೆಲ್ಲಗೆ ಉಪಸಂಹರಿಸಿಕೊಂಡು ಮೆಟ್ಟಿಲ ಮೇಲಿರಿಸಿದ. ಇನ್ನೇನು ಹೇಳಲಿದ್ದನೋ ತಾನು! ಅಷ್ಟರಲ್ಲಿ ಸ್ವಾಮಿ ತನ್ನ ಬಲಗೈಯನ್ನು ಶಶಾಂಕನ ತುಟಿಗಳ ಮೇಲಿರಿಸಿ ಮಾತುಗಳನ್ನು ತಡೆದರು, ಧ್ವನಿಯನ್ನು ಹ್ರಸ್ವಗೊಳಿಸಿದರು, ಎಡಬಲ ನೋಡಿದರು, ಇರುವವರೆಲ್ಲರೂ ತಮ್ಮ ನಂಬುಗಸ್ತರೆ ಎಂದು ಭರವಸೆ ತಳೆದರು.

"ದೊರೆ ನಿಮ್ಮ ಮಾತುಗಳನ್ನು ಮೊಗಸಾಲೆಯ ಈ ಬದಿಯಲ್ಲಿರುವ ನಾವೇ ಕೇಳಿಸಿಕೊಂಡಿರುವಾಗ, ಇನ್ನು ಮೊಗಸಾಲೆ ಇನ್ನೊಂದು ಬದಿಯಲ್ಲಿರುವ ನಿಮ್ಮ ತೀರ್ಥರೂಪರು ಕೇಳಿಸಿಕೊಂಡಿರುವುದಿಲ್ಲವೆ? ವ್ಯಾದಿ ಅವರ ದೇಹವನ್ನು ದುರ್ಬಲಗೊಳಿಸಿರಬಹುದು, ಆದರೆ ಅವರ ಪಂಚೇಂದ್ರಿಯಗಳನಲ್ಲ! ಅವರಿಗೆ ತೀರಾ ಹತ್ತಿರದಲ್ಲಿರುವ ನೀವು ಕಾಣದೆ, ಧೈರ್ಯದ ನಾಲ್ಕು ಮಾತುಗಳನ್ನಾಡದೆ, ಆಪೇಕ್ಷಿಸಿದಲ್ಲಿ! ಮುಂದಿನ ಮಾತುಗಳನ್ನು ಆಡುವ ಧೈರ್ಯ ನನ್ನಲ್ಲಿಲ್ಲ ದೊರೆ, ಗಂಗಾಜಲ ತುಂಬಿರುವ ಚಿನ್ನದ ಗಿಂಡಿ ಚಮಚ ಹಾಸಿಗೆ ಮೇಲೆ ನಿನ್ನೆಯಿಂದ ಇವೆ ಎಂದು ಮಾತ್ರ ಹೇಳಬಲ್ಲೆ" ಎಂದು ಉತ್ತರೀಯದಿಂದ ತಮ್ಮ ಒದ್ದೆಗಣ್ಣುಗಳನ್ನು ಮೆಲ್ಲಗೆ ಒರೆಸಿಕೊಳ್ಳುತ್ತ ಗದ್ಗದಿತರಾದರು, ಮುಖದಲ್ಲಿ ಮುಖವಿರಿಸಿ ನೋಡಿದರು, ನೋಟದ ಮೂಲಕ ಪುನಃ ತಂದೆಯವರನ್ನು ಶಶಾಂಕನ ಎದೆಯೊಳಗೆ ಪ್ರತಿಷ್ಠಾಪಿಸಲು ಪ್ರಯತ್ನಿಸಿದರು, ಮುಂದಕ್ಕೆ ಇಡುವಂತೆ ಸೂಚಿಸುವ ಸಲುವಾಗಿ ತನ್ನ ಪಾದಗಳ ಕಡೆ ನೋಟ ಹರಿಸಿದರು, ಆದರೆ ಅವರ ನೋಟ ಮಾಂತ್ರಿಕ ಸದೃಶವಾಗಿತ್ತು.

ಶಶಾಂಕ ತನಗರಿವಿಲ್ಲದಂತೆ ತನ್ನ ಬಲಗಾಲನ್ನು ಮೆಲ್ಲಗೆ ಎತ್ತಿದ ಮೊಗಸಾಲೆಯ ಮೇಲಿಡುವ ಸಲುವಾಗಿ, ಅಯ್ಯೋ ಬೇಡ ಬೇಡವೇ ಬೇಡ! ಊರ್ಮಿಳೆಯ ಮಾತುಗಳು ತನ್ನ ಅಂತರಂಗದಲ್ಲಿ ಪ್ರತಿಧ್ವನಿಸಿದ್ದನ್ನೂ ಲೆಕ್ಕಿಸದೆ, ಅಂತಿಮವಾಗಿ ಇಟ್ಟೇಬಿಟ್ಟನು, ಆ ಬಳಿಕ ತನ್ನ ಇನ್ನೊಂದು ಕಾಲು ಸುಮ್ಮನಿರಲಾದೀತೆ! ತನ್ನೆರಡೂ ಪಾದಗಳನ್ನು ಮೊಗಸಾಲೆಯಲ್ಲಿ ಊರಿ ನಖಶಿಖಾಂತ ಜಲಜಲ ಬೆವೆತನು, ಬೆವರನ್ನು ಒರೆಸಿಕೊಳ್ಳದೆ ಯಾಂತ್ರಿಕವಾಗಿ ಮುಂದೆ ಚಲಿಸಲಾರಂಭಿಸಿದನು. ಒಣಗಲಾರಂಭಿಸಿದ ಬಾಯಿಯನ್ನು ಸವಿ ನೆನಪುಗಳ ಮೂಲಕ ತೇವಗೊಳಿಸುವುದನ್ನು ಮರೆತು ನಡೆಯತೊಡಗಿ ಅಂತಿಮವಾಗಿ ರುಗ್ಣಶಯ್ಯೆಯನ್ನು ಸಮೀಪಿಸಿಯೇಬಿಟ್ಟನು. ಎರಡು ಮೂರು ದಶಕಗಳ ಹಿಂದೆಯೇ ಕಳಚಿರುವ ಕರುಳಕೊಂಡಿಗಳು ಇನ್ನೆರಡು ಕ್ಷಣಗಳಲ್ಲಿ ಪುನಃ ಕೂಡಲಿರುವವು, ವೃದ್ಧನಾಗಿರುವ ತಂದೆಯ ಮೊಗವನ್ನು ಮಗನೂ, ತಾರುಣ್ಯದ ಹೊಸ್ತಿಲನ್ನು ದಾಟಿರುವುದೂ ಅಲ್ಲದೆ ಪ್ರೌಢಾವಸ್ಥೆಯ ಗಹ್ವರವನ್ನು ಪ್ರವೇಶಿಸಿರುವ ಮಗನ ಮೊಗವನ್ನು ತಂದೆಯೂ ಮೊಟ್ಟಮೊದಲ ಸಲ ನೋಡಲಿರುವರು, ಅವರಿಬ್ಬರ ಕಂಠಗಳಲ್ಲಿ ಮಾತಿನ ಸಾನ್ನಿಧ್ಯ ಪಡೆಯಲು ಹಾತೊರೆಯುತ್ತಿರುವ ಸಹಸ್ರ ಸಹಸ್ರ ಶಬ್ದಗಳಿಗೆ ಬರವಿಲ್ಲ, ಅಣೆಕಟ್ಟೆಯನ್ನು ಭೇದಿಸಲು ಹಾತೊರೆಯುತ್ತಿರುವ ಅಶ್ರುಧಾರೆಗೆ ಬರವಿಲ್ಲ, ಆದರೆ ಯಾರು ಮೊದಲು ಮಾತನ್ನು ಆರಂಭಿಸುವುದು! ಇದೊಂದು ಕಾದಂಬರಿಯ ಸಂಕ್ರಮಣ ಸ್ಥಿತಿ. ಎರಡು ಕಾಲಮಾನಗಳು ಪರಸ್ಪರ ವಿನಿಮಯಗೊಳ್ಳುವ ನಿರ್ಣಾಯಕ ಘಟ್ಟ! ಪುನಃ ಬರೆಹ ಕಾರ್ಯ ಸ್ಥಗಿತಗೊಂಡಿತು. ವಿರಾಮದ ಬಳಿಕ ಬರೆಹವನ್ನು ಆರಂಭಿಸಲು

ನಿಶ್ಚಯಿಸಿ ಪೆನ್ನಿಗೆ ವಿಶ್ರಾಂತಿ ಕಲ್ಪಿಸಿದೆ, ಸೃಜನಶೀಲತೆಯನ್ನು ಪುನಶ್ಚೇತನಗೊಳಿಸುವ ಸಲುವಾಗಿ ಕಣ್ಣುಗಳನ್ನು ವಪೆಗಳ ನಡುವೆ ಮರೆ ಮಾಚಬೇಕೆನ್ನುವಷ್ಟರಲ್ಲಿ!

ಬೀದಿಯಲ್ಲಿ ನಿಂತು ಯೋಚಿಸಿದಾದ ಬಳಿಕ, ಅಂಗಳದಲ್ಲಿ ನಿಂತು ಯೋಚಿಸಿದಾದ ಬಳಿಕ, ಬಾಗಿಲ ಎರಡೂ ತೋಳುಗಳಿಗೆ ತನ್ನೆರಡೂ ಕೈಗಳನ್ನು ಹಚ್ಚಿ ಯೋಚಿಸಿದಾದ ಬಳಿಕ, ಗಮನ ಸೆಳೆಯುವ ರೀತಿಯಲ್ಲಿ ದೊಡ್ಡದಾದ ಉಸಿರುಗಳನ್ನು ಹೊರ ಚೆಲ್ಲಿದಾದ ಬಳಿಕ ಮೆಲ್ಲಗೆ ಪ್ರವೇಶಿಸಿ ತನ್ನ ಸ್ವಸ್ಥಾನದಲ್ಲಿ ಕುಳಿತ ವ್ಯಕ್ತಿ ನಿಸ್ಸಂದೇಹವಾಗಿ ಶೇಷಣ್ಣನೇ ಆಗಿದ್ದ. ಅವನ ಕಡೆ ಒಲ್ಲದ ಮನಸ್ಸಿನಿಂದ ನೋಡಲು ಎಂದಿನಂತೆ ಅಪ್ಯಾಯತೆಯಿಂದ ಮಾತಾಡಿಸಲು ನನ್ನಿಂದ ಕೂಡಲೆ ಸಾಧ್ಯವಾಗಲಿಲ್ಲ, ಅದಕ್ಕೆ ಕಾರಣಗಳೂ ಇಲ್ಲದಿರಲಿಲ್ಲ.

ವಾಗಿಲಿಯ ಇನ್ನುಳಿದ ಜನರಂತೆ ತಾನು ಮಾಮೂಲು ವ್ಯಕ್ತಿಯಲ್ಲ ನನ್ನ ದೃಷ್ಟಿಯಲ್ಲಿ, ಅಲ್ಪಸ್ವಲ್ಪ ಓದಿಕೊಂಡಿರುವಂಥವನೂ, ವ್ಯಾಕರಣ ಶುದ್ದವಾಗಿ ಭಾಷೆಯನ್ನು ಪ್ರಯೋಗಿಸುತ್ತಿದ್ದಂಥವನೂ, ಅನುಭವಜನ್ಯವಾಗಿ ವಿವೇಚನಾಯುತವಾಗಿ ಯೋಚಿಸುತ್ತಿದ್ದಂಥವನೂ, ಸಂಸಾರ ತಾಪತ್ರಯಗಳಿಂದ ಸದಾ ಬಳಲುತ್ತಿದ್ದಂಥವನೂ, ಎತ್ತರಕ್ಕೆ ಆಕರ್ಷಕ ವ್ಯಕ್ತಿತ್ವ ಉಳ್ಳಂಥವನೂ ಆದ ಶೇಷಣ್ಣ ಕಳೆದ ವಾರ ದಿನಮಾನದಿಂದ ಸಭ್ಯವೂ ಅಲ್ಲದ ಅಸಭ್ಯವೂ ಅಲ್ಲದ ರೀತಿಯಲ್ಲಿ ವರ್ತಿಸಬಹುದೆಂದು ಊಹಿಸಿರಲಿಲ್ಲ. ವಾರದಲ್ಲಿ ಎರಡು ಮೂರು ಸಲ ಗಾಂಜಾ ಮದ್ಯೆ ಸೇವಿಸುತ್ತಿದ್ದವನು ಕಳೆದ ಕೆಲವು ದಿವಸಗಳಿಂದ ಅಹರ್ನಿಶಿ ದುಶ್ಚಟಗಳಿಗೆ ದಾಸನಾಗುವುದೆಂದರೇನು! ತನ್ನ ಹಾಗೆ ಮೂಲಿಮನಿ ಗೌಡರೂ ಸಹ, ಅವರೇನೋ ಸ್ಥಿತಿವಂತರು, ದುಶ್ಚಟಗಳನ್ನು ಅನುಭವಿಸಲು, ಅದರಿಂದಾಗುವ ಹಾನಿಯನ್ನು ಹಣದ ಮೂಲಕ ಸರಿಪಡಿಸಿಕೊಳ್ಳಲು ಅವರು ಸರ್ವಥಾ ಸಮರ್ಥರು. ತಾವೂ ಕೆಡಬಲ್ಲರು ತಮ್ಮ ಸಹವಾಸ ಮಾಡಿದವರನ್ನೂ ಕೆಡಿಸಬಲ್ಲರು. ಕಡಿಮೆ ತಿಳವಳಿ ಉಳ್ಳವರಾದ ಅಂಥವರನ್ನು ಹೆಚ್ಚು ತಿಳವಳಿಕೆ ಉಳ್ಳವನಾದ ತಾನು ಸರಿಪಡಿಸಬಹುದಿತ್ತಲ್ಲವೆ! ಅಥವಾ ಪುಷ್ಕಳ ತಲೆಗೂದಲಿರುವ ನಿಮ್ಮಂಥವರು ಹೇಗಾದರೂ ತುರುಬು ಕಟ್ಟಿಕೊಳ್ಳಬಹುದು ಗೌಡರೆ, ಆದರೆ ಕೂದಲಿರದ ನನ್ನಂಥವರಿಗೆ ಅದು ಸಾಧ್ಯವಿಲ್ಲ ಎಂದು ಹೇಳಿ ದೂರ ಉಳಿಯಬಹುದಿತ್ತಲ್ಲವೆ! ಅದೆಲ್ಲ ಅವರವರ ವೈಯಕ್ತಿಕ ವಿಷಯಗಳು. ಆದರೆ ನನ್ನ ಪಾಡಿಗೆ ನಾನಿದ್ದ ನನ್ನಂಥವರನ್ನೂ ಬಲವಂತದಿಂದ ತೋಪಿಗೆ ಕರೆದೊಯ್ಯುವ ಅಗತ್ಯವಿರಲಿಲ್ಲ. ಆಂಜನೇಯ ಅಭಿದಾನ ಪಡೆದಿರುವ ಮಾಮೂಲಿ ಮಂಗನ ದರ್ಶನ ಮಾಡಿಸುವ ಅಗತ್ಯವಿರಲಿಲ್ಲ, ಎಂದೋ ಉಗುಳಿರುವ ಶರಭನೆಂಬ ಎಂಜಲನ್ನು ಪ್ರಸಾದವೆಂದು ಭಾವಿಸಿ ಪುನಃ ಸ್ವೀಕರಿಸಿ ಎಂದು ಒತ್ತಾಯಿಸುವ ಅಗತ್ಯವಿರಲಿಲ್ಲ. ಆದರೂ..

ಶೇಷಣ್ಣ ಸಹ ಸಾಮಾನ್ಯರ ಪೈಕಿ ಸಾಮಾನ್ಯ, ತಪ್ಪು ಮಾಡುವುದು, ಬದುಕನ್ನು ಆಮೂಲಾಗ್ರವಾಗಿ ಅನುಭವಿಸುವುದು ತನ್ನ ಹಕ್ಕು, ಅದನ್ನು ಪ್ರಶ್ನಿಸುವ ಅಧಿಕಾರ ನನಗೆಲ್ಲಿಯದು! ನಾನೇನು ವಾಗಿಲಿಯ ಖಾಯಂ ನಿವಾಸಿಯೆ! ನಾನೇನು ತನ್ನಂಥವರ ಬಾಲ್ಯಸಖನೆ! ನಾನೇನು ತನ್ನ ಬಂಧುಬಳಗದ ಸದಸ್ಯನೆ ಕೊರಳುಪಟ್ಟಿ ಹಿಡಿದು ಕೇಳಲು! ಯೋಚಿಸುತ್ತ ಪುನಃ ಮೆಲ್ಲಗೆ ಅವನ ಕಡೆ ದೃಷ್ಟಿ ಹಾಯಿಸಿದೆ. ದುಶ್ಚಟಗಳನ್ನು ಅನುಭವಿಸೀ ಅನುಭವಿಸಿ ಅಗತ್ಯಕ್ಕಿಂತ ಹೆಚ್ಚು ಬಳಲಿರುವಂತೆ ಗೋಚರಿಸಲಾರಂಭಿಸಿದನು. ಇನ್ನೊಂದು ಸಲ ಇಂಥ ತಪ್ಪುಗಳನ್ನು ಮಾಡುವುದಿಲ್ಲ ಸಾರ್ ಎಂಬ ಪಾಶ್ಚಾತ್ತಾಪದ ತಪ್ಪೊಪ್ಪಿಗೆಯನ್ನು ತನ್ನ ಕಂಠದಲ್ಲಿ ಇರಿಸಿಕೊಂಡಂತಿರುವನು, ಕಥೆಗಳಾಗುವ ಅತ್ಯುತ್ತಮ ಪರಿಕರಗಳನ್ನು

ನಿವೇದಿಸಿಕೊಳ್ಳುವ ಸಲುವಾಗಿಯೇ ತಾನು ಬಂದಿರುವುದು ಎಂದು ಹೇಳುವ ಸಲುವಾಗಿ ಹಾತೊರೆಯುತ್ತಿರುವವನಂತೆ ಭಾಸವಾಗುತ್ತಿರುವನು. ಪುನಃ ನೋಡಿದೆ..

ಶೇಷಣ್ಣ ವಾರೊಪ್ಪತ್ತಲ್ಲಿ ಆಮೂಲಾಗ್ರವಾಗಿ ಮಾಗಿರುವ ವ್ಯಕ್ತಿಯಂತೆ ಗೋಚರಿಸಿದ, ಯಾವುದೇ ಕುಟುಂಬದ ಮಹಿಳಾ ಸದಸ್ಯೆಯರು ಸರ್ವಥಾ ಇಷ್ಟಪಡದ ಗಡ್ಡ ಮೀಸೆಯನ್ನು ಮುಖದ ತುಂಬೆಲ್ಲ ಬಿಟ್ಟಿರುವನು, ಲೌಕಿಕ ಅಲೌಕಿಕ ಹೊಸ್ತಿಲಲ್ಲಿ ತಾನು ನಿಂತಿರುವವನಂತೆ ಕಾಣಿಸುತ್ತಿರುವನು. ಇನ್ನು ಪ್ರೀತಿಯಿಂದ ಮಾತನಾಡಿಸದಿದ್ದಲ್ಲಿ ಕಷ್ಟ ಸುಖ ಪರಾಂಬರಿಸದಿದ್ದಲ್ಲಿ ತಾನು ಗ್ರಾಮದ ಹೆಚ್ಚುವರಿ ನಿಷ್ಪ್ರಯೋಜಕರನ್ನು ಶಾಶ್ವತ ರೀತಿಯಲ್ಲಿ ಹಿಂಬಾಲಿಸುವನೋ ಎಂಬ ಆತಂಕ ಕಾಡಲಾರಂಭಿಸಿತು. ಗಾಢ ನಿದ್ರೆಯಿಂದ ಅದೇ ತಾನೆ ಎಚ್ಚರಗೊಂಡವನಂತೆ ಕಣ್ಣುಬಿಟ್ಟು ನೋಡಿ "ಅರೆ ಶೇಷಣ್ಣ ಯಾವಾಗ ಬಂದಿ! ಹುಷಾರಾಗಿರುವಿ ತಾನೆ!" ಎಂದು ಕೇಳಿದೆ, ಮಾತಿನಲ್ಲಿದ್ದ ನಾಟಕೀಯತೆಯನ್ನಾಗಲೀ ಕೃತಕತೆಯನ್ನಾಗಲೀ ಗ್ರಹಿಸದಿದ್ದುದು ನನ್ನ ಪುಣ್ಯ. ಅದಕ್ಕೆ ಪ್ರತಿಯಾಗಿ ತಾನು "ಅವಾಗಲೇ ಬಂದೆ ಸಾರ್, ಮಲಗಿದ್ದಿರಿ, ತೊಂದರೆ ಕೊಡುವುದು ಯಾಕೆಂದು ಸುಮ್ಮನೆ ಕುಳಿತಿದ್ದೆ" ಎನ್ನುತ್ತ ಸಮಾಧಾನದ ಉಸಿರು ಚೆಲ್ಲಿದನು ನಿರಮ್ಮಳತೆಯಿಂದ. ತಾನಿನ್ನೇನು ವಾಚಿಸಲಿದ್ದನೋ! ಆದರೆ ಅದೇ ಸಮಯಕ್ಕೆ ಸರಿಯಾಗಿ ಹೇಳಿಕಳಿಸಿದಂತೆ ನಾದಿರ ಗೋವಿಂದನು ಹಜಾಮತಿಗೆ ಸಂಬಂಧಿಸಿದ ದಾಸ್ತಾನಿದ್ದ ಪೆಟ್ಟಿಗೆ ಸಹಿತ ಬಂದು ತನ್ನ ಪಕ್ಕ ವಿಶಿಷ್ಟ ಭಂಗಿಯಲ್ಲಿ ಕುಳಿತನು. ಅದೂ ಮೈಗೆ ಮೈಯನ್ನು ಅಂಟಿಸಿ!

ವಾಗಿಲಿಯಲ್ಲಿ ಯಾರಾದರೂ ಆಕರ್ಷಕವಾಗಿ ಕಾಣುತಿದ್ದರೆ ಅದರ ಶ್ರೇಯಸ್ಸು ನಿಸ್ಸಂದೇಹವಾಗಿ ನಾದಿರ ಗೋವಿಂದಗೇ ಸಲ್ಲಬೇಕು. ಅವನ ಕೈಯಿಂದ ಮಾಡಿಸಿಕೊಳ್ಳಲೆಂದೇ ಹೆಬ್ಬಟಂ ಗೌಡರು ಬಳ್ಳಾರಿಯಿಂದ ವಾಗಿಲಿಗೆ ಬರುವರೆಂದರೆ ಉಳಿದವರು ಸುಮ್ಮನಿದ್ದಾರೆಯೆ! ಅಷ್ಟು ಜನಪ್ರಿಯ ವ್ಯಕ್ತಿ ಗೋವಿಂದ, ಹಜಾಮತಿ ಪರಿಕರಗಳಿರುವ ಪೆಟ್ಟಿಗೆಯನ್ನು ಹೊರತುಪಡಿಸಿ ತನ್ನನ್ನು ಕಲ್ಪಿಸಿಕೊಳ್ಳುವುದು ಅಸಂಭವ. ಆತ್ಮಲಿಂಗದಂತೆ ಅದು ಸದಾ ತನ್ನೊಂದಿಗಿರಲೇಬೇಕು, ತನ್ನ ಕುಲಕಸುಬನ್ನು ಜನಪ್ರಿಯಗೊಳಿಸುವುದಕ್ಕಿಂತ, ಅದರಲ್ಲೂ ಸೌಂದರ್ಯಪ್ರಜ್ಞೆಗಿಂತ ಮುಖ್ಯವಾಗಿ ಅಪಾರ ಸಂಖ್ಯೆಯಲ್ಲಿರುವ ತನ್ನ ಕುಟುಂಬವನ್ನು ಪೊರೆಯುವುದು ತನ್ನ ಆದ್ಯಕರ್ತವ್ಯ ತಾನೆ! ಅದಕ್ಕೆಂದೇ ಅವನು ಸೂರ್ಯೋದಯಕ್ಕೂ ಪೂರ್ವದಲ್ಲಿ ಎದ್ದು ಹಳ್ಳಕ್ಕೆ ಧಾವಿಸಿ ಜಲಭಾದೆ ಸೇರಿದಂತೆ ಬ್ರಾಹ್ಮೀಮುಹೂರ್ತದ ಕ್ರಿಯಾಕರ್ಮಗಳನ್ನು ಪೂರೈಸಿ ನೊಸಲಿಗೆ ವಿಭೂತಿ ಧರಿಸಿ ಈರಯ್ಯಸ್ವಾಮಿಯ ಈರಸೈವ ಹೂಟಲಲ್ಲಿ ಅರ್ಧ ಚಹಾ ಸೇವಿಸಿ ತನ್ನ ಗಿರಾಕಿಗಳನ್ನು ಹಡುಕಿಕೊಂಡು ಹೊರಟವನು ಮನೆಯನ್ನು ಸೇರುವುದು ಸೂಯಾಸ್ತವಾದ ಬಳಿಕವೆ! ಜಮೀನ್ದಾರರಲ್ಲೂ, ಕೃಷಿಕಾರ್ಮಿಕರಲ್ಲೂ, ಜೀತದಾಳುಗಳಲ್ಲೂ ಸೌಂದರ್ಯಪ್ರಜ್ಞೆಯನ್ನು ಜಾಗೃತಗೊಳಿಸಲು ಅಹರ್ನಿಶಿ ಶ್ರಮಿಸುತ್ತಿರುವನು. ತನ್ನ ಕುಲಕಸುಬಿಗೆ ಸಂಬಂಧಿಸಿದ ನೈಪುಣ್ಯತೆಯನ್ನು ಸಂಪಾದಿಸಿಕೊಳ್ಳಲು ತಿಂಗಳಿಗೆ ಒಂದು ಸಲವಾದರೂ ಆದೋನಿ ಹೊಳಗುಂದಿಗೆ ಹೋಗಿ ಅಲ್ಲಿನವರ ತಲೆ ಮುಖಗಳನ್ನು ಕೂಲಂಕಷ ಅಧ್ಯಯನ ನಡೆಸಿ ವಾಪಸ್ಸಾಗುವನು. ಅದಕ್ಕೆ ಸಂಬಂಧಿಸಿದ ಪರಿಭಾಷೆಯನ್ನು ಅರಗಿಸಿಕೊಂಡಿರುವವನು ಬೇರೆ. ಎಂಥವರನ್ನೂ ತನ್ನ ಮಾತಿನ ಮೋಡಿಯಿಂದ ತಡೆದು ನಿಲ್ಲಿಸುವನು, ಅಪಾದಮಸ್ತಕ ದಿಟ್ಟಿಸಿ ನೀನು ಗಡ್ಡ ಬಿಡಬಾರದಿತ್ತು ಎಂದೋ, ಮೀಸೆ ಗಿಡ್ಡಕ್ಕಿರಬೇಕಿತ್ತೆಂದೋ, ಕ್ರಾಪು ಎಡಕ್ಕೆ ಬದಲಾಗಿ ಬಲಕ್ಕೆ ಬಾಚಿಕೊಳ್ಳಬೇಕಿತ್ತು ಎಂದು ಸಲಹೆ ನೀಡುವನು, ಅಂಥವರನ್ನು ಗಿರಾಕಿಗಳನ್ನಾಗಿ ಪರಿವರ್ತಿಸಿ ತನ್ನೆದುರಿಗೆ ಕೂಡ್ರಿಸಿಕೊಂಡು

ಚಕಚಕ ಮಾಡುವುದನ್ನು ಆರಂಭಿಸುವನು, ಬಳಿಕ ಅವರ ಕೈಗೆ ಕನ್ನಡಿಯನ್ನು ಕೊಟ್ಟು ಈಗ ಎಂಟಿಆರ್ ಅಕ್ಕಿನೇನಿಯರಂತೆ ಕಾಣುವಿ ನೋಡು ಎಂದು ಹೇಳಿ ಪರವಶಗೊಳಿಸುವನು, ಒಂದಕ್ಕೆ ಬದಲಾಗಿ ಎರಡನ್ನು ಪಡೆದು ಅಂಥವರನ್ನು ಬೀಳ್ಕೊಡುವನು, ವಾಗಿಲಿಯಲ್ಲಿ ಅವನನ್ನು ಜನಪ್ರಿಯಗೊಳಿಸಿರುವುದು ಆರ್ಥಿಕಕ್ಕೆ ಸಂಬಂಧಿಸಿದ ತನ್ನ ಮೃದುಧೋರಣೆ, ಕೊಟ್ಟವರೂ ತನ್ನವರೆ ಕೊಡದವರೂ ತನ್ನವರೆ ಎಂಬ ಸಿದ್ಧಾಂತ ತನ್ನದು, ತನ್ನ ಗಿರಾಕಿಗಳಲ್ಲಿ ಕೆಲವರು ವಾರದವರಿದ್ದರೆ ಕೆಲವರು ವಾರ್ಷಿಕ ಗಿರಾಕಿಗಳು. ಹೇಗೋ ಒಂದು ರೀತಿಯಲ್ಲಿ ತನ್ನ ಸಂಸಾರ ಆರಕ್ಕೇರದಿದ್ದರೆ ಸಾಕು ಮೂರಕ್ಕಿಳಿಯದಿದ್ದರೆ ಸಾಕು. ಹೇಗೋ ಒಂದು ರೀತಿ ತನ್ನ ಕುಲಕಸುಬಿಗೆ ದಕ್ಕೆಯಾಗದಿದ್ದರಾಯಿತು.

ಆದರೆ ಅಂಥ ಕುಶಾಗ್ರಮತಿಯೂ ಅವಧೂತರ ಉಪಟಳದಿಂದಾಗಿ ತತ್ವಾರ ಅನುಭವಿಸಲಾರಂಭಿಸಿದ್ದನು, ಗಿರಾಕಿಗಳು ಸರಿಯಾದ ವೇಳೆಗೆ ದೊರಕದೆ ನಿರುದ್ಯೋಗಿಯಾಗಿ ಗ್ರಾಮದ ಬೀದಿಗಳಲ್ಲಿ ಅಲೆಯುತ್ತಿದ್ದನು, ಕಾರಣ ಅವರಿವರ ಹಜಾಮತಿ ಮಾಡಬೇಕು ತನ್ನ ಕುಟುಂಬದ ಸದಸ್ಯರ ಹೊಟ್ಟೆಪಾಡನ್ನು ನೀಗಿಸಬೇಕಿತ್ತು ತಾನೆ! ತನ್ನ ಅದೃಷ್ಟವೆಂಬಂತೆ ಗೌಡ್ತಿ ರತ್ನಮ್ಮನವರಿಂದ ಸುಧಾಕರನ ಮೂಲಕ ಬುಲಾವ್ ಬಂತು, ಕೆಲವು ಕ್ಷಣಗಳ ಹಿಂದೆಯಷ್ಟೆ ಗೌಡ್ತಿ ನಿರ್ದೇಶನದಂತೆ ಮೂಲಿಮನಿ ಗೌಡರನ್ನು ಆಮೂಲಾಗ್ರವಾಗಿ ಬೋಳಿಸಿದ್ದೂ ಅಲ್ಲದೆ ನಿಗೂಢ ಸ್ಥಳದಲ್ಲಿನ ಹೆಚ್ಚುವರಿ ರೋಮರಾಜಿಯನ್ನು ಸ್ವಯಂಬೋಳಿಸಿಕೊಳ್ಳುವ ಸಲುವಾಗಿ ಅವರ ಕೈಗೆ ಕತ್ತಿ ನೀಡಿ ಅಲ್ಲಿಯೇ ಪ್ರಸಾದ ಸ್ವೀಕರಿಸಿ ಅಂಗಳಕ್ಕೆ ಬಂದನು, ನಂತರದ ಗಿರಾಕಿಯ ಗಿರಾಕಿ ಸಲುವಾಗಿ ತನ್ನ ಆರನೆಯ ಇಂದ್ರಿಯದ ಮೂಲಕ ಯೋಚಿಸಿದನು. ನಿಜದ ಸಂಗತಿ ಎಂದರೆ ತಾನು ಬಂದದ್ದು ನನ್ನನ್ನು ಮಾಡಲೆಂದೇ! ಆದರೆ ಹೆಚ್ಚುವರಿ ಗಿರಾಕಿ ರೂಪದಲ್ಲಿ ಶೇಷಣ್ಣನಿರುವುದು ಗಮನಿಸಿ ಸಂಭ್ರಮಿಸಿದನು. ಕಾರಣ ಆತನನ್ನು ಕಳೆದ ಎರಡು ಮೂರು ದಿವಸಗಳಿಂದ ಮಾಡುವುದಾಗಿ ಪೀಡಿಸುತ್ತಿದ್ದನಲ್ಲವೆ! ನಾನೇ ಶಿಫಾರಸ್ಸು ಮಾಡಬಹುದೆಂದು ತಾನು ಊಹಿಸಿದ್ದನೇನೋ!

ವಿಶಿಷ್ಟ ಭಂಗಿಯಲ್ಲಿ ಕುಳಿತ್ತಿದ್ದ ಗೋವಿಂದ ನನ್ನ ಮುಖದ ಕಡೆ ದೃಷ್ಟಿ ನೆಟ್ಟು ಕ್ರಮೇಣ ಅದನ್ನು ತಲೆ ಕಡೆ ತಿರುಗಿಸಿದ, ಬಳಿಕ ಶೇಷಣ್ಣನ ಕಡೆ ನೋಡಿ ಬಿಡಲಿದ್ದ ನಿಟ್ಟುಸಿರನ್ನು ಮುಗುಳ್ನಗೆಯನ್ನಾಗಿ ಪರಿವರ್ತಿಸಿದ, ಬಳಿಕ ಇವರಿಬ್ಬರ ಮುಖ ಕ್ಷೌರವನ್ನು ಹೇಗೆ ಮಾಡುವುದು, ತಲೆಗಳ ಮೇಲೆ ಯಾವ ಶೈಲಿಯ ಕ್ರಾಪನ್ನು ಅನಾವರಣಗೊಳಿಸುವುದು! ಕೇವಲ ಕತ್ತರಿ ಬಾಚಣಿಕೆಗಳಿಂದ ಕೆಲಸ ಆರಂಭಿಸುವುದೋ! ಮಿಷನ್ನಿಂದ ಒಂದು ಕಡೆಯಿಂದ ಹೆರೆದು ಮಟ್ಟಸಗೊಳಿಸುವುದೋ! ಆದರೆ ತನ್ನ ಕರ್ಮಕ್ಕೆ ಇಬರಿಬ್ಬರಲ್ಲಿ ಯಾರೊಬ್ಬರೂ ಬಾಯಿ ಬಿಡುತ್ತಿಲ್ಲವಲ್ಲ! ತಾನೇ ನೇರವಾಗಿ ಕೇಳಿ ಕರ್ತವ್ಯವನ್ನು ನಿಭಾಯಿಸುವುದೋ! ಅಥವಾ ಪೆಟ್ಟಿಗೆಯಿಂದ ಮಾಯಾದರ್ಪಣ ತೆಗೆದು ಅವರ ಕೈಗಳಿಗೆ ಕೊಟ್ಟು ನೋಡಿಕೊಳ್ಳಿರಯ್ಯಾ ನಿಮ್ಮ ಪ್ರತಿಬಿಂಬಗಳನ್ನು, ಸಾಮಾಜಿಕರಾದ ನೀವು ಹೀಗೆ ವಿರಾಗಿಗಳಂತೆ ಇರುವುದು ನ್ಯಾಯವೇನು? ನೀವು ನಿಮ್ಮ ಮುಖ ತಲೆಗಳ ಬೇಕು ಬೇಡಗಳನ್ನು ಅಲಕ್ಷಿಸಿದರೆ ಹಜಾಮತಿಯಿಂದ ಹೊಟ್ಟೆಹೊರೆಯುವ ನಮ್ಮಂಥವರು ಹೇಗೆ ಬದುಕುವುದು ಎಂದು ಮುಖಕ್ಕೆ ರಾಚಿದಂತೆ ಕೇಳುವುದೋ! ಎಂದು ಮುಂತಾಗಿ ಯೋಚಿಸುತ್ತಿರಬಹುದೆಂದು ಊಹಿಸಿಕೊಂಡೆ. ಹೌದು ಖಂಡಿತ ಅವನು ಹಾಗೆಯೇ ಯೋಚಿಸುತ್ತಿದ್ದ, ತನ್ನ ಕಣ್ಣುಗಳಿಂದ ಹಜಾಮತಿಗೆ ಸಂಬಂಧಿಸಿದ ನೀಲನಕ್ಷೆಯನ್ನು ತಯಾರಿಸುತ್ತಿದ್ದ, ಅನುಕಂಪದ ನೋಟಗಳಿಂದ ನಮ್ಮಿಬ್ಬರ

ವ್ಯಕ್ತಿತ್ವಗಳನ್ನು ಅಳೆದು ತೂಗುತ್ತಿದ್ದ, ಒಂದರ ಹಿಂದೊಂದರಂತೆ ನಿಟ್ಟುಸಿರುಗಳನ್ನು ಚೆಲ್ಲುತ್ತಿದ್ದ, ನಿಜವಾದ ಕಟುಕರೆಂದರೆ ನೀವೇ ಕಣ್ರಯ್ಯಾ ಎಂದು ಹೇಳುವ ಸನ್ನಾಹದಲ್ಲಿ ತಾನಿರುವಂತೆ ಭಾಸವಾಗುತ್ತಿದ್ದ. ಅವನ ಆ ವರ್ತನೆ ಎಷ್ಟೊಂದು ಪರಿಣಾಮಕಾರಿಯಾಗಿತ್ತೆಂದರೆ ನನಗರಿವಿಲ್ಲದಂತೆ ನನ್ನ ಎಡಗೈ ಮುಖದ ಮೇಲೆ ಬೆಳೆದಿದ್ದ ಅಂಗುಲಕ್ಕೆ ತುಸು ಕಡಿಮೆ ಇದ್ದ ಗಡ್ಡವನ್ನು ತುರಿಸಲಾರಂಭಿಸಿತ್ತು, ಬಲಗೈ ಮೆಲ್ಲಗೆ ಸಾಗಿ ತಲೆಯ ಕೂದಲ ಉದ್ದವನ್ನು ಅಳೆಯಲಾರಂಭಿಸಿತ್ತು. ಇಷ್ಟಾನಿಷ್ಟಗಳನ್ನು ಲೆಕ್ಕಿಸದೆ ಪ್ರತಿತಿಂಗಳ ಮೊದಲ ರವಿವಾರದ ಬೆಳಗಿನ ಸಮಯದಲ್ಲಿ ಕಾದಿದ್ದು ಕ್ಷೌರಕಾರ್ಯವನ್ನು ಆರಂಭಿಸುತ್ತಿದ್ದ, ಕ್ಷೌರದ ರೂಪರೇಷೆ ಹೀಗೆಯೇ ಇರಬೇಕು ಎಂದು ಕೇಳುವ ಎದೆಗಾರಿಕೆ ನನ್ನಂಥ ಗಿರಾಕಿಗಳಿಗೆ ಎಲ್ಲಿಂದ ಬರಲಾದೀತು!

ಒಂದು ಸಲ ಧೈರ್ಯವಹಿಸಿ ಕೇಳಿದ್ದಕ್ಕೆ, "ಓದುಗರು ಹೇಳಿದಂತೆ ನೀವು ಕಥೆಗಳನ್ನು ಹೇಗೆ ಬರೆಯುವುದಿಲ್ಲವೋ ಹಾಗೆಯೇ ನಾನು ಗಿರಾಕಿಗಳ ಸಲಹೆ ಪಡೆದು ಕ್ಷೌರ ಮಾಡಲಾರೆ ಸಾರ್! ನಿಮಗೆ ನೀವು ಕಾಣುವುದು ಮುಖ್ಯವಲ್ಲ, ಬೇರೆಯವರ ಕಣ್ಣಿಗೆ ಚಂದ ಕಾಣುವುದು ಮುಖ್ಯ, ನೀವು ಹೇಳಿದಂತೆ ಮಾಡಿದರೆ ನೋಡಿದವರು ನನ್ನ ಮುಖಕ್ಕೆ ಉಗುಳುವುದಿಲ್ಲವೇನು!" ಎಂದು ಕಡ್ಡಿ ಮುರಿದಂತೆ ಹೇಳಿ ಬಾಯಿ ಮುಚ್ಚಿಸುತ್ತಿದ್ದ, ಅಲ್ಲದೆ ಊರಿಗೋರ್ವನೆ ಹನುಮಪ್ಪ ಎನ್ನುವ ಹಾಗೆ ವಾಗಿಲಿಯಲ್ಲಿರುವುದು ತಾನೋರ್ವನೇ ಹಜಾಮ. ಬೇರೆಯವರೂ ಇದ್ದರು, ಆದರೆ ಅವರು ಅವನ ಏಳರ ಕಾಟಕ್ಕೆ ಬೇಸತ್ತು ಅಕ್ಕಪಕ್ಕದ ಊರುಗಳಿಗೆ ವಲಸೆ ಹೋಗಿರುವರು. ಒಂದೇ ಕಡ್ಡಿ ಒಂದೇ ಬೀಡಿ, ಅದನ್ನೂ ಉಳಿಸಬೇಕು ಇದನ್ನೂ ಉಳಿಸಬೇಕು ಎನ್ನುವ ಸಿದ್ಧಾಂತದ ಮೇಲೆ ಸಾಗುತ್ತಿರುವುದು ತನ್ನ ಜೀವನ, ಅವನ ಜೀವನೋತ್ಸಾಹ ನನಗೆ ಇಷ್ಟ, ಆದ್ದರಿಂದ ನಾನು ಪ್ರತಿತಿಂಗಳು ಅಲ್ಲದಿದ್ದರೂ ಎರಡು ತಿಂಗಳಿಗೊಂದು ಸಲವಾದರೂ ತನಗೆ ತೋಚಿದಂತೆ ಮಾಡಿಸಿಕೊಳ್ಳುತ್ತಿರುವುದು ಎಷ್ಟು ನಿಜವೋ, ಪಟ್ಟಣದಲ್ಲಿರುವ ಹಜಮಾರಿಗೆ ಕೊಡವಷ್ಟು ಶುಲ್ಕವನ್ನು ತನಗೆ ಸಂದಾಯ ಮಾಡುತ್ತಿರುವುದು ಅಷ್ಟೇ ನಿಜ. ಇಂಥ ಕಾರಣಗಳಿಂದಾಗಿ ಈಗಲೇ ಮಾಡಿಸಿಕೊಳ್ಳುವುದೋ, ನಾಳೆ ನಾಡಿದ್ದು ಮಾಡಿಸಿಕೊಳ್ಳುವುದಾಗಿ ಹೇಳುವುದೋ ಎಂಬ ಗೊಂದಲವನ್ನು ಅನುಭವಿಸಲಾರಂಭಿಸಿದೆ. ಆದರೆ ಅವನಿಗೆ ಕೂಡಲೆ ನನ್ನನ್ನು ತನ್ನೆದುರಿಗೆ ಕೂಡ್ರಿಸಿಕೊಳ್ಳುವುದು ಇಷ್ಟವಿರಲಿಲ್ಲ, ಎಷ್ಟಾದರೂ ನಾನು ತನ್ನ ಖಾಯಂ ಗಿರಾಕಿ ತಾನೆ! ಅವನ ಗಮನವಿದ್ದುದು ಶೇಷಣ್ಣನ ಗಡ್ಡ ತಲೆಯ ಕಡೆ, ಅವನು ಕ್ಷೌರಕ್ಕೆ ಒಳಗಾದಲ್ಲಿ ತೋಪಿನ ಕಡೆ ಸುಳಿಯಲಾರ ಎಂಬ ಅಚಲ ವಿಶ್ವಾಸ ತನ್ನಲ್ಲಿತ್ತು. ಅಷ್ಟರೊಳಗಾಗಿ ಕೆಲವು ಗಿರಾಕಿಗಳು ಇಣುಕಿ ಹಾಕಿ ಮರಳಿದರು, ತಾನಿನ್ನೂ ರಾಘಪ್ಪಸ್ವಾಮಿಯ ವಿಧವಾ ತಾಯಿ ರಿಂದಮ್ಮನ ತಲೆಯನ್ನು ಬೋಳಿಸಬೇಕಿರುವುದು, ಆದರೆ ಅದೋ ಉದ್ರಿ ಗಿರಾಕಿ, ಸ್ವಾಮಿ ಕೊಡಬಹುದು ಕೊಡದೆ ವಾಪಸ್ಸು ಕಳಿಸಲೂಬಹುದು.

ಶಿಫಾರಸ್ಸು ಮಾಡಲು ನಿರ್ಧರಿಸಿದ ನಾನು ಶೇಷಣ್ಣ ರುಂಡಭಾಗದ ಕಡೆ ತೀಕ್ಷ್ಣ ದೃಷ್ಟಿ ಹರಿಸಿದೆ, ಗಡ್ಡ ಮೀಸೆಯಲ್ಲಿ ತನ್ನ ಮುಖವನ್ನು ಭಾವನೆಗಳ ಸಹಿತ ಮರೆಮಾಚಿರುವನು. ಮಾಡಿಸಿಕೊಂಡರೆಲ್ಲಿ ಅವಿರತ ಗಾಂಜಾ ಹೆಂಡ ಸೇವನೆಯಿಂದಾಗಿ ಬಡಕಲುಗೊಂಡಿರುವ ತನ್ನ ಮುಖ ಸಾರ್ವಜನಿಕವಾಗಿ ಅನಾವರಣಗೊಳ್ಳುವುದೋ ಎಂಬ ಆತಂಕವನ್ನು ಅನುಭವಿಸುತ್ತಿರುವನು, ಅಲ್ಲದೆ ತಪ್ಪಿತಸ್ಥ ಪ್ರಜ್ಞೆಯನ್ನು ಅನುಭವಿಸುತ್ತಿರುವನು, ಒಣಬಿಂಕದ ಕಾರಣದಿಂದಾಗಿ ತನಗೆ ಮಾತಾಡಲು ಸಾಧ್ಯವಾಗುತ್ತಿಲ್ಲ, ಉಳಿದಿಬ್ಬರಲ್ಲಿ ಒಬ್ಬರಾದರೂ ತನ್ನನ್ನು ಮಾತನಾಡಿಸಬಹುದೆಂದು ಕಾಯುತ್ತಿರುವನು.

ಮೌನದಿಂದ ಬಿಡುಗಡೆ ಪಡೆಯುವ ಸಲುವಾಗಿ ಗೋವಿಂದನೇ, "ಮೂಲಿಮನಿ ಗೌಡರ ತಲೆ ಮಾಡಿಮುಗಿಸುವಷ್ಟರಲ್ಲಿ ಹೆಣ ಬಿದ್ದು ಹೋಯಿತು ಸಾರ್! ಅವರ ತಲೆ ಮುಟ್ಟಿದ್ದೊಂದೇ ತಡ ಹೇನುಗಳು ಪುತುಪುತು ಉದುರಿ ಮನೆ ತುಂಬೆಲ್ಲಾ ಓಡಾಡತೊಡಗಿದವು, ಅವರು ಎಷ್ಟು ದಿನಗಳಾಗಿದ್ದವೋ ತಲೆ ಸ್ನಾನ ಮಾಡಿ, ತಲೆಯ ಹೊಲಸಿನಿಂದ ಕತ್ತಿ ಕೀಳುವಷ್ಟರಲ್ಲಿ ಉಂಡ ಕೂಳು ಗಂಟಲಿಗೆ ಬರುತ್ತಿತ್ತು ಸಾರ್! ಅರೆಬರೆ ಸಾಧುಗಳ ತಲೆ ಹೀಗಿರುವಾಗ ಇನ್ನು ಅಸಲಿ ಸಾಧುಗಳ ತಲೆ ಹೇಗಿಬಹುದೂಂತ! ತಮ್ಮನ್ನು ತಾವು ಹೊಲಸು ಮಾಡಿಕೊಳ್ಳುವುದೇ ಬೋಧ ಅಂದುಕೊಂಡಿರುವಂತಿದೆ ಇವರೆಲ್ಲ" ಎಂದು ತುಸು ವ್ಯಂಗ್ಯ ಬೆರೆಸಿ ಮಾತು ಆರಂಭಿಸಿದ. ಅದನ್ನು ಕೇಳಿಸಿಕೊಂಡ ಶೇಷಣ್ಣ ಅವನ ಕಡೆ ತೀಕ್ಷ್ಣ ನೋಟ ಬೀರಿ ಪುನಃ ನಿಟ್ಟುಸಿರುಬಿಟ್ಟನು. ಪರಸ್ಪರ ನೋಡದೆಯೇ ಅವರಿಬ್ಬರ ಅನೂಚಾನವಾಗಿ ನಡೆದ ನೋಟ ಕಾಳಗವನ್ನು ಗಮನಿಸಿದ ನನಗೆ ನಗು ಬಾರದೆ ಇರಲಿಲ್ಲ, ತುಟಿ ತೆರೆದು ನಗಲೂ ಸಾಧ್ಯವಾಗದೆ..

"ಶೇಷಣ್ಣ ಯಾಕೆ ಸಮ್ಮನೆ ಕೂತಿರುವಿ, ನಿನ್ನ ಮನಸ್ಸಿನಲ್ಲಿ ಏನಿರುವುದು? ಮೈಯಲ್ಲಿ ಹುಷಾರಿರದಿದ್ದರೆ ಡಾಕ್ಟರ್ ಸೋಮಣ್ಣನನ್ನು ಕರೆಸುವೆ" ಎಂದು ಕುಶಲೋಪರಿಗೆ ಸಂಬಂಧಿಸಿದ ಮಾತು ಆರಂಭಿಸಿದೆ. ಅದರಿಂದ ಗೋವಿಂದನ ಮುಖ ಅರಳಿತಾದರೂ ಶೇಷಣ್ಣ ನಿಡುಸುಯ್ದು, "ನನ್ನ ಗ್ರಹಚಾರ ಸಾರ್, ಯಾರಿಗೆ ಹೇಳಿ ಏನು ಪ್ರಯೋಜನ?" ಎಂದು ಗಾಬರಿ ಹುಟ್ಟಿಸುವಂತೆ ಪೀಠಿಕೆ ಹಾಕಿದ. ನಾದಿರನ ಅರಳಿದ ಮುಖ ಕೂಡಲೆ ಬಾಡಿತು. ಪುನಃ ನಾನೇ, "ಯಾಕೆ ಹೀಗೆ ಹೇಳುತ್ತಿರುವಿ ಶೇಷಣ್ಣ! ನಾನು ನಿನಗೆ ಹೊರಗಿನವನಾದೆನೇನಪ್ಪ" ಎಂದು ಕೇಳಿದೆ.

ಆಶ್ಚರ್ಯವೆಂದರೆ ಅವನು ತನ್ನ ಕಣ್ಣುಗಳಲ್ಲಿ ನೀರು ತಂದುಕೊಂಡ ವಲ್ಲಿಯಿಂದ ಒರೆಸಿಕೊಳ್ಳುತ್ತ, "ಅವರಿಬ್ಬರೂ ನಮಗೊಂದೇ ಅಲ್ಲದೆ ಊರಿಗೆ ಮೋಸ ಮಾಡಿದರು ಸಾರ್, ಅವರು ನಾಗನಾಥನಹಳ್ಳಿಗೆ ಹೋಗಿರುವುದೂ ಸುಳ್ಳು, ವೆಂಕಾವಧೂತರಿಂದ ಬೋಧ ಪಡೆದಿರುವುದೂ ಸುಳ್ಳು" ಎಂದು ಹೇಳುತ್ತಲೇ ತನ್ನ ಮುಖದ ಮೇಲೆ ಗಂಭೀರತೆಯನ್ನು ಆವಹಿಸಿಕೊಂಡ. ಗೋವಿಂದ ಓಹೋ ಎಂದು ಉದ್ಗರಿಸಿದರೆ ನಾನು ಆಶ್ಚರ್ಯ ಮತ್ತು ಸಂತೋಷ ಎರಡನ್ನೂ ಅನುಭವಿಸಿದೆ. ಅವರಿಬ್ಬರ ಪೂರ್ವಾಪರ ತಿಳಿದಿರುವ ಯಾವ ಸಾಧು ಬೋಧ ನೀಡುವುದು ಅಸಂಭವ! ಆದರೂ ಅವರು ಸಾಧುಗಳ ಛದ್ಮವೇಷ ಧರಿಸಿರುವುದು ಪೋಲಿಸರಿಗೆ ಚಳ್ಳೆಹಣ್ಣು ತಿನ್ನಿಸಲಿಕ್ಕೆಂದೋ! ವಾಗಿಲಿಯ ಜನರ ಕಣ್ಣಿಗೆ ಮಂಕುಬೂದಿ ಎರಚಲಿಕ್ಕೆಂದೋ!

ಪುನಃ ತಾನೇ ಹೇಳಿದ.."ನಾನವರನ್ನು ಸುಮ್ಮನೆ ಬಿಡುವುದಿಲ್ಲ ಸಾರ್" ಎಂದ, ಅದಕ್ಕೆ ನಾನು "ಏನು ಮಾಡಬೇಕೆಂದಿರುವಿ" ಎಂದು ಕೇಳಿದೆ, ಅದಕ್ಕೆ ತಾನು "ಊರವರಿಗೆಲ್ಲ ತಿಳಿಸುವೆ ಸಾರ್, ಗ್ರಾಮದ ದೈವಸ್ಥರು ಪಂಚಾಯಿತಿ ನಡೆಸಲಿ, ಅವರನ್ನು ಊರಿಂದ ಬಹಿಷ್ಕರಿಸಲಿ" ಎನ್ನುತ್ತ ದವಡೆಗೆ ದವಡೆ ಮಸೆದ. ನಾನು ಬಾಗಿ ಕೈಯಿಂದ ಅವನ ಹೆಗಲನ್ನು ಸ್ಪರ್ಶಿಸಿ "ನೋಡು ಶೇಷಣ್ಣ ಸಿಟ್ಟಿನ ಕೈಗೆ ಬುದ್ಧಿ ಕೊಡಬೇಡ, ಅವರ ಪಾಡಿಗೆ ಅವರಿರಲಿ ನಿನ್ನ ಪಾಡಿಗೆ ನೀನಿದ್ದುಬಿಡು, ಯಾರೆದುರು ಬಾಯಿಬಿಡಬೇಡ. ನೀವಿಬ್ಬರೂ ಈಗಲಾದರೂ ಎಚ್ಚೆತ್ತುಕೊಂಡಿರಲ್ಲ ಅಷ್ಟೇ ಸಾಕು" ಎಂದು ಹೇಳಿದಾದ ಬಳಿಕ ನಾದಿರನ ಕಡೆ ತಿರುಗಿ "ಗೋವಿಂದ ಶೇಷಣ್ಣ ಹೇಳಿದ್ದನ್ನು ನೀನು ಕೇಳಿಸಿಕೊಂಡಿಲ್ಲ ಅಷ್ಟೆ, ಮೋಸ ಹೋಗುವವರು ಎಲ್ಲಿಯವರೆಗೆ ಇರುವರೋ ಅಲ್ಲಿಯವರೆಗೆ ಮೋಸ ಮಾಡುವವರೂ ಇರುತ್ತಾರೆ ತಾನೆ!" ಎಂದು ಸಲಹೆ ನೀಡಿದೆ. ಅದಕ್ಕೆ ಅವನು "ನನಗೆ ಗೊತ್ತಿತ್ತು ಸಾರ್ ಅವರು ಎಂಥವರೂ

ಅಂತ! ಬೋಧ ತೆಗೆದುಕೊಂಡಿರುವುದು ನಿಮ್ಮ ತಮ್ಮ ಅಂತ ಬಾಯಿ ಮುಚ್ಚಿಕೊಂಡಿದ್ದೆ, ಮೂಲಿಮನಿ ಗೌಡರೂ ಇದನ್ನೇ ಹೇಳಿದರು, ನಿಮಗೆ ಹೇಳಬೇಕೆಂದುಕೊಂಡಿದ್ದೆ, ಆದರೆ ಅಷ್ಟರೊಳಗೆ ಶೇಷಣ್ಣನೇ ಬಾಯಿಬಿಟ್ಟನಲ್ಲ ಅಷ್ಟೇ ಸಾಕು" ಎಂದು ಹೇಳಿದ, ಶೇಷಣ್ಣ ಇನ್ನೂ ಏನನ್ನೋ ಹೇಳಲು ಪ್ರಯತ್ನಿಸಿದನಾದರೂ ಸಾಧ್ಯವಾಗಲಿಲ್ಲ, ಪುನಃ ನಾನೇ "ಶೇಷಣ್ಣ ಇನ್ನು ಮೇಲಾದರೂ ಗಾಂಜಾ ಆಫೀಮು ಚಟಗಳಿಂದ ದೂರವಿದ್ದುಬಿಡು, ಗೌಡರಿಗೂ ಇದನ್ನೇ ಹೇಳುವೆ, ನಿನ್ನಂಥವರು ಗಡ್ಡಬಿಟ್ಟು ರೋಗಿಗಳಂತೆ ಕಾಣುವುದು ನನಗೆ ಇಷ್ಟವಿಲ್ಲ, ಗೋವಿಂದನ ಜೊತೆಯಲ್ಲಿ ಹೋಗಿ ಕ್ಷೌರ ಮಾಡಿಸಿಕೊ, ಹಾಗೆಯೇ ಕಾಲುವೆ ಹೋಗಿ ಸ್ನಾನ ಮಾಡುವುದನ್ನು ಮರೆಯಬೇಡ, ತಿಳಿಯಿತೇನು?" ಎಂದು ಹೇಳಿದಾದ ಬಳಿಕ!

++++

ಹಿಂದಲೆಯಲ್ಲಿ ಪುಟ್ಟ ಗಾತ್ರದ ತುರುಬನ್ನೂ, ಮೇಲ್ದವಡೆಯಿಂದ ಜಾರಿ ಕೆಳದವಡೆ ಮರೆಮಾಚುವಂತೆ ಗಲ್ಲಿ ಮೀಸೆಯನ್ನೂ ಇಳಿಬಿಟ್ಟುಕೊಂಡು ತಮ್ಮ ರೆಡ್ಡಿ ಕುಲಬಾಂಧವರಿಗೊಂದೇ ಅಲ್ಲದೆ ಸಮಸ್ತ ವಾಗಿಲಿಗೆ ಕಳಸಪ್ರಾಯರಾಗಿದ್ದ ಮೂಲಿಮನಿಗೌಡರು ಗೋವಿಂದನ ಕೈಚಳಕದಿಂದಾಗಿ ಗುಂಡು ಮಾಡಿಸಿಕೊಂಡ ಕಾರಣಕ್ಕೆ ಪುನಃ ಮನೆ ಮಾತಾದರು. ಜೈನಮುನಿಯಂತೆ ಅವರು ಎಷ್ಟು ದಿವಸ ತಮ್ಮ ಹನ್ನೆರಡು ಅಂಕಣಗಳ ಬಹು ವಿಸ್ತೀರ್ಣದ ಮನೆಯಲ್ಲಿ ಅವಿತುಕೊಂಡಿರಲಾದೀತು! ಅವರು ನಖಶಿಖಾಂತ ಬೋಳಿಸಿಕೊಂಡ ಸಂಗತಿ ಎಷ್ಟೇ ಗುಟ್ಟಾಗಿರಿಸಿದರೂ ರಟ್ಟಾಗದೆ ಉಳಿಯಲಿಲ್ಲ, ತೀರಾ ಆಪ್ತರು ಮೂಲಿಮನಿಗೆ ಧಾವಿಸಿ ಅವರನ್ನು ನೋಡಿಕೊಂಡು ಬರಲಾರಂಭಿಸಿದರು, ಗೌಡರು ಹೀಗೆ ಕಾಣಿಸುತ್ತಿರುವರು ಹಾಗೆ ಕಾಣಿಸುತ್ತಿರುವರು ಎಂದು ಅವರಿವರೆದುರು ಹೇಳಿಕೊಂಡು ತಿರುಗಾಡಲಾರಂಭಿಸಿದರು. ಮನೆ ಎಂದ ಮೇಲೆ ಬಂದು ಹೋಗುವವರನ್ನು ಉಪಚರಿಸದೆ ಇರಲಾಗುವುದೆ! ಚಹಾ ತಿಂಡಿ ವಗೈರೆ ಮಾಡೀ ಮಾಡಿ ಬಸವಳಿದು ರೋಸಿದ ರತ್ನಮ್ಮನವರು ತಮ್ಮ ಗಂಡನನ್ನು ಬಲವಂತದಿಂದ ಅಂಗಳಕ್ಕೆ ತಂದು ನಿಲ್ಲಿಸಿ ಮೈಚಳಿಬಿಟ್ಟು ಊರೊಳಗೆ ಅಡ್ಡಾಡು ಹೋಗು ಎಂದು ಆಜ್ಞಾಪಿಸಿದರೇನೋ ಸರಿ. ಆದರೆ ಅವರು ಬೆಕ್ಕನ್ನು ಕಂಡ ಇಲಿಯಂತೆ ಅಂಗಳದಿಂದ ಮನೆಯೊಳಗೆ ಓಡುವುದು ಪುನಃ ಹೊರಗೆ ಬರುವುದು ನಡೆಸೀ ನಡೆಸಿ ಸಂಕೋಚದಿಂದ ಪರಿತ್ಯಕ್ತರಾದರು. ಕಾಲ ಗತಿಸಿದಂತೆ ಮನೆಗೆ ಆಗಮಿಸಿ ನನಗೂ ಗೋಚರಿಸಿದರು, ಅವರನ್ನು ಮೊದ ಮೊದಲು ಗುರುತಿಸುವುದು ನನಗೂ ಸಾಧ್ಯವಾಗಲಿಲ್ಲ, ಕ್ರಮೇಣ ಗುರುತಿಸಿ ಕುಡಿಯಲು ನೀರು ಕೊಟ್ಟು ಉಪಚರಿಸಿದೆ, ಹೋಗಿರುವ ಕೂದಲು ತಿಂಗಳೊಳಗೆ ಬರುವವು ಗೌಡರೆ ಚಿಂತಿಸದಿರಿ ಎಂದು ಧೈರ್ಯದ ಮಾತುಗಳನ್ನಾಡಿದೆ, ಅವರನ್ನು ಪುನಶ್ಚೇತನಗೊಳಿಸಿದೆ. ತಮ್ಮ ಬೋಳುದಲೆಯನ್ನು ವಲ್ಲಿಯಿಂದ ಮರೆಮಾಚಿ ಅಲ್ಲಿ ಇಲ್ಲಿಗೆ ಹೋಗಿ ಬರಲಾರಂಭಿಸಿದರು. ಆದರೆ ಶೇಷಣ್ಣ ಗೌಡರಷ್ಟು ಸಾಮಾಜಿಕವಾಗಿ ಅಂಜುಬುರುಕನಾಗಿರಲಿಲ್ಲ, ಮೊದಮೊದಲು ತನ್ನ ಬೋಳುದಲೆಯ ಮೇಲೆ ತನ್ನೆರಡೂ ಅಂಗೈಗಳನ್ನು ಇರಿಸಿಕೊಂಡಿರುತ್ತಿದ್ದ ತಾನು ಕ್ರಮೇಣ ನಿರ್ಭೀತನಾಗಿ ತಿರುಗಾಡಲಾರಂಭಿಸಿದ.

ಕೊಟ್ಟ ಮಾತಿನಂತೆ ಅವನು ಅವಧೂತರೀರ್ವರ ಅಸಲಿತನವನ್ನು ಜಗಜ್ಜಾಹಿರು ಮಾಡದಿದ್ದರೂ ನಾದಿರನ ಬಾಯಿ ತೆಪ್ಪಗಿದ್ದರೆ ತಾನೆ! ಊರೆಲ್ಲ ಸುದ್ದಿಯಾಯಿತು, ಆದರೆ ಯಾರೊಬ್ಬರಿಗೂ ಅವಧೂತರ ಕೊರಳಪಟ್ಟಿ ಹಿಡಿದು ನೀವು ಹೀಗೆ ಮಾಡಬಹುದೆ

ಎಂದು ಕೇಳುವ ಧೈರ್ಯವಿರಲಿಲ್ಲ, ಅವರಿಬ್ಬರ ಪೈಕಿ ಒಬ್ಬನು ಭಯೋತ್ಪಾದಕ ಎಂಬ ಕಾರಣದಿಂದ, ಶರಭ ಹೆಸರಿನ ಇನ್ನೊಬ್ಬ ಸರ್ಕಾರಿ ನೌಕರನೋರ್ವನ ಸಹೋದರ ಎಂಬ ಕಾರಣದಿಂದ. ಮೂಲಿಮನಿ ಗೌಡರೇ ನಿಮ್ಮ ತಮ್ಮನನ್ನು ತೋಪಿನಿಂದ ಕರೆದುಕೊಂಡು ಬಂದು ಮನೆಯಲ್ಲಿಟ್ಟುಕೊಳ್ಳಿರಿ ಮೇಸ್ಟ್ರೆ, ಪರಶುರಾಮನ ಸಹವಾಸದಿಂದ ಅವನೂ ಕೆಟ್ಟು ಹೋಗುವನು, ಅವನನ್ನು ಅವನ ಊರಿಗೆ ಕಳಿಸಿಬಿಡಿ ಅಥವಾ ಮದುವೆ ಮಾಡಿದಿರೆಂದರೆ ಎಲ್ಲಾ ಸರಿಹೋಗುವುದು ಎಂದು ಹೇಳಿ ನೋಡಿದರು. ತಮ್ಮನಲ್ಲದ ಅವನನ್ನು ಮನೆಗೆ ಕರೆತರುವುದೆಂದರೇನು! ಮದುವೆ ಮಾಡುವುದೆಂದರೇನು! ಮೀನಿಗೆ ಈಜು ಕಲಿಸುವುದೆಂದರೇನು! ನಿಜ ಸಂಗತಿ ಹೇಳಲಿಕ್ಕೂ ಹೋಗಲಿಲ್ಲ, ತೋಪಿಗೆ ಹೋಗಿ ಬಾರಯ್ಯಾ ನನ್ನ ತಮ್ಮನೇ ಎಂದು ಕರೆಯುವ ಪ್ರಯತ್ನವನ್ನೂ ಮಾಡಲಿಲ್ಲ. ಅಡ್ಡಗೋಡೆ ಮೇಲೆ ದೀಪವಿರಿಸಿದಂತೆ ಹರಡಿದ ವದಂತಿಗಳ ಕುರಿತು ಜನರೂ ತಮ್ಮ ತಲೆಗಳನ್ನು ಕೆಡಿಸಿಕೊಳ್ಳಲೂ ಇಲ್ಲ, ಆಂಜನೇಯ ಅಭಿದಾನದ ಮಂಗ ಇದ್ದಕ್ಕಿದ್ದಂತೆ ಕಣ್ಮರೆಯಾಗದಿದ್ದಲ್ಲಿ ಅವರು ಆ ವದಂತಿಗಳ ಕುರಿತು ತಲೆ ಕೆಡಿಸಿಕೊಳ್ಳುತ್ತಿದ್ದರೇನೋ! ಮರ್ಕಟ ಕಣ್ಮರೆಯಾಗುವುದರ ಮೂಲಕ ವಾಗಿಲಿಯ ಜನರಲ್ಲಿ ಪಾಪಪ್ರಜ್ಞೆಯನ್ನು ಸೃಷ್ಟಿಸಿ ತಳಮಳಕ್ಕೀಡು ಮಾಡದಿದ್ದಲ್ಲಿ ಅವರು ಇನ್ನೇನು ಮಾಡಲಿದ್ದರೋ! ಅಥವಾ ಮೂಲನಿವಾಸಿಗಳಾದ ಸಾಧುಗಳೇ ಅವರನ್ನು ತೋಪಿನಿಂದ ಬಹಿಷ್ಕರಿಸುತ್ತಿದ್ದರೇನೋ!

ಆದರೆ ಕಣ್ಮರೆಯಾದ ಮಂಗ ಆ ಒಂದು ದಿವಸ ಇದ್ದಕ್ಕಿದ್ದಂತೆ ತನ್ನ ಅಪಾರ ಸಂಗಡಿಗರೊಡನೆ ತೋಪಿನಲ್ಲಿ ಕಾಣಿಸಿಕೊಂಡು ವದಂತಿ ಊಹೆಗಳನ್ನೆಲ್ಲಾ ನೇಪಥ್ಯಕ್ಕೆ ಸರಿಸಿಬಿಟ್ಟಿತು, ಚಿಕ್ಕ ಸಂಸಾರ ಚೊಕ್ಕ ಸಂಸಾರ ಎನ್ನುವಂತಿದ್ದ ತೋಪೂ ವಾನರ ಸೈನ್ಯದ ಅತಿಕ್ರಮಣ ಆಕ್ರಮಣಕ್ಕೆ ತುತ್ತಾಯಿತು. ಅವುಗಳ ಕ್ಷುದ್ಬಾದೆ ನೀಗಿಸಲು ಅಲ್ಲಿ ಹಣ್ಣುಹಂಪಲಗಳ ಗಿಡಮರಗಳಿದ್ದರೆ ತಾನೆ! ಕ್ರಮೇಣ ಅವು ತೋಪಿಗೆ ಸನಿಹದಲ್ಲಿದ್ದ ಹೊಲಗಳ ಮೇಲೆ ದಾಳಿ ನಡೆಸಲಾರಂಭಿಸಿದವು, ಗೋವಿಂದನಿಗಿಂತ ಒಂದು ಕೈಮಿಗಿಲಾಗಿ ಹೊಲಗಳನ್ನೆಲ್ಲ ಬರಿದು ಮಾಡಿದಾದ ಬಳಿಕ ವಾಗಿಲಿಯ ಸರಹದ್ದನ್ನು ಪ್ರವೇಶಿಸಿದವು. ಅಲ್ಲಿಂದ ಬಳಿಕ ಪ್ರತಿಯೊಂದು ಮನೆ ಅಂಗಳದಲ್ಲೋ ಮರಗಿಡಗಳ ಮೇಲೋ ಕಾಣಿಸಿಕೊಂಡು ತಮ್ಮ ಅಂಗಚೇಷ್ಟೆಗಳ ಮೂಲಕ ಜನರನ್ನು ಅದರಲ್ಲೂ ಮುಖ್ಯವಾಗಿ ಮಕ್ಕಳನ್ನು ರಂಜಿಸಲಾರಂಭಿಸಿದವು. ಮೊದಲು ಕೈಚಾಚಿ ಅಂಗಲಾಚಿ ಆಹಾರದಿನಿಸುಗಳನ್ನು ಪಡೆಯುತ್ತಿದ್ದ ಅವು ಕ್ರಮೇಣ ಅವರಿವರ ಕೈಯಲ್ಲಿದ್ದ ಆಹಾರ ಪದಾರ್ಥಗಳನ್ನು ಕಿತ್ತುಕೊಳ್ಳತೊಡಗಿದವು, ಲಪಟಾಯಿಸಲಾರಂಭಿಸಿದವು. ಕೊಡುವವರು ಪ್ರಸಾದ ಕರುಣಿಸುವವರು ಅಪರೂಪವಾದ ಬಳಿಕ ಅವು ಗವಾಕ್ಷಿ ಬಾಗಿಲುಗಳ ಮೂಲಕ ಮನೆಗಳನ್ನು ಪ್ರವೇಶಿಸಿ ಮಾಡಿರಿಸಿದ ಅಡುಗೆಯನ್ನು, ನಗಂದಿ ನೆಲುವುಗಳಲ್ಲಿರಿಸಿದ ಆಪತ್ಕಾಲೀನ ತಿಂಡಿ ತಿನಿಸುಗಳನ್ನು ಕಾಳುಕಡಿಯನ್ನು ಮುಕ್ಕಲಾರಂಭಿಸಿದವು, ಅದೂ ಸಾಲದೆನ್ನುವಂತೆ ಅವು ತಿಮ್ಮಯ್ಯ ತಿಪ್ಪಯ್ಯ ನಾರಾಯಣಶೆಟ್ಟಿಯರ ವಾಣಿಜ್ಯಕೇಂದ್ರಗಳ ಮೇಲೆ ದಾಳಿ ಮಾಡಲಾರಂಭಿಸಿದವು.

ಅವುಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಸಲುವಾಗಿ ಸ್ವಯಂ ಸೇವಕ ಸಂಘಗಳೂ ಹಲವು ಕಡೆ ಕಾಣಿಸಿಕೊಂಡು ಕ್ರಿಯಾಶೀಲವಾದವು, ಅವುಗಳ ಕಡೆ ಸದಸ್ಯರು ಉಸ್ ಉಸ್ ಎಂಬ ಗದರಿಕೆಗಳನ್ನು ಧ್ವನಿಪೂರ್ಣವಾಗಿ ಪ್ರಯೋಗಿಸುತ್ತಿದ್ದರು, ನೆಪ ಮಾತ್ರಕ್ಕೆ ಕೋಲುಗಳನ್ನೂ ತೋರಿಸುತ್ತಿದ್ದರು, ಆದರೆ ಅವುಗಳತ್ತ ಗುರಿ ಇಟ್ಟು ಹೊಡೆಯುವ ಧೈರ್ಯ ಯಾರೊಬ್ಬರಲ್ಲೂ

ಇರಲಿಲ್ಲ, ಹೊಡೆಯುತ್ತಿದ್ದರೇನೋ! ಆದರೆ ಪೌರಾಣಿಕವಾಗಿ ನಿಸ್ಸಹಾಯಕರಾಗಿ ಕೈಚೆಲ್ಲುತ್ತಿದ್ದರು. ಆದರೆ ವಾಗಿಲಿಯಲ್ಲಿದ್ದ ಶುನಕಗಳ ಸಮೂಹಕ್ಕೆ ಮಾತ್ರ ಯಾವುದೇ ಪೌರಾಣಿಕ ಪ್ರಜ್ಞೆಯ ಹಂಗಿರಲಿಲ್ಲ, ಅವು ಗುಂಪು ಗುಂಪಾಗಿ ಮರ್ಕಟಗಳ ದಾಳಿಯನ್ನು ಪ್ರತಿರೋಧಿಸುತ್ತಿದ್ದವು, ಬೆಂಬಿಡದೆ ಹಿಂಬಾಲಿಸುತ್ತ ಹೋ ಎಂದು ಅಸಹಾಯಕತೆಯಿಂದ ಕಿವಿಗಳು ಗಡಚಿಕ್ಕುವಂತೆ ಬೊಗಳುತ್ತಿದ್ದವು, ಶುನಕಗಳ ಅಸಹಾಯಕತೆಯನ್ನು ಬೊಗಳುವಿಕೆಯನ್ನು ಅಜೇಯ ಮರ್ಕಟಗಳು ಹಲ್ಕಿರಿದು ಆನಂದಿಸುತ್ತಿದ್ದವು. ಅವುಗಳ ಕಿರಿಕಿರಿಯಿಂದ ನಾನಾಗಲೀ ನನ್ನ ಮನೆಯಾಗಲೀ ನಮ್ಮ ಶಾಲೆಯಾಗಲೀ ಪಾರಾಗುವುದು ಸಾಧ್ಯವಿರಲಿಲ್ಲ, ಸಹಶಿಕ್ಷಕರು ಬಾಳೆಯ ತೋಟದ ಪಕ್ಕದ ಕಾಡೊಳು ವಾಸಿಸುತ್ತಿದ್ದವು ಮಂಗಗಳು ಎಂಬ ಪದ್ಯವನ್ನು ಬೋಧಿಸುವಾಗ ಮಕ್ಕಳಿಗೆ ಅವುಗಳನ್ನು ತೋರಿಸುವುದರ ಮೂಲಕ ಬೋಧನೋಪಕರಣವನ್ನಾಗಿ ಬಳಸಿಕೊಳ್ಳುತ್ತಿದ್ದರು, ಕಲಿಕಾ ಕೌಶಲ್ಯ ಮೆರೆಯುತ್ತಿದ್ದರು, ಹೆಮ್ಮೆಯಿಂದ ಪೋಷಕರ ಕಡೆಗೂ ವೃತ್ತಿ ಮಾತ್ಸರ್ಯದಿಂದ ನನ್ನ ಕಡೆಗೂ ನೋಡುತ್ತಿದ್ದರು. ಇದನ್ನೆಲ್ಲ ಆಸ್ವಾದಿಸುತ್ತ ವಾಗಿಲಿಯ ಪ್ರಮುಖರು ಕೈಕಟ್ಟಿ ಕುಳಿತಿರಲಿಲ್ಲ, ದ್ವಿಪಾದಿಗಳ ಶತಪದಿಗಳ ಉರಗಗಳ ಕಳ್ಳಕಾಕರ ಕೊಲೆಗಡುಕರ ಉಪಟಳ ನಿಗ್ರಹಿಸುವ ಅಪಾರ ಅನುಭವ ಕೌಶಲ್ಯ ತಮಗಿರುವುದೇನೋ ಸರಿ, ಆದರೆ ಮರ್ಕಟಗಳ ಉಪಟಳವನ್ನು ನಿಗ್ರಹಿಸಿದ ಅನುಭವವಾಗಲೀ ಅದಕ್ಕೆ ಸಂಬಂಧಿಸಿದ ತಂತ್ರಗಾರಿಕೆಯಾಗಲೀ ತಮಗಿರಲಿಲ್ಲ. ಇರುವುದು ಎಂದು ಭಾವಿಸಿದರೆ ಅದೂ ಸ್ವತಂತ್ರವಾಗಿ ನಿರ್ಣಯ ತೆಗೆದುಕೊಳ್ಳುವಂತಿರಲಿಲ್ಲ, ಒಂದು ಕಡೆ ಆಸ್ತಿಕತೆ ಧಾರ್ಮಿಕಕ್ಕೆ ಸಂಬಂಧಿಸಿದ ಪರಂಪರಾಗತ ನಂಬಿಕೆಗಳು ತಮ್ಮ ಕೈಗಳನ್ನು ಕಟ್ಟಿ ಹಾಕಿದರೆ ಇನ್ನೊಂದು ಕಡೆ ಪ್ರತಿಯೊಂದಕ್ಕೂ ಹೆಬ್ಬಟಂ ಗೌಡರ ಮರ್ಜಿಯನ್ನು ಪರಿಪಾಲಿಸುವ ಅಗತ್ಯವಿತ್ತು, ಅಲ್ಲದೆ ಅವರು ತಮ್ಮೆಲ್ಲರಿಗಿಂತ ನೂರುಪಟ್ಟು ಧಾರ್ಮಿಕ ವ್ಯಕ್ತಿಗಳು ಬೇರೆ. ಏನೋ ಮಾಡಲು ಹೋಗಿ ಇನ್ನೊಂದು ಸಂಭವಿಸಿದರೆ! ಅದರಲ್ಲೂ ಮುಖ್ಯವಾಗಿ ಯಾವುದಾದರೊಂದು ಮರ್ಕಟದ ಶವ ಕಾಣಿಸಿಕೊಂಡರೆ! ನೂರು ಶಿಶುಹತ್ಯಾ ದೋಷಕ್ಕೆ ಸರಿಸಮಾನವಾದುದು ಒಂದು ಮರ್ಕಟವನ್ನು ಕೊಲ್ಲುವುದು! ಆದ್ದರಿಂದಾಗಿಯೇ ವಾಗಿಲಿಯ ಪ್ರಮುಖರು ಕೈಕಟ್ಟಿ ಕುಳಿತುಕೊಳ್ಳದೇ ಇದ್ದರೂ ಸ್ವಯಂಸೇವಕರಿಗೆ ಮರ್ಕಟ ನಿಗ್ರಹ ದಳದ ಸದಸ್ಯರಿಗೆ ಅವರು ಯಾವ್ಯಾವ ಸಲಹೆ ಬುದ್ಧಿವಾದಗಳನ್ನು ನೀಡುತ್ತಿದ್ದರೆಂದರೆ– ಅಹಿಂಸೋ ಪರಮಧರ್ಮಹ, ಸಿಟ್ಟಿನ ಕೈಗೆ ಜುಟ್ಟು ಕೊಟ್ಟು ಸನಾತನ ಧರ್ಮಕ್ಕೆ ಕೆಟ್ಟ ಹೆಸರು ತರಬೇಡಿ, ಮಂಗಗಳು ವಾಗಿಲಿಯ ಗಣ್ಯ ಅತಿಥಿಗಳೆನ್ನುವುದನ್ನು ಮರೆಯಬೇಡಿ, ಸಾಧ್ಯವಾದಷ್ಟು ಸಾತ್ವಿಕ ಬಯ್ಗಳನ್ನು ಬಳಸಿ, ಅವು ಎಷ್ಟು ತಿನ್ನುವವೋ ದೇವರು ಅದಕ್ಕಿಂತ ನೂರರಷ್ಟು ಕೊಡುವನು ಎನ್ನುವುದನ್ನು ನೆನಪಿಟ್ಟುಕೊಳ್ಳಿ ಇವೇ ಮುಂತಾದವು. ಹೀಗೆ ಹೇಳುತ್ತಿದ್ದ ಗ್ರಾಮದ ಪ್ರಮುಖರು ಕೈಕಟ್ಟಿ ಕುಳಿತಿರಲಿಲ್ಲ.

ವಾಮಾಚಾರಿಗಳನ್ನು ಗುಟ್ಟಾಗಿ ವಾಗಿಲಿಗೆ ಬರಮಾಡಿಕೊಂಡು ಗ್ರಾಮದ ಮೇರೆಗಳಲ್ಲಿ ದಿಗ್ಬಂಧನ ವಿಧಿಸುವುದನ್ನೋ, ಮಂತ್ರಿತ ಯಂತ್ರ ಅಂತ್ರಗಳನ್ನು ವಿತರಣೆ ಮಾಡುವುದನ್ನೋ, ಆಂಜನೇಯಾಷ್ಟಕವನ್ನು ಬಾಯಿ ಮಾಡಿಸುವುದನ್ನೋ, ಗ್ರಾಮದ ಗತಿಸಿದ ಹಿರಿಯರ ಆತ್ಮಗಳನ್ನು ಆವಹಿಸಿಕೊಂಡಿರಬಹುದಾದ ಮಂಗಗಳನ್ನು ಅಂಜನದ ಮೂಲಕ ಪತ್ತೆ ಹಚ್ಚುವುದನ್ನೋ, ಅಂಥ ಪ್ರೇತಾತ್ಮಗಳನ್ನು ತೃಪ್ತಿಪಡಿಸುವುದನ್ನೋ ಮುಂದುವರೆಸಿದರಾದರೂ ಪ್ರಯೋಜನವಾಗಲಿಲ್ಲ. ಹೀಗೆ ವಾಗಿಲಿಯಲ್ಲಿ ಮರ್ಕಟಗಳ ಉಪಟಳ ಕುರಿತಂತೆ ಕೆಲವೇ ಮಾತುಗಳಲ್ಲಿ ವರ್ಣಿಸುವುದು ಕಡುಕಷ್ಟವೇ ಸರಿ.

ಅರೆ ಇಷ್ಟೆಲ್ಲಾ ರಾದ್ಧಾಂತಗಳಿಗೆ ಕಾರಣವಾದ ಮಂಗಗಳನ್ನು ಬರೆಯಲಿರುವ ಕಾದಂಬರಿಯಲ್ಲಿ ಚಿತ್ರಿಸುವುದು ಮುಖ್ಯವೆಂದು ಭಾವಿಸಿದೆನೇನೋ ಸರಿ, ಆದರೆ ಚಂಚಲ ಸ್ವಭಾವದ ಹಾಗೂ ವಿದ್ವಂಸಕ್ಕೆ ಹೆಸರಾದ ಅವುಗಳನ್ನು ಕಾದಂಬರಿಯ ಯಾವ್ಯಾವ ಪಾತ್ರಗಳಲ್ಲಿ ಅಳವಡಿಸುವುದು! ನಲ್ಲಮಲ ಕಾಡಿನಲ್ಲಿ ಪೋಲಿಸರು ದಶಕದ ಹಿಂದೆ ನಡೆಸಿದ ಕೂಂಬಿಂಗ್ ಕಾರ್ಯಾಚರಣೆಯಲ್ಲಿ ದುರ್ಮರಣಕ್ಕೀಡಾದ ಅಣ್ಣಂದಿರೇ ಜಮೀನ್ದಾರರ ವಿರುದ್ಧ ಹೋರಾಡುವ ಸಲುವಾಗಿ ಮರ್ಕಟಗಳ ಜನ್ಮ ತಳೆದು ವಾಗಿಲಿಯನ್ನು ಪ್ರವೇಶಿಸಿರುವುದಾಗಿ ಚಿತ್ರಿಸುವುದೋ! ಅಥವಾ ನಕ್ಸಲೈಟರ ನೆಲಬಾಂಬುಗಳ ಸ್ಫೋಟದಿಂದಾಗಿಯೋ, ಹತ್ಯಾಕಾಂಡ ಮಾರಣಹೋಮಗಳಲ್ಲೋ ಕಗ್ಗೊಲೆಗೀಡಾದ ಪೋಲಿಸರ ಆತ್ಮಗಳೇ ಮರ್ಕಟ ಜನ್ಮತಳೆದು ಪನ್ನಂಗಧರ, ದಯಾನಂದರಂಥ ಹೋರಾಟಗಾರರ ವಿರುದ್ಧ ಹೋರಾಡುವ ಸಲುವಾಗಿ ವಾಗಿಲಿಯನ್ನು ಪ್ರವೇಶಿಸಿರುವುದಾಗಿ ಚಿತ್ರಿಸುವುದೋ! ಅಥವಾ ನೈಸರ್ಗಿಕ ವಿಕೋಪಕ್ಕೆ ಬಲಿಯಾಗಿ ಪ್ರಾಣ ಕಳೆದುಕೊಂಡಿರುವ ಸಾಮಾನ್ಯಪ್ರಜೆಗಳ ಆತ್ಮಗಳೇ ಮರ್ಕಟಗಳ ರೂಪದಲ್ಲಿ ವಾಗಿಲಿಯಲ್ಲಿ ಕಾಣಿಸಿಕೊಂಡಿರುವುದಾಗಿ ಚಿತ್ರಿಸುವುದೋ! ಯೋಚಿಸಲಾರಂಭಿಸಿದೆನಾದರೂ ಕೂಡಲೆ ಹೊಳೆಯಲಿಲ್ಲ. ಕಾದಂಬರಿಯ ಎಂಟನೆಯ ಅಥವಾ ಒಂಭತ್ತನೆಯ ಪರಿಶ್ಚೇಧಗಳಲ್ಲಿ ಅವುಗಳನ್ನು ಬರಮಾಡಿಕೊಂಡರಾಯಿತು, ಈಗ ಸದ್ಯಕ್ಕೆ ಬ್ಯಾಗೇರ ಕಾಳಿಕಾದೇವಿಯ ಎರಡಂಕಣದ ಮನೆಯಲ್ಲಿನ ಪಡಸಾಲೆಯಲ್ಲಿ ಅದೇ ತಾನೆ ಊಟ ಮುಗಿಸಿ ಎದರುಬದುರಾಗಿ ಕುಳಿತು ಪಿಸುದನಿಯಲ್ಲಿ ಹೊರಾಟ, ಸಂಘಟನೆಗೆ ಸಂಬಂಧಿಸಿದಂತೆ ಚರ್ಚಿಸುತ್ತಿರುವ ಪನ್ನಂಗಧರ ದಯಾನಂದರ ಕಡೆ ಗಮನ ಹರಿಸುವುದು ಕಾದಂಬರಿಕಾರನಾದ ನನ್ನ ಆದ್ಯಕರ್ತವ್ಯವೆಂದು ಭಾವಿಸಿದೆ.

ಅವರು ಕರೆಯದಿದ್ದರೂ ನಾನು ಸ್ವಯಂಪ್ರೇರಿತನಾಗಿ ಮನೆಯ ಅಂಗಳದಲ್ಲಿ ನಿಂತು ಮೆಲ್ಲಗೆ ಕೂಗಿದೆ. ಬಾಗಿಲು ತೆರೆದಾದ ಬಳಿಕ ಕಾಣಿಸಿಕೊಂಡ ಕಾಳಿಕಾಮಾತೆ ಕೂಡಲೆ ನನ್ನನ್ನು ಗುರುತಿಸಿ ರೋಮಾಂಚನಗೊಂಡಳು, ಕೈಸನ್ನೆ ಮೂಲಕ ಒಳಗಡೆ ಕರೆಯುವುದೋ, ಬಾಯಿ ತೆರೆದು ಮೌಖಿಕವಾಗಿ ಕರೆಯುವುದೋ ಎಂಬ ಗೊಂದಲಕ್ಕೆ ಸಿಲುಕಿದಳು, ಕಾರಣ ತನ್ನ ಕಪ್ಪು ತುಟಿಗಳಾಚೆ ತುಂಬಿ ವಟ್ಟರಿಸಿದ್ದ ತಾಂಬೂಲ, ನನ್ನ ಕಡೆ ನಿಗಾ ಇರಿಸಿಯೇ ಎಡಕ್ಕೆ ಹೊರಳಿ ಅಗತ್ಯಕ್ಕಿಂತ ಹೆಚ್ಚು ಭಾಗಿ ತನ್ನೆರಡೂ ಬೆರಳುಗಳನ್ನು ಕವೆಯಾಕಾರದಲ್ಲಿ ತುಟಿಗಳ ಮೇಲಿರಿಸಿ ವಿಶೇಷ ಪರಿಣತಿಯಿಂದ ಕಲಾತ್ಮಕವಾಗಿ ಉಗುಳಿದಳು, ಅದೂ ಸದ್ದಾಗದ ರೀತಿಯಲ್ಲಿ. ಬಳಿಕ ಸೀರೆ ಸೆರಗಿನಿಂದ ತುಟಿಯ ಹಾಗೂ ಚೂಪನೆಯ ಗದ್ದದ ಮೇಲಿನ ಎಂಜಲನ್ನು ಒರೆಸಿಕೊಳ್ಳುತ್ತ ಅಪ್ಯಾಯತೆಯಿಂದ ಅಪಾದಮಸ್ತಕ ನೋಡಿದಳು, ಬರ್ರಿ ಮೇಸ್ಟ್ರ, ಅಣ್ಣಂದಿರು ತುಂಬ ಹೊತ್ತಿನಿಂದ ನಿಮಗಾಗಿ ಕಾಯುತ್ತಿದ್ದಾರೆ ಎಂದು ಮೌಖಿಕವಾಗಿಯೂ, ಅದುವರೆಗೆ ಸೊಂಟದ ಮೇಲಿದ್ದ ಎಡಗೈಯನ್ನು ನೇರವಾಗಿ ಚಾಚುವುದರ ಮೂಲಕವೂ ಆಮಂತ್ರಿಸಿದಳು. ನಾನು ಹೊಸ್ತಿಲನ್ನು ಪ್ರವೇಶಿಸಿದೆ, ಒಳಗಡೆ ಮಬ್ಬು, ಎಲ್ಲವೂ ಅಸ್ಪಷ್ಟ, ಕೂಡಲೆ ನೋಡಲೆತ್ನಿಸಿದ್ದರಿಂದಾಗಿ ತಲೆ ತಿರುಗಿದಂತೆ ಭಾಸವಾಯಿತು, ಕ್ಷಣದಲ್ಲಿ ಪುನಃ ನಿಚ್ಚಳಗೊಂಡೆನು, ಒಂದು ಹೆಜ್ಜೆ ಒಳಗಡೆ ಇಟ್ಟೊಡನೆ ಎಲ್ಲವೂ ಸುಸ್ಪಷ್ಟವೆನಿಸಿತು. ನನ್ನ ಆಗಮನವನ್ನು ಅವರು ನಿರೀಕ್ಷಿಸಿರಲಿಲ್ಲವೇನೋ! ತಾಂಬೂಲದ ತಳಿಗೆಯಲ್ಲಿ ಅದುವರೆಗೆ ಇದ್ದ ನಾಡಪಿಸ್ತೂಲುಗಳನ್ನು ಅಡಗಿಸಿ ಮರೆಮಾಚಲೆತ್ನಿಸಿದರು, ನಾನು ನಾನೇ ಎಂದು ಮನವರಿಕೆಯಾದ ಬಳಿಕ ಅದನ್ನು ವೀಳ್ಯೆ ಎಲೆಗಳ ನಡುವೆ ಉದ್ದೇಶಪೂರ್ವಕವಾಗಿ

ಅಡಗಿಸಿಡುತ್ತ ರಂಡೀ ರಂಡಿ ಅಯ್ಯವಾರು ಎಂದು ಸ್ವಾಗತಿಸಿದರು. ಕೂಡ್ರಲು ಈಚಲು ಚಾಪೆಯನ್ನು ತೋರಿಸಿದಾದ ಬಳಿಕ ಕಾಳಿಕೆಯು ತುಸು ದೂರದಲ್ಲಿ, ಅಂದರೆ ಮಣ್ಣಿನ ಗೋಡೆಯಲ್ಲಿದ್ದರೂ ಹೊರಗೆ ಸ್ಪಷ್ಟವಾಗಿ ಗೋಚರಿಸುತ್ತಿದ್ದ ಕಂಭಕ್ಕಾತು ನಿಂತುಕೊಂಡಳು ಕುತೂಹಲದಿಂದ ನೋಡುತ್ತ.

ಕಾಮ್ರೇಡುಗಳೆಂದ ಮೇಲೆ ಉಭಯಕುಶಲೋಪರಿ ವಿಚಾರಿಸುವುದೆಲ್ಲಿ ಸಾಧ್ಯ! ಪರಸ್ಪರ ಕ್ಷೇಮ ವಿಚಾರಿಸುವುದು ತೃತೀಯ ಜಗತ್ತಿನ ಭೂರ್ಜ್ವಾಗಳಿಗೆ ಮಾತ್ರ ಸಾಧ್ಯ! ವಿಚಾರಿಸುವುದು ಬೇಡ, ಅಪ್ಯಾಯತೆಯಿಂದ ನೋಡುವ ಸೌಜನ್ಯವಾದರೂ ಬೇಡವೇನು! ಅದ್ಯಾವುದೋ ಇಲ್ಲ. ಪನ್ನಂಗಧರ ಇದ್ದಕ್ಕಿದ್ದಂತೆ ತುರ್ತಾಗಿ ಐದು ಸಾವಿರ ಕೊಡಿರಿ ಎಂದ, ನನಗೆ ಆಶ್ಚರ್ಯ ಮತ್ತು ಗಾಬರಿಯಾಯಿತು, ಇದ್ದಕ್ಕಿದ್ದಂತೆ ಕೇಳಿದರೆ ಎಲ್ಲಿಂದ ತರುವುದು! ಅದೂ ಅಲ್ಲದೆ ಆ ಮೊತ್ತವು ನನ್ನ ಅರ್ಧವಾರ್ಷಿಕ ದುಡಿಮೆ. ಬೇಸರ ಹಾಗೂ ಕೋಪದಿಂದ ಪದ್ಮಾವತಿ ದೇಣಿಗೆ ನೀಡಿದ ಲಕ್ಷಾಂತರ ಹಣ ಏನಾಯಿತೆಂದು ಪ್ರಸ್ತಾಪಿಸಿದೆ, ಪರಸ್ಪರ ಮುಖ ನೋಡಿಕೊಂಡರು, ವಿಚಲಿತರಾಗಲಿಲ್ಲ, ಪನ್ನಂಗಧರನ ಸಲಹೆಯಂತೆ ದಯಾನಂದ ತನ್ನ ಜೇಬಿನಿಂದ ಹಾಳೆಯೊಂದನ್ನು ತೆಗೆದು ನನ್ನ ಕೈಗೆ ಕೊಟ್ಟನು

ಅದರಲ್ಲಿ ಖರ್ಚುವೆಚ್ಚಗಳಿಗೆ ಸಂಬಂಧಿಸಿದ ಹಲವಾರು ವಿವರಗಳಿಲ್ಲದೆ ಇರಲಿಲ್ಲ. ಅವುಗಳ ಪೈಕಿ ಮುಖ್ಯವಾಗಿ ಎರಡು ಪಿಸ್ತೂಲುಗಳಿಗೆ ಎರಡು ಲಕ್ಷ ಎಂದು ನಮೂದಿಸಲಾಗಿತ್ತು, ಹೋರಾಟಗಾರರಿಗೆ ತಮ್ಮ ಎದೆಯೊಳಗಿನ ಅಗೋಚರ ಶಸ್ತ್ರಗಳು ಮುಖ್ಯವಾಗಬೇಕೇ ಹೊರತು ಇಂಥ ನೈಜಶಸ್ತ್ರಗಳು ಮುಖ್ಯವಾಗಬಾರದು. ಅದೂ ಅಲ್ಲದೆ ಅವರಿಬ್ಬರನ್ನು ನಾನು ನನ್ನ ಕಾದಂಬರಿಯೊಳಗೆ ಬಿಟ್ಟುಕೊಂಡಿರುವುದು ವಾಗಿಲಿಯಲ್ಲಿ ರಕ್ತರಹಿತಕ್ರಾಂತಿಯನ್ನು ನಡೆಸುವ ಸಲುವಾಗಿ, ಶೋಷಿತರ ಎದೆಯೊಳಗೆ ಹೋರಾಟದ ಹಣತೆಗಳನ್ನು ಬೆಳಗಿಸುವ ಸಲುವಾಗಿ, ಧಮನಿತರ ಮೆದುಳೊಳಗೆ ತಿಳವಳಿಕೆಯ ಬೆಳದಿಂಗಳನ್ನು ಮೂಡಿಸುವ ಸಲುವಾಗಿ! ಆರಂಭದಲ್ಲಿ ಸೃಜನಶೀಲ ಕಲ್ಪನೆಗೆ ಕೃತಿಕಾರನ ಆಶಯಗಳಿಗೆ ಅನುಗುಣವಾಗಿಯೇ ಸ್ಪಂದಿಸಿದರು, ಆದರೆ ಪದ್ಮಾವತಿಯ ಕೈಯಿಂದ ಪ್ರಶಸ್ತಿಯ ಮೊಬಲಗನ್ನು ದೇಣಿಗೆ ರೂಪದಲ್ಲಿ ಸಂದಾಯ ಮಾಡಿಸಿದ್ದು ನನ್ನಿಂದ ಸಂಭವಿಸಿದ ದೊಡ್ಡ ತಪ್ಪು. ನನ್ನ ಉದ್ದೇಶವಿದ್ದದ್ದು ಆ ಹಣ ಶೋಷಿತ ಸಮಾಜದ ಓರೆಕೋರೆಗಳನ್ನು ಸರಿಪಡಿಸಲೆಂದು, ಬಡವರ ಆಶೋತ್ತರಗಳಿಗೆ ಅವರ ಪ್ರಾಥಮಿಕ ಅಗತ್ಯಗಳಿಗೆ ವಿನಿಯೋಗವಾಗಲೆಂದು, ಹಾಗೆಯೇ ಹೋರಾಟಗಾರರು ತಮ್ಮ ದೈನಂದಿನ ಖರ್ಚುಗಳನ್ನು ನಿಭಾಯಿಸಲೆಂದು! ಆದರೆ ಈ ಮಹಾಶಯರು ಹಣ ಪಡೆದ ಲಗಾಯ್ತು ತಮ್ಮ ಜೀವನಶೈಲಿಯನ್ನೇ ಬದಲಾಯಿಸಿಕೊಂಡಿರುವರು, ದುಬಾರಿ ಪಿಸ್ತೂಲುಗಳನ್ನು ಖರೀದಿಸಿರುವರು ಬೇರೆ. ನಿಟ್ಟುಸಿರುಬಿಡುತ್ತ ಅಸಮಾಧಾನ ವ್ಯಕ್ತಪಡಿಸಿದೆ. ಅದಕ್ಕೆ ಪನ್ನಂಗಧರ ಅಸಂಗತ ರೀತಿಯಲ್ಲಿ ಮಾತಾಡಲಾರಂಭಿಸಿದ. ಜೀವದ ಹಂಗು ತೊರೆದು ಹೋರಾಡುತ್ತಿರುವ ತಮಗೆ ವಾಗಿಲಿಯ ಹರಿಶ್ಚಂದ್ರರೆಡ್ಡಿಯ ಖಾಸಗಿ ಸೇನಾಪಡೆಯಿಂದ ಪ್ರಾಣ ಭಯವಿರುವುದಾಗಿಯೂ, ಆದ್ದರಿಂದ ಆತ್ಮರಕ್ಷಣೆ ಸಲುವಾಗಿ ತಮಗೆ ಪಿಸ್ತೂಲುಗಳ ಅಗತ್ಯವಿತ್ತೆಂದು ಒತ್ತಿ ಒರಟು ಭಾಷೆಯಲ್ಲಿ ಹೇಳಿದ. ತನ್ನ ಸಹವಂದಿಗನ ಅಭಿಪ್ರಾಯವನ್ನು ದಯಾನಂದ ಸಮರ್ಥಿಸಿದ್ದು ಖೇದವೆನಿಸಿತು. ತನ್ನ ಪಾತ್ರಗಳು ಕೃತಿಕಾರನಾದ ತನ್ನ ವಿರುದ್ಧವೇ ಮಸಲತ್ತು ಆರಂಭಿಸಿರುವುದಾಗಿ ಸಂಶಯ ತಳೆದೆ. ನಾನು ನನ್ನ ಕಾದಂಬರಿಯ ಯಾವ ಪಾತ್ರದಲ್ಲೂ, ಯಾವ ಘಟನೆಗಳಲ್ಲೂ ಅಂಥ ಅವಾಂಛನೀಯ ಸಂಘಟನೆಗಳನ್ನು ಸೃಷ್ಟಿಸಿಲ್ಲ,

ಜನಮುಖೀ ಹೋರಾಟಗಾರರು ಕೊಲೆಗೀಡಾಗದಿರಲೆಂದೇ ನಾನು ಹರಿಶ್ಚಂದ್ರರೆಡ್ಡಿಯವರನ್ನು ಸಾವಿಗೆ ಹತ್ತಿರ ತಂದಿರುವುದು, ಜಮೀನ್ದಾರಿ ವ್ಯವಸ್ಥೆಯ ಕ್ರೌರ್ಯವನ್ನು ಹ್ರಸ್ವಗೊಳಿಸುವ ಸಲುವಾಗಿಯೇ ಆದೋನಿಯಿಂದ ಶಶಾಂಕನನ್ನು ವಾಗಿಲಿಗೆ ಕರೆತಂದಿರುವುದು. ಆದರೆ ಇದು ಯಾವುದನ್ನೂ ಈ ಪಾತ್ರಗಳು ಅರ್ಥ ಮಾಡಿಕೊಳ್ಳುತ್ತಿಲ್ಲ. ಶಶಾಂಕ ನಿಮ್ಮ ಹೋರಾಟಗಳಿಗೆ ಕೈ ಜೋಡಿಸುತ್ತಾನೆ, ಅಲ್ಲಿಯವರೆಗೆ ನೀವು ಕಾಯಬೇಕು ಎಂದು ಹೇಳಿದ್ದಕ್ಕೆ ಅವರಿಬ್ಬರೂ ತಮ್ಮ ಮುಖಗಳನ್ನು ವಿವರ್ಣಗೊಳಿಸಿಕೊಂಡರು. ಮುಳ್ಳಿನ ಬೀಜ ನೆಟ್ಟರೆ ಮುಳ್ಳಿನ ಗಿಡ ಹುಟ್ಟುವುದೇ ಹೊರತು ಶ್ರೀಗಂಧದ ಮರ ಹುಟ್ಟುವುದಿಲ್ಲ ಕಾದಂಬರಿಕಾರರೇ ಎಂದು ಹೇಳುತ್ತ ನಕ್ಕರು, ಪುನಃ ಹಣ ಜೋಡಿಸಿ ಒದಗಿಸುವಂತೆ ಒತ್ತಡ ಹೇರಿದರು. ಅದಕ್ಕೆ ನಾನು ಬೇಸರದಿಂದ ಹಣಕ್ಕೆ ಒತ್ತಾಯಿಸಿದಿರೆಂದರೆ ಕಾದಂಬರಿಯಿಂದ ನಿಮ್ಮಿಬ್ಬರನ್ನು ಹೊರ ಕಳಿಸುವುದಾಗಿ ಎಚ್ಚರಿಸಿದೆ. ಅದಕ್ಕೆ ದಯಾನಂದನ ಪರವಾಗಿ ಪನ್ನಂಗಧರ "ಕಾದಂಬರಿಕಾರರೆ, ನಮ್ಮನ್ನು ಒಳಗೆ ಬಿಟ್ಟುಕೊಂಡಷ್ಟು ಸುಲಭವಲ್ಲ ಕಥಾನಕದಿಂದ ಬೇರ್ಪಡಿಸುವುದು! ಈ ಸಾಧಕ ಬಾಧಕಗಳು ಕುರಿತಂತೆ ಮೊದಲೇ ಯೋಚಿಸಬೇಕಿತ್ತು ನೀವು, ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿದರೇನು ಉಪಯೋಗ! ಏನು ಮಾಡುತ್ತೀರೋ ಏನು ಮಾಡುವುದಿಲ್ಲವೋ! ಹಣ ಜೋಡಿಸಿ ಮೊದಲು" ಎಂದು ಅಧಿಕಾರಯುತವಾಗಿ ಹೇಳಿದ. ಅದಕ್ಕೆ ಪ್ರತಿಯಾಗಿ ಏನನ್ನೂ ಹೇಳುವುದಾಗಲಿಲ್ಲ, ಸೃಜನಶೀಲ ಸಂವಿಧಾನದ ನೀತಿಸಂಹಿತೆಯನ್ನು ಉಲ್ಲಂಘಿಸುತ್ತಿರುವ ಅವೆರಡೂ ಪಾತ್ರಗಳನ್ನು ಕಾದಂಬರಿಯ ಚೌಕಟ್ಟಿನಿಂದ ಹೊರಗಿರಿಸಿದರೆ ಅಥವಾ ಅವೆರಡನ್ನೂ ಖಳನಾಯಕರನ್ನಾಗಿಯೋ ಪ್ರತಿ ನಾಯಕರನ್ನಾಗಿಯೋ ಚಿತ್ರಿಸಿದರೆ! ಅಥವಾ ಅವೆರಡನ್ನೂ ನಾಗನಾಥನಹಳ್ಳಿಗೆ ಕಳಿಸಿ ವೆಂಕಾವಧೂತರಿಂದ ಬೋಧ ಕೊಡಿಸಿ ತದನಂತರ ಕಾದಂಬರಿ ಲೋಕಕ್ಕೆ ಬರಮಾಡಿಕೊಂಡರೆ! ಹೀಗೆ ಏನೇನೋ ಯೋಚಿಸಿದೆನಾದರೂ ಖಚಿತ ನಿರ್ಣಯಕ್ಕೆ ಬರಲಾಗಲಿಲ್ಲ.

ಮಂಗಗಳ ಉಪಟಳ ಚಿತ್ರಿಸುವುದರಲ್ಲಿ ಮೈಮರೆತಿರುವ ನಾನು ಹೇಮರೆಡ್ಡಿ ಮಲ್ಲಮ್ಮ ನಾಟಕದ ಶತದಿನೋತ್ಸವ ಕಾರ್ಯಕ್ರಮ ಕುರಿತಂತೆ ಹೇಳುವುದನ್ನು ಮರೆತೆನಲ್ಲವೆ!

..... ☙ .....

# ದೃಶ್ಯ: ಏಳು

ಹಾದು, ವಾಗಿಲಿಗೆ ಅದೇ ಮೊಟ್ಟಮೊದಲ ಬಾರಿ ಮಂಗಗಳನ್ನು ಪರಿಚಯಿಸಿದ ಶ್ರೇಯಸ್ಸು ನಿಸ್ಸಂದೇಹವಾಗಿ ಪರಶುರಾಮನಿಗಿಂತ ಮುಖ್ಯವಾಗಿ ಶರಭನಿಗೆ ಸಲ್ಲಬೇಕು. ಅದೆಲ್ಲ ತನ್ನ ಪೂರ್ವನಿಯೋಜಿತ ಯೋಜನೆ. ಅದನ್ನು ತಾನೇ ಸಾಕಿದ್ದನೋ! ಅದೇ ತನ್ನನ್ನು ಸಾಕಿತ್ತೋ! ಹೆಚ್ಚುವರಿ ಮಂಗಗಳು ವಾಗಿಲಿಯಲ್ಲೊಂದೇ ಅಲ್ಲದೆ ಅಕ್ಕಪಕ್ಕದ ಕೂಡ್ಲೂರು ಹರಿವಾಣ ಎಲ್ಲಾರ್ತಿ ಚಿಗ್ಯಾಟಿ ಸುಳುವಾಯಿ ಸೇರಿದಂತೆ ಹಲವು ಗ್ರಾಮಗಳನ್ನು ತಮ್ಮ ದೈವದತ್ತ ಕಪಿಚೇಷ್ಟೆಗಳಿಂದ ತಲ್ಲಣಗೊಳಿಸಿದವು. ಅದಕ್ಕಿಂತ ಮುಖ್ಯವಾಗಿ ಮರ್ಕಟಗಳೆಂದರೆ ಏನು ಎಂಬುದನ್ನು ಸಾಕಷ್ಟು ಮನರಂಜನೆ ದ್ವಾರ ಪರಿಚಯಿಸಿದವು. ವಾಗಿಲಿಯಲ್ಲಿ ನಡೆದಂತೆ ಆ ಗ್ರಾಮಗಳಲ್ಲೂ ಅವುಗಳನ್ನು ಓಡಿಸಲು ಎಲ್ಲಾ ರೀತಿಯಲ್ಲಿ ಪ್ರಯತ್ನಿಸಿದರಾದರೂ ಸಾಧ್ಯವಾಗಲಿಲ್ಲ. ಅವೆಲ್ಲ ಅಲ್ಲಲ್ಲಿ ಖಾಯಮ್ಮಾಗಿ ನೆಲಸಿದವೋ ಇಲ್ಲವೋ! ಆದರೆ ಒಂದಂತೂ ಸತ್ಯ, ಅದೆಂದರೆ ಮಂಗಗಳು ವಾಗಿಲಿಯಲ್ಲಿ ಮಾತ್ರ ಪೌರತ್ವ ಗಿಟ್ಟಿಸಿಕೊಂಡವು. ಆರಂಭದಲ್ಲಿದ್ದ ಅವುಗಳ ಅಗ್ರೆಸಿವ್ ನೇಚರ್ ದಿನಗಳೆದಂತೆ ಕಡಿಮೆಯಾಯಿತು. ಅವುಗಳಿಗೆ ನಾಗರಿಕ ಸ್ಥಾನಮಾನದ ನೀಡಿದ ಶ್ರೇಯಸ್ಸು ನಿಸ್ಸಂದೇಹವಾಗಿ ಹೆಬ್ಬಟಂ ಮನೆತನದವರಿಗೆ ಸಲ್ಲಬೇಕು. ಕಟ್ಟಾ ಸನಾತನಿಗಳೂ ಧರ್ಮಭೀರುಗಳೂ ಆದ ಹೆಬ್ಬಟಂ ಗೌಡರು ದೈವಸ್ಥರ ಸಭೆ ಕರೆದು ತಾಸುಗಟ್ಟಲೆ ಚರ್ಚಿಸಿದರು, ಉಭಯಚರ ಜೀವಿಗಳೂ ಮನುಕುಲದ ಪೂರ್ವಿಕರೂ ಆದ ಅವುಗಳನ್ನು ಎದುರು ಹಾಕಿಕೊಂಡು ಬಾಳುವೆ ಮಾಡುವುದು ಕಷ್ಟ ಎಂದು ಹೇಳಿದರು, ಹಾಗೆಯೇ ಮುಂದುವರೆದು ಉಣ್ಣುವ ತುತ್ತುಗಳ ಪೈಕಿ ಒಂದೆರಡನ್ನು ಅವುಗಳಿಗೆ ನೀಡಿ ಮೋಕ್ಷದ ಹಾದಿ ಕಂಡುಕೊಳ್ಳಿ ಎಂದೂ ಸಲಹೆ ನೀಡಿದರು. ಗೌಡರ ಮಾತಿಗೆ ಕಳಸವಿರಿಸಿದಂತೆ ಮಂಗಗಳಿಗೂ ವಾಗಿಲಿಯ ಸತ್ಪ್ರಜೆಗಳಿಗೂ ನಡುವೆ ಇರುವ ಸಂಬಂಧ ಕನ್ಯಾಕುಮಾರಿ ಬಳಿ ಶ್ರೀಲಂಕಕ್ಕೂ ಭಾರತಕ್ಕೂ ನಡುವೆ ಇರುವ ರಾಮಸೇತುವಿನಷ್ಟೇ ಪ್ರಾಚೀನವಾದುದು ಎಂದು ರಾಘಪ್ಪಸ್ವಾಮಿ ಹೇಳುವುದರ ಮೂಲಕ ಅವುಗಳನ್ನು ವಾಗಿಲಿಯ ಇತಿಹಾಸದೊಂದಿಗೆ ಬೆಸೆದರು. ಹೆಬ್ಬಟಂ ಗೌಡರ ಹಾಗೂ ಅವರ ಆಪ್ತಕಾರ್ಯದರ್ಶಿಯವರ ಮಾತನ್ನು ತಳ್ಳಿ ಹಾಕುವ ಎದೆಗಾರಿಕೆ ಯಾರಲ್ಲಿರಲು ಸಾಧ್ಯ! ಅದೂ ಅಲ್ಲದೆ ತಮ್ಮ ವಾಗಿಲಿಯಲ್ಲಿ ಶ್ರೀರಾಮನ ದೇವಸ್ಥಾನವಿರುವುದೇ ಹೊರತು ಆತನ ಪರಮಭಕ್ತನಾದ ಆಂಜನೇಯಸ್ವಾಮಿಗೆ

ಸಂಬಂಧಿಸಿದ ದೇವಾಲಯವಾಗಲೀ ಅದರ ಕುರುಹಾಗಲೀ ಊರ ಒಳಗೂ ಇಲ್ಲ, ಊರ ಹೊರಗೂ ಇಲ್ಲ, ಹೀಗೆ ಯೋಚಿಸಿ ದೈವಸ್ಥರು ಗೌಡರ ಮಾತಿಗೆ ಸಮ್ಮತಿ ಸೂಚಿಸಿದರು. ಆ ದಿವಸದಿಂದ ವಾಗಿಲಿಯ ಪ್ರತಿಯೊಂದು ಮನೆಯವರೂ ಮರ್ಕಟಗಳನ್ನು ಮಂಗಣ್ಣ ಎಂದು ಗೌರವವಾಚಕದೊಡನೆ ಸಂಬೋಧಿಸಲಾರಂಭಿಸಿದರು. ಗೋಚರಿಸಿದೊಡನೆ ತಗೋ ಮಂಗಣ್ಣ ಎಂದು ತಿಂಡಿ ತಿನಿಸುಗಳನ್ನು ಕೊಡಲಾರಂಭಿಸಿದರು. ಹೀಗಾಗಿ ಮಂಗಗಳು ಪ್ರತಿಯೊಂದು ಮನೆ ಅಂಗಡಿ ಚಹಾ ದುಕಾನುಗಳ ಮುಂದೆ ನಿಂತು ಹಫ್ತಾ ವಸೂಲಿ ಮಾಡುವುದರ ಮೂಲಕ ಕಾಲಕ್ಷೇಪ ಮಾಡಲಾರಂಭಿಸಿದವು.

ಮಂಗಗಳಿಗೆ ಸಂಬಂಧಿಸಿದ ಘಟನೆ ಸಂಭವಿಸಬಹುದೆಂದು ಮೊದಲೇ ತಿಳಿದಿದ್ದಲ್ಲಿ ಜಲಂಧರ ಹೇಮರೆಡ್ಡಿ ಮಲ್ಲಮ್ಮ ನಾಟಕದ ಶತದಿನೋತ್ಸವ ಸಂಭ್ರಮಾಚರಣೆಯನ್ನು ಹಮ್ಮಿಕೊಳ್ಳುತ್ತಿರಲಿಲ್ಲವೇನೋ! ನಿಗದಿತ ಸಮಯಕ್ಕೆ ಅದು ನಡೆಯಬೇಕಿತ್ತಲ್ಲವೆ! ಕೇಳಿದ್ದಕ್ಕೆ ಗ್ರಾಮದ ಪ್ರಮುಖರ ಪೈಕಿ ಕೆಲವರು ಮಂಗಗಳ ತಲೆನೋವು ಬಗೆ ಹರಿಯಲಿ ತಡೆದುಕೊಳ್ಳಯ್ಯಾ ಎಂದು ಹೇಳಿದರೆ ಇನ್ನೂ ಕೆಲವರು ಹೆಬ್ಬಟಂ ಗೌಡರು ಒಪ್ಪಿದರೆ ತಮ್ಮದೇನು ತಕರಾರಿಲ್ಲ ಎಂದು ಹೇಳಿದರು. ಅದೇ ಕೆಲಸಕ್ಕೆ ಬಳ್ಳಾರಿಗೆ ಹೋಗಿ ಕೇಳಿದ್ದಕ್ಕೆ ಗೌಡರು ಮಂಗಗಳನ್ನು ಕಣ್ಣೆದುರಿಗೆ ಇಟ್ಟುಕೊಂಡು ಕಾರ್ಯಕ್ರಮ ಮಾಡಲು ಸಾಧ್ಯವೆ! ಅಕಸ್ಮಾತ್ ಅವೇನಾದರೂ ನಾಟಕದ ವೇದಿಕೆ ಮೇಲೆ ದಾಳಿ ಮಾಡಿದರೆ! ಅಥವಾ ಭಾಷಣ ಮಾಡಲಿರುವ ಮೈಕನ್ನು ಕಸಿದುಕೊಂಡರೆ! ಎಂದು ಮುಂತಾಗಿ ಸಂದೇಹ ವ್ಯಕ್ತಪಡಿಸಿದರು.

ಆದರೆ ಅವರ ಉದ್ದೇಶ ಮಂಗಗಳಿಗೆ ಹೆದರುವುದಾಗಿರಲಿಲ್ಲ. ತಮ್ಮ ಮಗ ಜೈಲಿನಿಂದ ಬಿಡುಗಡೆಗೊಂಡಂದಿನಿಂದ ಅವನೊಡನೆ ವಾಗಿಲಿಗೆ ಹೋಗುವುದಾಗಿರಲಿಲ್ಲ, ನಾಟಕದ ಕಾರ್ಯಕ್ರಮದ ನೆಪದಲ್ಲಿ ತಮ್ಮ ಜೊತೆಯಲ್ಲಿ ಅವನನ್ನೂ ಕರೆದೊಯ್ಯಬೇಕು, ವಾಗಿಲಿಯ ಬೀದಿ ಬೀದಿಗಳಲ್ಲಿ ಬಾಜಾಭಜಂತ್ರಿಗಳೊಡನೆ ಮೆರವಣಿಗೆ ಮಾಡಿಸಬೇಕು, ಸಾವಿರಾರು ರೂಪಾಯಿ ಮೌಲ್ಯದ ಪಟಾಕಿಗಳನ್ನು ಸುಡಿಸಬೇಕು, ವಾಗಿಲಿಯ ಸುತ್ತಮುತ್ತ ಇರುವ ಗಣ್ಯರ ಸಮ್ಮುಖದಲ್ಲಿ ತಮ್ಮ ಮಗನನ್ನು ಸನ್ಮಾನಿಸಬೇಕು, ಇನ್ನೆರಡು ವರ್ಷಗಳಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡೇ ತಾವು ಈ ಇಂಥ ಕೆಲಸಗಳನ್ನು ಮಾಡಬೇಕಿರುವುದು. ಪ್ರತಿಯೊಂದು ಕಾರ್ಯಕ್ರಮ ತಮ್ಮ ಶಕ್ತಿ ಪ್ರದರ್ಶನವಾಗಬೇಕು, ಪುಯ್ಯಾವುಲ ವಂಶಸ್ಥರ ತಾಕತ್ತು ಏನೆಂಬುದನ್ನು ವಾಗಿಲಿ ಸೇರಿದಂತೆ ಹಲವು ಗ್ರಾಮಗಳಲ್ಲಿರುವ ಟಿಕೆಟ್ ಆಕಾಂಕ್ಷಿಗಳಿಗೆ ಮನವರಿಕೆ ಮಾಡಿಕೊಡುವುದು ತಮ್ಮ ಆದ್ಯಕರ್ತವ್ಯ. ಚಾಣಾಕ್ಷರಾದ ತಾವು ಇಂಥ ಯೋಜನೆಗಳನ್ನು ತಾವು ಗುಟ್ಟಾಗಿ ಹಮ್ಮಿಕೊಂಡಿದ್ದರು.

ಅಷ್ಟರೊಳಗೆ ತಮ್ಮ ದುರಾದೃಷ್ಟವೋ ಎನ್ನುವಂತೆ ವಾಗಿಲಿಯಲ್ಲಿ ಅಸಂಖ್ಯಾತ ಮಂಗಗಳ ಉಪಟಳ ಕಾಣಿಸಿಕೊಂಡಿತ್ತು. ಅದೂ ಅಲ್ಲದೆ ತಮಗೆ ತಿಳಿದಿರುವಂತೆ ಸುಪುತ್ರ ಪ್ರತಾಪರೆಡ್ಡಿ ಜಿರಳೆ ಕಂಡರೆ ಬೆಚ್ಚಿ ಬೀಳುವ ಮೃದು ಸ್ವಭಾವದವನು ಬೇರೆ, ಇನ್ನು ಸಾಕ್ಷಾತ್ ಮಂಗಗಳನ್ನು ನೋಡಿದನೆಂದರೆ ತಾನು ಸಭಾಕಂಪನಕ್ಕೀಡಾಗದೆ ಇರುವನೆ! ಸಾರ್ವಜನಿಕರ ಸಮಕ್ಷಮ ಮೂತ್ರವಿಸರ್ಜಿಸಿಕೊಳ್ಳದೆ ಇರುವನೆ! ಜೈಲಿನಲ್ಲಿ, ಅದೂ ಕುಖ್ಯಾತ ಖೈದಿಗಳ ಸಹಯೋಗದಿಂದಾಗಿ ತಮ್ಮ ಮಗ ಮಾನಸಿಕವಾಗಿ ಸದೃಢಗೊಂಡಿರಲೂಬಹುದು! ಮಂಗಗಳೊಂದೇ ಅಲ್ಲದೆ ಹುಲಿಯಂಥ ಕ್ರೂರಮೃಗಗಳನ್ನೂ ಎದುರಿಸುವ ಸಾಮರ್ಥ್ಯವನ್ನು ತಾನು ಗಳಿಸಿಕೊಂಡಿರಲೂಬಹುದು! ಆದರೆ ಅದನ್ನು ಪರೀಕ್ಷಿಸುವ ಅವಕಾಶ ತಮಗೆ

ದೊರಕಿಲ್ಲ. ಅದರ ಬೇರೆ ಒಂದು ಸಲ ಕೇಳಿದ್ದಕ್ಕೆ ಅವನು "ಯಾವ ಮುಖವಿಟ್ಟುಕೊಂಡು ವಾಗಿಲಿಗೆ ಹೋಗುವುದು ಅಪ್ಪಾಜಿ! ಅದಕ್ಕೆ ಕಾಲ ಕೂಡಿ ಬರಲಿ ಸುಮ್ಮನಿರಿ" ಎಂದು ನೊಂದ ಮನಸ್ಸಿನಿಂದ ಹೇಳಿದ್ದ. ಹೀಗಾಗಿ ಇವತ್ತು ನಾಳೆ ಎಂದು ಗೌಡರೇ ಕಾರ್ಯಮಕ್ರಮ ಮುಂದೂಡುತ್ತ ಬಂದಿದ್ದರು. ಪುನಃ ಮೊನ್ನೆ ಕೇಳಿದಾಗ ಅವನು ಒಲ್ಲದ ಮನಸ್ಸಿನಿಂದ ಸಮ್ಮತಿಸಿದ.

ಆದರೆ ಅದೇ ದಿವಸ ಹೈದರಾಬಾದಿನ ವಕೀಲರಿಂದ ಫೋನ್ ಬಂತು. ಗುಪ್ತಚರ ಇಲಾಖೆ ಸುಪ್ರೀಂ ಕೋರ್ಟಿಗೆ ಮೇಲ್ಮನವಿ ಸಲ್ಲಿಸಲಿರುವುದಂತೆ! ಪುನಃ ವಿಚಾರಣೆಗೆ ಗುರುಪಡಿಸುವ ಸಲುವಾಗಿ ಪ್ರತಾಪರೆಡ್ಡಿಯನ್ನು ಪುನಃ ಬಂಧಿಸಿ ವಿಚಾರಣೆಗೆ ಗುರಿಪಡಿಸಲು ತಮಗೆ ಅವಕಾಶ ನೀಡುವಂತೆ ಅರ್ಜಿಯಲ್ಲಿ ಪ್ರಸ್ತಾಪಿಸಲಾಗಿರುವುದಂತೆ! ನಿಜ ಹೇಳುವುದಾದರೆ ಗೌಡರೆ ತಮ್ಮ ಮಗನ ಸಂಗಡ ಹೈದರಾಬಾದಿಗೆ ಹೊರಡಬೇಕಿತ್ತು. ಆದರೆ ಕೊರಲಗುಂದಿ ಪರಗಣದಲ್ಲಿರುವ ತಮ್ಮ ಮೂರುನೂರಾ ಎಂಭೆತ್ತೆರಡು ಎಕರೆ ಹೊಲಕ್ಕೆ ಸಂಬಂಧಿಸಿದ ತಗಾದೆಗಳು ಬೇರೆ ಅದೇ ಸಮಯಕ್ಕೆ ಸರಿಯಾಗಿ ಎದ್ದು ಕುಳಿತಿರುವವು, ಅದೂ ಕಾಮ್ರೇಡ್ ನರಸಯ್ಯನ ಚಿತಾವಣೆಯಿಂದಾಗಿ! ಉಳುವವನೇ ಭೂಮಿಗೆ ಒಡೆಯ ಎಂಬ ಕಲ್ಲು ಚಪ್ಪಡಿಗಳಂಥ ಕಾನೂನುಗಳು ಬೇರೆ! ತಮ್ಮ ಮಗ ಹೈದರಾಬಾದಿನಿಂದ ಮರಳಿದ ಬಳಿಕ, ಅದರಲ್ಲೂ ಮುಖ್ಯವಾಗಿ ವಾಗಿಲಿಯಲ್ಲಿನ ಕಾರ್ಯಕ್ರಮ ನಡೆದ ಬಳಿಕ ಆ ಕಾಮ್ರೇಡ್ ನರಸಯ್ಯನನ್ನು ಮುಗಿಸುವ ಸಲುವಾಗಿ ತಂತ್ರ ರೂಪಿಸಬೇಕು. ರಾಘಪ್ಪಸ್ವಾಮಿ ನೀಡಿರುವ ಉಪಯುಕ್ತ ಸಲಹೆಯಂತೆ ಸುಪಾರಿ ನೀಡುವ ಸಲುವಾಗಿ ವಿಜಯವಾಡದ ಕೊಂಡವೀಟಿ ಮೋಹನರಂಗನನ್ನು ತಾವು ಕೂಡಲೆ ಸಂಪರ್ಕಿಸಬೇಕಿರುವುದು, ಆದರೆ ನಿನ್ನೆ ಮೊನ್ನೆಯಿಂದ ಕಾಣಿಸಿಕೊಂಡಿರುವ ವರ್ತಮಾನದ ಪ್ರಕಾರ ಅವನು ಅಮರಾಪುರದ ಕರಣಂ ವೆಂಕಟೇಶ್ವರಾವ್ ಕೊಲೆ ಕೇಸನ್ನು ತನ್ನ ತಲೆ ಮೇಲೆ ಎಳೆದುಕೊಂಡಿರುವನು. ಅಯ್ಯ ಸತ್ತರೆ ಅಮವಾಸ್ಸೆ ಹೇಗೆ ನಿಲ್ಲುವುದಿಲ್ಲವೋ ಹಾಗೆಯೇ ಯಾವ ಕಾರಣಕ್ಕೂ ನರಸಯ್ಯನನ್ನು ಮುಗಿಸುವುದು ನಿಲ್ಲುವುದಿಲ್ಲ. ಹೀಗೆ ಯೋಚಿಸುತ್ತಿರುವಾಗಲೇ ಗೌಡರು ಏನನ್ನೋ ಯಾರನ್ನೋ ನೆನಪಿಸಿಕೊಂಡು ಪ್ರಸನ್ನವದನರಾದರು. ತಮ್ಮ ತಲೆಯಲ್ಲಿ ಮೊದಮೊದಲು ಅಸ್ಪಷ್ಟ ರೀತಿಯಲ್ಲಿದ್ದ ಅವರು ಕ್ರಮೇಣ ನಿಚ್ಚಳಗೊಳ್ಳಲಾರಂಭಿಸಿದರು.

ಅರೆ ತಾವು ತಮ್ಮ ಅಂಗೈಯಲ್ಲಿ ತುಪ್ಪವನ್ನು ಇಟ್ಟುಕೊಂಡು ಬೆಣ್ಣೆಗಾಗಿ ಹುಡುಕಾಡುತ್ತಿರುವೆವಲ್ಲವೆ! ಅದಕ್ಕೆ ಕಾರಣವೆಂದರೆ! ಶ್ರೀಶೈಲಮಲ್ಲಿಕಾರ್ಜುನನ ದೇವಸ್ಥಾನಕ್ಕೆ ಸಂಬಂಧಿಸಿದ ನೀಲನಕ್ಷೆಯೊಡನೆ ಪಂಪಯ್ಯ ನಿನ್ನೆ ತಾನೆ ಬಂದಿದ್ದ, ತಮ್ಮ ಕಳೆಗುಂದಿದ ಮುಖವನ್ನು ನೋಡಿದೊಡನೆ ತನ್ನ ಮುಖವನ್ನೂ ಸಪ್ಪಗೆ ಮಾಡಿಕೊಂಡಿದ್ದ. ತಮ್ಮ ಮನದಿಂಗಿತವನ್ನು ಗ್ರಹಿಸಿಯೋ, ಅಥವಾ ತನ್ನ ಆರನೆ ಇಂದ್ರಿಯಕ್ಕೆ ಹೊಳೆದೋ ತೆರೆದಿದ್ದ ಕಿಟಿಕಿ ಬಾಗಿಲುಗಳ ಕಡೆ ಹೋಗಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ತಮ್ಮ ಸನಿಹಕ್ಕೆ ಬಂದ, ಕೆಲವು ತಿಂಗಳುಗಳ ಹಿಂದೆಯಷ್ಟೆ ನಗರೂರಲ್ಲಿ ಸಂಭವಿಸಿದ ಹರಿಶ್ಚಂದ್ರರೆಡ್ಡಿಯ ನಿಗೂಢ ಸಾವು ಕುರಿತಂತೆ ತಣ್ಣಗಿನ ಮಾತುಗಳಲ್ಲಿ ಪ್ರಸ್ತಾಪಿಸಿದ. ಅದು ಆತ್ಮಹತ್ಯೆ ಅಲ್ಲವೆಂದೂ ವ್ಯವಸ್ಥಿತ ಕೊಲೆ ಎಂದೂ ಸಕರಾತ್ಮಕವಾಗಿ ಸಂದೇಹ ವ್ಯಕ್ತಪಡಿಸಿದ, ಇನ್ನೂ ಹತ್ತಿರಕ್ಕೆ ಬಂದು ತಮ್ಮ ರೋಮಗಳಿಂದಾವೃತ ಕಿವಿಯಲ್ಲಿ ತನ್ನ ಬಾಯಿಯನ್ನಿರಿಸಿ "ಆ ಕೊಲೆ ಮಾಡಿರುವ ಕೊಲೆಗಾರರು ತಮಗೂ ಗೊತ್ತಿರುವವರೆ!" ಎಂದು ಪಿಸುಮಾತಿನಲ್ಲಿ ಹೇಳಿದ,

ಯಾರಿರಬಹುದೆಂದು ಯೋಚಿಸಿದರಾದರೂ ತಮಗೆ ಹೊಳೆಯಲಿಲ್ಲ, ಆಶ್ಚರ್ಯದಿಂದ ಹ್ಞಾಂ ಎಂದು ಉದ್ಗರಿಸಿದರು, ನೀಲನಕ್ಷೆಯ ಮೇಲೆ ಕಣ್ಣುಗಳನ್ನು ಹರಿದಾಡಿಸಿ ಭಕ್ತಿಪೂರ್ವಕವಾಗಿ ಮಡಚುತ್ತ ಯಾರೆಂದು ಕೇಳಿದ್ದಕ್ಕೆ, ಕಣ್ಣಾಲಿಗಳನ್ನು ಹ್ರಸ್ವಗೊಳಿಸಿದ್ದಕ್ಕೆ ಅವನು ತನ್ನ ಬಾಯಿಗಡ್ಡ ಕೆಂಪು ಶಲ್ಯೆ ಇರಿಸಿಕೊಂಡು "ಇನ್ಯಾರು ಧಣಿ! ಅವಧೂತರ ವೇಷ ಧರಿಸಿ ಲಚುಮವ್ವನ ತೋಪಿನಲ್ಲಿ ತಲೆಮರೆಸಿಕೊಂಡಿರುವರಲ್ಲವೆ!" ಎನ್ನುತ್ತ ಮೆಲ್ಲಗೆ ದೂರ ಸರಿದು ಹಿಂದಕ್ಕೆ ಹೊರಳಿ ನಿಶ್ಚಿಂತನಾದ. ಪಂಪಯ್ಯಸ್ವಾಮಿ ಹುತ್ತಗಳನ್ನೂ ಅದರಲ್ಲಿ ನಿಗೂಢವಾಗಿ ಅಡಗಿರುವ ಹಾವುಗಳನ್ನೂ ಏಕಕಾಲಕ್ಕೆ ಪರಿಚಯಿಸಿದ,

ಅವರಿಬ್ಬರ ಪೈಕಿ ಪರಶುರಾಮ ತಮ್ಮ ಮಾಜಿ ಅಂಗರಕ್ಷಕ, ಚಿಕ್ಕ ಕಾರಣಕ್ಕೆ ಬೇಸರ ಮಾಡಿಕೊಂಡು ತಮ್ಮ ಉಸಾಬರಿಯಿಂದ ದೂರಸರಿದಿರುವ ನಂಬುಗೆಯ ಭಂಟ, ಅವನು ಮಾಲಪಲ್ಲಿಯ ಇಂದ್ರಾರೆಡ್ಡಿಯನ್ನು ಮುಗಿಸಿದ್ದೇ ಕೊನೆ! ಅಲ್ಲಿಂದ ಇಲ್ಲಿಯವರೆಗೆ ತಾನು ಯಾರಿಂದಲೂ ಸುಪಾರಿ ಪಡೆದಿಲ್ಲ, ಶಸ್ತ್ರಗಳ ಸಹವಾಸ ಮಾಡಿಲ್ಲ. ಅವನು ಉಳುಮೆ ಮಾಡುತ್ತಿರುವ ಎಂಟೆಕರೆ ಮಸಾರೆ ಮತ್ತು ಅವನು ವಾಸಿಸುತ್ತಿರುವ ಐದು ಅಂಕಣದ ಮನೆ ಇವೆರಡೂ ತಮ್ಮ ಔದಾರ್ಯದ ಅವಶೇಷಗಳೆ! ಇನ್ನು ತನ್ನ ಹೆಂಡತಿ ತನ್ನ ಮಕ್ಕಳು! ಇನ್ನು ಶರಭನ ವೇಷದಲ್ಲಿರುವ ಈಶ! ಅವಧೂತನ ಛದ್ಮವೇಷದಲ್ಲಿರುವ ಓಬಲೇಸು! ಅವನಿಗಿರುವ ಹೆಸರುಗಳು ಒಂದೇ ಎರಡೆ! ಅರೆ ತಮಗೆ ತಿಳಿದಿರುವ ಮಾಹಿತಿಯಂತೆ ಅವನ ಎಡಪಾದದ ಬಲಗಡೆ ಆರನೆ ಚಿಕ್ಕ ಬೆರಳು ಇರುವುದಂತೆ! ಅದರ ಉಗುರು ಚೂರಿಗಿಂತ ಹರಿತವಾಗಿರುವುದಂತೆ! ವಾಗಿಲಿಗೆ ಹೋದೊಡನೆ ಅವನೆದುರಲ್ಲಿ ನಿಂತು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು ಮುಖ್ಯ! ಆದರೂ ಆ ಹೆಸರು ಕೇಳಿಸಿಕೊಂಡೊಡನೆ ರೆಡ್ಡಿಯವರು ರೋಮಾಂಚನಗೊಂಡರು, ಹಾಗೆಯೇ ತಮ್ಮ ಕಡುವೈರಿ ಊಳೂರಿನ ರೆಡ್ಡಿಯನ್ನು ನೆನಪಿಸಿಕೊಂಡರು.

ಪತ್ತಿಕೊಂಡ ದೇವನಕೊಂಡ ಆಸುಪರಿ ಪರಗಣದಲ್ಲಿನ ಲೋಕೋಪಯೋಗಿ ಇಲಾಖೆಯ ಗುತ್ತಿಗೆಗಳನ್ನೂ ಸ್ಮರಿಸಿಕೊಂಡರು. ಅವುಗಳೊಂದೇ ಅಲ್ಲದೆ ಸರ್ಕಾರದ ಪ್ರತಿಯೊಂದೂ ಸವಲತ್ತುಗಳನ್ನು ದಕ್ಕಿಸಿಕೊಳ್ಳಲು ಅವನು ಹೂಡುತ್ತಿದ್ದ ತಂತ್ರಗಾರಿಕೆಯನ್ನೂ ಜ್ಞಾಪಕಕ್ಕೆ ತಂದುಕೊಂಡರು. ತಮಗೂ ತಮ್ಮ ಮಗನಿಗೂ ಕಾಂಗ್ರೇಸ್ ಪಕ್ಷದ ಟಿಕೆಟ್ ಸಿಗದಂತೆ ಅವನು ನೋಡಿಕೊಂಡ, ತಮ್ಮ ಮಗನಿಂದ ಕೊಲೆ ಸಂಭವಿಸಲಿಕ್ಕೆ, ಅವನು ಜೈಲು ಪಾಲಾಗಲಿಕ್ಕೆ ಊಳೂರು ರೆಡ್ಡಿಯ ಚಿತಾವಣೆಯೇ ಕಾರಣ. ಕಾಣುವ ಸಲುವಾಗಿ, ಧ್ಯಾನದ ಕಡೆ ಗಮನ ಹರಿಸು ಎಂದು ಸಲಹೆ ನೀಡುವ ಸಲುವಾಗಿ ಚಂಚಲಗೂಡ ಜೈಲಿಗೆ ಹೋಗಿದ್ದಾಗ ನತದೃಷ್ಟ ಮಗ ತಮ್ಮ ಎರಡೂ ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡು ತಾನು ಬಿಡುಗಡೆಯಾಗುವುದರೊಳಗಾಗಿ ಊಳೂರು ರೆಡ್ಡಿ ಭೌತಿಕವಾಗಿ ಬದುಕಿರಬಾರದೆಂದು ಹೇಳುತ್ತ ದವಡೆಗಳನ್ನು ಮಸೆದಿದ್ದ, ಜಂಬಲಮಡುಗಿನ ಕೇಶನ್ನನಿಗೆ ಅಥವಾ ಪುಲಿವೆಂದುಲದ ಮಾದನ್ನನಿಗೆ ಸುಪಾರಿ ಕೊಡುವಂತೆ ಸೂಚಿಸಿ ಅವರ ಪಕ್ಕಾ ವಿಳಾಸಗಳಿದ್ದ ಚೀಟಿಯನ್ನು ಸಹ ತಮಗೆ ನೀಡಿದ್ದ. ಇನ್ನೇನು ತಾವು ಅವರಲ್ಲಿ ಒಬ್ಬರನ್ನು ಸಂಪರ್ಕಿಸಬೇಕೆನ್ನುವಷ್ಟರಲ್ಲಿ ಊಳೂರ ರೆಡ್ಡಿಯ ಕೊಲೆ ವಾರ್ತೆ ತಲುಪಿತು, ರೋಮಾಂಚನಗೊಂಡರು. ತಲುಪಿದ ಮಾರನೆ ದಿವಸವೇ ತಾವು ತಮ್ಮ ಕುಲದೈವ ಮಲ್ಲಿಕಾರ್ಜುನಸ್ವಾಮಿಗೆ ಸಹಸ್ರ ದೀಪಾರ್ಚನೆ ನಡೆಸುವ ಸಲುವಾಗಿ ಸಕುಟುಂಬ ಪರಿವಾರದೊಂದಿಗೆ ಪ್ರಯಾಣ ಬೆಳೆಸಿ ಶ್ರೀಶೈಲ

ತಲುಪಿದರು, ನೂರೆಂಟು ಪ್ರದಕ್ಷಿಣೆ ಹಾಕುವಾಗ ಕೊಲೆಗಾರನ ಕುರಿತು ತಲೆಕೆಡಿಸಿಕೊಂಡರು, ಶ್ರೀಶೈಲದಿಂದ ಮರಳಿದ ಬಳಿಕ ಆ ಆಪದ್ಬಾಂಧವನನ್ನು ಪತ್ತೆ ಹಚ್ಚಿ ನಗದು ಬಹುಮಾನ ನೀಡಿ ಸತ್ಕರಿಸಬೇಕೆಂದೂ ಯೋಚಿಸಿದರು. ಎಲ್ಲರ ಹಾಗೆ ತಾವು ಸಹ ಈಶನನ್ನು ಸಂದೇಹಿಸಿದವರೆ! ಆದರೆ ಅಂಥೋಣಿ! ಛೇಛೆ ತಮಗೆ ತಿಳಿದಿರುವಂತೆ ಅವನು ಬೇಟೆಯ ಅಂಗಾಂಗಗಳನ್ನು ಊನಗೊಳಿಸುವವನೇ ಹೊರತು ಪ್ರಾಣ ತೆಗೆಯುವವನಂತೂ ಖಂಡಿತ ಅಲ್ಲವೇ ಅಲ್ಲ! ಕೊಲೆಯ ನೇಪಥ್ಯದಲ್ಲಿನ ಮರ್ಮವನ್ನು ಭೇದಿಸುವುದು ಮುಖ್ಯ, ಅದೂ ಕೋಗಿಲೆತೋಟದ ರಘೋತ್ತಮರೆಡ್ಡಿ ಸಹಾಯದಿಂದ! ಹೇಮರೆಡ್ಡಿ ಮಲ್ಲಮ್ಮ ನಾಟಕದ ಶತದಿನೋತ್ಸವ ಸಮಾರಂಭಕ್ಕೆ ಅವನನ್ನೂ ಅತಿಥಿ ರೂಪದಲ್ಲಿ ಬರಮಾಡಿಕೊಳ್ಳಬೇಕು. ಛದ್ಮವೇಷಧಾರಿ ಈಶನ ಸಮಕ್ಷಮ ನಿಲ್ಲಿಸಬೇಕು. ಅದಾದ ಬಳಿಕ ಅವನ ಸಂಗಡ ಚೆರ್ಲಪಲ್ಲಿ ಜೈಲಿನಲ್ಲಿರುವ ವಿಚಾರಣಾಧೀನ ಖೈದಿ ಅಂಥೋಣಿಯನ್ನು ಖುದ್ದಾಗಿ ಭೆಟ್ಟಿಯಾಗಬೇಕು. ಓಹ್ ಇವೆಲ್ಲಕ್ಕಿಂತ ಮುಖ್ಯವಾಗಿ ಹವ್ಯಾಸಿ ವಾಸ್ತುತಜ್ಞ ಕೋಗಿಲೆತೋಟದ ರೆಡ್ಡಿಯನ್ನು ತಮ್ಮ ಸಂಭವನೀಯ ಸಮಾಧಿ ಸ್ಥಳಕ್ಕೆ ಕರೆದೊಯ್ಯಬೇಕು. ಶತಾಯುಷ್ಯ ಪೂರೈಸಿದಾದನಂತರ ಸ್ವಾಭಾವಿಕ ರೀತಿಯಲ್ಲಿ ಕೈಲಾಸವಾಸಿಗಳಾಗಲಿರುವ ತಮ್ಮ ಪವಿತ್ರ ಶವದ ತಲೆ ಈಶಾನ್ಯಕ್ಕಿರಬೇಕೋ, ನೈರುತ್ಯಕ್ಕಿರಬೇಕೋ ಎಂದು ಕೇಳಿ ತಿಳಿದುಕೊಳ್ಳಬೇಕು. ಹಾಗೆಯೇ ವಾಗಿಲಿಯ ಮೇರೆ ಮೇರೆಗಳಲ್ಲಿರುವ ತಮ್ಮ ಪೂರ್ವಜರ ಆಕರ್ಷಕವೂ ಪ್ರೇಕ್ಷಣೀಯವೂ ಆದಂಥ ಸಮಾಧಿಗಳನ್ನು ತೋರಿಸಬೇಕು. ತಾವು ನಿಸ್ಸಂದೇಹವಾಗಿ ಅಜೇಯರೆಂಬುದನ್ನು ಆ ಕೋಗಿಲೆತೋಟದವನಿಗೆ ಮನವರಿಕೆ ಮಾಡಿಕೊಡಬೇಕು. ಓಹ್ ಹದಿನೈದು ವರ್ಷಗಳ ಹಿಂದೆಯಷ್ಟೆ ವಾರಣಾಸಿಯಲ್ಲಿ ಷಷ್ಟ್ಯಬ್ಧಿ ಪೂರೈಸಿರುವ ತಮ್ಮ ಕಣ್ಣೆದುರಲ್ಲಿ ಎಷ್ಟೊಂದು ಕೆಲಸ ಕಾರ್ಯಗಳಿರುವವಲ್ಲವೇ! ನೂರು ವರ್ಷಗಳಿಗಾಗುವಷ್ಟು ಇರುವ ಕೆಲಸಗಳನ್ನು ಮಾಡಿಮುಗಿಸುವ ಸಲುವಾಗಿ ತಾವು ಇನ್ನೂ ಇಪ್ಪತ್ತೈದು ವರ್ಷಗಳ ಕಾಲ ಬದುಕಿರಲೇಬೇಕು, ಅದೂ ರೋಗರುಜಿನಗಳು ಸುಳಿಯದ ರೀತಿಯಲ್ಲಿ! ಓಹ್ ಈ ಎಲ್ಲಾ ಕೆಲಸಗಳಿಗೆ ಪೀಠಿಕೆಯಾಗಿ ವಾಗಿಲಿಯಲ್ಲಿನ ಹೇಮರೆಡ್ಡಿ ಮಲ್ಲಮ್ಮ ನಾಟಕದ..

++++

ಶತದಿನೋತ್ಸವ ಸಮಾರಂಭ ಇದೇ ದಿವಸದಂದು ಎಂದು ಖಚಿತವಾಗಿ ಹೇಳುವ ಧೈರ್ಯ ಜಲಂಧರನಿಗೆ ಇರಲಿಲ್ಲ, ಕಾರಣ ಅದು ಮುಂದೂಡಲ್ಪಟ್ಟು ಆ ದಿವಸವನ್ನು ತಲುಪಿತ್ತು. ಬಳ್ಳಾರಿಗೆ ಎಂದಿನಂತೆ ಹೋಗಿದ್ದಾಗ ಗೌಡರು ದಿನಾಂಕವನ್ನು ನಿಗದಿಪಡಿಸುವಾಗ ಕ್ಯಾಲೆಂಡರನ್ನು ಕ್ಷುಣ್ಣ ರೀತಿಯಲ್ಲಿ ಪರಿಶೀಲಿಸಿದ್ದರು, ಪ್ರತಿಯೊಂದಕ್ಕೂ ವಿಭಿನ್ನ ರೀತಿಯಲ್ಲಿ ನಿಟ್ಟುಸಿರುಗಳನ್ನು ಬಿಟ್ಟಿದ್ದರು, ಅವರಿವರೊಂದಿಗೆ ಫೋನಿನಲ್ಲಿ ತಮ್ಮದೇ ಪರಿಭಾಷೆಯಲ್ಲಿ ಚರ್ಚಿಸಿದ್ದರು, ಕೆಲವೊಮ್ಮೆ ಗಟ್ಟಿಯಾಗಿ ಕೆಲವೊಮ್ಮೆ ತಮ್ಮ ಇನ್ನೊಂದು ಕಿವಿ ಕೇಳಿಸಿಕೊಳ್ಳದ ರೀತಿಯಲ್ಲಿ. ಅದೇ ದಿವಸ ಸುತ್ತಿ ಬಳಸಿ ಹೈದರಾಬಾದಿನಿಂದ ಮರಳಿದ್ದ ಪ್ರತಾಪರೆಡ್ಡಿ ಬಳಲಿಕೆಯಿಂದ ಆಕಳಿಸುವಾಗ ಕರವಸ್ತ್ರವನ್ನು ತುಟಿಗಳ ಮೇಲೆ ಸೌಜನ್ಯಯುತವಾಗಿ ಇಟ್ಟುಕೊಳ್ಳುತ್ತಿದ್ದನು. ಆತನ ಹೆಗಲ ಮೇಲೆ ಅಪ್ಯಾಯತೆಯಿಂದ ಕೈಹಾಕಿ ಪಕ್ಕದ ಕೋಣೆಗೆ ಕರೆದೊಯ್ದು ಏನನ್ನೋ ಮಾತನಾಡಿ ಹೊರಗೆ ಬಂದು ಪುನಃ ಕ್ಯಾಲೆಂಡರನ್ನು ತಮ್ಮ ಕಣ್ಣುಗಳಿಗೆ ಹತ್ತಿರ ತಂದುಕೊಂಡು ಪರಿಶೀಲಿಸುತ್ತಿದ್ದರು, ಅಂಗಾತವಿರಿಸಿದ್ದ ರಿಸೀವರನ್ನು

ಎತ್ತಿಕೊಂಡು ದೂರದವರೊಂದಿಗೆ ಸಂಭಾಷಿಸುತ್ತಿದ್ದರು. ಆಗಾಗ್ಗೆ ಜಲಂಧರನನ್ನು ತಮ್ಮ ಸನಿಹಕ್ಕೆ ಬಿಟ್ಟುಕೊಳ್ಳುತ್ತಿದ್ದರು, ದೂರ ಸರಿಸುತ್ತಿದ್ದರು, ಕೆಲವೊಮ್ಮೆ ಮನೆಯ ಅಂಗಳಕ್ಕೂ ಕಳಿಸುತ್ತಿದ್ದರು. ಹೀಗಾಗಿ ಕಂಪನಿಯ ಮಾಲಕ ತದಿಗಾಲಲ್ಲಿ ನಿಂತೂ ನಿಂತು ಬೇಗುದಿಯನ್ನು ಅನುಭವಿಸಿದ್ದನು, ಸಮಾರಂಭ ನಡೆಯುವುದು ಗಗನ ಕುಸುಮವೆಂಬ ನಿರ್ಣಯಕ್ಕೆ ಬಂದಿದ್ದನು. ನಡೆದರೇನು ಬಿಟ್ಟರೇನು! ಯಾರೊಬ್ಬರಿಗೂ ಮುನ್ಸೂಚನೆ ನೀಡದೆ ಕಂಪನಿಯ ಸದಸ್ಯರನ್ನು ತನ್ನ ಬೆನ್ನ ಹಿಂದೆ ಕಟ್ಟಿಕೊಂಡು ವಾಗಿಲಿಯಿಂದ ರಾತ್ರೋರಾತ್ರಿ ಪಲಾಯನ ಮಾಡುವುದೋ ವಾಸಿ ಎಂಬ ನಿರ್ಣಯವನ್ನೂ ಅನುಭವಿಸಿದ್ದನು. ಆದರೆ ಅದು ಕಷ್ಟ ಸಾಧ್ಯ, ಅಲ್ಲದೆ ಅಪಾಯಕಾರಿ ಸಹ. ಅದಕ್ಕೆ ಕಳಸಪ್ರಾಯವಾಗಿ ಅನ್ನದ ಋಣ ತನ್ನ ಸಂವೇದನೆಗಳಿಗೆ ಕಡಿವಾಣ ಹಾಕಿತ್ತು ಬೇರೆ. ಅದರ ನೆನಪು ಮರುಕಳಿಸಿ ಹೊಟ್ಟೆ ತೊಳಸಿದ ಅನುಭವವನ್ನೂ ಅನುಭವಿಸಿದ್ದನು.

ತನ್ನ ದೇಹಕ್ಕೆ ಸಮೀಪದಲ್ಲೂ ದೂರದಲ್ಲೂ ನಿಂತು ಮೈಯೆಲ್ಲಾ ಕಣ್ಣು ಕಿವಿಗಳನ್ನು ಮುಡಿದುಕೊಂಡು ಗಮನಿಸುತ್ತಿದ್ದ ಗೌಡರ ಅಂಗರಕ್ಷಕರಲ್ಲಿ ಕೆಲವರು ತನಗೆ ಪರಿಚಯವಿದ್ದಂತವರೆ! ಅವರು ಗ್ರಹಿಸದ ರೀತಿಯಲ್ಲಿ ಭಯ ಆತಂಕಕ್ಕೆ ಸಂಬಂಧಿಸಿದ ಸಂವೇದನೆಗಳನ್ನು ಅನುಭವಿಸುವುದು ಅಷ್ಟು ಸುಲಭವಿರಲಿಲ್ಲ ಬೇರೆ. ನಿಟ್ಟುಸಿರುಗಳನ್ನು ಹೊರಚೆಲ್ಲುವಾಗ ಎಚ್ಚರ ವಹಿಸುವುದು ಅನಿವಾರ್ಯವಾಗಿತ್ತು, ಹಾಗೆಯೇ ಕಣ್ಣಾಲಿಗಳನ್ನು ತಿರುಗಿಸುವುದಾಗಲೀ, ಕಣ್ಣೆವೆಗಳನ್ನು ಹ್ರಸ್ವಗೊಳಿಸುವುದಾಗಲೀ, ಕಣ್ಣುಗಳ ಹುಬ್ಬುಗಳನ್ನು ಮೇಲೇರಿಸುವುದಾಗಲೀ, ಕೆಳಗಿಳಿಸುವುದಾಗಲೀ, ಕೈಗಳನ್ನು ಹಿಚುಗಿಕೊಳ್ಳುವುದಾಗಲೀ, ಆಡಲಿರುವ ಭಾಷೆಯ ಮೇಲೆ ಹತೋಟಿ ಸಾಧಿಸುವುದಾಗಲೀ ಸುಲಭವಿರಲಿಲ್ಲ, ಬೇರೆಯವರಾಗಿದ್ದಲ್ಲಿ ನೀನುಸ್ಯೆ ನಿನ್ನ ಸೆಂಟ ಸ್ಯೆ ಎಂದು ದುರ್ದಾನ ತೆಗೆದುಕೊಂಡವಂತೆ ವಾಪಸ್ಸು ಹೊರಟುಬಿಡುತ್ತಿದ್ದರೇನೊ! ತಾನು ಅಭಿನಯಪಟುವಾಗಿರುವುದರಿಂದ ಭಾವನೆಗಳನ್ನು ಅಂತರಂಗದಲ್ಲಿ ಅನುಭವಿಸುವುದು ಸಲೀಸಾಯಿತು. ಹೀಗೆ ತುಂಬ ಹೊತ್ತು ಸತಾಯಿಸಿದ ಬಳಿಕವೇ ಗೌಡರು ತನ್ನನ್ನು ಒಳಗೆ ಬರಮಾಡಿಕೊಂಡು ದಿನಾಂಕವನ್ನು ನಿಗದಿಪಡಿಸಿದ್ದರು, ಜೊತೆಯಲ್ಲಿ ಸೂಕ್ತ ಸಲಹೆಗಳನ್ನು ನೀಡಿದ್ದರು, ಎಚ್ಚರಿಕೆ ಮಾತುಗಳನ್ನೂ ಆಡಿದ್ದರು. ಹಣದ ಅಗತ್ಯವಿರುವುದೇ ಎಂದು ಕೇಳುತ್ತಲೇ ನಗದಿರದಿದ್ದ ತಮ್ಮ ಜೇಬುಗಳನ್ನು ಕೈಗಳಿಂದ ತಡಕಾಡಿದ್ದರು.

ಅವರ ಕಣ್ಸನ್ನೆ ಮೇರೆಗೆ ಬಾಣಸಿಗ ವಿಠೋಬಶೆಟ್ಟಿ ಊಟ ಬಡಿಸುವ ಸಲುವಾಗಿ ತನ್ನನ್ನು ಮನೆಯ ಇನ್ನೊಂದು ಕೋಣೆಗೆ ಕರೆದೊಯ್ದನು, ಬಚ್ಚಲನ್ನು ತೋರಿಸುತ್ತ ಕೈಕಾಲುಗಳನ್ನು ತೊಳೆದುಕೊಳ್ಳುವಂತೆ ಸೂಚಿಸಿದನು, ಕೂಡಲೆ ಪ್ರವೇಶಿಸಿ ತನ್ನ ಪಾದಗಳ ಮೇಲೆ ನೀರು ಸುರಿದೊಡನೆ ಅದು ಆ ಕ್ಷಣವೇ ಆವಿಯಾಗಿದ್ದೊಂದು ಸೋಜಿಗದ ಸಂಗತಿ, ಹಸಿದಿದ್ದರೂ ಮೃಷ್ಟಾನ್ನ ಭೋಜನ ರುಚಿಸಲಿಲ್ಲ, ಎಂಜಲುಗೈ ತೊಳೆದುಕೊಂಡ ಜಲಂಧರ ಅದನ್ನು ಒರೆಸಿಕೊಂಡಿದ್ದು ಬಸ್‌ನಿಲ್ದಾಣ ತಲುಪಿದ ಬಳಿಕವೇ!

ವಿಚಿತ್ರವೆಂದರೆ ಜಲಂಧರ ತಲುಪುವಷ್ಟರಲ್ಲಿ ಅಜ್ಞಾತ ವ್ಯಕ್ತಿಗಳ ಕೈವಾಡದಿಂದಾಗಿ ವಾಗಿಲಿಯ ಪ್ರಮುಖ ಗೋಡೆಗಳ ಮೇಲೆ ಶತದಿನೋತ್ಸವಾಚರಣೆಗೆ ಸಂಬಂಧಿಸಿದ ಭಿತ್ತಿಪತ್ರಗಳು ರಾರಾಜಿಸುತ್ತಿದ್ದವು, ಅವೆಲ್ಲ ಬಹುವರ್ಣದವೂ ಆಕರ್ಷಕವೂ ಆಗಿದ್ದವು. ಅವುಗಳ ಬಲಮೇಲ್ಭಾಗದಲ್ಲಿ ಹೆಬ್ಬಟಂ ಗೌಡರ ಭಾವಚಿತ್ರವಿದ್ದರೆ ಎಡಭಾಗದಲ್ಲಿ ಸೂರ್ಯಪ್ರತಾಪರೆಡ್ಡಿಯ ಭಾವಚಿತ್ರವಿತ್ತು. ಸಾರ್ವಜನಿಕರ ಸೌಭಾಗ್ಯವೋ ಏನೋ! ತಂದೆ

ಮಕ್ಕಳಿಬ್ಬರೂ ಫೋಟೋದಲ್ಲಿ ಅಂಜಲೀಬದ್ದರಾಗಿದ್ದರು. ಉಳಿದಂತೆ ಎಮ್ಮೆಲ್ಲೆ ರಾಜಾರತ್ನಂ ಸೇರಿದಂತೆ ಹಲವರ ಹೆಸರುಗಳಿದ್ದವು. ಓದಲರಿಯದವರು ಅವುಗಳ ಕಡೆ ದಿಗ್ಭ್ರಾಂತರಾಗಿ ನೋಡುತ್ತಿದ್ದರೆ, ಅಲ್ಪಸ್ವಲ್ಪ ಓದು ಬಲ್ಲವರು ಅವುಗಳ ಒಕ್ಕಣಿಕೆಯನ್ನು ಗಮಕ ಶೈಲಿಯಲ್ಲಿ ವಾಚಿಸಿ ವಿವರಿಸುತ್ತಿದ್ದರು. ಇದೆಲ್ಲ ಕೇವಲ ವಾಗಿಲಿಗೆ ಮಾತ್ರ ಸೀಮಿತವಾಗಿರಲಿಲ್ಲ, ಕೂಡ್ಲೂರು ಗೆಜ್ಜೆಹಳ್ಳಿ ಚಿಗ್ಯಾಟಿ ಸುಳುವಾಯಿಗಳೇ ಮೊದಲಾದ ಹತ್ತಿರದ ಊರುಗಳಲ್ಲೂ, ಹೊಳಗುಂದಿ ಮಾಟಸೂಗೂರು ಬಡೇಲಡಕು ಎಲ್ಲಾರ್ತಿಗಳೇ ಮೊದಲಾದ ಸ್ವಲ್ಪ ದೂರದ ಊರುಗಳಲ್ಲೂ ಈ ತೆರನ ಪ್ರಚಾರ ಸಾಮಾಗ್ರಿಗಳಿಂದ ಅಲ್ಲಿನ ಗೋಡೆಗಳನ್ನು ಅಲಂಕರಿಸಲಾಗಿತ್ತು. ಅಲ್ಲೆಲ್ಲಾ ವಾಚನಾಭಿರುಚಿಗೆ ಸಂಬಂಧಿಸಿದ ಸಮಸ್ಯೆ ತಲೆದೋರಿತ್ತು. ಅಯಾ ಊರುಗಳಲ್ಲಿ ತಮ್ಮನ್ನು ಮೌಖಿಕವಾಗಿ ವೈಭವೀಕರಿಸಿ ಅಭಿವ್ಯಕ್ತಿಸುವ ಸಲುವಾಗಿಯೇ ಹೆಬ್ಬಟಂ ಗೌಡರ ಖಾಸಗಿ ಪಡೆಯ ಭಟ್ಟಂಗಿಗಳು ಕಾರ್ಯಪ್ರವೃತ್ತರಾಗಿದ್ದರು. ಪರ ಊರುಗಳಲ್ಲಿ ಅಷ್ಟಿದ್ದ ಮೇಲೆ ಇನ್ನು ತಮ್ಮ ಸ್ವಾಸ್ಥಿಯಾದ ವಾಗಿಲಿಯಲ್ಲಿ ಎಷ್ಟಿರಬೇಡ! ಪ್ರಸ್ತಾಪಿಸಲೇ ಬೇಕಾದ ಇನ್ನೊಂದು ಸಂಗತಿ ಎಂದರೆ!

ಸ್ಥಳೀಯ ಜನರಿಗೆ ಪ್ರಾಥಮಿಕ ಮಾಹಿತಿ ಲಭಿಸಿದ ರೀತಿಯಲ್ಲಿ ನೂರಾರು ಅಪರಿಚಿತರು ವಾಗಿಲಿಯಲ್ಲಿ ಸೇರಿಕೊಂಡಿದ್ದರು, ನೂರಾರು ಸಂಖ್ಯೆಯಲ್ಲಿದ್ದ ಅವರ ಪೈಕಿ ಕೆಲವರು ವಾಡೆಗೆ ಸುಣ್ಣ ಬಣ್ಣ ಬಳಿಯುವುದರಲ್ಲಿ ನಿರತರಾಗಿದ್ದರೆ ಇನ್ನೂ ಕೆಲವರು ಗೌಡರ ಊರ ಮುಂದಿನ ಮಸಾರೆ ಹೊಲದಲ್ಲಿನ ನೆಲವನ್ನು ಸಮತಟ್ಟಾಗಿಸುವ ಪ್ರಯತ್ನದಲ್ಲಿ ತೊಡಗಿದ್ದರು, ಮತ್ತೂ ಕೆಲವರು ಮೆರವಣಿಗೆ ರೂಪರೇಷೆ ಕುರಿತು ಯೋಚಿಸಲು ಶ್ರೀಶೈಲಮಲ್ಲಿಕಾರ್ಜುನನ ಸನ್ನಿಧಿಯನ್ನು ಆಯ್ಕೆ ಮಾಡಿಕೊಂಡಿದ್ದರು. ಅವರಿವರೊಂದೇ ಅಲ್ಲದೆ ಇನ್ನೂ ಕೆಲವರು ಮಫ್ತಿ ವೇಷದಲ್ಲಿದ್ದು ಗೌಡರ ಮತ್ತವರ ಸುಪುತ್ರ ಪ್ರತಾಪರೆಡ್ಡಿಯವರ ವಿರೋಧಿ ಅಲೆ ಯಾವ ಪ್ರಮಾಣದಲ್ಲಿರುವುದು, ಅವರಲ್ಲಿ ಸದಭಿಪ್ರಾಯ ಕುದುರಿಸಲು ಯಾವ್ಯಾವ ತಂತ್ರಗಾರಿಕೆಯನ್ನು ರೂಪಿಸಬೇಕು, ಕಾಮಗಾರಿಗೊಳ್ಳದ ವ್ಯಕ್ತಿತ್ವಗಳನ್ನು ಯಾವ ರೀತಿ ನಿರ್ಮೂಲನಗೊಳಿಸಬೇಕು ಎಂದು ಮುಂತಾಗಿ ಯೋಚಿಸುತ್ತ ಊರೊಳಗೆ ತಿರುಗಾಡಲಾರಂಭಿಸಿದ್ದರು. ಇಂಥ ನಿಗೂಢ ಪ್ರಯತ್ನಗಳಿಂದಾಗಿ ಕೆಲವರು ಊರಿನಿಂದ ತಾತ್ಕಾಲಿಕವಾಗಿ ಬೇರೆ ಊರುಗಳಿಗೆ ವಲಸೆ ಹೋದರೆ ಇನ್ನೂ ಕೆಲವರು ತಲೆಮರೆಸಿಕೊಂಡರು. ಅವರ ಪೈಕಿ ಇನ್ನೂ ಕೆಲವರು ದೈಹಿಕವಾಗಿ ಸುಳಿವು ದೊರಕದ ರೀತಿಯಲ್ಲಿ ನಾಪತ್ತೆಯಾದರು. ಈ ಎಲ್ಲಾ ಪೂರ್ವಸಿದ್ಧತಾ ಕಾರ್ಯಕ್ರಮಗಳನ್ನು ಪರಿಶೀಲಿಸುವ ಸಲುವಾಗಿ ಬಳ್ಳಾರಿ ಮೂಲದ ಕೆಲವರು ವಾಗಿಲಿಗೆ ಬಂದು ವಿಷಯ ಸಂಗ್ರಹಿಸಿಕೊಂಡು ಗೌಡರಿಗೆ ವಸ್ತುನಿಷ್ಠ ವರದಿ ಸಲ್ಲಿಸಲೆಂದು ಮರಳುತ್ತಿದ್ದುದೂ ಉಂಟು. ಈ ರೀತಿ ಕ್ಷಿಪ್ರ ಸಿದ್ಧತಾ ಕೆಲಸಗಳಿಂದಾಗಿ ವಾಗಿಲಿಯ ಚೆಹರೆ ಕೆಲವೇ ದಿವಸಗಳಲ್ಲಿ ಅಮೂಲಾಗ್ರವಾಗಿ ಬದಲಾಯಿತು.

ಆದೋನಿಯಿಂದ ಮಾತ್ರವಲ್ಲದೆ ದೂರದ ಕರ್ನೂಲು ಪಟ್ಟಣದಿಂದಲೂ ಬಾಂಬು ನಿಷ್ಕ್ರಿಯಾ ಪಡೆಗಳು ಬಂದರೆ ಹೈದರಾಬಾದಿನ ಜಾಫರ್ ಶಾಮಿಯಾನ ಕಂಪನಿ ಎರಡು ಮೂರು ಲೋಡುಗಳನ್ನು ತಂದು ಊರ ಹೊರವಲಯದಲ್ಲಿ ಸುರುವಿತು, ಎರಡು ಎಕರೆ ವಿಸ್ತೀರ್ಣದ ಬಯಲ ತುಂಬೆಲ್ಲ ಶಾಮಿಯಾನ ಹಾಕಲಾಯಿತಲ್ಲದೆ ನಯನಮನೋಹರವಾದ ಕಂಸಾಕೃತಿಯ ವೇದಿಕೆಯನ್ನೂ ಸಿದ್ಧಪಡಿಸಲಾಯಿತು. ಸ್ಥಳಿಯರು ಅದನ್ನೆಲ್ಲ ನೋಡಿ ತಮ್ಮ ಊರಿಗೆ ಶುಕ್ರದೆಶೆ ಪ್ರಾಪ್ತವಾಗಲಿರುವುದಾಗಿ ಭಾವಿಸಿ ಹೋಗುತ್ತಿದ್ದರೇನೋ ಸರಿ! ಆದರೆ ಮಂಗಗಳಿಗೆ ಮಾನವ

ಸಹಜ ನಯನಾಜೂಕು ಇದ್ದರೆ ತಾನೆ! ಹೇಳಿಕಳಿಸಿದ ರೀತಿಯಲ್ಲಿ ಮರ್ಕಟ ಸಮೂಹವು ಎಲ್ಲೆಲ್ಲಿಂದಲೋ ಆಕಾಶ ಮಾರ್ಗವಾಗಿ ಆಗಮಿಸಿ ಊರ ಹೊರವಲಯದಲ್ಲಿ ಬೀಡುಬಿಟ್ಟಿತ್ತು ತಾನೆ! ವಾಗಿಲಿಯ ಜಮೀನ್ದಾರರು ಇಂಥ ವಿಲಕ್ಷಣ ಕಾರ್ಯಕ್ರಮಗಳನ್ನು ತಮ್ಮನ್ನೆಲ್ಲ ಸಾರಾಸಗಟ ನಿರ್ಮೂಲನ ಮಾಡಲೆಂದೇ ಹಮ್ಮಿಕೊಂಡಿರಬಹುದೆ ಎಂದು ಸಂದೇಹಿಸಿದವು. ಅವುಗಳ ಪೈಕಿ ಕೆಲವು ಮರದಿಂದ ಮರಕ್ಕೆ ನೆಗೆಯುತ್ತ ಸಮೀಪಿಸಿ ನಕರಾತ್ಮಕ ವಿಷಯಗಳನ್ನು ಸಂಗ್ರಹಿಸಿಕೊಂಡು ತಮ್ಮ ಮುಖಂಡರಿಗೆ ವರದಿ ಮಾಡಿದವು. ಅವು ಇದನ್ನೆಲ್ಲ ಸಂಚು ಎಂದು ಅಪಾರ್ಥ ಮಾಡಿಕೊಂಡವೋ ಏನೋ! ಆರಂಭದಲ್ಲಿ ಅವು ಹಾಡುಹಗಲ ಸಮಯದಲ್ಲಿಯೇ ಶಾಮಿಯಾನದ ಒಳಾಂಗಣವನ್ನು ಪ್ರವೇಶಿಸಿ ದಾಂಧಲೆ ನಡೆಸಲಾರಂಭಿಸಿದವು. ವೇದಿಕೆ ಮೇಲಿನ ಅಲಂಕಾರಿಕ ವಸ್ತುಗಳನ್ನು ಧ್ವಂಸ ಮಾಡತೊಡಗಿದವು. ವಿಧ್ವಂಸ ಕಾರ್ಯವನ್ನು ಮಾನವ ಪ್ರಾಣಿಗಳು ನಡೆಸಿದ್ದಲ್ಲಿ ಗೌಡರ ಕಡೆಯ ಗುರಿಕಾರರು ಶೂಟ್ ಮಾಡಿ ಹೆಣಗಳನ್ನು ಉರುಳಿಸುತ್ತಿದ್ದರೇನೊ! ಆದರೆ ಅವು ದೈವಾಂಶ ಸಂಭೂತ ವಾನರರು, ಕೋಪಾವೇಶದಲ್ಲಿ ಹಾಗೇನಾದರೂ ಮಾಡಿದಲ್ಲಿ ಭೂತದಯೆಗೆ ಹೆಸರಾಗಿರುವ ಹೆಬ್ಬಟಂ ಗೌಡರು ತಮ್ಮನ್ನು ಕ್ಷಮಿಸುವುದು ಅಸಂಭವ! ಆದ್ದರಿಂದ ಆ ಅಸಹಾಯ ಶೂರರು ಮೊದಮೊದಲು ಮೌಖಿಕವಾಗಿ ಉಶ್ ಉಶ್ ಎಂದು ಗದರಿಸಿ ನೋಡಿದರು, ಬಳಿಕ ಕೋಲು ಬಡಿಗೆಗಳನ್ನು ತೋರಿಸಿ ಹೆದರಿಸಿ ಓಡಿಸುವ ಪ್ರಯತ್ನ ನಡೆಸಿದರು, ಅದಕ್ಕೂ ಬಗ್ಗದಿದ್ದಾಗ ಅವರು ಪಟಾಕಿಗಳನ್ನು ಸ್ಫೋಟಿಸುವ ಮೂಲಕ, ಬಂದೂಕುಗಳಿಂದ ಹುಸಿಗುಂಡುಗಳನ್ನು ಹಾರಿಸುವುದರ ಮೂಲಕ, ಅಶ್ರುವಾಯು ಸಿಲಿಂಡರುಗಳನ್ನು ಸಿಡಿಸುವ ಮೂಲಕ ಅವುಗಳನ್ನು ಓಡಿಸುವಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾದರು. ನಿಶಾಚರ ಜಾಯಮಾನದವು ಅಲ್ಲದ ಅವು ತಾತ್ಕಾಲಿಕವಾಗಿ ತೋಪನ್ನು ಸೇರಿಕೊಂಡವೇನೋ ಸರಿ, ಅಲ್ಲಿ ಅವು ಅವಧೂತರ ಸಾನ್ನಿಧ್ಯದಲ್ಲಿ!

ಮರ್ಕಟ ಸಮೂಹದ ಕಾಟದ ನಡುವೆಯೂ ಕಾಮಗಾರಿ ಅವ್ಯಾಹತವಾಗಿ ಸಾಗಿತು.

++++

ಕಾದಂಬರಿಯನ್ನು ಮುಗಿಸುವ ತರಾತುರಿ ನನ್ನದು, ಅದು ಹೇಗೋ ಅಂತಿಮ ಘಟ್ಟ ತಲುಪಿದೆ, ಅವರಿಬ್ಬರಲ್ಲಿ ಒಬ್ಬರನ್ನು ಕಥಾನಕದಿಂದ ಬೀಳ್ಕೊಡದ ಹೊರತು ಮುಗಿಸುವುದು ಅಸಾಧ್ಯ! ಆದರೆ ಅವೆರಡೂ ಪಾತ್ರಗಳು ತಮ್ಮ ಸೃಷ್ಟಿಕರ್ತನಾದ ನನ್ನ ಆಶಯಗಳಿಗೆ ಅನುಗುಣವಾಗಿ ಸ್ಪಂದಿಸುತ್ತಿಲ್ಲ ಸಹಕರಿಸುತ್ತಿಲ್ಲ, ನನ್ನ ಇಷ್ಟಕ್ಕೆ ವಿರುದ್ಧವಾಗಿ ಹೆಚ್ಚುವರಿ ಪೋಷಕ ಪಾತ್ರಗಳನ್ನು ತಾವೇ ಸೃಷ್ಟಿಸಿಕೊಳ್ಳುತ್ತಿರುವವು, ಉದಾಹರಣೆಗೆ ಅವು ಕಥಾನಕದೊಳಗೆ ಬಿಟ್ಟುಕೊಂಡಿರುವ ಮಹಿಳೆ, ಆಕೆಗೆ ದಲಿತ ಪಟ್ಟ ಕಟ್ಟಿವೆ, ಬೆಲೆವೆಣ್ಣಿನ ಸ್ಥಾನಮಾನ ನೀಡಿವೆ, ಅದೂ ಸಾಲದೆಂಬಂತೆ ಅದರೊಳಗೆ ತಾವು ಆಶ್ರಯ ಪಡೆದಿವೆ, ಆಕೆಯ ಮಣ್ಣಿನ ಮನೆಯನ್ನು ತಮ್ಮ ಅಡಗುತಾಣವನ್ನಾಗಿ ರೂಪಿಸಿಕೊಂಡಿವೆ, ಐಷಾರಾಮಿ ಜೀವನ ನಡೆಸಲು ಹಪಹಪಿಸುತ್ತಿವೆ, ತಮ್ಮ ಜೀವನ ನಿರ್ವಹಣೆಗೆ ಹಣಕ್ಕಾಗಿ ಒತ್ತಾಯಿಸುತ್ತಿವೆ, ಜಮೀನ್ದಾರೀ ಪರಿವೇಷವನ್ನು ಧರಿಸಲಾರಂಭಿಸಿವೆ, ಕಾದಂಬರಿಯೊಳಗೆ ಗುಂಪುಗಾರಿಕೆಗೆ ಕುಮ್ಮಕ್ಕು ನೀಡಲಾರಂಭಿಸಿವೆ, ತಮ್ಮ ಮೂಗಿನ ನೇರಕ್ಕೆ ಪಾತ್ರಗಳನ್ನು ಸೃಷ್ಟಿಸಿಕೊಳ್ಳಲಾರಂಭಿಸಿವೆ, ಅವುಗಳ ಮೂಲಕ ಕಥೆಯ ವಿನ್ಯಾಸಕ್ಕೆ ದಕ್ಕೆ ತರಲಾರಂಭಿಸಿವೆ. ಪೂರ್ವನಿರ್ಧಾರಿತ ಪಾತ್ರಗಳ ಬೆಳವಣಿಗೆಯನ್ನಾಗಲೀ, ಅವುಗಳ ಅಸ್ತಿತ್ವವನ್ನಾಗಲೀ ತಾವು ಸಹಿಸಿಕೊಳ್ಳುತ್ತಿಲ್ಲ. ಕೃತಜ್ಞತೆ

ಇಲ್ಲದ ಇವುಗಳ ಸ್ವೇಚ್ಛಾಚಾರವನ್ನು ಹೇಗೆ ನಿಯಂತ್ರಿಸುವುದು! ಯೋಚಿಸಿದೆನಾದರೂ ಕೂಡಲೆ ಹೊಳೆಯಲಿಲ್ಲ. ಅವೆರಡನ್ನೂ ಮುಂದುವರೆಸುವುದೊ! ಅಥವಾ ಅವೆರಡರಲ್ಲಿ ಒಂದನ್ನು ಶಾಶ್ವತವಾಗಿ ಬೀಳ್ಕೊಡುವುದೋ! ಆದರೆ ನಿರೀಕ್ಷೆಗೂ ಮೀರಿ ಬೆಳೆದಿರುವ ಅವುಗಳ ಸ್ಥಾನವನ್ನು ಅಪಭ್ರಂಶಗೊಳಿಸುವುದು ಸುಲಭ ಸಾಧ್ಯವಲ್ಲ. ನಿಜ ಹೇಳುವುದಾದರೆ ಅವೆರಡೂ ಪರಸ್ಪರ ಹಲ್ಲೆಗೊಳಗಾಗಿ ಭೌತಿಕವಾಗಿ ನಷ್ಟಗೊಳ್ಳಲಿದ್ದವು, ಅವುಗಳನ್ನು ಸೈದ್ಧಾಂತಿಕವಾಗಿ ಬೆಸೆದದ್ದು ಬೆಳೆಸಿದ್ದು ನಾನೆ! ಹೋರಾಟದ ಗೌರವಾನ್ವಿತ ಸ್ಥಾನ ಕಲ್ಪಿಸಿದ್ದೂ ನಾನೆ! ಅಂಥ ನನ್ನ ವಿರುದ್ಧವೇ ಅವು ಮಸಲತ್ತು ನಡೆಸುತ್ತಿವೆ. ಕಥೆಗಾರನ ಆರ್ಥಿಕ ದುಃಸ್ಥಿತಿ ಪರಿಗಣಿಸದೆ ಹಣಕ್ಕಾಗಿ ಧಮಕಿ ಹಾಕುತ್ತಿವೆ, ಹೇಗಾದರೂ ಹೊಂದಿಸಿ ಹಣ ಕೊಡಬಹುದು, ಆದರೆ ಅದು ಸದ್ಬಳಕೆಯಾಗದಿದ್ದಲ್ಲಿ ಏನು ಮಾಡುವುದು!

ಅದೂ ಅಲ್ಲದೆ ನಾನು ಕಾದಂಬರಿಯೊಳಗೆ ಅದೇ ತಾನೆ ಬರಮಾಡಿಕೊಂಡಿರುವ ಶಶಾಂಕನ ಪಾತ್ರವನ್ನು ಅವು ವಿರೋಧಿಸುತ್ತಿರುವವು, ಊರ್ಮಿಳೆಯ ಸೆಂಟಿಮೆಂಟ್ಸ್ ಭಾವನೆಗಳ ಹಗ್ಗದಿಂದ ಬಂಧಿಸಿ ಅದನ್ನು ಅದರ ಸ್ವಸ್ಥಾನಕ್ಕೆ ಮರಳಿಸಬೇಕಂತೆ! ಅದು ಸಾಧ್ಯವಾಗದಿದ್ದ ಪಕ್ಷದಲ್ಲಿ ಶಶಾಂಕನ ತಾಯಿ ಪುರೋಹಿತಶಾಹಿ ಪ್ರತಿನಿಧಿ ಕುಟಿಲ ಕುಲಕರ್ಣಿ ಮತ್ತು ಕುರೂಪಿಯೂ ಆದ ರಾಘಪ್ಪಸ್ವಾಮಿಯೊಂದಿಗೆ ಅನೈತಿಕ ಸಂಬಂಧವಿರಿಸಿಕೊಂಡಿದ್ದಳೆಂದು ಓದುಗರಿಗೆ ಮನವರಿಕೆ ಮಾಡಿಕೊಡಬೇಕಂತೆ! ಬ್ಯಾಕ್ ಫ್ಲಾಷ್‌ನಲ್ಲಿ ಗೃಹಸ್ಥ ಪರಿಧಿಯೊಳಗೆ ಹರಿಶ್ಚಂದ್ರರೆಡ್ಡಿ ಲೈಂಗಿವಾಗಿ ಅಸಮರ್ಥನಿದ್ದನೆಂದು ಸೋದಾಹರಣವಾಗಿ ಚಿತ್ರಿಸಬೇಕಂತೆ! ಆತನ ಪತ್ನಿಯ ಸೌಂದರ್ಯವನ್ನೂ ಅತೃಪ್ತ ಕಾಮನೆಗಳನ್ನೂ ಅಶ್ಲೀಲವಾಗಿ ವರ್ಣಿಸಬೇಕಂತೆ! ಕೌಟುಂಬಿಕ ವ್ಯವಸ್ಥೆಯನ್ನು ಅದರಲ್ಲೂ ಮುಖ್ಯವಾಗಿ ಭಾರತೀಯ ಮಹಿಳೆಯನ್ನು ಚಾರಿತ್ರ್ಯಹೀನಳನ್ನಾಗಿಸಬೇಕಂತೆ! ಒಟ್ಟಾರೆ ಹೇಳುವುದಾದರೆ ಕಾದಂಬರಿಯಲ್ಲಿ ಶಶಾಂಕನಿಗೆ ನಾಯಕನ ಸ್ಥಾನಮಾನ ನೀಡುವುದು ಅವುಗಳಿಗೆ ಬೇಕಿಲ್ಲ, ಅವುಗಳ ನಿರ್ದೇಶನದಂತೆ ಕಾದಂಬರಿಯನ್ನು ಬರೆಯುವುದಾಗಲೀ, ಪಾತ್ರಗಳ ಜಾಯಮಾನವನ್ನು ಅದಲು ಬದಲು ಮಾಡುವುದಾಗಲೀ ನನಗೂ ಬೇಕಿಲ್ಲ. ಅವುಗಳಿಗೆ ಮಣಿಯುವುದಕ್ಕಿಂತ ಕಾದಂಬರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವುದೇ ಮೇಲು ಎಂದು ಭಾವಿಸಿದೆ. ಆದರೆ ಕಾದಂಬರಿಯ ಉಳಿದ ಪೋಷಕ ಪಾತ್ರಗಳ ಅಸಹನೆ ಕಟ್ಟೊಡೆಯಿತು.

ಆದರೆ ಅದೇ ಇನ್ನು ಮೊಗಸಾಲೆಯನ್ನು ಪ್ರವೇಶಿಸಿದ್ದ ಶಶಾಂಕ, ಕಂಪಿಸುತ್ತಲೇ ಮರಣಶಯ್ಯೆಯನ್ನು ಸಮೀಪಿಸಿದ್ದ ಶಶಾಂಕ, ಮೆಲ್ಲಗೆ ತುಸು ಬಾಗಿ ತನ್ನ ನಡುಗುವ ಕೈಗಳಿಂದ ಸೊಳ್ಳೆ ಪರದೆಯನ್ನು ಅದೇ ತಾನೆ ಸರಿಸಿ ಮೇಲೆತ್ತಿ ತನ್ನ ತಂದೆಯ ಕೃಶ ಶರೀರದಾದ್ಯಂತ ನೋಟವನ್ನು ಹರಿದಾಡಿಸಿದ ಶಶಾಂಕ, ತನ್ನ ಕಣ್ಣುಗಳಾದ್ಯಂತ ತುಂಬಿದ ನೀರನ್ನು ಇನ್ನೇನು ತನ್ನ ತಂದೆಯ ಮುಖದ ಮೇಲೆ ಹನಿಯಲಿದ್ದ ಶಶಾಂಕ ನನ್ನ ಕಡೆ ನೋಡಿದ, ತನ್ನ ಬಾಯಿಂದ ಸಾಂತ್ವನದ ಮಾತುಗಳನ್ನು ಹೊರಡಿಸೆಂದು ಅಂಗಲಾಚಿದ, ಹಾಗೆಯೇ ತಂದೆಯ ಪಾತ್ರದಲ್ಲಿದ್ದ ಹರಿಶ್ಚಂದ್ರರೆಡ್ಡಿಯವರ ಪಾತ್ರವೂ ಸಹ. ಎಲ್ಲಿಯವರೆಗೆ ಅವೆರಡೂ ಮಾತುಗಳನ್ನು ಕಳೆದುಕೊಂಡು ಮೌನದಿಂದರಳಾದೀತು! ಎಲ್ಲಿಯವರೆಗೆ ನಿರ್ಜೀವವಾಗಿ ಸ್ಥಿರ ಚಿತ್ರದಂತಿರಲಾದೀತು! ಅಸಹಾಯಕತೆಯಿಂದ ನನ್ನ ಕಡೆ ನೋಡತೊಡಗಿದವು, ಆ ಸ್ಥಿರತೆಯನ್ನು ಕೆಲಕಾಲ ಸಹಿಸಿಕೊಂಡಿರುವುದು ನಿಮ್ಮಿಬ್ಬರಿಗೂ ಅನಿವಾರ್ಯವೆಂದು ನಿವೇದಿಸಿಕೊಂಡೆ. ಛೆ ತಮ್ಮನ್ನು ಸ್ಥಗಿತಸ್ಥಿತಿಯಲ್ಲಿರಿಸುವ ನಿನ್ನ ನಿರ್ಧಾರಕ್ಕೆ ಧಿಕ್ಕಾರ ಎಂದು ಕೂಗಿದವೆಂದು ಭಾವಿಸಿದೆ,

ನೀನು ನಿನ್ನ ಹೆತ್ತ ತಂದೆಯನ್ನು ಪ್ರೀತಿಸಿದ್ದಲ್ಲಿ, ಆ ನಿನ್ನ ಹೆತ್ತ ತಂದೆ ತನ್ನ ಮಗನಾದ ನಿನ್ನನ್ನು ಪ್ರೀತಿಸಿದ್ದಲ್ಲಿ ತಮ್ಮನ್ನು ಈ ಸ್ಥಗಿತ ಸ್ಥಿತಿಯಲ್ಲಿರಿಸುತ್ತಿರಲಿಲ್ಲವೋ ಕಥೆಗಾರನೇ! ನಿನ್ನೊಳಗಿನ ಕೊರತೆಗಳ ಮೇಲಿನ ಸೇಡನ್ನು ತೀರಿಸಿಕೊಳ್ಳುವ ಸಲುವಾಗಿ ತಮ್ಮಂಥ ಅಸಹಾಯಕ ಪಾತ್ರಗಳನ್ನು ದಾಳಗಳ ರೂಪದಲ್ಲಿ ಉಪಯೋಗಿಸಿಕೊಳ್ಳುತ್ತಿರುವ ನೀನು ನಿರ್ದಯಿ ಹೃದಯ ಶೂನ್ಯ ಎಂದು ಹಂಗಿಸುತ್ತಿರುವವೆಂದು ಭಾವಿಸಿದೆ. ಆ ತಕ್ಷಣ ಊರಲ್ಲಿರುವ ತಂದೆಯನ್ನು ನೆನಪಿಸಿಕೊಂಡೆ, ಆತನಿಂದ ತಲುಪದಿರುವ ಪತ್ರಗಳನ್ನು ಸ್ಮರಣೆಗೆ ತಂದುಕೊಂಡೆ, ಆ ಪತ್ರಗಳಲ್ಲಿರುವ ಒಕ್ಕಣಿಕೆಯನ್ನು ಓದಲಾರಂಭಿಸಿದೆ. ಅರೆ ತನ್ನ ಕಾದಂಬರಿಯ ಮುಖ್ಯ ಭೂಮಿಕೆಯಲ್ಲಿರುವ ಆ ತನ್ನ ಪಾತ್ರಗಳು ಹೆತ್ತ ಕರುಳುಗಳನ್ನು ಅರ್ಥ ಮಾಡಿಕೊಂಡಿರುವ ಕರುಣಾಮಯಿಗಳು! ನನ್ನ ತಂದೆಯನ್ನು ನನಗೆ ನೆನಪಿಸಿಕೊಟ್ಟ ಕರುಣಾಮೂರ್ತಿಗಳು! ಅಂಥ ಪಾತ್ರಗಳ ಮೇಲೆ ಹತೋಟಿ ಸಾಧಿಸಲೆತ್ನಿಸುತ್ತಿರುವ, ಅಂಥ ಪಾತ್ರಗಳನ್ನು ನಕಾರಾತ್ಮಕ ರೀತಿಯಲ್ಲಿ ಚಿತ್ರಿಸುವಂತೆ ಒತ್ತಡ ಹೇರುತ್ತಿರುವ ಪನ್ನಂಗಧರನಿಗಾಗಲೀ, ದಯಾನಂದನಿಗಾಲೀ ಅವರವರನ್ನು ಹೆತ್ತವರು ಇರುವರೋ ಇಲ್ಲವೋ! ಇದ್ದರೆ ಎಲ್ಲಿರಬಹುದು! ಪೀಠಿಕಾರೂಪದಲ್ಲಿ ಅವರನ್ನು ಪರಿಚಯಿಸಬಹುದಿತ್ತು! ಮಾತೃವಾತ್ಸಲ್ಯದ ಕೊರತೆಗೂ ಉಗ್ರಎಡಪಂಥೀಯ ಹೋರಾಟಗಾರರಿಗೂ ಸಂಬಂಧವಿರುವುದೋ ಇಲ್ಲವೋ ಎಂಬ ಸಂದೇಹ ಕಾಣಿಸಿಕೊಂಡಿತು. ಅವರವರ ಕೌಟುಂಬಿಕ ಹಿನ್ನಲೆಗಿಂತ ನನ್ನ ಕೌಟುಂಬಿಕ ಹಿನ್ನಲೆಯನ್ನು ಪರಾಮರ್ಶಿಸುವುದು ಮುಖ್ಯ. ಆದಷ್ಟು ಬೇಗನೆ ಬಿಡುವು ಕಲ್ಪಿಸಿಕೊಂಡು ಊರಿಗೆ ಹೋಗಬೇಕು, ನಿರೀಕ್ಷೆಯಲ್ಲಿ ಬಸವಳಿದು ಹತಾಶನಾಗಿ ಕರುಳಕುಡಿಗಳನ್ನು ಮರೆತಿರಬಹುದಾದ ತಂದೆಯನ್ನು ಕಾಣಬೇಕು, ಪ್ರಶ್ನೋತ್ತರಗಳಿಗಾತೀತವಾಗಿ ಆತನ ಸಂಗಡ ಒಡನಾಡಬೇಕು, ಅದೂ ಎಷ್ಟು ಬೇಗನೆ ಸಾಧ್ಯವೋ ಅಷ್ಟು ಬೇಗ! ನಾನಿನ್ನು ವಿಳಂಬಕ್ಕೆ ಎಡೆಮಾಡಿಕೊಡಲೇಬಾರದು ಎಂದು ನಿರ್ಧರಿಸಿದೆನೇನೋ ಸರಿ,

ಆದರೆ ಸಂಭವಿಸಲಿರುವ ಹೇಮರೆಡ್ಡಿ ಮಲ್ಲಮ್ಮ ನಾಟಕದ ಶತದಿನೋತ್ಸವ ಸಮಾರಂಭ ಕೇವಲ ಜಲಂಧರನಿಗೆ ಸಂಬಂಧಿಸಿದ್ದಲ್ಲ, ಅದು ಹೆಬ್ಬಟಂ ಗೌಡರ ಪ್ರತಿಷ್ಠೆಯ ಪ್ರಶ್ನೆ, ಅದು ಯುವ ನೇತಾರ, ಭಾವೀ ಶಾಸಕ, ಸಂಭವಿಸಲಿರುವ ಹಲವು ಕೊಲೆಗಳ ರೂವಾರಿ ಸೂರ್ಯಪ್ರತಾಪರೆಡ್ಡಿಯ ಗೌರವದ ಪ್ರಶ್ನೆ, ಅದು ಬದುಕುವವರು ಮೃತ್ಯುವಶರಾಗುವವರ, ಮೃತ್ಯುವಶರಾಗುವವರು ಬದುಕುಳಿಯುವವರ ನಿರ್ಣಾಯಕ ಕ್ಷಣ! ಗೈರು ಹಾಜರಿಯಾಗುವವರನ್ನು ಆಜೀವಪರ್ಯಂತರ ವಿವಿಧ ಕಂಟಕಗಳಿಗೆ ಈಡುಮಾಡುವ ಸಂದರ್ಭ! ಅದಲ್ಲದೆ ಗೌಡರು ಈ ಹಿಂದೆಯೇ ಪಂಪಯ್ಯಸ್ವಾಮಿ ರಾಘಪ್ಪಸ್ವಾಮಿಯ ಮೂಲಕ ತಮ್ಮ ಭಾಷಣ ಬರೆದುಕೊಡಲಿಕ್ಕೆ ಕೇಳಿಕೊಂಡಿರುವರು, ಅದಕ್ಕೆ ಸಂಬಂಧಿಸಿದ ವಿವರಗಳನ್ನು ಮುಂಚಿತವಾಗಿ ಮೌಖಿಕ ರೂಪದಲ್ಲಿ ಒದಗಿಸಿರುವರು. ಬರೆಯಲಿರುವ ಏಳೆಂಟು ಪುಟದ ಭಾಷಣದಲ್ಲಿ ಅವರ ಮಗನ ಗುಣಗಾನ ಮಾಡಬೇಕಿರುವುದು, ಅದೂ ಆತ್ಮಸಾಕ್ಷಿಯನ್ನು ಬದಿಗಿರಿಸುವುದೆಂದರೆ! ಅದು ಆತ್ಮಹತ್ಯೆಗೆ ಸಮಾನ, ಆದರೂ ಅನಿವಾರ್ಯ. ಕಾದಂಬರಿಯ ಬದಲಿಗೆ ಭಾಷಣ ಕುರಿತು ಯೋಚಿಸಲಾರಂಭಿಸಿದೆ, ಯೋಚನೆಗೆ ಹೊಳೆಯಲಾರಂಭಿಸಿದ್ದನ್ನು ಟಿಪ್ಪಣಿ ಮಾಡಲಾರಂಭಿಸಿದೆ. ಪ್ರತಾಪರೆಡ್ಡಿಯನ್ನು ಇಂದಿರಾಗಾಂಧಿಯವರ ಸುಪುತ್ರ ಸಂಜಯಗಾಂಧಿಗೆ ಹೋಲಿಸುವುದೋ! ಅಥವಾ ಮುಳುಗಲಿದ್ದ ಭೂಮಿಯನ್ನು ತನ್ನ ಕೋರೆ ದಾಡಿಗಳಿಂದ ಎತ್ತಿ ನಿಲ್ಲಿಸಿದ ವಿಷ್ಣುವಿನ ವರಾಹ ಅವತಾರಕ್ಕೆ ಹೋಲಿಸುವುದೋ!

ಅಥವಾ ವಾಗಿಲಿಗೆ ವಕ್ಕರಿಸಿರುವ ಅಸಂಖ್ಯಾತ ಮಂಗಗಳಿಗೂ, ಕಳೆದ ಎರಡು ತಿಂಗಳುಗಳ ಹಿಂದೆಯಷ್ಟೆ ಬೇವಿನಮರದ ಆಶ್ರಯದಲ್ಲಿ ಪ್ರತಿಷ್ಠಾಪನೆಗೊಂಡಿರುವ ಶ್ರೀಶೈಲಮಲ್ಲಿಕಾರ್ಜುನ ಲಿಂಗಕ್ಕೂ, ರೆಡ್ಡಿಯವರ ಸುಪುತ್ರ ಜೈಲಿನಿಂದ ಬಿಡುಗಡೆಯಾಗಿರುವುದಕ್ಕೂ ಸಾಮ್ಯವಿರುವುದಾಗಿ ಪ್ರಸ್ತಾಪಿಸುವುದೋ! ಯಾರಿಗೂ ಅರ್ಥವಾಗದ ವ್ಯಂಗ್ಯದ ಮೂಲಕ ಜಮೀನ್ದಾರಿ ವ್ಯವಸ್ಥೆಯನ್ನು ಲೇವಡಿ ಮಾಡುವುದೋ! ಈ ವ್ಯಂಗ್ಯ ಲೇವಡಿ ಉಡಾಫೆ ನನ್ನಂಥ ಲೇಖಕರಿಗೆ ಸುಲಭ ತಾನೆ!

ಇನ್ನೇನೋ ಯೋಚಿಸುವಷ್ಟರಲ್ಲಿ ಪಕ್ಕದ ಮನೆಯಿಂದ ಲಚುಮವ್ವ ಕೂಗಾಡುತ್ತಿರುವ ಸದ್ದು ಕೇಳಿಬಂತು. ಏನಿರಬಹುದೆಂದು ಧಾವಿಸಿ ಇಣುಕಿದೆ, ಕಾಳಿಯ ಸಂಗಡ ಆಕೆ ಮೌಖಿಕ ಕದನಕ್ಕೆ ತೊಡಗಿರುವುದು ಗೊಚರಿಸಿತು, ಕೇಳಿಸಿತು. ಅದರ ಪೂರ್ವಾಪರ ಒಂದೆರಡು ಕ್ಷಣಗಳಲ್ಲಿ ಸ್ಪಷ್ಟವಾಯಿತು, ಅದೆಂದರೆ ಅವಧೂತ ಪರಶುರಾಮ ತನ್ನ ಶ್ರಮರಹಿತ ಸಂಪಾದನೆಯ ಒಂದು ಭಾಗವನ್ನು ತನ್ನ ಪ್ರಿಯತಮೆಯ ಜೀವನ ನಿರ್ವಹಣೆಗೆ ಕಳಿಸಿರುವಂತಿರುವುದು, ಅದನ್ನು ಆಕೆ ಗುಟ್ಟಾಗಿ ತಲುಪಿಸುವ ನಿಮಿತ್ತ ಅಲ್ಲಿಗೆ ಬಂದಿರುವಂತಿರುವುದು, ಆದರೆ ಲಚುಮವ್ವ ಅದನ್ನು ತೆಗೆದುಕೊಳ್ಳಲು ಖಡಾಖಂಡಿತ ನಿರಾಕರಿಸುತ್ತಿರುವಳು, ನಾಯಿಯ ಮೊಲೆವಾಲು ನಾಯಿಗಳಿಗಲ್ಲದೆ ಎಂದೇನೇನೋ ಹೇಳುತ್ತಿರುವಳು, ಮಕ್ಕಳೂ ತನ್ನ ತಾಯಿಯ ಬೆಂಬಲಕ್ಕೆ ನಿಂತಿರುವಂತಿದೆ, ಆಕೆ ಎಸೆಯುವುದು, ಪುನಃ ಈಕೆ ಅದನ್ನು ಕೊಡುತ್ತ, "ನಿನ್ನಂಗೆ ನನಗೆ ಮಕ್ಕಳುಮರಿ ಇಲ್ಲ ಎಕ್ಕಾ, ಬಂಜೆಯಾದ ನಾನು ಈ ರೊಕ್ಕನ ಇಟ್ಕೊಂಡೇನು ಮಾಡ್ಲಿ! ಭೋಜ ನನ್ನ ಹೊಟ್ಟೆಬಟ್ಟೇನ ನೋಡಿಕೊಂತಿದ್ದಾನೆ, ಅವನಿಲ್ಲದಿದ್ದರೆ ಇನ್ನೊಬ್ಬರ ಜೊತೆ ಮಲಗಿ ಜೀವನ ಸಾಗಿಸ್ತೀನಿ, ಆದರೆ ನಿನ್ನಂತ ಪತಿವ್ರತೆಯರು ಮಕ್ಕಳೊಂದಿಗರು ದುಡಿಮೆ ಇಲ್ಲದೆ ಈ ಪರಪಂಚದಾಗ ಬದುಕೋದು ತ್ರಾಸು, ನಿನ್ನ ಗಂಡ ನನಗ ಮಿಂಡ ಅಂಬುದನ್ನು ಮರೀ ಬ್ಯಾಡ, ನಿನ್ನ ಮಕ್ಕಳು ನನಗೂ ಮಕ್ಕಳಿದ್ದಂಗ ಎಕ್ಕಾ" ಎಂದು ಆಕೆಗೆ ಮಾತ್ರ ಕೇಳಿಸುವಂತೆ ಹೇಳುತ್ತಿರುವುದನ್ನು ಕೇಳಿದೊಡನೆ ನನ್ನ ಕಣ್ಣುಗಳಲ್ಲಿ ನೀರು ಕಾಣಿಸಿಕೊಂಡಿತು.

ಸೂಳೆಯ ಮಾತನ್ನು ಪತಿವ್ರತೆಯಲ್ಲದಿದ್ದರೂ ಗೃಹಿಣಿಯಾದ ತಾನು ಯಕಃಶ್ಚಿತ್ತೆಂದು ಭಾವಿಸುವುದೋ! ಗಂಭೀರವಾಗಿ ಪರಿಗಣಿಸುವುದೋ! ಭಾವನಾತ್ಮಕವಾಗಿ ಸ್ವೀಕರಿಸುವುದೋ! ಒಂದರಗಳಿಗೆ ಗಲಿಬಿಲಿಗೊಳ್ಳುತ್ತಲೇ ಆಕೆಯ ಉಸಿರಳತೆಯಲ್ಲಿ ನಿಂತು ಅಪಾದಮಸ್ತಕ ದಿಟ್ಟಿಸಿದಳು, ಅದೂ ತಾನು ತ್ರಿಪುರಾಂತಕನ ಸ್ತ್ರೀರೂಪವೋ ಎಂಬಂತೆ! ತನ್ನೆದುರಿಗೆ ಇರುವವಳು ತನ್ನ ಕಟ್ಟುಮಸ್ತಾದ ದೇಹವನ್ನು ತನ್ನ ಅಡ್ಡಾಡಿ ಗಂಡನಿಗೆ ಉಣಬಡಿಸಿದವಳು ಎಂಬುದೇನೋ ನಿಜ, ಈಕೆಯ ಶರೀರಕ್ಕೂ ಶಿವಯ್ಯನ ಈರಸೈವ ಟೀ ಕಾಪಿ ಕ್ಲಬ್ಬಿಗೂ ಹೋಲಿಕೆ ಇರುವುದು. ಯಾವುದೇ ಹಸಿದಿರುವ ಗಂಡಸು ತನ್ನ ಮನೆಯಲ್ಲಿ ಉಣ್ಣಲು ಆಹಾರ ಸಿಗದಿದ್ದಾಗ ಹೋಟಲ್ಲಿಗೆ ಹೋಗುವುದು ಎಷ್ಟು ಸಹಜವೋ ಅಷ್ಟೇ ಸಹಜ ಇದೂ ಸಹ ಎಂದು ಭಾವಿಸುತ್ತಲೇ ತನ್ನ ಮುಖದ ಬಿಗುವನ್ನು ಒಂದು ಕ್ಷಣ ಸಡಲಿಸಿದಳು. ತನ್ನ ಗಂಡನು ತನ್ನ ಹೊಟ್ಟೆಯಲ್ಲಿ ಮಕ್ಕಳನ್ನು ದಯಪಾಲಿಸಿರುವಂತೆ ಈಕೆಯ ಹೊಟ್ಟೆಯಲ್ಲಿ ಒಂದಾದರೂ ಮಗುವನ್ನು ದಯಪಾಲಿಸಿದ್ದರೆ ಈಕೆ ನೊಂದು ಈ ಮಾತನ್ನು ಆಡುತ್ತಿರಲಿಲ್ಲವೆಂದು ಭಾವಿಸಿ ಪುನಃ ತನ್ನ ಕಣ್ಣುಗಳನ್ನು ಒದ್ದೆ ಮಾಡಿಕೊಂಡಳು. ಆದರೂ ಸ್ವಾಭಿಮಾನ ತನ್ನ ಮುಖವನ್ನು ಪುನಃ ಬಿಗಿಗೊಳಿಸಿತು.

"ಲೇ ಕಾಳಿ, ಮಕ್ಕಳಿಲ್ಲದಿರುವುದು ನಿನ್ನ ಕರ್ಮ ಕಣೇ! ಆ ದೇವರು ಇವತ್ತಲ್ಲ ನಾಳೆ ನಿನ್ನ ಮನೆಯಲ್ಲೂ ತೊಟ್ಟಿಲು ಕಟ್ಯಾನು! ಚಿಂತೆ ಮಾಡಬೇಡಲೇ. ಅಗಾ ನನ್ನ ಮಕ್ಕಳನ್ನ

ನಿನ್ನ ಮಕ್ಕಳೆಂದು ತಿಳಕೊಂಡಿಯಲ್ಲ ಅಷ್ಟೇ ಸಾಕು, ನನಗ ನನ್ನ ಗಂಡ ಏನೂ ಕಡಿಮೆ ಮಾಡಿಲ್ಲಭೇ, ಮನರಾ ಆಸ್ತೀನ ಮಾಡಿಟ್ಟು ಬೋಧ ತಗೊಂಡು ತೋಪಿನ ಪಾಲು ಆಗ್ಯಾನ, ನಾನೂ ಗಂಡಸಿನಂಗ ದುಡಿತೀನಿ, ಕೈಗೆ ಬಂದಿರೋ ನನ್ನ ಮಕ್ಕಳೂ ದುಡಿತಾವೆ, ಆ ನಿನ್ನ ಮಿಂಡನ ಪಾಪದ ರೊಕ್ಕ ನನಗ ಬ್ಯಾಡ, ಈ ರೊಕ್ಕನ ತಗೊಂಡು ನೀನು ಸುಖವಾಗಿರು" ಎಂದು ಏರಿಳಿತಕ್ಕೆ ಅವಕಾಶ ಕೊಡದೆ ಹೇಳಿದ್ದು ಕೇಳಿ ನನಗೆ ಸೈ ಅನ್ನಿಸಿತು.

ಆ ಭಾವನಾತ್ಮಕ ಘಟನೆಗೆ ಕಳಸವಿಟ್ಟಂತೆ ಕಾಳಿ ತನ್ನ ಸೆರಗಿನಿಂದ ಕಣ್ಣಗಳನ್ನು ಒರೆಸಿಕೊಳ್ಳುತ್ತ "ಎಕ್ಕಾ ಅವನ ಪಾಪದ ರೊಕ್ಕ ನಿನಗೂ ಬ್ಯಾಡವೆಂದ ಮ್ಯಾಲ ನನಗೂ ಬ್ಯಾಡ, ಇದನ ಬಿಕ್ಷುಕರಿಗಾದರೂ ಕೊಟ್ಟುಕೋ, ಸ್ರೀಸೈಲಮಲ್ಲಿಕಾರ್ಜುನನ ಪಾದದಲ್ಲಾದರೂ ಹಾಕಿಕೋ, ಹೇಮರೆಡ್ಡಿ ಮಲಮ್ಮನ ಪಾರುಟು ಮಾಡುತ್ತಿರೋ ಪದುಮಾವತೆಮ್ಮಗಾದರೂ ಕೊಟ್ಟುಕೋ ತಾಯಿ, ಏನಾದರೂ ಮಾಡಿಕೋ, ನಾನೊಕ್ಕೀನಿ ಎಕ್ಕಾ" ಎನ್ನುತ್ತ ಬಿರುಗಾಳಿ ಮುಖಿವಾಡ ಕಳಚಿ ತಂಗಾಳಿ ಮುಖಿವಾಡ ಧರಿಸಿ ಅಲ್ಲಿಂದ ಹೊರಟು ಮರೆಯಾದಳು. ತಂದೆ ಮಹರ್ಷಿ ವಿಶ್ವಾಮಿತ್ರನಿಂದಲೂ ತಾಯಿ ಮೇನಕೆಯಿಂದಲೂ ಪರಿತ್ಯಕ್ತಗೊಂಡ ಎಳೆ ಕೂಸು ಶಕುಂತಲೆಯಂತೆ ಆ ಹಣವಿದ್ದ ಚೀಲ ಆ ಮನೆಯಂಗಳದಲ್ಲಿ ಅನಾಥವಾಗಿ ಬಿದ್ದಿತ್ತು, ಅದನ್ನು ಯಾರು ತೆಗೆದುಕೊಂಡರೋ! ಯಾರು ತೆಗೆದುಕೊಳ್ಳಲಿಲ್ಲವೋ! ಆದರೆ ಅವರಿಬ್ಬರ ಸಂಭಾಷಣೆಯನ್ನು ಅದುವರೆಗೆ ಕುತೂಹಲದಿಂದ ಕೇಳಿಸಿಕೊಳ್ಳುತ್ತ ನಿಂತಿದ್ದ ಬ್ಯಾಗೇರ ಚಂದ್ರ, ಕುರುಕುಂದಿ ನಾಗ, ಮೂಲಿಮನಿ ರತ್ನಮ್ಮ ನಿಟ್ಟುಸಿರುಬಿಟ್ಟರು, ಅಷ್ಟರಲ್ಲಿ ಬಸನಗೌಡರ ಹಸಿದಿದ್ದ ನಾಯಿ ತಿಂಡಿ ಪೊಟ್ಟಣ ಅದಿರಬಹುದೆಂದು ಅನ್ಯಥಾ ಭಾವಿಸಿ ಮೂಸುವುದಕ್ಕೂ, ಸಿಗರೇಟಿನ ಪರಿಮಳ ಅಲೆಅಲೆಯಾಗಿ ಬಂದು ನಾಸಿಕಾಗ್ರವನ್ನು ತಲುಪುವುದಕ್ಕೂ, ಆಘ್ರಾಣಿಸುವಷ್ಟರಲ್ಲಿ ಅವುಗಳನ್ನು ಸೇದುತ್ತಿದ್ದ ಇಬ್ಬರು ವ್ಯಕ್ತಿಗಳು ಬೀದಿಯ ತುದಿಯಲ್ಲಿ ಕಾಣಿಸಿಕೊಳ್ಳುವುದಕ್ಕೂ, ದಿಟ್ಟಿಸಿ ನೋಡಿದೊಡನೆ ಅವರು ನಿಸ್ಸಂದೇಹವಾಗಿ ಪಂಪಯ್ಯಸ್ವಾಮಿ ರಾಘಪ್ಪಸ್ವಾಮಿ ಎಂಬ ಹೆಸರಿನವರಾಗುವುದಕ್ಕೂ ಸಂಗಡ ಬೀದಿ ಸರಿ ಹೋಯಿತು. ಅವರು ಹೊಲೆಯರೋಣಿಯಲ್ಲಿನ ಶ್ರೀಶೈಲಮಲ್ಲಿಕಾರ್ಜುನನ ಮೂಲಸ್ಥಳವನ್ನು ಪರಾಮರ್ಶಿಸುವವ ಸಲುವಾಗಿ ಹೊರಟಿರಬಹುದೆಂದು ಭಾವಿಸಿದೆ, ಆದರೆ ಅವರು ತಮ್ಮ ದರ್ಶನ ಮಾತ್ರದಿಂದ ಲಚುಮವ್ವನನ್ನೂ ಆಕೆಯ ಕರುಳಕುಡಿಗಳನ್ನು ಮನೆಯೊಳಗೆ ಕಳಿಸಿದವರೆ ನನ್ನ ಮನೆಯನ್ನು ಪ್ರವೇಶಿಸಿದರು.

++++

"ಹಂಗೇನಾದರೂ ಮಾಡಿದಿರೆಂದರೆ ಗೌಡರು ಮನಸ್ಸಿಗೆ ನೋವು ಮಾಡಿಕೊಳ್ಳುವರು ಮೇಸ್ಟ್ರ! ನಡೆಯಲಿರುವ ಫಂಕ್ಷನ್ನು ನಮ್ಮ ಧಣಿಯ ಮರ್ಯಾದೆ ಪ್ರಶ್ನೆ, ನಮ್ಮ ಊರಿನ ಗೌರವದ ಪ್ರಶ್ನೆ! ಹೇಳುವವರೂ ನಮ್ಮ ಗೌಡರೆ, ಕೇಳುವವರೂ ನಮ್ಮ ಗೌಡರೆ! ಎಲ್ಲಾ ಮಗಿದ ಬಳಿಕ ಎರಡು ದಿವಸ ಯಾಕೆ ಒಂದು ವಾರ ಊರಿಗೆ ಹೋಗುವಂತಿರಿ, ಸ್ವಾಗತ ಭಾಷಣ ನಿಮ್ಮದೇ ಎನ್ನುವುದನ್ನು ಮರೆಯಬೇಡಿ! ಹ್ಹಾಂ ಅಂದ ಹಾಗೆ ಗೌಡರು ಮಾಡಬೇಕಿರುವ ಭಾಷಣವನ್ನು ಬರೆದು ಮುಗಿಸಿರುವಿರೋ ಇಲ್ಲವೋ!" ಎಂದು ಹೇಳಿದೊಡನೆಯೇ ರಾಘಪ್ಪಸ್ವಾಮಿ ತನ್ನ ಎಡಗೈಯನ್ನು ಅಚ್ಚಬಳಿ ಬಣ್ಣದ ಅಂಗಿಯ ಬಲಭಾಗದ ಜೇಬಿನೊಳಗೆ ತೂರಿಸಿದ. ಬೆದಕದೆಯೆ ಸಲೀಸಾಗಿ ಎರಡಂಗಲ ಉದ್ದದ ಬೆಳ್ಳಿಯ ಡಬ್ಬಿಯನ್ನು ಮೆಲ್ಲಗೆ

ತೆಗೆದು ಕಾಣುವಂತೆ ಪ್ರದರ್ಶಿಸಿದ, ಬಳಿಕ ಬಲಗೈಯ ಎರಡು ಬೆರಳುಗಳಿಂದ ಚಿಟಗಿಯಷ್ಟು ತೆಗೆದು ತನ್ನ ದೊಣ್ಣೆಗಾತ್ರದ ವಿಶಾಲ ಹೊಳ್ಳೆಗಳಿಗೆ ನುರಿತ ಯೋಗಪಟುವಿನಂತೆ ಏರಿಸಿದ, ಒಂದಕ್ಕಿಂತ ಹೆಚ್ಚು ಸೀನುಗಳನ್ನು ಹೊರ ಹಾಕಿದ, ಅದೂ ಅಕ್ಕಪಕ್ಕದ ಮನೆಗಳಿಗೆ ಕೇಳಿಸುವಂತೆ. ಬಳಿಕ ಗಾಂಭೀರ್ಯತೆಯಿಂದ ನನ್ನ ಕಡೆ ನೋಡಿ ಪುನಃ ಮುಖ ತಗ್ಗಿಸಿದಾದ ಬಳಿಕ ಡಬ್ಬಿಯನ್ನು ಜೇಬಿಗೆ ಸೇರಿಸಿದ. ಆತನ ವರ್ತನೆ ನನಗಲ್ಲದಿದ್ದರೂ ತನ್ನ ಸಹವರ್ತಿಗೆ ಅಹಿತಕರವೆನ್ನಿಸಿತು.

ಅವರಿಬ್ಬರು ಇಷ್ಟು ಬೇಗನೆ ವಕ್ಕರಿಸಿ ಒತ್ತಾಯಿಸಬಹುದೆಂದು ಊಹಿಸಿರಲಿಲ್ಲ, ಎರಡು ದಿವಸಗಳ ಮಟ್ಟಿಗೆ ಊರಿಗೆ ಹೋಗಿ ಮರಳಿದ ಬಳಿಕ ಬರೆದು ಮುಗಿಸುವುದಾಗಿ ಹೇಳಿದ್ದೇ ಪರಪಾಟಾಯಿತು. ಏನೋ ಒಂದು ಹೇಳಿ ಅವರನ್ನು ಹೊರಗೆ ಕಳಿಸುವುದು ಕಷ್ಟಸಾಧ್ಯವೆಂದು ಅರ್ಥ ಮಾಡಿಕೊಂಡೆ. ಕಾದಂಬರಿಯ ಹಸ್ತಪ್ರತಿಯನ್ನು ತೊಡೆಯ ಮೇಲೆ ಎಳೆದುಕೊಂಡು ಪುಟಗಳನ್ನು ಮುಗಿಚಿದೆ, ಏನೆಲ್ಲವನ್ನೂ ಲೀಲಾಜಾಲವಾಗಿ ಬರೆಯಬಲ್ಲವನಾದ ನನಗೆ ಗೌಡರ ಭಾಷಣ ಬರೆಯುವುದು ನೀರು ಕುಡಿದಷ್ಟು ಸುಲಭ ಎಂಬುದನ್ನು ಮನವರಿಕೆ ಮಾಡಿಕೊಡುವ ಉದ್ದೇಶ ನನ್ನದಾಗಿತ್ತು. ಆದರೆ ಅದೂ ಮಾನಸಿಕವಾಗಿ ಸುಲಭದ ಕೆಲಸವಾಗಿರಲಿಲ್ಲ.

"ಈ ಕಾದಂಬರಿಯನ್ನು ವಾರದೊಳಗೆ ಬರೆದು ಮುಗಿಸಿ ಬೆಂಗಳೂರಿಗೆ ಕಳಿಸಬೇಕಿದೆ ಸ್ವಾಮಿ, ಫಂಕ್ಷನ್‌ಗಿಂತ ಎರಡು ದಿವಸ ಮೊದಲೇ ಬರೆದು ಕೊಟ್ಟರಾಯಿತಲ್ಲ! ಹೇಗೋ ಕಾರ್ಯಕ್ರಮ ಇನ್ನೂ ದೂರವಿದೆಯಲ್ಲವೆ!" ಎಂದೆ. ನನ್ನ ಮಾತನ್ನು ಕೇಳಿ ಅವರಿಬ್ಬರು ನಕ್ಕು ಬಳಿಕ ಮುಖಗಳನ್ನು ಬಿಗಿದರು. ಪಂಪಯ್ಯ ಹುಬ್ಬುಗಳನ್ನು ತುಸು ಮೇಲಕ್ಕೇರಿಸಿ ಜಂಘಾಬಲವನ್ನು ಆಯಾಚಿತವಾಗಿ ತನ್ನ ನಾಲಗೆಯಲ್ಲಿ ಸಂಚಯಿಸಿಕೊಂಡ, ವಿನಾಕಾರಣ ಮುಷ್ಟಿಗಳನ್ನು ಬಿಗಿಯಲಾರಂಭಿಸಿದ, ಕಣ್ಣುಗಳ ಮೇಲಿನ ಹುಬ್ಬುಗಳನ್ನು ಎಷ್ಟು ಸಾಧ್ಯವೋ ಅಷ್ಟು ಮೇಲಕ್ಕೇರಿಸಿ ನಖಶಿಖಾಂತ ಕಂಪನಕ್ಕೀಡಾದ, ರಾಘಪ್ಪಸ್ವಾಮಿ ಸ್ಪರ್ಶದ ಮೂಲಕ ತಡಯಲೆತ್ನಿಸಿದರೂ.. "ನಮ್ಮ ಗೌಡರಿಗಿಂತ ನಿಮಗೆ ನಿಮ್ಮ ಕಾದಂಬರೀನೆ ಹೆಚ್ಚಾಯಿತೇನ್ರಿ! ನಮ್ಮ ವಾಗಿಲಿಗಿಂತ ನಿಮಗೆ ನಿಮ್ಮ ಬೆಂಗಳೂರೇ ಹೆಚ್ಚಾಯಿತೇನ್ರಿ! ಪಾಪ ನಮ್ಮ ಪದ್ಮಾವತಮ್ಮಗೆ ಆದ ಮೋಸನ ನೆನಿಸಿಕೊಂಡರೆ ಮೈ ಉರೀತದೆ ಮೇಸ್ಟ್ರೆ! ಅದೆಲ್ಲ ಹಾಳಾಗಿ ಹೋಗಲಿ, ನಮ್ಮ ಧಣಿಯವರ ವಿಷಯ ನಿಮಗೆ ತಿಳಿಯದು. ಅದೆಲ್ಲ ಆಮೇಲೆ ಹೇಳುವೆ, ಈಗ ಬಿಟ್ಟುದಬಿಟ್ಟು ಭಾಷಣ ಬರೆದು ಕೊಡಿರಿ ಅಷ್ಟೆ!" ಎಂದು ಆವೇಶದಿಂದ ಹೇಳುತ್ತಲೇ ನಖಶಿಖಾಂತ ಕಂಪಿಸಿದ. ಇದನ್ನೆಲ್ಲ ಏರುದನಿಯಲ್ಲಿ ಹೇಳುವ ಅಗತ್ಯವಿರಲಿಲ್ಲ. ನಮಗೆ ವಿಚಿತ್ರವೆನ್ನಿಸಿತು. ಎಲ್ಲರಂತೆ ನನಗೆ ತಿಳಿದಿರುವಂತೆ ಆತ ತನ್ನ ಒಂದು ಕೈಯನ್ನು ಸದಾ ತನ್ನ ಎದೆಯ ಎಡಭಾಗದ ಮೇಲಿರಿಸಿಕೊಂಡಿರುತ್ತಿದ್ದ, ಮಾತು ಮಾತಿಗೆ ಉದ್ವಿಗ್ನಗೊಳ್ಳುತ್ತಿದ್ದ, ದೋತರದ ತುದಿಯಿಂದ ಚಳಿಗಾಲದಲ್ಲೂ ಒಸರುತ್ತಿದ್ದ ಬೆವರನ್ನು ಒರೆಸಿಕೊಳ್ಳುತ್ತಿದ್ದ, ತನ್ನ ಉದ್ದೇಶ ಸಾರ್ವಜನಿಕರ ಅನುಕಂಪವನ್ನು ಸೂರೆಗೊಳ್ಳುವುದಾಗಿರಲಿಲ್ಲ. ನಿರೀಕ್ಷೆಯಂತೆ ಆ ದಿವಸವೂ ಅದೇ ರೀತಿ ವರ್ತಿಸಿದ.

ಆತನನ್ನು ಬಾಧಿಸುತ್ತಿದ್ದ ರಕ್ತದೊತ್ತಡವನ್ನೂ, ಕೆಲವು ತಿಂಗಳುಗಳ ಹಿಂದೆ ಹೀಗೆ ಬಂದು ಹಾಗೆ ಹೋಗಿದ್ದ ಲಘು ಪಾರ್ಶ್ವವಾಯುವನ್ನೂ ನೆನಪಿಸಿಕೊಳ್ಳುತ್ತಲೇ ಎದ್ದು ಒಳಗಡೆ ಹೋಗಿ ನೀರಿದ್ದ ಗ್ಲಾಸನ್ನು ತಂದು ಆತನೆದುರಿಗೆ ಇರಿಸಿದೆ. ಯಾವ ಕಾರಣಕ್ಕೂ ಭಾವೋದ್ವೇಗಕ್ಕೆ ಒಳಗಾಗಬಾರದೆಂದು ಹುಬ್ಬಳ್ಳಿಯ ವೈದ್ಯರು ನೀಡಿದ್ದ ಸಲಹೆಯನ್ನು ಸ್ಮರಣೆಗೆ ತಂದುಕೊಳ್ಳುತ್ತ

ನೀರು ಕುಡಿದು ಮುಗಿಸಿದ, ನಮ್ಮೆಲ್ಲರ ಕಡೆ ತಪ್ಪಿತಸ್ಥ ಭಾವನೆಯಿಂದ ನೋಡಿದ. ಹಾಗೆಯೇ ತನ್ನ ದೇಹದ ಎಡಪಾರ್ಶ್ವ ನಿಷ್ಕ್ರಿಯೆಗೊಳ್ಳುವ ಸನ್ನಾಹದಲ್ಲಿರುವುದೋ ಇಲ್ಲವೋ ಎಂದು ಬಲಗೈಯಿಂದ ಸ್ಪರ್ಶಿಸಿ ನೋಡಿಕೊಂಡಾದ ಬಳಿಕ ಶ್ರೀಶೈಲಮಲ್ಲಿಕಾರ್ಜುನನೇ ಎಂದು ಬಹಿರಂಗವಾಗಿಯೇ ನಾಮಸ್ಮರಣೆ ಮಾಡಿದ. ರೋಗದಿಂದಾಗಿಯೇ ತನ್ನ ನಾಲಗೆ ಆಗಾಗ್ಗೆ ತನ್ನ ನಿಯಂತ್ರಣ ಕಳೆದುಕೊಳ್ಳುವುದೆಂದು ಹೇಳಲು ಪ್ರಯತ್ನಿಸುತ್ತಲೇ ತನ್ನ ಕಣ್ಣಗುಡ್ಡೆಗಳನ್ನು ಮೇಲೆ ಕೆಳಗೆ ಹರಿದಾಡಿಸಿದ, ತಲೆಯನ್ನು ಮೆಲ್ಲಗೆ ಬಾಗಿಸಿದ, ಕಿವಿಗಳನ್ನೇ ಸ್ಟೆಥಸ್ಕೋಪಾಗಿ ಪರಿವರ್ತಿಸಿ ಹೃದಯ ಬಡಿತದ ಸದ್ದನ್ನು ಅಳೆಯಲು ಪ್ರಯತ್ನಿಸಿದ, ಇಷ್ಟೆಲ್ಲಾ ಸಂಭವಿಸಲು ಒಂದೆರಡು ಘಳಿಗೆ ಹಿಡಿಯಿತು. ಅಂದರೆ ಮೂರುಸಲ ಉಸಿರಾಡುವಷ್ಟು ಸಮಯ. ಅಷ್ಟರೊಳಗೆ ಹೇಳುವುದಾಗಲೀ ಕೇಳುವುದಾಗಲೀ ಎಲ್ಲಿ ಸಾಧ್ಯ! ಸ್ವತಃ ನಾಡಿತಜ್ಞನೂ, ಕೈಯಳತೆಯ ಗಿಡಮೂಲಿಕೆಗಳಿಂದ ಔಷಧಿಗಳನ್ನು ತಯಾರಿಸುವಂಥ ನಿಷ್ಣಾತನೂ, ಅರೆಕಾಲಿಕ ಜ್ಯೋತಿಷಿಯೂ, ಸರ್ವಾಂತರ್ಯಾಮಿಯೂ ಆದ ರಾಘಪ್ಪಸ್ವಾಮಿಯ ಬಲಗೈ ತನಗರಿವಿಲ್ಲದ ರೀತಿಯಲ್ಲಿ ಪಂಪಯ್ಯನ ಬೆನ್ನ ಮೇಲೆ ಸಾಗಿ ಹರಿದಾಡಿತು, ಬೆನ್ನಹುರಿ ಇಕ್ಕೆಲದ ಕೆಲವು ನಾಡಿ ಕೇಂದ್ರಗಳನ್ನು ಸ್ಪರ್ಶಿಸಿ ತಪಾಸಣೆ ನಡೆಸಿತು, ಅದರ ವರದಿಯನ್ನು ಪರಿಗ್ರಹಿಸಿದಂತೆ ನಟಿಸಿದ ಸ್ವಾಮಿಯು ಅರಗಳಿಗೆ ಕಣ್ಣುಗಳನ್ನು ಮುಚ್ಚಿ ತೆರೆದು ರೋಗಿಯ ಕಡೆ ತೀಕ್ಷ್ಣನೋಟ ಬೀರಿ ಕಂಗಾಲುಗೊಳಿಸಿದನು. ಅದೇ ನೋಟದ ಮೂಲಕ ವಶೀಕರಣ ನಡೆಸಿದಂತೆ ಮುಖದಲ್ಲಿ ತೋರ್ಪಡಿಸಿದ ಭಾವನೆ ಭೀಭತ್ಸಕರವಾಗಿತ್ತು, ಸ್ಫುಟವಾಗಿ..

"ರೆಸ್ಟ್ ತೆಗೆದುಕೊಳ್ಳುವಂತೆ ಹೇಳಿದರೂ ನೀನು ಕೇಳುತ್ತಿಲ್ಲ ಪಂಪಯ್ಯ, ಇನ್ನೆರಡು ದಿವಸ ಹುಣ್ಣುಮೆ ಇದೆ, ಚಂದ್ರನ ಸ್ಥಾನಕ್ಕೆ ರಾಹು ಪ್ರವೇಶಿಸುತ್ತಿದ್ದಾನೆ, ನನ್ನ ಮಾತನ್ನು ಅಲಕ್ಷಿಸಿದಿ ಎಂದರೆ ನಿನ್ನನ್ನು ಕಾಪಾಡುವುದು ಮೃತ್ಯುಂಜಯನಿಗೂ ಸಾಧ್ಯವಿಲ್ಲ ತಿಳಿಯಿತೇನು!" ಎಂದು ನುಡಿದನು.

ಆತನ ಹಾವಭಾವ ನನ್ನನ್ನು ಬೆರಗುಗೊಳಿಸಿತಲ್ಲದೆ ವಾಗಿಲಿಯಲ್ಲಿನ ಅಲ್ಪಸಂಖ್ಯಾತ ಬ್ರಾಹ್ಮಣರಿಗೂ ಬಹುಸಂಖ್ಯಾತ ವೀರಶೈವ ಕೋಮಿನವರಿಗೂ ನಡುವೆ ನಡೆಯುತ್ತಿರುವ ಅಂತಃಕಲಹದ ಇನ್ನೊಂದು ಮುಖವನ್ನೂ ಪರಿಚಯಿಸಿತು. ಅದು ತಾರಕಕ್ಕೇರಿದ್ದು ಶ್ರೀಶೈಲಮಲ್ಲಿಕಾರ್ಜುನನನ್ನು ಹೊಲೆಯರ ಓಣಿಯಿಂದ ಬೇವಿನಮರದ ಕೆಳಗೆ ಪ್ರತಿಷ್ಠಾಪಿಸಿದಂದಿನಿಂದ. ಹೆಬ್ಬಟಂಗೌಡರ ಸಂಬಂಧಕ್ಕೆ ಸಂಬಂಧಿತ ತನ್ನ ಸ್ಥಾನಕ್ಕೆ ಈ ಪಂಪಯ್ಯನ ಚಿತಾವಣೆಯಿಂದಾಗಿ ಎಲ್ಲಿ ಚ್ಯುತಿ ಬರುವುದೋ ಎಂಬ ಆತಂಕಕ್ಕೀಡುಮಾಡಿದಂದಿನಿಂದ. ಭಲಾ ರಾಘಪ್ಪಸ್ವಾಮಿ ಎಂದು ಅಂತರಂಗದಲ್ಲಿ ಉದ್ಗರಿಸಿ ಕುತೂಹಲ ತಳೆದೆ.

ರಾಘಪ್ಪಸ್ವಾಮಿಯ ಮಾತಿನಿಂದ ಪಂಪಯ್ಯಸ್ವಾಮಿ ಜಂಘಾಬಲ ಉಡುಗಿತೆನ್ನುವುದಕ್ಕೆ ಸಾಕ್ಷಿಯಾಗಿ ತನ್ನ ಎಲುಬುಗಳೇ ಪ್ರಧಾನವಾಗಿದ್ದ ಮುಖ ವಿವರ್ಣಗೊಂಡಿತು, ಬಿಳಚಿಕೊಂಡಿತು. ರಕ್ತಹೀನತೆ ಕಾರಣದಿಂದಾಗಿ ಅದು ಕೇಸರಿ ವರ್ಣಕ್ಕೆ ತಿರುಗಲಿಲ್ಲ, ಆದರೆ ಇಚ್ಛಾಶಕ್ತಿಯ ಕೃಪೆ ಎಂದರೆ ಛಲದಂಕ ಮಲ್ಲನಂತೆ ಪುನಃ ಚೇತರಿಸಿಕೊಂಡ ಪಂಪಯ್ಯ "ಬೀಪಿ ಕೆರಳುವ ಕಾರಣದಿಂದಾಗಿ ಒಮ್ಮೊಮ್ಮೆ ಎಡವಟ್ಟಾಗುವುದು ಮಾಮೂಲು ಮಾವ, ನಿನ್ನ ಮಾತಿನಂತೆ ನನಗೂ ಮನೆಯಲ್ಲಿ ಬಿದ್ದಿರುವ ಆಸೆ, ಆದರೆ ಗೌಡರು ನನ್ನ ಮಾತನ್ನು ತೆಗೆದು ಹಾಕುವುದಿಲ್ಲ, ನನ್ನ ಮಾತನ್ನೂ ಅವರು ತೆಗೆದು ಹಾಕುವುದಿಲ್ಲ, ಆ ಪುಣ್ಯಾತ್ಮನ ವಿಶ್ವಾಸ ನಮ್ಮೆಲ್ಲರ ಆರೋಗ್ಯಕ್ಕಿಂತ ದೊಡ್ಡದು, ಅದಕ್ಕೆ ಅಲ್ವೇನು ನಾವೆಲ್ಲರೂ ಹಗಲಿರುಳೆನ್ನದೆ

ಕೆಲಸ ಮಾಡುತ್ತಿರುವುದು! ಇದೊಂದು ಕಾರ್ಯಕ್ರಮ ಸುಸೂತ್ರವಾಗಿ ನಡೆದು ಮುಗಿಯಲಿ, ಆಮೇಲೆ ನಿನ್ನ ಮಾತಿನಂತೆ ಮನೇಲಿ ಬಿದ್ದಿರುವೆನು ಆಯ್ತಾ!" ಎಂದು ತನ್ನ ಹಿತಶತ್ರುವಿನ ಆಲೋಚನೆಗಳನ್ನು ತಲೆಕೆಳಗಾಗಿಸಿದ. ಅಪರೂಪಕ್ಕೆ ಮಾವಾ ಎಂಬ ಸಂಬೋಧವಾಚಕದಿಂದ ತನ್ನ ಸ್ಪರ್ಧಿಯನ್ನು ತಬ್ಬಿಬ್ಬುಗೊಳಿಸಿದ. ಮುಖ್ಯವಾಗಿ ಅವರಿಬ್ಬರ ನಡುವೆ ವೈಮನಸ್ಸು ಮೂಡುವುದು ನನಗೂ ಇಷ್ಟವಿರಲಿಲ್ಲ.

"ಹೋಗಲಿಬಿಡಿ ಅದೆಲ್ಲ ಇದ್ದದ್ದೆ, ನೂರು ಕಾದಂಬರಿಗಳನ್ನ ಬರೆಯುವುದು ಒಂದೆ, ಗೌಡರ ಭಾಷಣ ಬರೆಯುವುದೂ ಒಂದೆ, ಮೂರು ದಿವಸ ಕಾಲಾವಕಾಶ ಕೊಡಿ" ಎಂದು ಹೇಳಿದೆ. ಅವರಿಬ್ಬರು ಪರಸ್ಪರ ಮುಖಗಳನ್ನು ನೋಡಿಕೊಂಡರು. ಸಾಂಕೇತಿಕ ಭಾಷೆಯಲ್ಲಿ ಗುಸಗುಸು ಮಾತಾಡಿಕೊಂಡರು. ನನ್ನ ಕಡೆಗೊಮ್ಮೆ, ನನ್ನ ಅಪೂರ್ಣ ಕಾದಂಬರಿಯ ಹಸ್ತಪ್ರತಿ ಕಡೆಗೊಮ್ಮೆ ತೀಕ್ಷ್ಣ ನೋಟ ಬೀರಿದರು. ತಮ್ಮ ಅದೃಷ್ಟಕ್ಕೋ, ತಮ್ಮ ಅನ್ನದಾತರ ದುರಾದೃಷ್ಟಕ್ಕೋ ಕಾದಂಬರಿಯ ವಸ್ತು ವಾಗಿಲಿಯ ವಿದ್ಯಾಮಾನಗಳಿಗೆ ಸಂಬಂಧಿಸಿದ್ದಾಗಿದ್ದಲ್ಲಿ ಎಂದು ಸಂದೇಹ ತಳೆದಂತೆ ನಟಿಸಿದರು. ಕಾದಂಬರಿ ಅಂದರೇನು ಎನ್ನುವುದು ತಮಗೆ ತಿಳಿದಿದ್ದರೆ ತಾನೆ ಹೇಳುವುದು ಕೇಳುವುದೆಲ್ಲ!

ಪಂಪಯ್ಯ ಏನನ್ನೋ ಹೇಳುವ ಸಲುವಾಗಿ ಯೋಚಿಸುತ್ತಿರಬಹುದೆಂದು ಊಹಿಸಿದ ರಾಘಪ್ಪಸ್ವಾಮಿ ತನ್ನ ಮುಖವನ್ನು ಮುಂದಕ್ಕೆ ಚಾಚಿದ ಕರವಸ್ತ್ರದ ಸಹಾಯದಿಂದ ತುಟಿ ಬಲ ಮಗ್ಗುಲು ಸ್ರವಿಸಿದ್ದ ಲಾಲಾರಸವನ್ನು ಒರೆಸಿಕೊಂಡಾದ ಬಳಿಕ "ಅಯ್ಯೋ ಗೌಡರ ವಿಷಯ ನಿಮಗೆ ತಿಳಿಯದು ಮೇಸ್ಟ್ರೇ, ಸಾರ್ವಜನಿಕರನ್ನು ಉದ್ದೇಶಿಸಿ ಅವರು ಇದೇ ಮೊದಲ ಸಲ ಭಾಷಣ ಮಾಡುತ್ತಿರುವುದು. ಅದೂ ಅಲ್ಲದೆ ಅವರು ಜನರ ಮುಖಗಳನ್ನು ಸಲೀಸಾಗಿ ಓದಬಲ್ಲರೇ ವಿನಹ ಅಕ್ಷರಗಳನ್ನು ಲೀಲಾಜಾಲವಾಗಿ ಓದಲಾರರು. ಇನ್ನು ಭಾಷಣ ಮಾಡುವುದೆಂದರೆ ಹುಡುಗಾಟವೇನು! ಅದನ್ನು ಅವರು ಬಾಯಿಪಾಠ ಮಾಡಲಿಕ್ಕೆ ಐದಾರು ದಿವಸ ಹಿಡಿಯುವುದು" ಎಂದು ಹೇಳಿದಾದನಂತರ ಕರವಸ್ತ್ರವನ್ನು ನೀಟಾಗಿ ಮಡಚಿ ಜೇಬಿನಲ್ಲಿಟ್ಟುಕೊಂಡು ಪುನಃ "ನೀವು ನಿಮ್ಮ ಎಲ್ಲ ಕೆಲಸಗಳನ್ನು ಬದಿಗಿರಿಸಿ ಭಾಷಣ ಬರೆದು ಮುಗಿಸಿ, ನಾಳೆ ಸಂಜೆ ಒಳಗೆ ನಾವಿಬ್ಬರೂ ಬರ್ತೀವಿ, ನಮ್ಮ ಎದುರು ಗಟ್ಟಿಯಾಗಿ ಓದುವಿರಂತೆ, ನಾವೆಲ್ಲರೂ ಕೂಡಿ ಚರ್ಚಿಸಿ ಒಂದು ತೀರ್ಮಾನಕ್ಕೆ ಬರೋಣವಂತೆ, ಅಕಸ್ಮಾತ್ತೇನಾದರು ನಮ್ಮ ತ್ರಯಂಬಕ ಬಂದು ಕೇಳಿದರೆ ಕೊಡಬೇಡಿ. ಈ ವಿಷಯ ನಮ್ಮ ಮುವ್ವರ ನಡುವೆ ಇರಬೇಕೇ ಹೊರತು ಅಪ್ಪಿತಪ್ಪಿ ಇನ್ನೊಬ್ಬರಿಗೆ ತಿಳಿಯಕೂಡದು. ಹ್ಞಾಂ ಅಂದ ಹಾಗೆ ನೀವೇ ಮೂರು ದಿವಸ ಬಳ್ಳಾರಿಗೆ ಹೋಗಿ ದೊಡ್ಡ ಗೌಡರಿಗೆ ಹೇಳಿಕೊಡಬೇಕು, ಕಂಠಪಾಠ ಮಾಡಿಸಬೇಕು, ಮಹಾಪ್ರಾಣ ಅಲ್ಪಪ್ರಾಣ ಒತ್ತಕ್ಷರ ಎಲ್ಲಾನೂ ನೀವೇ ಹೇಳಿ ಕೊಡಬೇಕು, ಫಂಕ್ಷನ್ ದಿವಸ ನೀವೂ ವೇದಿಕೆಯ ಒಂದು ಬದಿಯಲ್ಲಿದ್ದು ಗೌಡರ ಉಚ್ಚಾರಣೆಯನ್ನು ಸರಿಪಡಿಸುತ್ತಿರಬೇಕು" ಎಂದು ಹೇಳಿದಾದ ಬಳಿಕ ತನ್ನ ಸಹವಂದಿಗನ ಕಡೆ ತಿರುಗಿ ನೋಡಿದರು. ಪಂಪಯ್ಯ ಏನನ್ನೋ ನೆನಪಿಸಿಕೊಂಡವನಂತೆ "ದೊಡ್ಡಗೌಡರದ್ದೇನೋ ಸರಿ, ಚಿಕ್ಕಗೌಡರ ಭಾಷಣಾನೂ ಮೇಸ್ಟ್ರೇ ಬರೆಯಬೇಕು ತಾನೆ!" ಎಂದು ಹೇಳಿದನು.

ಅದಕ್ಕೆ ರಾಘಪ್ಪಸ್ವಾಮಿ "ಮರೆತಿದ್ದೆ ನೋಡಿ ಮೇಸ್ಟ್ರೆ, ಜೊತೆಜೊತೇಲಿ ಅವರ ಭಾಷಣಾನು ಬರೆದುಬಿಡಿ, ಅವರು ನಾಳೆ ಎಮ್ಮೆಲ್ಲೆ ಆಗಲಿರುವವರು, ಅವರು ಎಮ್ಮೆಲ್ಲೆ ಆದರೆ ನಿಮಗೂ ಅನುಕೂಲ ನಮಗೂ ಅನುಕೂಲ" ಎಂದು ಹೇಳಿದರು.

ಒಂದು ಭಾಷಣ ಬರೆಯುವುದೇ ಪಾಪದ ಕೆಲಸ, ಇನ್ನೊಂದು ಭಾಷಣ ಬರೆಯುವುದೆಂದರೆ! ಆದರೂ ತೇಲಲೀಯದ ಮುಳಗಲೀಯದ ಸ್ಥಿತಿಯನ್ನು ಒಂದು ಕ್ಷಣ ಅನುಭವಿಸಿದಾದ ಬಳಿಕ "ಅಯ್ಯೋ ಒಂದಕ್ಕೇ ಇಷ್ಟು ಒದ್ದಾಡುತ್ತಿರುವೆ, ಇನ್ನೊಂದು ಬರೆಯುವುದೆಂದರೆ! ಅದನ್ನು ಬೇರೆಯವರಿಂದ ಬರೆಸಿಕೊಳ್ಳಿ, ನನಗೆ ಪರುಸೊತ್ತಿಲ್ಲ ಸ್ವಾಮಿ" ಎಂದೆ. ಅದರಿಂದ ಅವರು ದಿಗ್ಭ್ರಮೆಗೊಂಡರಲ್ಲದೆ ಪರಸ್ಪರ ಮುಖಗಳನ್ನು ನೋಡಿಕೊಂಡರು, ರಾಘಪ್ಪ ಕೂತಲ್ಲಿಂದಲೇ ಮುಂದೆ ಸರಿದು "ಯಾರಾದರು ಕೇಳಿಸಿಕೊಂಡಾರು! ಮೆಲ್ಲಗೆ ಮಾತಾಡಿರಿ ಮೇಸ್ಟ್ರೇ" ಎಂದರೆ, ಪಂಪಯ್ಯ "ದೊಡ್ಡ ಗೌಡರ ಭಾಷಣದಲ್ಲಿ ನಾಲ್ಕು ವಾಕ್ಯ ಕಡಿಮೆ ಇದ್ದರೂ ಚಿಂತೆ ಇಲ್ಲ, ಆದರೆ ಚಿಕ್ಕಗೌಡರ ಭಾಷಣ ಮಾತ್ರ ಬೆಂಕಿಯಂತಿರಬೇಕು ನೋಡಿರಿ" ಎಂದನು.

ತೆಲುಗಿನ ಹಳೆಕಾವ್ಯಗಳನ್ನು ತಕ್ಕ ಮಟ್ಟಿಗೆ ಓದಿಕೊಂಡಿದ್ದ ರಾಘಪ್ಪಸ್ವಾಮಿ "ದೊಡ್ಡ ಗೌಡರ ಭಾಷಣದಲ್ಲಿ ಒಂದೆರಡು ಕಂದ ಪದ್ಯಗಳಿದ್ದರೆ ಒಳ್ಳೆಯದು, ಆದರೆ ಚಿಕ್ಕಗೌಡರ ಭಾಷಣದಲ್ಲಿ ಐದಾರಾದರೂ ಸೀಸ ಪದ್ಯಗಳಿರಲೇಬೇಕು ಮೇಸ್ಟ್ರೆ, ಪ್ರತಿಯೊಂದು ವಾಕ್ಯದಲ್ಲಿ ಒತ್ತಕ್ಷರಗಳಿದ್ದಷ್ಟು ರೌದ್ರರಸ ಉಕ್ಕಿ ಹರಿಯುವುದೆನ್ನುವುದನ್ನು ಮರೆಯದಿರಿ" ಎಂದು ಹೇಳುತ್ತಲೇ ತನ್ನ ಮುಖದ ಒಂದು ಮಗ್ಗುಲು ಅಲ್ಲಸಾನಿ ಪೆದ್ದನನ ಮನುಚರಿತ್ರೆಯನ್ನೂ, ಇನ್ನೊಂದು ಮಗ್ಗುಲು ಶ್ರೀಕೃಷ್ಣದೇವರಾಯನ ಆಮುಕ್ತಮಾಲ್ಯದ ಕಾವ್ಯವನ್ನೂ ಪ್ರದರ್ಶಿಸುವುದನ್ನು ಮರೆಯಲಿಲ್ಲ. ಹಾಗೆಯೆ ತನ್ನ ಬಲಪಕ್ಕದಲ್ಲಿದ್ದ ಸ್ಪರ್ಧಿಯ ಕಡೆ ಕೊಂಕು ನೋಟ ಬೀರಿದ.

ಪಂಪಯ್ಯ ಸೋಲುವ ಗೆಲ್ಲುವ ಸ್ಥಿತಿಯಲ್ಲಿರಲಿಲ್ಲ, ತಾನು ಕನಿಷ್ಠಪಕ್ಷ ಭಾಮಿನಿ ಷಟ್ಪದಿಯನ್ನಾದರೂ ನೆನಪಿಸಿಕೊಳ್ಳಲು ಪ್ರಯತ್ನಿಸಿ ವಿಫಲನಾದ, ಚಿಕ್ಕಂದಿನಲ್ಲಿ ಅದೂ ತಾನು ನಾಲ್ಕನೆ ಇಯತ್ತೆಯಲ್ಲಿ ಓದಿದ್ದ ಒಂದೇ ಒಂದು ಪದ್ಯದ ಅಲಂಕಾರವಾಗಲೀ ಛಂದಸ್ಸಾಗಲೀ ನೆನಪು ಮಾಡಿಕೊಳ್ಳಲು ಪ್ರಯತ್ನಿಸಿದ, ಆದರೆ ಅದು ಆ ಕೂಡಲೆ ಹೊಳೆಯಲಿಲ್ಲ. ಅಸಹಾಯಕತೆಯ ಜೊತೆ ಅವಮಾನ ಸಹ ಮಡುಗಟ್ಟಿತು ತನ್ನ ಮುಖದಲ್ಲಿ. ಹತ್ತಾರು ನಿರಿಗೆಗಳಿದ್ದ ಹಣೆಯ ಮೇಲೆ ಬೆವರಿನ ರೂಪದಲ್ಲಿದ್ದ ಅದನ್ನು ದೋತರದ ಚುಂಗಿನಿಂದ ಒರೆಸಿಕೊಂಡ. ಒಂದರ ಹಿಂದೊಂದರಂತೆ ಅವಮಾನಗಳು, ಜರ್ಜರಿಯುತ್ತಿರುವಂಥ ಅನುಭವ, ದುರ್ಘಾನ ತೆಗೆದುಕೊಂಡಂತೆ ಹೊರಡುವುದೋ! ಅಥವಾ ಕೂತಿದ್ದೇ ಸಹಸಿಕೊಳ್ಳುವುದೋ! ಹೊರಟರೊಂದು ಕಷ್ಟ, ಹೊರಡದಿದ್ದರೊಂದು ಕಷ್ಟ. ರಾಘಪ್ಪಸ್ವಾಮಿಯ ಬ್ರಾಹ್ಮಣ್ಯದ ಎದುರು ಶೈವ ಧರ್ಮದ ಅಧಃಪತನವನ್ನು ವೀರಶೈವನಾದ ತಾನು ಸಹಿಸಿಕೊಳ್ಳುವುದೆಂದರೆ! ಶ್ರೀಕೃಷ್ಣ ಶಿಶುಪಾಲನ ತಪ್ಪುಗಳನ್ನು ಉತ್ತೇಜಿಸಿದಂತೆ, ಅವು ಗರಿಷ್ಠಮಟ್ಟ ತಲುಪಿದೊಡನೆ ತಳಿಗೆಯಿಂದ ಶಿಕ್ಷಿಸಿದಂತೆ ಇನ್ನು ಮುಂದೆ ತಾನು ಈ ಬ್ರಾಹ್ಮಣನಿಂದ ತಪ್ಪುಗಳು ಸಂಭವಿಸುವಂತೆ ಜಾಗ್ರತೆ ವಹಿಸಬೇಕು, ಅವುಗಳನ್ನು ಮೃದು ಧೋರಣೆಯ ದೊಡ್ಡಗೌಡರಿಗಿಂತ ಮುಖ್ಯವಾಗಿ ಶೀಘ್ರ ಕೋಪಿಯೂ ದುರಾಹಂಕಾರಿಯೂ ಆದ ಚಿಕ್ಕಗೌಡರೆದುರು ಮಂಡಿಸಬೇಕು. ಜೀವನ ನಿರ್ವಹಣೆಗೆ ಆಧಾರವಾಗಿರುವ ಪೋಸ್ಟ್ ಮಾಸ್ಟರ್ ನೌಕರಿಯನ್ನು ಆತನಿಂದ ಕಿತ್ತುಕೊಂಡು ತನ್ನ ಅಂಗವಿಕಲ ಮಗನಿಗೆ ದಕ್ಕುವಂತೆ ಯೋಜನೆಯನ್ನು ರೂಪಿಸಬೇಕು! ಹೀಗೆ ಲೆಕ್ಕಹಾಕುತ್ತಲೇ ಅವಮಾನಗಳನ್ನು ನುಂಗಿಕೊಂಡ, ಮತ್ತು ಅವು ಅತೃಪ್ತ ಬಾವನೆಗಳ ಮೇಲೆ ಸವಾರಿ ಮಾಡದಂತೆ ಎಚ್ಚರವಹಿಸಿದ. ದುರಾದೃಷ್ಟಕರ ಸಂಗತಿ ಎಂದರೆ ತನ್ನ ದೇಹವೇ ತನ್ನ ವಿರುದ್ಧ ಸಂಚು ಹೂಡುತ್ತಿರುವುದು! ಉದಾಹರಣೆಗೆ ಬಾಯಿಯೊಳಗೆ ಕೆಲವು

ಹಲ್ಲುಗಳು ಅಕಾಲಿಕವಾಗಿ ನಷ್ಟ ಹೊಂದಿರುವುದರಿಂದಲೂ, ಉಳಿದಿರುವ ಪೈಕಿ ಹಲವು ಹಲ್ಲುಗಳು ದುರ್ಬಲಗೊಂಡು ಜೋತಾಡುತ್ತಿರುವುದರಿಂದಲೂ ಆಪತ್ಕಾಲೀನವಾಗಿ ತನ್ನಿಂದ ಮುಗುಳ್ನಗಲೂ ಸಾಧ್ಯವಾಗುತ್ತಿಲ್ಲವಲ್ಲಾ! ಅಯ್ಯೋ ದುರ್ವಿಧಿಯೇ!

ಇಷ್ಟೆಲ್ಲಾ ದೈಹಿಕ ತೊಂದರೆ ತಾಪತ್ರಯಗಳ ನಡುವೆಯೂ ಸ್ವಾಮಿದ್ವಯರಲ್ಲಿ ಪಂಪಯ್ಯ ನನ್ನೊಳಗಿನ ಸೃಜನಶೀಲ ಲೇಖಕನಿಗೆ ಇಷ್ಟವಾಗಲು ಕಾರಣ ಆತನ ಛಲ ಅದಮ್ಯ ಉತ್ಸಾಹ. ಆರನ್ನು ಮೂರಾಗಿಸುವ ಮೂರನ್ನು ಆರಾಗಿಸುವ ತನ್ನ ವ್ಯವಹಾರಿಕ ಜ್ಞಾನ! ಆ ಕ್ಷಣದಲ್ಲಿ ರಾಘಪ್ಪಸ್ವಾಮಿಯ ಷಡ್ಯಂತ್ರಗಳಿಂದಾಗಿ ಇನ್ನೇನು ತಮ್ಮ ಹಾಜರಿಗೆ ಕವಡೆ ಕಿಮ್ಮತ್ತಿಲ್ಲವೆನ್ನುವಷ್ಟರಲ್ಲಿ ಆತ ಮುಂದಕ್ಕೆ ಚಾಚಿ ಮಾತಿಗೆ ಅಡಚಣೆಯನ್ನು ಉಂಟುಮಾಡಲಿದ್ದ ಮುಂದಿನ ಬಾಚಿ ಹಲ್ಲನ್ನು ಕಪ್ಪು ಮಚ್ಚೆಯುಳ್ಳ ನಾಲಗೆಯ ಸಹಾಯದಿಂದ ನಿಯಂತ್ರಿಸಿದ್ದೂ ಅಲ್ಲದೆ ಮುಗುಳ್ನಕ್ಕದ್ದು. ತನ್ನ ಅಜಾತ ಪ್ರತಿಸ್ಪರ್ಧಿಯ ವ್ಯವಹಾರಿಕವೂ, ಸಾಹಿತ್ಯಿಕವೂ ಆದ ಜ್ಞಾನವನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದು! ಬೆರಗಾಗಿ ಆತ ಈತನ ಕಡೆ ನೋಡಿದ್ದು!

ಹಾಗೆ ನೋಡಿದರೆ ಬದುಕುವ ಅನಿವಾರ್ಯತೆ ಅವರಿಬ್ಬರಲ್ಲಿ ಒಂದೆ, ತಾವಿಬ್ಬರೂ ಪರಾವಲಂಭಿಗಳೆ! ತಾವಿಬ್ಬರೂ ಗೌಡರ ಫಲಾನುಭವಿಗಳೆ! ಅವರೊಂದೇ ಅಲ್ಲದೆ ಹೆಬ್ಬಟಂ ಗೌಡರೂ ಮತ್ತವರ ಮಗನೂ! ಮನುಷ್ಯ ಸಹಜ ವರ್ತನೆಗಳ ಬಗ್ಗೆ ನಾನು ನನ್ನದೇ ಆದ ರೀತಿಯಲ್ಲಿ ಅಧ್ಯಯನ ನಡೆಸಿದ್ದೆ, ಅವುಗಳನ್ನು ಸೃಜನಶೀಲತೆಯ ಮೂಲ ಬಂಡವಾಳವನ್ನಾಗಿರಿಸಿಕೊಂಡಿದ್ದ ನನಗೆ ವಾಗಿಲಿಯ ಅವರಿವರೆಲ್ಲ ಅತ್ಯುತ್ತಮ ಮಾದರಿಗಳೆ! ಏನೋ ಹೊಳೆದ ಪರಿಣಾಮವಾಗಿ ನನ್ನ ಮುಖದಲ್ಲೂ ನಗೆ ಕಾಣಿಸಿಕೊಳ್ಳದೆ ಇರಲಿಲ್ಲ. ಇನ್ನು ಅವರಿಬ್ಬರವು ಒಂದೇ ಅಲ್ಲದೆ ಉತ್ಸವ ಮೂರ್ತಿಗಳೆನಿಪ ಇನ್ನುಳಿದ ಅವರಿಬ್ಬರ ದೌರ್ಬಲ್ಯಗಳನ್ನು ಪತ್ತೆ ಹಚ್ಚುವುದಕ್ಕೆ ಇದೊಂದು ಸುವರ್ಣಾವಕಾಶವೆಂದು ಯೋಚಿಸಿದೆ. ಕೇಳಿದೊಡನೆ ಅವರಿಬ್ಬರೂ ಪೈಪೋಟಿಯನ್ನು ಅನುಭವಿಸುತ್ತ ಹೇಳಲಾರಂಭಿಸಿದರು, ಒಬ್ಬ ದೊಡ್ಡ ಗೌಡರನ್ನು ಶರಶಯ್ಯೆಯನ್ನಾಶ್ರಯಿಸಿದ ಭೀಷ್ಮನಿಗೋ, ತನ್ನ ಹೆಚ್ಚುವರಿ ಪಂಚಮ ಕಣ್ಣಿನಿಂದ ಪ್ರಪಂಚದ ಆಗುಹೋಗುಗಳನ್ನು ಗ್ರಹಿಸುವ ನಿಯಂತ್ರಿಸುವ ಅಂಧ ಧೃತರಾಷ್ಟ್ರನಿಗೋ ಹೋಲಿಸಿದರೆ, ಇನ್ನೊಬ್ಬ ಅವರ ಸುಪುತ್ರನನ್ನು ಅರ್ಜುನನಿಗೋ ಧುರ್ಯೋಧನನಿಗೋ ಕರ್ಣನಿಗೋ ಹೋಲಿಸಿ ವರ್ಣಿಸಲಾರಂಭಿಸಿದರು.

ಕೊನೆಗೆ ಅವರಿಬ್ಬರು ಒಕ್ಕೊರಲನಿಂದ "ಕಥೆಗಾರರಾಗಿರುವ ನಿಮಗೆ ಹೇಳುವುದೇನಿದೆ ಕೇಳುವುದೇನಿದೆ ಮೇಸ್ಟ್ರೆ! ಯಾವ ಕಾರಣಕ್ಕೂ ಇದ್ದದ್ದು ಇದ್ದಂತೆ ಮಾತ್ರ ಬರೆಯಬೇಡಿ, ತಂದೆಯ ಭಾಷಣದಲ್ಲಿ ಮಗನಿರಬೇಕು, ಮಗನ ಭಾಷಣದಲ್ಲಿ ತಂದೆ ಇರಬೇಕು, ಅವರಿಬ್ಬರ ಭಾಷಣಗಳಲ್ಲಿ ಭವಿಷ್ಯದ ನೀಲ ನಕಾಶೆ ಇರಬೇಕು. ದೊಡ್ಡ ಗೌಡರನ್ನು ಹರಿಶ್ಚಂದ್ರನಿಗೋ ಕೊಡುಗೈ ದೊರೆ ಬಲಿ ಚಕ್ರವರ್ತಿಗೋ ಅಸಹಾಯಕ ಕರ್ಣನಿಗೋ ಹೋಲಿಸಿ ಬರೆಯಿರಿ. ಹಾಗೆಯೇ ಅವರ ಮಗ ಸೂರ್ಯಪ್ರತಾಪರೆಡ್ಡಿಯವರನ್ನು ಪರನಾರಿ ಸಹೋದರನೆಂದು ವರ್ಣಿಸುವುದನ್ನು ಮಾತ್ರ ಮರೆಯದಿರಿ. ಇಪ್ಪತ್ತೊಂದನೇ ತೀರ್ಥಂಕರ ವೃಷಭದೇವನ ಅಪರಾವತಾರವೆಂದು ಕರೆದರೂ ತಪ್ಪಿಲ್ಲ. ಹೊಗಳಲು ದುಡ್ಡು ಖರ್ಚು ಮಾಡಬೇಕಿಲ್ಲ, ರಂಡೆಮುಂಡೆ ಮದುವೆಯಲ್ಲಿ ಉಂಡವನೇ ಜಾಣ ಎಂಬ ಗಾದೆ ಮಾತಿದೆ ತಾನೆ! ಹ್ಹಾಂ ಇನ್ನೊಂದು ವಿಷಯ! ಇದು ನಿಮ್ಮ ನಮ್ಮಲ್ಲಿಯೇ ಇರಲಿ, ಬಹಿರಂಗಗೊಳ್ಳುವುದು ಬೇಡ. ನಿಮಗೂ ನಮ್ಮೆಲ್ಲರಿಗೂ ತಿಳಿದಿರುವಂತೆ ತಂದೆ ಮಕ್ಕಳಿಬ್ಬರ ನಾಲಗೆಗಳು ತುಸು ದಪ್ಪ,

ಅದು ಹೆಬ್ಬಟಂ ವಂಶವಾಹಿನಿಯ ನ್ಯೂನತೆ. ಮಹಾಪ್ರಾಣವನ್ನು ಅಲ್ಪಪ್ರಾಣವನ್ನಾಗಿಯೂ, ಅಲ್ಪಪ್ರಾಣವನ್ನು ಮಹಾಪ್ರಾಣವನ್ನಾಗಿಯೂ ಅವರು ಉಚ್ಚರಿಸುವುದು ಸಹಜ, ಒತ್ತಕ್ಷರಗಳಿರುವ ಶಬ್ದಗಳೆಂದರೆ ಅವರಿಗಾಗುವುದಿಲ್ಲ. ಈ ನ್ಯೂನತೆ ಇರದಿದ್ದಲ್ಲಿ ತಾವ್ಯಾವತ್ತೋ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿರುತ್ತಿದ್ದರು. ಇದರಿಂದಾಗಿಯೇ ಅವರು ಕೋಪದ ಕೈಗೆ ಬುದ್ಧಿ ಕೊಡುತ್ತಿರುವುದು! ಶತ್ರುಗಳನ್ನು ನಿಶ್ಯೇಷಗೊಳಿಸುವ ಸಲುವಾಗಿ ಸುಪಾರಿ ಕೊಲೆಗಾರರ ಆಶ್ರಯದಾತರೆನಿಸಿರುವುದು! ಜಮೀನ್ದಾರರೆಂದ ಮೇಲೆ ಕೊಲೆಸುಲಿಗೆ ಅನಿವಾರ್ಯ ಅಲ್ಲವೆ! ಅವುಗಳನ್ನಾದರೂ ಬಹಿರಂಗವಾಗಿ ಮಾಡಿದರೆ! ಅದೂ ಇಲ್ಲ. ಎಲ್ಲವೂ ಸೂಜಿಗೆ ಮುದ್ದು ಕೊಟ್ಟಂತೆ! ಇಂಥವನ್ನೆಲ್ಲ ರಾಜಾರೋಷವಾಗಿ ನಡೆಸಿದ್ದರಿಂದಾಗಿಯಲ್ಲವೆ ಔಕಿನ ರಾಮಕ್ರಿಷ್ಟಾರೆಡ್ಡಿ, ಕೊಲಿಮಿಗುಂಡ್ಲದ ಭೈರೆಡ್ಡಿ ರಾಜಶೇಖರರೆಡ್ಡಿ, ಅಳ್ಳಗಡ್ಡದ ಗಂಗುಲ ಪ್ರತಾಪರೆಡ್ಡಿ ಎಮ್ಮೆಲ್ಲೆಗಳಾಗಿದ್ದು, ಮಂತ್ರಿಗಳಾಗಿದ್ದು! ಪೂರ್ವಾಪರ ಬೆದಕಿದರೇನು ಪ್ರಯೋಜನ! ಒಟ್ಟಿನಲ್ಲಿ ಎಷ್ಟು ಸಾಧ್ಯವೋ ಅಷ್ಟು ಹೊಗಳಿ ಭಾಷಣಗಳನ್ನು ಸಜ್ಜುಗೊಳಿಸಿರಿ, ಭಾಷಣ ಆಲಿಸಿದವರೆಲ್ಲ ಬೆರಗಾಗಿ ಕೂತಲ್ಲಿಂದಲೇ ಸಾಸ್ಟಾಂಗ ಪ್ರಣಾಮ ಸಲ್ಲಿಸಬೇಕು. ಯಾಕೆಂದರೆ ಆ ದಿವಸದ ಫಂಕ್ಷನ್ನಿಗೆ ಬರುವವರೆಲ್ಲ ರಾಯಲಸೀಮೆಯ ಕುಖ್ಯಾತ ಫ್ಯಾಕ್ಷನಿಷ್ಟ್‌ಗಳೆ! ಪರಸ್ಪರ ಮುಗಿಸಲು ಸಂಚು ನಡೆಸುವಂಥವರೆ! ವಿಚಿತ್ರವೆಂದರೆ ಅವರೆಲ್ಲ ಪರಸ್ಪರ ಕರುಳ ಸಂಬಂಧಿಗಳೆ! ಫಂಕ್ಷನ್ ಮುಗಿದ ಬಳಿಕ ಯಾರು ಯಾರನ್ನು ಮುಗಿಸುವರೆಂಬುದು ನಿಗೂಢ! ಕಥೆ ಬರೆಯುವವರು ಒಳ್ಳೆಯವರಿರುತ್ತಾರೆ ಎನ್ನುವ ನಂಬಿಕೆಯಿಂದ ನಾವು ಇಷ್ಟೆಲ್ಲ ಹೇಳಿರುವುದು, ದಯವಿಟ್ಟು ಯಾರೆದುರು ಬಾಯಿ ಬಿಡಬೇಡಿ, ಹಾಗೆಯೇ ಭಾಷಣಗಳ ಮೂಲಕತೃ ಯಾರೆಂಬುದು ಗುಟ್ಟಾಗಿರುವುದು ಮುಖ್ಯ. ಊರು ಮಲಗಿದ ಬಳಿಕ ಬರೆದು ಮುಗಿಸಿದರೆ ಇನ್ನೂ ಒಳ್ಳೆಯದು. ಶೇಷಣ್ಣ, ಅಮೃತಾಂಜನ ಲಕ್ಷ್ಮೀರೆಡ್ಡಿ ಮೂಲಿಮನಿ ಗೌಡರು ವಗೈರೆಗಳಿಗಂತೂ ತಿಳಿಯುವುದು ಬೇಡವೇ ಬೇಡ. ಅವರೆಲ್ಲ ಒಳ್ಳೆಯವರೆನ್ನುವುದರಲ್ಲಿ ಎರಡನೇ ಮಾತಿಲ್ಲ, ಆದರೆ ಪ್ರಳಯಾಂತಕರು. ಗಾಂಜಾ ವ್ಯಸನಿಗಳು! ನಾಡಿದ್ದು ಬೆಳಿಗ್ಗೆ ಅಥವಾ ರಾತ್ರಿ ನಮ್ಮಿಬ್ಬರಲ್ಲಿ ಒಬ್ಬರು, ಅಥವಾ ಇಬ್ಬರೂ ಬರುವೆವು, ಅಚ್ಚೆ ನಾಡಿದ್ದು ಅಂದರೆ ರಥಸಪ್ತಮಿ ದಿವಸ ನಾವು ಮುವ್ವರೂ ಪ್ರತ್ಯೇಕವಾಗಿ ಬಳ್ಳಾರಿ ಸೇರಿಕೊಳ್ಳೋಣವಂತೆ" ಎಂದು ಹೇಳಿದಾದ ಬಳಿಕ! ಕೈಯೊಳಗೆ ಕೈ ಇರಿಸಿ ಕುಲುಕಿದ ಬಳಿಕ! ತಮ್ಮ ಸಂಭಾಷಣೆಯನ್ನು ಹೆಚ್ಚುವರಿ ಯಾರೊಬ್ಬರೂ ಆಲಿಸಿರಲಾರರು ಎಂದು ಖಚಿತಪಡಿಸಿಕೊಂಡ ಬಳಿಕ! ಪರಸ್ಪರ ಅಡಿಯಿಂದ ಮುಡಿವರೆಗೆ ನೋಡಿ ನಂಬಿಕೆಗೆ ದೋಖಾ ಇಲ್ಲವೆಂದು ನೆಮ್ಮದಿಯ ಉಸಿರುಬಿಡುತ್ತ ಅವರಿಬ್ಬರು ಅಲ್ಲಿಂದ ಒಳದಾರಿಗಳ ಮೂಲಕ!

++++

ಸ್ವಾಮಿದ್ವಯರೊಡನೆ ಬಳ್ಳಾರಿಗೆ ಹೊರಡುವ ಹಿಂದಿನ ದಿವಸ ಬೆಂಗಳೂರಿನಿಂದ ಚೌಗಲೆ ಮಾತಾಡಬಹುದೆಂದು ಊಹಿಸಿರಲಿಲ್ಲ, ತನ್ನ ಸಂಗಡ ಚಕ್ರವರ್ತಿ ಇದ್ದ ಧೈರ್ಯದಿಂದ ತಾನು ಮನಸ್ಸು ಬಿಚ್ಚಿ ಮಾತಾಡಿದ, ಕಳೆದ ಕೆಲವು ತಿಂಗಳಲ್ಲಿ ತಾನು ಮಾನಸಿಕವಾಗಿ ಅನುಭವಿಸಿದ ಚಿತ್ರಹಿಂಸೆಯನ್ನು ಕ್ರೀಡಾಸ್ಫೂರ್ತಿಯಿಂದ ವಿವರಿಸಿದ, ಭ್ರಷ್ಟ ರಾಜಕಾರಣಿಗಳ ಸಂಗಡ ಕೈ ಜೋಡಿಸದಿದ್ದಲ್ಲಿ, ಅವರ ಅನೈತಿಕವೂ ಕಾನೂನು ಬಾಹಿರವೂ ಆದ ಕೆಲಸ ಕಾರ್ಯಗಳನ್ನು ಸಮರ್ಥಿಸದಿದ್ದಲ್ಲಿ ಸೇಡು ಪ್ರತಿಕಾರಗಳು ಯಾವ ರೀತಿ ಪ್ರಜ್ವಲಿಸುವವೆಂಬುದಕ್ಕೆ ತಾನೇ

ಜ್ವಲಂತ ನಿದರ್ಶನವೆಂದು ಹೇಳುವಾಗ ಗದ್ಗದಿತನಾದ. ನನ್ನ ಸಾಂತ್ವನದ ಮಾತುಗಳು ದುರ್ಬಲವೆನಿಸಿದವು, ಆದರೂ ತಕ್ಕಮಟ್ಟಿಗೆ ಸಂತೈಸಿದೆ, ಹೇಮರೆಡ್ಡಿ ಮಲ್ಲಮ್ಮ ನಾಟಕ ಪ್ರದರ್ಶನದ ಶತದಿನೋತ್ಸವ ಸಮಾರಂಭದ ಬಗ್ಗೆಯೂ ಹೇಳದೆ ಇರಲಿಲ್ಲ, ಅಭಿಜಾತ ಕಲಾವಿದೆ ಪದ್ಮಾವತಿಯ ಮಲ್ಲಮ್ಮನ ಪಾತ್ರವನ್ನು ಮುಕ್ತಕಂಠದಿಂದ ಶ್ಲಾಘಿಸಿದ, ತಾನು ಆ ಸಮಾರಂಭದಲ್ಲಿ ಉದ್ದೇಶಿತ ಸನ್ಮಾನದ ಪರಿಕರಗಳೊಂದಿಗೆ ಹಾಜರಾಗುವುದಾಗಿಯೂ, ನಾಟಕದಲ್ಲಿ ತಾನೇ ಹೇಮರೆಡ್ಡಿಯ ಪಾತ್ರವನ್ನು ನಿರ್ವಹಿಸುವುದಾಗಿಯೂ ಪ್ರಾಂಜಲ ಮನಸ್ಸಿನಿಂದ ಕೇಳಿಕೊಂಡ. ಬರದಿರು ಎನ್ನಲಿಕ್ಕಾಗಲೀ, ಆ ಪಾತ್ರವನ್ನು ನೀನು ನಿರ್ವಹಿಸುವುದು ಥರವಲ್ಲ ಎಂದು ಹೇಳುವುದಕ್ಕಾಗಲೀ ನಾನ್ಯಾರು! ಆ ಮುಖ್ಯ ಪಾತ್ರ ನಿರ್ವಹಿಸಲಿರುವ ಕಲಾವಿದನ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಬೇರೆ, ಅದಕ್ಕೆ ಕಂಪನಿಯ ಮಾಲಕ ಜಲಂಧರ ಸಮ್ಮತಿಸುವುದು ಮುಖ್ಯ ತಾನೆ! ಆತನ ಮನಸ್ಸಿನಲ್ಲಿ ಏನಿರುವುದೋ ಬಲ್ಲವರ್‍ಯಾರು! ಅದಲ್ಲದೆ ಚೌಗಲೆ ಕುರಿತಂತೆ ಅವನ ಮನಸ್ಸಿನಲ್ಲಿ ಉಳಿದಿರಬಹುದಾದ ಬೇಸರವನ್ನು ತೊಡೆಯಲು ನನಗೆ ಸಾಧ್ಯವಾಗುವುದೋ ಇಲ್ಲವೋ! ಆದರೂ ಪ್ರಯತ್ನಿಸುವುದಾಗಿ ಭರವಸೆ ನೀಡಿದೆ. ಅಷ್ಟು ಮಾಡು ಗೆಳೆಯಾ ಪುಣ್ಯ ಬರುತ್ತದೆ ಎಂಬ ಅಂತಿಮ ವಾಕ್ಯದೊಡನೆ ಸಂಭಾಷಣೆಯನ್ನು ತಾನೆ ಮುಕ್ತಾಯಗೊಳಿಸಿದನೋ! ಅಥವಾ ತಾಂತ್ರಿಕ ತೊಂದರೆಗಳಿಂದಾಗಿ ಅದೇ ಮುಕ್ತಾಯವಾಯಿತೋ! ಮೈತುಂಬ ಕಿವಿಗಳನ್ನು ಧರಿಸಿ ಆಲಿಸುತ್ತಿದ್ದ ಕುತೂಹಲವಂದಿಗರು ಎಡಬಲಕ್ಕೆ ಇದ್ದ ಕಾರಣದಿಂದಾಗಿ ನಾನೂ ಸಂಭಾಷಣೆಯನ್ನು ಉದ್ದರಿಸುವ ಗೋಜಿಗೆ ಹೋಗಲಿಲ್ಲ.

ಸಮಾರಂಭಕ್ಕೆ ತನ್ನ ಗೆಳೆಯ ಆಗಮಿಸಿದಾಗ ಅಹಿತಕರ ಸಂಘಟನೆಗಳು ಸಂಭವಿಸಿದರೆ! ನಾಟಕದಲ್ಲಿ ಮುಖ್ಯ ಭೂಮಿಕೆ ನಿಭಾಯಿಸಲು ಆತನಿಗೆ ಜಲಂಧರ ಅನುಮತಿ ನೀಡದಿದ್ದರೆ! ಪದ್ಮಾವತಿಯ ಮನಸ್ಸಿನಲ್ಲಿ ಬೇಸರಕ್ಕೆ ಸಂಬಂಧಿಸಿದ ಕಲ್ಮಷಗಳ ಶೇಷ ಉಳಿದಿದ್ದರೆ! ಅಕಸ್ಮಾತ್ ಅವಕಾಶ ಲಭಿಸಿ ಹೇಮರೆಡ್ಡಿ ಪಾತ್ರಕ್ಕೆ ಸಂಬಂಧಿಸಿದ ಮಾತುಗಳು ಸಾಂದರ್ಭಿಕವಾಗಿ ಹೊಳೆಯದಿದ್ದರೆ! ಎಂಬ ಸಂದೇಹಗಳನ್ನು ಮನಸ್ಸಿನ ತುಂಬೆಲ್ಲ ಅಲಂಕರಿಸಿಕೊಂಡಿದ್ದ ಆ ಮುಸ್ಸಂಜೆ ಹೊತ್ತಲ್ಲಿ ಪುಣ್ಯಕ್ಕೆ ಜಲಂಧರ ಹೇಳಿಕಳಿಸಿದಂತೆ ಮನೆಗೆ ಬಂದ. ಪ್ರತಿಯೊಂದು ನಾಟಕ ಕೃತಿಯ ಮೂಲಗುರಿ ಕೆಟ್ಟವರನ್ನು ಒಳ್ಳೆಯವರನ್ನಾಗಿ ಪರಿವರ್ತಿಸುವುದು ತಾನೆ! ಕೂಲಂಕಷ ವಿವರಿಸಿದಾದ ಬಳಿಕ ಸಮ್ಮತಿಸಿದ, ಅದೂ ಪೂರ್ಣಪ್ರಮಾಣದಲ್ಲಿ ಅಲ್ಲ. ಸನ್ಮಾನಿಸಲೆಂದೇ ಅಷ್ಟು ದೂರದಿಂದ ಬರುವ ಅಗತ್ಯವೇನು! ಸನ್ಮಾನ ಸ್ವೀಕರಿಸಿದಲ್ಲಿ ವಾಗಿಲಿಯ ಅನ್ನದಾತರು ಅನ್ಯಥಾ ಭಾವಿಸಿದರೇನು ಗತಿ! ತನ್ನ ಸೂಕ್ಷ್ಮ ಮನಸ್ಸಿನ ತಂಗಿಯಾದ ಪದ್ಮಾವತಿ ಮನಸ್ಸಿನಲ್ಲಿ ಏನಿರುವುದೋ ಏನೋ! ಹೀಗೆ ಸಂದೇಹಗಳ ಸರಮಾಲೆ ವ್ಯಕ್ತಪಡಿಸಿದ. ಆಕೆಯನ್ನು ಒಪ್ಪಿಸುವ ಹೊಣೆಯನ್ನು ತಾನೂ, ಹೆಬ್ಬಟಂ ಗೌಡರ ಪರವಾನಿಗೆಯನ್ನು ಪಡೆಯುವ ಗುರುತರ ಜವಾಬ್ದಾರಿಯನ್ನು ನನ್ನ ಹೆಗಲಿಗೂ ವರ್ಗಾಯಿಸಿದ, ಅದೂ ಅಲ್ಲದೆ ನಾಟಕದ ಶತದಿನೋತ್ಸವ ಸಮಾರಂಭ ಕುರಿತಂತೆ ಅರೆ ಬೇಸರದಿಂದ ಮಾತನಾಡಿದ. ಕಾರಣ ನಾಟಕದ ಐತಿಹಾಸಿಕ ಪ್ರದರ್ಶನ ಬೇರೊಂದು ವೇದಿಕೆ ಮೇಲೆ ನಡೆಯಲಿರುವುದು ತನಗೆ ಸುತಾರಾಂ ಇಷ್ಟವಿರಲಿಲ್ಲ. ಅಲ್ಲದೆ ಕೆಲವು ದಿವಸಗಳಿಂದ ತನ್ನ ಕಂಪನಿಯ ಕೆಲ ಕಲಾವಿದರು ಅಸ್ವಸ್ಥರಾಗಿರುವರು ಬೇರೆ! ತನ್ನ ತಂಗಿ ಪದ್ಮಾವತಿ "ಬಣ್ಣದ ಬದುಕು ಸಾಕಾಗಿರುವುದು ಅಣ್ಣಾ, ಕೂಲಿನಾಲಿ ಮಾಡುವವರಿಗಾದರೂ ಕೊಟ್ಟು ಮದುವೆ ಮಾಡಿಬಿಡು" ಎಂದು ಕೇಳಿಕೊಳ್ಳುತ್ತಿರುವಳು ಬೇರೆ!

ವಾಗಿಲಿಯಿಂದ ಮರಳಿದೊಡನೆ ಆಕೆಗೊಂದು ಗಂಡು ಜೋಡಿಸುವ ಮದುವೆ ಮಾಡುವ ಹೊಣೆ ತನ್ನ ಹೆಗಲ ಮೇಲಿರುವುದು! ಎಲ್ಲವನ್ನೂ ತೋಡಿಕೊಂಡ.

ಜಲಂಧರ ತನ್ನ ತಂಗಿಯನ್ನು ಒಪ್ಪಿಸುವುದು ಮುಖ್ಯವೇ ಹೊರತು ನಾನು ಹೆಬ್ಬಟಂಗೌಡರನ್ನು ಒಪ್ಪಿಸುವುದು ಮುಖ್ಯ ಅಲ್ಲವೇ ಅಲ್ಲ, ಅದಕ್ಕೆ ಇರುವ ಕಾರಣಗಳೂ ಸುಸ್ಪಷ್ಟ, ಅವರ ಜುಟ್ಟು ಭಾಷಣಗಳ ರೂಪದಲ್ಲಿ ನನ್ನ ಕೈಯಲ್ಲಿರುವುದು, ಭಾಷಣಕ್ಕೆ ಅಣಿ ಮಾಡುವ ಹೊಣೆ ನನ್ನದಾಗಿರುವುದು, ಬಳ್ಳಾರಿಯಲ್ಲಿ ಹೇಗೋ ಎರಡು ಮೂರು ದಿವಸಗಳ ಕಾಲ ಇರುವೆನಲ್ಲವೆ! ಆಗ ಅವರನ್ನು ಅಭಿಪ್ರಾಯಕ್ಕೆ ಮಣಿಸಿದರಾಯಿತೆಂದು ಭಾವಿಸಿದೆ. ಆದರೆ ಈ ಸಂಗತಿಯ ವಾಸನೆ ಯಾವ ಕಾರಣಕ್ಕೂ ಸ್ವಾಮಿದ್ವಯರ ಕಿವಿಗಳಿಗೆ ಸೋಂಕದಂತೆ ಎಚ್ಚರವಹಿಸಬೇಕೆಂದೂ ನಿರ್ಧರಿಸಿದೆ. ಜಲಂಧರ ಹೋದ ಹತ್ತು ನಿಮಿಷಗಳ ಬಳಿಕ ಆ ಕಡೆಯಿಂದ ಆ ಸ್ವಾಮಿಯೂ, ಈ ಕಡೆಯಿಂದ ಈ ಸ್ವಾಮಿಯೂ ಬಂದು ಮನೆಯನ್ನು ಸೇರಿಕೊಂಡರು. ವಿಟಪುರುಷರನ್ನು ಹೋಲುತ್ತಿದ್ದ ಅವರು ಭಾಷಣಕ್ಕೆ ಸಂಬಂಧಿಸಿದ ಹಸ್ತಪ್ರತಿಯನ್ನು ಪರಿಶೀಲಿಸುವ ಸಲುವಾಗಿ ತಮ್ಮ ಕೈಯಲ್ಲಿ ಹಿಡಿದುಕೊಂಡಾಗ ಅದೇ ತಾನೆ ಸೂರ್ಯನು ಪಶ್ಚಿಮ ದಿಗಂತದಲ್ಲಿ ತನ್ನ ಅರ್ಧ ಭಾಗವನ್ನು ಇರುಕಿಸಿಕೊಂಡು ಮಳುಗುವ ಸನ್ನಾಹದಲ್ಲಿದ್ದ, ಕಿಟಿಕಿಯಿಂದ ಒಳ ನುಸುಳಿದ್ದ ಸುಂದರ ಬಿಸಿಲಕೋಲ ಬೆಳಕಲ್ಲಿ ತಮ್ಮ ಕಣ್ಣುಗಳಿಗೆ ಸಮೀಪವಿರಿಸಿಕೊಂಡೂ, ಕೆಲವೊಮ್ಮೆ ದೂರವಿರಿಸಿಕೊಂಡು ಓದಿ ಮುಗಿಸಿ ನೆಮ್ಮದಿಯ ಉಸಿರು ಚೆಲ್ಲಿದರು. ನನ್ನ ಕಡೆ ಅಭಿಮಾನದ ನೋಟದ ಮಹಾಪೂರ ಹರಿಸಿದರು. ಅದಕ್ಕೆ ಕಾರಣ ಇಲ್ಲದಿರಲಿಲ್ಲ. ಹೆಬ್ಬಟಂ ಗೌಡರನ್ನು ಅಗತ್ಯಕ್ಕಿಂತ ಹೆಚ್ಚೇ ವರ್ಣಿಸಿದ್ದೆ, ಪುಂಖಾನುಪುಂಖವಾಗಿ ಉಪಮೆಗಳನ್ನು ಸೃಷ್ಟಿಸಿದ್ದೆ, ಕಂದ ಸೀಸ ಚಂಪಕಮಾಲ ಉತ್ಪಲಮಾಲಗಳನ್ನು ಯತೇಚ್ಚವಾಗಿ ಅಳವಡಿಸಿದ್ದೆ, ಅಲ್ಲದೆ ಭಾಷೆಯನ್ನೂ ಸರಳಗೊಳಿಸಿದ್ದೆ, ಅದೂ ನನ್ನ ಮನಸ್ಸಾಕ್ಷಿಯನ್ನು ದಿಕ್ಕರಿಸಿ. ಮಿತ್ರ ಚೌಗಲೆಯ ಹಿತಾಸಕ್ತಿ ಕಾಪಾಡುವ ಅನಿವಾರ್ಯತೆಯಿಂದಾಗಿ.

ಓದಿದಾದ ನಂತರ ಭಾಷಣದ ಹಸ್ತಪ್ರತಿಯನ್ನು ತಮ್ಮ ಸಂಗಡ ಒಯ್ಯುವುದೋ ಅಥವಾ ಇಲ್ಲೇ ಬಿಟ್ಟು ಹೊರಡುವುದೋ ಎಂಬ ಜಿಜ್ಞಾಸೆ ತಲೆದೋರಿತು. ತಮ್ಮಿಬ್ಬರ ಮನೆಗಳ ಗೋಡೆಗಳು ದುರ್ಬಲ ಮಾತ್ರವಲ್ಲ, ಪರಂಪೂಕು ಸಹ, ಸಾರ್ವಜನಿಕರ ಮುಕ್ತ ಪ್ರವೇಶಕ್ಕೆ ಅಡಚಣೆಯಂತೂ ಖಂಡಿತವಿರಲಿಲ್ಲ, ಒಯ್ಯುವ ವಿಷಯದಲ್ಲಿ ತಮ್ಮಿಬ್ಬರ ನಡುವೆ ಭಿನ್ನಾಭಿಪ್ರಾಯ ತಲೆದೋರಿ ಅದು ಉಲ್ಬಣಿಸಿದಲ್ಲಿ! ಇಂಥ ಹಲವು ಕಾರಣಗಳಿಂದಾಗಿ ಅದನ್ನು ಪುನಃ ನನ್ನ ಕೈಗೆ ಇರಿಸುತ್ತ ಬೆಳಗಿನವರೆಗೆ ರಕ್ಷಿಸಿಕೊಳ್ಳಿ ಎಂದು ಸಲಹೆ ನೀಡುವುದನ್ನು ತಾವು ಮರೆಯಲಿಲ್ಲ. ಅವರು ಕದಲಿದ ತುಂಬ ಹೊತ್ತಿನವರೆಗೆ ವಾಗಿಲಿ ಕುರಿತಂತೆಯೂ ಅದು ಒಳಗೊಂಡಿರುವ ಜನಭಾಹುಳ್ಯ ಕುರಿತಂತೆಯೂ, ಅದರ ದೈನಂದಿನ ಕ್ರಿಯಾಕಲಾಪ ಕುರಿತಂತೆಯೂ ಯೋಚಿಸುತ್ತ ಕಾಲಕ್ಷೇಪ ನಡೆಸಿದ್ದೆ, ಹಾಗೆಯೇ ಲಚುಮವ್ವನ ತೋಪು ಕುರಿತಂತೆಯೂ! ನೆನಪಿಸಿಕೊಂಡೊಡನೆ ಅದು ದುತ್ತನೆ ದರ್ಶನ ಭಾಗ್ಯ ಕಲ್ಪಿಸಿತು, ತಾನು ಬೇರೆಯಲ್ಲ ಬಾಣನ ಕಾದಂಬರಿಯಲ್ಲಿ ಬರುವ ಮಹಾಶ್ವೇತೆಯ ತಪೋವನ, ಅಚ್ಛೋದ ಸರೋವರ ಬೇರೆಯಲ್ಲವೋ ಎಂದು ಸಾರಿ ಸಾರಿ ಹೇಳಿತು. ತನ್ನಲ್ಲಿಗೆ ಸುಳಿಯದಿರುವ ನೀನೆಂಥ ಮೂರ್ಖನಿದ್ದಿರಬಹುದೆಂದು ಹಂಗಿಸಿತು.

ಆಕರ್ಷಣೀಯವೂ ಪ್ರೇಕ್ಷಣೀಯವೂ ಆದ ಅಲ್ಲಿಗೆ ನಾನು ಪುನಃ ಹೋಗಲೇ ಇಲ್ಲ. ಅವಧೂತ ಛದ್ಮವೇಷಧಾರಿಗಳು ಅಲ್ಲಿರದಿದ್ದಲ್ಲಿ ಕನಿಷ್ಟಪಕ್ಷ ವಾರಕ್ಕೆರಡು ಸಲ ಹೋಗಿ

ವಿಶ್ರಮಿಸಿಕೊಳ್ಳುತ್ತಿದ್ದೆನೇನೋ! ಅಥವಾ ಅಲ್ಲಿನ ಮರದ ತಣ್ಣೆಳಲ್ಲಿ ಕುಳಿತು ಕಾದಂಬರಿಗೆ ರಮ್ಯತೆಯ ಪರಿವೇಷ ತೊಡಿಸುತ್ತಿದ್ದೆನೇನೋ! ಹ್ಞೂಹ್ಞು! ಅದು ವೇದಾಂತೀಯ ಜಿಜ್ಞಾಸುಗಳಿಗೆ, ಲೌಕಿಕ ಬದುಕನ್ನು ಅನುಭವಿಸಿ ಬೇಸತ್ತವರಿಗೆ, ಆತ್ಮಹತ್ಯೆಗೆ ಪ್ರಯತ್ನಿಸುವವರಿಗೆ, ಅಮಲಲ್ಲಿ ವರ್ತಮಾನವನ್ನು ಕ್ಷಣ ಕಾಲ ಮರೆಯುವವರಿಗೆ ಪ್ರಶಸ್ತ ಸ್ಥಳವೇ ಹೊರತು ನನ್ನಂಥ ಸೃಜನಶೀಲ ಲೇಖಕರಿಗೆ ಅಲ್ಲವೇ ಅಲ್ಲ. ಆದರೂ ತನ್ನ ಪತ್ನಿ ಲಚುಮವ್ವಳನ್ನು ಆಕೆಯ ಪತಿ ಪರುಶುರಾಮ ನೆನಪುಗಳ ಮೂಲಕ ಕಾಡುತ್ತಿರುವ ಪರಶುರಾಮನಂತೆ ಶರಭನ ನೆನಪೂ ನನ್ನನ್ನು ದೈನಂದಿಕವಾಗಿ ಬೇಟೆಯಾಡುತ್ತಲೇ ಇರುವುದು. ಅವರಿಬ್ಬರನ್ನು ಭೆಟ್ಟಿಯಾಗಬೇಕು, ತಮ್ಮ ಅವಧೂತ ಸಂಬಂಧೀ ಅನುಭವಗಳನ್ನು ಕೇಳಿ ಪರಿಗ್ರಹಿಸಬೇಕು, ಪರಿಗ್ರಹಿಸಿ ಅವುಗಳನ್ನು ಕಥೆಯ ಕಾಲಕೋಶದಲ್ಲಿ ಶೇಖರಿಸಿಡಬೇಕು. ಭಾಷೆಯ ಶೃಂಖಲೆಯಲ್ಲಿ ಬಂಧಿಸಿಡಬೇಕು, ಅವುಗಳನ್ನೆಲ್ಲ ಆಪತ್ಕಾಲೀನ ಸಂದರ್ಭಗಳಲ್ಲಿ ಕಥೆಗಳನ್ನಾಗಿಸಬೇಕು ಎಂದು ಭಾವಿಸಿದ್ದೆ, ಅಥವಾ ಅಲಿಯ ಆತ್ಮವನ್ನು ಆವಹಿಸಿಕೊಂಡು ಊಳೂರು ಕೊಲೆಗೆ ಸಂಬಂಧಿಸಿದಂತೆ, ನಿಷ್ಪಾಪಿ ಅಂಥೋಣಿ ತಪ್ಪೊಪ್ಪಿಗೆ ನೀಡಿರುವ ಬಗ್ಗೆ, ವಕೀಲ ಜೀವೋತ್ತಮರಾವ್ ಹಾಕಿರಬಹುದಾದ ಜಾಮೀನು ಕುರಿತಂತೆ, ಕೊಲೆಗೆ ಸುಪಾರಿ ನೀಡಿದ ಕೋಗಿಲೆತೋಟದ ರಘೋತ್ತಮರೆಡ್ಡಿ ಬಗ್ಗೆ, ನಗರೂರಿನ ಅನಾಮಧೇಯ ರೆಡ್ಡಿ ಬಗ್ಗೆ, ವಾಗಿಲಿಯಿಂದ ಇದ್ದಕ್ಕಿದ್ದಂತೆ ನಾಪತ್ತೆಯಾಗುವ ನೇಪಥ್ಯದಲ್ಲಿರಬಹುದಾದ ಕಾರಣಗಳು ಕುರಿತಂತೆ, ನಿರ್ಣಾಯಕ ಅವಧಿಯಲ್ಲಿ ಸಂಭವಿಸಿರುವ ಅವಘಡಗಳ ಬಗ್ಗೆ, ತನ್ನ ವ್ಯಕ್ತಿತ್ವದ ಯಾವ ಹಂತದಲ್ಲಿ ಮಂಗವನ್ನು ಯಾವ ಕಾರಣಕ್ಕೆ ತಾನು ಸಾಕಿದ್ದ ಎಂಬ ಬಗ್ಗೆ, ಆ ಉಭಯಚರ ಚತುಷ್ಪಾದಿಯು ತನ್ನನ್ನು ಅದೇ ಹುಡುಕಿಕೊಂಡು ಬಂತೋ! ಅಥವಾ ತಾನೇ ಅದನ್ನು ಕರೆಸಿಕೊಂಡನೋ ಎಂಬ ಬಗ್ಗೆ, ಸಾಕು ಮಂಗ ಪಳಗಿರದ ತನ್ನ ಕುಲಬಾಂಧವರನ್ನು ವಾಗಿಲಿಗೆ ಬರಮಾಡಿಕೊಂಡು ದಾಂಧಲೆ ಎಬ್ಬಿಸಿದ್ದುದರ ಬಗ್ಗೆ!

ಎಷ್ಟೊಂದು ಲೌಕಿಕವೂ ಅಲೌಕಿವೂ ಆದ ಪ್ರಶ್ನೆಗಳು ಸಂದೇಹಗಳು ನನ್ನಲ್ಲಿ! ಹೋಗಿ ಕೇಳಿ ಪರಿಹಾರ ಕಂಡುಕೊಳ್ಳುತ್ತಿದ್ದೆನೇನೋ! ಆದರೆ ಚೂರಿ ನನ್ನ ಆಲೋಚನೆಗಳಿಗೆ ತಡೆಯೊಡ್ಡಿತ್ತು. ಅದನ್ನು ಪುನಃ ತಾನು ಆಪೇಕ್ಷಿಸಿದರೆ ಎಂಬ ಭಯ! ಅದನ್ನು ನನ್ನಿಂದ ಪಡೆದು ಅದರ ಸುತ್ತ ಪವಾಡಗಳನ್ನೆಣೆದು ಪೂಜಾರ್ಹ ವಸ್ತುವನ್ನಾಗಿ ಮಾರ್ಪಡಿಸಿದರೆ ಎಂಬ ಆತಂಕ! ಕಂಡೊಡನೆ ಬರಸೆಳೆದಪ್ಪಿಕೊಂಡು ಧೃತರಾಷ್ಟ್ರಾಲಿಂಗನದ ಪ್ರಾಥಮಿಕ ಪರಿಚಯ ಮಾಡಿಕೊಟ್ಟರೆಂಬ ಭಯ! ಮಹಾ ಸುಳ್ಳುಗಾರನಾದ ತಾನು ತನ್ನ ಕಪೋಲಕಲ್ಪಿತ ಅನುಭಗಳನ್ನು ಹಂಚಿಕೊಂಡು ಇವುಗಳು ಜೀರ್ಣವಾಗುವವರೆಗೆ ಅಗೋ ಆ ಮರದ ಕೆಳಗೆ ಬಿದ್ದಿರು ಎಂದು ಹೇಳಿದರೆ ಎಂಬ ಭಯ! ಅಥವಾ ತನ್ನ ಪಾಪ ಸಂಚಯದ ಸಿಂಹಪಾಲನ್ನು ಕೊಡುತ್ತ ತಪ್ಪೊಪ್ಪಿಕೊಳ್ಳುವುದರ ಮೂಲಕ ಕಂಬಿ ಎಣಿಸುತ್ತಿರುವ ಅಂಥೋಣಿಗೋ, ತನ್ನ ಜಾಮೀನಿಗೆ ಸಹಕರಿಸಿರುವ ವಕೀಲ ಜೀವೋತ್ತಮರಾವನಿಗೋ, ಅಥವಾ ಬಳ್ಳಾರಿಯ ಸರಾಫ್ ಅಂಗಡಿಯಿಂದ ಕಂಠೀಹಾರ ಖರೀದಿಸಿ ಊಳೂರಿನ ತನ್ನ ಪ್ರಿಯತಮೆ ವನಜಾಕ್ಷಿಯ ಕರಪುಷ್ಪಗಳಲ್ಲಿರಿಸು ಎಂದು ಹೇಳಿದರೆ ಎಂಬ ಭಯ! ಅಥವಾ ನಾಗನಾಥನಹಳ್ಳಿಯ ಮಾಯಾವಿ ವೆಂಕಾವಧೂತನ ಸನ್ನಿಧಿಗೋ! ಸಂದಾಯ ಮಾಡು ಎಂದು ಆಜ್ಞಾಪಿಸಿದರೆ ಎಂಬ ಭಯ! ವಿವಾಹಪೂರ್ವದಲ್ಲಿ ಅಕಾಲಿಕ ಮರಣವನ್ನು ಆಸ್ವಾದಿಸು ಎಂದು ಸಲಹೆ ನೀಡಿದರೆ ಎಂಬ ಭಯ! ಇಂಥ ಹತ್ತು ಹಲವು ಭಯ ಆತಂಕಗಳಿಂದಾಗಿಯೇ ನಾನು ಅತ್ತ ಸುಳಿಯುವುದು ಒತ್ತಟ್ಟಿಗಿರಲಿ, ಅದಿರುವ ದಿಕ್ಕಿಗೆ ತಲೆ ಹಾಕಿ ಮಲಗಿರಲಿಲ್ಲ. ಆದರೂ

ಅದು, ಅವರು ಅನಪೇಕ್ಷಿತ ರೀತಿಯಲ್ಲಿ ನೆನಪಾಗುವ ಮೂಲಕ ಕಾಡುತ್ತಲೇ ಇರುವರು. ಮುಂದೊಂದು ದಿವಸ ತಾವು ಅವಧೂತ ಛದ್ಮವೇಷ ಕಳಚಿ ಪುನಃ ಪತ್ನಿಗೆ ಪತಿಯಾಗುವ, ಸೂಳೆಗೆ ಮಿಂಡನಾಗುವ, ಅಣ್ಣನಿಗೆ ತಮ್ಮನಾಗುವ ಐತಿಹಾಸಿಕ ಘಟನೆಯನ್ನು ಎದುರಿಸುವ ಸಲುವಾಗಿ ಮನಸ್ಸನ್ನು ಗಟ್ಟಿಯಾರಿಸಿಕೋ ಎಂದು ಎಚ್ಚರಿಸುತ್ತಲೇ ಇರುವರು. ಅದಾಗದಿದ್ದರೆ ವಕೀಲ ಜೀವೋತ್ತಮರಾಯನ ಸಹಾಯದಿಂದ ವರ್ಗಾವಣೆ ಮಾಡಿಸಿಕೊಂಡು ವಾಗಿಲಿಯಿಂದ ಪಲಾಯನ ಮಾಡು ಎಂದು ಮುನ್ಸೂಚನೆ ನೀಡುತ್ತಲೇ ಇರುವರು. ಹೌದು ನಾಟಕಕ್ಕೆ ಸಂಬಂಧಿಸಿದ ಆವಾಂತರಗಳು ಮುಕ್ತಾಯವಾದೊಡನೆ ಆಲೂರಿಗೆ ದೌಡಾಯಿಸಿ ವಕೀಲ ಜೀವೋತ್ತಮರಾಯರೆದುರು ಅಂಗಲಾಚಿಯಾದರೂ ವಾಗಿಲಿಯನ್ನು ಕಳಚಿಕೊಳ್ಳಬೇಕು. ಮುಚ್ಚಿಕೊಳ್ಳಲಿದ್ದ ಕಣ್ಣ ವಪೆಯೊಳಗೆ ಮೂಡಿದ ರಾಮುಡು ಬಂದುಬಿಡಯ್ಯಾ ನಾರಾಯಣ ದೊರೆಗಳ ರಿಪಬ್ಲಿಕ್ ಎಂದೇ ಖ್ಯಾತವಾಗಿರುವ ಕೋಸಿಗಿಗೆ ಎಂದು ಕೈಬೀಸಿ ಕರೆಯುತ್ತಿರುವಂತೆ ಭಾಸವಾಯಿತು. ಯಾವುದೇ ಸವಲತ್ತುಗಳಿಲ್ಲದ ವಾಗಿಲಿಗಿಂತ ನಮ್ಮ ನಗರೂರಿಗೆ ವರ್ಗ ಮಾಡಿಸಿಕೊಂಡು ಬಂದುಬಿಡು ಎಂದು ಬಂಡೇಗೌಡ ಸಲಹೆ ನೀಡಿದಂತೆ ಭಾಸವಾಯಿತು, ತನಗೆ ಮಾಮೂಲು ಕೊಡದ ನಿನಗೆ ವಾಗಿಲಿಯೇ ಪ್ರಶಸ್ತ ಸ್ಥಳ, ತಾನು ವರ್ಗಾವಣೆಯ ಕಡತಕ್ಕೆ ಸಹಿ ಹಾಕಿದರೆ ತಾನೆ ಎಂದು ವೇಣುಗೋಪಾಲರಾವ್ ಕೆಕ್ಕರಿಸಿ ನುಡಿದಂತೆ ಭಾಸವಾಯಿತು. ಹೌದು ಬೆನ್ನ ಹಿಂದೆ ಚೂರಿ ಹಾಕುವಂಥ ಹಿತಶತ್ರುಗಳಿರುವ ವಾಗಿಲಿಗಿಂತ ಗಹಗಹಿಸಿ ಬೇಟೆ ಸಮಪಾತಳಿಯಲ್ಲಿ ನಿಂತು ಚೂರಿ ಹಾಕುವವರಿಂದಲೇ ತುಂಬಿರುವ ಕೋಸಿಗಿಯೇ ವಾಸಿ ಎಂದುಕೊಂಡೆನೋ ಇಲ್ಲವೋ!

ಕಣ್ಣವಪೆಗಳು ಪೂರ್ಣ ಆವರಿಸಿದ್ದಾಯಿತು, ಕಣ್ಣಗುಡ್ಡೆಗಳು ಪರಮವೀರಚಕ್ರದಂತೆ ತಿರುಗಲಾರಂಭಿಸಿ ಕ್ರಮೇಣ ಸಹಜ ಸ್ಥಿತಿಗೆ ತಲುಪಿದ್ದೂ ಆಯಿತು. ಶುಕ್ಲಪಟಲದ ಹಿಂದೆ ಅವಿತಿದ್ದ ನಿಗೂಢ ವ್ಯಕ್ತಿಗಳು ಒಬ್ಬೊಬ್ಬರಾಗಿ ಕಾಣಿಸಿಕೊಳ್ಳಲಾರಂಭಿಸಿದರು, ಅವರಲ್ಲಿ ಪುರುಷರಿಗಿಂತ ಮಹಿಳೆಯರ ಸಂಖ್ಯೆ ದ್ವಿಗುಣವಾಗಿತ್ತು, ಆದರೆ ಅವರ್ಯಾರಿಗೂ ಖಚಿತ ಮುಖ ಚೆಹರೆಗಳಿರಲಿಲ್ಲ, ಕೆಲವರು ಪ್ರಸಾದನಗಳ ಪರಿಮಳದಿಂದ ಗಮನ ಸೆಳೆದರೆ ಕೆಲವರು ಬೆವರ ಕೊಳೆ ವಾಸನೆಯಿಂದ ಮೈಯಳತೆಯಲ್ಲಿ ಸುಳಿಯಲಾರಂಭಿಸಿದರು. ತಮ್ಮೆಲ್ಲರಿಂದ ರತಿಕ್ರೀಡೆಗೆ ಸಂಬಂಧಿಸಿದ ವಿಧ್ವಂಸಕ ಕೃತ್ಯಗಳು ಇನ್ನೇನು ಆರಂಭಗೊಳ್ಳಬೇಕೆನ್ನುವಷ್ಟರಲ್ಲಿ! ಕಾಳೋರಗ ತನ್ನ ಏಳುಹೆಡೆಯನ್ನು ಬಿಚ್ಚಿ ಹರಡಬೇಕೆನ್ನುವಷ್ಟರಲ್ಲಿ! ದೀಪಸ್ತಂಭದ ತುಟ್ಟ ತುದಿಯಲ್ಲಿ ಯಜ್ಞ ಯಾಗಾದಿಗಳು ಆರಂಭಗೊಳ್ಳಬೇಕೆನ್ನುವಷ್ಟರಲ್ಲಿ! ಅರಿಷಡ್ವರ್ಗಗಳು ಋತ್ವಿಕ್ಕುಗಳ ಮುಖವಾಡ ಧರಿಸಬೇಕೆನ್ನುವಷ್ಟರಲ್ಲಿ! ವಾತ್ಸ್ಯಾಯನ ಮಂತ್ರೋಚ್ಚಾರಣೆ ಆರಂಭಿಸುವ ಸಲುವಾಗಿ ತನ್ನ ಗಂಟಲನ್ನು ಸರಿಪಡಿಸಿಕೊಳ್ಳಬೇಕೆನ್ನುವಷ್ಟರಲ್ಲಿ! ಶತಸಹಸ್ರ ಕೋಟಿ ಶ್ವೇದರಂದ್ರಗಳಲ್ಲಿ ಜಲಜಲ ಜ್ವಾಲಮಾಲನಿ ಇನ್ನೇನು ಒಡಮೂಡಿದಳೆನ್ನುವಷ್ಟರಲ್ಲಿ ಗೊಲ್ಲರೀರಯ್ಯನ ಹುಂಜ ಸಿಂಹನಾದದೋಪಾದಿಯಲ್ಲಿ ಕೂಗುವುದಕ್ಕೂ ಸ್ವಾಮಿದ್ವಯರು ತಿವಿದು ಎಚ್ಚರಿಸುವುದಕ್ಕೂ ಸರಿ ಹೋಯಿತು.

++++

ನಮ್ಮನ್ನು ಕ್ರಾಸಿನವರೆಗೆ ತಲುಪಿಸಿದ ಚಕ್ಕಡಿಯ ಸಾರಥಿ ಕರಿಗಂಬಳಿಯಲ್ಲಿ ದೇಹ ಮಾತ್ರವಲ್ಲದೆ ತನ್ನ ಮುಖವನ್ನೂ ಮರೆ ಮಾಚಿಕೊಂಡಿದ್ದನು. ಚಕ್ಕಡಿಗೆ ಹೂಡಿದ್ದ ಸಾರ್ಥಗಳು

ವೃಷಭಗಳೋ ಮಹಿಷಗಳೋ ಎಂಬುದೂ ತಿಳಿಯಲಿಲ್ಲ, ತಮಗೆ ಕಾವಲಿದ್ದು ಇಲಾಹಿಯನ್ನು ಹತ್ತಿಸಿದ ಬಳಿಕ ತಮ್ಮ ಮುಖವನ್ನಾವರಿಸಿದ್ದ ವಲ್ಲಿಯನ್ನು ಸರಿಸಿದವರು ಯಾರಿರಬಹುದೆಂದು ಗುರುತಿಸಬೇಕೆನ್ನುವಷ್ಟರಲ್ಲಿ ಬಸ್ಸು ಚಲಿಸಲಾರಂಭಿಸಿತು, ಅಲ್ಲದೆ ಆಗ ಕಡು ಮುಂಜಾವು, ಶಿಶಿರ ಮಾಸದ ಹೊಗೆ ಮಂಜು ದಟ್ಟವಾಗಿ ಆವರಿಸಿತ್ತು ಬೇರೆ, ಅವರಿವರೊಂದೇ ಅಲ್ಲದೆ ಭಯಾನಕ ಬಯಲಲ್ಲಿ ನಿರ್ಭೀತವಾಗಿ ಓಡಾಟ ಆರಂಭಿಸಿದ್ದ ನನ್ನ ಅಚ್ಚುಮೆಚ್ಚಿನ ಮಾಯಾಮೃಗಗಳನ್ನೂ ಕಣ್ಣರಳಿಸಿ ನೋಡಲಾಗಲಿಲ್ಲ. ನನ್ನ ಎರಡೂ ಮಗ್ಗುಲು ಕುಳಿತಿದ್ದ ನಶ್ಯೆಯನ್ನು ತನ್ನ ನಶ್ವರ ಮೂಗಿನೊಳಗೆಲ್ಲ ಪೂಸಿಕೊಂಡಿದ್ದ ರಾಘಪ್ಪಸ್ವಾಮಿಯಾಗಲೀ, ರಸ್ತೆಯಲ್ಲದ ರಸ್ತೆಯ ಪ್ರಯಾಣದ ದಡಕಿನಿಂದಾಗಿ ತನ್ನ ದುರ್ಬಲ ಹೃದಯ ಎಲ್ಲಿ ತನ್ನ ಕ್ರಿಯಾಕಲಾಪವನ್ನು ಸ್ಥಗಿತಗೊಳಿಸುವುದೋ ಎಂಬ ಆತಂಕವನ್ನು ಗರಿಷ್ಠ ಮಟ್ಟದಲ್ಲಿ ಅನುಭವಿಸುತ್ತಿದ್ದ ಪಂಪಯ್ಯಸ್ವಾಮಿಯಾಗಲೀ ತುಟಿಗಳನ್ನರಳಿಸಿ ಮಾತಾಡುವ ಸ್ಥಿತಿಯಲ್ಲೂ ಇರಲಿಲ್ಲ. ಸಹಪ್ರಯಾಣಿಕರಲ್ಲಿ ಕೆಲವರು ತಾವು ಸೇದುತ್ತಿದ್ದ ಬೀಡಿಗಳಿಂದ ಸಾಂತ್ವನ ಪಡೆಯುತ್ತಿದ್ದರೆ ಡ್ರೈವರ್ ಅದೇ ತಾನೆ ಕೊನೆಯ ದಮ್ಮೆಳೆದು ಚಾರ್‌ಮಿನಾರ್‌ನ ತುಂಡನ್ನು ತನ್ನೆರಡು ಬೆರಳುಗಳಿಂದ ಹೊರಕ್ಕೆ ಚಿಮ್ಮಿದ.

ಹೊಗೆ ಮಂಜಿನ ಮಸುಕಿನಲ್ಲಿ ನಿಧನಿಧಾನವಾಗಿ ಕಾಣಿಸಿಕೊಳ್ಳಲಾರಂಭಿಸಿದ್ದು ನಿಸ್ಸಂದೇಹವಾಗಿ ಹೊಳಗುಂದಿಯಾಗಿತ್ತು. ಅಲ್ಲಲ್ಲಿ ನಿಲ್ಲುತ್ತ ಪ್ರಯಾಣಿಕರನ್ನು ಅಲ್ಲಲ್ಲಿ ಇಳಿಸುತ್ತ ಹಂತ ಹಂತವಾಗಿ ಬಸ್‌ನಿಲ್ದಾಣವನ್ನು ಪ್ರವೇಶಿಸಿ ಒಂದು ಸುತ್ತ ಪ್ರದಕ್ಷಿಣೆ ಹಾಕಿ ನಿಂತ ಇಲಾಹಿಯಿಂದ ಡ್ರೈವರ್ ಯಾ ಅಲ್ಲಾ ಎಂದು ಉದ್ಗರಿಸುತ್ತ ಇಳಿದ ಬಳಿಕವೇ ಸ್ವಾಮಿದ್ವಯರು ಅಲ್ಲಿನ ತಮ್ಮ ಜನಪ್ರಿಯತೆಯನ್ನು ಒರೆಗೊಡ್ಡುವ ಸಲುವಾಗಿ ಕಿಟಿಕಿಗಳಲ್ಲಿ ಇಣುಕಲಾರಂಭಿಸಿದ್ದು, ವಿನಾಕಾರಣ ಅವರಿವರನ್ನು ತಮ್ಮ ವಿಶಿಷ್ಟ ಪರಾಂಬರಿಕೆಗಳಿಂದ ನಿಲ್ಲಿಸಲಾರಂಭಿಸಿದ್ದು, ವಾಗಿಲಿಯಲ್ಲಿ ನಡೆಯಲಿರುವ ಸಮಾರಂಭ ಕುರಿತಂತೆ ಹೇಳಲಾರಂಭಿಸಿದ್ದು, ತಮ್ಮ ಕಣ್ಣೋಟಗಳಿಂದ ಗೋಡೆಗಳನ್ನು ಪರಿಶೀಲಿಸಿ ಅಲ್ಲೆಲ್ಲ ಪೋಸ್ಟರುಗಳು ಅಂಟಿರುವುದನ್ನು ಖಚಿತಪಡಿಸಿಕೊಳ್ಳಲಾರಂಭಿಸಿದ್ದು.

ಅಷ್ಟು ದೂರದಲ್ಲಿ ಕಾಣಿಸಿಕೊಂಡ ವ್ಯಕ್ತಿ ನಿಸ್ಸಂದೇಹವಾಗಿ ಸಾದಿಕ್ಕಲಿಯೇ ಆಗಿದ್ದನು, ಅತ್ತ ಮುಸಲಮಾನನೂ ಅಲ್ಲದ ಇತ್ತ ಹಿಂದುವೂ ಅಲ್ಲದ ಅವನು ಸ್ವಾಮಿದ್ವಯರ ಪೈಕಿ ಯಾರನ್ನೋ ಕೈ ಹಿಡಿದು ಮಾತನಾಡಿಸುವ ಸಲುವಾಗಿ ಹೆಜ್ಜೆ ಕೀಳುವುದಕ್ಕೂ ಇಲಾಹಿ ಹೊರಡುವ ಸನ್ನಾಹವನ್ನು ಆರಂಭಿಸುವುದಕ್ಕೂ ಸರಿ ಹೋಯಿತು. ನೋಡಿದವರೆ ವಲ್ಲಿಗಳಲ್ಲಿ ತಮ್ಮ ಮುಖಗಳನ್ನು ಮರೆಮಾಚಿಕೊಳ್ಳಲಾರಂಭಿಸಿದ ಇವರ ಮತ್ತು ಅವನ ನಡುವೆ ಇದ್ದಿರಬಹುದಾದ ಒಳ ಒಪ್ಪಂದಗಳೇನಿದ್ದಿರಬಹುದು! ಯೋಚಿಸಿದೆನಾದರೂ ಖಚಿತವಾಗಿ ಹೊಳೆಯಲಿಲ್ಲ. ಏದುಸಿರಿನಿಂದಾಗಿ ತಾನು ನಿತ್ರಾಣಗೊಂಡಿದ್ದರೂ ಇನ್ನೇನು ತಾನು ಆತ್ಮಹತ್ಯೆ ಮಾಡಿಕೊಳ್ಳಲಿರುವವನಂತೆ ಚಲನೆಯನ್ನು ದ್ವಿಗುಣಗೊಳಿಸಿಕೊಳ್ಳತೊಡಗಿದ್ದ ಇಲಾಹಿ ಎದುರು ನಿಂತು ತನ್ನೆರಡೂ ಕೈಗಳನ್ನು ಉತ್ತರ ದಕ್ಷಿಣ ದಿಕ್ಕುಗಳಾದ್ಯಂತ ಚಾಚಿ ಅಂತೂ ನಿಲ್ಲಿಸುವುದರಲ್ಲಿ ಯಶಸ್ವಿಯಾದನು. ನಿಲ್ದಾಣದ ಹಮಾಲಿಯೂ, ಹವ್ಯಾಸಿ ರೌಡಿಯೂ ಆದ ಸಾದಿಕ್ಕಲಿ ತರುಬಿದನೆಂದರೆ ಇಲಾಹಿ ನಿಲ್ಲದಿರಲಾದೀತೆ! ನಿಲ್ಲಿಸಿದ ಡ್ರೈವರ್‌ನ ಋಣವನ್ನು ತೀರಿಸುವ ಸಲುವಾಗಿ ತಾನು ಅಣ್ಣಾ ಎಂಬ ಸಂಬಂಧವಾಚಕವನ್ನು ಸಂಬೋಧಿಸದೆ ಇರಲಾದೀತೆ! ಬಳಿಕ ಹುಡುಕಿ ಪತ್ತೆ ಹಚ್ಚಿ ರಾಘಪ್ಪಸ್ವಾಮಿಯ ಕಡೆ ಕೈಚಾಚಿದ್ದಾಗಲೀ, ಅದಕ್ಕೆ ಸ್ವಾಮಿ ತನ್ನ

ಜೇಬಿಗೆ ಕೈ ತೂರಿಸಿ ಎರಡು ರೂಪಾಯಿ ಮೌಲ್ಯದ ನೋಟನ್ನು ತೆಗೆದು ಕೊಡುತ್ತ ಇನ್ನೂ ನೀನು ಬದುಕಿರುವಿಯಲ್ಲ ಎಂಬಂರ್ಥದ ನೋಟವನ್ನು ಬೀರಿದ್ದಾಗಲೀ ತಡವಾಗಲಿಲ್ಲ. ಇಂಥ ಅಡಚಣೆಗಳನ್ನು ಪ್ರತಿ ಫರ್ಲಾಂಗಿಗೆ ಒಂದೊಂದರಂತೆ ಎದುರಿಸುತ್ತಲೂ ನಿಭಾಯಿಸುತ್ತಲೂ ಇಲಾಹಿ ಮಟಮಟ ಮಧ್ಯಾಹ್ನದ ಸುಮಾರಿಗೆ ಬಳ್ಳಾರಿಯನ್ನು ತಲುಪಿದಾಗ..

ತಮ್ಮ ತಲೆಗೂದಲನ್ನು ತಮ್ಮ ಕೈಗಳ ಸಹಾಯದಿಂದ ಒಪ್ಪ ಓರಣ ಮಾಡಿಕೊಳ್ಳುತ್ತಲೇ ಇಳಿದ ಅವರು ತಮ್ಮ ಒಂದೇ ಒಂದು ಮಾತಿನಿಂದ ನನ್ನ ಬಳಿ ಭಾಷಣದ ಪ್ರತಿ ಇರುವುದನ್ನು ಖಚಿತಪಡಿಸಿಕೊಂಡು ನೆಮ್ಮದಿಯ ಉಸಿರು ಚೆಲ್ಲಿದರು. ಶ್ಯಾಮಲ ತಲುಪುವ ಹಾದಿಗುಂಟ ನನ್ನ ಇಕ್ಕೆಲದಲ್ಲಿ ಒಂದೇ ಸಮನೆ ವಟವಟಗುಟ್ಟುತ್ತಲೇ ಇದ್ದರು. ಸದರಿ ನಗರದಲ್ಲಿ ಗೌಡರ ಮನೆಗಳು ಒಂದೇ ಎರಡೇ! ದೊಡ್ಡ ಗೌಡರನ್ನೂ ಚಿಕ್ಕ ಗೌಡರನ್ನೂ ಅದೂ ಅವರ ಅರಮನೆ ಸದೃಶ ಮನೆಯಲ್ಲಿ ಭೆಟ್ಟಿಯಾಗಲಿರುವುದೆಂದರೆ ಸಾಮಾನ್ಯ ಸಂಗತಿಯೆ! ಮನೆಯನ್ನು ಪ್ರವೇಶಿಸುವವರು ತಪಾಸಣೆಗೊಳಗಾಗುವುದು ಅನಿವಾರ್ಯ, ಅವರ ದೇಹಗಳಿಗೆ ಇಂತಿಷ್ಟು ದೂರ ನಿಲ್ಲಬೇಕು, ಹಸ್ತಲಾಘವವಂತೂ ನಿಷಿದ್ಧ, ಮುಖ್ಯವಾಗಿ ಪೆನ್ನನ್ನೂ ಮಾರಕಾಯುಧದ ರೀತಿಯಲ್ಲಿ ಜಳಪಿಸಲೇ ಕೂಡದು, ಮಾತಾಡುವ ಮೊದಲು ತಮ್ಮ ಒಂದು ಕೈಯನ್ನು ಬಾಯಿಗಡ್ಡವಿರಿಸಿಕೊಂಡಲ್ಲಿ ಇನ್ನೂ ಕ್ಷೇಮ, ಯಾವ ಕಾರಣಕ್ಕೂ ಮುಖಕ್ಕೆ ಮುಖ ಕೊಡುವುದನ್ನಾಗಲೀ! ತೀಕ್ಷ್ಣ ನೋಟ ಬೀರುವುದನ್ನಾಗಲೀ! ನಿಸ್ಸಂಕೋಚದಿಂದ ವರ್ತಿಸುವುದಾಗಲೀ! ಮನಸ್ಸು ಬಿಚ್ಚಿ ಮಾತನಾಡುವುದಾಗಲೀ! ಸಂತೆ ಮುಗಿಸಿಕೊಂಡಿರುವ ದೊಡ್ಡ ಗೌಡರೇನೋ ಸರಿ, ಆದರೆ ಸೆರೆಮನೆಯ ರೀತಿರಿವಾಜುಗಳನ್ನು ಅರಗಿಸಿಕೊಂಡಿರುವ ಭವಿಷ್ಯದ ಶಾಸಕನೆಂದೇ ಬಿಂಬಿಸಲ್ಪಡುತ್ತಿರುವ, ಕುಖ್ಯಾತ ಗಣ್ಯರೊಂದಿಗೆ ಒಡನಾಡಿರುವ ಚಿಕ್ಕಗೌಡರ ದೃಷ್ಟಿಯಲ್ಲಿ ಚಿಕ್ಕವರು ಚಿಕ್ಕವರೆ! ದೊಡ್ಡವರು ದೊಡ್ಡವರೆ! ಕೇಳುತ್ತಿದ್ದಂತೆ ನನ್ನ ಹೊಟ್ಟೆ ತಳಮಳಿಸಲಾರಂಭಿಸಿತು. ನನ್ನ ಆತ್ಮಸಾಕ್ಷಿಗೆ ರೇಜಿಗೆ ಹುಟ್ಟಿಸುವ ರೀತಿಯಲ್ಲಿ ವರ್ತಿಸುವುದೆಂದರೆ!

ನನ್ನ ಮುಖದ ಭಾವನೆಗಳನ್ನು ಕೂಡಲೆ ಅರ್ಥ ಮಾಡಿಕೊಂಡವರೆ ಕಾರ್ಯವಾಸಿಗೂ ಗಾರ್ದಭಕ್ಕೂ ಇರುವ ಸಾಮ್ಯತೆಯನ್ನು ಸೂಜಿಯ ಮೊನೆಯನ್ನು ಚುಂಬಿಸುವಂತೆ ಸೂಚ್ಯವಾಗಿ ವಿವರಿಸುತ್ತಿರುವಾಗಲೇ ನಾವು ಶ್ಯಾಮಲಾ ಹೆಸರಿನ ವಸತಿಗೃಹದ ರಿಸೆಪ್ಷೆಷನ್ ಕೌಂಟರನ್ನು ಸಮೀಪಿಸಿದ್ದೆವು. ಟೇಬಲ್ಲಿನ ಆ ಬದಿಯಲ್ಲಿದ್ದ ಕುಳ್ಳ ವ್ಯಕ್ತಿ ಮುಖವನ್ನು ತುಸು ಎತ್ತರಿಸಿ, ಬಳಿಕ ಬರಿಗಣ್ಣಿನಿಂದ ಗುರುತಿಸಲು ಪ್ರಯತ್ನಿಸಿ, ಬಳಿಕ ಚಾಳೇಸಿನ ದಪ್ಪ ಗಾಜುಗಳ ಬಳಿಕ ನೋಡಿದೊಡನೆ "ಓಹ್ಹೋ ರಾಘಪ್ಪಸ್ವಾಮಿಗಳು ಬರಬೇಕು ಸ್ವಾಮೀ ಬರಬೇಕು, ತುಂಬಾ ದಿವಸಗಳಾದವು ತಾವು ಈ ಕಡೆ ಸುಳಿಯದೆ" ಎಂದು ಉದ್ಗಾರದೊಡನೆ ಸ್ವಾಗತಿಸಿದ, ಆಶ್ಚರ್ಯವನ್ನು ಸಂಬಾಳಿಸುವ ನಿಮಿತ್ತ ತಾವೆಲ್ಲ ದೂರದ ಸಂಬಂಧಿಗಳೆಂಬ ಸುಳಿವನ್ನೂ ನೀಡಿದ. ಸ್ಮಾರ್ತ ಬ್ರಾಹ್ಮಣರಾದ ತಮ್ಮ ಬೇರುಗಳು ದಕ್ಷಿಣ ಭಾರತಾದ್ಯಂತ ಹರಡಿರುವುದಾಗಿಯೂ, ತಮ್ಮ ಶ್ಯಾಮಲ ವಸತಿ ಗೃಹಕ್ಕಿದ್ದ ಕಾನೂನು ತೊಂದರೆಗಳನ್ನು ರಾಘಪ್ಪಸ್ವಾಮಿಯೇ ಹೆಬ್ಬಟಂ ಗೌಡರ ನೆರವಿನಿಂದ ಬಗೆ ಹರಿಸಿದ್ದಾಗಿಯೂ ವಿವರಿಸುತ್ತಲೇ ನೀಡಿದ ಕೋಣೆ ವಿಶಾಲವಾಗಿತ್ತು. ಮೇಲ್ಛಾವಣೆಯಲ್ಲಿ ಎರಡು ಫ್ಯಾನುಗಳಿದ್ದವಲ್ಲದೆ ಮೇಜು ಕುರ್ಚಿಗಳು ತಮ್ಮ ನಿಗದಿತ ಸ್ಥಳಗಳಲ್ಲಿದ್ದವು, ಗೋಡೆಯ ಮೇಲೆ ಎರಡು ವರ್ಷಗಳ ಹಿಂದೆಯಷ್ಟೆ ನಿಗೂಢ ಖಾಯಿಲೆಯಿಂದ ನರಳಿ ಬಳಲಿ ವೈಕುಂಠವಾಸಿಗಳಾಗಿದ್ದ ಲಾಡ್ಜಿನ

ಸಂಸ್ಥಾಪಕ ಶ್ರೀಕರಾಚಾರ್ಯರ ಭಾವಚಿತ್ರವನ್ನು ಅಲಂಕರಿಸಲಾಗಿತ್ತು. ಆ ದೈವಾಧೀನ ವ್ಯಕ್ತಿಯ ಪೂರ್ವಾಪರ ಕೇಳಿಸಿಕೊಳ್ಳುವ ಸಡಗರದಲ್ಲಿರದಿದ್ದ ಪಂಪಯ್ಯಸ್ವಾಮಿ ಗೌಡರು ವಿಶ್ರಾಂತಿ ತೆಗೆದುಕೊಳ್ಳುವ ಸಲುವಾಗಿ ಮಾತ್ರೆಗಳನ್ನು ಸೇವಿಸುವ ಮೊದಲೆ ತಾವು ಹೊರಟು ಸೇರುವುದು ಒಳಿತೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ. ಹೌದು ಅವರು ಮಾತ್ರೆಗಳನ್ನು ಸೇವಿಸಿ ಮಲಗಿದರೆಂದರೆ ಎಚ್ಚರಗೊಳ್ಳುವುದು ಸಂಜೆ ಆರು ಉರುಳಿದ ಬಳಿಕವೇ! ಮಲಗಿದ ಅವಧಿಯಲ್ಲಿ ದುಃಸ್ವಪ್ನಗಳನ್ನೇನಾದರೂ ಅನುಭವಿಸಿದರೆಂದರೆ ಅವುಗಳಿಂದ ತಾವು ಚೇತರಿಸಿಕೊಳ್ಳಲು ದಿನಗಟ್ಟಲೆ ಹಿಡಿಯುವುದು ಬೇರೆ! ಇದೆಲ್ಲ ತಿಳಿದಿದ್ದ ರಾಘಪ್ಪಸ್ವಾಮಿ ಆತನ ಮಾತಿಗೆ ಸಮ್ಮತಿಸಿದ್ದೂ ಅಲ್ಲದೆ ಲಗುಬಗೆಯಿಂದ ಕೌಪೀನ ಸೇರಿಂದಂತೆ ಮೇಲುಡುಪುಗಳನ್ನು ಧರಿಸಿ ಭ್ರೂ ನಡುವೆ ಬೋಳು ನೆತ್ತಿವರೆಗೆ ನೇರವಾಗಿ ನಾಮಮುದ್ರೆಯನ್ನು ತೀಡಿ ನಿಲುಗನ್ನಡಿಯಲ್ಲಿ ತನ್ನನ್ನು ತಾನು ಅಡಿಯಿಂದ ಮುಡಿವರೆಗೆ ನೋಡಿಕೊಂಡು ಸ್ವಾಭಿಮಾನದ ನಗೆಯನ್ನು ತುಟಿಗಳ ನಡುವೆ ಧರಿಸಿದ. ಅದನ್ನು ಶಾಶ್ವತೀಕರಿಸುವ ಸಲುವಾಗಿ ವಿಷ್ಣು ನಾಮಾವಳಿಗಳನ್ನು ತನಗಷ್ಟೇ ಕೇಳುವಂತೆ ಗುನುಗಲಾರಂಭಿಸಿದ. ನಡು ನಡುವೆ ಮೌಖಿಕ ರೂಪದಲ್ಲಿದ್ದ ಪಂಚಾಂಗದ ಪುಟಗಳನ್ನು ಒಂದೊಂದಾಗಿ ಮುಗುಚುತ್ತ ಅಶುಭ ಸೂಚಕವಾಗಿ ಮುವ್ವರು ಒಟ್ಟಿಗೆ ಹೊರಡುವ ಬದಲು ಇಬ್ಬರ ಹಿಂದೆ ಇನ್ನೊಬ್ಬರು ಆ ಪ್ರಾಗ್ಯೈತಿಹಾಸಿಕ ಕುರುಹಿನೋಪಾದಿಯಲ್ಲಿರುವ ಮನೆಯನ್ನು ಸಮೀಪಿಸುವುದು ಒಳಿತೆಂದೂ ಸಲಹೆ ನೀಡಿದ. ಅಸಹಾಯಕತೆಯಿಂದ ನರಳುತ್ತಲೇ ಇದ್ದ ಪಂಪಯ್ಯ ಆತನ ಮಾತಿಗೆ ಪ್ರತಿನುಡಿಯಲು ಪ್ರಯತ್ನಿಸಿದನಾದರೂ ಸಾಧ್ಯವಾಗಲಿಲ್ಲ. ಆತನಿಗಿಂತ ತಾನೇನು ಕಡಿಮೆ ಎಂಬಂತೆ ಕೌಪೀನದಂಥ ಒಳ ಉಡುಪಗಳ ಹಂಗಿರದಿದ್ದ ಕಾರಣದಿಂದಾಗಿ ಮೇಲುಡುಪುಗಳನ್ನು ಇದ್ದದರಲ್ಲಿಯೇ ನಿಟಾಗಿ ಸರಿಪಡಿಸಿಕೊಂಡನಲ್ಲದೆ ಚೀಲದಾಳದಿಂದ ವಿಭೂತಿ ತುಂಡನ್ನು ಹೊರ ತೆಗೆದು ನೊಸಲ ತುಂಬೆಲ್ಲಾ ಢಾಳವಾಗಿ ಲೇಪಿಸಿಕೊಂಡ, ಬಳಿಕ ತಾನೂ ನಿಲುಗನ್ನಡಿ ಎದುರು ನಿಂತು ತನ್ನ ಪ್ರತಿಬಿಂಬವನ್ನು ಬಹಳ ದಿವಸಗಳ ನಂತರ ನೋಡಿಕೊಂಡ ಕಾರಣಕ್ಕೆ ನಿಟ್ಟುಸಿರುಬಿಟ್ಟನು. ಇಂಥ ಪ್ರಸಾದನಗಳಿಂದಾಗಿ ಅವರಿಬ್ಬರೂ ಉತ್ತರ ದೃವ ದಕ್ಷಿಣ ದೃವಗಳಂತೆ ಗೋಚರಿಸತೊಡಗಿದರು. ಅದೂ ಅಲ್ಲದ ಇದೂ ಅಲ್ಲದ ನಾನು ಬ್ಯಾಗಿನಿಂದ ಭಾಷಣದ ಎರಡು ಪ್ರತಿಗಳನ್ನು ಕೈಯಲ್ಲಿ ಹಿಡಿದುಕೊಂಡು ವಾಕ್ಯಗಳ ಮೇಲೆ ಕಣ್ಣಾಡಿಸಲಾರಂಭಿಸಿದೆ, ಆರಂಭದ ಮೊದಲ ವಾಕ್ಯಗಳಲ್ಲಿಯೇ ಕೆಲವು ಶಾಬ್ದಿಕ ದೋಷಗಳಿರುವುದು ಗೋಚರಿಸಿತು, ಆ ಕೂಡಲೆ ಪೆನ್ನು ದೊರಕದ ಕಾರಣಕ್ಕೆ ಕಣ್ಣಿನಿಂದಲೇ ದೋಷ ಸರಿಪಡಿಸಲು ಪ್ರಯತ್ನಿಸಿದೆ, ಸಾವಿರಾರು ಎಕರೆ ಜಮೀನಿಗೆ ಒಡೆಯರಾಗಿರುವ ಗೌಡರು ಅಕ್ಷರಗಳ ವಿಷಯದಲ್ಲಿ ಗರೀಬರು ಎಂದು ಭಾವಿಸುತ್ತಿದ್ದಂತೆ ನಗುಬಂತು, ಒಡನೆಯೇ ಅಯ್ಯೋ ಪಾಪವೆಂಬ ಅನುಕಂಪ ಆವರಿಸಿತು. ಅವರು ನನ್ನನ್ನು ಖೈದಿಯೋಪಾದಿಯಲ್ಲಿ..

ಶಾಸ್ತ್ರಿ ಬಡಾವಣೆಯ ಒಂಭತ್ತನೆ ಕ್ರಾಸಿ ಕಟ್ಟ ಕೊನೆಯಲ್ಲಿ ಶುಕ್ಲಪಟಲದ ತುಂಬ ಆವರಿಸಿದ ಆ ಕಟ್ಟಡವನ್ನು ಮನೆಯೋ ಅರಮನೆಯೋ ಅಥವಾ ಇನ್ನಾವುದೋ ಭವನವೋ! ನನ್ನ ಬೆರಗನ್ನು ಊಹಿಸಿದ ರಾಘಪ್ಪ ಅದಕ್ಕಿರುವುದು ಸಿಂಹಾಯದ ವಾಸ್ತುವೆಂದು ಹೇಳಿದರೆ ಪಂಪಯ್ಯ ಗರುಡಾಯವೆಂದು ಹೇಳಿದ. ಅವರಿಬ್ಬರ ಚರ್ಚೆಗೆ ಆಸ್ಪದ ಕೊಡುವುದು ಬೇಕಿರದಿದ್ದ ನನ್ನನ್ನು ಅದು ತನ್ನೆಡೆಗೆ ಒಂದೇ ಸಮನೆ ಆಕರ್ಷಿಸುತ್ತಿತ್ತು, ನನ್ನನ್ನೊಂದೇ ಅಲ್ಲದೆ ಅವರಿಬ್ಬರನ್ನೂ! ಸಮೀಪಿಸುತ್ತಿದ್ದಂತೆ ಅದರೊಳಗಿಂದ ಆಗಮಿಸಿದ ಕೆಲವು ಸಮವಸ್ತ್ರಧಾರಿಗಳು ತಮ್ಮ

ವಾಹನವನ್ನು ತಲುಪಿದ ಬಳಿಕ ತಮ್ಮ ಬಗಲುಗಳಲ್ಲಿದ್ದ ಹ್ಯಾಟುಗಳನ್ನು ತಲೆಗೇರಿಸಿ ನಮ್ಮ ಕಡೆ ದೃಷ್ಟಿ ಹಾಯಿಸಿ ಪರಸ್ಪರ ಏನನ್ನೋ ಮಾತಾಡಿಕೊಂಡರು. ಅವರು ಪೋಲಿಸರೋ ಇನ್ಯಾರೋ! ನಮ್ಮ ಹೆಜ್ಜೆಗಳ ಕಂಪನದ ಮೂಲಕ ಏನನ್ನೋ ಗ್ರಹಿಸಿ ಅವರು ಹೊರ ಚೆಲ್ಲಿದ ಉಸಿರು ನಮ್ಮನ್ನು ತಲುಪುವಷ್ಟರಲ್ಲಿ ಅಂತರ್ಧಾನವಾಯಿತು. ಅವರ ಜೀಪು ನಮ್ಮನ್ನು ಸಮೀಪಿಸಿ ತನ್ನ ವೇಗವನ್ನು ಸ್ಥಗಿತಗೊಳಿಸಿತು, ಇನ್ನೇನು ನಿಂತೇಬಿಟ್ಟಿತೆನ್ನುವಷ್ಟರಲ್ಲಿ ಅದರಿಂದ ತನ್ನ ತಲೆಯನ್ನು ಹೊರಕ್ಕೆ ಚಾಚಿದ ಒಬ್ಬ ನಮ್ಮನ್ನು ಅಪಾದಮಸ್ತಕ ದಿಟ್ಟಿಸಿ ಗೊಣಗಿದ್ದೂ ಸ್ಪಷ್ಟವಾಗಿ ಕೇಳಿಸಲಿಲ್ಲ, ಅವರು ಯಾರೆಂಬುದನ್ನು ಗುರುತಿಸುವುದೋ! ಗುರುತಿಸಿ ಬಹುವಚನಪೂರ್ವಕವಾಗಿ ಸಂಬೋಧಿಸುವುದೋ! ಅರೆ ನೀವಿಲ್ಲಿ! ಎಂದು ಏನನ್ನೋ ಹೇಳುವ ಸನ್ನಾಹದಲ್ಲಿದ್ದ ರಾಘಪ್ಪ ತಡವರಿಸುತ್ತಿದ್ದಂತೆಯೇ ಅದು ಪುನಃ ಚಲನೆಯನ್ನಾರಂಭಿಸಿತು, ನಾವು ನೋಡುತ್ತಿದ್ದಂತೆಯೇ ಅದು ರಸ್ತೆಯ ಆ ತುದಿಯಲ್ಲಿ ಮರೆಯಾಯಿತು. ಅವರಿಬ್ಬರು ಅಸಹಾಯಕತೆಯಿಂದ ಒಣ ಗಾಂಭೀರ್ಯದಿಂದ ನನ್ನ ಕಡೆ ನೋಡಿ ನಿಟ್ಟುಸಿರುಬಿಟ್ಟರಲ್ಲದೆ ಮುಂದಡಿ ಇರಿಸುವಂತೆ ಸೂಚಿಸಿದರು, ಆದರೆ ನಾನು ಆಗಲೆ ಮುಂದೆ ಸಾಗಿದ್ದೆ.

ಗೇಟು ತೆರೆದಿದ್ದರೂ ಕೂಡಲೆ ಒಳಗೆ ಪ್ರವೇಶಿಸುವಂತಿರಲಿಲ್ಲ, ಆಳೆತ್ತರದ ಪ್ರಹರಿ ಗೋಡೆಗಳಾಚೆಯ ವಿದ್ಯಾಮಾನವನ್ನು ನಾವಾಗಲೀ, ನಮ್ಮ ಉಪಸ್ಥಿತಿಯ ಶೈಲಿಯನ್ನು ನಮ್ಮ ಮುಖಗಳ ಮೇಲಿದ್ದ ಭಾವನೆಗಳನ್ನು ಆಚೆ ಇದ್ದವರಾಗಲೀ ಗಮನಿಸುವುದು ಸಾಧ್ಯವಿರಲಿಲ್ಲ. ಆದರೆ ಬೊಗಳಲಾರಂಭಿಸಿದ ನಾಯಿಗಳು ಒಂದಕ್ಕಿಂತ ಹೆಚ್ಚಿರಬಹುದೆಂದು ಊಹಿಸಿದೆ, ಖಂಡಿತ ಅವು ದಾಬರಮನ್ನೋ ಆಲ್ಸೇಷಿಯನ್ನೋ ಮ್ಯಾನ್ ಈಟರುಗಳೋ ಆಗಿರಲೂಬಹುದು! ಒಂದೆರಡು ನಿಮಿಷ ಗತಿಸುವಷ್ಟರೊಳಗೆ ಗೇಟಿನ ಅಥವಾ ಗೋಡೆಯ ರಂದ್ರದ ಮೂಲಕ ನಮ್ಮನ್ನು ಗಮನಿಸಿದ ಸಣಕಲ ಶರೀರದವ ಕ್ರಮೇಣ ಬಾಗಿಲಲ್ಲಿ ಕಾಣಿಸಿಕೊಂಡು ಅವರಿಬ್ಬರಿಗಿಂತ ಮುಖ್ಯವಾಗಿ ನನ್ನ ಕಡೆ ವ್ಯಗ್ರತೆಯ ನೋಟ ಬೀರಿದ. ಸಂಜ್ಞೆಯಂತೆ ಸಮೀಪಿಸಿದ ನಮ್ಮ ದೇಹಗಳನ್ನು ತನ್ನ ಕೈಗಳಿಂದ ತಡಕಾಡಿದ, ದೊರಕಿದ ಪೆನ್ನು ಮಾರಕಾಯುಧವಲ್ಲವೆಂದು ಖಚಿತಪಡಿಸಿಕೊಂಡು ನಮ್ಮನ್ನು ಗೇಟು ದಾಟಿಸಿದ, ದಾಬರಮನ್ನಿಗೆ ರಾಖಿ ಎಂದೂ, ಆಲ್ಸೇಷಿಯನ್ನಿಗೆ ಟೈಗರೆಂದೂ ಕರೆಯುತ್ತ ಸಮೀಪಿಸಿ ಅವುಗಳ ಮೈದಡವಿದ, ಅವುಗಳ ಕಿವಿಯಲ್ಲಿ ಏನನ್ನೋ ಸಾಂಕೇತಿಕ ಭಾಷೆಯಲ್ಲಿ ಉಸುರಿದ, ಮ್ಯಾನ್ ಈಟರ್ ಆಸ್ಟ್ರೇಲಿಯನ್ ರಿಟ್ರೀವರ್‌ಗೂ ಕೈಸನ್ನೆಯಿಂದ ಏನನ್ನೋ ಸೂಚಿಸಿದ, ನಿರ್ಬಂಧಿತ ಸ್ಥಳಗಳಲ್ಲಿದ್ದ ಆ ಮೂರೂ ಶುನಕಗಳು ನಮ್ಮ ಕಡೆ ವ್ಯಗ್ರವಾಗಿ ನೋಡುತ್ತಲೂ, ಮೆಲ್ಲಗೆ ಗುರುಗಟ್ಟುತ್ತಲೂ!

ಅಲ್ಲಲ್ಲಿ ಕೂಡ್ರಲು ಆರ್ಸಿಸಿ ಬೆಂಚುಗಳಿದ್ದರೂ ಕೂಡ್ರುಂತಿರಲಿಲ್ಲ, ನಡೆಯಲು ಸಮತಟ್ಟಾದ ಆಕರ್ಷಕ ಕಿರುಹಾದಿಗಳಿದ್ದರೂ ನಡೆಯುವಂತಿರಲಿಲ್ಲ, ಅತ್ಯಾಕರ್ಷಕ ರೀತಿಯಲಿ ತರುಲತೆಗಳಿದ್ದರೂ ಕಣ್ಣೆತ್ತಿ ನೋಡುವಂತಿರಲಿಲ್ಲ, ಅಲ್ಲಲ್ಲಿ ಸಶಸ್ತ್ರಧಾರಿ ಮನುಷ್ಯರಿದ್ದರೂ ಬಾಯಿ ತೆರೆದು ಮಾತನಾಡಿಸುವಂತಿರಲಿಲ್ಲ, ಗಿಡ್ಡಕ್ಕಿದ್ದ ಸಂಪಿಗೆ ಮರದಡಿ ಪಾರ್ಶ್ವವಾಯು ಪೀಡಿತ ವೃದ್ಧನಿದ್ದರೂ ಆತನ ಕ್ಷೇಮವನ್ನು ವಿಚಾರಿಸುವಂತಿರಲಿಲ್ಲ, ಅಲ್ಲೊಬ್ಬಳ ಸಮಕ್ಷಮದಲ್ಲಿ ಮಗುವೊಂದು ಆಡುತ್ತಿದ್ದರೂ ಅದನ್ನೆತ್ತಿ ಮುದ್ದಾಡುವಂತಿರಲಿಲ್ಲ, ಪ್ರಹರಿಗೋಡೆಗಂಟಿಕೊಂಡಂತಿದ್ದ ಪುಟ್ಟ ಮೃಗಾಲಯದಲ್ಲಿ ಸಸ್ಯಾಹಾರಿ ವನ್ಯಮೃಗಗಳಿದ್ದರೂ ಅವುಗಳ ಕಡೆ ಕಣ್ಣು ತಂಬ ನೋಡುವಂತಿರಲಿಲ್ಲ, ಅಲ್ಲೆಲ್ಲ ಪರಿಮಳಯುಕ್ತ ಆಮ್ಲಜನಕ

ಯಥೇಚ್ಚವಾಗಿದ್ದರೂ ಅದನ್ನು ಆಘ್ರಾಣಿಸುವಂತಿರಲಿಲ್ಲ. ಒಂದು ರೀತಿ ಪಂಚೇಂದ್ರಿಯಗಳನ್ನು ಬಂಧಿಸಿರುವಂಥ ಅನುಭವ, ಒಂದು ರೀತಿ ಸ್ವಯಂ ಬಂಧನಕ್ಕೊಳಗಾಗಿರುವಂಥ ಅನುಭವ. ಒಳಗೆ ಬಂದಷ್ಟು ಸುಲಭವಿರಲಿಲ್ಲ ಅಲ್ಲಿಂದ ಹೊರ ಹೋಗುವುದು. ನಾಟಕ ಕಂಪನಿ ಮಾಲಕ ಜಲಂಧರ ಗೌಡರನ್ನು ಹಲವು ಸಲ ಭೆಟ್ಟಿಯಾಗಿರುವುದು ಇದೇ ಭವನದಲ್ಲೋ! ಅಥವಾ ಬೇರೊಂದು ಮನೆಯಲ್ಲೋ! ಅಥವಾ ಅವನು ಸುಳ್ಳು ಹೇಳಿರಲೂಬಹುದು. ಏನನ್ನೋ ಹೇಳುವ ಸಲುವಾಗಿ ಏನನ್ನೋ ಕೇಳುವ ಸಲುವಾಗಿ ಬಾಯಿ ತೆರೆಯುವುದು ಮುಚ್ಚುವುದು ನಡೆಸಿದೆ. ಆದರೆ ಸ್ವಾಮಿದ್ವಯರ ಪರಿಸ್ಥಿತಿ ನನ್ನ ಸ್ಥಿತಿಗಿಂತ ನಿರಾಳವಾಗಿತ್ತು, ಅಲೌಕಿಕವೂ ಅನುಭಾವವೂ ಆದ ಸ್ಥಳದಲ್ಲಿ ತಾವಿರುವುದಾಗಿ ಅವರು ಭಾವಿಸಿದ್ದರು, ಪ್ರಸನ್ನತೆಯನ್ನು ಸೌಜನ್ಯತೆಯನ್ನು ಪರಮವಿಧೇಯತೆಯನ್ನು ಆವಹಿಸಿಕೊಳ್ಳಲು ನಿರಂತರ ಪ್ರಯತ್ನ ನಡೆಸಿದ್ದರು. ಉಸಿರುಗಟ್ಟಿಸುವ ಸ್ಥಿತಿ ಅಪಮಾನವೋ! ಬಹುಮಾನವೋ! ಮರಣ ದಂಡನೆಗೆ ಮಿಗಿಲೆನಿಪ ಶಿಕ್ಷೆಯೋ! ಅದು ಯಾವುದೂ ಅಲ್ಲವೇ ಅಲ್ಲ, ಅದೊಂದು ಸೃಜನಶೀಲ ಸೌಕರ್ಯವಿರುವ, ಅಭಿವ್ಯಕ್ತಿಗೆ ಹಾತೊರೆಯುವ ವಿಶಿಷ್ಟ ಅನುಭವ! ಅಯ್ಯೋ ಈ ಅನುಭವ ಐದಾರು ತಿಂಗಳುಗಳ ಹಿಂದೆ ನನಗೆ ದಕ್ಕಬಾರದಿತ್ತೆ! ದಕ್ಕಿದ್ದಲ್ಲಿ ಬರೆಯುತ್ತಿರುವ ಕಾದಂಬರಿಯನ್ನು ಇನ್ನಷ್ಟೂ ಆಕರ್ಷಕಗೊಳಿಸಬಹುದಿತ್ತು, ಹರಿಶ್ಚಂದ್ರರೆಡ್ಡಿಯವರ ಪುರಾತನ ವಾಡೆಯನ್ನು ಆಧುನಿಕಗೊಳಿಸಬಹುದಿತ್ತು, ಭಯೋತ್ಪಾದನೆಯಲ್ಲಿ ನಾಯಿಗಳು ಮನುಷ್ಯರಂತೆ ಪ್ರಮುಖ ಪಾತ್ರವಹಿಸುತ್ತವೆ ಎನ್ನುವುದನ್ನು ವಾಚಕರಿಗೆ ಮನದಟ್ಟು ಮಾಡಿಕೊಡಬಹುದಿತ್ತಲ್ಲವೆ!

ಸ್ವಲ್ಪ ಹೊತ್ತು ಕಳೆಯುವಷ್ಟರಲ್ಲಿ ಮನೆ ಒಳಗಡೆಯಿಂದ ಗಂಟೆ ಮೊಳಗಿದ ಸದ್ದು ಕೇಳಿಸಿತು, ಧೂಪ ಪರಿಮಳದ ಹೊಗೆ ನಿಧಾನ ರೀತಿಯಲ್ಲಿ ವಾತಾವರಣವನ್ನು ಆವರಿಸಿತು, ಪೂಜಾರಿ ರೂಪದಲ್ಲಿದ್ದ ಮಧ್ಯವಯಸ್ಕನೊಬ್ಬ ಹೊರಗಡೆ ಸೌಜನ್ಯಯುತವಾಗಿ ಆಗಮಿಸಿ ನಮಗೊಂದೇ ಅಲ್ಲದೆ ಸಾಕು ಶುನಕಗಳಿಗೂ ಪ್ರಸಾದವನ್ನು ವಿತರಿಸಿದ. ಸ್ವಾಮಿದ್ವಯರು ತಮ್ಮೆರಡೂ ಕೈಗಳಲ್ಲಿದ್ದ ಪಂಚೋದಕವನ್ನು ಮುಗಿಲಿಗೆ ಮುಖ ಮಾಡಿ ಭಕ್ತಿಪೂರ್ವಕವಾಗಿ ಸೇವಿಸಿದರು. ಬೆರಳುಗಳ ಸಂದುಗಳಲ್ಲಿ ಜಿನುಗಿ ಇನ್ನೇನು ಪ್ಯಾಂಟಿನ ಮೇಲೆ ಬಿದ್ದು ಕಲೆ ಮಾಡಲಿದ್ದ ಅದನ್ನು ಮೆಲ್ಲಗೆ ಪಕ್ಕದಲ್ಲಿದ್ದ ಪಾತಿಗೆಸೆದು ತಪ್ಪಿತಸ್ಥ ಭಾವದಿಂದ ಅವರಿವರ ಕಡೆ ನೋಡಿದೆ. ಯಾರು ಗಮನಿಸದಿರುವುದು ನನ್ನ ಪುಣ್ಯ.

ಬೆನ್ನ ಹಿಂದೆ ಗನ್ನನ್ನು ತೂಗುಬಿಟ್ಟಿದ್ದ ವ್ಯಕ್ತಿಯೊಬ್ಬ ನಮ್ಮ ಕಡೆ ಸನ್ನೆ ಮಾಡಿದ ಒಳಗಡೆ ಬರುವಂತೆ. ಒಬ್ಬರ ಹಿಂದೆ ಒಬ್ಬರಂತೆ ಹೋದೆವು, ಪ್ರಾಂಗಣ ವಿಶಾಲವೂ ಸುಂದರವೂ ಆಗಿತ್ತು. ಗೋಡೆ ಮೇಲೆ ಮೂರಕ್ಕಿಂತ ಹೆಚ್ಚು ತೈಲವರ್ಣ ಚಿತ್ರಗಳಿದ್ದವು, ಕಡುಕೆಂಪುವರ್ಣದ ಕಾರ್ಪೆಟ್ಟಿನಿಂದ ಅಮೃತಶಿಲೆಯ ನೆಲವನ್ನು ಮರೆಮಾಚಲಾಗಿತ್ತು, ಅದರ ಮೇಲೆ ಯುದ್ಧಕ್ಕೆ ಸಂಬಂಧಿಸಿದ ರಜಪೂತ ಶೈಲಿಯ ರಾಜಸ್ಥಾನೀ ಕಲಾವಿದರು ರಚಿಸಿದ್ದ ಚಿತ್ರಗಳಿದ್ದವು, ತಾಸುಗಟ್ಟಲೆ ನಿಂತೂ ನಿಂತು ಕಾಲು ನೋಯುತ್ತಿದ್ದ ಪರಿಣಾಮವಾಗಿ ನಾನು ಹತ್ತಿರದ ಮೇಲೆ ಸೋಫಾದ ಕೂತಿದ್ದು ಮುಖ್ಯವಾಗಿ ಸ್ವಾಮಿದ್ವಯರಿಗೆ ಹಿಡಿಸಲಿಲ್ಲ, ಪಂಪಯ್ಯನ ಪರವಾಗಿ ರಾಘಪ್ಪ ಎದ್ದು ನಿಲ್ಲುವಂತೆ ನನ್ನ ಕಡೆ ಕಣ್ಸನ್ನೆ ಮಾಡಿದ. ಅದನ್ನು ನಿರ್ಲಕ್ಷಿಸಿ ತಿರುಗದೆ ನಿಶ್ಚಲವಾಗಿ ಫ್ಯಾನಿನ ಕಡೆ ನೋಡಿದೆ. ಸ್ವಲ್ಪ ಹೊತ್ತು ಕಳೆದ ಬಳಿಕ ಒಳಗಡೆಯಿಂದ ಬಂದ ವ್ಯಕ್ತಿಯೋರ್ವ ಗೌಡರ ಆಗಮನದ ಸುಳಿವು ನೀಡುವುದಕ್ಕೂ ಅವರು ಬರುವುದಕ್ಕೂ ಸರಿ ಹೋಯಿತು. ನಾನು ಎದ್ದು ನಿಂತು ನಮಸ್ಕಾರ ಸೂಚಕ ಭಂಗಿಯನ್ನು ಪ್ರದರ್ಶಿಸಿ

ಪುನಃ ಕೂತೆನು, ಗೌಡರು ಓಹೋ ಮೇಸ್ಟ್ರು ಎಂದು ಉದ್ಗರಿಸಿದರಲ್ಲದೆ ತಾವೂ ಕೂಡ್ರುತ್ತ ಸ್ವಾಮಿದ್ವಯರಿಗೂ ಕೂಡ್ರಲು ಸೂಚಿಸಿದರು. ಆದರೆ ನೆಲದ ಮೇಲೆ ಕೂಡ್ರುವುದೋ ಶ್ರೀಗಂಧದ ಬಾಗಿಲ ಬಳಿ ಇದ್ದ ಕಿಮ್ಮತ್ತಿನವು ಅಲ್ಲದ ಕುರ್ಚಿಗಳ ಮೇಲೆ ಕೂಡ್ರುವುದೋ, ಅಥವಾ ವಿಶಿಷ್ಟ ಭಂಗಿಯಲ್ಲಿ ಗೋಡೆಗಾತು ನಿಂತುಕೊಳ್ಳುವುದೋ! ಯೋಚಿಸಿದಾದ ಬಳಿಕ ನನ್ನ ಎರಡೂ ಪಕ್ಕ ಕುಳಿತರು.

++++

ನಿಮ್ಮ ಹತ್ತಿರ ಸುಳ್ಳು ಹೇಳಿ ನಾನ್ಯಾವ ನರಕಕ್ಕೆ ಹೋಗಲಿ ಸಾರ್! ನಾನು ನೋಡಿದ ಮನೆಯೇ ಬೇರೆ, ನೀವು ಹೋಗಿರುವ ಮನೆಯೇ ಬೇರೆ ಎಂದು ಹೇಳಿದ ನಂತರವೂ ಜಲಂಧರ ಆಣೆ ಪ್ರಮಾಣ ಮಾಡಲಿದ್ದ, ನಾನೇ ತಡೆದೆ. ಹೆಬ್ಬಟಂ ಗೌಡರಿಗಿರುವ ಬಳ್ಳಾರಿಯಲ್ಲಿನ ಮನೆಗಳು ನಾಲ್ಕಕ್ಕಿಂತ ಹೆಚ್ಚಿರುವವಂತೆ, ಅವುಗಳಲ್ಲಿ ಸ್ವಾಮಿದ್ವಯರೊಂದಿಗೆ ನಾನು ನೋಡಿದ ಮನೆ ತಂದೆಯದ್ದೋ ಮಗನದ್ದೋ! ಆ ಭಯವನ್ನು ಯಶಸ್ವಿಯಾಗಿ ಬಿತ್ತಿ ಬೆಳೆಯುವ ನಾಯಿಗಳೋ! ಸಶಸ್ತ್ರಧಾರಿ ಅಂಗರಕ್ಷಕರೋ! ಪೆನ್ನನ್ನೂ ಮಾರಕಾಸ್ತ್ರವೆಂದು ಅನುಮಾನಿಸುವ ಭೀತಸ್ಥ ಮನಸ್ಸುಗಳೋ! ಭಯದ ಅಲಗಿನ ಮೇಲಿನ ಸುಖದ ಸುಪ್ಪತ್ತಿಗೆಗೆ ಯಾವ ಅರ್ಥವಿದೆ! ಹಿಂಸೆಯ ಸಹವಾಸ ಮಾಡಿದವರು ಆಜೀವಪರ್ಯಂತರ ನರಕ ಯಾತನೆ ಅನುಭವಿಸುವುದು ಅನಿವಾರ್ಯವೆನ್ನುವುದಕ್ಕೆ ಅವರ ವೈಭವೋಪೇತ ಬದುಕೇ ಅತ್ಯುತ್ತಮ ನಿದರ್ಶನ. ಸ್ವಾಮಿದ್ವಯರ ಅಭಿಪ್ರಾಯವೇ ಬೇರೆ ಅವರೊಂದಿಗೆ ನನ್ನ ಒಡನಾಟದ ಅನುಭವಗಳೇ ಬೇರೆ! ಅವರ ಮ್ಯಾನರಿಜಮ್ಮೇ ವಿಚಿತ್ರ, ಅದು ಅಪಾಯಕಾರಿಯಲ್ಲದ ಮುಗ್ಧತೆ! ಹೇಗಾದರೂ ಬದುಕಲೇಬೇಕೆಂಬ ಛಲ! ಅವರಲ್ಲಿ ಒಬ್ಬರಾದರೂ ಹೊರ ಪ್ರಪಂಚವನ್ನು ನೋಡಿದ್ದರೆ ತಾನೆ! ನಾಗರಿಕರ ಸಂಗಡ ಒಡನಾಡಿದ್ದರೆ ತಾನೆ! ಅಕ್ಷರಗಳ ಆರೈಕೆಯಾಗಲೀ ಸಾಂತ್ವನವಾಗಲೀ ಅವರಿಗೆ ಒದಗಿದ್ದರೆ ತಾನೆ! ರಾಘಪ್ಪಗೆ ಅಮೇರಿಕಾದ ಹೆಸರು ತಿಳಿದಿದ್ದರೂ ತಿಳಿದಿರಬಹುದು, ಆದರೆ ಪಂಪಯ್ಯಗೆ ತನ್ನ ದೇಶ ಭಾರತ ಎಂದು ತಿಳಿದಿದ್ದರೆ ತಾನೆ! ಅಂಥವರ ಆ ಸ್ಥಿತಿಗೆ ಹೆಬ್ಬಟಂ ಗೌಡರಂಥ ಜಮೀನ್ದಾರರ ಕ್ರೌರ್ಯವೇ ಕಾರಣ, ಅಂಥವರ ತಲೆಯೊಳಗಿನ ಮಿದುಳುಗಳ ಕಾಮಗಾರಿ ನಡೆಯದಿರುವುದು ಅದಕ್ಕೆ ಕಾರಣ. ಅವರು ನನ್ನ ತಲೆಯೊಳಗಿನ ಆಲೋಚನೆಗಳನ್ನೂ ತಮ್ಮ ಮೂಗಿನ ನೇರಕ್ಕೆ ತಿದ್ದಲು ನೋಡಿದರಲ್ಲವೆ! ನನ್ನನ್ನೂ ಕವಲೆತ್ತನ್ನಾಗಿ ಪರಿವರ್ತಿಸಲು ಪ್ರಯತ್ನಿಸಿದರಲ್ಲವೆ! ಅವರು ಹೇಳಿದ್ದೇ ಬೇರೆ ಗೌಡರು ಇರುವುದೇ ಬೇರೆ! ಕಾಣಿಸಿಕೊಂಡೊಡನೆ ಕೂಡ್ರಲು ಹೇಳಿದರು, ತಮ್ಮ ನಿರ್ದೇಶನದಲ್ಲಿ ಊಟ ಬಡಿಸಿದರು, ಯೋಗಕ್ಷೇಮ ವಿಚಾರಿಸಿದರು, ಕಷ್ಟಸುಖಗಳನ್ನು ಪರಾಂಬರಿಸಿದರು, ಹೆಗಲ ಮೇಲೆ ಕೈ ಹಾಕಿ ಅಪ್ಯಾಯತೆಯಿಂದ ಸ್ಪರ್ಶಿಸಿದರು, ತಮ್ಮ ಕುಟುಂಬ ಸದಸ್ಯರಿಗೆ ಪರಿಚಯಿಸಿದರು, ನನ್ನ ಕಥೆಗಳನ್ನು ಶ್ಲಾಘಿಸಿದರು ತಾವು ಓದಿರದಿದ್ದರೂ! ಒಂದೆರಡು ಸಲ ಭಾಷಣವನ್ನು ತದೇಕಚಿತ್ತದಿಂದ ಆಲಿಸಿದರು, ಕಂದಪದ್ಯಗಳನ್ನು ಹೇಳುವಾಗ ತಡವರಿಸಿದರು, ಬಳಿಕ ಸರಿಪಡಿಸಿಕೊಂಡರೇನೋ ಸರಿ, ಆದರೆ ಸ್ವಲ್ಪ ಹೊತ್ತ ಮೌನದಿಂದಿದ್ದು ಏನನ್ನೋ ಯೋಚಿಸಿ ಕೆಲವು ಮಾರ್ಪಾಡುಗಳನ್ನು ಸೂಚಿಸಿದರು.

ಆ ಒಂದು ಸಂಜೆ ಸಮಯದಲ್ಲಿ ನನ್ನನ್ನು ತಮ್ಮ ಬೇರೊಂದು ಮನೆಗೆ ಕರೆದೊಯ್ದರು, ಆದರೆ ಅದು ಮೂರು ಕೋಣೆಗಳ ಪುಟ್ಟ ಮನೆ. ಅಲ್ಲಿ ಆಳುಕಾಳುಗಳ ಹೊರತಾಗಿ ತಮ್ಮ

ಕುಟುಂಬದ ಸದಸ್ಯರು ಇರಲಿಲ್ಲ. ಗೋಡೆಗಳ ಮೇಲೆ ಯೋಗಾಸನಕ್ಕೆ ಸಂಬಂಧಿಸಿದ ಕೆಲವು ಚಿತ್ರಪಟಗಳಿದ್ದವು, ಜೊತೆಗೆ ಧ್ಯಾನಮುದ್ರೆಯಲ್ಲಿದ್ದ ಸಾಧು ಸಂತರ ಭಾವ ಚಿತ್ರಗಳೂ ಇದ್ದವು, ವಿಚಿತ್ರವೆಂದರೆ ಅವುಗಳ ಪಕ್ಕದಲ್ಲಿಯೇ ಎರಡು ಬಂದೂಕುಗಳನ್ನು ಇಂಟುಮಾರ್ಕಾಕಾರದಲ್ಲಿ ಅಲಂಕರಿಸಲಾಗಿತ್ತು, ಮೂಲೆಯಲ್ಲಿದ್ದ ಟೇಬಲ್ ಮೇಲೆ ಅಲೋಪಥಿಕ್ ಔಷಧಿಗಳೊಂದೇ ಅಲ್ಲದೆ ಗಿಡಮೂಲಿಕೆಗಳ ಚೂರ್ಣಗಳ ಬಾಟಲಿಗಳಿದ್ದವು,ಅದನ್ನು ತಮ್ಮ ಏಕಾಂತಕ್ಕೆಂದೇ ಕಟ್ಟಿಸಿಕೊಂಡಿರಬಹುದೆಂದು ಊಹಿಸಿದೆ. ಆದರೆ ಅವುಗಳನ್ನೆಲ್ಲ ನೋಡಿಯೂ ನೋಡದವನಂತೆ ಎಚ್ಚರವಹಿಸಿದೆ. ತಮ್ಮೆದುರಿಗೆ ಕೂತಿದ್ದ ನನ್ನತ್ತ ತನ್ನ ಮಗುವಿನ ಕಡೆ ನೋಡುವ ತಾಯಿಯಂತೆಯೋ, ರೋಗಿಯೋರ್ವ ತನ್ನ ವೈದ್ಯನ ಕಡೆ ನೋಡುವಂತೆಯೋ, ಅದೇ ತಾನೆ ಮರಣ ದಂಡನೆಗೊಳಗಾದ ಖೈದಿ ತನ್ನ ನ್ಯಾಯಾಧೀಶನ ಕಡೆ ನೋಡುವಂತೆಯೋ ನೋಡಿದರು. ನೋಡು ನೋಡುತ್ತಲೇ ತಮ್ಮ ಕಣ್ಣುಗಳನ್ನು ಬಾಷ್ಪದಿಂದ ತುಂಬಿಕೊಂಡರು, ಏನನ್ನೋ ಹೇಳುವ ಸಲುವಾಗಿ ತಡವರಿಸಿ ಮಾತುಗಳನ್ನು ಹಾಗೆ ನುಂಗಿಕೊಂಡರು. ಆ ಕ್ಷಣ ಅವರನ್ನು ಆಲಂಗಿಸಿ ಸಾಂತ್ವನದ ನಾಲ್ಕು ಮಾತುಗಳನ್ನು ಹೇಳುವ ಮನಸ್ಸಾಯಿತಾದರೂ ಅದು ನೆರವೇರಲಿಲ್ಲ. ನೀವು ನಿಮ್ಮ ಅಂತರಂಗದ ಸಾಗುವಾನಿಯನ್ನು ಕೊರೆಯುತ್ತಿರುವ ಟಿಟ್ಟಿಬಗಳನ್ನು ಮಾತಾಗಿ ಪರಿವರ್ತಿಸಿ ಹೇಳಿಕೊಂಡು ಹಗರಾಗಿ ಎಂದು ಹೇಳಿಕೊಳ್ಳುವ ಮನಸ್ಸಾಯಿತಾದರೂ ಅದೂ ನೆರವೇರಲಿಲ್ಲ, ಹೇಮರೆಡ್ಡಿ ಮಲ್ಲಮ್ಮ ನಾಟಕದ ಶತದಿನೋತ್ಸವ ಸಮಾರಂಭವನ್ನು ಅದ್ಧೂರಿಯಾಗಿ ಆಚರಿಸುವುದಕ್ಕೆ ಬದಲು ಸರಳವಾಗಿ ಆಚರಿಸಿ ಎಂದು ಸಲಹೆ ನೀಡಬೇಕೆಂದು ಯೋಚಿಸಿದೆನಾದರೂ ಅದೂ ನೆರವೇರಲಿಲ್ಲ, ನೀವು ನಿಮ್ಮ ಮಗನನ್ನು ರಾಜಕೀಯಕ್ಕೆ ಸೇರಿಸುವ ಬದಲು ಹೃಷಿಕೇಶದಲ್ಲಿರುವ ಸ್ವಾಮಿ ರಾಮಾನಂದರ ಆಶ್ರಮಕ್ಕೆ ಶಾಶ್ವತವಾಗಿ ಸೇರಿಸಿಬಿಡಿ ಎಂದು ಹೇಳಲು ಪ್ರಯತ್ನಿಸಿದೆನಾದರೂ ಅದೂ ನೆರವೇರಲಿಲ್ಲ. ಆದರೆ ನನ್ನ ಭಾವನೆಗಳನ್ನು ಅರ್ಥ ಮಾಡಿಕೊಂಡವಂತೆ ನಿಡಿದಾದ ಉಸಿರು ಚೆಲ್ಲಿದರು, ವಿಧವೆ ತನ್ನ ಗತಿಸಿದ ಗಂಡನನ್ನು ನೆನಪಿಸಿಕೊಂಡು ರೋಧಿಸಿದರೇನೋ ಪ್ರಯೋಜನ! ಜಮೀನ್ದಾರಿ ವ್ಯವಸ್ಥೆಯೆಂಬ ಶಾರ್ದೂಲದ ಕೋರೆದಾಡೆಗಳಲ್ಲಿ ಸಾವಿನ ಕ್ಷಣಗಳನ್ನೆಣಿಸುತ್ತಿರುವ ಸಸ್ಯಾಹಾರಿ ಪ್ರಾಣಿಯಂತೆ ಗೋಚರಿಸಿದರು.

ಕೊನೆಗೆ ಚೇತರಿಸಿಕೊಂಡು "ಮೇಸ್ಟ್ರೆ ಬೇಸಿಗೆ ರಜೆಯಲ್ಲಿ ಎಲ್ಲಿಗೆ ಹೋಗುವಿರಿ?" ಎಂದು ಕೇಳಿದರು. ಹಾಗೆ ಅವರು ಕೇಳಿದ್ದು ಯಾಕೆಂದು ನನಗೆ ಅರ್ಥವಾಗಲಿಲ್ಲ. ಎಲ್ಲಿಗೆಂದು ಹೇಳಲಿ!

"ನಮ್ಮೂರಿಗೆ ಧಣಿ" ಎಂದು ತಡವರಿಸದೆ ಹೇಳಿದೆ.

"ಈ ಸಲ ನೀವು ಅಲ್ಲಿಗೆ ಹೋಗುವುದು ಬೇಡ, ಎರಡು ತಿಂಗಳುಗಳ ಕಾಲ ನಮ್ಮೊಂದಿಗಿರಿ" ಎಂದರು. ಅವರ ಆಪೇಕ್ಷೆಯಿಂದ ನನಗೆ ಗಾಬರಿಯಾಗದೆ ಇರಲಿಲ್ಲ. ಕಾರಣ ಮೃತ್ಯುವಿನ ನಿಗಾವಣೆಯಲ್ಲಿರುವಂಥ ಫ್ಯಾಕ್ಟನಿಷ್ಟುಗಳ ಜೊತೆಯಲ್ಲಿರುವುದೆಂದರೆ ಸಾವಿನ ದವಡೆಯಲ್ಲಿದ್ದಂತೆ! ಅದೂ ಅಲ್ಲದೆ ಕಳೆದ ಮೂರು ದಿವಸಗಳಿಂದ ದುಃಸ್ವಪ್ನಗಳ ಹಾಸಿಗೆ ಮೇಲೆ ಮಲಗುತ್ತಿರುವುದು, ದುಃಸ್ವಪ್ನಗಳನ್ನೇ ಚಾದರಗಳನ್ನು ಮಾಡಿಕೊಂಡು ಹೊದ್ದು ಮಲಗುತ್ತಿರುವುದು! ಹೊಂಚಿರುವ ಕುಶಲ ಸೇಡುಗಾರರು ಸಹವರ್ತಿಯ ಚಿಕ್ಕಪುಟ್ಟ ಪ್ರಾಣಿಗಳನ್ನು ಮುಗಿಸುವ ಮೂಲಕವೇ ಮುಖ್ಯ ಬೇಟೆಯ ಜಂಘಾಬಲವನ್ನು ಉಡುಗಿಸುವುದು ಮಾಮೂಲು ತಾನೆ! ಹೀನ ಕೃತ್ಯಗಳನ್ನು ಪರಾಮರ್ಶಿಸಿದರೆ ಹೆಬ್ಬಟಂ ಗೌಡರು ತಮ್ಮ ಇಳಿಗಾಲದ ಸಂಭ್ರಮವನ್ನು ಆಚರಿಸಿಕೊಳ್ಳುತ್ತಿರುವುದೇ ಪರಮಾಶ್ಚರ್ಯಕರ. ಅಂಥಾದ್ದರಲ್ಲಿ ಇಂಥವರ ಸಂಗಡ

ತಿಂಗಳುಗಳನ್ನು ಕಳೆಯುವುದೆಂದರೆ, ಅದೂ ನಿಷ್ಕಾರಣವಾಗಿ! ಆದರೂ ಇಂಥ ವಿಲೋಮ ಭಾವನೆಗಳನ್ನು ಮುಖದಲ್ಲಿ ಪ್ರಕಟವಾಗದಂತೆ ಎಚ್ಚರ ವಹಿಸಿದೆ. ಸೂಕ್ಷ್ಮಮತಿಗಳಾದ ತಾವು ನನ್ನ ಒಳಗುದಿಯನ್ನು ಅರ್ಥ ಮಾಡಿಕೊಂಡವರಂತೆ "ನೀವು ಆತಂಕಪಡುವ ಅಗತ್ಯವಿಲ್ಲ ಮೇಸ್ಟ್ರೆ! ರಜೆ ಬಿಡುವುದು ಬೇಸಿಗೆಯಲ್ಲಿ ತಾನೆ! ಈ ರಾಯಲಸೀಮೆ ಬಿಟ್ಟು ಊಟಿಗೋ, ಕೊಡೈಕೆನಾಲಿಗೋ, ರಮಣ ಮಹರ್ಷಿಗಳ ತಿರುವಣ್ಣಾಮಲೈಗೋ ಹೋಗೋಣವಂತೆ" ಎಂದು ಹೇಳಿದರು. ಅದನ್ನು ಕೇಳಿದ ನನಗೆ ಇನ್ನೂ ಆಶ್ಚರ್ಯವಾಯಿತು, ಆ ಎರಡೂ ಸುಂದರ ನೈಸರ್ಗಿಕ ಪ್ರವಾಸಿಧಾಮಗಳಿಗೆ ಹೊರಡುವುದು ಒತ್ತಟ್ಟಿಗಿರಲಿ, ಕನಸಿನಲ್ಲೂ ಊಹಿಸಿಕೊಳ್ಳುವುದೂ ಸಾಧ್ಯವಿರಲಿಲ್ಲ. ಆದರೆ ಅಷ್ಟು ದೂರ ಹೋಗಿ ಸುದೀರ್ಘವಾಗಿರಲು ಕಾರಣಗಳ ನೆರವಿರುವುದು ಮುಖ್ಯ ತಾನೆ!

"ತಮ್ಮ ಮಾತಿಗೆ ಬದಲು ನುಡಿಯುವ ಶಕ್ತಿಯಿಲ್ಲ ಧಣಿ, ಆದರೆ ಅದೆಲ್ಲ ಯಾಕೇಂತ!" ಎಂದು ಹೇಳು ಹೇಳುತ್ತಲೇ ಉಗುಳು ನುಂಗಿದೆ.

"ಹೇಳಲು ಕಾರಣಗಳು ಒಂದೇ ಎರಡೇ! ಒಮ್ಮೊಮ್ಮೆ ನಮ್ಮ ಬಗ್ಗೆ ನಮಗೇ ಬೇಸರವಾಗ್ತದೆ ಮೇಸ್ಟ್ರೆ! ನಮಗಂತೂ ಸಾಕಾಗಿದೆ ಈ ಬದುಕು, ಆ ದೇವರು ನಮ್ಮನ್ನ ಇವತ್ತು ಒಯ್ಯಬಹುದು ನಾಳೆ ಒಯ್ಯಬಹುದೂಂತ ಕಾದೂ ಕಾದು ಸಾಕಾಯ್ತು, ಅವನಿಗಂತೂ ಕರುಣೆ ಇಲ್ಲ, ಆದರೆ ನಮ್ಮ ವೈರಿಗಳಿಗಾದರೂ ಕರುಣೆ ಇರುವುದು ಬೇಡವೇನು! ಆಯುಷ್ಯ ಗಟ್ಟಿ ಇರುವಾಗ ಸಹಜ ರೀತಿಯಲ್ಲಿ ಸಾಯುವುದಾಗಲೀ, ಕೊಲ್ಲಿಸಿಕೊಳ್ಳುವುದಾಗಲೀ ಸುಲಭವಲ್ಲ ಮೇಸ್ಟ್ರೆ!" ಎಂದು ಹೇಳು ಹೇಳುತ್ತಲೇ ತಮ್ಮ ಮುಖವನ್ನು ಬಿಗಿದರು, ತಾವು ಸೃಷ್ಟಿಸಿಕೊಂಡಿರುವ ವೈರಿಗಳನ್ನೂ, ಅವರೆಲ್ಲ ತಮ್ಮನ್ನು ಮುಗಿಸಲೆಂದು ಕಳಿಸಿರುವ ಸುಪಾರಿ ಕೊಲೆಗಡುಕರನ್ನೂ, ಅವರನ್ನು ಅಲ್ಲಲ್ಲಿಯೇ ಮುಗಿಸುವ ಸಲುವಾಗಿ ತಾವು ಕಳಿಸಿರುವ ನಂಬಿಗಸ್ಥ ಭಂಟರನ್ನೂ ನೆನಪಿಸಿಕೊಳ್ಳುತ್ತಲೇ ತಮ್ಮೆರಡೂ ಮುಂಗೈಗಳನ್ನು ತಮ್ಮ ಚೂಪನೆಯ ಗದ್ದದ ಮೇಲಿರಿಸಿಕೊಂಡು ಒಂದರಗಳಿಗೆ ಕಣ್ಣು ಮುಚ್ಚಿ ತೆರೆದರು, ಎಲ್ಲ ದೈವೇಚ್ಛೆ ಎಂದು ಹೇಳಿದಾದ ಬಳಿಕ ಇನ್ನೊಂದು ನಿಟ್ಟುಸಿರುಬಿಟ್ಟರು.

ಪುನಃ ತಾವೇ "ನನ್ನ ಕಥೆಯನ್ನು ಯಾರೆದುರಾದರೂ ಹೇಳಿಕೊಳ್ಳಬೇಕೆಂದು ಬಹಳ ವರ್ಷಗಳಿಂದ ಅಂಥವರಿಗಾಗಿ ಹುಡುಕುತ್ತಲೇ ಇರುವೆವು ಮೇಸ್ಟ್ರೆ, ಆ ಅರ್ಹತೆ ಯಾರೊಬ್ಬರಲ್ಲೂ ಇಲ್ಲವೇ ಇಲ್ಲ. ನೀವು ಬರೆದಿರುವ ಭಾಷಣಗಳನ್ನು ಕೇಳಿಸಿಕೊಂಡ ಬಳಿಕ ಅರ್ಥವಾಯಿತು ನೀವೇ ಅದಕ್ಕೆ ಸೂಕ್ತ ವ್ಯಕ್ತಿ ಅಂತ. ನಾವಿರುವುದೇ ಬೇರೆ, ಈ ಹಾಳಾದ ಸಮಾಜ ನಮ್ಮನ್ನು ಅರ್ಥ ಮಾಡಿಕೊಂಡಿರುವುದೇ ಬೇರೆ, ನಾವು ಫ್ಯಾಕ್ಷನಿಷ್ಟ್ ಮಂದಿ, ಬದುಕುವ ಸಲುವಾಗಿ ನಾವು ಯಾರನ್ನು ಕೊಲೆ ಮಾಡಿಸುವೆವೋ, ನಮ್ಮನ್ನು ಯಾರು ಯಾವ್ಯಾಗ ಕೊಲೆ ಮಾಡುವವರೋ! ಸಾಯುವುದಕ್ಕೂ ಮೊದಲು ನಿಮ್ಮಂಥವರಿಗೆ ಎಲ್ಲಾನು ಹೇಳಿಕೊಳ್ಳುವ ಆಸೆ, ಅದನ್ನು ನೀವು ಬರೆದು ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆನ್ನುವ ಆಸೆ. ಅದನ್ನು ಓದಿ ಜನ ನಮ್ಮ ಗೌಡ ಒಳ್ಳೆಯವನಿದ್ದನಲ್ಲ ಎಂದು ಉದ್ಗರಿಸಿದರಷ್ಟೇ ಸಾಕು" ಎನ್ನುತ್ತ ಸಮಾಧಾನದ ಉಸಿರುಬಿಟ್ಟರು, ನಿರಾಳತೆಯಿಂದ ಹಿಂದಕ್ಕೆ ಒರಗಿದರು. ಅವರ ಮಾತುಗಳನ್ನು ಸಂದೇಹಿಸುವುದು ಅನುಚಿತವೆನಿಸಿತು, ತಮ್ಮ ಕಥೆಯನ್ನು ಹೇಳುವ ಸಲುವಾಗಿ ಆಯ್ಕೆ ಮಾಡಿಕೊಂಡಿದ್ದು ಸೌಭಾಗ್ಯವೆಂದು ನಾನು ಭಾವಿಸಲಿಲ್ಲ. ಬೇಸಿಗೆ ರಜೆ ಏನು ಹತ್ತಿರದಲ್ಲಿಲ್ಲ, ಮುಂದೆ ಅವರು ತಮ್ಮ ಕಥೆಯನ್ನು ಹೇಳಿಕೊಳ್ಳುವರೋ ಇಲ್ಲವೋ!

ಸಮಯಕ್ಕೊದಗಿ ನಾನು ಕೇಳಿಸಿಕೊಳ್ಳುವೆನೋ ಇಲ್ಲವೋ! ಆದರೆ ತಮ್ಮ ಕೃತ್ಯಗಳ ಬಗ್ಗೆ ತಮ್ಮ ಅಂತರಂಗದಲ್ಲಿ ಪಾಶ್ಚಾತ್ತಾಪ ಅನುಭವಿಸುತ್ತಿರುವರಲ್ಲ ಅಷ್ಟೇ ಸಾಕೆನ್ನಿಸಿತು. ಅವರ ಕಡೆ ಅಭಿಮಾನದಿಂದ ನೋಡಿದೆ. ಸೌಜನ್ಯಯುತ ರೀತಿಯಲ್ಲಿ ಒಪ್ಪಿಗೆಯನ್ನೂ ಸೂಚಿಸಿದೆ.

ಈ ಘಟನೆ ಸಂಕೋಚ ಕಳಚಲು ಅನುವು ಮಾಡಿಕೊಟ್ಟಿತು. ನಮ್ಮಿಬ್ಬರ ನಡುವೆ ತುಸು ಸಲಿಗೆಯನ್ನೂ ಹೆಚ್ಚಿಸಿತು, ಮೈ ಚಳಿ ಬಿಟ್ಟು ಹೇಳುವುದು ಕೇಳುವುದು ಸಾಧ್ಯವಾಯಿತು. ಸ್ವಾಮಿದ್ವಯರು ಅನ್ಯಥಾ ಭಾವಿಸಿರುವಂತೆ ಗೌಡರ ನಾಲಗೆ ದಪ್ಪವಿರಲಿಲ್ಲ, ಕನ್ನಡವನ್ನು ಹೊರತು ಪಡಿಸಿದರೆ ತೆಲುಗು ಭಾಷೆಯ ಮೇಲೆ ಅವರಿಗೆ ನಿಯಂತ್ರಣವಿತ್ತು, ಆ ಎರಡೂ ಭಾಷೆಗಳ ಸಮ್ಮಿಶ್ರಣದ ಭಾಷಣವನ್ನು ಸಿದ್ದಪಡಿಸಿ ಅವರನ್ನೊಪ್ಪಿಸಿದೆ, ಅವರಿಂದ ಬಾಯಿಪಾಠವನ್ನೂ ಮಾಡಿಸಿದೆ, ಆದರೆ ಅವರ ಮಗ ಸೂರ್ಯಪ್ರತಾಪರೆಡ್ಡಿ ಕುರಿತಂತೆ ಹೇಳುವುದಾದರೆ!

++++

ಅರೆ! ಇನ್ನೊಂದು ಮಾತನ್ನು ಮರೆತಿದ್ದೆನು, ಅದೆಂದರೆ..

ಹೆಬ್ಬಟಂ ಗೌಡರು ಕೊನೇ ಕ್ಷಣದವರೆಗೆ ನನ್ನ ಅಂತರಂಗವನ್ನು ಆವರಿಸಲು ಶಕ್ತಿ ಮೀರಿ ಶ್ರಮಿಸಿದರು. ಅವರನ್ನು ನನ್ನೊಳಗೂ, ಅವರು ನನ್ನನ್ನು ತಮ್ಮೊಳಗೂ, ಕ್ಯಾಡಿಲಾಕ್‌ನಲ್ಲಿ ಹತ್ತಿಸುವಾಗ ತಾವೇ ಖುದ್ದ ಬಾಗಿಲನ್ನು ತೆರೆದರು, ತಮ್ಮೆರಡೂ ಕೈಗಳಿಂದ ನನ್ನೆರಡೂ ಕೈಗಳನ್ನು ಬಲವಾಗಿ ಹಿಡಿದುಕೊಂಡರು, ಒಂದು ಕ್ಷಣ ಕಣ್ಣು ಮುಚ್ಚಿ ತೆರೆದರು, ವಶೀಕರಣ ವಿದ್ಯೆಯಲ್ಲಿ ಪಾರಾಂಗತರಂತೆ ನನ್ನನ್ನು ಅಪಾದಮಸ್ತಕ ದಿಟ್ಟಿಸಿದರು, ಡ್ರೈವರು ತುಸು ದೂರದಲ್ಲಿ ತನ್ನ ತಲೆ ಮೇಲಿನ ಸಮವಸ್ತ್ರಕ್ಕೆ ಸಂಬಂಧಿಸಿದ ಕ್ಯಾಪನ್ನು ಸರಿಪಡಿಸಿಕೊಳ್ಳುತ್ತ ಬರುತ್ತಿರುವುದನ್ನು ಖಚಿತಪಡಿಸಿಕೊಂಡು ಪ್ರವಾಸದ ವಿಷಯವನ್ನು, ತಮ್ಮಿಬ್ಬರ ನಡುವೆ ನಡೆದ ಮಾತುಕತೆಯನ್ನು ಗೋಪ್ಯವಾಗಿರಿಸುವಂತೆ ಕೇಳಿಕೊಂಡರು. ಜಲಂಧರನ ನಾಟಕ ಕಂಪನಿ, ಅದರಲ್ಲೂ ಮುಖ್ಯವಾಗಿ ಹೇಮರೆಡ್ಡಿ ಮಲ್ಲಮ್ಮನ ಕಥೆಯನ್ನು ಪ್ರಾರಂಭಿಸಿದಂದಿನಿಂದ ತಮಗೂ ತಮ್ಮ ಕುಟುಂಬಕ್ಕೂ ಒಳ್ಳೆಯದಾಗಿರುವುದೆಂದು ಪ್ರಾಂಜಲತೆಯಿಂದ ಹೇಳಿದರು. ಅದಕ್ಕೆ ಸಂಬಂಧಿಸಿದ ಋಣ ಸಂದಾಯ ಮಾಡುವ ಸಲುವಾಗಿಯೇ ತಾವು ಆ ನಾಟಕ ಪ್ರದರ್ಶನದ ಶತದಿನೋತ್ಸವ ಸಮಾರಂಭವನು ಅದ್ದೂರಿ ರೀತಿಯಲ್ಲಿ ಆಚರಿಸುತ್ತಿರುವುದಾಗಿ ಹೇಳಿಕೊಂಡರು. ಡ್ರೈವರ್ ಕಾರನ್ನು ಪ್ರವೇಶಿಸಿ ಸುಖಾಸೀನನಾಗಿ ಬೆಲ್ಟನ್ನು ಕಟ್ಟಿಕೊಳ್ಳುತ್ತಿರುವುದನ್ನು ಗಮನಿಸುತ್ತಲೇ ಜಲಂಧರ ಸಮ್ಮತಿಸಿದಲ್ಲಿ ಆತನನ್ನೂ, ಆತನ ತಂಗಿ ಪದ್ಮಾವತಿಯನ್ನೂ ತಮ್ಮ ವಾಗಿಲಿಯ ಖಾಯಂ ಸದಸ್ಯರನ್ನಾಗಿರಿಸಿಕೊಳ್ಳುವ ಇರಾದೆಯನ್ನೂ ವ್ಯಕ್ತಪಡಿಸಿದರು, ತಾವು ಅವರಿಗೆ ಒಂಚೂರು ಹೊಲ ಮನೆಯನ್ನು ಕೊಡುವುದು ದೊಡ್ಡ ವಿಷಯವಲ್ಲ, ಮುಖ್ಯವಾಗಿ ಅಲೆಮಾರಿಗಳಾದ ಅವರು ಒಪ್ಪುವುದು ಮುಖ್ಯವೆಂದು ಹೇಳಿದರು, ಅವರ ಮಾತಿಗೆ ಏನು ಹೇಳುವುದೆಂದು ತಿಳಿಯದೆ ಮೌನ ವಹಿಸಿದೆ, ಬಳಿಕ ತಮ್ಮದು ದೊಡ್ಡ ಮನಸ್ಸೆಂದೂ ಹೇಳಿದೆ. ಅವರೆರಡು ಆಸ್ಟ್ರೇಲಿಯನ್ ರಿಟ್ರೀವರುಗಳು ಅಪ್ಯಾಯತೆಯಿಂದ ಬಾಲ ಅಲ್ಲಾಡಿಸುತ್ತಿರುವಷ್ಟರಲ್ಲಿ, ಅವರ ಗನ್ ಮ್ಯಾನುಗಳು ಮುವ್ವರು ಬಂದೂಕುಗಳನ್ನು ಕೈಯಲ್ಲಿ ಹಿಡಿದು ನಮಸ್ಕಾರದ ಭಂಗಿಯಲ್ಲೋ, ಆಶೀರ್ವಾದದ ಭಂಗಿಯಲ್ಲೋ ನೋಡುತ್ತಿರುವಷ್ಟರಲ್ಲಿ ಕಾರು ಚಲಿಸುತ್ತ ಮನೆಯ ಪ್ರಹರಿ ಗೋಡೆಯನ್ನು ದಾಟಿದಾದ ಬಳಿಕ ವೇಗವನ್ನು ವೃದ್ಧಿಸಿಕೊಳ್ಳುತ್ತ ಮುಖ್ಯ ರಸ್ತೆಯನ್ನು ಪ್ರವೇಶಿಸಿತು. ಬಣ್ಣದ ಗ್ಲಾಸುಗಳಿದ್ದ ಕಾರಣಕ್ಕೆ

ಒಳಗಿದ್ದ ನಾವು ಹೊರಗಡೆ ನೋಡಿದಷ್ಟು ಸುಲಭವಿರಲಿಲ್ಲ, ಹೊರಗಿನವರು ನಮ್ಮನ್ನು ನೋಡುವುದು! ಸಮಪ್ರಮಾಣದ ವ್ಯಕ್ತಿತ್ವದ ಡ್ರೈವರನ ಹೆಸರು ಸೇರಿದಂತೆ ಅವನ ಪೂರ್ವಾಪರ ತಿಳಿದುಕೊಳ್ಳುವ ಕುತೂಹಲ ನನ್ನಲ್ಲಿತ್ತು, ಯಾಂತ್ರಿಕವಾಗಿ ಡ್ರೈವ್ ಮಾಡುತ್ತಿದ್ದ ಅವನು ತನ್ನ ಕಣ್ಣಳತೆಯಲ್ಲಿದ್ದ ಪುಟ್ಟು ಕಿಟಿಕಿ ಮೂಲಕ ನನ್ನ ಮುಖದ ಭಾವನೆಗಳ ಆಳ ಅಗಲಗಳನ್ನು ಅಳೆಯುತ್ತಿದ್ದ, ಆದರೆ ನನ್ನ ಕುರಿತಂತೆ ತನಗೂ ಯಾವುದೇ ಕುತೂಹಲವಿರಲಿಲ್ಲ, ಅಲ್ಲಲ್ಲಿದ್ದ ಟ್ರಾಫಿಕ್ ಪೋಲಿಸರು ಕಾರನ್ನು ಗುರುತಿಸಿ ಒಳಗಿರುವುದು ಗೌಡರೇ ಎಂದು ಅನ್ಯಥಾ ಭಾವಿಸಿ ನಮಸ್ಕರಿಸುತ್ತಿದ್ದದು ಸಹಜವಾಗಿದ್ದರೂ ವಿಚಿತ್ರವೆನ್ನಿಸಿತು, ಟ್ರಾಫಿಕ್ಕಿಗೆ ಸಂಬಂಧಿಸಿದ ನೀತಿ ಸಂಹಿತೆಯನ್ನು ಲೀಲಾಜಾಲವಾಗಿ ಉಲ್ಲಂಘಿಸುತ್ತಲೇ ಕಾರು ನಿಲ್ದಾಣವನ್ನು ಸಮೀಪಿಸಿದ್ದು. ಕಾರಿನಿಂದ ಇಳಿದು ಬಸ್ಸನ್ನು ಹತ್ತುವವರೆಗೆ ಜೀವದಲ್ಲಿ ಜೀವವಿರಲಿಲ್ಲ. ಪ್ರಯಾಣದುದ್ದಕ್ಕೂ ಗೌಡರ ಮಾತುಗಳು ಕಾಡಿದವು. ಹಾಗೆಯೇ ಅಹಂಕಾರದ ಮೊಟ್ಟೆಯಂತಿರುವ ಅವರ ಮಗ ಪ್ರತಾಪರೆಡ್ಡಿಯ ನೆನಪೂ ಕಾಡದೆ ಇರಲಿಲ್ಲ. ಬಾಷಣದ ನೆಪದಲ್ಲಿ ಗೌಡರು ಮಿತ್ರ ಚೌಗಲೆಯ ಆಸೆಯನ್ನು ಪುರಸ್ಕರಿಸಿದರಲ್ಲ ಅಷ್ಟೇ ಸಾಕೆನಿಸಿತು. ವಾಗಿಲಿಗೆ ಮರಳಿದೊಡನೆ ಗೌಡರೊಂದಿಗೆ ಮೂರು ದಿವಸಗಳ ಕಾಲ ಒಡನಾಡಿದ ನೆನಪುಗಳಂತೂ ಸದಾ ಸ್ಮರಣೀಯ. ಅದೂ ನನ್ನಂಥ ಯಾವುದೇ ಸೃಜನಶೀಲ ಲೇಖಕರಿಗೆ ಗೌಡರಂಥ ಜಮೀನ್ದಾರರ, ಸ್ವಾತಂತ್ರೋತ್ತರ ಭಾರತದ ಅನಭಿಷಕ್ತ ದೊರೆಗಳ, ಹಿಂಸೆಯ ಮೂಲಕ ಬದುಕುತ್ತಿರುವವರ, ಹಿಂಸೆಯ ರಾಯಭಾರಿಗಳಾಗಿರುವವರ ಅನುಭವಗಳು ತವನಿಧಿಗಳೆನ್ನುವುದರಲ್ಲಿ ಸಂದೇಹವಿಲ್ಲ, ಆಪೇಕ್ಷೆಯಂತೆ ಅವರೊಂದಿಗೆ ಪ್ರವಾಸದ ನೆಪದಲ್ಲಿ ಹಲವು ದಿವಸಗಳ ಕಾಲ ಒಡನಾಡಬೇಕು, ಅವರ ಬದುಕಿನ ಪೂರ್ವಾಪರವನ್ನು ಜಾಲಾಡಬೇಕು, ಆ ಅನುಭವಗಳ ನೆಲೆಯಲ್ಲಿ ಒಳ್ಳೆಯ ಕಾದಂಬರಿಯನ್ನು ಬರೆದು ಭಾರತದಲ್ಲಿ ಅದರಲ್ಲೂ ರಾಯಲಸೀಮೆಯಲ್ಲಿ ಮೃಗೀಯ ಸಮಾಜ ಇನ್ನೂ ಅಸ್ತಿತ್ವದಲ್ಲಿರುವುದೆಂದು ವಾಚಕರಿಗೆ ಮನವರಿಕೆ ಮಾಡಿಕೊಡಬೇಕು, ಅವರನ್ನು ಮಾನಸಿಕವಾಗಿ ವೈಚಾರಿಕಗೊಳಿಸಬೇಕು.

ವಾಗಿಲಿ ತಲುಪಿದಾಗ ಸಂಭ್ರಮ ಎಲ್ಲಂದರಲ್ಲಿ ಕಾಣಿಸಿಕೊಂಡಿತ್ತು, ನಾನು ಕನಸು ಮನಸಿನಲ್ಲೂ ಊಹಿಸಿರದಿದ್ದ ಅನೇಕ ಘಟನಾವಳಿಗಳು ಆರಂಭಗೊಂಡಿದ್ದವು, ಸಮಾರಂಭದ ನೆಪದಲ್ಲಿ ಗ್ರಾಮಕ್ಕೆ ವಿದ್ಯುತ್ತಿನ ಸಂಪರ್ಕ ಕಲ್ಪಿಸಲು ನೂರಾರು ಮಂದಿ ಕಾರ್ಮಿಕರು ಹಗಲಿರುಳು ಶಕ್ತಿಮೀರಿ ಶ್ರಮಿಸುತ್ತಿದ್ದರು. ಖಿದ್ದ ಶಾಸಕರಾದ ರಾಜಾರತ್ನಂ ಅವರು ವಿದ್ಯುತ್ ಶಕ್ತಿ ಇಲಾಖೆಯ ಅಧಿಕಾರಿಗಳ ಸಂಗಡ ಕಾಮಗಾರಿಯನ್ನು ಪರಿಶೀಲಿಸಿ ಹೋಗಲಾರಂಭಿಸಿದ್ದರು. ಕ್ರಾಸಿನಿಂದ ಆರಂಭಿಸಿ ವಾಗಿಲಿಯ ಅಗಸೆ ಬಾಗಿಲವರೆಗೆ ಅದಕ್ಕೆ ಸಂಬಂಧಿಸಿದ ಪರಿಕರಗಳನ್ನು ಲಾರಿಗಳು ಸುರುವಿ ಹೋಗುತ್ತಿದ್ದುದೂ ಸಾಮಾನ್ಯ ದೃಶ್ಯವಾಗಿತ್ತು. ಕರೆಂಟ್ ನೆಪದಲ್ಲಿ ರಸ್ತೆಯ ಕಾಮಗಾರಿಯೂ ಸಮರೋಪಾದಿಯಲ್ಲಿ ಆರಂಭಗೊಂಡಿತ್ತು ಬೇರೆ. ತಮ್ಮೂರಿಗೆ ಕರೆಂಟ್ ಬರುವುದೂ ಒಂದೇ ದುಬ್ಬೀರವ್ವನ ಮದುವೆಯಾಗುವುದೂ ಒಂದೇ ಎಂದು ಉಪೇಕ್ಷೆ ತಳೆದಿದ್ದ ಗ್ರಾಮದ ಪ್ರಜೆಗಳು ಕಾಲ ಗತಿಸಿದಂತೆ ಅದನ್ನು ನಂಬದೆ ಇರಲಾಗಲಿಲ್ಲ. ಅವರೆಲ್ಲರಂತೆ ನಾನೂ ಕರೆಂಟ್ ಬರುವುದಾಗಲೀ, ರಸ್ತೆಯಾಗುವುದಾಗಲೀ ಗಗನ ಕುಸುಮವೆಂದೇ ಭಾವಿಸಿದ್ದೆ, ಇದರ ಶ್ರೇಯಸ್ಸಿನ ಒಂದು ಪಾಲು ಗೌಡರಿಗೂ ಇನ್ನೊಂದು ಪಾಲು ನಾಟಕ ಕಂಪನಿಯ ಮಾಲಕ ಜಲಂಧರನಿಗೂ ಸಲ್ಲಬೇಕು ಎಂಬ ವಾಗಿಲಿಯ ಸಾರ್ವಜನಿಕರ ಅಭಿಪ್ರಾಯವನ್ನು ನಾನೂ ಅನುಮೋದಿಸಿದೆ. ಅದೇ ದಿವಸ

ಬೆಳೆಗ್ಗೆಯಿಂದಲೇ ಕೆಲ ಅಧಿಕಾರಿಗಳು ಮನೆಮನೆಗೆ ಕರೆಂಟು ಸಂಪರ್ಕ ಕಲ್ಪಿಸಿಕೊಳ್ಳಿ ಎಂದು ಪ್ರಚಾರ ಮಾಡಲಾರಂಭಿಸಿದ್ದರಲ್ಲದೆ ನಿಗದಿತ ಶುಲ್ಕ ಪಡೆದು ರಸೀತಿ ಹರಿಯಲಾರಂಭಿಸಿದ್ದರು. ಆದರೆ ಅದಕ್ಕೆ ಗ್ರಾಮದ ಕೆಲವರು ಸ್ಪಂದಿಸಿದರೆ ಇನ್ನೂ ಕೆಲವರು ಸ್ಪಂದಿಸಲಿಲ್ಲ. ಮತ್ತೆ ಕೆಲವರು ಬಂದ ಬಳಿಕ ಅದು ಕರೆಂಟ್ ಹೌದೋ ಅಲ್ಲವೋ ಎನ್ನುವುದನ್ನು ಮುಟ್ಟಿ ಖಚಿತಪಡಿಸಿಕೊಂಡ ಬಳಿಕ ಸಂಪರ್ಕ ಪಡೆಯುವುದಾಗಿ ನಿರ್ಧರಿಸಿದರು. ಅಂಥವರ ಮನಃ ಪರಿವರ್ತನೆ ಮಾಡುವ ಸಲುವಾಗಿ ನಾನು ಸಂಪರ್ಕಕ್ಕೆ ಸಂಬಂಧಿಸಿದ ರುಸುಮನ್ನು ಸಂದಾಯ ಮಾಡಿದ್ದೂ ಅಲ್ಲದೆ ಕರೆಂಟಿನ ಉಪಯುಕ್ತತೆ ಕುರಿತಂತೆ ಪ್ರಚಾರವನ್ನೂ ಮಾಡಲಾರಂಭಿಸಿದೆ. ಏನೇ ಆದರೂ ಕರೆಂಟಿಗೆ ಸಂಬಂಧಿಸಿದ ಕಾಮಗಾರಿಗಳು ವಾಗಿಲಿಯ ಮುಗ್ದ ಜನತೆಯನ್ನು ತಮ್ಮತ್ತ ಸೂಜಿಗಲ್ಲಿನೋಪಾದಿಯಲ್ಲಿ ಸೆಳೆಯಲಾರಂಭಿಸದೆ ಇರಲಿಲ್ಲ. ಕುತೂಹಲ ಕ್ರಮೇಣ ಸ್ವಯಂ ಸೇವೆಯಾಗಿ ಪರಿವರ್ತನೆಗೊಳ್ಳದೆ ಇರಲಿಲ್ಲ. ಊರ ಜನರ ಪೈಕಿ ಹಲವರು ತಮ್ಮ ವಯೋಮಾನ ಲೆಕ್ಕಿಸದೆ, ಯಾವುದೇ ಪ್ರತಿಫಲಾಪೇಕ್ಷೆಯನ್ನು ಆಪೇಕ್ಷಿಸದೆ ಇಲಾಖೆಯ ಕಾರ್ಮಿಕರ ಹೆಗಲಿಗೆ ಹೆಗಲು ನೀಡಿ ಸಹಕರಿಸಲಾರಂಭಿಸಿದರು. ಅದರ ಪರಿಣಾಮವಾಗಿ ವಾರೊಪ್ಪತ್ತಲ್ಲಿ ಆಗುವ ಕೆಲಸ ಒಂದೆರಡು ದಿವಸಗಳಲ್ಲಿ ಪೂರ್ಣಗೊಳ್ಳಲಾರಂಭಿಸಿತು. ತಮ್ಮ ತಮ್ಮ ಎತ್ತರದ ಮನೆಗಳ ಮೇಲೆ ನಿಂತು ಕಾಮಗಾರಿಯನ್ನು ಹುಬ್ಬಿಗೆ ಅಂಗೈ ಅಂಟಿಸಿ ನೋಡುವ ಅಗತ್ಯವೂ ಇರಲಿಲ್ಲ, ಎಂಥ ದೃಷ್ಟಿಮಾಂಧ್ಯರೂ ಅದನ್ನೆಲ್ಲ ಬರಿಗಣ್ಣಿನಿಂದ ನೋಡಿ ಆನಂದಿಸಬಹುದಾಗಿತ್ತು. ಅಗೋ ಅಲ್ಲಿಂದ ಇಲ್ಲಿಯವರೆಗೆ ಅಲ್ಲಲ್ಲಿ ಬೆದರುಗೊಂಬೆಗಳಂತೆ ನೆಲಮುಗಿಲಿಗೇಕಾಗಿ ನಿಂತಿರುವ ಕರೆಂಟು ಕಂಭಗಳು! ಅವುಗಳ ನಡುವೆ ಆಗಲೇ ಎಳೆದಿರುವ, ಸೂರ್ಯನ ಬೆಳಕನ್ನು ಪ್ರತಿಫಲಿಸುತ್ತಿರುವ ಸಾಲು ಸಾಲು ತಂತಿಗಳು! ಅವುಗಳ ಮೇಲೆ ಸಾಲು ಸಾಲಾಗಿ ಕುಳಿತು ವಿಶ್ರಮಿಸಿಕೊಳ್ಳುತ್ತಿರುವ ತರಾವರಿ ಪಕ್ಷಿಗಳು! ಧೂಳೆಬ್ಬಿಸುತ್ತ ಓಡಾಡುತ್ತಿರುವ ಲಾರಿ ಜೀಪು ಕಾರುಗಳಂಥ ವಾಹನಗಳು! ಅವುಗಳಿಂದ ಇಳಿಯುತ್ತಿರುವ ಅವುಗಳನ್ನು ಏರುತ್ತಿರುವ ತರಾವರಿ ಜನರು! ಇಷ್ಟು ಸಾಕಲ್ಲವೆ ವಾಗಿಲಿಯ ಪ್ರಜೆಗಳು ಸಂಭ್ರಮಿಸಲು! ಇಂಥ ಘಟನೆಗಳಿಗೆ ಕಳಸವಿಟ್ಟಂತೆ ಹತ್ತು ಹಲವು ಕಾರ್ಯಕ್ರಮಗಳು ಶರವೇಗದಲ್ಲಿ ನಡೆಯಲಾರಂಭಿಸಿದ್ದವು, ಅವುಗಳ ಕುರಿತು ಒಂದೇ ಉಸಿರಲ್ಲಿ ಹೇಳುವುದು ಕಷ್ಟಸಾಧ್ಯ!

ಶೇಷಣ್ಣನಾಗಲೀ ಮೂಲಿಮನಿ ಗೌಡರಾಗಲೀ ಸ್ವಾಮಿದ್ವಯರಾಗಲೀ ಎಂದಿನಂತೆ ಬಂದು ನನ್ನೊಂದಿಗೆ ಹರಟುವುದಾಗಲೀ, ಸಮಕಾಲೀನ ಸಮಸ್ಯೆಗಳ ಕುರಿತು ಚರ್ಚಿಸುವುದಾಗಲೀ, ಬಳ್ಳಾರಿಯ ನನ್ನ ಅನುಭವಗಳು ಕುರಿತಂತೆ ಕುತೂಹಲ ತಳೆದು ವಿಚಾರ ವಿನಿಮಯ ನಡೆಸುವುದಾಗಲೀ ನಿರೀಕ್ಷೆಯಂತೆ ನಡೆಯಲಿಲ್ಲ. ಅದಕ್ಕೆ ಸಂಬಂಧಿಸಿದ ಪ್ರಶ್ನೋತ್ತರಗಳು ನನ್ನ ಅಂತರಂಗದಲ್ಲಿ ಬಾಕಿ ಉಳಿದಿದ್ದವಷ್ಟೆ, ಅವರೆಲ್ಲ ಬರುವವರೆ ಆದರೆ ಕರೆಂಟಿಗೆ ಸಂಬಂಧಿಸಿದ ವರ್ತಮಾನ ಅವರ ಕೈಕಾಲುಗಳನ್ನು ನಿರ್ಬಂಧಿಸಿತ್ತು. ಆದರೆ ಆ ಸಂಜೆ ಜಲಂಧರ ಹೇಳಿ ಕಳಿಸಿದಂತೆ ಆಗಮಿಸಿದ, ತಿಳಿಸಿದ ಗೌಡರ ಅಭಿಪ್ರಾಯ ಕೇಳಿಸಿಕೊಂಡು ತನ್ನ ತುಟಿಗಳ ನಡುವೆ ವಿಷಣ್ಣ ನಗೆಯನ್ನು ಧರಿಸಿದ, ಕಾರ್ಯಕ್ರಮ ಮುಗಿದ ಮಾರನೆಯ ದಿವಸವೇ ವಾಗಿಲಿಯಿಂದ ತನ್ನ ಕಂಪನಿ ಗಂಟುಮೂಟೆ ಕಟ್ಟುವುದಾಗಿಯೂ ತಿಳಿಸಿದ್ದು ನನ್ನ ಕಿವಿಗಳಿಗೆ ಹಿತವೆನ್ನಿಸಿತು.

..... ☙ .....

# ದೃಶ್ಯ: ಏಂಟು

ವಾಗಿಲಿಗೂ ಸೌಂದರ್ಯಪ್ರಜ್ಞೆ ಇದೆ ಎಂದು ತಿಳಿದದ್ದು ಆ ಹಿಂದಿನ ದಿವಸವೆ! ಆದರೆ ಸೌಂದರ್ಯಕ್ಕೆ ಸಂಬಂಧಿಸಿದಂಥ ಪೂರ್ವ ತಯ್ಯಾರಿ ಒಳಗೊಳಗೆ ವಾರ ಪರ್ಯಂತರ ನಡೆಯತ್ತಲೇ ಇತ್ತು. ಹೇಗೋ ವಾಗಿಲಿಗೂ ಮುಖ್ಯ ರಸ್ತೆಗೂ ಸಂಪರ್ಕ ಕಲ್ಪಿಸುವ ಕಾಲು ಹಾದಿಯ ಇಕ್ಕೆಲದಲ್ಲಿದ್ದ ಆಳೆತ್ತರದ ಮುಳ್ಳಿನ ಪೊದೆಗಳನ್ನು ಮೂಲೋತ್ಪಾಟನೆ ಮಾಡಲಾಗಿತ್ತಷ್ಟೆ! ಆದರೂ ಅವುಗಳು ತಮ್ಮ ಬುಡದಲ್ಲಿ ಹೊಸ ಚಿಗುರನ್ನು ಮುಡಿದು ತಾವು ಮೃತ್ಯುಂಜಯ ಸಮಾನರು ಎಂದು ಸಾರಲು ತಯ್ಯಾರಿ ನಡೆಸಿದ್ದವಷ್ಟೆ! ತರಾವರಿ ಹಕ್ಕಿಪಕ್ಕಿಗಳು ವಿದ್ಯುತ್ ಕಂಭಗಳಿಗೆ ಬಿಗಿಯಲಾಗಿದ್ದ ತಂತಿಗಳನ್ನು ತೂಗುಯ್ಯಾಲೆ ಎಂದೇ ಭಾವಿಸಿ ವಿಶ್ರಮಿಸಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಂಡಿದ್ದವಷ್ಟೆ! ವಂಶಪಾರ್ಯಂಪರ್ಯವಾಗಿದ್ದ ರಸ್ತೆಯ ಆಳೆತ್ತರದ ತಗ್ಗುಗಳು ನಿರ್ನಾಮಗೊಂಡು ಸಮತಟ್ಟಾಗಿದ್ದ ಪರಿಣಾಮವಾಗಿ ಜನರು ಮೈಚಳಿ ಬಿಟ್ಟು ಅದರ ಮೇಲೆ ಹೋಗಿ ಬರಲಾರಂಭಿಸಿದ್ದರಷ್ಟೆ! ಪಾದಯಾತ್ರೆ ಎಂಬ ಅಂತಿಮಯಾತ್ರೆಗೆ ಇತಿಶ್ರೀ ಹಾಡುವ ಸಲುವಾಗಿ ಇಲಾಹಿ ಚಂದ್ರ ಮುಬಾರಕ್ ನೀಲಕಂಠಗಳು ಆದವಾನಿ ಹೊಳಗುಂದಿಗಳಿಂದ ಕ್ರಾಸಿನಲ್ಲಿ ಇದ್ದಕ್ಕಿದ್ದಂತೆ ತಿರುವು ಪಡೆದು ವಾಗಿಲಿಯ ಅಗಸೆ ಬಾಗಿಲಲ್ಲಿದ್ದ ದಣ್ಣೇರೆಂಕಣ್ಣನ ವಿಶಾಲ ಬಯಲನ್ನೇ ಬಸ್ ನಿಲ್ದಾಣವನ್ನಾಗಿ ಪರಿವರ್ತಿಸಿ ನಿಲ್ಲಲಾರಂಭಿಸಿದ್ದವಷ್ಟೆ! ಕಂಡಕ್ಟರು ಡ್ರೈವರುಗಳಿಗೊಂದೇ ಅಲ್ಲದೆ, ಹೋಗುವ ಬರುವ ಪ್ರಯಾಣಿಕರ ದಾಹ ಹಸಿವನ್ನು ತಾತ್ಕಾಲಿಕವಾಗಿ ಪರಿಹರಿಸುವ ಸಲುವಾಗಿ ನಿಲ್ದಾಣಕ್ಕೆ ಕೈ ಅಳತೆ ದೂರದಲ್ಲಿ ಕೆಲವು ತಟ್ಟಿ ಹೋಟಲುಗಳು ಅಣಬೆಯೋಪಾದಿಯಲ್ಲಿ ಮೂಡಿದ್ದವಷ್ಟೆ! ಜನರು ತಮ್ಮ ವಯೋಮಾನ ಲೆಕ್ಕಿಸದೆ ಆಯಕಟ್ಟಾದ ಜಾಗಗಳನ್ನು ತಲುಪಿ ಏನಿದು ವಿಚಿತ್ರ, ಇದು ಕನಸೋ ನನಸೋ ಎಂದು ದಿಗ್ಭ್ರಾಂತರಾಗಿ ನಿಂತು ನೋಡುತ್ತಿದ್ದರಷ್ಟೆ! ಈ ಎಲ್ಲಾ ಐತಿಹಾಸಿಕ ಬದಲಾವಣೆಯನ್ನು ಸದುಪಯೋಗ ಪಡಿಸಿಕೊಳ್ಳುವ ಸಲುವಾಗಿ ಕೆಲಸವಿದ್ದವರೂ ಕೆಲಸವಿಲ್ಲದವರೂ ವಾಹನಗಳನ್ನು ಏರಿ ರೋಮಾಂಚನಗೊಂಡು ಆದವಾನಿಗೋ ಹೊಳಗುಂದಿಗೋ ಪ್ರಯಾಣ ಬೆಳೆಸಿ ಅಲ್ಲಲ್ಲಿನ ಅಂಗಡಿಗಳಲ್ಲಿ ವಿಶೇಷ

ರೀತಿಯಲ್ಲಿ ಕಿರಾಣಿ ಸಾಮಾನುಗಳನ್ನು ಖರೀದಿಸಿ ಅವುಗಳನ್ನು ತಮ್ಮ ತಮ್ಮ ಮನೆಗಳಿಗೆ ತರಲಾರಂಭಿಸಿದ್ದರಷ್ಟೆ! ಇದೊಂದೇ ಅಲ್ಲದೆ ಅದೊಂದೇ ಅಲ್ಲದೆ ದೂರ ಮತ್ತು ಹತ್ತಿರವಿದ್ದ ಊರುಗಳಿಂದ ತಮ್ಮ ಬೀಗರುಬಿಜ್ಜರುಗಳನ್ನು ಆಯಾ ಬಸ್ಸುಗಳ ಮೂಲಕ ಕರೆತಂದು ತಮ್ಮ ತಮ್ಮ ಮನೆಗಳನ್ನು ತುಂಬಿಕೊಳ್ಳಲಾರಂಭಿಸಿದ್ದ ಪರಿಣಾಮವಾಗಿ ವಾಗಿಲಿಯ ಜನಸಂಖ್ಯೆ ಎರಡು ಮೂರು ದಿವಸಗಳಲ್ಲಿ ದುಪ್ಪಟ್ಟಾಯಿತು. ಬೀಗರುಬಿಜ್ಜರ ನೆಂಟರಿಷ್ಟರ ಅತಿಥಿಗಳ ಕ್ಷುದ್ಬಾಧೆ ತಣಿಸುವುದು ಅಸಮಾನ್ಯ ಸಂಗತಿ ಎಂದೇ ಭಾವಿಸಿದ ಪರಿಣಾಮವಾಗಿ ವಾಗಿಲಿಯ ಪ್ರತಿಯೊಂದು ಮನೆಯ ಬಾಣಸಿಗ ಕೇಂದ್ರಗಳು ಪಂಚತಾರಾ ಹೋಟಲುಗಳಾಗಿ ಪರಿವರ್ತನೆಗೊಂಡವು. ಅಡುಗೆಗೆ ಸಂಬಂಧಿಸಿದ ವಿಶೇಷ ಪರಿಮಳವನ್ನು ಮನೆಮನೆಗಳ ಗವಾಕ್ಷಿಗಳು ವಿತರಿಸುವ ಮೂಲಕ ವಾಗಿಲಿಯ ವಾತಾವರಣಕ್ಕೆ ವಿಲಕ್ಷಣ ಪ್ರಭಾವಳಿ ಮುಡಿಸಿದವು. ಅತಿಥಿ ಅಭಾಗತರ ಸದಭಿರುಚಿಯನ್ನು ಅರ್ಥಮಾಡಿಕೊಂಡ ವಾಗಿಲಿಯ ಕೆಲ ಸಸ್ಯಾಹಾರಿ ಹೋಟಲುಗಳು ಗುಟ್ಟಾಗಿ ಮಾಂಸಾಹಾರಿ ಹೋಟಲುಗಳಾಗಿಯೂ, ಕೆಲವು ಚಹಾದ ಹೋಟಲುಗಳು ಮದ್ಯಪಾನ ಬಾರುಗಳಾಗಿಯೂ ಪರಿವರ್ತಿತಗೊಂಡವು. ಅತಿಥಿಗಳ ಅರಿಷಡ್ವರ್ಗಗಳನ್ನು ಕೆರಳಿಸುವ ಸಲುವಾಗಿ ಕಾಮನೆಗಳನ್ನು ತಣಿಸುವ ಸಲುವಾಗಿ ಬ್ಯಾಗೇರ ಕಾಳಿ ತಡಸಲ ರುದ್ರಿ ಪಾತರದ ಪಾರ್ವತಿಯರಂಥ ಮಧ್ಯವಯಸ್ಕ ನಿತ್ಯಸುಮಂಗಲಿಯರು ಆಯಾ ಊರುಗಳಿಂದ ಬೆಲೆವೆಣ್ಣುಗಳನ್ನು ಕರೆತಂದು ತಮ್ಮ ತಮ್ಮ ಮನೆಗಳಲ್ಲಿರಿಸಿಕೊಂಡು ಅಹರ್ನಿಶಿ ಶ್ರಮಿಸಲಾರಂಭಿಸಿದರು.

ಈ ಅಚಾನಕ್ ಬದಲಾವಣೆ ಕೇವಲ ಮಾನವ ಲೋಕಕ್ಕೆ ಸಂಬಂಧಿಸಿದ್ದಾಗಿರದೆ ಉಭಯಚರ ಜೀವಿಗಳಿಗೂ ಸಂಬಂಧಿಸಿದ್ದಾಗಿತ್ತು. ಅದರಲ್ಲೂ ಮುಖ್ಯವಾಗಿ ವಾಗಿಲಿಯಲ್ಲಿ ಖಾಯಂ ಸದಸ್ಯತ್ವ ಪಡೆದಿದ್ದ ಮರ್ಕಟಗಳು ಮನುಷ್ಯರಿಗಿಂತ ತಾವೇನು ಕಡಿಮೆ ಎನ್ನುವ ರೀತಿಯಲ್ಲಿ ತಮ್ಮ ತಮ್ಮ ಕುಲಬಾಂಧವರನ್ನು ನೆರೆಹೊರೆ ಗ್ರಾಮ ಕರುಚಲು ಕಾಡು ಮರಗಿಡ ತೋಟ ತೋಪುಗಳಿಂದ ಕರೆ ತಂದ ಪರಿಣಾಮವಾಗಿ ಅವುಗಳ ಕೀಟಲೆಯೂ ನೂರ್ಮಡಿಗೊಳ್ಳದೆ ಇರಲಿಲ್ಲ. ಮರ್ಕಟಗಳ ಕಾಶಿ ಎಂದೇ ಪ್ರಖ್ಯಾತವಾಗಿದ್ದ ಲಚುಮವ್ವನ ತೋಪು ಸಹ ಪ್ರೇಕ್ಷಣೀಯ ಸ್ಥಳವಾಗಿ ಬದಲಾಯಿತು. ಮಂಗಗಳನ್ನು ಕಣ್ಣಾಣಿಯೆ ನೋಡುವ ಮೂಲಕ ತೋಪಿನಲ್ಲಿದ್ದ ಚಿಕ್ಕಪುಟ್ಟ ಸಾಧು ಸಂತರನ್ನೂ ಅವರಿಗೆ ಮುಖಿಂಡರೆನಿಪಂತಿದ್ದ ಪರಶುರಾಮ ಶರಭರನ್ನೂ ಮನದಣಿಯೆ ದರ್ಶಿಸುವ ಮೂಲಕ ಅಲೌಕಿಕ ಅನುಭವಕ್ಕೆ ಪಾತ್ರರಾಗಲಾರಂಭಿಸಿದರು. ಅಂಥವರನ್ನು ಇನ್ನೂ ಹೆಚ್ಚು ಆಕರ್ಷಿಸುವ ಸಲುವಾಗಿ, ಅಂಥವರನ್ನು ಇನ್ನೂ ಹೆಚ್ಚು ಪರವಶಗೊಳಿಸುವ ಸಲುವಾಗಿ ಅವಧೂತದ್ವಯರು ಅಗೋಚರ ಕ್ಷುಧ್ರ ದೇವತೆಗಳ ವಿಲಕ್ಷಣ ಮೂರ್ತಿಗಳನ್ನು ಸ್ಥಾಪಿಸಿದ್ದರಲ್ಲದೆ ಶೂನ್ಯದಿಂದ ವಸ್ತುಗಳನ್ನು ಸೃಷ್ಟಿಸಿ ದಿಗ್ಭ್ರಮೆಗೊಳಿಸುವುದನ್ನು ಕರಗತ ಮಾಡಿಕೊಂಡಿದ್ದರು, ಅದಕ್ಕೆಂದೇ ಒಂದಿಬ್ಬರು ವೃದ್ಧ ಮ್ಯಾಜಿಷಿಯನ್‌ಗಳಿಗೆ ಸಾಧು ವೇಷ ತೊಡಿಸಿ ತಮ್ಮ ಇಕ್ಕೆಲದಲ್ಲಿ ಇಟ್ಟುಕೊಂಡಿದ್ದರು.

ಅದಕ್ಕೆ ಪೂರಕವಾಗಿ ಗಿಣಿ ಶಾಸ್ತ್ರ ಹೇಳುವವರೂ, ಹಸ್ತಸಾಮುದ್ರಿಕ ನೋಡುವವರೂ, ಕವಡೆ ಶಾಸ್ತ್ರಿಗಳೂ ಅಲ್ಲಲ್ಲಿ ಬೀಡುಬಿಟ್ಟು ಕ್ರಿಯಾಶೀಲರಾಗಿದ್ದರು. ಇನ್ನು ಕವಲತೆತ್ತುಗಳನ್ನು ಆಡಿಸುವವರು, ಕೌಶಲ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕರಡಿಗಳು ಮನುಷ್ಯರಿಗಿಂತ ಒಂದು ಕೈ ಮೇಲು ಎಂದು ಅವುಗಳನ್ನು ಆಡಿಸುವುದರ ಮೂಲಕ ಹೇಳುತ್ತಿದ್ದಂಥವರೂ, ಬುರ್ರಕಥಾ ಗೀಗೀ ಕಿನ್ನರಿ ಜೋಗಿಗಳೂ ದೊಂಬರರೂ ಅಲ್ಲಲ್ಲಿ, ಇನ್ನು ಭಿಕ್ಷುಕರೂ ಅಂಗವಿಕಲರೂ

ಅಲ್ಲಲ್ಲಿ, ಇನ್ನು ಅಷ್ಟ ದಿಕ್ಕುಗಳಿಂದ ವಿವಿಧ ರೂಪಗಳಲ್ಲಿ ಮುಗ್ದತೆಯೇ ಮೈವೆತ್ತಂಥ ವಾಗಿಲಿಗೆ ಆಗಮಿಸಿದ ಜೇಬುಗಳ್ಳರ ಕುರಿತಂತೆ ಹೇಳದಿರುವುದೇ ಒಳ್ಳೆಯದು. ಹಾಗೆಯೇ ಬೇವಿನಮರದ ಬುಡದಲ್ಲಿ ನೆಲೆಗೊಂಡಿರುವ ಶ್ರೀಶೈಲಮಲ್ಲಿಕಾರ್ಜುನನಿಗೆ ಸಂಬಂಧಿಸಿದ ಕೆಲವು ಮಾಹಿತಿ ನೀಡುವುದು ಒಳ್ಳೆಯದು. ನಲ್ಲಮಲ ಅರಣ್ಯವಾಸಿಯೂ ಶ್ರೀಶೈಲಗಿರಿಯ ತುಟ್ಟತುದಿಯಲ್ಲಿ ನೆಲಗೊಂಡಿರುವ ಜಗನ್ನಿಯಾಮಕನೂ ಆದ ಆತನಿಗೆ ವಾಗಿಲಿಯಲ್ಲಿ ದೇವಸ್ಥಾನ ನಿರ್ಮಿಸುವ ಸಲುವಾಗಿ ಕೆಲವು ತಿಂಗಳುಗಳಿಂದ ವಂತಿಗೆ ಸಂಗ್ರಹಿಸುತ್ತಿರುವುದು ಸರ್ವರಿಗೂ ತಿಳಿದಿರುವ ವಿಷಯವಷ್ಟೆ, ಅದರ ಅಡಿಗಲ್ಲು ಸಮಾರಂಭವೂ ಅದೇ ದಿವಸದಂದು ಜರುಗಲಿರುವುದು ಬೇರೆ. ಪಂಪಯ್ಯಸ್ವಾಮಿ ಮಗನ ಭದ್ರ ಕಾವಲಿದ್ದರೂ ಅದರ ಮೇಲಿರುವ ಪರದೆಯನ್ನು ಸರಿಸಿ ಯುಗಂಧರರೆಡ್ಡಿ, ಹೆಬ್ಬಟಂ ಸೀತಾರಾಮರೆಡ್ಡಿ ಎಂಬ ನಾಮವಾಚಕಗಳನ್ನು ಹೊಂದಿಸಿ ಓದುವ ಪ್ರಯತ್ನ ಮಾಡುತ್ತಿದ್ದರು. ಓದು ಬಾರದವರಿಗೆ ಚಿಕ್ಕಸ್ವಾಮಿಯು ಓದಿ ಹೇಳುವುದರ ಮೂಲಕ ತನ್ನ ಬಗ್ಗೆ ತಾನು ಹೆಮ್ಮೆಪಟ್ಟುಕೊಳ್ಳುತ್ತಿರುವನು. ಹಾಗೆಯೇ ದೇವಾಲಯಕ್ಕೆ ಸಂಬಂಧಿಸಿದ ಸ್ವಯಂ ರಚಿತ ನೀಲನಕಾಶೆಯನ್ನು ಅವರಿವರಿಗೆ ತೋರಿಸುತ್ತ ವಂತಿಗೆ ಸಂಗ್ರಹಿಸುತ್ತಿರುವನು. ಅದರ ಮುಕ್ಕಾಲು ಭಾಗವನ್ನು ತನ್ನ ಚಲ್ಲಣದ ಜೇಬಿಗೂ ಪಾವಲಿ ಭಾಗವನ್ನು ಹುಂಡಿ ಡಬ್ಬಿಗೂ ಹಾಕುತ್ತಿರುವನು.

ಮಕ್ಕಳು ಸ್ವಇಚ್ಛೆಯಿಂದ ರಜೆ ಘೋಷಿಸಿಕೊಂಡಿದ್ದ ಪರಿಣಾಮವಾಗಿ ಶಾಲೆ ಅತಿಥಿ ಅಭಾಗತರಿಗೆ ಬಿಡದಿ ಮನೆಯಾಗಿ ಮಾರ್ಪಟ್ಟಿತ್ತು. ಈ ವಿರಾಮದ ಸಮಯದಲ್ಲಿ ಕಾದಂಬರಿಯನ್ನು ಮುಂದುವರೆಸಿದರೆ ಹೇಗೆ! ಹೌದು ಬರೆಯಲು ಆರಂಭಿಸುವುದು ಮುಖ್ಯವೆಂದು ಭಾವಿಸಿದೆ. ಮನೆಯನ್ನು ಲಗುಬಗೆಯಿಂದ ತಲುಪಿದೆ. ತಿರುಗಾಡಿದ್ದರಿಂದಾಗಿ ನಷ್ಟವಾಗಿದ್ದ ಚೈತನ್ಯವನ್ನು ಮರಳಿ ಪಡೆಯುವ ಸಲುವಾಗಿ ಕಪ್ಪು ಚಹಾವನ್ನು ತಯಾರಿಸಿ ಕುಡಿದಾದ ಬಳಿಕ ಹಸ್ತಪ್ರತಿಯನ್ನು ಕೈಗೆತ್ತಿಕೊಂಡೆ. ಅಪೂರ್ಣ ಪರಿಚ್ಛೇಧದ ತುಂಬೆಲ್ಲಾ ಕಣ್ಣಾಡಿಸಿದೆ. ಶಶಾಂಕನನ್ನು ತನ್ನ ತಂದೆ ಹರಿಶ್ಚಂದ್ರರೆಡ್ಡಿಯವರ ಸಮಕ್ಷಮ ಪ್ರತಿಷ್ಠಾಪಿಸಿರುವುದೇನೋ ಸರಿ. ಅವರಿಬ್ಬರ ನಡುವೆ ವ್ಯಕ್ತಿತ್ವಗಳನ್ನು ವಿನಿಮಯಗೊಳಿಸಿದರೆ ಹೇಗೆ! ತಮ್ಮ ಮಕ್ಕಳ ತಾರುಣ್ಯವನ್ನು ಆಪೋಶನ ತೆಗೆದುಕೊಳ್ಳುವ ತಂದೆಯಂದಿರ ಕುರಿತಂತೆ ಯೋಚಿಸಲಾರಂಭಿಸಿದೆ. ನನ್ನ ತಂದೆಯನ್ನೇ ಹರಿಶ್ಚಂದ್ರರೆಡ್ಡಿಯವರೊಳಗೆ ಸಮೀಕರಿಸುವುದೋ, ಲೇಖಕನಾದ ನನ್ನ ವ್ಯಕ್ತಿತ್ವವನ್ನೇ ಶಶಾಂಕನ ವ್ಯಕ್ತಿತ್ವದೊಳಗೆ ಸಮೀಕರಿಸುವುದೋ! ಯೋಚಿಸುತ್ತಿರುವಷ್ಟರಲ್ಲಿ..

ವ್ಯಕ್ತಿಯೋರ್ವ ನಿಧನಿಧಾನವಾಗಿ ಮನಃಪಟಲದಲ್ಲಿ ಮೂಡಲಾರಂಭಿಸಿದ, ಮೊದಮೊದಲು ಆತನ ಚೆಹರೆಯನ್ನು ಗುರುತಿಸುವುದಾಗಲಿಲ್ಲ. ಕ್ರಮೇಣ ಆತನ ಚೆಹರೆ ಬದಲಾಗತೊಡಗಿತು. ಯಾರಿರಬಹುದು ಇವನು! ಏನೋ ಅಸ್ಪಷ್ಟತೆ! ಸ್ವಲ್ಪ ಹೊತ್ತು ಗತಿಸಿದ ಬಳಿಕ ನನ್ನ ಸೋಲನ್ನು ಅರಿತ ಆತ ನಗಾಡಿದಂತೆ ಭಾಸವಾಯಿತು. ಪೌರಾಣಿಕ ಪ್ರಜ್ಞೆ ಇರದ ನೀನೆಂಥ ಲೇಖಕನೋ ಎಂದು ಹಂಗಿಸಿದಂತೆ ಭಾಸವಾಯಿತು. ಕಷ್ಟಸಾಧ್ಯವಾದರೂ ಬಳಿಕ ಗುರುತಿಸಿದೆ, ಓಹ್ ಯಯಾತಿ! ಚಂದ್ರವಂಶೋದ್ಭವನೂ, ನಹುಷರಾಜನಿಂದ ಪಿತೃಕನ್ಯೆಯಾದ ವಿರಜೆಯ ಗರ್ಭ ಸಂಜಾತನೂ, ಶುಕ್ರಾಚಾರ್ಯನ ಮಗಳು ದೇವಯಾನಿಯ ಹಾಗೂ ವೃಷಪರ್ವರಾಜನ ಮಗಳು ಶರ್ಮಿಷ್ಠೆಯ ಗಂಡನೂ ಆದಂಥ ಯಯಾತಿ! ಶುಕ್ರಾಚಾರ್ಯನ ಶಾಪದಿಂದಾಗಿ ಅಕಾಲಿಕ ವೃದ್ಯಾಪ್ಯವನ್ನು ಆವಹಿಸಿಕೊಂಡ ಯಯಾತಿ!

ಕುದುರೆಗಳಿಗೆ ಪ್ರತಿಯಾಗಿ ತನ್ನ ಮಗಳು ಮಾಧವಿಯನ್ನು ಗಾಲವ ಮುನಿಗೆ ದಾನ ನೀಡಿದ ಯಯಾತಿ! ತನ್ನ ಮಗ ಪೂರುವಿನ ಯೌವನವನ್ನು ಆಪೋಶನ ತೆಗೆದುಕೊಂಡ ಪುನಃ ಯುವಕನಾದ ಯಯಾತಿ! ಓಹ್ ನಿಸ್ಸಂದೇಹವಾಗಿ ಯಯಾತಿಯೆ! ನನ್ನ ತಂದೆಯಲ್ಲೂ, ಹರಿಶ್ಚಂದ್ರರೆಡ್ಡಿಯಲ್ಲೂ, ಸಮಕಾಲೀನ ಸಮಾಜದ ಪಿತೃತ್ವದ ತುಂಬೆಲ್ಲಾ ಜೀವಂತವಿರುವ ಯಯಾತಿ! ರುಗ್ಣಶಯ್ಯೆ ಮೇಲೆ ಅಂಗಾತ ಮಲಗಿರುವ ಹರಿಶ್ಚಂದ್ರರೆಡ್ಡಿಗೆ ಮಗನ ಮೇಲಾಗಲೀ, ತರುಣ ಶಶಾಂಕನಿಗೆ ತನ್ನ ತಂದೆಯ ಮೇಲಾಗಲೀ ಪರಸ್ಪರ ಪ್ರೀತಿ ವಾತ್ಸಲ್ಯವಿಲ್ಲ. ಆದರೆ ಅದೊಂದು ಯಾಂತ್ರಿಕವೂ ಭಾವನಾತ್ಮಕವೂ ಸಂಕೀರ್ಣವೂ ಆದ ಭೇಟಿ! ಅದೇ ಅವಧಿಯಲ್ಲಿ ಆದವಾನಿಯ ವಸಂತವಿಹಾರದ ತೂಗುಮಂಚದ ಮೇಲೆ ಚಿಂತಾಕ್ರಾಂತಳಾಗಿ ಕೂತಿರುವ ಊರ್ಮಿಳೆ ಸಿದ್ಧಾರ್ಥನ ವೈರಾಗ್ಯಕ್ಕೆ ಕಾರಕವಾದ ರೌರವ ಘಟನೆಗಳನ್ನು ಒಂದೊಂದಾಗಿ ನೆನಪಿಸಿಕೊಳ್ಳುತ್ತಿದ್ದಾಳೆ, ತನ್ನ ಭಾವಿಪತಿ ಶಶಾಂಕ ಮೊಗಸಾಲೆ ಏರುವ ಮೊದಲು ತನ್ನ ತಂದೆಯ ತಾರುಣ್ಯದ ಭಾವಚಿತ್ರವನ್ನು ನೋಡಿರಲೂಬಹುದೆಂದು ಊಹಿಸಿಕೊಳ್ಳುತ್ತಿದ್ದಾಳೆ. ರೋಗಿಷ್ಟ ಹಾಗೂ ವೃದ್ಧಾತಿವೃದ್ಧ ತಂದೆಯ ಕಣ್ಣಳತೆಯಲ್ಲಿ ನಿಂತಿರಬಹುದಾದ ಶಶಾಂಕ ತನಗೂ ಮುಂದೊದಗುವ ವೃದ್ಯಾಪ್ಯವನ್ನು ಕಲ್ಪಿಸಿಕೊಂಡರೆ! ವೃದ್ಯಾಪ್ಯದ ವ್ಯಾಮೋಹಿಯಾದರೆ! ವೃದ್ಯಾಪ್ಯದ ಕಾರಣಗಳನ್ನು ಅನ್ವೇಷಿಸುವ ಸಲುವಾಗಿ ದೇಶಾಂತರ ಹೋದರೆ! ಅಥವಾ ತನ್ನ ತಾರುಣ್ಯವನ್ನು ತನ್ನ ತಂದೆಗೆ ಧಾರೆ ಎರೆದು ಕೊಟ್ಟರೆ! ಯೋಚಿಸುತ್ತಿದ್ದಂತೆ ಭಯ ಆತಂಕದಿಂದ ನಖಶಿಖಾಂತ ಕಂಪಿಸತೊಡಗುತ್ತಾಳೆ. ನೀನು ನಿನ್ನ ತಂದೆ ಸುಕ್ಕುಗಟ್ಟಿದ ಮುಖವನ್ನು ನೇರವಾಗಿ ನೋಡಬೇಡವೋ! ಅದು ಸೌಂದರ್ಯದ ಪೂರ್ವಪೀಠಿಕೆ ಎಂದು ಅನ್ಯಥಾ ಭಾವಿಸಿದಿ ಎಂದರೆ ನನ್ನಾಣೆ ಎಂದು ಆಣೆಪ್ರಮಾಣ ಮಾಡುತ್ತಾಳೆ.

ಮಾನಸಿಕವಾಗಿ ಹತ್ತಿರವಿರುವ ತನ್ನ ಪ್ರೇಯಸಿಯ ಎಚ್ಚರಿಕೆ ಮಾತುಗಳನ್ನು ಆಗ ತಾನೆ ಕೇಳಿಸಿಕೊಂಡ ಶಶಾಂಕ ಹಂಸತೂಲಿಕಾತಲ್ಪದಿಂದ ಎರಡು ಹೆಜ್ಜೆ ಹಿಂದೆ ಸರಿಯುತ್ತಾನೆ. ಇನ್ನೇನು ಆಯುಷ್ಯರೇಖೆ ನಿಚ್ಚಳವಾಗಿರುವ ತನ್ನ ಅಂಗೈಯಿಂದ ತಮ್ಮ ಬೀಜಗಣಿತದ ಪಠ್ಯದಂಥ ನೊಸಲನ್ನು ಸ್ಪರ್ಶಿಸಲಿದ್ದ, ತನ್ನ ಬಾಷ್ಪಾವೃತ ಕಣ್ಣುಗಳಿಂದ ಎರಡು ಹನಿಗಳನ್ನು ತಮ್ಮ ಮಾಂಸ ರಹಿತ ಮುಖದ ಮೇಲೆ ತೊಟ್ಟಿಕ್ಕಲಿದ್ದ, ತನ್ನ ವಾತ್ಸಲ್ಯಪೂರಿತ ಮಾತುಗಳಿಂದ ತಮ್ಮ ಅಂತಿಮ ಘಳಿಗೆಗಳಿಗೆ ಪ್ರಭಾವಳಿ ಮುಡಿಸಲಿದ್ದ ತಮ್ಮ ಏಕಮಾತ್ರ ಸತ್ಪುತ್ರ ತಮ್ಮಿಂದ ದೂರ ಸರಿಯುವುದೆಂದರೇನು! ಬರಸೆಳೆಯುವ ಸಲುವಾಗಿ ತಮ್ಮ ದುರ್ಬಲ ಕೈಗಳನ್ನು ಚಾಚಲೆತ್ನಿಸಿದರಾದರೂ ಸಾಧ್ಯವಾಗಲಿಲ್ಲ. ತಮ್ಮ ಮಗನನ್ನು ತಮ್ಮ ಬಾಡಿ ಬೆಂಡಾಗಿರುವ ಎದೆಯ ಕಡೆ ಬಲವಾಗಿ ತಳ್ಳು ಎಂದು ರಾಘಪ್ಪನ ಕಡೆ ಸಂಜ್ಞೆ ಮಾಡಲು ಪ್ರಯತ್ನಿಸಿದರಾದರೂ ಅದೂ ಸಾಧ್ಯವಾಗಲಿಲ್ಲ, ಉಸಿರಳತೆಯಲ್ಲಿ ಕೈಯಳತೆಯಲ್ಲಿ ಮಾತಿನಳತೆಯಲ್ಲಿ ಯೋಚನೆಯಳತೆಯಲ್ಲಿ ಸುಳಿದಾದರೂ ಈ ನತದೃಷ್ಟ ತಂದೆಯ ಪಿತೃಋಣ ಸಂದಾಯ ಮಾಡು ಮಗನೇ ಎಂದು ಹೇಳಲು ಪ್ರಯತ್ನಿಸಿದರಾದರು ಅದೂ ಸಾಧ್ಯವಾಗಲಿಲ್ಲ.

ಅಂದ ಮಾತ್ರಕ್ಕೆ ಶಶಾಂಕ ತನ್ನ ತಂದೆಯ ನಿಸ್ತೇಜ ಕಣ್ಣುಗಳಿಂದ ದೂರ ಸರಿದಿಲ್ಲ. ಮುಂದಕ್ಕಾಗಲೀ ಹಿಂದಕ್ಕಾಗಲೀ ಹೆಜ್ಜೆ ಇರಿಸದೆ ನಿಂತಲ್ಲಿಯೇ ನಿಂತಿದ್ದಾನೆ. ಬಾಲ್ಯದ ನೆನಪುಗಳ ಬಂಧಿಯಾಗಿದ್ದಾನೆ, ಮೊಗಸಾಲೆಯ ಪಾರದರ್ಶಕ ನೆಲ ತನ್ನ ಪಾದಗಳನ್ನು ಕಚ್ಚಿ ಹಿಡಿದಿರುವಂಥ ಅನುಭವ, ತನ್ನ ಹೃದಯ ಸ್ಪಂದನವನ್ನು ತಾನೇ ಕೇಳಿಸಿಕೊಳ್ಳುತ್ತಿದ್ದಾನೆ. ಒಂದು ಕಡೆ ತನ್ನನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿರುವ ತಂದೆಯ ವೃದ್ಧಾಪ್ಯ, ಇನ್ನೊಂದು

ಕಡೆ ತನ್ನನ್ನು ಆಯಸ್ಕಾಂತದಂತೆ ಆಕರ್ಷಿಸುತ್ತಿರುವ ಊರ್ಮಿಳೆಯ ತಾರುಣ್ಯ, ಇದು ತಾನೇ ನಿರ್ಮಿಸಿಕೊಂಡಿರುವ ಉಭಯ ಸಂಕಟ. ಅತ್ತ ಧರಿಯೂ ಇಲ್ಲ ಇತ್ತ ಪುಲಿಯೂ ಇಲ್ಲ. ಮೊಗಸಾಲೆ ಇಳಿಯುವುದೊಂದೇ ಬಾಕಿ ತಾನು ತಪ್ಪಿಸಿಕೊಳ್ಳಲು, ಆದರೆ ಕಾಲುಗಳು ಚಲನೆಗೆ ಸಮ್ಮತಿಸುತ್ತಿಲ್ಲವಲ್ಲ! ಎಷ್ಟೋ ಹೊತ್ತಿನ ಹಿಂದೆ ತೆರೆದಿರುವ ಕಣ್ಣ ರೆಪ್ಪೆಗಳನ್ನು ಪುನಃ ಮುಚ್ಚಲು ತನಗೆ ಸಾಧ್ಯವಾಗುತ್ತಿಲ್ಲ. ವಾಪಸ್ಸು ಹೊರಡಲು ಅನುಮತಿ ನೀಡುವಂತೆ ದಯಪಾಲಿಸುವಂತೆ ಅಗೋಚರ ಶೃಂಖಲೆಯ ಬಂಧನದಿಂದ ಮುಕ್ತಗೊಳಿಸುವಂತೆ ಆರ್ತತೆಯಿಂದ ರುಗ್ಣಶಯ್ಯೆಯ ಕಡೆ ದೃಷ್ಟಿ ಸಾರಿದ, ಕಿಮ್ಮತ್ತಿನ ಸೊಳ್ಳೆ ಪರದೆಯೊಳಗೆ ತನ್ನ ತಂದೆ ನರಳು ಭಾಷೆಯಿಂದ ಏನನ್ನೋ ನುಡಿಯುತ್ತಿರುವಂತಿರುವುದು, ತನ್ನ ಬಳಿಗೆ ಬರಲು ಅಂಗಲಾಚುವಂತಿರುವುದು, ತನ್ನನ್ನು ಬರಸೆಳೆದು ಅಪ್ಪಿಕೊಳ್ಳುವಂತೆ ಕೇಳಿಕೊಳ್ಳುವಂತಿರುವುದು. ಅಂಗಾತ ಮಲಗಿದ್ದ ತಂದೆ ಈ ತನ್ನ ಕಡೆ ಮಗ್ಗುಲು ಬದಲಾಯಿಸಿದಂತಿರುವುದು, ಆತನ ಕಣ್ಣುಗಳ ಕ್ಷೀಣ ಬೆಳಕು ತನ್ನ ಕಡೆ ನಿಧಾನವಾಗಿ ಹರಿಯುತ್ತಿದೆ, ಅದು ತನ್ನನ್ನು ಸಮೀಪಿಸುತ್ತಿದ್ದಂತೆ ದಾವಾನಲದ ಸ್ವರೂಪ ಪಡೆಯುತ್ತಿದೆ. ಬೆನ್ನ ಹಿಂದೆ ನಿಂತಿರುವ ರಾಘಪ್ಪ ತನ್ನ ಬಾಯಿಯನ್ನು ಕಿವಿಯ ಬಳಿ ಇರಿಸಿ

"ಪುಯ್ಯಾವುಲ ವಂಶದ ಸಮಸ್ತ ಸ್ಥಿರಚರ ಆಸ್ತಿಗೆ ನೀನು ಉತ್ತರಾಧಿಕಾರಿಯಾಗುವ ಸಲುವಾಗಿಯಾದರೂ ವೃದ್ಧ ತಂದೆಯನ್ನು ಸಮೀಪಿಸು, ಆದರೆ ಆತನನ್ನು ಅಪ್ಪಿಕೊಂಡಿ ಎಂದರೆ ನಿನ್ನ ದೇಹದ ಸಮಸ್ತ ತಾರುಣ್ಯವನ್ನು ಅಪಹರಿಸುತ್ತಾನೆ, ನೀನು ಅಪ್ಪಿಕೊಳ್ಳುವುದಾದಲ್ಲಿ ಅದು ಧೃತರಾಷ್ಟ್ರಾಲಿಂಗನಕ್ಕೆ ಸರಿ ಸಮಾನವಾಗಿರಬೇಕು, ಅದರಿಂದ ಆತನಿಗೆ ಅಕಾಲಿಕ ಮರಣವನ್ನು ದಯಪಾಲಿಸಬೇಕು, ಇಷ್ಟೆಲ್ಲಾ ಯಾಕೆ ಹೇಳುತ್ತಿರುವೆನೆಂದರೆ ನಿನ್ನ ದೇಹದೊಳಗೆ ಪ್ರವಹಿಸುತ್ತಿರುವ ರಕ್ತದ ಮೂಲ ನಾನೆ" ಎಂದು ಹೇಳುತ್ತಿರುವಂತಿದೆ. ಆ ಮರ್ಮಾಘಾತಕಾರಿ ಮಾತುಗಳನ್ನು ಶಶಾಂಕ ಕೇಳಿಸಿಕೊಳ್ಳುವುದಕ್ಕೂ ಮೊದಲೆ ಕೇಳಿಸಿಕೊಂಡ ದಯಾನಂದ ಪನ್ನಂಗಧರರು ಮುನ್ನಲೆ ಬರುತ್ತಾರೆ, "ಈಗಲಾದರೂ ಅರ್ಥವಾಯಿತಲ್ಲವೆ ನಿನ್ನ ಕಾದಂಬರಿಯ ನಾಯಕನ ನಿಜ ಸ್ವರೂಪ! ರಾಘಪ್ಪಸ್ವಾಮಿ ಮಾತನ್ನು ಗೌರವಿಸಿ ಶಶಾಂಕನ ಕೈಯಿಂದ ವೃದ್ಧ ಹರಿಶ್ಚಂದ್ರರೆಡ್ಡಿಯವರನ್ನು ಕಥೆಯ ನೇಪಥ್ಯಕ್ಕೆ ಸರಿಸು, ಜಮೀನ್ದಾರಿ ಉತ್ತರದಾಯಿತ್ವದ ದಂಡವನ್ನು ಶಶಾಂಕನ ಕೈಗೆ ಕೊಡು. ನಮ್ಮಂಥ ಯುವ ಹೋರಾಟಗಾರರಿಗೆ ಸರಿ ಹುದ್ದರಿ ಎಂದರೆ ತರುಣ ಶಶಾಂಕನೇ ಹೊರತು ವೃದ್ಧ ಹರಿಶ್ಚಂದ್ರರೆಡ್ಡಿ ಅಲ್ಲ, ಹಾಗೆ ಮಾಡಿದರೆ ಮಾತ್ರ ನಿನ್ನ ಕಾದಂಬರಿ ಹೊಸ ತಿರುವು ಪಡೆಯುವುದು, ವಾಚಕರನ್ನು ರೋಮಾಂಚನಗೊಳಿಸುವುದು" ಎಂದು ಸಲಹೆ ನೀಡಬಹುದೆಂದು ನಾನು ನಿರೀಕ್ಷಿಸಿರಲಿಲ್ಲ.

ಅವೆರಡೂ ಪಾತ್ರಗಳು ಮಧ್ಯ ಪ್ರವೇಶಿಸದಿದ್ದಲ್ಲಿ ಹರಸಾಹಸಪಟ್ಟು ಶಶಾಂಕನನ್ನು ತನ್ನ ತಂದೆ ಹರಿಶ್ಚಂದ್ರರೆಡ್ಡಿ ಸಮಕ್ಷಮಕ್ಕೆ ಪುನಃ ಒಯ್ಯುತ್ತಿದ್ದೆ, ಯಯಾತಿಯಂತೆ ವೃದ್ಧರೆಡ್ಡಿ ಸಹ ತನ್ನ ಮಗನ ಯೌವನವನ್ನು ಆಪೋಶನ ತೆಗೆದುಕೊಳ್ಳುವ ರೀತಿಯಲ್ಲಿ ಸಂಚು ರೂಪಿಸಿದ್ದೆ, ಸಂಚಿನ ಭಾಗವಾಗಿಯೇ ವೃದ್ಧನ ಕೊರಳನ್ನು ಹೃಷಿಕೇಶದ ಅಘೋರಿಯೊಬ್ಬ ನೀಡಿರುವ ಅಭಿಮಂತ್ರಿತ ತಾಯತದಿಂದ ಅಲಂಕರಿಸಿದ್ದೆ, ಸಾವನ್ನು ಗೆದ್ದು ಪುನಃ ಬದುಕುವ ವೃದ್ಧರು ತರುಣರಿಗಿಂತ ಹೆಚ್ಚು ಅಪಾಯಕಾರಿ ಎನ್ನುವುದು ನನ್ನ ನಿಲುವು, ಅಲ್ಲದೆ ಕ್ರೌರ್ಯವನ್ನು ಅಮೂಲಾಗ್ರವಾಗಿ ಅರಗಿಸಿಕೊಂಡಿರುವ ಹರಿಶ್ಚಂದ್ರರೆಡ್ಡಿ ಜಮೀನ್ದಾರಿ ವ್ಯವಸ್ಥೆಯ ಡ್ರ್ಯಾಗನ್ ಇದ್ದಂತೆ. ರೋಚಕತೆ ಇರುವುದು ತರುಣರು ವೃದ್ಧರೊಡನೆ ಹೋರಾಡುವಾಗ. ಮಗ ತನ್ನ ತಂದೆಯನ್ನು ಕೊಲ್ಲುವನೋ ಅಥವಾ ಆ ತಂದೆ ಸಹಜ ಮರಣಕ್ಕೀಡಾಗುವನೋ! ಅದು ಬೇರೆ

ಪ್ರಶ್ನೆ, ಆದರೆ ಶಶಾಂಕ ಪುಯ್ಯಾವುಲ ವಂಶದ ಸ್ಥಿತಚರ ಆಸ್ತಿಗೆ ಒಡೆಯನಾದರೆ ಜಮೀನ್ದಾರಿ ವ್ಯವಸ್ಥೆಯನ್ನು ಪ್ರತಿನಿಧಿಸುವುದಾಗಲೀ, ಕ್ರೌರ್ಯದ ರಾಯಭಾರಿಯಾಗುವುದಾಗಲೀ ಸಾಧ್ಯವೆ! ಆರಂಭದಿಂದ ರಾಘಪ್ಪಸ್ವಾಮಿಯ ಬಳಿ ಶಿಷ್ಯತ್ವ ಸ್ವೀಕರಿಸಬೇಕಾಗಿ ಬರಬಹುದು, ಜಮೀನ್ದಾರಿ ವ್ಯವಸ್ಥೆಯ ಪಟ್ಟುಗಳನ್ನು ಕಲಿಯುವಷ್ಟರಲ್ಲಿ ವೃದ್ಯಾಪ್ಯದ ಹೊಸ್ತಿಲಲ್ಲಿ ನಿಂತುಕೊಳ್ಳಲೂ ಬಹುದು. ಅದರ ಪೂರ್ವಾಪರವನ್ನು ವಿವರಿಸುತ್ತ ಹೋದರೆ ನನ್ನ ಕಾದಂಬರಿಯ ಗತಿ ಏನಾಗಬೇಡ! ವಸ್ತುವಿನ ಸಾಧಕ ಬಾಧಕಗಳನ್ನು ಯೋಚಿಸಿದಾದ ಬಳಿಕ ಅಸಹಾಯಕತೆಯಿಂದ ಬರಹವನ್ನು ಸ್ಥಗಿತಗೊಳಿಸುವುದು ಅನಿವಾರ್ಯವಾಯಿತು.

++++

ಹಿಂದಿನ ದಿವಸವೇ ಫೋನ್ ಮಾಡಿ ಹೇಳಿದ್ದನಷ್ಟೆ, ಬೆಳಿಗ್ಗೆ ಎಂಟರ ನಂತರ ಬರುವುದಾಗಿ ಹೇಳಿದ್ದ ಚೌಗಲೆ ತನ್ನ ಮಿತ್ರ ಚಕ್ರವರ್ತಿ ಸಂಗಡ ಇಲಾಹಿಯಲ್ಲಿ ಇಳಿದಾಗ ನಾನು ಬಹಿರ್ದೆಸೆ ಮುಗಿಸಲೆಂದು ವಾಗಿಲಿಗೆ ಒಂದೂವರೆ ಕಿಲೋಮೀಟರ್ ದೂರವಿದ್ದ ಮೂಲಿಮನಿ ಗೌಡರ ಬಿಳಿ ಜೋಳದ ಹೊಲದ ಕಡೆ ಹೋಗಿದ್ದೆ. ಆ ನೆಪದಲ್ಲಾದರೂ ಅವರು ಹೊಲಕ್ಕೆ ಹೋಗಿ ಆಳೆತ್ತರ ಬೆಳೆದಿರುವ ಬೆಳೆ ನೋಡಲು ಹಿಂದೆಯೇ ತಿಳಿಸಿದ್ದರು. ತುಸು ಅಂಗಲಕ್ಕಿದ್ದ ಕಾರಣಕ್ಕೆ ಜೋಳದ ದಂಟುಗಳು ಆರೇಳು ಅಡಿ ಎತ್ತರಕ್ಕೆ ಬೆಳೆದಿದ್ದವು, ಪ್ರತಿಯೊಂದು ಗಿಡದ ತುದಿಯಲ್ಲಿ ಮುತ್ತಿನ ಚೆಂಡುಗಳಂಥ ಜೋಳದ ತೆನೆಗಳು, ಜೋಳದ ಸಾಲುಗಳ ನಡುವೆ ಕುಸುಬಿ ಹಾಕಿದ್ದರಿಂದಾಗಿ ಗಿಳಿಗಳಿಗೂ ಬರವಿರಲಿಲ್ಲ, ಗುಬ್ಬಿ ಗೀಜಗಗಳಂತೂ ಹೇರಳವಾಗಿದ್ದವು. ಹದಿನಾರು ಎಕರೆ ವಿಸ್ತೀರ್ಣವಿದ್ದ ಹೊಲ ವಾಯು ವಿಹಾರಕ್ಕೆ ಸೂಕ್ತ ಸ್ಥಳವಾಗಿತ್ತು, ವಾಗಿಲಿಯ ಸಡಗರ ಸಂಭ್ರಮವನ್ನು ದ್ವನಿಪೂರ್ವಕವಾಗಿ ಕೇಳಿಸಿಕೊಳ್ಳುತ್ತಲೇ ಶೌಚಕಾರ್ಯ ಮುಗಿಸಿ ಹೊಲದ ತುಂಬೆಲ್ಲಾ ಎರಡು ಸುತ್ತು ತಿರುಗಾಡಿದೆ, ಗೌಡರು ಬೇಸಿಗೆ ರಜೆಯಲ್ಲಿ ನೀಡಲಿರುವ ಸಂದರ್ಶನವನ್ನು ಸೃಜನಶೀಲವಾಗಿ ಕಲ್ಪಿಸಿಕೊಳ್ಳುತ್ತ ರೋಮಾಂಚನವನ್ನು ಅನುಭವಿಸಿದೆ. ನಾನು ಕೇಳಲಿರುವ ಪ್ರಶ್ನೆಗಳನ್ನೂ ಅವರು ಅದಕ್ಕೆ ನೀಡಲಿರುವ ಉತ್ತರಗಳನ್ನೂ ಕಲ್ಪಿಸಿಕೊಳ್ಳಲಾರಂಭಿಸಿದೆ. ಅದರ ಆಧಾರದ ಮೇಲೆ ಹೊಸ ಕಾದಂಬರಿಯನ್ನು ಬರೆದರೆ ಹೇಗಿರುತ್ತದೆ ಎಂದೂ ಯೋಚಿಸಿದೆ. ಅವರೇನೋ ಸರಿ, ಆದರೆ ಅವರ ಮಗನ ಮ್ಯಾನರಿಜಂ ನನಗೆ ಇಷ್ಟವಾಗಲಿಲ್ಲ, ತಂದೆ ಮಗನ ನಡುವೆ ಎರಡು ದೃವಗಳ ನಡುವೆ ಇರುವ ಫರಕು. ಶ್ರಮವಹಿಸಿ ಸಿದ್ದಪಡಿಸಿದ ಭಾಷಣದ ಮೇಲೆ ತಾನು ಕಣ್ಣಾಡಿಸಲೂ ಇಲ್ಲ, ಕನಿಷ್ಟಪಕ್ಷ ಹೇಳಲಿರುವ ಮಾತುಗಳನ್ನು ಆಲಿಸುವ ಸೌಜನ್ಯವನ್ನೂ ಪ್ರಕಟಿಸಲಿಲ್ಲ, ವಾರೆಗಣ್ಣಿನಿಂದ ನೋಡಿದ್ದೂ ತಡವಾಗಲಿಲ್ಲ, ಕಣ್ಸನ್ನೆಯಿಂದ ಹೊರಡಿರೆಂದು ಹೇಳಿದ್ದೂ ತಡವಾಗಲಿಲ್ಲ. ಕಾದ ಕಾವಲಿ ಮೇಲಿನ ಕೋಳಿಮರಿಯಂತೆ ವರ್ತಿಸುವ ತಾನು ಜಲಪ್ರತಿನಿಧಿಯಾಗುವುದೆಂದರೆ! ಅಂಥ ಅಹಂಕಾರಿಯನ್ನು ಶಶಾಂಕನ ಪಾತ್ರದೊಂದಿಗೆ ಸಮೀಕರಿಸಲು ಯೋಚಿಸಿದ್ದು ನನ್ನ ತಪ್ಪು. ಅಂಥ ವ್ಯಕ್ತಿಗೆ ಸರಿಯಾದ ಗುರುಗಳೆಂದರೆ ದಯಾನಂದ ಪನ್ನಂಗಧರರು. ನನ್ನ ಕಾದಂಬರಿಯಲ್ಲಿ ಪ್ರತಾಪರೆಡ್ಡಿಗೆ ನಾಯಕನೂ ಅಲ್ಲದ ಖಳನಾಯಕನೂ ಅಲ್ಲದ ಕ್ಷುದ್ರ ಸ್ಥಾನವನ್ನು ಕಲ್ಪಿಸಬೇಕು, ಅಂಥವನನ್ನು ಅವರಿಬ್ಬರಿಂದ ದಾರುಣ ರೀತಿಯಲ್ಲಿ ಕೊಲೆ ಮಾಡಿಸಬೇಕು.

ಸಹಸ್ರಾರು ಎಕರೆ ಜಮೀನಿಗೆ ಒಡೆಯರಾಗಿರುವ, ತಮ್ಮ ಶತ್ರುಗಳನ್ನು ಮುಗಿಸಲು ಹಗಲಿರುಳು ಒಂದಲ್ಲಾ ಒಂದು ಸಂಚು ರೂಪಿಸುತ್ತಿರುವ, ತಮಗೆ ಸಹಜ ಮರಣ ದಯಪಾಲಿಸುವಂತೆ ದೇವರಲ್ಲಿ ಅಂಗಲಾಚುತ್ತಿರುವ, ಆರೋಗ್ಯಕ್ಕೆ ಸಂಬಂಧಿಸಿದಂತೆ ತಾವು

ಅಪ್ಪಟ ಚಿನ್ನವೆಂಬಂತೆ ಸಾರ್ವಜನಿಕವಾಗಿ ಪೋಜು ನೀಡುತ್ತಿರುವ ಹೆಬ್ಬಟಂ ಗೌಡರು ದೈಹಿಕವಾಗಿ ಸುಖವಾಗಿರುವರೆ ಎಂಬ ಸಂದೇಹ ಹೊಲ ದಾಟಿದ ಬಳಿಕ ಕಾಡಲಾರಂಭಿಸಿತು. ಅಪರ ಸಂಗಡ ಎರಡು ಮೂರು ದಿವಸಗಳ ಕಾಲ ಒಡನಾಡಿರುವ, ಅವರ ನಡೆನುಡಿಯನ್ನು ತೀವ್ರವಾಗಿ ಗಮನಿಸಿರುವ, ಮನೆಯ ಮೂಲೆ ಮೂಲೆಯಲ್ಲಿದ್ದ ಔಷಧ ಸಾಮಾಗ್ರಿಗಳನ್ನು ಕೂಲಂಕಷ ಗಮನಿಸಿರುವ ಆಧಾರದ ಮೇಲೆ ಹೇಳುವುದಾದರೆ ಅವರು ನಿಸ್ಸಂದೇಹವಾಗಿ ಮಾರಣಾಂತಿಕ ವ್ಯಾಧಿಗಳಿಂದ ನರಳುತ್ತಿರುವರು. ತಮ್ಮ ಕರುಳ ಕುಡಿ ತಮ್ಮ ಕಣ್ಣೆದುರು ಅಕಾಲಿಕ ಮರಣಕ್ಕೆ ತುತ್ತಾಗದ ರೀತಿಯಲ್ಲಿ ಜಾಗ್ರತೆ ವಹಿಸಿರುವರು, ವ್ಯಾಧಿಗಳಿಂದ ಅಥವಾ ಶತ್ರುಗಳ ಕೈಯಿಂದ ಸಾಯಲಿರುವ ತಾವು ಸಹಸ್ರ ಚಂದ್ರ ದರ್ಶನ ಮಾಡುವ ಯೋಗ ತಮಗಿಲ್ಲವೆಂದು ಮನವರಿಕೆ ಮಾಡಿಕೊಂಡಿರುವರು. ಅದಕ್ಕೆಂದೇ ಅಲ್ಲವೆ ತಾವು ಅಕ್ಷರಗಳಲ್ಲಿ, ಭಾಷೆಯ ವಿವಿಧ ಆಕಾರ ವಿನ್ಯಾಸಗಳಲ್ಲಿ ಉಳಿಯಲೆಂದೇ ನನ್ನ ಹೆಗಲನ್ನು ಅಪ್ಯಾಯತೆಯಿಂದ ಸ್ಪರ್ಶಿಸಿದ್ದು, ಮನಸ್ಸು ಬಿಚ್ಚಿ ಮಾತಾಡಿದ್ದು, ತಮ್ಮ ಜೀವನಾನುಭವಗಳನ್ನು ಹಂಚಿಕೊಳ್ಳಲು ಹಾತೊರೆಯುತ್ತಿರುವುದು. (ಈ ಕಾಮನ್ ಸೆನ್ಸ್ ತಮ್ಮ ಮಗನಿಗೆ ಇಲ್ಲದಿರುವುದು ದುರಂತ) ಅದಕ್ಕೆಂದೇ ಅಲ್ಲವೆ ತಮ್ಮ ಸಮಾಧಿಯ ನಿರ್ಮಾಣ ಕಾರ್ಯವನ್ನು ಆರಂಭಿಸಿರುವುದು. ಅದನ್ನು ಮುಖ್ಯವಾಗಿ ತಮ್ಮ ಬೆನ್ನ ಹಿಂದಿನ ಶತ್ರುಗಳಿಗೆ, ಎದೆ ಮುಂದಿನ ಹಿತಶತ್ರುಗಳಿಗೆ ರಾಜಾರೋಷವಾಗಿ ತೋರಿಸುತ್ತಿರುವುದು, ತಮ್ಮ ಮರಣೋತ್ತರದ ಸೌಭಾಗ್ಯವನ್ನು ಅತಿರಂಜಕವಾಗಿ ವರ್ಣಿಸುತ್ತಿರುವುದು.

ರಾಯಲಸೀಮೆಯ ಕೊಲಿಮಿಗುಂಡ್ಲದ ಭೈರೆಡ್ಡಿ, ಔಕ್‌ನ ರಾಮಕ್ರಿಷ್ಟಾರೆಡ್ಡಿಯಂಥ ಪ್ರಜಾಪ್ರಭುತ್ವ ವಿರೋಧಿ ಫ್ಯಾಕ್ಷನಿಷ್ಟುಗಳು ಈ ರೀತಿ ಆಲೋಚಿಸಿದ್ದಲ್ಲಿ ತಕರಾರು ಇರಲಿಲ್ಲ, ಆದರೆ ತಾತ್ವಿಕವಾಗಿ ಆಲೋಚಿಸುವವರೂ, ಜನರ ಮನಸ್ಸನ್ನು ಸೂರೆಗೊಳ್ಳಲು ಹಪಹಪಿಸುತ್ತಿರುವವರು, ತಮ್ಮ ಮಗನನ್ನು ಮುಂದೆ ಚಂಡಮಾರುತದಂತೆ ಸಂಭವಿಸಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ನಿಲ್ಲಿಸಲಿರುವವರು ಆದಂಥ ಹೆಬ್ಬಟಂ ಗೌಡರು ಹೀಗೆ ಯೋಚಿಸುತ್ತಿರುವುದು ನನ್ನ ಮನಸ್ಸಿಗೆ ಸುತಾರಾಂ ಹಿಡಿಸಲಿಲ್ಲ, ಒಂದೂವರೆ ಶತಮಾನದ ಹಿಂದೆ ಈಸ್ಟ್ ಇಂಡಿಯಾ ಕಂಪನಿ ವಿರುದ್ದ ಹೋರಾಡಿದ, ರಾಬರ್ಟ್ ವಿಲಿಯಂಸ್‌ನಂತ ಕ್ರೂರ ಅಧಿಕಾರಿಯನ್ನು ಕಗ್ಗೊಲೆ ಮಾಡಿದ, ರಾಯಲಸೀಮಾ ಜನಮಾನಸದಲ್ಲಿ ಶಾಶ್ವತವಾಗಿ ನಿಂತಿರುವ, ಜಾನಪದರ ಮೌಖಿಕ ಕಾವ್ಯಗಳ ನಾಯಕನಾಗಿರುವ ತಮ್ಮ ಪೂರ್ವಜ ನರಸಿಂಹರೆಡ್ಡಿಯ ಬದುಕನ್ನು ಆದರ್ಶವಾಗಿರಿಸಿಕೊಂಡು ಬದುಕುವ ಕಲೆಯನ್ನು ರೂಢಿಸಿಕೊಳ್ಳಬಹುದಾಗಿತ್ತಲ್ಲವೆ! ತಮ್ಮ ಹದಿಹರೆಯದ ದಿನಗಳಲ್ಲಿ ಸರಿ ದಾರಿಯಲ್ಲಿ ನಡೆಯಬಹುದಿತ್ತಲ್ಲವೆ! ಹ್ಞೂ ಹ್ಞು! ಅದ್ಯಾವುದೂ ಮಾಡಲಿಲ್ಲ ನಮ್ಮ ಗೌಡರು! ಅದೆಲ್ಲ ಬಿಟ್ಟು ಈಗ ವೃದ್ಯಾಪ್ಯ ಕಾಲದಲ್ಲಿ ಸರಿ ತಪ್ಪುಗಳ ಕುರಿತು ವಿಧವೆಯಂತೆ ಯೋಚಿಸಿದರೇನು ಪ್ರಯೋಜನ! ಸ್ವಯಂ ಇಚ್ಚೆಯಿಂದ ಸೃಷ್ಟಿಸಿಕೊಂಡಿರುವ ಶತ್ರುಗಳ ಮನಸ್ಸನ್ನು ಒಲಿಸಿಕೊಳ್ಳಲೆಂದೇ ಅಲ್ಲವೆ ಕಾರ್ಯಕ್ರಮದ ನೆಪದಲ್ಲಿ ಅವರೆಲ್ಲರನ್ನು ವಾಗಿಲಿಗೆ ಬರಮಾಡಿಕೊಳ್ಳುತ್ತಿರುವುದು! ಅವರೆಲ್ಲರನ್ನು ಸನ್ಮಾನಿಸುತ್ತಿರುವುದು! ಭೂರಿ ಬೋಜನವನ್ನು ಸವೆಸುತ್ತಿರುವುದು! ಹೀಗೆ ಯೋಚಿಸುತ್ತಿರುವಷ್ಟರಲ್ಲಿ ಊರನ್ನು ಸಮೀಪಿಸಿದ್ದೆ. ಪಾಕದ ಪರಿಮಳ ಅಲೆಅಲೆಯಾಗಿ ಘ್ರಾಣೇಂದ್ರಿಯವನ್ನು ಸ್ಪರ್ಶಿಸಲಾರಂಭಿಸಿತು, ಅದು ಶ್ರಾದ್ಧಾಕ್ಕೆ ಸಂಬಂಧಿಸಿದ್ದೋ, ಸಂಭ್ರಮಕ್ಕೆ ಸಂಬಂಧಿಸಿದ್ದೋ!

ಅಷ್ಟರಲ್ಲಿ ಎಲ್ಲಿಂದಲೋ ಮೇಸ್ಟ್ರೇ ಎಂದು ಯಾರೋ ಕೂಗಿದಂತೆ ಕೇಳಿಸಿತು, ಕಣ್ಣರಳಿಸಿ

ನೋಡಿದೆ, ಸುಶಿಕ್ಷಿತ ವ್ಯಕ್ತಿಯೋರ್ವ ಅಷ್ಟು ದೂರದಲ್ಲಿ ಗೋಚರಿಸಿದ, ಕೈ ಸನ್ನೆ ಮೂಲಕ ಬಳಿಗೆ ಆಹ್ವಾನಿಸಿದ. ಮೆಲ್ಲಗೆ ಹೋದೆ, ಆತ ಬೇರೆ ಯಾರೂ ಆಗಿರದೆ ತಿರುಪತಿ ನಿವಾಸಿ ಗೋಲ್ಡ್ ಮೆಡಲಿಸ್ಟ್ ಸಿವಿಲ್ ಇಂಜಿನಿಯರ್ ರಾಸಾನಿಯಾಗಿದ್ದ, ವಾಸ್ತು ಶಾಸ್ತ್ರದಲ್ಲೂ ಪರಿಣತಿ ಗಳಿಸಿದ್ದ, ಬದುಕಿರುವವರಿಗೆ ಸಂಬಂಧಿಸಿದ ಕಟ್ಟಡಗಳ ನಿರ್ಮಾಣಕ್ಕಿಂತ ಮುಖ್ಯವಾಗಿ ಸುಂದರ ಸಮಾಧಿಗಳನ್ನು ನಿರ್ಮಿಸುವ ವಿಷಯಕ್ಕೆ ಸಂಬಂಧಿಸಿದಂತೆ ರಾಯಲಸೀಮೆಯ ನಾಲ್ಕೂ ಜಿಲ್ಲೆಗಳಲ್ಲಿ ಹೆಸರು ಗಳಿಸಿದ್ದ, ತಾನು ನಿರ್ಮಿಸಿರುವ ಸಮಾಧಿ ಸ್ಮಾರಕಗಳೆಲ್ಲ ಅಕಾಲ ಮರಣಕ್ಕೆ ತುತ್ತಾದ ಫ್ಯಾಕ್ಷನಿಷ್ಟ್ ಮುಖಂಡರವುಗಳೆ! ಕಳೆದ ವರ್ಷ ಅಲಹಾಬಾದ್ ಸಮೀಪದ ಪ್ರಯಾಗದ ಕುಂಭಮೇಳದಲ್ಲಿ ಶಾಸ್ತ್ರೋಕ್ತವಾಗಿ ಭಾಗವಹಿಸಿದ ಕ್ಷಣವೇ ಹೆಬ್ಬಟಂ ಗೌಡರು ತಮ್ಮ ಮರಣೋತ್ತರ ಪುನರ್ಜನ್ಮ ಕುರಿತಂತೆ ತಲೆ ಕೆಡಿಸಿಕೊಂಡಿದ್ದರು. ಅಲ್ಲಿಂದ ನೇರವಾಗಿ ಹೊರಟು ತಿರುಪತಿ ತಲುಪಿ ಆತನನ್ನು ಸಂಪರ್ಕಿಸಿದ್ದರು, ತಮ್ಮ ಮರಣೊತ್ತರ ಸಮಾಧಿ ಸ್ಮಾರಕ ಕುರಿತಂತೆ ಚರ್ಚಿಸಿದ್ದರು, ಗ್ರಹಗತಿಗಳೊಂದೇ ಅಲ್ಲದೆ ವಾಸ್ತುಶಾಸ್ತ್ರವನ್ನು ಪರಿಶೀಲಿಸಿ ಆತ ತಯಾರಿಸಿ ನೀಡಿದ ನೀಲನಕಾಶೆ ನೋಡಿ ಬೆರಗಾಗಿ ಆತನ ಕೈಗಳನ್ನು ಪಾದಗಳೆಂದೇ ಭಾವಿಸಿ ಸ್ಪರ್ಶಿಸಿದ್ದರು, ವಾಗಿಲಿಗೆ ಬರಮಾಡಿಕೊಂಡಿದ್ದರು. ಬಹಿರ್ದೆಸೆಯ ನೆಪದಲ್ಲಿ ಬಂದು ಹೋಗುತ್ತಿದ್ದ ನಾನು ಆತನ ಪರಿಚಯ ಮಾಡಿಕೊಂಡಿದ್ದೆ, ಗರುಡ ಪುರಾಣವನ್ನು ಅರಗಿಸಿಕೊಂಡಿದ್ದ ಆತನ ವಿದ್ವತ್ತಿಗೆ ಬೆರಗಾಗಿದ್ದೆ, ಪಲ್ಗುಣಿ ನದಿ ಕುರಿತು ಆತ ರಚಿಸಿದ್ದ ಅಪ್ರಕಟಿತ ಖಂಡಕಾವ್ಯ ಕೇಳಿ ಮೂಕವಿಸ್ಮತನಾಗಿದ್ದೆ.

ತಿಂಗಳಿಗೊಮ್ಮೆ ಬಂದು ಕಟ್ಟಡದ ಕಾಮಗಾರಿಯನ್ನು ಪರಿಶೀಲಿಸುತ್ತಿದ್ದ ರಾಸಾನಿ ಕೆಲವು ದಿವಸಗಳಿಂದ ವಾಗಿಲಿಯಲ್ಲಿ ವಾಸ್ತವ್ಯ ಹೂಡಿದ್ದ, ಅದೂ ಸಮಾಧಿ ಸ್ಮಾರಕದ ಒಂದು ಪಕ್ಕದಲ್ಲಿ. ಹತ್ತಿರವಾದೊಡನೆ ಏಮಂಡಿ ಮಿಮ್ಮಲ್ನಿ ಚೂಚಿ ಚಾಲ ರೋಜಲಯಿಂದಿ ಇಕ್ಕಡಿಕಿ ರಾಲೇದು ಕದಾ ಎಂದು ಕೇಳಿದ, ಹೌದು ನಾನು ಕೆಲವು ದಿವಸಗಳಿಂದ ಶೌಚಕ್ಕೆ ಆ ಕಡೆ ಬಂದಿರಲಿಲ್ಲ, ಪೂರ್ವಕ್ಕೆ ಬದಲಾಗಿ ಈಶಾನ್ಯಕ್ಕಿದ್ದ ತೋಪಿನ ದಾರಿಯನ್ನು ಆಯ್ಕೆ ಮಾಡಿಕೊಂಡಿದ್ದೆ, ಆದರೆ ಶೌಚಕ್ಕೂ ವಾಸ್ತುವಿಗೂ ಸಂಬಂಧವಿರಲಿಲ್ಲ. ಅದೇ ತಾನೆ ಶೌಚ ಮುಗಿಸಿದ್ದ ತನ್ನ ಕೈಯಲ್ಲಿ ಖಾಲಿ ತಂಬಿಗೆ ಇತ್ತು, ಲಾಘವ ಮಾಡಲು ಚಾಚಿದ ಕೈಯನ್ನು ಒಡನೆಯೇ ಉಪಸಂಹರಿಸಿಕೊಂಡ, ಕಾರಣ ಆ ಕೈಯನ್ನು ಶೌಚಕ್ಕೆ ಬಳಸಿದ್ದರಿಂದಾಗಿ. ನಿರ್ಮಾಣದ ಕೊನೆ ಹಂತದಲ್ಲಿದ್ದ ಕಟ್ಟಡದ ಬಳಿಗೆ ಕರೆದೊಯ್ದ. ಗೌಡರು ಶ್ರೀಶೈಲಮಲ್ಲಿಕಾರ್ಜುನ ಪರಮಭಕ್ತರಾಗಿರುವುದರಿಂದ, ವೀರಶೈವ ಧರ್ಮಾವಲಂಭಿಗಳಾಗಿರುವುದರಿಂದ ಸ್ಮಾರಕವನ್ನು ಷಟ್‌ಸ್ಥಳಗಳ ಆಧಾರದ ಮೇಲೆ ರೂಪಿಸಿರುವುದಾಗಿ ಹೇಳಿಕೊಂಡ, ಹಿಂದೊಮ್ಮೆ ತಾನು ನನ್ನಿಂದ ಷಟ್ ಸ್ಥಳಗಳ ಕುರಿತು ಮಾಹಿತಿ ಪಡೆದಿದ್ದನಷ್ಟೆ, ಆರೂ ಮೂಲೆಯಲ್ಲಿ ಆರು ಕಂಭಗಳು, ಅದರ ಮೇಲೆ ಪಿರಾಮಿಡ್ ಆಕೃತಿಯ ಗುಂಬಜ್, ನಟ್ಟ ನಡುವೆ ಗೌಡರ ಸಂಭವನೀಯ ಕಳೇಬರವನ್ನು ಪ್ರತಿಷ್ಠಾಪಿಸುವ ಸಲುವಾಗಿ ಸ್ಥಳವನ್ನು ಮೀಸಲಿರಿಸಲಾಗಿತ್ತು, ರುಂಡ ಯಾವ ಕಡೆ ಮುಂಡ ಯಾವ ಕಡೆ ಎಂದೇನ್ನನ್ನೋ ವಿವರಿಸುವ ಪ್ರಯತ್ನ ಮಾಡಿದ, ನನಗೆ ಆಸಕ್ತಿ ಇರದಿದ್ದುದರಿಂದ ಸರಿಯಾಗಿ ಕೇಳಿಸಿಕೊಳ್ಳಲಿಲ್ಲ, ಕೇವಲ ಇದು ಗೌಡರ ಸಮಾಧಿ ಸ್ಥಳ ಮಾತ್ರವಾಗಬಾರದು ಎಂಬ ಧಾರ್ಮಿಕ ಉದ್ದೇಶದಿಂದ ಅಗೋ ಅಲ್ಲಿ ನವಗ್ರಹಗಳನ್ನೂ, ಇಗೋ ಇಲ್ಲಿ ರಾಜಾ ಹರಿಶ್ಚಂದ್ರನ ವಿಗ್ರಹವನ್ನೂ ಪ್ರತಿಷ್ಠಾಪಿಸುವ ಸಲುವಾಗಿ ಸ್ಥಳವನ್ನು ಮೀಸಲಿರಿಸಲಾಗಿರುವುದಾಗಿ ತಿಳಿಸುತ್ತ ನಿಟ್ಟುಸಿರು ಚೆಲ್ಲಿದ, ಅದಕ್ಕೆ ಕಾರಣ ಇಲ್ಲದಿರಲಿಲ್ಲ,

ತಾನೋ ಹೈದರಾಬಾದಿನ ಅಲಿ ಕುತುಬ್‌ಷಾ ಇಂಜಿನೀರಿಂಗ್ ಪದವೀಧರ, ಪ್ರತಿಭೆಗೆ ತನ್ನಲ್ಲಿ ಕೊರತೆಯಿಲ್ಲ, ಆದರೆ ತನ್ನ ಪ್ರತಿಭೆ ಸಮಾಧಿಗಳಿಗೆ ಸೀಮಿತವಾಗಿರುವುದು ತನ್ನ ದುರ್ದೈವ್ಯ, ಶ್ರೀಮಂತರ ಹಾಗೂ ಕಾರ್ಪೊರೇಟ್ ವಲಯದಲ್ಲಿ ತನಗೆ ಕೆಟ್ಟ ಹೆಸರು ಸಹ ಪ್ರಾಪ್ತವಾಗಿರುವುದು ಬೇರೆ. ಸಮಾಧಿಗಳ ವಿನ್ಯಾಸಕಾರನಿಂದ ಬಹುಮಹಡಿ ಕಟ್ಟಡಗಳಿಗೆ ಸಂಬಂಧಿಸಿದ ನೀಲನಕಾಶೆ ಪಡೆಯುವುದಾಗಲೀ, ಸಲಹೆ ಸೂಚನೆ ಪಡೆಯುವುದಾಗಲೀ ಅಪವಿತ್ರವೆಂದು ಭಾವಿಸಿರುವ ಶ್ರೀಮಂತರು ಜಮೀನ್ದಾರರು ತನ್ನನ್ನು ದೂರವಿರಿಸಿರುವರೆಂದು ಪ್ರಾಂಜಲ ಮನಸ್ಸಿನಿಂದ ಹೇಳಿಕೊಂಡ.

ಕೆಲವು ದಿವಸಗಳ ಹಿಂದೆ ರಾಜಸ್ಥಾನದಿಂದ ತರಿಸಿದ್ದ ಅಮೃತಶಿಲೆಗಳ ಪೈಕಿ ಕೆಲವನ್ನು ನೆಲದ ಮೇಲೆ ಹಾಸಲಾಗಿತ್ತು, ಸ್ಥಳೀಯರಲ್ಲದ ಕಟ್ಟಡದ ಕಾರ್ಮಿಕರ ಪೈಕಿ ಕೆಲವರು ಎಚ್ಚರಗೊಂಡು ಆಕಳಿಸುತ್ತಿದ್ದರೆ ಇನ್ನೂ ಕೆಲವರು ಮೈಗೂಡಿಸಿಕೊಂಡು ಮಲಗಿದ್ದರು. ರಾಸಾನಿ ಸ್ಮಾರಕದ ಇಂಚಿಂಚು ಜಾಗವನ್ನು ವೈಜ್ಞಾನಿಕ ನೆಲೆಯಲ್ಲಿ ವಿವರಿಸಿದ, ಜೊತೆಗೆ ಅದರ ಸುತ್ತಲಿನ ಪರಿಸರವನ್ನು ಪರಿಚಯಿಸುವುದನ್ನು ಮರೆಯಲಿಲ್ಲ, ಸುತ್ತಲಿದ್ದ ಬಿಲ್ವ ತುಳಸಿ ಇತ್ಯಾದಿ ಸಸ್ಯಗಳ ಪೈಕಿ ಕೆಲವು ಒಣಗಿದ್ದರೆ ಕೆಲವು ಜೀವಂತವಿರಲು ಶಕ್ತಿ ಮೀರಿ ಶ್ರಮಿಸುತ್ತಿದ್ದವು. ಸುತ್ತಲಿದ್ದ ಪ್ರಹರಿಗೋಡೆಗೆ ಅಂಟಿಕೊಂಡಂತಿದ್ದ ಬೋನು ಬಿಲಗಳನ್ನು ಜಿಂಕೆ ಮೊಲದಂಥ ಸಸ್ಯಾಹಾರಿಯೂ ನಿರುಪದ್ರವಿಯೂ ಆದ ಪ್ರಾಣಿಗಳಿಗೆಂದೇ ಕಟ್ಟಲಾಗಿತ್ತು. ಗಿಳಿ ನವಿಲುಗಳೊಂದೇ ಅಲ್ಲದೆ ಬಣ್ಣ ಬಣ್ಣದ ಪಾತರಗಿತ್ತಿ ಚಿಟ್ಟೆಗಳನ್ನೂ ವಿವಿಧ ರಾಜ್ಯಗಳಿಂದ ತರಿಸಿಕೊಳ್ಳಲಾಗುವುದೆಂದು ರಾಸಾನಿ ತಿಳಿಸಿದ. ಅವೆಲ್ಲಕ್ಕೆ ಪೂರಕವಾಗಿ ವಿವಿಧ ಪುಷ್ಪ ಗಿಡಗಳನ್ನೂ, ವಿವಿಧ ಹಣ್ಣುಗಳ ಮರಗಳನ್ನೂ ಬೆಳೆಸುವ ಯೋಜನೆ ಕುರಿತಂತೆ ಗೌಡರು ತಮ್ಮ ಮರಣೊತ್ತರ ಸಂದರ್ಭದಲ್ಲಿ ಯೋಚಿಸಬೇಕಿರುವುದೆಂದೂ ತಿಳಿಸಿದ, ಮುಂದಾಲೋಚನೆಗೆ ಸಂಬಂಧಿಸಿದಂತೆ ಹೇಳುವುದಾದರೆ ಗೌಡರು ನಿಶಿತಮತಿಗಳೆನ್ನುವುದರಲ್ಲಿ ಎರಡನೇ ಮಾತಿಲ್ಲ. ತಮ್ಮ ಮರಣಾನಂತರ ತಾವು ನಿರ್ವಾಣಗೊಳ್ಳಲಿರುವ ಸಮಾಧಿ ಸ್ಮಾರಕ ಪೂಜನೀಯ ಸ್ಥಳವಾಗಬೇಕು, ಪ್ರೇಕ್ಷಣೀಯ ಧಾರ್ಮಿಕ ಹಾಗೂ ಜಾಗೃತ ಸ್ಥಳವೆಂದು ಪ್ರಸಿದ್ಧವಾಗಬೇಕು, ತಮ್ಮ ಜಯಂತಿ ವರ್ಧಂತಿ ಸಂದರ್ಭಗಳಂದು ಸಾಪ್ತಾಹಿಕ ಪರ್ಯಂತ ಪುರಾಣ ಪುಣ್ಯಶ್ರವಣ ಅವ್ಯಾಹತವಾಗಿ ನಡೆಯಬೇಕೆಂಬ ಸದುದ್ದೇಶ ತಮ್ಮದು.

ಕವಿಗೆ ಸಮೀಪ ಬಾಯಿಯಿರಿಸಿ ನಿಮ್ಮಂಥವರ ಸೃಜನಶೀಲ ಪ್ರತಿಭೆ ಕೇವಲ ಗದ್ಯಕ್ಕೆ ಸೀಮಿತವಾಗಬಾರದೆಂದೂ, ಗೌಡರ ಪುರಾಣ ಬರೆಯುವುದರ ಮೂಲಕ ಮಾರ್ಗಕವಿಯಾಗಿ ರೂಪಗೊಳ್ಳುವುದು ಮುಖ್ಯವೆಂದೂ ತಿಳಿಸಿದ, ಒಪ್ಪುವುದಾದರೆ ಗೌಡರಿಗೆ ಹೇಳಿ ಹೇರಳ ಗೌರವಧನವನ್ನು ಮುಂಗಡ ರೂಪದಲ್ಲಿ ಕೊಡಿಸುವುದಾಗಿ ಹೇಳಿದ. ಹೇಗೋ ಶ್ರೀಮಂತರ ಸಂಗಡ ತಿಂಗಳ ಕಾಲ ಪ್ರವಾಸ ಹೊರಡುತ್ತಿರುವಿರಲ್ಲವೆ!

ಒಬ್ಬ ಲೇಖಕನಿಗೆ ವಾಕರಿಕೆ ಹುಟ್ಟಿಸಲು ಇಷ್ಟು ಸಾಕಲ್ಲವೆ! ಮುಖದ ಭಾವನೆಗಳು ಏರುಪೇರಾಗದಂತೆ ಎಚ್ಚರವಹಿಸಿದೆ, ರಾಸಾನಿಯೂ ಗೌಡರಂತೆಯೇ ಪ್ರಳಯಾಂತಕ, ಇವನ ತಂದೆ ಅಥವಾ ಪೂರ್ವಜರು ಜಮೀನ್ದಾರರಿದ್ದಿರಬಹದು, ಫ್ಯಾಕ್ಷನಿಷ್ಟುಗಳಾಗಿದ್ದರೂ ಸಂದೇಹವಿಲ್ಲ, ಯೋಚಿಸುತ್ತ ಮುಗುಳ್ನಗೆಯನ್ನು ತುಟಿ ನಡುವೆ ಮುಡಿಯಲು ಹರ ಸಾಹಸ ನಡೆಸಿದೆ. ಪೂರ್ವ ದಿಗಂತದ ಕಡೆ ನೋಡಿದೆ, ಸೂರ್ಯ ಅಗತ್ಯಕ್ಕಿಂತ ಹೆಚ್ಚು ಮೇಲೇರಿದ್ದ, ಪ್ರಖರವಾಗಿದ್ದ. ಇನ್ನೂ ಬಹಿರ್ದೆಸೆಯ ಮೈಲಿಗೆಯನ್ನು ತೊಳೆದುಕೊಳ್ಳಬೇಕಿರುವುದು, ಇಲಾಹಿಗೆ ಬಂದಿರಬಹುದಾದ

ಅತಿಥಿಗಳ ಪರಾಮರ್ಶೆ ಮಾಡಬೇಕಿರುವುದು, ಗೌಡರು ಸ್ವಾಮಿದ್ವಯರ ಮೂಲಕ ಹೆಗಲಿಗೆ ವರ್ಗಾಯಿಸಿರುವ ಕಾರ್ಯಗಳ ಕುರಿತಂತೆ ಯೋಚಿಸಬೇಕಿರುವುದು! ಹೊರಡಬೇಕೆಂದರೆ ಮಹಾನುಭಾವ ರಾಸಾನಿ ಬಿಡುತ್ತಿಲ್ಲ, ತನ್ನ ತರಾವರಿ ಆಕರ್ಷಕ ಮಾತುಗಳಿಂದ ನನ್ನನ್ನು ಬಂಧಿಸುತ್ತಿರುವನು. ಗೌಡರಿಂದ ತಪ್ಪಿಸಿಕೊಳ್ಳುವಷ್ಟು ಸುಲಭವಲ್ಲ ತನ್ನಿಂದ ತಪ್ಪಿಸಿಕೊಳ್ಳುವುದು ಎಂಬಂತೆ ದಾರಿಗಡ್ಡಡ್ಡ ನಿಲ್ಲುತ್ತಿರುವನು, ಬಲವಂತದಿಂದ ಹೊರಟು ನೂರು ಹೆಜ್ಜೆ ನಡೆಯುವಷ್ಟರಲ್ಲಿ ಪುನಃ ತಾನೇ ಕೂಗಿ ನಿಲ್ಲಿಸಿದ, ಒಂದೇ ಒಂದು ನಿಮಿಷ ಹತ್ತಿರ ಬರುವಂತೆ ಮನವಿ ಮಾಡಿದ. ಜಮೀನ್ದಾರರಿಗಿಂತ ಅವರವರ ಸಮಾದಿಗಳ ವಾಸ್ತುಶಿಲ್ಪಿಗಳು ಅಪಾಯಕಾರಿ ಎಂಬ ಆತಂಕದಿಂದ ಹತ್ತಿರ ಹೋಗುವುದಕ್ಕೂ ಅದೇ ತಾನೆ ಅಪರಿಚಿತ ವ್ಯಕ್ತಿಯೋರ್ವ ಕಾಲುವೆ ಇದ್ದ ದಿಕ್ಕಿನಿಂದ ಬರುವುದಕ್ಕೂ ಸರಿ ಹೋಯಿತು. ಪೂರ್ವಕ್ಕೆ ಬೆನ್ನು ಮಾಡಿದ್ದರಿಂದ ಆ ವ್ಯಕ್ತಿಯ ಮುಖ ಭಾಗವನ್ನಾಗಲೀ, ಅಂಗಿ ಧರಿಸಿರದ ಸ್ಥೂಲ ದೇಹವನ್ನಾಗಲೀ ನಿಖರವಾಗಿ ಗುರುತಿಸಲಾಗಲಿಲ್ಲ, ಕೊನೆಗೂ ಕ್ರಮೇಣ ಗುರುತಿಸಿದೆ, ಅದೇ ತಾನೆ ಶೌಚ ಸೇರಿದಂತೆ ಸ್ನಾನ ಮುಗಿಸಿರುವಂತಿರುವುದು, ತಾನು ಕರ್ಮಠ ಸಂಪ್ರದಾಯಸ್ಥ ಎಂಬುದಕ್ಕೆ ಸಾಕ್ಷಿಯಾಗಿ ಹಣೆ ಮೇಲೊಂದೇ ಅಲ್ಲದೆ ದೇಹದ ಹಲವು ಕಡೆ ಮೇಲ್ನಾತಿ ಚಿಹ್ನೆಗಳನ್ನು ಧಾರಾಳವಾಗಿ ಧರಿಸಿರುವನು. ವಯಸ್ಸಿನಿಂದ ಹಿರಿಯನಾದ ತಾನು ಮುಂಗಡವಾಗಿ ನಮಸ್ಕರಿಸುವುದಕ್ಕಿಂತ ಸುಮ್ಮನಿರುವುದೇ ಮೇಲೆಂದು ತಾನು ಭಾವಿಸಿರುವಂತಿರುವುದು, ಹಾಗೆಯೇ ಪರಸ್ಪರ ಹೆಸರುಗಳನ್ನು ಹೇಳುವುದು ಕೇಳುವುದು ಸಹ.

ನಮ್ಮಿಬ್ಬರ ನಡುವೆ ಕವಿದ ಮೌನವನ್ನು ಅರ್ಥ ಮಾಡಿಕೊಂಡ ರಾಸಾನಿ ಪರಸ್ಪರ ಪರಿಚಯವಿರುವುದಾಗಿ ಭಾವಿಸಿದ್ದನೇನೊ! ಕೊನೆಗೆ ತಾನೆ ಹೇಳುವ ಸಲುವಾಗಿ ಬಾಯಿ ತೆರೆಯುವಷ್ಟರಲ್ಲಿ ಆತನೇ ನಾಲ್ಕೇ ನಾಲ್ಕು ಮಾತುಗಳಲ್ಲಿ ತನ್ನ ಕುರಿತು ಹೇಳಿಕೊಂಡನಲ್ಲದೆ ನನ್ನ ಬಗ್ಗೆ ಮಾಡಿದ ಭಾಷಣ ಎರಡು ವಾಕ್ಯಕ್ಕಿಂತ ಹೆಚ್ಚಿರಲಿಲ್ಲ. ಆತ ಹೆಸರು ಪದ್ಮನಾಭಂ, ಚಿತ್ತೂರು ಸಮೀಪದ ಮಧುರಾಂತಕಂ, ಅದನ್ನು ತನ್ನ ನಾಮವಾಚಕದ ಪೂರ್ವಾರ್ಧದಲ್ಲಿ ಸೇರಿಸಿಕೊಂಡಿದ್ದ. ಆಚಾರಿಯಾಗಿದ್ದರೂ ಬ್ರಾಹ್ಮಣೀಕರಣಗೊಂಡಿರುವ ವಿಶ್ವಕರ್ಮ ಬ್ರಾಹ್ಮಣ ಬೇರೆ. ಕುಲಕಸುಬಿಗನುಸಾರವಾಗಿ ಕಾಷ್ಠಗಳಲ್ಲೂ ಶಿಲೆಗಳಲ್ಲೂ ಸುಂದರ ಶಿಲ್ಪಗಳನ್ನು ತಯಾರಿಸುವುದರಲ್ಲಿ ರಾಯಲಸೀಮೆಯಲ್ಲಿ ಹೆಸರು ಮಾಡಿರುವನು. ತಿರುಪತಿ ಗೋವಿಂದರಾಯಪಟ್ಟಣ ಕಾಳಹಸ್ತಿಗಳಲ್ಲಿ ಪ್ರೇಕ್ಷಣೀಯವೂ ಪೂಜ್ಯನೀಯವೂ ಆದ ಎಷ್ಟೋ ಸುಂದರ ಶಿಲ್ಪಗಳನ್ನು ತನ್ನ ಪೂರ್ವಜರು ತಯಾರಿಸಿರುವರಂತೆ, ತನ್ನನ್ನಿಲ್ಲಿಗೆ ಗೌಡರು ಬರಮಾಡಿಕೊಂಡಿರುವುದು ತಮ್ಮ ರುಂಡ ಭಾಗದ ಶಿಲ್ಪವನ್ನು ಕೆತ್ತಿಸಿಕೊಳ್ಳುವ ಸಲುವಾಗಿ, ಕೈ ಹಿಡಿದು ಕರೆದೊಯ್ದು ತೋರಿಸಿದ, ಅಪೂರ್ಣವಾಗಿದ್ದ ಕಪ್ಪು ಶಿಲೆಯ ಶಿಲ್ಪ ಫೋಟ್ ಅವರನ್ನು ಹೋಲುತ್ತಿತ್ತು. ಕಣ್ಣುಗಳಲ್ಲಿ ಬೆಳಕನ್ನೂ ತುಟಿಗಳ ನಡುವೆ ಮಂದಹಾಸವನ್ನೂ ಕೆತ್ತುವುದು ಬಾಕಿ ಇರುವುದಾಗಿ ಹೇಳಿಕೊಂಡನು. ಅದ್ಭುತವೆಂದು ಪ್ರಮಾಣೀಕರಿಸಿ ಹೊರಡಲಿದ್ದ ನನ್ನನ್ನು ಪುನಃ ನಿಲ್ಲಿಸಿದ, ಯಾಕೆಂದು ಕೇಳಿದ್ದಕ್ಕೆ ಪುನಃ ತಾನೇ ಹೇಳಿದ, ಅದೆಂದರೆ!

ಶ್ರೀಶೈಲಮಲ್ಲಿಕಾರ್ಜುನ ಹೆಬ್ಬಟಂ ಗೌಡರ ಕುಲದೈವವೆಂದ ಮೇಲೆ ಆತನ ಪರಮಭಕ್ತೆಯಾದ ಮಲಮ್ಮನ ಶಿಲ್ಪವನ್ನು ಕೆತ್ತಿಸುವುದು ಅದನ್ನು ತಮ್ಮ ಸಮಾಧಿಯ ಈಶಾನ್ಯ ದಿಕ್ಕಿನಲ್ಲಿ ಪ್ರತಿಷ್ಠಾಪಿಸುವುದು ಅನಿವಾರ್ಯ ತಾನೆ! ಆದರೆ ಅದನ್ನು ಕಾಲ್ಪನಿಕವಾಗಿ ಕೆತ್ತಲಾದೀತೆ! ಅದಕ್ಕೆ ಸರಿ ಹೊಂದುವಂಥ ರೂಪದರ್ಶಿ ದೊರಕಿ ಸಹಕರಿಸುವುದು ಮುಖ್ಯ ತಾನೆ!

ಜಲಂಧರನ ಸಹೋದರಿಯೂ, ಸುವಿಖ್ಯಾತ ರಂಗಕಲಾವಿದೆಯೂ ಆದಂಥ ಪದ್ಮಾವತಿಗಿಂತ ಮಿಗಿಲೆನಿಪ ರೂಪದರ್ಶಿ ಬೇರೆಲ್ಲಿರಲಾದೀತು! ಪದ್ಮನಾಭಂ ಹೋಗಿ ವಿನಂತಿಸಿಕೊಂಡನಂತೆ, ಅದಕ್ಕೆ ಆಕೆ ಖಡಾಖಂಡಿತವಾಗಿ ನಿರಾಕರಿಸಿದಳಂತೆ! ಆಕೆಯನ್ನು ಹೇಗಾದರೂ ಒಪ್ಪಿಸುವಂತೆ ನಾಭಮ್ಮಾ ರಾಸಾನಿಯೂ ಕೇಳಿಕೊಂಡರು, ಅದೂ ಎರಡೇ ಎರಡು ದಿವಸಗಳ ಮಟ್ಟಿಗೆ. ಅವರ ಭಿನ್ನಹಕ್ಕೆ ತಕ್ಷಣ ಮಣೆ ಹಾಕುವುದು ನನ್ನಿಂದಾಗಲಿಲ್ಲ. ಸಿಡುಕು ಮೋರೆಯ ಹಾಗು ಮಹಾ ಸ್ವಾಭಿಮಾನಿಯೂ ಆದ ಆಕೆಯನ್ನು ಒಪ್ಪಿಸುವುದೆಂದರೆ! ಹೇಳಲಾಗದೆ ಉಗುಳು ನುಂಗಿದೆ. ಪ್ರಯತ್ನಿಸುವುದಾಗಿ ಹೇಳಿ ಅಲ್ಲಿಂದ ಹೊರಟೆ.

ಸಮಾಧಿಯ ಒಂದು ಪಕ್ಕ ಗೌಡರ ಹಾಗೂ ಇನ್ನೊಂದು ಪಕ್ಕ ಹೇಮರೆಡ್ಡಿ ಮಲ್ಲಮ್ಮನ ರುಂಡ ಪ್ರಮಾಣದ ವಿಗ್ರಹಗಳು. ಅವರಿಬ್ಬರಲ್ಲಿ ಒಬ್ಬರು ಜೀವಂತ ಇನ್ನೊಬ್ಬರು ಪೌರಾಣಿಕ, ಪೌರಾಣಿಕ ಶಿಲ್ಪಕ್ಕೆ ಪದ್ಮಾವತಿ ರೂಪದರ್ಶಿಯಾಗುವುದೆಂದರೆ! ವಿಚಿತ್ರವೆನಿಸಿತು, ಸೃಜನಶೀಲ ಆಲೋಚನೆಗಳಿಗೆ ಏನೇನೋ ಹೊಳೆಯಿತು. ಯೋಚನೆಗಳು ನಿರ್ಧಿಷ್ಟ ಪರಿಧಿ ಕ್ರಮಿಸಿ ನಾಟಕದ ಪರಿವೇಷವನ್ನು ಪ್ರವೇಶಿಸಿದವು, ನಾಟಕ ಕೃತಿಯೊಳಗಡೆ ಹೇಮರೆಡ್ಡಿ ಪಕ್ಕಾ ಜಮೀನ್ದಾರ, ಕಾಮುಕ. ತನ್ನ ನಾದಿನಿ ಮಲ್ಲಮ್ಮ ಶಿವಶರಣೆ, ತನ್ನ ಪಾತಿವ್ರತ್ಯದಿಂದ ಶಿವನ ಮೇಲಿನ ಭಕ್ತಿಯಿಂದ ಆತನನ್ನು ಮಹಾಸಂತನನ್ನಾಗಿಯೂ, ಅನುಭಾವ ಕವಿಯನ್ನಾಗಿಯೂ ಪರಿವರ್ತಿಸುತ್ತಾಳೆ. ಹೆಬ್ಬಟಂ ಸೀತಾರಾಮರೆಡ್ಡಿ ಹೇಮರೆಡ್ಡಿಯೋ! ಹೇಮರೆಡ್ಡಿಯೇ ಸೀತಾರಾಮರೆಡ್ಡಿಯೋ! ಅವೆರಡೂ ಪಾತ್ರಗಳ ನಡುವೆ ವಿಲಕ್ಷಣ ತಾದ್ಯಾತ್ಮ ಭಾವವಿರುವಂತೆ ಭಾಸವಾಗಲಾರಂಭಿಸಿತು. ಹೇಮರೆಡ್ಡಿ ಮಲ್ಲಮ್ಮ ನಾಟಕದ ಮೂಲಕ ಕಾದಂಬರಿಯನ್ನು ಪುನರ್ ನಿರೂಪಿಸುವುದು ಸಾಧ್ಯವಾದಲ್ಲಿ! ಯೋಚಿಸುತ್ತ ಮನೆಯನ್ನು ಸಮೀಪಿಸಿದಾಗ..

++++

ಗೌಡರ ಮೂಲಿಮನಿಯ ಸುವಿಶಾಲ ಬಚ್ಚಲಲ್ಲಿ ಒಂದು ಗಂಟೆಯ ಹಿಂದೆಯಷ್ಟೆ ಸ್ನಾನ ಮುಗಿಸಿದ್ದ ಮಿತ್ರದ್ವಯರು ಅರ್ಧ ಗಂಟೆಯ ಹಿಂದೆಯಷ್ಟೆ ಉಪಹಾರ ಸೇವಿಸಿ ಮುಂದಿನ ಕಟ್ಟೆಯ ಮೇಲೆ ಕುಳಿತು ಉಭಯ ಕುಶಲೋಪರಿ ಆರಂಭಿಸಿದ್ದರು ಅದೇ ಆಗ. ರೌಡೂರು ಕೌತಾಳ ತುಂಬಳ ಗ್ರಾಮಗಳಿಂದ ಹಿಂದಿನ ದಿವಸವೇ ಚಂದ್ರದಲ್ಲಿ ಆಗಮಿಸಿದ್ದ ಮೀಸೆಗೌಡರ ಮೊಮ್ಮಕ್ಕಳ ಫೋಟೋ ತೆಗೆಯಲೆಂದು ಚಕ್ರವರ್ತಿ ಕುಳಿತಲ್ಲಿಯೇ ತನ್ನ ನಿಖಾನ್‌ಗೆ ರೀಲಿನ ಸುರುಳಿಯನ್ನು ಸೇರಿಸುತ್ತಿದ್ದನು. ಇನ್ನೇನು ಕಟ್ಟೆಯಿಂದಿಳಿದು ಸೂರ್ಯನೆದುರು ಸಾಲಾಗಿ ನಿಲ್ಲಿರಿ ಮಕ್ಕಳೆ ಎಂದು ತಾನು ಹೇಳುವುದಕ್ಕೂ ನಾನು ಬರುವುದಕ್ಕೂ ಸರಿ ಹೋಯಿತು. ಗೃಹಲಕ್ಷ್ಮಿಯರ ಪೈಕಿ ಜಯಮ್ಮ ಸುಶೀಲಮ್ಮ ಬಾಗಿಲಲ್ಲಿ ಅರ್ಧ ಮರೆಯಾಗಿ ನಿಂತಿದ್ದರೆ ನಾಚಿಕೆಗೆ ಹೆಸರಾಗಿದ್ದ ರತ್ನಮ್ಮ ಗೋಡೆಯ ಕಿಟಿಕಿಯಲ್ಲಿ ತನ್ನರ್ಧ ಮೈಯನ್ನು ಮೊಣಕೈಗಳಿಂದ ಊರಿ ಕುತೂಹಲದಿಂದ ಕಾಡಿಗೆ ಲೇಪಿಸಿದ್ದ ಕಣ್ಣುಗಳಿಂದ ನೋಡುತ್ತಿದ್ದಳು. ಆದರೆ ಎದುರು ಮನೆಯ ಪರಶುರಾಮನ ಧರ್ಮಪತ್ನಿ ಲಚುಮವ್ವ ಮಾತ್ರ ಅಸಂಖ್ಯಾತ ಮಕ್ಕಳೊಡನೆ ತನ್ನ ಮನೆಯ ಮುಂದಿದ್ದ ಕಟ್ಟೆಯ ಒರಟು ಕಲ್ಲಿನ ಮೇಲೆ ಕೂತು ಬಿಡುತ್ತಿದ್ದ ನಿಟ್ಟುಸಿರುಗಳಿಂದಾಗಿ ವಾತಾವರಣದಲ್ಲಿ ಬಿಸಿ ಕಾಣಿಸಿಕೊಂಡಿತ್ತು. ನತದೃಷ್ಟೆಯಾದ ಆಕೆಯನ್ನು ಸಂತೈಸುವುದು ಹೇಗೆಂದು ಯೋಚಿಸುತ್ತಲೇ ಮೀಸೆಗೌಡರು ತಮ್ಮ ಮೊಮ್ಮಕ್ಕಳನ್ನುದ್ದೇಶಿಸಿ ಹಾಗೆ ನಿಲ್ಲಿರಿ ಹೀಗೆ ನಿಲ್ಲಿರಿ ಎಂದು ನಿರ್ದೇಶನ ನೀಡುತ್ತಿದ್ದರು. ಹಾದಿಹೋಕರು ತಮ್ಮ ಲಗುಬಗೆಯ

ನಡುವೆಯೂ ಬೆಂಗಳೂರಿನವರ ಕಡೆ ದೃಷ್ಟಿ ಹಾಯಿಸಿ ಗೌಡರನ್ನು ಔಪಚಾರಿಕವಾಗಿ ಮಾತನಾಡಿಸಿ ಹೋಗುತ್ತಿದ್ದರು.

ಕೈಯಲ್ಲಿದ್ದ ಖಾಲಿ ತಂಬಿಗೆಯನ್ನು ಲುಂಗಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಮರೆ ಮಾಚುತ್ತ ಕಟ್ಟೆಯ ತುದಿಯಲ್ಲಿ ಕಾಲಿಳಿಬಿಟ್ಟು ಕೂತು ಆ ಸನ್ನಿವೇಶದ ಗಮನ ಸೆಳೆಯುವ ಸಲುವಾಗಿ ಕೆಮ್ಮುವ ಸಾಹಸ ಮಾಡಲಿಲ್ಲ. ಆದರೆ ಚೌಗಲೆ ಒಹ್ ಎಂದು ಉದ್ಗರಿಸುತ್ತ ಬಂದವನೆ ನನ್ನ ಮೈಲಿಗೆಯ ಕೈಯನ್ನು ಕುಲುಕಿದನು. ನಖಶಿಖಾಂತ ನೋಡಿದಾದ ಬಳಿಕ ತನ್ನ ಕಣ್ಣುಗಳನ್ನರಳಿಸಿಕೊಂಡನು. ತನ್ನ ಕಣ್ಣ ಶುಕ್ಲಪಟಲದ ಮೇಲೆ ಕ್ಷಿಪ್ರಗತಿಯಲ್ಲಿ ಬದಲಾಗಿರುವ ವಾಗಿಲಿಯ ಅಪೂರ್ವ ದೃಶ್ಯವಿತ್ತು. ತನ್ನ ತುಟಿಗಳ ನಡುವೆ ಬದಲಾವಣೆಗೆ ಸಂಬಂಧಿಸಿದ ಹಲವು ವ್ಯಾಖ್ಯಾನಗಳಿದ್ದವು. ಪದ್ಮಾವತಿ ನಿವಾಸವಾದ ಬಸವನಗೌಡರ ಮನೆಯ ಉಪ್ಪರಿಗೆ ಕಡೆ ನೋಟ ಬೀರಿ ಪುನಃ ಅದನ್ನು ಉಪಸಂಹರಿಸಿಕೊಳ್ಳುವುದಕ್ಕೂ ಫೋಟೋ ತೆಗೆದಾದ ಬಳಿಕ ಚಕ್ರವರ್ತಿ ಕೆಮೆರಾವನ್ನು ಚರ್ಮದ ಚೀಲಕ್ಕೆ ಸೇರಿಸಿಕೊಳ್ಳುತ್ತ ನಮ್ಮೆದರು ಬಂದು ನಿಲ್ಲುವುದಕ್ಕೂ ಸರಿ ಹೋಯಿತು. ಆತನೂ ಮಾತುಗಳ ಸಲುವಾಗಿ ತಡವರಿಸುತ್ತ ಮೌನ ತಳೆದನು. ಅವರಿಬ್ಬರಂತೆ ನನ್ನಲ್ಲಿಯೂ ಮಾತುಗಳ ಬರ ಕಾಣಿಸಿಕೊಂಡಿತ್ತು. ಅವರು ಏನೆಂದು ಹೇಳುವುದು! ನಾನು ಏನೆಂದು ಕೇಳುವುದು! ಪ್ರಯಾಣಕ್ಕೆ ಸಹಕರಿಸಿದ್ದು ಇಲಾಹಿಯೋ ಚಂದ್ರವೋ ಎಂದು ಕೇಳುವುದೋ! ರಾಜಧಾನಿ ಬೆಂಗಳೂರಿನಲ್ಲಿ ಅಲ್ಪಸಂಖ್ಯಾತ ಆಡಳಿತಾರೂಢ ಪಕ್ಷ ಅನುಸರಿಸುತ್ತಿರುವ ಧ್ವಂದ್ವ ನೀತಿಗಳ ಕುರಿತಂತೆ ಕೇಳುವುದೋ! ಖಿಟ್ಲೆ ಜಾಮೀನು ಪ್ರಸ್ತಾಪಿಸುವುದೋ! ವಾಗಿಲಿಯ ವಿದ್ಯಾಮಾನಗಳನ್ನು ಎರಡು ಮೂರು ವಾಕ್ಯಗಳಲ್ಲಿ ವಿವರಿಸುವ ಪ್ರತಿಭೆ ನನ್ನಲ್ಲಿಲ್ಲವೆಂದು ನಿಸ್ಸಂಕೋಚವಾಗಿ ಹೇಳಿಬಿಡುವುದೋ! ಇತ್ಯಾದಿ ಯೋಚಿಸುತ್ತ ನಾನೂ ತಡವರಿಸಿದ್ದೂ ಅಲ್ಲದೆ ಬಸವಳಿದೆ ಸಹ. ಅವರಿಬ್ಬರ ಮುಖಗಳಲ್ಲೂ ಸಂದೇಹಗಳು ಪ್ರಶ್ನೆಗಳು ಉತ್ತರಗಳು ಬಿಡುಗಡೆಯ ನಿರೀಕ್ಷೆಯಲ್ಲಿದ್ದವು. ಪರಸ್ಪರ ಮುಖಗಳನ್ನು ನೋಡುತ್ತ ಕಾಲಕ್ಷೇಪ ಮಾಡಲು ಸಮಯಾವಕಾಶವಿರಲಿಲ್ಲ.

ವಾಗಿಲಿಯ ಆಯಕಟ್ಟಾದ ಸ್ಥಳಗಳಲ್ಲಿದ್ದ ಧ್ವನಿವರ್ಧಕಗಳು ನಿರ್ವಿರಾಮವಾಗಿ ನಡೆಯಲಿರುವ ಕಾರ್ಯಕ್ರಮಗಳನ್ನು ಒಂದೊಂದಾಗಿ ವಿವರಿಸುವುದರಲ್ಲಿ ನಿರತವಾಗಿದ್ದವು ಬೇರೆ. ಔಕು ನಂದ್ಯಾಲ ಕೊಲಿಮಿಗುಂಡ್ಲ ಚೆಲ್ಲಲಚೆಲಿಮಲ ಬನಗಾನಪಲ್ಲಿ ಅಳ್ಳಗಡ್ಡ ಸೇರಿದಂತೆ ಹಲವು ಕಡೆಗಳಿಂದ ಹಲವು ರೆಡ್ಡಿಗಳು, ಹಲವು ಫ್ಯಾಕ್ಷನಿಷ್ಟ್ ಮುಖಂಡರುಗಳು. ಅವರೆಲ್ಲರ ನಾಮವಾಚಕಗಳು ಒಂದರ ಹಿಂದೊರಂತೆ ಕಿವಿಗೆ ಅಪ್ಪಳಿಸಲಾರಂಭಿಸಿದ್ದವು ಬೇರೆ. ಅವರಿವರೆಲ್ಲರು ಕ್ರೌರ್ಯಕ್ಕೆ ಸಂಬಂಧಿಸಿದ ವಿಶ್ವವಿದ್ಯಾಲಯದ ಕುಖ್ಯಾತ ಪ್ರಾಧ್ಯಾಪಕರುಗಳೆನ್ನುವುದರಲ್ಲಿ ಎರಡನೆ ಮಾತಿಲ್ಲ. ಶ್ರವಣೇಂದ್ರಿಯದ ಮೂಲಕ ಅವರೆಲ್ಲರನ್ನು ನೋಡಿದ್ದೆ. ಅವರ ಪೈಕಿ ಬುಡ್ಡಾ ವೆಂಗಳರೆಡ್ಡಿಯವರನ್ನು ಅವರೂರಾದ ವೆಲುಪನೂರಿನಲ್ಲಿ ಎರಡು ವರ್ಷಗಳ ಹಿಂದೆ ಖುದ್ದ ಭೆಟ್ಟಿಯಾಗಿದ್ದೆ. ಅಡಿಯಿಂದ ಮುಡಿವರೆಗೆ ಬೆವರುತ್ತಲೇ ಅವರ ಭಯಾನಕ ಬಂಗಲೆ ಸದೃಶ ಮನೆಯಲ್ಲಿ ಸುಗ್ರಾಸ ಭೋಜನ ಸವಿದಿದ್ದೆ. ಆ ಅನುಭವಗಳನ್ನು ಹಂಚಿಕೊಂಡೊಡನೆ ಮಿತ್ರದ್ವಯರಲ್ಲೂ ಕುತೂಹಲ ಹೆಡೆ ಬಿಚ್ಚಿತು. ಅವರನ್ನೆಲ್ಲ ನೋಡುವ ಆಸೆ ಗರಿಗೆದರಿತು. ಅದೇ ತಾನೆ ಕೇಳಿಸಿಕೊಂಡ ಚಕ್ರವರ್ತಿ ಜಮೀನ್ದಾರಿ ವ್ಯವಸ್ಥೆಯನ್ನು ಆಧರಿಸಿ ಸಿನೆಮಾ ನಿರ್ಮಿಸುವ ಆಸೆಯನ್ನು ವ್ಯಕ್ತಪಡಿಸಿದ, ಅದಕ್ಕೆ ಪ್ರತಿಯಾಗಿ ನಾನು ಅಲಕ್ಷ್ಯ ನಗೆಯನ್ನು ನಕ್ಕೆ, ಅದರಿಂದ ಚೌಗಲೆಗೆ ಬೇಸರವಾಯಿತೇನೋ! ತನ್ನ ಮಿತ್ರನ ಪೂರ್ವಾಪರವನ್ನು ಕೆಲವು ಮಾತುಗಳಲ್ಲಿ ವಿವರಿಸಿದ.

ತೆಳ್ಳಗೆ ಜಾಲಿಗಿಡವನ್ನು ಹೋಲುವ ತನ್ನ ಮಿತ್ರನ ತಂದೆ ಕನ್ನಡದ ಕೆಲವು ಚಿತ್ರಗಳನ್ನು ನಿರ್ದೇಶಿಸಿರುವರಂತೆ, ಒಂದು ಚಿತ್ರವನ್ನು ನಿರ್ಮಿಸಿ ನಂಜನಗೂಡು ಸಮೀಪದ ಪಿತ್ರಾರ್ಜಿತ ಆಸ್ತಿಯನ್ನು ಕಳೆದುಕೊಂಡಿರುವರಂತೆ, ಆತನ ತಾತ ಮುತ್ತಾತಂದಿರೂ ಬಣ್ಣದ ಗೀಳು ಅಂಟಿಸಿಕೊಂಡಿದ್ದರಂತೆ, ಚಕ್ರವರ್ತಿ ಸಹ ಗೆಳೆಯರ ಸಹಕಾರದೊಂದಿಗೆ ನಿರ್ಮಿಸಿ ನಿರ್ದೇಶಿಸಿರುವ ಹೊಸ ಅಲೆಯ ಚಿತ್ರವೊಂದು ಕಲಾವಿದರ ಅಸಹಾಕರದಿಂದ ಅಪೂರ್ಣಗೊಂಡಿರುವುದಂತೆ, ಮುಂದೇನನ್ನೋ ಹೇಳಿದನಾದರೂ ಧ್ವನಿವರ್ಧಕಗಳ ಗಲಾಟೆಯಿಂದಾಗಿ ಸರಿಯಾಗಿ ಕೇಳಿಸಿಕೊಳ್ಳಲಾಗಲಿಲ್ಲ, ಆಮೇಲೆ ಹೇಳಿದರಾಯಿತೆಂದು ತಾನೇ ನಿರ್ಧರಿಸಿ ಮಾತನ್ನು ಮೊಟಕುಗೊಳಿಸಿದ. ಒಟ್ಟಾರೆ ತಮ್ಮೆಲ್ಲರಂತೆ ಆತನೂ ಸದಭಿರುಚಿ ವ್ಯಕ್ತಿ ಎಂದು ಊಹಿಸುತ್ತಲೇ ಅಭಿಮಾನದ ನೋಟ ಬೀರಿದೆ. ಮಾತಕತೆ ಆರಂಭಗೊಂಡು ಮುಕ್ತಾಯವಾದದ್ದು ನಾವು ಮುವ್ವರೂ ಲಗುಬಗೆಯಿಂದ ಹೊರಡಲು ಸನ್ನದ್ದರಾಗುತ್ತಿದ್ದಾಗ, ಇನ್ನೂ ಸರಿಯಾಗಿ ನಮ್ಮ ನಮ್ಮ ಅಂಗಿಗಳಿಗೆ ಸರಿಯಾಗಿ ಗುಂಡಿಗಳನ್ನು ಹಾಕಿಕೊಂಡಿರಲಿಲ್ಲ, ಅಷ್ಟರಲ್ಲಿ ಎರಡನೆ ಸಲ ಗೌಡರ ಕಡೆಯ ಅಯ್ಯಾಳಿ ತೂರಾಡುತ್ತ ಬಂದವನೆ ಅರ್ಜೆಂಟು ಬರಬೇಕಂತೆ ಎಂದಷ್ಟೆ ಹೇಳಿ ಹೋದನು.

ಮನೆಯಿಂದ ಮುವ್ವರು ಒಟ್ಟಿಗೆ ಹೊರಟು ಊರ ಮುನ್ಸೋಬ ನೀಲಕಂಠ ನಾಯ್ಡು ಮನೆಯ ಮುಂದಿನ ವಿಶಾಲ ಬಯಲನ್ನು ಪ್ರವೇಶಿಸಿದೆವು. ಅಲ್ಲೆಲ್ಲ ಜನವೋ ಜನ, ಅವರವರ ವಿಲಕ್ಷಣ ಉಡುಪುಗಳೋ, ಅರ್ಥವಾಗದ ಮಾತುಕತೆಯೋ, ತರಾತುರಿ ನಡಾವಳಿಯೋ, ಕೈಯಲ್ಲಿರುವ ಊರುಗೋಲಿನಂಥ ಬಡಿಗೆಗಳೋ, ತಳ್ಳಾಡುತ್ತ ಗೊತ್ತುಗುರಿಯಿಲ್ಲದೆ ಹಿಂದೆ ಮುಂದೆ ನಡೆಯುತ್ತಿದ್ದ ರೀತಿಯೋ! ಆ ಎಲ್ಲ ದೃಶ್ಯಗಳನ್ನು ಸೆರೆ ಹಿಡಿಯಲೆಂದು ಚಕ್ರವರ್ತಿ ತನ್ನ ಬ್ಯಾಗಿನಿಂದ ಕೆಮೆರಾವನ್ನು ತೆಗೆದು ಕೈಯಲ್ಲಿ ಹಿಡಿದು ಪ್ರದರ್ಶಿಸಿದನೋ ಇಲ್ಲವೋ ನೂಕುನುಗ್ಗಲಾಟ ಹೆಚ್ಚಿತು. ಮೊದ ಮೊದಲು ಶಿಸ್ತಿನಿಂದ ನಿಂತ ನಿಂತಲ್ಲಿಯೇ ಕುಂತಕುಂತಲ್ಲಿಯೇ ಪೋಜು ಕೊಡುತ್ತಿದ್ದವರು ಗಳಿಗೆಗಳು ಉರುಳಿದಂತೆ ನನ್ನದು ಮೊದಲು ತೆಗಿ ತನ್ನದು ಮೊದಲು ತೆಗಿ ಎಂದು ದುಂಬಾಲು ಬೀಳಲಾರಂಭಿಸಿದರು. ಆ ಉನ್ಮತ್ತರೆಲ್ಲಿ ತನ್ನ ಹಾಗು ತನ್ನ ದುಬಾರಿ ಕೆಮೆರಾದ ಮೇಲೆ ಆಕ್ರಮಣ ಮಾಡುವರೋ ಎಂದು ಹೆದರಿದ ಚಕ್ರವರ್ತಿ ಅದನ್ನು ಕೂಡಲೆ ತನ್ನ ಬ್ಯಾಗಿನೊಳಗೆ ಅಡಗಿಸಿಟ್ಟುಕೊಂಡು ಹಿಂಬಾಲಿಸಲಾರಂಭಿಸಿದನು. ಆದರೆ ಅದು ಎಲ್ಲಿಯವರೆಗೆ ಎಂಬುದು ನಿಖರವಾಗಿ ತಿಳಿಯದು! ಬಯಲು ದಾಟಿದ ಬಳಿಕ ಇಕ್ಕೆಲದಲ್ಲಿ ನೋಡಿಕೊಳ್ಳುತ್ತೇನೆ ಅವರಿರಬೇಕಾದ ಜಾಗಗಳಲ್ಲಿ ಅವರಿರಲಿಲ್ಲ.

ಹತ್ತಾರು ಕಾರ್ಯಕ್ರಮಗಳು ಒಟ್ಟಿಗೆ ನಡೆಯುತ್ತಿದ್ದುದರಿಂದಾಗಿ ಯಾವೊಂದು ಕಾರ್ಯಕ್ರಮಕ್ಕೂ ನಿರ್ದಿಷ್ಟವಾಗಿ ಹೋಗಿ ಭಾಗವಹಿಸುವುದಾಗಲೀ ಖುದ್ದ ನೋಡುವುದಾಗಲೀ ನನ್ನಿಂದ ಸಾಧ್ಯವಾಗಲಿಲ್ಲ. ವರ್ತಮಾನಗಳನ್ನು ಆಧರಿಸಿ ಹೇಳುವುದಾದರೆ ರಾಯಲಸೀಮೆಯ ನಾನಾ ಕಡೆಗಳಿಂದ ಬಂದಿದ್ದ ನಾನಾ ರೆಡ್ಡಿಗಳು ನಾನಾ ಕಾರ್ಯಕ್ರಮಗಳನ್ನು ಏಕಕಾಲಕ್ಕೆ ಉದ್ಘಾಟಿಸಿದರು, ತರಾತುರಿಯಿಂದಾಗಿ ಅವರು ಉದ್ಘಾಟಿಸಬೇಕಿದ್ದ ಇದನ್ನು ಇವರೂ, ಇವರು ಉದ್ಘಾಟಿಸಬೇಕಿದ್ದ ಅದನ್ನು ಅವರೂ ಉದ್ಘಾಟಿಸಿದರು. ಹೆಬ್ಬಟಂ ಗೌಡರ ಮರಣೋತ್ತರ ಸಮಾಧಿ ಸ್ಮಾರಕವನ್ನು ಹಾಲಿ ಎಮ್ಮೆಲ್ಲೆ ಅಳ್ಳಗಡ್ಡದ ಗಂಗುಲ ಪ್ರತಾಪರೆಡ್ಡಿ ಉದ್ಘಾಟಿಸಬೇಕಿತ್ತು, ಆದರೆ ಅದನ್ನು ಮಾಜಿ ಎಮ್ಮೆಲ್ಲೆ ಬನಗಾನಪಲ್ಲಿಯ ಭೈರೆಡ್ಡಿ ಉದ್ಘಾಟಿಸಿದರು. ಶ್ರೀಶೈಲಮಲ್ಲಿಕಾರ್ಜುನ ದೇವಸ್ಥಾನದ ಅಡಿಗಲ್ಲು ಸಮಾರಂಭವನ್ನು ನಿಗದಿ

ಪಡಿಸಿದಂತೆ ಶ್ರೀಶೈಲ ಅಭಿವೃದ್ಧಿ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷರಾದ ಮೈಲಾಪುರಂ ವೆಂಕಟೇಶ್ವರರಾವ್ ಉದ್ಘಾಟಿಸಬೇಕಿತ್ತು, ಆದರೆ ಅದನ್ನು ಕರ್ನೂಲು ಜಿಲ್ಲಾ ಪರಿಷತ್ತಿನ ಹಾಲಿ ಅಧ್ಯಕ್ಷರಾದ ಮುದ್ದೂರು ಸುಬ್ಬಾರೆಡ್ಡಿ ನೆರವೇರಿಸಿದರು.

ಎಲ್ಲಿ ಯಾವುದನ್ನು ಯಾರು ಉದ್ಘಾಟಿಸಿದರೋ ಏನೋ! ಆದರೆ ಹೆಬ್ಬಟಂ ಗೌಡರು ಮಾತ್ರ ವಾಗಿಲಿಯ ವಿದ್ಯುತ್ ಸರಬರಾಜು ಘಟಕವನ್ನು ಸ್ವಿಚ್ ಒತ್ತುವುದರ ಮೂಲಕ ಉದ್ಘಾಟಿಸಿದರು, ಅದೂ ಸಹಸ್ರಾರು ಜನರ ಹರ್ಷೋದ್ಗಾರ ಕರತಾಡನಗಳ ನಡುವೆ, ಅದೂ ನೂರಾರು ಪತ್ರಕರ್ತರ ಸಮಕ್ಷಮದಲ್ಲಿ, ಅದೂ ಹಾಲಿ ಎಮ್ಮೆಲ್ಲೆ ರಾಜಾರತ್ನಂ ಅವರ ಘನ ಅಧ್ಯಕ್ಷತೆಯಲ್ಲಿ! ಒಡನೆಯೇ ವಾಗಿಲಿಯ ಬೀದಿ ದೀಪಗಳು ಝಗಮಗಿಸಲಾರಂಭಿಸಿದವು, ಕೆಲವು ಮನೆಗಳಲ್ಲಿನ ಜನರು ಸ್ವಿಚ್ ಹಾಕಿ ಸಂಭ್ರಮಿಸಿದರು, ತಮ್ಮ ಮನೆಯಲ್ಲಿರುವುದು ಕರೆಂಟ್ ಹೌದೋ ಅಲ್ಲವೋ ಎನ್ನುವುದನ್ನು ಕೆಲವರು ಮುಟ್ಟಿ ಹ್ಹಾ ಹ್ಹಾ ಹೊಹೋ ಎಂದು ನರಳಿದರು.

ಎಲ್ಲಲ್ಲಿ ಯಾವ್ಯಾವುದನ್ನು ಉದ್ಘಾಟಿಸಿದಾದ ಬಳಿಕ ಹೆಬ್ಬಟಂ ಗೌಡರು ಕೋಗಿಲೆತೋಟದ ರಘೋತ್ತಮರೆಡ್ಡಿಯ ಸಂಗಡ ಯಾವ ವಿಷಯ ಕುರಿತು ಚರ್ಚಿಸಿದರೋ ಏನೋ! ಆತನೊಂದಿಗೆ ಮಾರ್ಬಲದೊಂದಿಗೆ ಲಚುಮವ್ವನ ತೋಪಿನ ಕಡೆ ದಂಡಯಾತ್ರೆ ಕೈಗೊಂಡರು. ಹೆಜ್ಜೆ ಹೆಜ್ಜೆಗೆ ಜನ ಸೇರಲಾರಂಭಿಸಿದ ಪರಿಣಾಮವಾಗಿ ಅದು ಪರಿಶೆ ರೂಪ ಪಡೆಯಿತು. ಹಾದಿಯುದ್ದಕ್ಕೂ ಅರ್ಥವಾಗದ ಮಾತುಕತೆಗಳು ಕುತೂಹಲಗಳು. ಮುಂದೆ ಮುಂದೆ ಗೌಡದ್ವಯರು ತಮ್ಮದೇ ಆದ ಸಾಂಕೇತಿಕ ಭಾಷೆಯಲ್ಲಿ ಯಾವ ವಿಷಯ ಕುರಿತಂತೆ ಪರಸ್ಪರ ಚರ್ಚಿಸುತ್ತಿದ್ದರೆನ್ನುವುದು ತಿಳಿಯದು. ಅವರೆಲ್ಲ ತಾವಿರುವಲ್ಲಿಗೆ ಆಗಮಿಸುತ್ತಿರುವರೆಂದ ಮೇಲೆ!

ತೋಪಿನ ದಾರಿ ಉದ್ದಕ್ಕೂ ಜಯಘೋಷ ಹಾಕುತ್ತಿರುವ ಜನ, ಅಲ್ಲಲ್ಲಿ ತಳಿರುತೋರಣಗಳು ಬೇರೆ. ಅಲ್ಲಲ್ಲಿ ಅವರವರ ಅಂಗರಕ್ಷಕರು ತಮ್ಮ ಕಣ್ಣುಗಳ ನೋಟದಿಂದಲೇ ಜನರಲ್ಲಿರಬಹುದಾದ ಮಾರಕಾಯುಧಗಳ ತಪಾಸಣೆ ನಡೆಸಿದ್ದರು, ಕೆಲವು ಬಾಂಬು ನಿಗ್ರಹ ದಳ ಸದಸ್ಯರು ನೆಲದಲ್ಲಿ ಅಡಗಿಸಿಟ್ಟಿರಬಹುದಾದ ನೆಲಬಾಂಬುಗಳನ್ನು ಹುಡುಕುತ್ತ ಮಂದೆ ಮುಂದೆ ಸಾಗಿದ್ದರು, ಇನ್ನೂ ಕೆಲವರು ಸಂಭವನೀಯ ಆಕ್ರಮಣಗಳನ್ನು ತಡೆಯುವ ಸಲುವಾಗಿ ಜನರನ್ನು ಅಕ್ಕಪಕ್ಕ ಸರಿಸುತ್ತ ದಾರಿಯನ್ನು ಸುಗಮಗೊಳಿಸಲಾರಂಭಿಸಿದ್ದರು. ಇಂಥ ಬಿಗಿಭದ್ರತೆ ನಡುವೆ ಗೌಡದ್ವಯರು ತೋಪನ್ನು ಪ್ರವೇಶ ಮಾಡಿದಾಗ ಹೊತ್ತು ಅದೇ ತಾನೆ ನೆತ್ತಿಯಿಂದ ಪಶ್ಚಿಮಕ್ಕೆ ವಾಲಿತ್ತು. ಎಲ್ಲರಿಗಿಂತ ಮುಂಚಿತವಾಗಿಯೇ ಪ್ರವೇಶಿಸಿದ್ದ ಪೋಲಿಸರ ಮುಖಂಡತ್ವವನ್ನು ಆಲೂರಿನ ಎಸ್ಸೈ ಅಲಿ ವಹಿಸಿದ್ದ, ಸಾರ್ವಜನಿಕರ ಹೆಚ್ಚುವರಿ ಪ್ರವೇಶವನ್ನು ಮುನ್ನೆಚ್ಚರಿಕೆಯಿಂದ ಸ್ವಯಂ ನಿಷೇಧಿಸಿದ್ದ. ತಾನೇ ಮುಂದೆ ನಿಂತು ಗೌಡದ್ವಯರನ್ನು ತೋಪಿನೊಳಗಡೆ ಸ್ವಾಗತಿಸಿದ. ವಿಶೇಷ ವ್ಯಕ್ತಿಗಳ ಆಗಮನದಿಂದಾಗಿ!

++++

ಬಳ್ಳಾರಿಯ ಅವರ ನಿವಾಸದಲ್ಲಿ ತಿಳಿಸಿದ್ದನ್ನು ನೆನಪಿಟ್ಟುಕೊಂಡಿರುವ ಆ ಹಿರಿಯರ ಜ್ಞಾಪಕ ಶಕ್ತಿ ಶ್ಲಾಘನೀಯ. ನನ್ನ ನಿರೀಕ್ಷೆ ನಿಜವಾಯಿತು, ಕಳಿಸಲಿರುವ ಕಾರಿನಲ್ಲಿ ಸಂಜೆ ಏಳರ ವೇಳೆಗೆ ಬರುವಂತೆ ಸಂಜೆ ಐದಕ್ಕೆ ಗೌಡರಿಂದ ಕರೆ ಬಂತು, ಅದೂ ಬೆಂಗಳೂರಿನ ಗೆಳೆಯರ ಸಂಗಡ. ಹೇಳಿದೊಡನೆ ಮಿತ್ರದ್ವಯರು ಸಂಭ್ರಮಿಸಿದರು. ನಡೆಯಲಿರುವ ಮಾತುಕತೆ ಸಂಕ್ಷಿಪ್ತ ಹಾಗೂ

ಸೂಚ್ಯವಾಗಿರುವುದು ಮುಖ್ಯವೆಂದು ಹೇಳಿದೆ. ಕಾರಣ ಅಲ್ಲಿ ಅವರೊಂದೇ ಇರುವುದಿಲ್ಲ, ರಾಯಲಸೀಮೆಯ ಬಹುಮುಖ್ಯ ಫ್ಯಾಕ್ಷನಿಷ್ಟ್ ಮುಖಂಡರುಗಳಿರುವರು, ಮಿತ್ರರೊಳಗೂ ಶತ್ರುತ್ವವನ್ನು ಗುರುತಿಸುವುದರಲ್ಲಿ, ಅಂಥವರ ಮೇಲೆ ನಿಗಾ ಇಡುವುದರಲ್ಲಿ, ಅಂಥವರನ್ನು ಅವರಿಗೇ ತಿಳಿಯದ ರೀತಿಯಲ್ಲಿ ದೈಹಿಕ ಅವಶೇಷಗಳನ್ನು ನಿಶ್ಶೇಷಗೊಳಿಸುವುದರಲ್ಲಿ ಚಾಣಾಕ್ಷರು. ಕೇಳಿಯೂ ಕೇಳಿಸಿಕೊಳ್ಳದ ರೀತಿಯಲ್ಲಿ, ಮಾತನಾಡಿಯೂ ಮಾತನಾಡಿರದ ರೀತಿಯಲ್ಲಿ, ನೋಡಿಯೂ ನೋಡಿರದ ರೀತಿಯಲ್ಲಿ ಇರುವುದು ಮುಖ್ಯ. ಅಪರಿಚಿತರ ಶುಕ್ಷಪಟಲದ ಮೇಲೂ ತಮ್ಮ ಪ್ರತಿಬಿಂಬಗಳಿರಬಾರದು, ಎದುರಾಳಿಗಳ ಕಣ್ಣ ಶುಕ್ಲಪಟಲಗಳ ಮೇಲೂ ನಮ್ಮ ನಮ್ಮ ಪ್ರತಿಬಿಂಬಗಳು ಮೂಡಲು ಆಸ್ಪದ ನೀಡಬಾರದು. ಇಲ್ಲಿಂದ ಹೋಗುವಾಗ ಖಾಲಿ, ಅಲ್ಲಿಂದ ಮರಳುವಾಗ ಖಾಲಿ! ಹ್ಹಾ ಅಂದ ಹಾಗೆ ಪೆನ್ನು ನೋಟುಬುಕ್ಕು ವಗೈರೆಗಳು ನಿಷಿದ್ಧ. ಹ್ಹಾ ಅಂದ ಹಾಗೆ ಆಡಲಿರುವ ಭಾಷೆ ಗ್ರಹಿಸಲಿರುವ ಮನಸ್ಸು ಸರಳವಾಗಿದ್ದಷ್ಟು ಒಳ್ಳೆಯದು. ಹೇಳಿದ್ದಕ್ಕೆ ಮಿತ್ರದ್ವಯರು ಕೂಡಲೆ ಪ್ರತಿಕ್ರಿಯಿಸಲಿಲ್ಲ, ಅವನತಮುಖೀಯರಾಗಿ ನಿಟ್ಟುಸಿರುಗಳನ್ನು ಚೆಲ್ಲಿದರು, ಪರಸ್ಪರ ಮುಖಗಳನ್ನು ನೋಡಿಕೊಂಡಾದ ಬಳಿಕ ನನ್ನ ಕಡೆ ಪ್ರಶ್ನಾರ್ಥಕ ನೋಟ ಬೀರಿದರು. ಹಾಕಿಕೊಂಡಿದ್ದ ಗುಂಡಿಗಳನ್ನು ಒಂದೊಂದಾಗಿ ಕಳಚಲಾರಂಭಿಸಿದರು.

ಚಕ್ರವರ್ತಿಯ ಪರವಾಗಿ ಚೌಗಲೆ "ಅಲ್ಲಿ ಸಹಜತೆಗೆ ಅವಕಾಶವಿಲ್ಲವೆಂದ ಮೇಲೆ ನಾವು ಬರುವುದ್ಯಾಕೆ! ಅಂಗೈಯಲ್ಲಿ ಜೀವ ಇಟ್ಟುಕೊಳ್ಳುವ ಹಿಂಸೆಯನ್ನು ನಿಭಾಯಿಸುವ ಶಕ್ತಿ ನಮಗಿಲ್ಲ ನೀವೊಬ್ಬರೆ ಹೋಗಿ ಬನ್ನಿ" ಎಂದು ಹೇಳಿದ, ಆತನ ಮಾತು ಕೇಳಿ ನನಗೆ ನಗೆ ಬಂತು.

"ಅದೆಲ್ಲ ಜಮೀನ್ದಾರೀ ವ್ಯವಸ್ಥೆಯ ಪ್ರೋಟೋಕಾಲ್ ಮಹರಾಯ್ರೆ, ನೀವು ಬರದಿದ್ದಲ್ಲಿ ಅದಕ್ಕೆ ಬೇರೊಂದು ಅರ್ಥ ಕಲ್ಪಿಸುವರು, ನಮ್ಮ ನಿರೀಕ್ಷೆಯಲ್ಲಿರುವ ತಮಗಾಗುವ ನಿರಾಸೆ ಅವರ ಕಣ್ಣ ಹುಬ್ಬುಗಳನ್ನು ಮೇಲೇರಿಸುವುದು, ಪಟಲದ ಶುಕ್ಲಕ್ಕೆ ಬದಲಾಗಿ ಕೇಸರಿ ಮೂಡುವುದು, ಅವರು ನಮ್ಮೆಲ್ಲರಂತೆ ಧೈರ್ಯವಂತರಲ್ಲ, ಭಯ ದೌರ್ಬಲ್ಯದ ಇನ್ನೊಂದು ಮುಖ, ಹೋಗದಿದ್ದರೆ ನಮ್ಮನ್ನು ಹೇಡಿಗಳೆಂದು ಪರಿಗಣಿಸಿದರೇನೋ ಸರಿ, ಆದರೆ ಶತ್ರುಗಳೆಂದು ಪರಿಗಣಿಸಿದರೇನು ಮಾಡುವುದು! ಅದಕ್ಕೆ ಹೇಳುವುದು ಪುನಃ ಗುಂಡಿಗಳನ್ನು ಹಾಕಿಕೊಳ್ಳಿರಿ, ಹಾಗೆಯೇ ಕಾಲರ್‌ಗಳನ್ನು ಸರಿಪಡಿಸಿಕೊಳ್ಳುವುದನ್ನು ಮರೆಯ ಬೇಡಿ" ಎಂದು ತುಸು ಸಂಕೀರ್ಣ ಭಾಷೆಯಲ್ಲಿ ಹೇಳಿದೆ.

ಚೌಗಲೆ ಪುನಃ ಗುಂಡಿಗಳನ್ನು ಹಾಕಲಾರಂಭಿಸಿದರೆ ಚಕ್ರವರ್ತಿ ಕೊನೆಯ ಎರಡು ಗುಂಡಿಗಳನ್ನು ಬಿಚ್ಚುತ್ತ "ಒಂದು ಪಕ್ಷ ನಾವು ಬರದೇ ಇದ್ದಲ್ಲಿ!" ಎಂದು ಸಂಶಯ ತಳೆದ. ಆತನ ಮಾತು ಕೇಳಿ ನನಗೆ ಪುನಃ ನಗು ಬಂತು. ಸ್ವಲ್ಪ ಹತ್ತಿರ ಹೋಗಿ ಆತನ ಹೆಗಲ ಮೂಳೆಯನ್ನು ಹಿತವಾಗಿ ಸ್ಪರ್ಶಿಸಿ "ಬರದಿದ್ದಲ್ಲಿ ಅವರ ಆಳುಗಳು ಬಂದು ನಮ್ಮನ್ನು ಎಳೆದುಕೊಂಡು ಹೋಗುವರು ಅಷ್ಟೆ, ಅದರ ಪರಿಣಾಮ ಪೋಲಿಸ್ ಇಂಟರಾಗೇಷನ್ನಿಗಿಂತಲೂ ಭಯಾನಕವಾಗಿರುತ್ತದೆ, ಸ್ವಲ್ಪ ಹೆಚ್ಚು ಕಡಿಮೆಯಾದರೆ ನೀವು ಬೆಂಗಳೂರಿಗೆ ಮರಳುವುದೂ ಕಷ್ಟ, ನಾನು ಈ ಊರಲ್ಲಿ ವಾಸ ಮಾಡುವುದೂ ಕಷ್ಟ. ಹೆದರಿಸಲಿಕ್ಕಾಗಲೀ ಹೆದರಲಿಕ್ಕಾಗಲೀ ಏನಿರುತ್ತದೆ ಅಲ್ಲಿ! ನಮ್ಮಂತೆ ಅವರೂ ಮನುಷ್ಯರೆ! ನಮ್ಮ ಭಯ ನಮಗೆ ಅವರ ಭಯ ಅವರಿಗೆ! ನೀವು ಆಸೆ ಪಟ್ಟಿದ್ದಕ್ಕೆ ಅಲ್ಲವೆ ನಾನು ಈ ವ್ಯವಸ್ಥೆ ಮಾಡಿದ್ದು! ಅದೂ ಹೆಬ್ಬಟಂ ಗೌಡರ ಸಹಕಾರದಿಂದ. ಅವರನ್ನೊಂದೇ ಮನಸ್ಸಿನಲ್ಲಿಟ್ಟುಕೊಂಡು ಹೊರಡೋಣ, ಹೋಗಿ ಸೂಜಿಗೆ

ಮುದ್ದು ಕೊಟ್ಟಂತೆ ಮಾತಾಡಿ ವಾಪಸ್ಸಾಗೋಣ" ಎಂದು ವಿವರಿಸಿದೆ. ಕೊನೆಯ ಗುಂಡಿ ಹಾಕಿಕೊಳ್ಳುವುದೋ ಬೇಡವೋ ಎಂದು ಯೋಚಿಸುತ್ತಲೂ, ಕರವಸ್ತ್ರದ ಸಹಾಯದಿಂದ ತನ್ನ ಹಣೆ ಮೇಲೆ ಅದೇ ತಾನೆ ಮೂಡಿದ್ದ ಬೆವರನ್ನು ಒರೆಸಿಕೊಳ್ಳುತ್ತಲೂ, ಸ್ವಲ್ಪ ಮಾತ್ರ ತಲೆ ಎತ್ತಿ ನನ್ನ ಕಡೆ ನೋಡುತ್ತಲೂ, ಆ ನೋಟದ ಮೂಲಕ ನೀನು ಜಮೀನ್ದಾರೀ ಕ್ರೌರ್ಯದೊಂದಿಗೆ ಶಾಮೀಲಾಗಿದ್ದರೆ! ಎಂಬ ಸಂಶಯ ವ್ಯಕ್ತಪಡಿಸುತ್ತಲೂ ಚೌಗಲೆಯು..

"ಅವರಿಗಿಂತ ನಮಗೆ ನಿಮ್ಮ ಭಯಾನೆ ಹೆಚ್ಚು ಕಣ್ರೀ, ನೀವು ನಿಮ್ಮ ಕಥೆಗಳಲ್ಲಿ ಅವರನ್ನು ಅತಿಮಾನುಷರೆಂಬಂತೆ ಚಿತ್ರಿಸಿರದಿದ್ದಲ್ಲಿ ನಾವು ಹೆದರುತ್ತಿರಲಿಲ್ಲವೇನೋ!" ಎಂದು ಹೇಳುತ್ತ ನಾಲಗೆ ಕಚ್ಚಿ ಸಾವರಿಸಿಕೊಂಡು "ತಪ್ಪು ತಿಳಿಯಬೇಡಿ ತಮಾಷೆಗೆ ಹೇಳಿದೆ. ಈ ದಿವಸ ಅವರನ್ನು ದೂರದಿಂದ ನೋಡಿಯೇ ಸಾಕಷ್ಟು ಹೆದರಿರುವೆವು. ಇನ್ನು ಅವರನ್ನು ಹತ್ತಿರದಿಂದ ನೋಡುವುದೆಂದರೆ! ಒಡನಾಡುವುದೆಂದರೆ!" ಎಂದು ಹೇಳಲಿದ್ದ ಮಾತನ್ನು ಉಪಸಂಹರಿಸಿಕೊಂಡನು. ಅವರ ವರ್ತನೆ ನನಗೆ ಬೇಸರ ತರಿಸಿತು, ಇಂಥ ಮಾನಸಿಕ ದುರ್ಬಲರನ್ನು ಹತ್ತಿರಬಿಟ್ಟುಕೊಂಡಿದ್ದು, ಇಂಥವರ ಪರವಾಗಿ ಗೌಡರ ಬಳಿ ವಕಾಲತ್ತು ವಹಿಸಿದ್ದು, ಆತ್ಮಸಾಕ್ಷಿಯನ್ನು ಅಲಕ್ಷಿಸಿ ಭಾಷಣಗಳನ್ನು ಬರೆದುಕೊಟ್ಟದ್ದು ಎಲ್ಲವೂ ನನ್ನ ಸ್ವಯಂಕೃತಾಪರಾಧವೆಂದು ಪರಿಗಣಿಸಿದೆ.

"ವಾದಿಸಲಿಕ್ಕೆ ಇದು ಸಮಯ ಸಂದರ್ಭವಲ್ಲ ಚೌಗಲೆ, ನಾಳೆಯ ಕಾರ್ಯಕ್ರಮದಲ್ಲಿ ನಿಮ್ಮ ಪಾತ್ರವಿರುವುದೆನ್ನುವುದನ್ನು ಮರೆಯಬೇಡಿ. ಸಂಭವಿಸಿರುವ ತಪ್ಪನ್ನು ಸರಿಪಡಿಸಿಕೊಳ್ಳಲು ನಿಮಗಿದೊಂದು ಒಳ್ಳೆಯ ಅವಕಾಶ. ಪುನಃ ತಪ್ಪು ಮಾಡಲು ಸಿದ್ದರಿದ್ದರೆ ಮಾತ್ರ ನೀವಲ್ಲಿಗೆ ಬರುವುದು ಬೇಡವೇ ಬೇಡ. ನಾಳೆ ದಿವಸ ಏನೋ ಒಂದು ಹೇಳಿ ಗೌಡರನ್ನು ಸಮಾಧಾನಪಡಿಸುವೆ, ಆದರೆ ಒಂದು ಮಾತು, ನೀವು ಈಗಿಂದೀಗಲೆ ವಾಗಿಲಿಬಿಟ್ಟು ಹೊರಟು ಹೋಗಬೇಕು, ಹೇಗೋ ಆರು ಗಂಟೆಗೆ ನೀಲಕಂಠ ಇದೆ" ಎಂದು ನಿಷ್ಠುರತೆಯಿಂದ ಹೇಳಿದೆ. ಮಾತು ತುಸು ಒರಟಾಯಿತೇನೋ ಎಂದೆನ್ನಿಸಿತು.

ಆದರೆ ಹಾಗೆ ನಿಷ್ಠುರವಾಗಿ ಹೇಳದೆ ಬೇರೆ ದಾರಿ ಇರಲಿಲ್ಲ. ಅದೂ ಅಲ್ಲದೆ ಗೌಡರ ಡ್ರೈವರ್ ಕಾರಿನೊಂದಿಗೆ ಇಂತಿಷ್ಟು ಸಮಯಕ್ಕೆ ಸರಿಯಾಗಿ ಬರುವುದಾಗಿ ಹೇಳಿದ್ದ, ಅವನೊಂದೇ ಅಲ್ಲದೆ ಗೌಡರ ಕಡೆಯ ಆಳುಗಳು ಬಂದು ಮನೆಯಲ್ಲಿಣುಕಿ ಹೋಗಿದ್ದರು. ಆದರೆ ಇವರ್ಯಾರು ವಸ್ತುಸ್ಥಿತಿ ಅರ್ಥ ಮಾಡಿಕೊಳ್ಳುತ್ತಿಲ್ಲ. ತಮ್ಮದೇ ಹಠ, ಇಂಥ ಭಯಸ್ಥರು ವಾಗಿಲಿಗೆ ಯಾಕೆ ಬರಬೇಕಿತ್ತು! ಅವನ ಕಡೆ ನೋಡಿದೆ, ಅವನ ಕಣ್ಣುಗಳಲ್ಲಿದ್ದ ಅವನ ತಾಯಿ ತನ್ನ ಮಗನ ಅವಸರ ಬುದ್ದಿಯನ್ನು ಕ್ಷಮಿಸಲು ಕೇಳಿಕೊಳ್ಳುತ್ತಿರುವಂತೆ ಭಾಸವಾಯಿತು. ನನಗೆ ತಿಳಿದಿರುವಂತೆ ಆಕೆ ಹಠದಲ್ಲಿ ಒಂದು ಹೆಜ್ಜೆ ಮುಂದು. ತಾನೂ ಎಷ್ಟಿದ್ದರೂ ಸ್ಟೆಲ್ಲಮ್ಮನ ಮಗನಲ್ಲವೆ! ಕ್ಷಮಿಸುವಂತೆ ನೋಟ ಬೀರಿದ, ಬಹಳ ದಿವಸಗಳ ಬಳಿಕ ಮುಖಕ್ಕೆ ಲೇಪಿಸಿಕೊಳ್ಳಲಿರುವ ಹಲವು ಬಣ್ಣಗಳನ್ನು ನೆನಪಿಸಿಕೊಂಡ, ಝಗಮಗಿಸುವ ರಂಗ ಸಜ್ಜಿಕೆಯನ್ನು ಶುಕ್ಲಪಟಲದ ಮೇಲೆ ಮೂಡಿಸಿಕೊಂಡ, ಅಭಿಜಾತ ಕಲಾವಿದೆಯಾದ ತನ್ನ ತಾಯಿ ಸ್ಟೆಲ್ಲಮ್ಮ ಸಾಕ್ಷಾತ್ ಹೇಮರೆಡ್ಡಿ ಮಲ್ಲಮ್ಮನ ಪಾತ್ರವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಿದ್ದ ಪರಿಯನ್ನು ಜ್ಞಾಪಿಸಿಕೊಂಡ. ಹೇಳಿದಂದಿನಿಂದ ಕುಳಿತರೂ ನಿಂತರೂ ಹೇಮರೆಡ್ಡಿಯ ಮಾತುಗಳನ್ನು ಪುನರ್ಮನನ ಮಾಡಿಕೊಳ್ಳುತ್ತಿದ್ದ, ಪುನಃ ತಪ್ಪು ಮಾಡಿ ಬದುಕುವ ಚೈತನ್ಯ ತನಗಿರಲಿಲ್ಲ ಬೇರೆ, ಚೌಗಲೆ ತಪ್ತಿತಸ್ಥ ಭಾವನೆಯಿಂದ ಕಂಪಿಸಲಾರಂಭಿಸಿದ. ಏನನ್ನೋ

ನುಡಿಯುವ ಸಲುವಾಗಿ ಬಾಯಿ ತೆರೆಯುವುದು ಮುಚ್ಚುವುದು ನಡೆಸಿದ, ಗಂಟಲಲ್ಲಿರುಕಿದ್ದ ಉಗುಳನ್ನು ನುಂಗಲು ಭಗೀರಥ ಪ್ರಯತ್ನ ನಡೆಸಿದ, ಬಳಿಕ ಹತ್ತಿರ ಬಂದು..

"ಭಯದ ಕಾರಣದಿಂದಾಗಿ ನಾವಿಬ್ಬರೂ ಏನೇನೊ ಮಾತಾಡಿದೆವು, ಅದಲ್ಲದೆ ಈ ಪ್ರದೇಶ, ಇಲ್ಲಿನ ಜನ, ಇಲ್ಲಿನ ಸಾಮಾಜಿಕ ವ್ಯವಸ್ಥೆ ಬೆಂಗಳೂರಿನವರಾದ ನಮಗೆ ವಿಚಿತ್ರ ಭಯ ಮೂಡಿಸಿದ್ದು ಸಹಜ, ಹೇಮರೆಡ್ಡಿ ಪಾತ್ರ ನಿರ್ವಹಿಸುವವರೆಗೆ ಬದುಕಿದ್ದರಷ್ಟೆ ಸಾಕು, ನೀವಿರುವಾಗ ನಾವು ಹೆದರುವುದು ಯಾಕೆ!" ಎಂದು ಹೇಳುತ್ತಲೇ ಒಂದೊಂದಾಗಿ ಗುಂಡಿಗಳನ್ನು ಹಾಕಕೊಂಡ, ಜೊತೆಗೆ ಅಂಗಿಯ ಕಾಲರನ್ನು ಸರಿಪಡಿಸಿಕೊಂಡ.

ಅವರಿಬ್ಬರೂ ಕನ್ನಡಿಯಲ್ಲಿ ನೋಡಿಕೊಂಡರಾದರೂ ಕೆದರಿದ್ದ ತಲೆಗೂದಲನ್ನು ತಮ್ಮ ಕೈಯಿಂದಲಾದರೂ ಒಪ್ಪ ಓರಣ ಮಾಡಿಕೊಳ್ಳಲಿಲ್ಲ, ವ್ಯಕ್ತಿಗತವಾಗಿ ಅಸ್ತವ್ಯಸ್ತವಿದ್ದಷ್ಟು ಕ್ಷೇಮವೆಂದು ಅನ್ಯಥಾ ಭಾವಿಸಿದರೇನೊ! ಅಂತೂ ಮಾತಿಗೆ ಮನ್ನಣೆ ನೀಡಿ ಹೊರಟರಲ್ಲ ಅಷ್ಟೆ ಸಾಕು. ನಾವು ಮನೆಯ ಹೊಸ್ತಿಲು ದಾಟುವುದಕ್ಕೂ ಬಸವನಗೌಡರ ಮನೆ ಮುಂದೆ ಅದೇ ತಾನೆ ನಿಂತ ಕಾರಿನಿಂದ ಪದ್ಮಾವತಿ ಇಳಿಯುವುದಕ್ಕೂ ಸರಿ ಹೋಯಿತು. ಕಿಟಿಕಿಯಿಂದ ಮೆಲ್ಲಗೆ ಕತ್ತು ಚಾಚಿದ ಇನ್ನೊಬ್ಬ ವ್ಯಕ್ತಿ ಶಿಲ್ಪಿ ಪದ್ಮನಾಭಂ ಆಗಿದ್ದ, ಆತ ನನ್ನ ಕಡೆ ಕೃತಜ್ಞತಾ ಭಾವದಿಂದ ನೋಡಿದ. ಅದೇ ಕಾರಿನ ಚಾಲಕ ಖಾದಿರ್ "ಪಾಂಚ್ ಮಿನಟಿನಲ್ಲಿ ಬಿಟ್ಟು ಬರ್ತೀನಿ ಹಜರತ್, ಇಲ್ಲೇ ಇರ್ರಿ" ಎಂದು ಹೇಳಿದ್ದು ಕೇಳಿಸಿತು, ತಮಗೆ ಎಮ್ಮೆಗಳನ್ನು ಮಾರುವ ಸಲುವಾಗಿ ಗಿದ್ದಲೂರಿನಿಂದ ಬಂದಿದ್ದ ಅವನನ್ನು ತಮ್ಮ ಖಾಸಾ ಕಾರಿನ ಚಾಲಕನನ್ನಾಗಿ ನೇಮಿಸಿಕೊಂಡಿದ್ದರು. ತನ್ನ ಕಷ್ಟ ಸುಖಗಳನ್ನು ಹೇಳಿಕೊಳ್ಳುವ ಮೂಲಕ ಕನ್ನಡವನ್ನು ತಕ್ಕಮಟ್ಟಿಗೆ ಕಲಿಯುವ ಸಲುವಾಗಿ ಬಂದು ಹೋಗುವುದರ ಮೂಲಕ ನನಗೆ ಪರಿಚಯವಾಗಿದ್ದ.

++++

ಜನರು ಅಡ್ಡಾದಿಡ್ಡಿ ತಿರುಗಾಡುತ್ತಿದ್ದ ಪರಿಣಾಮವಾಗಿ ಕಾರನ್ನು ಅಗಸೆ ಬಾಗಿಲನ್ನು ದಾಟಿಸುವಷ್ಟರಲ್ಲಿ ಚಾಲಕ ಖಾದಿರ್ ಇಸ್ಕಿ ಮಾ ಭೋಸೂಡ್ಕೆ ನರಿಕೇಸ್ತಾ ಇಂಥ ಬಯ್ಗಳನ್ನು ಹತ್ತಾರು ಸಲ ಉಪಯೋಗಿಸಿರಬಹುದು. ಕುಳ್ಳಗೆ ಕಪ್ಪಗೆ ವಿಲಕ್ಷಣವಾಗಿದ್ದ ಅವನ ಪಕ್ಕದಲ್ಲಿ ಕುಳಿತ್ತಿದ್ದ ಚಕ್ರವರ್ತಿ ಎರಡು ಮೂರು ಸಲ ಹಿಂದೆ ಕುಳಿತಿದ್ದ ನಮ್ಮ ಕಡೆ ನೋಡಿರಬಹುದು. ಇತರರಂತೆ ಅವನೂ ಕೊಲೆಗಿಲೆ ಮಾಡಿದ್ದಿರಬಹುದೆಂಬ ಮೈಲಿಗೆ ಸದೃಶ ಸಂದೇಹ ಪ್ರಾಯಶಃ ಆತನನ್ನು ಕಾಡಿರಬಹುದು. ಅಂಥ ಅನುಭವಗಳನ್ನು ಎಲ್ಲಿ ಹೇಳಿಕೊಳ್ಳುವನೋ ಎಂಬ ಆತಂಕ ಸಹ. ತೋಪಿನಲ್ಲಿ ಗೌಡರಿಗೂ ಶರಭನಿಗೂ ನಡುವೆ ನಡೆದಿರಬಹುದಾದ ಸಂಭಾಷಣೆ ಕುರಿತಂತೆ ಕೇಳಲು ಸಲುವಾಗಿ ಒಂದೆರಡು ಸಲ ಪ್ರಯತ್ನಿಸಿ ವಿಫಲನಾದೆ, ನನಗೆ ಬಂದ ಮಾಹಿತಿಯಂತೆ ಅವನೂ ಆ ಸನ್ನಿವೇಶದಲ್ಲಿ ಭಾಗಿಯಾಗಿದ್ದ. ಗೌಡದ್ವಯರು ಅಲ್ಲಿಗೆ ಹೋದ ಉದ್ದೇಶ ಶರಭನ ಪಾದದಲ್ಲಿರುವ ಆರನೆ ಬೆರಳನ್ನು ನೋಡಿ ತಮ್ಮ ಅನುಮಾನವನ್ನು ಬಗೆಹರಿಸಿಕೊಳ್ಳುವುದಾಗಿತ್ತು, ಖಚಿತಪಡಿಸಿಕೊಳ್ಳುವುದಾಗಿತ್ತು, ಅವನ ದೇಹದಿಂದ ಅವಧೂತತನದ ಛದ್ಮವೇಷವನ್ನು ಕಳಚಿ ಕೊಲೆಗೆ ಸುಪಾರಿ ಕೊಡುವುದಾಗಿತ್ತು. ಅಷ್ಟು ದಿವಸಗಳ ಕಾಲ ಒಡನಾಡಿದ್ದ ನನಗೂ ಅದನ್ನು ನೋಡುವುದಾಗಿರಲಿಲ್ಲ. ಅವನ ಪಾದದಲ್ಲಿ ಐದೇ ಬೆರಳುಗಳಿರಲಿ ದೇವರೇ, ಇದ್ದರೂ ಆರನೆಯ ಬೆರಳು ಅವರಿಗೆ

ಗೋಚರವಾಗಿರದೆ ಇರಲಿ ದೇವರೇ ಎಂದು ನನ್ನ ಮನಸ್ಸು ಬೇಡಿಕೊಂಡಿತು. ಕಾರಣ ಅವನೊಂದಿಗಿನ ಭಾವನಾತ್ಮಕ ಸಂಬಂಧಗಳು, ಅಣ್ಣ ಎಂದ ಮೇಲೆ ಅಣ್ಣನೆ, ತಮ್ಮ ಎಂದ ಮೇಲೆ ತಮ್ಮನೆ! ಆದರೆ ನನ್ನ ನಾಲಗೆ ನಿಯಂತ್ರಣ ತಪ್ಪಿ ಅಚಾನಕ್ಕಾಗಿ ಚೌಗಲೆಯನ್ನುದ್ದೇಶಿಸಿ..

"ಚಕ್ರವರ್ತಿ ತೆಗೆಯಬೇಕೆಂದಿರುವ ಸಿನೆಮಾಕ್ಕೆ ಆರನೆ ಬೆರಳು ಎಂಬ ಹೆಸರು ಇಟ್ಟರೆ ಹೇಗೆ!" ಎಂದು ಕೇಳುತ್ತಲೇ ತುಟಿ ಬಿಗಿದೆ. ಎಡಕ್ಕೆ ಕಾರನ್ನು ತಿರುಗಿಸಲಿದ್ದ ಖಾದಿರ್ ಕೂಡಲೆ ನನ್ನ ಕಡೆ ತಿರುಗಿ ನೋಡಿದ. ಅದೂ ಅವರಿಬ್ಬರಿಗಿಂತ ಮೊದಲು, ಪುಣ್ಯಕ್ಕೆ ತನ್ನ ನೋಟದಲ್ಲಿ ವ್ಯಗ್ರತೆ ಇರಲಿಲ್ಲ, ಬದಲಿಗೆ ಕುತೂಹಲವಿತ್ತು. ಚೌಗಲೆ ಏನನ್ನೋ ಹೇಳಲೆಂದು ಬಾಯಿ ತೆರೆಯುವಷ್ಟರಲ್ಲಿ ಚಕ್ರವರ್ತಿ ಕುಲುಕುವ ಸಲುವಾಗಿ ತನ್ನ ಬಲಗೈಗೆ ಬದಲಾಗಿ ಎಡಗೈಯನ್ನು ಚಾಚುತ್ತ "ಓಹ್ ವಂಡರ್‌ಫುಲ್! ಬೆಂಗಳೂರಿಗೆ ಹೋದೊಡನೆ ಫಿಲಂ ಛೇಂಬರ್‌ಗೆ ಹೋಗಿ ರಿಜಿಸ್ಟರ್ ಮಾಡಿಸುವೆ" ಎಂದು ಹೇಳಿ ಬೆರಗಿನಿಂದ ಬಿಡುವು ಪಡೆದಾದ ಬಳಿಕ "ಕಥೆ ನಿಮ್ಮದೆ, ಚಿತ್ರಕತೆ ಸಹ ನಿಮ್ಮದೆ, ಹೇಗೂ ನಾನೇ ನಿರ್ಮಾಪಕ ತಾನೆ! ನಿಮಗೆ ಕೈ ತುಂಬ ಗೌರವಧನ ಕೊಡುವ ವ್ಯವಸ್ಥೆ ಮಾಡುವೆ, ಹೋಟಲ್ ಕಾನಿಷ್ಕಾದಲ್ಲಿ ರೂಂ ಬುಕ್ ಮಾಡಿ ತಿಳಿಸುವೆ, ಹದಿನೈದು ದಿವಸ ರಜೆ ಹಾಕಿ ಬರುವಿರಂತೆ! ಚೌಗಲೆ ನಮ್ಮ ಜೊತೆ ಇರ್ತಾನೆ, ಅಲ್ಲವೆ ಚೌಗಲೆ! ಎಲ್ಲರಿಗೂ ಹಿಡಿಸುವಂಥ ಹಾಫ್ ಬೀಟ್ ಚಿತ್ರ ಮಾಡೋಣ, ಗದ್ದರನಿಂದ ಒಂದೆರಡು ಕ್ರಾಂತಿ ಗೀತೆಗಳನ್ನು ಹಾಡಿಸಬೇಕೆಂಬುದು ನನ್ನ ಆಸೆ, ಆತ ಹೇಗೋ ನಮ್ಮ ಚೌಗಲೆಯ ಸ್ನೇಹಿತ, ಅಲ್ಲವೆ ಚೌಗಲೆ!" ಎಂದು ಹೇಳುತ್ತ ಅಪರೂಪಕ್ಕೆ ರೋಮಾಂಚನಗೊಂಡನು. ಚೌಗಲೆಗೆ ಗದ್ದರನಂಥ ಜನಪರ ಹೋರಾಟಗಾರರು ಪರಿಚಯವಿರುವುದೆಂಬ ಸುಳಿವು ನೀಡಿದ. ಅಂಟಿ ಕುಳಿತಿದ್ದ ಗೆಳೆಯನ ಕಡೆ ನೋಡಿದೆ. ಆತನ ಶುಕ್ಲಪಟಲದ ಮೇಲೆ ಗಡ್ಡಧಾರಿ ವ್ಯಕ್ತಿಯೋರ್ವನ ಅಸ್ಪಷ್ಟ ಚಿತ್ರವಿತ್ತು, ಖಂಡಿತ ಆತ ಗದ್ದರ್ ಆಗಿದ್ದ, ಪ್ರತಿಬಿಂಬದ ಕಣ್ಣ ಪ್ರತಿಬಿಂಬದಲ್ಲಿ ಇನ್ನೋರ್ವ ವ್ಯಕ್ತಿ ಗೋಚರಿಸಿದ, ಖಂಡಿತ ಆತ ತೆಲಂಗಾಣದ ಕ್ರಾಂತಿಕಾರಿ ಕವಿ ಚೆರಬಂಡರಾಜು ಆಗಿದ್ದ,

"ಓಹ್ ಅದಕ್ಕೇನು ಬಿಡಿ, ಕೇಳಿದರೆ ಇಲ್ಲವೆನ್ನುವುದಿಲ್ಲ" ಎಂದು ಹೇಳಿದ. ಅವರು ಚಿತ್ರ ತೆಗೆಯುವರೋ ಇಲ್ಲವೋ! ಅದಕ್ಕೆ ನಾನು ಕಥೆ ಚಿತ್ರಕಥೆ ಬರೆಯುವೆನೋ ಇಲ್ಲವೊ! ಆದರೆ ಒಂದಂತೂ ನಿಜ, ಅದೆಂದರೆ ಬರೆಯುತ್ತಿರುವ ಕಾದಂಬರಿಗೆ 'ಆರನೆ ಬೆರಳು' ಎಂದು ನಾಮಕರಣ ಮಾಡುವುದೆಂದು ನಿರ್ಧರಿಸಿದೆ. ಆದರೆ ಆರನೆ ಬೆರಳಿರುವ ವ್ಯಕ್ತಿ ಶಶಾಂಕನೋ, ಆತನ ತಂದೆ ಹರಿಶ್ಚಂದ್ರರೆಡ್ಡಿಯೋ! ಕಣ್ಣ ಮುಂದೆ ಆ ಎರಡೂ ಪಾತ್ರಗಳನ್ನು ಸ್ಥಾಪಿಸಿಕೊಂಡು ಯೋಚಿಸಲಾರಂಭಿಸಿದೆ. ಅವರೊಂದಿಗೆ ಬರೆಯುತ್ತಿರುವ ಕಾದಂಬರಿ ಕುರಿತಂತೆ ಚರ್ಚಿಸಿದರೆ! ನನ್ನ ಗೈರುಹಾಜರಿಯಲ್ಲಿ ಅವರಿಬ್ಬರು ಅದರ ಮೇಲೆ ಕಣ್ಣಾಡಿಸಿದ್ದರೆ! ಆದರೆ ಅಗೋ ಅಷ್ಟು ದೂರದಲ್ಲಿ!

ಗೌಡರ ತೋಟದ ಮನೆ ಎಂದರೆ ಅದು ತೋಟದ ಮನೆಯಲ್ಲ, ಅದೊಂದು ಬಹುವಿಸ್ತೀರ್ಣದ ನಿಗೂಢ ಕಾರಸ್ಥಾನ, ಆದರೆ ಅದು ಮಧುವಣಗಿತ್ತಿಯಂತೆ ರಾರಾಜಿಸುತ್ತಿರುವುದೇ ವಿಚಿತ್ರ, ತನ್ನ ದೇಹದಾದ್ಯಂತ ಅಪರೂಪಕ್ಕೆ ನೂರಾರು ಹಿರಿಕಿರಿಯ ಬಲ್ಬುಗಳನ್ನು ಅಲಂಕಾರಕ್ಕೆ ಮುಡಿದಿರುವುದು, ಅದೂ ಕರೆಂಟು ಬಂದಿರುವ ಕಾರಣಕ್ಕೆ! ಕಾರಿನ ಹೆಡ್‌ಲೈಟುಗಳ ಬೆಳಕಿನೊಂದಿಗೆ ಅದರ ಬೆಳಕು ಪೈಪೋಟಿ ನಡೆಸಿತು. ಅದರ ಬೆಳಕಲ್ಲಿ ಹತ್ತಾರು ಜನ ಉಪಸ್ಥಿತರಿರುವಂತಿದೆ. ಪ್ರಾಯಶಃ ಅವರೆಲ್ಲ ತಮ್ಮ ತಮ್ಮ ಧಣಿಗಳ

ಅಂಗರಕ್ಷಕರು ಎನ್ನುವುದರಲ್ಲಿ ಸಂಶಯವಿಲ್ಲ. ಕಾರಿನ ವೇಗವನ್ನು ಸ್ಥಗಿತಗೊಳಿಸುತ್ತ ಖಾದಿರ್ "ಸಿನೆಮಾ ತೆಗೆದರೆ ನನಗೂ ಒಂದು ಛಾನ್ಸ್ ಕೊಡಬೇಕು ಸಾರ್" ಎಂದು ಅಧಿಕಾರಪೂರ್ವಕವಾಗಿ ಕೇಳುತ್ತಲೇ ಆಗಲೇ ನಿಂತಿದ್ದ ಹತ್ತಾರು ಕಾರುಗಳ ನಡುವೆ ತನ್ನ ಕಾರನ್ನು ನಿಲ್ಲಿಸಿದ. ಮುತ್ತಲೆಂದು ಆಗಮಿಸಿದ ಸಶಸ್ತ್ರಧಾರಿಗಳ ಕಿವಿಯಲ್ಲಿ ತಾನು ಏನನ್ನೋ ಹೇಳಿದ, ಇಳಿಯಲಾರಂಭಿಸಿದ ನಮ್ಮನ್ನು ಕಣ್ಣುಗಳಿಂದ ತಪಾಸಣೆ ನಡೆಸಿ ದಾರಿ ಬಿಟ್ಟುಕೊಟ್ಟರು. ಸ್ಪರ್ಶದ ಮೂಲಕ ಆತಂಕಗೊಳ್ಳುವ ಅಗತ್ಯವಿಲ್ಲವೆಂದು ಮನವರಿಕೆ ಮಾಡಿಕೊಟ್ಟೆ. ನನ್ನ ಮೈಗಂಟಿಕೊಂಡಂತೆ ನಡೆಯುವುದೋ! ಅಥವಾ ಹಿಂದೆ ಹಿಂದೆ ನಡೆಯುವುದೋ! ಗಲಿಬಿಲಿ ಅನುಭವಿಸುತ್ತಲೇ ಹೆಜ್ಜೆ ಇರಿಸಲಾರಂಭಿಸಿದರು. ಬಾಗಿಲನ್ನು ಸಮೀಪಿಸುತ್ತಿದ್ದಂತೆ!

ಮನೆಯ ಮೇಲ್ಭಾಗದ ಛಾವಣಿ ಮೇಲೆ, ಅಂದರೆ ಹಾಕಿದ್ದ ಶಾಮಿಯಾನದ ಕೆಳಗೆ ಬಾಟಲಿ ಗ್ಲಾಸುಗಳ ಸದ್ದು, ಏರು ಧನಿಯಲ್ಲಿ ಮಾತಾಡುತ್ತಿರುವ ಸದ್ದು, ಗಹಗಹಿಸಿ ನಗಾಡುತ್ತಿರುವ ಸದ್ದು, ಹಿಂಸೆಗೆ ರಾಜಕಾರಣಕ್ಕೆ ಸಂಬಂಧಿಸಿದ ಮಾತುಗಳ ಸದ್ದು, ನಡು ನಡುವೆ ಪಲ್ಲವಿಸುತ್ತಿರುವ ನಾಮವಾಚಕಗಳ ಸದ್ದು! ಅದರ ಆಧಾರದ ಮೇಲೆ ಗಂಗುಲ ಪ್ರತಾಪರೆಡ್ಡಿ, ಚೆಲ್ಲಾ ರಾಮಕ್ರಿಷ್ಣಾರೆಡ್ಡಿ, ಭೈರೆಡ್ಡಿಗಳ ಧ್ವನಿಯನ್ನು ಗುರುತಿಸಿದೆ. ಜೊತೆಗೆ ಅವರ ಕುಕೃತ್ಯಗಳ ಇತಿಹಾಸವನ್ನು ಜ್ಞಾಪಿಸಿಕೊಳ್ಳುತ್ತಿರುವಷ್ಟರಲ್ಲಿ ನಾವು ಮನೆಯನ್ನು ಪ್ರವೇಶಿಸಿದ್ದೆವಲ್ಲದೆ ಹಜಾರವನ್ನು ಪ್ರವೇಶಿಸಿದ್ದೆವು.

ವಿವಿಧ ಮದ್ಯಸಾರಗಳ ದುರ್ವಾಸನೆ ಅಲ್ಲೆಲ್ಲ ಆವರಿಸಿತ್ತು. ಅಲ್ಲೆಲ್ಲ ಮಧ್ಯಮ ವರ್ಗದ ಜಮೀನ್ದಾರರು ಕಿಕ್ಕಿರಿದಿದ್ದರು. ಆತನ ಕೈಯಲ್ಲಿದ್ದ ಖಾಲಿ ಗ್ಲಾಸಿಗೆ ಇವನು ಹಾಕುವುದು, ಇವನ ಕೈಯಲ್ಲಿದ್ದ ಖಾಲಿ ಗ್ಲಾಸಿಗೆ ಅವನು ಹಾಕುವುದು, ಹಾಕಿದ್ದನ್ನು ಒಂದೇ ಉಸಿರಿಗೆ ಕುಡಿದು ಮುಗಿಸುವುದು, ಕುಡಿದ ಅಮಲಿನಲ್ಲಿ ಅಶ್ಲೀಲ ಪದಪುಂಜವನ್ನು ಪುಂಖಾನುಪುಂಖವಾಗಿ ಕಾರಿಕೊಳ್ಳುವುದು. ತಮ್ಮ ಪೊದೆ ಹುಬ್ಬುಗಳನ್ನು ಮೇಲೇರಿಸಿ ನಮ್ಮ ಕಡೆ ಜುಜುಬಿಗಳೆನ್ನುವಂತೆ ನೋಡುವುದು, ಆಡೆವುಡು ಈಡೆವುಡು ಎಂದು ತಮ್ಮ ಗನ್ ಮ್ಯಾನುಗಳನ್ನು ಕೇಳಿ ತಿಳಿದುಕೊಳ್ಳುವುದು, ಅವರು ಹೇಳಿದ್ದಕ್ಕೆ ಅಲಾಗ ಎಂದು ಆಶ್ಚರ್ಯ ವ್ಯಕ್ತಪಡಿಸುವುದು ನಡೆದೇ ಇತ್ತು. ಆಳುಗಳ ಪೈಕಿ ಕೆಲವರು ಮಹಡಿಯನ್ನು ಏರುವುದು ಇಳಿಯುವುದು ನಡೆಸಿದ್ದರು, ಸ್ವಾಮಿದ್ವಯರ ಪೈಕಿ ರಾಘಪ್ಪ ಏರುತ್ತಿದ್ದರೆ ಪಂಪಯ್ಯ ಇಳಿಯುತ್ತಿದ್ದುದು ಗೋಚರಿಸಿತು, ಆದರೆ ತರಾತುರಿಯಲ್ಲಿದ್ದ ಅವರ ಗಮನ ನಮ್ಮ ಕಡೆ ಇರಲಿಲ್ಲ. ಅವರಿವರೆಲ್ಲರ ಮೇಲುಸ್ತುವಾರಿಯನ್ನು ತಮ್ಮ ಕೈಗೆ ತೆಗೆದುಕೊಂಡಿದ್ದ ಒಂದಿಬ್ಬರು ಕ್ರಮೇಣ ಹತ್ತಿರ ಬಂದು ಕೊಕ್ಕ ಬುಕ್ಕರೆಂದು ಸ್ಪಷ್ಟವಾದರು. ಗುರುತಿಸಿದೊಡನೆ ಕೊಕ್ಕ ತಲೆಗೆ ಸುತ್ತಿದ್ದ ವಲ್ಲಿಯನ್ನು ಗೌರವಾರ್ಥ ತೆಗೆದು ಕೈಯಲ್ಲಿ ಹಿಡಿದುಕೊಳ್ಳುತ್ತ ಓಯ್ ಮಾವೋ ಎವರೊಚ್ಚಾರು ಸೂಡು ಎಂದು ಕೂಗಿದ, ಅದೂ ಮೆಲ್ಲಗೆ. ಆ ಧ್ವನಿಯ ಹಾದಿಯ ಒಂದು ತುದಿಯಿಂದ ಅಮೃತಾಂಜನ ಲಕ್ಷ್ಮೀರೆಡ್ಡಿಯೂ ಇನ್ನೊಂದು ತುದಿಯಿಂದ ಶೇಷಣ್ಣನೂ ಆಗಮಿಸಿದರು. ಪುಣ್ಯಕ್ಕೆ ಅವರಿಬ್ಬರು ಕುಡಿದಿರಲಿಲ್ಲ. ರೆಡ್ಡಿ ಇರದಿದ್ದಲ್ಲಿ ಇಂಥಲ್ಲೆಲ್ಲ ನಿಮ್ಮಂಥವರು ಯಾಕೆ ಬಂದಿರಿ ಎಂದು ಕೇಳಲಿದ್ದ ಶೇಷಣ್ಣ ಓಹೋ ಬೆಂಗಳೂರಿನವರು ಎಂದು ಉದ್ಗರಿಸಿದ. ವ್ಯಂಗ್ಯದ ಅಗತ್ಯವಿರಲಿಲ್ಲ, ಬಳಿಕ ತನ್ನ ತಪ್ಪನ್ನು ಸರಿಪಡಿಸಿಕೊಳ್ಳುವ ಸಲುವಾಗಿ ಅವರೊಂದಿಗೆ ಔಪಚಾರಿಕವಾಗಿಯೂ ಸೌಜನ್ಯಯುತವಾಗಿಯೂ ಮಾತನಾಡಿದ, ಉಭಯ ಕುಶಲೋಪರಿ ವಿಚಾರಿಸಿದ. ಪುನಃ ತನ್ನ ಕೆಲಸಕ್ಕೆ ತಾನು ಹೊರಟು ಹೋದನು.

ತಮ್ಮ ತಮ್ಮ ಮೂಗುಗಳನ್ನು ಮರೆ ಮಾಚಿದರೆಲ್ಲಿ ಮರಣ ದಂಡನೆಗೆ ಗುರಿಯಾಗುವೆವೋ ಎಂದು ಹೆದರಿದ ಮಿತ್ರದ್ವಯರು ತಮ್ಮ ಕೈಗಳಲ್ಲಿ ಕರವಸ್ತ್ರಗಳನ್ನು ಹಿಡಿದುಕೊಂಡು ನನ್ನ ಕಡೆ ಅಸಹಾಯಕರಂತೆ ನೋಡಿದರು. ಉಸಿರುಗಟ್ಟಿಸುವ ಸನ್ನಿವೇಶ, ಅನಿರ್ವಚನೀಯ ಕುತೂಹಲ, ಎಲ್ಲಾ ದೃಶ್ಯಗಳನ್ನು ಸೃಜನಶೀಲವಾಗಿ ಅರಗಿಸಿಕೊಳ್ಳಬೇಕೆಂಬ ಉತ್ಕಟತೆ, ಕಣ್ಣ ನೋಟಗಳಿಂದ ಪ್ರತಿಯೊಬ್ಬರ ಅಂತರಂಗವನ್ನು ಪ್ರವೇಶಿಸಬೇಕೆಂಬ ಮಹತ್ವಾಕಾಂಕ್ಷೆ, ದಶದಿಕ್ಕುಗಳ ತುಂಬೆಲ್ಲಾ ಹರಿದಾಡಬೇಕೆಂಬ ಚಡಪಡಿಕೆ. ಆದರೂ ಅವರ ಸಂಗಡ ನಿಂತಲ್ಲಿಯೇ ನಿಂತೆ. ಶೇಷಣ್ಣ ತೋರಿಸಿದ ಕುರ್ಚಿಗಳಲ್ಲಿ ಕೂಡ್ರುವುದಕ್ಕೂ ಎದುರಿಗಿದ್ದ ಕೆಲವರು ವಾಗ್ಸಮರ ಆರಂಭಿಸುವುದಕ್ಕೂ ಸರಿ ಹೋಯಿತು. ಇನ್ನೇನು ಕೆಲವೇ ಕ್ಷಣಗಳಲ್ಲಿ ಮಾರಾಮಾರಿ ಸಂಭವಿಸಿ ಹೆಣಗಳುರುಳುವವು ಎನ್ನುವಷ್ಟರಲ್ಲಿ ನಮ್ಮನ್ನು ಲಕ್ಷ್ಮೀರೆಡ್ಡಿ ಮೇಲೆ ಬರುವಂತೆ ಕರತಾಡನದ ಮೂಲಕ ಸೂಚಿಸಿದ. ಆತನ ಹಿಂದೆಯೇ ಕಾಣಿಸಿಕೊಂಡ ಹೆಬ್ಬಟಂ ಗೌಡರು ಕುಡಿದಿರಲಿಲ್ಲ. ಕಂಪನದೊಂದಿಗೆ ಸಮೀಪಿಸುತ್ತಲೇ ಕರ ಜೋಡಿಸಿದ ನಮ್ಮನ್ನು ಮೇಲಕ್ಕೆ ಕರೆದೊಯ್ದರು. ಅಲ್ಲಿ ಕ್ರಿಯಾಶೀಲರಾಗಿದ್ದ ಯಾರೊಬ್ಬರಿಗೂ ನಮ್ಮನ್ನು ಪರಿಚಯಿಸಲಿಲ್ಲ. ಸುಮ್ಮನೆ ಕೂತು ನೋಡುವಂತೆ ಕಣ್ಸನ್ನೆ ಮಾಡಿದರು. ಅವರ ಆಜ್ಞೆಯನ್ನು ನಿರೀಕ್ಷಿಸದೆ ವ್ಯಕ್ತಿಯೋರ್ವ ತಂಪುಪಾನೀಯವಿದ್ದ ಗ್ಲಾಸುಗಳನ್ನು ವಿತರಿಸಿ ಹೋದನು. ಅಲ್ಲಿನ ದೃಶ್ಯಾವಳಿ ಕುರಿತಂತೆ ಹೇಳುವುದಾದರೆ!

ಅವರನ್ನು ಇಂಥವರೆ ಎಂದು ಗುರುತಿಸುವುದು ಸಾಧ್ಯವಿರಲಿಲ್ಲ. ಅವರ ತಲೆ ತುಂಬೆಲ್ಲ ದಟ್ಟವಾಗಿ ಬೆಳೆದಿರುವ ಭವತ್‌ಪಾಶ ಕೇಶರಾಶಿಯೋ! ಅವರ ವಿಶಾಲ ನೊಸಲ ಕೆಳಗಿರುವ ಪೊದೆ ಹುಬ್ಬುಗಳೋ! ಅವುಗಳ ಕೆಳಗಿರುವ ಅಗ್ನಿಷ್ಟಿಕೆಯಂಥ ಕಣ್ಣುಗಳೋ! ನೀಳ ನಾಸಿಕಗಳೋ! ಅದರ ಕೆಳಗಿರುವ ಗಲ್ಲಿ ಮೀಸೆಗಳೋ! ದಪ್ಪನೆಯ ಕತ್ತುಗಳೋ! ಕೊರಳೊಳಗಿರುವ ತರಾವರಿ ಚಿನ್ನದ ಸರಗಳೋ! ಅವುಗಳ ನಡುವೆ ಅಲ್ಲಲ್ಲಿ ಅಭಿಮಂತ್ರಿತ ತಾಯತಗಳೋ! ಸುವಿಶಾಲ ಎದೆ ಪ್ರದೇಶಗಳೋ! ಕೀರ್ತಿಗಳಿರದಿದ್ದ ಬಾಳೆಗೊನೆ ಸದೃಶ ತೋಳುಗಳೋ! ಗುಡಾಣ ಸದೃಶ ಜಠರಗಳೋ! ಇನ್ನು ಕಟಿ ಪ್ರದೇಶದ ಕೆಳಗಿನ ಭಾಗಗಳ ಬಗ್ಗೆ ಹೇಳುವುದಾದರೆ! ಒಟ್ಟಾರೆ ಹೇಳುವುದಾದರೆ ಗಾಂಧಾರಿ ಸಂತಾನವೇ ಮೈವೆತ್ತಂತಿದ್ದರು. ಒಂದೇ ಎರಕದಲ್ಲಿ ಮಾಡಲ್ಪಟ್ಟಂತಿದ್ದ ಅವರು ಇಂಥವರೇ ಎಂದು ಗುರುತಿಸುವುದು ನಮ್ಮಂಥ ಹೊಸಬರಿಗೆ ಸಾಧ್ಯವಿರಲಿಲ್ಲ. ತಮ್ಮಿಂದ ಪಿಸುಮಾತುಗಳನ್ನು ಆಡುವುದು ಸಾಧ್ಯವೇ ಇಲ್ಲವೆನ್ನುವಂತೆ ಪ್ರತಿಯೊಂದೂ ಮಾತನ್ನು ಮುಗಿಲು ಕಳಚಿ ಬೀಳುವಂತೆ ಮಾತಾಡುತ್ತಿದ್ದರು, ಪ್ರತಿಯೊಂದು ಮಾತಿಗೂ ಗಹಗಹಿಸಿ ನಗಾಡುತ್ತಿದ್ದರು, ವಾಡ್ನಿ ಲೇಪೇಸ್ತಾ, ವೀಡ್ನಿ ನರಕೇಸ್ತಾ, ವಾಡಿ ನೋಟ್ಲೊ ಉಚ್ಚ ಪೋಸ್ತಾ, ವಾಳ್ನಿ ಅಂತು ಚೂಸ್ತಾ ಎಂಬಂಥ ಅವರ ಮಾತುಗಳನ್ನು ಅನುವಾದಿಸುವುದಾದರೂ ಹೇಗೆ! ಇದ್ದಕ್ಕಿದ್ದಂತೆ ಮೌನವಹಿಸುತ್ತಿದ್ದುದೋ! ಪರಸ್ಪರ ದೃಷ್ಟಿ ಯುದ್ಧ ಮಾಡುತ್ತಿದ್ದುದೋ! ಪುನಃ ಪ್ರೇತಗಳನ್ನು ಆವಹಿಸಿಕೊಂಡವರಂತೆ ಗಹಗಹಿಸಿ ನಗಾಡುತ್ತಿದ್ದುದೋ! ಆಗಾಗ್ಗೆ ನಮ್ಮ ಕಡೆ ದೃಷ್ಟಿ ಹಾಯಿಸಿ ದಹಿಸುತ್ತಿದ್ದುದೋ! ಅವರಿವರನ್ನು ಕೇಳಿ ತಿಳಿದುಕೊಳ್ಳುತ್ತಿದ್ದುದೋ! ಪುನಃ ನಿರ್ಲಕ್ಷ್ಯ ಭಾವ ತಳೆದು ತಮ್ಮ ಪಾಡಿಗೆ ತಾವು ಮಾತುಕತೆಯಲ್ಲಿ ತಲ್ಲೀನರಾಗುತ್ತಿದ್ದುದೋ! ಅದೆಲ್ಲ ಸಹನೀವೂ ಆಗಿರಲಿಲ್ಲ ಅಸಹನೀಯವೂ ಆಗಿರಲಿಲ್ಲ.

ಚಕ್ರವರ್ತಿ ತನ್ನ ಕೆಮೆರಾವನ್ನು ಅಚಾನಕ್ಕಾಗಿ ನೆನಪು ಮಾಡಿಕೊಂಡ, ತಂದಿದ್ದರೆ ಅವರೆಲ್ಲರ ಫೋಟೋಗಳನ್ನು ತೆಗೆದು ಪತ್ರಿಕೆಗಳಿಗೆ ತಾನು ಸಚಿತ್ರ ಲೇಖನಗಳನ್ನು

ಬರೆಯಬಹುದಾಗಿತ್ತು ಎಂದು ಪಿಸುಮಾತುಗಳಲ್ಲಿ ಹೇಳಿಕೊಂಡ. ಆದರೆ ಚೌಗಲೆ ಆ ಕ್ಷಣ ನೆನಪಿಸಿಕೊಂಡದ್ದು ಮೆಕೆನಾಸ್ ಗೋಲ್ಡ್ ಚಿತ್ರವನ್ನು, ಗ್ರೆಗೊರಿ ಪೆಕ್, ಓಮರ್ ಶರೀಫರ ಅಮೋಘ ಅಭಿನಯವನ್ನು, ಅದರಲ್ಲಿನ ದೈತ್ಯಾಕಾರದ ಪೋಷಕ ಪಾತ್ರಗಳನ್ನು! ಬಳಿಕ ನನ್ನ ಕಿವಿಯಲ್ಲಿ ಪಿಸುಗುಟ್ಟಿದ, ನಿಮ್ಮ ಕಥೆಗಳನ್ನು ಅತಿವಾಸ್ತವವೆಂದೂ ಉತ್ಪ್ರೇಕ್ಷೆ ಎಂದು ನಾನು ಭಾವಿಸಿದ್ದೆನಲ್ಲ, ಅದು ತಪ್ಪು ಎಂದು ನನಗೆ ಈಗ ಅನ್ನಿಸುತ್ತಿರುವುದು ಎಂದು.

ನಾನು ಅಲ್ಲಿನ ತರಾವರಿ ದೃಶ್ಯಾವಳಿಗಳನ್ನು ಮನಸ್ಸಿನಲ್ಲಿ ದಾಖಲಿಸಲಾರಂಭಿಸಿದ್ದೆ. ಪಿಸು ಮಾತಿಗೆ ಹೆಸರಾಗಿದ್ದ ಶೇಷಣ್ಣ ಬಂದು ನಮ್ಮೆದುರು ಕುಳಿತು ಅಮಾಯಕನಂತೆ ವೀಕ್ಷಕ ವಿವರಣೆ ನೀಡಲಾರಂಭಿಸಿದನು. ಅಳ್ಳಗಡ್ಡದ ಗಂಗಲ ಪ್ರತಾಪರೆಡ್ಡಿಯವರನ್ನಾಗಲೀ, ಔಕಿನ ಚೆಲ್ಲಾ ರಾಮಕ್ರಿಷ್ಟಾರೆಡ್ಡಿಯವರನ್ನಾಗಲೀ, ಕೊಲಿಮಿಗುಂಡ್ಲದ ಭೈರೆಡ್ಡಿ ರಾಜಶೇಖರರೆಡ್ಡಿಯವರನ್ನಾಗಲೀ, ಕಪ್ಪಟ್ರಾಳದ ವೆಂಕಪ್ಪನಾಯ್ಡು ಅವರನ್ನಾಗಲೀ, ಪತ್ತಿಕೊಂಡದ ವಾರಾಲ ಪದ್ಮಕ್ಕಳನ್ನಾಗಲೀ ನಾನು ಖುದ್ದ ನೋಡಿರಲಿಲ್ಲ, ಆದರೆ ಅವರೆಲ್ಲರ ಹಿಂಸಾತ್ಮಕ ಕಥನಗಳನ್ನು ಕೇಳಿದ್ದೆ, ವದಂತಿಗಳನ್ನು ಆಧರಿಸಿ ಕಥೆಗಳನ್ನು ಬರೆದು ಜನಪ್ರಿಯತೆಯನ್ನು ಸಂಪಾದಿಸಿದ್ದೆ. ಸಾಕ್ಷಾತ್ ಅವರೆಲ್ಲ ನಮ್ಮ ಕಣ್ಣೆದುರು!

ಸ್ವಲ್ಪ ಹೊತ್ತು ಗತಿಸಿದ ಬಳಿಕ ಮಹಡಿಯ ಇನ್ನೊಂದು ಕೋಣೆಯ ಬಾಗಿಲು ನಿಧಾನವಾಗಿ ತೆರೆದುಕೊಂಡಿತು. ಹೆಬ್ಬಟಂ ಗೌಡರ ಮಗ ಸೂರ್ಯಪ್ರತಾಪರೆಡ್ಡಿ ಹೊರಗೆ ಕಾಣಿಸಿಕೊಂಡ. ಬುಡ್ಡಾ ರಾಜಾರೆಡ್ಡಿ, ಗೊನೆಗೊಂಡ್ಲದ ಪರಪ್ಪನಾಯ್ಡು ತನ್ನ ಎಡ ಬಲ ಇದ್ದರು, ನಮ್ಮ ಮುಂದೆ ಸಾಗಿದ, ನಮ್ಮನ್ನು ನೋಡಿರಬಹುದು, ಅಥವಾ ನೋಡಿಯೂ ಉಪೇಕ್ಷೆ ಮಾಡಿರಲೂಬಹುದು. ಗಂಗುಲ, ಚೆಲ್ಲಾಗಳು ಸ್ವಲ್ಪ ಕತ್ತೊರಳಿಸಿದಾಗ ಅವರ ಕೊರಳಲ್ಲಿದ್ದ ವಜ್ರದ ಸರ ದೀಪದ ಬೆಳಕಿಗೆ ಪ್ರಜ್ವಲಿಸಿತು. ಹೆಬ್ಬಟಂ ಗೌಡರು ಎದ್ದು ಹೋಗಿ ತಮ್ಮ ಮಗನನ್ನು ಬರಮಾಡಿಕೊಂಡರಲ್ಲದೆ ಮಾತಾಡದೆ ಅವರಿಗೆಲ್ಲ ಪರಿಚಯಿಸಿದರು. ಪ್ರತಾಪರೆಡ್ಡಿ ಕೆಲವರೆದುರು ಕರಜೋಡಿಸಿದನಲ್ಲದೆ ಕೆಲವರ ಕೈಕುಲುಕಿದ, ಹಲವರನ್ನು ಮಾಮಾ, ಪೆದ್ದನಾನ್ನ, ಚಿನ್ನಾನ್ನ ಅಬ್ಬಾಯಿ ಎಂಬಿವೇ ಮೊದಲಾದ ಸಂಬಂಧ ವಾಚಕಗಳಿಂದ ಮಾತನಾಡಿಸಿದ.

ಅದುವರೆಗೆ ಫ್ಯಾಕ್ಷನ್ ಕುರಿತಂತೆ ಚರ್ಚೆ ನಡೆಸುತ್ತಿದ್ದವರು ಆತನ ಉಪಸ್ಥಿತಿಯಲ್ಲಿ ರಾಜಕೀಯ ಪಕ್ಷಗಳ ಬಗ್ಗೆ ಚರ್ಚೆಯನ್ನಾರಂಭಿಸಿದರು. ಗಂಗಲ ತೆಲುಗು ದೇಶಂ ಬಗೆಗೂ, ಚೆಲ್ಲಾರವರು ಕಾಂಗ್ರೆಸ್ ಪಕ್ಷದ ಬಗೆಗೂ ವಾದ ಮಂಡಿಸಲಾರಂಭಿಸಿದರು. ಆದರೆ ಕಪ್ಪಟ್ರಾಳ್ ವೆಂಕಪ್ಪನಾಯ್ಡು ಆ ಎರಡೂ ಪಕ್ಷಗಳಿಗಿಂತ ಮಾರ್ಕ್ಸ್‌ವಾದಿ ಕಮ್ಯುನಿಷ್ಟ್ ಪಕ್ಷವೇ ವಾಸಿ ಎಂದೊಡನೆ ವಾರಾಲ ಪದ್ಮಕ್ಕ ಕೆರಳಿ ಎದ್ದು ನಿಂತು ಕೋಗಿಲೆತೋಟದ ರಘೋತ್ತಮರೆಡ್ಡಿಯ ಸಲಹೆಯನ್ನು ಪುರಸ್ಕರಿಸಿ ಪುನಃ ಕುಳಿತುಕೊಂಡು ಬುಸುಗುಟ್ಟಲಾರಂಭಿಸಿದಳು. ಯಾವ ರಾಜಕೀಯ ಪಕ್ಷ ನಕ್ಸಲೈಟರ ಹುಟ್ಟಡಗಿಸಲು ಶ್ರಮಿಸಿರುವುದೋ ಆ ಪಕ್ಷವನ್ನು ತಾನು ಬೆಂಬಲಿಸುವುದಾಗಿ ಬುಡ್ಡಾ ರಾಜಾರೆಡ್ಡಿ ಹೇಳಿದೊಡನೆ ಚರ್ಚೆ ಇನ್ನೊಂದು ತಿರುವು ಪಡೆಯಿತು. ಚರ್ಚೆಯ ನಡುವೆ ನಲ್ಲಮಲ ಅರಣ್ಯ ಮೈದೋರಿತು, ಆಜಾದೂ ಗಣಪತಿ ರಾಮಕ್ರಿಷ್ಣರೇ ಮೊದಲಾದ ನಕ್ಸಲೈಟ್ ಮುಖಂಡರು ಅವರ ಪ್ರಸ್ತಾಪಕ್ಕೆ ತುತ್ತಾದರು, ಅವರೆಲ್ಲರ ಮಾತುಗಳಿಂದ ಥಳಿಸಿಕೊಂಡರು. ತಮ್ಮಂಥ ಅಮಾಯಕ ಜಮೀನ್ದಾರರನ್ನು ಹೊಂಚಿ ಕೊಲ್ಲುವ ಅಧಿಕಾರವನ್ನು ಅವರಿಗೆ ಕೊಟ್ಟವರು ಯಾರು ಎಂಬ ಪ್ರಶ್ನೆಯನ್ನು ಕೈಗೆತ್ತಿಕೊಂಡರು. ಅಂಥವರಿಗೆ ಆಶ್ರಯ ಕಲ್ಪಿಸಿರುವ ನಲ್ಲಮಲ ಅರಣ್ಯವನ್ನು ದ್ವಾಪರಯುಗದಲ್ಲಿ ಅರ್ಜುನನು

ಖಾಂಡವ ವನ ದಹಿಸಿದಂತೆ ಸುಟ್ಟು ನಾಶ ಮಾಡಬೇಕೆಂದು ಕರೆ ನೀಡಿದರು. ನಕ್ಸಲೈಟರ ಉಪಟಳಕ್ಕೆ ಬೇಸತ್ತು ಶ್ರೀಶೈಲಮಲ್ಲಿಕಾರ್ಜುನ ವಾಗಿಲಿಗೆ ವಲಸೆ ಬಂದಿರುವುದಾಗಿಯೂ, ತಾವು ದೇವಸ್ಥಾನ ನಿರ್ಮಿಸುವುದರ ಮೂಲಕ ಆತನಿಗೆ ಪುನರ್ವಸತಿ ಕಲ್ಪಿಸುತ್ತಿರುವುದಾಗಿಯೂ ಎಂದು ಹೆಬ್ಬಟಂ ಗೌಡರು ಹೇಳಿದ್ದಕ್ಕೆ ಯಾರೊಬ್ಬರು ಪ್ರತಿಕ್ರಿಯಿಸಲಿಲ್ಲ, ಆದರೆ ಕೆಲವರು ಚಪ್ಪಾಳೆ ತಟ್ಟಿ ಸ್ವಾಗತಿಸಿದರು. ನಕ್ಸಲೈಟರನ್ನು ಆಡಳಿತಾರೂಢ ರಾಜಕೀಯ ಪಕ್ಷಗಳು ಮುಗಿಸುವುದಕ್ಕಿಂತ ತಾವೇ ಮುಗಿಸುವುದು ಒಳಿತೆಂದು ಭೈರೆಡ್ಡಿ ಸಲಹೆ ನೀಡಿದೊಡನೆ ಗೊನೆಗೊಂಡ್ಲದ ಪರಪ್ಪನಾಯ್ಡು ತಕ್ಷಣ ತನ್ನ ಎಡಗೈಯನ್ನು ಆತನ ಬಾಯಿಯ ಮೇಲಿರಿಸಿ ಅಪರಿಚಿತರಾದ ನಮ್ಮ ಕಡೆ ನೋಡಿದ. ಚೆಲ್ಲಾ ಚಿವುಟಿದ್ದಕ್ಕೆ ಸೂರ್ಯಪ್ರತಾಪರೆಡ್ಡಿ ಸ್ವಲ್ಪ ಹತ್ತಿರಕ್ಕೆ ಬಂದು ನನ್ನನ್ನು ಮಾತ್ರ ಗುರುತಿಸಿ ಕಣ್ಣ ಹುಬ್ಬುಗಳನ್ನು ಮೇಲೇರಿಸಿದ. ಉಳಿದಿಬ್ಬರು ಯಾರಿರಬಹುದೆಂದು ಕ್ರೂರವಾಗಿ ಊಹಿಸುತ್ತಿರುವಾಗಲೇ ಹೆಬ್ಬಟಂ ಗೌಡರು ಮಧ್ಯೆ ಪ್ರವೇಶಿಸಿದರು. ನಮ್ಮನ್ನು ಇಂಥಿಂಥವರೆಂದು ಪರಿಚಯಿಸಿದೊಡನೆ! ಅದಕ್ಕೆ ಪೂರಕವಾಗಿ ರಾಘಪ್ಪಸ್ವಾಮಿ ಶ್ರೀನಾಥುಡು ಸೃಜಿಂಪಜೇಸಿನ ಶೃಂಗಾರ ನೈಷಧಂ ಕಾವ್ಯ ಭಾಷೆಯಲ್ಲಿ ನಮ್ಮ ಪೂರ್ವಾಪರ ಕುರಿತು ಉಪನ್ಯಾಸ ನೀಡಿದೊಡನೆ!

ಅದೆಲ್ಲ ಅಗತ್ಯವಿರಲಿಲ್ಲ, ನಾವು ಅಗಣಿತ ಇರುಸು ಮುರುಸು ಅನುಭವಿಸಿದೆವು, ಫ್ಯಾಕ್ಷನಿಷ್ಟ್ ಲೀಡರುಗಳ ಪೈಕಿ ಬುಡ್ಡಾ ರಾಜಾರೆಡ್ಡಿ, ಗಂಗುಲ ಪ್ರತಾಪರೆಡ್ಡಿಯರಂಥ ಜಮೀನ್ದಾರರ ವಂಶವಾಹಿನಿಯಲ್ಲಿ ಸಾಹಿತ್ಯಿಕವೂ ಸಾಂಸ್ಕೃತಿಕವೂ ಆದ ಸುಂದರ ದ್ವೀಪಗಳಿದ್ದವು. ಭೈರೆಡ್ಡಿ, ಚೆಲ್ಲಾ ರಾಮಕ್ರಿಷ್ಣಾರೆಡ್ಡಿಯರಂಥ ಹಗಲು ಕೊಗ್ಗಲೆ ಮಾನ್ಯರು ತಾವು ಕೂತಲ್ಲಿಯೇ ದುರುಗುಟ್ಟಿದರೆ ಅವರಿಬ್ಬರು ಇದ್ದಲ್ಲಿಗೆ ಬಂದು ಕೈಕುಲುಕಿದರು.

ಕಳೆದ ಎರಡು ವರ್ಷಗಳ ಹಿಂದೆಯಷ್ಟೆ ಪೋಲಿಸ್ ವೇಷದಲ್ಲಿದ್ದ ನಕ್ಸಲೈಟರು ಕವಿ ಶ್ರೀಶ್ರೀಯವರ ಕಟ್ಟಾ ಅಭಿಮಾನಿಯಾದ ತನ್ನ ತಂದೆ ಬುಡ್ಡಾ ಪರುಷೋತ್ತಮರೆಡ್ಡಿಯವರನ್ನು ಕೊಲೆ ಮಾಡದೇ ಇದ್ದಲ್ಲಿ ಮುವ್ವತ್ತರ ವಯೋಮಾನದ ರಾಜಾರೆಡ್ಡಿ ನಂದ್ಯಾಲದ ವಕುಲಾಭರಣ ದಂಪತಿಗಳ ಏಕೈಕ ಸುಪುತ್ರಿಯೂ, ತ್ಯಾಗರಾಜರ ಕೀರ್ತನೆಗಳನ್ನು ಸುಶ್ರಾವ್ಯವಾಗಿ ಹಾಡುವಂಥ ಗಾಯಕಿಯೂ ಆದ ಯಶೋಧಾದೇವಿಯನ್ನು ವಿವಾಹವಾಗುತ್ತಿರಲಿಲ್ಲವೇನೋ! ತಾನೂ ಸಹ ಸಾಹಿತ್ಯ ಪ್ರೇಮಿ. ಉಯ್ಯಾಲವಾಡ, ವೆಲುಗೋಡು ಕಣೆಯ ಹವ್ಯಾಸಿ ಬರಹಗಾರರ ಕೃತಿಗಳ ಪ್ರಕಟಣೆಗೆ ಹಣಕಾಸಿನ ನೆರವು ನೀಡಿರುವುದುಂಟು. ರಾಯಲಸೀಮೆಯಾದ್ಯಂತ ಹೆಸರು ಮಾಡಿರುವ ಶತಾವಧಾನಿಗಳು ಸಹಸ್ರಾವಧಾನಿಗಳೇನಾದರೂ ಮನೆಮಠ ಮಾಡಿಕೊಂಡು ಸುಖವಾಗಿದ್ದರೆ ಅದಕ್ಕೆ ನಿಸ್ಸಂದೇಹವಾಗಿ ರಾಜಾರೆಡ್ಡಿಯೇ ಕಾರಣ. ಜಾನೆದ್ದಲ ನರಸಿಂಹಶಾಸ್ತ್ರಿ, ಮಾಗಿಂಟಿ ಚಾರುಲತಾರಂಥ ಪ್ರಸಿದ್ಧ ಕವಿಗಳು ತಮ್ಮ ಕೃತಿಗಳ ಮೂರನೆ ಪುಟದಲ್ಲಿ ಆತನ ಭಾವಚಿತ್ರ ಹಾಕಿ ಅರ್ಪಣೆ ಮಾಡುವುದರ ಮೂಲಕ ಋಣಮುಕ್ತರಾಗಲು ಪ್ರಯತ್ನಿಸಿರುವುದೂ ಉಂಟು.

ಇನ್ನು ಗಂಗುಲ ವಂಶೋದ್ಭವ ಪ್ರತಾಪರೆಡ್ಡಿಯವರ ಬಗ್ಗೆ ಹೇಳುವುದೇ ಬೇಡ. ಅವರ ಕಪ್ಪು ಮಚ್ಚೆಗಳಿರುವ ನಾಲಗೆ ಮೇಲೆ ಅಪೂರ್ವ ಚಿಂತಾಮಣಿ ನಾಟಕ ನಲಿದಾಡುತ್ತ ನೆಲಸಿರುವುದು, ಆ ನಾಟಕದ ಪ್ರಸಿದ್ಧ ಕಲಾವಿದೆಯಾದ ವಾಡ್ರೇವು ಜಾನಕಿಯವರನ್ನು ಪೆದ್ದೋಬಳ ನರಸಿಂಹಸ್ವಾಮಿಯ ಸನ್ನಿಧಿಯಲ್ಲಿ ಗಾಂಧರ್ವ ವಿವಾಹವಾಗಿರುವರು, ಅದೂ ಪರನಾರಿ ಸಹೋದರ ಎಂದೇ ಹೆಸರಾಗಿದ್ದ ತನ್ನ ತಂದೆ ದಶರಥರೆಡ್ಡಿಯವರ ಸಲಹೆ ಮೇರೆಗೆ.

ಇಂಥ ಹಿನ್ನಲೆ ಇದ್ದವರು ಅನೇಕ ದಿವಸಗಳ ಬಳಿಕ ಅಪರೂಪಕ್ಕೆ ವಿದೇಶಿ ಮದ್ಯವನ್ನು ಯಥೇಚ್ಚವಾಗಿ ಸೇವಿಸಿದ್ದರಷ್ಟೆ. ರಾಜಾರೆಡ್ಡಿ ಅಲ್ಲಸಾನಿ ಪೆದ್ದನಾಮಾತ್ಯನ ಮನುಚರಿತ್ರದ ಪ್ರವರ ವರೂಥಿನಿ ಆಖ್ಯಾನಮು ಭಾಗದ ಕೆಲವು ಕಂದ ಪದ್ಯಗಳನ್ನು ಧನಿ ಎತ್ತರಿಸಿ ಹಾಡಿ ರಂಜಿಸಿದರೆ ಗಂಗುಲವಾರು ಅಪೂರ್ವ ಚಿಂತಾಮಣಿ ನಾಟಕದ ಸೀಸ ಪದ್ಯಗಳನ್ನು ಸುಶ್ರಾವ್ಯವಾಗಿ ಹಾಡಿ ಸಹವಂದಿಗರನ್ನು ನಿಬ್ಬೆರಗಾಗಿಸಿದರು.

ಪಕ್ಕದ ಕೋಣೆಯಲ್ಲಿ ಅರನೆ ಪೆಗ್ ಮುಗಿಸಿ ಎಡಗೈ ಹೆಬ್ಬೆರಳ ಕೆಳಗಿನ ಮಾಂಸಲ ಭಾಗದಿಂದ ತುಟಿಗಳ ನಡುವೆ ಜಿನುಗಲಾರಂಭಿಸಿದ್ದ ತೇವವನ್ನು ಒರೆಸಿಕೊಳ್ಳುತ್ತ ತೂರಾಡದೆ ಅದೇ ತಾನೆ ಆಗಮಿಸಿದ ಕೋನೇರು ರಾಘವರೆಡ್ಡಿ ಅವರಿಬ್ಬರು ನೀಡತೊಡಗಿದ್ದ ಪ್ರದರ್ಶನವನ್ನು ನೋಡಿದೊಡನೆ ತನ್ನ ಕೊನೇರು ಪ್ರೊಡಕ್ಷನ್ಸ್ ಲಾಂಛನದಲ್ಲಿ ಅಪೂರ್ಣಗೊಂಡಿರುವ ವಜ್ರಾಯುಧಂ ಸಿನೆಮಾವನ್ನೂ, ಅರ್ಧಾಂತರದಲ್ಲಿ ಪತ್ರಕರ್ತರೆದುರು ತನ್ನ ಬಗ್ಗೆ ಅಶ್ಲೀಲ ಹೇಳಿಕೆಗಳನ್ನು ನೀಡಿ ಮುಂಬಯಿಗೆ ಹೊರಟು ಹೋದ ತಾರೆ ಪ್ರತ್ಯೂಷಳನ್ನೂ ನೆನಪಿಸಿಕೊಂಡು ಒಂದು ಕ್ಷಣ ಭಾವಪರವಶನಾದನು. ಅದರಲ್ಲಿ ತಾನು ಜಮೀನ್ದಾರೀ ವ್ಯವಸ್ಥೆ ವಿರುದ್ಧ ಸಶಸ್ತ್ರವಾಗಿ ಹೋರಾಡುವ ನಕ್ಸಲೈಟ್ ನಾಯಕ ಚೆಗೆವಾರ, ಉರುಫ್ ಕ್ರಾಂತಿಕುಮಾರ್, ಉರುಫ್ ವೆನ್ನೆಲ, ಉರುಫ್ ಶಶಿಧರರೆಡ್ಡಿ ಪಾತ್ರವಹಿಸಿದ್ದನಷ್ಟೆ, ಅದರಲ್ಲಿ ಚೆರಬಂಡರಾಜುರವರ ಕವಿತೆಯನ್ನು ಗದ್ದರ್ ಕೈಲಿ ಹಾಡಿಸಿದ್ದನಷ್ಟೆ! ಅದನ್ನು ಪ್ರಯತ್ನಪೂರ್ವಕವಾಗಿ ನೆನಪು ಮಾಡಿಕೊಂಡವನೆ, ಕೈಯಳತೆಯಲ್ಲಿದ್ದ ಪಂಪಯ್ಯನ ಹೆಗಲ ಮೇಲಿದ್ದ ಕೆಂಪು ವಸ್ತ್ರವನ್ನು ಕಸಿದುಕೊಂಡು ತನ್ನ ಎರಡು ದಿವಸಗಳ ಹಿಂದೆಯಷ್ಟೆ ಹೈದರಾಬಾದಿನ ಬಂಜಾರ ಹಿಲ್ಸ್‌ನ ಅಮೇರಿಕನ್ ಮೆನ್ಸ್ ಬ್ಯೂಟಿ ಪ್ಯಾರಲರ್‌ನಲ್ಲಿ ಕ್ಷೌರ ಮಾಡಿಸಿಕೊಂಡಿದ್ದ ತಲೆಗೆ ಸುತ್ತಿಕೊಂಡವನೆ..

ಕೊಂಡಲು ಪಗಲೇಸಿನಾಮು। ಬಂಡಲನು ಪಿಂಡಿನಾಮು। ಮಾ ನೆತ್ತರಲು ಕಂಕರುಗಾ ಪ್ರಾಜೆಕ್ಟಲನು ಗಟ್ಟಿನಾಮು। ಕೂಡೆವಡದಿರೋ। ಗಂಜೆವಡದಿರೋ ಎಂದು ಕುಣಿಯುತ್ತ ಹಾಡಲಾರಂಭಿಸಿದನು. ಆ ಕ್ರಾಂತಿಕಾರಿ ಹಾಡು ಅಲ್ಲಿದ್ದ ಬಹುತೇಕ ರೆಡ್ಡಿ ಕುಲಬಾಂಧವರಿಗೆ ಹಿಡಿಸದಿದ್ದರೂ ನಮ್ಮ ಹೆಬ್ಬಟಂ ಗೌಡರಿಗೆ ಮಾತ್ರ ಹಿಡಿಸಿತು. ವಜ್ರಾಯುಧಂ ಚಿತ್ರ ಅರ್ಧಕ್ಕೆ ನಿಲ್ಲುವಂತೆ ಮಾಡಿದ, ಅದರ ನಾಯಕಿ ಪ್ರತ್ಯೂಷ ಕೈಕೊಟ್ಟು ಓಡುವಂತೆ ಮಾಡಿದ ಶ್ರೇಯಸ್ಸು ನಿಸ್ಸಂದೇಹವಾಗಿ ಅಲ್ಲಿಯೇ ಇದ್ದ ಚೆಲ್ಲಾ ರಾಮಕ್ರಿಷ್ಣಾರೆಡ್ಡಿಯವರಿಗೂ, ಕೂತಲ್ಲಿಯೇ ಮೈ ಒನೆಯುತ್ತಿದ್ದ ವೆಂಕಪ್ಪನಾಯ್ಡು ಅವರಿಗೂ ಸಲ್ಲಬೇಕು. ಅದೂ ತೆರೆ ಮರೆಯಲ್ಲಿ! ಅದೂ ಹಾವು ಸಾಯಬಾರದು ಕೋಲು ಮುರಿಯಬಾರದು ಎಂಬ ತತ್ವಾದರ್ಶದ ಹಿನ್ನಲೆಯಲ್ಲಿ!

ರೆಡ್ಡಿ ಸಂಚಿನ ರೂವಾರಿ ನಾಯ್ಡು ಕಡೆ ವ್ಹಾರೆ ನೋಟ ಬೀರಿದ. ತಮ್ಮಿಬ್ಬರಿಗೆ ಮಾತ್ರ ಕೇಳಿಸುವಂತೆ ಮಾತಾಡಿಕೊಂಡರು. ಆ ಕಡೆಯಿಂದ ರೆಡ್ಡಿಯೂ, ಈ ಕಡೆಯಿಂದ ನಾಯ್ಡೂ ಎದ್ದು ಹೊರಟು ಉನ್ಮತ್ತತೆಯಿಂದ ಕಂಪಿಸುತ್ತಿದ್ದ, ನೆನಪುಗಳ ದಾವಾನಲಕ್ಕೆ ಸಿಲುಕಿದ್ದ ರಾಘವರೆಡ್ಡಿಯನ್ನು ಸಮೀಪಿಸಿ ಎದುರು ನಿಂತರು. ಅಲ್ಲುಡಾ ಎಂದು ರೆಡ್ಡಿಯೂ, ಚಿನ್ನಬ್ಬಾಯಿ ಎಂದು ನಾಯ್ಡೂ ಆತನನ್ನು ಆಲಂಗಿಸಿಕೊಂಡರು, ಎಂತ ಬಾಗುನ್ನದಿ ನೀ ಪಾಟ ಎಂದು ಒಬ್ಬರೂ, ವೆರಿ ಮೀನಿಂಗ್‌ಫುಲ್ ಸಾಂಗೆಂದು ಇನ್ನೊಬ್ಬರು! ಕುತೂಹಲ ಮೇರೆ ಮೀರಿದೊಡನೆ ರಾಘವರೆಡ್ಡಿ ತನ್ನ ಶಕ್ತಿಶಾಲಿ ಕೈಗಳಿಂದ ಅವರ ಬೋಗುಣಿಗಳಂಥ ಕೆನ್ನೆಗಳಿಗೆ ಛಟೀರಂತ ಏಟು ಕೊಟ್ಟನು, ಅಲ್ಲದೆ ಲಂಜಾಕೊಡಕುಲಾರಾ ಎಂಬ ಅಶ್ಲೀಲಾತಿ ಅಶ್ಲೀಲ ಪದವನ್ನು ತುಟಿ ಜಾರಿ ಪ್ರಯೋಗಿಸಿದನು, ತನ್ನ ಕೋಪದ ಹಿನ್ನಲೆಯನ್ನು ಎರಡೇ ಎರಡು ಮಾತುಗಳಲ್ಲಿ

ವಿವರಿಸಿದನು, ಇವರಿಬ್ಬರು ಮರಣ ದಂಡನೆಗೆ ಅರ್ಹರು ಎಂದೂ ತೀರ್ಮ ಪ್ರಕಟಿಸಿದನು. ಇಷ್ಟು ಸಾಕಲ್ಲವೆ ಪರಿಸ್ಥಿತಿ ವಿಕೋಪಕ್ಕೆ ತಿರುಗಲು! ನೋಡು ನೋಡುವಷ್ಟರಲ್ಲಿ ಕೆಳಗಿದ್ದವರು ಮೇಲೆ ಬಂದು ಎರಡು ಪಂಗಡಗಳಾಗಿ ವಿಂಗಡಣೆಗೊಂಡರಲ್ಲದೆ ಪರಸ್ಪರ ತಮ್ಮ ಕೈಗಳಲ್ಲಿದ್ದ ದೇಶೀಯ ಅಸ್ತ್ರಗಳನ್ನು ಝಳಪಿಸಲಾರಂಭಿಸಿದರು.

ಹೈದರಾಬಾದಿನ ಬಂಜಾರ ಹಿಲ್ಸ್ ಪ್ರಾಂತದಲ್ಲಿರುವ ಅಮೇರಿಕನ್ ಮೆನ್ಸ್ ಬ್ಯೂಟಿ ಪ್ಯಾರಲರ್ ಪ್ರಸ್ತಾಪವಾದೊಡನೆ ಸೂರ್ಯಪ್ರತಾಪರೆಡ್ಡಿ ತನ್ನ ಕೊಲೆ ಖಿಟ್ಲೆಯನ್ನೂ, ಪೋಲಿಸರೊಂದಿಗೆ ಸಹಕರಿಸಿದ ಅಜ್ಞಾತ ರೆಡ್ಡಿಯೋರ್ವನನ್ನೂ ನೆನಪು ಮಾಡಿಕೊಳ್ಳದೆ ಇರಲಿಲ್ಲ, ಆ ಅಜ್ಞಾತ ವ್ಯಕ್ತಿ ತನ್ನ ಸಮಕ್ಷಮದಲ್ಲಿರುವ ರಾಘವರೆಡ್ಡಿ ಆಗಿರಬಾರದೇಕೆ ಎಂದು ಸಂದೇಹ ತಾಳದೆ ಇರಲಿಲ್ಲ, ಒಂದು ಸಲ ದವಡೆಗಳನ್ನು ಮಸೆದು ತನ್ನ ತಂದೆಯವರ ಕಿವಿ ಸನಿಹಕ್ಕೆ ಬಂದು ರಾಘವರೆಡ್ಡಿಯನ್ನು ಚೆಲ್ಲಾ, ನಾಯ್ಡು ಇಬ್ಬರೂ ಸೇರಿ ಮುಗಿಸುವುದಾದರೆ ನಾವು ಅವರನ್ನು ಬೆಂಬಲಿಸುವುದು ಒಳ್ಳೆಯದು ಎಂದು ಹೇಳಿದೊಡನೆ ಪೆದ್ದರೆಡ್ಡಿಗಾರು ಚಿನ್ನರೆಡ್ಡಿಯ ಕೆನ್ನೆಗೆ ಎರಡು ಭಾರಿಸಿ ಖಿಬರ್ದಾರ್ ಎಂದು ಎಚ್ಚರಿಸಿದ್ದನ್ನು ಆ ಗಲಾಟೆಯಲ್ಲಿ ಯಾರೊಬ್ಬರೂ ಗುರುತಿಸಲಿಲ್ಲ. ಹಿಂಸೆ ಸಂಕ್ರಾಮಿಕಗೊಂಡರೆ ಅದನ್ನು ನಿಯಂತ್ರಿಸುವುದು ಕಡುಕಷ್ಟವೆಂದು ಭಾವಿಸಿದ ಹೆಬ್ಬಟಂ ಗೌಡರು, ಇನ್ನೆರಡು ಕ್ಷಣಗಳಲ್ಲಿ ಹೆಣಗಳುರುಳುವವೆಂದು ಊಹಿಸಿದ ಆ ಹಿರಿಯರು, ತಮ್ಮ ಕಣ್ಣುಗಳಲ್ಲಿ ಆವರಿಸಿದ ಕೆಂಪನ್ನು ಆ ಕ್ಷಣವೇ ನಿಗ್ರಹಿಸಿದ ಆ ವಯೋವೃದ್ಧರು, ತಮ್ಮ ಸುಪುತ್ರನ ಕೈಯನ್ನು ಹಿಡಿದು ಕರೆದೊಯ್ದು ತಕ್ಕ ಎಚ್ಚರಿಕೆ ಮಾತುಗಳಿಂದ ಗೃಹಬಂಧನದಲ್ಲಿರಿಸಿ ಶಕ್ತಿಯನ್ನು ಸಂಚಯಿಸಿಕೊಂಡು ಬಂದ ಆ ನೀಳ ಕಾಯದ ವ್ಯಕ್ತಿಗಳು ರಾಘವರೆಡ್ಡಿಯನ್ನು ಆ ಕಡೆಗೂ, ಚೆಲ್ಲಾ ರಾಮಕ್ರಿಷ್ಣಾರೆಡ್ಡಿ, ವೆಂಕಪ್ಪನಾಯ್ಡು ಅವರಿಬ್ಬರನ್ನು ಈ ಕಡೆಗೂ ತಳ್ಳಿದರು. ತಮ್ಮ ಕುಟುಂಬ ವೈದ್ಯ ಡಾ. ನರಹರಿರಾವ್ ಅವರ ಹಾಗೂ ತಮಗೆ ಪರಿಮಿಡ್ ಧ್ಯಾನ ಕಲಿಸಿದ ಗುರುಗಳಾದ ಶ್ರೀ ಪೀಠಾಪುರಂ ಪರಮೇಶ್ವರ ಶಾಸ್ತ್ರಿಗಳ ಸಲಹೆಗಳನ್ನು ಅಲಕ್ಷಿಸಿ ಆವೇಶಭರಿತರಾಗಿ ನಖಶಿಖಾಂತ ಕಂಪಿಸಲಾರಂಭಿಸಿದರು. ಅಂತರಾಳದಿಂದ ಗಂಟಲವರೆಗೆ ಪ್ರವಹಿಸಿದ ಅಶ್ಲೀಲ ಪದಗಳನ್ನು ಅಲ್ಲಿಯೇ ತಡೆಹಿಡಿದರು. ಕಣ್ಣು ಮುಚ್ಚಿ ಮೃತ್ಯುಂಜಯ ಮಂತ್ರವನ್ನು ಜ್ಞಾಪಿಸಿಕೊಂಡರು, ತಕ್ಷಣ ಅವು ನೆನಪಿಗೆ ಬಾರಲಿಲ್ಲ, ಬಳಿಕ ಅಣ್ಣಮಾಚಾರ್ಯ ವಿರಚಿತ ಲಿಂಗಾಷ್ಟಕ ಶ್ಲೋಕಗಳನ್ನು ನೆನಪಿಸಿಕೊಳ್ಳಲು ಪ್ರಯತ್ನಿಸಿ ಸಫಲರಾದರು, ಅವುಗಳ ಪೈಕಿ ಒಂದೆರಡು ಶ್ಲೋಕಗಳನ್ನು ಮನಸ್ಸಿನಲ್ಲಿಯೇ ಒಂದೆರಡು ಸಲ ಪಠಿಸಿದಾದ ಬಳಿಕ ಅವರ ನಡುವೆ ನಿಂತು ಕರ ಜೋಡಿಸಿ ಏನೆಂದು ಹೇಳಿದರೆಂದರೆ!

++++

ಸೊಳ್ಳೆಗಳ ಕಾಟಕ್ಕಿಂತ ಮುಖ್ಯವಾಗಿ, ವಾಗಿಲಿಯಲ್ಲಿ ಇರುಳನ್ನು ಹಗಲನ್ನಾಗಿ ಪರಿವರ್ತಿಸಿದ್ದ ಕರೆಂಟಿಗಿಂತ ಮುಖ್ಯವಾಗಿ, ಉನ್ಮತ್ತರಾಗಿ ಜನರು ಬೀದಿ ಬೀದಿಗಳಲ್ಲಿ ಕೇಕೆ ಹಾಕುತ್ತ ತಿರುಗಾಡುತ್ತಿದ್ದುದಕ್ಕಿಂತ ಮುಖ್ಯವಾಗಿ, ತಮ್ಮ ಕನಸುಗಳಲ್ಲಿ ಕಾಣಿಸಿಕೊಂಡು ತೊಂದರೆ ಕೊಡುತ್ತಿದ್ದ ಕಾರಣಕ್ಕೆ ಶುನಕಗಳು ನಿದ್ದೆಗೆಟ್ಟು ಅರಚುತ್ತಿದ್ದುದಕ್ಕಿಂತ ಮುಖ್ಯವಾಗಿ, ತೋಟದ ಮನೆಯಲ್ಲಿನ ತರಾವರಿ ಘಟನೆಗಳು ಅವರ ಕಣ್ಣ ವಪೆಗಳಲ್ಲಿ ಜೀವಂತವಿದ್ದು ತೊಂದರೆ ಕೊಡುತ್ತಿದ್ದುದರಿಂದಾಗಿ ರಾತ್ರಿ ಇಡೀ ಮಿತ್ತವ್ವಯರು ಸರಿಯಾಗಿ ನಿದ್ದೆ ಮಾಡಲಿಲ್ಲ.

ಆಗಾಗ್ಗೆ ಕನವರಿಸುತ್ತಿದ್ದರು, ಹೊರಳಾಡುತ್ತಿದ್ದರು, ನಿದ್ದೆಯಲ್ಲಿ ಎದ್ದು ಅಷ್ಟು ದೂರ ನಡೆದು ಪುನಃ ಹಾಸಿಗೆಗೆ ವಾಪಸ್ಸಾಗುತ್ತಿದ್ದರು.

ಸರಿಸೃಪಗಳ ಭಯದಿಂದಾಗಿ ನಾವು ನಮ್ಮ ಮನೆಯ ಮಾಳಿಗೆಯನ್ನು ಮಲಗಲು ಆಯ್ಕೆ ಮಾಡಿಕೊಂಡಿರಲಿಲ್ಲ. ನಾವು ಮಲಗಿದ್ದು ಮೂಲಿಮನಿ ಗೌಡರ ಮನೆಯ ವಿಶಾಲವಾದ ಮಾಳಿಗೆ ಮೇಲೆ. ಅತಿಥಿಗಳೆಲ್ಲಿ ಮೇಲಿಂದ ಕೆಳಗೆ ಬಿದ್ದು ಅಂಗವಿಕಲರಾಗುವರೋ ಎಂಬ ಆತಂಕದಿಂದಾಗಿ ನಾನೂ ಎಚ್ಚರ ಇದ್ದು ಅವರ ಚಲನವಲನಗಳ ಮೇಲೆ ನಿಗಾ ಇಟ್ಟಿದ್ದೆ. ಕನವರಿಸುತ್ತಿದ್ದ ಅವರ ಬೆನ್ನು ಚಪ್ಪರಿಸುತ್ತಿದ್ದೆ, ದಿಢೀರನೆ ಎದ್ದು ಕುಳಿತುಕೊಳ್ಳುತ್ತಿದ್ದ ಅವರನ್ನು ಸಂತೈಸಿ ಮಲಗಿಸುತ್ತಿದ್ದೆ, ನನ್ನನ್ನುದ್ದೇಶಿಸಿ ಮಾತಾಡುತ್ತಿರುವರೆಂದು ಭ್ರಮಿಸಿ ಅದಕ್ಕೆ ಪ್ರತಿಕ್ರಿಯಿಸಲು ಯತ್ನಿಸುತ್ತಿದ್ದೆ, ಇದೆಲ್ಲಕ್ಕಿಂತ ಮುಖ್ಯವಾಗಿ ಕಳೆದ ಸಂಜೆ ತೋಟದ ಮನೆಯಲ್ಲಿ ನಡೆದ ಘಟನೆಗಳು ನನ್ನ ನಿದ್ದೆಗೆ ಭಂಗ ತಂದಿದ್ದವು, ನಾವು ಅಲ್ಲಿಂದ ಹೊರಡುವ ಮೊದಲು ಹೆಬ್ಬಟಂ ಗೌಡರು ಆ ಮಹನೀಯರನ್ನು ಕುರಿತು ತೆಲುಗಿನಲ್ಲಿ..

"ಕೈಮುಗಿದು ಕೇಳಿಕೊಳ್ಳುವೆನು, ನಿಮ್ಮನ್ನಿಲ್ಲಿಗೆ ಬರಮಾಡಿಕೊಂಡಿರುವುದು ಪರಸ್ಪರ ಜಗಳ ಮಾಡುವುದಕ್ಕಾಗಲೀ, ಹೆಣಗಳನ್ನು ಉರುಳಿಸುವುದಕ್ಕಾಗಲೀ ಅಲ್ಲ. ಅಭಿವೃದ್ಧಿ ಕಾಯಕ್ರಮಗಳನ್ನು ಉದ್ಘಾಟಿಸುವ ಸಲುವಾಗಿ, ಒಳ್ಳೆಯ ಮಾತುಗಳನ್ನಾಡಿ ಮತ್ಸರ ಮರೆಯುವ ಸಲುವಾಗಿ, ಒಬ್ಬರಿಗೊಬ್ಬರು ಅಣ್ಣ ತಮ್ಮಂದಿರಂತೆ ಬಾಳುವ ಸಲುವಾಗಿ. ಆದರೆ ನೀವು ಕುಡಿದ ಅಮಲಿನಲ್ಲಿ ವಿವೇಕ ಕಳೆದುಕೊಳ್ಳವುದನ್ನು ನೋಡಿದರೆ ನನಗೇ ಭಯವಾಗುತ್ತದೆ. ಅದೂ ಅಲ್ಲದೆ ನಮ್ಮ ವಾಗಿಲಿಯಲ್ಲಿ ಕಳೆದೇಳು ವರ್ಷಗಳಿಂದ ಕೊಲೆಗಳು ನಡೆದಿಲ್ಲ, ಬೀದಿಗಳು ರಕ್ತದ ಕಲೆಗಳನ್ನು ಮುಡಿದಿಲ್ಲ. ಈ ಸುವ್ಯವಸ್ಥೆಯನ್ನು ಗಟ್ಟಿಗೊಳಿಸುವ ಸಲುವಾಗಿಯೇ ಹೇಮರೆಡ್ಡಿ ಮಲ್ಲಮ್ಮ ನಾಟಕದ ಶತದಿನೋತ್ಸವ ಸಮಾರಂಭವನ್ನು ಹಮ್ಮಿಕೊಂಡಿರುವುದು. ನಲ್ಲಮಲ ಅರಣ್ಯವನ್ನು ಸಂತೈಸುವ ಸಲುವಾಗಿಯೇ ವಾಗಿಲಿಯಲ್ಲಿ ಶ್ರೀಶೈಲಮಲ್ಲಿಕಾರ್ಜುನನ ದೇವಾಲಯವನ್ನು ನಿರ್ಮಿಸಲು ನಿರ್ಧರಿಸಿದ್ದು. ಅದಕ್ಕೆ ನಿಮ್ಮ ಕೈಯಲ್ಲಿ ಶಂಕು ಸ್ಥಾಪನೆ ಮಾಡಿಸಿದ್ದು, ಹೊಲೆಯರ ಶೂದ್ರರ ಮನೆ ಝೋಪಡಿಗಳಲ್ಲಿನ ಕತ್ತಲೆಯನ್ನು ನಿವಾರಿಸುವ ಸಲುವಾಗಿ ಅಹರ್ನಿಶಿ ಶ್ರಮಿಸಿ ಊರಿಗೆ ಕರೆಂಟು ತಂದಿರುವುದು. ಊರಿಗೆ ರಸ್ತೆ ಸಂಪರ್ಕ ಕಲ್ಪಿಸಿರುವುದು. ನಿಮ್ಮೆಲ್ಲರ ಸಹಕಾರದಿಂದ ಇನ್ನೇನೇನೋ ಮಾಡುವ ಆಸೆ ಇತ್ತು. ಆದರೆ ನಿಮ್ಮೆಲ್ಲರ ಕಣ್ಣಗಳಲ್ಲಿರುವ ಕೆಂಪನ್ನು ನೋಡಿದ ನನಗೆ ನಿರಾಸೆಯಾಯಿತು. ದಯವಿಟ್ಟು ಹಳೆಯ ವೈಷಮ್ಯಗಳನ್ನು ಮರೆತು ಅಭಿವೃದ್ಧಿ ಕಾರ್ಯಗಳಿಗೆ ಸಹಕರಿಸಿರಿ. ಅಥವಾ ಯಾರ ಮೇಲಾದರೂ ಕೋಪವಿದ್ದಲ್ಲಿ ಅದನ್ನು ನನ್ನ ಮೇಲೆ ತೀರಿಸಿಕೊಳ್ಳಿ, ಅದೂ ಆಗದೇ ಇದ್ದ ಪಕ್ಷದಲ್ಲಿ ನಗುನಗುತ್ತ ವಾಗಿಲಿಯಿಂದ ಹೊರಡಿರಿ" ಎಂದು ಹೇಳಿದ ಮಾತುಗಳು ನನ್ನ ತಲೆಯಲ್ಲಿ ಪ್ರತಿಧ್ವನಿಸಲಾರಂಭಿಸಿದ್ದವು.

ಅವು ಸದಸದ್ವಿವೇಕದ ಮಾತುಗಳೆಂದೂ, ಶ್ರೀಯುತರು ಅಮೂಲಾಗ್ರವಾಗಿ ಬದಲಾಗಿರುವರೆಂದೂ ಭಾವಿಸಿದೆ. ಅಂಥ ಮಹನೀಯರ ಭಾಷಣ ಸಿದ್ದಪಡಿಸಿದ್ದು ನನ್ನ ಅದೃಷ್ಟವೆಂದೇ ಭಾವಿಸಿದೆ. ಗೌಡರ ಕೊನೆಯ ಮಾತನ್ನು ಆಲಿಸುವ ಸಲುವಾಗಿಯಾದರೂ ಅಲ್ಲಿರಬೇಕಿತ್ತು. ಅವರ ಮಾತುಗಳು ಅಲ್ಲಿನ ಫ್ಯಾಕ್ಷನಿಷ್ಟುಗಳ ಮೇಲೆ ಯಾವ ಪರಿಣಾಮ ಬೀರಿರಬಹುದು! ಅದಕ್ಕೆ ಅವರ ಪ್ರತಿಕ್ರಿಯೆ ಏನಿದ್ದಿರಬಹುದು! ಅವರಲ್ಲಿ ಎಷ್ಟು ಮಂದಿ ವಾಗಿಲಿಯಲ್ಲಿ ಉಳಿದಿರಬಹುದು! ಅಥವಾ ಹೊರಟಿರಬಹುದು! ಅಕಸ್ಮಾತ್ತೇನಾದರೂ ಕುಡಿದ

ಅಮಲಿನಲ್ಲಿ ಅದೂ ತುಟಿ ಜಾರಿ ನುಡಿದಿರಬಹುದಾದ, ಅಸಭ್ಯತನದಿಂದ ವರ್ತಿಸಿರಬಹುದಾದ ತಮ್ಮನ್ನು ಕ್ಷಮಿಸಿರೆಂದು ಹೇಳುವ ಜಾಯಮಾನ ಅವರದ್ದು ಖಂಡಿತ ಅಲ್ಲವೇ ಅಲ್ಲ. ಅರೆ ವಜ್ರಾಯುಧಂ! ಆ ಹೆಸರನ್ನು ದಿನಪತ್ರಿಕೆಗಳಲ್ಲಿ ಓದಿದ್ದೆ, ಅವರಿವರ ಬಾಯಿಯಿಂದ ಕೇಳಿದ್ದೆ: ಆ ಶೋಷಕರ ವಿರುದ್ಧದ ಹೋರಾಟದ ಚಿತ್ರವನ್ನು ಯಾರೋ ಉಗ್ರ ಎಡಪಂಥೀಯ ಹೋರಾಟಗಾರ, ನನ್ನ ಕಾದಂಬರಿಯ ದಯಾನಂದ ಪನ್ನಂಗಧರರಂಥ ಹೋರಾಟಗಾರರು ನಿರ್ಮಿಸುತ್ತಿರಬಹುದೆಂದು ಊಹಿಸಿದ್ದೆ, ಆದರೆ ಅದರ ನಿರ್ಮಾಪಕ ನಾಯಕ ನಟ ರಾಘವರೆಡ್ಡಿಯಂಥ ಶೋಷಕ ಆಗಿರಬಹುದೆಂದು ಖಂಡಿತ ಭಾವಿಸಿರಲಿಲ್ಲ, ನಾವು ಅಲ್ಲಿಂದ ಮರಳಿದ ಬಳಿಕ ಅವನ ಕೊಲೆ ಏನಾದರೂ ಸಂಭವಿಸಿದ್ದರೆ! ಅವರ ಕಡೆಯವರಿಗೂ ಇವರ ಕಡೆಯವರಿಗೂ ಮಾರಾಮಾರಿ ಸಂಭವಿಸಿ ಹತ್ತಾರು ಹೆಣಗಳುರುಳಿದ್ದರೆ! ಆ ಹೆಣಗಳಲ್ಲಿ ನಮ್ಮ ಹೆಬ್ಬಟಂ ಗೌಡರ, ಅವರ ಮಗನ ಹೆಣಗಳಿದ್ದಲ್ಲಿ! ಯೋಚನೆಗಳ ಪರಿಣಾಮದಿಂದಾಗಿ ಅಡಿಯಿಂದ ಮುಡಿವರೆಗೆ ಬೆವರು ಕಾಣಿಸಿಕೊಂಡಿತು. ಅದೇ ತಾನೆ ನಿದ್ದೆ ಆವರಿಸುವ ಸನ್ನಾಹದಲ್ಲಿತ್ತು, ದಡಕ್ಕನೆ ಎಚ್ಚರಗೊಂಡು ನೋಡಿದೆ, ಇಕ್ಕೆಲದಲ್ಲಿ ಸೊಂಪಾಗಿ ನಿದ್ದೆ ಸವಿಯುತ್ತಿರುವ ಮಿತ್ರದ್ವಯರು. ನಿಶ್ಶಬ್ದದ ಕವಚ ಧರಿಸಿರುವ ವಾಗಿಲಿ, ಸಮಯ ತಿಳಿಯುವ ಸಲುವಾಗಿ ಆಗಸದ ಕಡೆ ದೃಷ್ಟಿ ಹರಿಸಿದೆ, ತ್ರಯೋದಶಿಯ ಚಂದ್ರ ಪಶ್ಚಿಮದ ಕಡೆ ವಾಲಿದ್ದ, ಪೂರ್ವ ದಿಗಂತದ ಅಂಚಿನಲ್ಲಿ ಶುಕ್ರ ಅದೇ ತಾನೆ ಕಾಣಿಸಿಕೊಂಡಿರುವನು, ಎಲ್ಲೋ ಕೆಮ್ಮುತ್ತಿರುವ ಆಕಳಿಸುತ್ತಿರುವ ಸದ್ದು, ಅದೇ ತಾನೆ ಕೂಗಿದ್ದು ಗೆಜ್ಜೆಹಳ್ಳಿಯ ಮುಂಗೋಳಿ ಇರಬಹುದು, ವಾಗಿಲಿಯಲ್ಲಿನ ಹುಂಜಗಳಿನ್ನೇನು! ಒಂದರ ಹಿಂದೊಂದರಂತೆ ಕೂಗಲಾರಂಭಿಸಿದವು, ಪುನಃ ಮೌನ ಆವರಿಸಿತು. ಮೆಲ್ಲಗೆ ಎದ್ದು ನಿಂತು ತೋಟದ ಮನೆ ಇರುವ ದಿಕ್ಕಿನ ಕಡೆ ದೃಷ್ಟಿ ಚೆಲ್ಲಿದೆ. ದೇವರು ದೊಡ್ಡವನು ಹಾಗೆಯೇ ದಯಾಮಯ, ಅದರ ಮೇಲಿರುವ ಅಲಂಕಾರಿಕ ದೀಪಗಳಿನ್ನೂ ಉರಿಯುತ್ತಿರುವವು. ಅಲ್ಲಿ ಅಹಿತಕರ ಸಂಘಟನೆಗಳು ಸಂಭವಿಸಿರಲಿಕ್ಕಿಲ್ಲ. ಏನೇ ಆಗಲಿ ಬೆಳಗಾದ ಬಳಿಕ, ಅದೂ ಶೇಷಣ್ಣನ ಮೂಲಕ! ನೆಮ್ಮದಿಯ ಉಸಿರು ಬಿಡುತ್ತ ಪುನಃ ಹಾಸಿಗೆ ಸೇರಿ ಅಪೂರ್ಣಗೊಂಡಿರುವ ಕಾದಂಬರಿ ಕುರಿತಂತೆ ಯೋಚಿಸಲಾರಂಭಿಸಿದೆ.

ಅದರೊಳಗಿನ ಪಾತ್ರಗಳು ಒಂದೊಂದಾಗಿ ಸುಳಿಯಲಾರಂಭಿಸಿದವು. ಆದರೆ ಅವ್ಯಾವಕ್ಕೂ ಪರಿಪೂರ್ಣ ವ್ಯಕ್ತಿತ್ವ ಪ್ರಾಪ್ತವಾಗಿಲ್ಲ, ಅವುಗಳಿಗೆ ಖಚಿತ ಚೆಹರೆಗಳಿಲ್ಲ, ಕಾರ್ಯ ಕಾರಣಗಳಿಲ್ಲ, ಗೊತ್ತು ಗುರಿಗಳಿಲ್ಲ. ಪರಿಪೂರ್ಣಗೊಳಿಸುವುದರ ಮೂಲಕ ಮುಕ್ತಿ ದಯಪಾಲಿಸು ಎಂದು ನನ್ನಲ್ಲಿ ಮೊರೆ ಇಡುತ್ತಿರುವವು. ಕಾದಂಬರಿಯನ್ನೂ ಅವುಗಳನ್ನೂ ಆ ಸ್ಥಿತಿಯಲ್ಲಿರಿಸಿ ಮೂಲೆಗೆ ತಳ್ಳಿ ಹೊಸ ಕಾದಂಬರಿ ಕುರಿತಂತೆ ಯೋಚಿಸಬೇಕಿದೆ, ಕೆಲವು ತಾಸುಗಳ ಹಿಂದೆ ಗೌಡರ ತೋಟದ ಮನೆಯಲ್ಲಿ ಸಂಭವಿಸಿದ ಘಟನೆಗಳ ವ್ಯಕ್ತಿಗಳ ಆಧಾರದ ಮೇಲೆ ಕಾದಂಬರಿಯನ್ನು ಆರಂಭಿಸಬೇಕು, ಆ ಘಟನೆಗಳ, ಅಲ್ಲಿನ ವ್ಯಕ್ತಿಗಳ ಹಿನ್ನೋಟಗಳಿಂದ ಕಾದಂಬರಿಯನ್ನು ಬೆಳೆಸಬೇಕು. ಆದರೆ ಶಶಾಂಕ ಮತ್ತವನ ತಂದೆ ಹರಿಶ್ಚಂದ್ರರೆಡ್ಡಿಯವರನ್ನು ಉಳಿಸಿಕೊಳ್ಳುವುದೋ! ಬೇಡವೋ! ಎಲ್ಲದಕ್ಕಿಂತ ಮುಖ್ಯವಾಗಿ ವಾಗಿಲಿಯಲ್ಲಿ ಮುಂಬೆಳಗು ಪ್ರವಹಿಸಬೇಕು. ಸಂಜೆ ನಡೆಯುವ ಸಮಾರಂಭ ವಾಗಿಲಿಯ ಕ್ಲೈಮಾಕ್ಸ್! ವಾಗಿಲಿಯ, ವಾಗಿಲಿಯ ಜನರ, ವಾಗಿಲಿಯ ಪುರೋಭಿವೃದ್ಧಿಯ ಹಣೆ ಬರಹವನ್ನು ನಿರ್ಧರಿಸಲಿರುವುದು ಅದೇ ಸಮಾರಂಭ! ಕಳೆದೇಳು ತಿಂಗಳುಗಳಿಂದ ವಾಗಿಲಿಯಲ್ಲಿ ನೆಲೆಯೂರಿರುವ, ವಾಗಿಲಿಯ

ಕನಸುಗಳಿಗೆ ಹೊಸ ವ್ಯಾಖ್ಯಾನ ಬರೆದಿರುವ, ತಮ್ಮ ಬದುಕಿನ ಏರಿಳಿತಗಳನ್ನು ಓರೆಕೋರೆಗಳನ್ನು ಸರಿಪಡಿಸಿಕೊಂಡಿರುವ, ಉತ್ತರೋತ್ತರವಾಗಿ ತಮ್ಮ ಕನಸುಗಳನ್ನು ನನಸು ಮಾಡಿಕೊಂಡಿರುವ ಜಲಂಧರನ ನಾಟಕ ಕಂಪನಿಯ ಕಲಾವಿದರು ಅಂತಿಮವಾಗಿ ಬಣ್ಣ ಲೇಪಿಸಿಕೊಳ್ಳಲಿರುವ ಬಣ್ಣ ಕಳಚಲಿರುವ ನಿರ್ಣಾಯಕ ದಿನದ ಅರುಣೋದಯಕ್ಕೆ ಒಂದೆರಡು ತಾಸುಗಳಷ್ಟೆ ಬಾಕಿ ಇರುವುದು.

ಅರೆ ಅಂದ ಹಾಗೆ ಲಚುಮವ್ವನ ತೋಪಿನಲ್ಲಿರುವ ಛದ್ಮವೇಷಧಾರಿ ಸಾಧುದ್ವಯರ ಕಥೆ ಏನಾಯಿತೆಂದು ತಿಳಿಯಲಿಲ್ಲ. ಅವರಲ್ಲಿ ಮುಖ್ಯವಾಗಿ ಶರಭ ಉರುಫ್ ಈಶನ ಪಾದಗಳಲ್ಲಿರಬಹುದಾದ ಆರನೆ ಬೆರಳಿನ ವೃತ್ತಾಂತ ತಿಳಿಯಲಿಲ್ಲ. ತೋಪಿನಲ್ಲಿರುವ ಅಸಂಖ್ಯಾತ ಮಂಗಗಳ ಕಥೆ ಏನಾಯಿತೆಂದು ತಿಳಿಯಲಿಲ್ಲ. ಅಕಸ್ಮಾತ್ ಅವನ ಪಾದಗಳಲ್ಲಿ ಆರನೆ ಬೆರಳಿದ್ದಲ್ಲಿ! ಅದು ಗೌಡದ್ವಯರ ಕಣ್ಣಿಗೆ ಗೋಚರಿಸಿದ್ದಲ್ಲಿ! ಅದರ ಆಧಾರದ ಮೇಲೆ ಗೌಡರು ಪುನಃ ಅವನಿಗೆ ಸುಪಾರಿ ನೀಡಿದಲ್ಲಿ! ಅವನು ಅವರ ಆಪೇಕ್ಷೆಯನ್ನು ತಿರಸ್ಕರಿಸಿದಲ್ಲಿ! ಅವನನ್ನು ಮುಗಿಸಲು ಅವರು ಇನ್ಯಾರಿಗೋ ಸುಪಾರಿ ನೀಡಿದಲ್ಲಿ! ದೇವರೇ ಅವನ ಪಾದಗಳಲ್ಲಿ ಆರನೆ ಬೆರಳು ಇಲ್ಲದಿರಲಿ. ಇದ್ದರೂ ಅದು ಉತ್ತರೋತ್ತರವಾಗಿ ನಾನಾ ಅವಾಂತರಗಳಿಗೆ ದಾರಿ ಮಾಡಿಕೊಡದಿರಲಿ! ನನ್ನ ನಾಸ್ತಿಕ ಮನಸ್ಸು ಆಸ್ತಿಕವಾಗಿ ಪರಿವರ್ತನೆಗೊಂಡು ದೇವರಲ್ಲಿ ಅಂಗಲಾಚಿತು. ಅವನೆಷ್ಟಿದ್ದರೂ ನನ್ನನ್ನು ಅಣ್ಣನೆಂದು ಸಂಬೋಧಿಸಿದ ತಮ್ಮ ತಾನೆ! ತಮ್ಮನಾಗಿ ನನ್ನ ಸಂಗಡ ಒಡನಾಡಿದ್ದವನು ತಾನೆ! ತನ್ನ ಪೂರ್ವಾಪರವನ್ನು ನಿಸ್ಸಂಕೋಚವಾಗಿ ನಿವೇದಿಸಿಕೊಂಡವನು ತಾನೆ!

ಅರೆ ತೋಪಿನ ಉಸ್ತುವಾರಿಯನ್ನು ಆಲೂರಿನ ಅಲಿ ವಹಿಸಿದ್ದನೆಂಬ ವದಂತಿ. ಅವನು ಬಂದಿರುವನೆಂದ ಮೇಲೆ ಶ್ರೀಕೃಷ್ಣಭವನ ಹೋಟಲ್ ಮಾಲಕ ಹೆಬ್ಬಾರ್ ಬಂದಿರಬಹುದಲ್ಲವೆ! ಅವರಿಬ್ಬರು ಬಂದಿರುವರೆಂದ ಮೇಲೆ ವಕೀಲ ಜೀವೋತ್ತಮರಾವ್ ಬಂದಿರಲೂಬಹುದಲ್ಲವೆ! ಅವರೆಲ್ಲ ಬಂದಿದ್ದರೆ ಇನ್ನು ಊಳೂರಿನಿಂದ ನವವಿವಾಹಿತೆ ವನಜಾಕ್ಷಿ ತನ್ನ ಹೊಸಗಂಡನ ಸಂಗಡ! ಎಲ್ಲ ಜಮೀನ್ದಾರರಂತೆ ಆಕೆಯ ಗಂಡನೂ ಫ್ಯಾಕ್ಷನಿಷ್ಟ್ ಹುದ್ದೆ ಪಡೆದಿದ್ದರೆ! ಅಥವಾ ಬದಲಾಗುವ ಸನ್ನಿವೇಶದಲ್ಲಿದ್ದರೆ! ಅವರಿವರೆಲ್ಲ ಬಂದಿರುವರೆಂದ ಮೇಲೆ ನಗರೂರಿನಿಂದ ಮೃತ ಲಕ್ಷ್ಮಿಯ ಹೆತ್ತವರು ಬಂದು ನನ್ನ ಹುಡುಕಾಟದಲ್ಲಿದ್ದರೆ! ಕೇವಲ ರೆ ರೆ ರೆಗಳು ಮಾತ್ರ!

++++

ಶೇಷಣ್ಣ ಹೇಳಿದ್ದು ಕೇಳಿದ ಮೇಲೆ ಮನಸ್ಸು ಹಗುರಾಯಿತು. ಮನೆ ತೋಟದ ನಡುವೆ ಇದ್ದದ್ದಕ್ಕೂ ಸಾರ್ಥಕವಾಯಿತೆಂದು ಭಾವಿಸಿದೆ. ಗೌಡರು ನಿಷ್ಠುರವಾಗಿ ಮಾತನಾಡದಿದ್ದಲ್ಲಿ ಪರಸ್ಪರ ಕೈ ಕೈ ಮಿಲಾಯಿಸುತ್ತಿದ್ದರೇನೋ! ಅಶ್ಲೀಲ ಪದಗಳನ್ನು ಪುಂಖಾನುಪುಂಖವಾಗಿ ಉಪಯೋಗಿಸಿ ತೋಟ ಎಂಬ ಸುಂದರ ಪದದ ಗೌರವವನ್ನು ಕಳೆಯುತ್ತಿದ್ದರೇನೋ! ಗೌಡರು ಹೇಳಿದ ಬೆನ್ನಲ್ಲಿಯೇ ರಾಘವರೆಡ್ಡಿ ಹೋದನಂತೆ. ಮಧ್ಯರಾತ್ರಿ ಕಳೆದ ಬಳಿಕ ಕಪ್ಪಟ್ರಾಳ್ ವೆಂಕಪ್ಪನಾಯ್ಡು. ಬ್ರಾಹ್ಮೀಮುಹೂರ್ತದಲ್ಲಿ ಚೆಲ್ಲಾ ರಾಮಕ್ರಿಷ್ಟಾರೆಡ್ಡಿ ಹೋದರಂತೆ. ಇನ್ನು ಉಳಿದವರ ಪೈಕಿ ಹೊರಡಲಿರುವವರೆಂದರೆ ಎಂದು ಯೋಚಿಸುತ್ತ ಕಣ್ಣು ಮುಚ್ಚಿ ತೆರೆದ. ಅವರೆಲ್ಲ ಹೋದ ಬಳಿಕ ಎಷ್ಟೋ ತಲೆ ನೋವು ವಾಸಿಯಾಯಿತೆಂದು ನೆಮ್ಮದಿಯ ಉಸಿರುಬಿಟ್ಟ. ಅವನು ಗೌಡರನ್ನು ತುಳುಕದ ತುಂಬಿದ ಕೊಡಕ್ಕೆ ಹೋಲಿಸಬಹುದೆಂದು ಊಹಿಸಿರಲಿಲ್ಲ,

ಅವರ ಮಗನನ್ನು ಮುಳ್ಳಿನ ಗಿಡಕ್ಕೆ ಹೋಲಿಸುವಷ್ಟು ತಿಳುವಳಿಕೆ ಸಂಪಾದಿಸಿರುವನಲ್ಲ ಅಷ್ಟೇ ಸಾಕು, ತಾನೆಷ್ಟಿದ್ದರೂ ನಾಟಕಗಳ ಮನುಷ್ಯ ತಾನೆ! ನನ್ನ ಸಹವರ್ತಿ ತಾನೆ! ಅವನ ಸಂಗಡ ಏನೆಲ್ಲ ತಿಳಿದುಕೊಳ್ಳುವ ಇರಾದೆ ಇತ್ತು, ಆದರೆ ತಾನು ಮೈತುಂಬ ಕೆಲಸವಿರುವುದಾಗಿ ಹೇಳಿ ಹೀಗೆ ಬಂದವನು ಹಾಗೆ ಹೊರಟು ಹೋದನು, ಹ್ಹಾ ಅಂದ ಹಾಗೆ ಹೊಸ್ತಿಲು ದಾಟುವ ಮೊದಲು ಬೆಂಗಳೂರಿನವರು ಗಾಬರಿಗೊಂಡಿರುವುದರ ಬಗ್ಗೆ, ಅವರು ಎದ್ದಿರುವರೋ ಇನ್ನೂ ಮಲಗಿರುವರೋ ಎಂಬ ಬಗ್ಗೆ ವಿಚಾರಿಸುವುದನ್ನು ಮರೆಯಲಿಲ್ಲ. ಬಸನವನಗೌಡರ ಮನೆಯ ಮೂಲೆಯಲ್ಲಿ ಅದೇ ತಾನೆ ಮರೆಯಾದ ಅವನನ್ನು ಮಾಳಿಗೆ ಮೇಲೆ ಅದೇ ತಾನೆ ಎದ್ದಿದ್ದ ಅವರು ನೋಡಿ ಆಕಳಿಸಿದ ಸದ್ದು ಕೇಳಿಸಿತು.

ಕೆಳಗೆ ಇಳಿದು ಬಂದ ಅವರನ್ನು ಬಯಲ ಬಹಿರ್ದೆಸೆಗೆ ಕರೆದೊಯ್ದೆ, ಅಗಸೆ ಬಾಗಿಲು ದಾಟಿದ ಬಳಿಕ ಚಕ್ರವರ್ತಿ ತನ್ನ ಸಿನೆಮಾ ವಿಷಯವನ್ನು ಪ್ರಸ್ತಾಪಿಸಿದ, ತನ್ನ ಸಿನೆಮಾದ ಶಿರ್ಷಿಕೆ ಕುರಿತಂತೆ ವಿಷಯ ಆರಂಭಿಸಿದ, ತಾವು ಬೆಂಗಳೂರು ಸೇರಿದೊಡನೆ ಫಿಲಂ ಛೇಂಬರಿಗೆ ದೌಡಾಯಿಸಬೇಕಿರುವುದು. ಅಲ್ಲಿ 'ಆರು ಬೆರಳು' ಎಂದು ನೊಂದಾಯಿಸುವುದೋ, ಸಂಖ್ಯಾಶಾಸ್ತ್ರದ ಪ್ರಕಾರ ಬೆಸ ಸಂಖ್ಯೆ ಇರುವ 'ಆರನೆ ಬೆರಳು' ಎಂದು ನೊಂದಾಯಿಸುವುದೋ! ತನ್ನ ದೃಷ್ಟಿಯಲ್ಲಿ ಕಟ್ಟಡಗಳಿಗೂ ಶಬ್ದಗಳಿಗೂ ನಡುವೆ ವ್ಯತ್ಯಾಸವಿಲ್ಲ, ಶಬ್ದಗಳಿಗೂ ವಾಸ್ತುವಿಗೂ ಪರಸ್ಪರ ಸಂಬಂಧವಿರುವುದು, ಹಾಗೆಯೇ ಸಂಖ್ಯಾಶಾಸ್ತ್ರದ ದೃಷ್ಟಿಯಿಂದಲೂ ಸಾಮ್ಯವಿರುವುದು! ತನ್ನ ಜಾತಕ ಕುಂಡಲಿಗೆ ಹೋಲಿಸುವುದಾದರೆ ಆರನೆ ಬೆರಳು ಎಂಬುದೇ ಸೂಕ್ತ! ಆದರೆ ಅದನ್ನು ಯಾರಾದರು ನೊಂದಾಯಿಸಿದ್ದರೆ! ಅನುಮಾನ ತಳೆದ. ಗೊಂದಲವನ್ನು ನಿಚ್ಚಳವಾಗಿ ಅನುಭವಿಸಲಾರಂಭಿಸಿದ. ಸಿನೆಮಾ ತೆಗೆಯುವುದೆಂದರೆ ಸಾಮಾನ್ಯ ಸಂಗತಿಯಲ್ಲ, ಕಥೆ ಚಿತ್ರಕಥೆ, ಲೊಕೇಷನ್ನು, ಕಲಾವಿದರ ಆಯ್ಕೆ ಇತ್ಯಾದಿ, ಇವೆಲ್ಲದಕ್ಕಿಂತ ಆ ಸಾಹಸಕ್ಕೆ ಹಲವು ಲಕ್ಷಗಳ ಅಗತ್ಯವಿರುವುದು. ಚರ್ಚೆ ಹೀಗೆಯೇ ಮುಂದುವರಿಯಿತು. ಹಣದ ಚಿಂತೆ ಹೊರತುಪಡಿಸಿ ಕಥೆಯನ್ನು ಸಿದ್ದ ಪಡಿಸುವಂತೆ ಹೇಳಿದ, ಅನುಭವದ ಕೊರತೆ ಪ್ರಸ್ತಾಪವಾಯಿತು, ಚಿತ್ರಗಳನ್ನು ನೋಡುವ ಹವ್ಯಾಸವಿರುವುದು ತಾನೆ ಎಂದು ಕೇಳಿದ, ಹೂ ಎಂದೆ, ಕೆಲವು ಚಿತ್ರಗಳ ಹೆಸರುಗಳನ್ನೂ ಹೇಳಿದೆ, ಅಷ್ಟು ಸಾಕಲ್ಲವೆ ಚಿತ್ರಕತೆ ಸಿದ್ದಗೊಳಿಸಲು! ರೌಡೂರು ಮರೆಗೌಡರ ಮಸಾರೆ ಹೊಲ ಸಮೀಪಿಸಿದೊಡನೆ ಚಿತ್ರದ ಮುಖ್ಯ ಭೂಮಿಕೆಗೆ ಪದ್ಮಾವತಿಯವರನ್ನು ಆಯ್ಕೆ ಮಾಡಿರುವುದಾಗಿಯೂ, ಅದಕ್ಕೆ ಆಕೆಯನ್ನು ಒಪ್ಪಿಸಬೇಕೆಂದೂ ಕೇಳಿಕೊಂಡ. ಕೂಸು ಹುಟ್ಟುವುದಕ್ಕೂ ಮೊದಲೆ ಎಂದು ಹೇಳಲಿದ್ದ ಮಾತನ್ನು ತಡೆ ಹಿಡಿದು ಅವನ ಕಡೆ ನೋಡಿದೆ, ವಿಚಿತ್ರ ವ್ಯಕ್ತಿ, ವಿಲಕ್ಷಣ ಮಹತ್ವಾಕಾಂಕ್ಷೆ! ಆತನ ಅಭಿಪ್ರಾಯಗಳನ್ನು ನಿರಾಕರಿಸುವ ಗೋಜಿಗೆ ಹೋಗದೆ ತಲೆ ಅಲ್ಲಾಡಿಸುತ್ತ ಸಾಗಿದೆ.

ಸುಮ್ಮನೆ ಹೆಜ್ಜೆ ಹಾಕುತ್ತಿದ್ದ ಚೌಗಲೆ ನಮ್ಮಿಬ್ಬರ ನಡುವೆ ನಡೆಯುತ್ತಿದ್ದ ಮಾತುಕತೆ ಕುರಿತಂತೆ ಆಸಕ್ತಿ ಇರಲಿಲ್ಲ. ತನ್ನ ಗಮನ ಹೆಜ್ಜೆ ಹೆಜ್ಜೆಗೊಮ್ಮೊಮ್ಮೆ ದೂರದಲ್ಲಿ ಗೋಚರಿಸುತ್ತಿದ್ದ ಗೌಡರ ಸಂಭವನೀಯ ಸಮಾಧಿ ಸ್ಮಾರಕದ ಕಡೆ ಇತ್ತು, ಅಲ್ಲಿ ಇನ್ನೂ ಉರಿಯುತ್ತಿದ್ದ ಅಲಂಕಾರಿಕ ದೀಪಗಳ ಕಡೆಗಿತ್ತು, ಅಲ್ಲಿ ಕ್ರಿಯಾಶೀಲರಾಗಿದ್ದ ಜನರ ಕಡೆಗಿತ್ತು, ಗಾಳಿ ಮೂಲಕ ಕ್ಷೀಣವಾಗಿ ಕೇಳಿಸುತ್ತಿದ್ದ ಸದ್ದಿನ ಕಡೆ ಭಾಷೆಯ ಕಡೆಗಿತ್ತು. ನಡುನಡುವೆ ತಾನು ಇದ್ದಕ್ಕಿದ್ದಂತೆ ಅಂತರ್ಮುಖಿಯಾಗುತ್ತಿದ್ದನು, ತನ್ನ ಪಾಡಿಗೆ ತಾನು ಗೊಣಗಿಕೊಳ್ಳುತ್ತಿರುವನೆಂದು ಅವನ ತುಟಿಗಳ ಚಲನೆಯಿಂದ ಗ್ರಹಿಸಿದೆ. ಪ್ರಾಯಶಃ ಪ್ರದರ್ಶನಗೊಳ್ಳಲಿರುವ ನಾಟಕ ಕುರಿತಂತೆ,

ಅದರಲ್ಲಿ ತನ್ನ ಹೇಮರೆಡ್ಡಿಯ ಪಾತ್ರ ಕುರಿತಂತೆ, ಆ ಪಾತ್ರದ ಸಂಭಾಷಣೆ ಕುರಿತಂತೆ ತಾನು ಯೋಚಿಸುತ್ತಿರಬಹುದೆಂದು ಊಹಿಸಿದೆ, ಆದರೆ ನಾನು ಮಾತನಾಡದಿದ್ದರೂ ಚಕ್ರವರ್ತಿ ತಾನು ನಿರ್ಮಿಸಲಿರುವ ನಿರ್ದೇಶಿಸಲಿರುವ ಸಿನೆಮಾದ ಮುಖ್ಯ ಪಾತ್ರಕ್ಕೆ ಪದ್ಮಾವತಿಯನ್ನು ಆಯ್ಕೆ ಮಾಡಿಕೊಂಡರೆ ಹೇಗೆ! ಆ ಪಾತ್ರಕ್ಕೆ ಆಕೆ ಒಪ್ಪುವಳೋ ಇಲ್ಲವೋ! ಸಿನೇಮಾದ ಪ್ರಾಯೋಜಕತ್ವಕ್ಕೆ ಯಾವ ಕಂಪನಿಯನ್ನು ಸಂಪರ್ಕಿಸುವುದು! ಹೀಗೆ ಏನೇನೋ ಕೇಳಿದ. ಅದಕ್ಕೆ ಆತನಿಂದ ಪ್ರತಿಕ್ರಿಯೆ ಲಭಿಸದಿದ್ದಾಗ ಎಡ ಮಗ್ಗುಲಿಂದ ಬಲ ಮಗ್ಗುಲಿಗೆ ಸರಿದು ಆತನ ಭುಜದ ಮೇಲೆ ಕೈ ಹಾಕಿ ಅಲುಗಾಡಿಸಿದ. ಅದರಿಂದ ದಿಗ್ಗನೆ ವಾಸ್ತವಕ್ಕೆ ಮರಳಿದ ಚೌಗಲೆ ಬೆಚ್ಚಿ ಬಿದ್ದವನಂತೆ ನಿಂತಲ್ಲಿಯೇ ನಿಂತ, ತಾನು ಕೇಳಿಸಿಕೊಳ್ಳಲಿಲ್ಲವೆನ್ನುವಂತೆ ಬೆರಗಿನಿಂದ ನಮ್ಮಿಬ್ಬರ ಕಡೆ ನೋಡಿದ. ಹೆಬ್ಬಟಂ ಗೌಡರಿನ್ನೂ ಇರುವರು ತಾನೆ! ಎಂಬ ಆತಂಕಭರಿತ ಸಂದೇಹ ಮಾತ್ರ ಆತನ ಬಾಯಿಯಿಂದ ಬಂತು. ಕಳೆದ ರಾತ್ರಿಯ ಘಟನೆಗಳಿಂದ ತಾನಿನ್ನೂ ಹೊರಬಂದಿಲ್ಲವೆಂದು ಖಾತ್ರಿಯಾಯಿತು. ವಾಗಿಲಿ ಸ್ವಚ್ಚಂದ ರೀತಿಯಲ್ಲಿ ಬೆಳಗಿನ ಸಮಯವನ್ನು ಆಸ್ವಾದಿಸುತ್ತಿರುವುದೆಂದ ಮೇಲೆ ತಾವು ನಿರಾತಂಕವಾಗಿ ಬಹಿರ್ದೆಸೆಯ ಸ್ಥಳ ಹುಡುಕಿಕೊಂಡು ಸಾಗುತ್ತಿರುವೆವೆಂದ ಮೇಲೆ! ಗ್ರಾಮದ ಶುನಕಗಳು ಮಂದ್ರಸ್ಥಾಯಿಯಲ್ಲಿ ಘಟನೆಗಳ ಗುಣಗಾನ ಮಾಡುತ್ತಿರುವವೆಂದ ಮೇಲೆ! ಕಾಗೆಗಳು ಎಂಜಲನ್ನು ಹುಡುಕಿಕೊಂಡು ಅಲೆಯುತ್ತಿರವವೆಂದ ಮೇಲೆ! ರಣಹದ್ದುಗಳೊಂದೂ ಮುಗಿಲ ಬಯಲಲ್ಲಿ ಕಾಣಿಸಿಕೊಂಡಿಲ್ಲವೆಂದ ಮೇಲೆ! ತೋಟದ ಮನೆಯ ಅಲಂಕಾರಿಕ ದೀಪಗಳು ಅಪಹರಿಸಿದ್ದ ಇರುಳನ್ನು ಅದೇ ತಾನೆ ನಂದುವುದರ ಮೂಲಕ ಊರಿಗೆ ಮರಳಿ ದಯಪಾಲಿಸಿದವೆಂದ ಮೇಲೆ! ಅಗೋ ಅಲ್ಲೊಂದು ಕಾರು ಇಗೋ ಇಲ್ಲೊಂದು ಕಾರು ಹೋಗಿ ಬರುತ್ತಿರುವವೆಂದ ಮೇಲೆ ಹೆಬ್ಬಟಂ ಗೌಡರು ಎಂದಿಗಿಂತ ಹೆಚ್ಚು ಕ್ಷೇಮದಿಂದಿರುವರೆಂದೇ ಅರ್ಥ ತಾನೆ!

ಬಹಿರ್ದೆಸೆ ಮುಗಿಸಿಕೊಂಡು ಮರಳುವ ಸಲುವಾಗಿ ನಾವು ಆಯ್ಕೆ ಮಾಡಿಕೊಂಡ ಹಾದಿ ನಿಸ್ಸಂದೇಹವಾಗಿ ಗೌಡರ ಸಮಾಧಿ ಸ್ಮಾರಕವನ್ನು ತಲುಪುವುದಾಗಿತ್ತು. ಮಿತ್ರದ್ವಯರು ಅದನ್ನು ನೋಡಿರಲಿಲ್ಲವೆಂಬ ಕಾರಣಕ್ಕೆ, ವಾಸ್ತುಶಿಲ್ಪಿ ರಾಸಾನಿ ಮತ್ತು ಪ್ರತಿಭಾವಂತ ಶಿಲ್ಪಿ ಪದ್ಮನಾಭಂ ಅವರಿಬ್ಬರ ಪರಿಚಯ ತಮ್ಮವರಿಗೆ ಇಲ್ಲವೆಂಬ ಕಾರಣಕ್ಕೆ, ಶ್ರೀಮಂತರೂ, ಭಯೋತ್ಪಾದಕರಲ್ಲಿ ಅಗ್ರಗಣ್ಯರೂ, ಪಾಶ್ಚಾತ್ತಾಪವನ್ನು ಸೃಜನಶೀಲವಾಗಿ ನಿವೇದಿಸಿಕೊಳ್ಳುವಂಥವರೂ ಮುಖ್ಯವಾಗಿ ಸುದೀರ್ಘ ಬದುಕುವ ಅದಮ್ಯ ಮಹತ್ವಾಕಾಂಕ್ಷೆ ಉಳ್ಳವರೂ ಆದ ಹೆಬ್ಬಟಂ ಗೌಡರು ಮರಣೋತ್ತರ ಸಮಾಧಿ ಸ್ಮಾರಕ ವಿಷಯದಲ್ಲಿ ತಾವು ಯಾವುದೇ ಮೊಘಲ್ ಚಕ್ರವರ್ತಿಗಳಿಗಿಂತ ಕಡಿಮೆ ಇಲ್ಲ ಎಂದು ಸಾಕ್ಷಿ ಸಹಿತ ತೋರಿಸುವ ಕಾರಣಕ್ಕೆ ಉದ್ದೇಶಪೂರ್ವಕವಾಗಿ ಆಯ್ಕೆ ಮಾಡಿದ ದುರ್ಗಮ ಹಾದಿ ಅದಾಗಿತ್ತು.

ಸಮೀಪಿಸಿದವರು, ನೋಡಿ ಬೆರಗಾದವರು, ವಾಸ್ತವಾಂಶ ತಿಳಿದು ತಮ್ಮ ಊಹೆ ತಲೆ ಕೆಳಗಾದವರು, ಹ್ಹಾ ಎಂದು ಉದ್ಗರಿಸಿದವರು ಬೆಂಗಳೂರಿನವರೆಂದು ತಿಳಿದೊಡನೆ ರಾಸಾನಿ ಮರಣಪೂರ್ವದ ಮರಣೋತ್ತರಕ್ಕೆ ಸಂಬಂಧಿಸಿದ ವಿಷಯಗಳನ್ನು ಪುಂಖಾನುಪುಂಖವಾಗಿ ಪ್ರಸ್ತಾಪಿಸಲಾರಂಭಿಸಿದ, ಯಾರು ತಮ್ಮ ಮರಣೋತ್ತರದ ಸಮಾಧಿಕುರಿತು ಯೋಚಿಸುವರೋ ಅಂಥವರು ದೀರ್ಘಾಯುಷಿಗಳಾಗಿರುವರೆಂದು ತನ್ನದೇ ಆದ ರೀತಿಯಲ್ಲಿ ವಾದ ಮಂಡಿಸಿ ನಮ್ಮನ್ನು ದಿಗ್ಭ್ರಮೆಗೊಳಿಸಿದ, ಅದೂ ಮೆಲ್ಲಗಿನ ದನಿಯಲ್ಲಿ, ಅದೂ ಸಕಾರಣವಾಗಿ. ಕಳೇಬರಗಳ ನಿರೀಕ್ಷೆಯಲ್ಲಿದ್ದ ನಾಯಿಗಳನ್ನು ಗದರಿಸಿ ದೂರ ಕಳಿಸಿದಾದ ಬಳಿಕ ಕಟ್ಟಡದ

ಹೃದಯ ಭಾಗದಲ್ಲಿದ್ದ ಕಿಮ್ಮತ್ತಿನ ಗುಂಡಿಯ ಒಳಕ್ಕಿಳಿದ, ನಮ್ಮನ್ನೂ ಇಳಿಸಿದ. ಗೌಡರು ತನಗೆ ಕೊಟ್ಟಿರುವ ತಮ್ಮ ದೇಹದ ಅಳತೆ ಪ್ರಕಾರ ಇಲ್ಲಿ ಅವರ ರುಂಡಭಾಗ, ಅದೂ ಚಂದ್ರಕಾಂತ ಶಿಲೆಯ ಮೇಲೆ! ಅವರ ಮುಂಡಭಾಗವನ್ನು ಇಗೋ ಇಲ್ಲಿ ಶ್ರೀಗಂಧದ ಹಾಸಿನ ಮೇಲೆ! ಹೀಗೆ ನಮ್ಮ ಮೆದುಳುಗಳ ಸ್ಥಿತಿಸ್ಥಾಪಕ ಗುಣವನ್ನು ಪರೀಕ್ಷಿಸಿದ, ಕುಜನ ಅನುಗ್ರಹವನ್ನು ಜೀವನ ಪರ್ಯಂತ ಸವಿದಿರುವ ಗೌಡರ ಸಮಾಧಿಯನ್ನು ನಿರ್ಮಿಸಿದ ಕಾರಣದಿಂದಾಗಿ ತನ್ನ ಮಾನಸಿಕ ಸ್ಥಿತಿ ಹಿಂದೆಂದಿಗಿಂತ ಉತ್ತಮವಾಗಿರುವುದಾಗಿಯೂ, ತನ್ನಲ್ಲಿ ಕುಂಡಲಿನಿ ಶಕ್ತಿ ಜಾಗೃತಗೊಂಡಿರುವುದಾಗಿಯೂ, ಇನ್ನೊಬ್ಬರ ಸಾವಿನ ಕ್ಷಣವನ್ನು ತಥಾಕಥಿತವಾಗಿ ಊಹಿಸುವ ವಿಶೇಷ ಅತಿಮಾನವ ಶಕ್ತಿ ತನಗೆ ಪ್ರಾಪ್ತವಾಗಿದ್ದರೂ ಆಗಿರಬಹುದೆಂದು ನಿಸ್ಸಂಕೋಚವಾಗಿ ಹೇಳುತ್ತಲೇ ಮೇಲೇರಿದ, ಅದೂ ಮೆಲ್ಲಗೆ ಅಂದರೆ ಮೆಲ್ಲಗೆ, ಅದಕ್ಕೆ ಕಾರಣಗಳು ಇಲ್ಲದಿರಲಿಲ್ಲ, ಅಲ್ಲಿ ಪ್ರಶ್ನೋತ್ತರಕ್ಕೆ ಅವಕಾಶವಿದ್ದರೆ ತಾನೆ ಹೇಳುವುದಕ್ಕೆ ಕೇಳುವುದಕ್ಕೆ! ಚಕ್ರವರ್ತಿ ಮಾತ್ರ ಏಕಾಗ್ರತೆಯಿಂದ ಆಲಿಸುತ್ತಿದ್ದ, ತಾನು ನಿರ್ದೇಶಿಸಲಿರುವ ಸಿನೆಮಾಕ್ಕೆ ರಾಸಾನಿಗೂ ಅವಕಾಶ ಕಲ್ಪಿಸಲಿರುವವನಂತೆ ಆತನ ಕಡೆ ನೋಡಿದ, ನೀನೂ ನಿನ್ನ ಕೆಲಸ ಕಾರ್ಯಗಳೂ ನಿನ್ನ ವಾಗ್ವೈಖರಿ ಎಲ್ಲವೂ ಅದ್ಭುತವೆಂದು ತಾನು ಮೆಚ್ಚುಗೆ ಸೂಚಿಸಿದನೋ ಇಲ್ಲವೋ! ಆದರೆ ತನ್ನೆರಡೂ ಕೈಗಳಿಂದ ಆತನ ಎರಡೂ ಮುಂಗೈಗಳನ್ನು ಬಲವಾಗಿ ಹಿಡಿದು ಕುಲುಕಿದ, ಅಲ್ಲದೆ ತನ್ನ ನಿಕ್ಕರ ಜೇಬಿನಿಂದ ಇನ್ನೇನು ಹೊಲಸಾಗಿ ಚಹರೆ ಬದಲಾಯಿಸಿಕೊಳ್ಳಲಿದ್ದ ವಿಜಿಟಿಂಗ್ ಕಾರ್ಡು ತೆಗೆದು ಆತನ ಕೈಯಲ್ಲಿರಿಸುತ್ತ ಬೆಂಗಳೂರಿಗೆ ತಪ್ಪದೆ ಬರಬೇಕೆಂದೂ, ತಪ್ಪದೆ ತನ್ನನ್ನು ಕಾಣಬೇಕೆಂದೂ ಹೇಳುವುದಕ್ಕೂ ಖಾದಿರ್ ತನ್ನ ವಾಹನವನ್ನು ತಂದು ನಿಲ್ಲಿಸುವುದಕ್ಕೂ ಸರಿ ಹೋಯಿತು.

ನಮ್ಮನ್ನು ನೋಡಿದೊಡನೆ ತನ್ನಲ್ಲಿ ಕ್ಷೀಣಿಸಿದ್ದ ಸಿನೆಮಾಕ್ಕೆ ಸಂಬಂಧಿಸಿದ ಮಹತ್ವಾಕಾಂಕ್ಷೆ ಪುನಃ ಗರಿಗೆದರದೆ ಇರಲಿಲ್ಲ, ಓಹೋ ಎಂದು ಉದ್ಗರಿಸುತ್ತ ಸಮೀಪಕ್ಕೆ ಬಂದವನೆ ಮುಖ್ಯವಾಗಿ ಚಕ್ರವರ್ತಿಯ ಕೈಯನ್ನು ತನ್ನ ಕೈಯ ಸುಪರ್ದಿಗೆ ತೆಗೆದುಕೊಂಡು ತನ್ನನ್ನು ಮರೆತಿರೆಂದರೆ.. ಎಂದು ಹೇಳುವುದನ್ನು ಮರೆಯಲಿಲ್ಲ, ಅದಕ್ಕೆ ಆತನೂ ಮುಂದೆ ನೋಡೋಣ ಎಂದು ಅಡ್ಡಗೋಡೆಯ ಮೇಲೆ ದೀಪ ಇರಿಸುವುದನ್ನು ಮರೆಯಲಿಲ್ಲ. ಖಾದಿರ್ ಇನ್ನೇನು ಹೇಳಲಿದ್ದನೋ, ರಾಸಾನಿಯೂ ತನ್ನ ಜೇಬಿನಿಂದ ವಿಜಿಟಿಂಗ್ ಕಾರ್ಡನ್ನು ತೆಗೆದು ಕೊಡಲಿದ್ದನೋ! ಅಷ್ಟರಲ್ಲಿ ಪಕ್ಕದ ಕೋಣೆಯ ಬಾಗಿಲು ತೆರೆದದ್ದೂ ಆಯಿತು, ಅದರೊಳಗಿಂದ ಪದ್ಮಾವತಿಯ ಬೆನ್ನ ಹಿಂದೆಯೇ ಶಿಲ್ಪಿ ಪದ್ಮನಾಭಂ ತನ್ನೊಂದು ಕೈಯಲ್ಲಿ ಉಳಿಯನ್ನೂ, ಇನ್ನೊಂದು ಕೈಯಲ್ಲಿ ಸುತ್ತಿಗೆಯನ್ನೂ ಹಿಡಿದು ಹೊರಬಂದದ್ದೂ ಆಯಿತು. ಹೇಮರೆಡ್ಡಿ ತನ್ನೆದುರಲ್ಲಿ! ಶರಣೆ ಮಲ್ಲಮ್ಮ ತನ್ನೆದುರಲ್ಲಿ! ನೋಡು ನೋಡುತ್ತಲೇ ಪರಸ್ಪರ ಸಮೀಪಿಸಿದರು, ಉಭಯ ಕುಶಲೋಪರಿ ವಿನಿಮಯ ಮಾಡಿಕೊಂಡರು. ನಾಟಕದ ಕೊನೆಯ ತಾಲೀಮು ನಡೆಸಲೆಂದೇ ಕರೂರು ತಿಮ್ಮಪ್ಪ ಮಾಸ್ಟರ್ ಮಧ್ಯಾಹ್ನದ ವೇಳೆಗೆ ಇಲಾಹಿಯಲ್ಲಿ ಆಗಮಿಸಲಿರುವವರೆಂದೂ, ಅದಕ್ಕೆ ತಪ್ಪದೆ ಹಾಜರಿರಬೇಕೆಂದೂ ಆಕೆ ಆತಗೆ ಹೇಳದಿರಲಿಲ್ಲ. ಆಕೆ ನನ್ನ ಕಡೆಗೊಮ್ಮೆ ಚಕ್ರವರ್ತಿ ಕಡೆಗೊಮ್ಮೆ ಹಾಯಿಸಿದ ದೃಷ್ಟಿಯಲ್ಲಿ ಸೌಜನ್ಯವಿರಲಿಲ್ಲ, ಅದನ್ನು ನಾವು ನಿರೀಕ್ಷಿಸಿರಲೂ ಇಲ್ಲ. ಪದ್ಮನಾಭಂ ಆಕೆಯನ್ನು ಕಾರಿನವರೆಗೆ ಕೊಂಡೊಯ್ದು ಬೀಳ್ಕೊಟ್ಟನು, ಚಾಲಕ ಸ್ಥಾನದಲ್ಲಿದ್ದ ಖಾದಿರ್ ಚಕ್ರವರ್ತಿಗೆ ಮಾತ್ರ ಗೋಚರಿಸುವಂತೆ ಒಂದು ಪುಟ್ಟ ಸಲಾಂ ಮಾಡಿದನು. ಕಾರು ಎಬ್ಬಿಸಿದ ಧೂಳನ್ನು ಒಮ್ಮೆ ಆಘ್ರಾಣಿಸಿದ ಪರಿಣಾಮವಾಗಿ

ಕೆಮ್ಮುತ್ತ ವಾಪಸ್ಸಾದ ನಾಭಂ ಆಕೆಯ ಮುಖದಲ್ಲಿ ದೈವಿಕ ಕಳೆ ಇರುವುದೆಂದು ಎಂದು ಶ್ಲಾಘಿಸಿದನು, ಇನ್ನೆರಡು ದಿವಸಗಳಲ್ಲಿ ಪೂರ್ಣಗೊಳ್ಳಲಿರುವ ಆಕೆಯ ಮುಖದ ಪ್ರತಿಕೃತಿಯನ್ನು ತೋರಿಸುವ ಸಲುವಾಗಿ ನಮ್ಮನ್ನು ಒಳಗಡೆ ಕರೆದೊಯ್ದನು, ಬೆಳಕಿದ್ದರೂ ಪುಟ್ಟ ಟಾರ್ಚಿನಿಂದ ಶಿಲ್ಪದ ಮೇಲೆ ಬೆಳಕು ಹರಿಸಿದನು. ನೋಡಿದೆವು, ಅದು ಮಲಮ್ಮನನ್ನು ಹೋಲುತ್ತಿರಲಿಲ್ಲ, ಆಕೆಯನ್ನು ನಮ್ಮಂಥ ಹುಲು ನರರು ನೋಡಿದ್ದರೆ ತಾನೆ! ಅದರ ಬದಲಿಗೆ ಪದ್ಮಾವತಿಯನ್ನು ಹೋಲುತ್ತಿತ್ತು.. ನಾನು ಮಹಾಶ್ವೇತೆಯನ್ನು ನೆನಪಿಸಿಕೊಂಡು ಪ್ರಸ್ತಾಪಿಸುವ ಸನ್ನಾಹದಲ್ಲಿದ್ದಾಗಲೇ ಚೌಗಲೆ ಹೆಬ್ಬಟಂ ಗೌಡರ ಸಮಾಧಿ ಸ್ಥಳಕ್ಕೆ ಬದಲು ಶ್ರೀಶೈಲಮಲ್ಲಿಕಾರ್ಜುನನ ಸಮಕ್ಷಮದಲ್ಲಿ ಇದನ್ನು ಪ್ರತಿಷ್ಠಾಪಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿಬಿಡುವುದೆ! ಕವಿದ ಮೌನವನ್ನು ಗ್ರಹಿಸಿದಾದ ಬಳಿಕ ತಾನೆ ಆಕೆಗೆ ಇದೇ ಸೂಕ್ತ ಜಾಗವಿದ್ದರೂ ಇರಬಹುದೆಂದು ಹೇಳದೇ ಇದ್ದಿದ್ದರೆ!

++++

ಆರನೆಯ ಬೆರಳು ಎಂಬ ಐದು ಅಕ್ಷರಗಳ ಬೆಸ ಸಂಖ್ಯೆಯ ಶಿರ್ಷಿಕೆಗಿಂತ ಸಮಾಧಿ ಎಂಬ ಮೂರೇ ಮೂರು ಅಕ್ಷರಗಳ ಶಿರ್ಷಿಕೆಯನ್ನು ಉದ್ದೇಶಿತ ಸಿನೆಮಾಕ್ಕೆ ಕೊಟ್ಟರೆ ಹೇಗೆ ಎಂದು ಚಕ್ರವರ್ತಿ ರಾಗ ಬದಲಿಸುವುದಕ್ಕೂ ನಾಟಕದ ತಾಲೀಮು ಮುಗಿಸಿಕೊಂಡು ಚೌಗಲೆ ಆಗಮಿಸುವುದಕ್ಕೂ ಸರಿ ಹೋಯಿತು. ಅದಕ್ಕೂ ಮೊದಲು ಆತನೊಂದಿಗೆ ಕಿರ್ಕ್ ಡಗ್ಲಾಸನ ಟಫ್ ಗೈಸ್ ಚಿತ್ರವನ್ನು ಪ್ರಾದೇಶೀಕರಣಗೊಳಿಸಿದರೆ ಹೇಗೆ ಎಂದು ಚರ್ಚಿಸಿದ್ದೆ, ಪರಶುರಾಮ ಶರಭ ಅಂಥೋಣಿಯರಂಥ ಸುಪಾರಿ ನಿಷ್ಣಾವಂತ ಕೊಲೆಗಾರರ ಪೂರ್ವಾಪರ ವಿವರಿಸಿದ್ದೆ, ರಮಣ ಲಕ್ಷ್ಮೀರೆಡ್ಡಿ ಖಾದಿರರಂಥ ಅಚಲ ಸ್ವಾಮಿಭಕ್ತರ ಕುರಿತೂ ವಿವರಿಸಿದ್ದೆ, ತನ್ನ ಸ್ಥಗಿತ ಗುಣಗಳನ್ನು ಕಾಪಾಡಿಕೊಳ್ಳಲು ಹೆಣಗುತ್ತಲೇ ಇರುವ ವಾಗಿಲಿ ಕಪ್ಪಟ್ರಾಳು ತರಿಮೆಲಗಳಂಥ ಸ್ವಾತಂತ್ರೋತ್ತರ ಹಳ್ಳಿಗಳನ್ನು ಸೋದಾಹರಣವಾಗಿ ಹೇಳಿದ್ದೆ. ಮೂಲಿಮನಿ ಗೌಡರ ಮನೆಯಲ್ಲಿ ವಿಶೇಷವಾಗಿ ತಯಾರಿಸಿದ್ದ ಭಕ್ಷ್ಯಗಳನ್ನು ಭುಂಜಿಸಿ ವಾಪಸ್ಸಾದ ಬಳಿಕ ನನ್ನ ಅಪೂರ್ಣ ಕಾದಂಬರಿಯ ಹಸ್ತಪ್ರತಿಯನ್ನು ಆತನೆದುರು ಹರವಿದ್ದೆ, ಕಿಟಿಕಿ ಮೂಲಕ ಒಮ್ಮೆಗೆ ಸುಳಿದ ಕಿರು ಗಾಳಿಗೆ ಮುಗುಚತೊಡಗಿದ ಪುಟಗಳೊಳಗಿಂದ ದುತ್ತನೆ ಮೂಡಿದ ದಯಾನಂದ ಪನ್ನಂಗಧರರು ಬೆಳವಣಿಗೆ ವಂಚಿತರಾಗಿದ್ದ ಪರಿಣಾಮವಾಗಿ ದೈಹಿಕವಾಗಿ ದುರ್ಬಲರಾಗಿದ್ದರು. ಹೃದಯ ಶೂನ್ಯ ಕಾದಂಬರಿಕಾರನಾದ ನೀನು ತಮಗೆ ಹಣ ಜೋಡಿಸುವುದು ಬೇಡ, ಆದರೆ ನೀನು ನಮ್ಮಿಬ್ಬರನ್ನು ನಿನ್ನ ಬೆಂಗಳೂರಿನ ಮಿತ್ರದ್ವಯರ ವ್ಯಕ್ತಿತ್ವದೊಳಗೆ ಸಮೀಕರಿಸು, ಅಥವಾ ನಮ್ಮ ವ್ಯಕ್ತಿತ್ವದೊಳಗೆ ಅವರನ್ನು ಅಳವಡಿಸಿ ಪುಣ್ಯ ಕಟ್ಟಿಕೊಳ್ಳು ಎಂದು ಪೀಡಿಸಲಾರಂಭಿಸಿದಂತೆ ಭಾಸವಾಯಿತು. ಕಾರಣ ಅವೆರಡೂ ಪಾತ್ರಗಳು ಬೆಂಗಳೂರಿನಂಥ ನಗರದ ಹೆಸರನ್ನು ಕೇಳಿಸಿಕೊಂಡಿದ್ದವೇ ಹೊರತು ನೋಡಿರಲಿಲ್ಲ, ಅವರಿಬ್ಬರ ದೇಹಗಳಲ್ಲಿ ನೆಲೆಯೂರಿ ಬೆಂಗಳೂರಿಗೆ ಹೋಗುವುದು, ಅಲ್ಲಿನ ಕಾರ್ಮಿಕ ಸಂಘಟನೆಗಳ ಮುಖಂಡರಾಗಿ ಹೋರಾಡುತ್ತ ನೆಮ್ಮದಿಯಿಂದಿರುವುದು ಎಂಬಿವೇ ಮೊದಲಾದ ಕನಸುಗಳನ್ನು ಕಾಣುತ್ತಿದ್ದವು, ಕೃಷಿ ಕಾರ್ಮಿಕರಿಗಿಂತ ಕಾರ್ಖಾನೆಗಳ ಕಾರ್ಮಿಕರೇ ವಾಸಿ ಎಂದು ಅವು ನಿರ್ಧರಿಸಿರುವಂತಿರುವುದು.

ಯೋಚಿಸಿದೆ, ತಕ್ಕಡಿಯ ಒಂದು ಪಗಡೆಯಲ್ಲಿ ದಯಾನಂದ ಪನ್ನಂಗಧರರನ್ನೂ, ಇನ್ನೊಂದು ಪಗಡಿಯಲ್ಲಿ ಚಕ್ರವರ್ತಿ ಚೌಗಲೆಯವರನ್ನು ಇರಿಸಿ ತೂಗಿ ಪರಿಶೀಲಿಸಿದೆ, ಪಗಡಿಗಳು

ಸರಿಸಮಕ್ಕೆ ತೂಗಿದವು, ಅವುಗಳು ಆಸೆ ಪಡುತ್ತಿರುವುದೇನೋ ಸರಿ. ಹಾಗೆ ಮಾಡಿದಲ್ಲಿ ನನ್ನ ಕಾದಂಬರಿಯ ಗತಿ ಏನಾಗಬೇಡ! ಅದೂ ಅಲ್ಲದೆ ನನಗೆ ನಗರ ಕೇಂದ್ರಿತ ಅನುಭವಗಳು ಶೂನ್ಯ ಬೇರೆ. ಅವುಗಳ ಬೇಡಿಕೆಗಳನ್ನು ಒಂದು ಪಕ್ಕಕ್ಕಿರಿಸಿ ಶಶಾಂಕನೆಂಬ ತರುಣ ಮಗನ, ಹರಿಶ್ಚಂದ್ರರೆಡ್ಡಿಯಂಥ ವೃದ್ಧ ತಂದೆಯ ಮುಖಾಮುಖಿ ಸಂದರ್ಭ ಕುರಿತು ಸೂಚ್ಯವಾಗಿ ವಿವರಿಸಿದೆ, ಅದಕ್ಕೆ ಸಂಬಂಧಿಸಿದ ಕೆಲವು ಪುಟಗಳ ಒಕ್ಕಣಿಕೆಯನ್ನೂ ವಾಚಿಸಿದೆ. ಅದನ್ನೆಲ್ಲ ಕೇಳಿಸಿಕೊಂಡ ಚಕ್ರವರ್ತಿ ಏನನ್ನೂ ಪ್ರತಿಕ್ರಿಯಿಸಲಾಗದೆ ತಡವರಿಸಿದ, ಇದೇ ಕಾದಂಬರಿಯ ವಸ್ತುವನ್ನು ಆಧರಿಸಿ ಸಿನೆಮಾ ತೆಗೆದಲ್ಲಿ ಸ್ವರ್ಣ ಕಮಲ ಲಭಿಸದಿದ್ದರೂ ರಜತ ಕಮಲಕ್ಕೆ ದೋಖಾ ಇಲ್ಲ, ಆದರೆ ಸಮಶೀತೋಷ್ಣ ಹವಾಮಾನಕ್ಕೆ ಹೊಂದಿಕೊಂಡಿರುವ ಬೆಂಗಳೂರಿನ ಸಿನೆಮಾ ತಂತ್ರಜ್ಞರು ವಾಗಿಲಿಯ ಬಿರುಬಿಸಿಲಿನ ವಾತಾವರಣಕ್ಕೆ ಹೊಂದಿಕೊಳ್ಳುವರೋ ಇಲ್ಲವೋ ಎಂಬ ಸಂದೇಹ ವ್ಯಕ್ತಪಡಿಸಿದ. ಹಾಗೆಯೇ ಇಮ್ಮಡಿಗೊಳ್ಳುವ ಸಿನೆಮಾ ಬಡ್ಜೆಟ್ ಕುರಿತಂತೆಯೂ ಯೋಚಿಸಿದ.

ಆದರೆ ನಾನು ಬರೆದಿರುವುದು ಬರೆಯುತ್ತಲೇ ಇರುವುದು ಸಿನೆಮಾಕ್ಕಲ್ಲವೇ ಅಲ್ಲ, ಸೃಜನಶೀಲ ಆತ್ಮತೃಪ್ತಿ ಸಲುವಾಗಿ. ಶಶಾಂಕನೊಳಗೆ ತಂದೆ ಆಶ್ರಯ ಪಡೆಯುವುದು ಸೂಕ್ತವೋ, ಹರಿಶ್ಚಂದ್ರರೆಡ್ಡಿಯೊಳಗೆ ಮಗ ಆಶ್ರಯ ಪಡೆಯುವುದು ಸೂಕ್ತವೋ ಎಂಬ ಸಮಸ್ಯೆಯನ್ನು ನೀಗಿಸಿಕೊಳ್ಳುವ ಸಲುವಾಗಿ. ಪರಸ್ಪರ ದೇಹಗಳನ್ನು ಆಶ್ರಯಿಸುವುದಾಗಲೀ ದೇಹಗಳನ್ನು ವಿನಿಮಯ ಮಾಡಿಕೊಳ್ಳುವುದಾಗಲೀ, ಸ್ಮೃತಿ ವಿಸ್ಮೃತಿಗಳಿಗಾಗಲೀ ಭಾರತೀಯತೆಗೆ ಹೊಸದೇನೂ ಅಲ್ಲ, ಅದಕ್ಕೆ ಪುರಾಣ ಪುಣ್ಯಕಥೆಗಳಲ್ಲಿ ಸಾಕಷ್ಟು ನಿದರ್ಶನಗಳಿರುವವು, ವ್ಯಾಸನೇ ಇದನ್ನು ತನ್ನ ಮಹಾಭಾರತದ ಶಾಂತಿ ಪರ್ವದಲ್ಲಿ ಪ್ರಸ್ತಾಪಿಸಿರುವನೆಂದು ಹೇಳಿದೆ, ಸಮಯ ಸಂದರ್ಭಾನುಸಾರ ದೇಹಗಳನ್ನು ಬದಲಾಯಿಸುವ ಆತ್ಮಗಳ ಪರಿಕಲ್ಪನೆ ಕುರಿತಂತೆ ವಿವರಿಸಿದೆ, ಮಹಾಭಾರತ ರಾಮಾಯಣದಂಥ ಮಹಾಕಾವ್ಯಗಳೊಂದೇ ಅಲ್ಲದೆ ಜಾನಪದರ ಮೌಖಿಕ ಕಾವ್ಯಗಳನ್ನೂ ಇಂಥ ನಿದರ್ಶನಗಳಿರುವುದಾಗಿ ವಿವರಿಸುವುದನ್ನು ಮರೆಯಲಿಲ್ಲ. ಯಯಾತಿ ಎಂಬ ವೃದ್ಧ ತಂದೆ ಪೂರು ಎಂಬ ತನ್ನ ಮಗನ ತಾರುಣ್ಯವನ್ನು ಆವಹಿಸಿಕೊಳ್ಳುವ ಪರಿ ಕುರಿತು ಯಾರು ಯೋಚಿಸುವರೋ ಅವರೇ ಒಳ್ಳೆಯ ನಿರ್ದೇಶಕರು ಎಂದು ಹೇಳಿದ್ದಕ್ಕೆ ಆತ ಒಂದುಕ್ಷಣ ತಬ್ಬಿಬ್ಬುಗೊಂಡ, ಬೆಂಗಳೂರಿನ ಬಿಷಪ್ ಕಾಟನ್ ಸ್ಕೂಲಿನ ವಿದ್ಯಾರ್ಥಿಯಾದ ತಾನು ವಿದೇಶಿ ಪೌರಾಣಿಕ ಮತ್ತು ಆಧುನಿಕ ಸಾಹಿತ್ಯವನ್ನು ಅಲ್ಪಸ್ವಲ್ಪ ಓದಿರುವುದಾಗಿಯೂ, ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳ ಸಾಹಿತ್ಯವನ್ನು ಓದಿಯೇ ಇಲ್ಲವೆಂದು ಪ್ರಾಮಾಣಿಕವಾಗಿ ಹೇಳಿದ. ಸಾಹಿತ್ಯದ ಭಾಷೆಯೇ ಬೇರೆ, ಸಿನೆಮಾದ ಭಾಷೆಯೇ ಬೇರೆ ಎಂದು ಬಾಲಿಶವಾಗಿ ಹೇಳಿದ್ದು ನನಗೆ ಸರಿ ಎನ್ನಿಸಲಿಲ್ಲ. ಪ್ರತಿಯೊಂದು ಕಲಾಪ್ರಾಕಾರಗಳಲ್ಲೂ ಸಾಹಿತ್ಯ ಹಾಸುಹೊಕ್ಕಾಗಿರುವಿರುವುದೆಂದು ಹೇಳುವ ಪ್ರಯತ್ನ ಮಾಡಿದೆ, ಅದಕ್ಕೆ ಏನೂ ಹೇಳಲು ತೋಚದೆ ತಲೆಯನ್ನು ಕೆರೆದುಕೊಂಡ, ಇನ್ನು ಮುಂದೆ ಗಂಬೀರ ಸಾಹಿತ್ಯಿಕ ಕೃತಿಗಳನ್ನು ಅಧ್ಯಯನ ಮಾಡುವುದಾಗಿ ಹೇಳಿದ. ಸೊಲೊಪ್ಪಿಕೊಂಡವನೆದುರು, ಪೌರಾಣಿಕ ಪ್ರಜ್ಞೆ ಇಲ್ಲದವನೆದುರು, ಪ್ರತಿಯೊಂದನ್ನೂ ಸಿನೆಮಾ ಮಾಪನದಿಂದ ಅಳೆಯುವವನ ಎದುರು ಚರ್ಚೆಯನ್ನು ಮುಂದುವರೆಸುವುದು ವೃಥಾ ಎಂದು ಭಾವಿಸಿ ಕಾದಂಬರಿಯ ಹಸ್ತಪ್ರತಿಯನ್ನು ಕಪಾಟಿನಲ್ಲಿರಿಸಿದೆ, ಕ್ಷಮೆಯ ಮೂಲಕ ಆತನಲ್ಲಿನ ಬೇಸರವನ್ನು ಹೋಗಲಾಡಿಸುವ ಪ್ರಯತ್ನದಲ್ಲಿದ್ದಾಗಲೇ..

ಚೌಗಲೆ ತಾಲೀಮಿನ ಉಪಟಳದ ನಡುವೆಯೂ ಗೆಲುವಿನ ಮುಖ ಹೊತ್ತು ಮರಳಿದ್ದು. ಗ್ರಾಮೀಣ ಪ್ರದೇಶದಲ್ಲಿ ನಾಟಕಗಳನ್ನು ಕಲಿಸುವ ಮಾಸ್ತರರು ಅವರೋಹಣಕ್ಕಿಂತ ಆರೋಹಣಕ್ಕೆ ಪ್ರಥಮ ಪ್ರಾಶಸ್ತ್ಯ ನೀಡುವುದು ಎಷ್ಟರಮಟ್ಟಿಗೆ ಸರಿ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಲೇ ಬೀಸಣಿಕೆಯಿಂದ ಗಾಳಿ ಹಾಕಿಕೊಳ್ಳಲಾರಂಭಿಸಿದ್ದು. ಒಂದು ನೆಮ್ಮದಿಯ ಸಂಗತಿ ಎಂದರೆ ಕರೂರು ತಿಮ್ಮಪ್ಪ ತನ್ನ ಪೂರ್ವಾಪರ ತಿಳಿದೊಡನೆ ಹ್ಹಾ ನೀವು ನಮ್ಮ ಸ್ಟೆಲ್ಲಮ್ಮ ಅಂದರೆ ರೇಣುಕಮ್ಮನವರ ಮಗನೇನು ಎಂದು ಆಶ್ಚರ್ಯಪಟ್ಟರಂತೆ! ಕಾರಣ ಆಕೆ ತನ್ನ ಮೆಚ್ಚಿನ ಶಿಷ್ಯೆಯಂತೆ! ಆಕೆ ತನ್ನ ಎಳೆಯ ಕೂಸನ್ನು ಕಂಕುಳಲ್ಲಿರಿಸಿಕೊಂಡೇ ತಾಲೀಮಿಗೆ ಬರುತ್ತಿದ್ದಳಂತೆ! ಆ ಕೂಸೇ ತಾನೆಂದು ತಿಳಿದೊಡನೆ ಕಣ್ಣುಗಳನ್ನು ಆನಂದಬಾಷ್ಪಗಳಿಂದ ತುಂಬಿಕೊಂಡರಂತೆ! ಎಂಥ ಅದೃಷ್ಟವಂತ ತಾನು ಎಂದು ಅಪ್ಪಿಕೊಂಡು ಅಭಿನಂದಿಸಿದರಂತೆ! ತನ್ನ ತಾಯಿಯ ಗುರುಗಳಲ್ಲಿ ಶಿಷ್ಯತ್ವವೆಂದರೆ ಸಾಮಾನ್ಯ ಸಂಗತಿಯೆ! ತಾನು ಹೇಮರೆಡ್ಡಿ ಪಾತ್ರವಹಿಸುತ್ತಿರುವುದು ಸಾಮಾನ್ಯ ಸಂಗತಿಯೆ! ಚೌಗಲೆ ಭಾವಪರವಶತೆಯಿಂದ ಏನೆಲ್ಲ ಹೇಳಿಕೊಂಡ. ಆತನ ಉತ್ಸಾಹದ ಪ್ರವಾಹದೆದುರು ಚಕ್ರವರ್ತಿಯ ಸಿನೆಮಾ ಆಲೋಚನೆ ಕಳೆಗುಂದದೆ ಇರಲಿಲ್ಲ, ಕಾರಣ ತಾನು ಕೀಳರಿಮೆಯನ್ನು ಅನುಭವಿಸುತ್ತ ಮಂಕಾಗಿ ಕುಳಿತಿದ್ದ.

ಹೊತ್ತು ಉರುಳಿದಂತೆ ನಮ್ಮ ಮನೆಗೆ ಬಂದು ಚೌಗಲೆಯನ್ನು ಅಭಿನಂದಿಸುವವರ ಸಂಖ್ಯೆ ಹೆಚ್ಚುತ್ತಲೇ ಹೋಯಿತು, ಅದೂ ಬರಿಗೈಯಲ್ಲಿ ಅಲ್ಲ, ಏನಾದರೊಂದು ತಿಂಡಿ ತಿನಿಸುಗಳನ್ನು ಹಿಡಿದುಕೊಂಡು ಬರುತ್ತಿದ್ದವರೋ! ತಮ್ಮ ತಮ್ಮ ಮನೆಗಳಿಗೆ ಊಟಕ್ಕೆ ಆಮಂತ್ರಿಸುತ್ತಿದ್ದವರೋ! ಕೈಕುಲುಕಿ ಅಭಿನಂದಿಸುತ್ತಿದ್ದವರೋ! ಅವರೆಲ್ಲರ ನಡುವೆ ಆ ನಾಟಕದ ಪೋಷಕ ಪಾತ್ರಧಾರಿಗಳು ಇಲ್ಲದಿರಲಿಲ್ಲ. ಅಡಿಯಿಂದ ಮುಡಿವರೆಗೆ ನೋಡಿ ಹೇಮರೆಡ್ಡಿ ಎಂದರೆ ಹೇಮರೆಡ್ಡಿ ಎಂದು ಹೊಗಳುತ್ತಿದ್ದವರೋ! ಆ ಎಲ್ಲಾ ಕ್ರಿಯೆಗಳಿಂದಾಗಿ ಚೌಗಲೆ ಹೇಮರೆಡ್ಡಿಯ ಪಾತ್ರವನ್ನು ಆವಹಿಸಿಕೊಳ್ಳುತ್ತಲೇ ಹೋದ. ನಾಟಕ ಕರ್ತೃ ನಲವಡಿ ಶ್ರೀಕಂಠಶಾಸ್ತ್ರಿಗಳನ್ನು ತನ್ನ ಮನಸ್ಸಿನಲ್ಲಿ ಧೇನಿಸಿಕೊಳ್ಳುತ್ತಲೇ ಸಾಗಿದ. ತನ್ನ ಅಂತರಂಗವನ್ನೇ ರಂಗಸಜ್ಜಿಕೆಯನ್ನಾಗಿ ಪರಿವರ್ತಿಸಿಕೊಂಡು ಅಭಿನಯಿಸುತ್ತಲೇ ಹೋದ ಆತ ನಮ್ಮ ಮಾತಿಗೆ ನಿಲುಕದ ರೀತಿಯಲ್ಲಿ ದೂರ ದೂರಕ್ಕೆ ಹೋದ. ಆದರೆ ನಾವಿಬ್ಬರು ಮಾತ್ರ ಮೂಕ ಪ್ರೇಕ್ಷಕರಾಗಿ ಉಳಿದು ಸಹಕರಿಸಿದೆವು, ಅದೇ ಸಮಯಕ್ಕೆ ಸರಿಯಾಗಿ ಆಗಮಿಸಿದ ಕಂಪನಿ ಮಾಲಕ ಜಲಂಧರನು..

++++

ಇತ್ತ ಮಧ್ಯಾಹ್ನವೂ ಆಲ್ಲದ ಅತ್ತ ಸಾಯಂಕಾಲವೂ ಅಲ್ಲದ ಹೊತ್ತಿನಲ್ಲಿ ವಾಗಿಲಿಗೆ ದಶದಿಕ್ಕುಗಳಿಂದ ಹಾದಿಗಳು ಎಲ್ಲಂದರಲ್ಲಿ ಮೂಡಿದವು, ಆ ಹಾದಿಗಳ ಮೂಲಕ ಬಂಡಿಬಡಗೋಲುಗಳು ಬಂದರೆ, ಪಕ್ಕಾ ರಸ್ತೆಯ ಮೂಲಕ ಖಾಸಗಿ ವಾಹನಗಳೊಂದೇ ಅಲ್ಲದೆ ಸರ್ಕಾರಿ ವಾಹನಗಳು ಬಂದು ಸೇರಿದವು, ಅದಲ್ಲದೆ ನಡೆದುಕೊಂಡು ಬರಲಾರಂಭಿಸಿದವರಿಗೂ ಬರವಿರಲಿಲ್ಲ. ಮೊದಲೇ ಇಷ್ಟಿದ್ದ ಜನಸಂಖ್ಯೆ ಹೊತ್ತಿಳಿಯುವಷ್ಟರಲ್ಲಿ ಅಷ್ಟಾಯಿತು. ಅವರೆಲ್ಲರ ಅಭಿರುಚಿಗೆ ತಕ್ಕಂಥ ಹೋಟಲುಗಳು ಅಲ್ಲಲ್ಲಿ ಮೊಳೆಯದೆ ಇರಲಿಲ್ಲ. ಅವರೆಲ್ಲರ ಪೈಕಿ ಬಹುತೇಕ ಮಂದಿ ವಾಗಿಲಿಗೆ ಹೊಸಬರಾಗಿರಲಿಲ್ಲ. ಅವರೆಲ್ಲ ತಮ್ಮ ತಮ್ಮ ನೆಂಟರಿಷ್ಟರ ಮನೆಗಳಿಗೋ, ತಮ್ಮ ತಮ್ಮ ಚಿರಪರಿಚಯಸ್ಥರ ಮನೆಗಳಿಗೋ ಹೋಗಿ ತಮ್ಮ

ತಮ್ಮ ಕ್ಷುದ್ಬಾದೆ ತೀರಿಸಿಕೊಂಡು ಗೆಲುವಾದರೆ ತೀರಾ ಹೊಸಬರು ಹೆಬ್ಬಟಂ ಗೌಡರು ಏರ್ಪಡಿಸಿದ್ದ ದಾಸೋಹದ ಅಡ್ಡೆ ಕಡೆ ದೌಡಾಯಿಸಿ ಸೇರಿದಷ್ಟು ಆಹಾರ ಸೇವಿಸಿ ಅನ್ನದಾತರ ಗುಣಗಾನ ಮಾಡಲಾರಂಭಿಸಿದರು. ಆತಂಕದ ಸಂಗತಿಯೋ! ಸಂತೋಷದ ಸಂಗತಿಯೋ! ಅಲಿ ಮತ್ತು ಹೆಬ್ಬಾರ್ ಇಲಾಹಿಯಲ್ಲಿಳಿದವರೆ ನೇರವಾಗಿ ನಮ್ಮ ಮನೆಗೆ ಬಂದರು. ಬಂದವರೆ ಕೈಕಾಲುಗಳಿಗೆ ನೀರು ಹಾಕಿಕೊಳ್ಳದೇನೆ ನನ್ನ ಮನೆಯನ್ನು ಅಮೂಲಾಗ್ರ ಪರಿಚಯ ಮಾಡಿಕೊಂಡರು, ಬೆಂಗಳೂರಿನ ಮಿತ್ರದ್ವಯರಿರದಿದ್ದಲ್ಲಿ ತಮ್ಮ ನಾಲಗೆಗಳನ್ನು ಹರದಾರಿ ಉದ್ದಕ್ಕೆ ಚಾಚುತ್ತಿದ್ದರೇನೊ! ಅದೂ ಅಲ್ಲದೆ ಕೈತುಂಬ ಕೆಲಸಗಳಿದ್ದ ನನಗೂ ಅವರನ್ನು ಪರಾಂಬರಿಸಲು ಪುರುಸೊತ್ತಿರಲಿಲ್ಲ ಬೇರೆ. ಅವರ ಪಾಡಿಗೆ ಅವರು, ನನ್ನ ಪಾಡಿಗೆ ನಾನು! ಮಫ್ತಿಯನ್ನೂ ಕರ್ತವ್ಯವನ್ನೂ ಏಕಕಾಲಕ್ಕೆ ನಿಭಾಯಿಸುವ ಸಲುವಾಗಿ ಆಗಮಿಸಿದ್ದ ಅಲಿಯು ತನ್ನ ಜೇಬಿನಲ್ಲಿದ್ದ ಪರಿಕರಗಳನ್ನು ಒಮ್ಮೆ ಪರಿಶೀಲಿಸಿದಾದ ಬಳಿಕ ಹೊರಗೆ ಹೋದನು.

ನಿರೀಕ್ಷೆಗಿಂತ ಮೊದಲೆ ಸಂಜೆ ಆವರಿಸಿತು, ಶೇಷಣ್ಣ ಬಂದು ಹೋದ ನಂತರ ಅಯ್ಯಾಳಿ ಹೀಗೆ ಬಂದು ಕರೆದಂತೆ ಮಾಡಿ ಹಾಗೆ ಹೋದನು. ಇನ್ನು ಕರೆಸಿಕೊಳ್ಳುವುದು ತರವಲ್ಲವೆಂದು ನಾನು ಭಾಷಣಗಳ ಪ್ರತಿಗಳನ್ನು ಜೇಬಿನಲ್ಲಿರಿಸಿಕೊಂಡು ಹೊರಗಡೆ ಹೊರಡುವ ಮೊದಲು ಚಕ್ರವರ್ತಿಗೆ, ಹೆಬ್ಬಾರಗೆ ಕೆಲವು ಸಲಹೆ ಸೂಚನೆಗಳನ್ನು ನೀಡುವುದನ್ನು ಮರೆಯಲಿಲ್ಲ. ಆದರೆ ಚೌಗಲೆ ಮಾತ್ರ ನಮ್ಮೆಲ್ಲರಿಗಿಂತ ಮೊದಲೇ ಹೋಗಿ ಸಮಾರಂಭ ನಡೆಯುವ ಸ್ಥಳವನ್ನು ಸೇರಿಕೊಂಡಿದ್ದನು. ಸೇರುವಷ್ಟರಲ್ಲಿ ಶಾಮಿಯಾನದ ತುಂಬೆಲ್ಲ ಜನ ನಿರೀಕ್ಷೆಗೆ ಮೀರಿ ಜಮಾಯಿಸಿದ್ದರು. ಕೆಲವರು ವೇದಿಕೆ ಮೇಲೆ ಕುರ್ಚಿಗಳನ್ನು ಹಾಕುವ ಕೆಲಸ ಮಾಡುತ್ತಿದ್ದರೆ ಇನ್ನೂ ಕೆಲವರು ಧ್ವನಿವರ್ಧಕದ ಮೂಲಕ ಜನರ ಗಲಾಟೆಯನ್ನು ನಿಗ್ರಹಿಸುವ ಕೆಲಸದಲ್ಲಿ ನಿರತರಾಗಿದ್ದರು. ಆದರೆ ಮಕ್ಕಳು ಮರಿಗಳ ರೌರವ ಅರಚಾಟವನ್ನು ನಿಯಂತ್ರಿಸುವುದು ಎಂಥವರಿಗೂ ಸಾಧ್ಯವಿರಲಿಲ್ಲ. ಸ್ಥಳೀಯ ಚಿಲ್ಲರೆ ವರ್ತಕರೊಂದೇ ಅಲ್ಲದೆ ಪರ ಊರಿನ ವರ್ತಕರೂ ಸೇರಿಕೊಂಡು ಪ್ರೇಕ್ಷಕ ಮಹೋದಯರಿಗೆ ಚಿಕ್ಕಪುಟ್ಟ ತಿಂಡಿ ತಿನಿಸುಗಳನ್ನು ಮಾರುವ ಕೆಲಸಕ್ಕೆ ತಿರುಗಾಡುತ್ತ ತೊಡಗಿದ್ದರು. ಅಲ್ಲಿನ ವಿದ್ಯಾಮಾನಗಳನ್ನು ಗಮನಿಸುತ್ತಲೇ ನಿಂತಿದ್ದ ನನ್ನನ್ನು ದೂರದಿಂದಲೇ ಗಮನಿಸಿದ ಸ್ವಾಮಿದ್ವಯರ ಪೈಕಿ ಪಂಪಯ್ಯ ಓಡಿ ಬಂದವನೆ ನನ್ನ ಮುಂಗೈ ಹಿಡಿದು ವೇದಿಕೆ ಕಡೆ ಕರೆದೊಯ್ದನು. ಆತ ನನ್ನಿಂದ ಅಗಲುವ ಮೊದಲು ನನ್ನ ಬಳಿ ಭಾಷಣಗಳ ಪ್ರತಿಗಳು ಇರುವವೋ ಇಲ್ಲವೋ ಎಂಬುದನ್ನು ಕೇಳಿ ಖಚಿತಪಡಿಸಿಕೊಳ್ಳದೆ ಇರಲಿಲ್ಲ. ವೇದಿಕೆ ಒಂದು ಪಕ್ಕ ನಾಟಕದ ಕಲಾವಿದರೂ, ಇನ್ನೊಂದು ಪಕ್ಕ ಕಾರ್ಯಕ್ರಮ ನಿರ್ವಾಹಕರೂ ಬೀಡುಬಿಟ್ಟಿದ್ದರಲ್ಲದೆ ತಮ್ಮ ತಮ್ಮ ಕೆಲಸ ಕಾರ್ಯಗಳಲ್ಲಿ ನಿಮಗ್ನರಾಗಿದ್ದರು. ಆದರೆ ಅವರ ಪೈಕಿ ಯಾರೊಬ್ಬರ ಗಮನವೂ ನನ್ನ ಕಡೆ ಇರಲಿಲ್ಲ. ಕಾಲಕ್ಷೇಪದ ಸಲುವಾಗಿ ಒಂದು ಕಡೆ ಕುಳಿತದ್ದಾಯಿತು, ಹಲವು ಕಡೆ ನಿಂತದ್ದೂ ಆಯಿತು, ಕುಂತೂ ನಿಂತೂ ಒಂದೆರಡು ಸುತ್ತು ತಿರುಗಾಡಿದ್ದೂ ಆಯಿತು.

ಕಾರ್ಯಕ್ರಮವನ್ನು ನಿರೂಪಿಸುವ ಸಲುವಾಗಿ ಆದವಾನಿಯ ಡಿಎಲ್ಡಿ ಕಾಲೇಜಿನಿಂದ ವಿಶೇಷವಾಗಿ ಆಗಮಿಸಿದ್ದ ರುಕ್ಮಿಣಿ ದೂರದಿಂದ ಗಮನಿಸಿದಾದ ಬಳಿಕ ಹತ್ತಿರ ಬಂದು ಮಾತನಾಡಿಸಿದಳು, ಶೇಕಡಾ ಎಪ್ಪತ್ತರಷ್ಟು ತೆಲುಗು ಭಾಷೆಯನ್ನೂ ತನ್ನ ತವರು ಕಡೆಯಿಂದಲೂ, ಶೇಕಡಾ ಮುವ್ವತ್ತರಷ್ಟು ಕನ್ನಡ ಭಾಷೆಯನ್ನೂ ಗಂಡನ ಮನೆ ಕಡೆಯಿಂದಲೂ ಬಲ್ಲವಳಾದ ತಾನು ಅವೆರಡೂ ಭಾಷೆಗಳ ಮಿಶ್ರಣದಿಂದ ವಾಗಿಲಿಯನ್ನೂ ಅಭಿವೃದ್ಧಿ ಹರಿಕಾರ ಹೆಬ್ಬಟಂ

ಗೌಡರನ್ನೂ ಶ್ಲಾಘಿಸುವುದನ್ನು ಮರೆಯಲಿಲ್ಲ. ಆಕೆ ಇನ್ನೇನನ್ನೋ ಹೇಳಲೆಂದು ತನ್ನ ತುಟಿಗಳನ್ನು ಸರಿಪಡಿಸಿಕೊಳ್ಳುತ್ತಿರುವಷ್ಟರಲ್ಲಿ ಇನ್ನೊಂದು ಕಡೆಯಿಂದ ಆಗಮಿಸಿದ ರಂಗನಾಥರಾವ್ ಸಹ ನನಗೆ ಪರಿಚಿತನೆ! ತನ್ನ ಮಾತೃಭಾಷೆ ಕನ್ನಡವಾಗಿದ್ದರೂ ತನ್ನ ಹೆಂಡತಿ ಕಡೆಯಿಂದ ತೆಲುಗು ಭಾಷೆಯನ್ನು ತಿಳಿದುಕೊಂಡಿದ್ದನಲ್ಲದೆ ನನ್ನ ಕೆಲವು ಕಥೆಗಳನ್ನು ಕನ್ನಡದಿಂದ ತೆಲುಗು ಭಾಷೆಗೆ ಅನುವಾದಿಸಿದ್ದನು. ಇಂಕೇಮಿ ಬರೆದಿರುವಿರಿ ಎಂದು ಆತ ಕೇಳಿದೊಡನೆ ಪಿಸಕ್ಕನೆ ನಕ್ಕ ರುಕ್ಮಿಣಿ ಭಾಷಾದೋಷವನ್ನು ಸರಿಪಡಿಸುವುದೋ ಬೇಡವೋ ಎಂದು ಲೆಕ್ಕ ಹಾಕುತ್ತಿರುವಷ್ಟರಲ್ಲಿ ದೂರದಲ್ಲಿ ಎರಡು ಕಾರುಗಳು ಎಬ್ಬಿಸಿದ ಧೂಳು ನಿಧನಿಧಾನವಾಗಿ ವೇದಿಕೆ ಕಡೆ ದಾಂಗುಡಿ ಇರಿಸಿತು. ಅದುವರೆಗೆ ಮೈಕ್ ಟೆಸ್ಟಿಂಗ್ ಒನ್ನ ಟೂ ತ್ರೀ ಎಂದು ಹೇಳುತ್ತಿದ್ದ ಸೀನಪ್ಪ ವಾಗಿಲಿಯ ಕಣ್ಮಣಿ, ಬಡವರ ಬಂಧು ಹೆಬ್ಬಟಂ ಗೌಡರು ಆಗಮಿಸುತ್ತಿರುವೆಂದು ಸಾರಿದರ್; ಆತನಿಂದ ಮೈಕನ್ನು ಕಸಿದುಕೊಂಡ ಎಂಟ್ರಾಮುಡು 'ರಾಯಲಸೀಮಾ ಪುಲಿ, ಯುವ ನೇತಾರ, ಸೂರ್ಯಪ್ರತಾಪ ದೊರೆಯೇ ನಿನಗಾರು ಸರಿಯೇ ಸರಿ ಎಂದವರ ಹಲ್ಲು ಮುರಿಯೇ ಬಹುಪರಾಕ್' ಎಂದು ಅಭಿಮಾನವನ್ನು ಕಾರಿಕೊಳ್ಳಲಾರಂಭಿಸಿದನು. ಇವರಿಬ್ಬರು ಹೋಗಿ ಧ್ವನಿವರ್ಧಕದ ಮೇಲಾಗುತ್ತಿದ್ದ ಅತ್ಯಾಚಾರವನ್ನು ತಡೆಯದಿದ್ದಲ್ಲಿ!

ಗಣ್ಯ ವ್ಯಕ್ತಿಗಳು ಅಗೋ ಅಲ್ಲಿ ಎಂದರೆ ದೂರದ ಹೊಲದಲ್ಲೆಲ್ಲೋ ಪಟಾಕಿಗಳ ಸದ್ದು ಕೇಳಿಸಿತು, ಕಾರಣ ಸಮಾರಂಭದ ಸುತ್ತಮುತ್ತ ಸ್ಫೋಟಕ ವಸ್ತುಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿತ್ತು, ಪೋಲಿಸರೊಂದೇ ಅಲ್ಲದೆ ಆಯಾ ರೆಡ್ಡಿಗಳ ಅಂಗರಕ್ಷಕರು ತಮಗೆ ಅನುಮಾನ ಬಂದ ವ್ಯಕ್ತಿಗಳ ಬಳಿಗೆ ಧಾವಿಸಿ ತಪಾಸಣೆ ನಡೆಸುತ್ತಿದ್ದರು, ಕೆಮೆರಾದಲ್ಲಿ ಯಾವುದೇ ಸ್ಫೋಟಕ ವಸ್ತುವಿಲ್ಲವೆಂದು ಖಚಿತಪಡಿಸಿಕೊಂಡ ಬಳಿಕವೇ ಚಕ್ರವರ್ತಿಯನ್ನು ವೇದಿಕೆಯ ಸನಿಹಕ್ಕೆ ಬಿಡಲಾಯಿತು, ತನ್ನನ್ನು ಶೋಧಿಸಲೆಂದು ಹತ್ತಿರ ಬಂದ ವ್ಯಕ್ತಿಯ ತಲೆಗೆ ಹುಸಿ ಏಟು ನೀಡಿದ ಹೆಬ್ಬಾರ್ ಏಮ್ರಾ ರಾಮುಡು ನೇನೆವರು ತೆಲುಸಾ ಎಂದೊಡನೆ ಆ ವ್ಯಕ್ತಿ ಓಯ್ ಅಯ್ಯವಾರು ಎಂದು ಉದ್ಗರಿಸಿ ಆತನನ್ನು ಒಳಗೆ ಬಿಟ್ಟನು. ವೇದಿಕೆಗೆ ಹತ್ತಿರವಾದಂತೆ ಗಣ್ಯವ್ಯಕ್ತಿಗಳು ಒಬ್ಬೊಬ್ಬರಾಗಿ ಖಚಿತವಾಗಲಾರಂಭಿಸಿದರು. ನಿನ್ನೆ ದಿವಸ ಗಲಾಟೆಗೆ ಕಾರಣರಾಗಿದ್ದವರ ಪೈಕಿ ಬುಡ್ಡಾ ರಾಜಾರೆಡ್ಡಿಯವರನ್ನು ಮಾತ್ರ ಗುರುತಿಸಿದೆ, ನಾಟಕವನ್ನು ಉದ್ಘಾಟಿಸಬೇಕಿದ್ದ ಚೆಲ್ಲಾವರಾಗಲೀ, ಬಹುಮಾನಗಳನ್ನು ವಿತರಿಸಬೇಕಿದ್ದ ಕಪ್ಪಟ್ರಾಳ್‌ರವರಾಗಲೀ ಗೋಚರಿಸಲಿಲ್ಲ, ಪ್ರಾಯಶಃ ಅವರೆಲ್ಲ ಹೊರಟು ಹೋಗಿರಬಹುದೆಂದು ಊಹಿಸಿದೆ. ಅವರೆಲ್ಲರಗಿಂತ ಮೊದಲೇ ಆಗಮಿಸಿದ ಹೆಬ್ಬಟಂ ಗೌಡರು ವೇದಿಕೆ ಏರಿದೊಡನೆ ಪ್ರೇಕ್ಷಕರ ಕಡೆ ಕೈ ಬೀಸಿದರು, ಅದಕ್ಕೆ ಪ್ರತಿಯಾಗಿ ಪ್ರೇಕ್ಷಕರು ಕಿವಿಗಡಚಿಕ್ಕುವಂತೆ ಕರತಾಡನ ಮಾಡಿದರು. ತನ್ನ ತಂದೆಗಿಂತ ಸ್ವಲ್ಪ ತಡವಾಗಿ ಬಿರುಗಾಳಿ ಸದೃಶ ರೀತಿಯಲ್ಲಿ ವೇದಿಕೆಯನ್ನೇರಿದ ಸೂರ್ಯಪ್ರತಾಪರೆಡ್ಡಿ ಪ್ರೇಕ್ಷಕರ ಕಡೆ ದುರಾಭಿಮಾನದಿಂದ ನೋಡಿದ, ತನ್ನ ಪರ ಮೊಳಗಿದ ಘೋಷಣೆಗಳಿಗೆ ಪ್ರತಿಯಾಗಿ ಸ್ಪಂದಿಸಲಿಲ್ಲ, ನೇರವಾಗಿ ವೇದಿಕೆ ಎರಡೂ ಕಡೆ ಹೋಗಿ ಪರಿಶೀಲಿಸಿ ಪುನಃ ಕಾಣಿಸಿಕೊಂಡನು.

ಎಮ್ಮೆಲ್ಲೆ ರಾಜರತ್ನಂ ಒಂದು ತಾಸು ತಡವಾಗಿ ಆಗಮಿಸಿ ಅಧ್ಯಕ್ಷತೆ ವಹಿಸಿದೊಡನೆ ಕಾರ್ಯಕ್ರಮ ಆರಂಭಗೊಂಡಿತು. ಧ್ವನಿವರ್ಧಕದ ಎರಡೂ ಪಕ್ಕ ನಿಂತಿದ್ದ ರುಕ್ಮಿಣಿ, ರಂಗನಾಥರಾವ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮುದ್ದನಗಿರಿಯ ಸಂಗೀತ ಕಲಾನಿಧಿ ಬಿರುದಾಂಕಿತ ಕೃಷ್ಣಮೂರ್ತಿ ಮುತ್ತುಸ್ವಾಮಿ ದೀಕ್ಷಿತರ ಕೃತಿ ವಾತಾಪಿಯನ್ನು ಸುಶ್ರಾವ್ಯವಾಗಿ

ಹಾಡಿ ನೇಪಥ್ಯಕ್ಕೆ ಸರಿದ ಬಳಿಕ ಚಾಗನೂರು ಜನಾರ್ಧನರೆಡ್ಡಿ ಎಲ್ಲರನ್ನೂ ಸ್ವಾಗತಿಸಿದ. ಹೆಬ್ಬಟಂ ವಂಶದ ಮುದ್ದಾದ ಕರುಳ ಕುಡಿಗಳು ಅತಿಥಿಗಳ ಕೊರಳಿಗೆ ಹೂವಿನ ಮಾಲೆಗಳನ್ನು ಹಾಕಿದ್ದು ಮನೋಜ್ಞವೆನಿಸಿತು. ಗೌಡರು ಕಣ್ಸನ್ನೆ ಮೂಲಕ ನನ್ನನ್ನು ತಮ್ಮಲ್ಲಿಗೆ ಬರ ಮಾಡಿಕೊಂಡು ನನಗಷ್ಟೆ ಕೇಳಿಸುವಂತೆ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ ಮಾಹಿತಿ ನೀಡಿದರು. ನೇಪಥ್ಯಕ್ಕೆ ಸರಿದು ಭಾಷಣದಲ್ಲಿ ಅವುಗಳನ್ನು ಸೇರಿಸುವ ಪ್ರಯತ್ನ ಮಾಡಿದೆ. ಮಾರ್ಪಾಡು ಮಾಡಿದ ಭಾಷಣದ ಪ್ರತಿಯನ್ನು ಹಿಂದಿನಿಂದ ಬಂದು ಅವರ ಕೈಯಲ್ಲಿರಿಸಿ ಸ್ವಸ್ಥಾನ ತಲುಪಿದೆ.

ಅವರಿವರು ಮಾತನಾಡಿದ ಬಳಿಕ ಹೆಬ್ಬಟಂ ಗೌಡರ ಸರದಿ ಬಂತು. ನನ್ನ ಕಡೆ ಪ್ರಶ್ನಾರ್ಥಕ ದೃಷ್ಟಿ ಬೀರಿ ನಿಧಾನವಾಗಿ ಎದ್ದು ಮೆಲ್ಲಗೆ ನಡೆದು ಪೋಡಿಯಂ ತಲುಪಿದರು. ಭಾಷಣದ ಆರಂಭವಾಕ್ಯಗಳನ್ನು ಬಾಯಿಪಾಠ ಮಾಡಿದ್ದರಷ್ಟೆ, ನಿಚ್ಚಳವಾಗಿ ಆರಂಭಿಸಿದರು. ಮೊದಮೊದಲು ತಡವರಿಸಿದರಾದರೂ ಕೊನೆ ಕೊನೆಗೆ ತಮ್ಮಷ್ಟಕ್ಕೆ ತಾವೇ ಮಾತನಾಡಲಾರಂಭಿಸಿದರು. ಅವರ ಮಾತುಗಳಲ್ಲಿ ಗ್ರಾಮದಲ್ಲಿ ಪೂರ್ಣಗೊಂಡಿರುವ ಅಭಿವೃದ್ಧಿ ಕಾರ್ಯಗಳ ಜೊತೆಗೆ ಮಾಡಲೇಬೇಕಿರುವ ಕಾರ್ಯಗಳನ್ನು ಸಹ ಸೂಚ್ಯವಾಗಿ ಪ್ರಸ್ತಾಪಿಸಿದರು. ಬಳಿಕ ಅಪಾರ ಕರತಾಡನವನ್ನು ಸ್ವೀಕರಿಸಿ ತಮ್ಮ ಐದಿನ್ಯೈದು ನಿಮಿಷಗಳ ಭಾಷಣವನ್ನು ಯಶಸ್ವಿಯಾಗಿ ಮುಗಿಸಿದರು.

ನಂತರ ಪ್ರತಾಪರೆಡ್ಡಿಯ ಸರದಿ ಬಂತು. ನಾನು ಬರೆದುಕೊಟ್ಟಿದ್ದು ಒಂದಾದರೆ ತಾನು ಮಾತನ್ನು ಆರಂಭಿಸಿದ್ದೇ ಬೇರೆ ತರಹ. ಆತನ ಬಾಯಿಯಿಂದ ಕರ್ಣಕಠೋರ ಶಬ್ದಗಳು ಪುಂಖಾನುಪುಂಖವಾಗಿ ಉದುರಿದವು. ದೇಶದಾದ್ಯಂತ ಇರುವ ಎಲ್ಲಾ ರಾಜಕೀಯ ಮುಖಂಡರುಗಳನ್ನು ಅಶ್ಲೀಲ ಪದಗಳಿಂದ ಥಳಿಸುವ ಸಲುವಾಗಿ ತಾನು ಪ್ರಯತ್ನಿಸಿದಂತೆ ಭಾಸವಾಯಿತು. ನ್ಯಾಯಾಂಗ ವ್ಯವಸ್ಥೆಯನ್ನು ಪರೋಕ್ಷ ಭಾಷೆಯಿಂದಲೂ, ಪೋಲಿಸ್ ವ್ಯವಸ್ಥೆಯನ್ನು ಪ್ರತ್ಯಕ್ಷ ಭಾಷೆಯಿಂದಲೂ ಟೀಕಿಸಿದ, ಭೂಸುಧಾರಣೆ ಕಾನೂನುಗಳಿಂದ ಜಮೀನ್ದಾರರನ್ನು ದುರ್ಬಲಗೊಳಿಸಿದರೆ ದೇಶದಲ್ಲಿ ಅರಾಜಕತೆ ಉಂಟಾಗುವುದೆಂದೂ, ಜಮೀನ್ದಾರರ ಹಿತಾಸಕ್ತಿ ಕಾಪಾಡಲು ಶೂದ್ರರೂ ದಲಿತರು ಒಗ್ಗಟ್ಟಿನಿಂದ ಶ್ರಮಿಸಬೇಕೆಂದೂ ಹೇಳಿದನು. ಜಮೀನ್ದಾರರೇ ದೇಶದ ಬೆನ್ನೆಲುಬು ಎಂದು ಭಾಷಣದ ಕೊನೆಗೆ ಹೇಳುವುದನ್ನು ತಾನು ಮರೆಯಲಿಲ್ಲ, ಆ ಉದಯೋನ್ಮುಖ ರಾಜಕಾರಣಿ ಭಾಷಣ ಮಾಡುತ್ತಿದ್ದಾಗ..

ಸಮಾರಂಭದ ಅಧ್ಯಕ್ಷ ಸ್ಥಾನದಲ್ಲಿದ್ದ ಶಾಸಕ ರಾಜರತ್ನಂ ಖಾದಿ ಉತ್ತರೀಯದಿಂದ ಮುಖದ ಬೆವರನ್ನು ಒರೆಸಿಕೊಳ್ಳುತ್ತಲೇ ಇದ್ದರು, ಅದೂ ಸಕಾರಣವಾಗಿ. ಭೂಸುಧಾರಣೆ ಕಾನೂನಿಗೆ ಸಕಾರಾತ್ಮಕವಾಗಿ ಸ್ಪಂದಿಸುವಂತೆ ದೊಡ್ಡ ಗೌಡರ ಮನ ಒಲಿಸಿದ್ದರು, ಅದಕ್ಕೆ ಶ್ರೀಯುತರೂ ಒಪ್ಪಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಸರ್ಕಾರದಿಂದ ಮಂಜೂರು ಮಾಡಿಸಿಕೊಂಡಿದ್ದರು. ಆದರೆ ಅವರ ಸುಪುತ್ರ ಸರ್ಕಾರದ ಹಿತಾಸಕ್ತಿಯ ತಲೆ ಮೇಲೆ ಹೊಡೆದಂತೆ ಭಾಷಣ ಮಾಡುವುದೆಂದರೇನು! ಕಾಂಗ್ರೇಸ್ ಪಕ್ಷ ಒತ್ತಟ್ಟಿಗಿರಲಿ, ಇತರೇ ಪಕ್ಷಗಳು ತನಗೆ ಟಿಕೆಟ್ ಕೊಡುವುದು ಬೇಡವೇನು! ಕಾಮ್ರೇಡ್ ನರಸಯ್ಯನನ್ನು ಸುಪಾರಿ ಕೊಟ್ಟು ಮುಗಿಸುವುದೋ ಬೇಡವೋ, ಮುಖದ ಬೆವರನ್ನು ಒರೆಸಿಕೊಳ್ಳುವುದೋ ಬೇಡವೋ ಎಂದು ಯೋಚಿಸುತ್ತಿದ್ದ ದೊಡ್ಡ ಗೌಡರೊಂದಿಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರು. ಅಕಸ್ಮಾತ್ ಏನಾದರೂ ಪತ್ರಕರ್ತರು ಚಿಕ್ಕ ಗೌಡರ ಭಾಷಣವನ್ನು ಯಥಾವತ್ತಾಗಿ ಹೈಲೈಟ್

ಮಾಡಿದಲ್ಲಿ! ಮಾಧ್ಯಮದವರನ್ನು ಸಮಾಧಾನ ಪಡಿಸುವುದು ತೀರಾ ಮುಖ್ಯ. ದೊಡ್ಡ ಗೌಡರ ಕಣ್ಸನ್ನೆ ಮೇರೆಗೆ ರಾಘಪ್ಪ ಪತ್ರಕರ್ತರಿದ್ದ ಗ್ಯಾಲರಿ ಕಡೆ ನಡೆಯುತ್ತಿರುವುದು ಸ್ಪಷ್ಟವಾಗಿ ಗೋಚರಿಸಿತು.

ಅತಿಥಿಗಳ ಭಾಷಣಗಳು ಮುಗಿದ ಬಳಿಕ ಅಧ್ಯಕ್ಷರ ಭಾಷಣದ ಸರದಿ ಬಂತು. ಶ್ರೀಯುತ ರಾಜಾರತ್ನಂ ಧ್ವನಿವರ್ಧಕದ ಎದುರು ಉಭಯ ಸಂಕಟದ ಮೂಲಕ ತಮ್ಮ ಭಾಷಣವನ್ನು ಆರಂಭಿಸಿದರು, ತುರ್ತುಪರಿಸ್ಥಿತಿಯನ್ನೂ, ಸರ್ಕಾರದ ಇಪ್ಪತ್ತು ಅಂಶಗಳನ್ನೂ ಸಮರ್ಥಿಸಿಕೊಂಡರು, ಉಳುವವರು ಭೂಮಿಗೆ ಒಡೆಯರಾದಾಗ ಮಾತ್ರ ದೇಶದ ಉದ್ಧಾರ ಸಾಧ್ಯವೆಂದು ಹೇಳುವುದನ್ನು ತಾವು ಮರೆಯಲಿಲ್ಲ. ಹಾಗೆಯೇ ತಾವು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲವೆಂದೂ, ರಾಜಕಾರಣದಿಂದ ನಿವೃತ್ತರಾಗುವುದಾಗಿಯೂ, ತಮ್ಮ ಶೇಷಾಯುಷ್ಯವನ್ನು ದೀನದಲಿತರ ಸೇವೆಗೆ ಮುಡುಪಿಡುವುದಾಗಿಯೂ ಘೋಷಿಸಿದರು. ದೊಡ್ಡ ಗೌಡರ ಸಮಾಜಿಕ ಕಳಕಳಿಯನ್ನು ಶ್ಲಾಘಿಸಿದಾದ ಬಳಿಕ ತಮ್ಮ ಭಾಷಣವನ್ನು ಮೊಟಕು ಗೊಳಿಸಿದರು.

ಬಳಿಕ ಕವಿದ ಶ್ಮಶಾನ ಮೌನದಲ್ಲಿ ಬಹುಮಾನಗಳನ್ನು ವಿತರಿಸುವ ಕಾರ್ಯ ಆರಂಭಗೊಂಡಿತು. ಆರಂಭದಲ್ಲಿ ಸಮಾಧಿ ಸ್ಮಾರಕದ ರೂವಾರಿ ರಾಸಾನಿಯವರನ್ನೂ, ಶಿಲ್ಪಿ ಪದ್ಮನಾಭಂ ಅವರನ್ನೂ ವೇದಿಕೆಗೆ ಬರಮಾಡಿಕೊಂಡು ಫಲಪುಷ್ಪ ಸ್ಮರಣಿಕೆ ನೀಡಿ ಸತ್ಕರಿಸಲಾಯಿತು. ಬಳಿಕ ನಾಟಕ ಕಂಪನಿಯ ಕಲಾವಿದರನ್ನು ಒಬ್ಬೊಬ್ಬರನ್ನಾಗಿ ವೇದಿಕೆಗೆ ಬರಮಾಡಿಕೊಂಡು ಸನ್ಮಾನಿಸಲಾಯಿತು. ನಿರೂಪಕಿ ರುಕ್ಮಿಣಿ "ಕಲಿಯುಗದ ಶರಣೆ ಮಲ್ಲಮ್ಮನವರೆಂದೇ ಖ್ಯಾತರಾಗಿರುವ ಕುಮಾರಿ ಪದ್ಮಾವತಿಯವರು ವೇದಿಕೆಗೆ ದಯಮಾಡಿಸಬೇಕು" ಎಂದು ಘೋಷಿಸಿದೊಡನೆ ಪ್ರೇಕ್ಷಕರು ಕಿವಿಗಡಚಿಕ್ಕುವಂತೆ ಕರತಾಡನ ಮಾಡಿದರು. ಸಂತೋಷವನ್ನು ನೇಪಥ್ಯ ಸಂಗೀತದ ಮೂಲಕ ಪ್ರಕಟಿಸುವುದು ಮುಖ್ಯ ತಾನೆ! ಮುಂದಿನ ಸಾಲಲ್ಲಿದ್ದ ಕರೂರು ತಿಮ್ಮಪ್ಪ ಮಾಲ್‌ಕೌಸ್‌ಂ ರಾಗವನ್ನು ಹಾರ್ಮೋನಿಯಂ ವಾದ್ಯದಲ್ಲಿ ನುಡಿಸಿದರೆ, ಅಗಸನೂರು ಪ್ರಹ್ಲಾದ ತೀನ್ ತಾಳದಲ್ಲಿ ತಬಲ ನುಡಿಸಿದನು, ಚಿಕ್ಕೇನಕೊಪ್ಪದ ಕಾಂಬ್ಳೆ ಕ್ಯಾಸಿಯೋ ನುಡಿಸಿದರೆ, ಪ್ರಸಿದ್ಧ ರಂಗಕಲಾವಿದೆಯೂ, ವೈಕುಂಠವಾಸಿಯೂ ಆದ ಹುಳೇಬೀಡು ರಂಗಮ್ಮನ ಜೇಷ್ಠಪುತ್ರ ಪಶುಪತಿ ಪೀಟಿಲು ನುಡಿಸಿದನು.

ಅದೇ ತಾನೆ ರೋಡ್‌ಗೋಲ್ಡ್ ಒಡ್ಯಾಣವನ್ನು ತನ್ನ ಸೊಂಟಕ್ಕೆ ಧರಿಸಿಕೊಳ್ಳುತ್ತಿದ್ದ ಪದ್ಮಾವತಿ ನಿಲುಗನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿಕೊಂಡಳು. ನೊಸಲಲ್ಲಿ ವಿಭೂತಿಯೂ, ಭ್ರೂ ಮಧ್ಯೆ ರೂಪಾಯಿಯಗಲದ ಕುಂಕುಮ ತಿಲಕವೂ ಇರುವುದನ್ನು ಖಚಿತ ಪಡಿಸಿಕೊಂಡಳು. ತನ್ನ ಸ್ತನದ್ವಯಗಳನ್ನು ಆವರಿಸಿದ್ದ ಪೀತಾಂಬರ ಸೀರೆಯ ಸೆರಗನ್ನು ಮೇಲೆಳೆದು ಸರಿಪಡಿಸಿಕೊಳ್ಳುವುದನ್ನು ಮರೆಯಲಿಲ್ಲ. ಹಾಗೆಯೇ ತನ್ನ ಕಣ್ಣುಗಳ ಎದುರು ಅಂಗೈಗಳನ್ನು ಜೋಡಿಸಿ ಹಿಡಿದುಕೊಂಡು ತರಾವರಿ ಮೆಹಂದಿ ಇರುವುದನ್ನು ಖಚಿತಪಡಿಸಿಕೊಂಡಳು, ಎಂದೆಂದೂ ಬಾಡದ ನಕಲಿ ಹೂವಿನ ದಂಡೆಯನ್ನು ತುರುಬಿಗೆ ಮುಡಿದುಕೊಂಡಳು. ಮೇಕಪ್ ಕಲಾವಿದೆ ಗದಗಿನ ಸಾವಿತ್ರಿಯ ಸಲಹೆ ಮೇರೆಗೆ ತನ್ನ ದೇಹದ ಹಿಂಭಾಗವನ್ನೂ, ಮುಂಭಾಗವನ್ನೂ ನೋಡಿಕೊಂಡಳು. ಕೊನೆಗೆ ವಜ್ರದ ಮೂಗುತಿಯನ್ನು ತನ್ನ ನೀಳನಾಸಿಕಕ್ಕೆ ಧರಿಸುವುದಕ್ಕೂ, ತನ್ನ ಅಣ್ಣ ಜಲಂಧರ ಬರುವುದಕ್ಕೂ ಸರಿ ಹೋಯಿತು. ಬಂದವನೆ ತನ್ನ

ಪ್ರೀತಿಯ ತಂಗಿಯನ್ನು ಅಡಿಯಿಂದ ಮುಡಿವರೆಗೆ ನೋಡಿದ. ಕಣ್ಣಲ್ಲಿ ನೀರು ತಂದುಕೊಂಡ, ತನ್ನೆರಡೂ ಅಂಗೈಗಳಿಂದ ಲಟ್ಟಿಗೆ ತೆಗೆದ, ಇನ್ನು ಲೇಟು ಮಾಡುವುದು ಬೇಡ ತಾಯಿ ಎಂದು ಒತ್ತಾಯಿಸಿದ, ಸ್ವಯಂ ತಾನೆ ಆಕೆಯ ಕೈಗಳನ್ನು ಹಿಡಿದು ವೇದಿಕೆಗೆ ಕರೆತಂದ, ಆಕೆಯನ್ನು ನೋಡಿದೊಡನೆ ಪ್ರೇಕ್ಷಕರು ತಮಗರಿವಿಲ್ಲದಂತೆ ಎದ್ದು ನಿಂತು ಕರಜೋಡಿಸಿದರು. ಶರಣೆ ಮಲ್ಲಮ್ಮಗೆ ಜಯವಾಗಲಿ, ಪದ್ಮಾವತೆಮ್ಮನವರಿಗೆ ಜಯವಾಗಲಿ ಎಂದು ಒಕ್ಕೊರಲಿನಿಂದ ಹಾರೈಸಿದರು. ಆಕೆಯ ಪ್ರವೇಶ ಎಷ್ಟೊಂದು ಪ್ರಭಾವಶಾಲಿಯಾಗಿತ್ತೆಂದರೆ ದೊಡ್ಡ ಗೌಡರೇ ಪರಾವರ್ತಿತ ಪ್ರಕ್ರಿಯೆಗೆ ಒಳಗಾಗಿ ಎದ್ದು ನಿಂತು ನೋಟದ ಮೂಲಕ ವಂದಿಸುವುದನ್ನು ಮರೆಯಲಿಲ್ಲ. ಇನ್ನು ಉಳಿದವರು!

ದೊಡ್ಡ ಗೌಡರ ಆಪೇಕ್ಷೆಯಂತೆ ಕೆಳಮನಿ ಶಿವಾರೆಡ್ಡಿಯವರ ಧರ್ಮಪತ್ನಿ ಸುಭದ್ರಮ್ಮನವರು ವೇದಿಕೆಗೆ ಆಗಮಿಸಿ ಪದ್ಮಾವತಿಯ ಕೊರಳಿಗೆ ಆಳೆತ್ತರದ ಹೂವಿನ ಹಾರನ್ನು ಹಾಕಿದರೆ, ರಾಜಾರತ್ನಂ ಫಲದ ಕರಂಡಕವನ್ನು ಸಮರ್ಪಿಸಿದರು. ಅದುವರೆಗೆ ದಿಗ್ಭ್ರಮಿತನಾಗಿದ್ದ ಸೂರ್ಯಪ್ರತಾಪರೆಡ್ಡಿ ಎದ್ದು ತನ್ನ ಕೊರಳಲ್ಲಿದ್ದ ಹೆಬ್ಬೆರಳು ಗಾತ್ರದ ಚಿನ್ನದ ಸರವನ್ನು ಆಕೆಯ ಕೊರಳಿಗೆ ಹಾಕಲೆಂದು ಪ್ರಯತ್ನಿಸಿದ, ಆದರೆ ಆಕೆ ಮೂರು ಹೆಜ್ಜೆ ಹಿಂದೆ ಸರಿದು ನಿರಾಕರಿಸಿದಳು, ಬಳಿಕ ಗಣ್ಯರ ಒತ್ತಾಯದ ಮೇರೆಗೆ ಅದನ್ನು ಕೈಗಳಿಂದ ಸ್ವೀಕರಿಸಿ ಕೃತಜ್ಞತೆ ಸೂಚಿಸಿದಳು. ಹೇಮರೆಡ್ಡಿ ಪಾತ್ರಧಾರಿ ಚೌಗಲೆ ಒಡನೆಯೇ ಆ ಕಡೆಯಿಂದ ವೇದಿಕೆಗೆ ದಾವಿಸುವುದಕ್ಕೂ, ಪರಿಕರಗಳನ್ನು ಹಿಡಿದಿದ್ದ ಚಕ್ರವರ್ತಿ ಈ ಕಡೆಯಿಂದ ಬರುವುದಕ್ಕೂ ಸರಿ ಹೋಯಿತು.

ಚೌಗಲೆ ತನ್ನ ತಾಯಿ ಸ್ಟೆಲ್ಲಮ್ಮ ಕುರಿತಂತೆ, ಆಕೆಯ ಹೆಸರಿನಲ್ಲಿ ತಾನು ಸ್ಥಾಪಿಸಿರುವ ಟ್ರಸ್ಟ್ ಕುರಿತಂತೆ, ಸಾಲಿಯಾನ ನೀಡುತ್ತಿರುವ ಪ್ರಶಸ್ತಿ ಕುರಿತಂತೆ ವಿವರಿಸಿದಾದ ಬಳಿಕ ಕೆಲವು ಅನಿವಾರ್ಯ ಪರಿಸ್ಥಿತಿಗಳನ್ನೂ ಮನೋಜ್ಞ ರೀತಿಯಲ್ಲಿ ಸಾದರಪಡಿಸಿದ, ನಗದು ಮತ್ತು ಪ್ರಶಸ್ತಿಯ ವಿವರ ಇರುವ ತಾಮ್ರಪತ್ರವನ್ನು ತೀರ್ಥರೂಪ ಸಮಾನರಾದ ದೊಡ್ಡ ಗೌಡರು ಪ್ರದಾನ ಮಾಡಬೇಕೆಂದು ಕಳಕಳಿಯಿಂದ ವಿನಂತಿಸಿಕೊಂಡನು. ಆತನ ಸೌಜನ್ಯಯುತ ಮಾತುಗಳಿಂದ ಗೌಡರು ಭಾವ ಪರವಶರಾದರು, ಅವನು ತಮಗೆ ಪಾದಾಭಿವಂದನೆ ಸಲ್ಲಿಸಿದ ಬಳಿಕವಂತೂ ಗದ್ಗದಿತರಾದರು, ಇದು ತಮಗೆ ಸಂದ ಬಹುದೊಡ್ಡ ಗೌರವವೆಂದು ಹೇಳುತ್ತಲೇ ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ತಂದೆ ಮಕ್ಕಳೀರ್ವರನ್ನು ಸನ್ಮಾನಿಸುವ ಸಲುವಾಗಿ ಅಭಿಮಾನಿಗಳಲ್ಲಿ ಪೈಪೋಟಿ ಕಾಣಿಸಿಕೊಂಡಿತು, ತಮ್ಮ ಊರಿಗೆ ಇಷ್ಟೆಲ್ಲಾ ಮಾಡಿರುವ ಹೆಬ್ಬಟಂ ವಂಶಸ್ಥರಿಗೆ ತಾವು ಇಷ್ಟಾದರೂ ಮಾಡುವುದು ಬೇಡವೇನು! ಮೊದಲು ಪಂಚಾಯ್ತಿ ಸರಪಂಚ ಮುನುಸೋಬ ಗೌಡ ತನ್ನ ಸದಸ್ಯರೊಡನೆ ವೇದಿಕೆ ಮೇಲೆ ಕಾಣಿಸಿಕೊಂಡನು, ಆರಂಭದಲ್ಲಿ ತಾನು ಪುಟ್ಟ ಭಾಷಣ ಮಾಡದೆ ಇರಲಿಲ್ಲ, ಹಿರಿಯ ಗೌಡರ ಕೊರಳಿಗೆ ಚಿನ್ನದ ಸರವನ್ನು ಹಾಕಿದೊಡನೆ ಪ್ರೇಕ್ಷಕರು ಚಪ್ಪಾಳೆ ತಟ್ಟಿ ಸ್ವಾಗತಿಸಿದರು, ಬಳಿಕ ಅವರಿಬ್ಬರ ಮೇಲೆ ಹೂವಿನ ಮಳೆಯನ್ನು ಸುರಿಸಲಾಯಿತು, ನಲ್ಮೊಲೆಯಿಂದ ಜಯಘೋಷ ಕಿವಿಗಡಚಿಕ್ಕುವಂತೆ ಮಾರ್ಧನಿಸಿತು, ಅದಾದ ಬಳಿಕ ಒಬ್ಬರ ಮೇಲೊಬ್ಬರಂತೆ ಮುಗಿಬಿದ್ದರು, ನೋಡು ನೋಡುವಷ್ಟರಲ್ಲಿ ತಂದೆ ಮಕ್ಕಳಿಬ್ಬರು ಹೂವಿನರಾಶಿಯಲ್ಲಿ ಮರೆಯಾಗಿಬಿಟ್ಟರು. ಅದರಿಂದ ಅವರನ್ನು ಅನಾವರಣಗೊಳಿಸುವಷ್ಟರಲ್ಲಿ ಕಾರ್ಯಕರ್ತರಿಗೆ ಸಾಕುಸಾಕಾಗಿ ಹೋಯಿತು. ಇನ್ನೇನು ಮುಗಿಯಿತೆನ್ನುವಷ್ಟರಲ್ಲಿ..

ಆ ಘಟನೆ ಸಂಭವಿಸಿದ್ದು ತೀರಾ ಅನಿರೀಕ್ಷಿತ, ಅದನ್ನು ಅವನೇ ಬಯಸಿದ್ದೋ! ಅದೇ ಅವನನ್ನು ಪ್ರೇರೇಪಿಸಿತೋ! ಅದೆಂದರೆ

ಜಲಂಧರ ಭರಮರೆಡ್ಡಿ ಪಾತ್ರದಲ್ಲಿದ್ದನಲ್ಲವೆ! ಥೇಟ್ ಅರೆಹುಚ್ಚನಂತೆ, ಆತ ಮೆಲ್ಲಗೆ ಆಗಮಿಸಿ ವೇದಿಕೆ ಮೇಲೆ ಕಾಣಿಸಿಕೊಂಡ, ಧ್ವನಿವರ್ಧಕದ ಸಮಕ್ಷಮ ವಿಧೇಯತೆಯೇ ಮೈವೆತ್ತಿರುವಂತೆ ನಿಂತ, ತನ್ನ ಕಣ್ಣುಗಳಲ್ಲಿದ್ದ ಆನಂದಬಾಷ್ಪವನ್ನು ನಿಯಂತ್ರಿಸಲು ಸಾಧ್ಯವಾಗದೆ ಬಿಕ್ಕಳಿಸಲಾರಂಭಿಸಿದ, ಆವರಿಸಿದ ಮೌನದಲ್ಲಿ ತನ್ನ ಹೆತ್ತವರನ್ನು ನೆನಪಿಸಿಕೊಂಡ, ಅವರ ಪ್ರೀತಿ ಒಂದು ತೂಕವಾದರೆ ಹೆಬ್ಬಟಂ ಗೌಡರು ತೋರಿಸಿದ ಪ್ರೀತಿ ನೂರರಷ್ಟು ಅಧಿಕವೆಂದು ಹೇಳಿದ, ಮುಂದಿನ ಜನ್ಮವೇನಾದರೂ ಇದ್ದಲ್ಲಿ ತಾನು ಹೆಬ್ಬಟಂ ಗೌಡರ ಹೊಟ್ಟೆಯಲ್ಲಿ ಜನಿಸುವುದಾಗಿ ಹೇಳಿದೊಡನೆ ಅಂತಃಕರಣ ಕಲಕುವಂಥ ಮೌನ ಆವರಿಸಿತು, ಪ್ರೇಕ್ಷಕರಲ್ಲಿ ಕೆಲವರು ಭಾವಪರವಶರಾದರಲ್ಲದೆ ತಮ್ಮ ಕಣ್ಣುಗಳಲ್ಲಿ ನೀರು ತಂದುಕೊಂಡರು, ಬಳಿಕ ತನ್ನ ಕಂಪನಿಯ ಕಲಾವಿದರನ್ನು ಒಬೊಬ್ಬರನ್ನಾಗಿ ವೇದಿಕೆಗೆ ಆಮಂತ್ರಿಸಿದ, ಅವರೆಲ್ಲ ಹಿರಿಯ ಗೌಡರಿಗೆ ಪಾದಾಭಿವಂದನೆ ಸಲ್ಲಿಸಿ ಮರಳಿದರು, ಬಳಿಕ ಮಲ್ಲಮ್ಮನ ಪಾತ್ರಧಾರಿ ಪದ್ಮಾವತಿ ಆಗಮಿಸಿದಳು, ತನ್ನ ಕೈಯಲ್ಲಿ ಒಂದೆರಡು ವಸ್ತುಗಳನ್ನು ಮರೆಮಾಚಿದ್ದಳು. ಅವು ಯಾವುವೆಂದು ತಕ್ಷಣಕ್ಕೆ ಹೊಳೆಯಲಿಲ್ಲ, ಆಕೆ ಅವುಗಳಲ್ಲಿ ಒಂದನ್ನು ಹಿರಿಯ ಗೌಡರಿಗೆ ಅರ್ಪಿಸಿ ನಮಸ್ಕರಿಸಿ ಹಿಂದೆ ಸರಿದಳು, ಅದನ್ನು ಕೃತಜ್ಞತಾಪೂರ್ವಕವಾಗಿ ಪಡೆದ ಆ ಹಿರಿಯರು ಗದ್ಗದ್ಗಿತರಾದರು, ಜಲಂಧರನನ್ನು ಆಲಂಗಿಸಿಕೊಂಡರು, ಭಾವಪರವಶರಾದರು, ಮುಂದಿನ ಜನ್ಮ ಇರುವುದೋ ಇಲ್ಲವೋ! ಆದರೆ ಈ ಜನ್ಮದಲ್ಲಿ ನೀವಿಬ್ಬರೂ ತಮಗೆ ಮಕ್ಕಳೆ ಎಂದು ಹೇಳಿದರು, ನೀವೆಲ್ಲ ವಾಗಿಲಿಯಲ್ಲಿ ಖಾಯಂ ನೆಲೆಸಬೇಕೆಂದು ವಿನಂತಿಸಿಕೊಂಡರು, ತಾವು ಸ್ಥಿರಚರ ವ್ಯವಸ್ಥೆ ಮಾಡುವುದಾಗಿ ಹೇಳುವುದನ್ನು ತಾವು ಮರೆಯಲಿಲ್ಲ, ಅದಕ್ಕೆ ತಾನು ಒಪ್ಪಿದನೋ ಇಲ್ಲವೋ, ಆದರೆ ಅವನು ಅವರಿಗೆ ಕೃತಜ್ಞತೆಗಳನ್ನು ಅರ್ಪಿಸಿದನು. ಇದೆಲ್ಲ ಸರಿ, ಆದರೆ!

ಜಲಂಧರ ಶ್ರೀಯುತರ ಸುಪುತ್ರ ಪ್ರತಾಪರೆಡ್ಡಿಯವರ ಕುರಿತಂತೆಯೂ ಹೊಗಳಿಕೆಯ ಮಾತುಗಳನ್ನು ಆಡುವುದನ್ನು ತಾನು ಮರೆಯಲಿಲ್ಲ, ಅದೂ ಸರಿಯೆ! ಆದರೆ ತಾನು ಮೆಲ್ಲಗೆ ತನ್ನ ಕೈಯಲ್ಲಿದ್ದ ವಸ್ತುವನ್ನು ಅನಾವರಣಗೊಳಿಸಿದ, ಅದು ಆ ಕ್ಷಣ ಬೆಳಕಿನ ಪ್ರವಾಹದಲ್ಲಿ ದೇದಿಪ್ಯಮಾನವಾಗಿ ಹೊಳೆಯಿತು, ನೇಪಥ್ಯದಲ್ಲಿದ್ದ ನಾನು ಕಣ್ಣುಗಳನ್ನು ಚಾಚಿ ನೋಡಿದೆ, ನಿಸ್ಸಂದೇಹವಾಗಿ ಒಬ್ಬರಿಂದೊಬ್ಬರಿಗೆ ಹಸ್ತಾಂತರಗೊಂಡು ತನ್ನಲ್ಲಿ ಕೆಲಕಾಲ ಆಶ್ರಯ ಪಡೆದಿದ್ದ ಉರುಕುಂದಿಯ ಚೂರಿ ಅದಾಗಿತ್ತು, ಅರ್ಥವಾದೊಡನೆ ಬೆಚ್ಚಿದೆ, ಮರೆಮಾಚು ಕಣೋ, ಸಾರ್ವಜಿಕರೆದುರು ಪ್ರದರ್ಶಿಸಬೇಡವೋ, ಅದನ್ನು ಬೇರೆಯವರಿಗೆ, ಅದರಲ್ಲೂ ಮಾರಕಾಸ್ತ್ರವೇ ಮಾನವ ರೂಪದಲ್ಲಿರುವಂಥ ಪ್ರತಾಪರೆಡ್ಡಿಯ ಸುಪರ್ದಿಗೆ ಒಪ್ಪಿಸದಿರು ಎಂದು ಕೂಗಿ ಹೇಳಲು ಪ್ರಯತ್ನಿಸಿದೆ, ಕತ್ತಲಲ್ಲಿದ್ದರೂ ಅಂಗಲಾಚಿದೆ, ಆದರೆ ಅದು ಮರುಭೂಮಿಯಲ್ಲಿ ಮಳೆ ಸುರಿದಂತೆ ನಿಷ್ಪ್ರಯೋಜನವಾಯಿತು, ಅದನ್ನು ಬೇರೆಯವರಿಗೆ ತಾನು ಹಸ್ತಾಂತರಿಸದಂತೆ ನೋಡಿಕೊ ದೇವರೆ ಎಂದು ಮೊರೆ ಇಟ್ಟಿದ್ದೂ ವ್ಯರ್ಥವಾಯಿತು. ಅವನು ಆವೇಶಭರಿತನಾಗಿ, ಭೂತ ಆವಹಿಸಿಕೊಂಡಿರುವವನಂತೆ ಅದರ ಪೂರ್ವೇತಿಹಾಸವನ್ನು ತನಗೆ ತೋಚಿದಂತೆ ವರ್ಣಿಸಲಾರಂಭಿಸಿದ, ಅದು ಸಹಸ್ರ ವರ್ಷಗಳಷ್ಟು ಪ್ರಾಚೀನವೆಂದು ಹೇಳಿದ, ಅದು ವಿಜಯನಗರ ಸಾಮ್ರಾಜ್ಯವನ್ನು ಆಳಿದ ಶ್ರೀಕೃಷ್ಣದೇವರಾಯನ ಅಚ್ಚುಮೆಚ್ಚಿನ ಚೂರಿ ಎಂದು

ಹೇಳಿದ, ಆಮಾತ್ಯ ತಿಮ್ಮರಸುರವರ ದೃಷ್ಟಿಯನ್ನು ಅಪಹರಿಸಲು ಬಳಕೆಯಾದ ಚೂರಿ ಎಂದು ಹೇಳುವಾಗ ದವಡೆಗಳನ್ನು ಮಸೆದ, ವಿವರ್ಣನಾದ, ನಖಶಿಖಾಂತ ಕಂಪಿಸಿದ. ಮತ್ತೆ ಮುಂದುವರೆದು ಅದರ ಬೆಲೆ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹಲವು ಕೋಟಿಗಳೆಂದು ಹೇಳುವುದನ್ನು ತಾನು ಮರೆಯಲಿಲ್ಲ, ಲಜ್ಜಗೇಡಿಯಂತೆ, ಉಪಕಾರ ಸ್ಮರಣೆ ಇಲ್ಲದವನಂತೆ, ಮೈ ಮೇಲೆ ಎಚ್ಚರ ಕಳೆದುಕೊಂಡಿರುವವನಂತೆ, ನನ್ನ ಕುರಿತು ಉದಾಸೀನ ಭಾವ ತಳೆದಿರುವವನಂತೆ. ನಾನು ನಿಂತಲ್ಲಿಯೇ ಅಸಹಾಯಕತೆಯಿಂದ, ಕೋಪದಿಂದ ಕಂಪಿಸಿದೆ. ಅದನ್ನು ತನ್ನ ಕೈಯಿಂದ ಕಸಿದುಕೊಳ್ಳಲು, ಅದರ ನೈಜ ಪೂರ್ವಾಪರ ಹಾಗಲ್ಲ ಹೀಗೆ ಎಂದು ಹೇಳಲು, ನಿನಗೆ ಅದನ್ನು ಇಟ್ಟುಕೊಳ್ಳಲು ಸಾಧ್ಯವಾಗದಿದ್ದಲ್ಲಿ ನನಗೆ ಮರಳಿಸು, ಅಥವಾ ವಿರುಪಾಕ್ಷನ ಸನ್ನಿಧಿಗೆ ಅರ್ಪಿಸು ಎಂದು ಹೇಳಲು ಹಲವು ರೀತಿಯಿಂದ ಪ್ರಯತ್ನಿಸಿದೆ, ನಿನ್ನ ಅವಧೂತ ಛದ್ಮವೇಷ ಕಳಚಿ ತೋಪಿನಿಂದ ಧಾವಿಸಿ ಬಂದು ಅದನ್ನು ನೀನಾದರೂ ಕಸಿದುಕೋ ನನ್ನ ಪ್ರೀತಿಯ ಸಹೋದರ ಶರಭನೇ ಎಂದು ಕೂಗಿ ಹೇಳಲು ಪ್ರಯತ್ನಿಸಿದೆ, ಆದರೆ ಅದೂ ಸಾಧ್ಯವಾಗಲಿಲ್ಲ.

ಜಲಂಧರ ಅದನ್ನು ತನ್ನ ಅಂಗೈಯ ಕರಂಡಕದಲ್ಲಿ ಇರಿಸಿಕೊಂಡು ಪುನಃ ಪುನಃ ನೋಡಿದ, ಬಿಕ್ಕಳಿಸಿದ, ಮೇಲಿಂದ ಮೇಲೆ ನಿಟ್ಟುಸಿರುಗಳನ್ನು ಚೆಲ್ಲಿದ, ಅದನ್ನು ಬಿಗಿದಪ್ಪಿ ತನ್ನೆರಡೂ ತುಟಿಗಳಿಂದ ಮುದ್ದಿಸಿದ, ಬಲಮುಷ್ಟಿಯಲ್ಲಿ ಸಮರ್ಥ ಯೋಧನಂತೆ ಹಿಡಿದು ಭೀತಾವಹನಾದ, ಯಾರನ್ನಾದರೂ ಕೊಲೆ ಮಾಡಲಿರುವವನಂತೆ ಭೀತಿ ಹುಟ್ಟಿಸಿದ, ನೇಪಥ್ಯದಲ್ಲಿದ್ದ ನನ್ನ ಕಡೆಗೊಮ್ಮೆ, ಹೇಮರೆಡ್ಡಿ ಪಾತ್ರಧಾರಿ ಚೌಗಲೆ ಕಡೆಗೊಮ್ಮೆ, ಮಲ್ಲಮ್ಮ ಪಾತ್ರಧಾರಿ ಪದ್ಮಾವತಿ ಕಡೆಗೊಮ್ಮೆ, ತೀರ್ಥರೂಪ ಸಮಾನರ ಕಡೆಗೊಮ್ಮೆ, ಅದೂ ಸಾಲದೆನ್ನುವಂತೆ ನಿಷ್ಪಾಪಿ ಪ್ರೇಕ್ಷಕರ ಕಡೆಗೊಮ್ಮೆ ಕೋಲ್ಮಿಂಚಿನಂಥ ನೋಟ ಹಾಯಿಸಿದ. ಹಲವು ಹೆಜ್ಜೆಗಳಲ್ಲಿ ಭಾವಾವೇಶದಿಂದ ವಿಮುಖನಾಗುತ್ತ ಮಾರಕಾಯುಧಗಳ ಸಂಗ್ರಹಾಲಯವೇ ಮೈವೆತ್ತಂತಿದ್ದ ಪ್ರತಾಪರೆಡ್ಡಿಯನ್ನು ಸಮೀಪಿಸಿದ, ಇದರ ರಕ್ಷಣೆಯ ಹೊಣೆ ನಿಮ್ಮದೆಂದು ಹೇಳಿದ, ಪುನಃ ಕೈ ಹಿಂಪಡೆದವನೇ ನನ್ನ ಕಡೆ ತಿರುಗಿ ವೇದಿಕೆಗೆ ಬರುವಂತೆ, ನಿಮ್ಮ ಕೈಯಾರೆ ಕಾಣಿಕೆ ನೀಡುವಂತೆ ನನ್ನನ್ನು ವಿನಂತಿಸಿಕೊಂಡ, ಎಲಾ ಮಾಯಾವಿ ಎಂದು ಉದ್ಗರಿಸುತ್ತಲೇ ಸಮೀಪಿಸಿದೆ, ಕೊಡಲಿಕ್ಕಲ್ಲವೋ ಬಂದಿರುವುದು ಎಂದು ಹೇಳಲಿದ್ದ ನನ್ನ ಕೈಯಲ್ಲಿ ಅದನ್ನಿರಿಸಿದ. ಕೊಡುವಂತೆ ಧಾರೆ ಎರೆಯುವಂತೆ, ರಣಕಂಕಣ ಕಟ್ಟುವಂತೆ ಕಣ್ಣನೋಟದಿಂದ ಸೂಚಿಸಿದ, ಅಡಕತ್ತರಿಯಲ್ಲಿ ಸಿಲುಕಿಸಿದ, ಉಭಯಸಂಕಟ ಅನುಭವಿಸಿದೆ, ನಡುಗಲಾರಂಭಿಸಿದ ಕೈಗಳಿಂದ ಕುತೂಹಲವಂದಿಗ ಚಿಕ್ಕರೆಡ್ಡಿಯ ಎರಡೂ ಕೈಗಳಲ್ಲಿರಿಸಿದೆ. ಅದನ್ನು ಪಡೆದೊಡನೆ ರೆಡ್ಡಿಯು!

ಈ ಎಲ್ಲಾ ಕಾರ್ಯಕ್ರಮಗಳು ಮುಗಿದ ಬಳಿಕ..

..... ಆ .....

# ದೃಶ್ಯ: ಒಂಬತ್ತು

ಹೇಮರೆಡ್ಡಿ ಮಲ್ಲಮ್ಮನ ಕಥೆ ಅರ್ಥಾತ್ ಶ್ರೀ ಶೈಲಮಲ್ಲಿಕಾರ್ಜುನನ ಮಹಾತ್ಮೆ ನಾಟಕದ ಶತದಿನೋತ್ಸವದ ಪ್ರದರ್ಶನ ಕಲಾವಿದರೆಲ್ಲರ ಅಮೋಘ ಅಭಿನಯದಿಂದಾಗಿ ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡಿತು. ಅದರಲ್ಲೂ ಹೇಮರೆಡ್ಡಿ ಪಾತ್ರದಲ್ಲಿ ಚೌಗಲೆಯೂ, ಭರಮರೆಡ್ಡಿ ಪಾತ್ರದಲ್ಲಿ ಜಲಂಧರನೂ, ಮಲ್ಲಮ್ಮನ ಪಾತ್ರದಲ್ಲಿ ಪದ್ಮಾವತಿಯೂ ಪೈಪೋಟಿಗೆ ಬಿದ್ದು ಅಭಿನಯಿಸಿದ್ದು ಪ್ರಶಂಸನೀಯ. ಆದರೆ ಅದರಿಂದ ನನ್ನ ಮನಸ್ಸಿಗೆ ಸಂತೋಷವಾಗಿರಲಿಲ್ಲ, ದುಃಖ ಬೇಸರ ಕೋಪ ಈ ತ್ರಿಕರಣ ಸಂವೇದನೆಗಳನ್ನು ಒಟ್ಟಿಗೆ ಅನುಭವಿಸಿದೆ, ಅದಕ್ಕೆ ಕಾರಣ ಚೂರಿಯನ್ನು ಕೊಡುಗೆ ರೂಪದಲ್ಲಿ ನೀಡಿದ ಪ್ರಕರಣ. ಆದರೆ ಮನಸ್ಸಿನ ಭಾವನೆಗಳನ್ನು ಮೌಖಿಕವಾಗಿ ಅಭಿವ್ಯಕ್ತಿಸುವ ಸಾಹಸ ಮಾಡಲಿಲ್ಲ, ಕಾರಣ ಅದನ್ನು ಪಡೆದಿರುವ ವ್ಯಕ್ತಿ ಚೂರಿಗಿಂತಲೂ ಅಪಾಯಕಾರಿ. ಅತಿಥಿಗಳು ಹೋದ ಬಳಿಕ ಅಸಮಾಧಾನವನ್ನು ಜಲಂಧರನೆದುರು ತೋಡಿಕೊಂಡರಾಯಿತೆಂದು ಭಾವಿಸಿದೆ. ಇಡೀ ದಿವಸ ಚಕ್ರವರ್ತಿ ಸಿನೆಮಾ ಗೀಳಿನಿಂದ ಹೊರ ಬಂದಿರಲಿಲ್ಲ, ಚೌಗಲೆ ಅಭಿನಂದನೆಗಳ ಮಹಾಪೂರದಲ್ಲಿ ಮುಳುಗಿದ, ಕಂಪನಿ ಕಲಾವಿದರ ಪೈಕಿ ಕೆಲವರು ತಮಗೆ ತೋಚಿದ ಬಸ್ಸುಗಳಲ್ಲಿ ಹೊರಟು ಹೋಗಿದ್ದರು. ಬೆಳಗಿಗೂ ಪೂರ್ವದಲ್ಲಿಯೇ..

ವಾಗಿಲಿಯ ಹೊರವಲಯದಲ್ಲಿ ಹೆಣ ಕಾಣಿಸಿಕೊಂಡಿರುವ ವದಂತಿ ಹರಡಿತು, ಅದು ಸಹಜ ಸಾವಲ್ಲವಂತೆ, ಕೊಲೆಯಂತೆ, ಕೊಲೆಯಾಗಿರುವ ವ್ಯಕ್ತಿ ಸಿವಿಲ್ ಇಂಜಿನಿಯರ್ ರಾಸಾನಿಯಂತೆ, ಶಿಲ್ಪಿ ಪದ್ಮನಾಭಂ ಅಂತೆ, ಆತನನ್ನು ಈತನೇ ಕೊಲೆ ಮಾಡಿರುವನೋ! ಈತನನ್ನು ಆತನೇ ಕೊಲೆ ಮಾಡಿರುವನೋ! ಅವರಿಬ್ಬರ ಪೈಕಿ ಇನ್ನೊಬ್ಬರು ತಲೆಮರೆಸಿಕೊಂಡಿಲ್ಲದಿರುವುದೇ ಪುಣ್ಯವಂತೆ ಕೊಲೆಗೆ ಕಾರಣಗಳು ನಿಗೂಢವಂತೆ! ಹೀಗೆ ಆತಂಕಕಾರಿ ವದಂತಿಗಳೊಂದಿಗೆ ಬೆಳಗಾಯಿತು, ಮಿತ್ರದ್ವಯರೀರ್ವರು ಅದನ್ನು ಕೇಳಿ

ಭಯಭೀತರಾದರು. ಸುದ್ದಿ ಖಚಿತಗೊಳ್ಳುವ ಮೊದಲೇ ತಾವು ವಾಗಿಲಿಯ ಗಡಿ ದಾಟಿ ಹೊಳಗುಂದಿಯ ಗಡಿಯನ್ನು ಪ್ರವೇಶಿಸುವುದು ಒಳಿತೆಂದು ಭಾವಿಸಿದರು. ಆದರೆ ಅದು ಸುಲಭವಿರಲಿಲ್ಲ. ಕೂಲಂಕಷ ತನಿಖೆ, ಪಂಚನಾಮೆ, ಪ್ರಾಥಮಿಕ ವಿಚಾರಣೆ ಆರಂಭಗೊಂಡು ಮುಗಿಯದ ಹೊರತು ಯಾರೊಬ್ಬರೂ ಊರು ಬಿಟ್ಟುಕದಲುವಂತಿರಲಿಲ್ಲ. ಹೊರಡುವುದೂ ಒಂದೆ, ಅನುಮಾನಕ್ಕೆ ಆಸ್ಪದ ಮಾಡಿಕೊಡುವುದೂ ಒಂದೆ. ವದಂತಿಗಳ ಮೂಲಕ ಇಲಿಯನ್ನು ಹುಲಿಯನ್ನಾಗಿ ಪರಿವರ್ತಿಸುವುದರಲ್ಲಿ ವಾಗಿಲಿಯ ಜನ ನಿಸ್ಸೀಮರು. ಕೊಲೆ ನಡೆದಿರುವುದೋ ಇಲ್ಲವೋ! ನಡೆದಿದ್ದರೆ ಆ ನತದೃಷ್ಟ ಯಾರಿದ್ದಿರಬಹುದು! ರಾಸಾನಿ, ಪದ್ಮನಾಭಂ ಗೌಡರ ಗಣ್ಯ ಅತಿಥಿಗಳು. ಅವರನ್ನು ಕೊಲೆ ಮಾಡುವುದರಿಂದ ಯಾರಿಗೇನು ಲಾಭ! ಕೊಲೆಯಾಗಿರುವ ವ್ಯಕ್ತಿ ಬೇರೆ ಇರಬಹುದು! ಅಥವಾ ಇಲ್ಲದೆಯೂ ಇರಬಹುದು. ಯಾವುದಕ್ಕೂ ಎಂಟು ಒಂಭತ್ತರವರೆಗೆ ಕಾಯುವುದು ಮುಖ್ಯ. ಆದರೆ ಏಳು ದಾಟುವುದರೊಳಗಾಗಿ ರಕ್ತಸಿಕ್ತ ಕಳೇಬರ ರಾಸಾನಿಯದ್ದೆಂಬ ವರ್ತಮಾನ ಹರಡಿತು, ಇನ್ನೈದು ನಿಮಿಷ ಗತಿಸುವಷ್ಟರಲ್ಲಿ ಪದ್ಮನಾಭಂ ತಾನೇ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿರುವನೆಂಬ ಸುದ್ದಿಯೂ ಹಬ್ಬಿತು. ಜನ ಗುಂಪು ಗುಂಪಾಗಿ ಹೆಣವಿರುವ ಹೆಬ್ಬಟಂ ಗೌಡರ ಸಮಾಧಿ ಸ್ಮಾರಕವಿರುವ ಹೊಲದ ಕಡೆ..

++++

ಕೃತಿಯ ಕರ್ತೃ ತನಿಕೆಳ್ಳ ಪಾರ್ಥಸಾರಥಿ ಆ ವಾಕ್ಯವನ್ನು ಪೂರ್ಣಗೊಳಿಸಬಹುದಿತ್ತು, ಕಾದಂಬರಿಯೂ ಅಪೂರ್ಣ ವಾಕ್ಯವೂ ಅಪೂರ್ಣ!

ಸುದೀರ್ಘ ಕಥಾನಕವನ್ನು ಸರಾಗವಾಗಿ ಓದಿ ಮುಗಿಸಿದೆ. ಕಥೆಯೊಳಗಿರುವುದು ನಾನೋ ಇನ್ಯಾರೋ! ವಾಗಿಲಿ ನನ್ನ ಕಾರ್ಯಕ್ಷೇತ್ರ, ಕಥೆಯುದ್ದಕ್ಕೂ ಇರುವ ವಸ್ತು ನನ್ನ ಅನುಭವ ಜನ್ಯ, ಕಥೆಯೊಳಗೆ ಹಾಸುಹೊಕ್ಕಾಗಿರುವ ಭಾಷೆ ಸಹ ತನ್ನದಲ್ಲ, ಭೆಟ್ಟಿಯಾದ ಸಂದರ್ಭಗಳಲ್ಲಿ ಪರಸ್ಪರ ಹಂಚಿಕೊಂಡಿರುವುದು. ಆದರೆ ಅದನ್ನೆಲ್ಲ ತಾನು ಬರೆಯಬಹುದೆಂದು ನಾನು ಊಹಿಸಿರಲಿಲ್ಲ. ವಿಚಿತ್ರವೆಂದರೆ ಮರದೊಳಗೆ ಮರ ಹುಟ್ಟುವ ಪರಿಯಂತೆ ಕಥಾನಕದೊಳಗೆ ಇನ್ನೊಂದು ಕಥೆಯನ್ನು ಎರಕ ಹೊಯ್ದಿರುವನು ಬೇರೆ. ಬರೆದಿರುವನಲ್ಲ ಅಷ್ಟೇ ಸಾಕು ಎಂದು ಭಾವಿಸುವಾಗಲೂ ತಲೆ ತಗ್ಗಿಸಿಯೇ ಯೋಚಿಸುತ್ತಿದ್ದೆ. ಕಾದಂಬರಿ ರಚನೆಯಿಂದಾಗಿ ತನ್ನ ಆರೋಗ್ಯ ಸುಧಾರಿಸಿದ್ದರೆ ಅಷ್ಟೇ ಸಾಕಲ್ಲವೆ! ನಿಧಾನವಾಗಿ ತಲೆ ಎತ್ತಿದೆ, ಎತ್ತಿದ ನಂತರ ನೇರವಾಗಿ ನೋಡುವ ಬದಲಿಗೆ ಗೋಡೆ ಕಡೆ ನೋಟ ಹಾಯಿಸಿದೆ. ಅಲ್ಲಿ ತನ್ನ ವಿವಾಹ ಸಂದರ್ಭದ ಬಹುವರ್ಣದ ಸ್ಥಿರಚಿತ್ರವಿತ್ತು, ಮನೆಗೆ ಬಂದೆನೆಂದರೆ ಅದು ನನಗೆ ಅಪೇಕ್ಷಣೀಯ ಪ್ರೇಕ್ಷಣೀಯ. ಭಾರತೀಯ ವಿವಾಹ ವ್ಯವಸ್ಥೆ ಮೇಲೆ ಕ್ಷಕಿರಣ ಚೆಲ್ಲುವಂಥ ಸ್ಥಿರಚಿತ್ರ ಅದಾಗಿತ್ತು. ನಗುಮುಖದ ಅಶ್ವಿನಿಯೊಂದಿಗೆ ಹೋಲಿಸಿದರೆ ಗೆಳೆಯನದು ವಿಷಣ್ಣ ವದನ. ತಾನು ಅಭಿಜಾತ ನಿರ್ಲಿಪ್ತನೇನೋ ಎಂಬಂತೆ! ವಿಚ್ಛೇದನದ ಅರುಣೋದಯವನ್ನು ತನ್ನ ಮುಖದ ಕನ್ನಡಿಯಲ್ಲಿ ಪ್ರತಿಫಲಿಸುತ್ತಿರುವುದೋ ಎಂಬಂತೆ! ವೈರಾಗ್ಯಕ್ಕೆ ಸಂಬಂಧಿಸಿದ ಪ್ರಥಮ ಪಠ್ಯದ ಆರಂಭಿಕ ವಾಕ್ಯ ತನ್ನ ಕಣ್ಣುಗಳಲ್ಲಿರುವುದೆಂಬಂತೆ ಕ್ಷೀಣವಾಗಿ ಹೊಳೆದ ಮಹಾನುಭಾವ.

ನವವಿವಾಹಿತನ ಮೊಗದಲ್ಲಿ ಮುಗುಳುನಗೆಯನ್ನು ಪತ್ತೆ ಹಚ್ಚುವ ದಿಸೆಯಲ್ಲಿ ಫೋಟೋಗ್ರಾಫರ್ ಹರಸಾಹಸ ಅನುಭವಿಸಿರಲೂ ಬಹುದು, ಸ್ಮೈಲ್ ಪ್ಲೀಜ್ ಎಂದು

ಅಂಗಲಾಚಿ ಸುಸ್ತಾಗಿರಲೂ ಬಹುದು ಪಾಪ. ಮಕ್ಕಳ ಅಕಾಲಿಕ ಸಾವು ಒಂದೇ ವಿಚ್ಛೇದನದ ಪ್ರಧಾನ ಕಾರಣವಿದ್ದಿರಲಾರದು. ಆ ಫೋಟೋ ಆಕೆಯಲ್ಲಿ ವೈವಾಹಿಕ ಭ್ರಮನಿರಸವನ್ನು ಸೃಷ್ಟಿಸಿರಲೂ ಬಹುದೆಂದು ಮೊದಲೇ ತಿಳಿದಿದ್ದಲ್ಲಿ ನಾನು ಅಥವಾ ಇನ್ಯಾರಾದರೂ ಅದನ್ನು ಅಪಹರಿಸಿ ಪುಣ್ಯ ಭಾಜನರಾಗಬಹುದಿತ್ತು. ಗೃಹಸ್ಥಾಶ್ರಮದ ಅಪಸವ್ಯವೋ ಎಂಬಂತೆ ಅದು ಇನ್ನೂ ಗೋಡೆ ಮೇಲಿರುವುದು. ಆದರೆ ತನ್ನ ಗೆಳೆಯನಿಗೆ ಅದರ ನೆನಪಿರುವುದೋ ಇಲ್ಲವೋ! ಕಳೆದೆರಡು ವರ್ಷಗಳಲ್ಲಿ ತಾನು ಅದರ ಕಡೆ ನೋಡಿರುವನೋ ಇಲ್ಲವೋ! ನೋಡಿ ದಿನಕ್ಕೊಂದು ಸಲವಾದರೂ ನಿಟ್ಟುಸಿರು ಚೆಲ್ಲಿದ್ದಲ್ಲಿ ತಾಡಿಪತ್ರಿಯನ್ನು ದಾಟಿ ಜುಮ್ಮಲಮಡುಗು ಗಡಿಯನ್ನು ಪ್ರವೇಶಿಸದೆ ಇರುತ್ತಿರಲಿಲ್ಲವೇನೊ! ಒಟ್ಟಿನಲ್ಲಿ ತನ್ನ ಗೆಳೆಯ ಸಾರಸ್ವತ ಲೋಕದ ಅವಧೂತನೇ ಸರಿ. ಮೆಲ್ಲಗೆ ಕತ್ತೊರಳಿಸಿದೆ ಆತನನ್ನು ಪೂರ್ಣಪ್ರಮಾಣದಲ್ಲಿ ನೋಡಲೆಂದು, ಹೇಗಿರುವುದು ನನ್ನ ಚೊಚ್ಚಿಲು ಕಾದಂಬರಿ ಎಂಬ ಪ್ರಶ್ನೆಯನ್ನು ತನ್ನ ಬಾಯಿಯಿಂದ ಆಲಿಸಲೆಂದು, ಅಪರೂಪಕ್ಕೆ ಕಾಣಿಸಿಕೊಂಡಿರಬಹುದಾದ ಪ್ರಸನ್ನತಾಭಾವದ ದರ್ಶನ ಪಡಯಲೆಂದು. ಆದರೂ ಹಿಂಜರಿದೆ. ನೋಟವನ್ನು ಪುನಃ ಬೇರೊಂದು ಕಡೆ ಹೊರಳಿಸುವುದು ನಡೆಸಿದೆ. ಮಡದಿಯ ಬಳಿಗೆ ಹೋಗಿ ಸಾಹಿತ್ಯಿಕ ಪರಿಭಾಷೆಯಲ್ಲಿ ಪಾಶ್ಚಾತ್ತಾಪದ ನಾಲ್ಕೇ ನಾಲ್ಕು ಮಾತುಗಳನ್ನಾಡಿ ಪರವಶಗೊಳಿಸಿ ಕರೆಯಬಹುದಿತ್ತಲ್ಲವೆ ಎಂದು ಸಲಹೆ ನೀಡಬೇಕೆಂದು ಯೋಚಿಸಿದೆ, ಆದರೆ ಹೇಳುವುದು ಸಾಧ್ಯವಾಗಲೇ ಇಲ್ಲ. ಸುಮ್ಮನೆ ಮೌನವಹಿಸುವುದಾದರೂ ಎಲ್ಲಿಯವರೆಗೆ! ಆದರೆ ಅಂತಿಮವಾಗಿ ನಿಧಾನವಾಗಿ ಕತ್ತೊರಳಿಸಿ ನೋಡಿದೆ, ಅಲೌಕಿಕ ಲಜ್ಜೆಯಿಂದ..

ಕಾದಂಬರಿಯ ವಾಚನವನ್ನು ಆರಂಭಿಸಿದ ಸಂದರ್ಭದಲ್ಲಿದ್ದ ಪಾರ್ಥವೇ ಬೇರೆ, ವಾಚನವನ್ನು ಪೂರೈಸಿದ ಬಳಿಕ ಗೋಚರವಾಗುತ್ತಿರುವ ಪಾರ್ಥವೇ ಬೇರೆ ಎಂದು ಭಾಸವಾಯಿತು. ಲೇಖಿಕ ಪಾರ್ಥಸಾರಥಿಯಾಗಿ ಬದಲಾಗಿರುವನು, ಪಾರ್ಥಸಾರಥಿ ಅವಧೂತನಾಗಿ ಬದಲಾಗಿರುವನು. ತಾನು ವಾಸ್ತವತೆಯ ಪರಿಧಿಯನ್ನು ಉಲ್ಲಂಘಿಸಿರುವಂತಿರುವುದು, ತನ್ನ ಕಣ್ಣಗಳ ರೆಪ್ಪೆಗಳ ಮೇಲೆ ಕೂಡ್ರಲು ಹವಣಿಸುತ್ತಿದ್ದ ನೊಣಗಳನ್ನು ಕಂಪನದಿಂದ ಓಡಿಸುವ ಪ್ರಯತ್ನವನ್ನು ಮಾಡುತ್ತಿಲ್ಲ. ನೀನು ಮುಗಿಸಿದ್ದು ಕಾದಂಬರಿಯ ಆರಂಭವನ್ನು ಮಾತ್ರ ಎಂದು ಹೇಳುವ ಪ್ರಯತ್ನವನ್ನೂ ತಾನು ಮಾಡುತ್ತಿಲ್ಲ. ತನ್ನ ಕಾದಂಬರಿಯ ಸಾಂಪ್ರತು ವಾಚಕನಾದ ನನ್ನನ್ನೇ ಶೂನ್ಯವೆಂದು ಪರಿಗಣಿಸಿ ದಿಟ್ಟಿಸುತ್ತಿರುವನು. ಒಂದು ಬದಲಾವಣೆ ಎಂದರೆ ತನ್ನ ಬೆನ್ನ ಹುರಿಯ ನಡುವಿನ ಭಾಗವನ್ನು ಗೋಡೆಗೆ ಆನಿಸಿರುವನು. ಆದರೆ ಆತನ ಎರಡೂ ಹಸ್ತಗಳ ಬೆರಳುಗಳು ಜಪಮಣಿ ಎಣಿಸುತ್ತಿರುವಂತೆ ಅನಗತ್ಯವಾಗಿ ಚಲಿಸುತ್ತಿರುವವು, ಕೇವಲ ತಾಸೊಪ್ಪತ್ತಲ್ಲಿ ಸುಟ್ಟಗೆಣಸಿನ ತೊಗಟೆಯಂತಾಗಿರುವ ತುಟಿಗಳು ಕಂಪಿಸುತ್ತಿರುವವು. ನನ್ನ ಅಸ್ತಿತ್ವವನ್ನಾಗಲೀ, ನನ್ನ ಮಾತುಗಳನ್ನಾಗಲೀ ತಾನು ಕೇಳಿಸಿಕೊಳ್ಳುತ್ತಿಲ್ಲ, ನನ್ನ ಆತಂಕದ ಮೂಲವನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ, ನಾನು ಹಸ್ತಪ್ರತಿಯ ಮೇಲೊದಿಕೆಯಿಂದ ಬೀಸಿದ ಗಾಳಿ ತನ್ನನ್ನು ತಲುಪುತ್ತಿಲ್ಲ, ಮುಖಕ್ಕೆ ಒಂದು ಹಿಡಿ ನೀರನ್ನು ಸಿಂಪರಣೆ ಮಾಡಲೆಂದು ಅಡುಗೆ ಮನೆ, ಸ್ನಾನದ ಕೋಣೆಗಳಿಗೆಲ್ಲಾ ಹೋಗಿ ಹುಡುಕಿದೆ, ಅಲ್ಲೆಲ್ಲೂ ಒಂದು ಬೊಗಸೆಯಷ್ಟು ನೀರಿನ ಸುಳಿವಿಲ್ಲ. ಗಾಬರಿಗೊಂಡೆ. ಅತಿಯಾದ ಆನಂದ, ಅತಿಯಾದ ಭಾವ ಪರವಶತೆ, ನೆನಪುಗಳ ಸಾಮೂಹಿಕ ದಾಳಿ ಸಂಭವಿಸಿದಾಗ ಪಾರ್ಕಿನ್ಸನ್ ಖಾಯಿಲೆ ಉಲ್ಬಣಿಸಬಹುದೆಂದು ಡಾ.ಸುಧನ್ವ ಹೇಳಿದ್ದನ್ನು ಆ ಕ್ಷಣ ನೆನಪಿಸಿಕೊಂಡೆ.

ವೈದ್ಯರಿಗೆ ಫೋನ್ ಮಾಡ ಬೇಕೆಂದರೆ ಅವರ ನಂಬರ್ ನನ್ನ ಬಳಿ ಇಲ್ಲ, ಇನ್ನು ನೆರೆಹೊರೆಯವರ ಸಹಾಯ ಯಾಚಿಸುವುದೇ ಒಳಿತೆಂದು ಭಾವಿಸಿ ಅಂಗಳಕ್ಕೆ ಧಾವಿಸಿದೆ. ಎರಡೂ ಕಡೆ ದೃಷ್ಟಿ ಹಾಯಿಸಿದೆ. ಬಲ ಪಕ್ಕದ ಮನೆಯ ಮುಂಬಾಗಿಲು ಮೆಲ್ಲಗೆ ತೆರೆದುಕೊಂಡಿತು, ಮೆಲ್ಲಗೆ ಕಾಣಿಸಿಕೊಂಡ ಸ್ಥೂಲಕಾಯದ ವ್ಯಕ್ತಿಯತ್ತ ನೋಡಿದೆ, ನಾನು ಹೇಳಿದ್ದಕ್ಕೆ ಶ್ರೀವೈಷ್ಣವ ಮುದ್ರೆಗಳನ್ನು ನೊಸಲ ಮೇಲೆಲ್ಲಾ ಅಲಂಕರಿಸಿಕೊಂಡಿದ್ದ ಆತ ಅಪಾದಮಸ್ತಕ ದಿಟ್ಟಿಸಿದ, ಇಂಗ್ಲೀಷ್ ಸಮಮಿಶ್ರಣದ ತೆಲುಗಿನಲ್ಲಿ "ನೀರನ್ನು ದ್ವೇಷಿಸುವವರು ಉದ್ಧಾರಾಗೋದಿಲ್ಲವೆನ್ನುವುದಕ್ಕೆ ಅವನೇ ಪ್ರತ್ಯಕ್ಷ ಸಾಕ್ಷಿ, ಇದೆಲ್ಲ ಪ್ರತನಿತ್ಯ ಸಾಯುವವರಿಗೆ ದುಃಖಿಸುವ ನಮ್ಮ ಸಂಕಟ ನಿಮ್ಮಂಥ ಹೊಸಬರಿಗೆ ಅರ್ಥ ಆಗೋದಿಲ್ಲ, ದೇವರು ಏನು ಕಡಿಮೆ ಮಾಡಿದ್ದಾನೆ ಸ್ವಾಮಿ, ತಲೆಮಾರುಗಳು ಕೂತು ತಿಂದರೂ ಸವೆಯದಷ್ಟು ಆಸ್ತಿ ಇದೆ" ಎಂದು ಹೇಳಿದಾದ ಬಳಿಕ ಎದೆ ಜೇಬಿನಿಂದ ಚಾಳೇಸ ತೆಗೆದು ಕಣ್ಣಿಗೇರಿಸಿಕೊಂಡು ನನ್ನ ಹಿಂದೆಯೇ ನಡೆದ, ಬಾಗಿಲ ಎರಡೂ ತೋಳುಗಳಿಗೆ ತಮ್ಮೆರಡೂ ಕೈಗಳನ್ನು ಅಂಟಿಸಿ ಬಿಲ್ಲಿನಂತೆ ಬಾಗಿ ನೋಡಿ ನಿಟ್ಟುಸಿರುಬಿಡುತ್ತ ಸಹಜ ಸ್ಥಿತಿಗೆ ಮರಳಿದ. "ಪಾರ್ಕಿನ್ಸನ್ ಅಪಾಯಕಾರಿ ಖಾಯಿಲೆ ಸ್ವಾಮಿ, ಅದು ಅಪಸ್ಮಾರಕಕ್ಕೆ ತಿರುಗಲೂಬಹುದು, ಯೋಚಿಸಬೇಡಿ, ನಮ್ಮ ಆಫೀಸು ಪಕ್ಕದಲ್ಲಿಯೇ ಸುಧನ್ವರ ಕ್ಲಿನಿಕ್ಕರೋದು, ಹೇಳಿ ಕಳಿಸ್ತೀನಿ ಚಿಂತೆ ಮಾಡಬೇಡಿ, ಪ್ರಾಣಕ್ಕೆ ಅಪಾಯವಿಲ್ಲ" ಎಂದು ಹೇಳಿದವನೆ ಸ್ಕೂಟರ್ ಏರಿ ಹೊರಟು ಮಾಯವಾದ. ಅವರು ಅತ್ತ ಹೋದೊಡನೆ..

ಅದೇ ಮನೆಯಿಂದ ಮಧ್ಯವಯಸ್ಕ ಮಹಿಳೆ ಹೊರಗೆ ಕಾಣಿಸಿಕೊಂಡಳು, ಅದೂ ನೀರಿದ್ದ ಪಾತ್ರೆಯೊಂದಿಗೆ. ನನ್ನ ಪೂರ್ವಾಪರ ತಿಳಿದುಕೊಂಡಳು, ಅಯ್ಯೋ ಪಾಪ ಎಂದು ಉದ್ಗರಿಸಿದಳು, ಆತನ ಒಳ್ಳೆತನವನ್ನೂ, ಆತನ ಕಥೆಗಳ ಗುಣಗಾನವನ್ನೂ ಮಾಡುತ್ತ ಮನೆಯನ್ನು ಪ್ರವೇಶಿಸಿದಳು, ಬೆನ್ನ ಹಿಂದೆಯೇ ಕಾಲೇಜ್ ಸಮವಸ್ತ್ರ ಧರಿಸಿದ್ದ ತನ್ನ ಇಬ್ಬರು ಹೆಣ್ಣುಮಕ್ಕಳೂ ಧಾವಿಸಿದವು, ಪಾರ್ಥ ಅಂಕಲ್ ನಾನು ಶ್ರೀಲತಾ ಎಂದು ಒಂದು ಹುಡುಗಿಯೂ, ಪಾರ್ಥ ಮಾಮ ನಾನು ಅರುಣಾ ಎಂದು ಇನ್ನೊಂದು ಹುಡುಗಿಯೂ! ಅವರೇ ಬೆಳೆಗ್ಗೆ ಊಟದ ಕ್ಯಾರಿಯರ್ ಇರಿಸಿದ್ದರಂತೆ, ಇದು ಒಂದು ದಿವಸದ ಕಥೆಯಲ್ಲ, ದಿನಂಪ್ರತಿ ಹೀಗೇನೆ! ಆತನ ಮುಖಕ್ಕೆ ನೀರು ಸಿಂಪರಿಸಿದ್ದೂ ಆಯಿತು, ಟುವೆಲ್ಲಿನಿಂದ ಆತನ ಮುಖವನ್ನು ಒರೆಸಿದ್ದೂ ಆಯಿತು, ಗಾಳಿ ಬೀಸಿದ್ದೂ ಆಯಿತು, ಶ್ರೀಲತಾ ಹೇಳಿದೊಡನೆ ಅರುಣಾ ಕಪಾಟಿನಲ್ಲಿದ್ದ ಮಾತ್ರೆ ತಂದು ಬಲವಂತದಿಂದ ನುಂಗಿಸಿದಾದ ಬಳಿಕ ಪಾರ್ಥಸಾರಥಿಗೆ ಪ್ರಜ್ಞೆ ಬರುವುದಕ್ಕೂ ಬಾಗಿಲ ಬಳಿಕ ಡಾಕ್ಟರರ ನೆರಳು ಕಾಣಿಸಿಕೊಳ್ಳುವುದಕ್ಕೂ ಸರಿ ಹೋಯಿತು.

++++

ದೇವರು ಕರುಣಾಮಯಿ! ಅಂತೂ ನನ್ನ ಗೆಳೆಯ ವಾಸ್ತವಕ್ಕೆ ಮರಳಿದ. ಐದಾರು ದೀರ್ಘ ಉಸಿರಾಟಗಳ ಬಳಿಕ ಚೇತರಿಸಿಕೊಂಡ. ನನ್ನನ್ನೊಂದೇ ಅಲ್ಲದೆ ಅರೆ ಸುಧನ್ವ ಯಾವಾಗ ಬಂದಿರಿ ಎಂದು ಗುರುತಿಸಿ ಮಾತನಾಡಿಸಿದ, ನನ್ನನ್ನು ಅವರಿಗೂ, ಅವರನ್ನು ನನಗೂ ಪರಿಚಯಿಸಿಕೊಟ್ಟ, ಖಾಯಿಲೆ ಕಾಣಿಸಿಕೊಂಡಿದ್ದು ಮೂರು ತಿಂಗಳ ಹಿಂದೆ, ಎಂದರೆ ಕಡಪಾದ ತನ್ನ ಪತ್ನಿಯ ಪರ ನ್ಯಾಯವಾದಿ ಕಾರಂಪೂಡಿ ಜಯಪ್ರದ ಅವರಿಂದ ನೋಟಿಸು ಬಂದಾಗ, ಅಂದರೆ ತಮ್ಮ ಮಾವ ಅಂದರೆ ಪತ್ನಿಯ ತಂದೆ ಕರಣಂ

ಶಿವಶಂಕರಶಾಸ್ತ್ರಿಯವರ ವಿಶೇಷ ಕೌಟುಂಬಿಕ ಪ್ರತಿನಿಧಿ ಕಾಸುಲ ಸುಬ್ಬಾರೆಡ್ಡಿಯವರು ತಮ್ಮ ಸಂಗಡಿಗರೊಂದಿಗೆ ರಾಜಿ ಮಾಡಿಸಲೆಂದು ಬಂದಿದ್ದಾಗ, ಅಂದರೆ ತನಿಕೆಳ್ಳ ಅದೇ ಹಿಂದಿನ ದಿವಸ ಪ್ರಾಣಾಯಾಮ ಧ್ಯಾನ ಯೋಗ ಕಲಿಯುವ ಸಲುವಾಗಿ ಅಭಿನವ ಪತಂಜಲಿ ಬಿರುದಾಂಕಿತ ಶ್ರೀ ಸುಬ್ರಹ್ಮಣ್ಯಂಶಾಸ್ತ್ರಿಗಳನ್ನು ಭೇಟಿ ಮಾಡಿ ಪದ್ಮಾಸನ ಹಾಕುವುದನ್ನು ರೂಢಿ ಮಾಡಲಾರಂಭಿಸಿದ್ದಾಗ. ಡಾ.ಸುಧನ್ವ ಈಗಲಾದರೂ ತಮ್ಮ ಗೆಳೆಯನಿಗೆ ಆರೋಗ್ಯಕ್ಕೆ ಸಂಬಂಧಿಸಿದಂತೆ ವಿವೇಕ ಪ್ರಾಪ್ತಿಯಾಯಿತಲ್ಲ ಎಂದು ನೆಮ್ಮದಿಯ ಉಸಿರುಬಿಟ್ಟಿದ್ದರು. ಸಲಹೆ ಸೂಚನೆ ನೀಡಿ ಆತನ ಸೇವೆ ಮಾಡುವ ಸಲುವಾಗಿ ಸೇವಾಮನೋಭಾವದ ತರುಣಿಯನ್ನು ನೇಮಿಸಿದ್ದರು.

ಇಪ್ಪತ್ತರ ಹರೆಯದ ಆಕರ್ಷಕ ವ್ಯಕ್ತಿತ್ವದ ಸಿಂಧು ನರ್ಸಿಂಗ್ ವಿದ್ಯಾರ್ಥಿನಿ. ಆಕೆಯ ಆ ಹೆಸರಿನ ಹಿಂದೆ ರೋಚಕ ಇತಿಹಾಸವಿರುವುದು. ಆಕೆಯ ತಂದೆ ಪ್ರೊ. ಕರಿವೇಮಲ, ಹಲವು ವರ್ಷಗಳ ಕಾಲ ಸಿಂಧೂ ಕಣಿವೆಯಲ್ಲಿದ್ದು ಸಂಶೋಧನೆ ನಡೆಸಿದ ಹವ್ಯಾಸಿ ಇತಿಹಾಸ ತಜ್ಞರು. ಅವರ 'ಅನ್‌ಟೋಲ್ಡ್ ಸ್ಟೋರಿ ಆಫ್ ಸಿಂಧೂ ವ್ಯಾಲಿ' ಎಂಬ ಲೇಖನ ಶಿಕಾಗೋದ ಷಣ್ಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ನ್ಯಾಷನಲ್ ಜಿಯೋಗ್ರಾಫಿಕ್ ಸಂಸ್ಥೆಯ ಆರ್ಥಿಕ ಸಹಾಯದಿಂದ ಸಾಕ್ಷ್ಯಚಿತ್ರ ನಿರ್ಮಿಸುವ ಸಲುವಾಗಿ ಸಿಂಧೂ ಕೊಳ್ಳದ ಕಡೆಗೆ ಹೋದವರು ಮರಳಲೇ ಇಲ್ಲ. ಗಂಡನನ್ನು ಹುಡುಕಿಕೊಂಡು ಹೋದ ಅವರ ಪತ್ನಿ ಮಾಧವಿ ನಂಬೂದರಿ ಸಹ ಮರಳಲೇ ಇಲ್ಲ. ಕರ್ನೂಲಿನ ಚೌರಸ್ತಾದಲ್ಲಿ ಮಲಬಾರಿ ಟೀ ದುಖಾನಿನ ಮಾಲಕ ಶಬ್ಬೀರ್ ಆಸರೆ ನೀಡದಿದ್ದಲ್ಲಿ ಏಳು ವರ್ಷದ ಬಾಲೆ ಸಿಂಧು ಅಲೆಪ್ಪಿಯ ಬೀದಿಗಳಿಗೆ ಬಲಿಯಾಗಿರಬೇಕಿತ್ತು. ಇಂಥ ಹಿನ್ನಲೆಯ ಸಿಂಧುವಿನಲ್ಲಿ ಸಾಹಿತ್ಯಾಭಿರುಚಿ ರಕ್ತಗತವಾಗಿ ಬಂದಿರಬಹುದು.

ಸಿಂಧೂಳ ಚಿಕ್ಕಪುಟ್ಟ ಕವಿತೆಗಳು ನಾಡಿನ ಹಲವು ಪ್ರಸಿದ್ಧ ನಿಯತಕಾಲಿಕಗಳಲ್ಲಿ ಪ್ರಕಟಗೊಂಡಿದ್ದವು. ವಿಮರ್ಶಕರ ನೆರವು ಇರದಿದ್ದಲ್ಲಿ ಕವಿತೆಗಳು ಸಾಮಾನ್ಯ ವಾಚಕರನ್ನು ತಲುಪುವುದಿಲ್ಲವೆಂಬ ಉದ್ದೇಶದಿಂದ ಕಥಾಪ್ರಾಕಾರದ ಹೊಸ್ತಿಲಲ್ಲಿ ನಿಂತಿದ್ದಳು. ಕೆಲವು ಕಥೆಗಳನ್ನು ಬರೆದಿದ್ದಳಾದರೂ ಅವುಗಳನ್ನು ಪತ್ರಿಕೆಗಳಿಗೆ ಕಳಿಸಿರಲಿಲ್ಲ. ಅನಾಥೆಯಾದ ತನಗೆ ಆಶ್ರಯ ಕಲ್ಪಿಸಿದ್ದ, ತನ್ನ ವ್ಯಾಸಂಗಕ್ಕೆ ಧನ ಸಹಾಯ ನೀಡಿದ್ದ, ತಮ್ಮ ಧನ್ವಂತರಿ ಆಸ್ಪತ್ರೆಯಲ್ಲಿ ಅರೆಕಾಲಿಕ ಉದ್ಯೋಗ ದಯಪಾಲಿಸಿದ್ದ ಡಾ.ಸುಧನ್ವ ಅವರಿಗೆ ತನ್ನ ರಚನೆಗಳನ್ನು ತೋರಿಸುತ್ತಿದ್ದಳು. ವೈದ್ಯಕೀಯ ಲೇಖನಗಳನ್ನು ಬರೆಯುತ್ತಿದ್ದರೂ ಸೃಜನಶೀಲ ಸಾಹಿತ್ಯದ ಬಗ್ಗೆ ಒಲವು ಇರಿಸಿಕೊಂಡಿದ್ದ ಸುಧನ್ವ ಆಕೆಯನ್ನು ಒಂದೆರಡು ಸಲ ತನ್ನ ಗೆಳೆಯ ತನಿಕೆಳ್ಳನ ಬಳಿಗೆ ಕರೆದೊಯ್ದು ಪರಿಚಯಿಸಿದ್ದ, ತಾನೇ ಆಕೆಯ ರಚನೆಗಳನ್ನು ವಾಚಿಸಿದ್ದ, ಕಥೆಗಳನ್ನು ತಿದ್ದಿ ಸರಿಪಡಿಸುವಂತೆ, ಪ್ರಾಥಮಿಕ ತಿಳವಳಿಕೆ ನೀಡುವಂತೆ ವಿನಂತಿಸಿಕೊಂಡಿದ್ದ. ಆದರೆ ಪಾರ್ಥ ಅದಕ್ಕೆ ಒಪ್ಪಿರಲಿಲ್ಲ.

ಕಥೆ ಸೃಜನಶೀಲವಾಗಿ ಸಹಜವಾಗಿ ಒಲಿಯಬೇಕು. ಕವಿತೆಯ ಬೆನ್ನಲ್ಲಿಯೇ ಕಥೆ, ಕಥೆಯ ಬೆನ್ನಲ್ಲಿಯೇ ಕವಿತೆ. ಅವೆರಡರ ನಡುವೆ ಅವಿನಾಭಾವ ಸಂಬಂಧ, ದಾಂಪತ್ಯದ ಹಾಗೆ! ಅರೆ ಹೌದಲ್ಲ, ತನಗೆ ತನ್ನ ಧರ್ಮಪತ್ನಿಯೇ ನಿಗೂಢ! ಮಕ್ಕಳಾದರೂ ಪರಸ್ಪರ ನಿಗೂಢ. ಆಕೆಯನ್ನು ತಾನು ಅರ್ಥ ಮಾಡಿಕೊಳ್ಳಲಿಲ್ಲ, ತನ್ನನ್ನು ಆಕೆ ಅರ್ಥ ಮಾಡಿಕೊಳ್ಳಲಿಲ್ಲ. ರೋಗಿಷ್ಟ ಮಕ್ಕಳಿಗೆ ತಾನು ತಜ್ಞವೈದ್ಯರಿಂದ ಚಿಕಿತ್ಸೆ ಕೊಡಿಸಲಿಲ್ಲ, ಕೊಡಿಸುತ್ತಿದ್ದನೇನೊ! ಆದರೆ ಅವು ಗುಣವಾಗದ ಅನುವಂಶಿಕ ಖಾಯಿಲೆಗಳು. ಬದುಕಿನುದ್ದಕ್ಕೂ ಅವು ಅಂಗವೈಕಲ್ಯತೆಯಿಂದ ನರಳುವುದು

ತನಗೆ ಇಷ್ಟವಿರಲಿಲ್ಲ, ತವರಿಗೆ ಹೊರಟು ನಿಂತ ತನ್ನ ಹೆಂಡತಿಯ ಕೈಯಲ್ಲಿದ್ದ ಸೂಟ್‌ಕೇಸನ್ನು ತಾನು ಕಸಿದುಕೊಳ್ಳಲಿಲ್ಲ, ದಯವಿಟ್ಟು ಕ್ಷಮಿಸು ಎಂದು ಪಾಶ್ಚಾತ್ತಾಪದ ಮಾತುಗಳನ್ನಾಡಲಿಲ್ಲ. ಆಕೆ ಅಗಲಲೆಂದೇ ತಾನು ಕಾಯುತ್ತಿದ್ದನೇನೊ! ಕಾರಣ ತನ್ನ ದೇಹದ ರಕ್ತದ ಕಣಕಣಗಳಲ್ಲಿ ನೆಲೆಸಿರುವ ವ್ಯಾಧಿಗಳು ಒಂದೇ ಎರಡೆ! ಇನ್ನೂ ಆರಂಭಿಕ ಹಂತದಲ್ಲಿರುವ ಪಾರ್ಕಿನ್ಸನ್, ಶುಗರ್, ರಕ್ತದೊತ್ತಡ, ಅಪಸ್ಮಾರ! ವೃದ್ಯಾಪ್ಯದೊಂದಿಗೆ ಜನಿಸಿರುವ ತಾನೆಲ್ಲಿ! ಅಕಾಲಿಕವಾಗಿ ವೃದ್ಧನಾಗಲಿರುವ ತಾನೆಲ್ಲಿ! ಪ್ರತಿಕ್ಷಣ ದುರ್ಮರಣಕ್ಕೆ ತುತ್ತಾದ ತನ್ನ ಹೆತ್ತವರನ್ನು ದುಃಸ್ವಪ್ನಗಳೆಂದೇ ಭಾವಿಸಿ ಬೆಚ್ಚಿ ಬೀಳುತ್ತಿರುವ ತಾನೆಲ್ಲಿ! ಈ ಕ್ಷಣದ ನೆಮ್ಮದಿಯನ್ನು, ಈ ಕ್ಷಣದ ಸಾಂತ್ವನವನ್ನು ಪಡೆಯುವ ಸಲುವಾಗಿ ಸಾಹಿತ್ಯಾವಲಂಭಿಯಾಗಿರುವ ತಾನೆಲ್ಲಿ!

ಆರೋಗ್ಯವೇ ಸಾಕಾರ ರೂಪ ಪಡೆದಂತಿರುವ ಅಶ್ವಿನಿ ಎಲ್ಲಿ! ವೃದ್ಯಾಪ್ಯ ಅಪ್ಪಿತಪ್ಪಿ ಸುಳಿಯದ ಅಶ್ವಿನಿ ಎಲ್ಲಿ! ವೈವಾಹಿಕ ಪ್ರತಿಯೊಂದೂ ಕ್ಷಣವನ್ನು ಉತ್ಕಟವಾಗಿ ಅನುಭವಿಸಲು ತುಡಿಯುತ್ತಿರುವ ಅಶ್ವಿನಿ ಎಲ್ಲಿ! ಮಕ್ಕಳು ಮೊಕ್ಕಳು ಮರಿ ಮೊಮ್ಮಕ್ಕಳು ಗಿರಿಗಿರಿ ಅಸಂಖ್ಯಾತ ಮಕ್ಕಳು ಮರಿಗಳನ್ನು ಆಭರಣೋಪಾದಿಯಲ್ಲಿ ಮುಡಿದಿರುವ ವಂಶವೃಕ್ಷದ ಕನಸನ್ನು ಕನವರಿಸುತ್ತಿರುವ ಅಶ್ವಿನಿ ಎಲ್ಲಿ! ತಮ್ಮಿಬ್ಬರ ನಡುವೆ ದೈಹಿಕವಾಗಿ, ಮಾನಸಿಕವಾಗಿ ಅಜಗಜಾಂತರ ವ್ಯತ್ಯಾಸ. ಹದಿಹರೆಯದ ದಿವಸಗಳಿಂದಲೂ ತನಿಕೆಳ್ಳ ತನ್ನ ಜನನೇಂದ್ರಿಯದ ಕ್ರಿಯಾಶೀಲತೆಯ ಸದ್ದಡಗಿಸುವ ಸಲುವಾಗಿ ಏನೆಲ್ಲ ಪ್ರಯತ್ನ ನಡೆಸುತ್ತಿದ್ದ. ಮುಷ್ಟಿಮೈಥುನದ ಪರಾಕಾಷ್ಠೆ ತಲುಪಿದ ಬಳಿಕವೂ ರೋಮಾಂಚನಗೊಳ್ಳದೆ ಮೊಣಕಾಲುಗಳ ಮೇಲೆ ಮುಖವಿರಿಸಿ ಅಯ್ಯೋ ತನ್ನ ಪ್ರಾರಾಬ್ಧವೇ ಎಂದು ದುಃಖಿಸುತ್ತಿದ್ದ. ಸ್ತ್ರೀರೂಪ ಸಾಕ್ಷಾತ್ಕಾರವಾದೊಡನೆ ಮೈಂದ್ವಂಗಿಯಂತೆ ತನ್ನ ಅಂಗೋಪಾಂಗಗಳನ್ನು ಒಳಕ್ಕೆಳೆದುಕೊಂಡು ಮಾಯವಾಗಿಬಿಡುತ್ತಿದ್ದ. ಇಂಥ ಗುಣಸ್ವಭಾವದ ತಾನು ವಿವಾಹವಾಗಿ ಗೃಹಸ್ಥಾಶ್ರಮವನ್ನು ಪ್ರವೇಶಿಸುವುದೆಂದರೆ!

ತಾನು ಸುಮ್ಮನಿದ್ದಾನು! ಆದರೆ ತನ್ನನ್ನು ಹೆತ್ತವರು ಸುಮ್ಮನಿದ್ದರೆ ತಾನೆ! ಅದೂ ಅಲ್ಲದೆ ಏಳೆಂಟು ತಲೆಮಾರುಗಳು ಕೂತು ತಿಂದರೂ ಸವೆಯದಷ್ಟು ಸ್ಥಿರಚರ ಆಸ್ತಿ! ಅದೂ ಅಲ್ಲದೆ ಐವತ್ತು ತುಂಬಿದೊಡನೆ ಕಾಡಲಾರಂಭಿಸಿರುವ ವ್ಯಾಧಿಗಳು ಬೇರೆ! ರೋಗಗಳು ಉಲ್ಬಣಿಸಿ ತಾವು ಯಾವಾಗ ಮೃತ್ಯುಲೋಕಕ್ಕೆ ಪ್ರಯಾಣ ಬೆಳೆಸುವೆವೆಂಬುದು ನಿಗೂಢ. ಮಾಡಿಕೊಳ್ಳುವವನಿಗೆ ಇಷ್ಟವಿರುವುದೋ, ಇಷ್ಟ ಇಲ್ಲವೋ ಎಂಬುದು ಮುಖ್ಯವಲ್ಲ, ತಮ್ಮ ಪ್ರತಿಷ್ಠಿತ ತನಿಕೆಳ್ಳ ವಂಶವೃಕ್ಷವನ್ನು ಮಗನಾದವನು ಬಾಡಿ ಸೊರಗದಂತೆ ನೋಡಿಕೊಳ್ಳುವುದು ಮುಖ್ಯ. ವಿವಾಹ ಬಂಧ ರಾಯಲಸೀಮೆಯ ಎರಡು ಪ್ರತಿಷ್ಠಿತ ಕುಟುಂಬಗಳನ್ನು ಪರಸ್ಪರ ಒಂದು ಗೂಡಿಸುವುದು ಇನ್ನೂ ಮುಖ್ಯ. ತನಿಕೆಳ್ಳ ಕುಟುಂಬದ ಹಿರಿಯರೂ, ಪ್ರಸಿದ್ಧ ಕ್ರಿಮಿನಲ್ ವಕೀಲರೂ ಆದ ರಾವ್‌ಬಹದ್ದೂರ ಶೇಷಗಿರಿರಾಯರು ತಮ್ಮಿಂದ ಕಾನೂನು ಸೇವೆ ಪಡೆಯುತ್ತಿದ್ದ ಜಮ್ಮಲಮಡುಗಿನ ಕರಣಂ ಶಿವಶಂಕರಸ್ವಾಮಿಯವರ ಏಕೈಕ ಸುಪುತ್ರಿ ಅಶ್ವಿನಿಯನ್ನು ನೋಡುವುದರ ಮೂಲಕ ಅವರ ಅಪಾರ ಆಸ್ತಿಯ ಮೇಲೂ ಕಣ್ಣಿಟ್ಟರು. ಬ್ರಹ್ಮಚರ್ಯಕ್ಕೆ ಹೊಂದಿಕೊಳ್ಳಲು ಅಹರ್ನಿಶಿ ಶ್ರಮಿಸುತ್ತಿದ್ದ ಪಾರ್ಥಸಾರಥಿ ಕೇಳಿದೊಡನೆ ನಾಚಿಕೊಂಡರೆ ಸಾಕಾಗಿತ್ತೇನೊ! ಆದರೆ ಭಯದಿಂದ ಕಂಪಿಸಿದ. ಆ ಕ್ಷಣ ತನ್ನೊಳಗೆ ಕೂರ್ಮಾವತಾರ ಕಾಣಿಸಿಕೊಂಡಿತು, ಸ್ವೀಕರಿಸಲೂ ಆಗದೆ ನಿರಾಕರಿಸಲೂ ಆಗದೆ ಒದ್ದಾಡುತ್ತಲೇ ಹೆತ್ತವರೊಂದಿಗೆ ಜಮ್ಮಲಮಡುಗಿಗೆ ಪ್ರಯಾಣ ಬೆಳೆಸಿದ.

ಎರಡು ಎಕರೆ ವಿಸ್ತೀರ್ಣದ ಪೂರ್ವಕಾಲದ ಮನೆಯಲ್ಲಿ ಶತಮಾನಗಳಷ್ಟು ಹಳೆಯ ಪೀಠೋಪಕರಣಗಳು, ಯಮಧೂತರನ್ನು ಹೋಲುತ್ತಿದ್ದರೂ ವಿಧೇಯತೆಗೆ ಹೆಸರಾಗಿದ್ದ ಆಳುಕಾಳುಗಳು. ಕರಣಂ ಶಿವಶಂಕರಶಾಸ್ತ್ರಿಗಳು ವರಮಹಾಶಯನನ್ನು ನೋಡಿದೊಡನೆ ಶ್ರೀನಾಥುಡು ಕವಿ ಸೃಜಿಂಚಿನ ಶೃಂಗಾರ ನೈಷಧಂ ಕಾವ್ಯವನ್ನು ಸ್ಮೃತಿಗೆ ತಂದುಕೊಂಡರು, ತಮ್ಮ ಭಾವೀ ಅಳಿಯನನ್ನು ಕಾವ್ಯನಾಯಕ ಪ್ರವರಾಖ್ಯುಡುಗೆ ಹೋಲಿಸುತ್ತ ಪ್ರಸನ್ನವದನರಾದರು. ಹುಡುಗ ತೆಲುಗು, ಸಂಸ್ಕೃತಗಳೆರಡೂ ಭಾಷೆಗಳಲ್ಲಿ ಸ್ನಾತಕ ಪಟ್ಟಭದ್ರುಡು ಬೇರೆ. ಆಹಾರದಿನಿಸುಗಳಿದ್ದ ಬೆಳ್ಳಿ ಕರಂಡಕದೊಡನೆ ಆಗಮಿಸಿದ ಅಶ್ವಿನಿ ತನ್ನನ್ನು ನೋಡದ ವರ ಮಹಾಶಯನ ಕಡೆ ಕುಡಿಗಣ್ಣಿನಿಂದ ದೃಷ್ಟಿ ಹಾಯಿಸಿದಳು. ಗುಂಗುರುಗೂದಲ ತಲೆ, ವಿಶಾಲವಾದ ನೊಸಲು, ಶುಭ್ರ ಆಗಸದಂಥ ಕಣ್ಣುಗಳು, ನೀಳನಾಸಿಕ, ಚೆಂದುಟಿಗಳು ಬೇರೆ, ಆಳೆತ್ತರದ ನಿಲುವು. ಆದರೆ ಮುಖದಲ್ಲಿ ಮಾತ್ರ ವೈರಾಗ್ಯಕ್ಕೆ ಸಂಬಂಧಿಸಿದ ಶೂನ್ಯ ಸಂವೇದನೆ! ಸೌಂದರ್ಯದ ನಿಧಿಯಂತಿರುವ ತನ್ನ ಕಡೆ ನೋಡುತ್ತಿಲ್ಲವಲ್ಲ! ನೋಟದಿಂದ ತನ್ನನ್ನು ರೋಮಾಂಚನಗೊಳಿಸುತ್ತಿಲ್ಲವಲ್ಲ! ಆದರೂ ನಿರಾಶಳಾಗಲಿಲ್ಲ ತಾನು! ಅವನತಮುಖಿಯಾದಳೆಂದರೆ ಒಪ್ಪಿದಂತೆ ತಾನೆ!

ಆದರೆ ಪಾರ್ಥ ಆಕೆಯ ಒಪ್ಪಿಗೆಯಿಂದ ಕಸಿವಿಸಿಗೊಂಡ, ತನ್ನನ್ನು ಕಾಡಲು ತುದಿಗಾಲಲ್ಲಿ ನಿಂತಿರುವ ಅಭಿಜಾತ ಖಾಯಿಲೆಗಳನ್ನು ನೆನಪಿಸಿಕೊಂಡ, ತನ್ನನ್ನು ಹೆತ್ತವರ ದೇಹದಲ್ಲಿ ನಿಗೂಢವಾಗಿ ಅವಿತಿರುವ ಖಾಯಿಲೆಗಳನ್ನು ನೆನಪಿಸಿಕೊಂಡ, ಷಷ್ಯ್ಟಬ್ದಿ ಪೂರೈಸದೆ ಇಹಲೋಕ ತ್ಯಜಿಸಿದ ತನಿಕೆಳ್ಳ ವಂಶದ ವ್ಯಾಧಿಗ್ರಸ್ತರನ್ನು ನೆನಪಿಸಿಕೊಂಡ. ತನಿಕೆಳ್ಳ ವಂಶದ ಏಕೈಕ ಕುಡಿಯಾದ ತಾನೂ ಅರವತ್ತನ್ನು ಸಮೀಪಿಸುವುದೆಂದರೆ! ಸಂಭೋಗಕ್ರಿಯೆಯ ಮೂಲಕ ನಿಷ್ಪಾಪಿ ಸುಂದರಿಯ ಗರ್ಭವನ್ನು ಅನುವಂಶಿಕ ಖಾಯಿಲೆಗಳ ವಾರಸುದಾರನಾಗಿ ಪ್ರವೇಶಿಸುವುದೆಂದರೆ! ಪ್ರವೇಶಿಸಿ ತಾರುಣ್ಯದ ಸುಕೋಮಲ ಭಾವನೆಗಳ ಮೇಲೆ ಹಲ್ಲೆ ನಡೆಸುವುದೆಂದರೆ! ಸುಂದರ ಕನಸುಗಳನ್ನು ನಾಶ ಮಾಡುವುದೆಂದರೆ! ಅದೂ ತೆಲುಗು ಸಾಹಿತ್ಯದ ಅಲ್ಲಸಾನಿ ಪೆದ್ದನ, ನನ್ನಯ್ಯ, ಧೂರ್ಜಟಿ, ಕೃಷ್ಣರಾಯ, ತೆನಾಲಿಯರಂಥವರ ವಾತಾಪಿ ಎನಿಸಿರುವ ತಾನು! ಸಂಸ್ಕೃತ ಸಾಹಿತ್ಯದ ಕಾಳಿದಾಸ, ಭಾಸ, ಭಾರವಿಯವರಂಥವರ ಜೀರ್ಣೋದ್ಭವನೆನಿಸಿರುವ ತಾನು! ಇಂಗ್ಲೀಷ್ ಸಾಹಿತ್ಯದ ವರ್ಡ್ಸವರ್ಥ್, ಶೆಲ್ಲಿ, ಶೇಕ್ಸ್‌ಪಿಯರ್‌ರಂಥವರ ಅಭಿಜಾತ ಕೃತಿಗಳನ್ನು ಅರಗಿಸಿಕೊಂಡಿರುವ ತಾನು! ಕವಿತೆಗಳನ್ನು ಬರೆಯುವುದೋ ನಾಟಕಗಳನ್ನು ಬರೆಯುವುದೋ ಎಂದು ಸೃಜನಶೀಲವಾಗಿ ಯೋಚಿಸುತ್ತಿರುವ ತಾನು! ವಂಶದ ಹಿರಿಯ ಪ್ರೇತಾತ್ಮಗಳ ದುಃಸ್ವಪ್ನಗಳನ್ನು ಅನುಭವಿಸುತ್ತಿರುವ ತಾನು ಮದುವೆ ನೆಪದಲ್ಲಿ ಇನ್ನೊಂದು ಜೀವವನ್ನು ಆಪೋಶನ ತೆಗೆದುಕೊಳ್ಳುವುದೆಂದರೆ! ಇನ್ನು ತಡಮಾಡಬಾರದು ತಾನು! ಹೇಳಲು ಸಾಹಿತ್ಯಿಕ ಪರಿಭಾಷೆಯನ್ನು ಬಳಸಲು ಪ್ರಯತ್ನಿಸಿದ, ಆದರೆ ಆತ ಹೇಳಿದ್ದೊಂದು ಅವರಿಗೆ ಅರ್ಥವಾಗಿದ್ದು ಇನ್ನೊಂದು!

ಆರೋಗ್ಯವಂತರ ಮತ್ತು ಅನಾರೋಗ್ಯವಂತರ ನಡುವೆ ನಡೆದ ಮಾತುಕತೆಯೇ ಅಂತಿಮವಾಯಿತು, ಮದುವೆ ಸುಮುಹೂರ್ತ ಸಮೀಪಿಸುತ್ತಿದ್ದಂತೆ ವ್ಯಾಕುಲಗೊಳ್ಳುತ್ತ ಹೋದ, ಮಾಂಗಲ್ಯ ಕಟ್ಟುವಾಗ ತನ್ನ ಕೈಗಳು ಅನಗತ್ಯವಾಗಿ ಕಂಪಸಿದವು, ಶೋಭನವಿದ್ದದ್ದು ಬೆಳದಿಂಗಳಲ್ಲಿ, ಆದರೆ ಅದನ್ನು ತಾನು ಕರಾಳ ರಾತ್ರಿಯೆಂದೇ ಭಾವಿಸಿದ. ಆತನನ್ನು ಆಕೆ ಪ್ರವೇಶಿಸಿದಳೋ! ಆಕೆಯನ್ನು ತಾನೇ ಪ್ರವೇಶಿಸಿದನೋ! ಸ್ಖಲಿಸಿದೊಡನೆ ತನ್ನ ಅಂಗಾಂಗಗಳು

ಕಂಪಿಸಲಾರಂಭಿಸದೆ ಇರಲಿಲ್ಲ. ಅವು ಸಹಜ ಸ್ಥಿತಿಗೆ ಮರಳಿದಾಗ ಬೆಳಗಾಗಿತ್ತು. ಅಂಥ ಜಾಯಮಾನದ ಪಾರ್ಥಸಾರಥಿ ಫೋಟೋದಲ್ಲಾದರೂ! ಹ್ಞೂಹ್ಞು ಇಲ್ಲವೇ ಇಲ್ಲ. ಆ ದಿವಸ ತಾನು ಕಳೆದುಕೊಂಡ ಮುಗುಳ್ನಗೆಯ ಹುಡುಕಾಟಕ್ಕೆ ತೊಡಗಿದ, ಅದರ ಸಲುವಾಗಿಯೇ ತಾನು ಕಥೆಗಳನ್ನು ಬರೆಯಲಾರಂಭಿಸಿದ.

ಪಾರ್ಥಸಾರಥಿಯ ವೈವಾಹಿಕ ಪೂರ್ವಾಪರವನ್ನು ಸೃಜನಶೀಲವಾಗಿ ಮರುನಿರೂಪಿಸಿದ ಸುಧನ್ವರ ಕಡೆ ಅಭಿಮಾನದಿಂದ ನೋಡಿ ನಿಟ್ಟುಸಿರುಬಿಟ್ಟೆ. ಹ್ಹಾ! ಅಂದ ಹಾಗೆ ತನ್ನ ಶುಶ್ರೂಷಕಿ ಸಿಂಧುಳೊಂದಿಗಾದರೂ ತಾನು ಸಲಿಗೆಯಿಂದ ಇದ್ದನೆ! ಆಕೆಯ ಸಾಹಿತ್ಯಿಕ ದಾಹವನ್ನು ತಣಿಸುವ ನೆಪದಲ್ಲಿ ತಾನು ಉದ್ರೇಕಗೊಂಡಿರುವ ನಿದರ್ಶನಗಳು! ಸುಧನ್ವ ತನ್ನ ಗೆಳೆಯನನ್ನು ವಿಷಯಾಸಕ್ತನನ್ನಾಗಿ ಪರಿವರ್ತಿಸಲು ಪ್ರಯತ್ನಿಸುವಂತೆ ಆಕೆಗೆ ಸಲಹೆ ನೀಡಿದರಂತೆ, ಆ ದಿಸೆಯಲ್ಲಿ ತಾನು ಪ್ರಯತ್ನಿಸುವುದಾಗಿ ಸಿಂಧು ಮಾತು ಕೊಟ್ಟಿದ್ದಳಂತೆ! ಆದರೆ ಆ ದಿವಸವೇ ಒಂದು ಕಡೆಯಿಂದ ಕಡಪಾದ ಪ್ರಸಿದ್ಧ ನ್ಯಾಯವಾದಿ ಕಾರಂಪೂಡಿ ಜಯಪ್ರದರಿಂದ ನೋಟೀಸೂ, ಇನ್ನೊಂದು ಕಡೆಯಿಂದ ಕಾಸುಲ ಸುಬ್ಬಾರೆಡ್ಡಿಯವರೂ!

ಅಂಚೆಯವನಿಂದ ನೋಟೀಸು ಪಡೆದು, ತನ್ನ ನೆಚ್ಚಿನ ಪೆನ್ನು ರೆಡ್‌ಫೋರ್ಟಿಗೆ ಬದಲು ಸಿಂಧುಳ ಕ್ಯಾಮೆಲ್ ಪೆನ್ನಿನಿಂದ ಸ್ವೀಕೃತಿಪತ್ರದ ಮೂಲೆಯಲ್ಲಿ ಸಹಿ ಮಾಡಿ ತನ್ನ ಬಲಗೈಯ ಮೂರೂ ಬೆರಳುಗಳ ತುದಿಗೆ ಅಂಟಿದ್ದ ಇಂಕಿನ ಕಲೆಯನ್ನು ತಲೆಗೆ ಒರೆಸಿಕೊಳ್ಳುತ್ತಿರುವಾಗಲೇ ಚಾಣಾಕ್ಷ ರೆಡ್ಡಿಯವರು ತಮ್ಮ ಸಂಗಡಿಗರೊಡನೆ ಆಗಮಿಸಿದ್ದು, ಸಂದಾಯವಾಗಿದ್ದ ಐದರ ನೋಟನ್ನು ತನ್ನ ಖಾಕಿ ಜೇಬಲ್ಲಿರಿಸಿಕೊಳ್ಳುತ್ತಲೇ ಹೊಸ್ತಿಲು ದಾಟುತ್ತಿದ್ದ ಮಕ್ಕಳೊಂದಿಗ ಅಂಚೆಯವನನ್ನೂ, ಉಸಿರಳತೆಯಲ್ಲಿ ನಿಂತು ಅದೇ ತಾನೆ ಪೆನ್ನನ್ನು ಮರಳಿ ಪಡೆದು ತನ್ನ ಬ್ಲೌಜಿನ ವಕ್ಷ ಭಾಗದಲ್ಲಿರಿಸಿಕೊಳ್ಳುತ್ತಿದ್ದ ಸುಲೋಚನಾಳನ್ನೂ ಒಟ್ಟಿಗೆ ನೋಡಿದ್ದು! ಅದೂ ಹುಬ್ಬೇರಿಸಿ! ಕಣ್ಣುಗಳನ್ನಗಲಿಸಿ! ತಾವೇ ಎಳೆದುಕೊಂಡ ಕುರ್ಚಿಯಲ್ಲಿ ಕೂತಾದ ಬಳಿಕ ಆಕೆಯ ದೇಹದಾದ್ಯಂತ ಪರಿಶೀಲನಾ ನೋಟ ಹರಿಸಿದರು, ಪೂರ್ವಾಪರ ವಿಚಾರಿಸಿದರು, ಅನಾಥೆ ಎಂದು ತಿಳಿದು ಮೊಸಳೆ ಕಣ್ಣೀರು ಸುರಿಸಿದರು, ಅನ್ನವೂ ಹಳಸಿತ್ತು ನಾಯಿಯೂ ಹಸಿದಿತ್ತು ಎಂದು ತಮ್ಮ ಇನ್ನೊಂದು ಕಿವಿಗೆ ಕೇಳಿಸದ ಹಾಗೆ ಗೊಣಗಿಕೊಂಡರು.

ಕರ್ನೂಲಿನ ನಿಲ್ದಾಣದಲ್ಲಿ ಬಸ್ಸಿನಿಂದ ಇಳಿದವರೆ ತಮ್ಮ ಅನ್ನದಾತ ಶಾಸ್ತ್ರಿಗಳ ಅಳಿಯಂದಿರು ವಿರಹ ವೇದನೆಯಿಂದ ನರಳುತ್ತಿರಬಹುದೆಂದೂ, ಬಸವಳಿದು ಬೆಂಡಾಗಿರಬಹುದೆಂದೂ, ದೈಹಿಕವಾಗಿ ಅಸ್ತವ್ಯಸ್ತರಾಗಿದ್ದರಬಹುದೆಂದೂ ಯೋಚಿಸಿದ್ದರು. ಇನ್ನೊಂದು ಹೆಜ್ಜೆ ಮುಂದುವರೆದು ಅಳಿಯಂದಿರು ಮದ್ಯವ್ಯಸನಿಗಳೂ ಆಗಿರಲೂಬಹುದೆಂದು ಊಹಿಸಿದ್ದರು. ಒಂಟಿತನದ ದಾವಾಗ್ನಿಯಲ್ಲಿ ದಹಿಸುತ್ತಿರಬಹುದಾದ ಅವರಲ್ಲಿ ತಮ್ಮ ಅಶ್ವಿನಿ ಅಮ್ಮನವರನ್ನು ಪುನಃ ಪ್ರತಿಷ್ಠಾಪಿಸುವುದು ಹಾಲು ಕುಡಿದಷ್ಟೇ ಸುಲಭವೆಂದು ಭಾವಿಸುತ್ತಲೇ ಜಿಲ್ಲಾಧಿಕಾರಿಗಳ ನಿವಾಸವನ್ನು ಸಮೀಪಿಸಿ ಅದರ ಕಡೆ ಕ್ರುದ್ಧ ನೋಟ ಬೀರಿದ್ದರು. ಅದಕ್ಕೆ ಕಾರಣಗಳು ಇಲ್ಲದಿರಲಿಲ್ಲ, ಅದೆಂದರೆ ಡಾ. ನಳಿನಿ ಶ್ರೀವಾಸ್ತವ ಎಂಬ ನಾಮವಾಚಕದ ಹಾಲಿ ಜಿಲ್ಲಾಧಿಕಾರಿಣಿ ಫ್ಯಾಕ್ಷನಿಷ್ಟ್‌ರ ಅಮಾನುಷ ಕ್ರೌರ್ಯ ನಿಯಂತ್ರಿಸುವ ಸಲುವಾಗಿ ಕಟ್ಟುನಿಟ್ಟಾದ ಕಾನೂನು ಕ್ರಮ ಕೈಗೊಂಡಿದ್ದಳು. ಅವರ ಆರ್ಥಿಕ ವ್ಯವಹಾರಗಳಿಗೆ ದಿಗ್ಬಂಧನ ವಿಧಿಸಿದ್ದಳು, ಆಕೆಯನ್ನು ಕರ್ನೂಲಿನಿಂದ ಅದಿಲಾಬಾದು ಜಿಲ್ಲೆಗೆ ವರ್ಗ ಮಾಡಿಸಲು ಅಳ್ಳಗಡ್ಡ, ರೊಳ್ಳ ಜಮೀನ್ದಾರರು ತಮ್ಮ ನಿಶಿತಮತಿ ಶಿವಶಂಕರಶಾಸ್ತ್ರಿಯವರ ಮೂಲಕ ಪ್ರಯತ್ನ ಆರಂಭಿಸಿದ್ದರು.

ಪೆದ್ದಾಹೋಬಿಲಂ ಕೃಪ ಎಂಬ ಹೆಸರಿನ ನಿವಾಸದೆದುರು ನಿಂತು ತುಳಸಿ ಗಿಡದ ಕಡೆ ದೃಷ್ಟಿ ಹಾಯಿಸಿದ್ದರು. ಆದರೆ ಅದು ಬಾಡಿ ಮಂಕಾಗುವ ಬದಲು ನಳಿನಿಯ ಹಾಗೆ ನಳನಳಿಸುತ್ತಲಿತ್ತು. ಅದೂ ಪೂಜೆಗೊಳಗಾಗಿ. ಹೆಂಡತಿ ಇದ್ದರೂ ಇರದಿದ್ದರೂ ಬ್ರಾಹ್ಮಣರು ಬ್ರಾಹ್ಮಣರೇ ತಾನೆ! ಅದೂ ತನಿಕೆಳ್ಳ ವಂಶಸ್ಥರು ಎಂದ ಮೇಲೆ. ಆದರೆ ತಾವು ಬರುವ ಮೊದಲು ಭಾವಿಸಿದ್ದೇ ಬೇರೆ. ಒಳಪ್ರವೇಶಿಸಿದ ಬಳಿಕ ವಸ್ತುಸ್ಥಿತಿ ಇರುವುದೇ ಬೇರೆ! ಕೂತಲ್ಲಿಂದಲೇ ತಮ್ಮ ಸಂಗಡಿಗರ ಕಡೆ ನೋಡಿ ನಿಟ್ಟುಸಿರುಬಿಟ್ಟರು. ಬಳಿಕ ಎದ್ದು ಒಳ ಹೊರಗು ಅಡ್ಡಾಡಿ ಪುನಃ ಕುಳಿತು ಅಳಿಯಂದಿರ ಕಡೆ ಪರಿಕ್ಷಾರ್ಥ ನೋಟ ಹರಿಸಿದರು. ತಮ್ಮ ಧಣಿ ಶ್ರೀಶಿವಶಂಕರಶಾಸ್ತ್ರಿಗಳು ದೈವಾಧೀನರಾದ ಬಳಿಕ ಜಮ್ಮಲಮಡುಗಿನ ಜಮೀನ್ದಾರೀ ಗದ್ದುಗೆಯನ್ನು ಅಲಂಕರಿಸಲಿರುವ ವ್ಯಕ್ತಿ ಹೇಗಿರಬೇಕಿತ್ತು! ಹೇಗಿರಬಾರದಿತ್ತು! ಅಶ್ವಿನಿ ಎಂಬ ವಜ್ರಾಯುಧದ ಗೈರುಹಾಜರಿಯಲ್ಲಿ ಸಿಂಧು ಎಂಬ ಬಾಂಸುರಿಯಿಂದ ರಾಗಾಲಾಪನೆಗೆ ತೊಡಗಿರುವುದೆಂದರೇನು! ಸೌಜನ್ಯಕ್ಕಾದರೂ ಆಕೆಯನ್ನು ಹೊರಗೆ ಕಳಿಸಬಹುದಿತ್ತಲ್ಲವೆ! ಕನಿಷ್ಟಪಕ್ಷ ಅಡುಗೆ ಮನೆಗಾದರೂ! ಹ್ಞೂಹ್ಞು! ಉದ್ದೇಶಪೂರ್ವಕವಾಗಿ, ಅದೂ ಶಾಸ್ತ್ರಿಗಳ ವಂಶದ ಸ್ವಾಭಿಮಾನದ ಮೇಲೆ ಬರೆ ಎಳೆಯುವ ಸಲುವಾಗಿ ತನ್ನ ಪಕ್ಕದಲ್ಲಿಯೇ ಕೂಡ್ರಿಸಿಕೊಂಡಿರುವನು.

ತಮ್ಮ ಕನಲಿಕೆಯನ್ನು ಹಾಗೆ ನಿಗ್ರಹಿಸಿಕೊಂಡು ರಾಜಿ ಕಬೂಲಿಗೆ ಸಂಬಂಧಿಸಿದ ಮಾತುಕತೆಯನ್ನು ಆರಂಭಿಸಿದರು. ಅದಕ್ಕೆ ಪಾರ್ಥಸಾರಥಿ ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ, ತಾನಾಕೆಯನ್ನು ಮದುವೆಯಾಗಿರುವುದು ದೈಹಿಕವಾಗಿಯೇ ಹೊರತು ತ್ರಿಕರಣಪೂರ್ವಕವಾಗಿ ಅಲ್ಲವೇ ಅಲ್ಲ ಎಂದ ಮೇಲೆ ವಿಚ್ಛೇದನ ಪತ್ರಗಳಿಗೆ ಸಹಿ ಹಾಕುವುದೆಲ್ಲಿಂದ ಬಂತು! ಕಳೆದ ತಿಂಗಳಷ್ಟೆ ಮುವ್ವತ್ತನ್ನು ಪೂರೈಸಿರುವ ಆಕೆ ಬೇರೊಬ್ಬ ಆರೋಗ್ಯವಂತನೂ ಪರಾಕ್ರಮಶಾಲಿಯೂ ಆದ ತರುಣನನ್ನು! ಸ್ವಗತ ರೀತಿಯಲ್ಲಿ ಯೋಚಿಸುತ್ತಲೇ ವಿಚ್ಛೇದನ ಪತ್ರವನ್ನು ಹರಿದು ಚೂರುಚೂರಾಗಿಸಿ ಸಿಂಧೂಳ ಕೈಗೆ ಕೊಟ್ಟು ಕಸದ ಬುಟ್ಟಿಗೆ ಎಸೆಯುವಂತೆ ಸೂಚಿಸಿದನು. ಅದರಿಂದ ತುಸು ವಿಚಲಿತರಾದಂತೆ ಗೋಚರಿಸಿದ ರೆಡ್ಡಿಯವರು ಪಾರ್ಥನನ್ನು ಹೊರಗೆ ಕರೆದೊಯ್ದು ಹೆಗಲ ಮೇಲೆ ಕೈ ಇರಿಸಿ ಅಪ್ಯಾಯತೆಯಿಂದ ಸ್ಪರ್ಶಿಸಿದರು. ಶಾಸ್ತ್ರಿಗಳ ಮನೆತನ ಕುರಿತಂತೆ, ಅವರ ಕ್ರೌರ್ಯದ ವಿನ್ಯಾಸ ಕುರಿತಂತೆ ವಿವರಿಸಿದರು. ಅಶ್ವಿನಿ ಅಮ್ಮನವರಲ್ಲಿ ಕ್ಷಮೆ ಯಾಚಿಸಿ ಅವರ ಮನೆಯ ಅಳಿಯನಾಗುವಂತೆ, ಅವರ ವಾಡೆಗೆ ಉತ್ತರಾಧಿಕಾರಿಯಾಗುವಂತೆ ಕಳಕಳಿಯಿಂದ ಕೇಳಿಕೊಂಡರು. ಆದಿಶಕ್ತಿಗೆ ಶಾಂತ ಸ್ವಭಾವದ ಗೌರಿಯಾಗುವುದೂ ಗೊತ್ತು, ಉಗ್ರ ಸ್ವಭಾವದ ಚಾಮುಂಡೇಶ್ವರಿಯಾಗುವುದೂ ಗೊತ್ತೆಂದು ಮಾರ್ಮಿಕವಾಗಿ ಹೇಳಿದರು. ರಾಜಿ ಕಬೂಲಿಯ ಸಾಧಕ ಬಾಧಕಗಳನ್ನು ಸೂಚ್ಯವಾಗಿ ವಿವರಿಸಿದರು.

ಆದರೆ ಅಂತರ್ಮುಖಿ ಪಾರ್ಥ ಶ್ರೀಯುತರ ಯಾವುದೇ ಮಾತನ್ನು ಕೇಳಿಸಿಕೊಂಡಿರಲಿಲ್ಲ. ಕಾರಣ ತನ್ನ ತಲೆಯಲ್ಲಿ ಅದೇ ತಾನೆ ಕಥೆಗೆ ಸಂಬಂಧಿಸಿದ ವಸ್ತು ಮೊಳಕೆ ಚಾಚಿತ್ತು. ಅದರ ಶಿರ್ಷಿಕೆ ವಿಚ್ಛೇದನ ಎಂದು ಹೊಳೆದು ಸಂಭ್ರಮಿಸಿದ. ಗೋರ್ಕಲ್ಲ ಮೇಲೆ ಮಳೆ ಸುರಿಸಿ ಸುಸ್ತಾದ ಅನುಭವದೊಡನೆ ಸುಬ್ಬಾರೆಡ್ಡಿಯವರು ಹೊರಡಲೆಂದು ತಲಬಾಗಿಲು ಸಮೀಪಿಸಿದರು. ಸಿಂಧುಳನ್ನು ಹತ್ತಿರ ಕರೆದು ನೀನು ನೂರು ವರ್ಷ ಸುಖವಾಗಿರಬೇಕೆಂದು ಆಶೀರ್ವದಿಸಬೇಕೆಂಬ ಇಚ್ಛೆ ತಮ್ಮದಿತ್ತು ಎಂದು ಹೇಳುತ್ತ ನಿಟ್ಟುಸಿರುಬಿಟ್ಟರು.

++++

ಸುಬ್ಬಾರೆಡ್ಡಿ ಅಲ್ಲಿಂದ ಹೋದ ಎರಡನೇ ದಿವಸವೇ ಸಿಂಧು ನಾಪತ್ತೆಯಾದದ್ದು ಎಂದು ಹೇಳುವಾಗ ಸುಧನ್ವ ಬಿಕ್ಕಳಿಸಲಿದ್ದರು, ಕಣ್ಣಲ್ಲಿ ನೀರು ತಂದುಕೊಳ್ಳಲಿದ್ದರು, ಇನ್ನೇನು ಅತ್ತೇಬಿಟ್ಟರೆನ್ನುವಷ್ಟರಲ್ಲಿ ಮುಖವನ್ನು ಬಿಗಿದುಕೊಳ್ಳುತ್ತ..

"ಪ್ರಪಂಚ ಕೆಟ್ಟಿರುವುದೋ, ಹಾಗೆಂದು ನಾವೇ ಅಪಾರ್ಥ ಮಾಡಿಕೊಂಡಿರುವೆವೋ! ಒಂದೂ ತಿಳಿಯುತ್ತಿಲ್ಲ. ಸಿಂಧು ಸುಂದರ ಯುವತಿ, ಅಲ್ಲದೆ ಅನಾಥೆ. ಆಕೆಯ ನಾಪತ್ತೆ ಕುರಿತಂತೆ ಹಲವು ಸುದ್ದಿಗಳು ಹರಡಿದವು, ಕೆಲವರು ಮಲಬಾರ ಹೋಟಲ್ ಮಾಲಕ ಶಬ್ಬೀರ್ ಆಕೆಯನ್ನು ದುಬೈಗೆ ಸಾಗಿಸಿರುವನೆಂದು ಆಡಿಕೊಂಡರೆ, ಇನ್ನೂ ಕೆಲವರು ಮಲೆಯಾಳಿ ಹುಡುಗನ ಹಿಂದೆ ಕೇರಳಕ್ಕೆ ಓಡಿ ಹೋಗಿರುವಳೆಂದು ಆಡಿಕೊಂಡರು. ಮತ್ತೆ ಕೆಲವರು ಆಕೆ ನಕ್ಸಲೈಟರೊಂದಿಗೆ ನಿಗೂಢ ಸಂಬಂಧವಿರಿಸಿಕೊಂಡಿದ್ದಳೆಂದೂ, ರ್‍ಯಾಡಿಕಲ್ಸ್ ಸಂಘಟನೆಯ ಮುಖ್ಯಸ್ಥ ಲಕ್ಷ್ಮೀಕಾಂತನ ಸಂಗಡ ಓಡಿ ನಲ್ಲಮಲ ಅರಣ್ಯದ ಪಾಲಾಗಿರುವಳೆಂದೂ ಸುದ್ದಿ ಹಬ್ಬಿಸಿದರು. ಅವುಗಳ ಬೆನ್ನ ಹಿಂದೆಯೇ ಹರಡಿದ ಇನ್ನೊಂದು ಆಘಾತಕಾರಿ ಸುದ್ದಿ ಎಂದರೆ ನಿರುಪದ್ರವಿ ತನಿಕೆಳ್ಳ ಪಾರ್ಥಸಾರಥಿ ಆಕೆಯೊಂದಿಗೆ ಅನೈತಿಕ ಸಂಬಂಧವಿರಿಸಿಕೊಂಡಿದ್ದ ಎಂಬ ಸುದ್ದಿ ಹರಡಿತು. ಅಷ್ಟು ಸಾಕಾಯಿತು ಪೋಲಿಸರಿಗೆ! ಪಾರ್ಥನನ್ನು ಠಾಣೆಯಲ್ಲಿ ಕೂರಿಸಿ ದಿನಗಟ್ಟಲೆ ವಿಚಾರಿಸಿ ಕಳಿಸಿಕೊಟ್ಟರು. ಅಲ್ಲಿಂದ ಮರಳಿದವನೆ ಅಗತ್ಯಕ್ಕಿಂತ ಹೆಚ್ಚು ಮದ್ಯಸೇವಿಸಿ ಮಲಗಿದ. ಪಾರ್ಥನಿಗೆ ಆ ದಿವಸ ಜಮ್ಮಲಮಡುಗಿನಿಂದ ಅನಾಮಧೇಯ ಕರೆಬಂತು, ಆ ಕಡೆಯಿಂದ ಮಾತಾಡಿದ್ದು ಹೆಣ್ಣಿನ ಧ್ವನಿ, ಆಕೆ ಯಾರೆಂಬುದು ತನಗೆ ತಿಳಿಯದು, ಆ ವ್ಯಕ್ತಿ ಅಶ್ವಿನಿಯೋ ಆಕೆಯ ಪ್ರತಿನಿಧಿಯೋ!

"ಹದಿಹರೆಯದ ಸಿಂಧು ಎಂಬ ತರುಣಿಯೊಂದಿಗೆ ನೀನು ದೈಹಿಕ ಸಂಬಂಧವಿರಿಸಿ ಕೊಂಡಿಲ್ಲವೆಂಬ ಸಂಗತಿ ಪ್ರಪಂಚಕ್ಕೆ ತಿಳಿಯದಿದ್ದರೂ ಅಶ್ವಿನಿ ಅಮ್ಮನರಿಗೆ ಮಾತ್ರ ಗೊತ್ತು, ಯಾಕೆಂದರೆ ಆಕೆ ನಿನ್ನೊಂದಿಗೆ ಹಲವು ವರ್ಷಗಳ ಕಾಲ ಸಂಸಾರ ನಡೆಸಿರುವಳು, ನಿನ್ನ ಲೈಂಗಿಕ ತಾಕತ್ತಿನ ಲಾಭ ಲುಕ್ಸಾಣ ತಾನಷ್ಟೆ ಬಲ್ಲಳು. ಖಾಸಗಿ ಪತ್ತೆದಾರರು ನೀಡಿದ ಮಾಹಿತಿ ಪ್ರಕಾರ ಸಿಂಧು ತನ್ನ ಚೆಲುವಿಕೆ ಬೆಡಗು ಬಿನ್ನಾಣದಿಂದ ನಿನ್ನನ್ನು ವಿಷಯಾಸಕ್ತನನ್ನಾಗಿಸಲು ಸಂಚು ನಡೆಸಿದ್ದಳು, ಅದಕ್ಕೆ ಆ ಖಿದೀಮ ಡಾ. ಸುಧನ್ವ ನಿಮ್ಮಿಬ್ಬರ ನಡುವೆ ದೈಹಿಕ ಸಂಬಂಧ ಏರ್ಪಡಿಸಲು ಸಂಚು ನಡೆಸಿದ್ದ. ನಮ್ಮ ಅನುಮಾನ ಗಟ್ಟಿಗೊಂಡದ್ದು ಕಾಸುಲ ಸುಬ್ಬಾರೆಡ್ಡಿ ಕಣ್ಣಾರೆ ನೋಡಿ ವರದಿ ಸಲ್ಲಿಸಿದ ಬಳಿಕ. ಹಲವು ವರ್ಷಗಳ ಕಾಲ ನಿನ್ನ ಪತ್ನಿಯಾಗಿ, ನಿನ್ನ ನತದೃಷ್ಟ ಮಕ್ಕಳಿಗೆ ತಾಯಿಯಾಗಿ ಪಾತ್ರ ನಿರ್ವಹಿಸಿದ ಅಶ್ವಿನಿ ಅಮ್ಮನವರ ಬಗ್ಗೆ ನಿನ್ನಲ್ಲಿ ಲವಲೇಶವಾದರೂ ಅಭಿಮಾನ, ಉಪಕಾರ ಸ್ಮರಣೆ ಇಲ್ಲ, ಇದ್ದಿದ್ದರೆ ಆಕೆಯ ತಾಯ್ತನವನ್ನು ನಿರಾಕರಿಸುತ್ತಿರಲಿಲ್ಲ ನೀನು. ಆಕೆಯಿಂದ ದೈಹಿಕವಾಗಿ ಮಾನಸಿಕವಾಗಿ ದೂರವಾಗಲು ಎಲ್ಲಾ ರೀತಿಯಿಂದ ಪ್ರಯತ್ನ ನಡೆಸಿದಿ, ಅದರಲ್ಲಿ ನೀನು ಕೊನೆಗೂ ಯಶಸ್ವಿಯಾದೆ, ಒಂಟಿಯಾಗಿದ್ದು ನರಳಿ ಸತ್ತಿದ್ದಲ್ಲಿ ನಮ್ಮ ತಕರಾರಿರುತ್ತಿರಲಿಲ್ಲ, ಸಾಹಿತ್ಯದ ನೆಪದಲ್ಲಿ ಸಿಂಧೂ ಜೊತೆಗೂಡಿದಿ, ನಿನ್ನ ಬ್ರಹ್ಮಚರ್ಯವನ್ನು ಕಾಪಾಡುವ ದೃಷ್ಟಿಯಿಂದ ಮತ್ತು ನಿನ್ನನ್ನು ಸಾಮಾಜಿಕವಾಗಿ ಅಪಮೌಲ್ಯಗೊಳಿಸುವ ದೃಷ್ಟಿಯಿಂದ ನಾವು ಸಿಂಧೂಳನ್ನು ಕರ್ನೂಲಿನ ಬಸ್‌ನಿಲ್ದಾಣದಲ್ಲಿ ಅಪಹರಿಸಿ ಭೌತಿಕವಾಗಿ ನಾಶಪಡಿಸುವುದು ಅನಿವಾರ್ಯವಾಯಿತು. ಕಾಲ ಮಿಂಚಿಲ್ಲ, ಬರಿಗೈಲಿ ಜಮ್ಮಲಮಡುಗಿಗೆ ಪ್ರಯಾಣ ಬೆಳೆಸು, ಅಥವಾ ವಿಚ್ಛೇದನ ಪತ್ರಗಳಿಗೆ ಸಹಿ

ಹಾಕಿ ಮರಳಿಸು, ಹದಿನೈದು ದಿವಸಗಳ ಕಾಲಾವಕಾಶವಿದೆ, ಅಷ್ಟರಲ್ಲಿ ನಿನ್ನಿಂದ ಸಕಾರಾತ್ಮಕ ಪ್ರತಿಕ್ರಿಯೆ ಬಾರದಿದ್ದಲ್ಲಿ ನಿಗೂಢ ವ್ಯಾಧಿಗಳ ಬದಲಿಗೆ ನಮ್ಮವರು ನಿನಗೆ ಅಕಾಲ ಮೃತ್ಯುವನ್ನು ದಯಪಾಲಿಸುವರು, ಎಚ್ಚರವಿರಲಿ"

ಸುಧನ್ವ ಹೇಳದೇ ಇದ್ದಲ್ಲಿ ಪಾರ್ಥ ಇದನ್ನೆಲ್ಲ ಹೇಳುತ್ತಿರಲಿಲ್ಲವೇನೋ! ಕಾದಂಬರಿಯನ್ನು ಪೂರ್ಣಗೊಳಿಸಲಾಗದ ಕತೃವಿನ ಅಸಹಾಯಕತೆ ಅರ್ಥವಾದೊಡನೆ ನಖಶಿಖಾಂತ ಕಂಪಿಸಿದೆ.

"ನಿಮಗೆ ತಿಳಿದಿರುವುದೋ ಇಲ್ಲವೋ! ಪಾರ್ಥ ಪ್ರತಿಕ್ಷಣವನ್ನು ತನ್ನ ಅಂತಿಮ ಕ್ಷಣವೆಂದೇ ಭಾವಿಸಿ ಉತ್ಕಟವಾಗಿ ಅನುಭವಿಸುತ್ತಿದ್ದಾನೆ, ಸಿಂಧು ಅಪಹರಣಕ್ಕೊಳಗಾದ ಬಳಿಕ ಮದ್ಯವ್ಯಸನಿಯಾಗಿದ್ದಾನೆ, ಆಕೆ ಭೌತಿಕವಾಗಿ ಇಲ್ಲವೆಂಬ ಸಂಗತಿ ತಿಳಿದ ಬಳಿಕ ಕಾದಂಬರಿಯ ಬರೆಹವನ್ನು ಸ್ಥಗಿತಗೊಳಿಸಿದ್ದಾನೆ, ತನ್ನನ್ನು ಅಪಹರಿಸುವ ಸಲುವಾಗಿ, ಅಪಹರಿಸಿ ಕೊಲೆ ಮಾಡುವ ಸಲುವಾಗಿ ಗೌರವಾನ್ವಿತ ಅತಿಥಿಗಳು ಇಂದು ಬರಬಹುದು, ನಾಳೆ ಬರಬಹುದು ಎಂದು ಅಹರ್ನಿಶಿ ಕಾಯುತ್ತಿದ್ದಾನೆ, ಕಾದಂಬರಿಯನ್ನು ಪೂರ್ಣಗೊಳಿಸಲೆಂದೇ ಅವನು ನಿಮ್ಮನ್ನು ಕರೆಕಳಿಸಿಕೊಂಡಿರುವುದು"

ಅವರು ಹೇಳಿದ್ದು ಕೇಳಿ ನನಗೆ ಭಯವಾಯಿತು, ವಿಚಿತ್ರವೆನ್ನಿಸಿತು. ಪಾರ್ಥಸಾರಥಿಯಲ್ಲಿ ದೈಹಿಕ ಖಾಯಿಲೆಗಳೊಂದಿಗೆ ಮಾನಸಿಕ ವ್ಯಾಧಿಗಳೂ ಕಾಣಿಸಿಕೊಂಡಿರಬಹುದು. ಯಾರೋ ಅನಾಮಧೇಯರು ಫೋನಿನಲ್ಲಿ ಬೆದರಿಸಿದರೆಂದಾ ಕ್ಷಣ ಹೆದರುವುದೆ! ಸಿಂಧು ಯಾರೆಂಬುದು ನನಗೆ ತಿಳಿಯದು, ತನಗೆ ಸಹಾಯಕಳಾಗಿದ್ದ, ಶಿಷ್ಯೆಯಾಗಿದ್ದ, ಮನಸ್ಸಿನಲ್ಲಿ ಆಸೆ ಆಕಾಂಕ್ಷೆಗಳ ಕಿಚ್ಚು ಹೊತ್ತಿಸಲಿದ್ದ ಸಿಂಧು ನಿಗೂಢವಾಗಿ ಕಾಣೆಯಾಗಿರುವಳೋ! ಅಪಹರಣಕ್ಕೊಳಗಾಗಿರುವಳೋ! ಕೊಲೆಯಾಗಿರುವಳೋ! ಅಥವಾ ಸ್ವತಃ ಸೃಜನಶೀಲೆಯಾಗಿರುವ ತಾನು ನೇಪಥ್ಯದಲ್ಲಿ ಅಡಗಿದ್ದು ಕುತೂಹಲದಿಂದ ಮಾನವ ವ್ಯಪಾರವನ್ನು ಗಮನಿಸುತ್ತಿರುವಳೋ! ಇದೆಲ್ಲ ನಿಗೂಢ! ಯಾರಾದರೊಬ್ಬರು ಅದರಲ್ಲೂ ಮುಖ್ಯವಾಗಿ ಡಾ. ಸುಧನ್ವರೇ ಜಮ್ಮಲಮಡುಗಿಗೆ ಹೋಗಿ ವಿಚಾರಿಸಬಹುದಿತ್ತಲ್ಲವೆ! ಅಥವಾ ಪೋಲಿಸ್ ಠಾಣೆಯಲ್ಲಿ ದೂರು ಸಲ್ಲಿಸಬಹುದಿತ್ತಲ್ಲವೆ! ಅದ್ಯಾವುದೂ ಮಾಡದೆ ಕೇವಲ ಊಹಾಪೋಹಗಳ ಆಧಾರದ ಮೇಲೆ!

ಕುತೂಹಲ ತಡೆಯಲಾರದೆ "ಇವೆಲ್ಲ ಕೇವಲ ವದಂತಿಗಳು ಸಾರ್! ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದೆಲ್ಲ ನಡೆಯುತ್ತಿರುವುದೆಂದರೆ ನಂಬಲಿಕ್ಕಾಗ್ತಿಲ್ಲ, ಹೆಂಡತಿಯಾದವಳು ತನ್ನ ಸ್ವಂತ ಗಂಡನನ್ನು ಅಪಹರಿಸುವುದೆಂದರೆ, ಕೊಲೆ ಮಾಡಿಸುವುದೆಂದರೆ ಹೇಗೆ ಸಾಧ್ಯ! ಅದರಲ್ಲೂ ಅಶ್ವಿನಿಯಂಥ ಸುಸಂಸ್ಕೃತೆ ಸುಶಿಕ್ಷಿತೆ ಇಂಥ ನೀಚ ಕೆಲಸಕ್ಕಿಳಿಯುವುದು ಸಾಧ್ಯವೇನು! ನನಗೆ ನಂಬಲಿಕ್ಕಾಗ್ತಿಲ್ಲ. ಬೇರೆ ದೇಶಗಳಲ್ಲಿ ಇದೆಲ್ಲ ನಡೆಯುವವೆಂದರೆ ಒಪ್ಪಬಹುದಿತ್ತು, ಆದರೆ ಕೌಟುಂಬಿಕ ಸೆಂಟಿಮೆಂಟ್ಸ್‌ಗಳಿಗೆ ಹೆಸರಾಗಿರುವ ನಮ್ಮ ಭಾರತದಲ್ಲಿ, ಐ ಮೀನ್ ಇಂಡಿಯಾದಲ್ಲಿ ಇದೆಲ್ಲ ನಡೆಯೋದು ಅಸಂಭವ. ಒಂದೇ ಒಂದು ಸಲ ನಾವು ಮುವ್ವರೂ ಜಮ್ಮಲಮಡುಗಿಗೆ ಹೋಗಿ ಬಂದರೆ ಹೇಗೆ!" ಎಂದು ಕೇಳಿದೆ. ನನ್ನ ಮಾತುಗಳನ್ನು ಕೇಳಿ ಸುಧನ್ವ ವಿಷಣ್ಣ ನಗೆ ನಕ್ಕರು. ಇಂಜೆಕ್ಷನ್ ಮಾಡಿಸಿಕೊಂಡಿದ್ದ ಪರಿಣಾಮವಾಗಿ ಗಾಢನಿದ್ರೆಯಲ್ಲಿದ್ದ ಪಾರ್ಥನ ಕಡೆ ನೋಡಿ ಅವನು ಪ್ರಜ್ಞಾಶೂನ್ಯನಾಗಿರುವುದನ್ನು ಖಚಿತಪಡಿಸಿಕೊಂಡು..

"ಅಶ್ವಿನಿಯವರನ್ನು ನೀವು ನೋಡಿರುವಿರೋ ಇಲ್ಲವೋ! ಆದರೆ ನಾನು ಕುಟುಂಬದ ವೈದ್ಯನಾಗಿ, ಗೆಳೆಯನಾಗಿ, ಹಿತೈಷಿಯಾಗಿ, ಮನಶ್ಶಾಸ್ತ್ರದ ವಿದ್ಯಾರ್ಥಿಯಾಗಿ, ಲೇಖಕನಾಗಿ

ಆಕೆಯನ್ನು ಹತ್ತಿರದಿಂದ ಗಮನಿಸಿರುವೆ. ಫ್ಯೂಡಲ್ ವ್ಯವಸ್ಥೆಯಲ್ಲಿ ಬೆಳೆದಿರುವ, ತನ್ನ ತಂದೆ ಶಿವಶಂಕರಶಾಸ್ತ್ರಿಯಂಥ ಕ್ರೂರಿಯ ಗರಡಿಯಲ್ಲಿ ಪಳಗಿರುವ ಆಕೆ ಭಾರತೀಯ ಸ್ತ್ರೀ ಎಂದು ಪ್ರಮಾಣೀಕರಿಸಲು ನನ್ನ ಮನಸ್ಸು ಒಪ್ಪುತ್ತಿಲ್ಲ. ರೂಪವತಿ ಭಾರ್ಯೇ ಶತ್ರುಃ ಎಂಬ ಮಾತಿಗೆ ಆಕೆ ಪ್ರತ್ಯಕ್ಷ ನಿದರ್ಶನ. ಅನುವಂಶೀಯ ವ್ಯಾಧಿಗಳ ಸಂಗತಿ ತಂದೆ ಮಗಳಿಗೆ ಗೊತ್ತಿರಲಿಲ್ಲವೆಂಬುದು ಪಾರ್ಥನ ಭ್ರಮೆ. ನೀವು ನಂಬುತ್ತೀರೋ ಇಲ್ಲವೋ! ಪೂರ್ವಾಪರ ತಿಳಿದೇ ತಂದೆ ಶಾಸ್ತ್ರಿಗಳು ಪಾರ್ಥನನ್ನು ತಮ್ಮ ಅಳಿಯನನ್ನಾಗಿ ಸ್ವೀಕರಿಸಿದ್ದಾರೆ, ಮಗಳು ಅಶ್ವಿನಿ ಪಾರ್ಥನನ್ನು ತನ್ನ ಗಂಡನನ್ನಾಗಿ ಸ್ವೀಕರಿಸಿದ್ದಾಳೆ. ಮದುವೆ ಅವರಿಬ್ಬರ ಸಂಚಿನ ಒಂದು ಭಾಗ. ಅವರ ಸಂಚಿಗೆ ದಶಕಗಳ ಇತಿಹಾಸವಿದೆ. ಅಲಂಪೂರದ ಬ್ರಹ್ಮಲಿಂಗೇಶ್ವರ ದೇವಸ್ಥಾನದ ರಂಗಮಂಟಪದಲ್ಲಿ ಕರಣಂ ಶಿವಸುಬ್ರಹ್ಮಣ್ಯಂಶಾಸ್ತ್ರಿ ಎಂಬ ಮುವ್ವತ್ತರ ವಯೋಮಾನದ ವ್ಯಕ್ತಿಯ ಕೊಲೆ ನಡೆಯಿತು. ತನ್ನ ಅಣ್ಣ ಶಿವಶಂಕರಶಾಸ್ತ್ರಿ ಯಾವುದೋ ಕೊಲೆ ಕೇಸಿಗೆ ಸಂಬಂಧಪಟ್ಟಂತೆ ಭೂಗತವಾಗಿದ್ದಾಗ ಆತನೇ ಅಶ್ವಿನಿಯನ್ನು ಒಂದು ಹಂತದವರೆಗೆ ಸಾಕಿ ಬೆಳೆಸಿದ್ದಂತೆ! ಅಂಥ ವ್ಯಕ್ತಿಯ ಕೊಲೆ ಸಂಭವಿಸಿದ ಮೂರನೆ ದಿವಸವೇ ಶಿವಶಂಕರಶಾಸ್ತ್ರಿ ಖಿಲಾಸೆಗೊಂಡು ನೇರವಾಗಿ ಅಲಂಪೂರ್ ಸೇರಿಕೊಂಡರು. ಖಾಸಗಿ ಪತ್ತೆದಾರರಿಂದ ಕೊಲೆಗಡುಕರ ಪೂರ್ವಾಪರ ಸಂಗ್ರಹಿಸಿದರು. ಪ್ರಸಿದ್ದ ಕ್ರಿಮಿನಲ್ ವಕೀಲರಾದ ತನಿಕೆಳ್ಳ ರಾವಬಹದ್ದೂರ ಶೇಷಗಿರಿರಾಯರ ಸಲಹೆ ಮೇರೆಗೆ ಮೆಹಬೂಬನಗರದ ವಿಷ್ಣವರ್ಧನರೆಡ್ಡಿ ಮಾಡಿಸಿರುವ ಕೊಲೆ ಎಂದು ಅರ್ಥ ಮಾಡಿಕೊಂಡರು. ಯಾರು ಮಾಡಿರುವರೆಂಬುದು ಮುಖ್ಯವಲ್ಲ, ಯಾರು ಮಾಡಿಸಿರುವರೆಂಬುದು ಮುಖ್ಯ ತಾನೆ! ಅದೇ ಕರಣಂ ಜಮೀನ್ದಾರರ ಜಾಣತನ! ರೆಡ್ಡಿಗಳ ಹಾಗೆ ತಕ್ಷಣ ಸೇಡಿಗೆ ಹಾತೊರೆಯದಿದ್ದುದೇ ಕರಣಂ ಕುಟುಂಬದ ತಂತ್ರಗಾರಿಕೆ. ಆ ತಂತ್ರಗಾರಿಕೆಯ ಮುಂದಿನ ಆಶ್ವಾಸವೇ ಪಾರ್ಥಸಾರಥಿ ಮತ್ತು ಅಶ್ವಿನಿಯರ ನಡುವೆ ನಡೆದ ವಿವಾಹ" ಎಂದು ಹೇಳುತ್ತಲೇ ತಲೆತಗ್ಗಿಸಿದರು. ಮುಚ್ಚಿದ ಕಣ್ಣುಗಳಿಗಡ್ಡ ಕರವಸ್ತ್ರವಿರಿಸಿಕೊಂಡು ತೆರೆದರು. ಎದ್ದು ಹತ್ತು ಹೆಜ್ಜೆಗಳ ಮೂಲಕ ವ್ಯಾಧಿಗ್ರಸ್ತನನ್ನು ತಲುಪಿ ನಾಡಿ ಪರೀಕ್ಷಿಸಿದರು. ಹಣೆ ಮೇಲೆ ಕೈಯಿರಿಸಿ ದೇಹದ ಉಷ್ಣತಾಮಾನ ಅಳೆದರು. ಬಳಿಕ ಕರವಸ್ತ್ರದಿಂದ ಆತನ ತುಟಿ ನಡುವೆ ವಸರಿದ್ದ ಜೊಲ್ಲನ್ನು ಒರೆಸಿದರು. ತಲೆ ಕೆಳಗೆ ದಿಂಬನ್ನು ಇರಿಸಿದ್ದೂ ಅಲ್ಲದೆ ಮೈಮೇಲೆ ದುಪ್ಪಟಿ ಹೊದ್ದಿಸಿ ಮರಳಿದರು. ಪಾರ್ಥನ ಕಡೆಗೇ ನೋಡುತ್ತ ನಿಡಿದಾದ ಉಸಿರುಬಿಟ್ಟರು. ನನ್ನ ಮುಖದಲ್ಲಿ ಪ್ರಶ್ನೆಗಳು ಸಂದೇಹಗಳಿರಬಹುದೆಂದು ಊಹಿಸಿದಾದ ಬಳಿಕ ಪುನಃ ತಾವೇ ಹೇಳಿದರು..

"ನಿಮ್ಮ ಜಾತಿ ಯಾವುದೆಂದು ನನಗೆ ತಿಳಿಯದು. ನೀವು ಲೆಫ್ಟಿಸ್ಟೋ ರೈಟಿಸ್ಟೋ ಎಂಬದೂ ಗೊತ್ತಿಲ್ಲ, ಬ್ರಾಹ್ಮಣ ಕೋಮಿಗೆ ಸೇರಿದ ಪಾರ್ಥ ಅದೇ ಕೋಮಿನ ನನಗೆ ಕ್ಲೋಜಿರುವಷ್ಟು ನಿಮಗೆ ಕ್ಲೋಜಿರಲಾರ. ನೀವಿಬ್ಬರು ಯಾವಾಗ ಎಲ್ಲಿ ಭೆಟ್ಟಿಯಾಗಿದ್ದಿರೆಂಬುದು ಸಹ ಗೊತ್ತಿಲ್ಲ. ಪಾರ್ಥ ಸಾಂದರ್ಭಿಕವಾಗಿ ನಿಮ್ಮ ಬಗ್ಗೆ ಹೇಳಿದ್ದ, ನಿಮ್ಮ ಎರಡು ಕಥೆಗಳ ಅನುವಾದವನ್ನು ತೋರಿಸಿದ್ದ, ಅಷ್ಟು ಬಿಟ್ಟರೆ ನೀವು ನನಗೆ ಪರಿಚಿತರೇ ಹೊರತು ಚಿರಪರಿಚಿತರಲ್ಲ. ನಿಮ್ಮ ಪರಿಚಯ ಅಶ್ವಿನಿಗೂ ಇರಲಾರದು. ಹ್ಹಾಂ ಅಂದ ಹಾಗೆ ನೀವು ವಿವಾಹಿತರೋ ಅವಿವಾಹಿತರೋ! ಇನ್ನೂ ಮದುವೆಯಾಗಿಲ್ಲವೆಂದರೆ ಕೌಟುಂಬಿಕ ಸೂಕ್ಷ್ಮಗಳನ್ನೂ, ಅಶ್ವಿನಿಯರಂಥ ಗೃಹಿಣಿಯರನ್ನೂ ಥೇರಾಟಿಕಲ್ಲಾಗಿ ಅರ್ಥ ಮಾಡಿಕೊಂಡಿರಬಹುದೇ ಹೊರತು ಪ್ರಾಕ್ಟಿಕಲ್ಲಾಗಿ ಅರ್ಥ ಮಾಡಿಕೊಂಡಿರಲಾರಿರಿ. ಅಶ್ವಿನಿಯ ಸೌಂದರ್ಯ ಕೇವಲ

ಮೇಲ್ಕವಚ ಮಾತ್ರ, ಅದರ ತಿರುಳು ಭಯಾನಕ ಕ್ರೌರ್ಯ. ಅದರ ಅರಿವು ನಿಚ್ಚಳಗೊಂಡದ್ದು ಮದುವೆಯಾದ ಕೆಲವೇ ದಿವಸಗಳ ಬಳಿಕ. ಅವನ ವಿವಾಹಕ್ಕೆ ನೀವು ಬಂದಿದ್ದಿರೋ ಇಲ್ಲವೋ!

ಅಳ್ಳಗಡ್ಡದ ಪ್ರಸಿದ್ಧ ನರಸಿಂಹಸ್ವಾಮಿ ದೇವಾಲಯದಲ್ಲಿ ಶ್ರಾವಣ ಶುದ್ಧ ಅಭಿಜಿನ್ ಮುಹೂರ್ತದಲ್ಲಿ ನಡೆದ ಅವರ ಮದುವೆ ವೈಭವೋಪೇತವಾಗಿತ್ತು, ನಭೂತೋ ನಭವಿಷ್ಯತಿ ಎಂಬಂತೆ. ಅದಕ್ಕೆ ನೀವು ಬಂದಿರಲಿಕ್ಕಿಲ್ಲ, ಕಾರಣ ಅವನು ಕಥೆಗಾರನಾಗಿ ಅದೇ ತಾನೆ ರೂಪಗೊಳ್ಳುತ್ತಿದ್ದ, ಯಾರಾದರೂ ಈ ಕಥೆಯನ್ನು ಬರೆದವರು ನೀವೆ ತಾನೆ ಎಂದು ಕೇಳಿದರೆಂದರೆ ತನ್ನ ಅಂಗಾಂಗಗಳನ್ನು ಒಳಕ್ಕೆಳೆದುಕೊಂಡು ತನ್ನ ಮೂಲ ಸ್ವರೂಪವನ್ನು ಮರೆಮಾಚಿಕೊಂಡುಬಿಡುತ್ತಿದ್ದ, ಅಂಥವನು ಮಧುಮಗನನ್ನಾಗಿ ರೂಪಿಸಿದ್ದು ಸಾಹಸವೇ ಸರಿ. ಶೋಭನದ ರಾತ್ರಿ ಸಮೀಪಿಸುತ್ತಿದ್ದಂತೆ ತಳವಳವನ್ನು ಅನುಭವಿಸಿದ, ಲೈಂಗಿಕವಾಗಿ ಸಮರ್ಥನಿದ್ದರೂ ಆ ದಿವಸ ಪ್ರಥಮ ಸಂಭೋಗದಿಂದ ಮಕ್ಕಳಾಗುವವೆ ಎಂದು ಕೇಳಿದ, ಅನುವಂಶಿಕ ವ್ಯಾಧಿಗಳು ಸುಖ ಸಂತೋಷಗಳ ನೆಪದಲ್ಲಿ ದೇಹಗಳನ್ನು ಮಾಧ್ಯಮಗಳನ್ನಾಗಿ ಬಳಸುವುದು ತನಗೆ ಇಷ್ಟವಿರಲಿಲ್ಲ, ವೈದ್ಯನಾಗಿ, ಗೆಳೆಯನಾಗಿ ಅವನಿಗೆ ಏನೋ ಒಂದು ಹೇಳಿ ಒಪ್ಪಿಸಿದೆ. ದ್ವಂದ್ವ ಆ ರಾತ್ರಿ ಪರಾಕಾಷ್ಠೆ ತಲುಪಿರಬಹುದು, ತಾನೇ ಆಕೆಯನ್ನೋ, ಆಕೆಯೇ ಆತನನ್ನೋ ಪ್ರವೇಶಿಸಿರಲೂಬಹುದು. ಸ್ಖಲಿಸಿದ ಬಳಿಕ ಪಾರ್ಕಿನ್ಸನ್ ಖಾಯಿಲೆ ಒಂದು ಚಿಕ್ಕ ಭೆಟ್ಟಿ ನೀಡಿ ಮರಳಿರಲೂಬಹುದು. ನವವಿವಾಹಿತರ ಮುಖದಲ್ಲಿ ಪ್ರಸನ್ನತೆ ಸಂತೃಪ್ತ ಭಾವನೆಗಳಿಗೆ ಕೊರತೆ ಇರಲಿಲ್ಲ, ಅದು ಶಾಶ್ವತವಾಗಿರಲೆಂದು ಹಾರೈಸಿದೆ.

ಅಶ್ವಿನಿ ಶುಭದಿವಸದಂದು ಗಂಡನ ಮನೆ ಪ್ರವೇಶಿಸಿದಳು. ಮನೆ ಎಂದರೆ ಈಗಿರುವ ಮನೆಯಲ್ಲ, ಶತಮಾನಗಳಷ್ಟು ಹಳೆಯದಾದ ವಾಡೆ ಅಲಂಪೂರ್ ರಸ್ತೆಯ ಕೊನೆ ತುದಿಯಲ್ಲಿದೆ. ನಿಮಗೆ ಕುತೂಹಲವಿದ್ದರೆ ನೋಡುವಿರಂತೆ. ತನ್ನ ಗಂಡನ ಭಾವನೆಗಳ ಮೇಲೆ ನಿಯಂತ್ರಣ ಸಾಧಿಸಲಾರಂಭಿಸಿದಳು ಅಶ್ವಿನಿ! ತನ್ನ ಗಂಡನ ಗೆಳೆಯರ ಮೇಲೆ ನಿರ್ಬಂಧ ಹೇರಲಾರಂಭಿಸಿದಳು ಅಶ್ವಿನಿ! ತನ್ನ ಗಂಡನ ಸ್ಥಿರಚರ ಆಸ್ತಿಯ ಮೂಲ ಕಡತಗಳನ್ನು ಗುಟ್ಟಾಗಿ ಪರಿಶೀಲಿಸಲಾರಂಭಿಸಿದಳು ಅಶ್ವಿನಿ! ತಿಜೋರಿಯಲ್ಲಿದ್ದ ಅಪರೂಪದ ಒಡವೆ ಆಭರಣಗಳನ್ನು ಒಂದೊಂದಾಗಿ ತನ್ನ ತವರಿಗೆ ಸಾಗಿಸಲಾರಂಭಿಸಿದಳು ಅಶ್ವಿನಿ! ಅನುವಂಶಿಕ ವ್ಯಾಧಿಗಳ ಪೈಕಿ ಕೆಲವಕ್ಕೆ ರಹದಾರಿ ಕಲ್ಪಿಸಲಾರಂಭಿಸಿದಳು ಅಶ್ವಿನಿ! ವ್ಯತಿರಿಕ್ತ ಔಷಧಿಗಳ ಸೇವನೆ ಮಾಡುವಂತೆ ನೋಡಿಕೊಳ್ಳಲಾರಂಭಿಸಿದಳು ಅಶ್ವನಿ! ಒಲ್ಲದ ಮನಸ್ಸಿನಿಂದ ಗರ್ಭ ಧರಿಸಲಾರಂಭಿಸಿಧಳು ಅಶ್ವಿನಿ! ಹುಟ್ಟಿದ ಮಕ್ಕಳಿಗೆ ಸ್ತನ್ಯಪಾನ ನಿರಾಕರಿಸಲಾರಂಭಿಸಿದಳು ಅಶ್ವಿನಿ! ತನ್ನ ದೈಹಿಕ ಸೌಂದರ್ಯದ ಕಡೆ ಹೆಚ್ಚು ಗಮನ ನೀಡಲಾರಂಭಿಸಿದಳು ಅಶ್ವಿನಿ! ತನ್ನ ನವಜಾತ ಶಿಶುಗಳ ದೇಹಗಳೊಳಗೆ ವ್ಯಾಧಿಗಳಿಗೆ ರಹದಾರಿ ಕಲ್ಪಿಸಲಾರಂಭಿಸಿದಳು ಅಶ್ವಿನಿ! ಅವುಗಳ ಮೇಲೆ ತನಗೆ ಅಪಾರ ಪ್ರೇಮ ವಾತ್ಸಲ್ಯವಿರುವುದಾಗಿ ಅಭಿನಯಿಸಲಾರಂಭಿಸಿದಳು ಅಶ್ವಿನಿ! ತನಿಕೆಳ್ಳ ವಂಶದ ಅಳಿದುಳಿದ ಹಿರಿಯರು ಒಬ್ಬೊಬ್ಬರಾಗಿ ವೈಕುಂಠವಾಸಿಗಳಾಗುವಂತೆ ನೋಡಿಕೊಳ್ಳಲಾರಂಭಿಸಿದಳು ಅಶ್ವಿನಿ! ಪಾರ್ಕಿನ್ಸನ್ ಅಪಸ್ಮಾರಗಳಂಥ ವ್ಯಾಧಿಗಳು ತನ್ನ ಗಂಡನಲ್ಲಿ ಹೆಚ್ಚು ಹೆಚ್ಚಾಗಿ ಉಲ್ಬಣಗೊಳ್ಳುವಂತೆ ಮಾಡು ದೇವರೆ ಎಂದು ಮೊರೆ ಇಡಲಾರಂಭಿಸಿದಳು ಅಶ್ವಿನಿ! ಓಹ್ ಅಶ್ವಿನಿ!" ಎಂದು ಉದ್ಗರಿಸಿದರು ಡಾ. ಸುಧನ್ವ

ದುರ್ಬಲ ಮತ್ತು ಕಡಿಮೆ ದರ್ಜೆಯ ಮಂಚದ ಮೇಲೆ ಸಹಜವಲ್ಲದ ನಿದ್ದೆಯಲ್ಲಿದ್ದ ಪಾರ್ಥ ಮಗ್ಗುಲು ಬದಲಾಯಿಸಿದ. ತಾನೆಲ್ಲಿ ಎಚ್ಚರದಲ್ಲಿರುವನೋ! ತಾನೆಲ್ಲಿ ತಮ್ಮ ಮಾತುಗಳನ್ನು

ಆಲಿಸುವನೋ! ನೆನಪುಗಳ ದಾಳಿಯಿಂದಾಗಿ ತನ್ನಲ್ಲಿ ವ್ಯಾಧಿಗಳೆಲ್ಲಿ ಮರುಕಳಿಸುವವೋ! ಅವನಿಗೆ ಸೂಕ್ತ ತಕ್ಕುದಾದ ಚಿಕೆತ್ಸೆ ಕೊಡುವ ಅರ್ಹತೆ ತಮಗಿಲ್ಲ, ಕರ್ನೂಲಿನ ಪ್ರಸಿದ್ಧ ತಜ್ಞವೈದ್ಯರಾದ ಡಾ. ಶ್ರೀವಲ್ಲಭಅಲಿಪಿರಿ ಅವರು ಹೈದರಾಬಾದಿಗೋ, ಬೆಂಗಳೂರಿನ ನಿಮ್ಹಾನ್ಸಿಗೋ ಕರೆದೊಯ್ಯುವಂತೆ ಸೂಚಿಸಿದ್ದರು ಹಿಂದೆಯೇ! ಆದರೆ ಸೂಕ್ಷ್ಮ ಸಂವೇದನಾಶೀಲ ರೋಗಿಯು ಅದಕ್ಕೆ ಸಹಕರಿಸುತ್ತಿಲ್ಲ, ತನಗೆ ಸೂಕ್ತಚಿಕೆತ್ಸೆ ಕೊಡಿಸುವ ನೈತಿಕ ಹೊಣೆ ತನ್ನ ಪತ್ನಿಯದ್ದೆಂದೂ, ಆಕೆ ತನ್ನ ಜೊತೆಯಲ್ಲಿದ್ದರೆ ಮಾತ್ರ ತಾನು ಹೊರಡುವುದಾಗಿಯೂ ಹೇಳಿದ್ದುಂಟು ತಾನು! ಆದರೆ ಡೈವೊರ್ಸ್ ಪಡೆಯಲು ನ್ಯಾಯಾಲಯಕ್ಕೆ ಮೊರೆ ಹೋಗಿರುವ ಆಕೆ ಬರುವುದುಂಟೆ! ಬಂದು ಸಹಕರಿಸುವುದುಂಟೆ! ತಾನು ಬರುವುದು ಬೇಡ, ಆದರೆ ವಕೀಲರ ನೆರವಿನಿಂದ ಈಗಾಗಲೆ ನಿಷೇಧಿಸಲ್ಪಟ್ಟಿರುವ ಬ್ಯಾಂಕಿನ ಖಾತೆಗಳ ಲೇವಾದೇವಿಯ ನಿಷೇಧವನ್ನು ತೆರೆವುಗೊಳಿಸಲು ಸಹಕರಿಸಿದರೆ ಸಾಕು. ಅದಕ್ಕೆ ಆಕೆ ತನ್ನ ಪತಿ ಮಾನಸಿಕವಾಗಿ ಅಸ್ವಸ್ಥನಿರುವನೆಂದು ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಿರುವಳು, ಅದೂ ತಜ್ಞವೈದ್ಯರಿಂದ!

ಪುನಃ ಸುಧನ್ವ ನಿಡುಸುಯ್ಯುತ್ತ ಧಾವಿಸಿ ಪಾರ್ಥನ ದೇಹದಲ್ಲಿ ಕಾಣಿಸಿಕೊಂಡ ಚಲನೆ ಸಹಜವೋ ಅಸಹಜವೋ ಎಂದು ಪರಿಶೀಲಿಸಿದರು. ಅದೇ ಹೊತ್ತಿಗೆ ಸರಿಯಾಗಿ ಪಕ್ಕದ ಮನೆಯ ಮಹಿಳೆ ತನ್ನ ಮಗಳ ಸಂಗಡ ಬಾಗಿಲಲ್ಲಿ ಕಾಣಿಸಿಕೊಂಡಳು. ತಮ್ಮ ಕೈಯಲ್ಲಿದ್ದ ಪ್ಲಾಸ್ಕನ್ನು, ಕೆಲವು ಹಣ್ಣುಗಳಿದ್ದ ಬುಟ್ಟಿಯನ್ನು ಟೇಬಲ್ ಮೇಲಿರಿಸುತ್ತ ರೋಗಿಯನ್ನು ಸಮೀಪಿಸಿದರು. ಮಹಿಳೆ ಆತನ ಹಣೆಯನ್ನು ಸ್ಪರ್ಶಿಸುವ ಸಲುವಾಗಿ ಚಾಚಿದ ತನ್ನ ಕೈಯನ್ನು ಕೂಡಲೆ ಉಪಸಂಹರಿಸಿಕೊಂಡಳು. ಅರುಣಾ ಪಾರ್ಥನ ನೊಸಲ ಮೇಲೆ ತನ್ನ ಕೈಯನ್ನಿರಿಸಿ ಪಾರ್ಥೂ ಅಂಕಲ್ ಎಂದು ಮಾತಾಡಿಸಲು ಪ್ರಯತ್ನಿಸಿದಳು..

++++

ದೀರ್ಘ ನಿದ್ದೆಯಿಂದ ಎಚ್ಚತ್ತ ಪಾರ್ಥಸಾರಥಿ ಆಕಳಿಸಲಿಲ್ಲ, ಮೈಯನ್ನು ಮುರಿಯಲೂ ಇಲ್ಲ, ಆಚೀಚೆ ನೋಡಲೂ ಇಲ್ಲ, ನನ್ನ ಕಡೆಗಾಗಲೀ, ಡಾ. ಸುಧನ್ವರ ಕಡೆಗಾಗಲೀ ಕೃತಜ್ಞತೆಯಿಂದ ನೋಡಲೂ ಇಲ್ಲ. ಮೆಲ್ಲಗೆ ಎಚ್ಚರಗೊಂಡ, ನಿಧಾನವಾಗಿ ಕಣ್ಣುಗಳನ್ನು ತೆರೆದ, ಶೂನ್ಯದ ಕಡೆ ನಿಟ್ಟಿಸುತ್ತ ಮೆಲ್ಲಗೆ ಗೋಡೆ ಮೇಲಿದ್ದ ಹೆಂಡತಿ ಸಂಗಡ ತಾನಿದ್ದ ಸ್ಥಿರ ಚಿತ್ರದ ಕಡೆ ದೃಷ್ಟಿ ಹಾಯಿಸಿದ, ಅದೂ ಯಾಂತ್ರಿಕವಾಗಿ. ಕಣ್ಣುಗಳಿಂದ ಸಮೀಪಿಸಿದ, ಹೌದೋ ಅಲ್ಲವೋ ಎನ್ನುವಂತೆ ನಿಟ್ಟುಸಿರುಬಿಟ್ಟ. ಮೆಲ್ಲಗೆ ಎದ್ದು ಕೂಡ್ರಲು ಪ್ರಯತ್ನಿಸಿದನಾದರೂ ಸಾಧ್ಯವಾಗಲಿಲ್ಲ. ನಾವಿಬ್ಬರೂ ಸಹಕರಿಸಬೇಕೆನ್ನುವಷ್ಟರಲ್ಲಿ ಅರುಣಾ ಧಾವಿಸಿ ತನ್ನೆರಡೂ ಕೈಗಳಿಂದ ಎದ್ದು ಕೂಡ್ರಿಸಿದಳಲ್ಲದೆ ದೇಹವನ್ನು ಗೋಡೆಗಾನಿಸಿ ಬೆನ್ನ ಹಿಂದೆ ತಲೆದಿಂಬನ್ನಿರಿಸಿದಳು. ಅದಕ್ಕೂ ತಾನು ಆಕೆಯ ಕಡೆ ಕೃತಜ್ಞತೆಯ ನೋಟ ಹರಿಸಲಿಲ್ಲ. ಒಂದು ರೀತಿಯ ಯಾಂತ್ರಿಕತೆ. ಆಕೆಯೇ ವಾತ್ಸಲ್ಯದಿಂದ ಪ್ಲಾಸ್ಕಿನಿಂದ ಕಪ್ಪಿಗೆ ಕಾಫಿ ಸುರಿದು ತನ್ನೆರಡೂ ಕೈಗಳಿಂದ ಆತನೆರಡೂ ಕೈಗಳಲ್ಲಿರಿಸಿದಳು, ತುಟಿಗಳ ಬಳಿಗೊಯ್ದು ಕುಡಿಯಲು ಸಹಕರಿಸಿದಳು, ಒಂದೆರಡು ಗುಟುಕುಗಳನ್ನು ಕುಡಿದನೋ ಇಲ್ಲವೋ! ಎಡ ತುಟಿಗಳ ಸಂಧಿಯಲ್ಲಿ ಜಿನುಗಲಾರಂಭಿಸಿದ ಕಾಫಿ ಧಾರೆಯನ್ನು ಒರೆಸುವ ಸಲುವಾಗಿ ಟುವೆಲ್ಲಿಗಾಗಿ ಹುಡುಕಿದಳು, ಆ ಕ್ಷಣ ಸಿಗಲಿಲ್ಲವಾದ್ದರಿಂದ ತನ್ನ ಎದೆ ಮೇಲಿದ್ದ ಸೆಲ್ವಾರ್ ಕಮೀಜಿನ ತುದಿಯಿಂದ ಒರೆಸಿದಳು. ಅದಕ್ಕಾದರೂ ತಾನು! ಹ್ಞೂಹ್ಞು! ಇಲ್ಲವೇ ಇಲ್ಲ, ನಿರ್ಜೀವ

ಗೊಂಬೆಯಂತೆ! ತುಸು ಹೊತ್ತಿನ ಬಳಿಕ ಅರುಣಾ ಕಾಲೇಜಿಗೆ ಹೊತ್ತಾಯಿತೆಂದು ಹೇಳಿ ಹೊರಟು ಹೋದಳು.

ಇಬ್ಬರಿಗಿಂತ ಹೆಚ್ಚು ಜನರ ತೂಕವನ್ನು ಸಹಿಸುವ ಶಕ್ತಿ ಆತನಿದ್ದ ಮಂಚಕ್ಕೆ ಇರಲಿಲ್ಲ. ಆತನ ದೇಹ ಸ್ರವಿಸುತ್ತಿದ್ದ ಬೆವರನ್ನು ತಣಿಸುವ ಶಕ್ತಿ ಮಂಚದ ಪಕ್ಕದಲ್ಲಿದ್ದ ಕಿಟಿಕಿಗೆ ಇರಲಿಲ್ಲ, ರುಗ್ಣಮೌನವನ್ನಾಗಲೀ, ಹೃದಯದ ಮರೆಯಲ್ಲಿದ್ದ ಆಕ್ರಂದನವನ್ನಾಗಲೀ ಅಳಿಸುವ ಶಕ್ತಿ ಕಿಟಿಕಿಯ ಹಿಂದಿನ ಮರಗಳ ಮೇಲೆ ಅದೇ ತಾನೆ ಕುಳಿತು ಆಲಾಪನ ಆರಂಭಿಸಿದ್ದ ಪಕ್ಷಿಗಳಿಗೆ ಇರಲಿಲ್ಲ. ಸುಧನ್ವ ನನ್ನ ಕಡೆ ನೋಡಿದಾದ ಬಳಿಕ ಮಂಚದ ಕೊನೆ ತುದಿಯಲ್ಲಿ ಕುಳಿತರೂ ಸೌಜನ್ಯಕ್ಕೆ ಚಾಚಿದ್ದ ಕಾಲುಗಳನ್ನು ಹಿಂದಕ್ಕೆ ಸರಿಸಿಕೊಳ್ಳಲಿಲ್ಲ, ಆ ದಿಸೆಯಲ್ಲಿ ಪ್ರಯತ್ನಿಸಲೂ ಇಲ್ಲ ಪಾರ್ಥಸಾರಥಿ, ಕಾಮಗಾರಿಯ ಅವಕೃಪೆಗೆ ಒಳಗಾಗಿರುವ ಕಾಡು ಹಾದಿಯಂತೆ! ಪರಸ್ಪರ ನೋಡುತ್ತ ಮೂಕರಂತೆ ಕೂತುಕೊಳ್ಳುವುದಾದರೂ ಎಲ್ಲಿಯವರೆಗೆ!

ಡಾ. ಸುಧನ್ವ ತಮ್ಮ ಸಂಗಡ ವೈದ್ಯಕೀಯ ತಪಾಸಣೆಗೆ ಸಂಬಂಧಿಸಿದ ಸಲಕರಣೆಗಳ ಪೆಟ್ಟಿಗೆಯನ್ನು ತಂದಿದ್ದರಷ್ಟೆ, ಅನುಮತಿ ನಿರೀಕ್ಷಿಸದೆ ಮಿತ್ರನ ವೈದ್ಯಕೀಯ ಪರೀಕ್ಷೆಯನ್ನು ಆರಂಭಿಸಿಯೇಬಿಟ್ಟರು. ಸ್ಟೆಥೆಸ್ಕೋಪನ್ನು ನಿಶ್ಚಲವಾಗಿ ಕೂತಿದ್ದ ಗೆಳೆಯನ ಹೃದಯ ಭಾಗದ ಮೇಲೆ ಹರಿದಾಡಿಸಿದರು. ಥರ್ಮಾಮೀಟರನ್ನು ರೋಗಿಯ ಬಾಯಿಗೆ ಬದಲು ಆತನ ಕಂಕುಳಲ್ಲಿರಿಸಿ ದೇಹದ ಉಷ್ಣತೆಯನ್ನು ಪರೀಕ್ಷಿಸಿದರು, ಬಳಿಕ ಆತನ ದೇಹದಿಂದ ಸಿರಂಜಿ ಮೂಲಕ ಐದು ಎಮ್ಎಲ್ ರಕ್ತವನ್ನೂ, ಬಾಟಲಿಯಲ್ಲಿ ಅಷ್ಟೇ ಗಾತ್ರದ ಮೂತ್ರವನ್ನೂ ಪಡೆದುಕೊಂಡರು, ಯಾಂತ್ರಿಕವಾಗಿ ಸಹಕರಿಸಿದ ಮಿತ್ರನಿಗೆ ಧನ್ಯವಾದಗಳನ್ನು ಹೇಳದೆ ಸ್ಕೂಟರ್ ಏರಿ ಪ್ಯಾಥಾಲಜಿ ಸೆಂಟರ್‌ಗೆ ಹೋಗಿ ಫಲಿತಾಂಶದೊಂದಿಗೆ ಮರಳಿ ಬಂದರು, ಹಾಗೆಯೇ ಜೊತೆಯಲ್ಲಿ ಔಷಧಿ ಮಾತ್ರೆಗಳನ್ನು ಸಹ ತಂದಿರದೆ ಇರಲಿಲ್ಲ. ಬಳಿಕ ತಡಮಾಡದೆ ಗೆಳೆಯನ ದುರ್ಬಲ ತೋಳಿಗೆ ಇಂಜಿಕ್ಷನ್ ಮಾಡಿ ನನ್ನ ಕಡೆ ನೋಡುತ್ತ ನಿಟ್ಟುಸಿರುಬಿಟ್ಟರು. ನನ್ನ ಕೈ ಹಿಡಿದು ಬಾಗಿಲಾಚೆ ಕರೆದೊಯ್ದು ನನಗಷ್ಟೆ ಕೇಳಿಸುವಂತೆ

"ನಿಮ್ಮ ಕಲ್ಪನೆಯ ಪಾರ್ಥನೇ ಬೇರೆ, ನಿಮಗಿಲ್ಲಿ ಗೋಚರಿಸುತ್ತಿರುವ ಪಾರ್ಥನೇ ಬೇರೆ. ಇವನು ನಿಮಗೆ ತೀರಾ ಕ್ಲೋಜ್ ಫ್ರೆಂಡೇನೋ ಅಲ್ಲ, ನೀವೇ ನೋಡುತ್ತಿರುವಿರಲ್ಲ ಇವನ ವಿಷಮ ಪರಿಸ್ಥಿತೀನ! ಯಾವ ಶತ್ರುವಿಗೂ ಬರಬಾರದು. ಇಲ್ಲೇ ಇದ್ದರೆ ಪ್ರಾಬ್ಲೆಮ್ಮಿನಲ್ಲಿ ಸಿಕ್ಕಿ ಹಾಕಿಕೊಳ್ಳುವಿರಿ. ನಿಮಗೆ ಏನೇನು ಕೆಲಸಗಳಿರುವವೋ ಏನೊ! ಅರ್ಜೆಂಟಿದ್ದರೆ ಕಾದಂಬರಿ ಬಗ್ಗೆ ಚರ್ಚಿಸಿ ಹಸ್ತಪ್ರತಿ ತೆಗೆದುಕೊಂಡು ವಾಪಸ್ಸು ಹೋಗಿಬಿಡಿ. ನಾನೀ ಮಾತನ್ನು ಯಾಕೆ ಹೇಳುತ್ತಿರುವೆನೆಂದರೆ ಪಾರ್ಥನ ಆರೋಗ್ಯ ಪರಿಸ್ಥಿತಿ ತುಂಬಾ ಕ್ರಿಟಿಕಲ್ಲಾಗಿದೆ, ಶುಗರ್ ಲೆವೆಲ್ ನಾನ್ನೂರು ದಾಟಿದೆ, ಬೀಪೀನೂ ಅಬ್ನಾರ್ಮಲ್! ಪಾರ್ಕಿನ್ಸನ್, ಅಪಸ್ಮಾರಗಳನ್ನು ಹೇಗೋ ನಿಭಾಯಿಸಬಹುದು, ನಿರ್ಲಕ್ಷಿಸಿದರೆ ಸ್ಟ್ರೋಕ್ ಹೊಡೆಯುವ ಸಂಭವವಿದೆ, ಅದೂ ಅಲ್ಲದೆ ಅಶ್ವಿನಿ ಮುಂದೇನು ಮಾಡುವಳೋ ಏನೋ! ಏನು ಬಂದರೂ ಎದುರಿಸಲಿಕ್ಕೆ ಸಿದ್ದರಿದ್ದರೆ ಮಾತ್ರ ಇಲ್ಲೇ ನಾಲ್ಕೈದು ದಿವಸಗಳ ಕಾಲ ಇರಿ, ನಿಮ್ಮನ್ನು ನೀವೇ ನೋಡಿಕೊಳ್ಳಬೇಕು, ಜೊತೆಗೆ ಪಾರ್ಥನ ಸೇವೇನೂ ಮಾಡಲಿಕ್ಕೆ ಸಿದ್ದರಿರಬೇಕು, ನಿರ್ಧಾರ ನಿಮಗೇ ಬಿಟ್ಟದ್ದು" ಎಂದು ಕಡ್ಡಿಮುರಿದಂತೆ ಹೇಳಿ ಅಸಹಾಯಕತೆಯಿಂದ ನಿಟ್ಟುಸಿರುಬಿಟ್ಟರು.

ಅವರ ಮಾತುಗಳನ್ನು ಕೇಳಿ ನನ್ನ ಜಂಘಾಬಲ ಉಡುಗಿತು. ಅವರು ಹೇಳುತ್ತಿರುವುದು ಸರಿ. ನಾನು ಪ್ರಪ್ರಥಮ ಸಲ ನೋಡಿದ ಪಾರ್ಥಸಾರಥಿ ಯಾವ ರಾಜಕುಮಾರನಿಗಿಂತ

ಕಡಿಮೆ ಇರಲಿಲ್ಲ, ಹೈದರಾಬಾದ್ ಎಕ್ಸ್‌ಪ್ರೆಸ್ಸಿನಿಂದ ಇಳಿದ ನನ್ನನ್ನು ತಾನೆ ಖುದ್ದ ಸ್ವಾಗತಿಸಿದ, ತನ್ನ ಕಾರಿನಲ್ಲಿ ನೇರವಾಗಿ ಐಶ್ವರ್ಯ ಪ್ಯಾರಾಡೈಜಿಗೆ ಕರೆದೊಯ್ದು, ಕಥೆಗಳನ್ನು ವಾಚಿಸಿದ, ಕಥೆಗಳನ್ನು ಕೇಳಿದ, ತನ್ನ ತಾಯಿಯ ಪೂರ್ವಜರು ಕರ್ನಾಟಕ ಪ್ರಾಂತದ ಹರಪನಹಳ್ಳಿ ಪಾಳೇಗಾರರ ಆಸ್ಥಾನದಲ್ಲಿ ಪುರೋಹಿತರಾಗಿದ್ದರೆಂದು ಹೇಳಿದ, ಅಲ್ಲದೆ ಮಾಧ್ವ ಬ್ರಾಹ್ಮಣರಾದ್ದರಿಂದ ಕನ್ನಡ ಅರ್ಥವಾಗುವುದಾಗಿ ಹೇಳಿದ, ಕಾರಿನಲ್ಲಿ ಅಲಂಪೂರ್‌ಗೆ ಕರೆದೊಯ್ದು, ಅಲ್ಲಿನ ಚಾಲುಕ್ಯ, ಕಾಕತೀಯರು ಕಟ್ಟಿಸಿರುವ ದೇವಾಲಯ ಶಿಲ್ಪಗಳನ್ನು ಪರಿಚಯಿಸಿದ, ಅಲ್ಲಿನ ಶಿಲಾಶಾಸನಗಳ ಒಕ್ಕಣಿಕೆಯನ್ನು ಓದಿ ವಿವರಿಸಿದ, ಮುಂದೆ ವಾರದಿನ್ಯೆದು ದಿವಸಗಳ ಕಾಲ ಬಿಡುವು ಮಾಡಿಕೊಂಡು ಬಂದಲ್ಲಿ ವಿಜಯವಾಡ, ನಾಗಾರ್ಜುನಕೊಂಡ, ಅಮರಾಪುರ ಕಡೆ ಸುತ್ತಾಡಿಕೊಂಡು ಬರೋಣ ಎಂದೂ ಹೇಳಿದ. ಆದರೆ ಆ ಮೂರು ದಿವಸಗಳಲ್ಲಿ ತಾನು ತನ್ನ ಮೃದ್ವಂಗಿತನವನ್ನು ಪ್ರದರ್ಶಿಸಿರಲಿಲ್ಲ, ತನ್ನನ್ನು ಭಾದಿಸುತ್ತಿರುವ ವ್ಯಾಧಿಗಳ ಸುಳಿವು ಬಿಟ್ಟುಕೊಟ್ಟಿರಲಿಲ್ಲ, ಅಲ್ಲಿಂದ ಮರಳಿದ ಬಳಿಕವೂ ತನ್ನೊಂದಿಗೆ ಪತ್ರ ವ್ಯವಹಾರವಿರಿಸಿಕೊಂಡಿದ್ದೆ, ನನ್ನ ಕೆಲವು ಕಥೆಗಳನ್ನು ತೆಲುಗು ಭಾಷೆಗೆ ಅನುವಾದಿಸಿದ, ಪತ್ರದ ಮೂಲಕ ನಡೆಸಿದ ಸಂದರ್ಶನವನ್ನು ಪ್ರಮುಖ ಪತ್ರಿಕೆಯಲ್ಲಿ ಪ್ರಕಟವಾಗುವಂತೆ ನೋಡಿಕೊಂಡ. ಅದರಿಂದಾಗಿಯೇ ಕಾಶಿಬೊಟ್ಲ, ತುಮ್ಮಲ, ಶಿವಸಾಗರ್, ಮಧುರಾಂತಕಂ, ಯುದ್ದನಪೂಡಿಯೇ ಮೊದಲಾದ ಹಲವು ತೆಲುಗಿನ ಮಹತ್ವ ಬರಹಗಾರರ ಪರಿಚಯ ನನಗಾದದ್ದು. ತನ್ನ ಮದುವೆಗೆ ನನ್ನನ್ನು ಆಮಂತ್ರಿಸದಿದ್ದದ್ದು ತನ್ನ ದೊಡ್ಡ ತಪ್ಪು, ಆದರೆ ಬರೆದ ತನ್ನ ಪತ್ರದಲ್ಲಿ ತನ್ನ ವಿವಾಹ ಕುರಿತಂತೆ, ತನ್ನ ಚಿನ್ನದಂಥ ಸಂಗಾತಿ ಕುರಿತಂತೆ, ತನ್ನ ಸುಖ ಸಂಸಾರ ಕುರಿತಂತೆ ವಿವರಿಸಿದ್ದ. ಅಷ್ಟೆಲ್ಲಾ ಇದ್ದವನು, ಇಷ್ಟೆಲ್ಲ ಹೇಳಿಕೊಂಡಿದ್ದವನು ಸುಖವಾಗಿರುವನೆಂದೇ ಭಾವಿಸಿದ್ದೆ, ಆದರೆ ಇಲ್ಲಿಗೆ ಬಂದು ಪ್ರತ್ಯಕ್ಷವಾಗಿ ನೋಡಿದ ಬಳಿಕ! ಡಾ. ಸುಧನ್ವರ ಮಾತುಗಳನ್ನು ಕೇಳಿದ ಬಳಿಕ!

ಅಪೂರ್ಣ ಕಾದಂಬರಿಯ ಹಸ್ತಪ್ರತಿಯನ್ನು ಕಂಕುಳಲ್ಲಿರಿಸಿಕೊಂಡು ವಾಪಸ್ಸು ಹೊರಡುವುದೆಂದರೆ! ಕೆಮ್ಮುತ್ತಿದ್ದ, ಪ್ರತಿಸಲ ಕೆಮ್ಮಿದಾಗಲೂ ಬಾಯಿಯಿಂದ ಒಸರುತ್ತಿದ್ದ ರಕ್ತವನ್ನು ಕಣ್ಣಳತೆಯಲ್ಲಿ ಗಮನಿಸುತ್ತಿದ್ದ, ಅದನ್ನು ತಾನೆ ಒರೆಸಿಕೊಳ್ಳುವನೋ ಇಲ್ಲವೋ ಎಂದು ತುದಿಗಾಲಲ್ಲಿ ನಿಂತು ಗಮನಿಸುತ್ತಿದ್ದ, ತಮ್ಮ ಒಂದು ಹೆಜ್ಜೆಯನ್ನು ಹೊಸ್ತಿಲ ಒಳಗೂ, ಇನ್ನೊಂದು ಹೆಜ್ಜೆಯನ್ನು ಹೊಸ್ತಿಲ ಹೊರಗೂ ಇರಿಸಿದ್ದ ಸುಧನ್ವ ಎಂಬ ಹೆಸರಿನ ಕರುಣಾಮೂರ್ತಿಯನ್ನು ಅಪಾದಮಸ್ತಕ ದಿಟ್ಟಿಸಿದೆ, ಅವರಲ್ಲಿರುವ ಅನುಕಂಪದ ಕಿಂಚಿತ್ತಾದರೂ ನನ್ನಲ್ಲಿ! ಅವರ ಮುಂಗೈಗಳನ್ನು ಅಪ್ಯಾಯತೆಯಿಂದ ಸ್ಪರ್ಶಿಸಿದೆ, ಕಾದಂಬರಿಗಿಂತ ಕಾದಂಬರಿಕಾರ ಮುಖ್ಯವೆಂದು ಹೇಳಿದೆ. ಅವರ ಸಂಗಡ ಒಳಗಡೆ ಹೆಜ್ಜೆ ಇರಿಸಿದೆ.

ನಾವು ಒಳಗಡೆ ಹೋಗುವುದಕ್ಕೂ ಪಾರ್ಥ ತನ್ನ ದುರ್ಬಲ ಕೈಗಳಿಂದ ತುಟಿ ಸಂದುಗಳಿಂದ ಜಿನುಗಿದ್ದ ರಕ್ತವನ್ನು ಒರೆಸಿಕೊಳ್ಳುವುದಕ್ಕೂ ಸರಿ ಹೋಯಿತು. ಹಾಗೆಯೇ ಸಮೀಪಿಸಿದ ನಮ್ಮ ಕಡೆ ದೃಷ್ಟಿ ಹಾಯಿಸಿದ, ಕೃತಜ್ಞತೆ ಸೂಚಿಸುವ ಸಲುವಾಗಿ ಕೈಗಳನ್ನು ಜೋಡಿಸಲು ಯತ್ನಿಸಿದ, ಕಣ್ಣುಗಳಲ್ಲಿ ನೀರು ತುಂಬಿಕೊಂಡ, ಅವುಗಳನ್ನು ಪುನಃ ಮುಚ್ಚಿ ಮೌನದಿಂದ ದುಃಖಿಸಿದ. ರೋಗಿಯ ಮನಸ್ಸಿನಲ್ಲಿ ಭಾವನೆಗಳು ಜೀವ ಪಡೆದಿರುವವೆಂದರೆ! ಅವುಗಳನ್ನು ತಾನು ಉತ್ಕಟವಾಗಿ ಅನುಭವಿಸುತ್ತಿರುವನೆಂದರೆ! ಉಪಕಾರ ಸ್ಮರಣೆಯನ್ನು ಅಭಿವ್ಯಕ್ತಿಸಲು ಹಾತೊರೆಯುತ್ತಿರುವನೆಂದರೆ! ವೈದ್ಯರಾದವರಲ್ಲಿ ಸಾರ್ಥಕತೆ ಪಲ್ಲವಿಸಲು ಇಷ್ಟು ಸಾಕಲ್ಲವೆ!

ಡಾ. ಸುಧನ್ವ ಅಪರಿಮಿತ ರೀತಿಯಲ್ಲಿ ಸಂಭ್ರಮಿಸಿದರು. ಅವರ ಮುಖ ಅರಳಿತು, ಅವರ ಕಣ್ಣುಗಳಲ್ಲಿ ಆಶಾಕಿರಣಗಳು ಜೀಕರಿಸಿದವು, ಅವರ ದೇಹ ಸಂತೋಷದಿಂದ ಕಂಪಿಸಿತು. ಎರಡೇ ಎರಡು ಹೆಜ್ಜೆಗಳಷ್ಟು ದೂರವಿದ್ದ ತಮ್ಮ ಗೆಳೆಯನ ಬಳಿಗೆ ತೆರೆದ ಭಾಹುಗಳೊಂದಿಗೆ ಧಾವಿಸಿದರು, ಭಾವಪರವಶತೆಯ ಸೆಳೆವಿನಿಂದ ಬಿಗಿದಪ್ಪಿದರದೆಲ್ಲಿ ಧೃತರಾಷ್ಟ್ರಾಲಿಂಗನವಾಗುವುದೋ ಎಂಬ ಆತಂಕದಿಂದ ಹೂಗುಚ್ಛವನ್ನು ಸ್ಪರ್ಶಿಸುವಂತೆ ಮೆಲ್ಲಗೆ ಸ್ಪರ್ಶಿಸಿದರು, ತಮ್ಮ ಜೇಬಿನಿಂದ ಕರವಸ್ತ್ರ ತೆಗೆದು ಆತನ ತುಟಿಗಳ ಸಂಧುಗಳಲ್ಲಿದ್ದ ಕೆಂಪನ್ನು ಅಮೂಲಾಗ್ರವಾಗಿ ಒರೆಸಿ ಅದನ್ನು ಪುನಃ ಜೇಬಿನಲ್ಲಿರಿಸಿಕೊಂಡರು. ಅವನ ಮುಖವನ್ನು ಬೊಗಸೆಯಲ್ಲಿ ಹಿಡಿದು "ಪಾರ್ಥ ನಿನ್ನಲ್ಲಿ ವಿಲ್‌ಫವರ್ರಿಗೆ ಕೊರತೆ ಇಲ್ಲ ಕಣೋ, ನಿನ್ನಂಥೋರು ಬರೀ ನೂರು ವರ್ಷವಲ್ಲ ಸಾವಿರ ವರ್ಷಗಳ ಕಾಲ ಬದುಕಿರಬೇಕು. ನಿನ್ನ ಮನಸ್ಸಿನಲ್ಲಿರುವ ಕಹಿ ನೆನಪುಗಳಿಗೆ, ದುಃಸ್ವಪ್ನಗಳಿಗೆ ತಿಲ ತರ್ಪಣ ಕೊಟ್ಟುಬಿಡು. ಹೊಚ್ಚಹೊಸ ನೆನಪುಗಳನ್ನು, ಹೊಸಹೊಸ ಕನಸುಗಳನ್ನು, ಸೃಜನಶೀಲ ಆಸೆ ಆಕಾಂಕ್ಷೆಗಳನ್ನು ಅಂತರಂಗದೊಳಗೆ ಬಿಟ್ಟುಕೋ ಮಹರಾಯ" ಎಂದು ಹೇಳುತ್ತ ಭಾವಪರವಶರಾದರು.

ಅವರ ಮಾತುಗಳನ್ನು ಆಲಿಸುವಷ್ಟರಮಟ್ಟಿಗೆ ತನ್ನ ಶ್ರವಣೇಂದ್ರಿಯಗಳು ಕ್ರಿಯಾಶೀಲವಾಗಿದ್ದವು. ಆದರೆ ತಾನು ಶಾಬ್ದಿಕವಾಗಿ ಪ್ರತಿಕ್ರಿಯಿಸಲಿಲ್ಲ. ಅದನ್ನು ನಿರೀಕ್ಷಿಸಿರದಿದ್ದ ಸುಧನ್ವ ಔಷಧಿ, ಮಾತ್ರೆಗಳನ್ನು ನಿಧಿಷ್ಟ ಪ್ರಮಾಣದಲ್ಲಿ ವಿಂಗಡಿಸಿದರು, ಯಾವ್ಯಾವ ಔಷಧಿಯನ್ನು ಯಾವ್ಯಾವ ಸಮಯಕ್ಕೆ ಸ್ವೀಕರಿಸಬೇಕೆಂದು ಸಲಹೆ ನೀಡಿದರು. ಬಳಿಕ ಕೆಲವನ್ನು ಕಪಾಟಿನಲ್ಲಿ ಜೋಡಿಸಿಟ್ಟರು, ಕೈಗಳಿಂದ ತಮ್ಮ ತಲೆಯ ಮುಂಭಾಗವನ್ನು ಒಂದು ಕ್ಷಣ ಒತ್ತಿ ಹಿಡಿದು ಏನೋ ಯೋಚಿಸಿದಾದ ಬಳಿಕ ನನ್ನನ್ನುದ್ದೇಶಿಸಿ "ಕಥೆಗಾರರು ಶುಶ್ರೂಷಕರಾದಾಗ ಮಾತ್ರ ಕಥೆಗಳ ನೈತಿಕ ಬೆಲೆ ಹೆಚ್ಚುವುದು, ನಿಮಗೆ ಅಂಥ ಅವಕಾಶ ದೊರಕಿದೆ, ಸದುಪಯೋಗಪಡಿಸಿಕೊಳ್ಳುವಿರಿ ತಾನೆ!" ಎಂದು ಹೇಳುವುದನ್ನು ಮರೆಯಲಿಲ್ಲ. ಅಷ್ಟರೊಳಗಾಗಿ ತಮ್ಮ ಧನ್ವಂತರಿ ಚಿಕಿತ್ಸಾಲಯದ ಕಾಂಪೌಂಡರ್ ಯೇಸು ಮೂರ್ನಾಲ್ಕು ಸಲ ಬಂದು ಹೋಗಿದ್ದ ಬೇರೆ. ಇನ್ನೇನು ತಾವು ಹೊರಡಲೆಂದು ಮೆಡಿಕಲ್ ಕಿಟ್ಟನ್ನು ಕೈಗೆತ್ತಿಕೊಂಡು ಬಾಗಿಲನ್ನು ಸಮೀಪಿಸುವುದಕ್ಕೂ, ಅದೇ ಬಾಗಿಲು ಮೂಲಕ ಪುರುಷನನ್ನು ಹೋಲುವ ಮಹಿಳೆಯೋರ್ವಳು ಒಳಗೆ ಬರುವುದಕ್ಕೂ ಸರಿ ಹೋಯಿತು.

++++

ಡಾಕ್ಟರ್ ಹೋದೊಡನೆ ಆಕೆಯನ್ನು ನಾನೂ, ನನ್ನನ್ನು ಆಕೆಯೂ ಪರಸ್ಪರ ಪರಿಚಯ ಮಾಡಿಕೊಂಡೆವು. ನಾಮವಾಚಕಗಳಲ್ಲೂ ಸಂಬಂಧಗಳಲ್ಲೂ ತಾದ್ಯಾತ್ಮವಿರುತ್ತದೆ ಎನ್ನುವುದಕ್ಕೆ ಮೇರಿಯಮ್ಮ ಹೆಸರಿನ ಆಕೆಯೇ ನಿದರ್ಶನ. ಧನ್ವಂತರಿ ಚಿಕಿತ್ಸಾಲಯದಲ್ಲಿ ಕಾಂಪೌಂಡರನಾಗಿದ್ದರೂ ಎಲ್ಲಾ ರೀತಿಯ ಸೇವೆ ಸಲ್ಲಿಸುತ್ತಿರುವ ಯೇಸು ತನ್ನ ಮಗನಂತೆ! ತನ್ನ ಮಗಳ ಹೆರಿಗೆಗೆಂದು ಕರ್ನೂಲಿಗೆ ಹತ್ತಿರದ ನಾಗಲಾಪುರಕ್ಕೆ ಹೋಗಿದ್ದ ತಾನು ನಿನ್ನೆ ಸಂಜೆ ವಾಪಸ್ಸು ಬಂದಿರುವಳಂತೆ, ಮನೆಯ ಗಲೀಜೊಂದೇ ಅಲ್ಲದೆ ಪಾರ್ಥಸಾರಥಿ ದೈಹಿಕವಾಗಿ ಅಸ್ತವ್ಯಸ್ತಗೊಂಡಿರುವುದನ್ನು ನೋಡಿ ಮಾತೃವಾತ್ಸಲ್ಯದಿಂದ ಸಿಡಿಮಿಡಿಗುಟ್ಟಲಾರಂಭಿಸಿದಳು. ತಾನಿದ್ದಿದ್ದಲ್ಲಿ ಈ ಪರಿಸ್ಥಿತಿ ಒದಗುತ್ತಿರಲಿಲ್ಲವೆಂದು ಭಾವಿಸಿದವಳೆ ಆತನನ್ನು ಬಲವಂತದಿಂದ ಎಬ್ಬಿಸಿದ್ದೂ ಅಲ್ಲದೆ ಬಚ್ಚಲ ಕೋಣೆಗೆ ನಡೆಸಿಕೊಂಡೊಯ್ದು ಸ್ನಾನ ಮಾಡಿಸಿದಳು,

ಗದರಿಸಿದ್ದಕ್ಕೆ ನಾನೂ ಸಹಕರಿಸುವುದು ಅನಿವಾರ್ಯವಾಯಿತು. ಸ್ನಾನ ಮಾಡಿಸಿದ ಬಳಿಕ ಆತನನ್ನು ಬೆತ್ತಲಾಗಿಸಿ ಕಪಾಟಿನಿಂದ ಬಟ್ಟೆಬರೆ ತೆಗೆದು ಉಡಿಸಿದಳು. ಪಾರ್ಥ ಅಪರೂಪಕ್ಕೆ ನಾಚಲು ಪ್ರಯತ್ನಿಸಿದ, ಮಗನಾದವನು ತಾಯಿಯಾದವಳ ಬಳಿ ನಾಚಿಕೊಳ್ಳುವುದೆಂದರೇನು ಎಂದಳು. ಆತನ ಒಳ್ಳೆಯತನವನ್ನು ಶ್ಲಾಘಿಸಿದಳು, ಅಶ್ವಿನಿಯನ್ನು ಆಕೆ ಹೆಣ್ಣು ಅಲ್ಲವೆಂದು ದೂರಿದಳು. ಲಗುಬಗೆಯಿಂದ ಕಸಗೂಡಿಸಿ ಮನೆಯನ್ನು ಚೊಕ್ಕಟಗೊಳಿಸಿದಳು, ಬೀದಿ ನಲ್ಲಿಯಿಂದ ನೀರುನಿಡಿ ತಂದು ಖಾಲಿ ಪಾತ್ರೆಗಳನ್ನು ತುಂಬಿಸಿದಳು, ತನ್ನ ತಲೆಗೂದಲನ್ನು ಸರಿಪಡಿಸಿಕೊಂಡಾದ ಬಳಿಕ ಪಾರ್ಥನೆದುರು ನಿಂತು

"ಓದಿಕೊಂಡವರಾದ ನೀವೇ ಹಿಂಗ ಹಟ ಮಾಡಿದರೆಂಗ ಸೋಮಿ! ನೀವೇನು ಸಣ್ಣ ಮಗೂನ ಹೇಳಿಸಿಕೊಳ್ಳಾಕ! ಆಕೆಗಂತೂ ಬುದ್ಧಿ ಇಲ್ಲ ನಿಮಗಾದರೂ ಬುದ್ಧಿ ಇರೋದು ಬ್ಯಾಡವೇನು! ಅಸ್ವಿನಿ ಅಮ್ಮನವರೂ ಹೆಣ್ಣು ಸೋಮಿ, ಗಂಡ ಎಂಬ ಕನಿಕರ ಇದ್ದೇ ಇರ್ತದ, ಆಕಿಯ ಕಾಲು ಕೈ ಹಿಡಿಡಾದರೂ ಮನೆಗೆ ಕರಕೊಂಡು ಬರಬೇಕು ಸೋಮಿ, ಸಂಸಾರದಾಗ ಯಾರೂ ಹೆಚ್ಚಲ್ಲ, ಯಾರೂ ಕಡಿಮೆ ಅಲ್ಲ. ನಿಮ್ಮಂಗ ಹಠ ಮಾಡಿದ್ದರ ನಾನು ನನ್ನ ಕುಡುಕ ಗಂಡನ ಜೋಡಿ ಇಷ್ಟೊರ್ಸ ಸಂಸಾರ ನಡೆಸಲಿಕ್ಕಾಗ್ತಿತ್ತಾ! ಮಕ್ಕಳು ಮೊಮ್ಮಕ್ಕಳನ ಕಾಣಲಿಕ್ಕಾಗ್ತಿತ್ತಾ! ಆಕೀಗ ನೀವು ತಗ್ಗಿಬಗ್ಗಿ ನಡಕೋಬೇಕು, ಆಕೇನೂ ಗಂಡನೇ ಪತಿಪರಮೇಸ್ವರ ಎಂದು ಭಾವಿಸಿ ತಗ್ಗಿಬಗ್ಗಿ ನಡಕೋಬೇಕಿತ್ತು, ಆದರೇನು ಮಾಡೋದು ನಿಮ್ಮಿಬ್ಬರ ನಸೀಬ ನೆಟ್ಟಗಿಲ್ಲ, ಗಂಡಹೆಂಡರ ನಡುವೆ ಏನು ನಡದೈತೋ ಏನು ಬುಟ್ಟೈತೋ! ಅದು ಆ ಭಗವಂತನಿಗೇ ಗೊತ್ತು. ಆದರೆ ನೀವು ನೆಟ್ಟಗಿರೋದು ಬ್ಯಾಡವೇನು! ನಿಮ್ಮ ಆರೋಗ್ಯಾನ ನೀವು ನೆಟ್ಟಗಿಟ್ಟುಕೊಳ್ಳೋದು ಬ್ಯಾಡವೇನು! ಆ ದೇವರು ನಿಮಗೆ ಕಡಿಮೆ ಮಾಡಿರೋದಾದ್ರು ಏನು! ನೂರಾರು ತಲೆಮಾರು ಕೂತು ತಿಂದರೂ ಸವೆಯದಷ್ಟು ಆಸ್ತಿ ಕೊಟ್ಟಾನ. ನೀವು ಸುಖವಾಗಿದ್ದರೆ ತಾನೆ ನಮ್ಮಂಥ ಬಡಬಗ್ಗರು ಸುಖವಾಗಿರೋದು! ಮೂರು ತಿಂಗಳಿಂದ ನೀವು ನನಗ ಸಂಬಳ ಕೊಟ್ಟೀರೇನು! ಇದ್ದರೆ ಕೊಡ್ರಿ, ನಮ್ಮ ಮಗಳು ರೋಜಿ ಹೆರಿಗೆ ಖರ್ಚೈತೆ, ರೊಕ್ಕ ಎಲ್ಲಿಟ್ಟೀರಿ ಅಂಬುದನ್ನಾದ್ರೂ ಹೇಳಿರಿ, ಎಷ್ಟು ಬಾಕಿ ಬರಬೇಕೋ ಅಷ್ಟು ತಗಂತೀನಿ" ಎಂದು ವಿಜಯವಾಡದ ದೇಸೀಭಾಷೆಯಲ್ಲಿ ಒಂದೇ ಉಸಿರಿನಲ್ಲಿ ಹೇಳಿದಳು.

ಆಕೆ ಸಂಸಾರಕ್ಕೆ, ದಾಂಪತ್ಯಕ್ಕೆ ಸಂಬಂಧಿಸಿದ ಮಹಾಕಾವ್ಯವನ್ನೇ ಪಾರಾಯಣ ಮಾಡಿದಂತೆ ನನಗೆ ಭಾಸವಾಯಿತು. ಆಕೆಯ ವಾಗ್ವೈಖರಿ ಎಷ್ಟು ಪರಿಣಾಮಕಾರಿಯಾಗಿತ್ತೆಂದರೆ, ಅದಕ್ಕೆ ಚಿಕಿತ್ಸಿಕ ಗುಣವಿತ್ತು, ಅದರ ಪರಿಣಾಮವಾಗಿ ಪಾರ್ಥ ತನ್ನ ದುರ್ಬಲ ಕೈಗಳನ್ನು ಜೇಬುಗಳಲ್ಲಿ ಹರಿದಾಡಿಸಿದ, ಕಣ್ಣುಗಳನ್ನು ಕಪಾಟು ಕಡೆ ಹರಿದಾಡಿಸಿ ಕೊನೆಗೆ ಮಂಚದ ಕೆಳಗೆ ಬಾಗಿಸಿದ, ನೋಟದಿಂದ ಕೆಳಗಿರುವ ಸೂಟ್‌ಕೇಸನ್ನು ಹೊರತೆಗೆಯುವಂತೆ ಸೂಚಿಸಿದ. ಅಷ್ಟು ಸುಳಿವು ಸಾಕಾಯಿತು ತನಗೆ. ಮೇರಿಯಮ್ಮ ಮಂಚದ ಕೆಳಗೆ ಅಡಗಿದ್ದ ಅದನ್ನು ಸರ್ರಂತ ಹೊರಗೆ ಎಳೆದಳು. ನನ್ನ ಸಮಕ್ಷಮದಲ್ಲಿ ಅದನ್ನು ತೆರೆದಳು. ನನ್ನಲ್ಲಿ ಕುತೂಹಲ ನೂರ್ಮಡಿಸಿತು, ಅದರಲ್ಲಿ ಏಳೆಂಟು ಗರಿಗರಿ ಉಡುಪುಗಳಿದ್ದವಲ್ಲದೆ ತರಾವರಿ ಪೆನ್ನುಗಳಿದ್ದವು. ಅವುಗಳೊಂದಿಗೆ ಚೈನು ಉಂಗುರಗಳಂಥ ಚಿಕ್ಕಪುಟ್ಟ ಚಿನ್ನದ ಆಭರಣಗಳು ಇಲ್ಲದಿರಲಿಲ್ಲ. ಹಾಗೆಯೇ ಫೋಟೋ ಆಲ್ಬಂ ಸಹ! ನೋಡಲೆಂದು ಕೈಗೆತ್ತಿಕೊಂಡೆ, ನೋಡದಿರುವಂತೆ ಸೂಚಿಸಿದೊಡನೆ ಪುನಃ ಅಲ್ಲಿಟ್ಟು ಕೈಕಟ್ಟಿ ದೂರದಲ್ಲಿ ನಿಂತುಕೊಂಡೆ. ತನ್ನೆರಡೂ ಮುಂಗೈಗಳ ಮೇಲೆ ದೇಹದ ಸಮಸ್ತ

ಭಾರಬಿಟ್ಟು ಬಾಗಿದ್ದ ತಾನು ಇನ್ನೂ ಕೆಳಗೆ ಹುಡುಕುವಂತೆ ಸೂಚಿಸಿದ. ಮೇರಿಯಮ್ಮ ತೀರಾ ಕೆಳಗೆ ಅಡಗಿದ್ದ ಪರ್ಸನ್ನು ತೆಗೆದು ಆತನ ಕೈಗೆ ವರ್ಗಾಯಿಸುತ್ತ..

"ನೀವೇ ತೆಗೆದುಕೊಡಿರಿ ಸೋಮಿ" ಎಂದು ಹೇಳಿದಳು. ಆತನ ಕಣ್ಣನ್ನೆ ಮೇರೆಗೆ ನಾನೇ ಅದನ್ನು ತೆರೆದು ನೋಡಿದೆ, ಐವತ್ತು ನೂರರ ನೋಟುಗಳಿಗೆ ಬರವಿರಲಿಲ್ಲ. ತನ್ನ ಸಲಹೆಯಂತೆ ಸಾವಿರ ಮೌಲ್ಯದ ಹಣವನ್ನು ಎಣಿಸಿ ಆಕೆಯ ಕಡೆ ಚಾಚಿದೆ, ಅದಕ್ಕೆ ಆಕೆ "ಇಷ್ಟೊಂದು ರೊಕ್ಕ ಬೇಕಿಲ್ಲ ಸೋಮಿ, ನನಗೀಗ ಅರ್ಜೆಂಟಾಗಿ ಬೇಕಾಗಿರೋದು ಮುನ್ನೂರು ಮಾತ್ರ" ಎಂದು ಹೇಳಿ ಎಣಿಸಿಕೊಂಡವಳೆ ತನ್ನ ಕಬುಸದ ಎದೆ ಭಾಗದಲ್ಲಿ ತೂರಿಸಿದಳು. ಪುನಃ ತನ್ನೆದೆ ಮೇಲಿನ ಸೆರಗನ್ನು ಸರಿಪಡಿಸಿಕೊಳ್ಳುತ್ತ "ನಮ್ಮ ಸೋಮಿ ಎಷ್ಟು ಒಳ್ಳೆಯವರು ಏನು ಕಥಿ! ನಿಮನ್ನ ದೇವರು ಸುಖವಾಗಿಟ್ಟಿರಲಿ ಸೋಮಿ, ನಿಮ್ಮಂಥವರಿಗೆ ಕೆಟ್ಟದ್ದು ಮಾಡುವವರಿಗೆ ದೇವರು ತಕ್ಕ ಸಿಕ್ಸೆ ಕೊಡುತ್ತಾನೆ, ನಾನಿಲ್ಲೇ ಹಗಲು ರಾತ್ರಿ ಇದ್ದು ನಿಮ್ಮ ಸೇವೆ ಮಾಡುತ್ತಿದ್ದೆ ಎಂದುಕೊಳ್ಳಿ, ಆದರೇನು ಮಾಡಲಿ! ಹತ್ತಾರು ಮನಿ ಕಸಮುಸುರೆ ಮಾಡಿದರೂ ಹೊಟ್ಟೆಗಳಿಗೆ ಜೋಡಿಸೋದು ತ್ರಾಸ್ಯೆತಿ ಸೋಮಿ, ಎಂಟಕ್ಕೆಲ್ಲ ಕೋಮಟಿಗರ ಸೇಸಯ್ಯನ ಮನೇಲಿರ್ತೀನಂತ ಮಾತು ಕೊಟ್ಟಿದ್ದೆ, ಆದಕ್ಕೂ ಮೊದಲು ನಾನಿನ್ನು ಕಲೆಕ್ಟರಮ್ಮನ ಬಂಗಲೆಗೆ ಹೋಗಿ ವದಕನ ಬೊಗಳುವುದ್ಯೆತೆ ಸೋಮಿ, ಹೆಣ್ಣೆಂದರೆ ಆಕೆಯಂಗ ಇರಬೇಕು ನೋಡಿರಿ, ಏನು ಗತ್ತು ಏನು ಕಥಿ! ಕಡಪಾದ ಕಡೆಯ ಹೆಣ್ಮಕ್ಕಳೇ ಹಂಗಿರುತಾರೇನೊ! ಆದರೂ ಆಕಿ ಒಳ್ಳೆಯವಳು, ಹ್ವಾದ ವಾರ ನನಗೂ ನನ್ನ ಗಂಡನಿಗೂ ಹೊಸಬಟ್ಟೆಬರೆ ಕೊಡಿಸಿದಳು ಸೋಮಿ, ನೀವ್ಯಾವಾಗ ಕೊಡಿಸುತೀರೋ! ನಾನ್ಯಾವಾಗ ಪಡೀತೀನೋ! ಅದಕ್ಕಿಂತ ಮೊದಲು ನೀವು ಬೇಷಾಗಿ ಸೋಮಿ, ನಿಮ್ಮನ್ನ ನೀವು ಹುಸಾರಿಂದ ನೋಡಿಕೊಳ್ಳಿರಿ, ಚಂಜೀಗೆ ಬರ್ತೀನಿ" ಎಂದು ಹೇಳಿದವಳೆ ಅಲ್ಲಿಂದ ಹೊರಟು ತುಳಸಿಗಿಡದ ಬುಡಕ್ಕೆ ನೀರು ಹಾಕಿದ್ದೂ ಅಲ್ಲದೆ ಅದರ ತಲೆ ನೇವರಿಸಿದಾದ ಬಳಿಕ ಏನನ್ನೋ ನೆನಪಿಸಿಕೊಂಡು ಪುನಃ ವಾಪಸ್ಸಾದಳು, ನನ್ನನ್ನುದ್ದೇಶಿಸಿ "ದೇವರು ಕಳಿಸಿದಂಗ ಬಂದಿದ್ದೀರಿ ತಂದೆ, ಇಲ್ಲಿ ಇವರಿಗೆ ದಿಕ್ಕು ಯಾರದಾರೆ ಹೇಳಿ! ನಮ್ಮ ಸೋಮಿಗೆ ನೀವೇ ತಂದೆ ತಾಯಿ ಎಲ್ಲಾನು ನಾಕಾರು ದಿವಸವಿದ್ದು ಜೋಪಾನಜತನದಿಂದ ನೋಡಿಕೊಳ್ಳಿರಿ ಎಪ್ಪಾ, ದೇವರು ನಿಮಗೂ ಒಳ್ಳೇದು ಮಾಡ್ತಾನೆ" ಎಂದು ಹೇಳಿದಾದ ಬಳಿಕ ಪಾರ್ಥನ ಕಡೆ ತಿರುಗಿ "ಇವರು ಹೇಳಿದಂಗ ಕೇಳಿರಿ ಸೋಮಿ" ಎಂದು ಹೇಳಿದವಳೆ ಹೊರಟು ಹೋದಳು.

ಪಾರ್ಥನ ಕಡೆ ನೋಡುವುದಕ್ಕೂ, ಅವನು "ತಾಯಿ ಹೃದಯ ಇರುವ ಒಳ್ಳೆಯ ಹೆಂಗಸು" ಎಂದು ಶ್ಲಾಘಿಸುವುದಕ್ಕೂ ಸರಿ ಹೋಯಿತು. ವರ್ತಮಾನಕ್ಕೆ ಸ್ಪಂದಿಸುವಷ್ಟರಮಟ್ಟಿಗೆ ತನ್ನ ಆರೋಗ್ಯ ಸುಧಾರಿಸಿರುವುದು ನೆಮ್ಮದಿಯ ಸಂಗತಿ, ಹತ್ತಿರ ಕುಳಿತುಕೊಳ್ಳುವಂತೆ ಸೂಚಿಸಿದ, ಎರಡು ಹೆಜ್ಜೆಗಳನ್ನು ದಾವಂತದಿಂದಲೂ, ಕೊನೆಯ ಮೂರು ಹೆಜ್ಜೆಗಳನ್ನು ನಿದಾನ ಗತಿಯಿಂದಲೂ ಇಡುತ್ತ ಸಮೀಪಿಸಿ ತನ್ನ ಮೊಣಕಾಲುಗಳ ಪಕ್ಕದಲ್ಲಿದ್ದ ಸ್ಥಳದಲ್ಲಿ ಕುಳಿತೆ, ಅಪಾದಮಸ್ತಕ ದಿಟ್ಟಿಸಿದ, ತನ್ನೆರಡೂ ಕೈಗಳನ್ನು ನನ್ನ ಭುಜಗಳ ಮೇಲಿರಿಸಿ ಅಪ್ಯಾಯತೆಯಿಂದ ಅದುಮಿದ, ಕಣ್ಣುಗಳನ್ನು ನೀರಿನಿಂದ ತುಂಬಿಕೊಂಡ, ಅವನ ಕಣ್ಣುಗಳನ್ನು ಖಾಲಿ ಅಂಗೈಯಿಂದ ಒರೆಸುತ್ತ "ನಿನ್ನ ಆರೋಗ್ಯ ಸುಧಾರಿಸ್ತಿರೋದೆ ದೊಡ್ಡ ವಿಷಯ, ಖಂಡಿತ ನೀನು ಗುಣವಾಗುವಿ, ಆತಂಕಕ್ಕೊಳಗಾಗ ಬೇಡ" ಎಂದು ಸಂತೈಸಿದೆ.

ನನ್ನ ಏಕವಚನ ಸಂಬೋಧನೆಯಿಂದ ತನಗೆ ಖುಷಿಯಾಯಿತು. ಟೇಬಲ್ ಮೇಲೆ ಅನಾಥವಾಗಿ ಬಿದ್ದಿದ್ದ ಹಸ್ತಪ್ರತಿ ಕಡೆ ದೃಷ್ಟಿ ಹಾಯಿಸಿ, "ಕಾದಂಬರಿಯನ್ನು

ಪೂರ್ಣಗೊಳಿಸುವುದು ನನ್ನಿಂದಾಗಲೇ ಇಲ್ಲ. ಅದರಲ್ಲಿರುವ ವಾತಾವರಣ, ಕಥೆಯ ಸಂವಿಧಾನ, ಪಾತ್ರಗಳ ವಿಂಗಡಣೆ, ನಿರೂಪಣೆ ಎಲ್ಲವೂ ನಿನ್ನದೆ. ನಾನು ಲಿಪಿಕಾರನ ಪಾತ್ರ ನಿರ್ವಹಿಸಿದೆ" ಎಂದು ಸಲೀಸಾಗಿ ಮಾತಾಡಿದ್ದು ನನ್ನನ್ನು ಇನ್ನಷ್ಟು ಸಂತುಷ್ಟಗೊಳಿಸಿತು.

ಅವನೆರಡೂ ಕೈಗಳನ್ನು ಹಿಡಿದುಕೊಂಡು ಹೇಳಿದೆ "ಅನುಭವ ಕೇವಲ ನನ್ನದಷ್ಟೇ ಅಲ್ಲ, ಸಿಂಹಪಾಲು ನಿನ್ನದಿದೆ, ಅದರಲ್ಲಿ ನನ್ನವಲ್ಲದ ನೂರಾರು ಅನುಭವಗಳಿವೆ, ಅದನ್ನು ಓದಿದೊಡನೆ ನನಗಾದ ಸಂತೋಷ ಅಷ್ಟಿಷ್ಟಲ್ಲ, ಪ್ರೊ. ಕಾಶಿಬೊಟ್ಲ ವೇಣುಗೋಪಾಲ್ ಅವರೊಮ್ಮೆ ಕಣ್ಣಾಡಿಸಿದ್ದರೆ ಚೆನ್ನಾಗಿತ್ತೇನೊ!" ಎಂದು ಹೇಳಿದೆ. ಅದಕ್ಕೆ ತನ್ನ ಮುಖವನ್ನು ಕಿವುಚಿಕೊಳ್ಳುತ್ತಲೂ, ತನ್ನೆಡಗೈಯನ್ನು ಹೆಡೆಯಾಕಾರದಲ್ಲಿ ಬಿಚ್ಚುತ್ತಲೂ

"ಬೇಡವೇ ಬೇಡ, ಅವರೊಂದೇ ಅಲ್ಲ, ಬೇರೆ ಯಾರೂ ನೋಡುವುದು ನನಗಿಷ್ಟವಿಲ್ಲ. ಹಸ್ತಪ್ರತಿ ಪರಿಶೀಲಿಸುವ ನೆಪದಲ್ಲಿ ನನ್ನ ಬದುಕನ್ನು ಅವರು ಬೆದಕುವ ಸಂಭವವೇ ಹೆಚ್ಚು. ನಿಜ ಹೇಳುವುದಾದರೆ ನನಗೆ ನೀನು ನೋಡುವುದೂ ಇಷ್ಟವಿರಲಿಲ್ಲ, ಆದರೂ ತುಟಿ ಜಾರಿ ತಿಳಿಸಿದಾದ ಬಳಿಕ ಎಚ್ಚೆತ್ತುಕೊಂಡೆ, ನೀನು ಬರೋದು ಬೇಡ ಎಂದು ಪುನಃ ತಿಳಿಸಬೇಕೆನ್ನುವಷ್ಟರಲ್ಲಿ ನೀನು ಬಂದೇಬಿಟ್ಟೆ, ಅದಕ್ಕೆ ಕಾರಣ ನನ್ನ ಪರಿಸ್ಥಿತಿ! ನಿಮ್ಮೆಲ್ಲರ ಮನಸ್ಸಿನಲ್ಲಿರುವ ವ್ಯಕ್ತಿಯೇ ಬೇರೆ, ವಾಸ್ತವವಾಗಿ ಇರುವ ವ್ಯಕ್ತಿಯೇ ಬೇರೆ! ನಿನಗೂ ನನ್ನನ್ನು ನೋಡಿದಾಕ್ಷಣ ಯಾಕಾದರೂ ಬಂದೆನೋ ಎಂದೆನ್ನಿಸಿರಬಹುದಲ್ಲವೆ!" ಎಂದ. ಕೀಳರಿಮೆ ತನ್ನ ಮಾತುಗಳಲ್ಲಿತ್ತು. ಅದಕ್ಕೆ ಪ್ರತಿಯಾಗಿ..

"ಪಾರ್ಥಸಾರಥಿ ನಿನ್ನನ್ನು ನೀನೆ ಅಂಡರ್ ಎಸ್ಟಿಮೇಟ್ ಮಾಡ್ಕೊಳ್ಳೋದು ಸರಿಯಲ್ಲ, ಮನುಷ್ಯ ಎಂದ ಮೇಲೆ ಕಷ್ಟಗಳು ತಾಪತ್ರಯಗಳು ಬರೋದು ಸಹಜ, ಅವುಗಳನ್ನು ಎದುರಿಸುವುದು ಮುಖ್ಯ, ಒಂದು ವಿಚಿತ್ರವೆಂದರೆ ಸಮಸ್ಯೆಗಳನ್ನು ಸೃಷ್ಟಿಸಿಕೊಂಡಿರುವುದೂ ನೀನೆ, ಅವುಗಳ ಬಲೆಯಲ್ಲಿ ಸಿಲುಕಿಕೊಂಡು ಒದ್ದಾಡುತ್ತಿರುವುದೂ ನೀನೆ! ಇದಕ್ಕೆ ಬೇರೆಯವರು ಹೊಣೆಗಾರರಲ್ಲ" ಎಂದು ಕಠಿಣತೆಯಿಂದ ಹೇಳಿದೆ. ಅದಕ್ಕೆ ತಾನು ಕೂಡಲೆ ಪ್ರತಿಕ್ರಿಯಿಸುವ ಬದಲು ಮೌನವಹಿಸಿದ, ತನ್ನೆರಡೂ ಕೈಗಳನ್ನೂರಿ ಅವನತಮುಖನಾಗಿ ಭಾರಬಿಟ್ಟು ನಿಟ್ಟುಸಿರುಬಿಟ್ಟ, ಬಳಿಕ ನಿಧಾನವಾಗಿ ತಲೆ ಎತ್ತಿ

"ನೀನು ಹೇಳ್ತಿರೋದು ನಿಜಾನೆ! ಆದರೆ ದುಃಸ್ವಪ್ನಗಳ ರೀತಿಯಲ್ಲಿ ಕಾಡುತ್ತಿರುವ ನೆನಪುಗಳು ನನ್ನನ್ನು ಬಿಟ್ಟರೆ ತಾನೆ! ಯಾರ್ಯಾರು ಯಾವ್ಯಾವ ವೇಷದಲ್ಲಿದ್ದಾರೋ, ಎಲ್ಲೆಲ್ಲಿ ಯಾವ್ಯಾವ ಸಂಚು ರೂಪಿಸುತ್ತಿದ್ದಾರೋ! ಯಾವಾಗ ಆಕ್ರಮಣ ನಡೆಸುತ್ತಾರೋ! ಒಂದೂ ಅರ್ಥವಾಗುತ್ತಿಲ್ಲ" ಎಂದು ಹೇಳಿದ. ತನ್ನದು ಕೇವಲ ಭ್ರಮೆ ಎನ್ನಿಸಿತು, ಪೋಲಿಸ್ ಫೋಬಿಯಾದಿಂದ ನರಳಿ ಆತ್ಮಹತ್ಯೆ ಮಾಡಿಕೊಂಡ ಸಂಸ ನೆನಪಾದ. ಆದರೂ..

"ಅದೆಲ್ಲ ನಿನ್ನ ಭ್ರಮೆ ಪಾರ್ಥ, ಪ್ರತಿಯೊಂದು ಸಂಚಿಗೂ ನಿರ್ದಿಷ್ಟ ಕಾರಣಗಳಿರ್ತವೆ, ನನಗೆ ತಿಳಿದಿರುವಂತೆ ನೀನು ನಿರುಪದ್ರವಿ, ಅಮಾಯಕ, ಅಹಿಂಸಾವಾದಿ. ತಮಗೆ ಲಾಭವಿದ್ದರೆ ತಾನೆ ಯಾರಾದರು ದಾಳಿ ನಡೆಸುವುದು! ಇದೊಂದು ಮನೆ, ಕಪಾಟಿನಲ್ಲಿರುವ ಪುಸ್ತಕಗಳು, ಖಾಲಿ ಸೂಟ್ಕೇಸು! ಇಷ್ಟು ಹೊರತುಪಡಿಸಿದರೆ ಏನಿದೆ ನಿನ್ನ ಬಳಿ!" ಎಂದು ಸುತ್ತ ಕಣ್ಣಾಡಿಸುತ್ತಲೇ ಹೇಳಿದೆ. ನನ್ನ ಮಾತಿಗೆ ನಗಾಡಿದ..

"ಅಯ್ಯೋ ಹುಚ್ಚಪ್ಪ, ನಾವು ತನಿಕೆಳ್ಳ ಜಮೀನ್ದಾರರು, ನಮ್ಮ ಚರಾಸ್ತಿ ಅಲಂಪೂರ್, ಪೋಲಕಲ್, ಗೂಡೂರು, ದೂಪಾಡು ಕಡೇಲೆಲ್ಲ ಇದೆ, ನಮ್ಮ ಪೂರ್ವಜರ ಅದನ್ನು ದುಡಿಮೆ

ಪ್ರಮಾಣಿಕ ಶ್ರಮದಿಂದ ಸಂಪಾದಿಸಿದ್ದಲ್ಲ, ಅನಕ್ಷರಸ್ಥ ಹುಂಬ ರೆಡ್ಡಿಗಳ ನಡುವೆ ತಗಾದೆಗಳನ್ನು ಸೃಷ್ಟಿಸಿ ಆಕ್ರಮವಾಗಿ ಸಂಪಾದಿಸಿರುವ ಆಸ್ತಿ, ಅದೂ ಸಾಲದೆನ್ನುವಂತೆ ಚಿಕ್ಕಪುಟ್ಟ ರೈತರನ್ನು ಶೋಷಿಸಿ ಸಂಪಾದಿಸಿರೋದು. ಸ್ಥಿರಾಸ್ತಿಯೊಂದೇ ಅಲ್ಲದೆ ಮಣಗಟ್ಟಲೆ ಚಿನ್ನ ಬೆಳ್ಳಿ ತನಿಕೆಳ್ಳ ತಿಜೋರಿಯಲ್ಲಿ ಕೊಳೆಯುತ್ತಿದೆ, ಅಷ್ಟೆಲ್ಲಾ ಶ್ರೀಮಂತಿಕೆ ನನಗೆ ತಲೆನೋವಾಗಿದೆ" ಎಂದು ಅತ್ಯಂತ ಸಹಜ ಧ್ವನಿಯಲ್ಲಿ ಹೇಳಿದ.

ಅದನ್ನು ಕೇಳಿ ನಾನು ಒಂದು ಕ್ಷಣ ದಿಗ್ಭ್ರಮಿತನಾದೆ, ಆತನ ಮಾತಿಗೆ ಏನು ಹೇಳುವುದೆಂದು ತೋಚಲಿಲ್ಲ, ಆದರೂ "ಅಷ್ಟೆಲ್ಲ ಇದ್ದರೂ.." ಎಂದೆನೋ ಇಲ್ಲವೋ! ತಾನು ವಿಷಣ್ಣವದನನಾಗಿ "ಅದೆಲ್ಲ ಹಿಂಸೆಯ ಸಹಾಯವಿಲ್ಲದೆ ಅನುಭವಿಸುವುದಾಗುವುದಿಲ್ಲ, ಪಾಪಪ್ರಜ್ಞೆ ಇದ್ದರಂತೂ ಸಾಧ್ಯಾನೆ ಇಲ್ಲ. ಅದೂ ಅಕಾಲಿಕವಾಗಿ ಮೃತ್ಯುವನ್ನು ಸ್ವಾಗತಿಸಲು ತುದಿಗಾಲಲ್ಲಿ ನಿಂತಿರುವ ನನ್ನಂಥವರು!" ಎಂದು ಉಗುಳು ನುಂಗಿದ.

ಕೆಮ್ಮಿ ಚೇತರಿಸಿಕೊಂಡ ಬಳಿಕ ತಾನೆ "ಅಶ್ವಿನಿ ತನ್ನ ಗಂಡನಾದವನು ಎಲ್ಲಾ ಜಹಗೀರ್ದಾರರಂತಿರಬೇಕೆಂದು ಕನಸು ಕಂಡಳು, ಆಕೆಯ ಆಸೆ ಆಕಾಂಕ್ಷೆಗಳಿಗೆ ಪೂರಕವಾಗಿ ಸಹಕರಿಸದಿದ್ದ ನನ್ನನ್ನು ತನ್ನ ಶತ್ರುವೆಂದು ಭಾವಿಸಿದಳು, ಭ್ರಷ್ಟ ವೈದ್ಯರ ನೆರವಿನಿಂದ ನನಗೆ ಹುಚ್ಚನ ಪಟ್ಟ ದಯಪಾಲಿಸಿದಳು, ವಸ್ತಒಡವೆಗಳನ್ನು ಗುಟ್ಟಾಗಿ ಜಮ್ಮಲಮಡುಗಿಗೆ ಸಾಗಿಸಿದಳು, ಕಾನೂನು ಸಹಾಯದಿಂದ ನನ್ನ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದಳು, ಅದೂ ಸಾಲದೆಂಬಂತೆ ಈಗ ನನ್ನ ಸ್ಥಿರಾಸ್ತಿಯ ಮೇಲೆ ಕಣ್ಣಿಟ್ಟಿದ್ದಾಳೆ" ಎಂದು ಹೇಳುತ್ತ ನಿಟ್ಟುಸಿರುಬಿಟ್ಟ. ಆತನ ಮಾತು ಕೇಳಿ ನನಗೆ ಖೇದವೆನಿಸಿತು. "ಈಗ ಆಸ್ತೀನೆಲ್ಲ ಏನು ಮಾಡಬೇಕೆಂದಿರುವಿ!" ಎಂದು ಕೇಳಿದೆ.

ಸ್ವಲ್ಪ ಹೊತ್ತು ಮೌನವಹಿಸಿ ಸುತ್ತ ಯಾರೂ ಇಲ್ಲದಿರುವುದನ್ನು ಖಚಿತ ಪಡಿಸಿಕೊಂಡಾದ ಬಳಿಕ "ಸಿಂಧು ಹೆಸರಲ್ಲಿ ಆಸ್ತಿಯ ಒಂದು ಭಾಗವನ್ನು ರಿಜಿಸ್ಟರ್ ಮಾಡಿಸಿರುವೆ, ಉಳಿದ ಆಸ್ತಿಯನ್ನು ಮದರ್ ಥೆರೇಸಾರವರ ಸಂಸ್ಥೆಗೆ ದೇಣಿಗೆ ನೀಡುವುದೆಂದು ನಿರ್ಧರಿಸಿರುವೆ, ಅದಕ್ಕೆ ಸಂಬಂಧಪಟ್ಟಂತೆ ಕಾಗದ ಪತ್ರಗಳನ್ನು ವಕೀಲರು ಸಜ್ಜುಗೊಳಿಸಿದ್ದಾರೆ, ಆದರೆ ಅಶ್ವಿನಿ ಅದಕ್ಕೂ ಕೋರ್ಟಿನಿಂದ ಸ್ಟೇ ತಂದಿದ್ದಾಳೆ" ಎಂದು ಹೇಳುತ್ತಿದ್ದಂತೆಯೇ ಸುಸ್ತಾಗಿ ಹಾಸಿಗೆ ಮೇಲೊರಗಿದ, ಮಲಗಿದ್ದಲ್ಲಿಂದಲೇ ಕೈಯಳತೆಯಲ್ಲಿದ್ದ ಕನ್ನಡಕವನ್ನು ಎಳೆದುಕೊಂಡ, ಹಾಗೆಯೇ ಬಾಗಿ ಮಂಚದ ಕೆಳಗಿದ್ದ ಸೂಟ್ಕೇಸನ್ನು ತೆರೆದು ತನ್ನ ಮನೆ ವ್ಯವಹಾರಕ್ಕೆ ಸಂಬಂಧಿಸಿದ ಕಡತವನ್ನು ಕೈಗೆತ್ತಿಕೊಂಡ, ಅದನ್ನು ಪರಿಶೀಲಿಸುವ ಮುನ್ನ ನನ್ನನ್ನುದ್ದೇಶಿಸಿ "ಎಷ್ಟೊತ್ತೂಂತ ಈ ರೋಗಿಷ್ಟನೆದುರು ಕೂತಿರ್ತೀಯಾ! ಕೊಂಡಾರೆಡ್ಡಿ ಬುರ್ಜ್ ಹತ್ತಿರ ಎನ್‌ಟಿಆರ್ದು ಯಾವುದೋ ಒಂದು ಸಿನೆಮಾ ಶೂಟಿಂಗ್ ನಡೆಯುತ್ತಿರುವುದಂತೆ, ಹೋಗಿ ನೋಡಿಕೊಂಡು ಬಾ, ಒಂದು ಅನುಭವಾನೂ ಆಗುತ್ತೆ, ಟೈಂಪಾಸ್ ಮಾಡಿದಂಗೂ ಆಗುತ್ತೆ" ಎಂದು ಸಲಹೆ ನೀಡಿದ, ಕೊಂಡಾರೆಡ್ಡಿ ಬುರುಜನ್ನು ಅನೇಕ ಸಲ ನೋಡಿರುವ ನನಗದು ಹೊಸದೇನೂ ಆಗಿರಲಿಲ್ಲ. ಇದ್ದಲ್ಲಿಯೇ ಇದ್ದು ನನ್ನಲ್ಲೂ ಬೇಸರ ಕಾಣಿಸಿಕೊಂಡಿತ್ತಲ್ಲವೆ! ಆಗಲಿ ಎಂದು ಬಾಗಿಲ ಬಳಿ ಹೋದವನೆ ಪುನಃ ತನ್ನಲ್ಲಿಗೆ ವಾಪಸ್ಸಾಗಿ ಕಪಾಟಿನಿಂದ ಮಾತ್ರೆಗಳನ್ನು ತೆಗೆದು ಕೊಟ್ಟು ನುಂಗಿಸಿದ್ದೂ ಅಲ್ಲದೆ ಫ್ಲಾಸ್ಕಿನಿಂದ ಸುರಿದು ಕುಡಿಯಲೆಂದು ಕಾಫಿ ಕೊಟ್ಟೆ, ಅರ್ಧತಾಸಿನಲ್ಲಿ ಮರಳುವುದಾಗಿ ಹೇಳಿದವನೆ!

++++

ಮನೆಯಿಂದ ಹೊರಟು ಕಲೆಕ್ಟರ್ ಆಫೀಸ್ ಸಮೀಪಿಸಿದೆ. ಚೌರಸ್ತಾದಲ್ಲಿ ಸೈಕಲ್ ರಿಕ್ಷಾಗಳು ಸಾಲು ಸಾಲಾಗಿ ನಿಂತಿದ್ದವು. ತಮ್ಮ ತಲೆಗಳ ಮೇಲೆ ಮಲಿನ ಟುವೆಲ್ಲುಗಳನ್ನು ಶಿರಸ್ತ್ರಾಣಗಳಂತೆ ಧರಿಸಿದ್ದ ರಿಕ್ಷಾವಾಲಾಗಳು ನನ್ನನ್ನು ಕಂಡವರೆ ನಿಧಿ ದೊರಕಿದವರಂತೆ ಸಂಭ್ರಮಿಸಿ ಎದ್ದು ನಿಂತು ಯಾಟಿಕಿ ಯಾಟಿಕಿ ಎಂದು ಸ್ವಾಗತಿಸಿದರಲ್ಲದೆ ದುಂಬಾಲು ಬಿದ್ದರು. ಅವರ ಪೈಕಿ ಕೆಲವರು ತೆಳ್ಳಗೆ! ಕೆಲವರು ದಪ್ಪಗೆ! ದಾರಿದ್ರ್ಯದ ಹಲವು ನಮೂನೆಗಳಂತೆ! ಅವರಲ್ಲಿ ಒಬ್ಬನು ಅಯ್ಯಾ ರಂಡಿ ಅಯ್ಯಾ ರಂಡಿ ಎನ್ನುತ್ತ ಧಾವಿಸಿದ ತನ್ನ ರಿಕ್ಷದೊಂದಿಗೆ. ಸಿನೇಮಾ ಶೂಟಿಂಗ್ ನಡೆಯುತ್ತಿದ್ದ ಕಾರಣಕ್ಕೆ ಐದು ಕೇಳುವಲ್ಲಿ ಹತ್ತು ಯಾಚಿಸಿದ. ಚೌಕಾಸಿ ಮಾಡದೆ ಏರಿ ಕುಳಿತೆ. ತುಳಿಯಲಾರಂಭಿಸಿದ. ಏದುಸಿರು ಲೆಕ್ಕಿಸದೆ ಎನ್‌ಟಿಆರ್ ಅಭಿನಯಿಸಿರುವ ಸಿನೆಮಾಗಳನ್ನು ಕುರಿತಂತೆ, ಹಲವು ಕೊಲೆಗಳಿಗೆ ಮೂಕ ಸಾಕ್ಷಿಯಾಗಿರುವ ಕೊಂಡಾರೆಡ್ಡಿ ಬುರುಜು ಕುರಿತಂತೆ, ಮುಖ್ಯಮಂತ್ರಿ ವೆಂಗಳರೆಡ್ಡಿ ಕುರಿತಂತೆ, ಇಂದಿರಮ್ಮನ ಆಳ್ವಿಕೆ ಕುರಿತಂತೆ ನಿರರ್ಗಳವಾಗಿ ಮಾತಾಡತೊಡಗಿದ. ನಡುನಡುವೆ ನನ್ನ ಪೂರ್ವಾಪರ ವಿಚಾರಿಸಲಾರಂಭಿಸಿದ.

ಅಪೂರ್ಣಗೊಂಡಿರುವ ಕಾದಂಬರಿಯ ಹಸ್ತಪ್ರತಿ ಕುರಿತಂತೆ ಯೋಚಿಸುತ್ತಿದ್ದ ನನಗೆ ತನ್ನ ಮಾತುಕತೆ ಬಗ್ಗೆ ಆಸಕ್ತಿ ಇರದಿದ್ದರೂ ಸುಮ್ಮನೆ ಹ್ಞೂಗುಟ್ಟುತ್ತಿದ್ದೆ. ಅಕಸ್ಮಾತ್ತೇನಾದರೂ ನಾನೇ ಕಾದಂಬರಿಯನ್ನು ಪೂರ್ಣಗೊಳಿಸುವ ಸಂದರ್ಭ ಒದಗಿದಲ್ಲಿ ಶಶಾಂಕನಿಂದ ತನ್ನ ತಂದೆ ಹರಿಶ್ಚಂದ್ರರೆಡ್ಡಿಯನ್ನು ಕೊಲೆ ಮಾಡಿಸುವುದೋ, ಅಥವಾ ಅವರಿಬ್ಬರನ್ನು ಒಂದುಗೂಡಿಸಿ ದಯಾನಂದ ಪನ್ನಂಗಧರರ ವಿರುದ್ಧ ಎತ್ತಿ ಕಟ್ಟುವುದೋ! ಕೊನೆ ಪುಟದಲ್ಲಿ ಪ್ರಿಯಮಿತ್ರ ಪಾರ್ಥಸಾರಥಿ ಇಂಜಿನಿಯರ್ ರಾಸಾನಿಯನ್ನು ಯಾಕೆ ಕೊಲೆ ಮಾಡಿಸಿರುವನೆಂಬುದೇ ನಿಗೂಢ. ಕೃತಿಕಾರನ ಮನಸ್ಸಿನಲ್ಲಿ ಏನಿತ್ತೆನ್ನುವುದೂ ನಿಗೂಢವೆ! ಕೊಲೆಯಲ್ಲಿ ಶಿಲ್ಪಿ ಪದ್ಮನಾಭಂನ ಕೈವಾಡವಿರುವುದೋ! ಅಥವಾ ಇನ್ಯಾರದಾದರೂ! ಜಲಂಧರನಿಂದ ಚೂರಿಯನ್ನು ಕಾಣಿಕೆ ರೂಪದಲ್ಲಿ ಪಡೆದಿರುವ ಸೂರ್ಯಪ್ರತಾಪರೆಡ್ಡಿ ಪದ್ಮಾವತಿಯ ಅಲೌಕಿಕ ಸೌಂದರ್ಯಕ್ಕೆ ಮಾರು ಹೋಗಿ ತಾನು ಆಕೆಯನ್ನು ಮೋಹಿಸಿದಲ್ಲಿ ಕಾದಂಬರಿಯ ಸ್ವರೂಪ ಯಾವ ತಿರುವು ಪಡೆದುಕೊಳ್ಳಬಹುದು! ತನ್ನ ಕಾದಂಬರಿಯಲ್ಲಿ ಹತ್ತು ಹಲವು ಪ್ರಶ್ನೆಗಳನ್ನು ಸಂದೇಹಗಳನ್ನು ಸೃಷ್ಟಿಸಿರುವ ಪಾರ್ಥನ ಸಂಗಡ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕು. ಅದಕ್ಕೆ ಕಾದಂಬರಿಕಾರ ಆರೋಗ್ಯದಿಂದಿದ್ದು ತನ್ನ ಪಂಚೇಂದ್ರಿಯಗಳು ಪ್ರಶ್ನೆಗಳಿಗೆ ಸಂದೇಹಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವುದು ಮುಖ್ಯ. ಅದೆಲ್ಲಕ್ಕಿಂತ ಮುಖ್ಯವಾಗಿ ತನ್ನ ಕಾದಂಬರಿಯ ಭ್ರೂಣವನ್ನು ಧರಿಸಿ ಪೊರೆಯುವ ಕಾರ್ಯಕ್ಷಮತೆ ನನ್ನ ಸೃಜನಶೀಲ ಗರ್ಭಕ್ಕಿರುವುದೋ ಇಲ್ಲವೋ! ನನ್ನಿಂದ ನಿನ್ನ ಕಾದಂಬರಿಯನ್ನು ಪೂರ್ಣಗೊಳಿಸುವುದು ಸಾಧ್ಯವಿಲ್ಲವೆಂದು ಖಡಾಖಂಡಿತವಾಗಿ ನಿರಾಕರಿಸಿದಲ್ಲಿ! ಅದು ಆತನ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದಲ್ಲಿ! ಅಥವಾ ಬರೆದು ಮುಗಿಸಿದಲ್ಲಿ! ಕೃತಿಯ ಸ್ವಾಮ್ಯ ನನ್ನದೋ! ತನ್ನದೋ! ಕುಂತಿಯ ಗರ್ಭವನ್ನು ಬಾಡಿಗೆ ಪಡೆದ ಅಷ್ಟದಿಕ್ಪಾಲಕರನ್ನು ನೆನಪು ಮಾಡಿಕೊಳ್ಳುವಷ್ಟರಲ್ಲಿ ರಿಕ್ಷಾ ಕೊಂಡಾರೆಡ್ಡಿ ಬುರುಜನ್ನು ಸಮೀಪಿಸಿತ್ತು. ಬುರುಜಿನ ತುಟ್ಟ ತುದಿಯಲ್ಲಿ ಸಿನೆಮಾಟೋಗ್ರಾಫಿ ಕೆಮೆರಾದೊಂದಿಗೆ ಹಲವರಿದ್ದರು. ಯಾರೋ ಒಬ್ಬ ತನ್ನ ತುಟಿಗಳಿಗೆ ಹತ್ತಿರದಲ್ಲಿ ಧ್ವನಿವರ್ಧಕವನ್ನಿರಿಸಿಕೊಂಡು ಏನನ್ನೋ ಕೂಗಿ ಹೇಳುತ್ತಿರುವುದು ಗೋಚರಿಸಿತು. ಬೊಬ್ಬಿಲಿ ಪುಲಿ ಎಂದು ಹರ್ಷೋದ್ಗಾರ ಮಾಡುತ್ತಿದ್ದ ಅಭಿಮಾನಿಗಳನ್ನು ಚೆದುರಿಸಲೆಂದು ಪೋಲಿಸರು

ಲಾಠಿ ಚಾರ್ಜು ನಡೆಸಿದ್ದರು. ಆ ಗುಂಪಲ್ಲೆಲ್ಲೋ ನಿರ್ದೇಶಕ ಕೋಡಿ ರಾಮಕೃಷ್ಣ, ನಾಯಕ ನಟ ರಾಮರಾವ್ ಇದ್ದಿರಲೂಬಹುದು! ಅಭಿಮಾನಿಗಳ ಪೈಕಿ ಕೆಲವರು ಚಲನೆಯಲ್ಲಿದ್ದ ರಿಕ್ಷಾ ಸಮೀಪಿಸಿ ಅರಳುಗಣ್ಣುಗಳಿಂದ ಪರಿಶೀಲಿಸಿ ನಿರಾಶರಾಗಿ ವೀಡೆಕ್ಕಡ ವಾಡೆಕ್ಕಡ ಎಂದೋ, ವೀಡು ವಾಡು ಕಾದು, ವಾಡು ವೀಡು ಕಾದು ಎಂದೋ ನಿರಾಸೆಯಿಂದ ಮರಳಿದರು. ಮೀರೇಮ್ಮೈನಾ ಸಿನೆಮಾಲೋ.. ಎಂಬ ಸಂದೇಹ ವ್ಯಕ್ತಪಡಿಸಲಿದ್ದ ರಿಕ್ಷಾವಾಲಾ ಎಂಕನ್ನನಿಗೆ ವಾಪಸ್ಸು ತುಳಿ ಎಂದು ಆಜ್ಞಾಪಿಸಿದೆ, ಅದಕ್ಕೆ ತಾನು ನನ್ನ ಕಡೆ ದುರುಗುಟ್ಟಿದ, ತನ್ನ ಚೈತನ್ಯ ರಥವನ್ನು ದಿಢೀರನೆ ನಿಲ್ಲಿಸಿ ದಿಗಂಡಿ ಅಯ್ಯಾ ದಿಗಂಡಿ ಎಂದು ಹೇಳಿದ, ಬಾಡಿಗೆಗಿಂತ, ದಟ್ಟ ದರಿದ್ರ ಬದುಕಿಗಿಂತ ಎನ್‌ಟಿಆರ್ ದರುಶನ ಭಾಗ್ಯವೇ ಮುಖ್ಯವೆಂದು ಪರಿಭಾವಿಸಿದ, ಅಂತೂ ನನ್ನನ್ನು ರಿಕ್ಷಾದಿಂದ ಇಳಿಸುವಲ್ಲಿ ಸಫಲನಾದ. ಬೇರೆ ದಾರಿ ಇಲ್ಲದೆ ಇಳಿದಾದ ಬಳಿಕ ಪರ್ಸಿನಿಂದ ಹತ್ತರ ನೋಟು ತೆಗೆದು ತನ್ನತ್ತ ಚಾಚಿದೆ.

ಸೂಜಿಗಲ್ಲಿನಂತೆ ಆಕರ್ಷಿಸತೊಡಗಿದ ಬರುಜಿನ ಕರೆಯನ್ನು ಲೆಕ್ಕಿಸುವುದು ದುಸ್ಸಾಧ್ಯವೆನಿಸಿತು. ಆದರೂ ಆ ಐತಿಹಾಸಿಕ ಸ್ಮಾರಕಕ್ಕೆ ಬೆನ್ನು ಮಾಡಿ ಒಂದೆರಡು ಫರ್ಲಾಂಗು ಹೆಜ್ಜೆ ಹಾಕಲಾರಂಭಿಸಿದೆ. ಕೆಂಡದಂಥ ಬಿಸಿಲು ಕಾಲ್ಗೋಳ ತೊಡಿಸಲಾರಂಭಿಸಿತು. ಹಿಂಬಾಲಿಸಿ ಬಂದ ರಿಕ್ಷಾ ಏರಿ ಕಲೆಕ್ಟರ್ ಕಛೇರಿ ಕಡೆ ತುಳಿಯುವಂತೆ ಸೂಚಿಸಿದೆ. ಸುತ್ತಿ ಬಳಸಿ ತಲುಪಿದ ಧನ್ವಂತರಿ ಚಿಕಿತ್ಸಾಲಯದಿಂದ ಅದೇ ತಾನೆ ಹೊರ ಬಂದ ಯೇಸುದಾಸ್ ಹೀಗ್ಹೀಗೆಂದು ತಿಳಿಸಿದ. ನಾನು ಸಮೀಪಿಸುವಷ್ಟರಲ್ಲಿ ಹಳೆಯ ಅಂಬ್ಯಾಸಾಡರ್ ಕಾರು ಅಂಗಳದಲ್ಲಿ ನಿಂತಿತ್ತು. ಸಮವಸ್ತ್ರ ಧರಿಸಿರದಿದ್ದ ಕಪ್ಪು ಮೈಕಾಂತಿಯ ವ್ಯಕ್ತಿಯೋರ್ವ ಚಾಲಕನನ್ನೇ ಹೋಲುತ್ತಿದ್ದ. ಆತ ಅದೇ ತಾನೆ ಕೊನೆಯ ಧಮ್ಮೆಳೆದು ಸಿಗರೇಟಿನ ತುಂಡನ್ನು ಎಲ್ಲಿ ಎಸೆಯುವುದೆಂದು ಯೋಚಿಸಿದಾದ ಬಳಿಕ ದುರ್ಬಲ ಪ್ರಹರಿ ಗೋಡೆಯ ಬುಡದಲ್ಲಿರಿಸಿ ಅಂಗಾಲಿನಿಂದ ಹೊಸಕಿ ಮೆಲ್ಲಗೆ ತಲೆ ಎತ್ತಿ ನನ್ನ ಕಡೆ ದೃಷ್ಟಿ ಹಾಯಿಸುತ್ತ ಸಮೀಪಿಸಿದ. ನನ್ನನ್ನು ತನ್ನ ಕಡುವೈರಿ ಎಂದು ಭಾವಿಸಿ ನೋಡಿದಾದ ಬಳಿಕ ಹೀಗ್ಹೀಗಂತ ಹೇಳಿದ. ಬಾಗಿಲನ್ನು ಸಮೀಪಿಸಿದೆ. ತಮ್ಮ ಕಾಲೇಜಿನ ಸಮವಸ್ತ್ರಗಳಿಂದಾಗಿ ಅಭಾ ವಿಭಾರನ್ನು ಹೋಲುತ್ತಿದ್ದ ಅರಣಾ, ಶ್ರೀಲತಾರ ಆಸರೆಯಲ್ಲಿ ತ್ರಾಸುಪಟ್ಟು ಹೆಜ್ಜೆ ಹಾಕುತ್ತ ಬಾಗಿಲನ್ನು ದಾಟಿದ ಪಾರ್ಥಸಾರಥಿ ಮಾತ್ರ ಗಾಂಧೀಜಿಯವರನ್ನು ಹೋಲುತ್ತಿರಲಿಲ್ಲ. ಅವರ ಹಿಂದಿದ್ದು ಮಾರ್ಗದರ್ಶನ ಮಾಡುತ್ತಿದ್ದ ಡಾ. ಸುಧನ್ವ ನನ್ನ ಬಳಿಗೆ ಬಂದವರೆ ಬೆಂಗಳೂರಿನಿಂದ ಪ್ರಸಿದ್ಧ ನ್ಯೂರೋಲಾಜಿಸ್ಟ್ ಡಾಕ್ಟರ್ ಚೌಗಲೆ ಮತ್ತು ಹೈದರಾಬಾದಿನಿಂದ ಪ್ರಸಿದ್ಧ ನೆಫ್ರಾಲಾಜಿಸ್ಟ್ ಡಾಕ್ಟರ್ ಚಕ್ರವರ್ತಿ ತಮ್ಮ ಹತ್ತಿರದ ಸಂಬಂಧಿ ಡಾಕ್ಟರ್ ಕೈಲಾಸಂರವರ ಕಾಮಿನೇನಿ ನರ್ಸಿಂಗ್ ಹೋಂಗೆ ಬಂದಿರುವುದಾಗಿ ಹೇಳಿದೊಡನೆ ನನಗೆ ಆಶ್ಚರ್ಯವಾಯಿತು. ಆ ಹೆಸರುಗಳನ್ನು ನಾನು ಓದಿರುವುದು ಪಾರ್ಥ ವಿರಚಿತ ಹೇಮರೆಡ್ಡಿ ಮಲ್ಲಮ್ಮನ ಕಥೆ ಎಂಬ ಹೆಸರಿನ ಕಾದಂಬರಿಯಲ್ಲಿ! ಕಥಾನಕದಲ್ಲಿ ಅವರು ಆಶ್ರಯ ಪಡೆದಿರುವುದೇ ಬೇರೆ, ಅವರು ವಾಸ್ತವವಾಗಿ ಕಾಣಿಸಿಕೊಳ್ಳುತ್ತಿರುವುದೇ ಬೇರೆ!

ನನ್ನ ಆಶ್ಚರ್ಯವನ್ನು ಗಮನಿಸದೆ ಸುಧನ್ವ "ಅಪಾಯಿಂಟ್‌ಮೆಂಟ್ ಕೊಟ್ಟಿರುವ ಅವರು ನರ್ಸಿಂಗ್ ಹೋಂನಲ್ಲಿ ಕಾಯ್ತಿದ್ದಾರೆ, ಸಾಮಾನ್ಯವಾಗಿ ವಿದೇಶ ಪ್ರವಾಸದಲ್ಲಿರುವ ಅವರು ಕರ್ನೂಲಿನಂಥ ಪಟ್ಟಣಕ್ಕೆ ಆಗಮಿಸಿರುವುದು ಅಪರೂಪ, ಅವರಿಂದ ನೋಡಿಸಿಕೊಳ್ಳುತ್ತಿರುವ ನಮ್ಮ ಪಾರ್ಥನ ಅದೃಷ್ಟ ಚೆನ್ನಾಗಿದೆ. ನಿಮಗೇನಾದರೂ ಹೆಲ್ತ್ ಪ್ರಾಬ್ಲೆಂ ಇದ್ದಲ್ಲಿ ತೋರಿಸಿಕೊಳ್ಳಬಹುದು! ಕಾರಣ ಅವರು ಪ್ರೊಫೆಸರರಾಗಿದ್ದ ನಿಜಾಂ ಮೆಡಿಕಲ್ ಕಾಲೇಜಿನಲ್ಲೇ

ನಾನು ಓದಿದ್ದು, ಅವರ ಗೈಡೆನ್ಸಿನಲ್ಲಿಯೇ ಹೌಸ್ ಸರ್ಜನ್ ಆಗಿದ್ದೆ, ನೀವೂ ಬನ್ನಿ ಜೊತೆಯಲ್ಲಿ" ಎಂದು ಹೇಳುತ್ತಲೇ ಪಾರ್ಥನನ್ನು ಏಚ್ಚರದಿಂದ ಕಾರಿನ ಹಿಂಬದಿಯ ಸೀಟಿನಲ್ಲಿ ಕುಳ್ಳಿರಿಸಿದರು. ರೋಗಿ ಎಡ್ಡ ಮಗ್ಗುಲು ನಾನೂ, ಬಲಮಗ್ಗುಲು ಸುಧನ್ವ ಕುಳಿತೆವು. ಬರುವ ಹುಮ್ಮಸ್ಸಿನಲ್ಲಿದ್ದ ಆ ಹುಡುಗಿಯರು ತಮ್ಮ ತಮ್ಮ ಬೆರಳನ್ನು ತಮ್ಮ ತಮ್ಮ ಬಾಯೊಳಗಿರಿಸಿಕೊಂಡು ಉಗುರು ಕಡಿಯುಲಾರಂಭಿಸುತ್ತಿದ್ದಂತೆ ಕಾರು ಹಿಂದಕ್ಕೆ ಚಲಿಸಿ ತಿರುವು ಪಡೆದುಕೊಂಡಿತು. ದಡಕಿಗೆ ಕಣ್ಣು ಪಿಳುಚ್ಚಿದರೆಲ್ಲಿ ಚಾಲಕ ಯಮಧೂತನಂತೆ ಭಾಸವಾಗುವನೋ ಎಂಬ ಆತಂಕದಿಂದ ನಾನು ಏಚ್ಚರದಿಂದಿದ್ದೆ. ಆಗಮಿಸಿರುವ ವೈದ್ಯರು ತನಗೂ ಅಪರಿಚಿತರು ಎಂದು ಪಾರ್ಥ ಹೇಳುವ ಸನ್ನಾಹ ಪಡಗರದಲ್ಲಿರುವಾಗಲೇ ಕಾರು ರಿಂಗ್ ರೋಡನ್ನು ದಾಟಿ ಕರ್ನೂಲಿನ ಹೊರವಲ್ಲಯನ್ನು ಪ್ರವೇಶಿಸಿತು. ರೋಗಿಯ ಕಣ್ಣುಗಳ ನಿಸ್ತೇಜತೆಯನ್ನು ಗುರುತಿಸುವ ಪ್ರಯತ್ನದಲ್ಲಿದ್ದ ನಾನು ಕಿಟಿಕಿ ಮೂಲಕ ಹೊರಗೆ ದೃಷ್ಟಿ ಹಾಯಿಸಿದೆ. ನನ್ನ ಕಲ್ಪನೆಯ ಕರ್ನೂಲೇ ಬೇರೆ, ವಾಸ್ತವತೆ ಕರ್ನೂಲೇ ಬೇರೆ! ಹಲವು ಮಹಡಿಯ ಕಟ್ಟಡಗಳೋ! ಅವುಗಳನ್ನು ಆಧುನಿಕವಾಗಿ ವಿನ್ಯಾಸಗೊಳಿಸಿರುವ ರೀತಿಯೋ! ಅಲ್ಲಲ್ಲಿರುವ ಉದ್ಯಾನಗಳೋ! ಸುಧನ್ವ ದೂರದಲ್ಲಿ ವಿಶಾಲವಾಗಿ ಹಬ್ಬಿದ್ದ ಬಯಲ ಕಡೆ ನನ್ನ ಗಮನ ಸೆಳೆದರು. ಆ ಹದಿನೆಂಟೆಕರೆ ವಿಸ್ತೀರ್ಣ ಪ್ರದೇಶದ ಮಾಲಕ ತಮ್ಮ ಪಾರ್ಥ ಎಂದು ವಿಷಾದದಿಂದ ಹೇಳಿದರು. ಅದಕ್ಕೆ ಪಾರ್ಥ ಒಕ್ಕಪ್ಪುಡು ಎಂದು ಗೊಣಗಿದ. ಡಾಕ್ಟರ್ ಮತ್ತು ಪಾರ್ಥರ ನಡುವೆ ಊಟಿಲಿಗೆ ಸಂಬಂಧಿಸಿದಂತೆ ಚರ್ಚೆ ಆರಂಭವಾಗಿದ್ದಾಗಲೀ, ಮುಕ್ತಾಯವಾಗಿದ್ದಾಗಲೀ ತಡವಾಗಲಿಲ್ಲ. "ಸುಧನ್ವಗಾರು ಮೀರೆಕ್ಕಡ ಸೈನ್ ಚೇಯಂಟೆ ನೂಡಕುಂಡಾ ಅಕ್ಕಡ ಚೇಸ್ತಾನು, ಅಂತೆ" ಎಂದು ಪಾರ್ಥ ಹೇಳುವಷ್ಟರಲ್ಲಿ ಕಾರು ಮೂರು ಮಹಡಿ ಎತ್ತರದ ಹಾಗೂ ಬಹುವಿಸ್ತೀರ್ಣದ ಆಕರ್ಷಕ ಕಟ್ಟಡದ ಪೋರ್ಟಿಕೋದಲ್ಲಿ ಅದೇ ತಾನೇ ನಿಂತಿತು. ಕಾರಿನಿಂದ ಪಾರ್ಥನನ್ನು ಇಳಿಸಿಕೊಳ್ಳುವುದಕ್ಕೂ, ಬಿಳಿವರ್ಣದ ಸಮವಸ್ತ್ರಧಾರಿಗಳು ಒಳಗಿನಿಂದ ಬಂದು ಆಸರೆಯಾಗುವುದಕ್ಕೂ ಸರಿ ಹೋಯಿತು. ಆತ ತನ್ನೆರಡೂ ಕೈಗಳನ್ನು ಅವರ ಹೆಗಲುಗಳ ಮೇಲೆ ಹಾಕಿದನೋ! ಅವರೇ ತಮ್ಮೆರಡು ಕೈಗಳನ್ನು ಆತನ ಹೆಗಲ ಮೇಲೆ ಹಾಕಿದರೋ! ಇನ್ನೊಂದು ಕಡೆಯಿಂದ ಕಾಂಪೌಂಡರ್ ಯೇಸುದಾಸು ಬಂದು ಸುಧನ್ವರ ಪಕ್ಕದಲ್ಲಿ ಆಜ್ಞಾನುವರ್ತಿಯಾಗಿ ನಿಂತುಕೊಂಡ. ಆದರೆ ಸುಧನ್ವ ಆತನನ್ನು ಅಲಕ್ಷಿಸಿ ರೋಗಿಯ ಹಿಂದೆ ನಡೆದರು. ಅವರೆಲ್ಲ ಪಡೆದೂ ನಡೆದು ನೇರವಾಗಿ ಬಳಿಕ ಎಡಕ್ಕೆ ತಿರುಗಿ ಕಾಣೆಯಾದರು. ಅಂತಿಮವಾಗಿ ಉಳಿದು ಪಾವಿಬ್ಬರೂ ಪರಸ್ಪರ ಮುಖಗಳನ್ನು ನೋಡಿಕೊಂಡೆವು. ತಕ್ಷಣ ನಾನು ಹೊಳೆಯದೆ ಹಿಟ್ಟುಸಿರು ಬಿಟ್ಟೆವು. ಡೆಟ್ಟಾಲ್ ಫಿನಾಯಿಲ್‌ಗಳಂಥ ಕ್ರಿಮಿನಾಶಕಗಳ ವಾಸನೆಯಿಂದ ಕಲ್ಮಷಿತಗೊಂಡಿರದಿದ್ದ ಪರಿಮಳವನ್ನು ಆಘ್ರಾಣಿಸಿದೆವು. ನೋಡುತ್ತೇವೆ ಅಲ್ಲಲ್ಲಿ... ಇಲಾಜಿಗೆಂದು ಸಹವರ್ತಿಗಳ ಆಸರೆಯಲ್ಲಿ ಬಂದಿಳಿಯುತ್ತಿದ್ದ ತರಾವರಿ ರೋಗಿಗಳು! ಇಲಾಜು ಮಾಡಿಸಿಕೊಂಡೆವೆಂದು ಅಪಾರ್ಥ ಮಾಡಿಕೊಂಡು ಹೊರಡುತ್ತಿದ್ದ ರೋಗಿಗಳು! ಹಮ್ಮಿರದಿಗಾಗಿ ಹತಾಶೆ ಆತಂಕದಿಂದ ಕಾಯುತ್ತಿದ್ದ ರೋಗಿಗಳು! ಅವರಿವರೊಂದೇ ಅಲ್ಲದೆ ವಿದ್ಯಾರ್ಥಿ ದೆಸೆಯಲ್ಲಿದ್ದ ತರುಣ ವೈದ್ಯರುಗಳು, ಹಂಸಗಳನ್ನು ಹೋಲುತ್ತಿದ್ದ ಶುಶ್ರೂಷಿಕೆಯರು ಶಿಸ್ತಾ ಅಮಲಬಿಕೆಯಿಂದ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ನಡೆದಾಡುತ್ತಿದ್ದರು. ಅವಿವುಗಳೊಂದೇ

ಅಲ್ಲದೆ ಹೆಪ್ಪುಗಟ್ಟಿದ್ದ ಕ್ರಂದ ಆಕ್ರಂದನಗಳು ಬೇರೆ! ನೋಡು ನೋಡುತ್ತಿದ್ದಂತೆ ನನ್ನ ಮನಸ್ಸು ಕುಬ್ಜಗೊಳ್ಳಲಾರಂಭಿಸಿತು. ನಿಂತ ಸಪಾಟ ನೆಲದ ಮೇಲೆ ಅಗೋಚರ ರೀತಿಯಲ್ಲಿ ತರಾವರಿ ಮುಳ್ಳುಗಳಿರುವಂತೆ ಭಾಸವಾಗಲಾರಂಭಿಸಿತು. ವೈದ್ಯರಾಗುವ ಹುಮ್ಮಸ್ಸಿನಲ್ಲಿದ್ದ ಯೇಸು ರೋಗಿಗಳ ಮ್ಲಾನವದನಗಳ ಮೇಲಿನ ವಿಧಿಲಿಖಿತವನ್ನು ನಿರರ್ಗಳವಾಗಿ ಓದಲಾರಂಭಿಸಿದ್ದ, ಅವರಿಗಿರುವುದು ಆ ರೋಗ, ಇವರಿಗಿರುವುದು ಈ ರೋಗವೆಂದು ವ್ಯಾಧಿಗಳ ದುರಂತ ಕಾವ್ಯ ಪಾರಾಯಣ ಮಾಡಲಾರಂಭಿಸಿದ್ದ, ಹಲವರ ಪೈಕಿ ಕೆಲವರನ್ನು ತಡೆದು ನಿಲ್ಲಿಸಿ ಕ್ಷೇಮಲಾಭ ವಿಚಾರಿಸುತ್ತಿದ್ದುದೂ ಅಲ್ಲದೆ ಸಲಹೆ ಸೂಚನೆಗಳನ್ನು ನೀಡಲಾರಂಭಿಸಿದ್ದ. ವ್ಯಾಧಿಗಳ ಪ್ರತಿನಿಧಿಯಂತೆ, ರಾಯಭಾರಿಯಂತೆ, ತಾನೇ ಅವುಗಳನ್ನು ಸಂಕ್ರಾಮಿಕಗೊಳಿಸುತ್ತಿರವಂತೆ ವರ್ತಿಸುತ್ತಿದ್ದುದಂತೂ ಭಯಾನಕವೆನ್ನಿಸಿತು. ಹೆಜ್ಜೆಗಳಲ್ಲಿ ಹೆಜ್ಜೆ ಇರಿಸುತ್ತ ನೆರಳಲ್ಲಿ ನೆರಳಾಗಿ ಹಿಂಬಾಲಿಸುತ್ತಿದ್ದ ತನ್ನಿಂದ ಬಿಡುಗಡೆಗೊಳ್ಳುವ ಸಲುವಾಗಿ ಅನುದ್ದೇಶಪೂರ್ವಕವಾಗಿ ತಿರುಗಾಡತೊಡಗಿದೆನಾದರೂ ಪ್ರಯೋಜನವಾಗಲಿಲ್ಲ. ಅಷ್ಟೊತ್ತಿಗಾಗಲೇ ನಾವಿಬ್ಬರೂ ಪ್ಯಾಥ್ಯಾಲಾಜಿ ಸೆಂಟರಿನೆದುರು ನಿಂತಿದ್ದೆವು, ಅದೂ ಅಕಸ್ಮಿಕವಾಗಿ.

ಅದು ತನ್ನ ಪಾರದರ್ಶಕ ಗೋಡೆಯ ಮೇಲೆ ರೋಗಿಗಳ ಯಾದಿಯ ಹಾಗೂ ಅವುಗಳ ತಪಾಸಣೆಗೆ ತಗುಲುವ ವೆಚ್ಚದ ಶುಲ್ಕದ ಪಟ್ಟಿಯನ್ನು ಮುಡಿದಿತ್ತು, ಅದೂ ಸುಂದರ ಹಾಗೂ ವೈವಿದ್ಯಮಯ ಅಕ್ಷರಗಳಲ್ಲಿ! ಶಿಕ್ಷಕನಾಗಿ ಅವುಗಳಲ್ಲಿನ ತಪ್ಪುಗಳನ್ನು ಪತ್ತೆ ಹಚ್ಚಲು ಪ್ರಯತ್ನಿಸಿದೆನಾದರೂ ಸಾಧ್ಯವಾಗಲಿಲ್ಲ. ಅದರ ಬಾಗಿಲಿಗೆ ಅಡ್ಡವಾಗಿದ್ದ ಸ್ಕ್ರೀನ್ ಕವಾಟ ತೆರೆಯುವುದು ಮುಚ್ಚುವುದು ನಡೆಸಿತ್ತು, ರೋಗಗಳ ಅಚ್ಚ ಬಿಳಿವರ್ಣದ ಮಹಿಳಾ ಕಾರ್ಮಿಕರು ಒಳ ಹೋಗುವುದಾಗಲೀ, ಹೊರ ಬರುವುದಾಗಲೀ ತಡ ಹಿಡಿಯುತ್ತಿರಲಿಲ್ಲ. ತಮ್ಮದೇ ಆದ ವೈದ್ಯಕೀಯ ಪರಿಭಾಷೆಯಲ್ಲಿ ಅವರು ಮಾತಾಡುತ್ತಿದ್ದುದು ಎಷ್ಟೋ ಹೊತ್ತಿನ ಬಳಿಕ ಅರ್ಥವಾಗುತ್ತಿದ್ದ ಪರಿಣಾಮವಾಗಿ ಆತಂಕಕ್ಕೊಳಗಾಗಲಾರಂಭಿಸಿದೆ, ನನ್ನ ಆತಂಕದ ಮುಖವನ್ನೂ, ಹಣೆ ಮೇಲೆ ಕಾಣಿಸಿಕೊಂಡಿದ್ದ ಬೆವರನ್ನೂ ಸಂವೇದನಾ ಚಾಣಾಕ್ಷತನದಿಂದ ಗ್ರಹಿಸಿದ ಯೇಸು ನನ್ನ ವಯೋಮಾನ ಸೇರಿದಂತೆ ಹವ್ಯಾಸ ಅಭ್ಯಾಸಗಳನ್ನು ಕೇಳಿ ತಿಳಿದುಕೊಂಡ. ಶುಗರ್ರೂ ಬೀಪಿಯಂಥ ಮಾರಣಾಂತಿಕ ಖಾಯಿಲೆಗಳು ಮುವ್ವತ್ತರ ಒಳಗೂ ಕಾಣಿಸಿಕೊಳ್ಳಬಹುದೆಂದು ಹೇಳುವುದರ ಮೂಲಕ ನನ್ನನ್ನು ರೋಗಿಯನ್ನಾಗಿ ಪರಿವರ್ತಿಸುವ ಯತ್ನ ಪ್ರಯತ್ನಗಳನ್ನು ಆರಂಭಿಸಿದ, ಅದೂ ಸಾಲದೆನ್ನುವಂತೆ ಪರಿಣಿತ ನಾಡಿತಜ್ಞನಂತೆ ನನ್ನ ಶಕ್ತಿಯುತ ಮುಂಗೈಯನ್ನು ತನ್ನ ದುರ್ಬಲ ಹಸ್ತದಿಂದ ಹಿಡಿದು ಶಕ್ತಿಯನ್ನು ಆವಹಿಸಿಕೊಳ್ಳಲಾರಂಭಿಸಿದ. ಹಿಡಿತದ ಬಿಗಿ ಹೆಚ್ಚುತ್ತಲೇ ಹೋಯಿತು. ನನ್ನ ಪುಣ್ಯಕ್ಕೆ ಅಂತೂ ಸಡಿಲಿಸಿದ. ಕಥೆ ಕಾದಂಬರಿ ಬರೆಯದಿದ್ದಲ್ಲಿ ಪಾರ್ಥಸಾರಥಿ ಎಲ್ಲರ ಹಾಗೆ ಸುಖ ಮತ್ತು ಆರೋಗ್ಯದಿಂದ ಇರುತ್ತಿದ್ದರೆಂದು ಹೇಳಿದ, ಸಾಹಿತ್ಯಾಭಿರುಚಿ ಭೂತದಯೆ ಇರದಿದ್ದಲ್ಲಿ ತಮ್ಮ ಡಾಕ್ಟರ್ ಸುಧನ್ವರ ಬದುಕು ಐಶಾರಾಮಿಯಾಗಿರುತ್ತಿತ್ತೆಂದು ಹೇಳಿದ. ವ್ಯಾಧಿಗಳಿಗೂ, ಸಾಹಿತ್ಯಕ್ಕೂ ನಿಗೂಢ ಸಂಬಂಧವಿರುವುದಾಗಿಯೂ ಹೇಳಿದ. ಅದೃಷ್ಟವಶಾತ್ ತಾನೇನಾದರೂ ಸದರಿ ದೇಶದ ಪ್ರಧಾನಿಯೋ, ಸಾರ್ವಜನಿಕ ಆರೋಗ್ಯ ಸಚಿವನೋ ಆದಲ್ಲಿ ಮಾಡುವ ಮೊಟ್ಟಮೊದಲ ಕಾರ್ಯವೆಂದರೆ ಸಾಹಿತ್ಯ ಕೃತಿಗಳನ್ನು ಸಮುದ್ರಪಾಲು ಮಾಡುವುದು, ಸಾಹಿತ್ಯ ರಚನೆಯನ್ನು ನಿಷೇಧಿಸುವುದು, ಸಾಹಿತಿಗಳನ್ನು ದೇಶದಿಂದ ಗಡಿಪಾರು ಮಾಡುವುದು ಎಂದು ಮುಂತಾಗಿ ಹೇಳಿದ್ದಕ್ಕೆ ತಮಾಷೆಯ ಪ್ರಮಾಣ ಪತ್ರ ನೀಡಿದ.

ಆಲಿಸುತ್ತಿದ್ದ ನನ್ನ ತಲೆ ಕೆಡಲಾರಂಭಿಸಿತು. ಬಾಯಿ ಮುಚ್ಚದಿದ್ದಲ್ಲಿ ಎರಡು ಬಿಗಿಯುವೆ ಎಂದು ಹೇಳಬೇಕೆನ್ನಿಸಿತು. ಮೌನದಿಂದಿರುವಿಯಾದರೆ ಪಾದಾಭಿವಂದನೆ ಸಲ್ಲಿಸುವೆ ಮಹರಾಯ ಎಂದು ಕೈಮುಗಿದು ಅಂಗಲಾಚಬೇಕೆನ್ನಿಸಿತು. ಆದರೂ ನನ್ನೊಳಗಿನ ಅಂತಃಸ್ಸಾಕ್ಷಿಗೆ ಅವನ ಮಾತುಗಳನ್ನು ನಿರಾಕರಿಸಲು ಧೈರ್ಯ ಸಾಲಲಿಲ್ಲ. ತಾನು ಪರಿಚಯಿಸುತ್ತಿರುವುದು ಸತ್ಯದ ಇನ್ನೊಂದು ಮುಖವನ್ನು! ತಾನು ಅನಾವರಣಗೊಳಿಸುತ್ತಿರುವುದು ವಾಸ್ತವದ ಇನ್ನೊಂದು ಸತ್ಯವನ್ನು! ತನ್ನಂಥ ಪುತ್ರನನ್ನು ಹೆತ್ತು ಹೆಮ್ಮೆಯಿಂದ ಬೀಗುತ್ತಿರುವ ಮೇರಿಯಮ್ಮಳ ಆರಡಿ ನಿಲುವನ್ನು ಸಾಕ್ಷಾತ್ಕರಿಸಿಕೊಂಡೆ. ಉಂಡು ಉಪವಾಸಿಯಂತಿರುವ ಪಾರ್ಥನೂ, ಬಳಸಿ ಬ್ರಹ್ಮಚಾರಿಯಂತಿರುವ ಡಾ. ಸುಧನ್ವರೂ ನನ್ನ ಮನಸ್ಸಿನಂಗಳದಲ್ಲಿ ಮುಗಿಲೆತ್ತರಕ್ಕೆ ಬೆಳೆದು ನಿಂತರು. ಅವರನ್ನಲ್ಲಿಂದ ನಿವಾರಿಸಬೇಕೆನ್ನುವಷ್ಟರಲ್ಲಿ ಎಲ್ಲಿಂದಲೋ ನರ್ಸೋರ್ವಳು ಆಗಮಿಸಿದಳು. ತನ್ನ ಕೈಯಲ್ಲಿ ಶಸ್ತ್ರಚಿಕಿತ್ಸೆಯ ಸಲಕರಣೆಗಳಿದ್ದ ತಟ್ಟೆಯನ್ನು ತನ್ನೆರಡೂ ಕೈಗಳಿಂದ ಹಿಡಿದುಕೊಂಡಿದ್ದಳು. ನೋಡಿದೊಡನೆ ಯೇಸು ಮೀರೇಮಿಕ್ಕಡ ಎಂದು ಉದ್ಗರಿಸಿದಳು. ಆಕೆಯ ಸುಂದರ ಕಣ್ಣುಗಳು ತನ್ನ ಮೇಲೆ ಹರಿದಾಡಲಾರಂಭಿಸಿದೊಡನೆ ಯೇಸು ಪುಳಕಗೊಂಡ. ಕ್ರಿಸ್‌ಮಸ್ ಕಳೆದ ಬಳಿಕ ಸೇಂಟ್ ಥಾಮಸ್ ಚರ್ಚಿನಲ್ಲಿ ವಿವಾಹವಾಗಲಿರುವ ಹುಡುಗಿ ಪೌಲಿನ್ ಎಂದು ನನಗೆ ಪರಿಚಯಿಸಿದ. ಅವನೊಂದಿಗೆ ಮಾತಾಡುತ್ತಿದ್ದುದರ ನಡುವೆ ಇದ್ದಕ್ಕಿದ್ದಂತೆ ಬಿಡುವು ಪಡೆದವಳೆ ನನ್ನತ್ತ ತಿರುಗಿ ಬ್ಲಡ್ ಚೆಕ್ಕಪ್ಪಿಗೆ ಬೆಳೆಗ್ಗೆ ಬಂದರೆ ಒಳ್ಳೆಯದೆಂದು ಸಲಹೆ ನೀಡಿದಳು. ನನ್ನ ಅನುಮತಿಗೆ ಕಾಯದೆ ಯೇಸು ರ‍್ಯಾಂಡಮ್ ಟೆಸ್ಟ್ ಮಾಡಿಸಿಕೊಳ್ಳಲು ಬೆಳೆಗ್ಗೆ ಏನು, ರಾತ್ರಿ ಏನು ಎಂದು ಹೇಳಿದ. ಅದೂ ಸರಿ ಎನ್ನಿಸಿತು ಆಕೆಗೆ. ತನ್ನ ಹಿಂದೆಯೇ ಬರುವಂತೆ ಸೂಚಿಸಿದವಳೆ ಒಳ ನಡೆದಳೋ ಇಲ್ಲವೋ ಸ್ಕ್ರೀನ್ ಬಾಗಿಲು ಇದ್ದಕ್ಕಿದ್ದಂತೆ ತೆರೆದು ಮುಚ್ಚಿಕೊಂಡಿತು. ತನ್ನ ಭಾವೀ ಪತ್ನಿಯ ಮಾತಿನಿಂದ ಪ್ರಭಾವಿತನಾಗಿ ಯೇಸು ಬ್ಲಡ್‌ಗ್ರೂಪ್ ಯಾವುದೆಂದು ವಿಚಾರಿಸಿದ. ಓ ಪಾಜಿಟಿವ್ ಎಂದೆ. ಪಾರ್ಥಸಾರಥಿದೂ, ತಮ್ಮ ಡಾಕ್ಟರದ್ದೂ ಅದೆ ಎಂದ. ಎಂಥ ವಿಚಿತ್ರವೆಂದರೆ ಓ ಪಾಜಿಟಿವ್ ಇರುವವರೆಲ್ಲ ಪ್ರತಿಭಾವಂತ ನಿಷ್ಪ್ರಯೋಜಕರೆಂದೂ, ಊರ ಮಾರಿಯನ್ನು ಮೈಮೇಲೆಳೆದುಕೊಳ್ಳುವಲ್ಲಿ ನಿಸ್ಸೀಮರೆಂದೂ ಹೇಳಿದ. ಒಂದೆರಡು ನಿಮಿಷಗಳ ಬಳಿಕ ತಾನೆ..

"ನೀವು ಬೆವರುತ್ತಿರುವುದನ್ನು ನೋಡಿದರೆ ಟೋಟಲ್ ಬ್ಲಡ್ ಪ್ರೊಫೈಲ್ ಚೆಕಪ್ ಮಾಡಿಸಿಕೊಂಡರೆ ಇನ್ನೂ ಒಳ್ಳೆಯದು, ನಮ್ಮ ಪೌಲಿನ್ ಇರೋದ್ರಿಂದ ಎಲ್ಲಾನು ಫ್ರೀ. ನಾನಿರುವಾಗ ಹೆದರುವ ಅಗತ್ಯವಿಲ್ಲ, ಪೌಲಿನ್ ಒಳಗಡೆ ನಿಮಗಾಗಿ ಕಾಯ್ತಿದ್ದಾಳೆ, ಹೋಗಿ ಬ್ಲಡ್ ಶ್ಯಾಂಪಲ್ ನೀಡಿ ಬನ್ನಿ, ಆಕೆ ತೆಗೆದುಕೊಳ್ಳುವುದು ಕೇವಲ ಐದೆಮ್ಮೆಲ್ ಮಾತ್ರ. ಸಿರಂಜಿ ಚುಚ್ಚಿದಾಗ ಇರುವೆ ಕಚ್ಚಿದ ಅನುಭವವಾಗ್ತದೆ ಅಷ್ಟೆ, ಅದ್ಕೆ ವರ್ಷಕ್ಕೊಂದೆರಡು ಸಲ ಬ್ಲಡ್ ಡೊನೇಟ್ ಮಾಡಬೇಕೆನ್ನುವುದು" ಎಂದು ಒತ್ತಾಯಿಸಿದ. ಯೋಚಿಸಿದೆ, ಅಕಸ್ಮಾತ್ ವ್ಯಾಧಿಗಳು ನಿಗೂಢವಾಗಿ ಪ್ರವೇಶಿಸಿ ನನ್ನ ದೇಹವನ್ನು ತಮ್ಮ ಅಡಗುದಾಣವನ್ನಾಗಿ ಮಾಡಿಕೊಂಡಿದ್ದಲ್ಲಿ! ತಾನೆಲ್ಲಿ ಕುತ್ತಿಗೆ ಹಿಡಿದು ದೂಡುವನೋ ಎಂದು ಹೆದರುತ್ತಲೇ ಪ್ರವೇಶಿಸಿದೆ.

ತನ್ನ ಕಡೆ ಮುಂಗೈ ಚಾಚಿದ್ದ ವ್ಯಕ್ತಿಯ ಪೂರ್ವಾಪರ ವಿಚಾರಿಸುತ್ತಿದ್ದ ನರ್ಸು ಪೌಲಿನ್ನಳಾಗಿರಲಿಲ್ಲ, ಆಕೆ ಈಕೆಗೆ ಹೇಳಿದ್ದಳೇನೊ! ಸರದಿಗಾಗಿ ಕಾಯುವಂತೆ ಕಣ್ಸನ್ನೆ ಮಾಡಿದಳು, ಕೂಡ್ರಲು ನೋಡಿದೆ, ಆದರೆ ಕುರ್ಚಿಗಳು ಖಾಲಿ ಇರಲಿಲ್ಲ. ಅಕಸ್ಮಾತ್ ರೋಗಗಳು ಪತ್ತೆಯಾಗಿ ತನ್ನನ್ನು ಮಾನಸಿಕವಾಗಿಯೂ ಅಸ್ವಸ್ಥನನ್ನಾಗಿಸಿದಲ್ಲಿ! ವೈದ್ಯರು

ತನ್ನನ್ನು ಹೊರಗಿನಿಂದ ಬಂದು ಪರಿಗಣಿಸಿದಲ್ಲಿ! ತೋಗಲ್ಲಲ್ಲಿರುವ ಮನುಷ್ಯ ಯಾರಿರುವನು ಈ ಲೋಕದಲ್ಲಿ! ಮೆಲ್ಲಗೆ ನಾನು ಹಿಂದಕ್ಕೆ ಹೆಜ್ಜೆ ಇರಿಸತೊಡಗಿದೆ. ಕೈಯಲ್ಲಿ ಪಾರ್ಕಾಂಶುಧದ ರೀತಿಯಲ್ಲಿ ಸಿರಂಜಿಯನ್ನು ಜಳಪಿಸುತ್ತ ಸರ್ ಅಲೆಕ್ಸಾಂಡರ್ ಕಾಶಿಬೊಟ್ಲ ಎಂದು ಎರಡು ಹೆಜ್ಜೆ ಇಟ್ಟು ಮುನ್ನುಗ್ಗಿದ. ಇಂದ್ರ ಯಿಡಿರಕಂಡಿಗ ದಳಿಗಡರಕಂಡು ದಂಕ್ಕಕಿಟ್ಟಿದ ಲ್ಲಿಯಂಕ್ಕೆ ದ್ರತ ಅದೇ ದಿವಸ, ಅದೇ ಆಸ್ಪತ್ರೆಯಲ್ಲಿ, ಅದೇ ವಾರ್ಡಿನಲ್ಲಿ, ಅದೇ ತಜ್ಞ ವೈದ್ಯರ ಸಮಕ್ಷದಲ್ಲಿ ಡಾ. ಕಾಶಿಬೊಟ್ಲ ಪೇಣುಗೊಂಡ ಗೋಪಾಲ್‌ರಾವ್ ಅವರ ಪ್ರಕರಣವಾಗಿ ಕೆಲ್ಲಾ ಅಲ್ಲಿ ಪಾರ್ಥಸಾರಥಿ ಚಕ್ರವರ್ತಿ ಆಸ್ಟ್ರೇಲಿಯಾದಲ್ಲಿದ್ದಾಗಲೇ ಸಂಪರ್ಕಿಸಿದ್ದರಂತೆ. ಅವರು ಇಂಥಲ್ಲಿಂದು ಅಪಾಯಿಂಟ್‌ಮೆಂಟ್ ನೀಡಿದ್ದರಂತೆ. ಹೈದರಾಬಾದಿನಿಂದ ಹೋದಾಗ ವಿರಿಂಡಿಯಾದಲ್ಲಿ ಇಳಿಸಿದಂತೆ. ಕಳೆದ ರಾತ್ರಿಯಿಂದಲೇ ತಪಾಸಣೆಗೆ ಒಳಗಾಗಿರುವರಂತೆ. ಮೊನ್ನೆ ತಾನೆ ಅವರು ಎಪ್ಪತ್ತಾರು ವಸಂತಗಳನ್ನು ಪೂರೈಸಿದ ಸಮಾರಂಭದಲ್ಲಿ ತೆಲುಗಿನ ಸಾರಸ್ವತಲೋಕದ ಗಣ್ಯರು ಇನ್ನೂರಕ್ಕೂ ಅಧಿಕ ಮಂದಿ ಉಪಸ್ಥಿತರಿದ್ದರಲ್ಲ! ನಿಮ್ಮ ಆರೋಗ್ಯದ ಗುಟ್ಟೇನು ಎಂದು ಕೇಳಿದರಂತೆ! ಸುಗರ್‌ನೂ ಬೀಪಿ ಬಂದಿಲ್ಲ ಇಲ್ಲವೆಂದ ಮೇಲೆ ಇನ್ನೂ ಮೂರಕ್ಕಿಂತ ಹೆಚ್ಚು ವರ್ಷ ಇರುವುದು ನಿಶ್ಚಿತವೆಂದೂ ಸಭಾಕಾರ್ಯ ವ್ಯಕ್ತಪಡಿಸಿದರಂತೆ! ಅವರೊಂದೇ ಅಲ್ಲದೆ ಘನವೆತ್ತ ರಾಜ್ಯಪಾಲರು ಸಹ ಶತಾಯುಷಿಗಳಾಗಿರುವಿರೆಂದು ಮುಖ ಹಾರೈಸಿದರಂತೆ! ತಾವು ನಿಸ್ಸಂದೇಹವಾಗಿ ಆರೋಗ್ಯದಿಂದಿರುವುದಾಗಿ ಸಾಧಿಸಿ ತೋರಿಸುವ ಸಲುವಾಗಿ ಕಾಶಿಬೊಟ್ಲ ಅವರು ತಮಗಿಂತ ಕಿರಿಯರಿದ್ದ ಗಣ್ಯರೆಲ್ಲರನ್ನೂ ಮೂರು ಪೆಗ್ಗು ಹೆಚ್ಚವರಿ ವಿಸ್ಕಿ ಸೇವಿಸಿ ತೂರಾಡದೆ ಸಲೀಸಾಗಿ ನಡೆದಾಡಿದ್ದರಂತೆ! ಪ್ರತಿನಿತ್ಯ ನಿಯಮಿತವಾಗಿ ವಿಸ್ಕಿ ಸೇವಿಸುವೆ ಮತ್ತು ಸಸ್ಯಾಹಾರವೇ ತಮ್ಮ ಆರೋಗ್ಯದ ಗುಟ್ಟೆಂದು ಹೇಳಿದರಂತೆ! ಅವರೆ ಆದಾದ ಕೆಲವೇ ದಿವಸಗಳಲ್ಲಿ ಉರಿ ಮೂತ್ರವಿರುವ ಲಕ್ಷಣಗಳಾರಂಭಿಸಿದವಂತೆ! ತುಂಬಾ ತ್ರಾಸನ್ನು ಅನುಭವಿಸಿ ಕೆಂಪು ವರ್ಣದ ಮೂತ್ರವನ್ನು ಸ್ಖಲಿಸತೊಡಗಿದರಂತೆ! ಅದ್ದು ದಿನಗಳೆಂತೆ ತಾರಕಕ್ಕೇರಿತಂತೆ! ಪರೀಕ್ಷೆ ಪಡೆಸಿದ ಸ್ಥಳೀಯ ತಜ್ಞ ವೈದ್ಯರು ಮೂತ್ರಜನಕ ಕಾರ್ಯಕ್ಷಮತೆ ಕ್ಷೀಣಿಸುತ್ತಿರುವುದೆಂದೂ ಪ್ರಸಿದ್ಧ ನೆಫ್ರಾಲಾಜಿಸ್ಟ್ ಡಾಕ್ಟರ್ ಚಕ್ರವರ್ತಿ ಹೈದರಾಬಾದಿನವರನ್ನು ಕೂಡಲೆ ಸಂಪರ್ಕಿಸಲೆಂದು ಸಲಹೆ ನೀಡಿದರಂತೆ! ಆವಲ್ಲಿಂ ಡಾ. ಚಕ್ರವರ್ತಿ ಆಸ್ಟ್ರೇಲಿಯಾದ ಪ್ರೊಟ್ಟೋನ್ಸ್‌ದಿಂದ ನೇರವಾಗಿ ಲುಫ್ತಾನ್ಸಾದಲ್ಲಿ ಹೈದರಾಬಾದಿನವರು ಹೈದರಾಬಾದಿನಿಂದ ನೇರವಾಗಿ ಕಿಂಗ್‌ಫಿಷರಿನಲ್ಲಿ ಕರ್ನೂಲಿಗೂ ಆಗಮಿಸಿದ್ದರಂತೆ! ಅದೂ ಕಾಮಿನೇನಿ ಹಾಪ್ಟಿಟಲ್ಲಿನ ಕಿಡ್ನಿಯೂನಿಟ್ಟನ್ನು ಉದ್ಘಾಟಿಸುವ ಸಲುವಾಗಿ. ಅಲ್ಲಿರಗಡಾಡಿಂದ ಸ್ಥಾಪಿಸಗಡೆಯಿದ್ದ ಬೆಡ್‌ಮೇಲೆ ಕಾಶಿಗಾರ ಪಾರ್ಥಸಾರಥಿಯೂ, ಪ್ರಸಿದ್ಧ ಬೆಡ್ಡ್ ಮೇಲೆ ವಿಪ್ಲಶಾಕ ಪ್ರಾಕಾಶಿಬೊಟ್ಲರೂ! ಆದೂ ಅನ್ಯೋನ್ಯ ರೀತಿಯಲ್ಲಿ ಮೋಡಿಮೊಡನೆ

ಅರೆ ನೀವಿಲ್ಲಿ ! ಅರೆರೆ ನೀವಿಲ್ಲಿ ಏರ್ಪಡಿಸಿದ್ದಾಗಿ ಆಯೋಜಿಸಿದ್ದಂತೆ! ಲೋಪವೇ ಮಾಡುವ
ಸಲುವಾಗಿ ಪರಸ್ಪರ ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡಿದ್ದಂತೆ! ಅಡುವ ಮಾತುಗಳ ಸಲುವಾಗಿ ಪರಸ್ಪರ
ತೊಡಗಿದ್ದಂತೆ! ಆದರೆ ಅಪ್ಪಿದ್ದ ದೇಹದ ಮೇಲಿದ್ದ ತರಾವರಿ ತಪಾಸಣಾ ಪರಿಕರಗಳಿಂದಾಗಿ
ಅವೆಲ್ಲಾ ಆ ಕ್ಷಣಕ್ಕೆ ಸಾಧ್ಯವಾಗಿಲ್ಲ. ಅವರಿಬ್ಬರು ಮಾತ್ರ ದೇಹದ್ದೂ ಅಂಗಾಂಗಗಳನ್ನು
ಜಲ್ಲಿಸ್ಪದಿರುವಂತೆ ವೈದ್ಯರು ಸಲಹೆಯ ಮೇರೆಗೆ ನರ್ಸುಗಳು ನಿಬಂಧಿಸಿದ್ದರು. ಸುತ್ತಲಿದ್ದ
ಕಾರ್ಯವತ್ತಿದ್ದರು. ಯಂತ್ರಗಳಿಂದ ಹೊಮ್ಮುತ್ತಿದ್ದ ಯಂತ್ರಗಳ ಧ್ವನಿ
ಗಮನಿಸದರೆ ಈಗ ಅರ್ಥ ಆಯಾವುದೇ ನಿರ್ಬಂಧಗಳಿಲ್ಲ. ಅವರವರ ದೇಹಗಳನ್ನು
ಸ್ವತಂತ್ರಗೊಳಿಸಲಾಗಿರುವುದು. ಒತ್ತಡಗಳನ್ನು ಹೊರತುಪಡಿಸಿ ಮಾತ್ರಾಡುವಂತೆ ಸಲಹೆ
ನೀಡಲಾಗಿರುವುದು. ಭಾವನೆ ಸಂವೇದನೆಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವಂತೆಯೂ,
ಯಾವುದೇ ಕಾರಣಕ್ಕೂ ಭಾವಪರವಶರಾಗದ್ದಂತೆಯೂ ಕಟ್ಟುನಿಟ್ಟಾದ ಸಲಹೆ ಸೂಚನೆಗಳನ್ನು
ನೀಡಲಾಗಿರುವುದು. ಅವರವರ ದೇಹಗಳಲ್ಲಿವರ್ ಕಿಡ್ನಿಗಳ ಶ್ಯಾಂಪಲ್‌ಗಳನ್ನು ತೆಗೆದು
ದಿವಸ ಬೆಳಿಗ್ಗೆಯೇ ಹೆಚ್ಚುವರಿ ತಪಾಸಣೆ ಸಲುವಾಗಿ ಮುಂಬೈಗೆ ಕಳಿಸಲಾಗಿರುವುದು. ಇನ್ನೂ
ರಾಯಭಕರೆಂದೇ ಪರಿಗಣಿಸಲ್ಪಟ್ಟಿರುವ ಪಾಥನ ಸಾರಥಿಯ ದೇಹದಲ್ಲಿನ ಒಬ್ಬಹುತೇಕ ಅಂಗಗಳಿಗೆ
ಡ್ಯಾಮೇಜ್ ಆಗಿಲ್ಲವೆಂದು ತಪಾಸಣೆಯಿಂದ ದೃಢಪಟ್ಟಿರುವುದು ವಿಸ್ಮಯ. ಆತ್ಮಹತ್ಯೆ ಆಲೋಚನೆ,
ಸಾಮಿಸಿ ನಿರೀಕ್ಷೆ, ಬೇಕೆಂದೇ ಆಹಾರದ ಪಥ್ಯವನ್ನು ನಿರ್ಲಕ್ಷಿಸುವುದು ಇವೇ ಮೊದಲಾದ
ಮಾನಸಿಕ ಸಮಸ್ಯೆಗಳನ್ನು ಸರಿಪಡಿಸುವ ಸಲುವಾಗಿ ಶ್ರೀಯುತರು ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ
ವಾರಗಟ್ಟಲೆ ಇದ್ದು ಚಿಕಿತ್ಸೆ ಪಡೆಯುವುದು ಮುಖ್ಯ. ಅಲ್ಲಿನ ವೈದ್ಯರು ನೀಡಬಹುದಾದ ಸಲಹೆ
ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದೂ ಅಲ್ಲಿಕ್ಕಿಂತ ಮುಖ್ಯ. ಪಾಹಿತ್ಯಾಭಿಪಾನಿಗಳಾದ ಡಾ.
ಚಕ್ರವರ್ತಿ ಅಂಯವರು ಅಲ್ಲಿರುವಷ್ಟು ತಮ್ಮ ಪಾಸಾಗೆಳೆಯ ಡಾ. ಸುದರ್ಶನ್ ಜಹಗೀರ್ದಾರ್ ಅವರನ್ನು
ದೂರವಾಣಿ ಮೂಲಕ ಸಂಪರ್ಕಿಸಿಕೊಳ್ಳುವಂತೆ! ಆದರೆ ಸುದರ್ಶನ್ ಜಹಗೀರ್ದಾರ್ ಎಂಬ
ಹೆಸರೇ ಅವರ್ಯಾರೂ ಕೇಳಿರಲಿಲ್ಲ ಎಂಬ ಮೇಲೆ ಅವರು ಜಮ್ಮುವಿನವರಾಗಿದ್ದಲ್ಲಿ!
ಬ್ರಾಹ್ಮಣರೆಂಬ ಮೇಲೆ ಕರಣಂ ಶಿವಶಂಕರಶಾಸ್ತ್ರಿಯವರ ದೂರದ ಸಂಬಂಧಿಗಳಾಗಿದ್ದಲ್ಲಿ!
ರೋಗಿಯಾದ ತನ್ನ ಮಾನಸಿಕ ಸಮಸ್ಯೆಗಳಿಗೆ ಅಶ್ವಿನಿಯೇ ಕಾರಣವೆಂದು ತಿಳಿದ ಪಕ್ಷದಲ್ಲಿ!
ಹೊರರೋಗಿ ಪಾಥನ ಹೀಗೆ ಏಹೇನೋ ಯೋಚಿಸಲಾರಂಭಿಸಿದ್ದೂ ಮಾನಸಿಕ ಸಮಸ್ಯೆಯೇ!
ಅಂತಾದ್ದೇನು ಇರಲಿಕ್ಕಿಲ್ಲವೆಂದೂ ಅನಾವಶ್ಯಕವಾಗಿ ಇಲ್ಲದ್ದವ್ನಾಗಲೀ ಇಲ್ಲದ್ದನ್ನಾಗಲೀ
ಯೋಜಿಸಿದ ಆರೋಗ್ಯವನ್ನು ಅಗತ್ಯಕ್ಕಿಂತ ಹೆಚ್ಚು ಕೆಡಿಸಿಕೊಳ್ಳಬೇಡಿರೆಂದು ಸುಧನ್ವರೊಂದೇ
ಅಲ್ಲದೆ ಪ್ರೊ. ಕಾಶಿಬೊಕ್ಲು ಅವರೂ ಹೇಳುವುದಕ್ಕೂ ನಾವು ಅಲ್ಲಿಗೆ ಹೋಗುವುದಕ್ಕೂ ಸರಿ
ಹೋದಿತು. ಕಾರ್ಪೊರೇಟರ್ ಯೇಸುರತ್ನಂ ಪ್ರವೇಶಿಸಿದ. ಆದರೆ ಅವನ್ಯಾಕೋ ಅಂದು
ಸಾಧ್ಯವಾಗಲಿಲ್ಲ. ಬ್ಲಡ್, ಮೂತ್ರಗಳ ಶ್ಯಾಂಪಲ್, ಶೀಸೆಗಳ ಪ್ರಭಾವಳಿಯಲ್ಲಿ, ತರಾವರಿ ವೈದ್ಯಕೀಯ
ತಪ್ಪಾಸಣೆ ಪರಿಕರಗಳನ್ನು ದೇಹದಾದ್ಯಂತ ಧರಿಸಿ, ಮಾತನಾಡದ್ದರಾಗೆ, ನೋಡದ ಹಾಗೆ,
ಅರೆಪ್ರಜ್ಞಾವಸ್ಥೆಯಲ್ಲಿ ಅಂಗಾತ ಮಲಗಿರಬಹುದಾದ್ದು ಮಿತ್ರನನ್ನು ಕಲ್ಪಿಸಿಕೊಂಡಿದ್ದೇ ನಾನು
ಒಳಪ್ರವೇಶಿಸದಿರಲು ಪ್ರಧಾನ ಅಡ್ಡಿಯಾಯಿತು. ಬಳಗಿನ ಪರಿಸ್ಥಿತಿ ಪರಿಣಾಮ ಬೀರಿ ನನ್ನ
ಮನಸ್ಸನ್ನೂ ಅಸ್ವಸ್ಥಗೊಳಿಸಿದರೆ ಎಂಬ ಆತಂಕವೇ ನನ್ನ ಪಾದಗಳ ಕಂಪನಕ್ಕೆ ಕಾರಣವಾಯಿತು.
ಆದರೆ ಒಪ್ಪತ್ತು ಹೊತ್ತೊಡೆತ ಹೊರಗಡೆ ನಿಂತಿರಲಾದೀತು! ಮುಸುಹೊತ್ತಿನ ಬಳಿಕ ಹೊರಗಡೆ
ಆಗಮಿಸಿದ ಸುಧನ್ವ ಮುಂಗೈಗೆ ಬದಲಾಗಿ ಬೆರಳುಗಳನ್ನು ಹಿಡಿದು ಒಳಗೆ ಕರೆದೊಯ್ದರು ಯಂತ್ರ

ಪ್ರವೇಶಿಸಿ ನೋಡುತ್ತೇನೆ ಸಮಕಾಲೀನರಂತೆ, ಸಮಾನ ಮನಸ್ಕರಂತೆ, ಚಿಕ್ಕ ಕರುಳು ದೊಡ್ಡ ಕರುಳುಗಳೇ ಮನುಷ್ಯ ರೂಪ ಧರಿಸಿರುವಂತೆ ಅವರಿಬ್ಬರು ತಟ್ಟನೆ ಗೋಚರಿಸಿದರು. ಅನಿರೀಕ್ಷಿತವಾಗಿ ಹೆಚ್ಚು ಲವಲವಿಕೆಯಿಂದಿದ್ದ ಪಾರ್ಥ ಮಲಗಿದ್ದಲ್ಲಿಂದಲೇ ತನ್ನೆರಡೂ ಕೈಗಳನ್ನು ಚಾಚಿ ನನ್ನನ್ನು ಸ್ವಾಗತಿಸಿ ಬರಮಾಡಿಕೊಂಡ. "ಕಾಕತಾಳೀಯಕ್ಕೂ ಸಾಹಿತ್ಯಕ್ಕೂ ಅವಿನಾಭಾವ ಸಂಬಂಧವಿರುವುದೆಂದರೆ ಇದೇ ನೋಡು. ಯಾರು ಬರಬಾರದೆಂದು ಮಾತನಾಡಿದ್ದೆವೋ, ಯಾರಿಗೆ ಕಾದಂಬರಿಯ ಹಸ್ತಪ್ರತಿಯನ್ನು ತೋರಿಸಬಾರದೆಂದು ನಿಶ್ಚಯಿಸಿದ್ದೆವೋ, ಪ್ರತಿ ಕಥೆ ಬರೆದಾಗಲೂ, ಹೊಸಕಥೆಯನ್ನು ಓದಿದಾಗಲೂ ಯಾರ ನೆನಪನ್ನು ಸ್ಮರಣೆಗೆ ತಂದುಕೊಳ್ಳುತ್ತಿದ್ದೆವೋ ಅವರೇ ಇವರು ನೋಡು" ಎಂದು ಉತ್ಸಾಹದಿಂದ ಪರಿಚಯಿಸಿದ. ಪ್ರಪ್ರಥಮ ನೋಟಕ್ಕೆ ಆ ಅಪರಿಚಿತ ವ್ಯಕ್ತಿ ಗ್ರೀಕ್ ಯುಗದ ತತ್ವಜ್ಞಾನಿಯಂತೆ ಹೊಳೆದ, ಎರಡನೆ ನೋಟಕ್ಕೆ ಜಮ್ಮಲಮಡುಗಿನ ಜಮೀನ್ದಾರ ಕರಣಂ ಶಿವಶಂಕರಶಾಸ್ತ್ರಿಯಂತೆ ಹೊಳೆದ, ಮೂರನೆ ನೋಟಕ್ಕೆ ವಿಮರ್ಶಾ ಗ್ರಂಥಗಳೇ ಮನುಷ್ಯರೂಪ ಧರಿಸಿರುವಂತೆ ಹೊಳೆದ, ನಾಲ್ಕನೆ ನೋಟಕ್ಕೆ ಕಾಶಿಬೊಟ್ಲ ಎಂದು ಖಚಿತವಾದ! ದಿಗ್ಭ್ರಮೆ, ಸಂತೋಷ ಒಟ್ಟಿಗೆ ಅನುಭವಿಸಿದೆ, ಆಯಾಚಿತವಾಗಿ ಕೈಜೋಡಿಸಿದೆ, ತಮ್ಮಂಥವರು ಆಸ್ಪತ್ರೆಯ ಬೆಡ್ ಮೇಲಿರುವುದೆಂದರೆ ಎಂದು ಹೇಳಲೆಂದು ಪ್ರಯತ್ನಿಸಿದೆ. ಗುರುತ್ವಾಕರ್ಷಣೆಗೆ ಸಿಲುಕಿದ ತಗಡಿನ ಚೂರಿನಂತೆ ಧಾವಿಸಿ ಅವರ ಕೈಗಳನ್ನು ಮೃದುವಾಗಿ ಸ್ಪರ್ಶಿಸುತ್ತ ಕಣ್ಣುಗಳನ್ನು ನೀರಿನಿಂದ ತುಂಬಿಕೊಂಡೆ. ಅದನ್ನು ಸೂಕ್ಷ್ಮಮತಿಗಳಾದ ಆ ಹಿರಿಯರು ಪರಿಣಿತ ಮನಶ್ಶಾಸ್ತ್ರಜ್ಞರಂತೆ ಗಮನಿಸಿದರು ಕ್ಷಣ್ಣಗೆ!

ಯಾರ ಕಣ್ಣುಗಳು ಶುಷ್ಕವಾಗಿರುತ್ತಾವೆಯೋ ಅವರು ಒಳ್ಳೆಯ ಕಥೆಗಾರರಾಗಲು ಸಾಧ್ಯವಿಲ್ಲವೆಂದು ಹೇಳಿದರು, ಆದರೆ ನೀವು ನಿಮ್ಮ ಕಣ್ಣುಗಳಲ್ಲಿ ಮಾನಸ ಸರೋವರವನ್ನೇ ಇಟ್ಟುಕೊಂಡಿರುವಿರಿ, ಅವು ಯಾವ ಕಾರಣಕ್ಕೂ ವೈಶಂಪಾಯನವಾಗಿ ಬದಲಾಗದಂತೆ ಎಚ್ಚರ ವಹಿಸಿದಿರೆಂದರೆ ಒಳ್ಳೆಯ ಕಥೆಗಳನ್ನು ಖಂಡಿತ ಬರೆಯುವಿರಿ ಎನ್ನುತ್ತ ನನ್ನೆರಡೂ ಮುಂಗೈಗಳನ್ನು ಹಿತವಾಗಿ ಅದುಮಿ ಹರ್ಷ ವ್ಯಕ್ತಪಡಿಸಿದರು. ಅದೇ ಸಮಯಕ್ಕೆ ಸರಿಯಾಗಿ ಹಣ್ಣು ಬ್ರೆಡ್ಡು ಪ್ಲಾಸ್ಕು ಹಿಡಿದುಕೊಂಡು ಆಗಮಿಸಿದ ಪ್ರೌಢೆಯನ್ನು ತಮ್ಮ ಮಗಳು ಅನನ್ಯಾಳೆಂದು ಪರಿಚಯಿಸಿದರು. ಇಂಗ್ಲೀಷ್ ಎಂಎ ಮಾಡಿರುವುದೂ ಅಲ್ಲದೆ ಲಿವ್ಹೀಸ್ ಮೇಲೆ ಪಿಹೆಚ್ಡಿ ಮಾಡಿ ಡಾಕ್ಟರೇಟ್ ಪಡೆದು ಉಸ್ಮಾನಿಯಾ ವಿಶ್ವವಿದ್ಯಾಲಯದ ಇಂಗ್ಲೀಷ್ ಡಿಪಾರ್ಟ್‌ಮೆಂಟಿನ ಮುಖ್ಯಸ್ಥೆಯಾಗಿರುವಳೆಂದೂ, ಆಕೆಯ ಗಂಡ, ಅಂದರೆ ತಮ್ಮ ಅಳಿಯ ಡಾ.ಶೇಷಾಶಾಸ್ತ್ರಿ ವಾಷಿಂಗ್‌ಟನ್ನಿನ ಶ್ವೇತಭವನದಲ್ಲಿ ಉನ್ನತಾಧಿಕಾರಿಯಾಗಿರುವನೆಂದೂ, ಎರಡು ವರ್ಷಗಳ ಹಿಂದೆ ಭಾರತಕ್ಕೆ ಬಂದಿದ್ದನೆಂದೂ ಹೇಳಿದರು. ನಾನು ಅವಿವಾಹಿತ ತರುಣನಾಗಿ ಆಕೆಯ ಕಡೆ ನೋಡಿದೆ. ಆಕರ್ಷಕವಾಗಿ ಕಂಡಳು. ಸೃಜನಶೀಲ ಕಥೆಗಾರನಾಗಿ ನೋಡಿದೆ. ತನ್ನ ಮನಸ್ಸನ್ನು ಗೊಂದಲದ ಗೂಡನ್ನಾಗಿ ಪರಿವರ್ತಿಸಿಕೊಂಡು ನರಳುತ್ತಿದ್ದಳು ಒಳಗೊಳಗೆ. ಆಕೆಯ ದೇಹ ಸೂಸುತ್ತಿದ್ದ ವಿದೇಶಿ ಪರಿಮಳವನ್ನು ಆಘ್ರಾಣಿಸಿದೆ. ಪ್ರಾಯಶಃ ಅದನ್ನು ತನ್ನ ಪತಿ ಅಮೇರಿಕಾದಿಂದ ತಂದು ಕೊಟ್ಟಿರಬಹುದೆಂದು ಭಾವಿಸಿದೆ.

ಪುನಃ ಕಾಶಿಬೊಟ್ಲ ತಮ್ಮ ಮಗಳ ಪ್ರಖರ ವೈಚಾರಿಕತೆಯನ್ನೂ, ಆಕೆ ಇಂಗ್ಲೀಷ್ ನಿಯತಕಾಲಿಕಗಳಿಗೆ ಬರೆಯುತ್ತಿರುವಳೆಂದೂ, ಪೆಂಗ್ವಿನ್ ಪ್ರಕಾಶನ ಸಂಸ್ಥೆ ಒಂದು ವರ್ಷದ ಹಿಂದೆ ಆಕೆಯ ಶಾಡೋ ಎಂಬ ಹೆಸರಿನ ಲೇಖನಗಳ ಸಂಕಲನವನ್ನು ಪ್ರಕಟಿಸಿರುವುದಾಗಿ

ಹೇಳಿದರು. ಆಕೆ ಪ್ಲಾಸ್ಟಿಕಿನಿಂದ ಕಪ್ಪುಗಳಿಗೆ ಕಾಫಿ ಸುರಿದಳು, ಯೇಸು ಅವುಗಳನ್ನು ನಮಗೆಲ್ಲಾ ವಿತರಿಸಿದ. ಕಾಶಿಬೊಟ್ಲ ಮೆಲ್ಲಗೆ ತಮ್ಮ ಪಾರ್ಥನ ಕಡೆ ಕತ್ತೊರಳಿಸಿ..

"ಕಾದಂಬರಿ ಎಲ್ಲಿವರೆಗೆ ಬಂತಯ್ಯಾ ಪಾರ್ಥ, ಯಶಸ್ವಿ ಕಥೆಗಾರನಾದ ನೀನು ಕಾದಂಬರಿ ಬರೆದಿರುವುದೇ ಹೆಗ್ಗಳಿಕೆ, ನಾವದರ ಮೇಲೆ ಕಣ್ಣಾಡಿಸಬೇಕಲ್ಲ! ನಾವೇ ನಿನ್ನ ಮನೆಗೆ ಬರಬೇಕೋ! ನೀನೇ ಹಸ್ತಪ್ರತಿಯೊಂದಿಗೆ ಹೈದರಾಬಾದಿಗೆ ಬರುವಿಯೋ! ಬರೋದಾದ್ರೆ ಹೆಂಡತಿ ಮಕ್ಕಳನ್ನು ಕರೆದುಕೊಂಡು ಬಾ. ಗೊಲ್ಕೊಂಡಾ, ಚಾರ್ಮಿನಾರ್, ಸಾಲರ್‌ಜಂಗ್ ಮ್ಯೂಜಿಯಂನ ಅವರಿಗೆಲ್ಲ ತೋರಿಸುವಿಯಂತೆ. ಹೇಗೋ ಕಾರಿರ್ತದೆ, ನಿನಗೂ ಡ್ರೈವಿಂಗು ಬರ್ತದೆ, ಮ್ಯೂಜಿಯಂಗೆ ರೋಂ ಚಕ್ರವರ್ತಿಯ ಮೊಮ್ಮಗಳ ಕಳೇಬರ ಬಂದಿರುವುದಯ್ಯಾ, ಮೂರು ಸಾವಿರ ವರ್ಷಗಳಷ್ಟು ಹಳೆಯದು" ಎಂದು ಸಹಜ ರೀತಿಯಲ್ಲೇನೋ ಹೇಳಿದರು. ಆದರೆ ಆ ಮಾತುಗಳನ್ನು ಕೇಳಿಸಿಕೊಂಡೊಡನೆ ಪಾರ್ಥಸಾರಥಿಯ ಮುಖ ವಿವರ್ಣಗೊಳ್ಳಲಾರಂಭಿಸಿತು. ಕಣ್ಣಾಲಿಗಳು ಹ್ರಸ್ವಗೊಳ್ಳಲಾರಂಭಿಸಿದವು. ಕೈಕಾಲುಗಳು ಕಂಪಸಿತೊಡಗಿದವು. ಹೆಂಡತಿ ಮಕ್ಕಳನ್ನು ನೆನಪಿಸುವುದರ ಮೂಲಕ ವ್ಯಾಧಿಯನ್ನು ಉಲ್ಬಣಿಸದಿರುವಂತೆ ಸುಧನ್ವ ಅವರನ್ನು ಅಂಗಲಾಚಬೇಕೆನ್ನುವಷ್ಟರಲ್ಲಿ ತಜ್ಞವೈದ್ಯದ್ವಯರು ಒಟ್ಟಿಗೆ ಆಗಮಿಸಿದರು.

ಡಾ. ಚೌಗಲೆ ಕಾಶಿಬೊಟ್ಲ ಅವರ ಬಳಿಯೂ, ಡಾ. ಚಕ್ರವರ್ತಿ ಪಾರ್ಥಸಾರಥಿ ಬಳಿಯೂ! ಪುನಃ ತಪಾಸಣೆ ಆರಂಭಿಸಿದರು. ತಮ್ಮ ಗೈರಿನಲ್ಲಿ ರೋಗಿಗಳೀರ್ವರೂ ಸಾಕಷ್ಟು ಮಾತನಾಡಿರಬಹುದೆಂದು ಅರ್ಥ ಮಾಡಿಕೊಂಡರು. ವಾಚಾಳಿತನಕ್ಕೂ ವ್ಯಾಧಿಗಳಿಗೂ ಸಂಬಂಧವಿರುವುದಾಗಿ ಹೇಳಿದ್ದರೂ ರೋಗಿಗಳು ತಮ್ಮ ಎಚ್ಚರಿಕೆಯನ್ನು ಪಾಲಿಸಿಲ್ಲವೆಂದು ಅರ್ಥ ಮಾಡಿಕೊಂಡರು. ತಮಗೆ ಅರ್ಥವಾಗಿರುವ ಹಾಗೆ ಕಾಶಿಬೊಟ್ಲ ಎಂಬ ಹೆಸರಿನ ರೋಗಿ ವಾಚಾಳಿ, ಪಾರ್ಥಸಾರಥಿ ಎಂಬ ಹೆಸರಿನ ರೋಗಿ ಮೌನಿ. ಮಾತಾಡದಿದ್ದರೆ ಅವರಲ್ಲಿರುವ ವ್ಯಾಧಿ ನಿಯಂತ್ರಣಕ್ಕೆ ಬರುವುದಿಲ್ಲ, ಮಾತಾಡಿದರೆ ಅದರಲ್ಲೂ ಸಂಸಾರಕ್ಕೆ ಸಂಬಂಧಿಸಿದ ಮಾತುಗಳನ್ನು ಕೇಳಿದರೆ ಇವರಲ್ಲಿರುವ ವ್ಯಾಧಿ ನಿಯಂತ್ರಣಕ್ಕೆ ಬರುವುದಿಲ್ಲ. ಬೆಡ್‌ಗಳಿಗೆ ದೂರ ನಿಂತು ವೈದ್ಯರೀರ್ವರು ವೈದ್ಯಕೀಯ ಸಾಂಕೇತಿಕ ಭಾಷೆಯಲ್ಲಿ ಪರಸ್ಪರ ಚರ್ಚಿಸಿ ಒಂದು ನಿರ್ಣಯಕ್ಕೆ ಬಂದರು.

ಹೃದಯ ಸಂಬಂಧೀ ತಾಪತ್ರಯಗಳನ್ನು ಕೂಲಂಕಷ ಪರಿಶೀಲಿಸಲೆಂದು ಡಾ.ಚೌಗಲೆ ಕಾಶಿಬೊಟ್ಲ ಅವರನ್ನು ಬೆಡ್ ಸಹಿತ ಕರೆದೊಯ್ಯಲು ನಿರ್ಧರಿಸಿದರು. ಅದೂ ರೋಗಿಯ ಇಚ್ಛೆಗೆ ವಿರುದ್ಧವಾಗಿ. ತಾವು ಮೈಚೆಲ್ಲಿರುವ ಬೆಡ್ಡಿಗೂ ಚಲಿಸುವ ಗಾಲಿಗಳಿರುವವು ಎಂದು ತಿಳಿದದ್ದು ಬಾಗಿಲನ್ನು ಸಮೀಪಿಸಿದಾಗಲೇ! "ಪಾರ್ಥ ನಾವು ಹೇಳಿದ್ದನ್ನು ನೆನಪಿನಲ್ಲಿಟ್ಟುಕೊಳ್ಳಯ್ಯಾ" ಎಂದು ಹೇಳುತ್ತಿದ್ದಂತೆ ತಾವು ಪವಡಿಸಿದ್ದ ಮಂಚ ಸರ್ರಂತ ಮರೆಯಾಯಿತು.

ವಾರ್ಡು ಬಣಗುಟ್ಟಲಾರಂಭಿಸಿತು. ಉಳಿದಿರುವುದು ತಾವು ಮಾತ್ರ. ಮಕ್ಕಳ ಸಾವು, ರಾಕ್ಷಸಾಕಾರದಲ್ಲಿ ಬೆಳೆದು ಹಿಂಸಿಸುತ್ತಿರುವ ಅಶ್ವಿನಿ, ಆಗಾಗ್ಗೆ ಕೆರಳುತ್ತಿರುವ ಅನುವಂಶಿಕ ಖಾಯಿಲೆಗಳು, ಆತ್ಮಹತ್ಯೆ ಮಾಡಿಕೊಳ್ಳುವುದೋ! ಸಹಜ ರೀತಿಯಲ್ಲಿ ವ್ಯಾಧಿಗಳಿಗೆ ಬಲಿಯಾಗಿ ಸಾಯುವುದೋ! ಹೇಮರೆಡ್ಡಿ ಮಲ್ಲಮ್ಮನ ಕಥೆ ಹೆಸರಿನ ಕಾದಂಬರಿಯನ್ನು ತಾನೇ ಪೂರ್ಣಗೊಳಿಸುವುದೋ! ತನ್ನ ಗೆಳೆಯನಿಂದ ಪೂರ್ಣಗೊಳಿಸುವುದೋ! ಕಾದಂಬರಿ ಮುದ್ರಣಗೊಂಡು ವಾಚಕರ ಕೈ ಸೇರಿದ ಬಳಿಕ ಸಾಯುವುದೋ! ಅದಕ್ಕೂ ಪೂರ್ವದಲ್ಲಿಯೇ

ಮರಣವನ್ನು ಬರಮಾಡಿಕೊಳ್ಳುವುದೋ! ಅದಾದ ಬಳಿಕ ವಿಮರ್ಶಕರ ಅಭಿಪ್ರಾಯ, ಪುನರ್ ಮುದ್ರಣ, ಪುನಃ ಇನ್ನೊಂದು ಕಾದಂಬರಿಯನ್ನು ಬರೆಯುವ ಹುಮ್ಮಸ್ಸು, ಸೃಜನಶೀಲತೆ ದಯಪಾಲಿಸಬಹುದಾದ ಜೀವನೋತ್ಸಾಹ, ಅನನ್ಯಳಂಥ ಮಹಿಳೆ ತನಗೆ ಒಲಿದಲ್ಲಿ ಪುನಃ ಮದುವೆಯಾಗುವ ಅಣು ಗಾತ್ರದ ಆಸೆ ಮನಸ್ಸಿನ ಮೂಲೆಯಲ್ಲಿ! ಆದರೆ ಇದ್ಯಾವುದೂ ತನ್ನ ಮೆಚ್ಚಿನ ವಿಮರ್ಶಕ, ಬಹುಶ್ರುತ ವಿದ್ವಾಂಸ, ವಾಗ್ಮಿ ಪ್ರೊ. ಕಾಶಿಭೊಟ್ಲ ಅವರಿಗೆ! ತಿಳಿದರಿಲ್ಲ, ತಿಳಿದಿದ್ದಲ್ಲಿ ಅವರು ತನ್ನ ಹೆಂಡತಿ ಮಕ್ಕಳ ಕುರಿತು ಪ್ರಸ್ತಾಪಿಸುತ್ತಿರಲಿಲ್ಲವೇನೋ! ಹೀಗೆ ಯೋಚಿಸಿದ ಪರಿಣಾಮವಾಗಿ ಪಾರ್ಥಸಾರಥಿಯ ದೈಹಿಕ ಪರಿಸ್ಥಿತಿ ನಿಧಾನವಾಗಿ ಸಹಜ ಸ್ಥಿತಿಗೆ ಮರಳಿತು. ಮೆಲ್ಲಗೆ ಟುವೆಲ್ಲಿನಿಂದ ಹಣೆಯ ಮೇಲೆ ಮೂಡಿದ್ದ ಬೆವರನ್ನು ಒರೆಸಿಕೊಂಡ. ಕಾದಂಬರಿಯ ಬಳಿಕ ಆತ್ಮಕಥೆ ಬರೆಯುವಂತೆ ತನ್ನನ್ನು ಯಾರಾದರೂ ಒತ್ತಾಯಿಸಬಾರದೆ ಎಂದು ಸುತ್ತಲಿದ್ದ ಹಲವರ ಕಡೆ ಕಣ್ಣಾಯಿಸಿದ. ಡಾ. ಚಕ್ರವರ್ತಿ ಹೇಳುತ್ತಲೇ ಇದ್ದುದನ್ನು ತಾನು ಕೇಳಿಸಿಕೊಳ್ಳುತ್ತಿರಲಿಲ್ಲ, ತನ್ನ ಪ್ರಪಂಚದಲ್ಲಿ ತಾನಿದ್ದ. ಬಳಿಕ ಡಾಕ್ಟರ್ ನಮ್ಮಲ್ಲರ ಕಡೆ ಪ್ರಶ್ನಾರ್ಥಕ ನೋಟ ಬೀರಿ ಡಾ. ಸುಧನ್ವರನ್ನು ತಮ್ಮೊಂದಿಗೆ ಕರೆದುಕೊಂಡರು ಹೊರ ಹೋದರು.

++++

ತಜ್ಞವೈದ್ಯರು ತಪಾಸಣೆ ಮಾಡಿದ ಬಳಿಕ ಪಾರ್ಥನೂ ಡಾ. ಸುಧನ್ವರೂ ದೈಹಿಕ ಕಂಪನವನ್ನು ಪಾರ್ಕಿನ್ಸನ್ ಖಾಯಿಲೆಯೆಂದು ಅನ್ಯಥಾ ಭಾವಿಸುವುದನ್ನು ಮುಂದುವರೆಸುತ್ತಿದ್ದರೇನೋ! ಸಮಾನ್ಯ ವೈದ್ಯರು ಸಾಮಾನ್ಯ ವೈದ್ಯರೇ! ತಜ್ಞವೈದ್ಯರು ತಜ್ಞವೈದ್ಯರೆ! ತಾವು ಇದುವರೆಗೆ ನೀಡಿರುವ ಸ್ಟಿರಾಯ್ಡ್ ಔಷಧಗಳು ತನ್ನ ದೇಹದ ಲಿವರ್ ಕಿಡ್ನಿಗಳ ಮೇಲೆ ಅಡ್ಡ ಪರಿಣಾಮ ಬೀರದಿರುವುದು ಪಾರ್ಥನ ಅದೃಷ್ಟವೆಂದೇ ಸುಧನ್ವರು ಭಾವಿಸಿ ನೆಮ್ಮದಿಯ ಉಸಿರುಬಿಟ್ಟರು. ಹಾಗೆ ಭಾವಿಸಿದ್ದು ತಾವು ಮಾತ್ರವಲ್ಲ, ಸ್ಥಳೀಯ ಪ್ರಸಿದ್ಧ ನರರೋಗತಜ್ಞರಾದ ಡಾ. ಆಹೋಬಲರೂ ಸಹ. ಅವರು ಹೇಳಿದ್ದರಿಂದಲ್ಲವೆ ತಾವು ಅದೇ ಚಿಕಿತ್ಸೆಯನ್ನು ಮುಂದುವರಿಸಿದ್ದು! ಅದಕ್ಕೆ ಸಂಬಂಧಿಸಿದ ಸ್ಟಿರಾಯ್ಡ್ ಔಷಧಿ ಮಾತ್ರೆಗಳನ್ನು ಅನಿಯಮಿತವಾಗಿ ಕೊಡುತ್ತಲೇ ಬಂದದ್ದು! ಅವುಗಳ ಸೇವನೆಯಿಂದ ಪಾರ್ಥ ದೈಹಿಕವಾಗಿ ದುರ್ಬಲಗೊಳ್ಳಲಾರಂಭಿಸಿದ್ದು! ಅಶ್ವಿನಿ ಆಗಿನ್ನೂ ಪತ್ನಿರೂಪದಲ್ಲಿ ಜೊತೆಯಲ್ಲಿದ್ದಳು, ಆಹೋಬಲರನ್ನು ಆಕೆಯೂ, ಆಕೆಯನ್ನು ಆಹೋಬಲರೂ ಪರಸ್ಪರ ತುಂಬ ಹಚ್ಚಿಕೊಂಡಿದ್ದರು. ಆಕೆಯ ಸಂಚಿನಲ್ಲಿ ಅವರೂ ಭಾಗಿಯಾಗಿದ್ದಿರಬಹುದೆ ಎಂಬ ಸಂದೇಹ ಹೀಗೆ ಕಾಣಿಸಿಕೊಂಡು ಹಾಗೆ ಮರೆಯಾಯಿತು! ಅಂತೂ ದೇವರು ಪಾರ್ಥನ ಪಾಲಿಗಿರುವನು, ತನ್ನ ಅದೃಷ್ಟವೂ ನೆಟ್ಟಗಿರುವುದು ಬೇರೆ. ನಿರ್ಣಾಯಕ ಸಂದರ್ಭದಲ್ಲಿ ಡಾ. ಚಕ್ರವರ್ತಿ ಕರ್ನೂಲಿಗೆ ಆಗಮಿಸಿದರು. ಕಾಮಿನೇನಿ ಆಸ್ಪತ್ರೆಯಲ್ಲಿನ ಆಧುನಿಕ ವೈದ್ಯಕೀಯ ಸಲಕರಣೆಗಳಿಂದ ರೋಗಿಯ ತಪಾಸಣೆ ನಡೆಸಿದರು. ಸ್ಟಿರಾಯ್ಡ್ ಔಷಧಗಳಿಗೆ ಬದಲಿಗೆ ಬೇರೆ ಔಷಧಿ ಮಾತ್ರೆಗಳನ್ನು ಸೂಚಿಸಿದರು. ಔಷಧಿಗಳ ಸೇವನೆಗಿಂತ ರೋಗಿಯ ಮಾನಸಿಕ ನೆಮ್ಮದಿ ಮುಖ್ಯವೆಂದು ಹೇಳಿದರು. ಭೂತಕಾಲದ ನೆನಪುಗಳು ಮರುಕಳಿಸದಂತೆ ಜಾಗ್ರತೆ ವಹಿಸಬೇಕೆಂದು ಹೇಳಿದರು. ದಿನಕ್ಕೆ ಎಂಟು ಗಂಟೆಗಳಿಗಿಂತ ಹೆಚ್ಚು ಕಾಲ ನಿದ್ದೆ ಮಾಡುವುದು ಮುಖ್ಯವೆಂದು ಸಲಹೆ ನೀಡಿದರು. ಹಸಿ ತರಕಾರಿಗಳಂತೂ ಸರಿ, ಅವುಗಳ ಜೊತೆಗೆ

ಆತ್ಮೀಯರೊಂದಿಗೆ ಪ್ರಶಾಂತ ಸ್ಥಳಗಳಿರುವ ಕಡೆಗಳಲ್ಲಿ ಪ್ರವಾಸ ಕೈಗೊಳ್ಳುವುದು ಮುಖ್ಯ. ಸರಳ ವ್ಯಾಯಾಮಗಳು, ಧ್ಯಾನ ಪ್ರಾಣಾಯಾಮ ಯೋಗ ಇತ್ಯಾದಿ ದಿನಚರಿಯಲ್ಲಿ ಅಳವಡಿಸಿಕೊಂಡರೆ ಇನ್ನೂ ಒಳ್ಳೆಯದು. ಹ್ಞಾಂ! ಯೋಗಿ ಸೃಜನಶೀಲವಾಗಿ ಆಲೋಚಿಸುತ್ತಿರುವುದು ಸಕಾರಾತ್ಮಕ ಅಂಶ, ಇಮ್ಯಾಜಿನೇಷನ್ನೂ ಒಂದು ರೀತಿಯಲ್ಲಿ ಮೆಡಿಟೇಷನ್ನೆ! ಇಮ್ಯಾಜಿನೇಷನ್ ಇರದಿದ್ದಲ್ಲಿ ಕಥೆಗಳನ್ನಾಗಲೀ ಕಾದಂಬರಿಗಳನ್ನಾಗಲೀ ಬರೆಯುವುದು ಅಸಂಭವ. ಆದ್ದರಿಂದ ಶಾಸ್ತ್ರ ಯಾವ ಕಾರಣಕ್ಕೂ ಬರೆಯುವುದನ್ನು ನಿಲ್ಲಿಸದೆ ಮುಂದುವರೆಸಬೇಕು. ಇವೆಲ್ಲಕ್ಕಿಂತ ಮುಖ್ಯವಾಗಿ ಬೆಂಗಳೂರಿಗೋ, ಪಾಂಡಿಚೆರಿಗೋ ಹೋಗಿ ಅಲ್ಲಿನ ತಜ್ಞ ಮಾನಸಿಕ ವೈದ್ಯರ ಸಂಗಡ ಕಾನ್ಸೆಲ್ಲಿಂಗ್ ಒಳಗಾಗಲಿ. ಇನ್ನೂ ಒಳ್ಳೆಯದು. ಸೈಕೋಥೆರಪಿ, ಫಿಜಿಯೋಥೆರಪಿ ಮಾಡಿಸಿಕೊಳ್ಳುವುದು ತೀರಾ ಅಗತ್ಯ. ಇದೆಲ್ಲಕ್ಕಿಂತ ಮುಖ್ಯವಾಗಿ ಯೋಗಿಯನ್ನು ಒಂಟಿತನ ಬಾಧಿಸಬಾರದು. ಒಂದಿಬ್ಬರಾದರೂ ಸದಾ ತನ್ನ ಜೊತೆಯಲ್ಲಿರಬೇಕು. ಯಾವ ಕಾರಣಕ್ಕೂ ಮಾನಸಿಕ ನಿಷ್ಕ್ರಿಯತೆ ಬಳ್ಳೆಯದಲ್ಲ.. ಹೀಗೆ ಅವರು ನೀಡಿರುವ ಸಲಹೆಗಳ ಕುರಿತಂತೆ ಯೋಚಿಸಲಾರಂಭಿಸಿದಳು! ಯಾತಕ್ಕಾದರೂ ಜೊತೆ ಮಾಡಿ ಪಾರ್ಥನನ್ನು ಬೆಂಗಳೂರಿಗೆ ಕಳಿಸಿ ಕೊಡಬೇಕು. ಅವನ ಸಂಗಡ ಪೆಂಡಬುದೋ ಯಕ್ಷಪ್ರಶ್ನೆ! ಜಮ್ಮಲಮಡುಗಿನ ಕಡೆಯ ಖಾಸಗಿ ಪ್ರತ್ತೆದಾರರು ಇಲ್ಲಿ ಎಲ್ಲಾದರೂ ಅಡಗಿರಲೂಬಹುದು! ತಮ್ಮ ಚಟುವಟಿಕೆಗಳನ್ನು ಗಮನಿಸುತ್ತಲಿರಲೂಬಹುದು; ತಮ್ಮ ಪೋಷಕ ಅಶ್ವಿನಿಗೆ ವರದಿ ಮಾಡುತ್ತಿರಲೂಬಹುದು! ಅವರೆಲ್ಲರ ಮತ್ತು ಆಕೆಯ ಕಣ್ತಪ್ಪಿಸಿ ಪಾರ್ಥ ಸಾರಥಿಯನ್ನು ಬೆಂಗಳೂರಿಗೆ ಕರೆದೊಯ್ಯಬೇಕು. ಅದೂ ಜಾಂಬಿಗೆ ಹೊರಡುವುದಾಗಿ ಸುದ್ದಿ ಹಬ್ಬಿಸಿ! ಹೀಗೆ ಸುಧನ್ವ ಪೌನಸವಾಗಿ ಲೆಕ್ಕಾಚಾರ ಹಾಕಿದರು. ಆದರೆ ತಮ್ಮ ಆಲೋಚನೆಗಳು ಸುಳಿವನ್ನು ಜೀರೆಯುವರೆಗೆ ಬಿಟ್ಟುಕೊಡದೆ ಚಿಕಿತ್ಸೆ ಆರಂಭಿಸಿದರು.

ತನ್ನನ್ನು ಬಾಧಿಸುತ್ತಿರುವ ವ್ಯಾಧಿಗಳ ಪೈಕಿ ಹಲವು ಅನುವಂಶಿಕವಲ್ಲವೆಂದು ತಿಳಿದು ಪಾರ್ಥ ಗೆಲುವಾದ. ಚಿಕಿತ್ಸೆಗೆ ತ್ರಿಕರಣಪೂರ್ವಕವಾಗಿ ಸ್ಪಂದಿಸಲಾರಂಭಿಸಿದ. ತನ್ನ ದೇಹವೂ ಮಹಾಕಾದಂಬರಿಯೆಂದು ಪರಿಭಾವಿಸಿದ. ಟೇಬಲ್ ಕಡೆ ನೋಡಿದ. ಅಲ್ಲಿ ಸುಧನ್ವ ತಂದಿರಿಸಿದ್ದ ಔಷಧಿ ಮಾತ್ರೆಗಳು ಆಕರ್ಷಕ ರೀತಿಯಲ್ಲಿದ್ದವು. ಅವುಗಳನ್ನು ತಾನು ಸೇವಿಸಲಾರಂಭಿಸಿದನೆಂದರೆ ದೀರ್ಘನಿದ್ದೆಗೆ ಜಾರುವುದು ಖಚಿತ. ಎಷ್ಟು ತಾಸುಗಳು ಪರ್ಯಂತ, ಎಷ್ಟು ದಿವಸಗಳ ಪರ್ಯಂತ ತಾನು ನಿದ್ದೆ ಮಾಡಬೇಕಾಗಿ ಬರಬಹುದೇನೋ! ನಿದ್ದೆಗೆ ಜಾರಿದ ಬಳಿಕ ಪಚ್ಚರಗೊಂಡರೆ ಸರಿ. ಆದರೆ ಪಚ್ಚರಗೊಳ್ಳದಿದ್ದ ಪಕ್ಷದಲ್ಲಿ!

ನೀಪು ಬ್ಲಡ್ ಶ್ಯಾಂಪಲ್ ಕೊಡಲಿಲ್ಲವೆಂದು ಪೊಲಿನ್ ಹೇಳಿದ ಮೇಲೆಯೇ ತಿಳಿದದ್ದು ಏಂದು ಯೇಸು ಹೇಳಿದ್ದು ಕೆಲವು ತಾಸುಗಳ ಹಿಂದೆ. ಅವನು ಹೇಳಿದ್ದು ಸರಿ. ಅವರವರ ರಕ್ತದ ಜಾತಕ ಅವರವರಿಗೆ ತಿಳಿದಿರುವುದು ಮುಖ್ಯ. ಬಿಡುವು ದೊರಕಿದೊಡನೆ ಬಳ್ಳಾರಿಯ ಅಮೃತ್ ಡಯಾಗ್ನಿಸ್ ಸೆಂಟರಿನ್ನು ತಲುಪಬೇಕು. ಅಲ್ಲಿನ ಪ್ಯಾಥಾಲಾಜಿಸ್ಟ್ ಡಾ. ವೇದವ್ಯಾಸ ಚಿರಪರಿಚಿತ ವ್ಯಕ್ತಿ. ರಕ್ತವೆಂದರೆ ಕೇವಲ ರಕ್ತವಲ್ಲ ಪ್ರತಿಯೊಬ್ಬ ವ್ಯಕ್ತಿಯ ಪೂರ್ವಜರ ಭಾವನೆ ಸಂವೇದನೆಗಳ ನಿಗೂಢ ಉಗ್ರಾಣವೆಂದು ಅವರು ಹೇಳಿದ್ದು ನೆನಪಾಯಿತು. ಹೀಗೆ ಯೋಚಿಸುತ್ತ ಮೈಮರೆತಿದ್ದ ತನ್ನನ್ನು ಪಾರ್ಥ ಹತ್ತಿರ ಬರುವಂತೆ ಕೈಸನ್ನೆ ಮಾಡಿದ. ತನ್ನ ಮೈಯಳತೆಯಲ್ಲಿ ಕೂಡ್ರುವಂತೆ ಸೂಚಿಸಿದ. ಕುಳಿತ. ಮೆಲ್ಲಗೆ ತನ್ನೆಡಗೈಯಿಂದ ಸ್ಪರ್ಶಿಸಿದ. ಅದೊಂದು ಋಷಿ ಸದೃಶ ಸ್ಪರ್ಶ! ಯೋಗಿಗಳೂ ಹಿಂದು ರೀತಿಯಲ್ಲಿ ಋಷಿ

ಸಮಾನರೆ! ರೋಮಾಂಚನದ ಅನುಭವವಾಯಿತು. ಮನಸ್ಸಿನಲ್ಲಿ ನಾನು ಬಂದ ದಿನಗಳನ್ನು ಲೆಕ್ಕ ಹಾಕಿದ. ಇವತ್ತು ಬಂದು ನಾಳೆ ಹೊರಡಲೆಂದೇ ನಾನಿಲ್ಲಿಗೆ ಬಂದದ್ದು, ಆದರೆ ಎಂಟನೆ ದಿವಸ ನಡೆಯುತ್ತಿರುವುದು. ಮನೆಯಲ್ಲಿ ಹಾಗೂ ಶಾಲೆಯಲ್ಲಿ ಕೆಲಸ ಕಾರ್ಯಗಳಿರುವವು ಬೇರೆ, ರಜೆಗಳು ಖಾತೆಯಲ್ಲಿರುವವೋ ಇಲ್ಲವೋ! ಇರದಿದ್ದಲ್ಲಿ ವೇತನ ರಹಿತ ರಜೆಗಳನ್ನು ಪಡೆಯುವುದು ಅನಿವಾರ್ಯವಾಗುವುದು. ಆದರೆ ಹೊರಡಲೆಂದರೆ ಕಾಲಿಗೆ ಶೃಂಖಲೆ ತೊಡಿಸುತ್ತಿರುವ ಸ್ಥಳೀಯ ಸಮಸ್ಯೆಗಳು, ಪಾರ್ಥನನ್ನು ಏಕಾಂಗಿಯಾಗಿ ಬಿಟ್ಟು ಹೊರಡಲು ಮನಸ್ಸು ಒಪ್ಪಲೊಲ್ಲದು ಬೇರೆ!

ಹಾಗೆ ನೋಡಿದರೆ ಪಾರ್ಥ ನನಗೆ ತೀರಾ ಖಾಸಾ ಗೆಳೆಯನೇನಲ್ಲ, ಇವನನ್ನು ನಾನು ಭೆಟ್ಟಿ ಮಾಡಿರುವುದು ಎರಡನೆ ಸಲ, ತಾನು ಸ್ವಸ್ಥನಿದ್ದಲ್ಲಿ ನಾನಿಲ್ಲಿ ಇರುವ ಪ್ರಮೇಯ ಬರುತ್ತಿರಲಿಲ್ಲವೇನೊ! ನಾನೂ ತನ್ನ ಕೈಗಳನ್ನು ವಾತ್ಸಲ್ಯದಿಂದ ಸ್ಪರ್ಶಿಸಿದೆ. ಕಣ್ಣಲ್ಲಿ ಕಣ್ಣಿಟ್ಟು ನೋಡಿದ, ಕಣ್ಣುಗಳು ಹನಿಗೂಡಿದವು, ಯಾವ ಜನ್ಮದ ಸಂಬಂಧವಿದ್ದೀತು ತಮ್ಮ ನಡುವೆ! ವಾರದಿನಮಾನ ತೋರಿಸಿದ ಪ್ರೀತಿ ಅಂತಃಕರಣ ಏಳೇಳು ಜನ್ಮಕ್ಕಾಗುವಷ್ಟಿದೆ ಎಂದ. ತಿಂಗಳುಗಳ ಕಾಲ ಇದ್ದರೂ ರಿಪೇರಿಗೊಂಡು ಮೂಲ ರೂಪ ಪಡೆಯದ ತನ್ನ ಬದುಕು ಎಂದ, ಊರಿಗೆ ಹೊರಡುವಂತೆ ಸೂಚಿಸಿದ, ಸಾಯಂಕಾಲಕ್ಕೆ ಬದಲಾಗಿ ಬೆಳಿಗ್ಗೆ ಪತ್ತಿಕೊಂಡದ ಮೂಲಕ ಹೊರಡುವ ನೀಲಕಂಠೇಶ್ವರದಲ್ಲಿ ಹೊರಟು ಪತ್ತಿಕೊಂಡದಲ್ಲಿಳಿದು ಮನ್ರೋನ ಕುರುಹುಗಳನ್ನು ಅಧ್ಯಯನ ನಡೆಸಿ ಕಾದಂಬರಿ ಬರೆಯುವಂತೆ ಸಲಹೆ ನೀಡಿದ. ಮನ್ರೋ ಮಹಾಶಯನ ಬಗ್ಗೆ ಹಲವು ಗೆಜೆಟಿಯರುಗಳಲ್ಲಿ ಓದಿದ್ದೆ, ಪತ್ತಿಕೊಂಡ ನನಗೇನು ಅಪರಿಚಿತ ಸ್ಥಳವಾಗಿರಲಿಲ್ಲ, ಹಲವು ಸಲ ಅಲ್ಲಿಗೆ ಹೋಗಿದ್ದುಂಟು, ಅಲ್ಲಿ ಆತನ ಹೆಸರಿನಲ್ಲಿರುವ ತೋಪುಗಳನ್ನು ಬಾವಿಗಳನ್ನು ಛತ್ರಗಳನ್ನು ಬಜಾರುಗಳನ್ನು ನೋಡಿದ್ದೆನಾದರೂ ಕೂಲಂಕಷ ಪರಿಶೀಲಿಸಿರಲಿಲ್ಲ. ರೆವೆನ್ಯೂ ಆಫೀಸ್ ಎದುರಲ್ಲಿರುವ ಮಂಥೋಳಯ್ಯಸ್ವಾಮಿ ಬಗ್ಗೆ ವಿವರಿಸಿದ, ಆತನ ಕುರಿತು ತಾನು ಸಂಗ್ರಹಿಸಿಟ್ಟಿರುವ ಟಿಪ್ಪಣಿಗಳ ನೋಟು ಪುಸ್ತಕ ಕಪಾಟಿನಲ್ಲಿರುವುದಾಗಿಯೂ ಹುಡುಕಿ ತೆಗೆದುಕೊಳ್ಳುವಂತೆಯೂ ಸೂಚಿಸಿದ. ಹುಡುಕುವ ಮೊದಲೇ ಅದು ದೊರಕಿತು, ತನ್ನ ಸೂಚನೆಯಂತೆ ಬ್ಯಾಗಿನೊಳಗಿರಿಸಿಕೊಂಡೆ.

ಹೇಮರೆಡ್ಡಿ ಮಲ್ಲಮ್ಮನ ಕಥೆ ಕಾದಂಬರಿಯ ಹಸ್ತಪ್ರತಿಯ ಕಡತವನ್ನು ತೆಗೆದುಕೊಳ್ಳುವಂತೆ ಹೇಳಿದ, ತೆಗೆದುಕೊಂಡೆ. ಹೌದು ತನ್ನ ಪ್ರಾಮಾಣಿಕ ಅನ್ನಿಸಿಕೆಯಂತೆ ಸ್ವಯಂ ಹಸ್ತಲಿಖಿತವನ್ನು ಓದುವುದೂ ಅರಗಿಸಿಕೊಳ್ಳುವುದೋ ಕಷ್ಟವೆ! ಆದರೆ ಶಿಲಾಶಾಸನಗಳನ್ನು ಓದುವ ಕಲೆಯನ್ನು ಒಲಿಸಿಕೊಂಡಿದ್ದ ನನಗೆ ತನ್ನ ಲಿಪಿಯನ್ನು ಓದುವುದು ಕಷ್ಟವೆನ್ನಿಸಲಿಲ್ಲ, ಕಾರಣ ಕಥಾನಕದ ನೇಪಥ್ಯದಲ್ಲಿರುವ ವ್ಯಕ್ತಿ ನಿಸ್ಸಂದೇಹವಾಗಿ ನಾನೆ! ಕಥಾನಕದ ತುಂಬೆಲ್ಲ ಹರಡಿರುವ ಅನುಭವಗಳು ನಿಸ್ಸಂದೇಹವಾಗಿ ನನ್ನವೆ! ಹಾಗೆ ತಾನು ಬರೆದಿರುವುದು ವಿಚಿತ್ರವೇ ಸರಿ! ಹತ್ತಿರದಿಂದ ಅನುಭವಿಸಿರುವ ರಾಯಲಸೀಮೆ ಫ್ಯಾಕ್ಷನ್ ರಾಜಕಾರಣಕ್ಕೆ ಹೆದರಿರಬಹುದು ತಾನು! ದಿನಂಪ್ರತಿ ಸಾವನ್ನು ನಿರೀಕ್ಷಿಸುತ್ತಲೇ ಬರೆದಿರಬಹುದು ತಾನು! ಉದ್ದೇಶಪೂರ್ವಕವಾಗಿ ಕಾದಂಬರಿಯನ್ನು ಅಪೂರ್ಣಗೊಳಿಸಿರಬಹುದು ತಾನು! ಅದನ್ನು ಪೂರ್ಣಗೊಳಿಸುವ ಗುರುತರ ಹೊಣೆಯನ್ನು ನನ್ನ ಹೆಗಲಿಗೆ ವರ್ಗಾಯಿಸಲೆಂದೇ ಕ್ಲೈಮ್ಯಾಕ್ಸ್‌ನ ಬೀಜಾಕ್ಷರಗಳನ್ನು ಕಾದಂಬರಿಯ ಏಳನೆ ಸರ್ಗದಲ್ಲಿ ನಾಟಿರಬಹುದು ತಾನು! ಆದರೆ ಅವು ಅಲ್ಲಿ ಮೊಳೆಯುವುದು ಅರಳುವುದು ಮುಖ್ಯ. ಅದೆಲ್ಲ ಒತ್ತಟ್ಟಿಗಿರಲಿ, ತನ್ನ ಕಾದಂಬರಿ ಹಸ್ತಪ್ರತಿಯ ಪ್ರಪ್ರಥಮ

ವಾಚಕನಾದ ನನ್ನ ಅಭಿಪ್ರಾಯವನ್ನಾದರೂ ಆಪೇಕ್ಷಿಸುವುದು ಬೇಡವೇ! ಇಷ್ಟೊಂದು ನಿರ್ಲಿಪ್ತತೆ ಉದಾಸೀನತೆ ತೋರುವುದು ತನ್ನ ಸೃಜನಶೀಲ ಫಲವನ್ನು ಅವಮಾನಿಸಿದಂತೆ ಅಲ್ಲವೆ! ತನ್ನ ಮುಖದಲ್ಲಿ ನಿರ್ಲಕ್ಷ್ಯ ದೇದಿಪ್ಯವಾಗಿ ಹೊಳೆಯಲಾರಂಭಿಸಿತು, ಅದಿಲ್ಲೇ ಇದ್ದಲ್ಲಿ ತನ್ನ ಮಾನಸಿಕ ಸ್ವಾಸ್ಥ್ಯವನ್ನು ಹಾಳುಗೆಡವುದಾಗಿ ಹೇಳಿದ್ದು ವಿಚಿತ್ರವೆನ್ನಿಸಿತು.

++++

"ನೀನು ಹೇಳುತ್ತಿರುವುದು ಸರಿಯಲ್ಲ ಪಾರ್ಥ, ನೀನು ನಿನ್ನ ಸೃಜನಶೀಲ ಶ್ರಮಕ್ಕೆ ಅವಮಾನ ಮಾಡುತ್ತಿರುವಿ, ಡಾಕ್ಟರ್ ಹೇಳಿದ್ದು ಮರೆತಿರುವಂತಿದೆ ನೀನು. ಈ ಬರಹ ನಿನ್ನ ಸ್ವಾಸ್ಥ್ಯವನ್ನು ಕಾಪಾಡಿರುವುದೇ ಹೊರತು ಹಾಳು ಮಾಡಿಲ್ಲ, ನಿನ್ನಲ್ಲಿರುವ ಇಮ್ಯಾಜಿನೇಷನ್ನು, ಅಬ್ಸರ್ವೇನ್ನು, ಕೆಪೆಸಿಟಿ ಸಮಕಾಲೀನ ಯಾವ ಬರಹಗಾರರಲ್ಲೂ ಇಲ್ಲ, ನಿನ್ನಲ್ಲಿಯೇ ಇರುವುದು ಅದರ ಹಕ್ಕು, ಅದನ್ನು ಪೂರ್ಣಗೊಳಿಸುವುದು ನಿನ್ನ ನೈತಿಕ ಹೊಣೆ, ನನಗೆ ತಿಳಿದಿರುವಂತೆ ಇಂಥ ಕಾದಂಬರಿಗಳು ತೆಲುಗು ಸಾಹಿತ್ಯದಲ್ಲಿಲ್ಲ. ಅಲ್ಲದೆ ಆಂಧ್ರಪ್ರದೇಶದಲ್ಲಿ ಪ್ರಕಾಶನ ಸಂಸ್ಥೆಗಳಿಗೆ ಕೊರತೆ ಇಲ್ಲ, ನೀನಿದನ್ನು ಪೂರ್ಣಗೊಳಿಸಿದಲ್ಲಿ ನಿನ್ನ ಆರೋಗ್ಯನು ಸುಧಾರಿಸ್ತದೆ, ಒಳ್ಳೆಯ ಹೆಸರೂ ಬರ್ತದೆ, ಪ್ರಕಟವಾದ ಬಳಿಕ ನಾನಿದನ್ನು ತೆಲುಗಿನಿಂದ ಕನ್ನಡಕ್ಕೆ ಅನುವಾದಿಸುವೆ" ಎಂದು ಹೇಳಿದೆ. ಮಾತಿನಲ್ಲಿದ್ದ ಅಸಹನೆಯನ್ನು ಹ್ರಸ್ವಗೊಳಿಸಬಹುದಿತ್ತೆಂದೆನ್ನಿಸಿತು. ನನ್ನ ಮಾತನ್ನು ಕೇಳಿ ತಾನು ವಿಷಣ್ಣತೆಯಿಂದ ನಕ್ಕ, ಬಳಿಕ ಮುಖವನ್ನು ಬಿಗಿದುಕೊಂಡು..

"ಕಾಶಿಬೊಟ್ಲ ನಿನ್ನೊಳಗೆ ಪರಕಾಯ ಪ್ರವೇಶ ಮಾಡಿರುವಂತಿದೆ, ಇಲ್ಲದಿದ್ದರೆ ನೀನಿಷ್ಟೆಲ್ಲ ಹೇಳುತ್ತಿರಲಿಲ್ಲವೇನೊ! ನನ್ನ ಆರೋಗ್ಯ ಹದಗೆಟ್ಟಿದ್ದೇ ಇದರಿಂದಾಗಿ ಮಹರಾಯ! ಇನ್ನು ಅದನ್ನು ಪೂರ್ಣಗೊಳಿಸಲು ಕೂತೆನೆಂದರೆ ನನ್ನ ಕಥೆ ಮುಗಿದಂತೆಯೇ ಸರಿ. ಅದನ್ನು ಕೊಟ್ಟು ಕೈತೊಳೆದುಕೊಳ್ಳುವ ಸಲುವಾಗಿಯೇ ನಿನ್ನನ್ನು ಇಲ್ಲಿಗೆ ಕರೆಸಿಕೊಂಡಿದ್ದಪ್ಪಾ! ಒಳ್ಳೆಯ ಮಾತಿನಿಂದ ಕೇಳ್ತಿದ್ದೀನಿ, ಇದನ್ನು ನೀನು ಒಯ್ಯುವಿಯೋ ಇಲ್ಲವೋ ಅಷ್ಟು ಹೇಳು!" ಎಂದು ಕಡ್ಡಿ ಮುರಿದಂತೆ ಕೇಳಿದ.

ಅದರಿಂದ ನನ್ನ ಮನಸ್ಸು ಪಜೀತಿ ಅನುಭವಿಸಿತು. ಅದಕ್ಕೆ ಏನೆಂದು ಹೇಳುವುದು, ಸ್ವೀಕರಿಸುವುದೋ ನಿರಾಕರಿಸುವುದೋ! ನಿಜ ಹೇಳುವುದಾದರೆ ನಾನು ಬಂದ ಉದ್ದೇಶ ಕಾದಂಬರಿಯನ್ನು ಓದುವುದಾಗಿರಲಿಲ್ಲ, ಕಾದಂಬರಿಕಾರನ ಆರೋಗ್ಯಭಾಗ್ಯವನ್ನು ವಿಚಾರಿಸುವುದೂ ಆಗಿರಲಿಲ್ಲ. ರಸ್ತೆ ಇಕ್ಕೆಲದಲ್ಲಿನ ದೇವನಕೊಂಡ, ಪತ್ತಿಕೊಂಡ, ತುಗ್ಗಲಿ, ದೇಗುಲಪಾಡುಗಳಿಗಂಟಂತೆ ಇರುವ ಬೆಟ್ಟ ಸಾಲುಗಳನ್ನು ಪ್ರಯಾಣದ ನೆಪದಲ್ಲಿ ನೋಡುವ ಸಲುವಾಗಿ ಹೊರಟು ಬಂದದ್ದು. ಆದರೆ ಇದಕ್ಕಿದ್ದಂತೆ ಸ್ವರಚಿತ ಕಾದಂಬರಿಯ ಹಸ್ತಪ್ರತಿಯನ್ನು ಉಡಿಯಲ್ಲಿಡುವುದೆಂದರೆ! ಸ್ವಂತ ಮಕ್ಕಳನ್ನೇ ನೋಡಿಕೊಳ್ಳುವುದು ಕಷ್ಟ, ಇನ್ನು ಬೇರೆಯವರ, ಅದರಲ್ಲೂ ಪರಿತ್ಯಕ್ತ ಮಕ್ಕಳನ್ನು ನೋಡಿಕೊಳ್ಳುವುದೆಂದರೆ!

"ನನ್ನಲ್ಲೂ ಅಪೂರ್ಣಗೊಂಡಿರುವ ಕಥೆ ಕಾದಂಬರಿಗಳಿವೆ ಪಾರ್ಥ, ಅವುಗಳ ಚಾಕರಿ ಮಾಡುವುದೇ ಕಷ್ಟವಾಗಿದೆ, ಇನ್ನು ನಿನ್ನದನ್ನು ಒಯ್ದು! ಅದಿರ್ಲಿ ಒಯ್ಯದಿದ್ದರೆ ಏನು ಮಾಡುವಿ!" ಎಂದು ಕುತೂಹಲದಿಂದ ಕೇಳಿದೆ.

"ಕಡ್ಡಿಗಳಿಂದ ತುಂಬಿರುವ ಪೊಟ್ಟಣ ಇಗೋ ಇಲ್ಲಿ! ಕೊಳಕು ನೀರಿನಿಂದ ತುಂಬಿರುವ ಬಾವಿ ಅಗೋ ಅಲ್ಲಿ! ಹೆತ್ತ ಮಕ್ಕಳ ಬಗೆಗೇನೆ ಕನಿಕರ ತೋರಿಸದಿರುವ ನಾನು ನನ್ನ ಕಾದಂಬರಿ

ಬಗೆಗೆ ತೋರಿಸುವೆನೆ!" ಅದಕ್ಕೆ ತಾನು ಹೆಂಬೆರಮ್ಮಂಪ ಅಲೋಚಿಸದೆ ಹೇಳಿಬಿಡುವುದೆ! ಪಲ್ಲಗೆ ಹಸ್ತಪ್ರತಿಯನ್ನು ತನ್ನ ಕಬಂಧ ಬಾಹುಗಳಿಂದ ಬಿಡಿಸಿ ಹಸ್ತಗತದ ಮಾಡಿಕೊಂಡಿತು. ಅಪ್ಪಣಿಂದ್ದು ನಿಮ್ಮಿಂದಲೆ ಉಸಿರುಬಿಟ್ಟ ಗಂಡುಡುದಿಂದ ಕ್ಷಾರಿಂದ ಲಿದಡಿಯಿಂದ ಕಿಂದ !ಲ್ಲಲಿ

"ನನಗೂ ಪ್ರೀತಿ ಇತ್ತು. ಆದರೆ ಹೇಹವನ್ನು ಪ್ರಭಾವಿಸಲು ಸಮರ್ಥವಾವಕಾಶ ಇರುತ್ತಿಲ್ಲ, ಇನ್ನು ಅದನ್ನು ಸಂಭಾಳಿಸುವುದೆಂದರೆ! ಇದನ್ನು ಸಂಭಾಳಿಸಲು ನೀನೇ ಸೂಕ್ತ ಎಂದೇ ಕೊಡುತ್ತಿರುವೆ. ಇದನ್ನು ಒಯ್ದಾದ ಬಳಿಕ ಪೂರ್ಣಗೊಳಿಸಿದರೆ ಸಂತೋಷ.+ ಅದರಲ್ಲೂ ಕನ್ನಡದಲ್ಲಿ ಬಿಡಿಪ್ರಬಂಧಗಳಿಗೂ ಇನ್ನೂ ಸಂತೋಷ ಕೃತಿಗಳಿಗೆ ಸ್ವಾಮ್ಯ ಕುರಿತಂತೆ ಯೋಚಿಸಲೇ ಬೇಡ. ಕ್ಲೋಟ್ಯಾಂತರ ಜನ ಬಳಸುವ ಪ್ರಪಂಚದ ಬಗ್ಗೆ ಯೋಚಿಸದಿರುವ. ನಾವು ಇಷ್ಟದ ಬಗ್ಗೆ ಯೋಚಿಸುವೆನೆ! ಅಷ್ಟೂ ಅಲ್ಲದೆ ಕೃತಿಗಳು ಮುಖ್ಯವಾಗಬೇಕೇ ಹೊರತು ಕೃತಿಕಾರರಲ್ಲಿ" ಎಂದು ಹೇಳಿದ ಮುಖವನ್ನು ಪುನಃ ಅಳಿಸಿಕೊಂಡಳು. ಡಂದುಂ ಡಾಲಿಕಾಡಿದ ಟಿಕಿಪಿಕೆ ಥಂಅಪೋಡ ಸಮಯಕ್ಕೆ ಸರಿಯಾಗಿ ಕಾಫಿಯನ್ನಿಟ್ಟ ಸುಧನ್ವ ಮೊದಲು ಕಾಲಿನ ಸ್ಟೂಲನ್ನೆಳೆದುಕೊಂಡು ಗುಸಿಗಳತೆಯಲ್ಲಿ ಕುಳಿತು ಕುತೂಹಲ್ಲ ತಳೆದರು ಪರಸ್ಪರ ಮುಖಗಳನ್ನು ನೋಡಿಕೊಳ್ಳಬೇಪ್ಪು. ಆಕಸ್ಮಿಸುವ ನಿರಾಕರಿಸುವ ಕ್ರಿಯೆಯನ್ನು ತಾವೂ ಪೂರ್ವಭಾವಿಯಾಗಿ ಆಫರ್ ಮಾಡಿಕೊಂಡಿದ್ದರೇನೋ! ಸಡುಪೆ ಬ್ಲಾಯಿ ಹಾಕಲಿಲ್ಲ. ನಾನು ಹಸ್ತಪ್ರತಿಯ ಪುಟಗಳನ್ನು ಪ್ರಯುಚಲ್ಸಾರಂಭಿಸಿದ್ದು ಕೇವಲ ಕಾಲುಕ್ಷೇಪಕ್ಕಲ್ಲವೇ ಅಲ್ಲ. ದ್ದಲ್ಲಿಡಲಿಂದು ದಳಿಪ ದುಂಡ

ಸರ್ಗಗಳನ್ನು ಒಂದೊಂದಾಗಿ ಕ್ರಮಿಸಿ ಮಿಳನ ಸರ್ಗಕ್ಕೆ ತಲುಪಿದೆ. ಅದರಲ್ಲಿ ಅದೇ ತಾನೆ ಹೇಮಕೆರೆಡ್ಡಿ ಮಲ್ಲಮ್ಮನ ಕಥೆ ನಾಟಕ ಪ್ರದರ್ಶನದ ಶತಮಾನೋತ್ಸವ ಸಮಾರಂಭ ಮುಗಿದಿರುವುದು, ಹೆಬ್ಬಟ ಗೌಡರ ವ್ಯಾಪಕ ಸೂತ್ರಧಾರ ಸೂರ್ಯಪ್ರತಾಪರೆಡ್ಡಿಯನ್ನು ಸೇರಿದ ಭೂರಿಯ ಸಂಭವನೀಯ ಪ್ರತಾಪ ತಟ್ಟಾಟೋಪ ಕುರಿತಂತೆ ಯೋಚಿಸತೊಡಗಿದೆ. ನಾಟಕ ಮುಗಿದಾದ್ದರಿಂದ ಬಳಿಕ ಕಂಪನಿಯಲ್ಲಿ ಮಾಲಕ ಜಲಿಂದರ ಪಾಗಲಿಯು ಖಾಯಂ ಸ್ಥದಸ್ಯನಾಗಿ ಉಳಿಯುವನೋ! ಅಥವಾ ಹೊಳಪೆ ಕೇಳದೆ ಹೊರಡುವನೋ ಎಂಬುದೂ ನಿಗೂಢವೆ! ಪಾರ್ಥ ರಾಸಾನಿಯ ಕೊಲೆಯನ್ನು ಮಾಡಿಸದಿದ್ದಲ್ಲಿ ಚೆನ್ನಾಗಿರುತ್ತಿತ್ತೇನೋ! ಆದರೆ ಕ್ಲೈಮಿಕ್ಸ್ ಸಂಭವಿಸಿರುವುದು! ಅದಕ್ಕೆ ಅಚಾನಕ್ಕಾಗಿ ಕೊಲೆಯನ್ನು ಸೃಷ್ಟಿಸಿರುವಂತಿದೆ. ಕೊಲೆಗಾರನ ಪಟ್ಟವನ್ನು ಶಲ್ಪಿ ಪದ್ಮನಾಭಂ ಕೊರಳಿಗೆ ಸುತ್ತಬೇಕೆಂದರೆ ಅವರಿಬ್ಬರೂ ಪಾತ್ರಗಳ ನಡುವೆ ಇರಬಹುದಾದ ವೈಷಮ್ಯಕ್ಕೆ ಕಾರಣಗಳನ್ನು ಇಮ್ಯಾಜಿನೇಷನ್ ಮೂಲಕ ಹುಡುಕಬೇಕು. ಅಥವಾ ರಾಸಾನಿ ಆತ್ಮಹತ್ಯೆ ಮಾಡಿಕೊಂಡಿರುವನೆಂದು ಪ್ರಸ್ತಾಪಿಸಿದರೆ ಹೇಗೆ! ಅದಕ್ಕೂ ಕಾರಣಗಳನ್ನು ಶೋಧಿಸಬೇಕು. ಅವಿವಾಹಿತನಿರುವ ತಾನು! ಪ್ರತಿಭಾವಂತ ವಾಸ್ತುಶಿಲ್ಪಿಯಾಗಿರುವ ತಾನು! ತನ್ನ ಪ್ರತಿಭೆ ಸಮಾಧಿ ಸ್ಮಾರಕಗಳಷ್ಟೆ ನಿರ್ಮಾಣಕ್ಕೆ ಸೀಮಿತಗೊಂಡಿರುವುದೆಲ್ಲಗೆ ಎಂದು ಆಂತರಂಗಿಕವಾಗಿ ನರಳುತ್ತಿರುವ ತಾನು! ಸಮಾಧಿಗಳ ನಿರ್ಮಾಪಕನಾದ ತನ್ನನ್ನು ಯಾವ ಹುಡುಗಿ ಮದುವೆಯಾದಾಳೆಂದು! ಕೊರಗುತ್ತಿರುವ ತಾನು ಜುಗುಪ್ಸೆ ಹೊಂದಿ ಆತ್ಮಹತ್ಯೆ ಮಾಡಿಕೊಳ್ಳುವುದು ಸಹಜ. ಆದರೆ ಅದು ಕೊಲೆ ಎಂದರೆ ಅದನ್ನು ಸಾಬೀತು ಪಡಿಸುವ ಸೆಲುಪಾಗಿ ತೀಖಕ ಕ್ರಿಮಿನಾಲಜಿಯನ್ನು ಅಧ್ಯಯನ ಮಾಡುವುದು ಅಗತ್ಯ. ರಾಸಾನಿಯ ದುರಂತ ಅಂತ್ಯವನ್ನು ಹೇಗಾದರೂ ನಿಭಾಯಿಸಬಹುದು. ಆದರೆ ಪದ್ಮಾವತಿಯ ಬಿದುಕನ್ನು ಸುಖಾಂತ್ಯಗೊಳಿಸದಿದ್ದಲ್ಲಿ ಪಾಚಕರು ಕ್ಷಮಿಸಲಾರರು! ಯಾವುದೇ ಕೃತಿಯು ಇಷ್ಟವಾವುದೇ ವಿಸ್ತು ಹಲವರ ಮನಸ್ಸಿನಲ್ಲಿ ಹುಲುವು ಆಕಾತಗಳಲ್ಲಿ ಮರುಹುಟ್ಟು ಪಡೆಯುವುದು ಸಹಜ.

ಇಲ್ಲಿ ತನಿಕೆಳ್ಳಿ ಸಾಧನಾಪಾರಧಿಯು ಜಾಲಯಮಾನವೇಗ್ಯ ಬೇರೆ, ನಮ್ಮ ಜ್ಞಾಯಮಾನವೇ ಬೇರೆ. ಮಾನು ಈತನ ತಾಪ್ರಂಬರಿಯನ್ನು ಮಸರ್ನಿರೂಪಿಸಿದಲ್ಲಿ ಹೊಮ್ಮಿದ ಆಕಾರ ಪಡೆಯಲೂಬಹುದು, ಪಾತ್ರಗಳು ಅದಲು ಬದಲಾಗಲೂಬಹುದು. ತೆಲುಗಿನ ಪ್ರತಿಪತ್ತಪಮ್ಮ ಕನ್ನಡದ ಪರಿಸರಕ್ಕೆ ಒಗ್ಗಿಸಲೂಬಲ್ಲುದು! ಈ ಪ್ರಕಾರವಾಗಿ ಯೋಚಿಸುತ್ತಿದ್ದ ಪ್ರಸನ್ನ ಮುಖವಿದ ಭಾವನೆಗಳನ್ನು ಅಂತರಂಗದಲ್ಲಿ ಹೊಳೆಯುತ್ತಿದ್ದ ಧ್ವನಿಪ್ರಪಂಚವನ್ನು ತಾನು ಗ್ರಹಿಸುತ್ತಲೇ ಇದ್ದ ಪದ್ಮಾ ಪುತ್ರ ಬಿಡ "ನೀನು ಏನು ಯೋಚಿಸುತ್ತಿದ್ದಿಯ ಎಂದು ಗೊತ್ತು. ಆದರೆ ಕುತೂಹಲಕ್ಕೆ ಕೇಳುತ್ತಿರುವೆ, ನಿನ್ನ ನಿರೂಪಣೆಗೂ ನಿನ್ನ ನಿರೂಪಣೆಗೂ ಭಿನ್ನವಿರುತ್ತದೆ ಕುರಿತು ತಾನೆ! ಯೋಚಿಸಬೇಡ, ನೀನು ಹೇಗೆ ಬರೆದರೂ ನಮಗೆ ಸಂತೋಷವೇ. ಕಾದಂಬರಿ ನಿನ್ನ ಹೆಸರಿನಲ್ಲಿಯೇ ಇರಲಿ, ಅದನ್ನು ಪ್ರಕಟಿಸುವ ಹೊಣೆಯೂ ನನ್ನದೇ. ಆಧಕ ಅಧಿಕಾರ ಬಿಡುಗಡೆ ಕಾರ್ಯಕ್ರಮಕ್ಕೆ ನನ್ನನ್ನು ಕರೆಯುವುದನ್ನು ಪಾತ್ರ ಮರೆಯದಿರು ಅಲ್ಲಿಯವರೆಗೆ ಬಿಡುಕಿದ್ದಲ್ಲಿ ಕೈಕಾಲು ಗಟ್ಟಿಯಾಗಿದ್ದಲ್ಲಿ ಖಂಡಿತ ಬರುವೆ. ಧ್ವನಿಸುಧನ್ವರ ಜೊತೆಯಲ್ಲಿ" ಎಂದು ಹೇಳಿದ ನಿರ್ಲಿಪ್ತತೆಯಿಂದ ಆತ ತನ್ನ ಮಾತಿನಿಂದ ಪರಿಚಯಿಸಿದ್ದ ಜುಗುಪ್ಸೆಯ ಇನ್ನೊಂದು ಮುಖವನ್ನು ಕೇಳಿ ಬೆಸರ ಮತ್ತು ಪ್ರಿರಣೆ ಒಟ್ಟಿಗೆ ಹುಟ್ಟಿದವು. ಸುಧನ್ವರ ಕಡೆ ಪ್ರಶ್ನಾರ್ಥಕದ ನೋಟ ಬೀರಿದೆ, ಅದನ್ನು ಅರ್ಥಮಾಡಿಕೊಂಡವರಂತೆ ಪರಳಜೀವಿ..

.."ಒಳ್ಳೆಯ ಕಥೆಯಾಯಿತಲ್ಲ ಧನ್ಯರು! ಇಷ್ಟೆಲ್ಲಾ ಶ್ರಾಪವನ್ನು ಅನುಭವಿಸಿ ತಜ್ಞವೈದ್ಯರಿಗೆ ತೋರಿಸಿದ್ದೂ ವ್ಯರ್ಥಾ ಅಯಿತು ಬಿಡು. ಸಾಯಲು ನಿರ್ಧರಿಸಿರುವಿ. ಪ್ರರಿದ ಮೇಲೆ ನಾವ್ಯಾಕೆ ಇಲ್ಲಿರುವುದು!" ಎಂದು ತಾಬ್ಯೇಸದ ವ್ಯಕ್ತಪಡಿಸುತ್ತಲೇ ಮೊಣಕಾಲುಗಳಿಗೆ ಕೈಗಳನ್ನೂರಿಕೊಂಡವರೆ ಪದ್ಮಾ ಕಡೆ ತಿರುಗಿ "ನೀವೂ ನಿಮ್ಮೂರಿಗೆ ಹ್ಲೊರಟುಬಿಡಿ. ಈ ಪುನ್ರೆಯಲ್ಲಿ ತಾನೊಬ್ಬನೇ ಪಿಡ್ದು ಪಿನಾಪದರು ಮಾಡಿಕೊಳ್ಳಲ್ಲಿ ಬೇಡವೆನ್ನುವರ್ಯಾರು! ಸ್ನೇಹಿತರ ಅಭಿಪ್ರಾಯಗಳಿಗೆ ಬೆಲೆ ಕೊಡುವುದು ಒಳ್ಳೆಯ ನಾಗರಿಕರ ಲಕ್ಷಣ" ಎಂದು ಸಿಡಿಮಿಡಿಗುಟ್ಟಲಾರಂಭಿಸಿದರು. ನಾನೇ ಅವರ ಕೈಹಿಡಿದು ಕುಳ್ಳಿರಿಸಿದೆ. ಒಂದೆರಡು ನಿಮಿಷಗಳ ಬಳಿಕ ಉದ್ವೇಗವನ್ನು ನಿಯಂತ್ರಣಕ್ಕೆ ತಂದುಕೊಂಡರು. ಅದಕ್ಕೂ ಪಾರ್ಥಸಕಾರಾತ್ಮಕವಾಗಿ ಸ್ಪಂದಿಸುವ ಸೌಜನ್ಯ ತೋರಲಿಲ್ಲ. ತನ್ನ ಕಣ್ಣಪಕೆ ಪಡುವೆದ ತನ್ನದೇ ಕಳೇಬರವನ್ನು ಸೃಷ್ಟಿಸಿಕೊಂಡಿದ್ದನೇನೊ! ಸಂಸ್ಕಾರ ವಂಚಿತಗೊಂಡು ಅದು ಅನಾಥ ರೀತಿಯಲ್ಲಿ ಕೊಳೆಯುತ್ತಿರುವುದನ್ನೂ, ಮುನ್ಸಿಪಾಲಿಟಿಯವರು ತನ್ನ ಕಳೇಬರವನ್ನು ಸುತ್ತ ಮೂಗು ಮುಚ್ಚಿಕೊಂಡು ನಿಂತು ಹಿಡಿಹಿಡಿ ಶಾಪ ಹಾಕುತ್ತಿರುವುದನ್ನು ಕಲ್ಪಿಸಿಕೊಳ್ಳಲಾರಂಭಿಸಿದ್ದನೇನೊ! ತನ್ನ ಕಳೇಬರಕ್ಕೆ ಅದರಲ್ಲೂ ಮಾಧ್ವವಿಧಿಯ ಸಂಸ್ಕಾರಕ್ಕೆ ಸುಧನ್ವರಂಥ ಮಾಧ್ವ ಪ್ರಮುಖರು ತಡೆಸಬೇಕಾಗಿಬರಬಹುದು ಎಂದು ಯೋಚಿಸಿದನೇನೊ! ತನ್ನ ಕಣ್ಣುಗಳಲ್ಲಿ ತನ್ನ ನಿಸ್ತೇಜ ಬಿಂಬವನ್ನು ನೋಡಿಕೊಳ್ಳುತ್ತಿರುವಂತೆಲ್ಲಂತ್ತೆ ನಿಧಿದಾಗಿ ನಿಗುರಿಬಿಟ್ಟ ಪ್ರಮೆಲ್ಲಗೆ ಮಲೆಯನ್ನೆತ್ತಿದ್ದ. ಮೊಟದಿಂದ ಕ್ಷಮೆ ಯಾಚಿಸಿದಂಗ ಮನಸ್ಸಿನ ಕ್ಲಿಣತೆಯನ್ನು ಪ್ರವೀಕರಿಸುವಲ್ಲಿ ಅಂತೂ ಪ್ರಯತ್ನಸ್ಥಿಯಾದ. ಗಳಿಕೆಯ ಪ್ರಗತಿಯಂಗ ಈ ಪರಿಸ್ಥಿತಿಯಲ್ಲಿ ಎಂಥವರಿದ್ದರೂ ಹೀಗೆಯೇ ಮಾತಾಡುತ್ತಿದ್ದರು. ಸುಧನ್ವ ಮನಸ್ಸಿನೈಹಿಕ ಪರಿಸ್ಥಿತಿ ಸವಗೆ ಪಾತ್ರ ಅರ್ಥವಾಗಲು ಸಾಧ್ಯವೇ. ಹೊರತು ತಜ್ಞವೈದ್ಯರಿಗಲ್ಲ. ಮಹಡಾಯ ವವರೆಂದು ನೀವಲ್ಲದೆ ಇನ್ಯಾರು ದಿಕ್ಕು. ತಂದೆ ಅಂದ್ರೂ ನೀವೇ, ತಾಯಿ ಅಂದ್ರೂ ನೀವೇ. ಮನಸ್ಸಿಗೆ ನೋವಾಗಿದ್ರೆ ಕ್ಷಮಿಸು" ಎಂದು ಮೊಣಕಾಲಿಗೆ ಕೈಯೂರಿ ಎದ್ದು ನಿಂತ. ಸುಧನ್ವ ಕೊಂಚ ಅಲ್ಲುಪರನನ್ನ ಮುಖಸೂಚ್ಯವಿಪಡಿಸಿ ಇರಲಿಲ್ಲ. ಗಳಿಗೆ ನಿಂತು ನಿದಾನವಾಗಿ ಯಂಥಕ ಕ್ಯಾದಲ್ಲಿ ದೃಶ್ಯಬಿಂಬ ಮತ್ತು / 361

"ನೀನು ಚೆನ್ನಾಗಿದ್ದೀಯ, ಚೆನ್ನಾಗಿರಬೇಕು. ಅದು ಬಿಟ್ಟು ಯಾವಾಗಲೂ ಸಾವನ್ನು ಕುರಿತು ಯೋಚಿಸಬಾರದು, ವೈದ್ಯನಾಗಿ ನಾನು ಸಾವನ್ನು ದ್ವೇಷಿಸುವುದಿಲ್ಲ, ಈ ಭೂಮಿ ಮೇಲೆ ನಾವ್ಯಾರು ಶಾಶ್ವತವಲ್ಲ, ಸಮಯ ಬಂದಾಗ ನಾವೆಲ್ಲರೂ ಸಾಯುವವರೆ. ಅದು ಬಂದಾಗ ಬರಲಿ, ಆದರೆ ಸಾವು ಮತ್ತು ಬದುಕಿನ ನಡುವಿನ ಅವಧಿಯಲ್ಲಿ ಬದುಕಲು ಶ್ರಮಿಸುವುದು, ಬದುಕನ್ನು ಪ್ರೀತಿಸುವುದು ಎಲ್ಲಕ್ಕಿಂತ ಮುಖ್ಯ ತಾನೆ!" ಎಂದು ಮಾರ್ಮಿಕವಾಗಿ ಸಮಾಧಾನಪಡಿಸಿದ. ತನ್ನ ಗೆಳೆಯನ ಮಾತನ್ನು ಆಲಿಸುತ್ತ ಮೈಮರೆತ ಪಾರ್ಥನ ತುಟಿ ಮತ್ತು ಕಣ್ಣ ರೆಪ್ಪೆಗಳ ಮೇಲೆ ಕೆಲವು ನೊಣಗಳು ವಿಶ್ರಮಿಸುವ ಪ್ರಯತ್ನ ಆರಂಭಿಸಿದ್ದವು, ಆದರೆ ತಾನು ಅವುಗಳನ್ನು ನಿವಾರಿಸಲು ಯತ್ನಿಸುತ್ತಿರುವನೇನೋ ಎನ್ನುವಂತೆ..

"ನಾನು ಹುಟ್ಟಿದಾಗಲೇ ಸತ್ತಿದ್ದೆ ಕಣೋ, ಶೈಶವ ವ್ಯಾಧಿಗಳನ್ನು ಗೆಲ್ಲುತ್ತಲೇ ಬೆಳೆದದ್ದೂ ಪವಾಡವೆ. ತನಿಕೆಳ್ಳ ಜಮೀನ್ದಾರರ ವಂಶದ ಕುಡಿ ತುಕ್ಕುಗಳನ್ನು ತನ್ನ ಬದುಕಿನುದ್ದಕ್ಕೂ ನಿವಾರಿಸಿಕೊಳ್ಳಲೇ ಇಲ್ಲ, ನಾನೂ ತುಕ್ಕು ನನ್ನ ಹೆಂಡತಿಯೂ ತುಕ್ಕು, ಹುಟ್ಟಿದ ಮಕ್ಕಳೂ ತುಕ್ಕು. ಬದುಕಿನುದ್ದಕ್ಕೂ ಬರೀ ತುಕ್ಕುಗಳ ಸಹವಾಸ ಮಾಡುವುದಾಗಿದೆಯಲ್ಲಾ, ಇದೊಂದು ನರಕ, ಇದೊಂದು ದುರಂತ. ನಿನ್ನಂಥ ಗೆಳೆಯ ಹುಟ್ಟಿದೊಡನೆ ದೊರಕಿದ್ದಲ್ಲಿ ನಾನೀ ಜೋಭದ್ರ ಸ್ಥಿತಿಯಲ್ಲಿರುತ್ತಿರಲಿಲ್ಲವೇನೋ! ನೆನಪಿರುವ ಹಾಗೆ ನಿನ್ನ ನನ್ನ ಪರಿಚಯ.." ಎಂದು ಹೊಸಚರ್ಚೆಯನ್ನು ಆರಂಭಿಸಬೇಕೆನ್ನುವಷ್ಟರಲ್ಲಿ ಸುಧನ್ವ ಸಮಯ ಪ್ರಜ್ಞೆಯಿಂದ..

"ಪರಿಚಯವಾದೆವು, ಗೆಳೆಯರಾದೆವು, ಸುಖ ದುಃಖಗಳಿಗೆ ಪರಸ್ಪರ ಸ್ಪಂದಿಸುತ್ತಲೇ ವರ್ಷಗಳನ್ನು ನೂಕಿದೆವು, ನಾನು ನಿನಗೇನು ಮಾಡಿರುವಿ ಎನ್ನುವುದಕ್ಕಿಂತ ನೀನು ನನಗೇನು ಮಾಡಿರುವಿ ಎನ್ನುವುದು ಮುಖ್ಯ, ಅದನ್ನೆಲ್ಲ ನೆನಪಿಸಿಕೊಂಡರೆ ನಿನ್ನ ಋಣ ತೀರಿಸುವುದು ಈ ಜನ್ಮದಲ್ಲಿ ಸಾಧ್ಯವಿಲ್ಲ, ಈ ಸಂದರ್ಭದಲ್ಲಿ ನಾನು ವೈದ್ಯ ನೀನು ನನ್ನ ರೋಗಿ ಅಷ್ಟೆ, ವೈದ್ಯ ಧರ್ಮ ಎಷ್ಟು ಮುಖ್ಯವೋ, ರೋಗಿಯ ವಿಧೇಯತೆಯೂ ಅಷ್ಟೇ ಮುಖ್ಯ. ಆದರೆ ಅದೆಲ್ಲ ಈಗ್ಯಾಕೆ! ಇವರು ನಮ್ಮ ಅತಿಥಿ, ತಮ್ಮ ತಲೆಯಲ್ಲಿ ವ್ಯಾಧಿಗಳನ್ನು ಒಟ್ಟರಿಸಿಕೊಂಡು ಹೋಗದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ ತಾನೆ! ಆದ್ದರಿಂದ ಸಂತೋಷ ನೀಡುವ ಮಾತುಗಳನ್ನು ಮಾತ್ರ ಆಡೋಣ, ಕೇಳೋಣ" ಎಂದು ನುಡಿದದ್ದು ಕೇಳಿದ ನನಗೆ ಸಂತೋಷವಾಯಿತು.

ನಿರೀಕ್ಷೆಗೆ ಮೀರಿದ ತಿಳವಳಿಕಸ್ಥ ಎಂದು ಭಾವಿಸಿದೆ. ಅವರ ಅನ್ನಿಸಿಕೆಯಂತೆ ನನ್ನ ತಲೆಯನ್ನು ತರಾವರಿ ವ್ಯಾಧಿಗಳು ಆಕ್ರಮಿಸಿದ್ದವು, ರಕ್ತದ ಕಣಕಣದಲ್ಲೂ ವಾರ್ಡುಗಳು, ರುಗ್ಣಶಯ್ಯೆಗಳು ನೆಲಸಿರಬಹುದೆಂಬ ಅನುಮಾನ ಕಾಣಿಸಿಕೊಂಡಿತ್ತು. ಅವುಗಳ ಪ್ರಭಾವದಿಂದಾಗಿ ನಾನೂ ಮೃತ್ಯು ಕುರಿತಂತೆ ಆಲೋಚಿಸಲಾರಂಭಿಸಿದ್ದೆ, ಜೀವನ ಕ್ಷಣಿಕ ಭಂಗುರು ಎಂದು ಭಾಸವಾಗಲಾರಂಭಿಸಿತ್ತು ಬೇರೆ. ಯಾವ ಪುರುಷಾರ್ಥಕ್ಕೆ ಮದುವೆಯಾಗುವುದು ಹೆಂಡತಿಗೆ ಗಂಡನಾಗುವುದು, ಮಕ್ಕಳಿಗೆ ತಂದೆಯಾಗುವುದು ಎಂದು ವಿಲೋಮ ರೀತಿಯಲ್ಲಿ ಯೋಚಿಸತೊಡಗಿದ್ದೆ. ಆದರೆ ಸುಧನ್ವ ಹೇಳುತ್ತಿರುವುದು ನಿಜ, ಸಾವು ಬದುಕಿನ ಅವಧಿಯನ್ನು ಉತ್ಕಟವಾಗಿ ಚೈತನ್ಯಶೀಲತೆಯಿಂದ ಅನುಭವಿಸಬೇಕು, ಬದುಕುವುದಕ್ಕಾಗಿಯೇ ಬದುಕ ಬೇಕು. ಸಮಾಧಾನದ ಉಸಿರುಬಿಡುತ್ತ ಅಭಿಮಾನದಿಂದ, ಶಿಷ್ಯತ್ವ ಸಹಜ ವಿಧೇಯತೆಯಿಂದ ಅವರ ಕಡೆ ನೋಟ ಹರಿಸಿದೆ. ಆದರೂ ಸೌಜನ್ಯದ ದೃಷ್ಟಿಯಿಂದ..

"ಇಲ್ಲಿಗೆ ಬರುವ ಮೊದಲು ಭಾವಿಸಿದ್ದೇ ಬೇರೆ, ಇಲ್ಲಿಗೆ ಬಂದಾದನಂತರ ಸಂಭವಿಸಿದ್ದೇ

ಬೇರೆ. ಸಾಹಿತ್ಯೇತರ ಕಾರಣಗಳಿಗೂ ಮನುಷ್ಯ ಸಂಬಂಧಗಳು ಮುಖ್ಯ ಎಂದು ಅರ್ಥವಾದದ್ದೇ ನಿಮ್ಮಿಂದಾಗಿ. ಆದ್ದರಿಂದ ನನ್ನನ್ನು ಅನ್ಯನೆಂದು ದಯವಿಟ್ಟು ಭಾವಿಸಬೇಡಿ, ಇದರಿಂದ ಮನಸ್ಸಿಗೆ ನೋವಾಗ್ತದೆ ಸುಧನ್ವರವರೆ" ಎಂದೆ ವಿನೀತ ಭಾವದಿಂದ. ಮಾನಸಸರೋವರದಂಥ ಅವರ ಮನಸ್ಸುಗಳು ನನ್ನ ಮಾತಿನಿಂದ ಕಲಕದೆ ಇರಲಿಲ್ಲ. ಅವರಿಬ್ಬರು ಪರಸ್ಪರ ಮುಖಗಳನ್ನು ನೋಡಿಕೊಂಡು ಕೃತಜ್ಞತಾ ಭಾವವನ್ನು ಪ್ರತಿಫಲಿಸಿದರು. ಪಾರ್ಥನ ಪರವಾಗಿ ಸುಧನ್ವರೇ..

"ಖಂಡಿತ ಹಾಗೆ ಭಾವಿಸಿಲ್ಲ, ಹಾಗೆ ಭಾವಿಸಿದ್ದಲ್ಲಿ ನಮ್ಮ ಪಾರ್ಥಸಾರಥಿ ನಿಮ್ಮ ಬಳಿ ತನ್ನ ಖಾಸಗಿ ವಿಚಾರಗಳನ್ನು ಪ್ರಸ್ತಾಪಿಸುತ್ತಲೇ ಇರಲಿಲ್ಲ. ನನಗೆ ತಿಳಿದಿರುವಂತೆ ಪಾರ್ಥನಿಗೆ ರಾಜ್ಯದೆಲ್ಲೆಡೆ ಗೆಳೆಯರಿದ್ದಾರೆ, ಪ್ರತಿ ಊರಲ್ಲೂ ತನ್ನ ಸಂಬಂಧಿಕರಿದ್ದಾರೆ, ಆದರೆ ಅದೆಲ್ಲ ಒಂದು ಕಾಲದಲ್ಲಿ, ಈಗಲ್ಲ. ನೋಡಿಯೂ ನೋಡದವರಂತೆ, ಕೇಳಿಯೂ ಕೇಳದವರಂತೆ ಹೋಗುವವರೇ ಹೆಚ್ಚು. ಆದರೆ ನೀವು ಅವರೆಲ್ಲರಿಗಿಂತ ಭಿನ್ನ. ಅಸಹ್ಯಪಟ್ಟುಕೊಂಡು ಹೊರಡದಿದ್ದುದು ನಿಮ್ಮ ದೊಡ್ಡ ಗುಣ. ದಿನಗಟ್ಟಲೆ ಇರುವಿರಿ, ಸಹೃದಯತೆಯಿಂದ ಸ್ಪಂದಿಸಿರುವಿರಿ, ಮಾನಸಿಕವಾಗಿ ಬೆರೆತಿರುವಿರಿ, ಇದಕ್ಕಿಂತ ಇನ್ನೇನು ಬೇಕು ಹೇಳಿ" ಎಂದರು ಭಾವಪರವಶರಾಗಿ. ಅವರ ಸಮಯೋಚಿತ ಮಾತುಗಾರಿಕೆಯಿಂದ ನನ್ನ ಮನಸ್ಸೂ ಆರ್ದ್ರಗೊಂಡಿತು.

"ನಿಮ್ಮನ್ನು ಆಯ್ಕೆ ಮಾಡಿದ ಹಿಂದಿನ ಉದ್ದೇಶವೇ ಇದು. ಅಷ್ಟು ದೂರದಿಂದ ಬಂದಿರಿ, ಪ್ರೀತಿಯ ಇನ್ನೊಂದು ಮುಖವನ್ನು ತೋರಿಸಿದಿರಿ, ಒಡಹುಟ್ಟಿದವರಿಗಿಂತ ಮಿಗಿಲಾದಿರಿ, ಇಷ್ಟು ಸಾಕಲ್ಲವೆ!" ಎನ್ನುತ್ತ ಪಾರ್ಥ ಕಣ್ಣಗಳ ಕೊನೆಯನ್ನು ಬರಿಗೈಯಿಂದ ಒರೆಸಿಕೊಂಡನು.

++++

ಆ ರಾತ್ರಿ ನಿದ್ದೆ ಬಾ ಅಂದರೆ ಹೇಗೆ ಬಂದೀತು! ನನ್ನ ಸ್ಥಿತಿಗಿಂತ ಪಾರ್ಥ ಸ್ಥಿತಿಯೂ ಭಿನ್ನವಿರಲಿಲ್ಲ. ಹನ್ನೊಂದರ ನಂತರ ನಾನು ಹಾಸಿಗೆ ಸೇರಿದರೂ ತಾನು ಮಾತ್ರ ಓದಲು ಆಯ್ಕೆ ಮಾಡಿಕೊಂಡ ಕೃತಿ ಗಾತ್ರದಲ್ಲಿ ಬೃಹತ್ತಾಗಿತ್ತು. ಸಲೀಸಾಗಿ ಹಿಡಿದುಕೊಳ್ಳಲು ತನ್ನ ಕೈಗಳಲ್ಲಿ ತ್ರಾಣವಿರಲಿಲ್ಲ ಬೇರೆ, ವ್ಯಾಸಪೀಠ ಮನೆಯಲ್ಲಿಲ್ಲವೇ ಎಂದು ಕೇಳಬೇಕೆಂದುಕೊಂಡೆನಾದರೂ ಸಾಧ್ಯವಾಗಲಿಲ್ಲ, ಅದರ ಓದನ್ನು ಮುಗಿಸಿದನೋ ಇಲ್ಲವೋ! ತುಂಬ ಹೊತ್ತಿನ ಬಳಿಕ ಹಾಸಿಗೆಯಲ್ಲಿ ಮೈಚೆಲ್ಲಿದ, ತನ್ನನ್ನು ಮಾತನಾಡಿಸುವ ಸಾಹಸ ಮಾಡಲಿಲ್ಲ. ರಾತ್ರಿ ಇಡೀ ಮಗ್ಗುಲು ಬದಲಾಯಿಸುತ್ತಿದ್ದ, ಏನನ್ನೋ ಕನವರಿಸುತ್ತಿದ್ದ, ಪದೇ ಪದೇ ಎದ್ದು ಕೂಡ್ರುತಲಿದ್ದ, ನನ್ನನ್ನೂ ಎಚ್ಚರಿಸಲು ಅನೇಕ ಸಲ ಪ್ರಯತ್ನಿಸಿದ. ಅರೆ ನಿದ್ರೆ ಅರೆ ಎಚ್ಚರದಲ್ಲಿದ್ದ ನಾನು ಅದಕ್ಕೆ ಸ್ಪಂದಿಸದೆ ಗಾಢ ನಿದ್ದೆಯಲ್ಲಿರುವಂತೆ ಅಭಿನಯಿಸುವುದು ಅನಿವಾರ್ಯವಾಯಿತು. ಅದಕ್ಕೆ ಕಾರಣಗಳು ಒಂದೇ ಎರಡೇ! ಗರುಡ ಪುರಾಣವೇ ಮನುಷ್ಯ ರೂಪದಲ್ಲಿರುವಂಥ ತನ್ನೊಂದಿಗೆ, ಪಲ್ಗುಣಿಯೇ ತನ್ನ ಕಣ್ಣುಗಳಲ್ಲಿ ಆಶ್ರಯ ಪಡೆದಿರುವುದೇನೋ ಎಂಬಂತಿರುವ ವ್ಯಕ್ತಿಯೊಂದಿಗೆ ಮನಸ್ಸು ತೆರೆದು ಮಾತನಾಡಲಾಗುವುದೆ! ಅದಕ್ಕೆಂದೇ ಎಚ್ಚರಗೊಳ್ಳಲಿಲ್ಲ. ಆದರೂ ಮಲಗಲು ಸಾಧ್ಯವಾಗಲಿಲ್ಲ.

ಕ್ರಮೇಣ ಒಲಿದ ನಿದ್ದೆಯೂ ಪರಿಪೂರ್ಣ ನಿದ್ದೆಯಾಗಿರಲಿಲ್ಲ. ಅದೊಂದು ದುಃಸ್ವಪ್ನಗಳ ಪರಿಶೆ. ಹೇಮರೆಡ್ಡಿ ಮಲ್ಲಮ್ಮನ ಕಥೆ ನಾಮಾಂಕಿತದ ಕಾದಂಬರಿಯ ಪಾತ್ರಗಳು ಕಾಣಿಸಿಕೊಂಡು ಬೆಚ್ಚಿ ಬೀಳಿಸಲಾರಂಭಿಸಿದವು, ಮರುನಿರೂಪಿಸುವ ಸಂದರ್ಭದಲ್ಲಿ ತಮ್ಮ ಜಾಯಮಾನವನ್ನು

ಬಿಡಲಿಸಿದೆಯಾದರೆ ಹುಷಾರ್ ಎಂದು ಎಚ್ಚರಿಸುತ್ತಿರುವಂತೆ ಭಾಸವಾಯಿತು. ಕಾಣಿಸಿಕೊಂಡ ರಾಸಾನಿ ತನ್ನ ಸಾಹಿನ ನಿಗೂಢ ಸುಳಿವು ನಿವೇದಿಸಿಕೊಳ್ಳತೊಡಗಿದ. ಪದ್ಮನಾಭಂನಂಥ ಅಭಿಜಾತ ಶಿಲ್ಪಿಯ ಕೈಯಿಂದ ಪ್ರಾರ್ಥ ಕೊಲೆ ಮಾಡಿಸಿದ್ದರೆ ತನಗೆ ದುಃಖವಾಗುತ್ತಿರಲಿಲ್ಲವೆಂದು ಹೇಳಿಕೊಂಡ. ಆದರೆ ಅವನನ್ನು ಹೊರತುಪಡಿಸಿ ಇನ್ನೊಬ್ಬರ ಕೈಯಿಂದ ಮಾಡಿಸಿಕೊಂಡಿರುವ ಕೊಲೆಯನ್ನು ಹೇಗೆ ಕ್ಷಮಿಸುವುದು ಎಂದು ಕೈಗಳನ್ನು ಹೊಸಕಿದ. ಈನ್ನ ಪುಣ್ಯಾಳೋ ಎಂಬಂತೆ ಕಾವಂಜಿಯನ್ನು ಮುಂದುವರಿಸಲಿರುವ ನೀನು ಮಾತ್ರ ಭಿನ್ನ ರೀತಿಯಲ್ಲಿ ಸಾವನ್ನು ವ್ಯವಸ್ಥೀಕರಿಸು ಎಂದು ಕೇಳಿಕೊಂಡ. ಪನ್ನಂಗಧರ ಜಯಾನಂದರಂಥ ಕ್ರಾಂತಿಕಾರಿ ಪಾತ್ರಗಳ ಕ್ರಿಟ್ರಾಟೋಪ ನಿಷ್ಠೆಯಲ್ಲಿದ್ದರೂ ಬೆಚ್ಚಿಬೀಳಿಸದೆ ಇರಲಿಲ್ಲ. ರಾಜಾರಾಯಂಗಿಗ ಬಲ್ಲಿದ್ದಾರ ಕಂರಶಶಾಂಕ ಮತ್ತು ಹರಿಶ್ಚಂದ್ರರೆಡ್ಡಿ, ಲಕ್ಷ್ಮೀ ಮತ್ತು ವನಜಾಕ್ಷಿ, ಶರಜ ಮತ್ತು ಸೂರ್ಯಪ್ರತಾಪರೆಡ್ಡಿ, ರಾಫಪ್ಪ ಮತ್ತು ಪಂಪಯ್ಯರಂಥ ಸ್ವಾಮಿದ್ವಯರು, ಜೌಗಲೆ ಮತ್ತು ಚಕ್ರವರ್ತಿ, ಹೆಬ್ಬಟಲಿ ಸೀತಾರಾಮರೆಡ್ಡಿ ಮತ್ತು ನರಸಯ್ಯ ಇಂಥ ಜೋಡಿ ಪಾತ್ರಗಳಿಗೆ ತಾರ್ಕಿಕ ಅಂತ್ಯ ದಯಪಾಲಿಸುವುದು ಯಾವುದೇ ಸೃಜನಶೀಲ ಲೇಖಕನಿಗೆ ಸವಾಲಿನ ಸಂಗತಿಯೇ ಸರಿ. ಆದರೆ ಇವು ಅವೆಲ್ಲಕ್ಕಿಂತ ಮುಖ್ಯವಾಗಿ ಪದ್ಮಾವತಿ ಪಾತ್ರ ನನ್ನನ್ನು ಕಾಡಲಾರಂಭಿಸಿತು. ಮೂಲಕಥನಕಾರ ಪಾರ್ಥ ಆಕೆಯನ್ನು ಸ್ನಿಗ್ಧ ಸುಂದರಿ ಎಂದೂ, ಅಭಿಜಾತ ಕಲಾಪ್ರಿಯೆ ಎಂದೂ, ಗಂಭೀರ ವ್ಯಕ್ತಿತ್ವ ಉಳ್ಳವಳೆಂದೂ ಪ್ರಮಾಣೀಕರಿಸಿರುವುದು ತಾನು ಮಾಡಿರುವ ದೊಡ್ಡ ಪರಪಾಟು ತನ್ನ ಉದ್ದೇಶ ಏನಿತ್ತೋ ಏನೋ! ಆದರೆ ನಾನು ಮಾತ್ರ ಆಕೆಗೆ ಕಾದಂಬರಿಯ ಕೇಂದ್ರ ಪಾತ್ರದ ಗೌರವ ನೀಡಬೇಕು. ಆಕೆ ತನ್ನ ನಿರುಪದ್ರವಿ ಸಹೋದರ ಜಲಂಧರನ ಸಂಗಡ ವಾಗಿಲಿಯನ್ನು ಬಿಡುವಳೋ, ಅಥವಾ ಅಲ್ಲಿಯೇ ನೆಲೆಸುವಳೋ ಎನ್ನುವುದು ಸಹ ನಿಗೂಢವೆ! ಕಾದಂಬರಿಯ ವಿವಿಧ ಸರ್ಗಗಳಲ್ಲಿರುವ ಆಖ್ಯಾನಗಳನ್ನು ಕೂಲಂಕಷ ಪರಿಶೀಲಿಸಿದರೆ ಕಂಪನಿಯನ್ನು ಜಲಂಧರ ವಿಸರ್ಜಿಸಿ ವಾಗಿಲಿಯಲ್ಲಿಯೇ ನೆಲೆ ಕಂಡುಕೊಳ್ಳಬಹುದು. ಅದು ಬಲವಂತವಾಗಿಯೋ, ಸ್ವಯಂ ಇಚ್ಛೆಯಿಂದಾಗಿಯೋ, ಅಥವಾ ಬೇರೆ ಏನಾದರೂ ಕಾರಣಗಳು ಕಥೆಯ ನೇಪಥ್ಯದಲ್ಲಿರುವವೋ! ಯಾವುದಕ್ಕೂ ಹೊರಡುವ ಪೂರ್ವದಲ್ಲಿ ಮೂಲಲೇಖಕ ಪಾರ್ಥಸಾರಥಿಯೊಂದಿಗೆ ಚರ್ಚಿಸಿ ತಿಳಿದುಕೊಳ್ಳುವುದು ಮುಖ್ಯವೆಂದು ನಿರ್ಧರಿಸಿದ! ಸ್ವಲ್ಪ ಪೂರ್ತಿಗೆ ನಿದ್ದೆ ಅವರಿಸಿತು.

ಮೂಡಣ ದಿಗಂತದಾದ್ಯಂತ ಕಾರ್ಮೋಡಗಳು ಪಟ್ಟೆಸಿದ್ದ ಪರಿಣಾಮದಿಂದಾಗಿ ಸೂರ್ಯ ಉದಿಸಿರುವುದು ತಟ್ಟನೆ ಗಮನಕ್ಕೆ ಬಾರಲಿಲ್ಲ. ಆರಾಗಿರಬಹುದೆಂದು ಭಾವಿಸಿದೆವೇ ಹೊರತು ಎಂಟಾಗಿರುವುದೆಂದು ಗಡಿಯಾರವನ್ನು ನೋಡುವುದರ ಮೂಲಕ ತಿಳಿದುಕೊಳ್ಳಲು ಪ್ರಯತ್ನಿಸಲೇ ಇಲ್ಲ. ಏನೋ ಒಂದು ರೀತಿಯ ದಣಿವು, ಕನಸು ಕನವರಿಕೆಗಳ ಉಪಟಳ ಜೊತೆ. ಯಾವಾಗ ಮಲಗಿದೆವೆಂಬುದು ಸಹ ತಿಳಿಯದು. ಅಂದ ಮೇಲೆ ನಿಗದಿತ ವೇಳೆಗೆ ಎಚ್ಚರಗೊಳ್ಳುವುದೆಲ್ಲಿ? ಸಾಧ್ಯ! ಕಿಟಕಿಗಳ ಕದ್ದುಗಳು ಗಾಳಿಯ ರಭಸಕ್ಕೆ ಮುಚ್ಚುವುದು ತೆರೆದುಕೊಳ್ಳುವುದು ನಡೆಸಿದ್ದವು. ಎಲ್ಲೋ ವಾಹನಗಳ ಓಡಾಟದ ಸದ್ದು, ಎಲ್ಲೋ ಹಾಲು ತರಕಾರಿ ಬೀದಿ ವ್ಯಾಪಾರಿಗಳು ಕೂಗುತ್ತಿರುವ ಸದ್ದು, ಎಲ್ಲೋ ಗಾರ್ದಭ ಶುನಕ ಸೂಕರಗಳಂಥ ಪರಿತ್ಯಕ್ತ ಬೀದಿ ಪ್ರಾಣಿಗಳು ಅಡಜಾಡುತ್ತಿರುವ ಸದ್ದು, ಕಾಗೆ ಗುಬ್ಬಿಗಳ ಕೂಗುಗಳಂತೂ ಸರೆ ಸರಿ! ಆದರೂ ನಾವು ಹೊದ್ದು ಮಲಗುವುದನ್ನು ಮುಂದುವರಿಸಿದೆವು. ನಿಜ ಹೇಳುವುದಾದರೆ ನಿಗದಿತ ವೇಳೆಗೆ ಸರಿಯಾಗಿ ಆತನನ್ನು ನಾನು ಎಚ್ಚರಿಸಬೇಕಿತ್ತು.

ನನ್ನನ್ನು ತಾನು ಎಚ್ಚರಿಸಬೇಕಿತ್ತು. ಆದರೆ ಆತ ಎದ್ದಿರಬಹುದೆಂದು ನಾನೂ, ನಾನು ಎದ್ದಿರಬಹುದೆಂದು ತಾನೂ ಅನ್ಯಥಾ ಭಾವಿಸಿದ್ದೇ ಪರಪಾಟಾಯಿತು. ಇನ್ನೂ ಎಷ್ಟು ಹೊತ್ತು ಮಲಗಿರುತ್ತಿದ್ದೆವೋ, ಅಥವಾ ಶಾಶ್ವತವಾಗಿ ಎಚ್ಚರಗೊಳ್ಳುತ್ತಿರಲಿಲ್ಲವೋ! ಪಕ್ಕದ ಮನೆಯ ಹೆಣ್ಣು ಮಕ್ಕಳಾದ ಶ್ರೀಲತಾ ಅರುಣಾರೀರ್ವರು ಬಾಗಿಲು ತೆರೆದು ಒಳ ಪ್ರವೇಶಿಸಿ ಅಂಕಲ್ ಅಂಕಲ್ ಎಂದು ಧನಿ ಎತ್ತರಿಸಿ ಕೂಗದಿದ್ದಲ್ಲಿ ನಾವು ಎಚ್ಚರಗೊಳ್ಳುತ್ತಿರಲಿಲ್ಲವೇನೊ! ಇನ್ನೂ ಮಲಗೇ ಇರುವ ಆಸೆ ಇದ್ದರೂ ಎಚ್ಚರಗೊಂಡೆವೇನೋ ಸರಿ, ಆದರೆ ಕಣ್ಣುಗಳನ್ನು ತೆರೆಯಲು ಕಷ್ಟವೆನಿಸಿತು. ಅಂಗೈಗಳಿಂದ ಉಜ್ಜಿಕೊಳ್ಳದಿದ್ದಲ್ಲಿ ಅದೂ ಸಾಧ್ಯವಾಗುತ್ತಿರಲಿಲ್ಲವೇನೊ! ಕಣ್ಣುಗಳನ್ನು ತೆರೆದರೂ ಇನ್ನೂ ನಸುಕಿರುವಂಥ ಅನುಭವ. ಕಿಟಿಕಿಯಿಂದ ಗಾಳಿಯೊಂದಿಗೆ ಒಳಸೂಸುತ್ತಿದ್ದ ಬೆಳಕಿನಲ್ಲಿ ಹೊಳೆಯಲಾರಂಭಿಸಿದ ಹದಿಹರೆಯದ ಆತ್ಮೀಯರು ಬಂಗಾಳ ಕೊಲ್ಲಿಯಲ್ಲಿ ರಾತ್ರಿಯಿಂದ ಕಾಣಿಸಿಕೊಂಡಿರುವ ಚಂಡಮಾರುತದ ಸುಳಿವು ವಾಚಿಸಿದರು.

ಅವರು ಸತ್ಯವಲ್ಲದೆ ಇನ್ನೇನನ್ನೂ ಹೇಳಿರಲಿಲ್ಲ. ನಿನ್ನೆ ರಾತ್ರಿ ವೇಗವಾಗಿ ಬೀಸುತ್ತಿದ್ದ ಗಾಳಿಯನ್ನು ಒಳಗೆ ಚರ್ಚೆಯಲ್ಲಿ ತನ್ಮಯರಾಗಿದ್ದ ನಾವ್ಯಾರೂ ಗಮನಿಸಿರಲಿಲ್ಲ. ರೇಡಿಯೋದಲ್ಲಿ ಪ್ರಾಂತೀಯ ವಾರ್ತೆಗಳನ್ನು ಸಹ ಆಲಿಸಿರಲಿಲ್ಲ. ಸುಧನ್ವ ಅಂಗಳದಿಂದ ವಾಪಸ್ಸಾಗಿ ಮಳೆಯಾಗುವ ಲಕ್ಷಣವಿರುವುದೆಂದೂ, ಯಾವ ಕಾರಣಕ್ಕೂ ಪಾರ್ಥ ತಲೆಯನ್ನು ತೊಯ್ಯಿಸಿಕೊಳ್ಳದೇ ಇರುವುದು ವಾಸಿ ಎಂದೂ ಎಚ್ಚರಿಕೆ ನೀಡಿದ್ದನ್ನೂ ನಾವು ಗಂಭೀರವಾಗಿ ಪರಿಗಣಿಸಿರಲಿಲ್ಲ. ರಾಯಲಸೀಮೆಯ ಬರಡು ನೆಲ ನೆನೆದು ಒದ್ದೆಯಾಗುವುದು ವರ್ಷಕ್ಕೊಂದೆರಡು ಸಲ ಮಾತ್ರ. ಮಳೆ ಬಂದರೆ ಕೇಡಲ್ಲ ಮಗ ಉಂಡರೆ ಕೇಡಲ್ಲ ಎಂಬ ಗಾದೆ ಮಾತಿರುವುದು ಬೇರೆ. ಕಿಟಿಕಿ ಬಾಗಿಲುಗಳವರೆಗೆ ಹೋಗಿ ಹೊರ ಅಮೂಲಾಗ್ರವಾಗಿ ಇಣುಕಿ ದಟ್ಟೈಸಿದ್ದ ಮೋಡಗಳನ್ನೂ, ಉದಯ ಸಮಯವನ್ನು ಲೆಕ್ಕಿಸದೆ ರಾಚುತ್ತಿದ್ದ ಕೋಲ್ಮಿಂಚುಗಳನ್ನೂ, ಮರಗಿಡಗಳು ಬಾಗುವಂತೆ ಬೀಸಿ ಅರ್ಭಟಿಸುತ್ತಿದ್ದ ಗಾಳಿಯನ್ನೂ ನೋಡಿ ವಾಪಸ್ಸಾದೆವು. ವಾತಾವರಣ ತಿಳಿಗೊಂಡ ಬಳಿಕ ಪ್ರಯಾಣ ಬೆಳೆಸಿದರೆ ಒಳ್ಳೆಯದೆಂದು ಪಾರ್ಥ ಹೇಳಿದ್ದಕ್ಕೆ ಸಮ್ಮತಿಸಿದೆ, ಮುಖಮಾರ್ಜನ ಮುಗಿಸಿಕೊಂಡಾದ ಬಳಿಕ ನಾನೇ ಕಾಫಿ ತಯಾರಿಸುತ್ತಿದ್ದ ವೇಳೆಯಲ್ಲಿಯೇ ಪಕ್ಕದ ಮನೆಯ ಅರುಣಾ ಇಡ್ಲಿಗಳಿಂದ ತುಂಬಿದ್ದ ತಟ್ಟೆಯನ್ನು ಹಿಡಿದು ತನ್ನ ತಂದೆಯ ಸಹಾಯದಿಂದ ಮನೆಯನ್ನು ಪ್ರವೇಶಿಸಿದಳು, ಮಧ್ಯಮ ವಯಸ್ಕ ಪರಂಧಾಮಯ್ಯ ಸಂತೃಪ್ತ ಡೇಗುಗಳನ್ನು ಹೊರಚೆಲ್ಲಿದಾದ ಬಳಿಕ ಪಾರ್ಥಸಾರಥಿಯ ಆರೋಗ್ಯವನ್ನು ಪರಾಂಬರಿಸಿದರಲ್ಲದೆ ಆರೋಗ್ಯಕ್ಕೆ ಸಂಬಂಧಿಸಿದ ಕೆಲವು ಸಲಹೆ ಸೂಚನೆಗಳನ್ನು ಮುಕ್ತಧ್ವನಿಯಲ್ಲಿ ನೀಡಿದರು. ಆಹಾರದ ಋಣ ತೀರಿಸುವ ಸಲುವಾಗಿ ಪಾರ್ಥ ತಲೆ ಅಲ್ಲಾಡಿಸುತ್ತಲೇ ಎರಡನೇ ಇಡ್ಲಿಗೆ ತನ್ನ ಎಂಜಲು ಗೈಯನ್ನು ತೊಳೆದುಕೊಳ್ಳಲೆಂದು ಬಚ್ಚಲಿಗೆ ಹೋದವನು ಮರಳದೆ ಅಲ್ಲಿಯೇ ಉಳಿದ, ಮಳೆ ಆರಂಭಗೊಳ್ಳುವುದಕ್ಕೂ ಮೊದಲೆ ಆಫೀಸಿಗೆ ಹೋಗುವ ಸಲುವಾಗಿಯೋ, ತನ್ನ ಪತ್ನಿ ಕೂಗಿದಳೆಂದು ಅನ್ಯಥಾ ಭಾವಿಸಿಯೋ ಪರಂಧಾಮಯ್ಯ ಮುಂಗೈಗಿದ್ದ ಫೆವರ್ಲೂಬಾ ನೋಡಿಕೊಂಡು ಮೆಲ್ಲಗೆ ಎದ್ದು ನಿಂತು ಬಚ್ಚಲ ಕೋಣೆ ಕಡೆ ನೋಡಿ ನಿಟ್ಟುಸಿರುಬಿಟ್ಟರು. ಬಳಿಕ ನನ್ನನ್ನು ಅಪಾದಮಸ್ತಕ ದಿಟ್ಟಿಸುತ್ತ ನಿಮ್ಮಂಥ ಗೆಳೆಯರಿಗಿರುವ ಕನ್ಸರ್ನಮೆಂಟು ತಾಳಿ ಕಟ್ಟಿಸಿಕೊಂಡಿರುವ ಹೆಂಡತಿಯರಿಗೆ ಇರುವುದಿಲ್ಲ ನೋಡಿ ಎಂದು ಹೇಳಿದವರೆ ಮುಂಬಾಗಿಲನ್ನು ಸಮೀಪಸಿದರು, ಬಳಿಕ ಏನ್ನೋ ನೆನಪಿಸಿಕೊಂಡು ಹಿಂತಿರುಗಿ ಇನ್ನೂ ಇರುವಿರಾದರೆ ಹುಷಾರ್, ಹಳೆ ಮನೆ,

ಸೋರಲೂಬಹುದು ಎಂದು ಹೇಳುವುದನ್ನು ತಾವು ಮರೆಯಲಿಲ್ಲ. ಅವರು ಹೇಳದಿದ್ದಲ್ಲಿ ನಾನು ಮನೆಯ ಹಳೆಯ ಜಂತಿಗಳನ್ನು ಎಣಿಸುತ್ತಿರಲಿಲ್ಲವೇನೊ! ನಿಸ್ಸಂದೇಹವಾಗಿ ಮನೆ ತುಂಬಾನೆ ಹಳೆಯದು, ಅಡ್ಡಡ್ಡಕ್ಕೆ ಹಾಸಲಾಗಿದ್ದ ತೊಲೆ ಜಂತಿಗಳು ಕ್ರಿಮಿಕೀಟಗಳ ದಾಳಿಯಿಂದಾಗಿ ದುರ್ಬಲಗೊಂಡಿದ್ದವು, ಅವುಗಳ ಮೇಲೆ ತುಂಬಿರುವುದು ಹಾಳು ಮಣ್ಣು ಎನ್ನುವುದರಲ್ಲಿ ಎರಡನೆ ಮಾತಿಲ್ಲ. ಜಿಟಿಜಿಟಿ ಮಳೆ ಹಿಡಿದುಕೊಂಡರೆ ಸೋರುವುದರಲ್ಲಿ ಸಂಶಯವಿಲ್ಲ, ಬಚ್ಚಲಿಂದ ಹೊರಗೆ ಕಾಣಿಸಿಕೊಂಡ ಪಾರ್ಥ ನನ್ನ ಮಾತನ್ನು ಅನುಮೋದಿಸಿದ, ಹಳೆಯ ಮನೆ ಸೋರದೆ ಮನಷ್ಯರು ಸೋರಲಿಕ್ಕಾಗುವುದೆ ಎಂದು ರೂಪಕಾತ್ಮಕವಾಗಿ ಹೇಳಿದ, ಸದರಿ ಮನೆಯ ಮಾಲಕ ಪರಂಧಾಮಯ್ಯನನ್ನು ಕಂಡರೆ ಸಹೋದ್ಯೋಗಿಗಳೊಂದೇ ಅಲ್ಲದೆ ಕಲೆಕ್ಟರ್ ಸಹ ಹೆದರುವುದಾಗಿ ಅಭಿಮಾನಪೂರ್ವಕವಾಗಿ ತಿಳಿಸಿದ, ಪ್ರಾಮಾಣಿಕನಾಗಿರುವುದರಿಂದಾಗಿ ತಾನು ಆತನ ಸಲಹೆ ಸೂಚನೆಗಳನ್ನು ಅವಿರೋಧವಾಗಿ ಕೇಳಿಸಿಕೊಳ್ಳುವುದೆಂದು ಅಭಿಪ್ರಾಯ ವ್ಯಕ್ತಪಡಿಸಿದ, ಆದರೆ ಆಚರಣೆಗೆ ಸಂಬಂಧಿಸಿದಂತೆ! ಕೇಳುವವರಿದ್ದಲ್ಲಿ ಹೇಳುವವರು ಹೇಳುತ್ತಲೇ ಇರುತ್ತಾರೆ ಎನ್ನುವುದು ತನ್ನ ಮುಕ್ತ ಅಭಿಪ್ರಾಯ.

ನಾನು ಕಾದಂಬರಿ ಹಸ್ತಪ್ರತಿಯನ್ನು ಬ್ಯಾಗಿನಿಂದ ಹೊರತೆಗೆದದ್ದು ತನಗೆ ಸರಿ ಕಾಣಿಸಲಿಲ್ಲ. ಪುನಃ ಅದನ್ನು ಬ್ಯಾಗಿಗೆ ಸೇರಿಸುವಷ್ಟರಲ್ಲಿ ಮಳೆ ಸಣ್ಣಗೆ ಜಿಟಜಿಟಿ ಆರಂಭಗೊಂಡಿತು, ಮುಗಿಲು ಬಿಕ್ಕಳಿಸುತ್ತಿರುವಂತೆ. ಸಮಕ್ಷಮ ಕುಳಿತುಕೊಂಡೆ, ಉಸಿರಳತೆಯಲ್ಲಿ. ಪರಸ್ಪರ ನೋಡಲಾರಂಭಿಸಿದೆವು, ಉಗುಳು ಸಹ ನುಂಗಿದೆವು, ಸಲಹೆ ನೀಡದಿದ್ದಲ್ಲಿ ತಾನು ಮಾತ್ರೆ ಸೇವಿಸುತ್ತಿರಲಿಲ್ಲವೇನೋ! ಡೇಗಿದ ಔಷಧಿಯ ಪರಿಮಳ ನಾಸಿಕಾಗ್ರದಿಂದ ಹೊರಚಿಮ್ಮಿತು. ಔಷಧಿಸೇವನೆಯ ಪರಿಣಾಮದಿಂದಾಗಿಯೋ, ಕಾದಂಬರಿಯ ಏಳನೆ ಸರ್ಗದ ಅಪೂರ್ಣ ಕಥಾನಕವನ್ನು ಧೇನಿಸಿಕೊಂಡೋ!

"ಕಲಾವಿದೆ ಪದ್ಮಾವತಿ ಪಾತ್ರಕ್ಕೆ ತಾರ್ಕಿಕ ಅಂತ್ಯ ಕಾಣಿಸುವ ಸಮಸ್ಯೆ ನಿನ್ನನ್ನು ಕಾಡುತ್ತಿರುವಂತಿದೆ ಅಲ್ಲವೆ!" ಎಂದು ಗಡಸು ಧ್ವನಿಯಲ್ಲಿ ಕೇಳಿದ, ಹೌದೆಂದು ತಲೆ ಅಲ್ಲಾಡಿಸಿದೆ, ನೀನೇ ಬರೆದಿದ್ದಲ್ಲಿ ಕಾದಂಬರಿಯ ಏಳನೆ ಸರ್ಗ ಹೇಗಿರುತ್ತಿತ್ತು ಎಂದು ಪ್ರಶ್ನಿಸಿದೆ, ಅದಕ್ಕೆ ತಾನು ತುಸು ಹೊತ್ತು ಯೋಚಿಸಿದಾದ ಬಳಿಕ..

"ಕಾದಂಬರಿಯನ್ನು ಓದುಗರು ಪೂರ್ಣಗೊಳಿಸಬೇಕೇ ಹೊರತು ಅದರ ಕರ್ತೃ ಪೂರ್ಣಗೊಳಿಸಬಾರದು. ಇದಕ್ಕೆ ನೀನೇನ್ನುವಿ ಎಂಬುದು ನನಗೆ ತಿಳಿಯದು! ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಯೋಚಿಸಿದರೆ ಕಥೆ ಕಾದಂಬರಿಗಳ ಶೀರ್ಷಿಕೆಗಳು ವಾಚಕರಲ್ಲಿ ಹೊಳೆಯುತ್ತಲೇ ಇರಬೇಕು. ಹೀಗೆ ಅಸಂಗತ ರೀತಿಯಲ್ಲಿ ಯೋಚಿಸುತ್ತಿದ್ದರೂ ಸಹ ಕಾದಂಬರಿಗೆ ಹೇಮರೆಡ್ಡಿ ಮಲ್ಲಮ್ಮನ ಕಥೆ ಎಂಬ ಶೀರ್ಷಿಕೆಯನ್ನು ನೀಡಿರುವೆ. ಜಮೀನ್ದಾರಿ ವ್ಯವಸ್ಥೆಯ ಅಹಂಕಾರವನ್ನು ನಾಶ ಮಾಡಿದ ಸಾಧ್ವಿ ಮಲ್ಲಮ್ಮ ಎಂಬ ಕಾರಣಕ್ಕೆ ಶೀರ್ಷಿಕೆ ಹಿಡಿಸಿತು. ಆರನೆ ಸರ್ಗದವರೆಗೆ ನಿರರ್ಗಳವಾಗಿ ಬರೆದೆನೇನೋ ಸರಿ, ಏಳನೆ ಸರ್ಗ ಆರಂಭಿಸಿದಾಗ ಯಾಕೋ ಸೃಜನಶೀಲತೆಯ ವಿದ್ಯುತ್‌ಕೋಶ ಬತ್ತಿದ ಅನುಭವವಾಯಿತು, ಸ್ಖಲನ ಸ್ಖಲನಗಳ ನಡುವಿನ ಕ್ಲುಪ್ತ ಅವಧಿಯಲ್ಲಿ ಪೌರುಷ ವಿಶ್ರಮಿಸಿಕೊಳ್ಳುವುದು ಸಹಜ ತಾನೆ! ಆದರೆ ಅದು ಶಾಶ್ವತೀಯ ಕೊರತೆ ಎಂದು ಯಾವುದೇ ಲೇಖಕ ಅನ್ಯಥಾ ಭಾವಿಸಬಾರದು, ಇನ್ನಿತರೇ ಕ್ಲಾಸಿಕ್ಸ್‌ಗಳಿಂದ ತನ್ನನ್ನು ತಾನು ಪುನಶ್ಚೇತನಗೊಳಿಸಿಕೊಳ್ಳಬೇಕು. ಅಲ್ಲಸಾನಿ ಪೆದ್ದನನ್ನು ನನ್ನಯ್ಯನೋ. ಶ್ರೀಕೃಷ್ಣರಾಯನನ್ನು ಅಲ್ಲಸಾನಿಯೋ ಪುನಶ್ಚೇತನಗೊಳಿಸಿರಲೂಬಹುದು.

ಹಾಗೆ ನಿಮ್ಮ ಕನ್ನಡದ ರನ್ನ ಪಂಪನಿಂದಲೋ, ಕುಮಾರವ್ಯಾಸ ಪಂಪ ರನ್ನರಿಂದಲೋ ಪುನರ್ಜೇತನಗೊಳಿಸಿಕೊಂಡಿರಲೂಬಹುದಲ್ಲವೆ! ಹಾಗೆಯೇ ನಿನ್ನಿಂದ ನಾನು ಸಹ. ಈ ರೀಚಾರ್ಜಿಂಗ್ ವ್ಯವಸ್ಥೆ ಇರದಿದ್ದಲ್ಲಿ ನಾನಾಗಲೀ ನೀನಾಗಲೀ ಬರೆಯುತ್ತಲೇ ಇರುವುದು ಸಾಧ್ಯವಿಲ್ಲ. ಇರಲಿ ಅದೆಲ್ಲ.

ಹಿಂದಿನ ರಾತ್ರಿ ಮೊಘಾಸನ ಕೃತಿಯನ್ನು ಕೈಯಲ್ಲಿ ಹಿಡಿದಿದ್ದೆ, ಕಥೆ ಯಾವುದೆಂದು ಈ ಕ್ಷಣಕ್ಕೆ ಹೊಳೆಯುತ್ತಿಲ್ಲ, ಯಾವುದೋ ಒಂದು. ಆ ಕಥೆಯ ನಾಯಕ ತಾನು ಕೊಲೆ ಮಾಡಿರಬಹುದಾದ ಶತ್ರುವಿನ ಹಸ್ತವನ್ನು ತನ್ನ ಜೊತೆಯಲ್ಲಿ ಸದಾ ಇಟ್ಟುಕೊಂಡಿರುತ್ತಾನೆ, ಅದೂ ಸಾಲಂಕೃತ ರೀತಿಯಲ್ಲಿ, ತನ್ನ ಕಣ್ಣೆದುರಲ್ಲಿ! ಮೊಘಾಸನ ಕಥನ ಪ್ರಭೆ ಶ್ಲಾಘನೀಯವೆನ್ನುವುದಕ್ಕೆ ನಿದರ್ಶನವೆಂದರೆ ನಿರ್ಜೀವ ಹಸ್ತದ ಮೂಲಕ ಅವನು ಕಥೆಯನ್ನು ಬ್ಯಾಕ್‌ಫ್ಲಾಷಿನಲ್ಲಿ ನಿರೂಪಿಸುತ್ತಾನೆ. ಕೊನೆಗೆ ಕಥೆಯ ನಾಯಕನ ಕೊಲೆ ಸಂಭವಿಸುತ್ತದೆ, ಮೊಘಾಸ ಯಾರು ಮಾಡಿರುವರೆಂದು ವಾಚ್ಯವಾಗಿ ಹೇಳುವುದಿಲ್ಲ. ಆದರೆ ಕಳೇಬರದ ಎದೆಯ ಮೇಲೆ ಹಸ್ತ ವಿರಾಜಮಾನಗೊಂಡಿರುತ್ತದೆ, ಅದು ತನ್ನ ಬೆರಳುಗಳಿಗೆ ರಕ್ತದ ಕಲೆಯನ್ನು ಅಂಟಿಸಿಕೊಂಡಿರುತ್ತದೆ. ರಾಯಲಸೀಮೆಯ ಪರಗಣದಲ್ಲಿ ಸಂಭವಿಸಿದ ಅನೇಕ ಕೊಲೆಗಳನ್ನು ಕಣ್ಣಾರೆ ನೋಡಿರುವ ನನ್ನನ್ನು ಆ ಕಥೆ ಬೆಚ್ಚಿ ಬೀಳಿಸಿತು. ಅದರ ಪ್ರಭಾವದಿಂದಾಗಿಯೋ ಅಥವಾ ಇನ್ನಿತರ ಅಮೂರ್ತ ಕಾರಣಗಳಿಂದಾಗಿಯೋ, ಅಥವಾ ಪರಾವರ್ತಿತ ಪ್ರತಿಕ್ರಿಯೆಗೆ ಒಳಪಟ್ಟೋ ರಾಸಾನಿಯ ಕೊಲೆಯನ್ನು ಸೃಷ್ಟಿಸಿ ಕಂಗಾಲನ್ನು ಅನುಭವಿಸಿದೆ. ಕೊಲೆಗೆ ಕಾರಣಗಳು ತಕ್ಷಣ ಹೊಳೆಯಲಿಲ್ಲ. ಕೃತಿಯ ಕರ್ತೃವಿಯನೆದುರು ತನ್ನನ್ನು ತಾನು ನಿರೂಪಿಸಿಕೊಂಡ ರಾಸಾನಿ ಮಾಡಿರಬಹುದಾದ ಇನ್ನೊಂದು ತಪ್ಪೆಂದರೆ ತನ್ನ ಜೇಬಿನಲ್ಲಿರುವ ವ್ಯಕ್ತಿಯೋರ್ವನ ನಿರ್ಜೀವ ಹೆಬ್ಬೆರಳನ್ನು ಏಕಾಂತದಲ್ಲಿ ನೋಡಿ ಸಂಭ್ರಮಿಸುತ್ತಿದ್ದುದು! ಎಲ್ಲವನ್ನೂ ತೋರಿಸಿದ, ಎಲ್ಲವನ್ನೂ ಹೇಳಿಕೊಂಡ, ಆದರೆ ಅದನ್ನು ಮಾತ್ರ ಗುಟ್ಟಾಗಿರಿಸಿದ. ಅದರ ಪೂರ್ವಾಪರವನ್ನು ನನಗಾದರೂ ತಿಳಿಸಬಹುದಿತ್ತಲ್ಲವೆ! ಕೊಲೆ ಘಟನೆ ವಾಗಿಲಿಯನ್ನು ದಿಗ್ಭ್ರಮೆಗೊಳಿಸಿದಂತೆ ನಮ್ಮನ್ನೂ ಅಚ್ಚರಿಗೀಡು ಮಾಡಿತು. ಧಾವಿಸಿ ಪರಿಶೀಲಿಸಿದ್ದಲ್ಲಿ ಕಳೇಬರಕ್ಕೆ ಸನಿಹದಲ್ಲಿ ಹೆಬ್ಬೆರಳನ್ನು ನಾವು ನೋಡದೆ ಇರುತ್ತಿರಲಿಲ್ಲವೇನೊ! ಕಥೆಯನ್ನು ಮುಂದುವರಿಸಲಿರುವ ನೀನು ಅಲ್ಲಿಗೆ ಹೋಗುವಿಯೋ! ಅದನ್ನು ನೋಡುವಿಯೋ ಇಲ್ಲವೋ! ಅಥವಾ ಕೊಲೆಗಾರನೆಂದು ಶಿಲ್ಪಿ ಪದ್ಮನಾಭಂ ಕಡೆಗೆ ಬೆರಳು ಚಾಚಿ ತೋರಿಸುವಿಯೋ! ನಿನ್ನ ಇಮ್ಯಾಜಿನೇಷನ್ನಿನ ಕೆಪೆಸಿಟಿಗೆ ಸಂಬಂಧಿಸಿದ್ದು ಅದೆಲ್ಲ. ನಿನ್ನನ್ನು ಸಕ್ರಿಯಾಶೀಲನನ್ನಾಗಿಸಲೆಂದೇ ಅಸಿಸ್ಟೆಂಟ್ ಸಬ್ಬಿನಿಸ್ಪೆಕ್ಟರ್ ಅಲಿ, ಭೌತಿಕವಾಗಿ ನಗಣ್ಯಗೊಂಡಿರುವ ನಗರೂರಿನ ಲಕ್ಷ್ಮಿ ಮತ್ತಿತರ ಪಾತ್ರಗಳಿರುವವು. ಆ ಕೊಲೆಗಾರನ ಪಟ್ಟವನ್ನು ಹೆಬ್ಬಟಂ ಗೌಡರ ತಲೆಗೋ, ಅವರ ಮಗ ಪ್ರತಾಪರೆಡ್ಡಿಗೋ ವರ್ಗಾಯಿಸಿದರೂ ನನ್ನ ತಕರಾರಿಲ್ಲ. ಅದಕ್ಕೆ ಪೂರ್ವಭಾವಿಯಾಗಿ ಮೊಘಲ್ ಚಕ್ರವರ್ತಿಗಳ ಸಮಾಧಿ ಸ್ಮಾರಕಗಳ ಇತಿಹಾಸವನ್ನು ಪರಿಗಣನೆಗೆ ತಂದುಕೊಂಡರೆ ಇನ್ನೂ ಒಳ್ಳೆಯದು" ಎಂದು ನಿರರ್ಗಳ ರೀತಿಯಲ್ಲಿ ನಿರೂಪಿಸಿ ಸುಸ್ತಾಗಿ ಹಿಂದಕ್ಕೊರಗಿ ಮೈ ಚೆಲ್ಲಿದ.

ಮೈಮರೆತಿದ್ದ ಸಮಯದಲ್ಲಿ ಮಳೆಯ ಸುರಿತ ದ್ವಿಗುಣಗೊಂಡಿತ್ತು. ತಲೆ ಎತ್ತಿ ನೋಡಿದೆ, ಮನೆಯ ದುರ್ಬಲ ಮಾಳಿಗೆ ಜಂತುವಾನದ ಪೂರ್ವಸಿದ್ಧತೆಯನ್ನು ಆರಂಭಿಸಿತ್ತು. ತೊಲೆ ಜಂತಿಗಳು ಒದ್ದೆಗೊಳ್ಳತೊಡಗಿದ್ದವು, ಒಂದು ಕಡೆಯಲ್ಲ, ಹಲವು ಕಡೆಗಳಲ್ಲಿ. ತೊಟ್ಟಿಕ್ಕುವ

ಕ್ಷಣ ದೂರವಿಲ್ಲ. ಅಷ್ಟರೊಳಗಾಗಿ ಅಗತ್ಯ ವಸ್ತುಗಳು ತೊಯ್ಯದ ಹಾಗೆ. ಬಟ್ಟೆಬರೆಗಳು ಮಲಿನಗೊಳ್ಳದ ಹಾಗೆ. ನಾವು ಸ್ಥಳಾಂತರಗೊಳ್ಳದ ಹಾಗೆ! ಮುಖ್ಯವಾಗಿ ಹೇಮರೆಡ್ಡಿ ಮಲ್ಲಮ್ಮನ ಕಥೆ ಕಾದಂಬರಿಯ ಹಸ್ತಪ್ರತಿಯಲ್ಲಿರುವ ಅಕ್ಷರಗಳನ್ನು. ವಾಕ್ಯಗಳನ್ನು. ಪ್ಯಾರಾಗಳನ್ನು. ಪುಟಗಳನ್ನು ನೀರಿನ ಹನಿಗಳಿಂದ ರಕ್ಷಿಸಿಕೊಳ್ಳುವುದು ಮುಖ್ಯ! ಅದಕ್ಕೆ ತಾನು ಬಳಸಿರುವ ಇಂಕು ಕ್ಯಾಮಲ್ಲಾದರೆ ಪರವಾಯಿಲ್ಲ. ಬಳಸಿರುವ ಪೆನ್ನು ರೆಡ್‌ಫೋರ್ಟಾದರೆ ಪರವಾಯಿಲ್ಲ. ತಿಳಿದುಕೊಳ್ಳಲೆಂದು ನೋಡಿದೆ. ಅಂಗಾತ ಮಲಗಿ ಶೂನ್ಯವನ್ನು ದಿಟ್ಟಿಸುತ್ತಿದ್ದ. ತನ್ನೆರಡೂ ಕೈಗಳನ್ನು ತನ್ನ ದುರ್ಬಲ ಎದೆ ಭಾಗದಲ್ಲಿರಿಸಿಕೊಂಡಿದ್ದ. ನೆನಪುಗಳ ಕಡತಗಳನ್ನು ಮುಗುಚಲಾರಂಭಿಸಿದ್ದ. ತನ್ನ ಆಲೋಚನೆಗಳಿಗೆ ಭಂಗ ತರುವುದು ಯಾಕೆಂದು ನಾನೂ ಮೌನ ವಹಿಸಿದೆ. ತನ್ನ ಕಲ್ಪನೆಯನ್ನು ವಾಸ್ತವದೊಂದಿಗೆ ಬೆಸೆಯಲು ಪ್ರಯತ್ನಿಸುತ್ತಲೇ ವಸ್ತುಗಳನ್ನು ಸ್ಥಳಾಂತರಗೊಳಿಸಿದೆ. ಮುಖ್ಯವಾಗಿ ಕಾದಂಬರಿಯ ಹಸ್ತಪ್ರತಿಯನ್ನು ಬ್ಯಾಗಿನೊಳಗೆ ಅಳವಡಿಸಿ ಭದ್ರಪಡಿಸಿದೆ. ಕಾಲುಗಳ ನಿಷ್ಕ್ರಿಯತೆಯನ್ನು ಹೋಗಲಾಡಿಸಿಕೊಳ್ಳಲೆಂದು ಮೆಲ್ಲಗೆ ಎದ್ದು ನಡೆದು ಬಾಗಿಲನ್ನು ತಲುಪಿ ತೋಳುಗಳ ಆಸರೆಯಿಂದ ತುಸು ಬಾಗಿ ಬೀದಿ ಕಡೆ ಇಣುಕಿದೆ. ಗಜಗಾತ್ರದ ಮೋಡಗಳು ಭೂಮಿಗಿಳಿದು ಕರ್ನೂಲನ್ನು ಸಮಗ್ರವಾಗಿ ವ್ಯಾಪಿಸಿದ್ದವು. ಆಕ್ರಮಿಸಿದ್ದವು. ಕ್ರುದ್ಧಗೊಂಡು ಬೀಸುತ್ತಿದ್ದ ಗಾಳಿ ಮಳೆಯ ಹನಿಗಳನ್ನು ತನ್ನೊಂದಿಗೆ ಕೊಂಡೊಯ್ದು ಇನ್ನೆಲ್ಲೋ ಸುರಿಯುತ್ತಿತ್ತು. ನನ್ನ ಮೇಲೂ. ನನ್ನ ಮುಖದ ಮೇಲೂ. ಮನೆಯ ಒಳಗೂ. ಹೀಗೆ ಎಲ್ಲಂದರಲ್ಲಿ! ಬಿಸಿಲ ತಾಪ ಬೇಗುದಿಯ ಪುನರ್ಮಸರಣೆಯಿಂದಾಗಿ ಸ್ವಯಿಚ್ಛೆಯಿಂದ ತೊಯ್ಯಲಾರಂಭಿಸಿದೆ. ಆನಂದಿಸಿದೆ. ಪುಳಕ ಅನುಭವಿಸಿದೆ. ನನ್ನ ಹಾಗೆ ಪಕ್ಕದ ಮನೆಯ ಅರುಣಾ. ಶ್ರೀಲತಾ ಮಳೆಯನ್ನು ಆಸ್ವಾದಿಸುವ ಪ್ರಯತ್ನಕ್ಕೆ ತೊಡಗಿದ್ದುದು ತಮ್ಮ ತಾಯಿಗೆ ಸರಿ ಕಂಡಿರಲಿಲ್ಲವೇನೊ! ಹುಬ್ಬಿನ ಮೇಲಿಂದ ತುಟಿಗೆ ಜಾರಿದ ಹನಿಯನ್ನು ನಾಲಗೆ ಚಾಚಿ ಎಳೆದುಕೊಳ್ಳುವುದಕ್ಕೂ. ಬೀದಿಯ ಆ ತುದಿಯಲ್ಲಿ ಕಾಣಿಸಿಕೊಂಡ ಕಾರು ಭರ್ರೆಂದು ಸದ್ದು ಮಾಡುತ್ತ ಇನ್ನೊಂದು ತುದಿಯಲ್ಲಿ ಕಾಣೆಯಾಗುವುದಕ್ಕೂ ಸರಿ ಹೋಯಿತು. ಮನೆಯ ಅಂಗಳವನ್ನು ಸಮೀಪಿಸಿದೊಡನೆ ತನ್ನ ವೇಗವನ್ನು ಹ್ರಸ್ವಗೊಳಿಸಿತೆಂದೋ. ಅದರ ಕಿಟಿಕಿಯ ಗಾಜಿನ ಕವಾಟ ಇಳಿಸಿ ಅಪರಿಚಿತ ವ್ಯಕ್ತಿಯೋರ್ವ ತನ್ನ ಕಡೆ ತಮ್ಮ ಮನೆಯ ಕಡೆ ನೋಡಿದನೆಂದು ನಾನು ಅನ್ಯಥಾ ಭಾವಿಸಿದೆನೋ! ಅಕಸ್ಮಾತ್ ಆ ಕಾರೇನಾದರೂ ಜಮ್ಮಲಮಡುಗಿನದ್ದಾಗಿದ್ದಲ್ಲಿ. ಇಣುಕಿದ ವ್ಯಕ್ತಿ ಅಶ್ವಿನಿ ಅಮ್ಮನವರ ಕಡೆಯ ಸುಪಾರಿ ಕೊಲೆಗಾರನಾಗಿದ್ದಲ್ಲಿ! ಊಹೆ ಭಯದ ಪ್ರಭಾವಳಿ ಧರಿಸಿದೊಡನೆ!

++++

ಮಾರನೆ ದಿವಸದ ಬೆಳಗಿನ ಜಾವ ವಾತಾವರಣದ ವಿಷಮತೆ ತೀವ್ರಗೊಂಡಿತು. ತುಂಗಭದ್ರಾ ಜಲಾಶಯದಿಂದ ಮೊನ್ನೆ ದಿವಸ ಮಧ್ಯಾಹ್ನವೇ ಐವತ್ತಕ್ಕೂ ಹೆಚ್ಚು ಟಿಎಂಸಿ ನೀರು ಹರಿಸಿದ ಪರಿಣಾಮವಾಗಿ ಕರ್ನೂಲಿನ ಪಶ್ಚಿಮ ಭಾಗ ಜಲಾವೃತವಾಯಿತು. ನದಿಯ ಭೋರ್ಗರೆತವನ್ನು ಜನರು ತಮ್ಮ ಮನೆಗಳಿಂದಲೇ ಕೇಳಿ ಭಯಭೀತಗೊಳ್ಳಲಾರಂಭಿಸಿದರು. ಅಂಥ ಭಯದ ನಡುವೆಯೂ ಕೆಲವರು ನದಿಯಿರುವಲ್ಲಿಗೆ ಹೋಗಲಾರಂಭಿಸಿದರೆ. ಇನ್ನೂ ಕೆಲವರು ತಾವಿದ್ದ ಮನೆಗಳನ್ನೇರಿ ಹುಬ್ಬುಗಳಿಗೆ ಕೈ ಅಂಟಿಸಿ ಓಹ್ ನದಿ ಎಂದು ಉದ್ಗರಿಸತೊಡಗಿದರು. ನಾವಿದ್ದ ಮನೆಯ ಜಂತಿ ತೊಲೆಗಳು ತೊಯ್ದು ದುರ್ಬಲಗೊಂಡಿದ್ದ

ಪರಿಣಾಮವಾಗಿ ಕಳೆದ ರಾತ್ರಿಯಿಂದಲೇ ಹನಿ ತೊಟ್ಟಿಕ್ಕುತ್ತಿದ್ದುದು ಬೆಳಗಾಗುತ್ತಿದ್ದಂತೆ ತಾರಕಕ್ಕೇರಿತ್ತು. ಒಳಗಿರಲಿಕ್ಕೂ ಆಗದೆ ಹೊರಗೆಲ್ಲಾದರೂ ಹೋಗಿ ಆಶ್ರಯ ಪಡೆಯಲಿಕ್ಕಾಗದೆ ಇಬ್ಬಂದಿ ಅನುಭವಿಸುತ್ತಲೇ ಈ ಕ್ಷಣ ಇಲ್ಲಿ ಎಂದರೆ ಇನ್ನೊಂದು ಕ್ಷಣ ಅಲ್ಲಿ ಎನ್ನುವಂತೆ ಸ್ಥಳಾಂತರಗೊಳ್ಳಲಾರಂಭಿಸಿದೆವು. ಅದರಲ್ಲೂ ದೈಹಿಕವಾಗಿ ದುರ್ಬಲವಿದ್ದ ಪಾರ್ಥಸಾರಥಿ ಸುಸ್ತಾಗಿ ಹತಾಶನಾದ. ಮೈಮೇಲೆ ತೊಟ್ಟಿಕ್ಕುತ್ತಿದ್ದ ಪ್ರತಿಯೊಂದು ಹನಿಯನ್ನೂ ಆಸ್ವಾದಿಸಲಾರಂಭಿಸಿದ. ಆಶ್ರಯ ಪಡೆಯಬೇಕೆಂದರೆ ಪರಂಧಾಮಯ್ಯನವರ ಪಕ್ಕದ ಮನೆಗೋ, ಒಂದೆರಡು ಫರ್ಲಾಂಗುಗಳಷ್ಟು ದೂರವಿರುವ ಡಾ. ಸುಧನ್ವರ ಧನ್ವಂತರಿ ಚಿಕಿತ್ಸಾಲಯಕ್ಕೋ ಹೋಗಬೇಕಿತ್ತು. ಆದರೆ ಆ ಎರಡೂ ಕಟ್ಟಡಗಳು ಸೋರುವಿಕೆಯಿಂದ ತಪ್ಪಿಸಿಕೊಂಡಿರಲಿಲ್ಲ.

ಈ ಎಲ್ಲಾ ಆವಾಂತರಗಳಿಂದಲೂ ವಾತಾವರಣ ಬುದ್ಧಿ ಕಲಿಯಲಿಲ್ಲ. ಸ್ಥಳೀಯರ ಮೇಲೆ ಕನಿಕರ ತೋರಲಿಲ್ಲ. ಗಂಟೆಗೆ ನೂರು ಕಿಲೋಮೀಟರ್ ವೇಗದಲ್ಲಿ ಬೀಸುತ್ತಿದ್ದ ಗಾಳಿಯೋ! ದಾಖಲೆ ಸೃಷ್ಟಿಸಲೆಂಬಂತೆ ಸುರಿಯುತ್ತಿದ್ದ ಕುಂಭದ್ರೋಣ ಮಳೆಯೋ! ಮಣ್ಣಿನ ಮನೆಗಳು ಒಂದೊಂದಾಗಿ ನೆಲ ಕಚ್ಚುತ್ತಿರುವ ವಾರ್ತೆಗಳು! ಮರಗಿಡಗಳು ಧರೆಗುರುಳುತ್ತಿರುವ ವಾರ್ತೆಗಳು! ಅಲ್ಲಲ್ಲಿ ಜಲಸ್ತಂಭನಗೊಂಡಿರುವ ಸರಕಾರಿ ಅಂಬುಲೆನ್ಸು ವಾಹನಗಳು! ನೀರ ಸೆಳವಿಗೆ ಕೊಚ್ಚಿ ದಿಕ್ಕಾಪಾಲಾಗಿ ಧಾವಿಸುತ್ತಿರುವ ಗವುಳಿಗೂಡಾದ ದನಕರುಗಳು! ಆಕ್ರಂದನಗಳು! ಹಿಡಿಹಿಡಿ ಶಾಪಗಳು!

ಒಂದರ ಹಿಂದೊಂದರಂತೆ ಕಿವಿಗೆಟಕುತ್ತಿರುವ ವಾರ್ತೆಗಳಲ್ಲಿ ನಿಜಾಂಶವಿರದಿದ್ದರೂ ಸುಳ್ಳು ಮಾತ್ರ ಇರಲಿಲ್ಲ. ಕಾರಣ ನದಿಯ ರಣಕಹಳೆಯನ್ನು ಕಿಲೋಮೀಟರ್ ದೂರದಲ್ಲಿದ್ದ ನಾವೇ ಆಲಿಸುತ್ತಿದ್ದೆವು. ನದಿ ಇಕ್ಕೆಲದ ನತದೃಷ್ಟ ನಿವಾಸಿಗಳು ತಮ್ಮ ತಮ್ಮ ಕಂಕುಳುಗಳಲ್ಲಿ ಎಳೆಯ ಕೂಸುಗಳನ್ನು ಅವುಚಿಕೊಂಡು, ತಮ್ಮ ತಮ್ಮ ತಲೆಗಳ ಮೇಲೆ ಸಾಮಾನು ಸರಂಜಾಮುಗಳನ್ನಿರಿಸಿಕೊಂಡು ನಮ್ಮ ಮನೆಯ ಮುಂದಿದ್ದ ಹಾದಿ ಮೂಲಕ ಬಸ್‌ನಿಲ್ದಾಣದ ಕಡೆಗೋ, ರೇಲ್ವೇನಿಲ್ದಾಣದ ಕಡೆಗೋ ಧಾವಿಸುತ್ತಿದ್ದುದು ಸಾಮಾನ್ಯ ದೃಶ್ಯವಾಗಿತ್ತು. ಗಂಜಿ ಕೇಂದ್ರ ಪುನರ್ವಸತಿ ಕೇಂದ್ರಗಳನ್ನು ಎಲ್ಲೆಲ್ಲಿ ಹೇಗ್ಹೇಗೆ ಸ್ಥಾಪಿಸುವುದು, ಅದಕ್ಕೆ ಸರಕಾರದಿಂದೊಂದೇ ಅಲ್ಲದೆ ಸಾರ್ವಜನಿಕರಿಂದಲೂ ವಂತಿಗೆ ವಿರಾಳವನ್ನು ಹೇಗೆ ಸಂಗ್ರಹಿಸುವುದು ಎಂದು ಯೋಚಿಸುತ್ತಲೇ ಕಲೆಕ್ಟರ್ ತುಳಸಿಯವರು ತಮ್ಮ ಸಿಬ್ಬಂದಿಯ ಸಂಗಡ ಕಾಲ್ನಡಿಗೆಯಲ್ಲಿಯೇ ನಾವಿದ್ದ ಮನೆಯ ಮುಂದಿನ ಹಾದಿಯಲ್ಲಿ ಕೆಲವು ಕ್ಷಣಗಳ ಹಿಂದೆ ಹೋದದ್ದನ್ನು ಕಣ್ಣಾರೆ ನೋಡಿದ ಅರುಣಾ ನೀವು ನೋಡಲಿಲ್ಲವೆ ಅಂಕಲ್ ಎಂದು ಪ್ರಶ್ನಿಸಿದಳು. ನೋಡಿದೆನಾದರೂ ಕೊಡೆ ಮತ್ತಿತರ ಸಂರಕ್ಷಕ ದಿರಿಸಿನಲ್ಲಿದ್ದ ಆ ಜನರಲ್ಲಿ ಆಕೆ ಯಾರೆಂದು ಗುರುತಿಸುವುದಾಗಿರಲಿಲ್ಲ. ತುಳಸಿಯವರು ಪ್ರಾಮಾಣಿಕರೆಂದೂ, ನಿಷ್ಠುರವಾದಿಗಳೆಂದೂ, ನೇರ ನಡೆ ನುಡಿಯವರೆಂದೂ, ರಾಯಲಸೀಮಾ ಪ್ರಾಂತದ ಜಮೀನ್ದಾರರ ಅಹಂಕಾರದ ಬಹುಪಾಲನ್ನು ಆಡಳಿತಾತ್ಮಕ ರೀತಿಯಲ್ಲಿ ನಿಗ್ರಹಿಸಿರುವರೆಂದೂ ಪತ್ರಿಕೆಗಳಲ್ಲಿ ಓದಿದ್ದೆನಾದರೂ ಖುದ್ದ ನೋಡಿರಲಿಲ್ಲ. ಆಕೆಯನ್ನು ಕರ್ನೂಲಿನಿಂದ ಬೇರೆ ಕಡೆ ವರ್ಗ ಮಾಡಿಸುವ ಸಲುವಾಗಿ ಕೆಲವರು ಹೈದರಾಬಾದಿನಲ್ಲಿ ಠಿಕಾಣಿ ಹೂಡಿರುವರೆಂದೂ ಕೇಳಿದ್ದೆ. ಆಕೆಯನ್ನು ನೋಡುವ ಅವಕಾಶ ಎಂದು ಲಭಿಸುವುದೋ!

ಕರ್ನೂಲಿನ ಸಮಸ್ತ ವಿದ್ಯಾಮಾನಗಳನ್ನು ತನ್ನ ಆರನೆಯ ಇಂದ್ರಿಯದ ಮೂಲಕ ಸೂಕ್ಷ್ಮವಾಗಿ ಗ್ರಹಿಸುತ್ತಲೇ ಸೃಜನಶೀಲವಾಗಿ ಏನೇನೋ ಲೆಕ್ಕಹಾಕುತ್ತಿದ್ದ ಪಾರ್ಥ ಕೆರಳಿರುವ

ನದಿ ಇರುವಲ್ಲಿಗೆ ತನ್ನನ್ನು ಕರೆದುಕೊಂಡು ಹೋಗುವಂತೆ ಕೇಳಿದ್ದು ನನಗೆ ಆಶ್ಚರ್ಯ ತಂದಿತು. ಕಾರಣ ನದಿ ಹಾಕುತ್ತಿದ್ದ ರಣ ಕೇಕೆಯಿಂದ ತಾನು ಪ್ರಭಾವಯುತನಾಗಿದ್ದ, ಆಕ್ರಂದನಗಳ ನೆರವಿನಿಂದ ತಾನು ರೋಗಿ ಎಂಬುದನ್ನು ಮರೆತಿದ್ದ, ಪ್ರತಿ ವಾರ್ತೆಯನ್ನು ಆಲಿಸಿದಾಗಲೂ ತನ್ನ ಕಣ್ಣುಗಳು ಅರಳುತ್ತಿದ್ದವು, ಕೈ ಊರದೆಯೆ ಎದ್ದು ನಿಲ್ಲಲಾರಂಭಿಸಿದ, ಶತಪಥ ಹೆಜ್ಜೆ ಹಾಕಲಾರಂಭಿಸಿದ ಗದ್ದೆ ಸ್ವರೂಪ ಪಡೆದಿದ್ದ ಮನೆಯ ನೆಲದ ಮೇಲೆ! ಕೊಂಡಾರೆಡ್ಡಿ ಬುರುಜು ಬಳಿ ನದಿ ಪ್ರವಹಿಸುತ್ತಿರುವುದೆಂದ ಮೇಲೆ! ಮೊಣಕಾಲವರೆಗಿದ್ದರೂ ಅದಕ್ಕೆ ಆನೆ ಬಲವಿರುವುದೆಂದ ಮೇಲೆ! ಅದರ ದಾಳಿಗೆ ಸಿಲುಕಿ ಸಚರಾಚರಗಳು ಕ್ಷತಗಾತ್ರವಾಗುತ್ತಿರುವವೆಂದ ಮೇಲೆ! ಅಲ್ಲಿಗೆ ಹೋಗುವುದುಂಟೆ! ಅಲ್ಲಿಂದ ಬದುಕಿ ವಾಪಸ್ಸಾಗುವುದುಂಟೆ! ನನ್ನಂತೆ ತಾನೂ ಯೋಚಿಸಿದನೇನೋ! ಒತ್ತಾಯಿಸದಿದ್ದರೂ ಪ್ರವಾಹಗಳ ನೆನಪುಗಳನ್ನು ಮೆಲಕು ಹಾಕಲಾರಂಭಿಸಿದ, ಭೀಕರ ಚಂಡಮಾರುತ ಆಪೋಶನ ತೆಗೆದುಕೊಂಡಿರುವ ಇಡೀ ದಿವಿ ತಾಲ್ಲೂಕನ್ನು ಪ್ರಸ್ತಾಪಿಸಿದ. ಅದೂ ಅತ್ಯಂತ ಆಕರ್ಷಕವಾಗಿ, ಸೃಜನಶೀಲವಾಗಿ, ಕರ್ಣಕಠೋರವಾಗಿ, ಹೃದಯವಿದ್ರಾವಕವಾಗಿ! ಅದೆಲ್ಲ ತನ್ನಂಥ ಜೀನಿಯಸ್‌ಗಳಿಗೆ ಮಾತ್ರ ಸಾಧ್ಯ! ತುಸು ಹೊತ್ತು ಮೌನವಾಗಿದ್ದು ಯೋಚಿಸಿದಾದ ಬಳಿಕ ತಾನೇ ನನ್ನನ್ನು ಸಮೀಪಿಸಿ ನೆನಪಿಸಿಕೊಂಡು ಹೇಳಿದ, ಇದಕ್ಕಿಂತಲೂ ಭೀಕರ ಪ್ರವಾಹ ಮೂರು ದಶಕಗಳ ಹಿಂದೆ ಬಂದಿತ್ತೆಂದೂ, ಚಿಕ್ಕವನಿದ್ದ ತನ್ನನ್ನು ಬದುಕಿಸುವ ಸಲುವಾಗಿ ತನ್ನ ಪೆದ್ದನಾನ್ನ ಸೀತಾರಾಮಶಾಸ್ತ್ರಿ ಪ್ರವಾಹಕ್ಕೆ ಬಲಿಯಾದರೆಂದು ಹೇಳಿದ. ಪನಃ ಏನನ್ನೋ ನೆನಪು ಮಾಡಿಕೊಂಡು..

"ಹೇಮರೆಡ್ಡಿ ಮಲ್ಲಮ್ಮನ ಕಥೆ ಕಾದಂಬರಿಯ ಯಾವ ಸನ್ನಿವೇಶದಲ್ಲಾದರೂ ಇಂಥ ಪ್ರವಾಹ ಸೃಷ್ಟಿಸದೆ ತಪ್ಪು ಮಾಡಿರುವೆ, ಪ್ರವಾಹ ನಿನ್ನ ಅನುಭವಕ್ಕೂ ಹೇಗೋ ಬಂದಿರುವುದಲ್ಲವೆ! ಹೇಗೋ ನೀನದನ್ನು ರೀರೈಟ್ ಮಾಡಲೇಬೇಕಿರುವುದು. ವಾಗಿಲಿಯ ಪಕ್ಕದ ಕಡದಮ್ಮನ ಹಳ್ಳವನ್ನೇ ನದಿಯನ್ನಾಗಿ ಪರಿವರ್ತಿಸು. ಆದರೆ ಅದಕ್ಕೆ ತುಂಗಭದ್ರೆ ಎಂದು ಹೆಸರಿಡುವುದು ಬೇಡ. ವಿಕ್ಟೋರಿಯಾ ರಾಣಿ ಹೆಬ್ಬಟಂ ಅವರ ವಾಡೆಯನ್ನು ಹೇಗೋ ಸಂದರ್ಶಿಸಿರುವಳು ತಾನೆ! ಥೇಮ್ಸ್ ನದಿಯನ್ನೇ ಪ್ರಾದೇಶೀಕರಣಗೊಳಿಸಿಬಿಡು. ಬ್ರಿಟನ್ನಿನಿಂದ ಯಾರು ಬಂದು ನಿನ್ನ ಕೇಳಲಾರರು. ನದಿ ಇರುವುದೆಂದ ಮೇಲೆ ಅತಿವೃಷ್ಟಿ ಪ್ರವಾಹ ಸಹಜ ತಾನೆ! ಅವುಗಳನ್ನೂ ಸೃಷ್ಟಿಸಿದಿ ಎಂದರೆ ಕಥೆ ಕಥೆಗಾರ ಹೇಳಿದಂತೆ ಕೇಳುವುದು. ಪಾತ್ರಗಳು ಅಂಕೆ ಮೀರಿ ನಿರಂಕುಶತ್ವದಿಂದ ವರ್ತಿಸಲಾರವು. ಜಸ್ಟ್ ಇಮ್ಯಾಜಿನ್!" ಎಂದು ಅಭಿವ್ಯಕ್ತಿಯ ಸುಳಿವು ನೀಡಿದ. ಇಮ್ಯಾಜಿನೇಷನ್ ವಿಷಯದಲ್ಲಿ ನಿಸ್ಸಂದೇಹವಾಗಿ ತಾನು ಜೀನಿಯಸ್ಸೆ!

ವರ್ಷಧಾರೆಯ ಕವಲುಗಳ ನಡುವೆಯೂ ಸೂರ್ಯನ ಕಿರಣಗಳು ಅಲ್ಲೊಂದಿಲ್ಲೊಂದರಂತೆ ತೂರಿ ಕಾಣಿಸಿಕೊಂಡಿದ್ದವು, ಬೆಳಕನ್ನು ಗುರುತಿಸಬಹುದಿತ್ತೇ ವಿನಃ ಸೂರ್ಯನ ರಶ್ಮಿಗಳನ್ನಲ್ಲ. ವಾತಾವರಣ ತನ್ನ ಮುನಿಸನ್ನು ಉಪಸಂಹರಿಸಿಕೊಳ್ಳುತ್ತಿರುವುದರ ಮುನ್ಸೂಚನೆ ಇದು. ಬೆಳಗಿನ ಪ್ರಾಂತೀಯ ವಾರ್ತಲು ಭಿತ್ತರಿಸಿದ ಪ್ರಕಾರ ಚಂಡಮಾರುತ ಕೃಷ್ಣಾ ಮತ್ತು ಗುಂಟೂರು ಜಿಲ್ಲೆಗಳ ಕರಾವಳಿಯಾದ್ಯಂತ ಪ್ರಳಯ ಮೆರೆದಾದ ಬಳಿಕ ಮಚಲೀಪಟ್ಟಣದ ಕಡೆ ಧಾವಿಸಿರುವುದಂತೆ! ಸಾವಿರಾರೆಕರೆ ಭತ್ತದ ಬೆಳೆ ನಾಶವಾಗಿರುವುದಂತೆ! ಹಲವು ಹಳ್ಳಿಗಳು ಕಾಣೆಯಾಗಿರುವವಂತೆ! ನೂರಾರು ಜನ ಪ್ರಾಣ ಕಳೆದುಕೊಂಡಿರುವರಂತೆ! ಕರಾವಳಿ ದೂರವಿರುವುದೇನೋ ಸರಿ! ಆದರೆ ಕರ್ನೂಲು ಪ್ರಕಾಶಂ ಚಿತ್ತೂರು ಜಿಲ್ಲೆಗಳಲ್ಲೂ ಅಪಾರ ನಷ್ಟ ಸಂಭವಿಸಿರುವುದಂತೆ! ಅಲಂಪುರದ ಪ್ರಸಿದ್ಧ ಬ್ರಹ್ಮಲಿಂಗೇಶ್ವರ, ಸಂಗಮೇಶ್ವರ, ಜೋಗುಳಾಂಬ ದೇವಾಲಯಗಳು

ಅನಾವರಣಗೊಳ್ಳಲು ನಾಲ್ಕೈದು ದಿವಸವಾದರೂ ಬೇಕಂತೆ! ಆ ದೇವಾಲಯಗಳಿಗೆ ಕಣ್ಣಳತೆ ದೂರದಲ್ಲಿಯೇ ಇರುವ ತಮ್ಮ ಪಿತ್ರಾರ್ಜಿತ ಆಸ್ತಿ ಸಹ ಪ್ರವಾಹದಿಂದಾಗಿ ತನ್ನ ಮೂಲಸ್ವರೂಪ ಕಳೆದುಕೊಂಡಿರಬಹುದೆಂದು ತಾನು ಸಂತೋಷ ವ್ಯಕ್ತಪಡಿಸಿದ್ದು ಸೋಜಿಗವೆನ್ನಿಸಿತು.

"ನೈಸರ್ಗಿಕ ನ್ಯಾಯಾಲಯವೆಂದರೆ ಇದೇ ನೋಡು. ಹ್ಹಾ! ಅಂದ ಹಾಗೆ ವಾಗಿಲಿಯಲ್ಲಿ ಪ್ರವಾಹ ಸೃಷ್ಟಿಸು ಎಂದು ಸಲಹೆ ನೀಡಿದ್ದೆ! ಅದರ ಬಗ್ಗೆ ಏನಾದರೂ ಯೋಚಿಸಿದೆಯಾ! ಸೃಜನಶೀಲವಾಗಿ ಏನಾದರೂ ಹೊಳೆಯಿತಾ!" ಎಂದು ಆತುರತೆಯಿಂದ ಕೇಳಿದ. ನದಿ ಇಲ್ಲದ ಕಡೆ ನದಿಯನ್ನು ಸೃಷ್ಟಿಸುವುದೆಂದರೆ! ಕುಡಿಯುವ ನೀರಿಗೆ ಪರದಾಡುತ್ತಿರುವ ಕಡೆ ಪ್ರವಾಹಗಳನ್ನು ಸೃಷ್ಟಿಸುವುದೆಂದರೆ! ನಿಟ್ಟುಸಿರು ಚೆಲ್ಲಿ ಅಸಹಾಯಕತೆಯಿಂದ ನೋಡಿದೆ.

"ನದಿ ಪ್ರವಾಹಗಳಿಗಿಂತ ಮುಖ್ಯ ಸಮಸ್ಯೆ ಎಂದರೆ ಪದ್ಮಾವತಿ ಪಾರ್ಥ, ಅದನ್ನು ನಿಭಾಯಿಸುವುದು ಹೇಗೆಂದು ತಿಳಿಯುತ್ತಿಲ್ಲ" ಎಂದು ಕೇಳಿದೆ. ಆ ನಾಮವಾಚಕ ಕಿವಿಗೆ ಬಿದ್ದೊಡನೆ ತನ್ನ ಮುಖವನ್ನು ಒಂದು ಕ್ಷಣ ಬಿಗಿದು ಯೋಚಿಸಿದ. ಆರಂಭದಿಂದಲೂ ಕಥೆಯೊಂದಿಗೆ ಸಾಗಿ ಬಂದಿರುವ ಸಶಕ್ತ ಸ್ತ್ರೀಪಾತ್ರ ಅದು. ಆಕೆಯನ್ನು ತನ್ನ ಪತ್ನಿ ಅಶ್ವಿನಿಯೊಂದಿಗೆ ಸಮೀಕರಿಸಲು ಅವನು ವಿಫಲ ಪ್ರಯತ್ನ ನಡೆಸಿದ್ದುಂಟು. ಎಷ್ಟು ಪ್ರಯತ್ನಿಸಿದರೂ ಆ ಪಾತ್ರ ತನ್ನ ಗಂಭೀರತೆಯನ್ನು ಕಳೆದುಕೊಳ್ಳಲಿಲ್ಲ. ವಿಚಲಿತಗೊಳ್ಳದ ಪಾತ್ರವದು. ಕೊನೆಗೂ...

"ಆ ಪಾತ್ರದ ಜಾಯಮಾನವನ್ನು ನೀನು ಓದಿನ ಮೂಲಕ ಅರ್ಥಮಾಡಿಕೊಂಡಿರುವೆಯಲ್ಲವೆ! ನೀನು ಅದಕ್ಕೆ ತಾರ್ಕಿಕ ಅಂತ್ಯ ಕೊಡಬೇಕು. ಹೇಳು ಹೇಗೆ ಕೊಡುವಿ!" ಎಂದು ನನ್ನನ್ನೇ ಕೇಳಿದ. ಆ ಬಗ್ಗೆ ನಿನ್ನೆಯಿಂದಲೇ ಯೋಚಿಸುತ್ತಿದ್ದುದರಿಂದ ಸಲೀಸಾಗಿ ತಡವರಿಸದೆ..

"ನಿಜ ಹೇಳುವುದಾದರೆ ಪದ್ಮಾವತಿ ಕ್ಯಾರೆಕ್ಟರನ್ನು ಪುನರ್ ನಿರೂಪಿಸಬೇಕೆಂದು ಯೋಚಿಸುತ್ತಿರುವೆ ಪಾರ್ಥ, ಕಾದಂಬರಿ ಶಕ್ತಿ ಕೇಂದ್ರವೇ ಅದು. ಆಕೆಯ ವಿಶಿಷ್ಟ ಚೆಲುವಿಗೆ ಪ್ರತಾಪರೆಡ್ಡಿ ಮನ ಸೋಲಬೇಕಿದೆ, ಅವರಿಬ್ಬರ ನಡುವೆ ಸಂಘರ್ಷವನ್ನು ಸೃಷ್ಟಿಸಬೇಕಿದೆ, ಗ್ರಾಮದ ಜನತೆ ತಮ್ಮ ಸಂಪೂರ್ಣ ಬೆಂಬಲವನ್ನು ಆಕೆಗೆ ನೀಡುವಂಥ ಸನ್ನಿವೇಶಗಳನ್ನೂ ಸೃಷ್ಟಿಸುವುದು ಮುಖ್ಯ, ಶರಭ ತನ್ನ ಛದ್ಮವೇಷ ಕಳಚಿ ಆಕೆಯನ್ನು ಬೆಂಬಲಿಸಬೇಕು, ಅವರಿಬ್ಬರೂ ಪರಸ್ಪರ ಪ್ರೇಮಿಸಿ ವಾಗಿಲಿಯನ್ನು ತ್ಯಜಿಸಿದರೆ ಹೇಗೆ ಎಂದು ಯೋಚಿಸುತ್ತಿರುವೆ, ಇದಕ್ಕೆ ನಿನ್ನ ಅಭಿಪ್ರಾಯವೇನು!" ಎಂದು ವಿವರಿಸಿದೆ.

ನನ್ನ ಮಾತುಗಳನ್ನಾಲಿಸಿದ್ದಾದ ಬಳಿಕ ಪಾರ್ಥ ಮೌನ ವಹಿಸಿದ. ಬಳಿಕ "ಆಯ್ತು ಬಿಡು, ಕಥೆಗಾರನಾಗಿ ನಿನ್ನ ಸ್ವಾತಂತ್ರ್ಯಕ್ಕೆ ಅಡ್ಡಿ ಬರುವುದಿಲ್ಲ, ಆದರೆ ಒಂದು ಮಾತು. ಅದೆಂದರೆ ಊರಿನ ಬೆಂಬಲ ಇರುವುದೆಂದ ಮೇಲೆ ಅವರಿಬ್ಬರು ವಾಗಿಲಿಯಿಂದ ಪಲಾಯನ ಮಾಡುವುದು ಸರಿ ಅಲ್ಲ" ಎಂದು ತಣ್ಣಗೆ ಹೇಳಿದ. ಆತನ ಸಲಹೆ ನನಗೂ ಸರಿ ಅನ್ನಿಸದೆ ಇರಲಿಲ್ಲ. ಒಪ್ಪಿಗೆ ಸೂಚಿಸಿದೆ.

ಚಂಡಮಾರುತದ ಹಾವಳಿ ಬಹುತೇಕ ಹ್ರಸ್ವಗೊಂಡಿತ್ತು, ಜನಜೀವನ ಸಹಜ ಸ್ಥಿತಿಗೆ ಮರಳಲಾರಂಭಿಸಿತ್ತು. ಮಾರನೆ ದಿವಸ ನಾನು ಕರ್ನೂಲಿನಿಂದ ಹೊರಟಾಗ.....

..... ☙ .....